

ದಿವಂಗತ ಬ್ರ|| ಶ್ರೀ ಕಾನಕಾನಹಳ್ಳಿ ವರದಾಚಾರ್ಯರು

ಪ್ರಬುದ್ಧ ಕರ್ಣಾಟಕ

ಚಿತ್ರಭಾನು ಸಂವತ್ಸರ — ೬೧ — ವಿನಾಯಕನ ಸಂಚಿಕೆ

ಚಿತ್ರಭಾನು

ಸುತ್ತಿದನು ಪೃಥ್ವಿಯಂ ಸಮರಶೇಷಂ, ತನ್ನ
ನಾನಾರಣದ ಫಣೆಗಳಂ ನಿಮಿರಿ, ಮೃತ್ಯುಮಯ
ಗರಳದಿಂ ದೇಶದೇಶದ ಬಾಳ್ಗೆ ಕಷ್ಟ, ಭಯ,
ಶೋಕ, ರುಜೆ, ದಾಸ್ಯಗಳನಡಕಿ. ಕೊಲ್ಲುವ ಮುನ್ನ
ಕಾಳಕೂಟವ ಕುಡಿವ ಕೈಲಾಸಪತಿಯೆಲ್ಲಿ?
ಬಹನೊ? ಶಾಂತಿಯ ತಹನೊ? ಕಣಿಯನೊರೆಯುವರಾರು?
ಅಟ್ಲಾಂಟಿಕದ ಬಿಸಿಗೆ ಶಾಂತಶರಧಿಯ ನೀರು
ತಕಪಕನೆ ಕುದಿಯ ತೊಡಗಿರೆ, ಬರಿಯ ಬಲದಲ್ಲಿ
ಕಾಣೆನಾಂ ಪಾರ್ವತಿಯ ಕೃಪೆಯ ಕೈಯಂ. ಮತ್ತೆ?—
ಸೋಲ್ಸುವೆ ಜನಾಂಗಗಳ್ ವ್ಯಕ್ತಿ ಸೋಲ್ವಂತೆವೋಲ್?
ಇಂದು ಸೋತುದೆ ಮುಂದಕಿರ್ಮಡಿಯ ರೋಷದಿಂ
ಮಲೆತು ಕೆಣಕದೆ ಯುದ್ಧಭೂತಮಂ?—ಬರಿ ಮಿಥ್ಯೆ
ಶಾಂತಿ, ಬರ್ಪನ್ನೆಗಂ ಸಮತೆ. ವೇದವಿದು ಕೇಳ್:
ಶಾಂತಿಗೊಂದೇ ದಾರಿ,—ಸರ್ವಸಂತೋಷದಿಂ!

ಕೆ. ವಿ. ಪುಟ್ಟಪ್ಪ.

ನೆನಪು

ಕರಿಯ ಮಂಜಿನ ತೆರದಿ ಕತ್ತಲೆಯು ಕವಿಯುತಿರೆ
ಗಿರಿಗಣದ ಸಾನುಗಳನು,
ವಿವಿಧ ಪಕ್ಷಿಪತಂಗ ಝೇಂಕಾರ ಸಂರಾವ
ತುಂಬೆ ನೆಲಬಾನುಗಳನು ;

ರತ್ನದ್ವೀಪದ ತೆರದಿ ಮಿಸುಪೊಂದು ಶೃಂಗದಿಂ
ವೀಕ್ಷಿಸಿದೆ ಮುಗ್ಧನಾಗಿ,
ಪೂರ್ಣವಿಕಸಿತ ಮಹಾಪದ್ಮದೊಲು ರಂಜಿಸಿರೆ
ಸೂರ್ಯಾಸ್ತ ಸ್ನಿಗ್ಧವಾಗಿ.

ಅರುಣಜ್ಯೋತಿಮೂರ್ತಿ ತನ್ನೆಲ್ಲ ತೇಜವನು
ತೋರುವನೊ ಪಡುವ ಮುಂಚೆ !
ದೃಶ್ಯವಿನ್ನೊಂದಿಹುದೆ ದಿವ್ಯಸೌಂದರ್ಯದಲಿ
ಧರೆಯೊಳಗೆ ಇದನು ಮಿಂಚೆ ?

ಒಡನೆ ಇರಿಯಿತು ಮನವ ನನಸೆಲ್ಲವನು ಮರೆಸಿ
ನೆನಪೊಂದು ಮುಂದೆ ನಿಂದು
ಬೇರೆಯಾಗುವ ಮುನ್ನ ಮೊದಲುಕೊನೆ ಮುತ್ತೊತ್ತಿ-
ದಾರಕ್ತಮುಖವದೊಂದು.

ಕೆ. ನರಸಿಂಹಮೂರ್ತಿ.

ಈಗಿನ ನಾಟಕಗಳು

(೧೯೩೮ರಲ್ಲಿ ನೆಲ್ಲೂರಿನಲ್ಲಿ ನಡೆದ ಆಂಧ್ರ ಕಲಾನಾಟಕ ಪರಿಷತ್ತಿನಲ್ಲಿ ಶ್ರೀ ರಾ. ಅನಂತಕೃಷ್ಣಶರ್ಮರವರು ಮಾಡಿದ ಅಧ್ಯಕ್ಷಭಾಷಣ)

ರಸತಪಸ್ವಿಗಳಾದ ಆರ್ಯರೇ,

ನಿಮ್ಮ ದಯೆಗೆ ಕೃತಜ್ಞನಾಗಿದ್ದೇನೆ, ಧನ್ಯನಾಗಿದ್ದೇನೆ. ಆದರೆ ಅದಕ್ಕೆ ಅರ್ಹತೆಯನ್ನು ಸಂಪಾದಿಸಿಕೊಳ್ಳಬಲ್ಲ ಭಾಗ್ಯ ನನಗೆ ಈ ಜನ್ಮದಲ್ಲಿ ಇಲ್ಲ. ಜನ್ಮಾಂತರದಲ್ಲಿ ನನಗೆ ನಂಬಿಕೆಯಿರುವುದಾದರೂ ಆಶೆಯಿಲ್ಲ. ನಾನು ನಾಟಕಕರ್ತನಲ್ಲ. ಚಿಕ್ಕಂದು ಯಾವಾಗಲೋ ಒಂದನ್ನು ಬರೆಯಲು ಹೋಗಿ, ರಂಗವೊಂದನ್ನು ರಚಿಸಿ, ಹರಿದು, ಕಸದ ಪುಟ್ಟಿಗೆ ಸಮರ್ಪಿಸಿ ಕೈಗಳನ್ನು ಕೊಡವಿಕೊಂಡವನು. ನಾನು ನಟನು ಕೂಡ ಅಲ್ಲ. ಆ ವಿದ್ಯೆಗೂ ಕೈಹಾಕದೆ ಹೋಗಲಿಲ್ಲ; ಒಂದೇಒಂದು ಸಲ ಸೂತ್ರಧಾರನ ವೇಷದಿಂದ ಮೊದಲಾಗಿ ನಾಂದೀಪದ್ಯವನ್ನು ರಂಗದಮೇಲೆ ಒಪ್ಪಿಸುವುದರ ಮೂಲಕ ಅದು ಮುಕ್ತಾಯಕ್ಕೆ ಬಂದಿತು.

ಸಾಲದ್ದಕ್ಕೆ ನೀವೀಗ ಈ ಪರಿಷತ್ತನ್ನು ಈ ನೆಲ್ಲೂರಿನಲ್ಲಿ ಸಮಾವೇಶಗೊಳಿಸಿದ್ದೀರಿ. ನೆಲ್ಲೂರೆಂಬ ಹೆಸರನ್ನು ಕೇಳಿದೊಡನೆಯೇ ನಾಟಕರಚನಾಪ್ರಪಂಚದಲ್ಲಿ ನಾಯಕಮಣಿಗಳಂತಹ ಇಬ್ಬರು ಮಹಾಮಹಿಮರ ಹೆಸರು ಯಾವ ತೆಲುಗನಿಗಾದರೂ ಸ್ಮರಣೆಗೆ ಬಾರದೆಹೋಗದು. ಮೊದಲನೆಯವನು 'ಕವಿಬ್ರಹ್ಮ' ತಿಕ್ಕನ ಸೋಮಯಾಜಿ. ಆಂಧ್ರಸರಸ್ವತಿಗೆ ನಾಟಕರಚನಾಲಂಕಾರವನ್ನು ಕೊಟ್ಟವರಲ್ಲಿ ಸರ್ವವಿಧವಾಗಿಯೂ ಮೊದಲ ಪೂಜೆ ಈತನಿಗೇ ಅರ್ಪಿತವಾಗಬೇಕು. ಈತನ ಮಹಾಭಾರತವು ಹೆಸರಿಗೆ ಪುರಾಣವೇ ಹೊರತು ನಿಜವಾಗಿ ಅದೊಂದು ನಾಟಕರತ್ನ. ಆತನಿಂದೀಚೆಗೆ ನಾಟಕರಚನಾರಹಸ್ಯವನ್ನರಿತ ರಸಿಕರಲ್ಲಿ 'ಕಳಾಪ್ರಪೂರ್ಣ' ವೆಂಕಟರಾಯಶಾಸ್ತ್ರಿಯನ್ನು ಮೀರಿಸಿದವರಾರು? ಈ ಇಬ್ಬರು ಹುಟ್ಟಿ ಬೆಳೆದು ಪವಿತ್ರಗೊಳಿಸಿದ ಈ ಸ್ಥಳದಲ್ಲಿ ಆಂಧ್ರನಾಟಕ ಕಲಾಪರಿಷತ್ತು ಸೇರಿರುವುದು ನ್ಯಾಯ, ಧರ್ಮ. ಅದು ಸರಿ, ನಡುವೆ ನನ್ನನ್ನು ಇದಕ್ಕೆ ಅಧ್ಯಕ್ಷತೆ ವಹಿಸಲು ಆಜ್ಞಾಪಿಸಿ ನೀವು ಸಾಧಿಸಬಯಸುವುದೇನೋ ನನಗೆ ಅರ್ಥವಾಗದು. "ಅಹೇತುಃ ಪಕ್ಷಪಾತೋ ಯಸ್ತಸ್ಯ ನಾಸ್ತಿ ಪ್ರತಿಕ್ರಿಯಾ" ಎಂದು ದೊಡ್ಡವರೆನ್ನುತ್ತಾರೆ. ನನ್ನ ಕೈಲಾದ ಪ್ರತೀಕಾರ ನಮಸ್ಕಾರವೊಂದೆ. ಅದನ್ನು ನಿಮಗೆ ಮನಸಾರೆ ಸಮರ್ಪಿಸುತ್ತೇನೆ.

ನಾಟಕಪ್ರಪಂಚದಲ್ಲಿ ಮುಖ್ಯಪಾತ್ರಗಳು ಮೂರು; ಕವಿ, ನಟ, ಸಭಾಸದ. ಮೊದಲಿಬ್ಬರ ಕೆಲಸದಲ್ಲಿ ನನಗೆ ಸಾಕ್ಷಾತ್ತಾಗಿ ಯಾವ ವಿಧವಾದ ಸಂಬಂಧವೂ ಇಲ್ಲವೆಂದು ಮನವಿಮಾಡಿಕೊಂಡಿದ್ದೇನೆ. ಸಭ್ಯನಾಗಿದ್ದು ನೋಡಬೇಕೆಂದು, ಆನಂದಿಸಬೇಕೆಂದು ಆಶೆ ಮಾತ್ರ ಚಿಕ್ಕಂದಿನಿಂದ ನನಗೆ ಉಂಟು. ಆದ್ದರಿಂದ ಅವಕಾಶ ದೊರಕಿದಾಗಲೆಲ್ಲಾ ಆ ಕೆಲಸ ಮಾಡಿದ್ದೇನೆ. ಆದರೆ ಈಚೀಚೆಗೆ ಆ ಆಶೆ ಕೂಡ ಕಡಮೆಯಾಗುತ್ತಿದೆ. ಕಾರಣವೇನೆಂದರೆ—ಈಗ ವಾಡಿಕೆಯಲ್ಲಿರುವ ನಾಟಕಗಳ ಮತ್ತು ನಾಟ್ಯಗಳ ಪದ್ಧತಿಗಳೇ.

ನನ್ನದು ಬಹಳಮಟ್ಟಿಗೆ ಹಳೆಯ ಕಾಲದ ಸಂಸ್ಕಾರ. 'ಛಾನಸ'ವೆಂಬ ಹೆಸರಿನಿಂದ ಅದನ್ನು ಕರೆದು ಕೆಲವರು ನಗಬಹುದು. ಆದರೆ ನನ್ನ ಯತ್ನವಿಲ್ಲ. ನಾನು ಓದಿ ಮರೆತ ಓದುಗಳೂ, ಮಾಡಿಬಿಟ್ಟ ಸಂಧ್ಯೆಗಳೂ ಪೂರ್ವಪದ್ಧತಿಗೆ ಸೇರಿದುವು. ಎಷ್ಟು ಮರೆತರೂ, ಬಿಟ್ಟು ಎಷ್ಟು ದಿನಗಳಾದರೂ ಅವುಗಳ ವಾಸನೆ ನನ್ನನ್ನು ಪೂರ್ತಿಯಾಗಿ ಬಿಡಲಾರದಿದೆ. ಸಾಹಿತ್ಯವು ಸರ್ವಶಾಸ್ತ್ರಗಳ ಸಮಷ್ಟಿಯೆಂದೂ ಅವುಗಳಲ್ಲಿ ಸಾರವಾದ ಭಾಗ ನಾಟಕವೆಂದೂ ಸಾರಿಹೇಳಿದ ಪ್ರಾಚೀನರು, ಅದರಲ್ಲಿ ನಾವು ಓದಿನೋಡಿ ಅನುಭವಿಸಬೇಕಾದ ವಸ್ತು ಹೃದಯವನ್ನು ಕರಗಿಸುವ ರಸವೆಂದು ಹೇಳಿದರೇ ಹೊರತು ಅದನ್ನು ಕುದಿಯೇರಿಸುವ ಉದ್ರೇಕವೆಂದಾಗಲಿ, ಸಂಸಾರ ತಾಪತ್ರಯವನ್ನು ಮರೆಸುವ ಸಣ್ಣತರದ ವಿನೋದವೆಂದಾಗಲಿ ಹೇಳಲಿಲ್ಲ. ಆದ್ದರಿಂದಲೇ ಸಂಸ್ಕೃತ ನಾಟಕಗಳಲ್ಲೆಲ್ಲಾ ಶಾಕುಂತಲವು ರಮ್ಯವೆಂದೂ, ಅದರಲ್ಲಿಯೂ ಸಾಕುತಂದೆಯಾದ ಕಣ್ವನು ಶಕುಂತಲೆಯನ್ನು ಅತ್ತೆಯ ಮನೆಗೆ ಕಳುಹುವ ಸನ್ನಿವೇಶವನ್ನೊಳಕೊಂಡ ನಾಲ್ಕನೆಯ ಅಂಕ ರಮ್ಯತರವೆಂದೂ ಹಳೆಯ ರಸಿಕರ ಮತ. ಈಗಿನ ನಾಟಕಕರ್ತರಲ್ಲಿ, ನಟರಲ್ಲಿ ಅನೇಕರು ಈ ಸಿದ್ಧಾಂತವನ್ನು ಗೌರವಿಸುವಂತೆ ನನಗೆ ತೋರುತ್ತಿಲ್ಲ.

ನಾಟಕಗಳ ಅಭಿನಯವನ್ನು ಹೆಚ್ಚಾಗಿ ನೋಡುವ ಅವಕಾಶ ನನಗೆ ಲಭಿಸಿದುದು ಕನ್ನಡ ಸೀಮೆಯಲ್ಲಿ; ಕನ್ನಡ ಭಾಷೆಯಲ್ಲಿ. ಶಾಕುಂತಲಾದಿ ಪ್ರಾಚೀನ ನಾಟಕಗಳು, ಅವುಗಳ ಪದ್ಧತಿಯನ್ನೇ ಬಲುಮಟ್ಟಿಗೆ ಆಶ್ರಯಿಸಿ ಆಧುನಿಕರು ಬರೆದ ಪೌರಾಣಿಕ ನಾಟಕಗಳು, ಷೇಕ್ಸ್‌ಪಿಯರ್ ಮಹಾಕವಿಯ 'ಕಾಮೆಡಿ'ಗಳು—ಇವುಗಳೇ ನಾನು ಹೆಚ್ಚಾಗಿ ನೋಡಿದವು. ತೆಲುಗು ನಟರ ಕೌಶಲ್ಯವನ್ನು ನೋಡಿ ಸಂತೋಷಿಸುವ ಭಾಗ್ಯ ನನಗೆಲ್ಲೋ ಆಕಸ್ಮಿಕವಾಗಿಯೇ ಹೊರತು ಹೆಚ್ಚಾಗಿ ಲಭಿಸಲಿಲ್ಲ. ತೆಲುಗು ರೂಪಕಗಳಲ್ಲಿ ಹಲವನ್ನು ಓದಿದ್ದೇನೆ. ಕನ್ನಡ ನಾಟಕಗಳಿಗೂ ತೆಲುಗು ನಾಟಕಗಳಿಗೂ ಸ್ವರೂಪದಲ್ಲಿಯಾಗಲಿ ದೃಷ್ಟಿಯಲ್ಲಿಯಾಗಲಿ ಭೇದವಿಲ್ಲ. ಆದ್ದರಿಂದ ತೆಲುಗು

ನಟರ ಕೌಶಲ್ಯವೂ ಹೆಚ್ಚು ಕಡಮೆ ಕನ್ನಡನಟರಂತಹುದೇ ಆಗಿರುತ್ತದೆ ಎಂದುಕೊಳ್ಳು ತ್ತಿದ್ದೇನೆ. ಹೇಗಾದರೂ ತೆಲುಗು ನಾಟ್ಯಕಲೆಯನ್ನು ಕುರಿತ ನನ್ನ ಅಭಿಪ್ರಾಯವು ನೋಡುವುದಕ್ಕಿಂತ ಹೆಚ್ಚಾಗಿ ಓದುವುದರಿಂದ ಬಂದದ್ದು. ಅಲ್ಲದೆ, ರೂಪಕಕರ್ತರಿ ಗಿಂತ ಭಿನ್ನವಾದ ಮನೋಧರ್ಮ ನಟರಿಗೆ ಪ್ರಾಯಶಃ ಇರದು,—ಇಬ್ಬರೂ ಅನ್ಯೋ ನ್ಯಾಶ್ರಯಿಗಳಾದ್ದರಿಂದ. ಕೆಲವು ಸಂದರ್ಭಗಳಲ್ಲಿ ಗ್ರಂಥಕರ್ತರು ಉದ್ದೇಶಿಸಿದ ಸೂಕ್ಷ್ಮಭಾವಗಳನ್ನು ಅಸಮರ್ಥರಾದ ನಟರು ಗಮನಿಸದೇ ಹೋಗಬಹುದು; ಮತ್ತೆ ಕೆಲವುವೇಳೆ ಪ್ರತಿಭಾವಂತರಾದ ನಟರು ಗ್ರಂಥಕರ್ತನು ಯೋಚಿಸದವುಗಳೂ ನಾವು ಓದಿಕೊಳ್ಳುವಾಗ ಉಂಟಾಗದವುಗಳೂ ಆದ ಸೂಕ್ಷ್ಮಭಾವಗಳನ್ನು ಸ್ಫುರಿಸು ವಂತೆ ಮಾಡಬಹುದು. ಇಷ್ಟೇ ಹೊರತು ಒಂದು ಪದ್ಧತಿಗೆ, ಒಂದು ಭಾಷೆಗೆ ಸೇರಿದ ಕವಿಗಳಿಗೂ ನಟರಿಗೂ ಮೊತ್ತದಲ್ಲಿ ಪರಾಯಣ ಭಿನ್ನವಾಗಿರಲಾರದು.

ಒಂದೆರಡನ್ನು ಬಿಟ್ಟರೆ ಈಗಿನ ರೂಪಕಗಳೆಲ್ಲಾ ಸಾಮಾನ್ಯವಾಗಿ ಎರಡು ತರಗತಿಯಾಗುತ್ತವೆ. ತೀವ್ರಗಳಾದುವು ಕೆಲವು, ಹಗುರವಾದುವು ಕೆಲವು. ಎರಡ ರಲ್ಲಿಯೂ ನನಗೆ ಅನುರಾಗ ಕಡಮೆಯಾಗಿದೆ. ತೀವ್ರಜಾತಿಯವು—ಕಾಮ, ಕ್ರೋಧ, ಮತ್ಸರ, ಹಿಂಸೆ, ಶೋಕ ಮೊದಲಾದ ಕಷ್ಟಭಾವಗಳನ್ನು ಅತಿಯಾಗಿ ಬೆಳಸಿ ಸಭಿಕರಿಗೆ ಉದ್ರೇಕದ ಮತ್ತೇರಿಸಿ, ಭಾವಜ್ವರವನ್ನು ಉಂಟುಮಾಡುತ್ತವೆ. ಸಭಾಕಂಪವನ್ನು ಕಳೆದುಕೊಂಡ ಸಾಹಸಿಕ ನಟರ ಕೈಗೆ ಇಂತಹುವೇನಾದರೂ ಲಭಿಸಿದವೋ, ಅವರು ಹುಬ್ಬುಗಂಟಿಕ್ಕುವುದು, ಹಿಡಿಕೆಗಳನ್ನು ಹಿಂಡುವುದು, ಮೈನಡುಕ, ಗದ್ಗದ ಸ್ವರ— ಮುಂತಾದ ಅಸಹ್ಯ ನಟನೆಗಳನ್ನು ಮಿತಿಮೀರಿ ಪ್ರಯೋಗಿಸಿ ಸಭಿಕರ ಹೃದಯ ಸೌಕುಮಾರ್ಯವನ್ನು ಸದಮದಮಾಡಿಬಿಡುತ್ತಾರೆ. ಮತ್ತಿಗೊಳಗಾಗಿ ತತ್ಕಾಲಕ್ಕೆ ತೃಪ್ತಿಪಡುವುದು ಎಂತಹ ಸಂಸ್ಕಾರಿಗಳಾದ ಮನುಷ್ಯರಿಗಾದರೂ ಸ್ವಾಭಾವಿಕವಾದ ಇಂದ್ರಿಯ ಧರ್ಮ. ಮದ್ಯವನ್ನು ಮೂಸಿನೋಡಿದರೂ ಪ್ರಾಯಶ್ಚಿತ್ತ ಮಾಡಿಕೊಳ್ಳ ಬೇಕೆಂದು ನಂಬಿ ಆಚರಿಸುತ್ತಿರುವ ಪರಮವೈದಿಕನಿಗೂ ಕೂಡ ಬಲವಂತವಾಗಿಯೋ ಮೋಸದಿಂದಲೋ ಒಂದು ಚಮಚ ಹೆಂಡ ಹುಯಿದು "ಲಾಹಿರೆ ಗಂಜಾಹಿರೆ" ಹಾಡಿಸಿ ತಕತೈಯಾಡಿಸಬಹುದು. ಹೀಗೆ ನಾಲ್ಕೈದು ಬಾರಿ ಮಾಡಿದ್ದಾದರೆ ಇದೇ ಬ್ರಹ್ಮಾನಂದವೆಂದುಕೊಳ್ಳುವಷ್ಟು ಕೆಳಮಟ್ಟಕ್ಕೆ ಅವನನ್ನು ಇಳಿಸಬಹುದು. ಕೆಲವು ತಾಂತ್ರಿಕ ಮತಗಳಲ್ಲಿ ಹೆಂಡ ಸಾರಾಯಿಗಳಿಗೂ, ಅವಧೂತ ಪದ್ಧತಿಯಲ್ಲಿ ಅಫೀ ಮಿಗೂ, ಇಂತಹ ಪವಿತ್ರತೆ ಏರ್ಪಟ್ಟಿರುವುದನ್ನು ನಾವು ಬಲ್ಲೆವು. ಉದ್ರೇಕದ ಬಲವು ಇಂತಹುದಾದ್ದರಿಂದಲೇ ಅದರ ಪ್ರಾಬಲ್ಯವುಳ್ಳ ರೂಪಕಗಳನ್ನು ಓದಿದಾಗ, ಅದಕ್ಕಿಂತಲೂ ಹೆಚ್ಚಾಗಿ ನೋಡಿದಾಗ, ವಿವೇಕಿಗಳಾದ ಸಹೃದಯರೂ ಕೂಡ

ಸಂತೋಷಿಸುತ್ತಿದ್ದೇವೆಂಬ ಭ್ರಾಂತಿಗೆ ಒಳಗಾಗುತ್ತಾರೆ. ಕ್ರಮವಾಗಿ ಇದೇ ಉತ್ತಮವಾದ ನಾಟಕಕಲೆ ಎಂದುಕೊಳ್ಳುತ್ತಾರೆ.

ಇಂತಹ ನಾಟಕಗಳ, ನಾಟ್ಯಗಳ ಪ್ರಭಾವವು ಇತ್ತೀಚೆಗೆ ಕೊಂಚ ಕಡಮೆಯಾಗುವ ಸೂಚನೆಗಳಿವೆ. ನನಗೇನೋ ಇದು ಸಂತೋಷದ ವಿಷಯವೇ. ಆದರೆ ಹಾಗಾಗುವುದಕ್ಕೆ ಕಾರಣ—ಈ ಪದ್ಧತಿಯಲ್ಲಿನ ಲೋಪಗಳ ಅರಿವಲ್ಲ; ನಮಗುಂಟಾಗಿರುವ ಬೇಸರವೇ ಅದಕ್ಕೆ ಕಾರಣವೆಂದುಕೊಳ್ಳುತ್ತೇನೆ. ಮನುಷ್ಯನ ಯೋಗ್ಯತೆಗೆ ತಕ್ಕಂತೆ ಹೆಂಡದ ಮೊದಲು ಹಾವಿನ ವಿಷದವರೆಗೆ ಬೇರೆಬೇರೆ ಡಿಗ್ರಿಗಳ ಮಾದಕ ವಸ್ತುಗಳಿರುವಂತೆ, ನಾಟಕಗಳಲ್ಲಿ ಮೇಲೆಮೇಲೆ ಉದ್ರೇಕವನ್ನು ಹೆಚ್ಚಿಸುತ್ತಾ ಹೋಗಲು ಸಾಧನೆಗಳಿಲ್ಲ. ಒಂದು ಮಾದಕದ್ರವ್ಯವನ್ನು ರುಚಿನೋಡಿ ಪಳಗಿ ಬೇಸತ್ತವನಿಗೆ ಅದರ ಪ್ರಮಾಣವನ್ನು ಹೆಚ್ಚುಮಾಡಿಯಾಗಲಿ, ಬೇರೆ ದ್ರವ್ಯವನ್ನು ಬದಲಾಯಿಸಿಯಾಗಲಿ, ಪ್ರಯೋಗಿಸಿ ಹೊಸ ಮತ್ತನ್ನುಂಟುಮಾಡಿ ಆಶೆ ತೋರಿಸಬಹುದು. ಆದರೆ ರಂಗಸ್ಥಳದಲ್ಲಿ ಹಾಗೆ ಮಾಡಲು ಅವಕಾಶ ಸಾಲದು. ನಿನ್ನೆಯ ಮಾತುಗಳೇ, ನಿನ್ನೆಯ ಆಟಗಳೇ ಇವತ್ತೂ. ಅಲ್ಪಸ್ವಲ್ಪ ಮಾರ್ಪಾಡುಗಳಿಂದ ಆಶೆ ತೀರದು. ಕೆಲವು ಕಡಾಖಡಿ ಮಾರ್ಪಾಟುಗಳನ್ನು ಮಾಡುವ ಸಾಹಸವಿದ್ದರೂ ಇನ್ನೂ ಸಮಾಜದವರೋ ಸರ್ಕಾರದವರೋ ಅಡ್ಡಬರುತ್ತಿದ್ದಾರೆ. ಪುರುಷರು ಸ್ತ್ರೀ ವೇಷವನ್ನು ಹಾಕಿ ಮಾಡುವ ವಿಲಾಸ ಬಿಬ್ಬೋಕ ವಿಭ್ರಮಗಳಿಂದ ತೃಪ್ತಿ ಸಾಲದೆಂದು ತಿಳಿದು ಸ್ತ್ರೀಯರನ್ನೇ ರಂಗದ ರಚ್ಚೆಗೆ ಎಳೆದೆವು. ಆದರೆ ಈಗ ಅದರಲ್ಲಿಯೂ ಮೋಜು ಮಂದವಾಗಿದೆ. ನಾಯಕನು ನಿಜವಾದ ಪುರುಷನು, ನಾಯಿಕೆ ನಿಜವಾದ ಸ್ತ್ರೀಯಾದ ಮಾತ್ರದಿಂದ ತೃಪ್ತಿಪಡುವ ಕಾಲವು ಹೋಗಿದೆ. ನಟರ, ಸಭಿಕರ ಕಾಮೋದ್ರೇಕ ಇಂಗಿಹೋಗದಂತೆ ನಾಯಿಕಾನಾಯಕರ ಶೃಂಗಾರದ ಚಕ್ಕಂದಗಳನ್ನು ನವನವೋಲ್ಲಾಸದಿಂದ ಬೆಳಸಿ ರಚಿಸುವುದಕ್ಕೂ, ನಟಿಸುವುದಕ್ಕೂ, ನೋಡಿ ಅನುಭವಿಸುವುದಕ್ಕೂ ತಯಾರಾದ ಮನುಷ್ಯರಿದ್ದಾರೆ. ಆದರೆ ಸಮಾಜದಲ್ಲಿ ದೊಡ್ಡವರಾದವರಿಗೆ ಇನ್ನೂ ಕೊಂಚ ಬುದ್ಧಿ ಇದೆ, ಸರ್ಕಾರದವರಿಗೆ ಇನ್ನೂ ನೀತಿಯಲ್ಲಿ ಸ್ವಲ್ಪ ನಂಬಿಕೆ ಇದೆ. ಆದ್ದರಿಂದ ಹಾಗೆ ಮಾಡಲು ಮಾರ್ಗವಿಲ್ಲದೆ ಇದೆ. ಸ್ವಾತಂತ್ರ್ಯವನ್ನನುಭವಿಸುವವರೂ ನಮಗೆ ಈಗ ಎಲ್ಲ ನಡತೆಗಳಲ್ಲಿ ಆದರ್ಶಭೂತರೂ ಆದ ಪಾಶ್ಚಾತ್ಯರ ಸಂಸ್ಕೃತಿಯಲ್ಲಿ ಇಂತಹ ಉದ್ರೇಕಕ್ಕೆ ಪ್ರಾಧಾನ್ಯವು ಹೆಚ್ಚು. ಆದ್ದರಿಂದ ಅವರು ತಮ್ಮ ಜೀವಿತದಲ್ಲಿಯೂ ಕಲೆಗಳಲ್ಲಿಯೂ ಉದ್ರೇಕವು ಪರಮಾವಧಿಯನ್ನು ಮುಟ್ಟುವವರೆಗೂ ಎಳೆದು ತಳ್ಳಿದ್ದಾರೆ. ಇದರ ಫಲವಾಗಿ ಹಿಟ್ಲರುಗಳೂ, ಮುಸಲೋನಿಗಳೂ ಹುಟ್ಟಿ ಯೂರೋಪುದೇಶದ ನೀತಿಧರ್ಮಗಳನ್ನೂ ನಯನಾಣ್ಯಗಳನ್ನೂ ಏಕಾ

ಘೋಷಣವಮಾಡಲು ಸಂಕಲ್ಪಿಸಿ ಎಲ್ಲಿ ನೋಡಿದರೂ ರಣೋದ್ರೇಕ ಭೇರಿಯನ್ನು ಬಾರಿಸುತ್ತಿದ್ದಾರೆ. ಇತ್ತೀಚೆಗೆ ಅವರಲ್ಲಿ ತೀವ್ರವಿವೇಕಶಾಲಿಗಳಾದ ಅನೇಕರಿಗೆ ಮನುಷ್ಯ ಜೀವಿತದ ಉಯ್ಯಾಲೆಯಲ್ಲಿ ಈ ಭಾವಶೃಂಖಲೆಗಳನ್ನು ಹೀಗೆ ತುದಿಮುಟ್ಟುವಂತೆ ಮಿತಿಮೀರಿ ಎಳೆದು ತೂಗುವುದರಲ್ಲಿ ಸುಖವು ನಿಜವಾಗಿ ಇಲ್ಲವೆಂದು ಮಾತ್ರವೇ ಅಲ್ಲದೆ ಅಪಾಯಗಳೂ ಹೆಚ್ಚೆಂಬ ತತ್ವವು ಬಹುವಿಧವಾಗಿ ಅನುಭವಕ್ಕೆ ಬಂದಿದೆ. ಆ ಸ್ವಚ್ಛಂದವನ್ನು ನಿರೋಧಿಸುವುದಕ್ಕಾಗಿ ಅವರು ಪ್ರಬಲ ಪ್ರಯತ್ನಗಳನ್ನು ಮಾಡಲು ಮೊದಲುಮಾಡಿದ್ದಾರೆ. ನಮ್ಮಲ್ಲಿ ಸಮರ್ಥರಾದವರು ಇನ್ನೂ ಆ ಜವಾಬ್ದಾರಿಯನ್ನು ಗುರುತಿಸಬೇಕಾಗಿದೆ. ಹೇಳಬಂದಿದ್ದೇನೆಂದರೆ—ನಮ್ಮಲ್ಲಿ ತೀವ್ರಭಾವಗಳನ್ನು ಉದ್ರೇಕಿಸುವ ಬೇಹಾರಕ್ಕಿಳಿದ ಕಲೆಗಳು—ಮುಖ್ಯವಾಗಿ ನಾಟಕಗಳು—ಮತ್ತಿನ ಪ್ರಮಾಣವನ್ನು ಹೆಚ್ಚಿಸುವ ಮಾರ್ಗಗಳಿಲ್ಲದೆ ಹಿಂದೆ ಬೀಳುತ್ತಿವೆಯೇ ಹೊರತು ತಮ್ಮದು ತಪ್ಪುದಾರಿಯೆಂದು ತಿಳಿದುಕೊಂಡಲ್ಲ. ಈಗ ಅಂತಹ ನಾಟಕಗಳನ್ನು ರಚಿಸುವವರು, ಅಭಿನಯಿಸುವವರು ವಿರಳವಾಗುತ್ತಿದ್ದಾರೆ. ಇದನ್ನೊಂದು ನಷ್ಟವಾಗಿ ಪರಿಗಣಿಸಬೇಕಾದ ಅಗತ್ಯವಿಲ್ಲವೆಂದೂ, ಮೇಲಾಗಿ ಧನ್ಯವಾದವನ್ನು ನುಡಿಯಬೇಕಾದ ವಿಷಯವೆಂದೂ ಹೇಳಿದೆನು.

ಆದರೆ, ಈ ಉದ್ರೇಕ ಕೋಲಾಹಲಗಳಲ್ಲಿ ರಸಪ್ರಧಾನವಾದ ರಚನೆಗೆ ಪ್ರಯತ್ನಿಸುವ ಕವಿಗಳಾಗಲಿ, ಅದಕ್ಕಿಂತ ಹೆಚ್ಚಾಗಿ ಅದನ್ನು ಅಭಿನಯಿಸುವ ಸಾಹಸಕ್ಕೆ ತೊಡಗುವ ನಟರಾಗಲಿ, ನೋಡುವ ಉತ್ಸಾಹವುಳ್ಳ ಸಭ್ಯರಾಗಲಿ ಸಾಮಾನ್ಯವಾಗಿ ಕಾಣುತ್ತಿಲ್ಲವೆನ್ನುವುದು ನಾವೀಗ ಚಿಂತಿಸಬೇಕಾಗಿರುವ ವಿಷಯ. ಇನ್ನು ಪ್ರಾಚೀನ ಮಹಾಕವಿಗಳ ಶಾಕುಂತಲ, ಮೃಚ್ಛಕಟಿಕಾದಿ ರೂಪಕ ರಸಘುಟಿಕೆಗಳ ದಿಕ್ಕುದೆಸೆ ವಿಚಾರಿಸುವವರಾರು ? ಈಗಿನ ನಟರಲ್ಲಿ ಅಂತಹವು ಇವೆಯೆಂದು ತಿಳಿದವರಾದರೂ ಹೆಚ್ಚುಮಂದಿ ಇದ್ದಾರೆಯೋ ಇಲ್ಲವೋ ! ಓದುಗರಾದ ಇಂದಿನ ಸಭ್ಯರಲ್ಲಿ ಯಾರೋ ಕೆಲವರು ಮೂಲಗಳನ್ನೋ ತರ್ಜುಮೆಗಳನ್ನೋ ಪಠಿಸಿದವರಿದ್ದಾರೆಯೇ ಹೊರತು ಅವುಗಳನ್ನು ಅಭಿನಯಿಸಿ ನೋಡಿ ಆನಂದಿಸುವ ಭಾಗ್ಯವುಳ್ಳವರು ಹಲವರಿಲ್ಲ. ಸುಮಾರು ಇಪ್ಪತ್ತು ವರ್ಷಗಳ ಮುಂಚೆ ಕರ್ಣಾಟಕ ರಂಗಸ್ಥಳದಲ್ಲಿ ರತ್ನಾವಳಿ, ಶಾಕುಂತಲ, ಮೃಚ್ಛಕಟಿಕ, ಉತ್ತರ ರಾಮಚರಿತೆ ಮೊದಲಾದವುಗಳನ್ನು ಧಾರಾಳವಾಗಿ ಅಭಿನಯಿಸುತ್ತಿದ್ದರು. ಅವುಗಳಲ್ಲಿ ಪ್ರಧಾನಪಾತ್ರಗಳನ್ನು ಅಭಿನಯಿಸುವುದರಲ್ಲಿ ನುರಿತ ನಟರಿದ್ದರು. ಇಂದು ಅವೂ ಕಾಣಬಾರವು; ಅವರೂ ಅಂತರ್ಧಾನವಾಗಿದ್ದಾರೆ. ಕೊನೆಗೆ ಕಾಲೇಜುಗಳಲ್ಲೂ ಸ್ಕೂಲುಗಳಲ್ಲೂ ವಿನೋದಕ್ಕಾಗಿ ವಿದ್ಯಾರ್ಥಿಗಳು ಅಭಿನಯಿಸುತ್ತಿದ್ದ ಷೇಕ್ಸ್‌ಪಿಯರ್ ಮೊದಲಾದ ಪಾಶ್ಚಾತ್ಯಕವಿಗಳ ತೀವ್ರನಾಟಕ

ಗಳು ಕೂಡ ಇಂದು ಗೋಚರಿಸವು. ತೆಲುಗು ರಂಗವು ಇದಕ್ಕಿಂತ ಮೇಲಾಗಿರುವುದೆಂಬ ಸೂಚನೆಗಳನ್ನೂ ಕಾಣೆವು. ಈಗಿನ ವಿಮರ್ಶಕರು ಮೇಲಿನ ನಾಟಕಗಳಲ್ಲಿ ಅನಾವಶ್ಯಕವಾದ 'ಛಾನಸ'ಗಳಿವೆಯೆಂಬ ಕಾರಣದಿಂದ ಅವುಗಳನ್ನು ತಿರಸ್ಕರಿಸುತ್ತಿದ್ದಾರೆ. ಛಾನಸಗಳು ಅವುಗಳಲ್ಲಿರುವುದು ನಿಜವೇ. ಆದರೆ ಅಷ್ಟರಿಂದಲೇ ಅವುಗಳ ಸ್ವರೂಪವೆಲ್ಲವೂ ಮುಗಿಯಿತೇ? ಪ್ರತಾಪರುದ್ರೀಯವನ್ನು[1] ಓದಲು ಮೊದಲು ಮಾಡಿ ಅದರ ನಾಂದೀ ಪದ್ಯದಲ್ಲಿರುವ "ಟಕಟೊಂಕುಟಾಟೋಟು[2]"ಗಳಿಗೆ ಅಸಹ್ಯಪಡಬಹುದೇ ಹೊರತು ಅದರಿಂದ ಆ ನಾಟಕವೇ ಅಭಿನಯಕ್ಕೆ ತರವಲ್ಲವೆನ್ನುವವರ ರಸಿಕತೆ ಯಾತಕ್ಕೆ ತರವಾದದ್ದು? ತತ್ವವನ್ನು ವಿಚಾರಿಸಿದರೆ—ಸಂಪ್ರದಾಯಗಳ ಅಂತಸ್ತನ್ನು ದಾಟಿ ಒಳಗಿಳಿದು ನೋಡುವ ಶಕ್ತಿಯೇ ಸಂಸ್ಕೃತಿಗೆ ಗುರುತು. ಹಾಗೆ ಮಾಡದಿರುವುದು ಬರಿಯ ಮೇಲ್ಬಣ್ಣ.

ಅಲ್ಲದೆ ಇಂತಹ 'ಛಾನಸ'ಗಳು ಯಾವಾಗ ಎಲ್ಲಿ ಇಲ್ಲ? ನಮ್ಮ ಜೀವಿತದಲ್ಲಿ ಮತಗಳಲ್ಲಿ, ಕಲೆಗಳಲ್ಲಿ—ಎಲ್ಲಿಯೇ ಆಗಲಿ ನಿಯಮವೆಂಬುವುದನ್ನು ಏರ್ಪಡಿಸಿದೆವಾದರೆ ಅದು 'ಛಾನಸ'ದ ಮಟ್ಟಕ್ಕೆ ಇಳಿಯದೆ ಬಿಡದು. ಯಾವುದೋ ಒಂದು ವಿಧವಾದ ನಿಯಮವಿಲ್ಲದ ಬದುಕನ್ನು ಕಳೆಯುವುದು ಮನುಷ್ಯರಿಗೆ ಯಾವಾಗಲೂ ಸಾಧ್ಯವಿಲ್ಲವಲ್ಲವೆ? ಆದ್ದರಿಂದ ಈಗಿನ ರೂಪಕಗಳು ಇತರ ಎಲ್ಲ ವಿಷಯಗಳಂತೆಯೇ ಹಳೆಯ ಸಂಪ್ರದಾಯಗಳು ಕೆಲವನ್ನು ಬಿಟ್ಟಿರಬಹುದೇ ಹೊರತು ಹೊಸವನ್ನು ಕಟ್ಟಿಕೊಳ್ಳದೆ ಇರಲಾರವು. ಕಾಲೈಕ್ಯ, ವಸ್ತ್ವೈಕ್ಯ, ದೇಶೈಕ್ಯ, ಪಾತ್ರಪೋಷಣೆ—ಮೊದಲಾದ ಹೆಸರುಗಳಿಂದ ಆಧುನಿಕ ನಾಟಕಕರ್ತರು ಎಷ್ಟೋ ಛಾನಸಗಳನ್ನು ಕಟ್ಟಿಕೊಂಡಿದ್ದಾರೆ. ಪ್ರತಿಭಾಬಲವುಳ್ಳ ಸ್ಥಳದಲ್ಲಿಯೂ ಕೂಡ ಇಂತಹ ಚಿಲ್ಲರೆ ವಿಷಯಗಳಿಗೆ ಕಿವಿಗೊಡುವುದು ರಸಿಕಲಕ್ಷಣವಲ್ಲ.

ಇನ್ನು ಈಗ ಹೆಚ್ಚು ವ್ಯಾಪ್ತಿಗೆ ಬರುತ್ತಿರುವ ಎರಡನೆಯ ತರಗತಿಯ ರೂಪಕಗಳು ಸಾಮಾಜಿಕಗಳೆನಿಸಿಕೊಳ್ಳುವುವು. ಇವುಗಳಲ್ಲಿ ರಸದಮಾತು ಹಾಗಿರಲಿ, ಭಾವತೀವ್ರತೆಗೆ ಕೂಡ ತಕ್ಕಷ್ಟು ಅವಕಾಶವಿಲ್ಲ. ಇವುಗಳ ಪರಾಯಣವು ನಮ್ಮ ನಿತ್ಯ ಜೀವನವನ್ನು ಅನುಕರಿಸಿ ಅಚ್ಚುಹೊಡೆವುದು. ಇವುಗಳನ್ನು ನೋಡಿದಾಗ, ಓದಿದಾಗ ನಮಗೆ ಆಗುವ ಅನುಭವ, ಅಕ್ಕದ ಮನೆಗೋ ಪಕ್ಕದ ಮನೆಗೋ ಹೋಗಿ ಗಂಟೆ ಹೊತ್ತು ಲೋಕಾಭಿರಾಮವಾಗಿ ಹರಟೆಹೊಡೆದು ಕಾಲಕ್ಷೇಪಮಾಡಿ ಬರು

[1] ಇದು ಕೀರ್ತಿಶೇಷರಾದ ವೇದದ ವೆಂಕಟರಾಯಶಾಸ್ತ್ರಿಗಳು ರಚಿಸಿದ ಸ್ವತಂತ್ರ ಮಹಾನಾಟಕ.

[2] ತೆಲುಗಿನಲ್ಲಿ ಈ ಪದಗಳಿಗೆ ಮೋಸಗಾರನೆಂದರ್ಥ.

ವಾಗಿನ ಅನುಭವಕ್ಕಿಂತ ಹೆಚ್ಚು ಸ್ಥಿರವೂ ಅಲ್ಲ, ಹೆಚ್ಚು ವಿಶಾಲವೂ ಅಲ್ಲ. ಸಮಕಾಲೀನ ಸಮಾಜದ ವೇಷಭಾಷಾದಿಗಳನ್ನು, ಅಣಕಾಟವನ್ನು ಕಂಡು ನಮಗೆ ಸ್ವಲ್ಪ ವಿನೋದವುಂಟಾಗಿ ಉಲ್ಲಾಸಗೊಳ್ಳುವೆವಾದರೂ ಅದಕ್ಕಿಂತ ಹೆಚ್ಚಾದ ಬೆಲೆಯಿಲ್ಲ ಇವುಗಳಿಗೆ. ಇವುಗಳ ರಚನೆಯಲ್ಲೆಲ್ಲಾ ಪ್ರಾಯಿಕವಾಗಿ ಗ್ರಂಥಕರ್ತರಿಗೆ ಸ್ವಚ್ಛಂದ ವೃತ್ತಿಯಲ್ಲಿರುವ ನಂಬಿಕೆಯೇ ಬೀಜಭೂತವಾಗಿದ್ದು ಯಾವ ಉದಾರಾದರ್ಶಕ್ಕಾಗಲಿ, ಉದಾತ್ತಭಾವಕ್ಕಾಗಲಿ ಪ್ರಾಮುಖ್ಯವಿಲ್ಲದಿರುವುದರಿಂದ ಇಲ್ಲಿನ ಯಾವ ಅನುಭವಕ್ಕೂ ಸತ್ವವಿಲ್ಲ. ವಿನೋದಕ್ಕೆ ಬಾಳಿನಲ್ಲಿರುವ ಬೆಲೆಯನ್ನು ನಾನು ಗಮನಿಸದೆ ಹೋಗಿಲ್ಲ. ಆದರೆ ನಾಟಕಗಳಂಥ ಮಹಾಸಂಸ್ಥೆಗಳಿಗೆ ಈ ಅಲ್ಪೋದ್ದೇಶವು ಸಾಲದೆಂದು ನನ್ನ ಅಭಿಪ್ರಾಯ. ಇದಕ್ಕಾಗಿ ಇಷ್ಟು ಕಾಲವನ್ನೂ ದ್ರವ್ಯವನ್ನೂ ಖರ್ಚುಮಾಡುವುದು ವ್ಯರ್ಥವಲ್ಲವೆ ಎನ್ನಿಸುತ್ತದೆ. ಇಷ್ಟುಮಾತ್ರದ ವಿನೋದ ಅರ್ಧಗಂಟೆ ಇಸ್ಪೇಟು ಆಟವಾಡಿದರೂ ಉಂಟಾಗುತ್ತದೆ.

ಆದ್ದರಿಂದಲೇ ಈಗಿನ ನಾಟಕಗಳಲ್ಲಿ ಸಾಮಾನ್ಯವಾಗಿ ನಮಗಿರುವ ಉದಾಸೀನ. ಸಿನಿಮಾಗಳ ವ್ಯಾಪ್ತಿಯಿಂದ ನಾಟಕಗಳಿಗೆ ವ್ಯಾಪ್ತಿ ತಗ್ಗಿದೆಯೆಂದು ಕೆಲವರ ಅಭಿಪ್ರಾಯ. ಒಂದುವೇಳೆ ಅದು ಸ್ವಲ್ಪಮಟ್ಟಿಗೆ ನಿಜವಾದರೂ ಸಮಾಜಕ್ಕೆ ಪ್ರತ್ಯೇಕವಾಗಿ ಉಂಟಾದ ನಷ್ಟವೇನೋ ನನಗೆ ಅರ್ಥವಾಗುವುದಿಲ್ಲ. ನಾಟಕದ ಕಂಪೆನಿಗಳು ಮಾಡುತ್ತಿದ್ದ ಕೆಲಸವನ್ನೇ ಸಿನಿಮಾ ಕಂಪೆನಿಗಳೂ ಮಾಡುತ್ತಿವೆ. ಇಷ್ಟುದಿನಗಳೂ ಸಂಕುಚಿತವಾಗಿದ್ದ ರಂಗಸ್ಥಳವು ಈಗ ದೊಡ್ಡದಾಗಿದೆ. ಇಲ್ಲಿ ಆಡುತ್ತಿದ್ದ, ಆಡಬಲ್ಲ ನಟರೇ ಅಲ್ಲಿಯೂ ಆಡುತ್ತಾರೆ; ಇಲ್ಲಿನ ಕವಿಗಳೇ ಅಲ್ಲಿಯೂ; ಇಷ್ಟು ದಿನಗಳಿಗಿಂತ ಈಗ ಇಬ್ಬರೂ ಹೆಚ್ಚು ಸಂಬಳವನ್ನು ಸಂಪಾದಿಸುತ್ತಿದ್ದಾರೆ. ಹೀಗೆ ಚಿಕ್ಕ ರಂಗಗಳನ್ನು ದೊಡ್ಡದಾಗಿ ಮಾಡುವುದು, ಕವಿಗಳ, ನಟರ ಜೀತವನ್ನು ಹೆಚ್ಚುಮಾಡುವುದು, ವೇಷಾಲಂಕಾರ ಪರಿಕರಗಳನ್ನೆಲ್ಲಾ ಹೆಚ್ಚು ಸಹಜವಾಗಿರುವಂತೆ ಸಮಕಟ್ಟುವುದು—ಇತ್ಯಾದಿಗಳಿಗಾಗಿ ಹೆಚ್ಚು ಖರ್ಚುಮಾಡಿ ಅದಕ್ಕೆ ತಕ್ಕಂತೆ ಹೆಚ್ಚು ಲಾಭವನ್ನು ಸಂಪಾದಿಸುವುದು ಹೊರತು ನಾಟಕಗಳ ವಿಷಯದಲ್ಲಿ ಸಿನಿಮಾಗಳು ಮಾಡಿದ ತಪ್ಪೇನೊ ನನಗೆ ತೋರಲಿಲ್ಲ. ಇಷ್ಟುದಿನಗಳೂ ನಾಟಕಗಳಾಡುತ್ತಿದ್ದ ನಾವೇ ಇಂದು ಸಿನಿಮಾಗಳಿಗೆ ನುಗ್ಗಿದ್ದೇವೆಯೇ ಹೊರತು ಹೊಸಬರಾರೂ ಬಂದು ಕೆಡಿಸಲಿಲ್ಲ. ಹೀಗಾಗುವುದರಿಂದ ನಾಟ್ಯಕಲಾ ವಿಷಯವಾಗಿ ನಮಗಿದ್ದ ದೃಷ್ಟಿಯೇನೂ ಮಾರ್ಪಾಡು ಹೊಂದಲಿಲ್ಲ. ಆದ್ದರಿಂದ ಇದು ಮನೆಬಿಟ್ಟು ಸಂತೆಗೆ ಬಂದಂತಾಯಿತೇ ಹೊರತು ಅಸಲು ಸ್ವರೂಪ ಹಾಗೆಯೇ ಇದೆ. ನಾಟಕ ಕಂಪೆನಿಯವರಿಗೆ ಈ ಸ್ಪರ್ಧೆಯಲ್ಲಿ ಲಾಭವು ಕಡಮೆಯಾದದ್ದಕ್ಕಾಗಿ ದೊಡ್ಡ ಸಾಹುಕಾರನೊಡನೆ

ಪೈಪೋಟಿಗೆ ನಿಂತು ನಷ್ಟಪಟ್ಟ ಚಿಕ್ಕ ವ್ಯಾಪಾರಿಗಳನ್ನು ಕಂಡು ಕನಿಕರಪಡುವುದಕ್ಕಿಂತ ಹೆಚ್ಚು ಕನಿಕರಪಡಬೇಕಾದುದಿಲ್ಲ. ಪಟ್ಟು ಪ್ರಯೋಜನವೂ ಇಲ್ಲ. ನಾಟಕಗಳ ದೃಷ್ಟಿ ಸಿನಿಮಾಗಳ ದೃಷ್ಟಿಗಿಂತ ಭಿನ್ನವಾಗುವವರೆಗೂ ಎರಡಕ್ಕೂ ಸ್ಪರ್ಧೆ ತಪ್ಪದು. ಆ ಪೋಟಾಪೋಟಿಯಲ್ಲಿ ಹೆಚ್ಚು ಅನುಕೂಲಗಳುಳ್ಳ ಸಿನಿಮಾಗಳು ಅನುಕೂಲಗಳು ಕಡಮೆಯಾದ ನಾಟಕಗಳನ್ನು ತುಳಿದುಹಾಕುವುದು ಸ್ವಾಭಾವಿಕವಾದ ಮಾತ್ಸ್ಯನ್ಯಾಯ.

ದೃಷ್ಟಿಭೇದವೆಂದರೆ ಎಂತಹುದು? ಈ ಉದ್ರೇಕಗಳನ್ನೂ ಅಗ್ಗದ ವಿನೋದಗಳನ್ನೂ ಬಿಟ್ಟು ರಸದಲ್ಲಿ ದೃಷ್ಟಿ ನಿಲ್ಲಿಸುವುದು. ಶೋಧಿತಗಳಾಗಿ ಪವಿತ್ರಗಳಾಗಿರುವ ಭಾವಗಳೇ ರಸಗಳೆಂದು ಸ್ಥೂಲವಾಗಿ ಹೇಳಬಹುದು. ರಸಗಳನ್ನು ಸಾಧಿಸಲು ಆ ಉದ್ರೇಕವಿನೋದಗಳು ಸ್ವಲ್ಪಮಟ್ಟಿಗೆ ಪ್ರಯೋಜನಕ್ಕೆ ಬರುತ್ತವೆಯಾದರೂ ಅವುಗಳನ್ನು ಆ ಮಟ್ಟಮೀರಲು ಬಿಡಬಾರದು. ಕೋಪಬಂದಾಗ ಹುಬ್ಬು ಗಂಟುಹಾಕಿಕೊಳ್ಳುವುದರಿಂದ ಹೊಡೆಯುತ್ತೇನೆಂದು ಹೆದರಿಸುವ ವರೆಗೂ ರಸಕ್ಕೆ ಸ್ಥಾನವಿದೆ. ಆ ಎಲ್ಲೆಯನ್ನು ದಾಟಿ ಸಿಕ್ಕಾಪಟ್ಟೆ ಬೈದು ಕೈಯೋ ಕಾಲೋ ಮುರಿದೇಬಿಟ್ಟರೆ ರಸಕ್ಕೆ ಅಸಹ್ಯವುಂಟಾಗಿ ಅದು ಅಂತರ್ಧಾನವಾಗುವುದು. ಹೂವುಗಳಿಂದ ಪೂಜೆ, ಹಾಡುಗಳಿಂದ ಪ್ರಾರ್ಥನೆ ಜರುಗುತ್ತಿರುವವರೆಗೆ ಭಕ್ತಿರಸವು ಭೋಗ್ಯವಾಗಿರುತ್ತದೆಯೇ ಹೊರತು ಭಕ್ತರು ಮೈಮರೆತು ಬೆತ್ತಲೆಯಾಟಗಳಾಡಲು ಮೊದಲುಮಾಡಿ ಸ್ತ್ರೀ ಪುರುಷ ಭೇದಗಳಿಲ್ಲದ ಅದ್ವೈತಕ್ಕೆ ಇಳಿದರಾದರೆ ರಸಿಕರು ಆ ಸ್ಥಳದಲ್ಲಿರದೆ ಮೆಲ್ಲಗೆ ಜಾರಬೇಕಾದುದೇ. ಪ್ರತಿ ಭಾವಕ್ಕೂ ಸ್ವಲ್ಪವಾಗಿಯೋ ಹೆಚ್ಚಾಗಿಯೋ ಇಂತಹ ನ್ಯಾಯ ಅನ್ವಯಿಸುತ್ತದೆ. ರಸೋಪಾಸಕರು ಮೇಲಿನ ವಿಪರೀತಗಳನ್ನು ಸಹಜಗಳಾದರೂ ಬಿಟ್ಟುಬಿಡಬೇಕಾದ ಹಾಗೆ, ರಸಸ್ಫೂರ್ತಿಗೆ ಆವಶ್ಯಕವಲ್ಲದ ವೇಷ, ಭಾಷೆ, ರಂಗಪರಿಕರ, ಅಭಿನಯ—ಇವುಗಳನ್ನೂ ಕೂಡ ಸ್ವಾಭಾವಿಕವಾಗಿದ್ದರೂ ತ್ಯಜಿಸಬೇಕಾಗಿದೆ. ತಪಸ್ವಿಗಳ ಶಾಂತರಸ ಸ್ಫುರಿಸಲು ಅಡವಿಯೊಳಗಿರುವ ಪರ್ಣಶಾಲೆಯೊಂದು ಸಾಕೇ ಹೊರತು ಪಕ್ಕದಲ್ಲಿನ ನೆಗ್ಗಿಲುಮುಳ್ಳುಗಳು, ಹಾವುಗಳು, ಚೇಳುಗಳು, ಅನಾವಶ್ಯಕವಾದವು. ಇಂತಹ ಅವಾಂತರ ವಿಷಯಗಳನ್ನು ಬೆಳಸುವುದರಲ್ಲೇ ಈಗಿನ ಸಿನಿಮಾಗಳಿಗೆ ಮುಖ್ಯತಾತ್ಪರ್ಯವಿದೆ. ಹೆಚ್ಚುಕಡಮೆ ನಾವು ಅವುಗಳನ್ನು ನೋಡಹೋಗುವುದೂ ಇದಕ್ಕೇ. ಸಿನಿಮಾಗಳಿಗೆ ಈ ಕಾರ್ಯವು ಸಾಧ್ಯವೂ ಹೌದು. ಪದಾರ್ಥಗಳಿರುವ ಸ್ಥಳಕ್ಕೇ ಒಂದುಸಲ ಹೋಗಿ ಆಡಿ ಗೊಂಬೆಗಳನ್ನು ಎತ್ತಿಕೊಂಡರೆ ಅವರಿಗೆ ಸಾಕು. ಉಳಿದ ಕೆಲಸವೆಲ್ಲವೂ ಆ ಗೊಂಬೆಗಳನ್ನು ಅಚ್ಚು ಹೊಡೆದು ಹಂಚಿಡುವುದೇ. ರಂಗಸ್ಥಳದವರಿಗಾದರೊ ಹಾಗಲ್ಲದೆ ಆ ಪರಿಕರಗಳೆಲ್ಲವನ್ನೂ ಅಭಿನಯಿಸುವ ಸ್ಥಳಕ್ಕೇ ಪ್ರತಿಬಾರಿಯೂ ತಂದುಕೊಳ್ಳಬೇಕು.

ಹೀಗಾಗುವುದರಿಂದ ಪರಿಕರಗಳನ್ನು ಬೆಳಸಿಕೊಳ್ಳುವುದು ಸಿನಿಮಾದವರಿಗೆ ಸಾಧ್ಯ, ಸಹಜ. ರಂಗಸ್ಥಳದವರಿಗೆ ಅದು ಅಸಾಧ್ಯವಾದ್ದರಿಂದ ಅದಕ್ಕಾಗಿ ಅವರು ಕೃತ್ರಿಮ ಮಾರ್ಗಗಳಿಗೆ ಇಳಿಯದೆ ವಿಧಿಯಿಲ್ಲ. ಇಷ್ಟಲ್ಲದೆ ಸಿನಿಮಾಗಳಲ್ಲಿ ಉದ್ರೇಕಕ್ಕೂ ವಿನೋದಕ್ಕೂ ಬೇಕಾದ ಸ್ಥೂಲಾಭಿನಯಗಳನ್ನು ಫೋಟೋ ತೆಗೆಯಬಹುದೇ ಹೊರತು ರಸಸ್ಫೂರ್ತಿಗೆ ಜೀವವಾದ ಸೂಕ್ಷ್ಮ ಸೂಕ್ಷ್ಮತರಾಭಿನಯಗಳನ್ನು ತೆಗೆಯು ವುದು ಸಾಧ್ಯವಿಲ್ಲ. ಆದ್ದರಿಂದಲೇ ಸೂಕ್ಷ್ಮಭಾವಗಳನ್ನು ತೋರಿಸಬೇಕಾದಾಗ ಬೊಂಬೆಯನ್ನು ಭೂತಕನ್ನಡಿಯಲ್ಲಿ ದೊಡ್ಡದುಮಾಡಿ ತೋರಿಸುವುದು ಸಿನಿಮಾಗಳಿಗೆ ವಿಧಿಯಾಗಿದೆ. ಆದ್ದರಿಂದ ಗ್ರಾಮಾಫೋನು ಸಂಗೀತವೂ ಸಿನಿಮಾ ಅಭಿನಯವೂ ಸ್ವಲ್ಪ ಹೆಚ್ಚು ಕಡಮೆ ಒಂದೇ ತರಗತಿಯವು. ಅಲ್ಲದೆ ಫೋಟೋ ತೆಗೆವ ಯಂತ್ರಗಳು ಎಷ್ಟೇ ನಾಜೋಕುಳ್ಳವಾಗಿದ್ದರೂ ಸಾಕ್ಷಾತ್ತಾಗಿ ಅಭಿನಯವನ್ನು ನೋಡಿದಷ್ಟು ತೃಪ್ತಿ ಪರಂಪರೆಯಿಂದ ನೋಡಿದಾಗ ಉಂಟಾಗದು; ಅಭಿನೇತನು ಎಷ್ಟು ಸಮರ್ಥ ನಾದರೂ ನಾವು ನೋಡುವುದು ಅವನ ನೆರಳೇ. ಆದ್ದರಿಂದ ನಾವು ಅನುಭವಿಸುವುದೂ ರಸಚ್ಛಾಯೆಯೇ ಹೊರತು ರಸವಲ್ಲ. ಇಷ್ಟೇ ಅಲ್ಲದೆ ನಿನ್ನೆಯ ಅಭಿನಯ ಸಾಲ ದೆಂದಾಗಲಿ ಚೆನ್ನಾಗಿಲ್ಲವೆಂದಾಗಲಿ ತೋರಿದರೆ ಈದಿನ ಅದನ್ನು ಮಾರ್ಪಡಿಸಿ, ಸೇರಿಸಿ ಸವರಿಸಿಕೊಳ್ಳುವ ಅನುಕೂಲ ರಂಗದವರಿಗೆ ಇರುವುದಾದ್ದರಿಂದ ಬೇಜಾರಿಗೆ ಅವಕಾಶ ಕಡಮೆ. ಸಿನಿಮಾಗಳದು ಒಂದೇ ಶಾಶ್ವತ ಮುದ್ರೆ. ಅದನ್ನು ಮಾರ್ಪಡಿಸಬೇಕೆಂದರೆ ಲಕ್ಷಾಂತರಗಟ್ಟಲೆ ಮರಳಿ ವೆಚ್ಚಮಾಡಬೇಕಾದುದೇ. ಆದ್ದರಿಂದ ಮಾರ್ಪಾಡು ಸಾಮಾನ್ಯವಾಗಿ ಸಾಧ್ಯವಿಲ್ಲ. ಅದಕ್ಕಾಗಿಯೇ ಒಂದು ನಾಟಕವನ್ನು ನೋಡಿದಷ್ಟು ಬಾರಿ ಒಂದು ಸಿನಿಮಾವನ್ನು ನೋಡಲು ಉತ್ಸಾಹವಿರದು. ಹೀಗಾಗುವುದರಿಂದ ರಸೋಪಾಸನೆ ಮಾಡುವ ವಿಷಯದಲ್ಲಿ ನಾಟಕಗಳೊಡನೆ ಸಿನಿಮಾಗಳು ಪೋಟಾ ಪೋಟಿಗೆ ನಿಲ್ಲಲಾರವು.

ಹೀಗೆಯೇ ವ್ಯಾಪ್ತಿಯಲ್ಲೂ, ದ್ರವ್ಯಾರ್ಜನೆಯಲ್ಲೂ ಸಿನಿಮಾಗಳೊಡನೆ ಪೋಟಾಪೋಟಿಗೆ ನಾಟಕದ ಕಂಪನಿಗಳು ನಿಲ್ಲಲಾರವು. ಬೊಂಬೆಗಳಂತೆ ಮನುಷ್ಯ ರನ್ನೂ ಕೂಡ ಪ್ರಾಣಸಹಿತ ಅಚ್ಚುಹೊಡೆದು ಇಚ್ಛೆಬಂದೆಡೆಗೆ ಟಪಾಲಿನಲ್ಲಿ ಕಳುಹಿಸಿ ಹರಹಬಲ್ಲ ಅನುಕೂಲಗಳನ್ನು ಈಗಿನ್ನೂ ಯಾವದೇಶದ ವೈಜ್ಞಾನಿಕರೂ ಕಂಡು ಹಿಡಿದಿಲ್ಲ. ಇಷ್ಟರಲ್ಲೇ ಕಂಡುಹಿಡಿದಾರೆಂಬ ಸೂಚನೆಯೂ ಇಲ್ಲ. ಆದ್ದರಿಂದ ನೋಡುವವರಿರುವ ಸ್ಥಳಕ್ಕೆ ಸಿನಿಮಾಗಳು ಹೋಗಬಹುದಾದಷ್ಟು ಸುಲಭವಾಗಿ ರಂಗಸ್ಥಳಗಳು ಹೋಗಲಾರವು. ಇವು ಇರುವ ಸ್ಥಳಕ್ಕೆ ಅವರು ಬಹುಮಟ್ಟಿಗೆ ಬರಬೇಕಾಗಿದೆ. ಆದುದರಿಂದ ಸಿನಿಮಾಗಳಷ್ಟು ನಾಟಕಗಳು ಆರ್ಜಿಸಲಾರವು.

ಆದ್ದರಿಂದ ಈ ಎರಡಕ್ಕೂ ಪೋಟಾಪೋಟಿ ಇಟ್ಟುಕೊಳ್ಳುವುದೇ ತಪ್ಪು. ಹಾಗಾದರೆ ದ್ರವ್ಯಾರ್ಜನೆ ಇಲ್ಲದಾಗ ರಂಗಸ್ಥಳಗಳು ಯಾವುದನ್ನು ಆಶ್ರಯಿಸಿ ಬದುಕಬೇಕು? ಸಿನಿಮಾ ತಾರೆಗಳೊಡನೆ ಹೋಲಿಸಿನೋಡಿದಾಗ ರಂಗನಟರಿಗೆ ತಮ್ಮ ಆದಾಯ ಕಡಮೆಯೆಂದೆನಿಸುತ್ತದೆಯೇ ಹೊರತು ಆದಾಯವೇ ಇಲ್ಲದ ಸ್ಥಿತಿಗೆ ನಾಟಕಗಳು—ಎಂದರೆ ರಸಪ್ರಧಾನವಾದವುಗಳು—ಎಂದಿಗೂ ಬರಲಾರವು. ರಸಿಕ ಜನರು ಕೆಲವರಾದರೂ ಯಾವಾಗಲೂ ಇರುವರಾದ್ದರಿಂದ ರಸೋಪಾಸಕರಾದ ನಟರಿಗೂ ಕವಿಗಳಿಗೂ ಜೀವಿತದಲ್ಲಿ ಉಪವಾಸ ಮಾಡಬೇಕಾದ ಅಗತ್ಯ ಎಂದಿಗೂ ಬಾರದೆಂದು ನನ್ನ ನಂಬಿಕೆ. ಇನ್ನೂ ತಮಗಿಂತಲೂ ಹೆಚ್ಚು ಧನ ಗಳಿಸುವವರನ್ನು ನೋಡಿ ತಾವು ಭಿಕಾರಿಗಳೆಂದು ಕೊರಗುವವರಿಗೆ ಬದುಕಿನಲ್ಲಿ ಎಂದಿಗೂ ನೆಮ್ಮದಿ ಇರದು.

ಉಪರ್ಯುಪರಿ ಪಶ್ಯನ್ತಃ ಸರ್ವ ಏವ ದರಿದ್ರತಿ
ಅಧೋಧಃ ಪಶ್ಯತಃ ಕಸ್ಯ ಮಹಿಮಾ ನೋಪಚೀಯತೇ ||

ಎಂಬ ದೊಡ್ಡವರ ನಾಣ್ನುಡಿ ಸರ್ವಸತ್ಯವಾದುದು. ಇಂಥವರ ದೆಸೆಯಿಂದ ತಮಗಾಗಲಿ ಪರರಿಗಾಗಲಿ ಪ್ರಯೋಜನವುಂಟಾಗದು. ಅಲ್ಲದೆ ಸಿನಿಮಾಗಳು ಬರುವುದಕ್ಕೆ ಮುಂಚೆ ಇದ್ದ ನಟರೂ ನಾಟಕಕರ್ತರೂ ಕುಬೇರರಾಗಿದ್ದರೇನು? ನಾನು ತಿಳಿದಿರುವ ಮಟ್ಟಿಗೆ ಅವರೆಲ್ಲರೂ ಮರ್ಯಾದೆಯಿಂದ ಯಾವುದೋ 'ಅಹನ್ಯಹನಿ' ಕಾಲಕ್ಷೇಪ ಮಾಡುತ್ತಿದ್ದವರೇ. ಅಲ್ಲದೆ ಅವರು ಯಾರೇ ಆಗಲಿ ಪ್ರಾಯೋಪವೇಶವನ್ನು ಮಾಡುವ ಸ್ಥಿತಿಗೂ ಬಂದಿರಲಿಲ್ಲ. ಯಾವ ವೃತ್ತಿಯಲ್ಲಿಯಾದರೂ ಕೈಲಾದಷ್ಟು ತಳಕ್ಕೆ ಇಳಿದು ಸಾಧಿಸಬೇಕೆಂಬ ದೊಡ್ಡ ಪರಾಯಣವನ್ನಿಟ್ಟುಕೊಂಡವರಿಗೆ, ಶ್ರದ್ಧಾವಂತರಿಗೆ, ದ್ರವ್ಯಾಶೆ ಪ್ರಧಾನವಾಗಿರಕೂಡದು. ಆ ಆಳದ ರುಚಿಯನ್ನರಿತವರಿಗೆ ಧನಾಶೆ ಕ್ರಮವಾಗಿ ಕಡಮೆಯಾಗಿಯೂ ಹೋಗುತ್ತದೆ. ಲೌಕಿಕ ವೈದಿಕ ವೃತ್ತಿಗಳಲ್ಲಿ, ವಿಜ್ಞಾನಭಾಗದಲ್ಲಿ, ಕಲೆಯಲ್ಲಿ ದೊಡ್ಡ ಸಿದ್ಧಿಯನ್ನು ಸಾಧಿಸಿದ ಮಹಾಪುರುಷರೆಲ್ಲರೂ ಅಂದಿಗೂ ಇಂದಿಗೂ ಎಂದೆಂದಿಗೂ ಹೀಗೆ ದ್ರವ್ಯಫಲವನ್ನು ಗೌಣವಾಗಿ ಪರಿಗಣಿಸಿದವರೇ.

ಆದರೆ ಸಾಮಾನ್ಯ ಜನರಿಗೆ ಇಂತಹ ದೊಡ್ಡ ಪರಾಯಣ, ತ್ಯಾಗಬುದ್ಧಿ ಉಂಟಾಗುತ್ತದೆಯೆ? ಅವರಿಗೆ ಧನದಮೇಲೆ ಆಶೆ ಸಹಜವಲ್ಲವೆ? ಎಂಬ ಪ್ರಶ್ನೆ ಬರುತ್ತದೆ. ಆದರೆ ಯಾರು ಸಾಮಾನ್ಯಜನರು? ಯಾರು ವಿಶೇಷಜನರು? ಓದಿಕೊಂಡವರು ವಿಶೇಷಜನರು, ಉಳಿದವರು ಸಾಮಾನ್ಯರೆಂದಲ್ಲವೆ ಭಾವ? ಆಗ್ಗೆ ವಿದ್ಯಾವಂತರೆಲ್ಲರೂ ದ್ರವ್ಯಾಶೆ ಇಲ್ಲದವರೆಂದೂ, ಇತರರೆಲ್ಲರೂ ಪಿಶನಾರಿಗಳೆಂದೂ

ಹೇಳಬೇಕಾಗಿ ಬರುತ್ತದೆ. ಅದು ಅನುಭವವಿರುದ್ಧವೆಂದು ಹೇಳಬೇಕಾದ ಅಗತ್ಯವೇ ಇಲ್ಲ; ಹಾಗಲ್ಲದೆ ಉದಾತ್ತವಿಷಯಗಳ ಬೆಲೆಯನ್ನರಿತವರು ವಿಶಿಷ್ಟರು, ಉಳಿದವರು, ಸಾಮಾನ್ಯರು ಎಂದು ಹೇಳಿದರೆ ಅಂತಹ ಸಾಮಾನ್ಯಜನರಿಗೆ ಉದಾತ್ತವಿಷಯಗಳನ್ನು ಹೇಳಿಕೊಟ್ಟರೂ ತಿಳಿಯದೆಂದು ಊಹಿಸಬೇಕೆ? ಹಾಗೆ ಊಹಿಸಲು ಯಾರಿಗೇನು ಅಧಿಕಾರ? ಹಾಗಲ್ಲದೆ ಸಾಮಾನ್ಯರನ್ನು ಸಾಮಾನ್ಯರಾಗಿಯೇ ಇರಿಸುವುದು ವಿಶಿಷ್ಟ ಜನರ ವಿಶೇಷಕ್ಕೆ ಒಂದು ಲಕ್ಷಣವೇ? ಅವಕಾಶವಿತ್ತು ನೋಡಬೇಕೇ ಹೊರತು ನಾವು ಸಾಮಾನ್ಯರೆಂದುಕೊಂಡ ಯಾವ ಜನರಲ್ಲಿ ಎಷ್ಟು ವಿಶೇಷ ಧರ್ಮಗಳ ಬೀಜಗಳಡಗಿವೆಯೋ ಸುಮ್ಮನೆ ನಮಗೆ ಹೇಗೆ ತಿಳಿಯುತ್ತದೆ? ವಿಶಿಷ್ಟ ಜನರೆಂದು ಕೊಂಡವರಿಗೆ ಮಾತ್ರ ಈ ಅರಿವು ಹುಟ್ಟಿನೊಡನೆ ಬಂದಿತೆ? ಕಲಿತುದು, ಕಲಿಸಲ್ಪಟ್ಟುದು ಅಲ್ಲವೆ? ಎಂದಮೇಲೆ ನಮ್ಮ ವಿಶೇಷದಲ್ಲಿ ನಮಗೆ ನಿಜವಾಗಿಯೂ ನಂಬಿಕೆ ಇದ್ದ ಪಕ್ಷದಲ್ಲಿ ಸಾಮಾನ್ಯಜನರಿಗೆ ಅದರ ರುಚಿ ತೋರಿಸಿ ನಮ್ಮ ದಾರಿಗೆ ಅವರನ್ನು ತಂದುಕೊಳ್ಳಲಾರೆವೆ? ತಂದುಕೊಳ್ಳಬೇಡವೆ? ನಿಜವನ್ನು ನೋಡಿದರೆ, ಈ ಸಾಮಾನ್ಯ ವಿಶೇಷ ವಿಭಾಗವು ಸುಖಪ್ರಿಯರಾದ ಸೋಮಾರಿಗಳು ಮಾಡಿಕೊಂಡುದು; ಅವರ ಸ್ವಾರ್ಥಪರತ್ವಕ್ಕೆ ಇದು ಊರುಗೋಲು.

ಆದ್ದರಿಂದ ಜನರನ್ನು ರಸಿಕರನ್ನಾಗಿ ಮಾಡುವುದು, ಮಾಡಪ್ರಯತ್ನಿಸುವುದು ರಸೋಪಾಸಕರಾದ ಕವಿ ನಟ ಸಭ್ಯರ ಧರ್ಮ. ಈ ಕೆಲಸ ಹೀಗೊಂದು ಭಾರಿ ಉಪನ್ಯಾಸಮಾಡಿದರೆ ಸಾಲದು. ಪದೇಪದೇ ಒತ್ತಿಹೇಳಿ ಜನರ ಚಿತ್ತವನ್ನೂ ರುಚಿಯನ್ನೂ ಸಂಸ್ಕರಿಸಬೇಕು. ಅವಕಾಶವುಂಟಾದಾಗ ಕಲಾನುಭವದಲ್ಲಿನ ಭೇದಗಳನ್ನೂ ಅವುಗಳ ಗುಣದೋಷಗಳನ್ನೂ ನಾಟುವಂತೆ ಬೋಧಿಸಬೇಕು. ಅದಕ್ಕಿಂತ ಮುಖ್ಯವಾಗಿ ಒಳ್ಳೆಯ ಸರಸ ರೂಪಕಗಳನ್ನು ಬರೆದು, ಬರೆಸಿ, ಆಡಿ, ಆಡಿಸಿ, ಪ್ರಚುರಪಡಿಸಬೇಕು. ಶಿಕ್ಷೆ, ಸ್ಮೃತಿ, ಧರ್ಮಶಾಸ್ತ್ರ, ನೀತಿಶಾಸ್ತ್ರ, ಸದಾಚಾರ ಮೊದಲಾದ ಮಾರ್ಗಗಳಲ್ಲಿ ದಿನದಿನವೂ ಜನರ ಚಿತ್ತವನ್ನು ನಯಭಯಗಳಿಂದ ತಿದ್ದಿ ನೇರಗೊಳಿಸುತ್ತಿದ್ದರೇ ಅಲ್ಲವೆ ಅವರಿಗೆ ಅಹಿಂಸೆ, ಸತ್ಯ, ಅಸ್ತೇಯ, ಮೊದಲಾದ ಉದಾತ್ತ ಗುಣಗಳಲ್ಲಿ ನಂಬಿಕೆ, ಅವುಗಳನ್ನು ಆಚರಣೆಯಲ್ಲಿಟ್ಟುಕೊಳ್ಳುವ ಉತ್ಸಾಹ—ಇವು ನವೆಯದೆ ಇರುವುವು? ಜನರನ್ನು ನೀತಿಮಂತರನ್ನಾಗಿ ಮಾಡುವುದೆಷ್ಟು ಕಷ್ಟವೋ, ಅವರನ್ನು ರಸಿಕರನ್ನಾಗಿ ಮಾಡುವುದೂ ಅಷ್ಟೇ ಕಷ್ಟಸಾಧ್ಯ. ಅದರಷ್ಟೇ ಇದೂ ಆವಶ್ಯಕ.

ಇದು ವಿದ್ಯಾಶಾಖಾಧಿಕಾರಿಗಳೂ ಸಮಾಜದಲ್ಲಿನ ದೊಡ್ಡವರೂ ಮಾಡಬೇಕಾದ ಧರ್ಮ. ಆದರೆ ವಿದ್ಯಾಶಾಖೆಯವರು ಈ ವಿಷಯದಲ್ಲಿ ಹೆಚ್ಚು ಶ್ರದ್ಧೆ ವಹಿಸುವ ಸೂಚನೆಗಳಿಲ್ಲ. ವಿಶ್ವವಿದ್ಯಾನಿಲಯದವರು ಇಷ್ಟುದಿನಗಳೂ ಮನುಷ್ಯನಿರ್ಮಾಣದಲ್ಲಿ

ಬುದ್ಧಿಯೊಂದನ್ನು ಬಿಟ್ಟರೆ ಉಳಿದುದೇನೂ ಇಲ್ಲವೆಂದು ಭಾವಿಸಿದವರಂತೆ ಅದನ್ನು ಬರಿಯ ಶುಷ್ಕ ವಿಚಾರಗಳಿಂದ ಕೂಡಿ ತುಂಬುತ್ತಿದ್ದರು. ಈಚೆಗೆ ನಮಗೆ ಹೊಟ್ಟೆಯೂ ಇದೆ ಎಂದು ಕಂಡುಕೊಂಡಹಾಗಿದೆ. ವೃತ್ತಿ ವಿದ್ಯೆಗಳಿಗೆ ಈಗೀಗ ಅವರು ಹೆಚ್ಚು ಅವಕಾಶಗಳನ್ನು ಕಲ್ಪಿಸುತ್ತಿದ್ದಾರೆ. ಆದರೆ ಈ ಬುದ್ಧಿ ಹೊಟ್ಟೆಗಳನ್ನು ಮೀರಿದುದೂ, ನಮ್ಮ ಸುಖದುಃಖಗಳಿಗೆ ಮೂಲಸ್ಥಾನವಾದುದೂ ಆದ 'ಭಾವಾಂಬರವೀಧಿ' ಯೊಂದನ್ನು ನಮಗೆ ಸೃಷ್ಟಿಕರ್ತನು ಕೊಟ್ಟಿದ್ದಾನೆಂದೂ, ಅದು ಶಿಕ್ಷೆಯಿಲ್ಲದೆ ಪೋಲಿ ತಿರುಗುತ್ತಿದೆಯೆಂದೂ ಅವರ ಮನಸ್ಸಿಗೆ ತಕ್ಕಷ್ಟು ತಟ್ಟಿಲ್ಲವೆಂದು ಹೇಳಬೇಕಾಗಿದೆ. ಯೂನಿವರ್ಸಿಟಿಯವರು ಪ್ರಾಚೀನ ಮಹಾನಾಟಕಗಳನ್ನು ಇನ್ನೂ ಪಾಠ ಹೇಳುತ್ತಿದ್ದಾರೆ. ಆದರೆ ಅವರ ದೃಷ್ಟಿಯೆಲ್ಲವೂ ನಾಟಕಲಕ್ಷಣಗಳ ಚರಿತ್ರೆ, ಕವಿಕಥೆ, ಒಂದೊಂದರ ಹೋಲಿಕೆಗಳು, ವಿಭೇದಗಳು ಮೊದಲಾದ ಬಹಿರಂಗಗಳ ಮೇಲಿರುವುದೇ ಹೊರತು ವಿದ್ಯಾರ್ಥಿಗಳಿಂದ ಅವುಗಳನ್ನು ಆಡಿಸುವುದು, ತಮ್ಮ ಕೈಲಾಗದಿದ್ದರೆ ಇತರರ ಕೈಲಾದರೂ ಅವುಗಳನ್ನು ಆಡಿಸಿ ನೋಡುವುದು ಮೊದಲಾದ ಸ್ವಾನುಭವ ಮಾರ್ಗಗಳ ಕಡೆ ಹೋಗದೆಯಿದೆ. ಸಾಲದುದಕ್ಕೆ ಪ್ರಾಚೀನ ನಾಟಕಗಳನ್ನು ಆಡಿ ನೋಡಿ ಅನುಭವಿಸದೆಯೇ ಅವು ನಾಟಕರೂಪವಾದ ಕಾವ್ಯಗಳೆಂದೂ ಆಡಲು ಕೆಲಸಕ್ಕೆ ಬಾರವೆಂದೂ, ರಂಗದಮೇಲೆ ರಕ್ತಿಯನ್ನು ಕೊಡವೆಂದೂ, ಧೈರ್ಯವಾಗಿ ಉಪದೇಶಿಸುತ್ತಾರೆ. ಗುರುಗಳ ವಾಕ್ಯಗಳನ್ನು ಶಿಷ್ಯರು ಭಕ್ತಿಯಿಂದಲೋ ಇಲ್ಲದೆಯೋ ಅನುವಾದ ಮಾಡುವ ಅಭ್ಯಾಸವಿಟ್ಟುಕೊಂಡಿದ್ದಾರೆ. ಸಮರ್ಥರಾದ ನಟರು ಶ್ರದ್ಧೆಯಿಂದ ಕಲಿತು ಅಭಿನಯಿಸುವಾಗ ರಸಾನುಭವವುಳ್ಳ ಸಭಾಸದರು ನೆಮ್ಮದಿಯಿಂದ ನೋಡಿದಹೊರತು ಯಾವ ನಾಟಕದಲ್ಲಿ ಯಾವುದು ಎಷ್ಟರಮಟ್ಟಿಗೆ ಅಭಿನಯಯೋಗ್ಯವೋ ಅಲ್ಲವೋ ನಿರ್ಣಯಿಸುವುದು ಅಷ್ಟು ಸುಲಭವಾದ ಕಾರ್ಯವಲ್ಲ. ವಿವೇಚಿಸುವ ಬುದ್ಧಿಗೂ ಅನುಭವಿಸುವ ಅಂತರಂಗಕ್ಕೂ ಹೊಂದಿಕೆಯನ್ನುಂಟುಮಾಡಬೇಕೆಂದು—ಅಂತರಂಗವನ್ನು ಬುದ್ಧಿಗೆ ಒಳಪಡಿಸಬೇಕೆಂದು—ಮನುಷ್ಯರು ಮಾಡುವ ಪ್ರಯತ್ನಗಳೆಲ್ಲವೂ ಬುದ್ಧಿಗೆ ಸಿಕ್ಕದ ಅನುಭವಗಳು ಲೆಕ್ಕವಿಲ್ಲದಷ್ಟು ಇವೆಯೆಂದು ತೋರಿಸಿ ಬುದ್ಧಿಗೆ ಬುದ್ಧಿ ಹೇಳುವುದರಲ್ಲಿ ಪರ್ಯವಸಾನವಾಗುತ್ತಿವೆ.

ಆದ್ದರಿಂದ ಈಗ ತಮ್ಮಂತಹ ದೊಡ್ಡವರು, ರಸಿಕ ಪಾರಿಷದರು ಮಾಡುವ ಪ್ರಯತ್ನದಿಂದ ರಸಿಕಜೀವನವು ಪುನರುದ್ಧಾರವಾಗಬೇಕಾಗಿದೆ; ಸಮಾಜವು ಸಹೃದಯವಾಗಬೇಕಾಗಿದೆ. ರುಚಿಗಳೂ ಅಭಿಪ್ರಾಯಗಳೂ ಶೋಧನೆಯಾಗಬೇಕಾಗಿವೆ. ಇವುಗಳನ್ನು ಸಾಧಿಸುವ ಮಾರ್ಗಗಳನ್ನು ಕುರಿತು ನಿಮಗೆ ಸಲಹೆಗಳನ್ನು ಕೊಡುವ ಶಕ್ತಿ ನನಗೆ ಇಲ್ಲವೆಂದು ಮೊದಲೇ ವಿಜ್ಞಾಪಿಸಿಕೊಂಡಿದ್ದೇನೆ. ನೀವು ಏರ್ಪಡಿಸಿದ

ಕಾರ್ಯಮಾಲೆಯಲ್ಲಿ ಉಪನ್ಯಾಸಗಳು, ಚರ್ಚೆಗಳು, ತೀರ್ಮಾನಗಳು—ಇವುಗಳಿಗಿಂತ ಪ್ರದರ್ಶನಗಳಿಗೆ ಹೆಚ್ಚು ಅವಕಾಶ ಕೊಟ್ಟಿರುವುದೇ ನೀವು ಬರಿಯ "ವಾಚಾಧರ್ಮಮವಾಪ್ನುಹಿ" ಎಂಬವರಲ್ಲವೆಂದೂ ಅನುಭವ ರಸಿಕರಾದ ಕಾರ್ಯಶೂರರೆಂದೂ ತೋರಿಸುತ್ತದೆ. ಆದ್ದರಿಂದ ನಾನು ಈ ಅಧ್ಯಕ್ಷೋಪನ್ಯಾಸ ಶಾಸ್ತ್ರವನ್ನು ಇದಕ್ಕಿಂತ ಹೆಚ್ಚು ಬೆಳಸಿ ನಿಮ್ಮ ಕಾಲವನ್ನು ಕಬಳಿಸದೆ ಮತ್ತೊಂದು ಬಾರಿ ನಿಮ್ಮ ದಯೆಗೆ ಧನ್ಯವಾದಗಳನ್ನು ವಿಜ್ಞಾಪಿಸಿಕೊಳ್ಳುತ್ತಾ ವಿರಮಿಸುತ್ತಿದ್ದೇನೆ.

ಅನುವಾದಕ : ತ. ಸು. ಶಾಮರಾವ್, ಬಿ.ಎ. (ಆನರ್ಸ್)

ಸಂಸ್ಕೃತದಿಂದ

೧

ಬಿಟ್ಟುಬಂದೆನು ತಂದೆ ವಿಂಧ್ಯಗಿರಿಯುಂಕವನು,
ತಾಯಿಯಂದದ ದಿವ್ಯನರ್ಮದೆಯನು,
ನನ್ನೊಡನೆ ಜನಿಸಿ ಕೆಳೆಬೆಳಸಿ ನೇಹದ ಸವಿಯ-
ಸೂಡಿದಾ ಎಲ್ಲ ಜೊತೆಯಾನೆಗಳನು ;
ಎಲಗೆ ಹಸ್ತಿನಿ, ನಿನ್ನ ಮೋಹದಲಿ ಬಂಧನಕೆ
ನಾನೆ ಒಡ್ಡಿದೆನ್ನೈಸೆ ದೇಹವಿದನು.
ಸಿಲಿಸಿಹರು ದೂರದಲಿ ನಿನ್ನನಿದೊ, ಬಗಿಯುವುವು
ನನ್ನ ನೆತ್ತಿಯ ಕರ್ಕಶಾಂಕುಶಗಳು !

(ತ್ಯಕ್ತೋ ವಿಂಧ್ಯಗಿರಿಃ . .)

೨

ಮುಂದೆ ಗಾಯಕವೃಂದ, ತೆಂಕಣ ಸರಸಕವಿಗಳು ಕೆಲದಲಿ,
ಚಮರವಿಕ್ಕುವ ಚೆಲುವೆಯರ ಬಳೆಯಿಂಪಿನುಲಿ ಹಿಂಗಡೆಯಲಿ,—
ಇಂತಿರಲು ಸಂಸಾರರಸವನು ಸವಿಯುತಿರು ಲಾಲಸೆಯಲಿ ;
ಇಲ್ಲವಾದರೆ ಮನಸೆ, ನಡೆನಡೆ ನಿರ್ವಿಕಲ್ಪಸಮಾಧಿಗೆ !

(ಅಗ್ರೇ ಗೀತಂ . . .)

ಬಿ. ಎಂ. ಶ್ರೀ.

ಕವಿ ಕಥೆಗಳು

(೧) ಸೈರಕ್ಯೂಸಿನ ದೊರೆ ಹಯರೊ ತನ್ನ ಆಸ್ಥಾನದ ಮಹಾಕವಿಯಾದ **ಸೈಮನ್ನೈಡೀಸ** (೫೫೬–೪೬೭ ಕ್ರಿ. ಪೂ.) ನನ್ನು "ದೇವರೆಂದರೆ ಏನು?" ಎಂದು ಪ್ರಶ್ನಿಸಿದ. ಉತ್ತರ ಕೊಡುವ್ರದಕ್ಕೆ ಒಂದು ದಿವಸ ವಾಯಿದೆ ಬೇಕೆಂದು ಕವಿ ಹೇಳಿದ. ಮಾರನೆಯ ದಿನ ದೊರೆ ಕೇಳಲು ಯೋಚನೆ ಮುಗಿಯಲಿಲ್ಲವಾಗಿ ಇನ್ನೂ ಎರಡು ದಿನ ಅಗತ್ಯವೆಂದು ಕವಿ ವಿರಾಮಪಡೆದ. ಆ ಮೇಲೆ ನಾಲ್ಕು ದಿನ ಬೇಕೆಂದ; ತರುವಾಯ ಒಂದು ವಾರವನ್ನು ಕೇಳಿಕೊಂಡ, ಹೀಗೆ ದೊರೆ ಪ್ರಶ್ನಿಸಿದಾಗಲೆಲ್ಲ ಹಿಂದೆ ಪಡೆದಿದ್ದ ಗಡುವಿನ ಎರಡರಷ್ಟು ಅವಕಾಶವನ್ನು ಕೇಳಲಾರಂಭಿಸಿದ. ಚಕಿತನಾದ ಹಯರೊ ಆ ವಿದ್ಯಮಾನದ ಅರ್ಥವನ್ನು ವ್ಯಕ್ತಪಡಿಸೆನ್ನಲು, ಸೈಮನ್ನೈಡೀಸ್ ನಿರೂಪಿಸಿದ: "ಆಲೋಚನೆಗೈದಷ್ಟೂ ವಿಷಯ ಹೆಚ್ಚು ಹೆಚ್ಚು ಕಠಿಣವಾಗುತ್ತಿದೆ; ನಾನೇನು ಮಾಡಲಿ!"

(೨) **ಯೂರಿಪಿಡೀಸ್** (೪೮೦–೪೦೬ ಕ್ರಿ. ಪೂ.) ವಿಶೇಷ ಧೈರ್ಯಶಾಲಿ. ಅವನದೊಂದು ನಾಟಕ ಪ್ರದರ್ಶನವಾಗುತ್ತಿದ್ದಾಗ ಪ್ರೇಕ್ಷಕರೆಲ್ಲರೂ ಒಟ್ಟಿಗೆ ಎದ್ದು ಅದರಲ್ಲಿನ ಆವುದೋ ಭಾಗವನ್ನು ತೆಗೆದುಹಾಕಬೇಕೆಂದು ಕೂಗಿ ಗಲಭೆ ಎಬ್ಬಿಸಿದರಂತೆ. ಆಗ ಕವಿ ನೇಪಥ್ಯದ ಮೇಲೆ ಬಂದು ಘೋಷಿಸಿದ: "ಮಿತ್ರರೆ, ನನ್ನ ಕಸಬು ನಿಮಗೆ ಪಾಠ ಕಲಿಸುವುದು, ನಿಮ್ಮಿಂದ ಪಾಠ ಕಲಿಯುವುದಲ್ಲ!"

(೩) ಪರ್ಷಿಯದ ದೊಡ್ಡ ಕವಿ **ಷೇಕ್‌ಸಾದಿ** (ಸುಮಾರು ೧೧೮೪–೧೨೯೨) ಸವಾಲಿಗೆ ಜವಾಬು ಕೊಡುವುದರಲ್ಲಿ ಬಹು ಸುಟಿ. ಅವನಿಗೆ ಷಿರಾಸ್ ಜನ್ಮಭೂಮಿ, ಟಾಬ್ರೀಸ್ ಪಟ್ಟಣದಲ್ಲಿ ಕೆಲವು ದಿವಸ ವಾಸಿಸುತ್ತಿದ್ದಾಗ ಅವನ ಖ್ಯಾತಿಯನ್ನು ಸಹಿಸದ ಒಬ್ಬ ಆ ಊರಿನ ಕವಿ ಒಂದು ಸಾರಿ ಆಕ್ಷೇಪಿಸಿದ: "ಇದೇನು, ಟಾಬ್ರೀಸ್ಸಿನಲ್ಲಿ ನಾಯಿಗಳಿಗಿಂತಲೂ ಹೆಚ್ಚಾಗಿದ್ದಾರೆ ಷಿರಾಸ್ಸಿಗಳು!" ತಕ್ಷಣ ಸಾದಿ ಉತ್ತರ ಕೊಟ್ಟ: "ನಮ್ಮ ಷಿರಾಸ್ಸಿನಲ್ಲಿ ಹಾಗಿಲ್ಲ; ಅಲ್ಲಿ ಟಾಬ್ರೀಸ್ಸಿಗಳು ನಾಯಿಗಳಿಗಿಂತಲೂ ಕಡಮೆಯಾಗಿದ್ದಾರೆ!" ಅದೇ ಕವಿ ಇನ್ನೊಂದು ಸಾರಿ ಗುಂಪು ಭೋಜನ ನಡೆಯುತ್ತಿರುವಾಗ, ಸಾದಿಯ ಪಟ್ಟು ಹಿಡಿದ ತಲೆಯನ್ನು ಅಪಹಾಸ್ಯ ಮಾಡಲೆಣಿಸಿ, ಮಧ್ಯವಿಲ್ಲದ ಬರಿಯ ಬಟ್ಟಲೊಂದನ್ನು ತಲೆಕೆಳಗಾಗಿ ಎತ್ತಿ ಹಿಡಿದು ಹೇಳಿದ: "ಷಿರಾಸ್ಸಿನವರ ತಲೆಗಳೆಲ್ಲ ಈ ಬಟ್ಟಲಿನ ಹೊರಗಡೆಯ ಹಾಗೆ ನುಣ್ಣಗಿವೆಯಲ್ಲ, ಅದಾವ ಕಾರಣದಿಂದ?" ಸಾದಿಯ ಜವಾಬು ತಕ್ಷಣ ಹೊರಬಿತ್ತು: "ಟಾಬ್ರೀಸ್ಸಿನವರ

ತಲೆಗಳೆಲ್ಲ ಒಟ್ಟಲಿನ ಒಳಗಡೆಯು ಹಾಗೆ ಖಾಲಿಯಾಗಿರುವುದಕ್ಕೆ ಯಾವ ಕಾರಣವೋ ಅದೇ ಕಾರಣದಿಂದ!"

(೪) **ಡ್ಯಾಂಟೆ** (೧೨೬೫–೧೩೨೧) ಒಂದು ದಿನ ಆವುದೋ ರಸ್ತೆಯಲ್ಲಿ ಹೋಗುತ್ತಿರುವಾಗ ತನ್ನ ಪದ್ಯಗಳನ್ನು ಒಬ್ಬ ಕಮ್ಮಾರ ಗಟ್ಟಿಯಾಗಿ ಹೇಳುತ್ತಿದ್ದುದನ್ನು ಕೇಳಿದ. ಪದಗಳನ್ನು ಬಿಟ್ಟು ಬಿಟ್ಟು, ಸ್ವಂತ ಪದಗಳನ್ನು ಸೇರಿಸಿ, ಪಂಕ್ತಿಗಳನ್ನು ಅದಲುಬದಲು ಮಾಡಿ, ಹೇಗೆ ಹೇಗೊ ಒದರುತ್ತಿದ್ದ ಆ ಕಮ್ಮಾರ. ಡ್ಯಾಂಟೆಗೆ ಬಹು ಸಿಟ್ಟು ಬಂತಂತೆ. ಅಂಗಡಿಯೊಳಕ್ಕೆ ನುಗ್ಗಿ ಅಲ್ಲಿದ್ದ ಕೊಡತಿ ಉಳಿ ಇಕ್ಕಳ ಮುಂತಾದುವನ್ನು ಎತ್ತಿ ಬೀದಿಗೆ ಎಸೆಯಲಾರಂಭಿಸಿದ. ಅವರಿಬ್ಬರಿಗೂ ವಾಗ್ವಾದವಾಯಿತು. ಕಮ್ಮಾರ: "ಎಲವೊ, ನೀನೇನು ಹುಚ್ಚನೆ? ಇದೇನು ನೀನು ಮಾಡುತ್ತಿರುವುದು?" ಡ್ಯಾಂಟೆ: "ನೀನು ಮಾಡುತ್ತಿರುವುದು ಏನು?" ಕಮ್ಮಾರ: "ನನ್ನ ಕೆಲಸವನ್ನು ನಾನು ಮಾಡುತ್ತಿದ್ದೇನೆ; ನನ್ನ ಹತ್ಯಾರುಗಳನ್ನು ನೀನು ಮುರಿದುಹಾಕುತ್ತಿದ್ದಿ." ಡ್ಯಾಂಟೆ: "ನಿನ್ನ ಉಪಕರಣಗಳನ್ನು ನಾನು ಹಾಳುಮಾಡದೆ ಇರಬೇಕಾದರೆ ನನ್ನ ಉಪಕರಣಗಳ ಗೋಜಿಗೆ ನೀನು ಬರಬೇಡ." ಕಮ್ಮಾರ: "ನಿನ್ನ ಸಾಮಾನು ಯಾವುದನ್ನು ನಾನು ಮುಟ್ಟಿದೆನೊ?" ಡ್ಯಾಂಟೆ: "ನನ್ನ ಪುಸ್ತಕದ ಪದ್ಯಗಳನ್ನು ನೀನು ಹೇಳುತ್ತಿದ್ದಿ; ಆದರೆ ನಾನು ಬರೆದಂತೆ ಹೇಳುತ್ತಿಲ್ಲ. ನನ್ನ ಕೆಲಸವನ್ನೇಕೆ ನೀನು ಅಂದಗೆಡಿಸುವುದು?" ಡ್ಯಾಂಟೆಯ ತಂಟೆಯನ್ನು ಬಿಟ್ಟು ಬಿಟ್ಟು ಆ ಕಮ್ಮಾರ ಯಾವುದೋ ಲಾವಣಿಯನ್ನು ಹಾಡತೊಡಗಿದ.

(೫) **ಸರ್ ಥಾಮಸ್ ಮೋರ್** (೧೪೭೮–೧೫೩೫) ಒಂದು ರಾಜಾಜ್ಞೆಯನ್ನು ಉಲ್ಲಂಘಿಸಿ ಅದರ ಫಲವಾಗಿ ಸೆರೆಮನೆಯಲ್ಲಿದ್ದಾಗ, ಒಬ್ಬ ರಾಜಪರಿವಾರದವನು ಬಹು ಸಂತಾಪಪಟ್ಟು, ಅರಸನಿಗೆ ವಿಧೇಯನಾಗೆಂದು ಅವನನ್ನು ಒತ್ತಾಯಪಡಿಸುತ್ತಿದ್ದ. ಅದು ಖಂಡಿತ ಆಗುವುದಿಲ್ಲವೆಂದೂ ತನ್ನ ಮನಸ್ಸು ದೃಢವಾಗಿದೆಯೆಂದೂ ನುಡಿದು ಮೋರ್ ಅವನನ್ನು ಹಿಂತಿರುಗಿಸುತ್ತಿದ್ದ. ಕೆಲವು ದಿವಸಗಳ ತರುವಾಯ ಹಠಾತ್ತಾಗಿ ಹೇಳಿದ ಮೋರ್: "ಒಳ್ಳೆಯದಪ್ಪ, ನನ್ನ ಮನಸ್ಸನ್ನು ಈಗ ಬದಲಾಯಿಸಿದ್ದೇನೆ." ರಾಜಭೃತ್ಯನಿಗೆ ಸಂತೋಷ ಹೇಳತೀರದು. ತಕ್ಷಣ ಓಡಿಹೋಗಿ ಪ್ರಭುವಿಗೆ ಬಿನ್ನವಿಸಿದ. ಯಾವುದರಲ್ಲಿ ಮೋರ್ ಮನಸ್ಸನ್ನು ಬದಲಾಯಿಸಿದನೆಂಬುದನ್ನು ತಿಳಿದುಕೊಂಡು ಬರಲು ಅಪ್ಪಣೆಯಾಯಿತು. ಬಂದು ಪ್ರಶ್ನೆ ಮಾಡಲು ಮೋರ್ ವಿಶದಪಡಿಸಿದ: "ನಿಜ ಹೇಳುತ್ತೇನೆ, ಕೇಳು. ಸಾಯುವುದಕ್ಕೆ ಮುಂಚೆ ಕ್ಷೌರಮಾಡಿಸಿಕೊಳ್ಳಬೇಕೆಂದು ನನಗೆ ಇಷ್ಟವಿತ್ತು ಈ ಹೊತ್ತಿನವರೆಗೂ. ಈಗ ಅದನ್ನು ದೂರ ಮಾಡಿದೆ: ನನ್ನ ತಲೆಯೊಡನೆ ನನ್ನ ಗಡ್ಡವೂ ಬೀಳಲೆಂದು ನಿರ್ಧರಿಸಿಬಿಟ್ಟಿದ್ದೇನೆ!"

(೬) **ವಾಲ್ಟೇರ್** (೧೬೯೪–೧೭೭೮) ಇಂಗ್ಲೆಂಡಿನಲ್ಲಿದ್ದಾಗ ಕಾಂಗ್ರೀವ್ ಎಂಬ ಪ್ರಸಿದ್ಧ ನಾಟಕ ಕರ್ತೃವನ್ನು ಭೇಟಿಯಾಗಲು ಹೋದ. ತಾನೊಬ್ಬ ಕುಲೀನ ಗೃಹಸ್ಥನೆಂದು ವಾಲ್ಟೇರಿಗೆ ಬೋಧೆಯಾಗಬೇಕೆಂದು ಕಾಂಗ್ರೀವ್ ಸುಶಿಕ್ಷಿತರ ಒಲಪು ವಯ್ಯಾರಗಳನ್ನು ಅಭಿನಯಿಸಿದ. ಅದನ್ನು ಕಂಡು ವಾಲ್ಟೇರ್ ಗದ್ದರಿಸಿದ: "ನೀನು ಬರಿಯ ಒಬ್ಬ ನಾಗರಿಕನಾಗಿದ್ದರೆ ನಿನ್ನನ್ನು ನೋಡುವುದಕ್ಕೆ ನಾನು ತೊಂದರೆ ತೆಗೆದುಕೊಳ್ಳುತ್ತಿರಲಿಲ್ಲ; ನಾನು ಬಂದದ್ದು ಕಲೆಗಾರ ಕಾಂಗ್ರೀವನನ್ನು ಸಂದರ್ಶಿಸುವುದಕ್ಕೆ!"

ಎಸ್. ವಿ. ರಂಗಣ್ಣ, ಎಂ.ಎ.

ಸಂಸಾರ ಸಂಹಿತೆ

ಜನ ನೆರೆದು, ಸಭೆಸೇರಿ, ಕಯ್ಯ ಚಪ್ಪಳೆಯಿಕ್ಕಿ,
  ಕೊರಳಿಗುರುಳಿಪ ಹಾರ ನನಗೆ ನಿಸ್ಸಾರ.
ತಳಿರ ಬೆರಳಿನ ಕಯ್ಯ ಕಂದನಾ ನಳಿದೋಳು
  ಕೊರಳನಪ್ಪಿದರೆನಗೆ ಸಗ್ಗಕ್ಕೆ ಸಾರ:
ಸಾಮಾನ್ಯತಾ ಸುಖವೆ ಶಾಂತಿಜೀವಾಧಾರ;
ಸಾಮಾನ್ಯತೆಯೆ ಜಗನ್ಮಾನ್ಯತಾ ಸಂಸಾರ!

ನಖಕ್ಷತೇಂದು

ದಿವಾರಾತ್ರಿಗಳ ನವಾನುರಾಗದಾ
  ಸಂಧ್ಯಾಭೋಗಿಯ ಭೋಗದಲಿ,
ನೋಡದೊ, ಮೋಡದ ತೆಳ್ದೆರೆ ಸೆರಗಿಂ
ನಾಚುತೆ ಮುಖ ಮುಚ್ಚುವ ಬಾನ್ ಕನ್ನೆಯ
ಕೆನ್ನೆಯೊಳೆಸೆವನ್ ನಖಕ್ಷತೇಂದು,
  ಸಜ್ಜೆಯ ಲಜ್ಜಾಯೋಗದಲಿ!

"ಕುವೆಂಪು"

ಬಸವೇಶ್ವರನು ನಾಥ-ಸಿದ್ಧಪಂಥದ ಅನುಯಾಯಿ

'ಶರಣ ಸಾಹಿತ್ಯ'ದ ನವೆಂಬರ ಮತ್ತು ಡಿಸೆಂಬರದ ಸಂಚಿಕೆಯಲ್ಲಿ 'ಸಿದ್ಧ ಮಾರ್ಗವು ಮತ್ತು ವೀರಶೈವ ಸಂಪ್ರದಾಯವು' ಎಂಬ ನಾನು ಬರೆದ ಲೇಖನ ದಲ್ಲಿ ರೇವಣ ಸಿದ್ಧಾದಿ ಪ್ರಭೃತಿಗಳು ಮಾಹೇಶ್ವರ ಅಥವಾ ಔಪನಿಷದಿಕ ಸಿದ್ಧ ಪರಂಪರೆಯವರೆಂದೂ ಅಲ್ಲಮಪ್ರಭುವು ನಾಥ-ಸಿದ್ಧ ಅಥವಾ ತಾಂತ್ರಿಕ ಯೋಗದ ಸಿದ್ಧನೆಂದೂ ಪ್ರತಿಪಾದಿಸಿರುವೆನು. ಈ ಲೇಖನದಲ್ಲಿ ಮತ್ತೊಂದು ಐತಿಹಾಸಿಕ ಪ್ರಮಾಣದಿಂದ ಬಸವೇಶ್ವರನೂ ಅದೇ ನಾಥರ ಸಿದ್ಧಪಂಥಕ್ಕೆ ಸೇರಿದವನೆಂದು ಸಿದ್ಧಗೊಳಿಸಲಾಗಿದೆ. ಚಿತ್ರದುರ್ಗ ಜಿಲ್ಲೆಯ ಜಗಳೂರು (30) ನೆಯ ನಂಬರಿನ ಶಾಸನದಲ್ಲಿ ಬಸವರಾಜನ ಉಲ್ಲೇಖವಿದ್ದುದು ಸರ್ವಶ್ರುತವಿದೆಯಷ್ಟೆ. ಈ ಶಾಸನದ ಕಾಲವು 1279 ನೆಯ ಇಸವಿಯದು. ದೇವಗಿರಿ ಯಾದವ ರಾಮಚಂದ್ರರಾಯನಿಗೆ ಪುತ್ರೋತ್ಸಾಹವಾದ ಶಕ ೧೨೦೧ರ ಸಮಯದಲ್ಲಿ ಆ ರಾಯನ ಪರಮ ವಿಶ್ವಾಸಿ ಮಹಾದುರ್ಗಾಧಿಪತಿಯಾದ ಖೊಂಡೆರಾಯನು, ಆ ರಾಮಚಂದ್ರರಾಯನ ಅಪ್ಪಣೆ ಪಡೆದು ಕುಳವ ಕೆಡಿಸಿ ಕೊಟ್ಟೂರು ನಾಡಿನಲ್ಲಿ ಕಲಿದೇವರ ಆಸ್ಥಾನಿಕರಿಗೆ ದತ್ತಿಯನ್ನು ಬಿಟ್ಟ ಸಂಗತಿ ಈ ಶಾಸನದಲ್ಲಿದೆ. ಎಲ್ಲ ಸೆಟ್ಟರು, ಗೌಡರು, ಕಂಪಣಾಚಾರ್ಯರು ಮತ್ತು ಮೂವತ್ತರ ರಾಜಗುರುಗಳ ಸಮಕ್ಷದಲ್ಲಿ ದತ್ತಿಯನ್ನು ಕೊಡಲಾಗಿದೆ. ದತ್ತಿಯನ್ನು ಸ್ವೀಕರಿಸಿದವನು ಶಿವಯೋಗಿ ಚಕ್ರವರ್ತಿ ಪ್ರಸಾದದೇವರು. ಅದರಲ್ಲಿ ಈತನ ವಿಸ್ತೃತವಾದ ವರ್ಣನೆಯಿದೆ. ಅದರಲ್ಲಿ ಕೆಲವಂಶಗಳನ್ನು ತೆಗೆದುಕೊಳ್ಳಲಾಗಿದೆ. ಈ ಅಂಶಗಳನ್ನು ನಮ್ಮ ಸೌಕರ್ಯಕ್ಕಾಗಿ ನಾಲ್ಕು ಭಾಗಗಳಲ್ಲಿ ವಿಂಗಡಿಸಲಾಗಿದೆ.

(೧) (ಅ) "ಕಕ್ಷ, ಕಂಠ, ಕರ, ವಕ್ಷೋತ್ತಮಾಂಗ ಲಿಂಗೈಕಸಂಗನುಂ"

(ಬ) "ಜನಿಸಿದ ಕಾಯ ಸಂಪುಟ ಸಹಜಲಿಂಗ ಮಂಗಳನಿಳಯ ಜಂಗಮಾವತಾರನುಂ"

(ಕ) "ಭಕ್ತಿಶಕ್ತಿವದನ"—ಅಷ್ಟವಿಧ ಸಕೀಲಗಳಲ್ಲಿ ಬರುವ ಶಬ್ದಗಳಿಗೆ ಇವುಗಳನ್ನು ಹೋಲಿಸುವುದು.

(ಡ) "ಪಂಚಮುದ್ರಾಧರ"—ಯೇನಕೇನ ಚಮಂತ್ರೇಣ, ಕಂಥಾ[1] ದಂಡ[2] ಕಮಂಡಲುನ್[3] | ಭೈಕ್ಷಾಪಾತ್ರಂ[4] ತಥಾ ಭಸ್ಮ

ಘುಟಿಕಾ ಪಂಚಮುದ್ರಿಕಾಂ ||" ಪಾಶುಪತ್ಯಾಗಮದಲ್ಲಿಯೂ ; "ಕಂಥೆ, ದಂಡ, ಕಮಂಡಲು, ಭಿಕ್ಷಾಪಾತ್ರೆ, ಭಸ್ಮಘುಟಿಕೆಯೆಂಬ ಬಾಹ್ಯದ ಪಂಚಮುದ್ರೆಗಳಂ" ಎಂದು ವಿವೇಕ ಚಿಂತಾಮಣಿಯಲ್ಲಿ ನಿರಾಭಾರ ವೀರಶೈವ ವಿಷಯದಲ್ಲಿ ಹೇಳಲಾಗಿದೆ.

ಈ ಮೇಲಿನ ಲಕ್ಷಣಗಳಿಂದ ಶಾಸನೋಕ್ತನಾದ ಶಿವಯೋಗಿಯು ವೀರಶೈವ ಅಥವಾ ಲಿಂಗಾಯತ ಪಂಥದವನೆಂಬುದು ಸ್ಪಷ್ಟವಿದೆ.

(೨) (ಅ) "ಅಣಿಮಾದಿ ಅಷ್ಟಗುಣೈಶ್ವರ್ಯ ಸಿದ್ಧಸಂಪನ್ನನುಂ"

(ಬ) "ಸ್ವಷ್ಟಾಷ್ಟದಶಯೋಗ ಪೀಠಾಚಾರ್ಯ ಚಕ್ರ ಚಕ್ರಧರ ಸಿದ್ಧ ಸಿಂಹಾಸನಾಸನಾವೇಷ್ಟಿತ ಯೋಗಪಟ್ಟ ಯೋಗದಂಡ ಯೋಗಪಾದುಕ ಯೋಗಮುದ್ರಾಭದ್ರನುಂ"

ಈ ವರ್ಣನೆಯಿಂದ ಈ ಯೋಗಿಯು ಯೋಗಾಚಾರಕ್ಕೆ ಸಂಬಂಧಿಸಿದ ಸಿದ್ಧಪುರುಷನೆಂಬುದು ವ್ಯಕ್ತವಾಗುವುದು.

(೩) (ಅ) "ಭದ್ರಕಾಳ, ಮಹಾಕಾಳ ನಂದಿನಾಥ . . . ಗುಹ . . . ರಾವಣರಾಮ ನಾರಾಯಣಾದಿ ದೇವಗಣ ಗುಣಕೀರ್ತಿ ಕರ್ಣಾವತಂಸನುಂ"

(ಬ) "ರಸರಸಾಯನ ಘುಟಿಕಾಂಜನ ಮುಖಾಂಜನ ಮೂಳಿಕಾನಿಕಾಯ ವಶ್ಯಪಾದ . . . ಯಸ್ತಂಭ ವೊಡ್ಡಾಮರ ಮಹೇಂದ್ರಜಾಲ ಹರಮೇಖಳಾದಿ ಪ್ರಪಂಚ ವಿದ್ಯಾಸಿದ್ಧನುಂ" ||

(ಕ) "ಆದಿಗ . . . ನಾಥ| ಚತುರಂಗಿನಾಥ| ಗೋ . . . ಖನಾಥ| ಕಾಹಳಿನಾವಿ| ಸುಪ್ಪಾರ್ಣಿನಾಥ|" "ಲೋಕನಾಥ| ನರನಾಥ ಪಂಥಪ್ರಮಾಣ ಘುಷ್ಟನುಂ" (ಕನ್ನಡದಲ್ಲಿ 'ಘೋಷನು ಎಂದಿದೆ.)

ಈ ಮೇಲಿನ ಅವತರಣಿಕೆಯಲ್ಲಿ 'ಗುಹ'ನು ನಾಥಪಂಥದ ಯೋಗಿಯು, ಅಲ್ಲದೆ ಚತುರಂಗಿನಾಥ, ಗೋರಖನಾಥ ಸುಪ್ಪಾರ್ಣಿನಾಥ ಮುಂತಾದವರು ತಾಂತ್ರಿಕಯೋಗಿಗಳು. ಮತ್ಸೇಂದ್ರನಾಥನ ನಾಥಪಂಥಕ್ಕೆ ಸೇರಿದವರು. ಅಲ್ಲಮನೂ ಮತ್ಸ್ಯೇಂದ್ರ ಅಥವಾ ಮೀನನಾಥನ ಶಿಷ್ಯನು. (ಶರಣಸಾಹಿತ್ಯದಲ್ಲಿ ನೋಡಿಕೊಳ್ಳುವುದು.)

(೪) "ಚೇರ, ಚೋಳ, ನಂಬಿನಂಬಿ, ಚಿಕ್ಕ, ಕಕ್ಕ, ಚೆನ್ನ, ಹೊನ್ನ, ಬಿಂಕ, ಬಸವರಾಜ, ಭೋಜಾದಿ" "ಮರ್ತ್ಯ ಮಹಾಗಣಾಚಾರ ಧರಾಭಾರ ಧೌರೇಯ ದಿಕ್ಕುಂಜರನುಂ" ಎಂದಿದೆ.

ಇಲ್ಲಿ ಚೋಳ, ಕಕ್ಕಯ್ಯ, ಮಾದಾರ ಚೆನ್ನಯ್ಯ, ಬಸವರಾಜ ಎಂದಿರುವದರಿಂದ ಈ ಬಸವನು ಕನ್ನಡದ ಪ್ರಸಿದ್ಧ ವಚನಕಾರನಾದ ಭಕ್ತಿಭಂಡಾರಿ ಬಸವಣ್ಣನೆಂಬುದರಲ್ಲಿ ಸಂಶಯವಿಲ್ಲ. ಇವರೆಲ್ಲ ಮರ್ತ್ಯದ ಗಣಾಚಾರಿಗಳು. ಇಂಥ ಬಸವೇಶ್ವರನೇ ಮೊದಲಾದ ಮಹಾಗಣಾಚಾರ ಧರಾಭಾರ ಧೌರೇಯ ದಿಕ್ಕುಂಜರನು ಈ ಶಿವಯೋಗಿಯು. ಅಂದಮೇಲೆ ಈ ಗಣಾಚಾರಿಗಳೂ ಈ ಶಾಸನೋಕ್ತ ಶಿವಯೋಗಿಯೂ ಒಂದೇ ಪಂಥದವರು. ಈ ಶಿವಯೋಗಿ ಚಕ್ರವರ್ತಿಯು ನಾಥಸಿದ್ಧಪಂಥದವನಾದುದರಿಂದ ಕನ್ನಡ ವಚನಕಾರನಾದ ಬಸವನು ಅದೇ ನಾಥಸಿದ್ಧಪಂಥದವನು. ಈ ವಿವೇಚನೆಯಿಂದ ವಚನಕಾರರ ಹಿನ್ನೆಲೆಯು ಈ ನಾಥಸಿದ್ಧರ ಯೋಗಪಂಥವಾಗಿದೆ.

ಈ ನಾಥ ಸಿದ್ಧರಿಗೂ ಮಾಹೇಶ್ವರ ಸಿದ್ಧರಿಗೂ ಪರಸ್ಪರರಲ್ಲಿ ಮತಭೇದ ಮತ್ತು ಸ್ಪರ್ಧೆ ನಡೆದಿರುವುದು. ಸಿದ್ಧರಾಮನು ರೇವಣಸಿದ್ಧನ ಮಾಹೇಶ್ವರ ಸಿದ್ಧಸಾಂಪ್ರದಾಯದವನು. ರಾಘವಾಂಕನು 'ಸಿದ್ಧರಾಮೇಶ್ವರ ಪುರಾಣ'ದಲ್ಲಿ ಪರವಾದಿಗಳನ್ನು ಈ ಕೆಳಗಿನ ರೀತಿಯಲ್ಲಿ ಹೇಳುತ್ತಾನೆ.

ಧರೆಗೆ ಸೊನ್ನಲಿಗೆ ಪುರ ಕೈಲಾಸವಾ ಜಗವ
ಗರು ಸಿದ್ಧರಾಮನೀಶ್ವರನಲ್ಲಿ ಮೆರೆವ ಗು
ಡ್ಡರು ಗಣೇಶ್ವರರಖಿಳಜನವಮರರವರ ಸತಿಯರೆ ರುದ್ರಕನ್ನಿಕೆಯರು

ನೆರೆದ ಶಿವಭವನಂಗಳಷ್ಟ ಷಷ್ಟಿ ಕ್ಷೇತ್ರ
ನಿರುತವೆಂದೆತ್ತಿದೆನು ಕೆಯ್ಯನಿದನಲ್ಲೆಂಬ
ಪರವಾದಿಯಾರವನ ಸಿರದೊಳಿಳುಹುವೆನೆನ್ನ ವಾಮಪದಪಾದುಕೆಯನು ||

ನಾರು ಬೇರಂಜನಂ ಘುಟಿಕೆ ಮೂಲಿಕೆ ಬಿಲ
ದ್ವಾರ ರಸಸಿದ್ಧಿ ಧಾತುವಾದ ವಶ್ಯ ಕುಟಿ
ಲಾರಾಧನಂ ವಳಿತ ಪಲಿತನಾಶಂ ಕಾಲವಂಚನಾಭ್ಯಾಸ ಯೋಗಂ

ಮಾರಣಾದಿ ವಿಕರ್ಮ ಮಂತ್ರ ಯಂತ್ರ ತಂತ್ರ
ಸಾರ ಪರಕಾಯ ಪ್ರವೇಶಮಂ ಬಯಸುವ ವಿ
ಕಾರಿ ಸಿದ್ಧರು ಸರಿಯೆ ಸಿದ್ಧರಾಮಂಗೆ ಶಿವಸಿದ್ಧ ಕುಲಕಮಲ ರವಿಗೆ ||

ಉರಿಯೊಳಳಿದಂ ವ್ಯಾಳಿ ಕೆರೆವೊಕ್ಕ ಕೋರಾಂಟ
ನಿರದೆ ಚಕ್ರಕ್ಕೆ ತಲೆಗೊಟ್ಟ ನಾಗಾರ್ಜುನಂ
ಪಿರಿಯ ಕೆಸರೊಳಗದ್ದ ರತ್ನಘೋಷಂ ಸರಿಯೆ ಕೇಳೆಮ್ಮ ಸಿದ್ಧೇಂದ್ರಗೆ

ಉರಿಯ ಹಾಳಾಹಳದ ದಿವ್ಯಮಂ ಗೆಲಿದನಾ
ಕೆರೆಯನಾದರಿಸಿ ಕಟ್ಟಿಸಿ ಧರಾಚಕ್ರದೊ
ಳ್ತಿರೆದು ಗುಡ್ಡರ ಪಾಪಗೆಸರ ತೊಳೆದಂ ಸಿದ್ಧರಾಮ ಪುಣ್ಯಾರಾಮನು ||

ಸಿದ್ಧರಾಮನಿಗೆ ಸರಿಯೆನ್ನುವ ಪರವಾದಿಗಳಿಗೆ ಸಿರದೊಳು ವಾಮಪಾದುಕೆಯನ್ನು ಇಳುಹುವೆನೆಂದು ಕಠೋರವಾಗಿ ರಾಘವಾಂಕನು ನುಡಿಯುತ್ತಾನೆ. ಈ ಪರವಾದಿಗಳೆಂದರೆ ನಾರು ಬೇರಂಜನ ಘುಟಿಕೆ ಮೂಲಿಕೆ ರಸಸಿದ್ಧಿ ವಶ್ಯ. . . . ಕಾಲವಂಚನಾಭ್ಯಾಸ ಯಂತ್ರ ತಂತ್ರ ಪರಕಾಯ ಪ್ರವೇಶವಂ ಬಯಸುವ ವಿಕಾರಿಸಿದ್ಧರು. ಇವರು ಸಿದ್ಧರಾಮನಿಗೆ ಸರಿಯೇ ಎಂದು ಕೇಳುತ್ತಾನೆ; ಮತ್ತು ವ್ಯಾಳಿ, ಕೋರಂಟ ನಾಗಾರ್ಜುನ, ರತ್ನಘೋಷ ಮುಂತಾದವರಿಗೆ ಆದ ಗತಿಯನ್ನು ಹೇಳುತ್ತಾನೆ.

ಹಠಯೋಗ ಪ್ರದೀಪಿಕೆಯಲ್ಲಿ ಅನೇಕ ಸಿದ್ಧರ ಹೆಸರುಗಳು ಉಕ್ತವಾಗಿವೆ. ಅವುಗಳಲ್ಲಿ ಮತ್ಸ್ಯೇಂದ್ರ, ಮೀನ, ಗೋರಕ್ಷ, ಶಾಬರಾನಂದ, ಚೌರಂಗಿ, ವಿರೂಪಾಕ್ಷ, ಅಲ್ಲಾಮಾಃಪ್ರಭುದೇವ ಮುಂತಾದವರ ಹೆಸರುಗಳಿರುವವು. ಅನಂತರ

> ಇತ್ಯಾದಯೋ ಮಹಾಸಿದ್ಧಾ ಹಠಯೋಗ ಪ್ರಭಾವತಃ
> ಖಂಡಯಿತ್ವಾ ಕಾಲದಂಡಂ ಬ್ರಹ್ಮಾಂಡೇ ವಿಚರಂತಿ ತೇ ||

ಎಂದಿದೆ. ಇಲ್ಲಿ ಕಾಲೋ ಮೃತ್ಯುಃ ತಸ್ಯ ದಂಡನಂ ದಂಡಃ ದೇಹಪ್ರಾಣವಿಯೋಗಾನುಕೂಲೋ ವ್ಯಾಪಾರಃ ತಂ ಖಂಡಯಿತ್ವಾ ಭಿತ್ವಾ| ಮೃತ್ಯುಂ ಜಿತ್ವೇತ್ಯರ್ಥಃ || ಎಂದು ವ್ಯಾಖ್ಯಾನಮಾಡಲಾಗಿದೆ. ಇದಕ್ಕೇನೆ ರಾಘವಾಂಕನು ಕಾಲವಂಚನಾಭ್ಯಾಸಯೋಗಗಳೆನ್ನುತ್ತಾನೆ. ಅಲ್ಲಮನು ಅನುಮಿಷಯ್ಯನ ಶಿಷ್ಯನು (ಶರಣಸಾಹಿತ್ಯದಲ್ಲಿಯ ನನ್ನ ಲೇಖನವನ್ನು ನೋಡಿ) ಅನುಮಿಷಯ್ಯ ಅಂದರೆ ಮೀನನಾಥ ಅಥವಾ ಮತ್ಸ್ಯೇಂದ್ರನಾಥನು, ಶಾಬರಾನಂದನು ಮಂತ್ರಯೋಗಿಯು. ವ್ಯಾಳಿಕೋರಂಟ ರತ್ನಘೋಷ ಮುಂತಾದವರು ಘುಟಿಕಾ ಮೂಲಿಕಾಂಜನ ಸಿದ್ಧಿಯುಳ್ಳ ಯೋಗಿಗಳು ಜಗಳೂರು ಶಾಸನದಲ್ಲಿ ಉಕ್ತವಾಗಿರುವ ಶಿವಯೋಗಿಯು ರಸ ರಸಾಯನ, ಘುಟಕಾಂಜನ, ಮುಖಾಂಜನ ಮೂಳಿಕಾ ನಿಕಾಯವಶ್ಯವಾದ. . . . ಯಸ್ತಂಭವೊಡ್ಡಾಮರ ಮಹೇಂದ್ರಜಾಲ ಹರಮೇಖಳಾದಿ ಪ್ರಪಂಚ ವಿದ್ಯಾಸಿದ್ಧನು. ಅಂದಮೇಲೆ ಇವನೂ ರಾಘವಾಂಕನು ಹೇಳುವ ಪ್ರತಿವಾದಿ ಸಿದ್ಧರುಗಳಲ್ಲಿ ಬರುತ್ತಾನೆ. ಮತ್ತು ಈ ಶಿವಯೋಗಿಯ ಪಂಥವಾದರೂ ಚತುರಂಗಿ, ಗೋರಖನಾಥ ಸುರ್ಪಾಣಿನಾಥ ಮುಂಥಾದವರ ಪಂಥವು. ಇವರೆಲ್ಲರೂ ತಾಂತ್ರಿಕ ನಾಥಪಂಥದ ಸಿದ್ಧರು. ಬಸವೇಶ್ವರನು ಇದೇ ಪಂಥದವನೆಂಬುದು ಈ ಶಾಸನದಿಂದ ತಿಳಿದು ಬರುವುದು. ಮಾಹೇಶ್ವರಸಿದ್ಧ ಸಾಂಪ್ರದಾಯಕರಿಗೂ ಈ ನಾಥಸಿದ್ಧ ಸಾಂಪ್ರದಾಯಕರಿಗೂ ರಾಘವಾಂಕನ ಕಾಲದಲ್ಲಿಯೇ ಸ್ಪರ್ಧೆ ನಡೆದಿದೆ.

ಕಪಟರಾಳ ಕೃಷ್ಣ.

ಗಣೇಶ ಗಾಥಾ

೧

ಆಗಮನ

ನೀಲವ್ಯೋಮ ವಿಶಾಲ ಪಥದಲಿ
ಶ್ರಾವಣ ನೀರದ ನೀಲ ರಥದಲಿ
ಗೌರಿಗಣೇಶರು ಬರುವರದೊ !
ಭಾದ್ರಪದಾದಿಯ ಶಾದ್ವಲ ವೇದಿಯ
ಶ್ಯಾಮಲ ಪೃಥಿವಿಯ ಕೋಮಲ ವಕ್ಷಕೆ
ಶ್ರೀ ಕೈಲಾಸವ ತರುವರದೊ !

ಅವರೈತರುವಾ
ಮುಗಿಲಿನ ತೇರಿಗೆ ಬೆಳ್ಳಕ್ಕಿಯ ಸಾಲೆ
ತೋರಣ ಹೂ ಮಾಲೆ ;
ಕೊಕ್ಕಿನ ಕುಂಕುಮವೆರಸಿದ ಪಸುರಿನ
ಗಿಳಿವಿಂಡಕ್ಷತೆ ;
ತಳಿವಳು ಬನದೇವಿ,
ಹೊಸ ಅತಿಥಿಯನೋವಿ.
ಬಿತ್ತಿದಗದ್ದೆಯ ಬಿತ್ತರದೆದೆಯಲಿ
ಬತ್ತದ ಪೈರಿನ ಚಿನ್ನದ ಕನಸಿನ
ಕಥೆ ಹೇಳಿ
ಸುಯ್ಯನೆ ಬೀಸುತ್ತಿದೆ ಗಾಳಿ,
ಅಲೆ ಅಲೆ ಅಲೆ ಛಂದದಲಿ,
ಆಶಾಬಂಧದಲಿ.
ಸಹ್ಯಾದ್ರಿಯ ಮಳೆನೀರ್ ತುಂಬಿದ ಹೊಳೆ
ಕಾವೇರಿ
ಕೆಳಕೆಳಗಿಳಿಯುವ ತೇರಿನೊಳಮ್ಮನ
ತೊಡೆಯೇರಿ

ಕುಳಿತ ಗಣೇಶನ ಕಣ್ಣಿನಚ್ಚರಿಗೆ
ರಜತ ರೇಖೆಯೊಲು ತೋರಿ
ಹರಿಯುತ್ತಿರುವಳು ಕನ್ನಡ ತಾಯಿಯ
ತುಂಬೆದೆ ಸೂಸಿದ ಸುಕುಮಾರಿ!

ಆ ಮುಗಿಲಿನ ತೇರ್
ನೇಸರ್ ತಿಂಗಳ್ ಅರಿಲುಗಳೂರನು ದಾಟಿ,
ಸಾಗರ ಮುದ್ರಿತ ಪೃಥಿವೀ ಗೋಲವ ಸುತ್ತಿ,
ನಾನಾ ದೇಶದ ನಾನಾ ದೃಶ್ಯವ ನೋಡಿ;—
ಪುಣ್ಯ ಹಿಮಾಚಲ ಶಿರ ಶಿಖರದೊಳವತರಿಸಿ
ಭಾರತಭೂಮಿಯ ಗಿರಿನದಿವನಗಳ ಚರಿಸಿ,
ಕಡೆಗೈತಂದಿದೆ ಕನ್ನಡನಾಡನ್ ವರಿಸಿ,
ಕೈಲಾಸವನುಳಿದೈತಂದವನನ್,
ಕಂದಾ, ನಿನ್ನನ್ ಸ್ಮರಿಸಿ!

ಸುತ್ತುತ್ತಿಳಿವಾ ಮುತ್ತಿನ ತೇರ್
ಹತ್ತಿರೆ ಹತ್ತಿರೆ ಬರುತಿದೆ ಪಾರ್;
ಶ್ರಾವಣದಂತ್ಯ ಪ್ರಾತಃಕಾಲದ
ಚಿನ್ನದ ಬಿಸಿಲಲಿ ತಳಿಸುವ ತೇರ್;
ಭಾದ್ರಪದಾನಿಲ ಪಕ್ಷಗಳೋಲಿಹ
ಜಲಧರ ಹಂಸಗಳೆಳೆಯುವ ತೇರ್;—
ನದೀ ಶರಾವತಿ ಗೇರುಸೊಪ್ಪೆಯಲಿ
ಧುಮುಧುಮುಕುವವೋಲಿಳಿಯುವ ತೇರ್;
ಬೇಲೂರಿನ ದೇವಾಲಯ ರಚನೆಗೆ
ಕನ್ನಡಿ ಹಿಡಿದಿಹ ಕನ್ನಡ ತೇರ್;—
ಅಡಕೆಯ ಹೂವಿನ ಹಿಂಗಾರದ ತೇರ್;
ತೆಂಗಿನ ಹೂವಿನ ಬಂಗಾರದ ತೇರ್;
ಬಾಳೆಯ ಹೂವಿನ ಸಿಂಗಾರದ ತೇರ್;
ಮಲ್ಲಿಗೆ ತಾವರೆ ಸಂಪಗೆ ಕೇದಗೆ
ಸೇವಂತಿಗೆ ಸೀತಾಳಿಯ ತೇರ್;

ಮಾವಿನ ಹಲಸಿನ ತಳಿರಿನ ತೋರಣ
  ಮಿಳಿರುವ ಚಂದದ ಗಂಧದ ತೇರ್ ;—
ಸುತ್ತುತ್ತಿಳಿವಾ ಮುತ್ತಿನ ತೇರ್
  ಬಂತದೊ, ಬಂತದೊ, ಬಂತದೊ, ಪಾರ್ !

ಪೋ, ಬಳಿಸಾರ್ ; ಬಾ, ಬಾ, ಬಾ, ಬಳಿಸಾರ್ ;
ಇಳಿಯಿತು, ನೆಲಮುಟ್ಟಿತು ದೇವರ ತೇರ್ !
ಅದೆಕಾಣ್ ಪರಮೇಶ್ವರಿ, ಶಿವೆ, ಗೌರಿ,
ಶುಭಕರಿ, ಶಂಕರಿ, ಶೈಲಕುಮಾರಿ.
ಆಕೆಯೆ ಕೈಲಾಸದ ಮಾರಾಣಿ ;
ಕಠೋರತಪದಿಂ ರುದ್ರ ಕಪರ್ದಿಯ
ಕಳೇಬರಾರ್ಧವ ಪಡೆದ ಶಿವಾಣಿ.
ವಿಶ್ವವತ್ಸಲತೆ ಮೆಯ್ವೆತ್ತಾಕೆಯೆ
    ಮೂಲೋಕದ ಮಾತಾಯಿ :
ಕಾಲ್ವಿಡಿ, ಕೈಮುಗಿ ; ಒಲಿ, ಸಲಿ, ಮಣಿ, ಕುಣಿ ;
    ಮುತ್ತಿಡುವಳೊ ಮಾತಾಯಿ !
ವಿದ್ಯಾಮೂರ್ತಿ ಗಣೇಶನ ತಾಯಿ,
ಕಂದಾ,
ಬುದ್ಧಿಯನೀವಳೊ ನಿನಗೆ ಮಿಠಾಯಿ !
ಸುರ ಸೇನಾಪತಿ ಕುಮಾರ ಸ್ವಾಮಿಯ
    ಪಡೆದಾ ಮಾತಾಯಿ
ಕ್ಷಾತ್ರತೇಜದಾ ಖಡ್ಗವನಾತ್ಮಕೆ
    ಮಾಳ್ಪಳೊ ವೀರ ತುರಾಯಿ !
ತಪಸ್ವಿ ಶಿವನನೆ ತಪದಿಂ ಗೆಲ್ದಾ
    ಮಹಾ ತಪಸ್ವಿನಿ ಕಲ್ಯಾಣಿ,
ಕೇಳ್, ತಂಗೀ,
ಮನದನ್ನನ ಮನವೊಲಿಸುವ ಕಲೆಯನೆ
  ಕೊರಳಿಗೆ ಮಾಳ್ಪಳ್ ಕಟ್ಟಾಣಿ !
ಎಲ್ಲರು ಬನ್ನಿ ; ಎಲ್ಲರು ಬನ್ನಿ ;

ಹಿರಿಯರು ಬನ್ನಿ ; ಕಿರಿಯರು ಬನ್ನಿ ;
ಸರುವರು ಐತನ್ನಿ :
"ನಮಸ್ಕಾರ! ನಮಸ್ಕಾರ!
ನಮಸ್ಕಾರ!" ಎನ್ನಿ !

"ನಮಸ್ಕಾರ, ನಮಸ್ಕಾರ,
ನಮಸ್ಕಾರ, ದೇವಿ!
ಮಕ್ಕಳು ನಾಮ್ ಚಿಕ್ಕವರನ್
ಅಕ್ಕರೆಯಿಂದೋವಿ,
ಪೊರೆ ತಿರೆಯನ್ ; ಪೊರೆ ಸೆರೆಯನ್ ;
ಪೊರೆ ನಮ್ಮನ್, ತಾಯಿ!
ತಂದೆಯು ಕಾಯ್, ತಾಯಿಯು ಕಾಯ್,
ಒಲವನ್ ಕಾಯ್, ತಾಯಿ!
ನಮಸ್ಕಾರ, ನಮಸ್ಕಾರ,
ನಮಸ್ಕಾರ, ದೇವಿ!"

೨

ಆತಿಥ್ಯ

ಓಂ ಮಂಗಳ, ಹ್ರೀಂ ಮಂಗಳ, ಓಂ ಹ್ರೀಂ ಓಂ!
ಓಂ ಸತ್ಯಕೆ, ಹ್ರೀಂ ಧರ್ಮಕೆ, ಓಂ ಹ್ರೀಂ ಓಂ!
ಒಲವಿಗೆ ಓಂ, ಚೆಲುವಿಗೆ ಓಂ, ಓಂ ಓಂ ಓಂ!
ಶಾಂತಿಗೆ ಓಂ, ಸತ್ವಕೆ ಓಂ, ಓಂ ಓಂ ಓಂ!
ವೀಣೆಯು ತನ್ನಿ ; ಪಿಟೀಲಸು ತನ್ನಿ ;
ನಾಗಸ್ವರ ಸುರವೇಣುವ ತನ್ನಿ.
ಸಮುದ್ರ ಮಂದ್ರ ಮೃದಂಗವ ತನ್ನಿ ;
ಗಂಭೀರಾಂಬುದ ಭೇರಿಯು ತನ್ನಿ.
ವೈಣಿಕ ವರ್‍ಯನ, ಗಾಯಕ ವರ್‍ಯನ,
ಕವಿ ಚಕ್ರೇಶನ ಕರೆತನ್ನಿ ;

ಜಗನ್ಮಾತೆಗೆ ಗಣೇಶಗಾಥೆಯು
    ಹಾಡುವ, ಕುಣಿದಾಡುವ, ಬನ್ನಿ.
        ಜಯವೆನ್ನಿ!
        ಶುಭವೆನ್ನಿ!

ಅರ್ಘ್ಯವ ತನ್ನಿ; ಪಾದ್ಯವ ತನ್ನಿ;
ಧೂಪ, ದೀಪ, ಪುಷ್ಪ, ಗಂಧ,
    ಓಕುಳಿಯನು ತನ್ನಿ.
ಅಮ್ಮಗೆ ಕುಶಲವೆ? ಅಯ್ಯಗೆ ಕುಶಲವೆ?
ತಂಗಿ, ತಮ್ಮ, ಅಕ್ಕ, ಅಣ್ಣ
    ಕುಶಲವೆ ಪಿತೃಗಳಿಗೆನ್ನಿ.
ಕೈಲಾಸಾದ್ರಿಗೆ ಕುಶಲವೆ ಕೇಳಿ.
ಲಕ್ಷ್ಮೀ ಸ್ವಾಮಿಗೆ ಸೌಖ್ಯವೆ ಕೇಳಿ.
ವಾಣೀಪ್ರಿಯನಿಗೆ ಶಾಂತಿಯೆ ಕೇಳಿ.
ಲೋಕೇಶ್ವರರಿಗಶೋಕವೆ ಕೇಳಿ.
ಕ್ಷೇಮಂಕರನಿಗೆ ಆ ಶಂಕರನಿಗೆ
    ಸುಕ್ಷೇಮವೆ ಅದನೂ ಕೇಳಿ!
"ಕುಶಲ! ಸೌಖ್ಯ! ಶಾಂತಿ! ಕ್ಷೇಮ!"
ಎಂಬಾ ಉತ್ತರಗಳೆ ವರವಾಗಲ್,
ಕೇಳ್ದರಿಗಾಶೀರ್ವಾದಗಳಾಗಲ್,
    ಮಾತೆಗೆ ವಂದಿಸಿ ಮುದತಾಳಿ!

ಬುದ್ಧಿ ಗಣೇಶಾ, ಸಿದ್ಧಿ ಗಣೇಶಾ,
ಬಾರ, ಗಣೇಶಾ, ದೇವ ಕುಮಾರ!
ವಿದ್ಯಾರ್ಥಿಯ ಸಖ, ಹೇ ವಿದ್ಯಾಸುಖ,
    ಬಾರ, ವಿನಾಯಕ, ಬಾರ;
ಗೌರಿಯ ಹಣೆಯಾ ಕುಂಕುಮವೊತ್ತಿಹ
    ಇಭ ಮುಖ ಕಮಲವ ತೋರ;
ಬ್ರಹ್ಮಚರ್ಯದಾ ಸಂಯಮ ಸಂಭವ
    ವಿದ್ಯುತ್ ತೇಜವ ತಾರ;
    ಬಾರ, ಗಣೇಶಾ, ಬಾರ!

ಕೈಕಾಲ್ ತೊಳೆಯಲು ಬಿಸಿನೀರಿದೆ ಕೋ ;
ಒದ್ದೆಯನಾರಿಸೆ ವಸ್ತ್ರವ ಕೋ.
ಶ್ರಾವಣ ನೀರದಯಾತ್ರೆಯ ದೂರದ
ದಣಿವಾರಿಸೆ ತೃಣಮಂಚವ ಕೋ.
ಕಡುಬಿದೆ ಕೊಳ್ ; ಕಾಯಿದೆ ಕೊಳ್ ;
ಬಾಳೆಯ ಹಣ್ಣಿದೆ ; ಹಲಸಿನ ಹಣ್ಣಿದೆ,
ಮಾವಿನ ಹಣ್ಣಿದೆ ಕೊಳ್ ;
ಕಿತ್ತಿಳೆ ತೊಳೆಯಿದೆ ಕೊಳ್.—
ಹಾಲಿದೆ ಕೋ ; ಜೇನಿದೆ ಕೋ ;
ಕಬ್ಬಿನ ರಸವಿದೆ ಕೋ.
ಬೆಲ್ಲವ ಕೋ ; ಬೆಣ್ಣೆಯ ಕೋ ;
ಹಪ್ಪಿನ ಮೊಸರಿದೆ ಕೋ.
ಶ್ಯಾವಿಗೆ ಪಾಯಸ ಕಾಯ್‌ಹಾಲ್ ಇದೆ ಕೋ.
ಯಾವುದು ಬೇಕೋ ? ಯಾವುದು ಸಾಕೋ ?
ಹೇಳಣ್ಣಾ, ನಾಣ್ ನಿನಗೇಕೋ ?

ರಜತಾದ್ರಿಯ ಸಿರಿಯನು ಕಂಡವ ನೀನ್
ನಮ್ಮ ಬಡತನಕೆ ಪೇಸುವೆಯೇನ್ ?
ನಿನ್ನ ತಂದೆಯಾ ಭಿಕ್ಷಾಟನೆಯನೆ
ಕೈಕೊಂಡಿಹಳಯ್ ಭಾರತಿ ತಾನ್ !
ನಿನ್ನಯ ಕೃಪೆಯಿರೆ, ದೇವಿಯ ಕೃಪೆಯಿರೆ,
ಕೈಲಾಸೇಶ್ವರ ಕೃಪೆಯಿರಲು,
ಸುರಸೇನಾಪತಿ ಕುಮಾರಸ್ವಾಮಿಯ
ಧೀರ ಕ್ಷಾತ್ರದ ಕೃಪೆಯಿರಲು,
ಬರುವಾ ಕಾಲಕೆ ಭಾರತ ಮಾತೆಗೆ
ಸ್ವಾತಂತ್ರ್ಯದ ಶ್ರೀಯೈತರಲು,
ಕಾಮಧೇನುವಿನ ಕೆಚ್ಚಲಿನಮೃತವ
ಕೊಡುವೆವೊ ಬೆಳ್ಳಿಯ ಬಟ್ಟಲಲಿ !
ಕಲ್ಪವೃಕ್ಷದಾ ರಸಘನ ಫಲವನೆ
ಇಡುವೆವೊ ಚಿನ್ನದ ತಟ್ಟೆಯಲಿ !

ಸ್ಕಂದನ ಹೋಲುವ ಧುರಧರವೀರರ್,
ನಿನ್ನನೆ ಹೋಲುವ ಸನ್ಮತಿ ಧೀರರ್,
ಭಾರತಾಂಬೆಯಾ ಕೀರ್ತಿಯ ಶೂರರ್
ಹುಟ್ಟಲಿ ಅವಳಾ ಹೊಟ್ಟೆಯಲಿ!

ಹಬ್ಬದ ಸಂತೋಷಕೆ ಬಂದತಿಥಿಗೆ
ಕೊರತೆಯನೊರೆದೆನ್, ತಪ್ಪಾಯ್ತು!
ನಾಡಿನ ಎದೆಯನ್ ಕೊರೆಯುವ ನೋವಿಗೆ
ನಾಲಗೆಯಿತ್ತೆನ್; ತಪ್ಪಾಯ್ತು!
ಬಡತನವಿರಲಿ, ದಾಸ್ಯವೆ ಇರಲಿ,
ಸಂಕಟವಿರಲಿ, ಏನೇ ಇರಲಿ,
ನಮ್ಮಾತಿಥ್ಯಕೆ ಕುಂದಿಲ್ಲ.
ಈ ಸ್ಥಿತಿಯಲ್ಲೂ ಈ ಗತಿಯಲ್ಲೂ
ಪುಣ್ಯಭೂಮಿಯಿಾ ಮಕ್ಕಳು ಕೊಡುವಾ
ದಿವ್ಯಾತಿಥ್ಯಕೆ ಸಮನಿಲ್ಲ:
ಬೇರೆ ನಾಡುಗಳಿಗೆಲ್ಲಿಗೆ ಹೋಗು
ವಂಚನೆ ಕೋಟಲೆ ಹಿಂಸೆಯ ಕೂಗು!
ಇನ್ನುಳಿದಾರೊಳ್ ವೇದ ಉಪನಿಷತ್
ಭಾರತ ರಾಮಾಯಣಗಳ ರಸ ಸತ್?
ನಮ್ಮ ಮಹಾತ್ಮನ್ ಮತ್ತೆಲ್ಲಿಹನಯ್?
ಆ ಮುಕ್ತಾತ್ಮನ ಕೃಪೆ ಹಿಡಿದರೆ ಕಯ್
ಬಂಧನವೂ ಸ್ವಾತಂತ್ರ್ಯಕೆ ಮಿಗಿಲಯ್!
ಇದು ಪಾಶ್ಚಾತ್ಯರ ನೆಲದೊಲವಲ್ಲಯ್;
ಈ ಹೆಮ್ಮೆಗೆ ಪರಮಾರ್ಥವೆ ಉಸಿರಯ್!
ಅದರಿಂದಾಮರ್ಪಿಪ ನೈವೇದ್ಯಮ್
ಇನ್ನುಳಿದಾರ್ಗಂ ದುಸ್ಸಾಧ್ಯಮ್:
ಆತ್ಮದ ಬೆಳ್ಳಿ, ಆತ್ಮದ ಚಿನ್ನ,
ಪುಣ್ಯಾಲೋಚನೆಗಳ ಪರಮಾನ್ನ,

ನಾಂ ನಿಮಗಿಕ್ಕುವ ಅಮೃತಾನ್ನ !—
ವಾಗ್ದೇವಿಯ ವಾತ್ಸಲ್ಯದ ವತ್ಸನ್
ರಚಿಸುತ್ತಿಹ ಹೊಸ ರಾಮಾಯಣವನ್
ಓದುವೆ ಬಾ, ತಾಯಿ.
ಕೈಲಾಸದೊಳೂ ಯಾರೂ ಕೇಳದ
ಹೊಸಗನ್ನಡ ಹೊಸ ಹೊಸ ಹಾಡುಗಳನ್
ಹಾಡುವೆ ಕೇಳ್, ತಾಯಿ.
ನೀನೂ ನಿನ್ನೀ ಮಗುವೂ ಕೇಳಲ್
ಮತ್ಕೃತಿ ಕೃತಕೃತ್ಯಮ್ !
ನಿಮ್ಮಿರ್ವರ ಬಗೆಯೊಳಗದು ಬಾಳಲ್
ಸನ್ನಾಕೃತಿ ಸತ್ಯಮ್ !
ಮೇಣ್ ನಿತ್ಯಮ್ !
ದೇವರ ಕಿವಿ ಕೇಳಲ್,
ದೇವರ ಬಗೆ ತಾಳಲ್,
ಕವಿಕಲ್ಪನೆ ತಾಂ ಘನತರ ಸತ್ಯಮ್ !
ಕೇಳ್, ಸತ್ಯಕೆ ಸತ್ಯಮ್ !

೩

ಪ್ರಯಾಣ

ಏತರ ವೈರಾಗಿಯೊ ಅವನು !
ನೀವ್ ಬಂದೆಲ್ಲಾ
ವಾರವು ಮುಗಿದಿಲ್ಲ.
ದೂತರ ಹಿಂಗಡೆ ದೂತರನಟ್ಟಿ,
ಅಲ್ಲಿಗೆ ಇಲ್ಲಿಗೆ ಸೇತುವೆ ಕಟ್ಟಿ,
ಕಾತರನಾದನೆ ಪರಶಿವನು ?
ಯೋಗಕ್ಷೇಮವೊ ? ಯೋಗಿಯ ಪ್ರೇಮವೊ ?
ಯಾವುದೊ ? ನಮಗಿನಿತನು ತಿಳುಹಿ.
ಸತಿಗೋ ? ಸುತಗೋ ? ಅಂತೂ ವಿರಹಿ
ಯತಿಗಳ ಯತಿಯಾಗಿಹ ಅವನೂ !

ಇಂದೇ ಬೀಳ್ಕೊಳ್ಳುವಿರೇನ್, ತಾಯಿ ?
ಬೀಳ್ಕೊಳಿ ಎನ್ನಲ್ ಬರುವುದೆ ಬಾಯಿ ?
ಸ್ವರ್ಗವೆ ಕಿಂಕರವಾಗಿತ್ತೆಮಗೆ ;
ಕೈಲಾಸವೆ ಕಯ್ಗೂಡಿತ್ತೆಮ್ಮಾ ಬಡಮನೆಗೆ,
ತಾಯಿರಾ, ನೀವೈತಂದು ;
ನಿಮ್ಮಾ ಸಂಗದ ಪುಣ್ಯಸ್ಮರಣೆಯೆ ಜೊತೆಬಂದು
ಸವಿಸೊದೆಯಾಗಲಿ ಈ ವಿಷು*ಸಂವತ್ಸರವೊಂದು.

ಸುಖವಾಗಲಿ ಗಾಳಿಯ ಬಟ್ಟೆಯ ಪಯಣಂ ;
ಸುಖವಾಗಲಿ ಮೋಡದ ನಾಡಿನ ಪಯಣಂ ;
ಸುಖವಾಗಲಿ ರವಿ ಶಶಿ ತಾರೆಯ ಪಯಣಂ ;
ಸುಖವಾಗಲಿ ಕೈಲಾಸಕೆ ಶ್ರೀ ಪಯಣಂ !

ದೇವರ ದೇವಗೆ, ಲೋಕವ ಕಾವಗೆ,
ಕಯ್ ಮುಗಿದೆವು, ಹೇಳಿ.
ತೃಪ್ತಿಯ ಕೃಪೆಗೂ ಶಾಂತಿಯ ಕೃಪೆಗೂ
ವಂದಿಸಿದೆವು, ಹೇಳಿ.
ವರುಷ ವರುಷವೂ ತಮ್ಮಿರ್ವರನೂ
ತಪ್ಪದೆ ಕಳಿಸುವ ಕೃಪೆಮಾಡಲ್
ತಪ್ಪದೆ ನೀವ್ ಹೇಳಿ.
ವರುಷ ವರುಷವೂ ನಮ್ಮೆಲ್ಲರನೂ
ತಪ್ಪಿರೆ ಮನ್ನಿಸಿ ಕಾಪಾಡಲ್
ತಪ್ಪದೆ ನೀವ್ ಕೇಳಿ.
ನೀವ್ ಬರದಿದ್ದರೆ, ನೀವ್ ತರದಿದ್ದರೆ,
ದರಿದ್ರವೀ ಧರೆ, ದೇವಿ !
ತಪ್ಪದೆ ಬನ್ನಿ ; ತಪ್ಪದೆ ಬನ್ನಿ ;
ತಪ್ಪದೆ ನಮ್ಮನ್ ಓವಿ !
ನಮಸ್ಕಾರ, ನಮಸ್ಕಾರ,
ನಮಸ್ಕಾರ, ದೇವಿ !—

---

* ೨೬–೮–೧೯೪೧.

ಏರಿತು ತೇರ್, ಮೋಡದ ತೇರ್,
ನೋಡದೊ ದೂರ, ದೂರ, ದೂರ.
ನಮಸ್ಕಾರ, ನಮಸ್ಕಾರ,
ಶಿವಕುಮಾರ !
ನಮಸ್ಕಾರ, ನಮಸ್ಕಾರ,
ನಮಸ್ಕಾರ !

ಕೆ. ವಿ. ಪುಟ್ಟಪ್ಪ

ತುಮಕೂರಿನ ಇತಿಹಾಸ

ಒಂದಾನೊಂದು ಊರಿನ ಅಥವಾ ಚಿಕ್ಕ ಪ್ರದೇಶದ ಇತಿಹಾಸವನ್ನು ಬರೆವುದು ಅಷ್ಟೇನೂ ನಮ್ಮಲ್ಲಿ ಈಗ ವಾಡಿಕೆಯಲ್ಲಿಲ್ಲ. ಆದುದರಿಂದ ಕನ್ನಡ ಭಾಷೆಯಲ್ಲಿ ಇಂತಹ ಪ್ರಯತ್ನವು ನೂತನೋದ್ಯಮವೆಂದು ತೋರುವುದು. ಯಾವ ಜನರಲ್ಲಿಯೇ ಆಗಲಿ ಸ್ವಾಭಿಮಾನ ಮತ್ತು ದೇಶಾಭಿಮಾನ ಉಲ್ಬಣಗೊಳ್ಳಬೇಕಾದರೆ ತಮ್ಮ ಸುತ್ತಮುತ್ತಣ ಸನ್ನಿವೇಶದ ಪರಿಚಯವು ಮೊದಲಾಗಬೇಕು. ಈ ಪರಿಚಯದ್ವಾರಾ ತಮ್ಮ ತಿಳಿವಳಿಕೆಯನ್ನು ವಿಸ್ತರಿಸಿಕೊಳ್ಳುವುದಕ್ಕೆ ಹೆಚ್ಚು ಅನುಕೂಲವುಂಟಾಗುವುದು. ಈ ಇತಿಹಾಸವನ್ನು ಮಹಾಜನರ ಅವಗಾಹನೆಗಾಗಿ ಅನೇಕ ಆಧಾರಗಳಿಂದ ಬರೆದಿದೆ. ಹೆಸರೇನೋ ತುಮಕೂರಿನ ಇತಿಹಾಸವೆಂದಿದ್ದರೂ ವಸ್ತುತಃ ಇದರಲ್ಲಿ ಸುತ್ತಮುತ್ತಣ ಪ್ರದೇಶಗಳ ಗೂಢವಾದ ಸಂಗತಿಗಳೂ ಅಡಕವಾಗಿರುವುವು. ಪ್ರಾಚೀನ ಇತಿಹಾಸ ಲೇಖನಗಳಲ್ಲಿ ಹೀಗೆ ಎಲ್ಲೆಯನ್ನು ಮೀರುವುದು ಸಹಜವೂ ಅನಿವಾರ್ಯವೂ ಆಗಿದೆ.

ಇದಕ್ಕೆ ಸಂಬಂಧಪಟ್ಟ ಸಂಗತಿಗಳನ್ನು ಮುಖ್ಯವಾಗಿ ಎರಡುಭಾಗ ಮಾಡಬಹುದು. ಮೊದಲನೆಯದು ಪುರಾಣೋಕ್ತವಾದ, ಚರಿತ್ರೆಯ ದೃಷ್ಟಿಯಿಂದ ಬೆಲೆಯಿಲ್ಲದಿರಬಹುದಾದ ಕಥೆಗಳು; ಇವುಗಳಲ್ಲಿ ಕೆಲವು ಜನಜನಿತವಾಗಿಯೂ, ಕೆಲವು ಗ್ರಂಥಸ್ಥವಾಗಿಯೂ ಇವೆ. ಎರಡನೆಯದು, ಕನ್ನಡ ಸಾಹಿತ್ಯದಲ್ಲಿಯೂ, ಚರಿತ್ರೆಗಳಲ್ಲಿಯೂ ಶಾಸನಗಳೇ ಮೊದಲಾದ ನಿಷ್ಕರ್ಷೆಯಾದ ವಿಷಯಗಳನ್ನೊಳಗೊಂಡಿರುವ ಆಧಾರಗಳಲ್ಲಿಯೂ ಕಂಡುಬರುವ ಸಂಗತಿಗಳು.

೧. ದ್ವಾಪರಯುಗದಲ್ಲಿ ಭರತಖಂಡದಲ್ಲಿ ಸದ್ಯುಮ್ನನೆಂಬ ರಾಜನಿದ್ದನು. ಅವನು ತನ್ನ ಅವಸಾನ ಕಾಲದಲ್ಲಿ ತನ್ನ ಮೂವರು ಮಕ್ಕಳಿಗೂ ರಾಜ್ಯವನ್ನು ಹಂಚಿಕೊಟ್ಟನು. ಅವರಲ್ಲಿ ನೀಲಧ್ವಜನಿಗೆ ಮಾಹಿಷ್ಮತಿಯೂ, ಹಂಸಧ್ವಜನಿಗೆ ಚಂದ್ರಪುರವೂ, ಮೂರನೆಯವನಿಗೆ ರತ್ನಪುರವೂ ಬಂದವು. ಹಂಸಧ್ವಜನ ಪಾಲಿಗೆ ಬಂದ ಚಂದ್ರಪುರದ ರಾಜ್ಯದಲ್ಲಿ ತುಮಕೂರು ಪ್ರದೇಶವು ಸೇರಿತ್ತು. ಹಂಸಧ್ವಜನ ಮಗ ಸುಧನ್ವನು ತುಮಕೂರಿಗೆ ೨೦ ಮೈಲಿ ಪಶ್ಚಿಮಕ್ಕಿರುವ ಚಂಪಕಾಪುರ (ಸಂಪಿಗೆ) ವನ್ನು ರಾಜಧಾನಿಯನ್ನಾಗಿ ಮಾಡಿಕೊಂಡಿದ್ದನು. ಇವನು ಪಾಂಡವರ ಅಶ್ವಮೇಧ ಕುದುರೆಯನ್ನು ತಡೆದು ಅರ್ಜುನನೊಡನೆ ಯುದ್ಧಮಾಡಿದುದನ್ನು ಕನ್ನಡ ಜೈಮಿನಿ ಭಾರತದಲ್ಲಿ ವಿಸ್ತಾರವಾಗಿ ಹೇಳಿದೆ.

೨. ಸಾವಿರಾರು ವರ್ಷಗಳ ಕೆಳಗೆ ಕರ್ಣಾಟ ದೇಶದ ರಾಜನಾದ ಹೇಮ ಚಂದ್ರನ ಮಗ ಸುಮತಿಯು, ತಂದೆಯ ಅಪ್ಪಣೆ ಪ್ರಕಾರ ರಾಜಧಾನಿಯಾದ ಯದು ಪಟ್ಟಣದಿಂದ ಹೊರಟು ಹದಿಮೂರು ದಿನ ಪ್ರಯಾಣ ಮಾಡಿ ಈಗ ನಾವು ದೇವ ರಾಯದುರ್ಗವೆಂದು ಕರೆಯುವ ಪರ್ವತ ಪ್ರದೇಶಕ್ಕೆ ಬಂದು ಅಲ್ಲಿದ್ದ ಕಳ್ಳರ ಮುಖಂಡನಾದ ಅಂಧಕನೆಂಬವನ ಸಂಗಡ ಒಂದು ವರ್ಷದವರೆಗೆ ಹೋರಾಡಿ ಕೊನೆಗೆ ಅವನನ್ನು ಬಂಧು ಬಾಂಧವರೊಡನೆ ಕೊಂದುಹಾಕಿ, ಆ ಪರ್ವತವನ್ನೂ, ಸುತ್ತುಮುತ್ತ ಪ್ರದೇಶವನ್ನೂ ತನ್ನ ಸ್ವಾಧೀನ ಮಾಡಿಕೊಂಡನು. ಅನಂತರ ಇವನು ಭೂಮಂಡನ ಪುರವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಆ ಪ್ರಾಂತ್ಯ ವನ್ನೆಲ್ಲಾ ಆಳಿದನು. ಈ ಭೂಮಂಡನ ಪುರವು ನೆಲಮಂಗಲ ತಾಲ್ಲೂಕಿನ ಮಣ್ಣೆ ಇರಬಹುದೆಂದು ಚರಿತ್ರಕಾರರು ಹೇಳುತ್ತಾರೆ.

ಮೇಲೆ ಹೇಳಿದ ಎರಡು ಕಥೆಗಳಲ್ಲಿ ನಿಜಾಂಶವೆಷ್ಟರಮಟ್ಟಿಗಿದೆಯೆಂದು ನಿರ್ಧರಿಸಿ ಹೇಳಲಾಗುವುದಿಲ್ಲ. ವಿಜಯ ನಗರದ ಹರಿಹರರಾಯನ (1376-1404) 1403 ನೆಯ ವರ್ಷದ ಶಾಸನದಲ್ಲಿ ಈಗಿನ ಶೀಬಿ ಅಗ್ರಹಾರ ಪ್ರಾಂತ್ಯವೆಲ್ಲಾ ಅರಣ್ಯವಾಗಿ ತ್ತೆಂದು ಹೇಳಿದೆ. ಈ ಪ್ರದೇಶದ ಈಗಿನ ಸ್ಥಿತಿಯನ್ನು ನೋಡಿದರೆ ಈಗ್ಗೆ ಐದು ನೂರು ವರ್ಷಗಳ ಕೆಳಗೆ ಈ ಪ್ರಾಂತ್ಯವು ಹೆಚ್ಚು ಜನಭರಿತವಾಗಿಲ್ಲದೆ ಮುಕ್ಕಾಲು ಭಾಗವೆಲ್ಲವೂ ಕಾಡು ಬೆಳೆದಿತ್ತೆಂದು ತೋರುವುದು. ಈ ಪ್ರದೇಶದಲ್ಲಿ ಆನೆಗಳೂ ವಾಸಮಾಡಿಕೊಂಡಿದ್ದುವೆಂಬುದಕ್ಕೆ ಕರಿಗಿರಿ ಮಹಾತ್ಮೆಯೆಂಬ ಗ್ರಂಥದಲ್ಲಿ ಆಧಾರ ವಿದೆ. ದೇವರಾಯದುರ್ಗದ ಸುತ್ತಮುತ್ತಣ ಪ್ರದೇಶವೂ, ಅದರಲ್ಲಿಯೂ ವಿಶೇಷವಾಗಿ ಈ ತಾಲ್ಲೂಕಿನ ವಾಯುವ್ಯ ಭಾಗವು ಈಗಲೂ ಸರಿ ಸುಮಾರಾಗಿ ಅದೇ ಸ್ಥಿತಿಯಲ್ಲಿಯೇ ಅರಣ್ಯವಾಗಿದೆ. ಈ ವಿಚಾರವನ್ನು ನವಾಬ್ ಹೈದರಲ್ಲಿಖಾನನು 1777ನೆಯ ಇಸವಿ ಯಲ್ಲಿ ಚಿಕ್ಕ ಶೀಬಿ ದೇವಸ್ಥಾನಕ್ಕೆ ಬರೆಯಿಸಿಕೊಟ್ಟಿರುವ ಭೂಮಿದಾನ ಶಾಸನದಲ್ಲಿ ವಿವರವಾಗಿ ಹೇಳಿದೆ. ಇದರ ಪ್ರಕಾರವಾಗಿ ಈ ತಾಲ್ಲೂಕಿನ ವಾಯುವ್ಯ ಪ್ರದೇಶವು ಈಗ್ಗೆ 150 ವರ್ಷಗಳ ಕೆಳಗೆ ಅರಣ್ಯವಾಗಿ ಗಿಡ ಬೆಳೆದುಕೊಂಡಿದ್ದುದನ್ನು ಈಗ ತುಮಕೂರಿನಲ್ಲಿರುವ ಕರಣಿಕ ಸಲ್ಲಪ್ಪನವರ ಪೂರ್ವಜರು ಕಾಡು ಕಡಿದು ಆಕಾರ ಮಾಡಿದರೆಂದೂ ಅದಕ್ಕೋಸ್ಕರವಾಗಿ ಚಿಕ್ಕ ಶೀಬಿ ನರಸಿಂಹಸ್ವಾಮಿ ದೇವಸ್ಥಾನಕ್ಕೆ ಆ ಪ್ರಾಂತವನ್ನೆಲ್ಲಾ ದತ್ತಿಯಾಗಿ ಬಿಟ್ಟುಕೊಟ್ಟು, ಅವರನ್ನೇ ದೇವಸ್ಥಾನದ ಆಡಳಿತ ನೋಡಿಕೊಳ್ಳುವುದಕ್ಕೆ ನೇಮಿಸಿದರೆಂದೂ ತಿಳಿಯುತ್ತದೆ. ಈ ಶಾಸನದಲ್ಲಿ ಹೈದರಲ್ಲಿ ಖಾನನ ಕೈಕೆಳಗೆ ಸೀರ್‍ಯದಲ್ಲಿ ಸುಬೇದಾರರಾಗಿದ್ದ ಬಾಜಿ ಅಬ್ದುಲ್ ರಹೀಂ ಮತ್ತು ಬಾಜಿ ಅಬ್ದುಲ್ ಅವರ ರುಜುವಿದೆ.

ಅಲ್ಲದೆ ಈ ತಾಲ್ಲೂಕು ಪ್ರದೇಶದಲ್ಲಿ ಪೂರ್ವದಲ್ಲಿ ಅನಾಗರಿಕರಾದ ಕಾಡು ಜನರು ಇದ್ದರೆಂದೂ, ಇವರು ಇಲ್ಲಿ ಆಶ್ರಮಗಳನ್ನು ಮಾಡಿಕೊಂಡಿದ್ದ ಅಗಸ್ತ್ಯ, ಗೌತಮ, ಪರಾಶರ ಋಷಿಗಳ ತಪಸ್ಸಿಗೆ ಅಡ್ಡಿಯನ್ನುಂಟುಮಾಡುತ್ತಿದ್ದುದರಿಂದ ಈ ತಪೋಧನರು ಅವರನ್ನು ನಿಗ್ರಹಿಸುವುದಕ್ಕೆ ಪ್ರಯತ್ನಪಡುತ್ತಿದ್ದರೆಂದೂ ತಿಳಿಯ ಬರುತ್ತದೆ. ಅಗಸ್ತ್ಯರು ಈ ತಾಲ್ಲೂಕಿಗೆ ಪೂರ್ವಕ್ಕೆ ಸ್ವಲ್ಪ ದೂರದಲ್ಲಿರುವ ಕಮ್ಮಸಂದ್ರ ವೆಂಬಲ್ಲಿಯೂ, ಗೌತಮರು ಈ ತಾಲ್ಲೂಕಿನ ಕೌತುವಾರನ ಹಳ್ಳಿ ಎಂಬಲ್ಲಿಯೂ, ಪರಾಶರರು ಕರಿಗಿರಿ ಎಂದರೆ ದೇವರಾಯದುರ್ಗದಲ್ಲಿಯೂ, ಬೇರೆ ಬೇರೆ ಕಾಲಗಳಲ್ಲಿ ಆಶ್ರಮಗಳನ್ನು ಮಾಡಿಕೊಂಡಿದ್ದರೆಂದು ತಿಳಿಯಬರುತ್ತದೆ.

ತುಮಕೂರು ಪ್ರದೇಶದ ನಿಜವಾದ—ಸಂದೇಹಕ್ಕೆ ಅವಕಾಶವಿಲ್ಲದ—ಚರಿತ್ರೆಯನ್ನು ಈ ತಾಲ್ಲೂಕಿನಲ್ಲಿ ದೊರೆತಿರುವ ಶಾಸನಗಳಿಂದ ತಿಳಿಯಬಹುದು. ಶಾಸನಗಳಿಗೆ ಚಪ್ಪೋಡುಗಳೆಂದೂ ಹೆಸರಿದೆ. ಶಾಸನ ಶಬ್ದಕ್ಕೆ ಅಪ್ಪಣೆಯೆಂದರ್ಥ. ಈ ಅಪ್ಪಣೆಯು ಶಿಲೆಯ ಮೇಲಿರಬಹುದು. ತಾಮ್ರದ ತಗಡಿನ ಮೇಲಿರಬಹುದು. ಈ ಕಾಲದಲ್ಲಿ ಅಪ್ಪಣೆಯು ಕಾಗದದ ಮೇಲೆ ಬರೆಯಲ್ಪಡುವುದು. ಸಾಧಾರಣವಾಗಿ ಈ ಶಾಸನಗಳನ್ನು ಕನ್ನಡ, ಸಂಸ್ಕೃತ, ತೆಲುಗು, ತಮಿಳು ಭಾಷೆಗಳಲ್ಲಿ ಬರೆದಿರುತ್ತಾರೆ. ಇವುಗಳಲ್ಲಿ ಆಯಾ ಕಾಲದಲ್ಲಿ ಆಳುತ್ತಿದ್ದ ರಾಜರ ಹೆಸರೂ, ಬಿರುದುಗಳೂ, ಅವರ ಮತ, ದಿಗ್ವಿಜಯ, ದಾನ ಧರ್ಮಗಳೂ ವಿವರಿಸಲ್ಪಟ್ಟಿವೆ. ಅಲ್ಲದೆ ಇವರು ಕಟ್ಟಿದ ದೇವಸ್ಥಾನಗಳೂ, ಛತ್ರಗಳೂ, ಕೆರೆಗಳೂ, ಅಗ್ರಹಾರಗಳೂ ಹೇಳಲ್ಪಟ್ಟಿವೆ. ಅದೂ ಅಲ್ಲದೆ ಈ ರಾಜರ ಕೈಕೆಳಗಿದ್ದ ಮಂಡಲೇಶ್ವರ, ಮಹಾಮಂಡಲೇಶ್ವರರುಗಳ ಹೆಸರುಗಳೂ, ನಾಡುಗಳೂ, ಅವರು ಆಳುತ್ತಿದ್ದ ಸೀಮೆಗಳೂ ಅವರು ಕೊಟ್ಟ ವಿಧವಿಧವಾದ ಕೊಡಗೆಗಳೂ, ಉಂಬಳಿಗಳೂ (ಎಂದರೆ ಆಧಾರ ದಾನ ಕ್ರಯ ಪರಿವರ್ತನೆಗಳೆಂಬ ವ್ಯವಹಾರ ಚತುಷ್ಟಯಕ್ಕೆ ಬಾಧ್ಯತೆಯಿಲ್ಲದೆ ಬಂದ ಫಲವನ್ನು ಮಾತ್ರ ಅನುಭವಿಸುವ ಹಕ್ಕುಳ್ಳ ಭೂಮಿಗಳೂ), ಗೌಡಿಕೆಗಳೂ ಸೇನಬೋವಿಕೆಗಳೂ, ಸರ್ವಮಾನ್ಯಗಳೂ ವಿವರವಾಗಿ ಹೇಳಲ್ಪಟ್ಟಿವೆ. ಕೆಲವು ಶಾಸನಗಳಲ್ಲಿ ಮತಾಚಾರ ವೈವಿಧ್ಯವೂ, ಸಾಮಾಜಿಕ ನಡೆವಳಿಕೆಗಳೂ, ಆಚಾರವ್ಯವಹಾರಗಳೂ, ಗ್ರಾಮದ ಜನರು ಪರಸ್ಪರ ಮಾಡಿಕೊಂಡ ಒಡಂಬಡಿಕೆಗಳೂ, ಚಲಾವಣೆಯಲ್ಲಿದ್ದ ನಾಣ್ಯಗಳೂ, ಕಾಣಿಕೆ ಕಪ್ಪ ಕಂದಾಯಗಳನ್ನು ಕಡಿಮೆಮಾಡಿದ ಅಥವಾ ಪೂರ್ತಿ ತೆಗೆದುಹಾಕಿದ ವಿಷಯಗಳೂ, ಭೂಮಿಯನ್ನು ಅಳತೆಮಾಡಿ ಅವುಗಳ ಗುಣವನ್ನು ಅನುಸರಿಸಿ ಕಂದಾಯ ಮತ್ತು ಬೆಲೆಯನ್ನು ನಿರ್ಧರಿಸಿದ ವಿಷಯಗಳೂ ಹೇಳಲ್ಪಟ್ಟಿವೆ. ಶಾಸನಗಳಲ್ಲದೆ ಕೆಲವು ವೀರಗಲ್ಲುಗಳೂ, ಇತರ ಶಿಲಾ ಸ್ಮಾರಕಗಳೂ ಈ ಪ್ರಾಂತದಲ್ಲಿವೆ. ವೀರಗಲ್ಲುಗಳಲ್ಲಿ [Epitaphs] ಪ್ರಸ್ತಾವನೆ ಹೀಗಿರುತ್ತದೆ.

ಜಿತೇನ ಲಭ್ಯತೇ ಲಕ್ಷ್ಮೀಃ ಮೃತೇನಾಪಿ ಸುರಾಂಗನಾ
ಕ್ಷಣೇ ಧ್ವಂಧ್ವಂ ಕಾಮಯತಾಂ ಕಾ ಚಿಂತಾ ಮರಣೇ ರಣೇ ||

ಯುದ್ಧದಲ್ಲಿ ಏಕಾಂಗಿಯಾಗಿ ಪ್ರಾಣದ ಮೇಲಿನ ಆಸೆ ತೊರೆದು ಕಾದಿ ಸತ್ತ ಯೋಧರಿಗೆ ವೀರಗಲ್ಲುಗಳೂ, ಸಹಗಮನಮಾಡಿದ ಪತಿವ್ರತೆಯರ ಸ್ಮಾರಕವಾಗಿ ಮಹಾಸತಿ ಕಲ್ಲುಗಳೂ, ಯಜಮಾನನ ವಿಯೋಗವನ್ನು ಸಹಿಸಲಾರದೆ ಆತನೊಡನೆಯೇ ಸಮಾಧಿ ಮಾಡಿಸಿಕೊಂಡ ಆಪ್ತ ಸೇವಕಜನರ ಸ್ಮಾರಕಗಳೂ, ಜೈನಮತದ ಪ್ರಕಾರ ಸಲ್ಲೇಖನ ವ್ರತವನ್ನು ಕೈಕೊಂಡು ಪ್ರಾಣತ್ಯಾಗ ಮಾಡಿದವರ ಜ್ಞಾಪಕಾರ್ಥವಾಗಿ ನಟ್ಟ ನಿಷಿಧಿಯ ಕಲ್ಲುಗಳೂ, ಈ ತಾಲ್ಲೂಕಿನಲ್ಲಿ ಅಲ್ಲಲ್ಲಿ ದೊರೆಯುತ್ತವೆ. ಮೇಲೆ ಹೇಳಿದ ಶಾಸನ ಮತ್ತು ಸ್ಮಾರಕ ಶಿಲೆಗಳಿಂದ ಚರಿತ್ರೆಯನ್ನು ಸುಲಭವಾಗಿ ರಚಿಸಬಹುದು. ಇದರಿಂದಲೇ ನಾವು ನಮ್ಮ ಪೂರ್ವಜರ ರಾಜಕೀಯ, ಸಾಮಾಜಿಕ, ಆರ್ಥಿಕ ಸ್ಥಿತಿಗತಿಗಳನ್ನು ಚೆನ್ನಾಗಿ ಗ್ರಹಿಸಬಹುದು.

ಶಾಸನಗಳು ಸಾಮಾನ್ಯವಾಗಿ ಕಲ್ಲುಚಪ್ಪಡಿಗಳ ಮೇಲೆಯೋ ತಾಮ್ರದ ತಗಡುಗಳ ಮೇಲೆಯೋ ಬರೆಯಲ್ಪಟ್ಟಿರುತ್ತವೆಯೆಂದು ಮೊದಲೇ ಹೇಳಿದೆ. ಕೆಲವು ಶಾಸನಗಳಲ್ಲಿ ಭಾಷೆಯು ಗದ್ಯಪದ್ಯ ಮಿಶ್ರವಾಗಿದೆ. ಪದ್ಯವು ಕಂದ, ಇಲ್ಲವೇ ವೃತ್ತ ರೂಪದಲ್ಲಿರುತ್ತದೆ. ಹಳಗನ್ನಡವೇ ಹೆಚ್ಚು ; ಆದುದರಿಂದ ಸಾಧಾರಣ ಭಾಷಾಜ್ಞಾನವಿರುವವರಿಗೆ ಅರ್ಥವಾಗುವುದಿಲ್ಲ. ಈ ಪದ್ಯಗಳನ್ನು ಅನೇಕ ಸಂದರ್ಭಗಳಲ್ಲಿ ಉದ್ದಾಮಕವಿಗಳಾದ ನಾಗಚಂದ್ರ, ರಾಜಾದಿತ್ಯರಂತಹರು ಬರೆದಿದ್ದಾರೆ. ಗದ್ಯವು ಅಷ್ಟೇನೂ ಉತ್ತಮ ತರಹೆಯದಾಗಿ ಕಾಣುವುದಿಲ್ಲ. ಶಬ್ದದೋಷಗಳೂ ಕಾಗುಣಿತ ದೋಷಗಳೂ ಅಪರೂಪವಲ್ಲ. ಕೆಲವು ಶಾಸನಗಳ ಗದ್ಯವು ಅಜ್ಞರಾದ ಶಿಲ್ಪಿಗಳಿಂದ ಕೆತ್ತಲ್ಪಟ್ಟಿದೆಯೆಂದು ತೋರುತ್ತದೆ.

ಈ ತಾಲ್ಲೂಕಿಗೆ ಸಂಬಂಧಪಟ್ಟ ಶಾಸನಗಳು 74 ದೊರೆತಿವೆ. ಇವುಗಳಲ್ಲಿ 16 ರಲ್ಲಿ ಅಕ್ಷರಗಳು ಅಳಿಸಿಹೋಗಿವೆ. ಆದುದರಿಂದ ಅವುಗಳ ವಿಷಯವನ್ನು ಸಮಗ್ರವಾಗಿ ತಿಳಿಯುವುದಕ್ಕಾಗುವುದಿಲ್ಲ. ಅವುಗಳಲ್ಲಿ ಕೆಲವನ್ನು ಮಾತ್ರ ಸ್ವಲ್ಪಮಟ್ಟಿಗೆ ಅರ್ಥಮಾಡಬಹುದು. ಉಳಿದ 58 ಶಾಸನಗಳು ಪೂರ್ಣವಾಗಿವೆ. ಇವುಗಳ ಕಾಲಕ್ರಮದ ಪಟ್ಟಿಯನ್ನು ಕೆಳಗೆ ಕೊಟ್ಟಿದೆ.

ಗಂಗರಾಜರ ಕಾಲದ್ದು 3	....	....	ಕ್ರಿ. ಶ.	700 ರಿಂದ	925 ರ ವರೆಗೆ
ಚಾಳುಕ್ಯರ ಕಾಲದ್ದು 1	....	....	,,	....	1121
ಕಾಕತೀಯರ ಕಾಲದ್ದು 1	....	....	,,	....	1293
ಹೊಯ್ಸಳರ ಕಾಲದ್ದು 17	....	....	,,	1150 ,,	1328

ವಿಜಯನಗರದ ಅರಸರ ಕಾಲದ್ದು 23	ಕ್ರಿ. ಶ. 1387 ರಿಂದ	1546 ರ ವರೆಗೆ
ಮೈಸೂರರಸರ ಕಾಲದ್ದು 10	,, 1699 ,,	1858
ಹಾಗಲವಾಡಿ ಪಾಳಯಗಾರರ ಕಾಲದ್ದು 1	,, 1760	....
ನವಾಬ್ ಹೈದರಲ್ಲಿ ಕಾಲದ್ದು 1	,, 1777	....
ಟಿಪ್ಪುಸುಲ್ತಾನರ ಕಾಲದ್ದು 1	,, 1790	....

ಶಾಸನಗಳಿರುವ ಅಥವಾ ದೊರೆತಿರುವ ಸ್ಥಳಗಳು :—ತುಮಕೂರು, ಹೆಗ್ಗೆರೆ, ಕೈದಾಳ, ವ್ರಳ್ಳೇನಹಳ್ಳಿ, ಮುಳುಕುಂಟೆ, ವಿರೂಪಸಂದ್ರ, ಹೊನ್ನುಡಿಕೆ, ಹೆಬ್ಬೂರು, ರಾಯಪುರ, ಹರಳೂರು, ಪಾಲಸಂದ್ರ, ಕೊಡಗೆ ಹಳ್ಳಿ, ದೇವರಾಯದುರ್ಗ, ಕೋಳಾಲ, ಮೈದಾಳ, ಪಂಡಿತನ ಹಳ್ಳಿ, ಬ್ಯಾಟರಾಯನ ಪಾಳ್ಯ, ಸೀತಕಲ್ಲು, ವಮಚಿಹಳ್ಳಿ, ಚಿನ್ನಹಳ್ಳಿ, ಎಲಚಿಗೆರೆ, ಭೀಮಸಾಗರ, ಕೋರ, ಬ್ರಹ್ಮಸಂದ್ರ, ಕರಿಕೆರೆ, ನೆಲಹಾಳು, ಮಾವುಕೆರೆ, ಚಿಕ್ಕನಾರವಂಗಲ, ದೊಡ್ಡನಾರವಂಗಲ, ಕೊಟ್ನ ಹಳ್ಳಿ, ಚಿಕ್ಕಶೀಬಿ.

ಮೇಲೆ ಕೊಟ್ಟ ಪಟ್ಟಿಯಲ್ಲಿ ರಾಷ್ಟ್ರಕೂಟರ, ಪಲ್ಲವರ ಮತ್ತು ಚೋಳರ ಶಾಸನಗಳಿಲ್ಲ. ಈ ವಂಶಗಳ ಅರಸರು ಈ ಪ್ರಾಂತ್ಯಕ್ಕೆ ಪ್ರವೇಶವೇ ಮಾಡಲಿಲ್ಲವೆಂದು ನಿಷ್ಕರ್ಷೆಯಾಗಿ ಹೇಳಬಹುದು. ಆದರೆ ಚೋಳರು ಸುಮಾರು 952 ರಿಂದ 1004 ರ ವರೆಗೆ ಸಂದ 52 ವರುಷಗಳಲ್ಲಿ ಗಂಗವಾಡಿ ಮತ್ತು ನೊಳಂಬವಾಡಿಯನ್ನು ಜಯಿಸಿದರೆಂದು ಹೇಳಿದೆ. ಇದೇನೋ ಸತ್ಯವಾದದ್ದು; ಆದಾಗ್ಯೂ ಚೋಳರು ತುಮಕೂರು ಪ್ರಾಂತದ ಪೂರ್ವಪಶ್ಚಿಮ ದಿಕ್ಕುಗಳಿಂದ ಜೈತ್ರಯಾತ್ರೆಯನ್ನು ಮಾಡಿಕೊಂಡು ಆ ಪ್ರದೇಶಗಳನ್ನು ವಶಮಾಡಿಕೊಂಡು ಹೋದರೇ ಹೊರತು ಇಲ್ಲಿ ತಮ್ಮ ಬೀಡನ್ನು ಬಿಡಲಿಲ್ಲ; ನೊಳಂಬವಾಡಿ ಉತ್ತರ ಪ್ರಾಂತ್ಯವಾದ ನಿಡುಗಲ್ಲಿಗೆ ಅವರು ಹೋಗಿ ನೆಲಸಿದ್ದಕ್ಕೆ ಚರಿತ್ರೆಯಲ್ಲಿ ಬೇಕಾದಷ್ಟು ಆಧಾರವಿದೆ. ಇದಕ್ಕೆ ಉದಾಹರಣೆಯನ್ನು ಮುಂದೆ ತುಮಕೂರಿನ 1269 ನೆಯ ವರ್ಷದ ವೀರಗಲ್ಲಿನ ವಿವರಣೆಯಲ್ಲಿ ಹೇಳಿದೆ.

ತುಮಕೂರು ಪ್ರಾಂತ್ಯಕ್ಕೆ ಅನಾದಿಯಾಗಿ ಆನೆಬಿದ್ದ ಸರಿ ಅಥವಾ ಆನೆಬಿದ್ದ ಜರಿರಾಜ್ಯವೆಂದು ಹೆಸರಿತ್ತು. ಈ ಹೆಸರು 1699 ನೆಯ ಇಸವಿಯ ಶಾಸನದಲ್ಲಿಯೂ ಕಂಡುಬರುತ್ತದೆ. ಈ ಹೆಸರು ಬರುವುದಕ್ಕೆ ಕಾರಣವನ್ನು ಕರಿಗಿರಿ ಮಹಾತ್ಮ್ಯೆಯಲ್ಲಿ ಈ ರೀತಿಯಾಗಿ ಹೇಳಿದೆ. ಬ್ರಹ್ಮನ ಸಭೆಯಲ್ಲಿ ದೇವದತ್ತ, ಧನಂಜಯ ಎಂಬಿಬ್ಬರು ಗಂಧರ್ವರು ಗಾನಮಾಡುತ್ತಿದ್ದಾಗ ಭೃಗು ಋಷಿಯು ಸಂತೋಷಪಟ್ಟು ಆ ಗಾಯಕರನ್ನು ಮತ್ತೊಮ್ಮೆ ಹಾಡಿ, ಎಂದು ಕೇಳಿಕೊಂಡನು. ಗರ್ವಿಷ್ಠರಾದ ಗಂಧರ್ವರು ಅವನನ್ನು ಕುರಿತು ಪರಿಹಾಸ್ಯದಿಂದ ಹೀಗೆ ಹೇಳಿದರು. ಎಲೈ

ಋಷಿಯೇ "ಫಲಗಳನ್ನು ತಿಂದು ಜೀವಿಸುವ ನಿನಗೆ ಗಂಧರ್ವವಿದ್ಯೆಯ ವಿಷಯ ವೇಕೆ? ನೀನು ದಂತಹೀನನಾದ ಮುದುಕನು. ನಿನ್ನ ಉದ್ದವಾದ ನರೆತಿರುವ ಗಡ್ಡವನ್ನು ನೋಡಿದರೆ ನಮಗೆ ನಗೆ ಬರುತ್ತದೆ" ಎಂದು ಹೀಯಾಳಿಸಿದರು. ಈ ರೀತಿಯಾಗಿ ಜರೆಯಲ್ಪಟ್ಟ ಭೃಗು ಋಷಿಯು ಕೋಪಾವೇಶದಿಂದ "ನೀವಿಬ್ಬರೂ ಆನೆ ಮತ್ತು ಬೆಟ್ಟವಾಗಿ ಭೂಲೋಕದಲ್ಲಿ ಹುಟ್ಟಿ" ಎಂದು ಶಾಪಕೊಟ್ಟನು. ಶಪಿಸಲ್ಪಟ್ಟ ಗಾಯಕರು ಶಾಪವಿಮೋಚನೆ ಕಾಲವನ್ನು ಬೇಡಿಕೊಳ್ಳಲಾಗಿ ಋಷಿಯು ಅವರಲ್ಲಿ ಸ್ವಲ್ಪ ದಯೆಯಿಟ್ಟು "ಧನಂಜಯನು ಸದಾ ಬೆಟ್ಟವಾಗಿಯೇ ಇರಬೇಕೆಂತಲೂ ದೇವದತ್ತನು ಮಾತ್ರ ಸ್ವಲ್ಪಕಾಲ ಆನೆಯಾಗಿ ಆ ಬೆಟ್ಟದಲ್ಲಿ ಸಂಚರಿಸಿದನಂತರ ಬೆಟ್ಟದ ಒಂದು ಕೋಡುಗಲ್ಲಿನಿಂದ ಜಾರಿಬಿದ್ದು ಸತ್ತಾಗ ಶಾಪ ವಿಮೋಚನೆಯಾಗು ವುದೆಂದೂ" ಹೇಳಿದನು. ಅದೇ ಪ್ರಕಾರವಾಗಿ ಧನಂಜಯನು ಕುಸುಮಾಚಲವೆಂದು ಕರೆಯಲ್ಪಡುವ ದೇವರಾಯದುರ್ಗದ ಬೆಟ್ಟವಾಗಿಯೂ ದೇವದತ್ತನು ಆನೆಯಾಗಿಯೂ ಜನ್ಮವೆತ್ತಿದರು. ಧನಂಜಯನು ಈಗಲೂ ಬೆಟ್ಟವಾಗಿಯೇ ಇದಾನೆ. ಈ ಬೆಟ್ಟಕ್ಕೆ ಕರಿಗಿರಿ ಎಂದು ಹೆಸರು. ಆನೆರೂಪಬಂದ ದೇವದತ್ತನು ಈ ಬೆಟ್ಟದಲ್ಲಿಯೇ ಅನೇಕ ವರ್ಷಗಳ ವರೆಗೆ ಸಂಚರಿಸುತ್ತಿದ್ದು ಅಲ್ಲಿದ್ದ ಕೆರೆ, ಕಟ್ಟೆ, ದೊಣೆಗಳನ್ನು ಒಡೆದು ಗಿಡಮರಗಳನ್ನುರುಳಿಸಿ ಜನರನ್ನು ಗಾಬರಿಗೊಳಿಸುತ್ತ ಒಂದಾನೊಂದು ದಿವಸ ಉನ್ಮತ್ತನಾಗಿ ಪಶ್ಚಿಮ ದಿಕ್ಕಿನಲ್ಲಿರುವ ಗಹನವಾದ ಕೋಡುಗಲ್ಲನ್ನು ಹತ್ತಲು ಹೋಗಿ ಜಾರಿಬಿದ್ದು ಸತ್ತನು. ಆಗ ಅವನಿಗೆ ಶಾಪವಿಮೋಚನೆಯಾಯಿತು. ಈ ಆನೆಯು ಬಿದ್ದ ಜಾಗಕ್ಕೆ ಆನೆಬಿದ್ದ ಜರಿಯೆಂದು ಹೆಸರಾಯಿತು. ಈ ಸ್ಥಳಕ್ಕೆ ಈಗಲೂ ಆನೆಗುಂದಿ ಅಥವಾ ಗಜಾಕುಂಡವೆಂದು ಹೆಸರಿದೆ. ಆನೆಯು ಸಮಾಧಿಯಾದ ಸ್ಥಳವು ಇದರ ಹತ್ತಿರದಲ್ಲಿದೆ. ಕಾಲಾನಂತರದಲ್ಲಿ ದೇವರಾಯ ದುರ್ಗದ ಅಕ್ಕಪಕ್ಕದ ಪ್ರದೇಶಗಳಿಗೆಲ್ಲಾ ಆನೆ ಬಿದ್ದ ಸರಿರಾಜ್ಯ—ಆನೆ ಬಿದ್ದ ಜರಿರಾಜ್ಯ ಎಂಬ ಹೆಸರೇ ಬಂದುಹೋಯಿತು. ಈಗಲೂ ಆನೆಬಿದ್ದರಿ, ಆನೆಸಿದ್ದರಿ ಎಂಬ ಹೆಸರಿನ ಗ್ರಾಮವು ಶಿರಾಕ್ಕೆ ಉತ್ತರದಲ್ಲಿ ಹಿರಿಯೂರು ತಾಲ್ಲೋಕು ಜವಗೊಂಡನಹಳ್ಳಿ ಹೋಬಳಿ ಯಲ್ಲಿದೆ. ಈ ಹೆಸರು ಪ್ರಥಮತಃ 1269 ನೆಯ ಇಸವಿಯ ಶಾಸನದಲ್ಲಿ ಕಂಡುಬರುತ್ತದೆ ಯಾದರೂ ಅದು ಬಹಳ ಪುರಾತನವಾದುದೆಂಬುದಕ್ಕೆ ಸಂದೇಹವೇ ಇಲ್ಲ.

ಈ ರಾಜ್ಯದ ವಿಸ್ತೀರ್ಣವನ್ನು ಸ್ಥೂಲವಾಗಿ ಶಾಸನಗಳ ಆಧಾರದಿಂದ ಕಂಡು ಹಿಡಿಯಬಹುದು. ಈ ರಾಜ್ಯಕ್ಕೆ ತುಮಕೂರು ತಾಲ್ಲೂಕು ಪೂರ್ಣವಾಗಿಯೂ ಕೊರಟಗೆರೆ, ದೊಡ್ಡಬಳ್ಳಾಪುರ, ನೆಲಮಂಗಲ, ಶೀರ್ಯ, ಗುಬ್ಬಿ ತಾಲ್ಲೂಕುಗಳ ಸ್ವಲ್ಪ ಭಾಗಗಳೂ ಸೇರಿದ್ದವು. ಪೂರ್ವ ಪಶ್ಚಿಮ 30 ಮೈಲಿ ಉದ್ದವೂ ದಕ್ಷಿಣೋತ್ತರ

25 ಮೈಲಿ ಅಗಲವೂ ಇದ್ದು ಸುಮಾರು 800 ಚದರ ಮೈಲಿ ವಿಸ್ತೀರ್ಣವುಳ್ಳದಾಗಿತ್ತು. ರಾಜ್ಯವು ನಾಡುಗಳಾಗಿಯೂ ಒಳನಾಡುಗಳಾಗಿಯೂ, ಸೀಮೆಗಳಾಗಿಯೂ ವಿಭಾಗಿಸಲ್ಪಟ್ಟಿತ್ತು. ಉದಾಹರಣೆಗಾಗಿ ವಾಯುವ್ಯದಲ್ಲಿ ದೇವಗುಂದನಾಡು, ದಕ್ಷಿಣದಲ್ಲಿ ಮರುಗರೆನಾಡು, ಪೂರ್ವದಲ್ಲಿ ಹುಲಕೂಲನಾಡು, ಮಧ್ಯದಲ್ಲಿ ಕೊರಮುತ್ತುಗನಾಡು, ಪಶ್ಚಿಮದಲ್ಲಿ ಚೇಳೂರು ನಾಡು, ನೈಋತ್ಯದಲ್ಲಿ ಹೆರುಹೆನಾಡು, ಈ ರೀತಿ ನಾಡುಗಳಿದ್ದುವು. ಇವುಗಳಿಗೆ ಒಳನಾಡುಗಳೂ ಹೇಳಲ್ಪಟ್ಟಿವೆ. ಸೀಮೆಗಳಲ್ಲಿ ಆಗ್ನೇಯದಲ್ಲಿ ಶೂರಗಿರಿಸೀಮೆ, ದಕ್ಷಿಣದಲ್ಲಿ ಗೂಳೂರಸೀಮೆ, ಪಶ್ಚಿಮದಲ್ಲಿ ಮೂಕಪಟ್ಟಣಸೀಮೆ, ಉತ್ತರದಲ್ಲಿ ಕೋಳಾಲಸೀಮೆ, ಹೀಗೆ ಅನೇಕ ಸೀಮೆಗಳ ಹೆಸರುಗಳು ಹೇಳಲ್ಪಟ್ಟಿವೆ. ತುಮಕೂರು ಮರುಗರೆ ನಾಡಿನ ಗೂಳೂರು ಸೀಮೆಗೆ ಸೇರಿದುದು. ಕೆಲವು ಊರುಗಳ ಮತ್ತು ಸ್ಥಳಗಳ ಹೆಸರು ಈಗಿನ ಹೆಸರುಗಳಿಂದ ಭಿನ್ನವಾಗಿದ್ದುವು. ಉದಾಹರಣೆಗಾಗಿ, ದೇವರಾಯದುರ್ಗಕ್ಕೆ ಅದನ್ನು ಮೊದಲು ಕಟ್ಟಿಸಿದವನ ಹೆಸರಿನ ಮೇಲೆ ಜಡಕನ ದುರ್ಗವೆಂದೂ ಈ ದುರ್ಗದ ಪಶ್ಚಿಮ ದಿಕ್ಕಿನ ಇಳಿಜಾರಿನಲ್ಲಿರುವ ಕುಂಬಾರ ಕೆರೆಗೆ ಅದನ್ನು ಕಟ್ಟಿಸಿದ ವಿಜಯನಗರದ ಹರಿಹರ (1376-1404) ನ ಮಗ ಮಹಾಮಂಡಲೇಶ್ವರ ವೀರಬುಕ್ಕಣ್ಣವಡೆಯರ ಅಂಗರಕ್ಷಕ ಅಲ್ಲಪ್ಪನಾಯ್ಕನ ಮಗ ಪೋಲೆನಾಯ್ಕನ ಹೆಸರಿನ ಮೇಲೆ ಪೋಲಸಮುದ್ರವೆಂದೂ, ಮೈದಾಳಕ್ಕೆ ಮಯಿಂದಪೊಳಲೆಂದೂ, ಈಗಿನ ಕೋರಾಗ್ರಾಮಕ್ಕೆ ಕೋಯೂರ ಮತ್ತು ಕೋರೆಯ ಎಂದೂ, ಹೊನ್ನುಡಿಕೆಗೆ ಗಂಧವಾರಣ ಪುರವೆಂದೂ, ಮುಳುಕುಂಟೆಗೆ ಅನಂತಪುರವೆಂದೂ, ಕೈದಾಳಕ್ಕೆ ಕಯುದಳವೆಂದೂ, ಎಲಚಿಗೆರೆಗೆ ಅಚ್ಯುತಾಂಬುಧಿಯೆಂದೂ, ಹೆಸರುಗಳು ಇವೆ. ಇದೇ ರೀತಿಯಲ್ಲಿ ಆಗ ಸಣ್ಣ ಹಳ್ಳಿಯಾಗಿದ್ದ ತುಮಕೂರಿಗೂ ಬೇರೆ ಹೆಸರಿದೆ. ಇದನ್ನು 'ತುಮ್ಮೆಗೂರು' ಎಂದು ಹೇಳುತ್ತಿದ್ದರು. ತುಮ್ಮೆಗೂರು ಎಂಬ ಹೆಸರು ಗಂಗರಾಜನಾದ ಇಮ್ಮಡಿ ಬೂತುಗ (925-960) ನ ಕಾಲದ 955 ನೆಯ ಇಸವಿಯ ಶಾಸನದಲ್ಲಿ ಹೇಳಿದೆ. ಈ ಶಾಸನವು ತುಮಕೂರಿನ ಸೋಮೇಶ್ವರನ ದೇವಸ್ಥಾನದಲ್ಲಿದೆ. ತುಮಕೂರಿನಲ್ಲಿ ಇದೇ ಪುರಾತನ ಶಾಸನ. ಈ ಹೆಸರು ಬರುವುದಕ್ಕೆ ಇಲ್ಲಿ ಆ ಕಾಲದಲ್ಲಿ ಹೆದ್ದುಂಬೆಗಿಡಗಳು ಕಾಡು ಕಾಡಾಗಿ ಬೆಳೆದುಕೊಂಡಿದ್ದವಂತೆ. ಈ ಗಿಡದ ಹಾವಳಿಯು ಈ ಪ್ರಾಂತ್ಯದಲ್ಲಿ ಹೆಚ್ಚಾಗಿದ್ದಂತೆ ತೋರುವುದು. ಕೊರಟಗೆರೆ ತಾಲ್ಲೂಕು ತುಂಬಾಡಿ ಅಥವಾ (ಮಧುಗಿರಿ 27 ನೆಯ ಶಾಸನದಲ್ಲಿರುವಂತೆ) ತುಂಬೆವಾಡಿ ಗ್ರಾಮವೂ ಈ ಗಿಡದಿಂದ ಆವರಿಸಲ್ಪಟ್ಟಿತ್ತೆಂದು ತೋರುತ್ತದೆ. ಅನಂತರ ಸುಮಾರು 1100 ರಲ್ಲಿ ಈ ಊರು ಅನಾಮಧೇಯವಾದ ಹಳ್ಳಿಯಾಗಿದ್ದಾಗ ಕೈದಾಳದಲ್ಲಿ ರಾಜಧಾನಿಯನ್ನು ಮಾಡಿ

ಕೊಂಡಿದ್ದ ನೃಪರಾಯನೆಂಬ ರಾಜನು ತನಗೆ ಸೇರಿದ್ದ ಈ ಹಳ್ಳಿಯನ್ನು ತನ್ನ ಟುಮಕೆ ಹೊಡೆಯುವವನಿಗೆ ಇನಾಮಾಗಿ ಕೊಟ್ಟದ್ದರಿಂದ ಟುಮಕೆ ಊರು ಎಂತಲೂ ಹೆಸರು ಬಂದಂತೆ ತಿಳಿಯುತ್ತದೆ. ಇದು ಕಟ್ಟುಕತೆ, ನಂಬಲರ್ಹವಾದುದಲ್ಲ. ಈ ಪ್ರಾಂತವು ಕ್ರಿ. ಶ. 700 ರಿಂದ 955 ರ ವರೆಗೆ ಗಂಗರಸರ ಅಧೀನದಲ್ಲಿಯೂ, ಅನಂತರ 1100 ರ ವರೆಗೆ ಚಾಳುಕ್ಯರ ಅಧೀನದಲ್ಲಿಯೂ, ಆಮೇಲೆ 1638 ರ ವರೆಗೆ ವಿಜಯನಗರದ ಅರಸರುಗಳ ಅಧೀನದಲ್ಲಿಯೂ, ಆ ಮೇಲೆ 1687 ರ ವರೆಗೆ ಸೀರ್‍ಯದ ರಣದುಲ್ಲಾ ಖಾನನೇ ಮೊದಲಾಗಿ ಖಾಸಿಂಖಾನನ ವರೆಗೆ ಬಿಜಾಪುರದ ಮಹಮದೀಯ ಅರಸರ ಕೈಕೆಳಗಿನ ಸುಬೇದಾರರುಗಳ ವಶದಲ್ಲಿಯೂ, ಅನಂತರ ಎಂದರೆ 1687 ರಿಂದ 1731 ರ ವರೆಗೆ ಮೈಸೂರರಸರ ಅಧೀನದಲ್ಲಿಯೂ, ಆಮೇಲೆ 30 ವರ್ಷ ಎಂದರೆ 1731 ರಿಂದ 1761 ರ ವರೆಗೆ ಆ ರಾಜರ ಕಾಲದಲ್ಲಿ ದಳವಾಯಿಗಳ ಕೈಕೆಳಗೂ, ಆ ಮೇಲೆ 1761 ರಿಂದ 1775 ರ ವರೆಗೆ ಹಾಗಲವಾಡಿ ಚನ್ನಬಸಪ್ಪನಾಯ್ಕನ ಆಡಳಿತದಲ್ಲೂ, ಅನಂತರ 1776 ರಿಂದ 1799 ರ ವರೆಗೆ ಹೈದರ್ ಮತ್ತು ಟಿಪ್ಪುಸುಲ್ತಾನರ ಆಳಿಕೆಯಲ್ಲೂ ಇದ್ದು ಅದರಿಂದಾಚೆಗೆ ಮೈಸೂರರಸರ ಅಧೀನದಲ್ಲಿದೆ.

ತುಮಕೂರು ನಗರ—ಭಾಗ ೧

ತುಮಕೂರನ್ನು ಮೈಸೂರು ರಾಜವಂಶದ ಕಾಂತೇ ಅರಸು ಎಂಬವರು ಕಟ್ಟಿಸಿ ಸುತ್ತಲೂ ಕೋಟೆಯನ್ನೂ, ಕೋಟೆಯ ಪೂರ್ವಕ್ಕೆ ಪೇಟೆಯನ್ನೂ ಕಟ್ಟಿಸಿದರು. ಕೋಟೆಯು ಈಗ ನೆಲಸಮವಾಗಿ ಹೋಗಿರುವುದರಿಂದ ಅದರ ಗುರುತೇ ತಿಳಿಯುವ ಹಾಗಿಲ್ಲ. ಆದರೆ ಈಗಿರುವ ಹೆಸರುಗಳಿಂದ ಯಾವುದು ಕೋಟೆಯಾಗಿತ್ತು, ಯಾವುದು ಪೇಟೆಯಾಗಿತ್ತು, ಎಂಬುದನ್ನು ನಿರ್ಧರಿಸಬಹುದು. ಈಗಿನ ಅಗ್ರಹಾರವೇ ಕೋಟೆ, ಹೊರಪೇಟೆಯೇ ಪೇಟೆ. ಈ ಊರು ದೇವರಾಯದುರ್ಗದ ಗುಡ್ಡಗಳ ನೈರುತ್ಯ ಮೂಲೆಯಲ್ಲಿರುವ ದೊಡ್ಡಕೆರೆಯ ಸಮೀಪದಲ್ಲಿದೆ. 1900 ನೆಯ ಇಸವಿಯಿಂದ ಆಗಾಗ್ಗೆ ಉಂಟಾದ ಮಳೆಯ ಅಭಾವದಿಂದ ಕೆರೆಯು ತುಂಬದೆ ತರಿ ಮತ್ತು ಬಾಗಾಯಿತು ಕೃಷಿಯು ಕಡಿಮೆಯಾಗುತ್ತಾ ಬರುತ್ತಿದೆ. ಈ ಕಾರಣದಿಂದಲೇ ಊರಿನ ಭೂಪ್ರದೇಶವು ಬರಬರುತ್ತಾ ಒಳಗೇ ಒಣಗುತ್ತಾ ಬಂದು ಕುಡಿಯುವ ನೀರಿಗೆ ಕಷ್ಟವಾಗಿದ್ದುದು. 1928 ರ ಈಚೆಗೆ ಮೈದಾಳದ ಕೆರೆಯಿಂದ ಹಾಕಿರುವ ನಲ್ಲಿಗಳಿಂದ ನೀರಿನ ಕೊರತೆಯು ಬಹುಮಟ್ಟಿಗೆ ತಪ್ಪಿದೆ. ಅಲ್ಲಲ್ಲಿ ಕಾಣಬರುವ ಹಲವು ರಾಟೆಗಳಿರುವ ದೊಡ್ಡ ದೊಡ್ಡ ಬಾವಿಗಳನ್ನು ನೋಡಿದರೆ ಈ ಊರಿನವರು ಹಿಂದೆ ನೀರಿಗೆ ಎಷ್ಟು ಕಷ್ಟಪಟ್ಟಿರಬಹುದೆಂಬುದು ವ್ಯಕ್ತವಾಗುತ್ತದೆ. ಈ ನೀರಿನ ಕ್ಷಾಮವನ್ನು ತಪ್ಪಿಸುವುದಕ್ಕೋಸ್ಕರಲೇ

ಈಗ ಬಾಣನ ಕಟ್ಟೆಯೆಂದು ಕರೆಯುವ ಪುಷ್ಕರಿಣಿಯನ್ನು ಈಗ ಸುಮಾರು 400 ವರ್ಷಗಳ ಕೆಳಗೆ ದುರಸ್ತು ಮಾಡಿದಂತೆ ತೋರುತ್ತದೆ. ಇದನ್ನು ಕಟ್ಟಿಸಿದವನು ಗಂಗ ರಾಜನಾದ ಬಾಣರಾಜ ಇಮ್ಮಡಿ ಪೃಥ್ವೀಪತಿ (ಸು. 921) ಇರಬಹುದು. ಕೆಲವರು ಇದು ಬಹಳ ಈಚಿನದೆಂದೂ ಹೇಳುತ್ತಾರೆ. ಬಾಳಯ್ಯಗೌಡನು ಮಾಡಿಸಿದುದೆಂದೂ ಹೇಳುತ್ತಾರೆ. ಬಾಳಯ್ಯನ ಗೌಡನ ಪಾಳ್ಯವೆಂಬುದು ಇದರ ಸಮೀಪದಲ್ಲಿಯೇ ಇದೆ. ಈಗ ಈ ಪುಷ್ಕರಿಣಿಯ ಸ್ಥಿತಿಯು ಕೆಟ್ಟುಹೋಗಿದೆ. ಗ್ರಾಮಸಾರವು ಇದಕ್ಕೆ ಸೇರುವುದರಿಂದ ವರ್ಷದಲ್ಲಿ ಬಹುಕಾಲ ನೀರು ಕೊಳೆತು ನಾರುತ್ತದೆ. ಅಕ್ಕಪಕ್ಕದಲ್ಲಿ ಅಂಗಡಿ ಮುಂಗಟ್ಟು ಮಾಡಿಕೊಂಡಿರುವವರಿಗೂ ಇದರಿಂದ ಆರೋಗ್ಯವು ಕೆಡುತ್ತದೆ. ಇದನ್ನು ಮುಚ್ಚಿಬಿಟ್ಟರೆ ಅಷ್ಟೇನೂ ತೊಂದರೆಯಾಗಲಾರದು. ನೀರಿನ ಕಷ್ಟವನ್ನು ತಪ್ಪಿಸುವುದಕ್ಕಾಗಿಯೇ ಈ ಊರಿನ ಕೆರೆಯನ್ನು ಬಹು ವಿಸ್ತಾರವಾಗಿಯೂ, ಆಳವಾಗಿಯೂ ಮಾಡಿದ್ದಾರೆ. ಈ ಕೆರೆಯಿಂದ ಊರಿಗೆಲ್ಲಾ ಕಾರಂಜಿಗಳ ಮೂಲಕ ನೀರು ಸರಬರಾಯಿ ಆಗುತ್ತಿತ್ತೆಂಬುದಕ್ಕೆ ಅನೇಕ ಚಿಹ್ನೆಗಳಿವೆ. ಈಗ ಕಾರಂಜಿಗಳೆಲ್ಲಾ ಹೂತುಹೋಗಿವೆ. ಈ ಕೆರೆಯ ನೀರನ್ನು ಶೇಖರಿಸಿ ಅಗ್ರಹಾರದವರು ಸ್ನಾನಾದಿಗಳಿಗೆ ಉಪಯೋಗಿಸಿಕೊಳ್ಳುವುದಕ್ಕೋಸ್ಕರ ಒಂದು ದೊಡ್ಡ ಕೊಳವು ಪೂರ್ಣಯ್ಯನವರ ಛತ್ರದ ಸಮೀಪದಲ್ಲಿ ಕಟ್ಟಲ್ಪಟ್ಟಿತ್ತು. ಇದು ಅನಾರೋಗ್ಯವೂ, ಅಪಾಯಕರವೂ ಆಗಿದ್ದುದರಿಂದ ಈಗ ಅದನ್ನು ಮುಚ್ಚಿಬಿಟ್ಟಿದ್ದಾರೆ. ಈ ಕೆರೆಯನ್ನು ಕಟ್ಟಿದ್ದು ಸುಮಾರು 900 ನೆಯ ಇಸವಿಯಲ್ಲಿ. ನೀರಿನ ಸರಬರಾಯಿ ಚೆನ್ನಾಗಿ ಆಗಬೇಕೆಂಬ ಉದ್ದೇಶದಿಂದ 955 ನೆಯ ಇಸವಿಯ—ಈಗ ಸೋಮೇಶ್ವರನ ದೇವಸ್ಥಾನದಲ್ಲಿರುವ—ಶಾಸನದಲ್ಲಿ ಕೆರೆಯ ಮೇಲ್ವಿಚಾರಣೆಗೆ ಎಂಟು ಜನ ಮುಖಂಡರನ್ನು ಗೊತ್ತುಮಾಡಿ ಅವರ ಅಭಿಪ್ರಾಯವನ್ನು ತೆಗೆದುಕೊಂಡು ಕೆರೆಯ ಉಸ್ತುವಾರಿಯನ್ನು ನೋಡಿಕೊಳ್ಳುವುದಕ್ಕಾಗಿ ಬಿಟ್ಟಿಯಣ್ಣ ಎಂಬವನನ್ನು ಅಧಿಕಾರಿಯನ್ನಾಗಿ ಮಾಡಿ ಅವನಿಗೆ 12 ಖಂಡುಗ "ಬಿತ್ತುವಟ್ಟ" ಭೂಮಿಯನ್ನೂ, ಬ್ರಹ್ಮಪುತ್ರ (ಬ್ರಹ್ಮ ಉತ್ತರ)ನೆಂಬ ಬಿರುದನ್ನೂ ಕಂದಮಯ್ಯನ ಮಗ ಅಜ್ಜಮಯ್ಯನು ಕೊಟ್ಟನೆಂದು ಉಲ್ಲೇಖಿಸಿದೆ. ಇದನ್ನು ನೋಡಿದರೆ ಈ ಕೆರೆಯನ್ನು ಕಟ್ಟಿ 1,000 ವರ್ಷದ ಮೇಲಾಗಿದೆಯೆಂದು ಗೊತ್ತಾಗುವುದು. ಕೆರೆಗಳ ದುರಸ್ತಿಗೂ ಕೆರೆಯ ನೀರನ್ನು ಅನಾವಶ್ಯಕವಾಗಿ ಪೋಲುಮಾಡದಂತೆಯೂ, ನೋಡಿಕೊಳ್ಳುವುದಕ್ಕೆ ಇಂಥ ಸಮಿತಿಗಳನ್ನು ಏರ್ಪಡಿಸುವುದು ಸರ್ವಸಾಮಾನ್ಯವಾಗಿತ್ತೆಂಬುದು ರಾಜೇಂದ್ರಚೋಳ (1013-1045) ನ 1019 ನೆಯ ಇಸವಿಯ ಶಾಸನದಿಂದ ತಿಳಿಯಬರುತ್ತದೆ.

ಇಲ್ಲಿರುವ ದೇವಸ್ಥಾನಗಳಲ್ಲಿ ಸೋಮೇಶ್ವರನ ದೇವಸ್ಥಾನವನ್ನು ಬಿಟ್ಟರೆ ಲಕ್ಷ್ಮೀಕಾಂತ ದೇವಸ್ಥಾನವೇ ಪುರಾತನವಾದುದು. ಇದು 1560 ನೆಯ ಇಸವಿಗೆ ಹಿಂದೆಯೇ ಕಟ್ಟಲ್ಪಟ್ಟಿದ್ದೆಂದು ನವರಂಗದ್ವಾರದ ಬಲಕ್ಕೆ ಗೋಡೆಯ ಮೇಲಿರುವ ಶಾಸನದಿಂದ ತಿಳಿಯಬರುತ್ತದೆ. ಈ ಶಾಸನದ ಭಾಷೆ ತೆಲುಗು. ವಿಷಯವು ಈ ರೀತಿ ಇದೆ. " ಸದಾಶಿವರಾಯಲು (1542-1570) ವಿಜಯನಗರ ರತ್ನಸಿಂಹಾಸನಾ ರೂಢುಲೈ ಪೃಥ್ವೀಸಾಮ್ರಾಜ್ಯಂ ಚೇಸ್ತುಂಡುಗಾನು ಶ್ರೀಮರ್ಣ ಮಹಾಮಂಡ ಲೇಶ್ವರ ಗೋತ್ರಂ ಆಶ್ವಲಾಯನ ಸೂತ್ರಂ ಶ್ರೀದೇವಪ್ಪದಾಸಿಗರಾಜಗಾರಿ ಪುತ್ರುಲು ಜಗನ್ನಾಥ ದೇವಯ್ಯ ಮಹಾರಾಜುಲು, ಆನೆಬಿದ್ದ ಜರಿರಾಜ್ಯಮುಲು" ದೇವರಿಗೆ ಪಂಡಿತರಾರಾಧನೆಗೆ ದತ್ತಿ ಬಿಟ್ಟಿರುವುದನ್ನು ಹೇಳಿದೆ. ಆದರೆ ಶಾಸನದ ಕೊನೆಯು ಸ್ಪಷ್ಟವಿಲ್ಲದಿರುವುದರಿಂದ ಯಾವ ದತ್ತಿ, ಎಲ್ಲಿ ಬಿಟ್ಟಿದೆ ಎಂಬುದು ಗೊತ್ತಾಗುವುದಿಲ್ಲ. ಈ ದೇವಸ್ಥಾನವು ಪೂರ್ವಾಭಿಮುಖವಾಗಿದೆ. ದ್ರಾವಿಡ ಶಿಲ್ಪಕೃತವಾದುದು. ಗರ್ಭಗುಡಿ, ಸುಕನಾಸಿ, ನವರಂಗ, ಮುಖಮಂಟಪ ಮತ್ತು ಪ್ರಾಕಾರಗಳುಳ್ಳುದಾಗಿದೆ. ನವರಂಗದ ಉತ್ತರಕ್ಕೆ ಒಂದು ಬಾಗಿಲಿದೆ. ಲಕ್ಷ್ಮೀಕಾಂತ ಸ್ವಾಮಿಯವರು ಪದ್ಮಾಸನಾಸೀನರಾಗಿದ್ದಾರೆ. ವಿಗ್ರಹ ಸುಮಾರು 4½ ಅಡಿ ಎತ್ತರವಾಗಿದೆ. ಎಡತೊಡೆಯ ಮೇಲೆ ಅಮ್ಮನವರು ಮಂಡಿಸಿದ್ದಾರೆ. ಈ ಊರಿನ ಮಾರಿಗುಡಿಯ ಬಳಿ ಇರುವ ಶಾಸನವು 1610 ನೆಯ ಇಸವಿಯದು. ಇದರಲ್ಲಿ ದೊರೆಯಾದ ಇಮ್ಮಡಿ ಬಸವನಾಯ್ಕ ಒಡೆಯರು ಮಗಳಿಗೆ ಕೊಟ್ಟ ಮದುವೆ ತೆರದ ವಿಚಾರ ಹೇಳಿದೆ. ಕೋಡಿ ಬಸವನ ಗುಡಿಯ ಗರುಡಗಂಬದಲ್ಲಿ "ಮಲ್ಲಶೆಟ್ಟಿ ಮಗ ಪರ್ವತ ನಾಯಕನು ತನ್ನ ತಂದೆತಾಯಿಗಳಿಗೆ ಧರ್ಮವಾಗಬೇಕೆಂದು ಸಮೀಪದ ಗುಡ್ಡದಿಂದ ತಂದ ಕಲ್ಲಿನಿಂದ ಗರುಡಗಂಬವನ್ನು ಸ್ಥಾಪಿಸಿದನು" ಎಂದಿದೆ. ಇದು ವಿಜಯನಗರದ ಕೃಷ್ಣದೇವರಾಯನ ಕಾಲದ್ದು (1515).

ಕೆರೆಯ ಕೆಳಗೆ ಇನ್ನೊಂದು ಶಾಸನವು ಕರಣಿಕ ನಲ್ಲಪ್ಪನವರ ತೋಟದಲ್ಲಿದೆ. ಇದು 1269 ನೆಯ ಇಸವಿಯ ಹೊಯ್ಸಳರ ಕಾಲದ ವೀರಗಲ್ಲು. ಇದರ ವಿಷಯವು ಈ ರೀತಿಯಾಗಿದೆ. "ಮುಮ್ಮಡಿ ನರಸಿಂಹನು (1254-1292) ದ್ವಾರಸಮುದ್ರದಲ್ಲಿ ಆಳುತ್ತಿದ್ದಾಗ ಆನೆ ಬಿದ್ದ ಸರಿರಾಜ್ಯದಲ್ಲಿ ಮಹಾ ಪ್ರಧಾನ ವೀರಚಿಕ್ಕೇತಯ್ಯ ಡಣ್ಣಾಯಕನು ಆಳುತ್ತಿದ್ದನು. ಇವನ ಕೈಕೆಳಗೆ ಸರದಾರ ಅಪ್ಪಯ್ಯನಾಯ್ಕನೆಂಬವ ನಿದ್ದನು. ಗೂಳಯನಾಯ್ಕನೆಂಬುವನು 1268 ರಲ್ಲಿ ನಿಡುಗಲ್ಲು ಚೋಳರರಸನಾದ ಇಮ್ಮಡಿ ಇರುಂಗೋಳ ದೇವನ ಸಕಲ ಸೇನೆಯನ್ನೊಡಗೊಂಡು ಆನೆ ಬಿದ್ದ ಸರಿ ರಾಜ್ಯಕ್ಕೆ ದಂಡೆತ್ತಿಬಂದು ಗೋವುಗಳನ್ನು ಕೊಂಡೊಯ್ದಾಗ ಅಪ್ಪಯ್ಯನಾಯಕನು

ಸೈನಿಕರನ್ನು ಬೆನ್ನಟ್ಟಿಹೋಗಿ ಅನೇಕರನ್ನು ಕೊಂದು ಗೋವುಗಳನ್ನು ಹಿಂದಿರುಗಿಸಿಕೊಂಡು ಬರುವಾಗ ರಣರಂಗದಲ್ಲಿ ಬಿದ್ದು ಸತ್ತನು." ಈ ವೀರಗಲ್ಲು ಚೋಳರಿಗೂ, ಹೊಯ್ಸಳರಿಗೂ ಆಗಾಗ್ಗೆ ಯುದ್ಧ ನಡೆಯುತ್ತಿದ್ದುದನ್ನು ಸೂಚಿಸುತ್ತದೆ. ಹೊಯ್ಸಳ ರಾಜ ವಿಷ್ಣುವರ್ಧನನು ಚೋಳರನ್ನು ಮೈಸೂರು ದೇಶದಿಂದ ಸಂಪೂರ್ಣವಾಗಿ ಓಡಿಸಿದ್ದನು. ಆದರೆ ಚೋಳರ ಒಂದು ಸಂತತಿಯು ನಿಡುಗಲ್ಲಿನಲ್ಲಿ ೮ನೆಯ ಶತಮಾನದಿಂದಲೂ ನಡೆದುಕೊಂಡು ಬಂದಿದ್ದು ಹೊಯ್ಸಳರ ಧಾಳಿಗೆ ಸಿಕ್ಕಲಿಲ್ಲ. ಈ ವಂಶದವರು ನಿಡುಗಲ್ಲಿನ ಸುತ್ತುಮುತ್ತಿನ ರಾಜ್ಯವನ್ನು ಆಕ್ರಮಿಸಿಕೊಂಡು ಶಿರಾ ತಾಲ್ಲೂಕಿನ ಉತ್ತರದಲ್ಲಿರುವ ಹೇಮಾವತಿ ಎಂಬ ಈಗಿನ ಗ್ರಾಮವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಇದ್ದರು. ಈ ರಾಜಧಾನಿಗೆ ಹೆಂಜೇರು, ಪೆಂಜೇರು ಮತ್ತು ಪೆರುಂಜೇರು ಎಂಬ ಹೆಸರುಗಳಿದ್ದುವು. ಈ ವಂಶದ ಅರಸುಗಳು ನಿಡುಗಲ್ ಚೋಳ ಮಹಾರಾಜರೆಂದು ಹೆಸರಿಟ್ಟುಕೊಂಡಿದ್ದರು. ಈ ಸಂತತಿಯು ೧೩ ನೆಯ ಶತಮಾನದ ಕೊನೆಯವರೆಗೂ ನಡೆದುಬಂತು (1292). ಈ ವಂಶದ ರಾಜರಲ್ಲಿ ಇಮ್ಮಡಿ ಇರುಂಗೋಳನೆಂಬವನು 1232 ರಿಂದ 1277 ರ ವರೆಗೂ ಆಳಿದನು. ಈ ಇರುಂಗೋಳನ ಸೇನೆಯೇ ಆನೆ ಬಿದ್ದ ಸರಿರಾಜ್ಯಕ್ಕೆ ಬಂದು ತುಮಕೂರಿನಲ್ಲಿ ಯುದ್ಧ ಮಾಡಿದುದು. ಹೊಯ್ಸಳ ನರಸಿಂಹನು ಈ ಚೋಳರನ್ನು ನಿರ್ಮೂಲಮಾಡಬೇಕೆಂದು ಯೋಚಿಸಿ 1285 ರಲ್ಲಿ ದೊಡ್ಡ ಸೈನ್ಯವನ್ನು ತೆಗೆದುಕೊಂಡು ಹೋಗಿ ಅಗ್ಗೆ ಆಳುತ್ತಿದ್ದ ಮುಮ್ಮಡಿ ಇರುಂಗೋಳನನ್ನು ಸೋಲಿಸಿ ನಿಡುಗಲ್ ಚೋಳರ ಕೋಟೆ ಕೊತ್ತಲಗಳನ್ನು ವಶಮಾಡಿಕೊಂಡನು. ಸೋತುಹೋದ ಇರುಂಗೋಳನ ಮಗ ಭೋಗನೂ, ಇವನ ಮಗ ಬೊಮ್ಮನೂ 1292 ರ ವರೆಗೆ ಬದುಕಿದ್ದರು. ಅನಂತರ ಇವರ ಸಂತತಿಯು ನಿರ್ನಾಮವಾಯಿತು.

ಈ ವೀರಗಲ್ಲು ತುಮಕೂರಿನ ಹತ್ತಿರದಲ್ಲೇ 1269 ರಲ್ಲಿ ಎಂದರೆ ಏಳನೂರು ವರ್ಷಗಳ ಕೆಳಗೆ ನಡೆದ ದೊಡ್ಡ ಯುದ್ಧವನ್ನು ಸೂಚಿಸುತ್ತದೆ. ಈ ಕದನವು ಮಹಾಭಾರತದಲ್ಲಿ ಹೇಳಿರುವ ಗೋಗ್ರಹಣಗಳೆಂಬ ತರಹೆಯದು. ಪೂರ್ವದಲ್ಲಿ ಎರಡು ಪಂಗಡದವರಿಗೆ ಯಾವ ಕಾರಣದಿಂದಲಾದರೂ ಮನಸ್ತಾಪವುಂಟಾದಾಗ ಪರಸ್ಪರ ಪ್ರತೀಕಾರಮಾಡುವುದಕ್ಕಾಗಿ ಒಂದು ಪಂಗಡದವರ ದನಕರುವನ್ನು ಇನ್ನೊಂದು ಪಂಗಡದವರು ಹೊಡೆದುಕೊಂಡು ಹೋಗುವ ವಾಡಿಕೆಯಿತ್ತು. ತುಮಕೂರಿನಲ್ಲಿಯೂ ಇದೇ ನಡವಳಿಕೆಯು ನಡೆದು ನಿಡುಗಲ್ ಚೋಳರ ಸಂಗಡ ಯುದ್ಧವೊದಗಿದುದನ್ನೂ ಅದರ ಫಲಿತಾಂಶವನ್ನೂ ಈ ವೀರಗಲ್ಲು ಹೇಳುತ್ತದೆ.

ಮೇಲೆ ಹೇಳಿದ ಶಾಸನಗಳಲ್ಲದೆ ತುಮಕೂರಿನಲ್ಲಿ ಮೂರು ತಾಮ್ರದ ಶಾಸನಗಳು

ದೊರಕಿವೆ. ಕೆಸ್ತೂರು ಶ್ರೀನಿವಾಸಾಚಾರ್ಯರ ವಶದಲ್ಲಿದ್ದ 1571 ನೆಯ ಇಸವಿಯ ತಾಮ್ರಶಾಸನದಲ್ಲಿ ವಿಜಯನಗರದ ಒಂದನೇ ತಿರುಮಲರಾಯನು (1520-1574) ಕೆರೆಯೂರು ಇಮ್ಮಡಿ ತಿಮ್ಮನಾಯ್ಕನ ಮಗ ಮುಮ್ಮಡಿ ತಿಮ್ಮಪ್ಪನಾಯ್ಕನ ಅರಿಕೆ ಪ್ರಕಾರ ತುಮಕೂರಿಗೆ ಪಶ್ಚಿಮದಲ್ಲಿ ಆರು ಮೈಲಿಗಳ ದೂರದಲ್ಲಿರುವ ಮಲ್ಲಸಮುದ್ರ ಗ್ರಾಮವನ್ನು ಅಗ್ರಹಾರಮಾಡಿ ಅಲ್ಲಿನ ಭೂಮಿಯನ್ನು 100 ವೃತ್ತಿಗಳಾಗಿ ವಿಭಾಗಿಸಿ ಬ್ರಾಹ್ಮಣರಿಗೆ ಒಬ್ಬೊಬ್ಬರಿಗೆ ಒಂದೊಂದು ವೃತ್ತಿಯನ್ನು ದಾನಕೊಟ್ಟುದನ್ನು ಹೇಳಿದೆ. ಇದರಲ್ಲಿ ದಾನಪ್ರತಿಗ್ರಹಮಾಡಿದ ಪ್ರತಿಯೊಬ್ಬರ ಗೋತ್ರ ಸೂತ್ರಗಳನ್ನು ಹೇಳಿರುವುದಲ್ಲದೆ ಗೂಳೂರಿನವರಿಗೆ ಮಾತ್ರ ಮೂರು ವೃತ್ತಿಗಳನ್ನು ಕೊಟ್ಟಂತೆ ಹೇಳಿದೆ. ಒಂದು ವೃತ್ತಿಯನ್ನು ಗದುಗಿನ ನಾರಣಪ್ಪನ ಮಗನಿಗೆ ಎಂದು ಹೇಳಿರುವುದರಿಂದಲೂ ಈ ಶಾಸನದ ವರುಷವು 1571 ಆದ್ದರಿಂದಲೂ, ಭಾರತವನ್ನು ಬರೆದ ಗದುಗಿನ ನಾರಣಪ್ಪನು ಕೃಷ್ಣದೇವರಾಯನ ಕಾಲವಾದ 1510 ರಲ್ಲಿ ಜೀವಿಸಿದ್ದುದರಿಂದಲೂ ಈ ವೃತ್ತಿಯು ಒಂದು ವೇಳೆ ಆತನ ಮಗನಿಗೆ ಕೊಟ್ಟುದಾಗಿರಬಹುದು.

ತುಮಕೂರು ವೆಂಕಟರಾಮಶಾಸ್ತ್ರಿಗಳ ವಶದಲ್ಲಿದ್ದ 1831 ನೆಯ ವರುಷದ ಮುಮ್ಮಡಿ ಕೃಷ್ಣರಾಜವೊಡೆಯರವರ ಕಾಲದ ತಾಮ್ರ ಶಾಸನದಲ್ಲಿ ಮುಮ್ಮಡಿ ಕೃಷ್ಣರಾಜವೊಡೆಯರವರು (1799-1868) ಶ್ರೀರಂಗಪಟ್ಟಣದಲ್ಲಿ ಸಿಂಹಾಸನಾರೂಢರಾಗಿದ್ದಾಗ ತುಮಕೂರಿನಲ್ಲಿ ಮೈಲಾರ ದೇವಭಕ್ತರಾದ ಶೆಟ್ಟಿ ಸಂಜಯ್ಯನೇ ಮೊದಲಾಗಿ ಹತ್ತು ಮಂದಿ ವರ್ತಕರು ತಮಗಾದ ಯಾವುದೋ ಒಂದು ಅಮಾನುಷ ಉಪಕಾರಕ್ಕಾಗಿ ತುಮಕೂರಿನ ಯಜುರ್ವೇದಿ ರಾಮಾವಧಾನಿಗಳ ಮಗ ದಿವಾಕರ ಶಾಸ್ತ್ರಿಗೆ ತಮ್ಮ ಮನೆಗಳಲ್ಲಿ ನಡೆಯುವ ಶುಭಶೋಭನಾದಿಗಳಲ್ಲಿ ಪ್ರಸ್ತವೊಂದಕ್ಕೆ ಎರಡು ರೂಪಾಯನ್ನು ತಲತಲಾಂತರದವರೆಗೆ ಮೇಲೆ ಹೇಳಿದ ದಿವಾಕರಶಾಸ್ತ್ರಿಗೆ ಕೊಟ್ಟುಕೊಂಡು ಬರುತ್ತೇವೆಂದು ಒಡಂಬಡಿಕೆಯನ್ನು ಮಾಡಿಕೊಂಡಿರುವುದನ್ನು ಹೇಳಿದೆ.

ಇನ್ನೊಂದು ತಾಮ್ರ ಶಾಸನವು 1760 ನೆಯ ಇಸವಿಯದು. ಇದು ಹಾಗಲವಾಡಿ ಪಾಳೆಯಗಾರ ಇಮ್ಮಡಿ ಚನ್ನಬಸಪ್ಪನಾಯ್ಕನ ಕಾಲದ್ದು. ಇದು ತುಮಕೂರಿನಲ್ಲೇ ದೊರೆತುದಾದರೂ ಇದನ್ನು ಬೆಂಗಳೂರು ತಮಾಷೆ ಬಂಗಲೆಗೆ ತೆಗೆದುಕೊಂಡು ಹೋಗಿ ಅಲ್ಲಿ ಪ್ರದರ್ಶಿಸಿದ್ದಾರೆ. ವಿಷಯವು ಅಷ್ಟೇನೂ ಪ್ರಾಮುಖ್ಯವಾದುದಲ್ಲ. ಇದೂ ಒಂದು ಒಡಂಬಡಿಕೆಯ ಶಾಸನ. ಇದರಲ್ಲಿ ಶ್ರೀಮನ್ ಮಹಾನಾಡಪ್ರಭು ಗುಬ್ಬಿ ಮುಮ್ಮಡಿ ಹೊನ್ನಪ್ಪಗೌಡರಯ್ಯನವರು ಗುಬ್ಬಿ ಹೊಸಹಳ್ಳಿಯಲ್ಲಿ (ಗುಬ್ಬಿಗೆ ದಕ್ಷಿಣಕ್ಕೆ ನಾಲ್ಕು ಮೈಲಿ ದೂರ) ರಾಜ್ಯವಾಳುತ್ತಿದ್ದಾಗ ಗುಬ್ಬಿ ಪೇಟೆ ಚನ್ನಶೆಟ್ಟಿ ಎಂಬವನಿಗೆ ಗುಬ್ಬಿಪೇಟೆ ಶೆಟ್ಟಿತನವನ್ನು ಕೊಟ್ಟು, ಗುಬ್ಬಿಕೆರೆ

ಕೆಳಗೆ ಹರಿ ಮತ್ತು ಬಿಸ್ಕಿ ಜಮೀನನ್ನು ಕೊಡಿಗೆ ಹಾಕಿ ಕೊಟ್ಟದ್ದನ್ನು ಹೇಳಿದೆ. ಮೇಲೆ ಹೇಳಿದ ಹೊನ್ನಪ್ಪಗೌಡರಯ್ಯನವರು ಹಾಗಲುವಾಡಿಯಲ್ಲಿ 1487 ರಿಂದ 1776 ರ ವರೆಗೆ ಆಳಿದ ರಾಜರ ವಂಶಕ್ಕೆ ಸೇರಿದವರು. ಹಾಗಲವಾಡಿ ಪಾಳೆಯಗಾರರು ತಮ್ಮ ಹೆಸರಿನ ಮುಂದೆ "ಐಯ್ಯನವರು" ಎಂಬುದನ್ನು ಸೇರಿಸುವ ವಾಡಿಕೆಯಿತ್ತು. ಈ ಪಾಳೆಯಗಾರರಲ್ಲಿ 12 ನೆಯವನಾದ ಇಮ್ಮಡಿ ಚನ್ನಬಸಪ್ಪ ನಾಯ್ಕನು ತುಮಕೂರನ್ನು ತನ್ನ ಸಂಸ್ಥಾನಕ್ಕೆ ಸೇರಿಸಿಕೊಂಡನೆಂದು ಈ ವಂಶದವರ ಚರಿತ್ರೆಯಿಂದ ತಿಳಿದುಬರುತ್ತದೆ. ಇವನೇ ಹಾಗಲವಾಡಿಯಲ್ಲಿ 1760 ರಲ್ಲಿ ಆಳುತ್ತಿದ್ದನು. ಇವನನ್ನು 1775 ರಲ್ಲಿ ಹೈದರನು ಹಿಡಿದು ಶ್ರೀರಂಗಪಟ್ಟಣದಲ್ಲಿ ಸೆರೆಯಿಟ್ಟನು, ಚನ್ನಬಸಪ್ಪನಾಯ್ಕನು ಸ್ವಲ್ಪ ದಿವಸದಲ್ಲಿಯೇ ಬಂದೀಖಾನೆಯಲ್ಲಿ ಮೃತಪಟ್ಟನು. 1776 ರಲ್ಲಿ ಇವನ ಮಗ ಮುದಿಯಪ್ಪನಾಯ್ಕನಿಗೆ ಹಾಗಲವಾಡಿ ಪಟ್ಟವಾಯಿತು. ಇವನು ಇನ್ನೂ ಹುಡುಗನಾಗಿದ್ದುದರಿಂದ ಹೈದರನು ಹಾಗಲವಾಡಿಯನ್ನು ಮೈಸೂರಿಗೆ ಸೇರಿಸಿಕೊಂಡು ಆ ಬಾಲಕನ ಜೀವನಕ್ಕಾಗಿ ಮೂರು ಹಳ್ಳಿಗಳನ್ನು ಜಹಗೀರಿ ಕೊಟ್ಟನು.

ಭಾಗ ೨. ಇದುವರೆಗೆ ತುಮಕೂರಿನಲ್ಲಿಯೇ ದೊರೆತ ಶಾಸನಗಳ ವಿಚಾರವನ್ನೂ ಅವುಗಳಲ್ಲಿ ಉಲ್ಲೇಖಿಸುವಷ್ಟು ಚರಿತ್ರೆಯನ್ನೂ ಹೇಳಿದುದಾಯಿತು. ಇದೆಲ್ಲಾ ಪೂರ್ವ ಚರಿತ್ರೆ. ಈ ಪಟ್ಟಣವು ಕಾಲಕ್ರಮದಲ್ಲಿ ಜನಸಂಖ್ಯೆಯಲ್ಲಿಯೂ, ವಿಸ್ತೀರ್ಣದಲ್ಲಿಯೂ, ಅಭಿವೃದ್ಧಿ ಪಡೆದುದನ್ನು ಹೇಳಬೇಕಾದರೆ ಸ್ವಲ್ಪದರದಲ್ಲಾಗುವುದಿಲ್ಲ. ಅದಕ್ಕೆ ಪ್ರತ್ಯೇಕ ಗ್ರಂಥವೇ ಬೇಕು. ಆದ್ದರಿಂದ ಈ ವಿಚಾರವನ್ನು ಬಹಳ ಸಂಕ್ಷೇಪವಾಗಿ ಕೊಟ್ಟಿದೆ.

ಶಾಲಿವಾಹನ ಶಕ 1610 ನೆಯ ಪ್ರಭವ ಸಂವತ್ಸರದ ಚೈತ್ರ ಶುದ್ಧ ಪೂರ್ಣಿಮೆಯ ದಿನ ಚಿಕ್ಕದೇವರಾಜ ಒಡೆಯರವರು (1672-1704) ತುಮಕೂರನ್ನು ವಿಜಾಪುರದ ಮಹಮ್ಮದೀಯ ಅರಸರ ಕಡೆಯ ಸುಬೇದಾರನಾಗಿ ಶೀರ್ಯದಲ್ಲಿ ಆಳುತ್ತಿದ್ದ ಖಾಸಿಂ ಖಾನನಿಂದ ಕಿತ್ತುಕೊಂಡರು. ಅಲ್ಲಿಂದೀಚೆಗೆ ಈ ನಗರವು ಜನಸಂಖ್ಯೆಯಲ್ಲಿಯೂ ವಿಸ್ತೀರ್ಣದಲ್ಲಿಯೂ ಮುಂದುವರಿಯುತ್ತಾ ಇದೆ. 1931 ನೆಯ ಪ್ರಜಾಗಣತಿಯ ಪ್ರಕಾರ 18,600 ಪ್ರಜೆಗಳಿದ್ದಾರೆ. ಕಳೆದ ಹತ್ತುವರ್ಷಗಳಲ್ಲಿ ಪ್ರಜಾಸಂಖ್ಯೆಯು ನಾಲ್ಕು ಸಾವಿರ ಎಂದರೆ ಶೇಕಡ ಇಪ್ಪತ್ತೆಂಟರಷ್ಟು ಏರಿದೆ. ನಗರವು ಪಶ್ಚಿಮ, ಉತ್ತರ, ದಕ್ಷಿಣಕ್ಕೆ ಬಡಾವಣೆಯಾಗುತ್ತಾ ಬಂದಿದೆ. ಹಲವು ಉಪನಗರಗಳೂ ಕಟ್ಟಲ್ಪಟ್ಟಿವೆ. ಉಪನಗರಗಳಲ್ಲಿ ಗರಡಿ ಚಿಕ್ಕನಪಾಳ್ಯ ಅಥವಾ ಸೋಮೇಶ್ವರಪುರ ಬಡಾವಣೆ, ಗುಬ್ಬಿರೋಡ್ ಬಡಾವಣೆ, ಕೃಷ್ಣರಾಜ ಬಡಾವಣೆ, ಜಯಚಾಮರಾಜ

ಬಡಾವಣೆ, ಕುರಿಪಾಳ್ಯ, ಕಂಬಾಳಯ್ಯನಪಾಳ್ಯ, ಹಾಲಶೆಟ್ಟಿಪಾಳ್ಯ, ಹನುಮಂತನ ಪಾಳ್ಯ, ಕೆಂಪಶಿದ್ದಯ್ಯನ ಪಾಳ್ಯ, ಕಡೇ ಕೋಡಿಪಾಳ್ಯ, ನಾಗಣ್ಣನ ಪಾಳ್ಯ, ಸಾಡೇ ಪಾಳ್ಯ ಇವು ಮುಖ್ಯವಾದುವು. ಈ ಊರಿನ ಬಡಾವಣೆಯಲ್ಲಿ ವಿಶೇಷ ಶ್ರದ್ಧೆಯನ್ನು ವಹಿಸಿದವರು ಕ್ರಿಶ್ಚಿಯನ್ ವೆಸ್ಲಿಯನ್ ಮಿಷನರಿ ಸಂಘದವರು. 1837 ರಲ್ಲಿ ಗುಬ್ಬಿ ಯಲ್ಲಿ ಇವರ ಕೆಲಸವು ಪ್ರಾರಂಭವಾಯ್ತು. 1840 ರಲ್ಲಿ ಕುಣಿಗಲಿನಲ್ಲಿಯೂ 1857 ರಲ್ಲಿ ತುಮಕೂರಿನಲ್ಲಿಯೂ ವ್ಯಾಪಿಸಿತು. ಇವರ ವಸಾಹತುಗಳು ಈ ನಗರದಲ್ಲಿಯೇ ಅಲ್ಲದೆ ಅಕ್ಕಪಕ್ಕದಲ್ಲಿರುವ ಬೆತ್ತಲೂರು, ದೇವರೂರು ಗ್ರಾಮಗಳಲ್ಲಿಯೂ ಇವೆ. ಇವರ ವಸಾಹತುಗಳು ಸುಮಾರು 1847 ರಲ್ಲಿ ಧಾತು, ಈಶ್ವರಸಂವತ್ಸರದ ಕ್ಷಾಮದಲ್ಲಿ ಸ್ಥಾಪಿತ ವಾದುವೆಂದು ತಿಳಿಯಬರುತ್ತದೆ. ಇವರು ಹೀಗೆ ಅರುವತ್ತು ವರ್ಷಗಳ ಕೆಳಗೆ ಇಲ್ಲಿಗೆ ಬಂದು ನೆಲಸಿ ದೇವಸ್ಥಾನಗಳನ್ನು ಕಟ್ಟಿಕೊಂಡು ಸರ್ವತೋಮುಖವಾಗಿ ಇಲ್ಲಿನ ಪ್ರಜೆಗಳಲ್ಲಿ ಸೌಜನ್ಯ, ನಾಗರಿಕತೆ, ವಿದ್ಯಾಭ್ಯಾಸಗಳನ್ನು ಹರಡಿದರು. ಇದರ ಫಲವಾಗಿ ಕ್ರೈಸ್ತ ದೇವಾಲಯಗಳೂ, ಸೆಮಿನೆರಿಗಳೂ, ಕಸಬಿನ ಪಾಠಶಾಲೆ ಅನಾಥಾಲಯಗಳೂ ಇತರ ವಿದ್ಯಾಶಾಲೆಗಳೂ ಹುಟ್ಟಿದವು. ಇವು ನಗರಕ್ಕೆ ಆದರ್ಶಪ್ರಾಯಗಳಾಗಿಯೂ ಇವೆ. ಈ ವಿಚಾರವನ್ನು ವಿವರವಾಗಿ ತಿಳಿಯಬೇಕೆಂಬ ಕುತೂಹಲವುಳ್ಳವರು ಸೆಮಿನೆರಿ ಪ್ರದೇಶಗಳಲ್ಲಿ ಈ ಮಿಷನ್ನಿನ ಪ್ರಚಾರಕರು ಮಾಡಿರುವ ಕಾರಕರ್ದುಗಳನ್ನು ಸಾಕ್ಷಾ ತ್ತಾಗಿ ನೋಡಿದಲ್ಲಿ ವಿದಿತವಾಗುವುದು. ಪಟ್ಟಣವು ಶೃಂಗಾರವಾಗುವುದಕ್ಕೆ ವಿಶೇಷ ಪ್ರಯತ್ನಗಳು ಈಗ್ಗೆ ಮೂವತ್ತು ವರ್ಷಗಳ ಹಿಂದಿನಿಂದಲೇ ನಡೆಯುತ್ತಾ ಬಂದಿವೆ. ಇಲ್ಲಿಗೆ ಸಂಬಂಧಪಟ್ಟ ಕೆಲವು ಕೋರ್ಟು ಕಛೇರಿಗಳು ಹಿಂದೆ ದೇವರಾಯದುರ್ಗದ ಲ್ಲಿದ್ದು ಈಚೆಗೆ ಇಲ್ಲಿಗೆ ಬಂದಿವೆ. ಈ ಕಾರಣದಿಂದ ಡಾಬ್ಸ್ ಬಂಗಲೆಯೇ ಮೊದಲಾದ ಸರಕಾರಿ ಕಟ್ಟಡಗಳು ಇಲ್ಲಿ ಕಟ್ಟಲ್ಪಟ್ಟುವು. ಪಟ್ಟಣ ಶೃಂಗಾರಕಾರ್ಯ ಈಚೀಚೆಗೆ ನಮ್ಮ ಸಂಸ್ಥಾನದ ಸರ್ಕಾರದ ಪ್ರೋತ್ಸಾಹದಿಂದ ಬಹು ಭರದಿಂದ ನಡೆಯುತ್ತಾ ಬಂದಿದೆ. ಪಟ್ಟಣ ಪ್ರದೇಶದ ಪ್ರಕೃತಿಲಕ್ಷಣವೂ ವಿಶೇಷವಾದುದು. ಪೌರಸಭೆಯ ಆಡಳಿತಕ್ಕೆ ಸೇರಿದ ಪ್ರದೇಶವು ನಾಲ್ಕು ಚದರಮೈಲಿ ವಿಸ್ತೀರ್ಣವುಳ್ಳುದಾಗಿದೆಯಾದು ದರಿಂದ ಬಡಾವಣೆಗೆ ಬಹಳ ಅವಕಾಶವಿದೆ. ಈ ಪ್ರದೇಶವು ಸಮುದ್ರಮಟ್ಟದಿಂದ 2,678 ಅಡಿ ಎತ್ತರವಾಗಿರುವುದರಿಂದ ವಾಯುಗುಣ ಹಿತಕರವಾಗಿದೆ. ನಗರಾಭಿ ವೃದ್ಧಿಗೆ ಇದು ಎಷ್ಟು ಸಹಾಯಕವಾಗಿದೆಯೆಂಬುದಕ್ಕೆ ಪ್ರಜಾ ಸಂಖ್ಯೆಯು ಹೆಚ್ಚು ತ್ತಿರುವುದೇ ನಿದರ್ಶನ. ವರ್ಷದಲ್ಲಿ ಸರಿ ಸುಮಾರು ಮೂವತ್ತಾರು ಅಂಗುಲ ಮಳೆ ಬೀಳುವುದರಿಂದ ಅಕ್ಕಪಕ್ಕದ ಭೂಮಿಯು ಫಲವತ್ತಾಗಿದೆ. ನಗರವು ಇನ್ನು ಹತ್ತಾರು ವರ್ಷಗಳಲ್ಲಿ ಹೆಚ್ಚು ಅಭಿವೃದ್ಧಿಗೆ ಬರುವ ಚಿಹ್ನೆಗಳು ಹೇರಳವಾಗಿವೆ. ನೂತನವಾದ

ಕಟ್ಟಡಗಳೂ, ವಿದ್ಯಾಸಂಸ್ಥೆಗಳೂ, ವೈದ್ಯಸಹಾಯವೂ, ವ್ಯಾಪಾರ ಸೌಲಭ್ಯವೂ, ಎಂಟು ದಿಕ್ಕಿಗೂ ಘಾಟಾಮಾರ್ಗ, ರೈಲುಮಾರ್ಗವೂ, ನೀರಿನ ಸೌಕರ್ಯವೂ, ಸುಂದರವಾದ ಉದ್ಯಾನಗಳೂ, ವಿನೋದ ವಿಶ್ರಾಂತಿ ಮಂದಿರಗಳೂ ಈ ಪಟ್ಟಣವನ್ನು ಆಕರ್ಷಣೀಯವನ್ನಾಗಿ ಮಾಡಿವೆ. ಈಗ್ಗೆ 1,000 ವರ್ಷಗಳ ಕೆಳಗೆ ಅನಾಮಧೇಯವಾಗಿದ್ದ ಹಳ್ಳಿಯು ಈಗ ಒಂದು ದೊಡ್ಡ ನಗರವಾಗಿದೆ.

ಎ. ಶ್ರೀಕಂಠಯ್ಯ

ಪ್ರಣಯ ಕಲಹ

ಒಲುಮೆಚೇಳು ಸಕ್ಕರೆಯದು :
ಕಚ್ಚಿದರೂ ಬೆಲ್ಲ ಸಿಹಿ !
ಅದರ ಕೊಂಡಿ ಅಕ್ಕರೆಯದು :
ಚುಚ್ಚಿದರೂ ಅಲ್ಲ ಕಹಿ !

ವ್ಯಾಕರಣ

ಕವಿಗೆ ಕರ್ಣಂ ಪ್ರಮಾಣಂ,
ವ್ಯಾಕರಣಮಲ್ತು.
ವ್ಯಾಕರಣಮೇಕೆಂಬೆಯೇಂ ?
ಮರೆವುದಕೆ ಕಲ್ತು !

ಮೊಸರಿನ ಹುಡುಗಿ

ಮೊಸರಿಗಿಂತ ಮನೋಹರ ಅವಳ ಕೂಗು ;
'ಮೊಸರು ಬೇಕೆ ಮೊಸರು' ಎಂಬ ದನಿಯು ಬಾಗು !
'ಮೊಸರು ಬೇಡ' ಎಂಬರುಂಟೆ ? ಕರೆ, ಹೋಗು :
ಕೊರಳ ಸವಿಗೆ ಮೊಸರು ಕೊಂಡು ಧನ್ಯನಾಗು !

"ಕುವೆಂಪು"

ಯಜ್ಞ[1]

ಇಳೆಯಲೇಎದೆ ಹಾಳು ಬಾಳಿಗೆ
ಗೋಳ ಸುಳಿಯಲಿ ಹೊಕ್ಕ ಬಾಳಿಗೆ
ಧರೆಯೆ ಅವರಿಗೆ ನರಕವು
ನರಕವವರಿಗೆ ನಾಕವು.

೧

"ಲೋ . . . ಮಗಾ . . . ಲೋ ಮಗಾ. . ."

"ಏನಮ್ಮಾ . . ."

"ಮಗಾ . . . ನಂಗೇಕೋ ಇವತ್ತು ತಲೆ ಶೂಲಿ . . . ಅಮ್ಮಾವ್ರ ಮನೆಗ್ಹೋಗಿ . . . ನಾ . . . ಬರೋಕಾಗಲ್ಲಾಂತ . . . ಯೇಳ್ಬಿಟ್ಟು . . . ಬಾಪ್ಪ . . ."

"ಅಂಗೇ ಆಗ್ಲಮ್ಮ . . . ನೀ ಮಲಕ್ಕೋ . . . ನಾ ಓಗಿ ಬರ್‍ತೀನಿ . . ."

"ಓಗ್ಬಿಟ್ಟು . . . ಬಿರ್‍ನೆ ಬಾಪ್ಪ . . . ಜಡಿ ಬೇರೆ ಯಿಡದೈತೆ"

"ಏನೂ . . . ಪರಾವಿಕಿಲ್ಲ . . . ನೀ ಮಲಕ್ಕೊ . . . ನಾ ಜಲ್ದಿ ಬಂದು ಬಿಡ್ತಿವ್ನಿ . . ."

ಕಾಳಿಯ ಮಾತಿನಂತೆ ಜವರ ಎದ್ದು ಹೊರಟ.

ಕಾಳಿ ಪುನಃ "ಅಯ್ಯೋ . . . ದ್ಯಾವ್ರೆ . . . ಎಂತ ಕಷ್ಟ ಕೊಟ್ಯಪ್ಪ . . . ಜವರ ಒಬ್ನೇ . . . ಅಷ್ಟು ದೂರ . . . ಓಗಬೇಕಾಗ್ಬಂತೇ . . . ನಾರಾಯಣಾ . . . ಒಂದಿನಾನಾದ್ರೂ ಓಗ್ದೇ ಇರೋಂಗಿಲ್ಲ . . . ಹು . . ಹು . . . ಅಮ್ಮಾವ್ರು ಸುಮ್ಕೆ . . . ಬಿಟ್ಟಾರ್‍ಯೇ . . ." ಎಂದು ನಿಟ್ಟುಸಿರೆಳೆದಳು.

ಅವಳ ಸಂಕಟ ಅಲ್ಲಿಗೇ ಕೊನೆಗಾಣಲಿಲ್ಲ. ಅವಳ ಯಜಮಾನಿ—ಕಪಿಲಾ ಬಾಯಿ—ತನ್ನ ಮೇಲೆ ರೇಗಾಡಿದ ಯಾವ ಯಾವ ಸಂದರ್ಭಗಳೋ ನೆನಪಾದವು.

ಕಾಳಿಗೆ ಮುಸುರೆ ಪಾತ್ರೆಯೊಂದಿಗೆ ಒಂದಿಷ್ಟು ಅನ್ನ, ಸಾರು ಸಿಕ್ಕುತ್ತದೆ ಎಂದು ಚಪಲ. ಆದರೆ ಅದಕ್ಕೆ ಅನೇಕ ವೇಳೆ ಸೊನ್ನೆ ಬೀಳುತ್ತಿತ್ತು. ಇಲ್ಲವೇ ಹಳಸಿದ ಸಾರೋ ಒಣಗಿ ಗಂಟು ಕಟ್ಟಿದ್ದ ಅನ್ನವೋ ಸಿಗುತ್ತಿತ್ತು. ಏನೂ ಇಲ್ಲದ

---

[1] ೧೯೪೦ ರಲ್ಲಿ ನಡೆದ ಮಹಾರಾಜಾ ಕಾಲೇಜಿನ ಕರ್ಣಾಟಕ ಸಂಘದ ವಾರ್ಷಿಕೋತ್ಸವದ ಸಂದರ್ಭದಲ್ಲಿ ಬಹುಮಾನ ಬಂದ ಕಥೆ.

ದಿನವೇ ಹೆಚ್ಚು. ಒಂದು ದಿನ, ಅವಳಿಗೆ ವಿಪರೀತ ಸಂಕಟವಾಗಿ "ಏನ್ರಮ್ಮಾ . . . ನಿತ್ಯ . . . ಬರೀ ಪಾತ್ರೆ . . ." ಎಂದುಬಿಟ್ಟಳು. ಅಂದು ಅಮ್ಮಾವರು "ಏನೇ . . . ಅದು . . . ನಾನೇನು ನಿನಗೆ ನಿತ್ಯ ಅನ್ನ ಹಾಕ್ತೀನಿ ಅಂತ ಮಾತಾಡಿದ್ದೆನೋ . . . ಸಂಬಳ ಕೊಡೋದಲ್ಲದೆ ಅನ್ನ ಬೇರೆ ಹಾಕಬೇಕೋ . . . ಚೆನ್ನಾಗಿದೆ . . . ಹೀಗೆಲ್ಲ ಆದರೆ ಆಗೋದಿಲ್ಲ. ಇಷ್ಟ ಇದ್ದರೆ ಇರು; ಕಷ್ಟವಾದರೆ ಬಿಡು. ನೀನಲ್ಲದಿದ್ರೆ ಮತ್ತೊಬ್ಬರು ಬರ್ತಾರೆ . . . ನೀನೇನು ಮಾಡೀಯೆ . . . ನಮ್ಮನೆ ಬೇಳೆ ಚರಟ ನಿನ್ನ ಹಾಗಾಡಿಸುತ್ತೆ" ಎಂದು ಒಂದೇ ಸಮನಾಗಿ ಪಟಪಟನೆ ಬೈದರು.

ಕಾಳಿ ತೆಪ್ಪಗಾದಳು.

ಇಂಥ ಪ್ರಸಂಗಗಳು ಎಷ್ಟೋ ಲೆಕ್ಕವಿಲ್ಲ.

ಆದರೆ ಕಾಳಿ ಇವುಗಳಲ್ಲಿ ಯಾವುದನ್ನೂ ಲಕ್ಷಿಸಲಿಲ್ಲ. ತನ್ನ ಮಗ ಎಂದಾದರೊಂದು ದಿನ ಮುಂದೆ ಬಂದಾನೆಂದು ಅವಳ ಹಂಬಲು. ಅವನಿಗಾಗಿ ತಾನು ಬದುಕಿದ್ದಳು. ಅವನಿಗಾಗಿ ಎಲ್ಲ ಕಷ್ಟ ನಷ್ಟಗಳನ್ನೂ, ಮಾನ ಅವಮಾನಗಳನ್ನೂ ಸಹಿಸಿಕೊಂಡಿದ್ದಳು.

೨

ಮಳೆಯ ಹನಿ ಬೀಳುತ್ತಲೇ ಇತ್ತು. ಜವರ ನೆನೆಯುತ್ತಲೇ ಕಪಿಲಾಬಾಯಿಯ ಮನೆಗೆ ಬಂದ. ಆ ವೇಳೆಗಾಗಲೇ ಅವರು ಎದ್ದು ಗೋವಿನ ಕಥೆಯನ್ನು ಹೇಳುತ್ತಿದ್ದರು. ಜವರ, "ಅಮ್ಮಾ. . . ಅಮ್ಮಾ. . ." ಎಂದು ಕೂಗಿ ಬಾಗಿಲು ತಟ್ಟಿದ.

ಅಮ್ಮಾವರು "ಬಂದೆ, ಇರೇ. . . ಬಂದೆಯಾ. . . ಈಗ ಬೆಳಗಾಯಿತೋ" ಎಂದು ಒಳಗಿನಿಂದಲೇ ಆರ್ಭಟಿಸುತ್ತ ಬಂದು ಬಾಗಿಲು ತೆಗೆದರು.

ಬಾಗಿಲು ತೆಗೆದುದೇ ತಡ ಜವರನನ್ನು ಕಂಡು,

"ನೀನೇಕೆ ಬಂದೆಯೋ. . . ಎಲ್ಲೋ. . . ಅವಳು ?"

"ನಮ್ಮ. . . ಅಮ್ಮ. . . ಇವತ್ತು. . . ಕೆಲ್ಸ. . . ಕ್ಕೆ. . . ಬರೋ. . . ಕಿಲ್ಲಂತೆ. . ."

"ಯಾಕೋ. . . ಕಾಣೆ. ಅವಳು ಬರಲ್ಲಂತ ಹೇಳೋಕ್ಕೆ ಬಂದ್ಯಾ ನೀನು ? ಅವಳಿಗೇನು ಬಂದಿದೆ ?"

"ತಲೆ. . . ಶೂಲಿಯಂ. . . ತೆ."

"ಸರಿ. . . ಸರಿ. . . ಇದ್ದೇ ಇದೆ . . . ಅವಳ ಗೋಳು. . . ನಾಲ್ಕು ನಾಲ್ಕು ದಿನಕ್ಕು. . . ಹಿಂಗಾದ್ರೆ ಬ್ರಾಹ್ಮಣರ ಮನೆ ಕೆಲ್ಸ ಆದ ಹಾಗೇ ಇದೆ."

ಜವರ ಮಾತಾಡಲಿಲ್ಲ.

"ಹಾಳಾಗಿ ಹೋಗಲಿ. ನಿನಗೇನು ರೋಗ ಇಲ್ಲ ತಾನೆ ?"

ಜವರ ಬೆಪ್ಪನಗೆ ನಕ್ಕು ಹಲ್ಲು ಬಿಟ್ಟನು.

"ಅದೋ! ಅಲ್ಲಿ ತೊಟ್ಟಿ ಇದೆ. ಅದರಲ್ಲಿ ನೀರು ಹಿಡಿದುಕೊಂಡು, ಬಾಗಿಲ ಮುಂದೆ ಒಂದೆರಡು ತಂಬಿಗೆ ಸಗಣಿ ನೀರು ಹಾಕು. ಆ ಮೇಲೆ ಒಂದೆರಡು ಪಾತ್ರೆ ಇದೆ, ಅದನ್ನು ತೊಳಿಯುವಂತೆ. ರಾಯರು ಎದ್ದ ಮೇಲೆ ಕಾಫಿ ಪಾತ್ರೆ ಹಾಕ್ತೀನಿ. ಅದನ್ನೂ ತೊಳೆದು ಮನೆಗೆ ಹೋಗುವಿಯಂತೆ. ಈವಾಗ ಬಂದು ಹೇಳಿದ್ರೆ ನಾನ್ಯಾರನ್ನ ಕರಕೊಂಡು ಬರಲಿ?"

ಜವರನಿಗೆ ಏನು ಹೇಳುವುದಕ್ಕೂ ಬಾಯಿ ಬರಲಿಲ್ಲ. ಹಾಗೂ ಮನೆಗೆ ಹೋದರೆ ಏನು ಪ್ರಯೋಜನ, ಅಮ್ಮನಿಗಂತೂ ಬರುವುದಕ್ಕಾಗಲ್ಲ, ನಾನೇ ನನಗೆ ಬಂದ ಹಾಗೆ ಕೆಲಸ ಮಾಡ್ತೀನಿ ಎಂದುಕೊಂಡ.

ಮಳೆಯೇನೋ ನಿಂತಿರಲಿಲ್ಲ. ಹಾಗೇ ಗುಡಿಸಿ ಸಾರಿಸಿದ. ಅನಂತರ ಅಮ್ಮಾವರು ಮುಸುರೆ ಪಾತ್ರೆ ಹಾಕಿದರು. ಅವನ ಅದೃಷ್ಟವಶಾತ್ ಒಂದೆರಡು ಅನ್ನದ ಗಡ್ಡೆಗಳೂ, ಒಂದು ಸವಟು ಸಾರೂ ಮಿಕ್ಕಿತ್ತು. ಅವನ್ನೆಲ್ಲ, ತಾನು ಹೊದ್ದುಕೊಂಡು ಬಂದಿದ್ದ ಒದ್ದೆ ಬಟ್ಟೆಯಲ್ಲಿಂಸೇ ಒಂದು ಬಾಳೆಲೆ ಹರವಿ ಕಟ್ಟಿದ. ಹಾಗೂ ಹೀಗೂ ತನಗೆ ಬಂದಂತೆ ಪಾತ್ರೆಯನ್ನು ಬೆಳಗಿದ.

ಇಷ್ಟು ಹೊತ್ತಿಗೆ ರಾಯರು ಎದ್ದು, ಕಾಫಿ ಕುಡಿದು ಬಟ್ಟಲನ್ನು ಹೊರಗೆ ಹಾಕಿದರು.

ಕೂಡಲೆ ಜವರ "ಅಮ್ಮಾ . . . ಒಂದೊಸಿ ಉಣಿಸೆ ಅಣ್ಣು ಕೊಡ್ರಮ್ಮ" ಎಂದು, ಕಾಫಿ ಪಾತ್ರೆಗಳನ್ನು ಜೋಡಿಸಿಕೊಂಡ.

ರಾಯರು "ಏನೋ! ನೀನು ಬಂದಿದ್ದಿ! ನಿಮ್ಮ ಅಮ್ಮ ಎಲ್ಲೊ?" ಎಂದು ಆಶ್ಚರ್ಯದಿಂದ ಕೇಳಿದರು.

"ನಮ್ಮ . . . ಅ . . . ಮ್ಮ . . .ನಿಗೆ ಮೈ . . . ಸರಿಯಿಲ್ಲ . . . ಬುದ್ಧಿ."

"ನಿನ್ನ ಕಳುಹಿಸಿದಳೊ ಕೆಲಸಕ್ಕೆ?"

"ಇಲ್ಲ . . . ಹೇ . . . ಳಿ . . . ಬಾ. ಅಂ . . . ದಳು."

"ಮತ್ತೆ . . .!?"

"ಅ . . . ವ್ಮಾ . . . ವ್ರು . . . ಯೇ . . . ಳಿ . . . ದ್ರು."

ಈ ವೇಳೆಗೆ ಕಪಿಲಾಬಾಯಿ ಹುಣಿಸೆ ಹಣ್ಣು ತೆಗೆದುಕೊಂಡು ಬಂದರು.

"ಏನೇ . . . ಈ ಮಗೂನ ನೀನು ಕೆಲಸಮಾಡು ಅಂತ ಹೇಳ್ದಿಯೇನೆ?"

"ಹೌದು, ಹೇಳಿದೆ, ತಪ್ಪೇನ್ನಂತು . . ."

"ಪಾಪ . . . ಇನ್ನೂ ಹಸುಳೆ . . . ಅವನ ಕೈಲಿ ಕೆಲಸ ಮಾಡಿಸೋದೆ?"

"ಅಲ್ಲವೆ ಮತ್ತೆ ! ಬೆಳಗಾದರೆ ಒಂಬತ್ತು ತುಂಬುತ್ತೆ. ಹಸುಳೆಯಂತೆ ಹಸುಳೆ ! ನೋಡಲಿಲ್ಲ."

"ಅಷ್ಟೇ ತಾನೆ. ಒಂಬತ್ತು ವರ್ಷ ಆದಾಕ್ಷಣ ಏನು. ಈ ಚಳಿ, ಮಳೆ, ಗಾಳೀಲಿ, ಅವನೂ ಹೆಣಗಬೇಕೆ ?"

"ಸರಿ ಸರಿ . . . ನಿಮಗಷ್ಟು ಅಭಿಮಾನ ಕಿತ್ತು ತಿನ್ನುತ್ತಿದ್ದರೆ ಅವನ್ನ ಒಳಗೆ ಕರಸಿ, ಹಾಸಿಗೆ ಹಾಸಿ, ಕಂಬಳಿ ಹೊದಿಸಿ ಸುಧಾರಿಸಿ, ನಾನು ಮನೆ ಕಸ ಮುಸುರೆ ಯೆಲ್ಲಾ ಮಾಡ್ತೀನಿ."

"ಹಾಗಲ್ಲವೇ. . ."

"ಹಾಗಲ್ಲದೆ ಹೋದರೆ ಹೇಗೊ ! ಅವನ್ನ ಹುಟ್ಟುತ್ತಲೇ ಸಿಂಹಾಸನದಲ್ಲಿ ಕೂಡಿಸಿ ಸುಪ್ಪತ್ತಿಗೆಯಲ್ಲಿ ಮಲಗಿಸ್ತಾರೇಸೋ. . . ಅವನ ಜಾತಿ ಯಾವುದೋ ಕಾಣರು. ಇವತ್ತು ಮುಸುರೆ ತಿಕ್ಕಿದರೆ ನಾಳೆ ಮಿರ್ಷ್ಟ ತಿಕ್ತಾನೆ. ಎಂದಿಗಾದರೂ ತಪ್ಪಿದ್ದಲ್ಲ, ಊಳಿಗ."

ಕಪಿಲಾಬಾಯಿಯ ಬಾಯಿ ಜೋರಾಯಿತು. ರಾಯರು ಒಳಗೆ ಹೊರಟು ಹೋದರು. ಜವರ ಕೆಲಸಕ್ಕೆ ಹೊರಟ.

ಕೆಲಸವೆಲ್ಲ ಮುಗಿಯುವ ಹೊತ್ತಿಗೆ ಒಂಬತ್ತು ಒಂಬತ್ತೂವರೆಯಾಯಿತು.

೩

ಮುಂಜಾನೆಯೆ ಎದ್ದು ಹೊರಟ ಜವರ ಹೊತ್ತೇರಿದರೂ ಬರದೇ ಇದ್ದುದನ್ನು ಕಂಡು, ಚಾಪೆಯ ಮೇಲೆ ನರಳುತ್ತಿದ್ದ ಕಾಳಿಯ ಕರುಳು ಮರುಗುತ್ತಿತ್ತು. ಹಾಗೆಯೆ ಏಳಲಾರದೆ ಎದ್ದು, ಗುಡಿಸಿಲ ಬಾಗಿಲನ್ನು ಓರೆ ಮಾಡಿ ಹೊರಗೆ ನೋಡಿದಳು. ಸ್ವಲ್ಪ ದೂರದಲ್ಲಿಯೆ ಅವನು ಬರುತ್ತಿದ್ದುದು ಕಂಡಿತು. ಜವರನಿಗೂ ತಾಯಿ ತನ್ನನ್ನೇ ಎದುರು ನೋಡುತ್ತಿರುವುದು ಕಂಡಿತು. ಕೂಡಲೇ ನಡೆದು ಬರುತ್ತಿದ್ದವನು ಓಡಿ ಓಡಿ ತಾಯಿಯ ಬಳಿಗೆ ಬಂದ.

ಬಂದವನೇ, ತಾನು ತಂದಿದ್ದ ಅನ್ನದ ಗಂಟನ್ನು ಬಿಚ್ಚಿ, ತಾಯಿಯ ಮುಂದೆ ಹರವಿ "ಅಮ್ಮಾ . . . ಇಕೋ . . . ತಿನ್ನಮ್ಮಾ . . . ತಿನ್ನು . . . ನಿತ್ಯ ನೀನು ನಂಗೆ ತರ್ತಿದ್ದಿ . . . ಇವತ್ತು ನಾನು ನಿಂಗೆ ತಂದಿವ್ನಿ . . . ತಿನ್ನಮ್ಮಾ . . . ತಿನ್ನು . . ." ಎಂದು ಹೆಮ್ಮೆಯಿಂದ ನಿಂತಿದ್ದ.

ಕಾಳಿ ಅನ್ನದ ಕಡೆ ನೋಡದೆ ಮಗನ ಮೈದಡವಿ, ಒದ್ದೆಯಾಗಿದ್ದುದನ್ನು ಕಂಡು ಕೇಳಿದಳು "ಮಗಾ . . . ಯಾಕೆ ಬರೋಕಿಷ್ಟೊತ್ತಾಯ್ತು . . . ನಿಂಗೆ ಅನ್ನ ಯಾರ್ಕೊಟ್ರು ?"

ಜವರ ನಗುನಗುತ್ತಾ "ನಾ ತಂದ್ನಮ್ಮಾ . . . ನಾ ದುಡ್ಡು ತಂದೆ" ಎಂದ.

"ಮಗಾ . . . ನಾ ನಿಂಗೆ ಬರೋಕಿಲ್ಲಾಂತ ಯೇಳಿಬಾ ಅಂದ್ನೋ, ಇಲ್ಲ, ಕೆಲ್ಸ ಮಾಡ್ಬುಟ್ಟು ಬಾ ಅಂದ್ನೋ?"

"ನಾ ಏನೋ ನೀ ಯೇಳ್ದಂಗೇ ಯೇಳ್ದ್ನಮ್ಮ . . . ಆದ್ರೆ ಅಮ್ಮಾವ್ರು ಸುಮ್ಕಿರಲಿಲ್ಲ. ನನ್ನೇ ಒಸಿ ಮಾಡೂ ಅಂದ್ರು. ಅದಕ್ಕೆ ನಾನೇ ಮಾಡ್ದೆ."

ಅನಂತರ ಜವರ ತಾನು ಮಾಡಿದ ಕೆಲಸವನ್ನೆಲ್ಲ ಹೇಳಿದ.

ಕಾಳಿಗೆ ಕರುಳು ಹಿಂಡಿದಂತಾಯಿತು. ಬಂದ ದುಃಖವನ್ನು ತೋರ್ಪಡಿಸದೆ ಅದುಮಿಕೊಂಡಳು. ಮಗನ ಬಲವಂತ ಹೆಚ್ಚಾಗಲು ಅವನೊಂದಿಗೇ ಊಟಕ್ಕೆ ಕುಳಿತಳು.

ನಡುವೆ, ಜವರ "ಅಮ್ಮಾ . . . ನಾ ನಿನ್ನ ಒಂದ್ಕೇಳಬೇಕು ಅಂತಿದ್ದೀನಿ ಕೇಳ್ಲೇನಮ್ಮಾ" ಎಂದ.

"ಅದೇನ್ಮಗಾ?"

"ಏನೂ ಇಲ್ಲಾಮ್ಮ . . . ಅಮ್ಮಾವ್ರು ನಿನ್ನ ನಿತ್ಯ ಬೈತಾರಲ್ಲ ನಿಂಗೆ ನೋವಕ್ಕಿಲ್ವೇನಮ್ಮಾ?"

"ಅದ್ನ ನೀನೆಲ್ಕೇಳಿದ್ಯೋ ಮಗಾ?"

"ಇದೇನಮ್ಮ ಇಂಗಂತಿ. ನಾ ನಿತ್ಯ ನಿನ್ನ ಸಂಗ್ಡ ಬರೋಕಿಲ್ವಾ?"

"ಇಲ್ಲ ಮಗ . . . ನಮ್ಗದೇ ಆಸೀರ್ವಾದ ಕಾಣಪ್ಪ . . . ಅದ್ರಿಂದ ನಮ್ಗೇನೂ ಕೆಡಕಿಲ್ಲ."

ತನ್ನ ದುರ್ಗತಿ ಮಗನಿಗೂ ಗೊತ್ತಾಯಿತಲ್ಲ ಎಂದು ಕಾಳಿಗೆ ಬಹಳ ಸಂಕಟವಾಯಿತು.

ಮಾತಾಡದೆ ದುಃಖ ನುಂಗಿಕೊಳ್ಳುತಿದ್ದವಳನ್ನು ಕಂಡು ಜವರ ". . . ಅಮ್ಮಾ . . . ನಾವು ಯಾವ ಜಾತಿಯಮ್ಮಾ?" ಎಂದು ಮಾತೆತ್ತಿದ.

ಕಾಳಿ "ಯಾವ ಜಾತಿಯಾದ್ರೇನೇಳು ಕಂದ . . . ನಾಕರಲ್ಲಿ ನಾವೊಂದು" ಎಂದಳು.

"ಅಲ್ಲಾಮ್ಮಾ . . . ನಮ್ಜಾತಿ ಕಸ್ಬು ಯಾವ್ದು ಒಸಿ ಯೇಳು."

"ಅದ್ಕೇನ್ಬುಡು ಮಗಾ . . . ಯಾವುದ್ಬೇಕಾದ್ರೂ ಆಗ್ಬಹುದ್ದು . . . ನೀ ಓದಿ ಬುದ್ವಂತ್ನಾದ್ರೆ ಸರ್ಕಾರಿ ನೌಕರಿ ಸಿಗ್ತೆ, ಇಲ್ದೇವೋದ್ರೆ ಮಣ್ಹೊರಬೇಕಾಗ್ತೆ."

ಜವರನ ಮುಖದಲ್ಲಿ ಗೆಲುವಾಡಿತು.

ಕಳವಳದಿಂದ ಕಾಳಿ "ಇದೇನ್ಮಗಾ . . . ಇದ್ನೆಲ್ಲಾ ನಿಂಗ್ಯಾರು ಯೇಳಿದ್ರು?" ಎಂದಳು.

"ಯಾರೂ ಇಲ್ಲಾಮ್ಮ" ಎಂದು ಹೇಳಿ, ಅಮ್ಮಾವರೂ ರಾಯರೂ ಆಡಿದ ಪ್ರತಿಯೊಂದು ಮಾತನ್ನೂ ತಿಳಿಸಿದ.

ಕಾಳಿಯ ಹೃದಯ ಕಲಕಿತು. ಮಗನನ್ನು ಯಾಕಾದರೂ ಕಳುಹಿಸಿದೆನೋ ಎಂದುಕೊಂಡಳು.

* * * * *

ಅದೇ ದಿನ ರಾತ್ರಿ. ಸುಮಾರು ಒಂದು ಒಂದೂವರೆ ಇರಬಹುದು. ಕಾಳಿ ನರಳುತ್ತಲೇ ಇದ್ದಳು. ಮಧ್ಯೆ ಮಧ್ಯೆ ಜವರನ ಮಾತುಗಳು ನೆನಪಾಗಿ ಸಹಿಸಲಾರದಷ್ಟು ಸಂಕಟವಾಗುತ್ತಿತ್ತು. ಜವರನಿಗಾದರೋ ಗಾಢನಿದ್ರೆ. ಎಳೆತನದ ಲಕ್ಷಣದೊಂದಿಗೆ, ಆ ದಿನ ಶಕ್ತಿ ಮೀರಿ ದುಡಿದ ಆಯಾಸ ಬೇರೆ.

ಇದ್ದಕ್ಕಿದ್ದಂತೆ ಅವನು ಚೀರಿ ಕಣ್ತೆರೆದ.

ಕಾಳಿ ಬೆಚ್ಚಿ ಬಿದ್ದು, ಮಗನ ಮೈದಡವಿ "ಮಗಾ . . . ಮಗಾ . . . ಯಾಕ್ಲಾ ?" ಎಂದಳು.

ಜವರ ಎದ್ದು ಕೂತು, ಅಳುತ್ತಾ, ಅಮ್ಮನನ್ನು ಬಿಗಿಯಾಗಿ ಅಪ್ಪಿಕೊಂಡು "ಅಮ್ಮಾ . . . ಅಮ್ಮಾ . . . ಇದ್ದೀಯೇನಮ್ಮಾ . . ." ಎಂದು ಹುಚ್ಚು ಹುಚ್ಚಾಗಿ ಮಾತಾಡಲು ಮೊದಲು ಮಾಡಿದ.

ಕಾಳಿಗೆ ಬಹಳ ಭಯವಾಯಿತು.

"ಮಗಾ . . . ಇದ್ಯಾಕಿಂಗೆ ಮಾತಾಡ್ತಿ ?"

"ಅಮ್ಮಾ . . . ಇನ್ಮೇಲೆ . . . ಅಮ್ಮಾವ್ರ ಮನೆಗೆ ನೀ ಕೆಲಸಕ್ಕೆ ಓಗಬೇಡಮ್ಮ."

"ಇದ್ಯಾಕ್ಮಗಾ ಇಂಗಾಡ್ತಿ . . . ಸುಮ್ಕೆ ಮಲಕ್ಕೊ."

"ಇಲ್ಲಮ್ಮ . . . ನೀ ಅವರ್ಮನ್ಗೆ ಓದಂಗಾಯ್ತು. ನಿನ್ಕಂಡು ಅಮ್ಮಾವ್ರು ರೇಗಿದಂಗಿತ್ತು. ಅಂಗೇ ಕೈಲಿದ್ದ ಸೌಟು . ತೆ . ಗೆದು . . . ನಿನ್ನ . . . ಕಡೆ . . . ಬಿಸಾಕ್ದಂಗಾಯ್ತು . . . ಅದು . . . ನಿಂಗ್ತಗಲಿ . . . ರಕ್ತ . . . ಹರಿದಂಗಾ . . . ಯ್ತು . . . ಖಂಡಿ . . . ತ . ನೀನಿನ್ನು . . . ಓಗ . . . ಬೇಡಮ್ಮಾ . . ."

"ಅಂಗೇ ಆಗ್ಲಿ ಬುಡು, ಮಗಾ . . . ನಾ ಓಗೋಕಿಲ್ಲ. ನೀ ಕಂಡಿದ್ದು ಕನಸು . . . ನಿಜವಲ್ಲ . . . ಈಪಟ್ಟು ಮಲಕ್ಕೊ . . ."

ಜವರ ಸುಮ್ಮನಾದ.

ಕಾಳಿ ಕಣ್ಣೀರು ಕರೆಯುತ್ತ "ದ್ಯಾವ್ರೆ, ನಮ್ಮಂತಹಾ ಬಡಪಾಯಿಗಳಿಗೆ ನಿದ್ದೆಯಲ್ಲೂ ಸುಖವಿಲ್ವೇ . . . ಅಲ್ಲೂ ಕೆಟ್ಟ ಕನಸುಗಳೇ ?" ಎಂದುಕೊಂಡು ಬೇರೆ ಮಗ್ಗುಲಾದಳು.

೪

ಜವರ ಹಾಸಿಗೆ ಬಿಟ್ಟು ಮೇಲೆ ಏಳಲೇ ಇಲ್ಲ. ಚಳಿ, ಮಳೆ, ಗಾಳಿಯಲ್ಲಿ ನೆನ ದದ್ದು ಒಂದು ಕಡೆ; ಕೆಟ್ಟ ಕನಸ್ಸು ಕಂಡು ಬೆದರಿದ್ದು ಒಂದು ಕಡೆ, ಎರಡೂ ಸೇರಿತೊ ಏನೊ.

ಹಗಲ ಹೊತ್ತಿನಲ್ಲಿಯೇ . . . "ಅದೋ . . . ಅಮ್ಮಾ . . . ಅಮ್ಮಾವ್ರು ಬಂದ್ರು . . . ಬಂದ್ರು" ಎಂದು ಚಿಟ್ಟನೆ ಚೀರುವನು.

ಕಾಳಿಯನ್ನು ಒಂದು ನಿಮಿಷವಾದರೂ ಬಿಟ್ಟಿರಲಾರ. ಅವಳೂ ಕೆಲಸಕ್ಕೆ ಹೋಗಲೇ ಇಲ್ಲ. ದಿನ ದಿನಕ್ಕೂ ಮಗನ ಹಂಬಲು ಹೆಚ್ಚಾಯಿತು.

ಕಪಿಲಾಬಾಯಿಗಾದರೋ ಕಾಳಿಯ ಮೇಲೆ ವಿಪರೀತ ಸಿಟ್ಟೇರಿತ್ತು. ಅವಳು ಹೇಳದೆ ಕೇಳದೆ ಬಿಟ್ಟು ಬಿಟ್ಟಳಲ್ಲಾ ಎಂದು ಹಲ್ಲು ಹಲ್ಲು ಕಡಿಯುತ್ತಿದ್ದರು. "ಹೇಗಿದ್ರೂ ಅವಳ ಅರ್ಧ ತಿಂಗಳ ಸಂಬಳ ಬಾಕಿ ಇದೆ. ಅದು ಕೇಳಕ್ಕೆ ಬರ್ಲಿ. ಗ್ರಹಚಾರ ಬಿಡಿಸಿ ಬಿಡ್ತೀನಿ" ಎಂದು ಅವಳು ಬರುವ ದಿನವನ್ನೇ ಎದುರು ನೋಡು ತ್ತಿದ್ದರು.

ಕಾಳಿಗಾದರೂ ಮನೆಗೆಲಸ ಬಿಡುವ ಯೋಚನೆ ಕನಸಿನಲ್ಲಿಯೂ ಹೊಳೆದಿರಲಿಲ್ಲ. ಮಗನ ಮೇಲಣ ಮಮತೆ ಅವಳನ್ನು ಅಗಲಗೊಡಲಿಲ್ಲ. ಅಷ್ಟೆ.

ಇದು ಕಪಿಲಾಬಾಯಿಗೇನು ಗೊತ್ತು!

* * * * *

ಆ ದಿನ ಗೌರಿಹಬ್ಬ. ಹಳ್ಳಿ ಹಳ್ಳಿಯೇ ಸಂಭ್ರಮದಲ್ಲಿತ್ತು. ಕಾಳಿಗಾದರೋ ಆ ಭಾಗ್ಯವಿರಲಿಲ್ಲ. ಮಗನ ಬಾಯಿಲೆ ಗುಣಮುಖವಾಗಲಿಲ್ಲ. ಗುಣಮುಖವಾಗುವ ಚಿಹ್ನೆಯೂ ಕಂಡುಬರಲಿಲ್ಲ. ಅವಳ ಸಂಕಟ ಮಿತಿಮೀರಿತು. ದುಃಖ ತುಂಬಿ ಬಂತು. ಅವಳಿಗೆ ಅರಿವಾಗದಂತೆಯೇ ಒಂದೆರಡು ಕಂಬನಿ ಉರುಳಿದವು. ಇದು ಜವರನ ದೃಷ್ಟಿಗೆ ಬಿತ್ತು. ಕೂಡಲೇ ಅವನು "ಯಾಕಮ್ಮಾ ಅಳ್ತಿ . . ." ಎಂದು ಕೇಳೇಬಿಟ್ಟ.

ಕಾಳಿ, ಸಂಕಟ ತಾಳಲಾರದೆ "ಯಾಕೂ ಇಲ್ಲಾ ಮಗ . . . ಇವತ್ತು ಹಬ್ಬ" ಎಂದು ಬಾಯಿತಪ್ಪಿ ಹೇಳಿಬಿಟ್ಟಳು.

ಆಗ ಜವರ "ಏನಮ್ಮಾ . . . ಈವತ್ತು ಹಬ್ಬವೇ? . . . ಅಂಗಾದ್ರೆ . . . ಅಮ್ಮಾವ್ರ ಮನೆಗ್ಹೋಗಿ ಒಂದೊಸಿ ಪಾಯ್ಸ ತರ್ತಾ ಅಮ್ಮಾ" ಎಂದು ಬೇಡಿದ.

ಕಾಳಿಗೆ ಏನುಮಾಡಬೇಕೋ ಗೊತ್ತಾಗಲಿಲ್ಲ. ಅದುವರೆಗೂ, ಅಮ್ಮಾವರ ಮನೆಗೆ ತನ್ನನ್ನು ಹೋಗಗೊಡದಿದ್ದವನು, ಅಂದು ಒಂದು ತೊಟ್ಟು ಪಾಯಸ ಕ್ಕೋಸ್ಕರ ಬಿಟ್ಟುಕೊಡುತ್ತಿರುವುದನ್ನು ಕಂಡು ಬಹಳ ವ್ಯಥೆಪಟ್ಟಳು. ತನ್ನ ದೌರ್ಭಾಗ್ಯ

ಸಂಪೂರ್ಣವಾಗಿ ಮನಸ್ಸಿಗೆ ಬಂತು. ಮಗನನ್ನು ಸಮಾಧಾನಮಾಡಿ "ಅಂಗೇ ಆಗ್ಲಿ ಮಗಾ. ನಾ ಓಗಿ ತರ್‍ತೀನಿ" ಎಂದು ಹೊರಟಳು.

ದಾರಿಯಲ್ಲಿ ನಾನಾ ಆಲೋಚನೆಗಳು ಬರಲಾರಂಭಿಸಿದವು. ಅಮ್ಮಾವರು ಇನ್ನು ಏನೆನ್ನುವರೋ? ತನಗಾಗಿ ಇನ್ನು ಏನೇನು ಬೈಗಳು ಕಾದಿವೆಯೋ?

ಮನೆಯ ಬಳಿ ಬಂದಳು. ಅಮ್ಮಾವರು ಒಳಗಿದ್ದರು. ಕಾಳಿ ಮೆಲ್ಲಗೆ "ಅಮ್ಮಾ . . ." ಎಂದು ಕೂಗಿದಳು.

ತಕ್ಷಣವೇ ಬಂದರು ಕಪಿಲಾಬಾಯಿ.

"ಏನೇ ಇದು . . . ಬಲು ಚೆನ್ನಾಗಿದೆ . . . ನೀನು ಹೀಗೆಲ್ಲ ಹೇಳದೆ ಕೇಳದೆ ಬಿಟ್ಟರೆ ನಮ್ಗೆ ಹೇಗೇ . . . ಗೊತ್ತಾಗಬೇಕು? . . . ಶ . . . ನಿ . . . ಡೆ . . ." ಎಂದು ಹಾವಿನಂತೆ ಕೆರಳಿದರು.

"ಇಲ್ಲಮ್ಮಾ . . . ನಾ ಕೆಲ್ಸ ಬಿಟ್ಟಿಲ್ಲಮ್ಮಾ . . . ಮಗಾ ಹೆದರ್‍ಕೊಂಡವ್ನೆ . . . ಅ . . . ದ . . . ಕ್ಕೋ . . . ಸ್ಕರ . . . ಬರ್‍ಲಿಲ್ಲ . . . ತಾಯಿ . . ."

"ಸರಿ ಸರಿ . . . ನೀ ಕೆಲ್ಸ ಬಿಟ್ಟ್ಯೋ ಇಲ್ವೋ ನಿಂಗೇನ್ಗೊತ್ತು . . . ಎಲ್ಲ ನಂಗೊತ್ತು . . . ನಾ ಬೇರೆ ಒಬ್ಬಳ್ನ ನೋಡಿಕೊಂಡಿದ್ದೀನಿ . . . ನೀನೇನೂ ಬರ ಬೇಕಾಗಿಲ್ಲ . . . ನಿನ್ನ ಬಾಕೀನ . . . ಫಸ್ಟ್ ಹುಟ್ಟುತಲೂ ಬಂದು ತಗೊಂಡು ಹೋಗು . . ."

"ಇಲ್ಲ . . . ತಾಯಿ . . . ಖಂಡಿ . . . ತ . . . ವಾಗಿ . . . ಮಗ ಎ . . . ದರ್‍ಕೊಂಡ . . . ವ್ನೆ."

"ಸರಿ ಸರಿ . . . ಅವನು ಯಾರ್‍ನ ನೋಡಿ ಹೆದರ್‍ಕೋಬೇಕು . . . ನಿನ್ನ ಮುಸುಡೀನ ನೋಡೇ ಹೆದರಿರ್‍ಬೇಕು . . . ಅದೆಂಗಾದ್ರೂ ಇರಲಿ . . . ನೀನು ಮಾರಾಯಳಾಗಿ ನಿನ್ನ ಮಗನ್ನ ನೋಡ್ಕೋ ಹೋಗು . . . ನಿಮ್ಮಂತವರ್‍ನ ನಂಬ್ಕೊಂಡರೆ ನಮ್ಕೆಲ್ಸಕ್ಕೆಲ್ಲಾ ಕಲ್ಲೇ . . . ಯಾಕೆ ಅಳ್ತಾ ನಿಂತೀಯ? ಹೋಗು!"

"ಏನೋ . . . ತಾಯಿ . . . ಬಡವಳು . . . ಹೊಟ್ಟೆ ಮೇಲೆ ಹೊಡೀ ಬೇಡಿ"

"ಏನೇ ಅದು ಇಲ್ಲದ್ದೆಲ್ಲಾ ಹರಟತಿ. ನಿನಗೆ ಬಡತನವಿದ್ರೆ ಭಗವಂತನ ಹತ್ತಿರ ಹೇಳ್ಕೋ ಹೋಗು . . . ನನ್ಮುಂದೆ ಹೇಳೇನು ಪ್ರಯೋಜನ!

ಕಾಳಿ ಬೆಪ್ಪಾದಳು.

"ಓಗ್ಲಿ . . . ಈ . . . ವೊತ್ತು ಹಬ್ಬ . . . ಈ ವೊತ್ತಿನ ಮುಸ್ರೆ ಆದ್ರೂ ಆಕಿ ತಾಯಿ . . . ಮಗ್ನ . . . ಬಾಯೆಲ್ಲಾ . . . ಒಣಗಿ ಓಗೈತೆ . . . ಒಸಿ ಪಾಯ್ಸಾನಾದ್ರೂ ತಕ್ಕೊಂಡೋಗಿ . . . ಕೊಡ್ತಿವ್ನಿ."

"ಓಹೋ, ಇದಕ್ಕೋ ಇಷ್ಟು ಮುತುವರ್ಜಿ. ಅದೆಲ್ಲಾ ಆಗೋದಿಲ್ಲ. ನಿನಗೆ ಹಾಕ್ಬಿಟ್ಟರೆ ನಿತ್ಯ ಬರೋಳಿಗೆ ನಾನೇನು ಉತ್ತರ ಕೊಡಲಿ."

"ಒಂದೊಸಿ . . . ಪಾಯ್ಸಾನಾದ್ರೂ . . . ಕೊಡಿ . . . ತಾಯಿ . . ."

"ಹೂ . . . ನಾನೇನು ಇಲ್ಲಿ ಊರೆಲ್ಲ ಹಂಚೋದಕ್ಕೆ ಪಾಯ್ಸ ಮಾಡಿಟ್ಕೊಂಡು ಕೂತಿದ್ದೀನಿ ಅಂತ ತಿಳಿಕೊಂಡ್ಯಾ . . . ನಿನ್ನ ಹತ್ತಿರ ಮಾತಾಡೋದಕ್ಕೆ ನಂಗೆ ಪುರುಸೊತ್ತಿಲ್ಲ . . . ನಡಿ . . . ಇನ್ನು."

ಕಾಳಿಗೆ ಮುಂದೆ ಏನೂ ತೋರಲಿಲ್ಲ. ಕೆಲಸಕ್ಕೆ ಕೆಲಸವಿಲ್ಲ; ಪಾಯಸಕ್ಕೆ ಪಾಯಸವಿಲ್ಲ.

ಈ ವೇಳೆಗೆ ಕೋಣೆಯಲ್ಲಿದ್ದ ರಾಯರು, ಈ ರಗಳೆ ರಾದ್ಧಾಂತವನ್ನು ಕೇಳಿ ಅಲ್ಲಿಗೆ ಬಂದರು. ಕಾಳಿ ಕಂಗೆಟ್ಟು ನಿಂತಿದ್ದಳು. ಯಜಮಾನಿ ಹುಬ್ಬುಗಂಟು ಹಾಕಿಕೊಂಡಿದ್ದಳು.

ಅವರು ತಮ್ಮಾಕೆಯನ್ನು ಕಂಡು "ಏನೇ ಇದು? ಹಬ್ಬದ ದಿನ ಇಷ್ಟು ಕೂಗಾಟ?"

"ನೋಡಿ ಮತ್ತೆ, ಹದಿನೈದು ದಿನದಿಂದ ಈ ಕಡೆ ತಲೆಹಾಕದಿದ್ದೋಳು ಇವತ್ತು ಬಂದು ಮೊಂಡಾಟ ಮಾಡ್ತಿದ್ದಾಳೆ. ಅವಳ ಮಗನಿಗೇನೋ ಖಾಯಿಲೆಯಂತೆ . . . ಒಂದು ತೊಟ್ಟು ಪಾಯಸ ಬೇಕಂತೆ."

"ಅಷ್ಟೇ ತಾನೆ. ಏನೋ ಬಡವರು, ಇದ್ದರೆ ಒಂದಿಷ್ಟು ಕೊಟ್ಟು ಕಳುಹಿಸಬಾರದೆ? ಇದಕ್ಕಿಷ್ಟು ಗದ್ದಲವೇ . . ."

"ಓಹೋ . . . ಇನ್ನು ನೀವು ಬೇರೆ ವಹಿಸಿಕೊಂಡು ಬಂದರೋ . . . ಬೆಳಗ್ಗೆ ಪಾಯ್ಸಕ್ಕೆ ಹಾಲು ಬೇಕು ಅಂದಾಗ ಈ ಔದಾರ್ಯ ಎಲ್ಲಿ ಹೋಗಿತ್ತೊ . . ."

ರಾಯರಿಗೂ ಸ್ವಲ್ಪ ದನಿ ಬದಲಾಯಿಸಿತು.

"ಅದೆಲ್ಲಾ ಹೋಗಲಿ . . . ಈಗ ಪಾಯ್ಸ ಇದೆಯೋ ಇಲ್ಲವೋ . . ."

"ಅದು ಹೇಗಿದ್ದೀತು ಅಂದ್ರೆ, ನೀವೇ ನೋಡಿ . . ." ಎಂದು ಸರಸರನೆ ಒಳಕ್ಕೆ ಹೋಗಿ ಪಾಯಸದ ಪಾತ್ರೆ ತಂದು ಅವರೆದುರಿಗೇ ಬಗ್ಗಿಸಿದರು. ಆಗ ಅದರಲ್ಲಿದ್ದ ಒಂದು ಚಟಾಕಿಸಷ್ಟು ಪಾಯಸ ಕೆಳಗೆ ಬಿತ್ತು.

ಇದನ್ನೇ ನೋಡುತ್ತಿದ್ದ ಕಾಳಿ "ಅಷ್ಟೇ ಸಾಕಿತ್ತಲ್ಲಮ್ಮಾ, ಜರ ಬಂದ ನಾಲ್ಗೇಗೇ ಇನ್ನೆಷ್ಟು ಬೇಕಿತ್ತು . . . ?" ಎಂದುಕೊಂಡಳು.

ರಾಯರು ಮುಂದೆ ಮಾತೆತ್ತಲಿಲ್ಲ.

ಯಜಮಾನಿಯವರೇ ಸಿಡುಕುತ್ತ "ನಿಮಗಷ್ಟು ಅಭಿಮಾನ ಉಕ್ಕಿ ಬಂದರೆ

ಅವಳಿಗೆ ಕೊಡಬೇಕಾದ ಬಾಕಿ ಎಂಟಾಣೇನ ಬಿಸಾಕಿ. ಇನ್ನೊಂದು ಸಲ ಅವಳ ಮೋರೆ ನೋಡೋದೇ ತಪ್ಪುತ್ತೆ" ಎಂದರು.

ರಾಯರಿಗೆ ನಿಜವಾಗಿಯೂ ಪರಮಾನಂದವಾಯಿತು.

"ಹಾಗೇ ಆಗಲಿ . . . ಹೋಟ್ಲೆಂದಾದ್ರೂ ತೆಗೆದುಕೊಂಡು ಹೋಗಿ ಕೊಡಲಿ" ಎನ್ನುತ್ತಾ ಒಳಗೆ ಹೋಗಿ, ಎಂಟಾಣೆ ತಂದು ಕೊಟ್ಟರು.

ಕಾಳಿಗೆ ಸ್ವಲ್ಪ ಉಸಿರು ಬಂದಂತಾಯಿತು. ಆದರೂ ಮುಂದೆ ಮಾತಾಡಲಿಲ್ಲ.

ಅನಿರೀಕ್ಷಿತವಾಗಿ ಬಂದ ಕಣ್ಣೀರನ್ನು ಒರಸಿಕೊಂಡು, "ಅಮ್ಮಾ ಓಗಿ . . . ಬರ್‍ತೀನಿ" ಎಂದಳು.

ಯಜಮಾನಿ ಉತ್ತರ ಕೊಡುವುದಕ್ಕೆ ಲಕ್ಷಿಸಲಿಲ್ಲ.

ಅಲ್ಲಿಂದ ಕಾಳಿ, ನೇರವಾಗಿ ಹೋಟಲಿಗೆ ಹೋಗಿ ಒಂದು ಲೋಟ ಕೀರು ತೆಗೆದುಕೊಂಡು ಗುಡಿಸಿಲಿಗೆ ಬಂದಳು.

ಜವರ ತಾಯಿಯನ್ನೇ ಎದುರು ನೋಡುತ್ತಿದ್ದ. ಅವಳು ಬಂದ ಕೂಡಲೇ, ಅದರಲ್ಲೂ ಅವಳ ಕೈ ಬಟ್ಟಲು ಕಂಡ ಕೂಡಲೇ, ಜ್ವರ ಬಂದ ಮುಖದಲ್ಲೂ ಕೂಡ ನಗೆ ಹರಿಯಿತು.

ಕಾಳಿ ಮಗನಿಗೆ ಕೀರು ಕೊಟ್ಟು "ಮಗಾ . . . ಇಕೋ ಪಾಯ್ಸ . . . ಕುಡಿ" ಎಂದು ಕುಡಿಸಿದಳು.

ಜವರ ಬಾಯಿ ಚಪ್ಪರಿಸುತ್ತ "ಏನಮ್ಮಾ . . . ಇದು . . . ಅಮ್ಮಾವ್ರು . . . ಕೊಟ್ಟಿ . . . ದ್ದೇ . . ." ಎಂದು ಕೇಳಿದ.

"ಹೌದು, ಮಗು" ಎಂದಳು.

"ಅಮ್ಮಾ . . . ಈ . . . ವೊ . . . ತ್ತು ಅಮ್ಮಾ . . . ವ್ರು . . . ನಿನ್ನ ಬೈಲಿಲ್ಲ?"

"ಇಲ್ಲಾ ಮ . . . ಗಾ . . . ನಿತ್ಯಾ ಯಾಕೆ ಬಯ್ತಾರೆ ಹೇಳು."

ಮಗನ ಮೈ ದಡವಿ "ಮಗಾ . . . ಮಲಕ್ಕೋ ಸುಸ್ತಾದೀತು" ಎಂದು ತಟ್ಟಿ ಮಲಗಿಸುತ್ತಾ ಮನಸ್ಸಿನಲ್ಲಿಯೇ "ಅಯ್ಯೋ ದ್ಯಾವ್ರೆ . . . ಇನ್ನೂ . . . ಜರ ಕಾಯ್ತಾ ಇದೆಯಲ್ಲಾ . . ." ಎಂದು ಹೆದರಿದಳು.

ಜವರ ಹಾಸಿಗೆ ಬಿಟ್ಟು ಏಳಲಿಲ್ಲ. ಬಂದ ಜ್ವರ ಬಿಡಲಿಲ್ಲ. ಮೂರು ಹೊತ್ತೂ ಪಕ್ಕದಲ್ಲಿ ಕುಳಿತಿರುತಿದ್ದ ಕಾಳಿ ಕೊರಗಿಯೇ ಕೃಶವಾದಳು.

ಜ

ರಾತ್ರಿ. ಸುತ್ತಲೂ ಬೆಳುದಿಂಗಳು ಚೆಲ್ಲಿತ್ತು. ಹಳ್ಳಿ ನಿಶ್ಶಬ್ದವಾಗಿತ್ತು.

ಕಾಳಿಯ ಜೋಪಡಿಯಿಂದ ಮಾತ್ರ ಕರುಳಿರಿಯುವ ಅಳು ಕೇಳಿ ಬರುತಿತ್ತು.

ಮಗನ ಹೆಣದ ಬಳಿ ಕುಳಿತ ಕಾಳಿ ಕಂಗೆಟ್ಟಳು. ತಲೆ ತಲೆ ಬಡಿದುಕೊಂಡಳು; ಅತ್ತಳು; ಹೊರಳಾಡಿದಳು. ಮಗನ ಸಾವಿನಿಂದಾದ ಶೂನ್ಯತೆಗೆ ಸೆಡೆತು ಅವಳ ನೊಂದ ಬಾಳು ಬದುಕಿಗೆ ಹೇಸಿತು.

ಗುಡಿಸಿಲ ಬಾಗಿಲನ್ನು ತೆರೆದು, ಬೆಳ್ದಿಂಗಳಿಗೆ ಇಳಿದಳು. ಮತ್ತೆ ಒಳಗೆ ಹೋದಳು. ಜವರನ ಮೂಗಿನ ಹತ್ತಿರ ಬೆರಳಿಟ್ಟು ನೋಡಿದಳು. ಗಟ್ಟಿ ಮನಸ್ಸು ಮಾಡಿಕೊಂಡು, ಹೊರಗೆ ಬಂದು, ಬಾಗಿಲನ್ನು ವಾರೆ ಮಾಡಿದಳು.

ಕೈ ನಡುಗಿತು. ಮೈ ಕಂಪಿಸಿತು. ತುಟಿ ಅಲುಗಿತು. ಸುತ್ತಲೂ "ಜುಂಯ್" ಎನ್ನುತಿತ್ತು.

ಕೆರೆಯ ಕಡೆಗೆ ನಡೆದಳು. ಹಿಂತಿರುಗಿ ನೋಡಲಿಲ್ಲ.

ಜಿ. ವರದರಾಜರಾವ್.

ಪವಾಡ ಸಾಕ್ಷಿ

ಆತನಿಹನೆಂಬುದಕೆ, ಆತನನು ನಂಬಲ್ಕೆ, ಪವಾಡಗಳನರಸುತಿಹೆಯೇನು ?

ಆವುದಿದೆ ಪವಾಡವಲ್ಲದುದು ? ಅದನೆನಗೆ ತೋರಿದಪೆಯಾ ನೀನು ?

ಕಲ್ಲು ರೊಟ್ಟಿಯಾದರೆ ಮಾತ್ರ ಅದು ಪವಾಡವೇನು ? ಕಲ್ಲು ಕಲ್ಲಾಗಿರುವುದೇ ಮಹತ್ತರ ಪವಾಡವಲ್ಲವೇನು ?

ನಿನ್ನ ಕಾಲಡಿಯಲ್ಲಿ ನೋಡಿದರೆ ಅಲ್ಲಿ ಬೆಳೆದು ನಳನಳಿಸುವೆಳವುಲ್ಲು ಬಹು ಕೋಟಿಯೋಜನಗಳಾಚೆಯಿಹ ನೀಹಾರಿಕೆಗೂ ಕಡಮೆಯ ಪವಾಡವಲ್ಲ !

ಒಂದು ಹಲ್ಲಿಯ ಕಣ್ಣು ಕಂಭವನೊಡೆದು ಬರುವ ನೃಸಿಂಹನಿಗೇನು ಕಡಮೆಯ ಪವಾಡವಲ್ಲ !

ನಿನ್ನೊಂದು ಕೈಬೆರಳ ಕುಣಿಕೆಯ ರಚನೆ ರವಿಯ ಸುತ್ತಲೂ ಸುತ್ತುತಿಹ ಗ್ರಹಗಳ ಚಲನೆಗಿಂತಲೇಂ ಕೀಳಪ್ಪ ಪವಾಡವಲ್ಲ !

ಒಂದಿರುಂಪೆಯ ಮುಂದೆ ಲಕ್ಷ ತಾರ್ಕಿಕರ ವಾದ ಹೊಲ್ಲ !

"ಹ್ರೀಂ"

ವೈಟಮಿನ್ನುಗಳು ಅಥವಾ ಆಹಾರ ಸತ್ವಗಳು

ಮುನ್ನುಡಿ

ಪ್ರಾಣಿಗಳ ಬೆಳವಣಿಗೆಗೂ ಆರೋಗ್ಯಪಾಲನೆಗೂ ಒಳ್ಳೆಯ ನೀರು, ಗಾಳಿ, ಬೆಳಕು, ಆಹಾರ ವಿಹಾರಗಳು ಆವಶ್ಯಕ. ಈ ಪ್ರಬಂಧದಲ್ಲಿ ಆಹಾರದ ವಿಚಾರವನ್ನು ಈಚಿನ ಹೊಸ ತಿಳಿವಳಿಕೆಯ ಆಧಾರದಿಂದ ಸಂಕ್ಷೇಪವಾಗಿ ತಿಳಿಸಿದೆ. ನಮ್ಮ ಆಹಾರದಲ್ಲಿ ಸ್ವಾಭಾವಿಕವಾಗಿ ಅನೇಕ ವಿಧವಾದ ಪದಾರ್ಥಗಳು ಸೇರಿರುತ್ತವೆ; ಅಕ್ಕಿ ಬೇಳೆ ಮುಂತಾದ ಧಾನ್ಯಗಳು, ಎಣ್ಣೆ ತುಪ್ಪ ಮೊದಲಾದ ಜಿಡ್ಡಿನ ಸಾಮಗ್ರಿಗಳು, ಸಕ್ಕರೆ, ಉಪ್ಪು, ಹಾಲು, ತರಕಾರಿ, ಹಣ್ಣು ಹಂಪಲುಗಳು ಇತ್ಯಾದಿ. ಇಂತಹ ಮಿಶ್ರವಾದ ಆಹಾರದಲ್ಲಿ ಬೆಳವಣಿಗೆಗೆ ಆವಶ್ಯಕವಾದ ಪದಾರ್ಥಗಳೆಲ್ಲವೂ ಇರುತ್ತವೆ.

ಹಿಂದಿನ ಕಾಲದಲ್ಲಿ ಸಮುದ್ರಯಾನದಿಂದ ಸಾವಿರಾರು ಮೈಲಿಗಳ ದೂರ ಪ್ರಯಾಣಮಾಡುತ್ತಿದ್ದ ನಾವಿಕರಿಗೆ ಹಡಗುಗಳಲ್ಲಿ ತೆಗೆದುಕೊಂಡು ಹೋಗಿದ್ದ ದವಸಧಾನ್ಯಗಳೇ ಮುಖ್ಯ ಆಹಾರವಾಗಿದ್ದುವು. ಹಣ್ಣು ಹಂಪಲುಗಳೂ ತರಕಾರಿಯೂ ದುರ್ಲಭವಾಗಿದ್ದುವು. ಹೀಗಾಗಿ ಅನೇಕ ನಾವಿಕರಿಗೆ ಸ್ಕರ್ವಿ ಎಂಬ ಜಾಡ್ಯ ವುಂಟಾಗುತ್ತಿತ್ತು. ಇದನ್ನು ರಕ್ತಪಿತ್ತರೋಗವೆಂದೂ ಕರೆಯುವರು. ಮಾಂಸ ಖಂಡಗಳಲ್ಲಿ ನೋವು, ದುರ್ಬಲತೆ, ರಕ್ತನಾಳಗಳು ಒಡೆದುಹೋಗುವುದು, ಮೂಳೆಗಳು ಪುಡಿಯಾಗುವುದು, ಹಲ್ಲುಗಳು ಸಡಿಲವಾಗಿ ಕೆಟ್ಟುಹೋಗುವುದು, ಮೈತೂಕವು ಕಡಮೆಯಾಗುತ್ತ ಆಹಾರದಲ್ಲಿ ಜುಗುಪ್ಸೆಯುಂಟಾಗುವುದು ಈ ಮೊದಲಾದವು ಆ ರೋಗದ ಲಕ್ಷಣಗಳು. ಕ್ರಾಮರ್ (Kramer) ಎಂಬ ವೈದ್ಯನು ಈಗ್ಗೆ ಸುಮಾರು ಇನ್ನೂರಿಪ್ಪತ್ತು ವರ್ಷಗಳ ಹಿಂದೆ, ೧೭೨೦ರಲ್ಲಿ, "ಸ್ಕರ್ವಿಯಿಂದ ನರಳುವ ರೋಗಿಯನ್ನು ಔಷಧವಾಗಲಿ ಶಸ್ತ್ರಚಿಕಿತ್ಸೆಯಾಗಲಿ ಗುಣಪಡಿಸಲಾರವು. ಆದರೆ ರೋಗಿಗೆ ದಿನಂಪ್ರತಿ ಹೇರಿಳೆ, ಕಿತ್ತಿಳೆ ಅಥವಾ ಮಾದಳದ ಹಣ್ಣಿನ ರಸವನ್ನು ಒಂದೆರಡು ಬಟ್ಟಲಿನಷ್ಟು ಕುಡಿಸಿದರೆ ಮತ್ತೆ ಯಾವ ಔಷಧವೂ ಬೇಕಿಲ್ಲದೆ ಸಂಪೂರ್ಣವಾಗಿ ಗುಣವಾಗುತ್ತದೆ." ಎಂಬುದಾಗಿ ತನ್ನ ಪುಸ್ತಕದಲ್ಲಿ ಬರೆದಿರುವನು. ಸುಮಾರು ಮೂವತ್ತು ವರ್ಷಗಳನಂತರ ಸ್ಯಾಲಿಸ್ಬರಿ ಎಂಬ ಹೆಸರಿನ ಹಡಗಿನಲ್ಲಿ ವೈದ್ಯನಾಗಿದ್ದ ಲಿಂಡ್ (Lind) ಎಂಬಾತನು ಒಂದುಸಲ ಸಮುದ್ರಯಾನ ಮಾಡುತ್ತಿದ್ದಾಗ ಹನ್ನೆರಡು ಜನ ನಾವಿಕರು ಸ್ಕರ್ವಿ ಜಾಡ್ಯದಿಂದ ಆತನ ಹಡಗಿನಲ್ಲಿ ನರಳುತ್ತಿದ್ದರು. ಎಲ್ಲರಿಗೂ ಕೊಡು

ವುದಕ್ಕೆ ಸಾಕಾದಷ್ಟು ಹೇರಿಳೆ ಕಿತ್ತಿಳೆ ಹಣ್ಣುಗಳು ಹಡಗಿನಲ್ಲಿರಲಿಲ್ಲ. ವೈದ್ಯನು ರೋಗಿಗಳೆಲ್ಲರಿಗೂ ತನಗೆ ತಿಳಿದ ಔಷಧಿಗಳನ್ನು ಕೊಟ್ಟು ಎಚ್ಚರಿಕೆಯಿಂದ ನೋಡಿ ಕೊಳ್ಳುತ್ತಿದ್ದನು. ಅವರಲ್ಲಿಬ್ಬರಿಗೆ ಮಾತ್ರ ಹೇರಿಳೆ ಹಣ್ಣುಗಳನ್ನು ಕೊಡುತ್ತಿದ್ದನು; ಇವರಿಗೆ ಕೆಲವು ದಿವಸಗಳಲ್ಲಿಯೇ ಗುಣವಾಯಿತು. ಉಳಿದವರಿಗೆ ರೋಗವು ಹರಿಯಲಿಲ್ಲ. ಕ್ರಿ.ಶ. ೧೭೫೭ ರಲ್ಲಿ ಈತನು ತನ್ನ ಪುಸ್ತಕದಲ್ಲಿ ಈ ವಿಚಾರವನ್ನು ಬರೆಯುತ್ತಾ ಹಣ್ಣುಗಳ ರಸದಲ್ಲಿ ಈ ಜಾಡ್ಯವನ್ನು ನಿವಾರಣೆ ಮಾಡುವ ಸತ್ವವಿದೆ ಯೆಂದೂ, ಹೇರಿಳೆ ಹಣ್ಣಿನ ರಸದಲ್ಲಿ ಈ ಗುಣವು ಹೆಚ್ಚು ದಿನ ನಿಲ್ಲುವುದರಿಂದ ಬಹು ಕಾಲದ ಸಮುದ್ರಯಾನಗಳಲ್ಲಿ ಈ ಹಣ್ಣನ್ನು ಉಪಯೋಗಿಸಲು ಸಾಧ್ಯವೆಂದೂ ತಿಳಿಸಿದನು. ಕೆಲವು ಆಹಾರ ಪದಾರ್ಥಗಳಲ್ಲಿರುವ ಇಂತಹ ಸತ್ವವನ್ನು ರಸಾಯನ ಶಾಸ್ತ್ರಜ್ಞರೂ ವೈದ್ಯರೂ ಬೇಗನೆ ನಿಷ್ಕರ್ಷೆಮಾಡಿ ಕಂಡುಹಿಡಿಯುವರೆಂದು ಬಡ್ (Budd) ಎಂಬಾತನು ಕ್ರಿ.ಶ. ೧೮೪೧ ರಲ್ಲಿ ಬರೆದನು. ಕ್ರಿ.ಶ. ೧೮೦೪ ರಲ್ಲಿಯೇ ಬ್ರಿಟಿಷ್ ಸರ್ಕಾರದವರು ತಮ್ಮ ನಾವೆಗಳಲ್ಲಿ ಕ್ಲಿಪ್ತವಾಗಿ ಹೇರಿಳೆಯ ಹಣ್ಣಿನ ರಸ ವನ್ನು ಕಾಲಕಾಲಕ್ಕೆ ನಾವಿಕರಿಗೆ ಕೊಡುತ್ತಿರಬೇಕೆಂದು ಆಜ್ಞೆಮಾಡಿದರು. ಅಲ್ಲಿಂದೀ ಚೆಗೆ ಅವರ ನಾವಿಕರಲ್ಲಿ ಈ ರೋಗದ ಸಂಭವವು ಅಪೂರ್ವವಾಯಿತು. ವರ್ಷಂಪ್ರತಿ ಸಾವಿರಾರು ಜನರು ಈ ರೋಗಕ್ಕೆ ತುತ್ತಾಗುತ್ತಿದ್ದ ಪರಿಸ್ಥಿತಿಯು ಸಂಪೂರ್ಣವಾಗಿ ತಪ್ಪಿತು. ಇಷ್ಟು ಸುಲಭವಾಗಿ ರೋಗವನ್ನು ತಡೆಗಟ್ಟಿದ್ದರೂ, ಇದಕ್ಕೆ ಸಂಬಂಧ ಪಟ್ಟ ಆಹಾರ ಸತ್ವದ ಪರಿಶೋಧನೆಯನ್ನು ನಡೆಸುವುದು ಸಮರ್ಪಕವಾಗಿ ಸಾಗಲಿಲ್ಲ.

ಜಪಾನೀಯರ ನಾವಿಕರಲ್ಲಿ "ಬೆರಿ ಬೆರಿ" ಎಂಬ ಜಾಡ್ಯವು ವ್ಯಾಪಿಸಿತ್ತು. ನರಗಳ ಕ್ಷೀಣತೆ, ಹೃದಯ ದೌರ್ಬಲ್ಯ, ಆಹಾರದಲ್ಲಿ ಅರುಚಿ ಇತ್ಯಾದಿಗಳು ಇದರ ಲಕ್ಷಣ. ಸರ್ಕಾರದವರು ಪರಿಶೀಲನೆಯನ್ನು ನಡೆಸಿದಾಗ ಶೇಕಡ ಇಪ್ಪತ್ತೈದರಿಂದ ನಲವತ್ತು ಮಂದಿ ನಾವಿಕರು ಹೀಗೆ ಪೀಡಿತರಾಗಿದ್ದರೆಂದು ಕ್ರಿ.ಶ. ೧೮೮೨ ರಲ್ಲಿ ತಿಳಿಯಿತು. ಇದಕ್ಕೆ ಕಾರಣವು ಆಹಾರದಲ್ಲಿನ ದೋಷವೆಂಬುದಾಗಿ ಟಕಾಕಿ (Takaki) ಎಂಬ ಶಾಸ್ತ್ರಜ್ಞನು ಯೋಚನೆಮಾಡಿ ನಾವಿಕರ ಆಹಾರವನ್ನು ಬದ ಲಾಯಿಸುವಂತೆ ಕ್ರಿ.ಶ. ೧೮೮೫ ರಲ್ಲಿ ಸರ್ಕಾರವನ್ನು ಪ್ರೇರಿಸಿದನು. ಮಿಲ್ಲಿನಲ್ಲಿ ಮಾಡಿದ ಬಿಳಿಯ ಅಕ್ಕಿಯೇ ಅವರ ಮುಖ್ಯ ಆಹಾರವಾಗಿತ್ತು. ಅಕ್ಕಿಯನ್ನು ಕಡಿಮೆ ಮಾಡಿ ಜವೆಗೋಧಿ (Barley) ಯನ್ನೂ ಆಹಾರವಾಗಿ ಕೊಡುವಂತೆ ಬಲ ವಂತಪಡಿಸಿದನು. ಈ ಮಿಶ್ರ ಆಹಾರವನ್ನು ನಾವಿಕರಿಗೆ ಒದಗಿಸಿದ ಕೆಲಕಾಲದಲ್ಲಿಯೇ ಬೆರಿ ಬೆರಿ ಜಾಡ್ಯವು ಜಪಾನೀಯರ ನೆಲೆಯಿಂದ ಮಾಯವಾಯಿತು. ಐಕ್‌ಮನ್

(Eijkman) ಎಂಬಾತನು ಅಕ್ಕಿಯ ವಿಚಾರವಾಗಿ ೧೮೯೦ ರಿಂದ ೧೮೯೬ ರ ವರೆಗೆ ಆರು ವರ್ಷಗಳು ಪರಿಶೋಧನೆಯನ್ನು ನಡೆಸಿದನು. ಪ್ರಯೋಗಕ್ಕಾಗಿ ಕೋಳಿಗಳನ್ನು ಸಾಕಿದನು. ಮಿಲ್ಲಿನಲ್ಲಿ ತಯಾರಾದ ಬಿಳಿಯ ಅಕ್ಕಿಯನ್ನು ಆಹಾರವಾಗಿ ಹಾಕಿದ್ದರಿಂದ ಕೋಳಿಗಳಿಗೆ ಬೆರಿ ಬೆರಿಯಂತಹ ಜಾಡ್ಯವುಂಟಾಯಿತು. ಅಕ್ಕಿಯ ಮೇಲಿನ ಹೊಟ್ಟನ್ನು ಕೂಡಿಟ್ಟು ಅದನ್ನು ತೊಳೆದ ನೀರನ್ನು ಕೋಳಿಗಳಿಗೆ ಕೊಡಲು ಜಾಡ್ಯವು ವಾಸಿಯಾಯಿತು. ಅಕ್ಕಿಯ ಮೇಲಿನ ಬಿಳಿಯ ಪೊರೆಯಲ್ಲಿ ಆರೋಗ್ಯಕ್ಕೆ ಅತ್ಯಾವಶ್ಯಕವಾಗಿ ಬೇಕಾದ ಪದಾರ್ಥವೊಂದಿದೆ; ಈ ಆಹಾರ ಸತ್ವವು ಆಹಾರದಲ್ಲಿಲ್ಲದಿದ್ದರೆ ಜಾಡ್ಯವು ಬರುವುದೆಂದು ತನ್ನ ಶೋಧನೆಯನ್ನು ಅವನು ಕ್ರಿ. ಶ. ೧೯೦೬ ರಲ್ಲಿ ಪ್ರಕಟಿಸಿದನು.

ಸಮುಕಟ್ಟಿಲ್ಲದ ಆಹಾರವನ್ನು ಕೊಡುವುದರಿಂದ ಪ್ರಾಣಿಗಳಿಗೆ ಜಾಡ್ಯವುಂಟಾಗುವಂತೆಯೂ ಅನಂತರ ಸರಿಯಾದ ಆಹಾರವನ್ನು ಕೊಡುವುದರಿಂದ ಅವುಗಳಿಗೆ ಬಂದ ಜಾಡ್ಯವು ವಾಸಿಯಾಗುವಂತೆಯೂ ಶೋಧನೆಗಳನ್ನು ಮಾಡಿದವರಲ್ಲಿ ಮೊದಲನೆಯವನು ಈತನು. ಆದರೆ ಈತನು ಕಂಡು ತಿಳಿಸಿದ ವಿಚಾರದ ಬೆಲೆಯು ಅನೇಕ ವರ್ಷಗಳ ವರೆಗೆ ವೈಜ್ಞಾನಿಕರಿಗೆ ತಿಳಿಯಲಿಲ್ಲ. ಇಂತಹ ಕೆಲವು ಜಾಡ್ಯಗಳು ಸಮುಕಟ್ಟಿಲ್ಲದ ಆಹಾರದಿಂದ ಉಂಟಾಗುವುವೆಂಬುದನ್ನು ಬೇರೆ ಬೇರೆ ವಿಧವಾಗಿ ಅನೇಕರು ಶೋಧನೆಗಳಿಂದ ತಿಳಿದುಕೊಳ್ಳುತ್ತ ಬಂದರು. ಹಲ್‌ಷಾಫ್ ಪೋಲ್ (Hulshoff-Pol) ಎಂಬಾತನು ಕ್ರಿ. ಶ. ೧೯೦೨ ರಲ್ಲಿ, ಕೋಳಿಗಳಿಗೂ ಮನುಷ್ಯರಿಗೂ ಬರುವ ಈ ಜಾಡ್ಯವನ್ನು ಅಕ್ಕಿಯ ಮೇಲ್ಪೊರೆಯಿಂದಲೂ ಕೆಲವು ದ್ವಿದಳ ಧಾನ್ಯಗಳಿಂದಲೂ ನಿವಾರಣೆಮಾಡಬಹುದೆಂದು ತೋರಿಸಿದನು. ಈ ಪದಾರ್ಥಗಳಲ್ಲಿರುವ ಸಾಮಗ್ರಿ ಅಥವಾ ಸತ್ವದ ಅಭಾವದಿಂದ ಜಾಡ್ಯವುಂಟಾಗುವುದನ್ನೂ, ಆ ಸತ್ವದ ಉಪಯೋಗದಿಂದ ಜಾಡ್ಯ ನಿವಾರಣೆ ಆಗುವುದನ್ನೂ ತಿಳಿದು ಜನರು ಇಂತಹ ಸತ್ವವನ್ನು ಕಂಡುಹಿಡಿಯಲು ಆರಂಭಿಸಿದರು. ಕ್ರಿ. ಶ. ೧೯೧೧ ರಲ್ಲಿ ಫಂಕ್ (Funk) ಎಂಬಾತನು ಗುಣಪೂರ್ಣವಾದ ಈ ಸತ್ವವನ್ನು ಶುದ್ಧಿಮಾಡಿ ಪ್ರತ್ಯೇಕಪಡಿಸಿದ್ದೇನೆಂದು ಪ್ರಕಟಿಸಿ ಇದಕ್ಕೆ "ಬೆರಿ ಬೆರಿ ವೈಟಮಿನ್" ಎಂಬ ಹೆಸರಿಟ್ಟನು. ಅಲ್ಲದೆ ಇದರ ರಾಸಾಯನಿಕ ರಚನೆಯನ್ನೂ ಸೂಚಿಸಿ ಇಂತಹ ಜಾಡ್ಯಗಳಿಗೆ ಸಂಬಂಧಿಸಿದ ವೈಟಮಿನ್ನುಗಳು ಇನ್ನೂ ಕೆಲವನ್ನು ಜನರು ಕಂಡು ಹಿಡಿಯುವರೆಂದೂ ಹೇಳಿದನು.

ಇದೇ ಸಮಯದಲ್ಲಿ ನಾರ್ವೆ ದೇಶದಲ್ಲಿ ಹೋಲ್‌ಸ್ಟ್ (Holst) ಮತ್ತು ಫ್ರೊಲಿಕ್ (Frölich) ಎಂಬ ಶಾಸ್ತ್ರಜ್ಞರು ತಾವು ನಡೆಸಿದ ಅನೇಕ ವರ್ಷಗಳ ಶೋಧನೆಗಳ ಫಲಿತಾಂಶವನ್ನು ಕ್ರಿ. ಶ. ೧೯೧೨ರಲ್ಲಿ ಪ್ರಕಟಿಸಿದರು. ನಾವಿಕರ ಸ್ಕರ್ವಿ ಜಾಡ್ಯ

ವನ್ನೂ ಬೆರಿ ಬೆರಿ ಜಾಡ್ಯವನ್ನೂ ನಿವಾರಣೆಮಾಡುವುದು ನಾರ್ವೆ ದೇಶದ ಬೆಸ್ತರಿಗೂ ವ್ಯಾಪಾರದ ನೌಕೆಯವರಿಗೂ ಅತಿ ಮುಖ್ಯ ಪ್ರಶ್ನೆಯಾಗಿತ್ತು. ಪ್ರಯೋಗಶಾಲೆಗಳಲ್ಲಿ (Laboratories) ನಡೆಸಿದ ಶೋಧನೆಗಳ ರೀತಿಯಂತೆ ಮನುಷ್ಯರ ಜಾಡ್ಯವನ್ನು ನಿವಾರಿಸುವುದೂ ಜಾಡ್ಯಬಾರದಂತೆ ತಡೆಯುವುದೂ ಸಿದ್ಧಿಸಬೇಕಾದರೆ, ಪ್ರಯೋಗ ಪರೀಕ್ಷೆಗೆ ಕೋಳಿ ಪಾರಿವಾಳಗಳಿಗಿಂತ ಸಸ್ತನಿ ಪ್ರಾಣಿಗಳು ಉತ್ತಮವೆಂದು ಅವರು ಅಭಿಪ್ರಾಯಪಟ್ಟು ಗಿನಿ ಹಂದಿ (Guinea-Pig)ಗಳನ್ನು ಸಾಕಿ ಅವುಗಳಿಗೆ ಜಾಡ್ಯವು ಬರುವಂತೆಯೂ ನಿವಾರಣೆಯಾಗುವಂತೆಯೂ ಮಾಡಿದರು. ನೀರಿನಲ್ಲಿ ಕರಗತಕ್ಕದ್ದೂ ಕಾಸುವುದರಿಂದ ನಾಶವಾಗತಕ್ಕದ್ದೂ ಆದ ಒಂದು ಸತ್ವವು ಆಹಾರದಲ್ಲಿ ಇಲ್ಲದಿರುವುದರಿಂದ ಸ್ಕರ್ವಿ ಎಂಬ ಜಾಡ್ಯವು ಪ್ರಾಪ್ತವಾಗುವುದೆಂದು ಅವರು ಕಂಡುಹಿಡಿದರು.

ಜಿಡ್ಡಿಲ್ಲದ ಆಹಾರದಿಂದ ಪ್ರಾಣಿಗಳಿಗೆ ಕಣ್ಣಿನ ಜಾಡ್ಯವೊಂದು ಪ್ರಾಪ್ತವಾಗುವುದೆಂದೂ, ಸಾಕಾದಷ್ಟು ಬೆಣ್ಣೆಯನ್ನು ಆಹಾರದಲ್ಲಿ ಸೇರಿಸುವುದರಿಂದ ಈ ಜಾಡ್ಯವು ಬಾರದಂತಾಗುವುದೆಂದೂ, ಬೆಣ್ಣೆಯಿಂದ ಇದು ನಿವಾರಣೆಯಾಗುವುದೆಂದೂ ಆಸ್ಬೋರ್ನ್ (Osborne) ಮತ್ತು ಮೆಂಡೆಲ್ (Mendel) ಎಂಬ ಶಾಸ್ತ್ರಜ್ಞರು ಕ್ರಿ. ಶ. ೧೯೧೩ರಲ್ಲಿ ಪ್ರಕಟಿಸಿದರು. ಈ ಕಣ್ಣಿನ ವ್ಯಾಧಿ ಬಾರದಂತೆ ಮಾಡುವುದರಲ್ಲಿಯೂ ಗುಣಪಡಿಸುವುದರಲ್ಲಿಯೂ ಬೆಣ್ಣೆಗಿಂತ ಕಾಡ್ ಎಂಬ ಮೀನಿನ ಯಕೃತ್ತಿನ ಎಣ್ಣೆಯು (Cod-liver oil) ಹೆಚ್ಚು ಪ್ರಯೋಜನಕಾರಿಯೆಂದು ಇತರ ಶೋಧನೆಗಳಿಂದ ತಿಳಿಯಬಂದಿತು. ಕ್ರಿ. ಶ. ೧೯೨೦ರ ಹೊತ್ತಿಗೆ ಅನೇಕ ಜಾಡ್ಯಗಳ ಪರಿಶೀಲನೆ ಮತ್ತು ಶೋಧನೆಗಳಿಂದ ವೈಟಮಿನ್ನುಗಳು ಒಂದಲ್ಲದೆ ಹಲವು ಉಂಟೆಂದೂ ಇವುಗಳ ಅಭಾವದಿಂದ ಬರುವ ಜಾಡ್ಯಗಳನ್ನು ತಡೆಗಟ್ಟುವುದಕ್ಕಾಗಿ ನಮ್ಮ ಆಹಾರದಲ್ಲಿ ಈ ವೈಟಮಿನ್ನುಗಳೆಲ್ಲವೂ ಸೇರಿರಬೇಕೆಂದೂ ಬಲ ಮತ್ತು ಆರೋಗ್ಯಕ್ಕೆ ಇವು ಅತ್ಯಾವಶ್ಯಕವೆಂದೂ ಜನರಿಗೆ ತಿಳಿವಳಿಕೆಯಾಯಿತು.

ನಮ್ಮ ದಿನಂಪ್ರತಿಯ ಆಹಾರದಲ್ಲಿ ಈ ಸತ್ವಗಳು ಸೇರಿರುವುದರಿಂದಲೇ ಆರೋಗ್ಯ ಪಾಲನೆಯೂ ಬೆಳವಣಿಗೆಯೂ ನಡೆಯುತ್ತಿವೆ ಎಂಬುದನ್ನು ಹಾಪ್‌ಕಿನ್ಸ್ (Hopkins) ಎಂಬಾತನು ಕ್ರಿ. ಶ. ೧೯೦೬ರಲ್ಲಿಯೇ ಪ್ರತಿಪಾದಿಸಿದ್ದನು.

ವೈಟಮಿನ್ನುಗಳ ರಾಸಾಯನಿಕ ಸಂಯೋಜನೆಯ ಸ್ವರೂಪವು ತಿಳಿಯುವವರೆಗೆ ಇವುಗಳಿಗೆ ಪ್ರತ್ಯೇಕ ಹೆಸರುಗಳನ್ನು ಇಡಲಾಗದಿರುವುದರಿಂದ ಎ,ಬಿ,ಸಿ,ಡಿ ಮುಂತಾದ ಅಕ್ಷರಗಳನ್ನು ಜೊತೆಗೂಡಿಸಿ ಬೇರೆ ಬೇರೆ ವೈಟಮಿನ್ನುಗಳನ್ನು ಹೆಸರಿಟ್ಟು ಕರೆಯಬಹುದೆಂದು ಮ್ಯಾಕ್‌ಕಲಮ್ (Mccollum) ಎಂಬಾತನು ಸೂಚಿಸಿದನು.

ಆದರಂತೆಯೇ ಕ್ರಿ. ಶ. ೧೯೨೦ರಿಂದ ವೈಟಮಿನ್ನುಗಳನ್ನು ಎ,ಬಿ,ಸಿ,ಡಿ,ಇ ಇತ್ಯಾದಿ ಅಕ್ಷರಗಳ ಜೊತೆಗೂಡಿಸಿ ಕರೆಯಲಾರಂಭಿಸಿದರು. ಕೆಲವು ಕಾಲ ಒಂದೇ ವೈಟಮಿನ್ನೆಂಬುದಾಗಿ ತಿಳಿದಿದ್ದ ಪದಾರ್ಥದಲ್ಲಿ, ಈಚಿನ ಪರಿಶೋಧನೆಯಿಂದ ಎರಡು ಅಥವಾ ಮೂರು ವಿಧವಾದ ವೈಟಮಿನ್ನುಗಳು ಇರುವುವೆಂದೂ ತಿಳಿದುಬಂದಿದೆ.

ಈ ವೈಟಮಿನ್ನುಗಳ ಗುಣಗಳಲ್ಲಿ ಪರಸ್ಪರ ವ್ಯತ್ಯಾಸವಿರುವುದು. ಕೆಲವು ನೀರಿನಲ್ಲಿ ಸುಲಭವಾಗಿ ಕರಗುವುವು; ಮತ್ತೆ ಕೆಲವು ಎಣ್ಣೆ ಅಥವಾ ಜಿಡ್ಡಿನಲ್ಲಿ ಮಾತ್ರ ಕರಗುವುವು. ಆಹಾರ ಪದಾರ್ಥಗಳಿಂದ ಇವುಗಳನ್ನು ಪ್ರತ್ಯೇಕಿಸಿ ಇವುಗಳ ಗುಣಗಳನ್ನು ಪರೀಕ್ಷಿಸುವ ಪ್ರಯೋಗಗಳು ಎರಡು ರೀತಿಯಾದುವು: ಪ್ರಾಣಿಗಳ ಆಹಾರದಲ್ಲಿ ಈ ವೈಟಮಿನ್ನುಗಳಲ್ಲಿ ಒಂದೊಂದು ಇಲ್ಲದಂತೆ ನೋಡಿಕೊಂಡು, ಪ್ರಾಣಿಗಳಿಗೆ ಜಾಡ್ಯವುಂಟುಮಾಡುವುದು; ಅನಂತರ ವೈಟಮಿನ್ನನ್ನು ಆಹಾರದಲ್ಲಿ ಒದಗಿಸಿ ಜಾಡ್ಯವನ್ನು ಪರಿಹಾರ ಮಾಡುವುದು. ಪ್ರಯೋಗಗಳಿಗೆ ಕೋಳಿಗಳು, ಪಾರಿವಾಳಗಳು, ಇಲಿಗಳು, ಗಿನಿ ಹಂದಿಗಳು ಇವೇ ವಿಶೇಷವಾಗಿ ಉಪಯೋಗಿಸಲ್ಪಟ್ಟಿರುವ ಪ್ರಾಣಿಗಳು. ಆಹಾರ ಪದಾರ್ಥದಲ್ಲಿ ಯಾವ ಯಾವ ವೈಟಮಿನ್ನುಗಳು ಇವೆಯೆಂಬುದನ್ನು ತಿಳಿದುಕೊಂಡು ಅನಂತರ ಆ ಪದಾರ್ಥದಲ್ಲಿ ಇರತಕ್ಕ ವೈಟಮಿನ್ನಿನ ಪ್ರಮಾಣವೆಷ್ಟು ಎಂಬುದನ್ನು ನಿಷ್ಕರ್ಷಿಸುವುದಕ್ಕೆ ಇಂತಹ ಪರಿಶೋಧನೆಯಲ್ಲಿ ಶಕ್ತರೂ ಅನುಭವಿಗಳೂ ಆದ ಅನೇಕ ಶಾಸ್ತ್ರಜ್ಞರಿಗೆ ಬಹು ಕಾಲವೂ ಪರಿಶ್ರಮವೂ ಆವಶ್ಯಕವಾಯಿತು. ಇಂತಹ ತಿಳಿವಳಿಕೆಯಿಂದ ಮನುಷ್ಯವರ್ಗಕ್ಕೆ ವಿಶೇಷ ಪ್ರಯೋಜನವಾಗಿದೆ.

ಇತರ ಪ್ರಾಣಿಗಳಿಗೆ ವೈಟಮಿನ್ನುಗಳಿಂದ ಉಂಟಾದ ಫಲವು ಮನುಷ್ಯವರ್ಗಕ್ಕೆ ಅನ್ವಯಿಸುತ್ತದೆಯೇ ಎಂಬುದನ್ನು ವೈದ್ಯರು ಚಿಕಿತ್ಸಾಲಯಗಳಲ್ಲಿ ಪರಿಶೀಲಿಸಿ ತಮ್ಮ ಅನುಭವ, ನಿರ್ಧಾರ ಮತ್ತು ಸಲಹೆಗಳನ್ನು ಪ್ರಕಟಿಸಿ ಇತರ ಶಾಸ್ತ್ರಜ್ಞರ ಕಾರ್ಯವನ್ನು ಫಲಪ್ರದವಾಗಿ ಮಾಡಿದ್ದಾರೆ.

ಮುಂದಿನ ಪುಟಗಳಲ್ಲಿ, ನೀರಿನಲ್ಲಿ ಕರಗತಕ್ಕ ಬಿ$_1$, ಬಿ$_2$, ಸಿ ವೈಟಮಿನ್ನುಗಳ ವಿಚಾರವನ್ನೂ, ಜಿಡ್ಡಿನಲ್ಲಿ ಕರಗತಕ್ಕ ಎ, ಡಿ, ಇ ವೈಟಮಿನ್ನುಗಳ ವಿಚಾರವನ್ನೂ ಸಂಕ್ಷೇಪವಾಗಿ ಸುಲಭವಾಗಿ ತಿಳಿಸಲು ಯತ್ನಿಸಿದೇನೆ.

ಬಿ$_1$ ವೈಟಮಿನ್

ಈ ವೈಟಮಿನ್ನು ನೀರಿನಲ್ಲಿಯೂ, ಆಲ್ಕೊಹಾಲ್ (Alcohol)ನಲ್ಲಿಯೂ ಕರಗುವುದು. ಎಣ್ಣೆ ಅಥವಾ ಜಿಡ್ಡಿನಲ್ಲಿ ಕರಗುವುದಿಲ್ಲ. ಕಾಸುವುದರಿಂದ ಇದರ ಗುಣವು ನಾಶವಾಗುತ್ತದೆ. ಕ್ರಿ. ಶ. ೧೯೩೬ರಲ್ಲಿ ವಿಲಿಯಂಸ್ (Williams)

ಎಂಬಾತನು ಈ ಪದಾರ್ಥವನ್ನು ಪ್ರಯೋಗಶಾಲೆಯಲ್ಲಿ ಸಂಯೋಜನ ಮಾಡಿ, ಇದಕ್ಕೆ ಥಯಮಿನ್ ಕ್ಲೋರೈಡ್ (Thiamin Chloride) ಎಂದು ಹೆಸರಿಟ್ಟನು.

ಪ್ರಾಣಿಗಳ ಆಹಾರದಲ್ಲಿ ಈ ಸತ್ವಪದಾರ್ಥವು ಸಾಕಾದಷ್ಟು ಇಲ್ಲದಿದ್ದರೆ ಜೀರ್ಣಶಕ್ತಿಯು ಮಂದವಾಗುತ್ತದೆ. ಬೆಳವಣಿಗೆಯೂ ಸಂತಾನಶಕ್ತಿಯೂ ಕಡಮೆಯಾಗುವುವು. ಮೈತೂಕವೂ ಸಾಹಸವೂ ಕುಂದುವುವು. ವ್ಯಾಧಿಗಳನ್ನು ತಡೆಯುತಕ್ಕ ದೇಹದಾರ್ಢ್ಯವೂ ಕಡಮೆಯಾಗಬಹುದು. ಈ ವೈಟಮಿನ್ನಿನ ಅಭಾವದಿಂದ ನರಗಳ ಮತ್ತು ಹೃದಯದ ದೌರ್ಬಲ್ಯ, ವಾತರೋಗ ಇವುಗಳಿಂದ ಕೂಡಿದ ಬೆರಿಬೆರಿ ಎಂಬ ಜಾಡ್ಯವುಂಟಾಗುವುದು. ಆಹಾರಪದಾರ್ಥಗಳೊಡನೆ ಶರೀರಕ್ಕೆ ಸೇರಿದಾಗ ಈ ವೈಟಮಿನ್ನು ಹಸಿವನ್ನೂ ಜೀರ್ಣಶಕ್ತಿಯನ್ನೂ ಹೆಚ್ಚಿಸುತ್ತದೆ. ಶರೀರದ ಅಂಗಾಂಗಗಳ ಕಾರ್ಯವನ್ನು ಉತ್ತೇಜನಮಾಡುವುದರಿಂದ ಬೆಳವಣಿಗೆಯನ್ನು ಹೆಚ್ಚಿಸುವುದು; ನರಗಳ ಅನಾರೋಗ್ಯವುಂಟಾಗದಂತೆ ಕಾಪಾಡುವುದು. ಈ ವೈಟಮಿನ್ನು ಗರ್ಭಧಾರಣೆಗೂ ಶಿಶುಸಂರಕ್ಷಣೆಗೂ ತಾಯಿಯರಿಗೆ ಅತ್ಯಾವಶ್ಯಕ.

ದೇಹದಲ್ಲಿ ಈ ವೈಟಮಿನ್ನು ಹೃದಯ, ಯಕೃತ್ತು, ಮೂತ್ರ ಪಿಂಡ, ಮೆದುಳು—ಇವುಗಳಲ್ಲಿ ಹೆಚ್ಚಾಗಿರುತ್ತದೆ. ಸಾಧಾರಣವಾಗಿ ಮಾಂಸಖಂಡಗಳಲ್ಲಿ ಕಡಮೆ. ವಿಶೇಷವಾಗಿ ಯೀಸ್ಟ್ (Yeast) ಎಂಬ ಪದಾರ್ಥದಲ್ಲಿಯೂ, ಅಕ್ಕಿಯ ತವುಡು ಅಥವಾ ಮೇಲ್ಪೊರೆ, ಗೋಧಿಯ ಸುಳಿ ಅಥವಾ ಅಂಕುರ, ಅವರೆ, ಹಾಲು ಇವುಗಳಲ್ಲಿಯೂ ಹೆಚ್ಚಾಗಿದೆ. ಕ್ಯಾಬೇಜ್, ಕ್ಯಾರಟ್, ಕಿತ್ತಿಳೆಹಣ್ಣಿನ ರಸ, ಬಟಾಣಿ, ನೆಲಹಲಸು (Pineapple), ಆಲೂಗಡ್ಡೆ, ಕೆಂಪು ಅಕ್ಕಿ, ಗೆಣಸು, ಹಸಿ ಸವಿಮೂಲಂಗಿ (Turnip), ಗೋಧಿತವುಡು ಮುಂತಾದುವುಗಳಲ್ಲೂ ಕೋಳಿಯ ಮೊಟ್ಟೆಯಲ್ಲೂ ಕೆಲವು ಮೀನುಗಳಲ್ಲೂ ಇರುವುದು.

ಹಾಲನ್ನು ಹೆಚ್ಚಾಗಿ ಕಾಸುವುದರಿಂದ ಅದರಲ್ಲಿರುವ ಈ ಸತ್ವದ ಪರಿಮಾಣವು ಕಡಮೆಯಾಗುತ್ತದೆ. ದನದ ಆಹಾರದಲ್ಲಿ ಈ ಸತ್ವವು ಹೆಚ್ಚು ಕಡಮೆಯಾದಂತೆ ಅದರ ಹಾಲಿನಲ್ಲಿಯೂ ಹೆಚ್ಚು ಕಡಮೆಯಾಗುವುದು. ಅಲ್ಲದೆ ಮೆಲುಕು ಹಾಕುವ ಪ್ರಾಣಿಗಳ ಆಹಾರ ಕೋಶಗಳಲ್ಲಿ ಸೂಕ್ಷ್ಮ ಕ್ರಿಮಿಗಳಿಂದ ಈ ಪದಾರ್ಥವು ಹೆಚ್ಚು ಕಡಮೆಯಾಗಿ ತಯಾರಾಗಬಹುದು (ಬೆಕ್‌ಡೆಲ್, ೧೯೨೮). ದನವು ಹಸುರೆಲೆಗಳನ್ನು ಹೆಚ್ಚಾಗಿ ತಿನ್ನುವುದರಿಂದ ಅದರ ಹಾಲಿನಲ್ಲಿ ಬಿ$_1$ ಅಲ್ಲದೆ, ಬಿ$_2$ (ಜಿ) ವೈಟಮಿನ್ನೂ ಹೆಚ್ಚಾಗಿರುತ್ತದೆ. ಎದೆ ಹಾಲಿನಲ್ಲಿ ಬಿ$_1$ ವೈಟಮಿನ್ನು ಇರುತ್ತದೆ. ಆದರೆ ಬಿ$_2$ (ಜಿ) ವೈಟಮಿನ್ನು ಹಸುವಿನ ಹಾಲಿನಲ್ಲಿ ಇರುವಷ್ಟು ಹೆಚ್ಚಾಗಿ ಇರುವುದಿಲ್ಲ; ದ್ವಿದಳ ಧಾನ್ಯಗಳಲ್ಲಿ ಬಿ$_1$ ವೈಟಮಿನ್ನು ಹೆಚ್ಚಾಗಿರುತ್ತದೆ. ಅವುಗಳ

ಒಳಭಾಗದಲ್ಲಿರುವುದಕ್ಕಿಂತ ಹೆಚ್ಚಾಗಿ ಹೊಟ್ಟಿನಲ್ಲಿರುವುದರಿಂದ ಯಂತ್ರದಲ್ಲಿ ಹೊಟ್ಟನ್ನೆಲ್ಲಾ ತೆಗೆದುಬಿಟ್ಟ ಬಿಳಿ ಅಕ್ಕಿ ಮೊದಲಾದ ಧಾನ್ಯಗಳಲ್ಲಿ ವೈಟಮಿನ್ನು ಕಡಮೆಯಾಗಿರುತ್ತದೆ. ಅಕ್ಕಿಯ ತೌಡು ಅಥವಾ ಹೊಟ್ಟಿನಲ್ಲಿ ಬಿ$_1$ ವೈಟಮಿನ್ನು ಹೆಚ್ಚು, ಬಿ (ಅಥವಾ ಜಿ) ವೈಟಮಿನ್ನು ಕಡಮೆ. ಧಾನ್ಯಗಳನ್ನು ಹೊಟ್ಟಿನ ಸಮೇತವಾಗಿ ಆಹಾರದಲ್ಲಿ ಉಪಯೋಗಿಸುವುದು ಉತ್ತಮ. ಯಾವುದರ ಹೊಟ್ಟು ಆಹಾರದಲ್ಲಿ ರುಚಿಯನ್ನು ಕೊಡದೆ ಕರ್ಕಶವಾಗಿರುವುದೋ ಅವುಗಳ ಹೊಟ್ಟನ್ನು ಬೇರ್ಪಡಿಸುವುದು ಆವಶ್ಯಕವಾಗುತ್ತದೆ. ಹಸಿಯ ಕಡಲೆ, ಹೆಸರು ಮುಂತಾದ ಕಾಳುಗಳನ್ನು ಪೂರ್ಣವಾಗಿ ಆಹಾರವಾಗಿ ಸೇವಿಸುವುದರಿಂದ ಬಿ ವೈಟಮಿನ್ನು ಶರೀರಕ್ಕೆ ಸೇರುತ್ತದೆ. ಹಾಲು ಅಥವಾ ಟೊಮಾಟೋ ರಸದಲ್ಲಿರುವುದಕ್ಕಿಂತ ಹೆಚ್ಚಾಗಿ ಈ ವೈಟಮಿನ್ನು ಹಸಿಯ ಬಟಾಣಿಯಲ್ಲಿದೆ. ಇದು ತೆಂಗಿನ ಕಾಯಿ ಮತ್ತು ಕಾಫಿಬೀಜಗಳಲ್ಲಿಲ್ಲ. ಹಸುರೆಲೆಗಳ ತರಕಾರಿ, ಕಿತ್ತಿಳೆ, ಮಾದಳ, ಹೇರಿಳೆ, ಸೇಬು, ಬಾಳೆ ಮುಂತಾದ ಹಣ್ಣುಗಳಲ್ಲೂ ಹಾಲಿನಲ್ಲಿರುವಷ್ಟು ಪ್ರಮಾಣದಲ್ಲಿದೆ.

ಹಾಲನ್ನು ಆರು ಗಂಟೆಗಳು ಕಾಸಿದರೆ ಅದರಲ್ಲಿರುವ ಬಿ$_1$ ವೈಟಮಿನ್ನಿನಲ್ಲಿ ಕಾಲು ಭಾಗ ನಾಶವಾಗುತ್ತದೆ. ಟೊಮಾಟೋ ರಸವನ್ನು ಒಂದು ಗಂಟೆಯ ಹೊತ್ತು ಕುದಿಸಿದರೆ ಹತ್ತರಲ್ಲಿ ಒಂದು ಭಾಗ ಈ ಸತ್ವವು ಕಡಮೆಯಾಗುತ್ತದೆ.

ಬಿ$_1$ ವೈಟಮಿನ್ನಿರುವ ಆಹಾರದಿಂದ ಜೀರ್ಣಶಕ್ತಿಯೂ ಹಸಿವೂ ಹೆಚ್ಚಿ, ಆಹಾರ ಸೇವನೆಯೂ ಹೆಚ್ಚುವುದು. ಇದರಿಂದ ಬೆಳವಣಿಗೆಯು ಅಭಿವೃದ್ಧಿಯಾಗಿ ದೇಹದ ತೂಕವು ಹೆಚ್ಚುತ್ತದೆ.

ಬಿ$_2$ (ಅಥವಾ ಜಿ) ವೈಟಮಿನ್

ಬಿ ವೈಟಮಿನ್ ಎಂದು ಕರೆಯಲ್ಪಡುತ್ತಿದ್ದ ಪದಾರ್ಥವು ಒಂದೇ ಎಂಬುದಾಗಿ ಕ್ರಿ.ಶ. ೧೯೧೯ ರ ವರೆಗೆ ತಿಳಿವಳಿಕೆಯಿತ್ತು. ಕೆಲವು ವರ್ಷಗಳ ಪರಿಶೋಧನೆಯಿಂದ ಎರಡು ಅಥವಾ ಮೂರು ಪದಾರ್ಥಗಳು ಇದರಲ್ಲಿರಬಹುದೆಂದು ತಿಳಿಯಬಂದಿತು. ವ್ಯಾಧಿಯನ್ನು ಗುಣಪಡಿಸುವ ಬಿ$_1$ ವೈಟಮಿನ್ನು ಆಲ್ಕೊಹಾಲಿನಲ್ಲಿ ಕರಗುವುದೆಂದೂ (ಐಕಮನ್ ಮತ್ತು ಫಂಕ್ ೧೯೧೧ ರಲ್ಲಿ, ಫ್ರೇಸರ್ ಮತ್ತು ಸ್ಟಾಂಟನ್ ೧೯೧೦ ರಲ್ಲಿ) ಬೆಳವಣಿಗೆಯನ್ನು ಹೆಚ್ಚಿಸತಕ್ಕ ಬಿ$_2$ ಅಥವಾ ಜಿ ವೈಟಮಿನ್ನು ಆಲ್ಕೊಹಾಲಿನಲ್ಲಿ ಕರಗುವುದಿಲ್ಲವೆಂದೂ (ಆಸ್‌ಬೋರ್ನ್, ಮೆಂಡಲ್ ಮತ್ತು ಡ್ರುಮಂಡ್ ೧೯೧೭ ರಲ್ಲಿ) ಶಾಸ್ತ್ರಜ್ಞರು ತಿಳಿಸಿದರು. ಬಿ$_1$ ಮತ್ತು ಬಿ$_2$ ಇವೆರಡು ವಿಧವಾದ ವೈಟಮಿನ್ನುಗಳೂ ನೀರಿನಲ್ಲಿ ಸುಲಭವಾಗಿ ಕರಗುವುವು. ದೇಹದ ಸರಿಯಾದ ಬೆಳವಣಿಗೆಗೆ ಇವೆರಡೂ ಆವಶ್ಯಕ. ಕಾಸುವುದರಿಂದಲೂ ಕುದಿಸು

ವುದರಿಂದಲೂ, ಆಹಾರದಲ್ಲಿನ ಬಿ$_1$ ವೈಟಮಿನ್ನು ಕಡಮೆಯಾಗುತ್ತದೆ. ಆದರೆ ಬಿ$_2$ ವೈಟಮಿನ್ನು ಈ ರೀತಿ ಕಾಸುವುದರಿಂದ ನಾಶವಾಗುವುದಿಲ್ಲ. ಆಹಾರದಲ್ಲಿ ಬಿ$_2$ ಸತ್ವವು ಇಲ್ಲದಿದ್ದರೆ ಬೆಳವಣಿಗೆಯು ನಿಧಾನವಾಗುತ್ತದೆ, ದೇಹದ ತೂಕವು ಕಡಿಮೆಯಾಗುತ್ತದೆ, ಕೂದಲುಗಳು ಉದುರುತ್ತವೆ ಮತ್ತು ಚರ್ಮವು ಅನಾರೋಗ್ಯಕ್ಕೆ ಈಡಾಗುತ್ತದೆ. ಆದ್ದರಿಂದ ಇದು ಚರ್ಮದ ಆರೋಗ್ಯಕ್ಕೂ ದೇಹದ ಬೆಳವಣಿಗೆಗೂ ಆವಶ್ಯಕವೆಂದು ಬೇರೆ ಹೇಳಬೇಕಾಗಿಲ್ಲ. ಪ್ರಯೋಗ ಶಾಲೆಯ ಇಲಿಗಳ ಆಹಾರ ದಲ್ಲಿ ಈ ಸತ್ವವನ್ನು ಸೇರಿಸದಿದ್ದುದರಿಂದ ಅವುಗಳಿಗೆ ಆಹಾರದಲ್ಲಿ ಅರುಚಿಯುಂಟಾ ಯಿತು. ಅವುಗಳ ಹಲ್ಲಿನ ಒಸಡು ಊದಿಕೊಂಡು ಕೆಂಪುಗೀರು ಕಾಣಿಸಿತು. ಉದರವೂ ಕರುಳುಗಳೂ ರೋಗಪೀಡಿತವಾದುವು. ಚರ್ಮದಲ್ಲಿ ಜಾಡ್ಯವುಂಟಾಗಿ, ಕೂದಲು ಉದುರಿತು. ಹೀಗಾಗಿ ಅವು ಎರಡು ಮೂರು ವಾರಗಳು ಜೀವಿಸಿರುವುದು ಕಷ್ಟವಾಯಿತು. ಆ ಸಮಯದಲ್ಲಿ ಸ್ವಲ್ಪ ಭಾಗ ಯೀಸ್ಟ್ (Yeast) ಎಂಬ ಪದಾರ್ಥ ವನ್ನು ಅವುಗಳ ಆಹಾರದಲ್ಲಿ ಬೆರಸಿಕೊಡಲು ಎರಡು ವಾರಗಳ ಕಾಲದಲ್ಲಿ ಅವು ಚೇತರಿಸಿಕೊಂಡವು. ಅವುಗಳ ತೂಕವು ಹೆಚ್ಚಿತು; ಚರ್ಮರೋಗವು ನಿವಾರಣೆ ಯಾಗಿ ಕೂದಲು ಬೆಳೆಯುಲಾರಂಭಿಸಿತು. (ಚಿಕ್ ಮತ್ತು ರಾಸ್ಕೊ, ೧೯೨೭.)

ಆಹಾರದಲ್ಲಿ ಈ ಸತ್ವವು ಹೆಚ್ಚಾಗಿದ್ದಷ್ಟೂ ಬೆಳವಣಿಗೆಗೆ ಹೆಚ್ಚು. ಗರ್ಭ ಧಾರಣೆಗೂ, ಮಕ್ಕಳನ್ನು ಹಾಲುಕೊಟ್ಟು ಪೋಷಿಸುವುದಕ್ಕೂ ತಾಯಿಯರಿಗೆ ಇದರ ಆವಶ್ಯಕತೆ ವಿಶೇಷ (ಎವನ್ಸ್, ಬರ್, ಮತ್ತು ಷ್ಯೂರ್, ೧೯೨೮). ಹಾಲನ್ನು ಹೆಚ್ಚಾಗಿ ಕುಡಿದರೆ ಬೆಳವಣಿಗೆ ಹೆಚ್ಚುವುದು. ಹಾಲಿನಲ್ಲಿ ಬಿ$_2$ ವೈಟಮಿನ್ನಿರು ವುದೂ ಇದಕ್ಕೆ ಒಂದು ಕಾರಣ. ಈ ಸತ್ವದಿಂದ ಪ್ರಾಣಿಗಳು ಬೇಗ ಪುಷ್ಟವಾಗಿ ಮರಿಗಳನ್ನು ಪಡೆದು, ಹೆಚ್ಚುಕಾಲ ಬದುಕುವುವು (ಷರ್ಮನ್ ಮತ್ತು ಕ್ಯಾಂಪ್ ಬೆಲ್, ೧೯೨೪). ಹಾಲಿನ ಸೇವನೆಯಿಂದುಂಟಾಗುವ ದೀರ್ಘಾಯುಸ್ಸು ಮೊದಲಾದ ಗುಣಗಳಿಗೆ ಅದರಲ್ಲಿ ಎ, ಬಿ$_1$, ಬಿ$_2$ ವೈಟಮಿನ್ನುಗಳೂ ಕ್ಯಾಲ್ಸಿಯಂ (Calcium) ಎಂಬ ಪದಾರ್ಥವೂ ಇರುವುದೂ ಕಾರಣ.

ಬಿ$_2$ (ಅಥವಾ ಜಿ) ವೈಟಮಿನ್ನು ವಿಶೇಷವಾಗಿ ಯೀಸ್ಟ್ (Yeast), ಮೊಸ ರಿನ ಮೇಲಿನ ನೀರು, ಯಕೃತ್ತು, ಹಾಲು, ಕೋಳಿಮೊಟ್ಟೆ, ಮುಳ್ಳು ಬಸಲೆಸೊಪ್ಪು ಮುಂತಾದುವುಗಳಲ್ಲಿ ಇದೆ. ಬಾಳೆಹಣ್ಣು, ಕ್ಯಾಬೇಜ್, ಹಾಲ್ಮೂಲಂಗಿಸೊಪ್ಪು (Lettuce), ಗೋಧಿಯ ಅಂಕುರ ಮೊದಲಾದುವುಗಳಲ್ಲಿಯೂ ಉಂಟು.

ಬಾಲ್ಯದಲ್ಲಿ ಮಾತ್ರವಲ್ಲದೆ ಯಾವ ವಯಸ್ಸಿನಲ್ಲಾದರೂ ಮನುಷ್ಯನ ಆಹಾರದಲ್ಲಿ ಬಿ$_2$ ವೈಟಮಿನ್ನು ಸೇರುವುದು ಅವನ ಆರೋಗ್ಯಕ್ಕೆ ಒಳ್ಳೆಯದು.

ಬಿ$_2$ ವೈಟಮಿನ್ನಿಗೆ ರಿಬೊಫ್ಲೇವಿನ್ (Riboflavin) ಎಂದೂ ಹೆಸರು.

ಪಿ.ಪಿ. ವೈಟಮಿನ್

ಪೆಲ್ಲಾಗ್ರ (Pellagra) ಎಂಬ ಒಂದು ಜಾಡ್ಯದಲ್ಲಿ, ಆಹಾರವನ್ನು ಜೀರ್ಣ ಮಾಡುವ ಜಠರ, ಕರುಳು ಮೊದಲಾದ ಅಂಗಗಳ ಕಾರ್ಯವು ಸರಿಯಾಗಿ ನಡೆಯದೆ ಭೇದಿಯುಂಟಾಗುವುದು. ಮೈಮೇಲೆ ಗುಳ್ಳೆಗಳಾಗಿ ಚರ್ಮವ್ಯಾಧಿ (Dermatitis) ಕಾಣಿಸುವುದು. ಬಿಸಿಲಿಗೆ ಮೈಯನ್ನು ತೋರಿಸಲಾಗುವುದಿಲ್ಲ. ಅಲ್ಲದೆ ನರಗಳ ವ್ಯಾಧಿಯೂ ಉಂಟಾಗುವುದು.

ಈ ರೀತಿಯ ಪೆಲ್ಲಾಗ್ರ ವ್ಯಾಧಿಯು ಬಾರದಂತೆ ತಡೆಯುವ ಸತ್ವಕ್ಕೆ ಪಿ.ಪಿ. (Pellagra Preventive) ವೈಟಮಿನ್ ಎಂಬ ಹೆಸರನ್ನಿಟ್ಟಿರುವರು. ಪ್ರಾಯಶಃ ಈ ಪದಾರ್ಥವು ನಿಕೊಟೀನಿಕ್ ಆಸಿಡ್ (Nicotinic Acid) ಎಂಬ ರಸಾಯನ ವಸ್ತು ವಿರಬಹುದು. ಈ ಸತ್ವವು ನೀರಿನಲ್ಲಿ ಕರಗುವುದು. ಜಿಡ್ಡಿನ ವಸ್ತುಗಳಲ್ಲಿ ಕರಗುವುದಿಲ್ಲ. ಸೆಕೆಯಿಂದ ಅಥವಾ ಕುದಿಸುವುದರಿಂದ ಈ ಸತ್ವವು ನಾಶವಾಗುವುದಿಲ್ಲ. ಇದರ ವಿಚಾರವು ಇನ್ನೂ ಚೆನ್ನಾಗಿ ತಿಳಿದುಬಂದಿಲ್ಲ.

ಈ ಸತ್ವವು ವಿಶೇಷವಾಗಿ ಯೀಸ್ಟ್ (Yeast), ಯಕೃತ್ತು (Liver), ಮತ್ತು ಗೋಧಿಯ ಅಂಕುರ ಅಥವಾ ಮೊಳಕೆಗಳಲ್ಲಿದೆ. ಹಸಿಯ ಬಟಾಣಿ, ಟೊಮಾಟೋ ಹಣ್ಣಿನ ರಸ, ಸವಿ ಮೂಲಂಗಿ (Turnip), ಮಜ್ಜಿಗೆ, ಕ್ಯಾಬೇಜ್, ಸಾಸಿವೆ ಸೊಪ್ಪು, ಬಸಲೆಸೊಪ್ಪು, ಕೋಳಿಮೊಟ್ಟೆಯ ಹಳದಿರಸ, ಮತ್ತು ಹಾಲು—ಇವುಗಳಲ್ಲಿಯೂ ಈ ವೈಟಮಿನ್ನಿದೆ.

ಸಿ ವೈಟಮಿನ್

ಈ ವೈಟಮಿನ್ನು ನೀರಿನಲ್ಲಿ ಕರಗುವುದು. ಗಾಳಿಯಲ್ಲಿರುವ ಆಮ್ಲಜನಕದ (Oxygen) ಸಂಪರ್ಕದಿಂದ ಮತ್ತು ಕಾಸುವುದರಿಂದ ಇದರ ಗುಣವು ನಾಶವಾಗುವುದು. ಅಸ್ಕಾರ್ಬಿಕ್ ಆಸಿಡ್ (Ascorbic Acid) ಎಂಬ ರಸಾಯನ ವಸ್ತುವಿಗೆ ಈ ಸತ್ವದ ಗುಣಗಳಿರುವುವು. ಈ ವೈಟಮಿನ್ನು ಆಹಾರದಲ್ಲಿ ಮನುಷ್ಯನಿಗೆ ದೊರಕದಿದ್ದರೆ ಸ್ಕರ್ವಿ ಎಂಬ ವ್ಯಾಧಿಯುಂಟಾಗುವುದು. ಈ ವ್ಯಾಧಿಯಲ್ಲಿ ಹಿಂದೆ ತಿಳಿಸಿದಂತೆ, ಮಾಂಸಖಂಡಗಳ ದುರ್ಬಲತೆ ಮತ್ತು ನೋವು, ರಕ್ತನಾಳಗಳು ಒಡೆದು ರಕ್ತಸ್ರಾವ, ಮೂಳೆಗಳು ಪುಡಿಯಾಗುವುದು, ಹಲ್ಲುಗಳು ಸಡಿಲವಾಗುವುದು ಮುಂತಾದುವು ಕಾಣಿಸಿಕೊಳ್ಳುವುವು. ದೌರ್ಬಲ್ಯ, ಆಯಾಸ, ದೇಹದ ತೂಕವು ಕಡಮೆಯಾಗುವುದು, ಆಹಾರದಲ್ಲಿ ಅರುಚಿ, ವ್ಯಾಧಿಗಳಿಗೆ ಸುಲಭವಾಗಿ ವಶವಾಗುವುದು—ಈ ಲಕ್ಷಣಗಳೂ ಉಂಟು. ಆದ್ದರಿಂದ ಸಿ ವೈಟಮಿನ್ನು ದೇಹದ ಅಣುಕೋಶಗಳ (Cells) ಕಾರ್ಯವನ್ನು ನಡೆಸುವುದಕ್ಕೂ ಮೂಳೆ ಮತ್ತು ಹಲ್ಲುಗಳ ರಚನೆಗೂ ಅತ್ಯಾವಶ್ಯಕ.

ನಾರ್ವೆಯ ನಾವಿಕರಿಗೆ ಬರುತ್ತಿದ್ದ ಈ ಸ್ಕರ್ವಿ ವ್ಯಾಧಿಯಂತೆಯೇ ಇರುವ ಒಂದು ಜಾಡ್ಯವು ಇತರ ಪ್ರಾಣಿಗಳಿಗೂ ಆಹಾರದೋಷದಿಂದ ಬರುತ್ತದೆ. ಪ್ರಯೋಗ ಶಾಲೆಯಲ್ಲಿ ಧಾನ್ಯ ಅಥವಾ ಬ್ರೆಡ್ಡನ್ನು (Bread) ಮಾತ್ರ ಕೊಡುತ್ತಿದ್ದ ಗಿನಿ ಹಂದಿಗಳಿಗೆ ತೂಕವು ಕಡಮೆಯಾಗಿ, ಒಸಡು ಮೂಳೆ ಚರ್ಮಗಳಲ್ಲಿ ವ್ಯಾಧಿಯೂ ಒದಗಿತು. ಹಸಿಯ ಕ್ಯಾಬೇಜ್, ಆಲೂಗಡ್ಡೆ, ಕ್ಯಾರಟ್, ಬಾಳೆಹಣ್ಣು, ಸೇಬಿನಹಣ್ಣು ಇವುಗಳನ್ನು ಆಹಾರವಾಗಿ ಕೊಟ್ಟನಂತರ ಅವುಗಳ ವ್ಯಾಧಿಯು ಗುಣವಾಯಿತು. (ಹೋಲ್ಸ್ಟ್, ಫ್ರಾಲಿಕ್, ೧೯೦೭, ೧೯೧೨). ಈ ಗುಣವು ಇರುವ ಆಹಾರ ಪದಾರ್ಥಗಳನ್ನು ಕಾಸಿದರೆ ಗುಣವು ಕಡಮೆಯಾಗುವುದು; ವಿಶೇಷವಾಗಿ ಕಾಸುವುದರಿಂದ ಮಾಯವಾಗುವುದು. ಕೆಲವು ತರಕಾರಿಗಳನ್ನು ಒಣಗಿಸುವುದರಿಂದಲೇ ಅವುಗಳಲ್ಲಿರುವ ಈ ಗುಣವು ಬಹುಭಾಗ ಕಳೆದುಹೋಗುತ್ತದೆ. ಹಾಲಿನಲ್ಲಿ ಈ ವೈಟಮಿನ್ನು ಸ್ವಲ್ಪ ಮಾತ್ರವಿದೆ. ಕಾಸುವುದರಿಂದ ಅದು ಕಡಮೆಯಾಗುವುದರಿಂದ ಮಕ್ಕಳಿಗೆ ಬರಿಯ ಹಾಲಿನಿಂದ ಸಾಕಾದಷ್ಟು ಈ ಸತ್ವವು ದೊರೆಯುವುದಿಲ್ಲ. (ಹೆಸ್ ಮತ್ತು ಫಿಷ್, ೧೯೧೪). ಇದರಿಂದ ಅವುಗಳ ಆರೋಗ್ಯವು ಸರಿಯಾಗಿಲ್ಲದೆ ಅವುಗಳಿಗೆ ಕೋಪವು ಬೇಗ ಬರುತ್ತದೆ. ಇಂತಹ ಮಕ್ಕಳಿಗೆ ಕಿತ್ತಿಳೆ ಹಣ್ಣಿನ ರಸವನ್ನು ಕೊಟ್ಟಿದ್ದರಿಂದ ಬೇಗ ಗುಣವಾಯಿತು.

ಗರ್ಭಧಾರಣೆ ಮಾಡಿದ ಗಿನಿ ಹಂದಿಗಳ ಆಹಾರದಲ್ಲಿ ಸಾಕಾದಷ್ಟು ಸಿ ವೈಟಮಿನ್ನನ್ನು ಕೊಡದಿದ್ದುದರಿಂದ ಗರ್ಭದಲ್ಲಿ ಮರಿಯ ಬೆಳವಣಿಗೆ ನಿಂತು ಅನೇಕ ಸಲ ಮರಿಗಳು ಹುಟ್ಟಿದಾಗ ನಿರ್ಜೀವವಾಗಿದ್ದುವು. ಸಜೀವವಾಗಿ ಹುಟ್ಟಿದ ಮರಿಗಳೂ ಸ್ಕರ್ವಿ ವ್ಯಾಧಿಪೀಡಿತವಾಗಿದ್ದುವು. ಸಾಧಾರಣ ಕಾಲಗಳಿಗಿಂತಲೂ ಗರ್ಭಧಾರಣೆಯ ಕಾಲದಲ್ಲಿಯೂ, ಮರಿಗಳಿಗೆ ಹಾಲನ್ನು ಕೊಟ್ಟು ಪೋಷಿಸುವ ಕಾಲದಲ್ಲಿಯೂ ಪ್ರಾಣಿಗಳಿಗೆ ಸಿ ವೈಟಮಿನ್ನಿನ ಆವಶ್ಯಕತೆ ಹೆಚ್ಚು. (ಇಂಜಿಯರ್, ೧೯೧೫.)

ಗಿನಿ ಹಂದಿಗಳಿಗೂ ಮನುಷ್ಯವರ್ಗಕ್ಕೂ ಬರುವ ಜಾಡ್ಯದ ಸಾಮ್ಯವನ್ನು ಪರಿಶೀಲಿಸಿ, ಗರ್ಭಿಣಿ ಸ್ತ್ರೀಯ ಆಹಾರದಲ್ಲಿ ಸಾಕಾದಷ್ಟು ಸಿ ವೈಟಮಿನ್ನು ಇಲ್ಲದಿದ್ದರೆ ಗರ್ಭಸ್ರಾವಗಳೂ ನಿರ್ಜೀವ ಶಿಶುಗಳೂ ಸಂಭವಿಸಬಹುದಲ್ಲದೆ, ಜೀವಿಸುವ ಮಕ್ಕಳಿಗೆ ವ್ಯಾಧಿಯ ಲಕ್ಷಣಗಳೂ ಉಂಟಾಗಬಹುದೆಂದು ಹೆಸ್ (೧೯೨೦) ಅಭಿಪ್ರಾಯಪಟ್ಟಿದ್ದಾನೆ. ಇಂತಹ ಮಕ್ಕಳಿಗೆ ಕಿತ್ತಿಳೆ ಹಣ್ಣಿನ ರಸದಿಂದ ವಿಶೇಷ ಪ್ರಯೋಜನವುಂಟು. ಒಂದು ಸಂದರ್ಭದಲ್ಲಿ ಸರಿಯಾಗಿ ಬೆಳವಣಿಗೆಯಿಲ್ಲದ ಒಂದು ಮಗುವಿಗೆ ಕಿತ್ತಿಳೆ ಹಣ್ಣಿನ ಸಿಪ್ಪೆಯ ರಸವನ್ನು ಕುಡಿಸಿದನಂತರ ಒಂದು ತಿಂಗಳಿನಲ್ಲಿ ಅದರ ತೂಕವು ಎರಡು ಪೌಂಡಿನಷ್ಟು ಹೆಚ್ಚಿತು. ಒಣಗಿಸಿದ ಹೆಸರು, ಕಡಲೆ

ಮುಂತಾದ ದ್ವಿದಳ ಧಾನ್ಯಗಳಲ್ಲಿ ಬಿ ವೈಟಮಿನ್ನು ಹೆಚ್ಚಾಗಿದ್ದರೂ, ಸಿ ವೈಟಮಿನ್ನು ಸಾಕಾದಷ್ಟಿಲ್ಲ. ಆದರೆ ಈ ಕಾಳುಗಳನ್ನು ನೀರಿನಲ್ಲಿ ನೆನೆಯಹಾಕಿ ಒಂದೆರಡು ದಿನ ಒದ್ದೆಯ ಬಟ್ಟೆಯ ಮೇಲೆ ನೆರಳಿನಲ್ಲಿ ಹರಡಿದ್ದರೆ ಮೊಳಕೆ ಒಡೆಯುವುದು. ಬೀಜದ ನವಜೀವನದಿಂದ ಈ ಕಾಳುಗಳಲ್ಲಿ ಸಿ ವೈಟಮಿನ್ನು ಉತ್ಪತ್ತಿಯಾಗುತ್ತದೆ. ಅನಂತರ ಕಾಳುಗಳನ್ನು ಬಿಸಿಲಿನಲ್ಲಿ ಒಣಗಿಸಿ ಪುಡಿಮಾಡಿ ಆಹಾರವಾಗಿ ಉಪಯೋಗಿಸುವುದರಿಂದ ಉತ್ತಮ ಗುಣವುಂಟು. ಆದರೆ ವಿಶೇಷವಾಗಿ ಕಾಸುವುದು, ಬೆಂಕಿಯ ಮೇಲೆ ಹುರಿಯುವುದು, ಬೇಯಿಸುವುದು ಇವುಗಳಿಂದ ಸಿ ವೈಟಮಿನ್ನು ಕ್ರಮ ಕ್ರಮವಾಗಿ ನಾಶವಾಗುತ್ತದೆ. ಬಿ ವೈಟಮಿನ್ನು ಸೆಕೆಯಿಂದ ಇಷ್ಟು ಬೇಗನೆ ನಾಶವಾಗುವುದಿಲ್ಲ (ಚಿಕ್ ಮತ್ತು ಹ್ಯೂಂ, ೧೯೧೬–೧೭).

ದೇಹದ ಮೂಳೆಗಳ ಬೆಳವಣಿಗೆಯು ಅತೃಪ್ತಿಕರವಾಗಿರುವುದಕ್ಕೆ ಎ ಮತ್ತು ಡಿ ವೈಟಮಿನ್ನುಗಳ ಅಭಾವವಲ್ಲದೆ ಸಿ ವೈಟಮಿನ್ನಿನ ಅಭಾವವೂ ಕಾರಣವಾಗುತ್ತದೆ. ಆದ್ದರಿಂದ ಇಂತಹದೇ ಕಾರಣವೆಂದು ಕಂಡುಹಿಡಿಯುವುದು ವೈದ್ಯನಿಗೂ ಕಷ್ಟಸಾಧ್ಯ.

ಸಿ ವೈಟಮಿನ್ನು ಸಾಕಾದಷ್ಟು ಇಲ್ಲದ ಆಹಾರವನ್ನು ಕೊಟ್ಟು ಬೆಳಸಿದ ಗಿನಿ ಹಂದಿಗಳ ಮತ್ತು ಕೋತಿಗಳ ಹಲ್ಲನ್ನು ಸೂಕ್ಷ್ಮದರ್ಶಕ ಯಂತ್ರದಲ್ಲಿ ಪರೀಕ್ಷಿಸಿದಾಗ ಅಂತಹ ಆಹಾರ ದೋಷದಿಂದ ಪರಿಣಾಮವಾಗುವ ಲಕ್ಷಣಗಳಲ್ಲಿ ಎಲ್ಲಕ್ಕಿಂತಲೂ ಮೊದಲು ಹಲ್ಲುಗಳ ಆರೋಗ್ಯವು ಕೆಡುವುದು ಎಂದು ತಿಳಿಯಿತು (ಸಿಲ್ವ ಮತ್ತು ವೆಲ್ಸ್, ೧೯೧೯; ಹೋಜರ್, ೧೯೨೬). ಹಲ್ಲುಗಳಿಗೆ ಸಾಕಾದಷ್ಟು ಕ್ಯಾಲ್ಸಿಯಂ ಆಹಾರದಿಂದ ಬಂದು ಸೇರದೆ, ಅವು ಸಡಿಲವಾಗಿ ಒಸಡಿನಲ್ಲಿ ರಕ್ತವೂ ಕೀವೂ ಬಂದುವು. ತಲೆ, ಮೈ, ಕೈಕಾಲುಗಳ ಮೂಳೆಗಳಲ್ಲಿಯೂ ಕ್ಯಾಲ್ಸಿಯಂ ಅಭಾವವುಂಟಾಗಿದ್ದಿತು (ಹೌ, ೧೯೨೦; ರಾಬ್, ಮರ್ಫಿ, ಇತರರು ೧೯೨೧). ಹಾಗೆಯೇ ರಕ್ತನಾಳಗಳಿಗೆ ಸಾಕಾದಷ್ಟು ಪುಷ್ಟಿಯುಂಟಾಗದೆ, ರಕ್ತವು ನಾಳಗಳಲ್ಲಿ ಅಲ್ಲಲ್ಲಿ ಹರಿಯದೆ, ನರಗಳಿಗೆ ರಕ್ತದಿಂದ ಆಮ್ಲಜನಕವು ಒದಗದೆ ಅವು ದುರ್ಬಲವಾಗಿ ಸಾಯುವುವು. ಇದರಿಂದ ರಕ್ತಸ್ರಾವವಾಗುವುದು. ಆಹಾರದಲ್ಲಿ ಕಿತ್ತಿಳೆಹಣ್ಣಿನ ರಸವನ್ನು ಪ್ರಾಣಿಗಳಿಗೆ ಕೊಡುತ್ತ ಬಂದಮೇಲೆ ಮೇಲೆ ಹೇಳಿದ ದೋಷಗಳು ತಡೆಯಲ್ಪಟ್ಟವು. ರೋಗ ಹರಡುವ ಕ್ರಿಮಿಗಳನ್ನು ನಿವಾರಿಸುವ ಶಕ್ತಿಯನ್ನು ದೇಹಕ್ಕೆ ವೈಟಮಿನ್ನು ಕೊಡುತ್ತದೆ (ಫಿಂಡ್ಲೆ, ೧೯೨೩). ನಾಗರಿಕ ಜನರಲ್ಲಿ ಹೆಚ್ಚುತ್ತಿರುವ ಹಲ್ಲುಗಳ ಅನಾರೋಗ್ಯಕ್ಕೆ ಅವರ ಆಹಾರದಲ್ಲಿ ಸಿ ವೈಟಮಿನ್ನಿನ ಅಭಾವವೊಂದು ಮುಖ್ಯಕಾರಣ. ಮನುಷ್ಯನಿಗೆ ದಿನಕ್ಕೆ ಬೇಕಾದಷ್ಟು ಸಿ ವೈಟಮಿನ್ನು ಅರ್ಧ ಹೇರಿಳೆ ಹಣ್ಣಿನ ಅಥವಾ ಒಂದು ನಿಂಬೆಯಹಣ್ಣಿನ ರಸದಲ್ಲಿದೆ ಅಥವಾ ನಾಲ್ಕು ಬಟ್ಟಲಿನಷ್ಟು ಕಿತ್ತಿಳೆಹಣ್ಣಿನ ರಸದಲ್ಲಿದೆ (ಹ್ಯಾಂಕೆ, ೧೯೨೯).

ಹಿಂದಿನ ಯುದ್ಧದ ಕಾಲದಲ್ಲಿ ಮೆಸೊಪೊಟೇಮಿಯಾದಲ್ಲಿದ್ದ ಇಂಡಿಯಾ ದೇಶದ ಸೈನಿಕರಲ್ಲನೇಕರು ಸ್ಕರ್ವಿವ್ಯಾಧಿ ಪೀಡಿತರಾಗಿ ಬಲಗುಂದುತ್ತಿದ್ದರು. ಅವರ ಆಹಾರ ಮುಖ್ಯವಾಗಿ ಗೋಧಿಹಿಟ್ಟು ಹೊರತಾಗಿ ಹಣ್ಣುಹಂಪಲುಗಳಿಲ್ಲವಾಗಿತ್ತು. ಸುತ್ತ ಮುತ್ತಲೂ ಬೆಳೆದಿದ್ದ ಹಸುರು ಸೊಪ್ಪು ಸದೆಯನ್ನು ತಂದು ಬೇಳೆಯಲ್ಲಿ ಸೇರಿಸಿ ಆಹಾರ ವಾಗಿ ಕೊಡುತ್ತಲೇ ವ್ಯಾಧಿಯು ಮಾಯವಾಯಿತು. ಆಗಿನಿಂದ (೧೯೧೬) ಸಿ ವೈಟಮಿನ್ನು ಆಹಾರ ಸಾಮಗ್ರಿಗಳಲ್ಲಿ ಎಷ್ಟೆಷ್ಟಿದೆ ಎಂಬ ಪರಿಶೀಲನೆಯನ್ನು ಕ್ರಮ ವಾಗಿ ನಡೆಸಿದರು.

ಈ ಸತ್ವವು ನಿಂಬೆಹಣ್ಣಿನ ರಸದಲ್ಲಿರುವುದಕ್ಕಿಂತ ನಾಲ್ಕರಷ್ಟು ಹೆಚ್ಚಾಗಿ ಹೇರಿಳೆಹಣ್ಣಿನ ರಸದಲ್ಲಿದೆ. ದಿನಕ್ಕೆ ಅರ್ಧ ಹೇರಿಳೆಹಣ್ಣನ್ನು ಮನುಷ್ಯನು ಆಹಾರವಾಗಿ ತೆಗೆದುಕೊಂಡರೆ ಸಾಕು, ವ್ಯಾಧಿಯು ಸುಳುವಿರುವುದಿಲ್ಲ. ನಿಂಬೆಯಹಣ್ಣಿನ ರಸವನ್ನು ಹಾಗೇ ಇಟ್ಟಿದ್ದರೆ ಅದರಲ್ಲಿನ ಈ ಸತ್ವವು ಕಡಮೆಯಾಗುತ್ತದೆ. ಷ್ಯಾಕಲ್‌ಟನ್ ಎಂಬಾತನು ಉತ್ತರಧ್ರುವವನ್ನು ಕಂಡುಹಿಡಿಯಲು ಅನೇಕ ತಿಂಗಳು ಹಡಗಿನಲ್ಲಿ ಪ್ರಯಾಣ ಬೆಳಸಿದಾಗ ನಾವಿಕರು ಹೇರಿಳೆಹಣ್ಣಿನ ರಸವನ್ನು ಉಪಯೋಗಿಸುತ್ತಿದ್ದು ಸ್ಕರ್ವಿವ್ಯಾಧಿಯ ಸೋಂಕಿಲ್ಲದಂತೆ ಆರೋಗ್ಯವನ್ನು ಪಡೆದಿದ್ದರು (ಮ್ಯಾಕ್‌ಲೀನ್, ಹುಸ್ಸಿ ೧೯೨೧). ಕಿತ್ತಿಳೆಹಣ್ಣಿನಲ್ಲಿಯೂ ವಿಶೇಷವಾಗಿ ಈ ಸತ್ವವಿದೆ. ಅದರ ಸಿಪ್ಪೆಯಲ್ಲಿ ಸ್ವಲ್ಪಭಾಗವಿದೆ. ಹಣ್ಣುಗಳು ಕೆಡದಂತೆ ಐದು ವರ್ಷಗಳಿಟ್ಟಿದ್ದರೂ ಅವುಗಳಲ್ಲಿ ವೈಟಮಿನ್ನು ಇರುತ್ತದೆ (ಡೆಲ್ಫ, ೧೯೨೪). ದ್ರಾಕ್ಷಿಹಣ್ಣಿನಲ್ಲಿಯೂ ಟೊಮಾಟೋ ಹಣ್ಣಿನಲ್ಲಿಯೂ ಬಾಳೆ ಹಣ್ಣಿನಲ್ಲಿಯೂ ಈ ಸತ್ವವಿದೆ.

ಒಂದು ವರ್ಷ ವಯಸ್ಸಿಗಿಂತಲೂ ಕಡಮೆಯಾದ ಎಳೆಯ ಮಕ್ಕಳಿಗೆ ಕೂಡ ಟೊಮಾಟೋ, ಕಿತ್ತಿಳೆ ಹಣ್ಣುಗಳ ರಸವನ್ನು ಕುಡಿಸುವುದರಿಂದ ಗುಣವಾಗುತ್ತದೆ; ಯಾವ ತೊಂದರೆಯೂ ಆಗಲಿಲ್ಲ (ಹೆಸ್, ೧೯೨೦).

ಈ ಸತ್ವವು ವಿಶೇಷವಾಗಿ ಬಾಳೆಯಹಣ್ಣು, ಕ್ಯಾಬೇಜ್, ಕಾಲಿಫ್ಲವರ್, ಹೇರಿಳೆ ಕಿತ್ತಿಳೆ ಹಣ್ಣುಗಳು, ಬಟಾಣಿ, ನೆಲಹಲಸಿನ ಹಣ್ಣು, ಬಸಲೆಸೊಪ್ಪು, ಟೊಮಾಟೋ ಹಣ್ಣು, ಟರ್ನಿಪ್, ಕಲ್ಲಂಗಡಿಹಣ್ಣು, ಇತ್ಯಾದಿಗಳಲ್ಲಿ ಇದೆ.

ಸೇಬು, ಸೌತೆಕಾಯಿ, ಈರುಳ್ಳಿ, ಆಲೂಗಡ್ಡೆ, ಹಸಿಮೆಣಸು, ಬೂದುಗುಂಬಳ ಕಾಯಿ, ಗೆಣಸು, ಕ್ಯಾರಟ್, ಮೂಲಂಗಿ ಮತ್ತು ಹಾಲು ಇವುಗಳಲ್ಲಿಯೂ ಹೆಚ್ಚಾಗಿದೆ.

ರಾಗಿ, ಗೋಧಿ, ಬಾರ್ಲಿ, ಬಟಾಣಿ, ಅವರೆ, ಕಡಲೆ, ಹೆಸರು, ಮುಂತಾದ ಧಾನ್ಯ ಗಳು ಮೊಳೆತರೆ ಅವುಗಳಲ್ಲಿ ಸಿ ವೈಟಮಿನ್ನು ಉತ್ಪನ್ನವಾಗಿ ಅವು ಗುಣವುಳ್ಳವುಗಳಾ ಗುವುವು.

ಶರೀರದಲ್ಲಿ ಸಿ ವೈಟಮಿನ್ನು ಹೆಚ್ಚುಕಾಲ ನಿಲ್ಲುವುದಿಲ್ಲ. ಆದುದರಿಂದ ದಿನಂ ಪ್ರತಿ ಇದು ಆಹಾರದಲ್ಲಿ ಶರೀರಕ್ಕೆ ಸೇರುತ್ತಿರಬೇಕು. ಬೇಯಿಸಿದ ಮಾಂಸಾಹಾರ ದಲ್ಲಿ ಈ ವೈಟಮಿನ್ನು ಇರುವುದೇ ಇಲ್ಲ.

ಹಸುವಿನ ಹಾಲಿನಲ್ಲಿ ಈ ವೈಟಮಿನ್ನಿದೆ. ಮಕ್ಕಳಿಗೆ ಒಂದು ಬಟ್ಟಲು ಹಾಲನ್ನು ದಿನಂಪ್ರತಿ ಕೊಡಬೇಕು. ಹಸುವಿನ ಆಹಾರದಲ್ಲಿ ಸಿ ವೈಟಮಿನ್ನು ಇರ ಬೇಕು. ಅದು ಹೆಚ್ಚಾಗಿದ್ದಷ್ಟೂ ಹಾಲಿನಲ್ಲಿಯೂ ಈ ಸತ್ವವು ಹೆಚ್ಚಾಗಿರುತ್ತದೆ. ಒಣಗಿದ ಹುಲ್ಲಿಗಿಂತಲೂ ಹಸುರು ಹುಲ್ಲು ದನಕ್ಕೆ ಉತ್ತಮವಾದ ಮೇವು. ಅದರಿಂದ ಹಾಲಿನಲ್ಲಿ ಸುಮಾರು ಮೂರರಷ್ಟು ಹೆಚ್ಚು ಸಿ ವೈಟಮಿನ್ನು ಕಂಡುಬಂದಿದೆ (ಡಚರ್, ೧೯೨೦). ಶೀತದೇಶದಲ್ಲಿ ದನಗಳಿಗೆ ಚಳಿಗಾಲದಲ್ಲಿ ಹಸುರುಸೊಪ್ಪು ಹುಲ್ಲು ಸಿಕ್ಕುವುದಿಲ್ಲ. ಈ ಕಾರಣದಿಂದ ಬೇಸಗೆಯ ಕಾಲದ ಹಾಲಿನಲ್ಲಿರುವಷ್ಟು ವೈಟಮಿನ್ನು ಚಳಿಗಾಲದಲ್ಲಿ ಅಲ್ಲಿಯ ದನಗಳ ಹಾಲಿನಲ್ಲಿರುವುದಿಲ್ಲ.

ಹಾಲಿನಲ್ಲಿ ಸೂಕ್ಷ್ಮ ಕ್ರಿಮಿಗಳಿರಬಹುದಾದ ಕಾರಣದಿಂದ ಅದನ್ನು ಕಾಸದೆ ಯಾವಾಗಲೂ ಕುಡಿಯಬಾರದು. ಆದರೆ ಹೆಚ್ಚು ಹೊತ್ತು ಕುದಿಸಿದರೆ ಅದರಲ್ಲಿರುವ ವೈಟಮಿನ್ನು ನಾಶವಾಗುವುದರಿಂದ ಹಾಲು ಉಕ್ಕಿಬಂದ ಕೂಡಲೆ ಕಾಸುವುದನ್ನು ನಿಲ್ಲಿಸಬೇಕು.

ತಾಯಿಯ ಸ್ತನ್ಯದಲ್ಲಿಯೂ ಸಿ ವೈಟಮಿನ್ನಿದೆ. ಆದರೆ ತಾಯಿಯ ಆಹಾರದಲ್ಲಿ ಹೆಚ್ಚು ಕಡಮೆಯಾಗುವಂತೆ ಹಾಲಿನಲ್ಲಿಯೂ ವ್ಯತ್ಯಾಸವಾಗಬಹುದು. ಆದುದರಿಂದ ಎಳೆಯ ಮಕ್ಕಳಿಗೆ ಕಿತ್ತಿಳೆ ಮತ್ತು ಟೊಮಾಟೋ ಹಣ್ಣಿನ ರಸವನ್ನು ಸ್ವಲ್ಪ ಸ್ವಲ್ಪ ವಾಗಿ ಕೊಡುವುದು ಉತ್ತಮ.

ಎ ವೈಟಮಿನ್

ಈ ಸತ್ವವು ಶರೀರದ ಬೆಳವಣಿಗೆಗೂ, ಹಸಿವುಂಟಾಗುವುದಕ್ಕೂ, ಜೀರ್ಣ ಶಕ್ತಿಗೂ ಆವಶ್ಯಕ. ಸಂತಾನವನ್ನು ಪಡೆಯುವುದಕ್ಕೂ ಮಕ್ಕಳು ಮರಿಗಳಿಗೆ ಹಾಲನ್ನು ಕೊಟ್ಟು ಪೋಷಿಸುವುದಕ್ಕೂ ಅತ್ಯಾವಶ್ಯಕ. ನರಗಳ, ಶ್ವಾಸಕೋಶದ ಮತ್ತು ನಾಳಗಳ ಆರೋಗ್ಯಕ್ಕೂ ದೃಷ್ಟಿಯ ಉತ್ತಮ ಸ್ಥಿತಿಗೂ ಆವಶ್ಯಕ. ಆಹಾರ ದಲ್ಲಿ ಇದರ ಅಭಾವದಿಂದ ದೃಷ್ಟಿಮಾಂದ್ಯವುಂಟಾಗುತ್ತದೆ ಮತ್ತು ಕಣ್ಣಿನ ಜಾಡ್ಯ ವುಂಟಾಗುತ್ತದೆ (Xerophthalmia). ದೇಹದ ಅನೇಕ ಅಂಗಗಳಿಗೆ,—ಮುಖ್ಯವಾಗಿ, ಶ್ವಾಸನಾಳಗಳು, ಹೊಟ್ಟೆ, ಕರುಳುಗಳು, ಮೂತ್ರಕೋಶಗಳ ಒಳಪೊರೆ (Linings) ಇವುಗಳಿಗೆ, ಉಪದ್ರವ ಅಥವಾ ಗಾಯವುಂಟಾಗುತ್ತದೆ. ಶರೀರದ ಬೆಳವಣಿಗೆ

ಕಡಮೆಯಾಗುವುದು ಅಥವಾ ದೇಹದ ತೂಕವು ಕಡಮೆಯಾಗುವುದು. ನರಗಳೆಲ್ಲಕ್ಕೂ ಕೆಡುಕಾಗುವುದೂ ಉಂಟು.

ಎ ವೈಟಮಿನ್ನೆಂಬ ಸತ್ವವು ನೀರಿನಲ್ಲಿ ಕರಗುವುದಿಲ್ಲ; ಎಣ್ಣೆ ಅಥವಾ ಜಿಡ್ಡಿನಲ್ಲಿ ಕರಗುವುದು. ಕಾಸುವುದರಿಂದ ಅಥವಾ ಸೆಕೆಯಿಂದ ಇದರ ಗುಣವು ಕಡಮೆಯಾಗುವುದಿಲ್ಲ; ಆದರೆ ಬಿಸಿಮಾಡಿದಾಗ ಆಮ್ಲಜನಕದ ಸಂಪರ್ಕದಿಂದ ಇದರ ಗುಣವು ಹೋಗಿಬಿಡುವುದು. ಹಸುರುಗಿಡಗಳಲ್ಲಿರುವ ಕೆರೊಟೀನ್ (Carotene) ಎಂಬ ಪದಾರ್ಥವು ಪ್ರಾಣಿಗಳ ಜಠರದಲ್ಲಿ ಮಾರ್ಪಟ್ಟು ಎ ವೈಟಮಿನ್ನಾಗುವುದು (ಮೂರ್, ೧೯೩೯). ಬೆಣ್ಣೆಯಲ್ಲಿ ಎ ವೈಟಮಿನ್ನಿದೆ; ತುಪ್ಪದಲ್ಲಿಯೂ ಇದೆ. ಎಮ್ಮೆಯ ಬಿಳಿಯ ಬೆಣ್ಣೆಯಲ್ಲಿರುವುದಕ್ಕಿಂತ ಹಸುವಿನ ಹಳದಿ ಬಣ್ಣವುಳ್ಳ ಬೆಣ್ಣೆಯಲ್ಲಿ ಈ ಸತ್ವವು ಹೆಚ್ಚಾಗಿರುತ್ತದೆ. ಹಾಗೆಯೇ ತರಕಾರಿಗಳಲ್ಲಿ ಯಾವುವು ಹಸುರು ಬಣ್ಣವುಳ್ಳವುಗಳೋ ಅವುಗಳಲ್ಲಿ ಹೆಚ್ಚಾಗಿಯೂ ಬಿಳಿಯ ಬಣ್ಣದ ತರಕಾರಿಗಳಲ್ಲಿ ಕಡಮೆಯಾಗಿಯೂ ಇರುವುದು.

ಭೂಮಿಯ ಮೇಲೂ ನೀರಿನಲ್ಲಿಯೂ ಬೆಳೆಯುವ ಹಸುರು ಗಿಡಗಳು ಸೂರ್ಯನ ಬೆಳಕಿನ ಸಹಾಯದಿಂದ ಈ ಸತ್ವವನ್ನು ಉತ್ಪತ್ತಿಮಾಡುತ್ತವೆ. ಹಸುರು ಪಾಚಿ ಮುಂತಾದ ನೀರಿನಲ್ಲಿ ಬೆಳೆಯುವ ಸಸ್ಯಗಳನ್ನು ಕ್ರಿಮಿಕೀಟಗಳು ತಿನ್ನುತ್ತವೆ. ಈ ಕ್ರಿಮಿಗಳನ್ನು ಕೆಲವು ಜಾತಿಯ ಮೀನುಗಳು ತಿನ್ನುತ್ತವೆ. ಹೀಗಾಗಿ ಮೀನುಗಳಲ್ಲಿ ಎ ವೈಟಮಿನ್ನು ವಿಶೇಷವಾಗಿ ಬಂದು ಸೇರಿರುವುದು. ಹೀಗೆ ಕಾಡ್, ಹ್ಯಾಲಿಬಟ್, ಸ್ಯಾಲ್ಮನ್ ಎಂಬ ಮೀನುಗಳ ಯಕೃತ್ತಿನಲ್ಲಿ (Liver) ವಿಶೇಷ ಕೊಬ್ಬಿರುವುದರಿಂದ ಅವುಗಳಲ್ಲಿ ಎ ವೈಟಮಿನ್ ಹೆಚ್ಚಾಗಿ ಸೇರಿರುತ್ತದೆ. ಕಾಡ್ ಲಿವರ್ ಎಣ್ಣೆಯಲ್ಲಿ ಬಣ್ಣವಿಲ್ಲದಿರುವ ಕೆರೋಟಿನಾಯಿಡ್ ಎಂಬ ವಸ್ತುವಿದ್ದು ಅದು ಕೆರೊಟೀನ್ ರೂಪಾಂತರವನ್ನು ಹೊಂದಿ ಅನಂತರ ಎ ವೈಟಮಿನ್ನಾಗುವುದು.

ಎ ವೈಟಮಿನ್ನು ಬೆಳೆಯುವ ಮಕ್ಕಳಿಗೆ ಹೇಗೋ ಹಾಗೆಯೇ ಪ್ರಾಣಿಗಳೆಲ್ಲಕ್ಕೂ ಎಲ್ಲಾ ವಯಸ್ಸಿನಲ್ಲಿಯೂ ಆರೋಗ್ಯ, ವೀರ್ಯ ಮತ್ತು ದೀರ್ಘಾಯುಸ್ಸಿಗೆ ಅತ್ಯಾವಶ್ಯಕ.

ಈ ಸತ್ವವು ಆಹಾರ ಪದಾರ್ಥಗಳಲ್ಲಿ ಎಷ್ಟಿದೆ ಎಂಬ ಪರಿಶೀಲನೆಯು ಈಚಿನ ಕೆಲವು ವರ್ಷಗಳಲ್ಲಿ ವಿಶೇಷವಾಗಿ ನಡೆದಿದೆ. ಇದು ಹೆಚ್ಚಾಗಿ ಕಾಡ್, ಮತ್ತು ಷಾರ್ಕ್ ಮೀನುಗಳ ಲಿವರ್ ಎಣ್ಣೆಯಲ್ಲಿಯೂ ಹಸುರು ತರಕಾರಿಗಳಿಂದ ತೆಗೆದ ಕೆರೋಟೀನ್‌ನಲ್ಲಿಯೂ ಇದೆ. ತರಕಾರಿಗಳಲ್ಲಿ ಏಪ್ರಿಕಾಟ್, ಕ್ಯಾಬೇಜ್, ಕ್ಯಾರಟ್, ಬಸಳೆಸೊಪ್ಪು, ಗೆಣಸು, ಟರ್ನಿಪ್, ಹುರಳಿಕಾಯಿ, ಹಸಿಬಟಾಣಿಕಾಳು, ಮುಂತಾದುವುಗಳಲ್ಲಿಯೂ ಟೊಮಾಟೋ ಹಣ್ಣು, ಕಲ್ಲಂಗಡಿ, ಬಾಳೆಹಣ್ಣು, ಹಸಿಮೆಣಸು, ಬೆಣ್ಣೆ, ಹಾಲು,

ಕೋಳಿಮೊಟ್ಟೆ—ಇವುಗಳಲ್ಲಿಯೂ ಈ ಸತ್ವವು ವಿಶೇಷವಾಗಿದೆ. ನವಿಲುಕೋಸು, ಸೌತೆಕಾಯಿ, ಬೂದುಗುಂಬಳಕಾಯಿ, ಇವುಗಳಲ್ಲಿ ಸ್ವಲ್ಪ. ಆಲೂಗಡ್ಡೆ, ಮೂಲಂಗಿ, ಈರುಳ್ಳಿ ಮುಂತಾದುವುಗಳಲ್ಲಿ ಬಹಳ ಕಡಮೆ. ದ್ರಾಕ್ಷಿ, ಕಿತ್ತಿಳೆ, ಪರಂಗಿ, ನೆಲ ಹಲಸು, ಮಾದಳ, ಜೇರಳೆ ಹಣ್ಣುಗಳಲ್ಲಿ ಕಡಮೆ. ಅಕ್ಕಿ, ಗೋಧಿ ಮೊದಲಾದ ಧಾನ್ಯಗಳಲ್ಲಿಯೂ ಕಡಮೆ. ಸಸ್ಯವರ್ಗದ ಎಣ್ಣೆಗಳಲ್ಲಿ (ಉದಾಹರಣೆಗಾಗಿ ಬಾದಾಮಿ, ಕಡಲೆಕಾಯಿ, ಹರಳು, ಕೊಬ್ಬರಿ, ಹತ್ತಿ, ಅಗಸೆ, ಸಾಸಿವೆಗಳಲ್ಲಿ) ಇಲ್ಲ. ಮೊಟ್ಟೆಗಳಲ್ಲಿರುವ ಹಳದಿಯ ರಸದಲ್ಲಿ ಎ ವೈಟಮಿನ್ ವಿಶೇಷವಾಗಿರುವುದು. ಹಾಲಿನಲ್ಲಿ ಈ ಸತ್ವವೂ ಕ್ಯಾಲ್ಸಿಯಂ ಎಂಬ ಪದಾರ್ಥವೂ ಹೆಚ್ಚಾಗಿರುವುದರಿಂದ ಹಾಲು ಅತ್ಯುತ್ತಮವಾದ ಆಹಾರ. ಹಾಲಿನಲ್ಲಿ ಜಿಡ್ಡಿನ ಭಾಗದಲ್ಲಿ ಎ ಮತ್ತು ಡಿ ವೈಟಮಿನ್ನುಗಳು ಕರಗಿರುತ್ತವೆ (ಕ್ರಾಫರ್ಡ್, ೧೯೩೦). ಮಕ್ಕಳಿಗೆ ಎಳೆತನದಲ್ಲಿ ಒಳ್ಳೆಯ ಹಸುವಿನ ಹಾಲನ್ನು ಆಹಾರವಾಗಿ ಕೊಟ್ಟರೆ ಮುಂದೆ ಹತ್ತಾರು ವರ್ಷಗಳು ಅವುಗಳ ಆರೋಗ್ಯವನ್ನು ಕಾಪಾಡಿದಂತಾಗುತ್ತದೆ. ಬಾಲ್ಯದಲ್ಲಿ ಸಾಕಾದಷ್ಟು ಹಾಲು ದೊರೆಯದಿದ್ದರೆ ಹತ್ತು ಹನ್ನೆರಡು ವರ್ಷದ ಅನಂತರ ಅನಾರೋಗ್ಯವು ತಲೆದೋರುತ್ತದೆ (ಹರ್ಮನ್ ಮತ್ತು ಬರ್ಟಿಸ್, ೧೯೨೮).

ಹಾಲಿನಲ್ಲಿ ಬೆಳವಣಿಗೆಗೆ ಅತ್ಯಾವಶ್ಯಕವಾದ ಬಿ$_2$ (ಜಿ) ವೈಟಮಿನ್ನೂ ನೀರಿನ ಭಾಗದಲ್ಲಿ ಕರಗಿರುವುದೆಂದು ಜ್ಞಾಪಕದಲ್ಲಿಡಬೇಕು.

ಪ್ರಯೋಗ ಶಾಲೆಗಳಲ್ಲಿ ಮುಖ್ಯವಾಗಿ ಇಲಿ, ಕೋಳಿ, ಮೊಲ, ನಾಯಿ, ಗಿನಿ ಹಂದಿ, ಕೋತಿ ಮುಂತಾದ ಪ್ರಾಣಿಗಳನ್ನು ಪರಿಶೀಲನೆಗೆ ಉಪಯೋಗಿಸಿದಾರೆ. ಅವುಗಳ ಆಹಾರದಲ್ಲಿ ವೈಟಮಿನ್ನುಗಳನ್ನು ವಿಶೇಷವಾಗಿ ಅಥವಾ ಅಲ್ಪವಾಗಿ ಒದಗಿಸಿ ಅವುಗಳ ಪರಿಣಾಮವನ್ನು ನೋಡಿ ಸಾವಿರಾರು ಪ್ರಯೋಗಗಳನ್ನು ದೀರ್ಘಕಾಲ ನಡೆಸಿ ಫಲಾಫಲಗಳನ್ನು ನಿಷ್ಕರ್ಷೆಮಾಡಿರುತ್ತಾರೆ.

ಬೆಳವಣಿಗೆಗಲ್ಲದೆ ಪ್ರಾಣಿಗಳು ಗರ್ಭಧರಿಸಿ, ಮರಿಗಳಿಗೆ ಹಾಲುಕೊಟ್ಟು ಪೋಷಿಸುವುದಕ್ಕೂ ಅವುಗಳ ಆಹಾರದಲ್ಲಿ ಸಾಕಾದಷ್ಟು ಎ ವೈಟಮಿನ್ನಿರಬೇಕು (ಶರಮನ್ ಮತ್ತು ಮ್ಯಾಕ್‌ಲಿಯಾಡ್, ೧೯೨೫). ಅನೇಕ ವಿಧವಾದ ರೋಗಗಳೂ ರೋಗಕ್ರಿಮಿಗಳೂ ಶರೀರಕ್ಕೆ ಪ್ರವೇಶಿಸದಂತೆ ತಡೆಯತಕ್ಕ ಶಕ್ತಿಯನ್ನು ದೇಹಕ್ಕೆ ಈ ಸತ್ವವು ಕೊಡುವುದು. ಇದು ಶ್ವಾಸಕೋಶದ ಮಾಂಸಗಳನ್ನು ಬಲಪಡಿಸಿ ಅದರ ಆರೋಗ್ಯವು ಕೆಡದಂತೆ ಕಾಪಾಡುತ್ತದೆ (ಗ್ರೀನ್‌ಬಾಕ್, ೧೯೨೧). ಒಂದು ಪರೀಕ್ಷೆಯಲ್ಲಿ ಬೆಣ್ಣೆಯನ್ನು ಹೆಚ್ಚಾಗಿ ಹಾಕಿ ಸಾಕಿದ ಇಲಿಗಳು ಬೆಣ್ಣೆಯು ಕಡಮೆಯಾಗಿ ದೊರೆತ ಇಲಿಗಳಿಗಿಂತಲೂ ಹೆಚ್ಚು ತೂಕವುಳ್ಳವುಗಳಾಗಿ ಬೆಳೆದುವು ಮತ್ತು

ಅವುಗಳಿಗಿಂತ ಹೆಚ್ಚು ಕಾಲ ಬದುಕಿದುವು. ಎಂದರೆ ಎ ವೈಟಮಿನ್ನೂ ದೀರ್ಘಾಯುಸ್ಸಿಗೆ ಕಾರಣವೆಂದಾಯಿತು.

ಡಿ ವೈಟಮಿನ್

ಕ್ಯಾಲ್ಸಿಫೆರಾಲ್ ಎಂದು ಕರೆಯಲ್ಪಡುವ ಈ ಸತ್ವವು ಶರೀರದ ಮೂಳೆಗಳ ನಿರ್ಮಾಣಕ್ಕೆ ಬೇಕಾದ ಕ್ಯಾಲ್ಸಿಯಂ ಮತ್ತು ಫಾಸ್ಫರಸ್ (ರಂಜಕ) ಎಂಬ ವಸ್ತುಗಳು ದೇಹಗತವಾಗುವಂತೆ ಮಾಡುವುದು. ಮೂಳೆಗಳ ಮತ್ತು ಹಲ್ಲುಗಳ ಬೆಳವಣಿಗೆಗೆ ಇದು ಅತ್ಯಾವಶ್ಯಕ. ಭಾವೀ ಸಂತಾನದ ಆರೋಗ್ಯಕ್ಕೆ ಗರ್ಭಧರಿಸಿದ ತಾಯಿಗೆ ಆಹಾರದಲ್ಲಿ ಅತ್ಯಾವಶ್ಯಕವಾಗಿ ದೊರೆಯಬೇಕು. ಈ ಸತ್ವವು ಆಹಾರದಲ್ಲಿಲ್ಲದಿದ್ದರೆ ಮೂಳೆಗಳ ಬೆಳವಣಿಗೆಯು ಸರಿಯಾಗಿರದೆ ಬಡಕಲಾಗಿ, ಕುಟಿಲವಾತ ಅಥವಾ ಹಕ್ಕಿದೋಷವುಂಟಾಗುವುದು. ವಯಸ್ಕರಲ್ಲಿ ಮೂಳೆಗಳು ಮೃದುವಾಗಿ ಮುರಿದು ಹೋಗುವುವು. ಹುಳುಕುಹಲ್ಲುಗಳೂ, ಅನಾರೋಗ್ಯಕ್ಕೆ ಸುಲಭವಾಗಿ ವಶವಾಗುವುದೂ ಸಂಭವಿಸುತ್ತವೆ.

ನಮ್ಮ ಆಹಾರದಲ್ಲಿ ಸಾಧಾರಣವಾಗಿ ಕ್ಯಾಲ್ಸಿಯಂ ಮತ್ತು ಫಾಸ್ಫೇಟ್ ಎಂಬ ವಸ್ತುಗಳು ಇದ್ದೇ ಇರುತ್ತವೆ. ಇವು ಶರೀರಗತವಾಗಿ ದೇಹವು ಬೆಳೆದು ಆರೋಗ್ಯವಾಗಿರಬೇಕಾದರೆ ಆಹಾರದಲ್ಲಿ ಡಿ ವೈಟಮಿನ್ನೂ ಇರಬೇಕು. ಇಲ್ಲದಿದ್ದರೆ ಕ್ಯಾಲ್ಸಿಯಂ ಶರೀರದಿಂದ ವಿಸರ್ಜನೆಯಾಗುತ್ತದೆ.

ಬೆಣ್ಣೆಯಲ್ಲಿ ಎ ವೈಟಮಿನ್ನು ಹೆಚ್ಚಾಗಿಯೂ, ಡಿ ವೈಟಮಿನ್ನು ಸ್ವಲ್ಪವಾಗಿಯೂ ಇದೆ. ಡಿ ವೈಟಮಿನ್ನು ಸ್ವಲ್ಪವಾಗಿದ್ದರೂ ಶರೀರದ ಬೆಳವಣಿಗೆಗೆ ಸಾಕು. ಆದರೆ ಕಾಡ್‌ಲಿವರ್ ಎಣ್ಣೆಯಲ್ಲಿ ಎ ಮತ್ತು ಡಿ ವೈಟಮಿನ್ನುಗಳು ಎರಡೂ ವಿಶೇಷವಾಗಿರುವುದರಿಂದ ಇದು ಬೆಣ್ಣೆಗಿಂತ ಹೆಚ್ಚು ಫಲಕಾರಿ (ಮ್ಯಾಕ್‌ಕಲಮ್, ೧೯೨೨). ಡಿ ವೈಟಮಿನ್ನು ಸಾಲದೆ ಬಡಕಲಾಗಿರುವ ಮಕ್ಕಳನ್ನು ದಿನವಹಿ ಸ್ವಲ್ಪಕಾಲ ಬಿಸಿಲಿನಲ್ಲಿ ಬಿಟ್ಟಿದ್ದರೂ, ಬಿಸಿಲಿನಲ್ಲಿರುವ ಅಲ್ಟ್ರವಯೊಲೆಟ್ ರಶ್ಮಿಗಳನ್ನು ಕೃತಕವಾಗಿ ಎಲೆಕ್ಟ್ರಿಕ್ ದೀಪಗಳಿಂದ ಹೊರಡಿಸಿ ಆ ಮಕ್ಕಳ ದೇಹದ ಮೇಲೆ ಪ್ರಸರಿಸಿದರೂ ರೋಗವು ಗುಣವಾಗುವುದು (ಹೆಸ್ ಮತ್ತು ಅಂಗರ್, ೧೯೨೧). ಶರೀರದ ಒಂದು ಭಾಗದ ಮೇಲೆ ಮಾತ್ರ ಸೂರ್ಯರಶ್ಮಿಗಳು ಬಿದ್ದರೂ, ಉಳಿದ ಎಲ್ಲಾ ಭಾಗಗಳೂ ಗುಣಹೊಂದುತ್ತವೆ. ಆಗ ಮೂಳೆಯೊಳಗಿನ ರಸದಲ್ಲಿಯೂ ರಕ್ತದಲ್ಲಿಯೂ ಫಾಸ್ಫೇಟ್ ಹೆಚ್ಚುತ್ತ ಬರುವುದು. ಸೂರ್ಯನ ರಶ್ಮಿಗಳಂತೆಯೇ ಕಾಡ್‌ಲಿವರ್ ಎಣ್ಣೆಯೂ ಗುಣವನ್ನು ತೋರಿಸುತ್ತದೆ. ಸೂರ್ಯನ ಕಿರಣಗಳಲ್ಲಿ ಋತುವಿಗೆ ಅನುಗುಣವಾಗಿ ಅಲ್ಟ್ರ

ವಯೊಲೆಟ್ ರಶ್ಮಿಗಳು ಬೇಸಗೆಯಲ್ಲಿ ಹೆಚ್ಚಾಗಿಯೂ, ಚಳಿಗಾಲದಲ್ಲಿ ಕಡಮೆಯಾಗಿಯೂ ಉತ್ತರದ ದೇಶಗಳಲ್ಲಿ ಇರುತ್ತವೆ. ಈ ಕಾಲದಲ್ಲಿ ದೇಹದ ರಕ್ತದಲ್ಲಿಯೂ ಫಾಸ್ಫೇಟ್ ಹೆಚ್ಚು ಕಡಮೆಯಾಗುವುದೆಂದು ಅರುವತ್ತು ಮಕ್ಕಳ ಪರಿಶೀಲನೆಯಿಂದ ತಿಳಿಯಬಂದಿತು (ಹೆಸ್ ಮತ್ತು ಲಂಡೇಗರ್ನ, ೧೯೨೨). ಚಳಿಗಾಲದಲ್ಲಿ ಕೃತಕ ಅಲ್ಟ್ರಾ ವಯೊಲೆಟ್ ರಶ್ಮಿಗಳನ್ನು ಮಕ್ಕಳ ದೇಹದ ಮೇಲೆ ಪ್ರಸರಿಸಿದಾಗ ಅವುಗಳ ರಕ್ತದಲ್ಲಿ ಫಾಸ್ಫೇಟ್ ಹೆಚ್ಚಿತು. ಚಳಿರಾಜ್ಯಗಳಲ್ಲಿ ಸೂರ್ಯನ ಈ ರಶ್ಮಿಗಳು ವಿಶೇಷವಾಗಿ ಭೂಮಿಯನ್ನು ಮುಟ್ಟಲಾರವು. ಇದರಿಂದ ಇಂತಹ ಜಾಡ್ಯವು ಚಳಿರಾಜ್ಯಗಳಲ್ಲಿರುವಷ್ಟು ಉಷ್ಣವಲಯದಲ್ಲಿ ವಿಶೇಷವಾಗಿಲ್ಲ. ಆದರೆ ಈ ರಶ್ಮಿಗಳು ಕಪ್ಪು ಬಟ್ಟೆಗಳನ್ನೂ ಚರ್ಮವನ್ನೂ ದಾಟಲಾರವು. ಆದರಿಂದ ಕಪ್ಪುಮೈಯುಳ್ಳ ನೀಗ್ರೋ ಜನರ ಮಕ್ಕಳಿಗೆ ಸೂರ್ಯರಶ್ಮಿಯ ಫಲವು ಕಡಮೆಯಾಗಿ ಅವರಿಗೆ ಈ ಜಾಡ್ಯ ಬರುವುದು ಹೆಚ್ಚು (ಹೆಸ್, ೧೯೨೫-೨೭).

ಕೆಲವು ಆಹಾರಪದಾರ್ಥಗಳನ್ನು ಕೃತಕರಶ್ಮಿಗೆ ಅಥವಾ ಸೂರ್ಯರಶ್ಮಿಗೆ ಒಡ್ಡಿದರೆ ಅವುಗಳಲ್ಲಿ ಡಿ ವೈಟಮಿನ್ನು ಉತ್ಪತ್ತಿಯಾಗುವುದು. ಈ ರೀತಿಯಲ್ಲಿ ಹತ್ತಿ ಅಗಸೆ ಬೀಜಗಳ ಎಣ್ಣೆ, ಬೆಳೆಯುತ್ತಿರುವ ಗೋಧಿಯ ಗಿಡ, ಹಾಲ್ಮೂಲಂಗಿ ಸೊಪ್ಪು—ಇವುಗಳಲ್ಲಿ ಸೂರ್ಯಕಿರಣಗಳಿಂದ ವೈಟಮಿನ್ನು ಹುಟ್ಟುತ್ತದೆ. ಸಸ್ಯಗಳ ಎಣ್ಣೆಯಲ್ಲಿರುವ ಫೈಟೊಸ್ಟೀರಾಲ್ ಮತ್ತು ಪ್ರಾಣಿಗಳ ಕೊಬ್ಬಿನಲ್ಲಿರುವ ಕೊಲೆಸ್ಟೀರಾಲ್ ಎಂಬ ವಸ್ತುಗಳಲ್ಲಿ ಸೂರ್ಯನ ರಶ್ಮಿಗಳು ಅಥವಾ ಕೃತಕ ರಶ್ಮಿಗಳು ಡಿ ವೈಟಮಿನ್ನನ್ನು ಉತ್ಪತ್ತಿ ಮಾಡುತ್ತವೆ (ಹೆಸ್, ೧೯೨೪).

ಎಲ್ಲಾ ಪ್ರಾಣಿಗಳ ಚರ್ಮದ ಕೆಳಭಾಗದಲ್ಲಿ ಕೊಲೆಸ್ಟೀರಾಲ್ ಹೆಚ್ಚಾಗಿರುವುದೆಂದು ತಿಳಿದಿದೆ. ಸೂರ್ಯರಶ್ಮಿಗಳು ಇದರಲ್ಲಿ ಸತ್ವವನ್ನುಂಟುಮಾಡಿ ಅದರಿಂದ ಮೂಳೆಗಳ ಬೆಳವಣಿಗೆಯಾಗುವುದೆಂದು ತೋರುತ್ತದೆ. ಆದುದರಿಂದ ಚರ್ಮವು ದೇಹಕ್ಕೆ ಆವರಣ ಮಾತ್ರವಲ್ಲ; ದೇಹಕ್ಕೆ ಜಾಡ್ಯಗಳು ಬಾರದಂತೆ ಸೂರ್ಯಕಿರಣಗಳ ಸಹಾಯದಿಂದ ಕಾಪಾಡುವ ಇಂದ್ರಿಯವೂ ಹೌದು. ಈಚಿನ ಶೋಧನೆಗಳಿಂದ ತಿಳಿಯಬರುವುದೇನೆಂದರೆ, ಕೊಲೆಸ್ಟೀರಾಲಿನಲ್ಲಿರುವ ಅದೇ ರೀತಿಯ ಎರ್ಗೊಸ್ಟೀರಾಲ್ ಎಂಬ ಪದಾರ್ಥವೇ ಡಿ ವೈಟಮಿನ್ನಾಗಿ ಪರಿವರ್ತನೆ ಹೊಂದುವುದು (ರೊಸೆನ್ಹೀಮ್, ೧೯೨೮).

ಅಲ್ಟ್ರಾ ವಯೊಲೆಟ್ ರಶ್ಮಿಗಳು ಪ್ರಸರಿಸುವಂತೆ ಮಾಡಲ್ಪಟ್ಟ ಎರ್ಗೋಸ್ಟೀರಾಲ್ ಮತ್ತು ಯೀಸ್ಟ್ (Yeast)ಗಳಲ್ಲಿಯೂ ಕಾಡ್ ಮತ್ತು ಹ್ಯಾಲಿಬಟ್ ಮೀನುಗಳ ಲಿವರ್ ಎಣ್ಣೆಯಲ್ಲಿಯೂ ಡಿ ವೈಟಮಿನ್ನು ವಿಶೇಷವಾಗಿರುವುದು.

ಕೋಳಿಮೊಟ್ಟೆಯ ಹಳದಿಯಲ್ಲಿಯೂ, ಸ್ಯಾಲ್ಮನ್ ಎಂಬ ಮೀನಿನಲ್ಲಿಯೂ ಈ ಸತ್ವವು ಹೆಚ್ಚಾಗಿದೆ. ಬೆಣ್ಣೆಯಲ್ಲಿಯೂ ಹಸುವಿನ ಹಾಲಿನಲ್ಲಿಯೂ ಇರುವುದು. ಲವಂಗದ ಎಣ್ಣೆ ಕೊಬ್ಬರಿ ಎಣ್ಣೆಗಳಲ್ಲಿಯೂ ಇದೆ. ಉತ್ತರ ದೇಶಗಳಲ್ಲಿ ಬೆಳೆದ ಬಸಲೆ ಸೊಪ್ಪಿನಲ್ಲಿ, ಬೇಸಗೆಯಲ್ಲಿ ಹೆಚ್ಚಾಗಿಯೂ ಚಳಿಗಾಲದಲ್ಲಿ ಕಡಮೆಯಾಗಿಯೂ ಇರುತ್ತದೆ (ಚಿಕ್ ಮತ್ತು ರಾಸ್ಕೊ. ೧೯೨೭).

ಸುಮಾರು ಅರ್ಧ ಔನ್ಸಿನಷ್ಟು ಆಗತಾನೇ ಕರೆದ ಹಸುವಿನ ಹಾಲಿನಿಂದ ರೋಗಗ್ರಸ್ತವಾದ ಇಲಿಗಳಿಗೆ ಗುಣವಾಯಿತು. ಅದೇ ಹಾಲನ್ನು ಮೂವತ್ತು ನಿಮಿಷ ಅಲ್ಟ್ರವಯೊಲೆಟ್ ರಶ್ಮಿಯಲ್ಲಿಟ್ಟನಂತರ, ಇಲಿಗೆ ಗುಣಪಡಿಸಲು, ಹತ್ತನೆಯ ಒಂದು ಭಾಗದಷ್ಟು ಪ್ರಮಾಣ ಹಾಲು ಸಾಕಾಯಿತು (ಸ್ಟೀನ್‌ಬಾಕ್, ೧೯೨೫).

ಸಾಧಾರಣವಾಗಿ ಹಸುವಿನ ಹಾಲನ್ನು ಮಾತ್ರ ಮಕ್ಕಳಿಗೆ ಬೇಕಾದಷ್ಟು ಕುಡಿಸುತ್ತಿದ್ದರೆ ರೋಗವು ಬಾರದಂತೆ ತಡೆಯುವಷ್ಟು ಡಿ ವೈಟಮಿನ್ನು ಅವುಗಳಿಗೆ ದೊರಕುವುದು (ಷರಮನ್, ೧೯೨೯).

ಅನೇಕ ಸಸ್ಯಗಳ ಮತ್ತು ಪ್ರಾಣಿಗಳ ಎಣ್ಣೆಗಳನ್ನು ಪರಿಶೀಲಿಸಿದಾಗ, ಮೀನುಗಳ ಮತ್ತು ಸೀಲ್ ಎಂಬ ಉತ್ತರ ಸಮುದ್ರದಲ್ಲಿ ಜೀವಿಸುವ ಪ್ರಾಣಿಗಳ ಎಣ್ಣೆಯಲ್ಲಿ ಮಾತ್ರ ಡಿ ವೈಟಮಿನ್ನು ಇದೆಯೇ ಹೊರತು ಇತರ ಪ್ರಾಣಿಗಳ ಅಥವಾ ಸಸ್ಯಗಳ ಎಣ್ಣೆಗಳಲ್ಲಿ ಇಲ್ಲವೆಂಬುದು ತಿಳಿಯಿತು. ಕಾಡ್ ಮೀನಿನಲ್ಲಿರುವುದಕ್ಕಿಂತ ಪಫರ್ (Puffer) ಎಂಬ ಮೀನಿನ ಲಿವರ್ ಎಣ್ಣೆಯಲ್ಲಿ ಸುಮಾರು ೧೫೦೦ ರಷ್ಟು ಹೆಚ್ಚು ಫಲಕಾರಿಯಾಗಿರುವಷ್ಟು ಈ ಸತ್ವವಿದೆ (ಬಿಲ್ಸ್, ೧೯೨೭).

ಮೀನುಗಳಲ್ಲಿ ಈ ಸತ್ವವು ಉತ್ಪತ್ತಿಯಾಗುವಂತೆ ಮಾಡುವ ಇಂದ್ರಿಯಗುಣ ವಿಶೇಷವಿರಬಹುದು. ಅವುಗಳ ಆಹಾರವಾದ ಪ್ಲಾಂಕಟನ್ ಎಂಬ ಸೂಕ್ಷ್ಮ ಕ್ರಿಮಿಗಳೇ ಇದರ ಉತ್ಪತ್ತಿಗೆ ಸ್ವಲ್ಪ ಮಟ್ಟಿಗೆ ಕಾರಣವಿರಬಹುದು (ಬೆಲ್ಲಾಕ್, ೧೯೩೦).

ಹಸುವಿನ ಮತ್ತು ಆಡಿನ ಹಾಲಿನಲ್ಲಿಯೂ, ಮೊಟ್ಟೆಯ ಹಳದಿರಸದಲ್ಲಿಯೂ ಸೂರ್ಯ ರಶ್ಮಿಗಳ ಅಥವಾ ಕೃತಕರಶ್ಮಿಗಳ ಪ್ರಸರಣೆಯಿಂದ ಮೊದಲಿರುವುದಕ್ಕಿಂತ ಹದಿನೈದು ಇಪ್ಪತ್ತರಷ್ಟು ಹೆಚ್ಚು ಡಿ ವೈಟಮಿನ್ನು ಉತ್ಪತ್ತಿಯಾಗುತ್ತದೆ. ದನದ ಆಹಾರವಾದ ಹುಲ್ಲು ಸೊಪ್ಪು ಹಸುರೆಲೆಗಳು ಬಿಸಿಲಿನಲ್ಲಿ ಬೆಳೆಯುವುದರಿಂದಲೂ ದನವೂ ಬಿಸಿಲಿನಲ್ಲಿ ದಿನಂಪ್ರತಿ ತಿರುಗಾಡುವುದರಿಂದಲೂ ಅದರ ಹಾಲಿನಲ್ಲಿ ವೈಟಮಿನ್ನು ಹೆಚ್ಚುತ್ತದೆ. ಧಾನ್ಯಗಳನ್ನೂ ಬೇರುಗಳನ್ನೂ ತಿಂದ ಹಸುವಿನ ಹಾಲಿನಲ್ಲಿ ಈ ಸತ್ವವು ಕಡಮೆ. ಹಸುರೆಲೆಗಳನ್ನು ತಿಂದ ದನದ ಹಾಲಿನಲ್ಲಿ ವಿಶೇಷ. ಅಲ್ಲದೆ ಕ್ಯಾಲ್ಸಿಯಂ ಅದರ ಶರೀರಗತವಾಗಿ ಹಾಲಿನಲ್ಲಿಯೂ ದೊರಕುವುದು. ದನಕ್ಕೆ ಅದರ ಆಹಾರದ ಜೊತೆಗೆ ಕಾಡ್

ಲಿವರ್ ಎಣ್ಣೆಯನ್ನು ದಿನವಹಿ ಎಂಟು ಔನ್ಸಿನಷ್ಟು ಕುಡಿಸಿದಾಗ ಅದರ ಹಾಲಿನಲ್ಲಿ ಡಿ ವೈಟಮಿನ್ನು ಹೆಚ್ಚಿತು. ಉತ್ತರದ ಸೀಮೆಗಳ ದನಗಳ ಹಾಲಿನಲ್ಲಿ ಈ ಸತ್ವವು ಬೇಸಗೆಯಲ್ಲಿ ಹೆಚ್ಚಾಗಿಯೂ ಚಳಿಗಾಲದಲ್ಲಿ ಕಡಮೆಯಾಗಿಯೂ ಇರುತ್ತದೆ. ಕಾರಣವೇನೆಂದರೆ ಚಳಿಗಾಲದಲ್ಲಿ ಸೂರ್ಯನ ರಶ್ಮಿಗಳು ಆ ದೇಶಗಳಲ್ಲಿ ಕಡಮೆ: ದನದ ಆಹಾರವಾದ ಹುಲ್ಲು ಸೊಪ್ಪುಗಳಲ್ಲಿಯೂ ದನದ ಶರೀರದಲ್ಲಿಯೂ ಈ ಸತ್ವವು ಉತ್ಪತ್ತಿಯಾಗಲು ಅವಕಾಶವಿಲ್ಲ.

ಇದರಿಂದ ಸೂರ್ಯನು ಜೀವನದ ಆಧಾರವೆಂದು ಪುನಃ ಪುನಃ ನಮಗೆ ತಿಳಿವಳಿಕೆಯಾಗುವುದು.

ಒಟ್ಟಿನಲ್ಲಿ ಡಿ ವೈಟಮಿನ್ನು ಆಹಾರಪದಾರ್ಥಗಳಲ್ಲಿ ವಿಶೇಷವಾಗಿಲ್ಲ. ತರಕಾರಿಗಳಲ್ಲಿ ಕಡಮೆ. ಹಸುವಿನ ಹಾಲಿನಲ್ಲಿಯೂ, ಬೆಣ್ಣೆಯಲ್ಲಿಯೂ, ಕೋಳಿಯ ಮೊಟ್ಟೆ ಮತ್ತು ಕಾಡಲಿವರ್ ಎಣ್ಣೆಯಲ್ಲಿಯೂ ಹೆಚ್ಚಾಗಿ ದೊರಕುವುದು. ಹಾಲು ಸಾಧಾರಣವಾಗಿ ಸುಲಭವಾಗಿ ದೊರಕುವುದರಿಂದ ಇದು ದಿನಂಪ್ರತಿ ಎಲ್ಲರೂ ಉಪಯೋಗಿಸುತ್ತಿರಬೇಕಾದ ಅತ್ಯುತ್ತಮ ಆಹಾರ.

ಇ ವೈಟಮಿನ್

ಸಾಮಾನ್ಯವಾಗಿ ಸಂತಾನ ಪ್ರಾಪ್ತಿಗೆ ಪ್ರಾಣಿಗಳ ಆಹಾರದಲ್ಲಿ ಎ ವೈಟಮಿನ್ನಿನ ಜೊತೆಯಲ್ಲಿ ಮತ್ತೊಂದು, ಎಂದರೆ ಇ ವೈಟಮಿನ್, ಆವಶ್ಯಕ.

ಪರಿಶೀಲನೆಗಾಗಿ ಕೃತಕ ಆಹಾರಗಳನ್ನು ಪಡೆಯುತ್ತಿದ್ದ ಇಲಿಗಳು ಮರಿಗಳನ್ನು ಹಾಕಲಾರದೆ ಇದ್ದುದನ್ನು ಕಂಡು ಅವುಗಳಿಗೆ ಗೋಧಿ ಮೊದಲಾದ ಧಾನ್ಯಗಳನ್ನು ಆಹಾರವಾಗಿ ಹಾಕಿದನಂತರ ಅವು ಮರಿಗಳನ್ನು ಪಡೆಯಲು ಸಾಧ್ಯವಾಯಿತು. ಇದರಿಂದ ಧಾನ್ಯಗಳಲ್ಲಿ ಇ ವೈಟಮಿನ್ ಇದೆಯೆಂದು ತಿಳಿಯಿತು (ಷ್ಯೂರ್, ೧೯೨೪). ಈ ಸತ್ವವು ಪುರುಷತ್ವಕ್ಕೂ ಸ್ತ್ರೀಯ ಗರ್ಭಧಾರಣೆಗೂ ಆವಶ್ಯಕ. ಆಹಾರದಲ್ಲಿ ಇದು ದೊರಕದಿದ್ದರೆ ನಿರ್ವೀರ್ಯತೆಯೂ, ಬಸಿರಾಗಲು ಅಶಕ್ತತೆಯೂ ಉಂಟಾಗುವುವು. ಈ ಸತ್ವವು ಆಹಾರದಲ್ಲಿ ಸಾಕಾದಷ್ಟಿಲ್ಲದಿದ್ದರೆ ಗರ್ಭನಷ್ಟವಾಗುವುದುಂಟು.

ಈ ಸತ್ವವು ಜಿಡ್ಡಿನಲ್ಲಿ ಕರಗತಕ್ಕದ್ದು. ಆಹಾರವನ್ನು ಕುದಿಸುವುದರಿಂದ ಅದರಲ್ಲಿರುವ ಸತ್ವವು ನಷ್ಟವಾಗುವುದಿಲ್ಲ.

ಈ ಸತ್ವವು ಅಧಿಕವಾಗಿ ಗೋಧಿಯ ತಿರುಳಿನಲ್ಲಿದೆ. ವಿಶೇಷವಾಗಿ ಹಾಲ್ಮೊಲಂಗಿ ಸೊಪ್ಪು, ಅಂತರಗಂಗೆ (ಹರಿವೆ) ಸೊಪ್ಪು, ಇವುಗಳಲ್ಲಿ ಇದೆ. ಬಾರ್ಲಿ, ಅವರೆ, ಕಾಕಂಬಿ, ತೋಕೆಗೋಧಿ (Oat), ಧಾನ್ಯಗಳ ಎಣ್ಣೆಗಳು, ಹತ್ತಿಯಬೀಜ, ಬಟಾಣಿ,

ಅಕ್ಕಿ, ಗೋಧಿ, ಕೋಳಿಮೊಟ್ಟೆ, ಹಾಲು ಇವುಗಳಲ್ಲಿ ಇ ವೈಟಮಿನ್ ದೊರಕುವುದು. ಬೆಣ್ಣೆಯಲ್ಲಿಯೂ ಹೆಚ್ಚಾಗಿರುವುದು. ಬಾಳೆಹಣ್ಣು ಕಿತ್ತಿಳೆಹಣ್ಣುಗಳಲ್ಲಿ ಸ್ವಲ್ಪವಾಗಿದೆ. ಕಾಡ್‌ಲಿವರ್ ಎಣ್ಣೆಯಲ್ಲಿ ವಿರಳ. ಆಹಾರ ಪದಾರ್ಥಗಳು ಕೊಳೆತರೆ ಅಥವಾ ಹಳಸಿದರೆ ಅವುಗಳಲ್ಲಿರುವ ಇ ವೈಟಮಿನ್ ನಷ್ಟವಾಗುತ್ತದೆ.

ಈ ಸತ್ವವು ಅನೇಕ ಪದಾರ್ಥಗಳಲ್ಲಿರುವುದರಿಂದಲೂ, ದೇಹಕ್ಕೆ ಅತಿ ಸ್ವಲ್ಪವೇ ಬೇಕಾಗಿರುವುದರಿಂದಲೂ ಇದರ ವಿಚಾರವನ್ನು ಎ ವೈಟಮಿನ್ನಿನ ವಿಚಾರದಷ್ಟು ಮುಖ್ಯವಾಗಿ ವಿಸ್ತರಿಸಬೇಕಾಗಿಲ್ಲ.

ಕೊನೆಯ ಮಾತು

ಒಳ್ಳೆಯ, ಪುಷ್ಟಿಕರವಾದ ಮತ್ತು ವೈಟಮಿನ್ನುಗಳನ್ನುಳ್ಳ ಆಹಾರವು ಎಲ್ಲರಿಗೂ ಸಿಕ್ಕಲು ಸಾಧ್ಯವೇ? ನಮ್ಮ ಭಾರತವು ಈಗ ಬಡತನದ ನಾಡು. ಹೊತ್ತುಹೊತ್ತಿಗೆ ಸಾಕಾದಷ್ಟು ಆಹಾರವು ಸಿಕ್ಕುವುದೇ ಅನೇಕರಿಗೆ ದುರ್ಲಭ. ಹಾಗಿದ್ದರೂ ಕೆಲವು ಮುಖ್ಯ ವಿಚಾರಗಳನ್ನು ಎಲ್ಲರಿಗೂ ತಿಳಿಸುವುದು ಆವಶ್ಯಕ. ನಮ್ಮವರ ಆಹಾರದಲ್ಲಿ ಅಕ್ಕಿ ಮುಖ್ಯ. ಭತ್ತವನ್ನು ಮಿಲ್ಲಿನಲ್ಲಿ ಬೇರ್ಪಡಿಸದೆ ಕೊಟ್ಟಣದಲ್ಲಿ ಕುಟ್ಟಿಸಬೇಕು. ರಾಗಿಯು ಉತ್ತಮವಾದ ಆಹಾರ. ಜನರು ಗೋಧಿಯನ್ನು ಸಾಧ್ಯವಾದಷ್ಟು ಹೆಚ್ಚಾಗಿ ಉಪಯೋಗಿಸಬೇಕು. ಅಗ್ಗವಾಗಿ ಸಿಕ್ಕುವ ಬೆರಕೆ ಸೊಪ್ಪುಗಳನ್ನೂ ತರಕಾರಿಗಳನ್ನೂ ದಿನಂಪ್ರತಿ ತಿನ್ನಬೇಕು. ಹೇರಿಳೆ, ನಿಂಬೆ, ಕಿತ್ತಿಳೆ, ಬಾಳೆ ಮುಂತಾದ ಹಣ್ಣುಗಳನ್ನು ಹೆಚ್ಚು ಹೆಚ್ಚಾಗಿ ಉಪಯೋಗಿಸಬೇಕು. ಹಸುಗಳನ್ನು ಸರಿಯಾಗಿ ಸಾಕಿ ಸಲಹಿ ಅವುಗಳ ಹಾಲನ್ನು ಪಡೆದು ಬೆಣ್ಣೆ, ತುಪ್ಪ, ಮಜ್ಜಿಗೆಗಳನ್ನು ಆಹಾರದಲ್ಲಿ ಸೇವಿಸಬೇಕು. ಮಕ್ಕಳಿಗಂತೂ ಇವುಗಳ ಆವಶ್ಯಕತೆ ಹೆಚ್ಚು. ಗೋಮಾತೆಯು ನಮ್ಮ ಪೂಜೆಗೆ ಹೇಗೆ ಅರ್ಹಳೋ ಹಾಗೆಯೇ ಸೂರ್ಯನನ್ನೂ ನಾವು ಎದುರುಗೊಂಡು ದಿನವಹಿ ನಮಸ್ಕರಿಸುತ್ತಿರಬೇಕು. ಬಿಸಿಲಿನಲ್ಲಿ ಬೆಳೆದ ಮಕ್ಕಳು ಆರೋಗ್ಯವಂತರಾಗುತ್ತಾರೆ. ಅನುಭವದಿಂದ ನಮ್ಮ ಪೂರ್ವಿಕರು ದಿನಂಪ್ರತಿ ಆಹಾರದಲ್ಲಿ ನಾನಾ ವಿಧವಾದ ಶಾಕಗಳು (ತರಕಾರಿಗಳು), ಮೊಸರು, ಜೇನುತುಪ್ಪ, ಹಸುವಿನ ಹಾಲು, ತುಪ್ಪ, ನೀರು, ಇದ್ದೇ ಇರಬೇಕೆಂದೂ ಗೃಹಸ್ಥರಿಗೆ ತಾಂಬೂಲವು ವಿಧಿಯೆಂದೂ ಹೇಳಿರುವರು. ಆಧುನಿಕ ವಿಜ್ಞಾನ ಸಂಶೋಧನೆಗಳು ಈ ವಿಷಯವನ್ನು ದೃಢೀಕರಿಸುವುವು. ಮಾಂಸಾಹಾರಕ್ಕಿಂತಲೂ ಶಾಕಾಹಾರವು ಉತ್ತಮ ಮತ್ತು ಶ್ರೇಷ್ಠ.

ವೈಟಮಿನ್ನುಗಳ ವಿಚಾರವನ್ನು ಸಾವಿರಾರು ಮಂದಿ ಪಾಶ್ಚಾತ್ಯರೂ ಜಪಾನೀಯರೂ ಶೋಧನೆಮಾಡಿರುತ್ತಾರೆ. ಇಂತಹ ವೈಜ್ಞಾನಿಕರಲ್ಲಿ ಭಾರತೀಯರು ಒಬ್ಬಿ

ಬ್ಬರು ಮಾತ್ರ. ನವೀನವಾದ ಉಪಯುಕ್ತವಾದ ವೈಜ್ಞಾನಿಕ ಶೋಧನೆಗಳಲ್ಲಿ ನಮ್ಮವರಿನ್ನೂ ಹಿಂದುಳಿದಿದ್ದಾರೆ. ಕಾರಣವೇನೆಂದರೆ ಉತ್ತಮ ತರಗತಿಯ ಸಂಶೋಧನಾ ಸಂಸ್ಥೆಗಳು ನಮ್ಮ ದೇಶದಲ್ಲಿರುವುದು ಒಂದೋ ಎರಡೋ; ಶೋಧಕರಿಗೆ ಪೋಷಕರಿಲ್ಲ. ಸ್ವತಂತ್ರರಲ್ಲದ ವೈಜ್ಞಾನಿಕರು ಉತ್ತಮ ಶೋಧನೆಗಳನ್ನು ನಡೆಸಲಾರರು. ಸ್ವಾತಂತ್ರ್ಯವಿಲ್ಲದ ದೇಶದಲ್ಲಿ ಸತ್ಯ ಜ್ಞಾನಗಳ ಬೆಳವಣಿಗೆಯೂ ಕಷ್ಟ.

ಮುಂದಿನ ನವಯುಗದಲ್ಲಿ ಭಾರತೀಯರು ಮೇಲೆನಿಸಿಕೊಳ್ಳುವಂತೆ ವಿದ್ಯಾಸಂಸ್ಥೆಗಳು ಬೆಳೆಯಲೆಂದೂ ಅವಕ್ಕೆ ಪೋಷಣೆಯೂ ಸ್ವಾತಂತ್ರ್ಯವೂ ಕೈಗೂಡಲೆಂದೂ ನಮ್ಮೆಲ್ಲರ ಹಾರೈಕೆ.

ವೈ. ಕೆ. ರಘುನಾಥರಾವ್, ಎಂ.ಎಸ್‌ಸಿ.

ಗ್ರಂಥೋಪಕಾರ

The Vitamins—H. C. Sherman and S. L. Smith.
Journal of Industrial and Engineering Chemistry.
Journal of Biological Chemistry.

ಭೀಷ್ಮಸ್ಥಿತಿ

ಸತ್ಯಮಿಥ್ಯೆಗಳ ಸಮರದಲ್ಲಿ ಸತ್ಯಕ್ಕೆ ಜಯವಾಗಲೆಂದು ಹರಸಿ ಹಾರೈಸಿದರೂ ಮಿಥ್ಯೆಯ ಪಕ್ಷದಲ್ಲಿ ನಿಂತು ಹೋರಾಡುತ್ತಿದ್ದೇನೆ.

ಸತ್ಯ ಗೆದ್ದಾಗಲೆಲ್ಲ ಹಿಗ್ಗುತ್ತೇನೆ; ಮಿಥ್ಯೆ ಗೆಲ್ಲಲು ಕುಗ್ಗುತ್ತೇನೆ.

ಆದರೂ ಸತ್ಯದ ಗೆಲವಿನ ಗಾಂಭೀರ್ಯಕಿಂತಲೂ ಮಿಥ್ಯೆಗೆ ಸೋಲುವ ಮಾಧುರ್ಯವೆ ಮಧುರತರವಾಗಿದೆ.

ಓ ಸತ್ಯಮೂರ್ತಿ, ಮಿಥ್ಯೆಯ ಮೋಹದ ಬಣ್ಣದ ಬುದ್ಬುದವು ಸಿಡಿದೊಡೆಯಲಿ! ಸತ್ಯದ ಶೂನ್ಯತೆಗೆ ಸರ್ವಸ್ವವಾಗಲಿ!

"ಹ್ರೀಂ"

ರಸಿಕ ಮನೋರಂಜನ ವಿಲಾಸ[1]

ಇದು ಕಾವ್ಯಾಂಗಗಳಾದ ಅಷ್ಟಾದಶವರ್ಣನೆಗಳೊಡನೆ ಕೂಡಿದ ಶೃಂಗಾರ ರಸಪ್ರಧಾನವಾದ ಕನ್ನಡ ಚಂಪೂಕಾವ್ಯ. ಇದನ್ನು ರಚಿಸಿದವನು ಕುಂಡಲಗಿರಿ ಯೆಂಬವನು. ಇವನು ಸ್ವವಿಷಯವಾಗಿ ಕಾವ್ಯದಲ್ಲಿ ವಿಶೇಷವಾಗಿ ಹೇಳಿಕೊಂಡಿಲ್ಲ. ಆದರೂ ಆಶ್ವಾಸಾಂತ್ಯದ ಗದ್ಯದಿಂದಲೂ ಗ್ರಂಥಾಂತ್ಯದಲ್ಲಿ ಬರುವ

ವರ ದಿಗ್ಗಾವಿ[2] ಪುರಪ್ರಭುಪ್ರಥಿತ ಧರ್ಮಾಮಾತ್ಯಪೌತ್ರಂ ಮಹೇ
ಶ್ವರಪೂಜಾಪರ ತಿಮ್ಮಮಂತ್ರಿತನುಜಂ ಗೌರಾಂಬಿಕಾ ಭರ್ತೃ ಜಾ|
ಯರಸಂ ಶಿಷ್ಟ ವಸಿಷ್ಠಗೋತ್ರಕಲಿತಂ ಗೌತಮಿಾಕಾನ್ತನಾ
ವಿರುಪಣ್ಣಾವರಜಾತ ಕೊಂಡಗಿರಿಯಂ ಪೆತ್ತಂ ಮಹಾಪ್ರೌಢನಂ||

ವಿಲಸತ್ ಸದ್ಗುಣಶಾಲಿ ಕೊಂಡಲಗಿರಿ ಪ್ರಖ್ಯಾತನಾಮಂ ಮಹಾ
ಬಲವದ್ಭೂರಿ ತುರುಷ್ಕಕಾನ್ತ ಸಮರಾಕೃಷ್ಟಾಶ್ವದಂತಾವಲಾ
ವಲಿ ಭೂಮಿಪ್ರಭೃತೀಷ್ಟದಾನವಿಧಿ ಭೂಪಾಲೀಕೃತಾರ್ಥವ್ರಜೋ
ಜ್ವಲ ಹಂಡೇಮಲುಕೇಂದ್ರ ಮಾನ್ಯಸಚಿವಂ ಪಂಪಾಧಿಪಂಗಿಷ್ಟಮ
ಪ್ಪೊಲೆ ಪೇಳ್ದಂ ಕವಿಸೇವ್ಯಮಂ ಸಕಲ ವಿದ್ವಚ್ಛ್ಲಾಘ್ಯಮಂ ಕಾವ್ಯಮಂ||

ಎಂಬ ಎರಡು ಪದ್ಯಗಳಿಂದಲೂ ಇವನು ದಿಗ್ಗಾವಿಯವನೆಂದೂ ಧರ್ಮಾಮಾತ್ಯ ಪೌತ್ರನೂ ಮಹೇಶ್ವರ ಪೂಜಾನಿರತನಾದ ತಿಮ್ಮಾಮಾತ್ಯನ ಪುತ್ರನೂ ಆದ ಜಾಯ ರಸ ಮತ್ತು ಗೌರಾಂಬಿಕೆಯರ ಪುತ್ರನೆಂದೂ ಗೌತಮಿಾಕಾಂತನಾದ ವಿರುಪಣ್ಣನ ತಮ್ಮನೆಂದೂ ವಸಿಷ್ಠಗೋತ್ರದವನೆಂದೂ ಹಂಡೆಮಲುಕೇಂದ್ರನ ಮಾನ್ಯಸಚಿವ ನೆಂದೂ ತಿಳಿದುಬರುತ್ತದೆ. ಇವನ ಅಥವಾ ಗ್ರಂಥರಚನೆಯ ಕಾಲದ ವಿಷಯವಾಗಿ ಗ್ರಂಥದಲ್ಲಿ ಯಾವ ಸೂಚನೆಯೂ ಇಲ್ಲ. ಆದುದರಿಂದ ಹಂಡೆಮಲುಕೇಂದ್ರನ ಕಾಲದ ಆಧಾರದ ಮೇಲೆ ಇವನ ಕಾಲವನ್ನು ನಿಷ್ಕರ್ಷಿಸಬೇಕಾಗಿದೆ. ಹಂಡೆ ಅನಂತಾಪುರದ ಚರಿತ್ರೆಯಲ್ಲಿ[3] ಮಲುಕಪ್ಪನ ವಿಷಯವಾಗಿ ಹೀಗೆ ಹೇಳಿದೆ:— "ಹಂಡೆ ಹನುಮಪ್ಪನಾಯಕನ ಮಗನಾದ ಮಲುಕಪ್ಪನು ಶಾ.ಶ. ೧೫೦೬ ರಿಂದ

---

[1] ಇದು ಮೈಸೂರು ಪ್ರಾಚ್ಯಕೋಶಾಗಾರದಲ್ಲಿರುವ ಕೆ. ಎ. ೩೦೧ ನೆಯ ಕೈಬರಹದ ಕಾಗದದ ಪ್ರತಿ.

[2] ದಿಗ್ಗಾವಿಯು ಹೈದರಾಬಾದ್ ಸಂಸ್ಥಾನದಲ್ಲಿದೆ.

[3] *Sources of Vijayanagar History* by S. Krishnaswamy Ayyangar, pages 233-5.

೧೫೧೮ (ಕ್ರಿ.ಶ. ೧೫೮೪–೯೬) ರ ವರೆಗೆ ರಾಜ್ಯವಾಳಿದನು. ಈ ಕಾಲದಲ್ಲಿ ವಿಜಯನಗರದ ಶ್ರೀರಂಗರಾಯನ ಮೇಲೆ ಅದಿಲ್‌ಷಾಹಿ ಸುಲ್ತಾನರು ದಂಡೆತ್ತಿ ಬರಲು ಮಲುಕಪ್ಪನು ಶ್ರೀರಂಗರಾಯನ ಸಹಾಯಾರ್ಥವಾಗಿ ದೊಡ್ಡ ಸೈನ್ಯದೊಡನೆ ಹೊರಟು ಸುಲ್ತಾನರ ಸೈನ್ಯವನ್ನು ನಿರ್ಮೂಲಮಾಡಿ ಓಡಿಸಿ ಬುಕ್ಕರಾಯ ಸಮುದ್ರವೆಂಬ ಪಟ್ಟಣವನ್ನು ನಿರ್ಮಿಸಿ ಅದನ್ನೇ ತನ್ನ ರಾಜಧಾನಿಯನ್ನಾಗಿ ಮಾಡಿ ಕೊಂಡು ಆಳುತ್ತಿದ್ದನು. ಈ ಮಧ್ಯೆ ಸುಲ್ತಾನರು ಪುನಃ ದಂಡೆತ್ತಿಬಂದು ಶ್ರೀರಂಗ ರಾಯನನ್ನು ಸೋಲಿಸಲು ಮಲುಕಪ್ಪನು ಶ್ರೀರಂಗರಾಯನನ್ನು ಆಶ್ರಯಿಸಿರುವುದು ಪ್ರಯೋಜನವಿಲ್ಲವೆಂದು ಸುಲ್ತಾನರ ಪಕ್ಷವನ್ನು ವಹಿಸಿದನು. ಇದರಿಂದ ಸುಪ್ರೀತ ರಾದ ಸುಲ್ತಾನರು ಇವನಿಗೆ ವಿಸ್ತಾರವಾದ ರಾಜ್ಯವನ್ನೂ 'ಪಾದಷಹಾ ವಜೀರಾ' ಎಂಬ ಬಿರುದನ್ನೂ ಕೊಟ್ಟರು.'' ಕೊಂಡಲಗಿರಿಯು ಈ ಮಲುಕಪ್ಪನಲ್ಲಿ ಸಚಿವ ನಾಗಿದ್ದಿರಬೇಕು. ತನ್ನ ಕಾವ್ಯದಲ್ಲಿ ಮಲುಕಪ್ಪನು ತುರುಕರ ಮೇಲೆ ತೋರಿಸಿದ ಪರಾಕ್ರಮಾದಿಗಳನ್ನು ಕವಿ ವರ್ಣಿಸಿರುವುದರಿಂದ ಅವನು ತುರುಕರ ಪಕ್ಷವನ್ನು ವಹಿಸುವುದಕ್ಕೆ ಪೂರ್ವಭಾವಿಯಾಗಿ ಈತನು ಈ ಗ್ರಂಥವನ್ನು ರಚಿಸಿರಬೇಕು. ಹಾಗಾದ ಪಕ್ಷದಲ್ಲಿ ಇವನ ಕಾಲವು ಸುಮಾರು ಕ್ರಿ.ಶ. ೧೫೯೦ ಆಗಬಹುದು.

ಈತನು ಹಂಪೆಯ ವಿರೂಪಾಕ್ಷನನ್ನು (ಇತರ ಅನೇಕ ವೀರಶೈವ ಕವಿಗಳಂತೆ) ವಿಶೇಷವಾಗಿ ಸ್ತುತಿಸಿರುವುದರಿಂದಲೂ ಗ್ರಂಥದಲ್ಲಿ ಇಷ್ಟಲಿಂಗ, ಪ್ರಾಣಲಿಂಗ, ರುದ್ರಾಕ್ಷಿ, ವಿಭೂತಿ ಮೊದಲಾದುವುಗಳ ಮಹಿಮೆಯನ್ನು ಅಲ್ಲಲ್ಲಿಯೇ ವರ್ಣಿಸಿರುವುದ ರಿಂದಲೂ ವೀರಶೈವನೆಂದು ತೋರುತ್ತದೆ. ಪೂರ್ವಕವಿಗಳಲ್ಲಿ ಹಂಪೆಯ ಹರಿದೇವನನ್ನು ಮಾತ್ರ ಸ್ತೋತ್ರಮಾಡಿದ್ದಾನೆ. ಗ್ರಂಥದ ಪ್ರತಿಯೊಂದಾಶ್ವಾಸದ ಕೊನೆಯಲ್ಲಿಯೂ ಮುಂದಿನ ಗದ್ಯವಿದೆ :—

ಇದು ಪ್ರಣುತ ಸುರಾಸುರಪಟಲ ನಿಟಿಲತಟಘಟಿತ ಕಸ್ತೂರಿಕಾಸಾರಷಟ್ಪದ ವಿರಾಜಿತ ಪಂಪಾವಿರೂಪಾಕ್ಷ ಶ್ರೀಪಾದಪದ್ಮ ಪರಾಗತಿಲಕ ವಿಭ್ರಾಜಿತ ಫಾಲಫಲಕ ಜಾಯಾಮಾತ್ಯ ಗೌರಾಂಬಿಕಾ ಗರ್ಭಪಾರಾವಾರಸುಧಾಕರ ಮಂತ್ರಿಮಾಣಿಕ್ಯ ಮಕುಟಾಲಂಕಾರ ಕೊಂಡಲಗಿರಿ ವಿರಚಿತ ರಸಿಕಮನೋರಂಜನ ಮಹಾಪ್ರಬಂಧ ದೊಳ್—

ಕವಿಯು ತನ್ನ ಕವಿತಾಪ್ರೌಢಿಮೆಯನ್ನು ಮುಂದಿನ ಪದ್ಯಗಳಲ್ಲಿ ಹೇಳಿ ಕೊಂಡಿದ್ದಾನೆ :—

ರಸಿಕ ಮನೋರಂಜನಮೆಂ
ಬಸದೃಶಕೃತಿ ಯುಕ್ತಿರಸಿಕರಂ ಮೋಹಿಸುಗುಂ |

ವಸಮಾದ ಪೆಣ್ಣ ಸನ್ನೆಯ
ರಸಗೇಯದ ಸವಿ ಭುಜಂಗರಂ ಮೋಹಿಸುವೊಲ್ ||

ಪದ್ಯಂಗಳ್ ಸಲ್ಲಕ್ಷಣ
ಪದ್ಯಂಗಳ್ ಸುಕವಿನಿಕರವಿಮಲಮನೀಷಾ |
ವೇದ್ಯಂಗಳ್ ಶಂಕರನೈ
ವೇದ್ಯಂಗಳ್ ಮೆಱೆವುತಿರ್ಪುವೀ ನುತ ಕೃತಿಯೊಳ್ ||

'ರಸಿಕಮನೋರಂಜನವಿಲಾಸ'ವು ಹನ್ನೊಂದು ಆಶ್ವಾಸಗಳನ್ನುಳ್ಳ ಕಾವ್ಯ. ಇದರ ಪ್ರತಿಯೊಂದು ಆಶ್ವಾಸಾದ್ಯಂತಗಳಲ್ಲಿ ವಿರೂಪಾಕ್ಷಸ್ತುತಿಯಿದೆ. ಗ್ರಂಥಾರಂಭದಲ್ಲಿ ಶಿವ, ಪಾರ್ವತಿ, ವಿನಾಯಕ, ಷಣ್ಮುಖ, ಸರಸ್ವತಿ—ಇವರುಗಳ ಪ್ರಾರ್ಥನೆಯಿದೆ. ಇದರ ಕಥೆಯನ್ನು ಶಂಕರನು ತನ್ನ ಅರ್ಧಾಂಗಿಯಾದ ಪಾರ್ವತಿಗೆ ಹೇಳಿದನೆಂದೂ ಅದನ್ನೇ ತಾನು ಕನ್ನಡದಲ್ಲಿ ಸೊಗಸಾಗುವ ಹಾಗೆ ರಚಿಸಿರುವನೆಂದೂ ಕವಿಯ ಹೇಳಿಕೆ. ವೇಶ್ಯೆಯೊಬ್ಬಳು ಜನರೆಲ್ಲರನ್ನೂ ಮುಗ್ಧಗೊಳಿಸಿ ದ್ರವ್ಯೋಪಾರ್ಜನೆಯನ್ನು ಮಾಡಬೇಕೆಂಬ ಉದ್ದೇಶದಿಂದ ಶಿವರಾತ್ರಿಯ ದಿನ ಕಾಶಿಯ ರತ್ನೇಶ್ವರ ದೇವಾಲಯಕ್ಕೆ ಹೋಗಿ ಅಲ್ಲಿ ಸೆರೆದಿದ್ದ ಜನರ ಮಧ್ಯದಲ್ಲಿ ಹಾವಭಾವವಿಲಾಸಗಳಿಂದ ಹಾಡಲು ರತ್ನೇಶ್ವರನು ಅದನ್ನೇ ತನ್ನ ಸೇವೆಯೆಂದು ಭಾವಿಸಿ ಅವಳಿಗೆ ಸದ್ಗತಿಯನ್ನಿತ್ತು ಸಕಲ ಸೌಭಾಗ್ಯಗಳನ್ನು ದಯಪಾಲಿಸಿದನೆಂದು ವರ್ಣಿಸುವುದರ ಮೂಲಕ ರತ್ನೇಶ್ವರ ಲಿಂಗದ ಮಾಹಾತ್ಮ್ಯವನ್ನು ವಿಶದಪಡಿಸುವುದು ಈ ಗ್ರಂಥದ ಉದ್ದೇಶ. ಆದರೆ ರತ್ನೇಶ್ವರನ ಅನುಗ್ರಹದಿಂದ ವೇಶ್ಯಾಜನ್ಮವನ್ನು ನೀಗಿ ರಾಜಕುಮಾರಿಯಾಗಿ ಹುಟ್ಟಿದ ರತ್ನಾವಳಿಯ ಶೃಂಗಾರಕಥೆ ಇದರ ಪ್ರಧಾನವಸ್ತು. ಇದು ನೇಮಿಚಂದ್ರನ ಲೀಲಾವತಿ, ದೇವಚಂದ್ರನ ಕುಸುಮಾವಳಿ ಮೊದಲಾದ ಗ್ರಂಥಗಳ ಪಂಗಡಕ್ಕೆ ಸೇರಿದುದು. ಇದರ ಕಥೆ ಹೀಗಿದೆ:—ಶ್ರೀ ವಿಲಾಸಪುರದ ರಾಜನಾದ ವಸುಭೂತಿಗೆ ಕಾಶಿಯ ರತ್ನೇಶ್ವರನ ಅನುಗ್ರಹದಿಂದ ರತ್ನಾವಳಿಯೆಂಬ ಮಗಳು ಜನಿಸುವಳು. ಶಶಿಲೇಖೆ, ಚಿತ್ರಲೇಖೆ, ಅನಂಗಲೇಖೆ ಎಂಬ ಮೂವರು ರತ್ನಾವಳಿಯ ಕೆಳದಿಯರು. ಇವರೊಡನೆ ರತ್ನಾವಳಿಯು ಏಳ್ಗೆವಾಡಿವದ ತಣ್ಗದಿರನಂತೆ ಅಭಿವೃದ್ಧಿಯನ್ನೈದಿ ಪ್ರಾಪ್ತವಯಸ್ಕಳಾಗಲು ಒಂದು ದಿನ ಕನಸಿನಲ್ಲಿ ಒಬ್ಬ ರಾಜಕುಮಾರನನ್ನು ಕಂಡು ಅವನಲ್ಲಿ ಮೋಹಿತಳಾಗಿ ವಿರಹವೇದನೆಯಿಂದ ತಪಿಸಿ ಅವನನ್ನು ಎಲ್ಲೆಡೆಯಲ್ಲಿಯೂ ಹುಡುಕಿಸುವಳು. ಅವಳ ಪ್ರೀತಿಗೆ ಪಾತ್ರನಾದ ಆ ಯುವಕನು ಎಲ್ಲಿಯೂ ಸಿಕ್ಕದಿರಲು ಅವಳ ಸಖಿಯಾದ ಚಿತ್ರಲೇಖೆಯು ಸ್ವರ್ಗಮರ್ತ್ಯಪಾತಾಳಗಳಲ್ಲಿರುವ ಎಲ್ಲ ಯುವಕರನ್ನೂ ಚಿತ್ರಪಟಗಳಲ್ಲಿ ಬರೆದು ತೋರಿಸುವಳು. ಅದರಿಂದ ನಾಗ

ಲೋಕದ ಶಂಖಚೂಡನ ಮಗನಾದ ರತ್ನಚೂಡನೇ ರತ್ನಾವಳಿಯ ಪ್ರಿಯನೆಂಬುದು ತಿಳಿದುಬರುವುದು. ಅವನನ್ನು ಹುಡುಕಿಕೊಂಡು ತನ್ನ ಸಖಿಯರೊಡನೆ ರತ್ನಾವಳಿಯು ಹೊರಟು ಅನೇಕ ದಿನ ಸಂಚಾರಮಾಡಿ ನಾಗಲೋಕವನ್ನು ಪ್ರವೇಶಿಸಲು ಅಲ್ಲಿ ಸುಬಾಹುವೆಂಬ ರಾಕ್ಷಸನು ಅವರನ್ನು ಅಡ್ಡಗಟ್ಟಿ ಸೆಳೆದೊಯ್ಯುವನು. ರಾಕ್ಷಸನ ಹಿಂಸೆಯಿಂದ ಭೀತರಾದ ಸ್ತ್ರೀಯರ ಆಕ್ರಂದನವನ್ನು ಸಮೀಪದಲ್ಲಿಯೇ ಇದ್ದ—ರತ್ನಾವಳಿಯನ್ನು ಸ್ವಪ್ನದಲ್ಲಿ ಕಂಡು ಅವಳಂತೆಯೇ, ಅವಳಿಗಾಗಿಯೇ ತವಕಪಡುತ್ತಿದ್ದ—ರತ್ನಚೂಡನು ಕೇಳಿ ಓಡಿಬಂದು ರಾಕ್ಷಸನನ್ನು ಸಂಹಾರಮಾಡಿ ನಾಯಿಕಾ ಸಮಾಗಮವನ್ನು ಪಡೆಯುವನು. ಕೊನೆಗೆ ರತ್ನಾವಳಿಗೂ ರತ್ನಚೂಡನಿಗೂ ವಿವಾಹ ವಾಗುವುದು. ಈ ರೀತಿಯಲ್ಲಿ ಕಥೆ ಕಿರಿದಾದರೂ ಕವಿಯು ತನ್ನ ವರ್ಣನಾವೈಖರಿಯಿಂದಲೂ ವಾಗ್ಧೋರಣೆಯಿಂದಲೂ ಗ್ರಂಥವನ್ನು ಮಹಾಕಾವ್ಯವನ್ನಾಗಿ ಮಾಡಬೇಕೆಂಬ ಕುತೂಹಲದಿಂದಲೂ ಹಿರಿದಾಗಿ ಬೆಳಸಿದ್ದಾನೆ. ಕವಿಯ ಶೈಲಿಯು ಪ್ರೌಢವಾಗಿದೆ. ತಿಳಿಯಾಗಿ ರಸವತ್ತಾಗಿ ಹೃದಯಂಗಮವಾಗಿ ಬರೆಯಲು ಶಕ್ತಿಯಿದ್ದರೂ ಪಾಂಡಿತ್ಯ ಪ್ರದರ್ಶನದ ದೃಷ್ಟಿಯಿಂದ ಶಬ್ದಾಲಂಕಾರ ಮತ್ತು ಚಿತ್ರ ಕವಿತೆಗಳಿಗೆ ಮನಸೋತಿದ್ದಾನೆ. ಕಥೆಯಲ್ಲಿ ಕಾವ್ಯಮಯವಾದ ಸನ್ನಿವೇಶಗಳು ಕಡಿಮೆ. ಕನ್ನಡ ಸಂಸ್ಕೃತ ಭಾಷೆಗಳೆರಡರಲ್ಲಿಯೂ ಈತನಿಗೆ ಉದ್ದಾಮ ಪಾಂಡಿತ್ಯವೇನೋ ಇದೆ. ಆದುದರಿಂದಲೇ ಅವನ ಗ್ರಂಥದಲ್ಲಿ ಸಾಮಾನ್ಯವಾಗಿ ಕನ್ನಡ ಗ್ರಂಥಗಳಲ್ಲಿ ಉಪಯೋಗವಾಗುವ ಕಂದವೃತ್ತಗಳೇ ಅಲ್ಲದೆ ಅಪೂರ್ವವಾದ ಮಹೀವೃತ್ತ, ತರಳ, ಲಯಗ್ರಾಹಿ, ಉತ್ಸಾಹ, ವಸನ್ತತಿಲಕ, ಮತ್ತಕೋಕಿಲ, ಸ್ಫೋಟಕ, ಪರಿವರ್ಧಿನಿ, ಸೀಸಪದ್ಯ, ಗೀತಿಕೆ ಮೊದಲಾದ ವೃತ್ತಜಾತಿಗಳೂ ವಿಶೇಷವಾಗಿ ಉಪಯೋಗ ವಾಗಿವೆ. ಸಂಸ್ಕೃತಪದಪ್ರಯೋಗವು ಕಾವ್ಯಕ್ಕೆ ಶೋಭಾಯಮಾನವಾದುದೆಂದು ಈತನ ಅಭಿಪ್ರಾಯ. ಆದುದರಿಂದ ಈತನ ಅನೇಕ ಕನ್ನಡ ಪದ್ಯಗಳಲ್ಲಿ ಸಂಸ್ಕೃತ ಪದಗಳು ಅತಿಯಾಗಿವೆ. ಉದಾಹರಣೆಗೆ ಪಂಪಾವಿರೂಪಾಕ್ಷನ ಸ್ತೋತ್ರರೂಪವಾದ ಈ ಮುಂದಿನ ಪದ್ಯವನ್ನು ನೋಡಬಹುದು.

> ಉದ್ಯದ್ಗೌರವ ಭಂಗ ಸಂಗತತ. ಕ್ರೋಧಾರ್ಜಿತಾ ಸತ್ಕ್ರಿಯಾ
> ಮಾದ್ಯದ್ದಕ್ಷಕೃತಕ್ರತೂತ್ಸವಹವಿರ್ಭುಗ್ಗರ್ವ ಸರ್ವಸ್ವಹಂ |
> ಸದ್ಯೋಲೋಕ ಜಿಘಾಂಸು ಭೂತ ಪರಿಷತ್ಕಾರ್ಯಾಂತರಾಯಾರ್ಥಲಾ
> ಸ್ಯೋದ್ಯೋಗಪ್ರಿಯನೊಲ್ದು ರಕ್ಷಿಕೆ ವಿರೂಪಾಕ್ಷಂ ಭವಾನೀಧವಂ ||

ಚಂಪೂ ಗ್ರಂಥಗಳಲ್ಲಿ ಷಟ್ಪದಿಯನ್ನು ಉಪಯೋಗಿಸಿರುವುದು ಈತನ ವೈಶಿಷ್ಟ್ಯ. ಭಾಮಿನಿ ಮತ್ತು ಪರಿವರ್ಧಿನಿ ಷಟ್ಪದಿಗಳನ್ನು ಮಾತ್ರ ಒಂದೆರಡು ಕಡೆಗಳಲ್ಲಿ

ಉಪಯೋಗಿಸಿದ್ದಾನೆ. ಅವುಗಳೂ ಇತರ ವೃತ್ತಗಳ ಹಾಗೆಯೇ ಅರ್ಥಪೂರ್ಣವಾಗಿರುವುದನ್ನು ಮುಂದಿನ ಷಟ್ಪದಿಯಲ್ಲಿ ಕಾಣಬಹುದು.

ಎಲೆಗಳುಡಿಗೆಯ ಗುಂಜೆದೊಡಿಗೆಯ
ಬಲೆಯನೌಂಕಿದ ಹತ್ತುಗೌಂಕುಳ
ಬಲಿದು ಬಿಗಿದೆಕ್ಕಡದ ಪಿರಿದುಂ ಕೊರ್ಬಿದವಯವದ |
ಕಿಲುಬುಗತ್ತಿಯ ಮರದ ಬಿಲ್ಗಳ
ತಲೆಯ ಬದನಿಕೆಸರದ ಬೇಟೆಯ
ಕೆಲಸದಱಿವಿನ ಬೇಡವಡೆ ಮುಕ್ಕುಱಿಸಿ ಮೋಹಿಸಿತು ||

ಕುಂಡಲಗಿರಿಯ ಗದ್ಯವು ಕನ್ನಡಮಯವಾಗಿದೆ. ಭಾವಗರ್ಭಿತವಾಗಿದೆ. ಸರಾಗವಾಗಿ ಓಡುತ್ತದೆ. ಅದರಲ್ಲಿ ಪೂರ್ಣವಾದ ಓಜಸ್ಸಿದೆ. ಮುಂದಿನ ವನವರ್ಣನೆಯು ಇದಕ್ಕೆ ಉತ್ತಮನಿದರ್ಶನ:—

ಅಂತುಮಲ್ಲದೆಯುಂ ನಲ್ಲರೊಳೆ ಲಲ್ಲೆವಾತಿಂ ಚಲ್ಲವಾಡುತೆ ಮೆಲ್ಲಮೆಲ್ಲನೆ ಸುಳ್ಳು ಮುಳಿಸಂ ನಟಿಸಲೆಂದಿಲ್ಲದಪರಾಧಮನಾರೋಪಿಸಿ ಕುಡಿವುರ್ವಂ ಕುಣಿದಾಡಿಸಿ ಕಣ್ದೆರಪಂ ಕೂರ್ಗೆಯ್ದು ಗೊಣಗುವಾತಿಂ ಸೆಣಸುದೆಗೆದು ಹಸ್ತಮನೆತ್ತಿ ಮೆತ್ತನೆ ಬಡಿಯೆ ಕಣ್ಣಾನಂದಿಸಿ ಮೆಯ್ಗೆ ಜುಮ್ಮೆೞು ಸುಖಪರವಶತೆ ಪೋದ ತಜ್ಜೀವಿತೇಶರನಗಲ್ದು ಬೇಱೊಂದು ಕಪ್ಪುರವಾಳೆಯ ತಣ್ಣೆಳಲ ಸುಣ್ಣಾನಪ್ಪೆಡೆಯೊಳ್ ಕುಳ್ಳಿರ್ದು ಮುಳಿಸಂ ನಿಲಿಸಲಱಿಯದೆ ಕಳವಳಿಪ ಚಿತ್ತದೊಳ್ ತೋಳಲೊಗೆದೆರ್ದೆಹಾರಂ ಬಳಯಿಸೆಯುಂ ಲವಲವಿಕೆಪೊತ್ತೇಳಿಸುತ್ತಿರೆಯುಂ ಸಿಡಿಮಿಡಿಗೊಂಬ ವಿಧ್ಯಾಧರಿಯರಿಂ, ಆ ವಿಧ್ಯಾಧರಿಯುಗಾರ್ದರದಿಂ ರಾಗಮನಾಳಾಪಿಸಿ ಸಂಗೀತಮಂ ಸಾಲ್ಗೊಳಿಸಿ ಮುಗಿಲ ಮೊಗ್ಗರಮನೆಳ್ಚಿಸಿ ನವಿಲ್ಗಳ ನರ್ತನಮುಮಂ ಚಾದಗೆಗಳ ಬಾಯ್ದೆರಪುಮುಮಂ, ಹಂಸಿಗಣದೋಡಾಟಮುಮಂ ತೋರ್ದುತೋರ್ದು ಪೋಗದ ಪೊಳ್ತಂ ಪೋಗಿಸುವ ಕಿನ್ನರ ವಿದಗ್ಧೆಯರಿಂ, ಆ ಕಿನ್ನರ ವಿದಗ್ಧೆಯರ ಜಾಣ್ಮೆಗೆ ಮೆಚ್ಚುನುಚ್ಚರಿಪಂತೆ ಶಾಖಾನ್ಯೋನ್ಯ ಸಂಘರ್ಷಣದಿಂ ಸುಚ್ಚರಮನುಗುಳ್ವ ವಂಶಂಗಳಿಂ, ಆ ವಂಶಂಗಳ ಸುಚ್ಚರಮಂ ಮೊರೆವ ಮೌವರಿಗೆ ಗೆತ್ತು ಪೆಡೆಗಳನೊಲೆದೊಲೆದಾಡುವ ಗೋಧೂಮವರ್ಣಸರ್ಪಂಗಳಿಂ, ಆ ಸರ್ಪಂಗಳಾಟಮಂ ದಿಟ್ಟಿಸಲಳ್ತಿವಟ್ಟು ಪರಿದು ಬರ್ಪಂತೆ ಸೂಸುವ ಪೂವುಡಿಯೊಳ್ ಪೊರಳ್ದುರುಳ್ದೋಡುವ ಮಾರುತೀ ಕಿಶೋರದಿಂ, ಆ ಮಾರುತೀ ಕಿಶೋರಮಂ ಪಾವಗಿಗು ಪೋಗದಿರೆಂದು ಝುಂಕಿಸುವಂತೆ ಝೋಂಕರಿಸುತೆ ಪಿಡಿದೆಳೆತರಲ್ಪೋಪಂತೆ ಬೆಂಬಳಿವೋಪ ಭೃಂಗಾಂಗನಾಸಂಘದಿಂ . . . ಆ ವನಮೊಪ್ಪಿರ್ದುದು.

ಈತನ ಸ್ತೋತ್ರಗಳೂ ದಂಡಕಗಳೂ ಸಂಸ್ಕೃತಪದ ಭೂಯಿಷ್ಠವಾಗಿದ್ದರೂ ಪ್ರತ್ಯೇಕವಾದ ಖಂಡಕಾವ್ಯಗಳಂತಿವೆ. ಮುಂದಿನ 'ಸುಪ್ರಭಾತ'ವನ್ನು ನೋಡಿ.

ವರ ಕಾಸಾರದ ವಾರಿಯಲ್ಲಿ ಜಳಕಂಗೆಯ್ದುಂ ದಳನ್ಮಲ್ಲಿಕೋ
ತ್ಕರ ಧೂಳೀನವಭಸ್ಮಮಂ ಧರಿಸಿ ವಿಾಸಲ್ ಪೋಗದಚ್ಛಾಬ್ಜಬಂ |
ಧುರ ಸೌರಭ್ಯಮನೊಪ್ಪಿಸಲ್ಕೆ ಧೃತರಂಗದ್ಭೃಂಗ ರುದ್ರಾಕ್ಷಕಂ
ಬರುತಿರ್ಕುಂ ಸುಳಿಗಾಳಿ-ಉಪ್ಪವಡಿಸಾ ಕಾಶೀಶ ವಿಶ್ವೇಶ್ವರಾ ||

ಪದಪಿಂ ವಾರುಣಿಯಂ ನಿಜೇಶವಿಧು ಬೇಗಂ ಕೂಡೆ ತಾಂ ನೋಡಲಾ
ಱದೆ ನೇತ್ರೋತ್ಪಲದಿಂ ನಿಶಾತರುಣಿ ಪೋದಳ್ ಪ್ರೀತಿಯಿಂದಾಕೆಯುಂ |
ಬೆದಕಲ್ ಚಂದ್ರಿಕೆಯೆಂಬ ಚೇಟಿ ತಳರ್ದಳ್ ತತ್ತಾತನಾದಬ್ಧಿಯು
ಣ್ಮಿದ ವೈಕಲ್ಯದೆ ಜೋಲ್ದನ್-ಉಪ್ಪವಡಿಸಾ ಕಾಶೀಶ ವಿಶ್ವೇಶ್ವರಾ ||

ತವಕಂ ತೆಕ್ಕನೆ ತೀವೆ ಪುಷ್ಪಕುಲಧೂಳೀಶಯ್ಯೆಯೊಳ್ ಕೂರ್ತು ಕೂ
ಡುವ ಕಾಮಾಂಧ ರಥಾಂಗದಂಪತಿಗಳಂ ಕಣ್ಗೊಳ್ವುದತ್ತೆಂದು ಕೈ |
ರವಿಣೀ ಸಾಧ್ವಿಯೆ ಮುಚ್ಚಿಕೊಂಡ್ಡಳಲರ್ಗಣ್ಣಂ ಪದ್ಮಿನೀಧೂರ್ತೆಗು
ತ್ಸವಮೇನೋ ನಗುತಿರ್ಪಳ್-ಉಪ್ಪವಡಿಸಾ ಕಾಶೀಶ ವಿಶ್ವೇಶ್ವರಾ ||

ಭರದಿಂ ಲೋಕಮನೌಂಕಿ ಬೀಳ್ಗೆಡಪಿ ಪೋರುತ್ತಿರ್ಪ ನಿದ್ರಾನಿಶಾ
ಚರಿ ಪೋಪಂತಿರೆ ಲೋಕಬಂಧು ಪಟುಕೋಪಾರಕ್ತನೇತ್ರಂಗಳಿಂ |
ದಿರದಾಲೋಕಿಸೆ ಪರ್ಬಿದತ್ತದಱ ಕೆಂಪೆಂಬಂತೆ ಪ್ರಾಚೀಮುಖಾಂ
ತರದೊಳ್ ಕೆಂಪಿಡಿದಿರ್ಪುದು-ಉಪ್ಪವಡಿಸಾ ಕಾಶೀಶ ವಿಶ್ವೇಶ್ವರಾ ||

ಕವಿಯು ತನ್ನ ಕಾವ್ಯವನ್ನು 'ಶೃಂಗಾರಸಾರ'ವನ್ನಾಗಿ ಮಾಡಬೇಕೆಂಬ ಚಲದಿಂದ ಅನೇಕ ಕಡೆಗಳಲ್ಲಿ ಆಭಾಸಶೃಂಗಾರಕ್ಕೆ ಕೈಹಾಕಿದ್ದಾನೆ. ಗಾಂಭೀರ್ಯದ ಎಲ್ಲೆಯನ್ನೂ ಮಿಾರಿದ್ದಾನೆ. ಆದರೂ ಕೆಲವು ಉತ್ತಮ ಸನ್ನಿವೇಶಗಳೂ ಇವೆ. ಈತನ ವರ್ಣನಾಶಕ್ತಿಯ ಪರಿಚಯಕ್ಕಾಗಿ ಕೆಲವು ಪದ್ಯಗಳನ್ನು ಉದ್ಧರಿಸುತ್ತೇವೆ:—

ಜೋಯಿಸ

ಹೆಡಿಗೆ ಜಂದಿಯ ಮೆತ್ತುಗಂಧದ ಬಿಳ್ಪುವಲ್ಗಳ ನೀರಕೆಂ
ಪಿಡಿದ ಧೋತ್ರದ ನೇಲ್ವ ಕಚ್ಚೆಯ ಕಯ್ಯೊಳುಪ್ಪುವ ಮುಷ್ಟಿಯೊ |
ರ್ಪಿಡಿಕೆದೀವುವ ಯಜ್ಞಸೂತ್ರದ ಕಾಶಿಯುಂಗುರದೊಪ್ಪದಿಂ
ನಡೆದು ಜೋಯಿಸನೆಯ್ದಿ ಶಂಭು ಕೃಪಾಸ್ತುವೆಂದೆನುತೋದಿದಂ ||

ಕುದುರೆಯ ನಡಿಗೆ

ಘಲಕು ಘಲಘಲ ಘಲಕು ಘಲಘಲ ಗರ್ಜದಂಚಿತ ಕಿಂಕಿಣೀ
ಕಲಿತ ಸುರಚಿರ ಚರಣಗತಿತತಿ ನೃತ್ಯಕೌಶಲ ಮಂಡಿತಂ |

ಮಿಲಿತ ಬಲ ಬಲಜಲಧಿ ಕಲಶಜವಾಹ ಪಾಟವಸಂಗಮಂ
ನಲಿವುತೆಸೆದುದು ಹರಿಣಜವ ನವ ಶೈಲರಾಜ ತುರಂಗಮಂ ||

ತಾರಾಳಿ

ಬಿಡುಗಣ್ಣ ನಿಬ್ಬಣಿಗರೊ
ಲ್ದೊಡನೆ ನಿಶಾವಧುಗೆ ವಿಧುಗೆ ಸೇಸಿಡೆ ಭರದಿಂ |
ಕಡೆಸೂಸಿದಾಣಿಮುತ್ತುಗ
ಳೆಡೆಯೆಡೆಯೊಳ್ ತಳ್ತುವೆಂಬೊಲುಡುಗಣಮೆಸೆಗುಂ ||

ಸುರಕಲ್ಲೋಲಿನಿಯೊಳ್ ಸಮುಂತೊಗೆದ ಶುಂಭದ್ಬುದ್ಬುದವ್ರಾತಮೋ
ಬರೆ ಶುಭ್ರಾಂಶು ಸುಸಿಲ್ಗೆ ಕಾಮುಕನಿಶಾಸ್ತ್ರೀ—ಅಭ್ರಶಯ್ಯಾಗ್ರದೊಳ್ |
ಪರಪಿರ್ದಚ್ಛಸುಮಾಳಿಯೋ ತಿಮಿರರಕ್ಷಚ್ಛೇದಿಗಂ ದೇವಿಯರ್
ಭರದಿಂದೆತ್ತುವ ಮಂಗಳಾರತಿಗಳೋ ತಾರಾಳಿಯೋ ಬಲ್ಲರಾರ್ ||

ಚಂದ್ರನ ಕಳಂಕ

ಎಸೆವೀ ರಾಜನ ಕಂಠಮಾಲಿಕೆಯ ಮಧ್ಯಸ್ಥೇಂದ್ರ ನೀಲಾಂಶುವೋ
ಲಸದಬ್ಧೀಶನ ಬಾಲನೊಳ್ಪಣೆಯ ರಕ್ಷಾನ್ಯಸ್ತ ಕಸ್ತೂರಿಯೋ |
ಪಸೆಯಿಂದುತ್ಪಲಿನೀವಿಟಂ ತಳೆದ ಸಲ್ಲೀಲಾಸಿತಾಂಭೋಜಮೋ
ಉಸುರಲ್ ಬಲ್ಲವನಾವನಿಂದುವಿನ ಕರ್ಪಂ ನೋಡಿ ತಥ್ಯಾರ್ಥಮಂ ||

ಬಾಲಕಿಯಾದ ರತ್ನಾವಳಿ

ಬೆರಲಂ ಹಿಪ್ಪುತೆ ಕಾಲ್ಗಳಂ ಬಿದಿರುತುಂ ಬೆಳ್ಳಕ್ಕಿಯುಂ ಮಾಣುತಾ
ದರದಿಂ ಜೋಗುಳನಾಲಿಸುತ್ತಯನಿಮಿತ್ತಂ ಮಂದಹಾಸಂಗುಡು |
ತ್ತಿರಿದಂ ಕಂಡವೊಲೀಕ್ಷಿಸುತ್ತೆ ವಿಗತಾರ್ಥಂಬೆತ್ತ ಸೀವಾತಿನಿಂ
ಚರದಿಂದಾಡುತೆ ಚೆಲ್ವು ಮುದ್ದುವಡೆದಂತೊಪ್ಪಿತ್ತು ಮುಗ್ಧಾರ್ಭಕಂ ||

ಪುಷ್ಪಾಪಚಯ

ನಿಱಿಯಂ ನುಣ್ದೊಡೆಯಲ್ಲಿಱುಂಕಿ ತುದಿಗಾಲಿಂ ನಿಂದು ತುಂಗಸ್ತನಂ
ಪೊಱಗೆಯ್ದಿರ್ದುರುಹಾರವೊರ್ಗುಡಿಸೆ ದೋರ್ಮೂಲಂ ಸುಸೌರಭ್ಯಮಂ |
ಬಱಿಕೆಯ್ವುತ್ತಿರೆ ನಿಲ್ಕಿ ಕೈನೆಗಪಿ ಪುನ್ನಾಗಪ್ರಸೂನಾಳಿಯಂ
ಮುಱಿಯುತ್ತಿರ್ದಳ ಕಣ್ಣ ಬೆಳ್ಪಿನುದಿಸಿತ್ತಭ್ರಾಪಗಾವಿಭ್ರಮಂ ||

ಎಸ್. ಅನಂತರಂಗಾಚಾರ್.

ಕಾವ್ಯಾವಲೋಕನ

ವಯ್ಯಾರಿ—ಬರೆದವರು : ಗೊರೂರು ರಾಮಸ್ವಾಮಿ ಅಯ್ಯಂಗಾರ್‌ರವರು ; ಪ್ರಕಾಶಕರು : ಮನೋಹರ ಗ್ರಂಥಮಾಲೆ, ಧಾರವಾಡ. ಬೆಲೆ, ೦-೧೨-೦.

ಶ್ರೀ ಗೊರೂರರವರು ತಮ್ಮ ಹಳ್ಳಿಯ ಜೀವನ ಚಿತ್ರಗಳಿಂದ ಹೆಸರಾದ ಬರಹಗಾರರು. ಅವರ ಇತರ ಬರಹಗಳಂತೆ, ಈ ಗ್ರಂಥದಲ್ಲಿ ಸಹ ಅವರು ತಮ್ಮ ಗೊರೂರನ್ನು ಸಾಹಿತ್ಯದಲ್ಲಿ ಅಮರವಾಗಿರಿಸಲು ಯತ್ನಿಸಿದ್ದಾರೆ. ನಮ್ಮಲ್ಲಿನ ಬರಹಗಳಲ್ಲಿ ಬರಹಗಾರರು ತಂತಮ್ಮ ಪರಿಚಿತ ಗ್ರಾಮನಗರಗಳನ್ನು ಸುಂದರವಾಗಿ ಚಿತ್ರಿಸುತ್ತಿರುವುದು ಕಡಿಮೆ. ಅದಕ್ಕೆ ಅನುಭವದ ಅಭಾವವೇ ಕಾರಣ. ಅನುಭವ ಕಡಿಮೆಯಾಗಿರುವಾಗ ಮನೆಗಳು ಮೇಲುಗೈಯನ್ನು ಹೊಂದಿ ಚಿತ್ರಗಳು ಕೇವಲ ಕಾಲ್ಪನಿಕವಾಗುವುವು. ಶ್ರೀ ಗೊರೂರರಲ್ಲಿ ಈ ದೋಷ ಬರುವಂತಿಲ್ಲ. ಆದರೆ ಒಂದು ಮಾತು—ಅವರ ಹಲವು ಬರವಣಿಗೆಗಳನ್ನು ಓದಿನೋಡಿದವರಿಗೆ—ಇಲ್ಲಿ ಅನೇಕ ಜೀವನ ಚಿತ್ರಗಳು ಪುನರುಕ್ತವಾದಂತೆ ಕಾಣಿಸುವುವು. ಆದುದರಿಂದ ಶ್ರೀ ರಾಮಸ್ವಾಮಿ ಅಯ್ಯಂಗಾರ್ಯರವರು ತಮ್ಮ ಕ್ಷೇತ್ರವನ್ನು ಗೊರೂರಿನ ಹೊರಗಡೆ ವಿಸ್ತರಿಸಬೇಕು.

ಈ ಸಂಗ್ರಹದಲ್ಲಿನ ' ಬೂತಯ್ಯನ ಮಗ ಅಯ್ಯು, ಈಡಿಗರ ಹೆಣ್ಣು '—ವಾಸ್ತವಿಕತೆಯನ್ನು ದಾಟಿ ಸಾಗುತ್ತವೆ. ' ಹಾವಿನ ಅಯ್ಯು,' ' ಅಯ್ಯು ' ಮೊದಲಾದುವುಗಳಲ್ಲಿ ಕತೆಯ ಅಳತೆಗೆ ಮೀರಿದ ವಿವರಗಳು ತುಂಬಿವೆ.

ಸಾಮಾನ್ಯವಾಗಿ ಈ ಸಂಗ್ರಹದ ಎಲ್ಲ ಕತೆಗಳು ಸವಿಯಾಗಿ ಬಣ್ಣಿಸಲ್ಪಟ್ಟಿವೆ. ಕಥಾವಳಿಯ ಹೆಸರಿಗೆ ಕಾರಣವಾದ ' ವಯ್ಯಾರಿ 'ಯಲ್ಲಿ ಬಲು ಸುಂದರವಾದ ಯುಕ್ತವಾದ ಸನ್ನಿವೇಶ, ಆವರಣಗಳಿಂದ ತೊಡಗುತ್ತದೆ.

ಅವರು ಸೇರಿಸಿದ ಯುದ್ಧದ ಕಾವ್ಯ ಚೀನಿಯರ ನವಜೀವನದ ಪರಿಚಯ ಮಾಡಿಕೊಡುವಂಥದು ನಿಜವಾದರೂ, ಕತೆಯ ಲಹರಿಯೇ ಅದರಲ್ಲಿ ಕಾಣಿಸದು. ಅದು ಕೇವಲ ತತ್ವನಿದರ್ಶನಕ್ಕೆ ಹೊರಟ ಕತೆಯಾಗಿದೆ. ಬದಲು ' ಪ್ರಸನ್ನವಾದ ಕಲಹವು ' ಚೀನಿಯರ ಹಳೆಯ ಪದ್ಧತಿಯ ಕತೆಗಳು ಯಾವ ಬಗೆಯವು ಎಂಬುದನ್ನು ಸೂಚಿಸುವ ಒಂದು ಮಾದರಿಯಾಗಿದೆ.

ಶ್ರೀ ಗೊರೂರರವರು ಹಳ್ಳಿಯ ಅನೇಕ ಸಾಮಾನ್ಯ ವೃತ್ತಿಗಳನ್ನೇ ಇಲ್ಲಿ ಸುಂದರ

ವಾಗಿ ಚಿತ್ರಿಸಿ ಜನಜೀವನದ ಚೆಲುವು ನೋವುಗಳನ್ನು ವಾಚಕರಿಗೆ ಪರಿಚಯ ಮಾಡಿಸಿಕೊಟ್ಟಿದ್ದಾರೆ.

ಶಿವರಾಮ ಕಾರಂತ

ರಾಗಿಣಿ (ಕವನಸಂಗ್ರಹ)—ಶ್ರೀ. ಕೆ. ವಿ. ಪುಟ್ಟಪ್ಪನವರ ಮುನ್ನುಡಿಯೊಡನೆ; ಶ್ರೀ ಎಸ್. ವಿ. ಪರಮೇಶ್ವರ ಭಟ್ಟರಿಂದ ರಚಿತವಾದುದು; ಕ್ರೌ ೯ ಅ. ೧೨ + ೭೬ ಪುಟಗಳು; ಬೆಲೆ, ೦-೮-೦.

ಅನೇಕ ಮಾಸಿಕ ಪತ್ರಗಳಲ್ಲಿ ತಮ್ಮ ಭಾವಗೀತಗಳನ್ನು ಪ್ರಕಟಿಸಿ ಪರಿಚಿತರಾದ ಶ್ರೀ ಎಸ್. ವಿ. ಪರಮೇಶ್ವರಭಟ್ಟರು ಅವುಗಳಲ್ಲಿ ಕೆಲವನ್ನು ಮಾಲೆಯಾಗಿ ಪೋಣಿಸಿ ಪುಸ್ತಕರೂಪದಲ್ಲಿ ಪ್ರಕಟಿಸಿ ಕನ್ನಡ ಕಾವ್ಯಸಂಪತ್ತನ್ನು ಹೆಚ್ಚಿಸಿದ್ದಾರೆ. ಈ 'ಸುಳಿದಳಿರೆಲೆಯ ಪೀಪಿ'ಯನ್ನು ಮೆಚ್ಚಿ ಶ್ರೀ ಪುಟ್ಟಪ್ಪನವರು 'ಪೀಪಿಯೆ ಮುಂದೆ ವೇಣು, ವೇಣುವೆ ಮುಂದೆ ವೀಣೆ' ಎಂಬ ತಮ್ಮ ಭಾವವೃತ್ತಮಾಡಿ 'ನಮ್ಮ ಗಾನಕೆ ನಾವೆ ಮೊದಲಗುರಿ, ಮುಖ್ಯಗುರಿ, ...' ಆದುದರಿಂದ "ಎದೆಯ ಹಿಗ್ಗಿಗೆ ಕೊರಳ ಉಲಿಮೆ ಹೆಗ್ಗುರುತಾಗಿ ಬುಗ್ಗೆ ಚಿಮ್ಮಲಿ ಇಂಚರಂ" ಎಂಬ ಮಾತುಗಳಿಂದ ತಮ್ಮ ಕವಿಸಹಜವಾದ ವಾಣಿಯಲ್ಲಿ ಅದರ ಯೋಗ್ಯತೆಯನ್ನು ವಿಶದಪಡಿಸಿದ್ದಾರೆ. ಮುನ್ನುಡಿಯಲ್ಲದೆ ಈ ಹೊತ್ತಿಗೆಯಲ್ಲಿ 'ನನ್ನ ನುಡಿ'ಯೂ ಇದೆ. ಅದರಲ್ಲಿ ಶ್ರೀಯುತರು ಭಾವಗೀತಗಳ ತತ್ವವನ್ನೂ, ಅವುಗಳ ಉತ್ಪತ್ತಿ ಕಾರಣವನ್ನೂ ಅವುಗಳ ಭಾಷೆ, ಶಬ್ದ, ಮಾಧುರ್ಯ ಮೊದಲಾದವುಗಳ ಬಗೆಯನ್ನೂ ಕೂಲಂಕಷ ವಾಗಿ ಚರ್ಚಿಸಿ ವಿಮರ್ಶಕನ ಕೆಲಸವನ್ನು ಮಾಡಿದ್ದಾರೆ.

ಭಾವ-ಅನುಭವಗಳ ಅನುಭಾವದಿಂದುಂಟಾದ ರಸದೊರತೆಯ ಬುಗ್ಗೆ ರಾಗಿಣಿ. ಕವಿಯ ಅನುಭವ ಭಾವದಲ್ಲಿ ವ್ಯಕ್ತವಾದಾಗ "ಬಳ್ಳಿಯಿಂದ ಹೂವು ಹೊಮ್ಮುವಂತೆ" ಹೊರಬಿದ್ದ ಕವನಗಳು ಕೆಲವು, ಕವಿಯು ಕೇವಲ ಭಾವೋನ್ಮಾದದ ಪರವಶತೆಯಲ್ಲಿ ಸಿಕ್ಕಿಬಿದ್ದಾಗ 'ಮುಗಿಲಿನಿಂದ ಮಿಂಚು ಹೊಮ್ಮುವಂತೆ' ಮಿಂಚಿದ ಕವನಗಳು ಕೆಲವು, ಅನುಭವದ ರಸಪಾಕವು 'ವೀಣೆಯಿಂದ ವಾಣಿ ಹೊಮ್ಮುವಂತೆ' ದನಿಗೆಯ್ವ ಕವನಗಳು ಕೆಲವು. ಇವೆಲ್ಲ 'ರಾಗಿಣಿ'ಯ ರಸದೊರತೆಗಳು. ಶ್ರೀ ಪರಮೇಶ್ವರಭಟ್ಟರು ಕನ್ನಡಿಗರಿಗೆ ಕೊಟ್ಟ ಮೂವತ್ತು ಕವಿತೆಗಳಲ್ಲಿ 'ಮಾಚಯ್ಯ' 'ದೇವರಾಯನದುರ್ಗ' ಗಳನ್ನುಳಿದು ಎಲ್ಲ ಕವನಗಳು ಭಾವಗೀತಗಳೆ. ಕನ್ನಡ ರಸಿಕರಿಗೆ ಭಾವಗೀತಗಳ ಪರಿಚಯ ಹೊಸದು. ಎಂತಲೇ ಅವುಗಳ ಕರ್ತೃವಿನ ಭಾರವೂ ಹಿರಿದು ಎಂದು ಹೇಳಬೇಕು. ಈ ದೃಷ್ಟಿಯಿಂದ ನೋಡಿದರೆ ಶ್ರೀಯುತರು ಯಶಸ್ವಿಯಾಗಿರುವರೆಂದೇ ಹೇಳಬೇಕು.

ಕೃಷ್ಣಮೂರ್ತಿ ಪುರಾಣಿಕ.

ಮನೋವಿಜ್ಞಾನ ರೂಪರೇಷೆ—ಬರೆದವರು: ಗೌರೀಶ ಕ್ಯಾಯಕಿಣಿ; ಪ್ರಕಾಶಕರು: ಮಿಂಚಿನಬಳ್ಳಿ, ಧಾರವಾಡ; ಪುಟ, ೧೬೮ – ೮ = ೧೬೦ ; ಬೆಲೆ, ೧-೪-೦.

ಪ್ರಗತಿಪರವಾದ ಶಾಸ್ತ್ರಗಳಲ್ಲಿ ಒಂದಾದ ಮನಶ್ಶಾಸ್ತ್ರದ ವಿಷಯವನ್ನು ತಿಳಿಸುವ ಪುಸ್ತಕವಿದು. ಕನ್ನಡದಲ್ಲಿ ಈ ತೆರನಾದ ಪುಸ್ತಕಗಳು ಅತಿವಿರಳ. ಮಿಂಚಿನಬಳ್ಳಿಯ ಸಂಪಾದಕರು ಇದನ್ನು ಪ್ರಚುರಪಡಿಸಿ ಕನ್ನಡಿಗರೆಲ್ಲರ ಕೃತಜ್ಞತೆಗೆ ಪಾತ್ರರಾಗಿರುವರು.

ಗ್ರಂಥಕರ್ತರೇ ಹೇಳಿರುವಂತೆ ಇದು ಸ್ವತಂತ್ರ ಗ್ರಂಥವಲ್ಲ; ಎಚ್. ಜೆ. ಡೆಂಟ್, ಬಿ.ಎ., ಎಂಬವರ (ಇಂಗ್ಲಿಷ್) ಗ್ರಂಥದ ಅವಲಂಬನೆ. ಮೊದಲು ಪುಸ್ತಕವನ್ನು ಬರೆದುದು 'ಈ ವಿಜ್ಞಾನವನ್ನು ತಿಳಿಯಬೇಕೆಂಬ ತೀವ್ರ ಆಸಕ್ತಿಯಿಂದ ಮಾತ್ರ' ಎಂದು ಗ್ರಂಥಕರ್ತರೇ ಹೇಳಿರುವರು.

ಈ ಪುಸ್ತಕದಲ್ಲಿ ಆಧುನಿಕ ಮನಶ್ಶಾಸ್ತ್ರದ ಚದುರಂಗವಾದ, ವರ್ತನವಾದಿ ತತ್ವ, ಹೇತುತ್ವವಾದಿ ಸಾಂಪ್ರದಾಯ, ಗೆಸ್ಟಾಲ್ಟ ಪಂಥ, ಮನೋವಿಶ್ಲೇಷಣ ಶಾಸ್ತ್ರ ಮುಂತಾದ ವಿಷಯಗಳ ಸೂಕ್ಷ್ಮ ಪರಿಚಯಕ್ಕೆ ಅವಕಾಶವುಂಟು. ಆದರೂ ಕೆಲವೆಡೆಗಳಲ್ಲಿ ಇಂಗ್ಲಿಷಿನಲ್ಲಿ ಮನಶ್ಶಾಸ್ತ್ರವನ್ನು ಓದಿದವರಿಗೆ ಮಾತ್ರ ಸುಲಭವಾಗಿ ಅರ್ಥವಾಗುವಂತಹ ವಾಕ್ಯಸರಣಿಗಳೂ ವರ್ಣನೆಗಳೂ ಇವೆ. ಇಂಗ್ಲಿಷಿನ ತಿಳಿವಿಲ್ಲದ ಕನ್ನಡಿಗನಿಗೆ ಈ ಗ್ರಂಥವು ಎಷ್ಟು ಉಪಕಾರಿಯಾಗಿರುವುದೆಂದು ಹೇಳುವುದು ಕಷ್ಟ. ಮನಶ್ಶಾಸ್ತ್ರ ಸಂಬಂಧವಾದ ಪುಸ್ತಕಗಳು ವಿಶೇಷವಾಗಿಲ್ಲದ ನಮ್ಮ ಭಾಷೆಯಲ್ಲಿ ಈ ಪುಸ್ತಕವೂ ಮುಖ್ಯವಾದುದೆಂಬ ಅಭಿಪ್ರಾಯವು ಮಾತ್ರ ನಮ್ಮದಾಗಿರಬಹುದು.

ಪಾರಿಭಾಷಿಕ ಶಬ್ದಗಳ ಕೊರತೆಯೇ ಕಾರಣವಾಗಿಲ್ಲದೆ, ಕೆಲವೆಡೆ ವಿಷಯಗಳು ತಿಳಿವಳಿಕೆಗೆ ಬಾರದಂತಿವೆ. ಉದಾಹರಣೆ:—ಪುಟ ೧೦೦, "ಅವುಗಳೊಳಗಿನಿಂದ ಅನುಸ್ಯೂತವಾದ . . . ರೂಪಗೊಳ್ಳುತ್ತೇವೆ." ಪುಟ ೮೭, ಜಿ ಮತ್ತು ಎಸ್ ತತ್ವಗಳ ಪ್ರತಿಪಾದನೆ. ಪುಟ ೧೨೨, ಮನಃಸ್ವರೂಪದ ವರ್ಣನೆ. ಪುಟ ೮೩, ಸ್ಪಿಯರ್‌ಮನ್ನಿನ ಮೂರು ತತ್ವಗಳ ವರ್ಣನೆ. ಗ್ರಂಥಕರ್ತರು ಇಂಗ್ಲಿಷಿನಲ್ಲಿ ಇನ್ನೂ ನಾಲ್ಕಾರು ಪುಸ್ತಕಗಳನ್ನು ಓದಿ ಆ ಮೇಲೆ ಇದನ್ನು ಬರೆದಿದ್ದರೆ ಚೆನ್ನಾಗಿತ್ತೆಂದು ನಮ್ಮ ಅಭಿಪ್ರಾಯ. ಆಗ, ಇವರು ಕೆಲವು ತಪ್ಪುಗಳನ್ನು ಬಿಡಬಹುದಾಗಿತ್ತು. ಉದಾ:—ಪುಟ ೧೬೦, 'ಸಂಕ್ಷೇಪನದ' ವರ್ಣನೆ. ಪುಟ ೧೫೦, ಫ್ರಾಯ್ಡ್‌ನಿಗೆ ಸಂಮೋಹನೆಯ ತಂತ್ರವನ್ನು ಬಿಡಲು ಇದ್ದ ಕಾರಣ ಒಂದೇ ಅಲ್ಲ. ಪುಟ ೧೦೭, "ಸೇಂದ್ರಿಯ ಪ್ರಾಣಿಯೆಂದರೆ ವಿದ್ಯುಚ್ಛಕ್ತಿಗಳ ಕ್ಷೇತ್ರ". ಪುಟ ೧೦೨, "ರೂಪೀಕರಣದ . . . ಸಾಧಿಸುತ್ತಾರೆ." ಪುಟ ೮೮, ಮಾನಸಿಕ ಕ್ರಿಯಾಶಕ್ತಿಯೇ 'ಎಸ್' ಎಂಬುದಾಗಿ ಹೇಳಿದ ಗ್ರಂಥಕರ್ತರೇ, ಪುಟದಡಿಯಲ್ಲಿ "ಮಾನಸಿಕ ಕ್ರಿಯಾಶಕ್ತಿಯ 'ಜಿ' ತತ್ವವೇ

ಪ್ರತಿಯೊಂದು ಮನೋವ್ಯಾಪಾರದಲ್ಲಿಯೂ ಇರುತ್ತದೆ" ಎನ್ನುತ್ತಾರೆ. ಅಂದರೆ 'ಜಿ' ಗೂ 'ಎಸ್'ಗೂ ಇರುವ ವ್ಯತ್ಯಾಸವು ಮನಗಂಡಂತಾಗುವುದಿಲ್ಲ. ಪುಟ ೮೨, ಸ್ಪಿಯರ್‌ಮನ್ನಿನ ತತ್ವಗಳು 'ನೋಯೆಜೆನೆಟಿಕ್ (Noegenetic) ಹೊರತು' 'ನಿಯೊ ಜೆನೆಟಿಕ್' (Neogenetic) ಅಲ್ಲ. ಪುಟ ೭೨, ಒಂದೇ ಮೂಲಪ್ರವೃತ್ತಿಯಿಂದ ಯಾವಾಗಲೂ ಒಂದೇ ಭಾವನೆಯು ಉಂಟಾಗಬೇಕೆಂಬ ನಿಯಮವಿಲ್ಲವೆಂದು ಗ್ರಂಥ ಕರ್ತರು ಹೇಳುತ್ತಾರೆ. ಮೆಕ್‌ಡೂಗಲ್ಲಿನ (ಇವನು ೬೬ನೆಯ ಪುಟದಲ್ಲಿ ಹೇಳಿರುವಂತೆ, ಇನ್ನೂ ಅಧ್ಯಾಪಕನಾಗಿಲ್ಲ. ಈ ಗ್ರಂಥವನ್ನು ಬರೆಯುವುದಕ್ಕಿಂತ ಎರಡು ವರ್ಷ ಮುಂಚೆಯೇ ಸತ್ತುಹೋಗಿದ್ದಾನೆ.) ಮತದ ಪ್ರಕಾರ, ಅಭ್ಯಾಸಕ್ರಮದಿಂದ ಬೇರ್ಪಟ್ಟರೂ ಮೊದಲು ಮೂಲಪ್ರವೃತ್ತಿ (instinct) ಯು ತನಗನುಗುಣವಾದ ಭಾವನೆಯನ್ನೇ (emotion) ತರುತ್ತದೆಂದು ಅಭಿಪ್ರಾಯವಲ್ಲವೇ? ಪರಸ್ಪರ ವಿರುದ್ಧವಾದ ಈ ಭಾವನೆಗಳನ್ನು ಸರಿಹೋಗಿಸುವಂತೆ ವಿಶದವಾಗಿ ವ್ಯಾಖ್ಯೆಯನ್ನು ಮಾಡದಿರುವುದು ದೊಡ್ಡ ಲೋಪ. ಪುಟ ೬೪. "ಮೂಲಪ್ರಚೋದನೆಯ ನಿಮಿತ್ತದ ಕುರಿತು ಪರಿಸ್ಥಿತಿ ಭೇದದಿಂದ ಹೊಸ ಪ್ರತಿಕ್ರಿಯೆಯನ್ನು ಶಿಶುವು ಕಲಿಯುತ್ತದೆ" ಎಂದು ಗ್ರಂಥಕರ್ತರು ಹೇಳಿದ್ದಾರೆ; ಪಾವ್‌ಲೋವನ ಮತಾನುಸಾರ ಶಿಶುವು ಇಲ್ಲಿನ ಸಂದರ್ಭದಲ್ಲಿ ಕಲಿಯುವುದಿಲ್ಲ. ಇಲ್ಲಿ ಸಾಂಕೇತಿಕ ಪರಾವರ್ತನೆ (conditioned reflex) ಮಾತ್ರ. ಪಿತೃಪ್ರವೃತ್ತಿ ಎಂದರೆ ತಂದೆತಾಯಿಗಳಾಗಬೇಕೆಂಬ ಬಯಕೆ ಎನ್ನುವುದಕ್ಕಿಂತಲೂ ವಾತ್ಸಲ್ಯ ಎಂದರೆ ಮೇಲು.

ಈ ಪುಸ್ತಕದಲ್ಲಿ ಇನ್ನೊಂದು ಅಕ್ಷಮ್ಯವಾದ ದೊಡ್ಡ ಕೊರತೆಯಿದೆ. ಸುಪ್ರಸಿದ್ಧರಾದ ಗ್ರಂಥಕರ್ತರ ಹೆಸರನ್ನು ಸರಿಯಾಗಿ ಹೇಳುವುದೂ ಬರೆಯುವುದೂ ಸಾಧ್ಯವಾಗಿರುವಾಗ ಅವುಗಳನ್ನು ಅರೂಪಗೊಳಿಸುವುದು ನ್ಯಾಯವಲ್ಲ. ಫ್ರಾಯ್ಡ್‌ನಿಗೆ ಫ್ರೂಡ, ಯೂಂಗ್‌ಗೆ ಜಂಗ, ಕಾಯ್‌ಲರ್‌ನಿಗೆ ಕೊಹಲಿಕ್, ಕೊಹರ, ಕೊಹಲರ, ಬಿನೆಗೆ ಬಿನೆಟ್, ಥಾರ್ನ್‌ಡೈಕ್‌ಗೆ ಡೊರ್ನೆಥೊಡಾಯ್ಕ, ವಿಲ್‌ಹೆಮ್ ಉಂಟ್‌ಗೆ ವಿಲ್‌ಹೆಲ್ಮ ಎಂಟ, ಡೈಕಾರ್ಟ್‌ಗೆ ಡೆಕ್ಕಾರ್ಡೆ ಎನ್ನುವುದೂ ಉಚಿತವಲ್ಲವೆಂದು ನಮ್ಮ ಅಭಿಪ್ರಾಯ. ಈ ಚಿಕ್ಕ ಪುಸ್ತಕದಲ್ಲಿ ಎಲ್ಲವನ್ನೂ ಬರೆಯುವುದು ಸಾಧ್ಯವಲ್ಲದಿದ್ದರೂ ಬಿನೆ ಹೆಸರೆತ್ತಿದವರು ಸ್ಪೈಮನ್ನಿನ ವಿಷಯವನ್ನೂ, ವರ್ತನತತ್ವದ ಪರಿಣಾಮವನ್ನು ಹೇಳಿದವರು ಟೋಲ್‌ಮನ್ನಿನ ಹೇತುತ್ವ-ವರ್ತನವಾದಿ ತತ್ವ (purposive behaviourism) ವನ್ನೂ ಹೇಳದಿರುವುದು ಲೋಪದೋಷವೆಂದೇ ಹೇಳಬೇಕು.

ಗ್ರಂಥಕರ್ತರಿಗೆ, ಅವರ ಭಾಷೆಯೇ ಅಲ್ಲಲ್ಲಿ ತೊಡಕಾಗಿ, ಅವರ ಬಾಯಿಂದಲೇ "ತಿಳಿನುಡಿಯಲ್ಲನ್ನಬೇಕಾದರೆ" "ಸರಳ ಮಾತಿನಲ್ಲಿ ಹೇಳುವುದಾದರೆ" ಎಂಬುವ

ಟೀಕೆಯನ್ನು ಹೊರಡಿಸಿದೆ. ಆದರೆ ಅವರೇ ಈ ಟೀಕೆಗಳಿಗೆ ಅನೇಕವೇಳೆ ಮನಸ್ಸು ಕೊಟ್ಟಂತೆ ಕಾಣುವುದಿಲ್ಲ.

ಆದರೂ, ಭಾಷೆಯಲ್ಲಿಯೂ ಶೈಲಿಯಲ್ಲಿಯೂ ಸಾಧಾರಣವಾಗಿ ವಿಜ್ಞಾನ ಶಾಸ್ತ್ರಗಳಿಗೆ ಯೋಗ್ಯವಾದ ಬಿಕ್ಕಟ್ಟಿದೆ. ಸಂಸ್ಕೃತದ ಅವಲಂಬನೆಯಿಂದ ಪಾರಿಭಾಷಿಕ ಶಬ್ದಗಳನ್ನು ನಿರ್ಮಿಸಿರುವುದು ಸಾಧುವಾಗಿದೆ. ಅಲ್ಲಲ್ಲಿ, ಕಾದಂಬರಿಗಳಿಗೆ ಭೂಷಣವಾದ ತಿಳಿಹಾಸ್ಯವಿದೆ. (ಪುಟ ೧೩೦, ೯೪, ೮೯). ಶಾಸ್ತ್ರಗಳ ಸೂತ್ರದಂತಿರುವ ಬಿಕ್ಕಟ್ಟಿನ ಮಾತುಗಳು ಇವೆ (ಪುಟ ೧೪೮, ೧೨೪, ೧೨೩, ೭೪). ಅಲ್ಲಲ್ಲಿ ಪ್ರಾಸಗಳ ಹಾಸುಹೊಕ್ಕಿನ ನಲಿದಾಟವಿದೆ (ಪುಟ ೧೪೫, ೧೩೦). ಈ ಗುಣಮಣಿಗಳು ಶುಷ್ಕಶಾಸ್ತ್ರಕ್ಕೆ ಮೆರುಗನ್ನಿಕ್ಕಿದಂತೆ. ಗ್ರಂಥವು ಅಲ್ಲಲ್ಲಿ ಮನರಂಜಕವಾಗಿದೆ. ಹಲವರು, ಅಡಿಯಿಡುವ ಮುನ್ನ, ಅನುಮಾನಿಸುವ ಕಡೆಯಲ್ಲಿ ಗೌರೀಶಕ್ಕಾಯ್ಕಿಣಿಯವರು ಧೈರ್ಯದಿಂದ ನುಗ್ಗಿರುವುದಕ್ಕೆ ಕನ್ನಡಿಗರೆಲ್ಲರೂ ಹೆಮ್ಮೆಪಡುವರೆಂಬುದರಲ್ಲಿ ಸಂಶಯವಿಲ್ಲ.

ನಾ. ಸು. ನಾ.

ಕನ್ನಡ ನಾಡಿನ ಕಥೆಗಳು—ಲೇಖಕರು: ಶ್ರೀ ನಾರಾಯಣಶರ್ಮರು, ಕರ್ನಾಟಕ ಇತಿಹಾಸ ಸಂಶೋಧಕ ಮಂಡಲ, ಧಾರವಾಡ; ರಜತಮಹೋತ್ಸವ ಗ್ರಂಥಮಾಲೆ—೬. ಬೆಲೆ: ಸಾದಾ ಪ್ರತಿ, ೦-೧೨-೦ ; ಕ್ಯಾಲಿಕೊ, ರೂ. ೧-೦-೦.

ಈ ಕಥಾಸಂಗ್ರಹದಲ್ಲಿ ಶ್ರೀ ನಾರಾಯಣಶರ್ಮರು ಕರ್ಣಾಟಕ ಚರಿತ್ರೆಗೆ ಸಂಬಂಧಪಟ್ಟ ೫೫ "ಶಬ್ದಚಿತ್ರ"ಗಳನ್ನು ಐತಿಹಾಸಿಕ ಆಧಾರಗಳ ಮೇಲೆ, ಕರ್ಣಾಟಕದ ರಾಜಕೀಯ, ಸಾಮಾಜಿಕ, ಆಧ್ಯಾತ್ಮಿಕ ಮತ್ತು ಕಲಾತತ್ತ್ವಗಳು ಬಾಲಕರಿಗೆ ಸುಲಭವಾಗಿ ತಿಳಿಯುವಂತೆ ಸರಳ ಭಾಷೆಯಲ್ಲಿ ಬರೆದು ಕರ್ಣಾಟಕ ಸಂಸ್ಕೃತಿಯಲ್ಲಿ ಅಭಿಮಾನವು ಬಳೆಯುವಂತೆ ಮಾಡಿರುವದಕ್ಕಾಗಿ ವಂದನೀಯರು. ಐತಿಹಾಸಿಕ ಪ್ರಸ್ತಾವನೆಯಲ್ಲಿ ಕರ್ಣಾಟಕ ಚರಿತ್ರೆಯ ಸೂಕ್ಷ್ಮ ಪರಿಚಯವನ್ನು ಕೊಟ್ಟು, ಕದಂಬ, ರಾಷ್ಟ್ರಕೂಟ, ಚಾಲುಕ್ಯ, ಹೊಯ್ಸಳ, ಯಾದವ, ವಿಜಯನಗರ, ಪಾಳೆಯಗಾರರು, ಬಹಮನೀ, ಕೊಡಗು, ಮೈಸೂರು ರಾಜ್ಯಗಳ ಮುಖ್ಯ ವ್ಯಕ್ತಿಗಳ ಚರಿತ್ರೆಗಳನ್ನೂ ಕರ್ಣಾಟಕ ವೀರಮಹಿಳೆಯರಾದ ಲಕ್ಷ್ಮಮ್ಮ, ಬೈಲಂಗಡಿ ಸೋಮಲಾದೇವಿ, ಬೆಳವಡಿ ಮಲ್ಲಪ್ಪ, ಕೆಳದಿ ಚೆನ್ನಮ್ಮ, ಚಿತ್ರದುರ್ಗದ ಓಬವ್ವ, ಕಿತ್ತೂರು ಚೆನ್ನಮ್ಮ ಇವರ ಸಾಹಸದ ಕಥೆಗಳನ್ನೂ ಮನಸ್ಸನ್ನಾಕರ್ಷಿಸುವಂತೆ ವರ್ಣಿಸಿರುವರು. ಕರ್ಣಾಟಕದ ಧಾರ್ಮಿಕ ಚರಿತ್ರೆಯಲ್ಲಿ ಪ್ರಸಿದ್ಧರಾದ ಶ್ರೀ ರಾಮಾನುಜಾಚಾರ್ಯ,

ಬಸವೇಶ್ವರ, ಮಹಾದೇವಿಯಕ್ಕ, ಪುರಂದರದಾಸ, ಕನಕದಾಸ, ವಿದ್ಯಾರಣ್ಯ ಇವರ ಜೀವನ ಚರಿತ್ರೆಗಳೂ ಕೊಡಲ್ಪಟ್ಟಿವೆ. ಒಂದನೆಯ ಪರಿಶಿಷ್ಟದಲ್ಲಿ ಮಹತ್ತ್ವದ ಕಾಲಗಳ ಪಟ್ಟಿಯು ಕೊಡಲ್ಪಟ್ಟಿದೆ. ಆದರೆ ಕ್ರಿ.ಶ. ೩೩೨ರಲ್ಲಿ ಮಯೂರಶರ್ಮನು ರಾಜ್ಯಕಟ್ಟಿದ್ದು, ೬೩೪ರಲ್ಲಿ ಪುಲಿಕೇಶಿಯು ಹರ್ಷನನ್ನು ಸೋಲಿಸಿದ್ದು, ೧೧೩೨ರಲ್ಲಿ ಶ್ರೀ ಬಸವೇಶ್ವರ ಜನ್ಮ ಮತ್ತು ೧೧೯೬ರಲ್ಲಿ ಲಿಂಗೈಕ್ಯರಾದದ್ದು, ೧೧೧೬ರಲ್ಲಿ ರಾಮಾನುಜಾಚಾರ್ಯರು ಬಿಟ್ಟಿದೇವನನ್ನಾಶ್ರಯಿಸಿದ್ದು, ೧೩೩೧ರಲ್ಲಿ ವಿದ್ಯಾರಣ್ಯರು ಹಂಪಿಗೆ ಬಂದದ್ದು, ಇತ್ಯಾದಿ ಕಾಲನಿರ್ಣಯವು ವಿವಾದಾಸ್ಪದವಾಗಿದೆ. ಆಧಾರ ಗ್ರಂಥಗಳಲ್ಲಿ ವಿಶ್ವಾಸಾನರ್ಹಗಳಾದ ಕೆಲವು ಗ್ರಂಥಗಳನ್ನು ಪಯೋಗಿಸಿಕೊಂಡಿರುವದರಿಂದ ಇಲ್ಲಿ ಕಂಡುಬರುವ ಅನೇಕ ವಿಷಯಗಳನ್ನು "ಚಾರಿತ್ರಿ"ಕ ಎಂದು ಹೇಳಲಾಗುವದಿಲ್ಲ. ಆದರೂ ಗ್ರಂಥಕರ್ತರ ಉದ್ದೇಶವು ಕನ್ನಡನಾಡು, ನುಡಿ, ಸಂಸ್ಕೃತಿಗಳಲ್ಲಿ ಅಭಿಮಾನ ಹುಟ್ಟಿಸಬೇಕೆಂಬುದೇ ಆಗಿರುವದರಿಂದ ಒಟ್ಟಿನಲ್ಲಿ ಈ ಹೊತ್ತಗೆಯು ಕನ್ನಡಿಗರ ಮೆಚ್ಚುಗೆಗೆ ಅರ್ಹವಾಗಿದೆ. ಮೂರು ಐತಿಹಾಸಿಕ ನಕ್ಷೆಗಳೂ ಹತ್ತೊಂಬತ್ತು ಸುಂದರ ಚಿತ್ರಗಳೂ ಅಡಕವಾಗಿವೆ. ಮುದ್ರಣವು ಸಮರ್ಪಕವಾಗಿದೆ.

ಎಸ್. ಶ್ರೀಕಂಠಶಾಸ್ತ್ರಿ.

ಸಾದರ ಸ್ವೀಕಾರ

೧. **ಆರತಿ**—ಹೆಣ್ಣುಮಕ್ಕಳ ಕಥಾಸಂಗ್ರಹ. ಮನೋಹರಗ್ರಂಥಮಾಲೆ, ಧಾರವಾಡ.

೨. **ಗ್ರೀಕರ ತತ್ತ್ವಶಾಸ್ತ್ರಸಾರಸಂಗ್ರಹ**—ಲೇಖಕರು: ಕೆ. ಆರ್. ಶ್ರೀನಿವಾಸಯ್ಯಂಗಾರ್, ಎಂಎ.; ಮೈಸೂರು ವಿಶ್ವವಿದ್ಯಾನಿಲಯ ಕನ್ನಡ ಗ್ರಂಥಮಾಲೆ—೧೭; ಕ್ರೌನ್ xl + ೪೨೬; ಬೆಲೆ, ೧-೦-೦.

೩. **ಹಿಂದೂದೇಶದ ಭೂಚರಿತ್ರೆ**—ಲೇಖಕರು: ವೈ. ನಾಗಪ್ಪ, ಎಂ.ಎಸ್‌ಸಿ.; ಮೈಸೂರು ವಿಶ್ವವಿದ್ಯಾನಿಲಯ ಕನ್ನಡ ಗ್ರಂಥಮಾಲೆ—೧೮; ಕ್ರೌನ್ ೨೭೫; ಬೆಲೆ, ೦-೧೨-೦.

೪. **ಅರಕ್ಷಣೀಯು**—ಮೂಲಲೇಖಕರು: ಶರಚ್ಚಂದ್ರಚಟ್ಟೋಪಾಧ್ಯಾಯರು; ಅನುವಾದಕರು: ಸಿ. ಕೆ. ನಾಗರಾಜರಾಯರು; ಪ್ರಕಾಶಕರು: ಶರಣಸಾಹಿತ್ಯ; ಬೆಲೆ?

೫. **ನಾಯಿಕೊಡೆ** (ಮಯೂರ ಗ್ರಂಥಮಾಲೆಯ ನಾಲ್ಕನೆಯ ಗರಿ)—ಬರೆದವರು: ಸಿ. ಕೆ. ನಾಗರಾಜರಾಯರು; ಬೆಲೆ?

೬. **A Manual of Geometry**—by N. K. Narasimhamoorthy, M.Sc. The Prabhakara Book Depot, Fort, Bangalore City; Price?

೭. **ಸತ್ವಶಾಲಿ ರಶಿಯು**—ಮಿಂಚಿನ ಬಳ್ಳಿಯ ೫ನೆಯ ವರ್ಷದ ಒಂದನೆಯ ಕುಡಿ; ಬರೆದವರು: ಶ್ರೀ ಸತ್ಯನಾರಾಯಣ ಬಾನರ್ಜಿಯವರು; ಅನುವಾದಕರು: ಡಿ. ಎನ್. ಶರ್ಮರು; ಬೆಲೆ?

೮. **ರೈತನ ಏಳಿಗೆ**—ಲೇಖಕರು: ಡಿ. ಕೃಷ್ಣಯ್ಯಂಗಾರ್, ಎಂ ಎ.; ಬೆಲೆ, ೧-೮-೦.

೯. **Marriage and Family in Mysore**—by M. N. Srinivas. New Book Co., Bombay.

೧೦. **ಅಗಸ್ತ್ಯ ಕಥಾಸಂಗ್ರಹ—ಕಲಶಮಹಾತ್ಮ್ಯೆ**—ಪ್ರಕಾಶಕರು: ವಿ. ಎಸ್. ಕಳಸೇಭಟ್ಟ; ಕಳಸ. ಬೆಲೆ, ೦-೧೦-೦.

೧೧. **ಭರಮಪ್ಪನ ಭೂತ**—ಲೇಖಕರು: ಶ್ರೀರಂಗ; ಮನೋಹರ ಗ್ರಂಥಮಾಲೆ, ಧಾರವಾಡ.

೧೨. **ಚಿತ್ತಾರ**—ಲೇಖಕರು: ಹೊಯ್ಸಳ.

೧೩. **ಭರತ ನಾಟ್ಯದ ಭವ್ಯತೆ**—ಲೇಖಕರು: ಎಸ್. ಎನ್. ಸ್ವಾಮಿ.

೧೪. **ಚಿಗುರು**—ಲೇಖಕರು: ದಿವಂಗತ ಸೌ. ಗೌರಮ್ಮನವರು; ಲಲಿತ ಸಾಹಿತ್ಯಮಾಲೆ, ಧಾರವಾಡ.

೧೫. ಕೀರಸಂದೇಶಮು, ಖಡ್ಗತಿಕ್ಕನ, ಗೋವರ್ಧನಾಚಾರ್ಯ, ಸಪ್ತಶತೀಸಾರಮು, ಅಮೃತಕಣಮುಲು, ನಡುಮಂತ್ರಪುಸಿರಿ, ತತ್ಸಮ

ಚಂದ್ರಿಕ, ಕಾವ್ಯಮಂಜರಿ, ಜಾತಕ ಕಥಾಗುಚ್ಛಮು—ಲೇಖಕರು : ಶಿರೋಮಣಿ ಸನ್ನಿಧಾನಮು ಸೂರ್ಯನಾರಾಯಣಶಾಸ್ತ್ರಿ, 44, ಜೀರಾ, ಗೋಕುಲಮ್, ಸಿಕೆಂದರಾಬಾದು.

೧೬. **ಕನ್ನಡ ನಾಡಿನ ಕಥೆಗಳು**—ಲೇಖಕರು : ನಾರಾಯಣಶರ್ಮ.

೧೭. **ರಾಕ್ಷಸನ ಮುದ್ರಿಕೆ**—ಲೇಖಕರು : ತೀ. ನಂ. ಶ್ರೀಕಂಠಯ್ಯ, ಎಂ.ಎ. ; ಪ್ರಕಾಶಕರು : ಕಾವ್ಯಾಲಯ, ಮೈಸೂರು ; ಬೆಲೆ, ೦-೧೨-೦.

೧೮. **ಸಾಹಿತ್ಯದ ಜೀವಾಳ** (ಷೋಫರ್-ಹೌರನ ಪ್ರಬಂಧಗಳು)—ಅನುವಾದಕರು : ಗೊರೂರು ರಾಮಸ್ವಾಮಯ್ಯಂಗಾರ್ಯರು ; ಪ್ರಕಾಶಕರು : ಕಾವ್ಯಾಲಯ, ಮೈಸೂರು.

೧೯. **ವಿಶ್ವಮೇಧ**—ಲೇಖಕರು : ಸಂಜಯ; ಪ್ರಕಾಶಕರು: ಸಂಯುಕ್ತ ಕರ್ಣಾಟಕ.

೨೦. **The Adyar Library Bulletins for Dec., Feb., Mar.**

೨೧. **The Jaina Anthology, June, 1942.**

೨೨. **ಸಂತಸಖು**—ಲೇಖಕರು : ವಿದ್ವಾನ್ ಹರಿದಾಸ ; ಸಂಗೀತ ಕಲಾಮಂದಿರ, ಕಾರ್ಕಳ ; ಬೆಲೆ, ೦-೩-೦.

೨೩. **ರತಿರಂಗ**—ಸಂಚಿಕೆ ೧, ಸಂಪುಟ ೧, ಜುಲೈ, ೧೯೪೨; ಸಂಪಾದಕರು : ವೆಂಕಟ. ಜಿ. ಭಸ್ಮೆ.

೨೪. **ಮೋಟರ ಯಂತ್ರವಿಜ್ಞಾನ**—ಲೇಖಕರು : ವಿ. ಎಸ್. ಕುಡವ ; ನ್ಯೂಸ್ ಪೇಪರ್ ಪಬ್ಲಿಷರ್ಸ್, ಕೊಡಿಯಾಲಬೈಲು, ಮಂಗಳೂರು.

೨೫. **ಮನೋವಿಜ್ಞಾನ ರೂಪರೇಷೆ**—ಲೇಖಕರು : ಗೌರೀಶ ಕ್ಾಯಕಿಣಿ ; ಪ್ರಕಾಶಕರು : ಮಿಂಚಿನ ಬಳ್ಳಿ, ಧಾರವಾಡ ; ಬೆಲೆ, ೧-೪-೦.

೨೬. **ಪ್ರಬೋಧ**—ಸಂಪುಟ. ೧, ಸಂಚಿಕೆ ೨. ಸಂಪಾದಕ: ಜಿ. ಆರ್. ಮಹಾಬಲಭಟ್ಟ; ದೂರ್ವಾಸಪುರಂ, ತೀರ್ಥಹಳ್ಳಿ ತಾಲ್ಲೂಕು.

೨೭. **ನಾಕ್ಷತ್ರ**—ತಾರ ೧, ಮಂಡಲ ೧. ಮೇ, ೧೯೪೨.

೨೮. **ಭಾಗ್ಯಲಕ್ಷ್ಮಿ** (ಕಿರುಕಾದಂಬರಿ)—ಲೇಖಕರು : ಎಂ. ವಿ. ಸೀತಾರಾಮಯ್ಯ ; ಪ್ರಕಾಶಕರು : ಎಸ್.ಎಸ್.ಎನ್. ಬುಕ್ ಡಿಪೊ, ನ್ಯೂಮಾರ್ಕೆಟ್ ಬಿಲ್ಡಿಂಗ್ಸ್, ಬೆಂಗಳೂರು.

೨೯. **ಹಿಟ್ಲರ್ ಯಾರು ?**—ಲೇಖಕರು : ಆರ್. ಸಿ. ಕೆ. ಎನ್ಸರ್ ; ಆಕ್ಸ್‌ಫರ್ಡ್ ಪ್ರಪಂಚಪರಿಚಯ ಮಾಲೆ. ಬೆಲೆ ; ೦-೪-೦.

೩೦. **ಮಹಾಯುದ್ಧ ನಕ್ಷೆಗಳ ಸಂಗ್ರಹ** (೧೫ ನಕ್ಷೆ : ವಿವರಣೆ ಸಹಿತ)—ಆಕ್ಸ್‌ಫರ್ಡ್ ಪ್ರಪಂಚಪರಿಚಯ ಮಾಲೆ ; ಬೆಲೆ, ೦-೪-೦.

೩೧. **ಅಕ್ಕಾಜಿ**—ಶ್ರೀ ಶರಚ್ಚಂದ್ರಚಟ್ಟೋಪಾಧ್ಯಾಯರ 'ಬಡ ದಿದಿ'—ಅನುವಾದಕರು : ಮಲ್ಲಾರಿ. ಲಲಿತ ಸಾಹಿತ್ಯಮಾಲೆ, ಧಾರವಾಡ ; ಬೆಲೆ, ೦-೧೦-೦.

ವಸ್ತುಕೋಶ

ಕನ್ನಡ ಭಾಷಾವಿದ್ವಾಂಸರಾದ ಶ್ರೀ ಗಳಗನಾಥರು, ಶ್ರೀ ಗುರುಸೇವಾಸಕ್ತ ಆಸ್ಥಾನ ಧರ್ಮಾಧಿಕಾರಿ ತಿರುವಳ್ಳೂರು ಶ್ರೀನಿವಾಸ ರಾಘವಾಚಾರ್ಯರು, ಶ್ರೀ ಆಸ್ಥಾನ ವಿದ್ವಾನ್ ಟಿ. ಎನ್. ಸುಬ್ಬರಾಯ ಶಾಸ್ತ್ರಿಗಳು ಮತ್ತು ಆಸ್ಥಾನ ವಿದ್ವಾನ್ ಕಾಸಕಾಸಹಳ್ಳಿ ವರದಾಚಾರ್ಯರು—ಇವರುಗಳು ಈ ವರ್ಷದ ಪೂರ್ವಭಾಗದ ಒಂದೆರಡು ತಿಂಗಳುಗಳ ಅವಕಾಶದಲ್ಲಿ ಒಟ್ಟಿಗೆ ಸ್ವರ್ಗಸ್ಥರಾದುದರಿಂದ ಕನ್ನಡನಾಡಿಗೆ ವಿಶೇಷ ನಷ್ಟವುಂಟಾಗಿದೆ. ಇವರೆಲ್ಲರೂ ಕನ್ನಡ ಮತ್ತು ಸಂಸ್ಕೃತ ಭಾಷೆಗಳೆರಡರಲ್ಲಿಯೂ ಪಂಡಿತರಾಗಿ ಪ್ರಾಚೀನ ಸಂಪ್ರದಾಯ ರೀತಿಯಲ್ಲಿ ಕನ್ನಡಕ್ಕೆ ವಿಶೇಷವಾಗಿ ಸಹಾಯಮಾಡಿದ್ದಾರೆ. ಶ್ರೀಮಾನ್ ಗಳಗನಾಥರು ಶ್ರೇಷ್ಠ ಕಾದಂಬರಿಕಾರರು. ಅವರು ಮರಾಠಿಯಿಂದ ಅನೇಕ ಕಾದಂಬರಿಗಳನ್ನು ಕನ್ನಡಕ್ಕೆ ಭಾಷಾಂತರಮಾಡಿದುದಲ್ಲದೆ ಕೆಲವನ್ನು ಸ್ವಂತವಾಗಿಯೂ ರಚಿಸಿದ್ದಾರೆ. ಶ್ರೀಮಾನ್ ಶ್ರೀನಿವಾಸ ರಾಘವಾಚಾರ್ಯರು ಕನ್ನಡ ಅಧ್ಯಾಪಕರೂ ಗ್ರಂಥಕರ್ತರೂ ಆಗಿದ್ದುದಲ್ಲದೆ ಕನ್ನಡ ಭಾಷಾಭಿವೃದ್ಧಿಗಾಗಿ ಅನೇಕ ವುದಿವಟ್ಟುಗಳನ್ನು ಏರ್ಪಡಿಸಿರುತ್ತಾರೆ. ಶ್ರೀಮಾನ್ ಸುಬ್ಬರಾಯ ಶಾಸ್ತ್ರಿಗಳು ಮೈಸೂರು ಪ್ರಾಚ್ಯ ಕೋಶಾಗಾರದಲ್ಲಿಯೂ ಮಹಾರಾಜರ ಕಾಲೇಜಿನಲ್ಲಿಯೂ ಕನ್ನಡ ಸೇವೆಯಲ್ಲಿ ನಿರತರಾಗಿದ್ದು ಪ್ರಾಚ್ಯಕೋಶಾಗಾರದ ಕನ್ನಡ ಗ್ರಂಥಮಾಲೆಯ ಕೆಲವು ಗ್ರಂಥಗಳಿಗೆ ಸಂಪಾದಕರಾಗಿದ್ದರು.

ಕಂಬನಿ

ಶ್ರೀಮಾನ್ ವರದಾಚಾರ್ಯರು ಮಹಾರಾಜರ ಕಾಲೇಜಿನಲ್ಲಿ ಮೂವತ್ತು ಮೂರು ವರ್ಷಕಾಲ ಕೆಲಸಮಾಡಿ ಆಮೇಲೆ ಹದಿನಾರು ವರ್ಷಗಳ ಕಾಲ ವಿಶ್ರಾಂತಿ ಸುಖವನ್ನು ಪಡೆದರು. ಆಚಾರ್ಯರು ಆಚಾರಶೀಲರು, ದೃಢಾಂಗರು. ಬಾಲ್ಯದಲ್ಲಿ ಅವರು ಮಹಾರಾಜರ ಸಂಸ್ಕೃತ ಮಹಾಪಾಠಶಾಲೆಯಲ್ಲಿ ಸಾಹಿತ್ಯಪರೀಕ್ಷೆಯಲ್ಲಿ ತೇರ್ಗಡೆಹೊಂದಿ ಆಗತಾನೆ ಹೊಸದಾಗಿ ಸ್ಥಾಪಿತವಾಗಿದ್ದ ಭಾಷೋಜ್ಜೀವಿನಿ ಪಾಠಶಾಲೆಯಲ್ಲಿ ಶಿಕ್ಷಣಪಡೆದರು. ಆಮೇಲೆ ಅವರು ಮಹಾರಾಜರ ಕಾಲೇಜಿನಲ್ಲಿ ಕನ್ನಡದ ಸಹಾಯೋಪಾಧ್ಯಾಯರಾಗಿದ್ದು ಪಂಡಿತ ಕರಿಬಸಪ್ಪಶಾಸ್ತ್ರಿಗಳು ವಿಶ್ರಾಂತಿ ಹೊಂದಿದ ಮೇಲೆ ಪ್ರಧಾನಪಂಡಿತರಾದರು. ಆಚಾರ್ಯರ ಪಾಠಬೋಧನೆಯ ರೀತಿ ಚಿತ್ತಾಕರ್ಷಕವಾಗಿರುತ್ತಿತ್ತು. ಅವರ ಕೈಯಲ್ಲಿ ಅಲಂಕಾರ, ವ್ಯಾಕರಣ, ಛಂದಸ್ಸು

ಮೊದಲಾದ ಶಾಸ್ತ್ರಗಳೂ ಸ್ವಾರಸ್ಯವಾಗುತ್ತಿದ್ದವು. ಕನ್ನಡ ಭಾಷಾಪರಿಚಯವಿಲ್ಲದ ಆಂಗ್ಲ ಅಧಿಕಾರಿಗಳೂ ಕೂಡ ಅವರ ಪಾಠಗಳನ್ನು ಮರೆಯಲ್ಲಿ ನಿಂತುಕೇಳಿ ಸಂತೋಷ ಪಟ್ಟ ಸನ್ನಿವೇಶಗಳೂ ಉಂಟು. ಅವರ ವಿಚಾರಬುದ್ಧಿ, ಅವರ ಕರ್ತವ್ಯನಿಷ್ಠೆ, ಅವರ ಹಾಸ್ಯಪ್ರಿಯತೆ, ಅವರ ಸೌಜನ್ಯ, ಪಾಂಡಿತ್ಯ, ಉತ್ಸಾಹ—ಇವುಗಳನ್ನು ಅವರ ಯಾವ ವಿದ್ಯಾರ್ಥಿಯೂ ಮರೆಯುವಂತಿಲ್ಲ. ಇಂದು ಕನ್ನಡಕ್ಕಾಗಿ ದುಡಿಯುತ್ತಿರುವವರಲ್ಲಿ ಅನೇಕರಿಗೆ ಜೀವನದ ಉತ್ಸಾಹವನ್ನೂ ಸಾಹಿತ್ಯದ ಸವಿಯನ್ನೂ ಕನ್ನಡದ ಮೇಲ್ಮೆಯನ್ನೂ ತೋರಿಸಿಕೊಟ್ಟ ಮಹಾನುಭಾವರವರು.

ಅವರ ಹಳಗನ್ನಡ ಸಾಹಿತ್ಯಪರಿಚಯ ಖಚಿತವಾದುದು. ಬ್ರಹ್ಮಶಿವನ 'ಸಮಯ ಪರೀಕ್ಷೆ'ಯನ್ನು ಶೋಧಿಸಿ ಮುದ್ರಣಕ್ಕೆ ಸಿದ್ಧಪಡಿಸಿದರು. ಅದು ಕಾರಣಾಂತರಗಳಿಂದ ಅಚ್ಚಾಗಲಿಲ್ಲ. ಜೈಮಿನಿ ಭಾರತದ ಸಂಶೋಧನೆಯಲ್ಲಿ ಪಂಡಿತ ಕರಿಬಸಪ್ಪಶಾಸ್ತ್ರಿಗಳಿಗೆ ವಿಶೇಷವಾಗಿ ಸಹಾಯಮಾಡಿದರು. ವಿಶ್ವವಿದ್ಯಾನಿಲಯದಿಂದ ಪ್ರಕಟವಾದ 'ಕನ್ನಡ ಕೈಪಿಡಿ'ಗೆ ಶಬ್ದಾಲಂಕಾರ ಮತ್ತು ಅರ್ಥಾಲಂಕಾರಭಾಗಗಳಿಗೆ ಸಂಬಂಧಪಟ್ಟ ಎರಡು ಅಧ್ಯಾಯಗಳನ್ನು ರಚಿಸಿಕೊಟ್ಟರು. ಇದೆಲ್ಲಕ್ಕಿಂತಲೂ 'ಕನ್ನಡ ಶಬ್ದಾನುಶಾಸನ'ದ ವಿಷಯದಲ್ಲಿ ಅವರು ನಡೆಸಿದ ಪರಿಶೋಧನೆ ಅತಿಮುಖ್ಯ. ಅದರ ಕರ್ತೃತ್ವದ ವಿಚಾರದಲ್ಲಿ ಪರಿಶೋಧನೆಯನ್ನು ಪ್ರಾರಂಭಿಸಿ ಅದರ ಇತ್ಯರ್ಥದಲ್ಲಿ ತುದಿಯ ವರೆಗೂ ಆಸಕ್ತರಾಗಿದ್ದು ಸುಮಾರು ಅರ್ಧಶತಮಾನದ ಕಾಲ ದುಡಿದರು. ಅದರ ಸಂಬಂಧವಾಗಿ ಪರಿಷತ್ಪತ್ರಿಕೆಯಲ್ಲಿಯೂ ಪ್ರಬುದ್ಧ ಕರ್ಣಾಟಕದಲ್ಲಿಯೂ 'ಶಬ್ದಾನುಶಾಸನತತ್ತ್ವಾವಲೋಕತರಂಗ' ಎಂಬ ಲೇಖನಗಳನ್ನು ಪ್ರಕಟಿಸಿದರು. ಆದರೆ ತಮ್ಮ ಕಾರ್ಯವನ್ನು ಪೂರ್ತಿಗೊಳಿಸುವುದಕ್ಕೆ ಪೂರ್ವಭಾವಿಯಾಗಿಯೇ ಅವರು ಕಣ್ಮರೆಯಾದುದು ವಿಷಾದಕರ.

ತುಂಬು ಜೀವನವನ್ನು ಬಾಳಿ ಶಕ್ತಿಯಿದ್ದಷ್ಟೂ ದುಡಿದು ಕನ್ನಡಕ್ಕೆ ನಾನಾ ರೀತಿಯಲ್ಲಿ ಸಹಾಯಮಾಡಿ ಕಣ್ಮರೆಯಾದ ಈ ಎಲ್ಲ ಹಿರಿಯರ ಪುಣ್ಯಸ್ಮರಣೆ ಕನ್ನಡಿಗರ ಹೃದಯದಲ್ಲಿ ನಿಂತು ಕನ್ನಡದ ಸೇವೆಗೆ ಸ್ಥಿರಪ್ರೇರಣೆಯಾಗಲೆಂದು ಹಾರೈಸುತ್ತೇವೆ.

***

ರಾಜಸೇವಾಪ್ರಸಕ್ತ ಶ್ರೀಮಾನ್ ಮಾಸ್ತಿ ವೆಂಕಟೇಶ ಅಯ್ಯಂಗಾರ್ಯರಿಗೆ ಅಭಿನಂದನೆ

ಈಸಲದ ವರ್ಧಂತಿ ಮಹೋತ್ಸವದಲ್ಲಿ ನಮ್ಮನ್ನಾಳುವ ಶ್ರೀಮನ್ಮಹಾರಾಜರು ಶ್ರೀಮಾನ್ ಮಾಸ್ತಿ ವೆಂಕಟೇಶ ಅಯ್ಯಂಗಾರ್ಯರಿಗೆ 'ರಾಜಸೇವಾಪ್ರಸಕ್ತ' ಎಂಬ ಬಿರುದನ್ನು ದಯಪಾಲಿಸಿದರು. ಇದರಿಂದ ಇಡೀ ಕನ್ನಡನಾಡಿಗೆ ವಿಶೇಷ ಸಂತೋಷವುಂಟಾಗಿದೆ. ಶ್ರೀಮಾನ್ ಮಾಸ್ತಿಯವರು ಈ ರಾಜಸನ್ಮಾನಕ್ಕೆ ಹೇಗೆ

ಅರ್ಹರೆಂಬುದನ್ನೂ ಅವರು ಕನ್ನಡ ನುಡಿಗೂ ನಾಡಿಗೂ ಸಲ್ಲಿಸಿರುವ ಅತಿ ಮಹತ್ತ್ವದ ಸೇವೆಯನ್ನೂ ಅವರ ಪುಸ್ತಕಗಳೂ ಅವರಿಗೆ ಜನಸಾಮಾನ್ಯವು ನಾನಾ ರೀತಿಯಲ್ಲಿ ತೋರಿಸಿರುವ ಸನ್ಮಾನಾದಿಗಳೂ ವಿಶದಪಡಿಸಿವೆ. ಅವುಗಳನ್ನು ಪುನಃ ಈಗ ಪ್ರಸ್ತಾವಿಸುವ ಅಗತ್ಯವಿಲ್ಲವೆಂದು ಭಾವಿಸುತ್ತೇವೆ. ಆದುದರಿಂದ ನಾವು ಈಗ ನಮಗೆ ಇದರಿಂದುಂಟಾದ ಪೂರ್ಣ ಸಂತೋಷವನ್ನು ಮಾತ್ರ ಸೂಚಿಸಿ ಶ್ರೀಮಾನ್ ಮಾಸ್ತಿಯವರ ಕನ್ನಡ ಸೇವೆ ಅವಿಶ್ರಾಂತವಾಗಿ ಯಶಸ್ವಿಯಾಗಿ ನಡೆಯುವಂತೆ ಭಗವಂತನು ಅವರಿಗೆ ಆಯುರಾರೋಗ್ಯಗಳನ್ನು ದಯಪಾಲಿಸಲೆಂದು ಹಾರೈಸುತ್ತೇವೆ.

ಪ್ರಾಚ್ಯಲೇಖನಾವಳಿ

The Modern Review.—July, 1942.

The Indian Dance.—L. N. GUBIL.

The Modern Chinese Theatre.—WAHINDA AZIZ.

The New Review.—August, 1942.

Pessimism in Literature.—S. KRISHNAN.

The Calcutta Review.—June, 1942.

Psychological Teachings of the Gita.—M. L. DAS.

The Hindustan Review.—July, 1942.

Rabindranath Tagore.—NALINI RANJAN SARKAR.

The Influence of Caste System on the Education of Ancient India.—Dr. A. S. ALTEKAR.

Review of Philosophy and Religion.

The Symphathetic Induction of Emotions.—P. S. NAIDU.

The Self and Aesthetic Experience.—S. S. RAGHAVACHAR.

The Meaning of Anirvachanīya in Śaṅkara.—N. KISHORE DEVARAJ.

The Vedanta Kesari.—August, 1942.

The Ethics of Advaita.

Kannappar—The hunter saint of Tamil land.

The Jaina Antiquary.—June, 1942.

Some of the latest Institutions and Journals and their work in the field of Prakrit-studies.—A. N. UPADHYE.

Magic and Miracle in Jaina Literature.—KALIPADA MITRA.

The Jaina Chronology.—KAMTA PRASĀD JAIN.

Nārāyaṇas, Pratinārāyaṇas and Balabhadras.—HARISATYA BHATTACHARYA.

The Quarterly Journal of the Mythic Society.—June, 1942.

Rudra in the Rigveda.—G. SITARAMIAH.

The Literary Genius of Bādarāyaṇa.—N. K. VENKATESAN PANTULU.

The four values in Hindu thought. (A study of the Purushārthas)—P. NĀGARĀJA RAO.

Proto-Indic Religions.—By S. SRIKANTHA SASTRI.

Journal of Indian History.—December, 1941.

Chandragupta and Bhadrabāhu.—DHIRENDRANATH MOOKERJI.

Journal of the Sri Venkateswara Oriental Institute.—July and December, 1941.

The Nature of pure soul from the Jaina standpoint.—K. V. N. SUDARŚANACHRYA.

MSS of Subhāshītāvalī.—M. RAMAKRISHNA KAVI.

The date of Tiruppāvai.—K. C. VARADACHARI.

The Indian Historical Quarterly.—March, 1942.

Early Tamil Religious Literature.—V. R. RAMACHANDRA DIKSHITAR.

Bharatiya Vidya.—Vol. II, Part II, May, 1941.

Some problems of historical linguistics in Indo-Aryan.—S. M. KATRE. (Synopsis of six lectures—Wilson Philological Lectures delivered in February-March, 1941.)

The Valid Forms in Bhāsa.—LOUIS RENOU.

The Poona Orientalist.—Vol. V, Nos. 1–4.

The Ancestry and Caste of Chandragupta Maurya according to Mudrārākshasa.—DAŚARATHA ŚHARMA.

VOL. VI, NOS. 1 AND 2.

Importance of accent in the Vedas.—S. R. SCHEGAL.

VOL. VI, NOS. 3 AND 4.

On the Present Need of Indian Linguistics.—S. M. KATRE.

The Journal of the Oriental Research Institute.—Madras, Dec. 1940.

Tolkāppiyam.—P. S. SUBRAHMANYA SASTRY.

Annals of Oriental Research.—Madras, Vol. VI, 1941-42, Part 1.

1. On Pampa's works. (Some Old Kannada Words.)—By H. SESHA IYENGAR.

೫. ಲಟಹ—ವಿಲಾಸ: ಪ್ರಬಲ.

೬. ಮೂರಿ—ಬಾಯಿ.

೭. ಕಿರಾತ—

2. ಆಂಡಯ್ಯ.—By M. MARIAPPA BHAT, M.A., L.T.

   (ಕನ್ನಡ ಸಾಹಿತ್ಯವು ಸಂಸ್ಕೃತದ ಒಪ್ಪವಿಲ್ಲದೆ ಶೋಭಿಸಬಲ್ಲುದು, ಕನ್ನಡದಲ್ಲಿ ತಿರುಳುಪುರುಳುಗಳಿವೆ, ಕನ್ನಡಕ್ಕೊಂದು ವ್ಯಕ್ತಿತ್ವವಿದೆ ಎಂಬ ನವಸಂದೇಶವನ್ನು ಆಂಡಯ್ಯನು ವಿಷಯರೀತಿಗಳೆರಡರಲ್ಲೂ ತನ್ನದೇ ಆದ ಒಂದು ಹೊಸಪರಿಯ ಕಬ್ಬದಿಂದ ಕನ್ನಡನಾಡಿಗೆ ತಿಳಿಸಿರುವನು. ಅದೊಂದು ಕನ್ನಡಕ್ಕೆ ಸಂದ ಅಪೂರ್ವಸೇವೆ. ಅಂಥ ವೀರರು ಬಹುಮಂದಿ ಇಲ್ಲದೆ ಹೋದುದು ಕನ್ನಡನುಡಿಯ ದುರ್ದೈವ ವಿಲಾಸ.)

3. Dravidian Phonetics.—By K. RAMAKRISHNAYYA, M.A.
   The development of ഴ in Dravidian languages.

4. Notes on Kālidāsa.—By DR. C. KUNHAN RAJA.
   1. The Bharatavakya in the Mālavikāgnimitra. 2. Allusions to Agnimitra in the works of Kālidāsa. 3. Titles of the works of Kālidāsa.

5. Some Appayya Dikshitas—By DR. V. RAGHAVAN. (Appayyas 2 and 3.)

6. Minor works wrongly ascribed to Ādi Śaṅkara.—By DR. V. RAGHAVAN.
   ಸರ್ವವೇದಾಂತ ಸಿದ್ಧಾಂತ ಸಾರ ಸಂಗ್ರಹ, ಪ್ರಬೋಧಸುಧಾಕರ.

Aryan Path.—Vol. XIII, No. 2, Feb., 1942; No. 3, March, 1942.

Immortal Literature.—A note.

Literature in its changing moods.—B. J. WADIA.

The Contribution of Jainism to Religious Thought.—AJIT PRASAD.

Bulletin of Ramavarma Research Institute.—Vol. IX, No. 2, July, 1941.

Grammar in Līlātilakam.—L. V. RAMASWAMI AYYAR.

Modern Tamil Prose.—M. S. RAMANUJAM.

December, 1941, Vol. X, No. 1.

Language—a clue to History.—A. G. SIMON.

Līlātilakam and Tamil Grammatical Works.—L. V. RAMASWAMI AYYAR.

Half-yearly Journal of the Mysore University.—Vol. II, No. 2, March, 1942.

Anekāntavāda or the Jaina Philosophy of Relativity.—G. HANUMANTHA RAO.

The Aesthetic Problem.—N. S. N. SASTRY.

Journal of the Bombay Historical Society.—Vol. VI, Nos. 1&2.

The age of Guru Akalaṅka.—B. A. SALETORE.

Journal of the University of Bombay.—Vol. X, No. 2.

Mudrārākshasa and Kaumudī Mahotsava.—D. R. MANKAD.

Journal of the United Provinces Historical Society.

The date of Kālidāsa (375–445 A.D.)—B. S. UPĀDHYĀYER.

Note on the river Sindhu of the Mālavikāgnimitra.—J. C. POWEL RICE.

New Indian Antiquary.—Vol. IV, No. 10.

Bhoja's Śṛṅgāraprakāśa (The History of Guṇas).—V. RAGHAVAN.

Miscellany.

Date of Asaga's Vardhamāna Charita.

Vol. IV, No. 12

The Raghunātha Bhūpālīya and the Sāhitya Sāmrājya.

Bhōja's Śṛṅgāraprakāśa (contd.)

Vol. V, No. 1

On Valid test of Linguistic Hypothesis.—D. D. KOSAMBI.

Bhoja's Śṛṅgāraprakāśa (the conception of Alaṅkāra).—V. RAGHAVAN.

Triveni.

Love in Modern Telugu Poetry.—K. LAKSHMI RANJANAM.

The Journal of the Literary Committee of the L.E. Association, Dharwar.

Ethics of Veerasaivism.—V. B. HALBHAVI.

Necessity of Philosophy for Practical Life.—K. VEERABHADRAPPA.

Unity and Synthesis of Eastern and Western culture.—G. H. MEER.

The 12th century Kannada Literature.—S. S. MALWAD.

Veerashaivism: Quo vadis.—KUMARASWAMIJI.

VOL. II, No. 1

The Religion of Revana Siddha.—V. B. HALBHAVI.

ಕನ್ನಡ ಪತ್ರಿಕೆಗಳು

ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ ಸಂಪುಟ ೨೬ ಸಂಚಿಕೆ ೨.

ವಡ್ಡಾರಾಧನೆ (೭, ೮, ೯, ೧೦ ನೆಯ ಕಥೆಗಳು) ಸಂ.—ಡಿ. ಎಲ್. ನರಸಿಂಹಾಚಾರ್ಯರು.

ಕರ್ಣಾಟಕಕ್ಕೆ ಜೈನಧರ್ಮದ ಆಗಮನ—ಎಮ್. ಗೋವಿಂದ ಪೈ.
ಜೈಮಿನಿಭಾರತ—ವಿಹಾರವಿಮರ್ಶೆ—ಆರ್. ವಿ. ಜಾಗೀರದಾರ.
ಪೂಜ್ಯ—ಅನಂತ ಅಥವಾ ಪಂಪನ ಶೈಲಿ—ಎಸ್. ವಿ. ರಂಗಣ್ಣ.
ರಾಷ್ಟ್ರಕೂಟರ ರಾಜಧಾನಿಗಳು—ದೇಸಾಯಿ ಪಾಂಡುರಂಗರಾಯರು.
ಮಂಗಳವಾಡವು ಬಿಜ್ಜಳನ ರಾಜಧಾನಿಯಾಗಿತ್ತೆ—ಎಚ್. ಲಕ್ಷ್ಮೀನಾರಾಯಣ ರಾಯರು.
ಅಕಾಲವರ್ಷನ ಶಿಲಾಲಿಪಿ. (ಬ್ಯಾಡಿಗಿ) ೯೦೧ ಕ್ರಿ.ಶ.—ಬೆಂಗೇರಿ ಹುಚ್ಚ ರಾಯರು.
ವಳ್ಳ (ವಳ)—ವಾಳ—ವಾಲ ಪ್ರತ್ಯಯವಿಚಾರ—ಶಂ. ಬಾ. ಜೋಶಿ.
ಱ, ಕುಳ, ಕ್ಷಳ ವಿಚಾರ—ಎಸ್. ಎಸ್. ಮಾಳವಾಡ.

ಸಂಪುಟ ೨೭, ಸಂಚಿಕೆ ೧

ವಡ್ಡಾರಾಧನೆ (೧೧, ೧೨,೧೩ ನೆಯ ಕಥೆಗಳು) ಸಂ.—ಡಿ. ಎಲ್. ನರಸಿಂಹಾ ಚಾರ್ಯರು.
ಚಾವುಂಡರಾಯಪುರಾಣ (ಮುಂದುವರಿದುದು) ಸಂ.—ಎಚ್. ಅನಂತರಂಗಾ ಚಾರ್ಯರು.
ಸಾಹಿತ್ಯದಲ್ಲಿ ಕವಿಸಮಯದ ಸ್ಥಾನ—ಮುಳಿಯ ತಿಮ್ಮಪ್ಪಯ್ಯ.
ಕೇಶಿರಾಜನ ಎರಡು ಸೂತ್ರಗಳು—ಆರ್. ಎಸ್. ಪಂಚಮುಖಿ.
ಷಟ್ಪದಿಕಾರ ರಾಘವಾಂಕ—ಕೆ. ಜಿ. ಕುಂದಣಗಾರ.
ಮಹಾರಾಣಿ ಶಾಂತಲದೇವಿ—ಕೆ. ಭುಜಬಲಶಾಸ್ತ್ರಿ.
ಹಾಫೀಸ್—ಎಂ. ವಾಸುದೇವಮೂರ್ತಿ.
ಸರಸ್ವತಿಯ ಭರ್ತೃತ್ವವಿಚಾರ—ಬಿದರೆ ಮಠದ ವೀರಭದ್ರಶಾಸ್ತ್ರಿ.
ಪೂರ್ವದ ಹಳಗನ್ನಡ ಮತ್ತು ತಮಿಳು—ಶ್ರೀ.
ತಮಿಳು ಕನ್ನಡ ಸಾಹಚರ್ಯಗಳು—ದೇಶಾಯಿ ಪಾಂಡುರಂಗರಾಯರು.

ಜಯಕರ್ಣಾಟಕ—

ಜನವರಿ, ೧೯೪೨. ನಮ್ಮ ಸಮಾಜಧರ್ಮ—ಬೆಳಗಾಂವಿ ರಾಮಚಂದ್ರ ರಾಯರು.

ಉರ್ದುಕಥಾ ಸಾಹಿತ್ಯದ ಪರಿಚಯ—ಗುರುನಾಥ ಜೋಶಿ.

ಫೆಬ್ರವರಿ, ೧೯೪೨. ಶಿಕ್ಷಣವೆಂಬ ಶಿಕ್ಷೆ—ಜಿ. ವಿ. ಮುಳಿಯೆ.
ಶಿಕ್ಷಣವು ಕಲೆಯೋ ಶಾಸ್ತ್ರವೋ?—ಎಸ್. ಜಿ. ಬೈಚವಾಳ.
ಮಾರ್ಚ್, ೧೯೪೨. ನಾಗರೀಕತೆಯ ಶಿಕ್ಷಣ—ಐ. ಸಿ. ತಂಬದ.
ಮೇ, ೧೯೪೨. ಕಲಾಜೀವನದ ಗುಟ್ಟು—ಖಾನೋಳಕರ ಶ್ರೀಧರರಾಯರು.
ಜೂನ್, ೧೯೪೨. ಶ್ರೀ ವ್ಯಾಸರಾಯರು—ಕೂಡಲಿ ಸುಬ್ಬರಾವ್.

ಜಯಂತಿ—

ಜನವರಿ, ೧೯೪೨. ಶಾಕುಂತಲ ಕಥಾನಿರೂಪಣೆ—ಕೆ. ಎಲ್. ಎನ್. ಉಪಾಧ್ಯಾಯ.
ಫೆಬ್ರುವರಿ, ೧೯೪೨. ಹಾಸ್ಯಪ್ರಕಾರಗಳು (ರಸವಿಚಾರ)—ಖಾನೋಳಕರ ಶ್ರೀಧರರಾಯರು.
ಮಾರ್ಚ್, ಏಪ್ರಿಲ್. ಮೇ, ೧೯೪೨.
ಭಾರತೀಯ ಸಂಸ್ಕೃತಿಯು ಆಧ್ಯಾತ್ಮಿಕವೇ?—ಗೌರೀಶ ಕ್ಕಾಯಕಿಣಿ.
ಮಾತಾ ಮಂಟಸೋರಿ (ಶಿಕ್ಷಣತತ್ತ್ವದ ಪರಿಚಯ)—ಒಬಲೇಶ್ವರ.
ಸಾಹಿತ್ಯದ ಸ್ವಾಹಾಪತಿಗಳು—ಎನ್. ಕೆ. ಕುಲಕರ್ಣಿ.
ಸೌಂದರ್ಯ ಶಾಸ್ತ್ರ—ಖಾನೋಳಕರ ಶ್ರೀಧರರಾಯರು.

ಜೀವನ—

ಜನವರಿ, ೧೯೪೨. ೧. ಋಗ್ವೇದ—ಅಯಂಗಾರ್, ನ. ಶ್ರೀನಿವಾಸಯ್ಯಂಗಾರ್. ೨. ಸೌಂದರ್ಯಶೋಧ ಮತ್ತು ಆನಂದ ಬೋಧ—ರಾ. ಶ್ರೀ. ಜೋಗ.
ಫೆಬ್ರುವರಿ, ೧೯೪೨. ೧. ಕನ್ನಡ ರಂಗ ಭೂಮಿ—ರಂ. ಶ್ರೀ. ಮುಗಳಿ.
೨. ಕನಕದಾಸರ ಕಳವಳ—ಚಿಚ್ಚಕೋರ. ೩. ಅಶ್ಲೀಲತೆಯೆಂದರೇನು—ಶ್ರೀಧರ.
ಮಾರ್ಚ್, ೧೯೪೨. ೧. ಕನಕದಾಸರ ಕಳವಳ (ಮುಂದುವರಿದದ್ದು).
೨. ಬೇಂದ್ರೆಯವರ ಕಾವ್ಯದಲ್ಲಿ ಪ್ರೀತಿಯ ರೂಪರೇಷೆಗಳು—ವಿ. ಕೃ. ಗೋಕಾಕ.
ಏಪ್ರೆಲ್, ೧೯೪೨. ಬೇಂದ್ರೆಯವರ ಕಾವ್ಯದಲ್ಲಿ ಪ್ರೀತಿಯ ರೂಪ ರೇಷೆಗಳು (ಮುಂದುವರಿದದ್ದು.)

ಮೇ, ೧೯೪೨. ೧. ಏಕನಾಥರ ವಚನಾಮೃತ—ಚಿಚ್ಚಕೋರ. ೨. ಸಾಹಿತ್ಯವೆಂದರೇನು?—ಪಾಟೀಲ ಪುಟ್ಟಪ್ಪ. ೩. ಸಾಹಿತ್ಯ ಮತ್ತು ಜೀವನ—ಸದಾನಂದ ನಾಯಕ. ೪. ಕವಿ—ನಾ. ಗೋ. ದೇವ. ೫. ಇಂದಿನ ಕರ್ನಾಟಕ—ವೆಂಕಟರಾವ್ ಬಿದರಕುಂದಿ.

ಜೂನ್, ೧೯೪೨. ೧. ಕಾಳಿದಾಸನ ಜೀವನ ವೇದಾಂತ—ಶ್ರೀ. ಶ. ಖಾನೋಳಕರ. ೨. ಮೇಘದೂತದ ಕಾವ್ಯವಿಹಾರಿ—ರಾಮಚಂದ್ರ ಕೊಟ್ಟಲಗಿ. ೩. ಜಿಜ್ಞಾಸೆ (ಆಲಂಕಾರಿಕ ಮೇಧಾವಿಯ ಪರಿಚಯ)—ಎಚ್. ಎಂ. ಶಂಕರ ನಾರಾಯಣರಾವ್.

ವಿವೇಕಾಭ್ಯುದಯ—

ಜನವರಿಯಿಂದ ಮೇ ವರೆಗೆ.

೧. ಸಮಂತಭದ್ರ ಸ್ವಾಮಿಗಳು—ಶಾಂತರಾಜಶಾಸ್ತ್ರಿಗಳು. ೨. ಜೈನ ಧರ್ಮಶಾಸ್ತ್ರ.—ಎಚ್. ಪಿ. ಎ. ಜೈನ್. ೩. ಜೈನರಿಂದ ಪಂಡಿತಲೋಕಕ್ಕೆ ಆಗಬೇಕಾದ ಕಾರ್ಯ—ಲಕ್ಷ್ಮಣಸರೂಪ್. ೪. ಶ್ರುತಕೇವಲಿ—ಶ್ರೀ ಭದ್ರಬಾಹುಸ್ವಾಮಿಗಳು. ೫. ಜೈನ ಮಹಿಳೆಯರ ಕನ್ನಡ ಸೇವೆ—(ಮೂಲ ಲೇಖಕರು) ತ್ರಿವೇಣೀ ಪ್ರಸಾದ್, ಅನುವಾದಕರು—ಕುಮಾರಿ ಸಾಧ್ವೀಮಣಿ.

ಧಾರವಾಡದ ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆಯ ಸಾಹಿತ್ಯ ಸಮಿತಿ ಪತ್ರಿಕೆ—ಸಂಪುಟ ೨ ಸಂಚಿಕೆ ೧. ಏಪ್ರಿಲ್, ೧೯೪೨, ಬಸವಜಯಂತಿ; "ಶ್ರೀ ರೇಣುಕ ಸಂಚಿಕೆ".

The religion of Revanasiddha, ಹರಿಹರ ದೇವನ ರೇವಣಸಿದ್ಧ, ಶಿವ ಸಿದ್ಧಕುಲ ಚಕ್ರವರ್ತಿ ಶ್ರೀ ರೇಣುಕಾಚಾರ್ಯ, ಶ್ರೀ ರೇವಣಸಿದ್ಧರು ಪ್ರಚಾರ ಮಾಡಿದ ಧರ್ಮವಾವುದು? ರೇಣುಕ ಸಾಹಿತ್ಯ ವಿಮರ್ಶಾತ್ಮಕಪರಿಚಯ, ಶ್ರೀ ಜಗದ್ಗುರು ರೇಣುಕಾಚಾರ್ಯರ ಚರಿತ್ರೆ ಮತ್ತು ಕಾಲನಿರ್ಣಯ, ಶ್ರೀ ಜಗದ್ಗುರು ರೇಣುಕಾಚಾರ್ಯರು ಮತ್ತು ಶ್ರೀ ರೇವಣಸಿದ್ಧೇಶ್ವರರು, ಶ್ರೀ ರೇಣುಕರ ಪ್ರಸಿದ್ಧ ಕ್ಷೇತ್ರಗಳು, ಚೌಡದಾನಪುರದ ಶಿಲಾಶಾಸನಗಳು, ಶ್ರೀ ರೇವಣ್ಣನ ಸಿದ್ಧಿಸಾಮರ್ಥ್ಯ, ಶ್ರೀ ರೇವಣಸಿದ್ಧೇಶ್ವರನನ್ನು ಕುರಿತ ಸಾಹಿತ್ಯ.

ಪುರವಣಿ—ರೇವಣಸಿದ್ಧೇಶ್ವರ ದೇವರ ರಗಳೆ. ಮುಂದೆ ಏಕಾಂತರಾಮಯ್ಯ ರಗಳೆ, ಶಂಕರ ದಾಸಿಮಯ್ಯ ರಗಳೆ, ರೇವಣಸಿದ್ಧೇಶ್ವರ ದೇವರ ರಗಳೆ, ಪ್ರಭುದೇವರ ರಗಳೆ, ಕಣ್ಣಪ್ಪದೇವರ ರಗಳೆ.

ಶಿವಾನುಭವ—ಫೆಬ್ರುವರಿ, ಜೂನ್, ೧೯೪೨.

೧. ಕವಿಷಡಕ್ಷರಿ—ಎಸ್. ಷಣ್ಮುಖ ವೀರಾಪೂರ.

೨. ವೀರಶೈವ ಸಂಶೋಧನೆ—ದೇಸಾಯಿ ಪಾಂಡುರಂಗರಾಯರು.

೩. ಬಸವೇಶ್ವರನ ಚರಿತ್ರೆ—ಪಿ. ಜಿ. ಹಳಕಟ್ಟಿ.

೪. ಹರಿಹರನ ರಗಳೆಗಳು (ಭಾಗ ೮).

೫. ಮಹಾದೇವಿಯಕ್ಕನ ಕಾವ್ಯಮಣಿ—ಎಂ. ಎಸ್. ವೀರಾಪೂರ.

೬. ವಜ್ರಸೂಚ್ಯುಪನಿಷತ್ತು—ಚೆನ್ನಬಸವರಾಜ ದೇಶಿಕೇಂದ್ರಸ್ವಾಮಿಗಳು.

೭. ಶಿವಾನುಭವ ಶಬ್ದಕೋಶ—ರಾ. ಬ. ಹಳಕಟ್ಟಿ.

೧. ಮಂಗಳವಾಡವು ಬಿಜ್ಜಳನ ರಾಜಧಾನಿಯಾಗಿತ್ತೇ?—ಶ್ರೀ. ಎಸ್. ಲಕ್ಷ್ಮೀನಾರಾಯಣರಾವ್, ಎಂ.ಎ.

(ಚಾಲುಕ್ಯರಾಜ್ಯವು ಬಿಜ್ಜಳನ ಕೈವಶವಾದ ಮೇಲೆ ಈತನು ಕಲ್ಯಾಣವನ್ನು ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡಿದ್ದರೂ ಪೂರ್ವಿಕರ ಕಾಲದಿಂದಲೂ ಸ್ವಸ್ಥಾನವಾಗಿದ್ದ ಮಂಗಳವಾಡವೂ ಇವನ ನೆಲೆವೀಡುಗಳಲ್ಲೊಂದಾಗಿದ್ದಿರಬೇಕೆಂದು ನಿಸ್ಸಂಶಯವಾಗಿ ಹೇಳಬಹುದು.)

ಶರಣಸಾಹಿತ್ಯ—ಮಾರ್ಚಿ, ಏಪ್ರಿಲ್, ೧೯೪೨.

೧. ಶಿವಾನುಭವದ ಮಹತ್ವ—ಶ್ರೀ ಮಹದೇವಸ್ವಾಮಿಗಳು.

೨. ಸಂಸ್ಕೃತ ವಾಙ್ಮಯವೂ ವೀರಶೈವರೂ—ಬಿ. ಎಚ್. ಲಿಂಗಯ್ಯ.

೩. ಪ್ರಾಚೀನ ಭಾರತದ ಮೂರು ಶಿಕ್ಷಣಕೇಂದ್ರಗಳು—ಕುಮಾರೀ ಸರಸ್ವತೀ ದೇವಿ ನಿರಡಿ.

ಧುರೀಣ—ಜೂನ್, ೧೯೪೨.

ನಮ್ಮ ನಾಡಿನಲ್ಲಿ ನೃತ್ಯ—ಶಿವರಾಮಕಾರಂತ.

ಸರಸ್ವತಿ—ಜನವರಿ, ೧೯೪೨.

ಅತ್ತಿಮಬ್ಬೆ—ಆರ್. ಎಸ್. ರಾಮರಾವ್.

ಸುಬೋಧ—ಜನವರಿ—ಜೂನ್, ೧೯೪೨.

೧. ವಿಶ್ವಕವಿಯ ವ್ಯಕ್ತಿವೈಶಿಷ್ಟ್ಯ—ಟಿ. ಎನ್. ಶ್ರೀನಿವಾಸಮೂರ್ತಿ.

೨. ಸಂಸ್ಕೃತದ ಉಗಮವೆಲ್ಲಿ? ಸಂಸ್ಕೃತಜ್ಞರ ಕರ್ತವ್ಯವೇನು?—ಎಂ. ವಿ. ಚಕ್ರವರ್ತಿ.

೪. ಸಾಹಿತ್ಯದ ಗುರಿ—ಸರೋವರ ಶ್ರೀನಿವಾಸಾಚಾರ್ಯ.

೫. ಕನ್ನಡಗಾದೆಗಳು—ಎಂಬಾರ್ ಶ್ರೀನಿವಾಸಾಚಾರ್ಯ.

೬. ರಾಮಾಯಣದ ಮಹಾತ್ಮ್ಯೆ ಮತ್ತು ಅದರ ದಿವ್ಯಸಂದೇಶ—ಎಂಬಾರ್ ಶ್ರೀನಿವಾಸಾಚಾರ್ಯ.

೭. ಕನ್ನಡವೂ ಆಂಗ್ಲ ಛಂದಸ್ಸೂ—ಬಿ. ಶ್ರೀಕಂಠಯ್ಯ.

೮. ಮಹಾಕವಿ ರನ್ನನ ಕ್ಷಾತ್ರ ಸಾಹಿತ್ಯ—ಹ. ಸು. ಸೀತಾರಾಮಯ್ಯರ್.

೯. ಕವಿಚಕ್ರವರ್ತಿ ರನ್ನ—ಹ. ಸು. ಸೀತಾರಾಮಯ್ಯರ್.

೧೦. ಕನ್ನಡದ ಪ್ರಾಶಸ್ತ್ಯ—ಪಂಡಿತ ಸುಧಾಕರ.


೧೧. ಸಂಸ್ಕೃತದಲ್ಲಿ ಚರಿತ್ರ ಗ್ರಂಥಗಳು—ವಿ. ಕೃಷ್ಣಸ್ವಾಮಯ್ಯಂಗಾರ್.

೧೨. ಮಯೂರ ಕವಿ—ಎಂ. ವಿ. ಚಕ್ರವರ್ತಿ.

ಭಾರತ ಇತಿಹಾಸಸಂಶೋಧಕ ಮಂಡಲ ಪತ್ರಿಕೆ—ಜೂನ್, ೧೯೪೨.

ರಾಮ ಪೂಜೇಚಾ ಪುರಾಣವಶೇಷಾನುಸಾರ ವಿಚಾರ—ದೇ. ರಾ. ಪಾಟೀಲ.

(ರಾಮಪೂಜೆಯು ಈಗ ಮೈಸೂರಾಗಿರುವ ಪ್ರಾಂತದಲ್ಲಿ ಆರಂಭವಾಗಿ ಅಲ್ಲಿಂದ ಒಂಬತ್ತು ಅಥವಾ ಹತ್ತನೆಯ ಶತಮಾನಗಳ ಈಚೆಗೆ ಸುತ್ತಲೂ ಹರಡಿದಂತೆ ತೋರುತ್ತದೆ.)



ಕೈದಾಳದ ಚೆನ್ನಕೇಶವ

(ಡೈರೆಕ್ಟರ್ ಆಫ್ ಆರ್ಕಿಯಾಲಜಿ, ಮೈಸೂರು, ಅವರ ಕೃಪೆಯಿಂದ)

ಪ್ರಬುದ್ಧ
ಕರ್ಣಾಟಕ

ಚಿತ್ರಭಾನು ಸಂವತ್ಸರ — ೬೨ — ದೀಪಾವಳಿಯ ಸಂಚಿಕೆ

ಶಿಲಾಭೇರಿ

ಕೂಗುತಿವೆ ಕಲ್ಲು :
ಕಿವಿವೆತ್ತ ಕಿವುಡರಿರ, ಕೇಳಿ ಆ ಸೊಲ್ಲು !
ನಮ್ಮ ನಾಡಿನ ಮೂಲೆಮೂಲೆಯ ವೀರಗಲ್ಲು,
ಮಾಸತಿಯ ಮೃದು ಕಠೋರದ ಚಾಗ ಸೊಲ್ಲು !

ಸತ್ತವರು ನಾವಲ್ಲ ನೀವೆಂದು ಸಾರುತಿವೆ.
ಆಳಾಳ್ಗೆ ಕೈದೋರಿ ಮೌನಗಳೆ ದೂರುತಿವೆ :
“ ನಮ್ಮಂದಿನಾ ಕೆಚ್ಚು
ನಮ್ಮಂದಿನಾ ನೆಚ್ಚು
ನಿಮ್ಮೊಳಿಂದುದ್ಭವಿಸಲಾ ದಿವ್ಯ ಹುಚ್ಚು ! ”
ಎಂದಣಕಿ ಚೀರುತಿವೆ ;
ಹರಸಿ ಹಾರುತಿವೆ.

ಪಾಳು ದೇಗುಲದಲ್ಲಿ, ಲಂಟಾನ ಪೊದೆಯಲ್ಲಿ,
ಕಲ್ಲುರುಳಿ ಮುರಿದರಳಿಕಟ್ಟೆ ಹಳು ಬೆಳೆದಲ್ಲಿ,
ಇಲ್ಲಿ ಏನಿಲ್ಲವೆಂದು
ಇಲ್ಲಿ ಯಾರಿಲ್ಲವೆಂದು
ಸಾಗುತಿರಲನಿರೀಕ್ಷಿತಂ ಪ್ರೇತವೊಂದು
ಕೂಗುವುದು ಹಾದಿ ಬದಿಯು
ಕದಡಿ ನೆಮ್ಮದಿಯು!

"ಕೇಳಿಲ್ಲಿ ಮಡಿದೆನಾಂ ಜೀವವನೆ ತೃಣಮಾಡಿ
ಹೆಣ್ತನದ ಮಾನ ರಕ್ಷಣೆಗಾಗಿ ಕಾದಾಡಿ!"
"ಇಲ್ಲಿ ನಾಂ ಬಲಿಯಾದೆ,
ಹೆಬ್ಬುಲಿಯೊಡನೆ ಕಾದೆ;
ತಬ್ಬಲಿತನವ ತಡೆದು ಕರುಗೆ ತಾಯ್ವೋದೆ!"
"ಹಗೆಯಿರಿಯುತಿಲ್ಲಿ ಬಿದ್ದೆ;
ಮಿತ್ತುವನು ಗೆದ್ದೆ!"

ಇಲ್ಲಿ ದೇವರಿಗಾಗಿ, ಅಲ್ಲಿ ಹದಿಬದೆಗಾಗಿ,
ಇಲ್ಲಿ ಒಡೆಯನಿಗೊಡಲನಲ್ಲಿ ನಾಡಿಂಗಾಗಿ,
ಎಲ್ಲಿ ಕಣ್ಣಿಡಲಲ್ಲಿ,
ಎಲ್ಲಿ ಕಿವಿಯಿಡಲಲ್ಲಿ,
ಬಲಿದಾನ ಗೈದ ಕನ್ನಡತನದ ತುತ್ತೂರಿ
ಭೋರಿಡುತ್ತಿದೆ ಶಿಲಾಭೇರಿ,
ಪ್ರಾಣ ಸಂಚಾರಿ!

ಕೆ. ವಿ. ಪುಟ್ಟಪ್ಪ.

‘ಶಾಕುಂತಲ’ವನ್ನು ಕುರಿತು*

ವಿಶ್ವಕವಿಗಳ ವಿರಳಪಂಕ್ತಿಯಲ್ಲಿ ಕಾಳಿದಾಸನಿಗೆ ಭದ್ರವಾದ ಸ್ಥಾನವನ್ನು ಗಳಿಸಿಕೊಟ್ಟಿರುವ ಕೃತಿ ‘ಅಭಿಜ್ಞಾನ ಶಾಕುಂತಲ’. “ಕಾವ್ಯೇಷು ನಾಟಕಂ ರಮ್ಯಂ ತತ್ರ ರಮ್ಯಾ ಶಕುಂತಲಾ”—ಎಂದು ಹೇಳಿ ಭರತಖಂಡದ ಪಂಡಿತರು ಸಂಸ್ಕೃತ ಸಾಹಿತ್ಯದಲ್ಲಿ ಶಾಕುಂತಲ ನಾಟಕಕ್ಕೆ ಅಗ್ರಪಟ್ಟವನ್ನು ಕಟ್ಟಿದರು. ಪಾಶ್ಚಾತ್ಯರಲ್ಲಿ ಗಯಟೆಯಂಥ ಮಹಾಕವಿ ಮರ್ತ್ಯಸ್ವರ್ಗಗಳ ಸಾರಸಮ್ಮಿಳನವನ್ನೇ ಶಾಕುಂತಲವೆಂಬ ಒಂದು ಹೆಸರಿನಲ್ಲಿ ಕಂಡನು. ಎಷ್ಟೋ ಉತ್ತಮ ಕೃತಿಗಳನ್ನು ಕೂಡ ಒಂದು ಬಾರಿ ಸವಿನೋಡಿದ ಮೇಲೆ ಮತ್ತೆ ಕೈಗೆ ತೆಗೆದುಕೊಳ್ಳಲು ಬೇಗ ಮನಸ್ಸು ಬರುವುದಿಲ್ಲ. ಆದರೆ ಶಾಕುಂತಲವನ್ನು ಓದಿದಷ್ಟೂ ಅದರ ಸವಿ ಹೆಚ್ಚುತ್ತದೆ; ನಮ್ಮ ಅನುಭವ ಆಳವಾದ ಹಾಗೆಲ್ಲ ಅದರ ಅರ್ಥವೂ ಅಭಿನವವಾಗುತ್ತದೆ. ತರುಣರಿಗೆ, ಪರಿಣತರಿಗೆ—ಎಲ್ಲರಿಗೂ ಇದರಲ್ಲಿ ಆಹ್ಲಾದವುಂಟು, ಆತ್ಮಸಂಸ್ಕಾರವುಂಟು. ಇಂಥ ಮಹಾಕೃತಿಯ ಸ್ವಾರಸ್ಯ ಮಹತ್ತ್ವಗಳನ್ನು ಸುಮಾರು ಹತ್ತು ನಿಮಿಷಕಾಲದ ಹರಟೆಯಲ್ಲಿ ನಿರೂಪಿಸುವುದು ಹೇಗೆ ಸಾಧ್ಯ! ಕಡಲನ್ನು ಕಡೆಯುವ ಸಾಹಸಕ್ಕೆ ಇಲ್ಲಿ ನಾನು ಕೈಹಾಕುವುದಿಲ್ಲ. ಶಾಕುಂತಲವು ಶಕುಂತಲಾ ದುಷ್ಯಂತರ ಪ್ರೇಮಕಥೆ; ಈ ಎರಡು ಪಾತ್ರಗಳ ವಿಷಯದಲ್ಲಿ, ಅದರಲ್ಲೂ ಮುಖ್ಯವಾಗಿ ಶಕುಂತಲೆಯ ವಿಷಯದಲ್ಲಿ, ಗಮನಾರ್ಹವೆಂದು ತೋರಿದ ಕೆಲವು ಅಂಶಗಳನ್ನು ಪ್ರಸ್ತಾವಿಸುವುದಷ್ಟೇ ನನ್ನ ಉದ್ದೇಶ.

ಕಾಳಿದಾಸನು ತನ್ನ ಮಿಕ್ಕ ನಾಟಕಗಳಲ್ಲಿ ಮಾಳವಿಕೆ, ಉರ್ವಶಿ, ಧಾರಿಣಿ, ಇರಾವತಿ ಮೊದಲಾದ ಅನೇಕ ಮಂದಿ ನಾಯಿಕೆ ಉಪನಾಯಿಕೆಯರನ್ನು ನಿರ್ಮಿಸಿದ್ದಾನೆ. ಆದರೆ ಈ ಉಳಿದವರ ಬಗೆಯೇ ಬೇರೆ, ಶಕುಂತಲೆಯ ಬಗೆಯೇ ಬೇರೆ. “ಸ್ತ್ರೀರತ್ನಸೃಷ್ಟಿರಪರಾ ಪ್ರತಿಭಾತಿ ಸಾ ಮೇ” (“ಬೇರೆ ತೋರ್ಕುಮೆನಗೀ ಸ್ತ್ರೀರತ್ನಸೃಷ್ಟಿಕ್ರಮಂ”)! ಪಟ್ಟಣದ ಚದುರೆಯರ, ಅರಮನೆಯ ವಿಲಾಸಿನಿಯರ ಬೆಡಗುಬಿನ್ನಾಣಗಳನ್ನು ಕಾಳಿದಾಸನು ಜೀವನದಲ್ಲಿ ಕಂಡು, ನಾಟಕಗಳಲ್ಲಿ ಚಿತ್ರಿಸಿ,

---

* ಮೈಸೂರಿನ ‘ಆಕಾಶವಾಣಿ’ಯವರು ತಾ|| ೧೦-೯-೧೯೪೩ ರಲ್ಲಿ ಏರ್ಪಡಿಸಿದ್ದ ಕಾಳಿದಾಸೋತ್ಸವದಲ್ಲಿ ಮಾಡಿದ ಭಾಷಣ; ಅಲ್ಲಲ್ಲಿ ಪರಿಷ್ಕರಿಸಿ, ಎರಡು ಮೂರು ಕಡೆ ಸ್ವಲ್ಪ ವಿಸ್ತರಿಸಿ ಇಲ್ಲಿ ಅಚ್ಚುಮಾಡಿದೆ.

ದಣಿದು ಈ ತಪೋವನದ ಮುಗ್ಧೆಯನ್ನು ನಿರ್ಮಿಸಿದಂತೆ ತೋರುತ್ತದೆ. "ದೂರೀಕೃತಾಃ ಖಲು ಗುಣೈರುದ್ಯಾನಲತಾ ವನಲತಾಭಿಃ" (ದೂರಕಿಕ್ಕಿದುವೈಸೆ ಗುಣದಲಿ ವನಲತೆಗಳುದ್ಯಾನಲತೆಗಳನು) !

ಒಬ್ಬ ರಾಜರ್ಷಿ ಅಪ್ಸರೆಯೊಬ್ಬಳ ಸೊಬಗಿಗೆ ಮರುಳಾಗಿ ವ್ರತಭ್ರಷ್ಟನಾದದ್ದರ ಫಲವಾಗಿ ಶಕುಂತಲೆ ಜನಿಸಿದ್ದು ನಿಜ. ಆದರೆ ಚಾಂಚಲ್ಯದ ಸೋಂಕು ಅವಳಿಗೆ ಅಷ್ಟಕ್ಕೇ ಮುಗಿಯಿತು. ಹುಟ್ಟಿದ ಕೂಡಲೆ ಹೆತ್ತವರು ತೊರೆದರು; ಅವಳು ಕಣ್ವರ ಸಾಕುಮಗಳಾಗಿ ಪ್ರಕೃತಿಯ ಮಡಿಲಿನಲ್ಲಿ ಬೆಳೆದಳು. ಆಶ್ರಮದ ಶಾಂತಸರಳ ಜೀವನದೊಂದಿಗೆ ಅವಳ ಬಾಳು ಬೆರೆಯಿತು, ಅದರೊಂದಿಗೆ ಸಮರಸವಾಗಿ ಹರಿಯಿತು. ಋಷಿಕನ್ಯೆಯರಾದ ಅನಸೂಯೆ ಪ್ರಿಯಂವದೆಯರು ಅವಳ ಜೀವದ ಗೆಳತಿಯರು; ತನ್ನಂತೆಯೇ ತಾಯಿಯ ಆರೈಕೆಯನ್ನು ಅರಿಯದ ದೀರ್ಘಾಪಾಂಗವೆಂಬ ಜಿಂಕೆಯ ಮರಿ ಅವಳ ಮುದ್ದಿನ ಕಂದ; ತಾನು ನೀರೆರೆದು ಬೆಳಸಿದ ವನಜ್ಯೋತ್ಸ್ನೆಯೆಂಬ ಲತೆ ಅವಳ ತಂಗಿ. ಕಣ್ವರ ಆಶ್ರಮದಲ್ಲಿ ಶಕುಂತಲೆಯೂ ಒಂದು ಜಂಗಮಲತೆ.

ಈ ನಡೆದಾಡುವ ಬಳ್ಳಿಯಲ್ಲಿ ಯೌವನಕುಸುಮವು ಅರಳಿದ ವೇಳೆಗೆ, ದುಷ್ಯಂತ ಮಹಾರಾಜನು ಬೇಟೆಯ ನಿಮಿತ್ತದಿಂದ ಇತ್ತ ಬಂದನು. ತುಂಬಿಯಂತೆ ಈ ಹೂವಿಗೆ ಮನಸೋತನು. ಕಾಡಾನೆಯಂತೆ ಶಕುಂತಲೆಯ ಹೃದಯವನ್ನು ಹೊಕ್ಕು ಅಲ್ಲಿಯ ಶಾಂತಿಯನ್ನು ಕದಡಿ "ತಪೋವನವಿರೋಧಿಯಾದ ವಿಕಾರ"ವನ್ನು ಉಂಟುಮಾಡಿದನು. ಹೀಗೆ ಇಬ್ಬರಲ್ಲೂ ಹಬ್ಬಿದ ಅನುರಾಗವು ಹೇಗೆ ಪರಿಣಮಿಸಿತೆಂಬುದೇ ಶಾಕುಂತಲ ನಾಟಕದ ವಸ್ತು.

ಶಕುಂತಲೆಯಲ್ಲಿ ಭಾವ ತೀವ್ರ; ಮಾತು ಮಿತ. ಇಷ್ಟು ಕೊಂಚ ಮಾತಾಡುವ, ಆದರೂ ಸ್ವಭಾವದ ಸೌರಭದಿಂದ ನಾಟಕವನ್ನೆಲ್ಲಾ ತುಂಬುವ, ನಾಯಿಕೆಯರು ಕಾವ್ಯಪ್ರಪಂಚದಲ್ಲಿ ಹಲವರಿಲ್ಲ. ಹೆಣ್ಣಿನಲ್ಲಿ ಮಾತು ಅಲ್ಪವಾದರೇ ಸೊಗಸು ಹೆಚ್ಚೆಂದು ಬಲ್ಲವರ ಹೇಳಿಕೆ. ಅಂತೂ, ತನ್ನ ಸಖಿಯರು ಹಾಸ್ಯಮಾಡಿದಾಗ ಶಕುಂತಲೆ ಕೋಪಿಸಿಕೊಳ್ಳಬಲ್ಲಳೇ ಹೊರತು ಪ್ರತ್ಯುತ್ತರ ಕೊಡಲಾರಳು. ಪುಷ್ಪರಾಶಿಯಲ್ಲಿ ಬಿದ್ದ ಕೆಂಡದಂತೆ ಪ್ರೇಮವು ತನ್ನ ಹೃದಯವನ್ನು ದಹಿಸಿ ಶರೀರವನ್ನು ಶೋಷಿಸುತ್ತಿದ್ದರೂ, ಅವಳು ತನ್ನ ಅಂತರಂಗದ ಗುಟ್ಟನ್ನು ಪ್ರಾಣಸಖಿಯರಿಗೆ ಕೂಡ ಬಾಯಿಬಿಟ್ಟು ಹೇಳಲಾರಳು. ಮುಂದೆ ಸಖಿಯರ ಸಹಾಯದಿಂದ ತನ್ನ ನಲ್ಲನೊಡನೆ ಏಕಾಂತದಲ್ಲಿರುವಾಗಲೂ ಚಾತುರ್ಯದ ಮಾತೆರಡನ್ನು ಆಡಲಾರಳು. ಚತುರೋಕ್ತಿ ಎಲ್ಲಿ ಬಂತು !—ಪ್ರೇಮದ ಉದ್ರೇಕದಲ್ಲಿ ಪ್ರಿಯನು ಎಲ್ಲಿ ಮರ್ಯಾದೆಯನ್ನು ಮೀರುವನೋ ಎಂಬ ಆತಂಕ ಅವಳಿಗೆ. "ಪೌರವ, ವಿನಯವನ್ನು

ಕಾಪಾಡಿಕೊ. ಮದನನ ಬಾಧೆಗೆ ಒಳಗಾಗಿದ್ದರೂ ನಾನು ಸ್ವತಂತ್ರಳಲ್ಲ" ಎಂದು ಅವನನ್ನು ತಡೆಯುವಳು. ಗಾಂಧರ್ವವಿವಾಹವು ಧರ್ಮಸಮ್ಮತವೆಂದು ಅವನು ಸ್ಥಾಪಿಸಿದರೂ ಅವಳ ಮನಸ್ಸಿನ ಶಂಕೆ ಶಮನವಾಗದು. ಪ್ರಾಣಪ್ರಿಯನನ್ನು ಕೂಡುವುದಕ್ಕೆ ಅವಳ ಸಂಕೋಚದ ಸ್ವಭಾವವೇ ಎಲ್ಲಕ್ಕೂ ಹೆಚ್ಚಿನ ಅಡ್ಡಿ. ಆದರೆ ಉದ್ದಾಮ ಪ್ರೇಮವನ್ನು ಎಷ್ಟು ಕಾಲ ತಡೆಗಟ್ಟಲಾದೀತು? ಇಬ್ಬರ ಹಂಬಲಿಕೆಯೂ ಫಲಿಸಿತು. ದುಷ್ಯಂತ ಶಕುಂತಲೆಯರು ದಂಪತಿಗಳಾದರು.

ಹಲವು ಪ್ರೇಮಕಥೆಗಳು ಮದುವೆಯಲ್ಲಿ ಮುಕ್ತಾಯಹೊಂದುತ್ತವೆ. ಮುಂದೆ ಎಂದೆಂದಿಗೂ ನಲ್ಲನಲ್ಲೆಯರು ಸುಖವಾಗಿದ್ದುಬಿಡುತ್ತಾರೆಂದೇ ಸಾಮಾನ್ಯ ಭಾವನೆ. ಆದರೆ ಜೀವನದಲ್ಲಿ ಎಷ್ಟೋ ವೇಳೆ ಆ ಬಳಿಕವೇ ಕಥೆ ಬೆಳೆಯುವುದು, ನೋವು ನಲವು ಬಲಿಯುವುದು. ತಾರುಣ್ಯದ ಅನುರಾಗವು ವಿರಹದ ಪೆಟ್ಟಿಗೆ ಸಿಕ್ಕಿ, ಕ್ಲೇಶ ಪರಿತಾಪಗಳ ಕುಲುಮೆಯಲ್ಲಿ ಕರಗಿ ಪುಟಹೊಂದಿ, ಅಂತಃಸತ್ತ್ವವಿದ್ದ ಪಕ್ಷದಲ್ಲಿ ಕೊನೆಗೆ ಅಪರಂಜಿಯಾಗುತ್ತದೆ. ಶಾಕುಂತಲನಾಟಕದ ಉತ್ತರಭಾಗದಲ್ಲಿ ಈ ಕಥೆ ಅನ್ಯಾದೃಶವಾಗಿ ರೂಪುಗೊಂಡಿದೆ.

ಶಕುಂತಲೆಯನ್ನು ಅವಳ ನಲ್ಲನು ಬೀಳ್ಕೊಂಡ ದಿವಸವೇ, ಅವನ ಚಿಂತೆಯಲ್ಲಿ ಮುಳುಗಿ ಅವಳು ವಿಶ್ವವನ್ನೇ ಮರೆತಿದ್ದ ಘಳಿಗೆಯಲ್ಲಿಯೇ, ಕಣ್ವಾಶ್ರಮಕ್ಕೆ ಅತಿಥಿಯಾಗಿ ಮುನಿಸಿನ ಮೂರ್ತಿಯಾದ ದುರ್ವಾಸನು ಬರಬೇಕೆ! ತನ್ನ ಕೂಗಿಗೆ ಶಕುಂತಲೆ ಉತ್ತರಕೊಡಲಿಲ್ಲವೆಂಬ ಕ್ಷುದ್ರಕಾರಣವನ್ನೇ ಈ ಮುನಿ ದೊಡ್ಡದು ಮಾಡಿಕೊಂಡು, ಅವಳನ್ನು ದುಷ್ಯಂತನು ಸಂಪೂರ್ಣವಾಗಿ ಮರೆತುಬಿಡುವಂತೆ ಶಾಪಕೊಡಬೇಕೆ! ಶಕುಂತಲೆಯ ಕಿವಿಗೆ ಬೀಳದ ಅವನ ಗರ್ಜನೆ ಅವಳ ಸಖಿಯರ ಎದೆಯನ್ನು ತಲ್ಲಣಗೊಳಿಸಿತು. ಪ್ರಿಯಂವದೆ ಅನುನಯದ ಸವಿನುಡಿಗಳನ್ನಾಡಿ, ಶಾಪಕ್ಕೆ ಪರಿಹಾರವೊಂದನ್ನು ಋಷಿಯ ಬಾಯಿಂದ ಹೇಳಿಸಿದಳು. ಆದರೆ ಶಕುಂತಲೆಗೆ ದುಃಖ ತಟ್ಟುವುದೇನೂ ತಪ್ಪಲಿಲ್ಲ. "ನವಮಾಲಿಕಾಲತೆಗೆ ಬಿಸಿನೀರನ್ನು ಯಾರುತಾನೆ ಎರೆದಾರು!" ಎಂದುಕೊಂಡು, ಶಾಪದ ವಿಷಯವನ್ನು ಅವಳಿಗೆ ಹೇಳಲು ಸಖಿಯರು ಹಿಂಜರಿದದ್ದರಿಂದ ಪರಿಸ್ಥಿತಿ ಕಠಿನತರವಾಯಿತು. ಅಂತೂ, ಶಕುಂತಲೆಯನ್ನು ಅಗಲಿದಾಗ ಅವಳ ಬೆರಳಿಗೆ ತನ್ನ ಮುದ್ರೆಯುಂಗುರವಿಟ್ಟು, ಅದರಲ್ಲಿ ಕೆತ್ತಿದ್ದ ತನ್ನ ಹೆಸರಿನ ಅಕ್ಷರಗಳನ್ನು ಅವಳು ದಿನಕ್ಕೆ ಒಂದೊಂದರಂತೆ ಎಣಿಸಿ ಮುಗಿಸುವುದರೊಳಗೆ ಅವಳನ್ನು ರಾಜಧಾನಿಗೆ ಕರೆದುಕೊಂಡು ಹೋಗಲು ಪರಿಜನರು ಬರುವರೆಂದು ಮಾತುಕೊಟ್ಟು, ತೆರಳಿದ ದುಷ್ಯಂತನ ನೆನಪಿಗೆ ಊರಿನ ದಾರಿಯಲ್ಲೇ ಕತ್ತಲೆ ಕವಿಯಿತು. ಶಕುಂತಲೆಯ ಸುಖದ ಬಳ್ಳಿ ಅವಳ ಅರಿವಿಲ್ಲದೆಯೇ ಅಲ್ಲಿಗೇ ಮುರುಟಿತು.

ದುರ್ವಾಸನ ಶಾಪದ ಭೀಷಣ ಪರಿಣಾಮವನ್ನು ಕಾಳಿದಾಸನು ಒಡನೆಯೇ ವ್ಯಕ್ತಗೊಳಿಸುವುದಿಲ್ಲ. ಅದಕ್ಕೆ ಮೊದಲು, ನಾಲ್ಕನೆಯ ಅಂಕದಲ್ಲಿ ಒಂದು ಸುಕುಮಾರ ಸಂದರ್ಭವನ್ನು ಚಿತ್ರಿಸಿ ಶಿರೀಷಕೋಮಲೆಯಾದ ಶಕುಂತಲೆಯ ವಿಷಯದಲ್ಲಿ ನಮ್ಮ ಸ್ನೇಹ ಕನಿಕರಗಳನ್ನು ಇನ್ನಷ್ಟು ದೃಢಪಡಿಸುತ್ತಾನೆ. ಕಣ್ವಮಹರ್ಷಿಗಳು ಗರ್ಭಿಣಿಯಾದ ತಮ್ಮ ಸಾಕುಮಗಳನ್ನು ಗಂಡನ ಮನೆಗೆ ಕಳುಹಿಸಿಕೊಡುವ ದೃಶ್ಯ ಅದು. ಶಕುಂತಲೆಗೆ ಅತ್ತ ಪತಿಯನ್ನು ಸೇರಬೇಕೆಂಬ ತವಕ; ಇತ್ತ ತಂದೆಯನ್ನು, ಗೆಳತಿಯರನ್ನು, ಒಡನಾಡಿಗಳನ್ನು, ತಪೋವನವನ್ನು ಬಿಟ್ಟು ಹೋಗಲಾರದ ಕಳವಳ. ಅವಳನ್ನು ಬೀಳ್ಕೊಡುವಾಗ ಇವರಿಗೂ ತೀವ್ರ ವೇದನೆ. ಈ ಅಗಲಿಕೆಯ ಚಿತ್ರವು ನೋಟಕರ ಕರುಳನ್ನು ಹಿಂಡುತ್ತದೆ. ಆದಕಾರಣವೇ "ಕಾವ್ಯೇಷು ನಾಟಕಂ ರಮ್ಯಂ ತತ್ರ ರಮ್ಯಾ ಶಕುಂತಲಾ" ಎಂಬುದಕ್ಕೆ ಉತ್ತರಭಾಗವಾಗಿ, "ತತ್ರಾಪಿ ಚ ಚತುರ್ಥೋಂಕಃ ತತ್ರ ಶ್ಲೋಕಚತುಷ್ಟಯಂ" ಎಂಬ ಶ್ಲಾಘನೆ ಹುಟ್ಟಿತು. ಈ ಶ್ಲೋಕ ಚತುಷ್ಟಯದಲ್ಲಿ ಒಂದನ್ನಾದರೂ ಉದಾಹರಿಸಿದಲ್ಲದೆ ಮನಸ್ಸು ನಿಲ್ಲದು. ಕಣ್ವರು ತಪೋವನದ ತರುಗಳಿಗೆ ಹೇಳುವ ಮಾತು ಇದು:

> "ಜಲವನದಾವಳೀಂಟಳೆರೆದಲ್ಲದೆ ನಿಮ್ಮಯ ಪಾತೆಗಂಬುವಂ
> ತಳಿರ್ಗಳ ಕೊಯ್ಯಳಾವಲೊಲವಿಂ ಮಿಗೆ ಸಿಂಗರದಾಸೆಯುಳ್ಳೊಡಂ |
> ಅಲರ್ಗಳ ತಾಳೆ ನೀವು ಮೊದಲುತ್ಸವವಾಂತಪಳಾವಳಾ ಶಕುಂ-
> ತಳೆ ಪತಿಸದ್ಮಕೈದಿದಪಳಾಕೆಗನುಜ್ಞೆಯನೀವುದೆಲ್ಲರುಂ ||"
>
> (ಬಸವಪ್ಪಶಾಸ್ತ್ರಿಗಳ ಅನುವಾದ)

ಶಕುಂತಲೆಯ ಹೃದಯ ಎಷ್ಟು ಮೃದು, ಆಶ್ರಮದ ಮರಬಳ್ಳಿಗಳಲ್ಲಿ ಅವಳಿಗಿದ್ದ ಸೋದರಸ್ನೇಹ ಎಷ್ಟು ಸಹಜ ಎಂಬುದಕ್ಕೆ ಇದಕ್ಕಿಂತ ನಿದರ್ಶನ ಬೇಕೆ!

ಎಂಥ ಮೋಹದ ಮಗಳಾದರೂ ತೌರುಮನೆಯನ್ನು ಒಂದು ದಿನ ಬಿಡಲೇಬೇಕು. ಇದು ಸಂಸಾರದ ಸಾಮಾನ್ಯನಿಯಮ. ಹೆಣ್ಣು ಹೆರರೊಡವೆಯೆಂದು ಕಣ್ವರಂತೆ ನಾವೂ ಸಮಾಧಾನ ತಂದುಕೊಳ್ಳುತ್ತೇವೆ. ಪತಿಗೃಹದಲ್ಲಿ ಅವಳಿಗೆ ಎಲ್ಲ ಮಂಗಳಗಳೂ ಒದಗಲೆಂದು ಹಾರೈಸುತ್ತೇವೆ. ಅಯ್ಯೋ, ಶಕುಂತಲೆಗೆ ಆ ಭಾಗ್ಯ ಸದ್ಯಕ್ಕೆ ಎಲ್ಲಿಂದ ಬರಬೇಕು? ನಾಲ್ಕನೆಯ ಅಂಕವು ವೀಣೆಯ ಮಂಜುಳಸ್ವನದಂತೆ ನಮ್ಮನ್ನು ಮರುಳುಗೊಳಿಸಿ, ದುರ್ವಾಸನ ಶಾಪದ ವಿಷಯವನ್ನು ನಮ್ಮ ಸ್ಮೃತಿಯಿಂದ ಒಂದು ಘಳಿಗೆಯ ಕಾಲ ಜಾರಿಸಿಬಿಟ್ಟಿತ್ತು. ಆದರೆ ಋಷಿಯ ಬಿರುನುಡಿ ವಿಫಲವಾಗುವುದುಂಟೆ! ಹಿಂದಿನ ಅಂಕದಲ್ಲಿ ಸ್ನೇಹಾರ್ದ್ರವಾಗಿದ್ದ ಹೃದಯವನ್ನು ಈಗ ನಾವು ಕಲ್ಲುಮಾಡಿಕೊಂಡು ಶಕುಂತಲೆಯ ದುರ್ದೈವದ ಪರಮಾವಧಿಯನ್ನು

ಇನ್ನು ಐದನೆಯ ಅಂಕದಲ್ಲಿ ನೋಡಲು ಸಜ್ಜಾಗಬೇಕು. ಎರಡು ಕಡೆಗಳಲ್ಲೂ ಕರುಣವೇ ರಸ; ಆದರೆ ಒಂದರ ಮಾರ್ದವಕ್ಕೂ ಮತ್ತೊಂದರ ಭೀಷಣತೆಗೂ ಎಂಥ ಅಂತರ! ನಾಲ್ಕನೆಯ ಅಂಕವಾದ ಕೂಡಲೆ ಬರುವುದರಿಂದ ಐದನೆಯ ಅಂಕದ ಪರಿಣಾಮ ಇನ್ನಷ್ಟು ತೀವ್ರವಾಗುತ್ತದೆ. ಕಥೆಯ ಕೇಂದ್ರದೃಶ್ಯವೇ ಇದು; ನಾಟಕೀಯ ಸ್ವಾರಸ್ಯ ಇಲ್ಲಿ ಶಿಖರವನ್ನು ಮುಟ್ಟುತ್ತದೆ. ಅದರ ವಿಚಾರವನ್ನು ಇಲ್ಲಿ ಲಂಬಿಸಲು ಅವಕಾಶವಿಲ್ಲದಿದ್ದರೂ ಒಂದು ಸಂಗತಿಯ ಕಡೆಗೆ ಗಮನವನ್ನೆಳೆಯಲೇಬೇಕು. ಶಕುಂತಲೆ ಗಂಡನ ಮನೆಗೆ ಎಷ್ಟೊಂದು ತವಕದಿಂದ, ಆಸೆಯಿಂದ ಬಂದಳು! ತನ್ನ ಹೃದಯೇಶ್ವರನ ಪ್ರಾಣವಲ್ಲಭೆಯಾಗಿ, ಪಟ್ಟದ ರಾಣಿಯಾಗಿ ಸುಖವನ್ನು ಕಾಣುವೆನೆಂದು ನಂಬಿದ್ದಳು. ಆದರೆ ದುಷ್ಯಂತನಿಗೆ ಅವಳನ್ನು ಮದುವೆಯಾಗಿದ್ದ ವಿಷಯದಲ್ಲೇ ಸಂದೇಹ; ಬಹುದೂರಕ್ಕೆ ಏರಿದ್ದ ಅವಳ ಆಸೆ ಇನ್ನೆಲ್ಲಿ! ರಾಣಿಯಾಗಿ ಬಾಳುವುದಿರಲಿ; ತಾನು ಸ್ವಚ್ಛಂದಚಾರಿಣಿಯಲ್ಲವೆಂದು ನಾಲ್ಕು ಜನರ ಮುಂದೆ ನಿಂತು ರುಜುವಾತು ಮಾಡಿಕೊಡಬೇಕಾದ ಪ್ರಸಂಗವೊದಗಿತು. ತನ್ನನ್ನು ಪರಸ್ತ್ರೀಯೆಂದು ಅವನು ತಿಳಿದದ್ದರಿಂದ "ಆರ್ಯಪುತ್ರ" ಎಂದು ಸಂಬೋಧಿಸಲು ಕೂಡ ಅವಳಿಗೆ ಅಧಿಕಾರವಿಲ್ಲವಾಯಿತು. ಆಶ್ರಮದಿಂದ ಹೊರಟ ವೇಳೆಯಲ್ಲಿ ತನಗೆ ಸಖಿಯರು ಕೊಟ್ಟಿದ್ದ ಸೂಚನೆ ಸ್ಮರಣೆಗೆ ಬಂದು, ಗುರುತಿನ ಉಂಗುರವನ್ನು ತೋರಿಸುವೆನೆಂದು ಶಕುಂತಲೆ ಬೆರಳನ್ನು ನೋಡಿಕೊಳ್ಳುತ್ತಾಳೆ. ಆ ದುರದೃಷ್ಟದ ಉಂಗುರ ಯಾವಾಗಲೋ ಮಾಯವಾಗಿದೆ. "ಮತ್ತೊಂದು ಗುರುತನ್ನು ಹೇಳುವೆ"ನೆನ್ನುತ್ತಾಳೆ. ನೋಡತಕ್ಕದ್ದು ಆಯಿತು; ಇನ್ನು ಕೇಳತಕ್ಕದ್ದು ಬಂದಿತು!—ಎಂದು ದುಷ್ಯಂತನ ಭಾವನೆ. ಕೈಹಿಡಿದ ಗಂಡನು ಹೀಗೆ ನಂಬಿಕೆ ಸಾಲದ ನ್ಯಾಯಾಧೀಶನಂತೆ ವಿಚಾರಣೆ ಮಾಡುತ್ತಾ ಕುಳಿತಿದ್ದಾನೆ. ಆದರೂ ಶಕುಂತಲೆ ಧೈರ್ಯಗುಂದದೆ ತನ್ನ ಹೇಳಿಕೆಯನ್ನು ಮುಂದುವರಿಸಲೇಬೇಕಾಗಿದೆ. ತಮ್ಮಿಬ್ಬರಿಗೆ ಮಾತ್ರವೇ ಗೊತ್ತಿದ್ದ ಒಂದು ಸಂಗತಿಯನ್ನು ಅವಳು ಈಗ ಜ್ಞಾಪಿಸುತ್ತಾಳೆ:

> "ಒಂದು ದಿನ ನವಮಾಲಿಕಾಮಂಟಪದಲ್ಲಿ ಕುಳಿತಿದ್ದಾಗ ನೀರು ತುಂಬಿದ ತಾವರೆಯೆಲೆಯ ದೊನ್ನೆ ನಿನ್ನ ಕೈಯಲ್ಲಿರಲಿಲ್ಲವೆ? . . . ಆಗ ನನ್ನ ಸಾಕುಮಗುವಾದ ದೀರ್ಘಾಪಾಂಗವೆಂಬ ಜಿಂಕೆಯಮರಿ ಸಮೀಪಕ್ಕೆ ಬಂದಿತು. ಮೊದಲು ಇದು ನೀರು ಕುಡಿಯಲಿ ಎಂದು ನೀನು ಕನಿಕರದಿಂದ ಅದಕ್ಕೆ ನೀರು ತೋರಿಸಿದೆ. ಆದರೆ ನಿನ್ನ ಬಳಕೆಯಿಲ್ಲದ್ದರಿಂದ ಅದು ನಿನ್ನ ಕೈಯ ಬಳಿಗೆ ಬರಲಿಲ್ಲ. ಬಳಿಕ ಅದೇ ದೊನ್ನೆಯನ್ನು ನಾನು ಹಿಡಿದುಕೊಂಡಾಗ ಅದು ನೀರನ್ನು ಬಯಸಿತು. ಆಗ, 'ಎಲ್ಲರಿಗೂ ತಮ್ಮ ತಮ್ಮ ಜನದಲ್ಲೇ ನಂಬಿಕೆ; ನೀವಿಬ್ಬರೂ ಕಾಡುಪ್ರಾಣಿಗಳು'—ಎಂದು ನೀನು ಹಾಸ್ಯಮಾಡಿದೆ."

ಎಂಥ ಪ್ರಸಂಗ! ಪ್ರಿಯನ ಪರಿಹಾಸಕ್ಕೆ ಈ ಮುಗ್ಧೆ ಯಾವ ಉತ್ತರವನ್ನೂ ಕೊಡದೆ, ಅದರ ಸೊಗಸನ್ನು ಮೌನವಾಗಿ ಸವಿದಿದ್ದಳು. ಅವನ ಪ್ರೇಮದ ಫಲವನ್ನು ತನ್ನ ಬಸಿರಿನಲ್ಲಿ ತಳೆದು ಪೋಷಿಸಿದಂತೆ, ಈ ನರ್ಮಕಥೆಯನ್ನು ತನ್ನ ಚಿತ್ತದಲ್ಲಿ ಬಚ್ಚಿಟ್ಟು ಜೋಪಾನವಾಗಿ ಕಾಪಾಡಿಕೊಂಡುಬಂದಿದ್ದಳು. ಅವನು ತೊಡಿಸಿದ ಉಂಗುರಕ್ಕಿಂತಲೂ ಅವನು ಆಡಿದ ಈ ಮಾತು ಅವಳಿಗೆ ಅನರ್ಘ್ಯರತ್ನವಾಗಿತ್ತು. ಇಂಥ ಪ್ರಣಯಗೋಪ್ಯವನ್ನು ಹಲವರೆದುರಿಗೆ ಬೀದಿಯ ಘೋಷಣೆಯಾಗುವಂತೆ ಈ ಅಲ್ಪಭಾಷಿಣಿ ವಿವರಿಸಿ ಹೇಳಬೇಕಾಯಿತು. ಆದರೂ ದುಷ್ಯಂತನಿಗೆ ನೆನಪು ಮರಳಲಿಲ್ಲ; ನಂಬಿಕೆ ಹುಟ್ಟಲಿಲ್ಲ. ಶಕುಂತಲೆಗೆ ಇದಕ್ಕಿಂತಲೂ ಘೋರ ಯಾತನೆ ಬೇಕೆ? ಈ ಧೂರ್ತನು ತನ್ನನ್ನು ಉದ್ದೇಶಪೂರ್ವಕವಾಗಿ ವಂಚಿಸುತ್ತಿರುವನೆಂದೇ ಅವಳಿಗೆ ತೋರಿತು. ಇತ್ತ ಗಂಡನ ಮನೆ ಹೀಗೆ ದೂರವಾಯಿತು; ಅತ್ತ ತಂದೆಯ ಮನೆಗೆ ಅಪವಾದ ಹೊತ್ತ ತಾನು ಕಾಲಿಡುವಂತಿಲ್ಲ. "ಓ ಭೂಮಿದೇವಿ, ನನಗಾಗಿ ಬಾಯಿ ತೆರೆ!" ಎಂಬ ಆರ್ತನಾದವೊಂದೇ ಅವಳ ಭಾಗಕ್ಕೆ ಉಳಿದದ್ದು.

ಆದರೆ ಅನಾಹುತ ಇಷ್ಟು ದೂರ ಹೋಗುವುದು ದೈವಸಂಕಲ್ಪವಾಗಿರಲಿಲ್ಲ. ಹೆತ್ತ ಕೂಡಲೇ ಕೂಸನ್ನು ತೊರೆದಿದ್ದ ಮೇನಕೆಗೆ ಈಗ ಕರುಳು ಬಾಧಿಸಿ, ದುಃಖಭಾಗಿನಿಯಾದ ಮಗಳನ್ನು ಅವಳು ಹತ್ತಿರಕ್ಕೆ ಕರೆದುಕೊಂಡಳು. ಮಾರೀಚ ಮಹರ್ಷಿಗಳ ದಿವ್ಯಾಶ್ರಮದಲ್ಲಿ, ತಾಯ ಆರೈಕೆಯಲ್ಲಿ, ಶಕುಂತಲೆ ಭರತಭೂಮಿಯ ಪ್ರಥಮ ಚಕ್ರವರ್ತಿಯನ್ನು ಹೆತ್ತಳು. ಗಂಡನು ತನ್ನನ್ನು ನಿಷ್ಕಾರಣವಾಗಿ ನಿರಾಕರಿಸಿದ್ದರೂ ಅವಳು ಮಾತ್ರ ಅವನನ್ನು ತನ್ನ ಹೃದಯದಿಂದ ಹೊರದೂಡಲಿಲ್ಲ. ಪಾತಿವ್ರತ್ಯದ ಕಠಿನ ನಿಯಮಗಳನ್ನು ಪಾಲಿಸುತ್ತಾ, ಜೀವಿತಸರ್ವಸ್ವವಾದ ಮಗನನ್ನು ನೋಡಿಕೊಳ್ಳುತ್ತಾ ಈ ಸುಶೀಲೆ ವರ್ಷಗಳನ್ನು ನೂಕಿದಳು. ಇತ್ತ, ಶಕುಂತಲೆಯ ಬೆರಳಿನಿಂದ ಜಾರಿ ಶಚೀತೀರ್ಥದಲ್ಲಿ ಮುಳುಗಿದ್ದ ಉಂಗುರ ಒಬ್ಬ ಬೆಸ್ತರವನ ಮೂಲಕ ದುಷ್ಯಂತನ ಕೈಗೆ ಕೊನೆಗೆ ಸೇರಿತು. ಅದನ್ನು ಕಂಡೊಡನೆಯೇ ಅವನಿಗೆ ತನ್ನ ಪ್ರಾಣಪ್ರಿಯೆಯ ನೆನಪೂ, ಅದರ ಬೆನ್ನ ಹಿಂದೆಯೇ ಅಪಾರವಾದ ಪರಿತಾಪವೂ ಒದಗಿದುವು. ಶಕುಂತಲೆ ತನ್ನಿಂದ ಧಿಕ್ಕಾರಹೊಂದಿ, ಕಣ್ವಶಿಷ್ಯರ ಗರ್ಜನೆಗೆ ನಡುಗಿ, ನೆಲೆತಪ್ಪಿ ನಿಂತಾಗ, ಅವಳು ತನ್ನ ಕಡೆಗೆ ಬೀರಿದ ಬಾಷ್ಪಾಕುಲವಾದ ದೃಷ್ಟಿ ಈಗ ವಿಷದ ಮುಳ್ಳಿನಂತೆ ಅವನನ್ನು ದಹಿಸತೊಡಗಿತು. . . . ದುಷ್ಯಂತನ ಉತ್ಕಟ ಪಶ್ಚಾತ್ತಾಪದ ವೃತ್ತಾಂತ ಶಕುಂತಲೆಯ ಕಿವಿಗೂ ಮುಟ್ಟಿತು.

ಇನ್ನು ಹೇಮಕೂಟದ ದಿವ್ಯಾಶ್ರಮದಲ್ಲಿ ದಂಪತಿಗಳ ಪುನಃಸಮಾಗಮ. ತಮ್ಮಿಬ್ಬರ ಅಗಲಿಕೆಗೆ, ಅಳಲಿಗೆ ಋಷಿಶಾಪವೇ ನಿಜವಾದ ಕಾರಣವೆಂದು ಇಬ್ಬರಿಗೂ

ತಿಳಿಯುವ ಮೊದಲೇ ಅವರ ಹೃದಯಗಳು ಒಂದುಗೂಡುವಂತೆ ಸಂವಿಧಾನವನ್ನು ಕಲ್ಪಿಸಿ, ಗಾಢಪ್ರೇಮದ ಅಸಾಮಾನ್ಯ ಶಕ್ತಿಯನ್ನು ಕಾಳಿದಾಸನು ನಿರ್ದೆಶಿಸಿರುವನು. ತೊರೆದ ಗಂಡನು ಈಗ ಮರಳಿ ಬಂದಿದ್ದಾನೆ; ಅನುತಾಪದಿಂದ ಸೊರಗಿ ಗುರುತು ಸಿಕ್ಕಲಾರದಷ್ಟು ಬಡವಾಗಿದ್ದಾನೆ; ಚರಣತಲದಲ್ಲಿ ಹೊರಳಿ ಕ್ಷಮೆ ಬೇಡುತ್ತಿದ್ದಾನೆ. ಶಕುಂತಲೆಗೆ ಇನ್ನೇನು ಬೇಕು? ಪ್ರಿಯನ ಹಿಂದಿನ ಅಪರಾಧವೆಲ್ಲವೂ ಅವಳಿಗೆ ಮರೆತುಹೋಗುತ್ತದೆ; ಪ್ರೇಮದ ಕಂಬನಿಯಿಂದ ಅವನನ್ನು ಅಭಿಷೇಕಿಸಿ ಸ್ವೀಕಾರ ಮಾಡುತ್ತಾಳೆ. ಶಕುಂತಲೆಯ ಕಣ್ಣೀರನ್ನು ಒರಸಲು ದುಷ್ಯಂತನು ಕೈನೀಡಿದಾಗ ಅವನ ಬೆರಳಿನಲ್ಲಿದ್ದ ಉಂಗುರ ಅವಳಿಗೆ ಕಾಣಿಸುತ್ತದೆ. ತಮ್ಮ ಪುನಃಸಮಾಗಮಕ್ಕೆ ಗುರುತಾಗಿ ಆ ಉಂಗುರವನ್ನು ಮತ್ತೆ ಧರಿಸುವಂತೆ ಅವನು ಕೋರುತ್ತಾನೆ. ಆದರೆ ಶಕುಂತಲೆ, “ ಇದರಲ್ಲಿ ನನಗೆ ನಂಬಿಕೆಯಿಲ್ಲ; ಆರ್ಯಪುತ್ರನೇ ಇದನ್ನು ಧರಿಸಿಕೊಳ್ಳ ಬೇಕು ” ಎಂದು ಉತ್ತರಕೊಟ್ಟು, ನೆಚ್ಚಿಕೆತಪ್ಪಿದ ಆ ಉಂಗುರವನ್ನು ನಿರಾಕರಿಸು ತ್ತಾಳೆ. ಶಕುಂತಲೆ ಈಗ ದಿವ್ಯ ತಪಸ್ವಿನಿಯಾಗಿದ್ದರೂ ಅವಳ ಸರಳ ಮಾನವ ಹೃದಯ ಮಾತ್ರ ಮರೆಯಾಗಿಲ್ಲ!

ಪ್ರೇಮದ ಕುಲುಮೆಯಲ್ಲಿ ಶಕುಂತಲೆಯ ಬಾಳು ಪುಟಗೊಂಡ ಬಗೆಯನ್ನು ಕಂಡೆವು. ಇನ್ನು ಅವಳ ಪ್ರಿಯನನ್ನು ಕುರಿತು ಎರಡು ಮಾತು. ‘ ಅಭಿಜ್ಞಾನ ಶಾಕುಂತಲ ’ಕ್ಕೆ ‘ ದುಷ್ಯಂತೋದ್ಧಾರ ’ ಎಂಬ ಎರಡನೆಯ ಹೆಸರನ್ನು ಕೊಡಬಹುದು. ಕಾಳಿದಾಸನ ನಾಟಕಕ್ಕೆ ಮಹಾಭಾರತದ ಒಂದು ಉಪಾಖ್ಯಾನ ಆಧಾರವಸ್ತು. ಆದರೆ ಅಲ್ಲಿಯ ದುಷ್ಯಂತನನ್ನೂ ಇಲ್ಲಿಯ ದುಷ್ಯಂತನನ್ನೂ ಹೋಲಿಸಿದರೆ, ಕಾಳಿ ದಾಸನು ದುರ್ವಾಸನ ಶಾಪವನ್ನು ಹೊಸದಾಗಿ ಕಲ್ಪಿಸಿ ದುಷ್ಯಂತನ ಪಾತ್ರವನ್ನು ಎಷ್ಟೊಂದು ಉತ್ತಮಗೊಳಿಸಿರುವನೆಂಬುದು ವ್ಯಕ್ತವಾಗುತ್ತದೆ. ಮೂಲೋಪಾ ಖ್ಯಾನದಲ್ಲಿ, ದುಷ್ಯಂತನು ಶಕುಂತಲೆಯೊಂದಿಗೆ ತಾನು ಬೆಳಸಿದ್ದ ಸಂಬಂಧವನ್ನು ತಿಳಿದೂ ತಿಳಿದೂ ಅಪಲಾಪಿಸಿ ಅಧಮನಾಗಿ ವರ್ತಿಸುತ್ತಾನೆ. ನಾಟಕದಲ್ಲಾದರೆ, ಋಷಿಶಾಪದ ಪ್ರಭಾವದಿಂದ ಶಕುಂತಲೆಯ ನೆನಪು ಅವನ ಮನಸ್ಸಿನಿಂದ ಸಂಪೂರ್ಣ ವಾಗಿ ಅಳಿಸಿಹೋಗಿರುತ್ತದೆ. ಅವಳು ಅನುಪಮಸುಂದರಿಯಾದರೂ ತನ್ನ ಭಾಗಕ್ಕೆ ಅನ್ಯಪತ್ನಿಯಾದ ಕಾರಣ ಅವಳನ್ನು ದಿಟ್ಟಿಸಿ ನೋಡುವುದಕ್ಕೂ ದುಷ್ಯಂತನಿಗೆ ಇಷ್ಟವಿಲ್ಲ. ಮದುವೆಯಾದದ್ದನ್ನು ತಾನೇ ಮರೆತಿರುವೆನೋ, ಈಕೆಯೇ ಸುಳ್ಳಾಡು ತ್ತಿರುವಳೋ ಎಂಬ ಸಂಶಯ ಒಡ್ಡಿರುವಾಗ, ಪತ್ನೀಪರಿತ್ಯಾಗದ ದೋಷ ಹೆಚ್ಚೋ ಪರಸ್ತ್ರೀಸಂಪರ್ಕದ ದೋಷ ಹೆಚ್ಚೋ ಎಂದು ದುಷ್ಯಂತನು ಕೇಳುವ ಪ್ರಶ್ನೆ ಕಣ್ವ ಶಿಷ್ಯರ ಬಾಯನ್ನೂ ಕಟ್ಟುತ್ತದೆ. ಹೀಗೆ ಶಕುಂತಲೆಯನ್ನು ನಿರಾಕರಿಸುವ ದೃಶ್ಯದಲ್ಲೇ ದುಷ್ಯಂತನು ಧೀರೋದಾತ್ತನಾಗಿ ಶೋಭಿಸುತ್ತಾನೆ.

ಆದರೆ ಈ ಉದ್ಧಾರವನ್ನು ವಿವರಿಸುವುದು ನಮ್ಮ ಪ್ರಕೃತೋದ್ದೇಶವಲ್ಲ. ನಾಟಕದ ಚೌಕಟ್ಟಿನೊಳಗೇ ಇನ್ನೊಂದು ಉದ್ಧಾರ ನಡೆದಿದೆ. ಶಕುಂತಲೆಯನ್ನು ಕಾಣುವುದಕ್ಕೆ ಮೊದಲೇ ದುಷ್ಯಂತನಿಗೆ ವಸುಮತಿ, ಹಂಸಪದಿಕೆ ಮೊದಲಾದ ಹಲವರು ಪತ್ನಿಯರಿದ್ದರು. ಆದರೆ ಅರಮನೆಯ ನಾಗರಿಕಜೀವನದಲ್ಲಿ ಆಳವಾದ, ಚಿರಸ್ಥಾಯಿಯಾದ ಪ್ರೇಮವನ್ನು ದುಷ್ಯಂತನು ಅರಿತಿದ್ದಂತೆ ತೋರುವುದಿಲ್ಲ. ಈ ತಾಪಸಕನ್ಯೆಯನ್ನು ಕಂಡೊಡನೆಯೇ ಅವಳಲ್ಲಿ ಅವನ ಮನಸ್ಸು ಅನನ್ಯವಾಗಿ, ನಿರಂತರವಾಗಿ ನೆಲಸಿತು; ಈ ನೈಜವಾದ ಪ್ರೇಮದಿಂದ ಅವನ ಆತ್ಮ ಉದ್ಧಾರವಾಯಿತು. ದುರ್ವಾಸನ ಶಾಪ ತಟ್ಟದೆಹೋಗಿದ್ದರೆ ದುಷ್ಯಂತನು ಶಕುಂತಲೆಯನ್ನು ಕೆಲವುಕಾಲ ಮಾತ್ರ ಪ್ರೀತಿಸಿ ಉಪೇಕ್ಷಿಸಿಬಿಡುತ್ತಿದ್ದನು; ಇವಳೂ ಇನ್ನೊಬ್ಬಳು ಹಂಸಪದಿಕೆಯಾಗಿ ಮೂಲೆಗೆ ಸೇರುತ್ತಿದ್ದಳು ಎಂಬ ಅಭಿಪ್ರಾಯವೊಂದುಂಟು. ಆದರೆ ಇದನ್ನು ಒಪ್ಪುವುದು ಕಷ್ಟ. ಶಕುಂತಲೆಯಲ್ಲಿ ದುಷ್ಯಂತನಿಗೆ ಮೂಡಿದ ಪ್ರೇಮದ ಮಟ್ಟವೇ ಬೇರೆಯೆಂದು ತೋರುತ್ತದೆ. ಇದು ನಾಲ್ಕುದಿನ ಮಿಂಚಿ ಮರೆಯಾಗುವುದಲ್ಲ; ಯಾವಜ್ಜೀವವೂ, ಬಹುಶಃ ಆಚೆಗೂ, ನೆಲಸತಕ್ಕದ್ದು. ಹೀಗೆ ಹೇಳಲು ಕಾರಣವುಂಟು. ಶಾಪದ ತಮಸ್ಸು ಆವರಿಸಿದ ಬಳಿಕ, ಶಕುಂತಲೆಯ ವಿಚಾರದ ಮಟ್ಟಿಗೆ ದುಷ್ಯಂತನು ಹೊಸ ಜನ್ಮವೆತ್ತಿದಂತೆಯೇ ಆಯಿತು. ಯಾರು ಎಷ್ಟೇ ಬಗೆಯಾಗಿ ಜ್ಞಾಪಿಸಲಿ, ಕಡೆಗೆ ಶಕುಂತಲೆಯೇ ಸಾಕ್ಷಾತ್ತಾಗಿ ಬಂದು ನಂಬಿಕೆ ಕೊಡಲಿ, ದುಷ್ಯಂತನಿಗೆ ಅವಳ ನೆನಪಾಗುವಂತಿರಲಿಲ್ಲ. ಇಂಥ ಸ್ಥಿತಿಯಲ್ಲಿ ಅವನಿರುವಾಗ ಐದನೆಯ ಅಂಕದ ಆದಿಯಲ್ಲಿ ಒಂದು ಪ್ರಸಂಗ ನಡೆಯುತ್ತದೆ:

"ಪೊಸತಪ್ಪ ಮಧುವ ಬಯಸುತೆ
ರಸಾಲಮಂಜರಿಯನಂತು ಚುಂಬಿಸಿ ನೀಂ ಸಾ- |
ರಸವಾಸಮಾತ್ರದಿಂ ಸಂ-
ತಸವಾಂತದನೆಂತು ಮರೆದೆಯೆಲೆ ಮಧುಕರನೇ ||"

ಎಂದು ತುಂಬಿಯನ್ನು ಕುರಿತು ಹಾಡುವ ನೆವದಲ್ಲಿ ಹಂಸಪದಿಕೆ ದುಷ್ಯಂತನನ್ನು ಹಂಗಿಸುತ್ತಿದ್ದಾಳೆ. ಈ ಮಧುರವಾದ ಗೀತವನ್ನು ಕೇಳಿ ದುಷ್ಯಂತನ ಮನಸ್ಸು ಉಮ್ಮಳಿಸುತ್ತದೆ. (ಹಂಸಪದಿಕೆಯನ್ನು ಉಪೇಕ್ಷಿಸಿದ್ದಕ್ಕಾಗಿ ಅಲ್ಲ; ಜಾಣ್ಮೆಯಿಂದ ಅವಳು ಹಂಗಿಸಿದ ಬಗೆಯನ್ನು ಅವನು ಶ್ಲಾಘಿಸುತ್ತಾನೆ, ಅಷ್ಟೇ.) ಈ ಹಾಡು ಸ್ಪಷ್ಟವಾಗಿ ಶಕುಂತಲಾ ಪ್ರಣಯವನ್ನು ಪ್ರೇಕ್ಷಕವರ್ಗಕ್ಕೆಲ್ಲಾ ಸೂಚಿಸುತ್ತದೆ. ಆದರೆ ದುಷ್ಯಂತನಿಗೆ ಮಾತ್ರ ಶಾಪಮಹಿಮೆಯಿಂದ ಅದರ ಅರಿವೇ ಆಗುವಂತಿಲ್ಲ. ಹೀಗಿದ್ದರೂ ಅವನ ಮನಸ್ಸು ಉಮ್ಮಳಿಸುತ್ತದೆ. ಇಷ್ಟಜನವಿಯೋಗ ಯಾವುದೂ

ನನಗೆ ಉಂಟಾಗಿಲ್ಲ; ನೆಮ್ಮದಿಯಾಗಿಯೇ ಇದ್ದೇನೆ. ಆದರೂ ಈ ಇಂಚರವನ್ನು ಕೇಳಿ ನನ್ನ ಬಗೆಯೇಕೆ ಹೀಗೆ ಪರ್ಯುತ್ಸುಕವಾಗಿದೆ? ಅರಿವಿಗೆ ನಿಲುಕದಿದ್ದರೂ ಸಂಸ್ಕಾರರೂಪವಾಗಿ ನೆಲಸಿರುವ ಜನ್ಮಾಂತರದ ಸ್ನೇಹವೊಂದನ್ನು ಹೃದಯ ನೆನೆಯುತ್ತಿರಬೇಕು—ಹೀಗೆಂದು ದುಷ್ಯಂತನು ಪರಿಭಾವಿಸುತ್ತಾನೆ. ಇದು ನಿಜ! ಶಾಪಕ್ಕೆ ಹಿಂದಿನ ಜನ್ಮಾಂತರದ ಶಕುಂತಲಾಪ್ರೇಮ ಈಗ ಸ್ಮರಣೆಗೆ ಗೋಚರವಾಗದಿದ್ದರೂ ಹೃದಯದ ಆಳದಲ್ಲಿ ಕುಳಿತು, ಅರಿಯದ ಮೂಗುಪೆಟ್ಟಿನ ದುಡಿತದಂತೆ, ಅವನನ್ನು ಬಾಧಿಸುತ್ತಿದೆ. ದುರ್ವಾಸನ ಶಾಪಕ್ಕಿಂತಲೂ ದುಷ್ಯಂತನ ಪ್ರೇಮ ಪ್ರಬಲತರವಾಯಿತು; ಮರವೆ ಮುಸುಕಿದರೂ ಅದರ ಮಿಡಿತ ತಪ್ಪಲಿಲ್ಲ!

ಈ ಅಸಾಧಾರಣ ಪ್ರೇಮ ದುಷ್ಯಂತನಿಗೆ ವಿಶೇಷ ಅನುಭವವನ್ನು ತಂದಿತು; ಅವನ ಹೃದಯವನ್ನು ಶೋಧಿಸಿತು. ಶಕುಂತಲೆಯನ್ನು ನಿರಾಕರಿಸಿದ ಬಳಿಕ ಒದಗಿದ ಪರಿತಾಪದಿಂದ ಅವನ ಆತ್ಮ ಎಷ್ಟು ಮೃದುವಾಯಿತು! ರಾಜ್ಯಪರಿಪಾಲನೆಯಲ್ಲಿ ಧರ್ಮದ ಜೊತೆಗೆ ಈಗ ದಯೆಯೂ ಸೇರಿತು. ಈ ವಿಷಯವನ್ನೆಲ್ಲಾ ಇಲ್ಲಿ ವಿವರಿಸಲು ಅವಕಾಶ ಸಾಲದು. ಮಿಕ್ಕ ವಿಚಾರವಿರಲಿ. ಅವನ ಕೆಚ್ಚಿನಲ್ಲಾದ ಮಾರ್ಪಾಡನ್ನೇ ನೋಡಿ. ನಾಟಕದ ಮೊದಲಲ್ಲಿ, ತಾನು ಸತ್ಪುರುಷನೆಂಬ ನೆಚ್ಚಿಕೆ ಅವನಿಗಿದ್ದಿತು. ಈಗ ಅಹಂಕಾರ ಸುಟ್ಟು ನಮ್ರತೆ ಮೊಳೆಯಿತು. "ಸತಾಂ ಹಿ ಸಂದೇಹಪದೇಷು ವಸ್ತುಷು ಪ್ರಮಾಣಮಂತಃಕರಣಪ್ರವೃತ್ತಯಃ" (ಸಂದೇಹಾಸ್ಪದವಾದ ಸಂದರ್ಭಗಳಲ್ಲಿ ಸತ್ಪುರುಷರಿಗೆ ಅಂತಃಕರಣ ಹರಿದ ದಾರಿಯೇ ಪ್ರಮಾಣ) ಎಂದು ತಿಳಿದು, ಆರ್ಯವಾದ ತನ್ನ ಮನಸ್ಸು ಶಕುಂತಲೆಯಲ್ಲಿ ನೆಲೆಗೊಂಡ ಕಾರಣದಿಂದ ಅವಳು "ಕ್ಷತ್ರಪರಿಗ್ರಹೋಚಿತೆ"ಯಾಗಿರಬೇಕೆಂದು ದಿಟ್ಟತನದಿಂದ ನಿರ್ಧರಿಸಿದ ಮೊದಲಿನ ದುಷ್ಯಂತನೆಲ್ಲಿ; ನಿದರ್ಶನದ ಮೇಲೆ ನಿದರ್ಶನವೊದಗುತ್ತಿದ್ದರೂ ಸರ್ವದಮನನು ತನ್ನ ಮಗನೇ ಆಗಿರಬೇಕೆಂದು ನಂಬಲು ಅಳುಕಿದ ಈಚಿನ ದುಷ್ಯಂತನೆಲ್ಲಿ! ಕಡೆಗೆ, "ನನ್ನ ತಂದೆ ದುಷ್ಯಂತ; ನೀನಲ್ಲ" ಎಂದು ಆ ತುಂಟ ತರಳನು ಹೇಳುವತನಕ ಇವನ ಸಂದೇಹವು ಪೂರ್ಣವಾಗಿ ಪರಿಹಾರವಾಗಲಿಲ್ಲ!

ಮೊದಲೇ ಶಕುಂತಲಾದುಷ್ಯಂತರು ರೂಪಗುಣಗಳಲ್ಲಿ ಲೋಕಕ್ಕೆ ಮಿಗಿಲಾಗಿದ್ದರು; ಒಬ್ಬರಿಗೊಬ್ಬರು ಅನುರೂಪರಾಗಿದ್ದರು. ಶಾಪದ ಸಾಣೆಗೆ ಸಿಕ್ಕಿದಮೇಲಂತೂ ಅವರ ಆತ್ಮಗಳಿಗೆ ಹೊಸ ತೇಜಸ್ಸು ಬಂದಿತು. ಅವರ ಪ್ರೇಮ ಪಾವನವಾಯಿತು; ಅವರ ಕಥೆ ಅಮರವಾಯಿತು.

ತೀ. ನಂ. ಶ್ರೀಕಂಠಯ್ಯ.

ಮುಗ್ಧೆ

“ ಮುಗ್ಧೆ, ನೀನಿಂತೇಕೆ ಮುಗ್ಧತೆಯೊಳೇ ಕಾಲ-
ವೆಲ್ಲವನು ಕಳೆಯುತಿರುವೆ ?
ಮಾನವನು ಹೂಡು, ತೊಡು ಧೈರ್ಯವನು, ಪ್ರಿಯನ ಬಳಿ
ಋಜುತೆಯನು ದೂರ ನೂಕು.”
ಇಂತೆಂದು ಕೆಳದಿ ಸಂಚೋದಿಸಲು, ಮಾರ್ನುಡಿದ-
ಳವಳು ಬೆದರಿದ ಮುಖದಲಿ :
“ ಮೆಲ್ಲಗುಸಿರೌ, ನನ್ನ ಹೃದಯದಲಿ ನೆಲಸಿರುವ
ನಲ್ಲನಿಗೆ ಕೇಳಿಸೀತು ! ”

(‘ ಅಮರುಶತಕ ’, ೭೦ : ಮುಗ್ಧೇ ಮುಗ್ಧತಯೈವ . . .)

ತೀ. ನಂ. ಶ್ರೀ.

ಕಾಳಿದಾಸನ ಸಂದೇಶ*

ಕವಿ ತತ್ತ್ವಜ್ಞನಲ್ಲ, ಧರ್ಮದೇಶಿಕನಲ್ಲ; ರಾಜನೀತಿಜ್ಞನಲ್ಲ, ಸಮಾಜ ಸುಧಾರಕನಲ್ಲ. ಅವನು ಯಾರಿಗೂ ಯಾವ ಉಪದೇಶವನ್ನೂ ಕೊಡುವುದಕ್ಕಾಗಲಿ ಯಾವ ಸಂದೇಶವನ್ನೂ ಹರಡುವುದಕ್ಕಾಗಲಿ ಹೊರಟಿಲ್ಲ. ಆದರೂ ಕೂಡ ಇವರೆಲ್ಲರ ಕಾರ್ಯವೂ ಅವನಿಂದ ನಡೆಯುತ್ತದೆ. ಮಾನವನು ಧರ್ಮಜ್ಞನಾಗುತ್ತಾನೆ, ಸಮಾಜವು ಸುಧಾರಿತವಾಗುತ್ತದೆ. ದರ್ಶನಗಳಿಂದಾಗಲಿ ರಾಜಶಾಸನಗಳಿಂದಾಗಲಿ ಆಗಬಹುದಾದ ಕೆಲಸ ಅವನಿಂದ ಇನ್ನೂ ಸುಲಭವಾಗಿ, ಇನ್ನೂ ಚೆನ್ನಾಗಿ ಆಗಿ ಹೋಗುತ್ತದೆ. ರುಚಿಗಾಗಿ ಕುಡಿದ ಹಾಲಿನಿಂದ ಆನಂದವೆಷ್ಟೋ ಅಷ್ಟೇ ಪುಷ್ಟಿಯೂ ಆಗುವಂತೆ ಮಹಾಕವಿಗಳ ಕೃತಿಗಳನ್ನು ಆನಂದಕ್ಕಾಗಿ ಆಸ್ವಾದಿಸಿದರೆ ಆತ್ಮೋನ್ನತಿಯಾಗುತ್ತದೆ. ಈ ಅರ್ಥದಲ್ಲಿ ನಾವು "ಕವಿಯ ಸಂದೇಶ"ವೆಂಬ ಮಾತುಗಳನ್ನು ಅರ್ಥಮಾಡಿಕೊಳ್ಳಬೇಕು: ಕವಿ ಕೊಟ್ಟ ಸಂದೇಶವಲ್ಲ, ನಾವು ಕಲಿತ ಸಂದೇಶ. ಭರತಖಂಡದ ರಾಷ್ಟ್ರಕವಿಯೂ ಕವಿಕುಲಗುರುವೂ ಆದ ಕಾಳಿದಾಸನ ಸಂದೇಶವೂ ಹಾಗೆಯೇ. ಅವನ ಕಾವ್ಯಗಳಲ್ಲಿ, ನಾಟಕಗಳಲ್ಲಿ ಗೋಚರವಾಗುವ ಅವನ ಚಿತ್ತವೃತ್ತಿ, ಅವನ ಬಾಳಿನ ರೂಪರೇಖೆ, ಅವನ ಜೀವನದೃಷ್ಟಿ ಇವುಗಳಿಂದ ನಾವು ಅವನ ಸಂದೇಶವನ್ನು ಗ್ರಹಿಸಬೇಕು.

ಕಾಳಿದಾಸನ ಕೃತಿಗಳನ್ನು ನೋಡಿದರೆ ಮೊದಲು ನಮಗೆ ಭಾಸವಾಗುವುದು ಅವನ ನಮ್ರತೆ. ತನ್ನ ವಿಷಯವಾಗಿ ಒಂದು ಹೊಗಳಿಕೆಯ ಮಾತನ್ನೂ ಅವನು ಹೇಳಿಕೊಂಡಿಲ್ಲ. ಈ ವಿಷಯದಲ್ಲಿ ನಿಜವಾಗಿಯೂ ಅವನು ಇತರ ಸಂಸ್ಕೃತ ಕವಿಗಳಿಗಿಂತ ಬೇರೆಯಾಗಿದ್ದಾನೆ. ಅವನ ಮೊದಲ ಮಹಾಕಾವ್ಯವಾದ 'ರಘುವಂಶ'ದ ಪೀಠಿಕೆಯಲ್ಲೂ, ಅದೇ ರೀತಿ ಅವನ ಕಡೆಯ ಕೃತಿಯಾದ 'ಶಾಕುಂತಲ'ದ ಪ್ರಸ್ತಾವನೆಯಲ್ಲೂ ಇದನ್ನು ನಾವು ನೋಡಬಹುದು. ಈ ನಮ್ರತೆ ಹೃದಯ ದೌರ್ಬಲ್ಯದಿಂದ ಹುಟ್ಟಿದುದಲ್ಲ. ತನ್ನನ್ನೇ ಸ್ತೋತ್ರಮಾಡಿಕೊಳ್ಳುವ ಚಾಪಲ್ಯ ಅವನಿಗಿರಲಿಲ್ಲ ಅಷ್ಟೆ. ಆದರೆ ಅವನ ಶಕ್ತಿಯಲ್ಲಿ ಅವನಿಗೇ ನಂಬಿಕೆಯಿರಲಿಲ್ಲವೆಂದಲ್ಲ. 'ಮಾಲವಿಕಾಗ್ನಿಮಿತ್ರ'ದ ಪ್ರಸ್ತಾವನೆಯನ್ನು ನೋಡಿದರೆ ತನ್ನ ಮೊದಲನೆಯ

---

* ೧೦-೯-೧೯೪೨ರಲ್ಲಿ ಮೈಸೂರು 'ಆಕಾಶವಾಣಿ'ಯಲ್ಲಿ ನಡೆದ 'ಕಾಳಿದಾಸೋತ್ಸವ'ದಲ್ಲಿ ಮಾಡಿದ ಭಾಷಣ.

ನಾಟಕವನ್ನು ಬರೆಯುವಾಗಲೇ ಅವನಿಗೆ ತನ್ನ ಪ್ರತಿಭಾಶಕ್ತಿಯಲ್ಲಿ ಎಷ್ಟು ನಂಬಿಕೆಯಿತ್ತೆಂಬುದು ಗೊತ್ತಾಗುತ್ತದೆ. ಹಳೆಯದಾದ ಮಾತ್ರಕ್ಕೇ ಕಾವ್ಯವು ಉಪಾದೇಯವಲ್ಲ, ಹೊಸದಾದ ಮಾತ್ರಕ್ಕೇ ತಿರಸ್ಕರಣೀಯವಲ್ಲ ಎಂದು ಪಾರಿಪಾರ್ಶ್ವಕನನ್ನು ಸೂತ್ರಧಾರನು ನಿಂದಿಸುವ ನೆವದಿಂದ ಸಹೃದಯರಾದ ಎಲ್ಲರಿಗೂ ಕಾಳಿದಾಸನು ಬುದ್ಧಿಯನ್ನು ಕಲಿಸಿದನು. ವ್ಯಂಗ್ಯವಾಗಿ ಮಾತಾಡಿ, ಯಾರ ಮನಸ್ಸನ್ನೂ ನೋಯಿಸದೆ, ಅವರಿಗೆ ತನ್ನ ಕಾವ್ಯಗುಣವನ್ನು ಗ್ರಹಿಸುವುದು ಸುಲಭವಾಗುವಂತೆ ಮಾಡಿದನು.

ಇದು ಕಾಳಿದಾಸನ ಸ್ವಭಾವದ ಮಾತಾಯಿತು. ಅವನ ಕೃತಿಗಳನ್ನು ನೋಡಿದರೆ ಇನ್ನೂ ಒಂದೆರಡು ವಿಷಯಗಳನ್ನು ನಾವು ನಿಸ್ಸಂದೇಹವಾಗಿ ತಿಳಿಯಬಹುದು. ಅವನು ಆಗಿನ ಕಾಲದಲ್ಲಿ ಪ್ರಚಾರದಲ್ಲಿದ್ದ ಸರ್ವ ಜ್ಞಾನಭಂಡಾರದಲ್ಲೂ ಆಸಕ್ತಿಯನ್ನು ತೋರಿಸಿದ್ದಂತೆ ಕಾಣುತ್ತದೆ. ವೇದ ಉಪನಿಷತ್ತುಗಳು, ರಾಮಾಯಣ ಮಹಾಭಾರತಗಳು, ಧರ್ಮಶಾಸ್ತ್ರಗಳು, ದರ್ಶನಗಳು, ಅಲಂಕಾರ ವ್ಯಾಕರಣ, ಜ್ಯೋತಿಷ ಅರ್ಥಶಾಸ್ತ್ರ—ಇವೆಲ್ಲದರ ಪರಿಚಯವನ್ನೂ ಮಾಡಿಕೊಂಡಿರಬೇಕು. 'ಶ್ರುತಬೋಧ' ವೆಂಬ ಒಂದು ಛಂದಶ್ಶಾಸ್ತ್ರದ ಗ್ರಂಥವನ್ನು ಅವನೇ ಬರೆದನೆಂಬ ಪ್ರತೀತಿ ಕೂಡ ಇದೆ. ಬರೆದಿದ್ದರೆ ಏನೂ ಆಶ್ಚರ್ಯವಿಲ್ಲ. ಜೊತೆಗೆ ಸಂಗೀತ ನಾಟ್ಯ ಚಿತ್ರಕಲೆಗಳನ್ನು ಚೆನ್ನಾಗಿ ಬಲ್ಲವನಾಗಿದ್ದನು. ಭಾರತ ದೇಶವನ್ನೆಲ್ಲಾ ಸುತ್ತಿದವನು. ಹೀಗೆ ಸುತ್ತುವಾಗ ಕರಣಗಳೆಲ್ಲವನ್ನೂ ತೆರೆದು ಮಾನವನ ಜೊತೆಗೆ ಪ್ರಕೃತಿಯ ನಾಮರೂಪವನ್ನು ಆತ್ಮದಲ್ಲಿ ಅನುಭವಿಸಿ ರಸವಾಗಿ ಕಾವ್ಯದಲ್ಲಿ ಹರಿಸಿದವನು. ಮಾನವತೆಯನ್ನು ದಾನವತೆಗೆ ಇಳಿಸದೆ ದಿವ್ಯತೆಗೆ ಏರಿಸಿದವನು. ಪ್ರಕೃತಿಗೂ ಮಾನವನಿಗೂ ಉಂಟಾಗಿರುವ ಕೃತಕ ಭೇದವನ್ನು ತೊಡೆದು ಒಂದರಲ್ಲೊಂದು ಕೂಡಿ ಕೃತಾರ್ಥವಾಗುವಂತೆ ತನ್ನ ಕಲೆಯ ಇಂದ್ರಜಾಲದಲ್ಲಿ ನೆಯ್ದು ಒಂದು ಸುಂದರ ನವೀನವ ಪ್ರಪಂಚವನ್ನೇ ಸೃಷ್ಟಿಸಿದವನು. ಈ ದಿವ್ಯದೃಷ್ಟಿಯ ಬೆಳವಣಿಗೆಗೆ ಅನುಕೂಲಿಸುವಂತೆ ಶಾಂತಿಯ ವಾತಾವರಣವು ಏರ್ಪಟ್ಟಿತ್ತು. ಉಜ್ಜಯಿನಿಯಂಥ ರಮ್ಯನಗರಿಯಲ್ಲಿ ವೈಭವದಿಂದ ರಾಜ್ಯವಾಳುತ್ತ ಕವಿತ್ವನಿವೇದನಕ್ಕೆ ಅರ್ಹತೆಯಿದ್ದ ರಸಿಕನಾದ ವಿಕ್ರಮಾದಿತ್ಯನಿದ್ದನು. ಕಾಳಿದಾಸನಿಗೆ ಅವನ ಅನುಗ್ರಹವಿತ್ತು. ಹಿತವಾದ ಮಿತವಾದ ಶುಚಿಯಾದ ಅಭಿರುಚಿಯುಳ್ಳ ರಸಿಕವೃಂದವಿತ್ತು; ಇಲ್ಲದ ಕಡೆ ಅದನ್ನು ಅವನೇ ಸೃಷ್ಟಿ ಮಾಡಿಕೊಂಡನು. ಅವರೆಲ್ಲರಿಗೂ ತಾನು ಅಚ್ಚುಮೆಚ್ಚಾದನು. ಇಷ್ಟಾದರೂ ಅವನು ಯಾರನ್ನೂ ಮುಖಸ್ತುತಿಮಾಡಿ ಮಾನವತೆಯ ಉನ್ನತಿಯನ್ನು ಕೀಳಾಗಿಸಲಿಲ್ಲ. ಹೀಗೆ ಸ್ಥೂಲವಾಗಿ ಕಾಳಿದಾಸನ ಕಾವ್ಯಗಳಿಂದ ಅವನ ಜೀವನದ ರೂಪರೇಖೆಯನ್ನು ಮಾತ್ರ ಎಳೆಯುವುದು ಸಾಧ್ಯ.

ಇನ್ನು ಕಾಳಿದಾಸನ ಜೀವನದೃಷ್ಟಿ ಹೇಗಿದ್ದಿತೆಂದು ಸ್ವಲ್ಪ ವಿಮರ್ಶೆಮಾಡೋಣ. ಅವನ ಜೀವನದಲ್ಲಿ ಏನೂ ಸಮಸ್ಯೆಗಳಿರಲಿಲ್ಲವೆಂದು ಅನೇಕರು ಅಭಿಪ್ರಾಯಪಡುತ್ತಾರೆ. ಅವನ ಜೀವನದಲ್ಲಿ ಹೆಚ್ಚು ತೊಡಕುಗಳಿದ್ದಿದ್ದರೆ ಅವನು ಕಾವ್ಯದಲ್ಲಿ ಹೆಚ್ಚಾಗಿ ದುಃಖವನ್ನು ಚಿತ್ರಿಸುತ್ತಿದ್ದನೆಂದೂ, ದುರಂತಕ್ಕೆ ಪ್ರಾಶಸ್ತ್ಯವನ್ನು ಕೊಡುತ್ತಿದ್ದನೆಂದೂ ಅನೇಕ ಈಗಿನ ವಿಮರ್ಶಕರ ಅಭಿಪ್ರಾಯ. ಇರಬಹುದು; ಅವನ ಜೀವನವು ಸಂಪೂರ್ಣವಾಗಿಯೂ ಸುಖಮಯವಾಗಿಯೇ ಇದ್ದಿರಬಹುದು. ಸುಖವು ಮಾನವನಿಗೆ ಅಷ್ಟು ಸುಲಭವಲ್ಲವಾದ್ದರಿಂದ ಕಾಳಿದಾಸನು ಸದಾ ಸುಖವಾಗಿದ್ದನೆಂದರೆ ನಮಗೇನೂ ಹೊಟ್ಟೆಯಕಿಚ್ಚಿಲ್ಲ. ಆದರೂ ಅಷ್ಟು ನಿರ್ಧರವಾಗಿ ಹೀಗೆ ಹೇಳಲು ಸಾಧ್ಯವೆ? ಕವಿಗೆ ಇರುವ ಕಲ್ಪನಾಶಕ್ತಿಯ ಬಲದಿಂದ ಅವನು ಇನ್ನೊಬ್ಬರ ಅನುಭವವನ್ನು ಸಾಕ್ಷಾತ್ಕಾರಮಾಡಿಕೊಳ್ಳುವುದಿಲ್ಲವೆ? ಹಾಗೆ ಮಾಡಿಕೊಂಡು ಅದೇ ಸಾಕ್ಷಾತ್ಕಾರವನ್ನು ತನ್ನ ಅನುಭವವೇ ಏನೋ ಎನ್ನುವಂತೆ ನಮಗೆ ತೋರಿಸುವುದಿಲ್ಲವೆ? ಅಲ್ಲದೆ ಕಾಳಿದಾಸನ ಕಾವ್ಯದಲ್ಲಿ ದುರಂತ ಪ್ರಕರಣಗಳು ಅನೇಕ ಬರುತ್ತವೆ. ಉದಾಹರಣೆಗೆ—'ಶಾಕುಂತಲ ನಾಟಕ'ದ ಐದನೆಯ ಅಂಕದಲ್ಲಿ ಆಪನ್ನಸತ್ತ್ವೆಯಾದ ತನ್ನ ಹೆಂಡತಿ ಶಕುಂತಲೆಯನ್ನು ದುಷ್ಯಂತನು ಶಾಪಕ್ಕೆ ಸಿಕ್ಕಿ ಗುರುತು ಹಿಡಿಯಲಾರದೆ ದೂರಮಾಡುವುದು, 'ರಘುವಂಶ'ದಲ್ಲಿ ಅಜನು ತನ್ನ ಪ್ರೇಯಸಿಯಾದ ಇಂದುಮತಿಯನ್ನು ಇದ್ದಕ್ಕಿದ್ದಂತೆ ಕಳೆದುಕೊಳ್ಳುವುದು (ಆಕಾಶದಿಂದ ಕೋಮಲವಾದೊಂದು ಹೂಮಾಲೆಯು ಅವಳ ಮೈಮೇಲೆ ಬಿದ್ದು ಅವಳು ಮೃತಳಾಗುವುದು), 'ಕುಮಾರಸಂಭವ'ದಲ್ಲಿ ರತಿಯ ವಿಲಾಪ, ಇತ್ಯಾದಿ. ಕಾಳಿದಾಸನ ಜೀವನದಲ್ಲಿ ಸಮಸ್ಯೆಗಳು ಇನ್ನು ಕೆಲವರ ಜೀವನದಲ್ಲಿದ್ದಷ್ಟು ಅವನ ಅದೃಷ್ಟದಿಂದ ಇಲ್ಲದೆ ಇರಬಹುದು. ಇದ್ದರೂ ಅವನು ಅವನ್ನು ಸಮಷ್ಟಿದೃಷ್ಟಿಯಿಂದ ನೋಡಿ ಬಿಡಿಸಿಕೊಂಡಿರಬಹುದು. ಆದರೆ ತೊಡಕುಗಳೇ ಇರಲಿಲ್ಲವೆಂದಾಗಲಿ ಸಮಸ್ಯೆಗಳೇ ಹುಟ್ಟಲಿಲ್ಲವೆಂದಾಗಲಿ ಹೇಳುವುದು—ಐತಿಹಾಸಿಕ ಅಂಶಗಳ ಅಭಾವದಲ್ಲಿ—ಸಾಹಸವಾದೀತು. ಮುಖ್ಯವಾಗಿ ಅವನ ಕಾವ್ಯಗುಣಕ್ಕೆ ಅವನ ಜೀವನ ದೃಷ್ಟಿಯೇ ಕಾರಣ, ಅವನ ಸಮಗ್ರದೃಷ್ಟಿಯೇ ಕಾರಣ.

ಕಾಳಿದಾಸನ ಅಭಿಪ್ರಾಯದಲ್ಲಿ ಮಾನವಜೀವನವು ಹೇಯವಾದುದಲ್ಲ, ತಿರಸ್ಕರಿಸುವುದಕ್ಕಾಗಿ ಅದನ್ನು ದೇವರು ಸೃಷ್ಟಿಸಲಿಲ್ಲ. ಅದನ್ನು ಸರಿಯಾಗಿ, ಕ್ರಮವಾಗಿ, ಮಿತವರಿತು, ಸಮರಸವಾಗಿ, ಆದರೂ ಪೂರ್ಣವಾಗಿ, ಬಾಳಬೇಕು. ತುಂಬುಜೀವನವೇ ಜೀವನದ ರಹಸ್ಯ. ಆದರ್ಶಪುರುಷ ಶ್ರೀರಾಮನ ಪೂರ್ವಜರಾದ ರಘುವಂಶದ ರಾಜರನ್ನು ಕಾಳಿದಾಸನು ವರ್ಣಿಸುವುದರಲ್ಲಿ ಇದನ್ನು ನಾವು ಕಾಣಬಹುದು:

ಶೈಶವೇಽಭ್ಯಸ್ತವಿದ್ಯಾನಾಂ ಯೌವನೇ ವಿಷಯೈಷಿಣಾಮ್ |
ವಾರ್ಧಕೇ ಮುನಿವೃತ್ತೀನಾಂ ಯೋಗೇನಾಂತೇ ತನುತ್ಯಜಾಮ್ ||

ಈ ರಾಜರು ಚಿಕ್ಕಂದಿನಲ್ಲಿ ವಿದ್ಯಾಭ್ಯಾಸಮಾಡಿ ತಮ್ಮ ಪೂರ್ವಿಕರು ಗಳಿಸಿಟ್ಟಿದ್ದ ಜ್ಞಾನರಾಶಿಯನ್ನು ಸಂಪಾದಿಸಿಕೊಳ್ಳುತ್ತಿದ್ದರು. ಯೌವನದಲ್ಲಿ ವಿಷಯಸುಖಗಳನ್ನು ಬಯಸಿ, ಅವನ್ನು ತಿರಸ್ಕರಿಸದೆ ಭೋಗಿಗಳಾಗಿರುತ್ತಿದ್ದರು. ಮುಪ್ಪು ಬಂದಾಗ ಎಲ್ಲ ಭೋಗಗಳನ್ನೂ ತೊರೆದು ಬಾಳಿನ ಸಂಜೆಯಲ್ಲಿ ವಾನಪ್ರಸ್ಥರಾಗಿ ಮುನಿಗಳಂತೆ ಇರುತ್ತಿದ್ದರು. ಜೀವನಾಂತ್ಯದಲ್ಲಿ ಯೋಗಾಭ್ಯಾಸದಿಂದ ಧ್ಯಾನದಲ್ಲಿ ಮುಳುಗಿ ದೇಹತ್ಯಾಗ ಮಾಡುತ್ತಿದ್ದರು—ಹೀಗೆಂದು ಹೇಳಿದ್ದಾನೆ. ಅವರು ಭೂಲೋಕಕ್ಕೆಲ್ಲಾ ಚಕ್ರವರ್ತಿಗಳಾಗಿದ್ದರೂ, ಐಶ್ವರ್ಯದಲ್ಲಿ ಮುಳುಗಿದ್ದರೂ, ವಿಷಯ ಸುಖವನ್ನೇ ಪರಮಾದರ್ಶವಾಗಿ ಮಾಡಿಕೊಳ್ಳಲಿಲ್ಲ. ಅಂದರೆ, ಜೀವನದಲ್ಲಿ ಎಲ್ಲಕ್ಕೂ ಒಂದೊಂದು ಸ್ಥಾನವುಂಟು, ಕೀಳು ಯಾವುದೂ ಇಲ್ಲ, ಅದರದರ ಸ್ಥಾನದಲ್ಲಿ ಅದಕ್ಕೆ ಬೆಲೆಯಿದೆ. ವಿಷಯಸುಖಕ್ಕೆ ಯೌವನದಲ್ಲಿ ಸ್ಥಾನವುಂಟು ; ಆದರೆ ಮುಪ್ಪಿನಲ್ಲಲ್ಲ. ಯಯಾತಿಯ ಕಾಮ ಕಾಮವೇ ಹೊರತು ಶ್ರೀರಾಮಚಂದ್ರನ ಕಾಮ ಕಾಮವಲ್ಲ. ಆದರೂ ಯೌವನದ ಧ್ಯೇಯವೇ ಜೀವನದ ಒಟ್ಟು ಧ್ಯೇಯವಲ್ಲ. ಜೀವನದ ಧ್ಯೇಯವು ಯೋಗವೇ. ಹೀಗೆ ಜೀವನವನ್ನು ಕ್ರಮವಾಗಿ ಹದವರಿತು ಬಾಳಿದವರಿಗೆ ಒಂದೊಂದೂ ಮುಂದಿನದಕ್ಕೆ ಮೆಟ್ಟಲಂತೆ ಇರುತ್ತದೆ. ಜೀವನದಲ್ಲಿ ಯಾವ ಕೊರತೆಗೂ ಅವಕಾಶ ವಿರುವುದಿಲ್ಲ, ಅದರ ಬದಲು ಪೂರ್ಣತೆಯುಂಟು. ಹೀಗೆ ರಘುವಂಶದ ರಾಜರು ಬಾಳಿದರು.

ಇದೇ ಭಾವವನ್ನು ನಾವು 'ಕುಮಾರಸಂಭವ'ದಲ್ಲಿಯೂ ಕಾಣಬಹುದು. ಪಾರ್ವತಿಯು ಶಿವನನ್ನೇ ಮದುವೆಯಾಗಬೇಕೆಂದು ಹಟಮಾಡಿ, ತಪಸ್ಸಿನಲ್ಲಿ ಮಗ್ನನಾಗಿದ್ದ ಅವನಿಗೆ ಶುಶ್ರೂಷೆಮಾಡುತ್ತಿದ್ದ ಕಾಲದಲ್ಲಿ, ಶಿವನ ಮನಸ್ಸು ಚಂಚಲವಾಗಲು, ಅವನು ಕ್ರೋಧದಿಂದ ಈ ಚಾಂಚಲ್ಯವನ್ನುಂಟುಮಾಡಿದ ಮನ್ಮಥನನ್ನು ಸುಟ್ಟು ಬೂದಿಮಾಡಿ, ಜುಗುಪ್ಸೆಯಿಂದ ಎದ್ದು ಹೊರಟುಹೋದನು. ಆಗ ಪಾರ್ವತಿಯು—ತನ್ನ ಸೌಂದರ್ಯವೆಲ್ಲಾ ವ್ಯರ್ಥವಾಯಿತು, ಇದರಿಂದ ಶಿವನನ್ನು ಒಲಿಸಿಕೊಳ್ಳಲು ಆಗಲಿಲ್ಲ, ಇನ್ನು ನನಗೆ ತಪಸ್ಸೇ ಸಾಧನ ಎಂದು ಘೋರತಪಸ್ಸಿಗೆ ಮೊದಲು ಮಾಡಿದಳು. ಇತ್ತ, ಪಾರ್ವತಿಯನ್ನು ಮದುವೆಯಾಗು, ಲೋಕಕಲ್ಯಾಣಕ್ಕಾಗಿ ಸಂತಾನವನ್ನು ಪಡೆ ಎಂದು ದೇವತೆಗಳು ಶಿವನನ್ನು ಪ್ರಾರ್ಥಿಸಿಕೊಳ್ಳಲು, ಅವನು ಪಾರ್ವತಿಯ ಮನಸ್ಸನ್ನು ಪರೀಕ್ಷಿಸಬೇಕೆಂದು ಬ್ರಹ್ಮಚಾರಿಯ ವೇಷದಿಂದ ಅವಳಿದ್ದೆಡೆಗೆ ಬಂದನು. ಬಂದಾಗ ಅವಳ ಚಂಡತಪಸ್ಸನ್ನು ನೋಡಿ ಹೀಗೆ ಕೇಳುತ್ತಾನೆ:

ಅಪಿ ಸ್ವಶಕ್ತ್ಯಾ ತಪಸಿ ಪ್ರವರ್ತಸೇ
ಶರೀರಮಾದ್ಯಂ ಖಲು ಧರ್ಮಸಾಧನಮ್ ||

"ನಿನ್ನ ಶಕ್ತ್ಯನುಸಾರ ತಪಸ್ಸು ಮಾಡುತ್ತಿಲ್ಲ ತಾನೆ? ಏಕೆಂದರೆ, ಎಲ್ಲ ಧರ್ಮಕ್ಕೂ ಶರೀರವೇ ಮೊದಲನೆಯ ಸಾಧನ." ಇದು ಬ್ರಹ್ಮಚಾರಿಯ ವೇಷದಲ್ಲಿದ್ದರೂ ತಾನೇ ತಪಸ್ವಿಯಾದ ಪರಮೇಶ್ವರನ ಮಾತು. ಶರೀರವನ್ನು ತಿರಸ್ಕರಿಸಿದರೆ ಯಾವ ಪುರುಷಾರ್ಥವನ್ನೂ ಗಳಿಸುವುದಕ್ಕಾಗುವುದಿಲ್ಲ. ದೇಹವಿದ್ದರೆ ಆಗ ಧರ್ಮ, ಅರ್ಥ, ಕಾಮ, ಮೋಕ್ಷ ಎಲ್ಲವೂ. ಇಹವನ್ನು ಬಿಟ್ಟು ಪರವಿಲ್ಲ, ಆದರೆ ಪರವೊಂದುಂಟೆಂಬುದನ್ನು ಮರೆಯಲಾಗದು. ಅರ್ಥ ಕಾಮಗಳಿಲ್ಲದೆ ಧರ್ಮ ಮೋಕ್ಷಗಳಿಲ್ಲ, ಆದರೆ ಧರ್ಮ ಮೋಕ್ಷಗಳನ್ನು ಮರೆಯಲಾಗದು. ಶಿವನೂ ಕೂಡ ಪಾರ್ವತಿಯಲ್ಲಿ ತನಗೆ ಮೊದಲು ಉಂಟಾದ ಮನೋವಿಕಾರವು ಕಾಮವೆಂದು ಅದನ್ನು ಸುಟ್ಟುಬಿಟ್ಟನು. ಆದರೆ ಪಾರ್ವತಿಯು ತನ್ನ ಕಾಮವನ್ನು ಶೋಕಾಗ್ನಿಯಿಂದ, ತಪಸ್ಸಿನಿಂದ ದಹಿಸಿ ಶುದ್ಧವಾದ ನಿರ್ಮಲಪ್ರೇಮವನ್ನು ನೀಡಿದಾಗ, ಧರ್ಮಕ್ಕೆ ವಿರುದ್ಧವಲ್ಲದ ತನ್ನ ಕಾಮವನ್ನು ಸ್ವೀಕರಿಸುತ್ತಾನೆ. ಕಾಮವನ್ನು ಆಗಿನಹಾಗೆ ಈಗ ತಿರಸ್ಕರಿಸುವುದಿಲ್ಲ. ಕಾಮನನ್ನು ಪುನರುಜ್ಜೀವನಗೊಳಿಸುತ್ತಾನೆ. ಈ ಭಾವವನ್ನೇ 'ಶಾಕುಂತಲ' ದಲ್ಲಿಯೂ ಇನ್ನೊಂದು ರೀತಿಯಲ್ಲಿ ನೋಡಬಹುದು.

ದಿಲೀಪನನ್ನು ವರ್ಣಿಸುವಾಗ ಕಾಳಿದಾಸನು ಹೀಗೆ ಹೇಳುತ್ತಾನೆ:

ಜುಗೋಪಾತ್ಮಾನಮತ್ರಸ್ತೋ ಭೇಜೇ ಧರ್ಮಮನಾತುರಃ |
ಅಗೃಧ್ನುರಾದದೇ ಸೋऽರ್ಥಂ ಅಸಕ್ತಃ ಸುಖಮನ್ವಭೂತ್ ||

"ದಿಲೀಪನು ತನ್ನನ್ನು ರಕ್ಷಿಸಿಕೊಳ್ಳುತ್ತಿದ್ದನು, ಆದರೆ ಭಯದಿಂದಲ್ಲ; ಧರ್ಮವನ್ನು ಪಾಲಿಸುತ್ತಿದ್ದನು, ಕಷ್ಟದಲ್ಲಿ ಸಿಕ್ಕಿಕೊಂಡದ್ದರಿಂದಲ್ಲ; ಅರ್ಥವನ್ನು ಸ್ವೀಕರಿಸುತ್ತಿದ್ದನು, ಲೋಭದಿಂದಲ್ಲ; ಸುಖವನ್ನು ಅನುಭವಿಸುತ್ತಿದ್ದನು, ಆದರೆ ಸಕ್ತಿಯಿಂದಲ್ಲ." ದಿಲೀಪನು ಜೀವನವನ್ನು ಬಾಳುವಾಗ ಅದರಲ್ಲೇ ಮುಳುಗಿ ಕುರುಡನಾಗಿ ಮುಂದಿನ ಗುರಿಯನ್ನು ಮರೆಯುತ್ತಿರಲಿಲ್ಲ. ಅದರಿಂದ ಭೋಗದಲ್ಲಿ ತ್ಯಾಗಿಯಾಗಿ ಸುಖದಿಂದಿದ್ದನು.

ಕಾಳಿದಾಸನಿಗೆ ಈ ದೃಷ್ಟಿಗೊಂದು ಆದರ್ಶದೃಷ್ಟಾಂತವೆಂದರೆ ಪರಮೇಶ್ವರನ ನಿತ್ಯಜೀವನ. ಶಿವನು ಕಾಳಿದಾಸನ ಇಷ್ಟದೈವ, ಅಭಿಮಾನದೇವತೆ. ಕಾಳಿದಾಸನಿಗೆ ವಿಷ್ಣುವಿನಲ್ಲಿ ಭಕ್ತಿಯಿಲ್ಲವೆಂದಲ್ಲ. ಅವನು ಒಂದೆರಡುಕಡೆ ಅವನ ಕಾವ್ಯಗಳಲ್ಲಿ ಬಹಳ ಉದಾತ್ತವಾದ ಭಾವಗಳನ್ನೊಳಕೊಂಡ ವಿಷ್ಣುಸ್ತೋತ್ರಗಳನ್ನು ಬರೆದಿದಾನೆ. ಶ್ರೀರಾಮನ ಕಥೆಯನ್ನು ಚಿತ್ರಿಸಿದಾನೆ. ಅವನು ವೀರ ವೈಷ್ಣವನಾಗಲಿ ಅಥವಾ

ಶೈವನಾಗಲಿ ಅಲ್ಲದಿದ್ದರೂ ಶಿವನಲ್ಲಿ ಅವನಿಗೆ ಮೋಹ ಹೆಚ್ಚು. ಅವನ ನಾಟಕಗಳ ನಾಂದೀಪದ್ಯಗಳೆಲ್ಲವೂ ಶಿವನನ್ನೇ ಕುರಿತವು. 'ರಘುವಂಶ'ದ ಮಂಗಳಶ್ಲೋಕ ಶಿವನ ಸ್ತುತಿ. 'ಕುಮಾರಸಂಭವ'ವಂತೂ ಶಿವನ ಕಥೆಯೇ ಆಯಿತು. 'ಮೇಘದೂತ'ದಲ್ಲೂ ಕೂಡ ಉಜ್ಜಯಿನಿಯ ಮಹಾಕಾಲೇಶ್ವರನನ್ನು ಹೇಗೋ ಮಾಡಿ ತಂದು ವರ್ಣಿಸಿದ್ದಾನೆ. 'ಮಾಲವಿಕಾಗ್ನಿಮಿತ್ರ'ದ ನಾಂದೀಪದ್ಯ ಹೀಗಿದೆ:

> ಏಕೈಶ್ವರ್ಯೇ ಸ್ಥಿತೋಽಪಿ ಪ್ರಣತಬಹುಫಲೇ ಯಃ ಸ್ವಯಂ ಕೃತ್ತಿವಾಸಾಃ
> ಕಾಂತಾಸಂಮಿಶ್ರದೇಹೋಽಪ್ಯವಿಷಯಮನಸಾಂ ಯಃ ಪರಸ್ತಾದ್ಯತೀನಾಮ್ |
> ಅಷ್ಟಾಭಿರ್ಯಸ್ಯ ಕೃತ್ಸ್ನಂ ಜಗದಪಿ ತನುಭಿರ್ಬಿಭ್ರತೋ ನಾಭಿಮಾನಃ
> ಸನ್ಮಾರ್ಗಾಲೋಕನಾಯ ವ್ಯಪನಯತು ಸ ವಸ್ತಾಮಸೀಂ ವೃತ್ತಿಮೀಶಃ ||

ಭಕ್ತರಿಗೆ ಅವರು ಬೇಡಿದಷ್ಟು, ಇಲ್ಲವೆ ಇನ್ನೂ ಹೆಚ್ಚಾಗಿ ಫಲವನ್ನು ಕೊಡಬಲ್ಲ ಲೋಕೈಕ ಪ್ರಭುತ್ವದಲ್ಲಿ ಸುಪ್ರತಿಷ್ಠಿತನಾಗಿದ್ದರೂ, ಶಿವನು ತನಗೆ ಹೊದೆಯುವುದಕ್ಕೆ ಒಂದು ಚರ್ಮವನ್ನು ಮಾತ್ರ ಇಟ್ಟುಕೊಂಡಿದ್ದಾನೆ. ಅದೂ ಕೂಡ ಗಜಾಸುರನೆಂಬವನನ್ನು ಕೊಂದಾಗ ಅವನು ಪಶ್ಚಾತ್ತಾಪಪಟ್ಟು ಶಿವನು ತನ್ನ ಚರ್ಮವನ್ನು ತನ್ನ ಜ್ಞಾಪಕಾರ್ಥವಾಗಿ ಹೊದೆಯಬೇಕೆಂದು ಬೇಡಿಕೊಂಡದ್ದರಿಂದ; ತನಗಾಗಿಯಲ್ಲ. ಶಿವನ ಏಕೈಶ್ವರ್ಯದ ಫಲ ತನ್ನ ಭಕ್ತರಿಗಾಗಿ, ತನಗಲ್ಲ. ಶಿವನು ಅರ್ಧನಾರೀಶ್ವರ. ಅವನ ಎಡಭಾಗವೇ ಅವನ ಕಾಂತೆ, ಪಾರ್ವತಿ. ಅಕ್ಷರಶಃ ಅವಳು ಅವನ ಅರ್ಧಾಂಗಿ. ಶಿವನ ಕಾಮವು ಎಲ್ಲರ ಕಾಮಕ್ಕಿಂತಲೂ ಹೆಚ್ಚಿರಬೇಕು. ಏಕೆಂದರೆ, ಒಂದು ಕ್ಷಣವೂ ತನ್ನ ಕಾಂತೆಯನ್ನು ಬಿಟ್ಟಿರಲಾರದೆ, ಅವಳನ್ನು ತನ್ನ ದೇಹದಲ್ಲೇ ಇವನು ಬೆರಸಿಕೊಂಡಿದ್ದಾನೆ. ಆದರೆ ಹೀಗೆ ಕಾಂತಾಸಂಮಿಶ್ರದೇಹನಾದರೂ ಇವನು ವಿಷಯಸುಖಗಳಿಂದ ಪರಾಙ್ಮುಖರಾದ ಯತಿಗಳಲ್ಲಿ ಯತಿಯಾದವನು. ಎಲ್ಲವನ್ನೂ ತ್ಯಜಿಸಿ ಹಿಮಾಲಯಪರ್ವತದಲ್ಲಿ ದಕ್ಷಿಣಾಮೂರ್ತಿಯಾಗಿ ಕುಳಿತು ಘೋರತಪಸ್ಸನ್ನು—ತನಗಾಗಿ ಗಳಿಸಿಕೊಳ್ಳಬೇಕಾದ್ದು ಏನೂ ಇಲ್ಲದ್ದರಿಂದ—ಲೋಕಕಲ್ಯಾಣಕ್ಕಾಗಿ ಮಾಡಿದವನು. ಇವನ ಎಂಟು ದೇಹಗಳಿಂದಲೇ ಲೋಕಗಳೆಲ್ಲವೂ ನಿಂತಿವೆ. ಪಂಚಮಹಾಭೂತಗಳ ರೂಪದಿಂದ ಪ್ರಕೃತಿಗೆ ಆಧಾರವಾಗಿದ್ದಾನೆ. ಸೂರ್ಯಚಂದ್ರರ ರೂಪದಲ್ಲಿ ಈ ಪ್ರಕೃತಿಯನ್ನು ಹಗಲೂ ಇರುಳೂ ಆಳುತ್ತಾನೆ. ಯಾಗಯಜ್ಞಗಳಲ್ಲಿ ಯಾಗಮಾಡುವ ಯಜಮಾನನ ರೂಪದಿಂದ ದೇವತೆಗಳಿಗೆ ಹವಿಸ್ಸನ್ನು ಕೊಟ್ಟು ಸ್ವರ್ಗಲೋಕವನ್ನು ನಿಲ್ಲಿಸಿದ್ದಾನೆ. ಹೀಗೆ ತನ್ನ ಎಂಟು ದೇಹಗಳಿಂದ ಭೂಮಿ ಸ್ವರ್ಗಗಳೆಲ್ಲವನ್ನೂ ಹೊತ್ತಿದ್ದರೂ ಅವನಿಗೆ ಸ್ವಲ್ಪವೂ ಅಹಂಕಾರವಿಲ್ಲ. ಅಂಥ ಈಶನು ನಮ್ಮ ಮನಸ್ಸಿನ ತಮಸ್ಸನ್ನು ಹರಿಯಿಸಿ ಸನ್ಮಾರ್ಗವನ್ನು ನೋಡುವಂತೆ ಮಾಡಲಿ!

ಇದೇ ಈ ಶ್ಲೋಕದ ಭಾವ. ಇಂಥ ಭೋಗದಲ್ಲಿ ವಿರಾಗವನ್ನು ಕಂಡ, ಧರ್ಮದಲ್ಲಿ ಕಾಮವನ್ನು ಪುಟಹಾಕಿದ, ಆದರ್ಶಸಂಸಾರಿ, ಆದರ್ಶಯತಿ, ಕರ್ಮಯೋಗಿ ಕಾಳಿದಾಸನ ಇಷ್ಟದೇವತೆ. ಅವನ ಜೀವನವೇ ಆದರ್ಶಜೀವನ. ಕಾಳಿದಾಸನೂ ಹೀಗೆಯೇ ಈ ದೃಷ್ಟಿಯಿಂದಲೇ ತುಂಬುಜೀವನವನ್ನು ಬಾಳಿರಬೇಕು, ಅಸಕ್ತಿಯಿಂದ ಸುಖವನ್ನುಂಡಿರಬೇಕು; ಅವನ ಜೀವನವು ಪವಿತ್ರವಾಗಿದ್ದಿರಬೇಕು. ಹೀಗೆ ಜೀವನದ ರಹಸ್ಯವನ್ನು ಕಂಡುಕೊಂಡು ಅದನ್ನು ಪೂರ್ಣವಾಗಿ ಬಾಳಿದ ಕವಿ ತನ್ನ ಕಾವ್ಯದ ಕಣ್ಣಾದ 'ಶಾಕುಂತಲ'ವನ್ನು ರಚಿಸಿ ಅದರ ಕೊನೆಯಲ್ಲಿ ಹೀಗೆ ಆಶಿಸುತ್ತಾನೆ:

ಪ್ರವರ್ತತಾಂ ಪ್ರಕೃತಿಹಿತಾಯ ಪಾರ್ಥಿವಃ
ಸರಸ್ವತೀ ಶ್ರುತಮಹತಾಂ ಮಹೀಯತಾಮ್ |
ಮಮಾಪಿ ಚ ಕ್ಷಪಯತು ನೀಲಲೋಹಿತಃ
ಪುನರ್ಭವಂ ಪರಿಗತಶಕ್ತಿರಾತ್ಮಭೂಃ ||

"ರಾಜನು ಪ್ರಜೆಗಳ ಹಿತಕ್ಕಾಗಿಯೇ ದುಡಿಯಲಿ; ತಿಳಿದವರ, ಸುಸಂಸ್ಕೃತರ ಮಾತಿಗೇ ಯಾವಾಗಲೂ ಬೆಲೆಯಿರಲಿ; ನನಗಾದರೋ ಆತ್ಮಭವನಾದ ಸರ್ವವ್ಯಾಪಿಯಾದ ನೀಲಲೋಹಿತನಾದ ಶಿವನು ಪುನರ್ಜನ್ಮವನ್ನು ತಪ್ಪಿಸಲಿ!" ಇವು ಜೀವನ ಜಿಹಾಸೆಯಿಂದ ಬಂದ ಮಾತುಗಳಲ್ಲ. ತನ್ನ ಕರ್ತವ್ಯವನ್ನು ಮಾಡಿ, ತನ್ನ ಧರ್ಮವನ್ನು ಪಾಲಿಸಿ, ತನ್ನ ಪ್ರತಿಭೆಯಿಂದ ಜಗತ್ತನ್ನೇ ಆಚಂದ್ರಾರ್ಕವಾಗಿ ಬೆಳಗಿ, ಇನ್ನು ಜನ್ಮ ಬೇಡ ಎನ್ನುತ್ತಾನೆ. ತುಂಬುಜೀವನವನ್ನು ಚೆನ್ನಾಗಿ ಬಾಳಿ ಕೃತಕೃತ್ಯತೆಯ ಭಾವದಿಂದ ಹೊರಹೊಮ್ಮಿದ ಮಾತುಗಳಿವು! ಜೀವನಯಾತ್ರೆಯನ್ನು ಮಾಡಿ ದಣಿದ ಯಾತ್ರಿಕನು ತನ್ನ ಧಾಮವಾದ ಪರಾಶಕ್ತಿಯನ್ನು ತಿರುಗಿ ಸೇರಬೇಕೆಂಬ ಹಂಬಲಿನಿಂದ ಆಡಿದ ಮಾತುಗಳಿವು!

ಕಾಳಿದಾಸನ ಕೃತಿಗಳಿಂದ ನಾವು ಇಷ್ಟರ ಮಟ್ಟಿಗೆ ಮಾತ್ರ ಅವನ ಜೀವನವನ್ನೂ ದೃಷ್ಟಿಯನ್ನೂ ಊಹಿಸಬಹುದು. ಹೀಗೆ ಸಮಗ್ರದೃಷ್ಟಿಯಿಂದ ಸಾಗಿದ ಈ ಮಹಾಕವಿಯ ಪಾವನವೂ ಸುಂದರವೂ ಆದ ಜೀವನವೇ ನಮಗೆ ಅವನು ಸಾರುತ್ತಿರುವ ಸನಾತನ ಸಂದೇಶ!

ನಂ. ಶಿವರಾಮಶಾಸ್ತ್ರಿ.

ಮೋಡಗಳು

ಪ್ರಕೃತಿ ಕಲೆಗಿಂ ಮಿಗಿಲೆ ನರಕೃತಿಯ ಕಲೆ? ನೋಡ,
ಆಶ್ವೀಜದಾಕಾಶದಮೃತ ಚಿತ್ರದ ಶಾಲೆ
ಸೃಷ್ಟಿಶಿಲ್ಪಿಯ ಹೃದಯಪಿಂಡ ಕುಂಡಜ್ವಾಲೆ
ಕಡೆದಿಟ್ಟ ಕೃತಿಗಳಿಂ ಭೀಮರಮ್ಯಂ! ಮೋಡ
ಅರಳೆರಾಸಿಗಳಂತೆ, ಬೆಣ್ಣೆಬಂಡೆಗಳಂತೆ,
ಫೇನಮೃದು ರಜತಗಿರಿ ಶಿಖರ ಪದ್ಮಗಳಂತೆ,
ಕಡೆದ ಹಾಲ್ಗಡಲೆದ್ದು ಸಾಲ್ಗೊಂಡಲೆಗಳಂತೆ
ಶೋಭಿಸಿವೆ, ಶರದಭ್ರ ಶುಭ್ರ ಚಿಂತೆಗಳಂತೆ!
ಆವ ಕವಿಗಾವ ಶಿಲ್ಪಿಯ ಕೌಶಲಕೆ ಸಾಧ್ಯ
ಈ ಬೃಹತ್, ಈ ಮಹತ್, ಈ ರೂಪ ವೈವಿಧ್ಯ?
ಬರಿಯ ಮೋಡಗಳಲ್ಲ ಇವು ಬಿಳಿಯ ಆತ್ಮಗಳ್,
ಕ್ರಿಸ್ತ ಬುದ್ಧರ ಪೋಲ್ವ ವಿಶ್ವದ ಮಹಾತ್ಮಗಳ್;
ಹಿಂದೆ ಬಂದುವೊ ಮುಂದೆ ಬರಲಿಹವೊ ಪ್ರಾಣಗಳ್,
ಧ್ಯಾನಗಳ್, ಭಾವಗಳ್, ಲೋಕ ಕಲ್ಯಾಣಗಳ್!

"ಕುವೆಂಪು"

‘ಅತಿಮಾನವ’ ವಾದಿ ಫ್ರೆಡರಿಕ್ ನೀಚ್ಷೆ*

ನೀಚ್ಷೆ ಹತ್ತೊಂಬತ್ತನೆಯ ಶತಮಾನದ ಜರ್ಮನ್ ದಾರ್ಶನಿಕ. ಇವನು ೧೮೪೪ರ ಅಕ್ಟೋಬರ್ ೧೫ನೆಯ ತಾರೀಖಿನಲ್ಲಿ ಹುಟ್ಟಿ ೧೯೦೦ರಲ್ಲಿ ಐವತ್ತಾರನೆಯ ವಯಸ್ಸಿನಲ್ಲಿ ಗತಿಸಿದನು. ಇವನ ತಂದೆ, ಇವನ ತಾತ ಮುತ್ತಾತರಂತೆ, ಪಾದ್ರಿಯಾಗಿದ್ದ. ನೀಚ್ಷೆಯೂ ಒಂದು ರೀತಿಯಲ್ಲಿ ಮತಪ್ರಚಾರಕನೇ ಆದನು; ಆದರೆ ಆ ಮತ ಕ್ರೈಸ್ತಮತವಾಗಿರಲಿಲ್ಲ. ಬಾಲ್ಯದಲ್ಲಿ ಕ್ರೈಸ್ತರ ಸಾತ್ವಿಕ ಜೀವನವೇ ಪರಮ ಧ್ಯೇಯವೆಂದು ತನ್ನ ತಾಯಿ ತಂದೆಯರು ಹೇಳುತ್ತಿದ್ದುದನ್ನು ಕೇಳುತ್ತಿದ್ದನು. ಇವನ ತಾಯಿಯಾದರೋ ಬಲು ಕಟ್ಟುನಿಟ್ಟಿನ ಆಚಾರಶೀಲ ‘ಪ್ಯೂರಿಟನ್’ ಪಂಥದವಳಾಗಿದ್ದಳು. ನೀಚ್ಷೆ ಬೆಳೆದದ್ದು ಅಂತಹ ಆವರಣದಲ್ಲಿ.

ಇವನ ಚಿಕ್ಕ ವಯಸ್ಸಿನಲ್ಲೇ ಇವನ ತಂದೆ ಮಡಿದನು. ಮನೆಯ ಹೆಂಗಸರು ಇವನನ್ನು ಮುದ್ದುಮಾಡಿ ಹೆಣ್ಣು ಮಗುವಿನಂತೆ ಬೆಳಸಿದರು. ಇತರ ಹುಡುಗರೊಡನೆ ಸೇರಬಾರದೆಂದು ತಡೆದು ತಡೆದು, ಇತರ ಹುಡುಗರೆಂದರೆ ಅಂಜುವಂತೆ ಮಾಡಿಬಿಟ್ಟರು. ಶಾಲೆಯಲ್ಲಿ ಜೊತೆಗಾರರು ಇವನನ್ನು ‘ಮರಿ ಯೇಸು’ ಎಂದು ಹಂಗಿಸಲು ತೊಡಗಿದರು. ಇವರ ಭಯಕ್ಕೆ ಶಾಲೆ ಬಿಟ್ಟರೆ ಮನೆ, ಮನೆ ಬಿಟ್ಟರೆ ಶಾಲೆ—ಹೀಗಾಗಿ ತನ್ನಷ್ಟಕ್ಕೆ ತಾನು ಕಾಲ ಕಳೆಯುವುದನ್ನು ಅಭ್ಯಾಸಮಾಡಿಕೊಂಡ. ಓದುವುದಕ್ಕೆ ಬೈಬಲ್ ಅಲ್ಲದೆ ಬೇರೆ ಪುಸ್ತಕವೂ ದೊರೆಯುವುದು ಕಷ್ಟವಾಯಿತು. ಬೈಬಲನ್ನೂ ಮತ್ತೆ ಮತ್ತೆ ಓದಿ ಮುಗಿಸಿದ. ಮನೆಯವರು ಯಾರಾದರೂ ಕೇಳಲು ಬಂದರೆ ಗದ್ಗದ ಕಂಠದಿಂದ ಬೈಬಲನ್ನು ಓದುತ್ತಿದ್ದ. ಹುಡುಗರು ಹಂಗಿಸಿದಾಗ ತಾನು ಅಂಜುಬುರುಕನಲ್ಲವೆಂದೂ, ತನ್ನಲ್ಲಿ ಶಕ್ತಿ ಇದೆ ಎಂದೂ, ಸಾಮರ್ಥ್ಯದ ಕೆಲಸವೊಂದನ್ನು ಮಾಡಿ ಅವರೆಲ್ಲರೂ ಬೆರಗಾಗುವಂತೆ ಮಾಡಬೇಕೆಂದೂ ಬಯಸಿದ. ಒಂದುದಿನ, ತೀರ ಛಲಹುಟ್ಟಿ, ಎಲ್ಲ ಹುಡುಗರೂ ನೋಡುತ್ತಿದ್ದ ಹಾಗೆ ನಾಲ್ಕಾರು ಬೆಂಕಿ ಕಡ್ಡಿಗಳನ್ನು ಗೀಚಿ ಅಂಗೈಯಲ್ಲಿ ಇಟ್ಟುಕೊಂಡ. ಉರಿಯುತ್ತಿದ್ದರೂ ಕದಲದೆ ಹಾ ಹೂ ಎನ್ನದೆ ಅವು ಆರುವವರೆಗೂ ಹಿಡಿದಿದ್ದು ಬಿಸಾಡಿದ. ಇಂತಹ

---

* ಈ ಪ್ರಬಂಧವು ೨೭–೮–೪೩ರಲ್ಲಿ ಮೈಸೂರು ಆಕಾಶವಾಣಿಯಲ್ಲಿ ಮಾಡಿದ ಭಾಷಣವನ್ನು ವಿಸ್ತರಿಸಿ ಬರೆದುದು.

ಗಂಡಸುತನ ಮತ್ತು ಕೆಚ್ಚೆದೆಗಳಿರುವುದೊಂದೇ ಲೋಕದಲ್ಲಿ ಮರ್ಯಾದೆ ಹಿರಿಯತನಗಳನ್ನು ಪಡೆಯಲು ಉಪಾಯವೆಂದು ಕಂಡುಕೊಂಡನು. ಸಣ್ಣ ವಯಸ್ಸಿನಲ್ಲಿ ಇವನಿಗಾದ ತಿರಸ್ಕಾರದ ಅನುಭವಗಳು ಇವನ ಮನಸ್ಸನ್ನು ಕಲ್ಲಾಗಿ ಮಾಡಿದುವು. ಜೀವನದ ಉದ್ದೇಶವೇ ಇದೆಂದು ಮನಗಂಡನು. ಮುಂದಿನ ಈತನ ಶಕ್ತಿ ಸಿದ್ಧಾಂತಕ್ಕೆ ಚಿಕ್ಕತನದಲ್ಲೇ ಅಂಕುರಾರ್ಪಣವಾಯಿತು.

ದೈನ್ಯಾನುಸಂಧಾನವನ್ನೇ ಪ್ರಧಾನ ಧರ್ಮವೆಂದು ಬೋಧಿಸುತ್ತಿದ್ದ ಕ್ರೈಸ್ತ ಧರ್ಮದಲ್ಲಿ ಈತನಿಗೆ ನಂಬಿಕೆ ತಪ್ಪಿದುದು ಇವನ ಹದಿನೆಂಟನೆಯ ವಯಸ್ಸಿನಲ್ಲಿ. ಚಿಕ್ಕಂದಿನಲ್ಲಿ ಬಹು ಶ್ರಮದಿಂದ ಇವನ ಮೇಲೆ ಹೊದಿಸಿದ್ದ ಮತದ ಹೊದಿಕೆ ಸರಿಯಿತು. ಮತವೆಂದರೆ ಉರಿಯುವಂತಹ ಸಿಟ್ಟು ಇವನನ್ನು ಆವರಿಸಿತು. ಮೊದಲು ಕ್ರೈಸ್ತ ಧರ್ಮ ಒಂದನ್ನೇ ನಂಬಿಕೊಂಡಿದ್ದ ನೀಚ್ಚೆಗೆ ಆ ಧರ್ಮದಲ್ಲಿ ನಂಬಿಕೆ ತಪ್ಪಿದ ಮೇಲಂತೂ ಬೇರೆ ಆಸರೆಯೇ ಇಲ್ಲದಂತಾಯಿತು. ನಾಸ್ತಿಕತನದಿಂದ ವಿಷಯ ಸುಖಗಳ ಕಡೆಗೆ ಇವನ ಮನಸ್ಸು ಹರಿಯಿತು. ಕಾಲೇಜಿನಲ್ಲಿ ತನ್ನ ಭೋಗಪ್ರಿಯರಾದ ಗೆಳೆಯರೊಡನೆ ಸೇರಿ ಹಿಂದೆ ಮನಸ್ಸಿನಲ್ಲಿ ಕೂಡ ಭಾವಿಸಲು ಹಿಂಜರಿಯುತ್ತಿದ್ದ ಧೂಮಪಾನ ಸುರಾಪಾನಗಳನ್ನು ಅಭ್ಯಾಸಮಾಡಿದನು. ಗಂಡಸುತನದ ಲಕ್ಷಣಗಳಿವುಗಳೆಂದು ಭಾವಿಸಿದನು. ಆದರೆ ಬಹುಬೇಗ ಭೋಗಜೀವನದಲ್ಲಿ ಜುಗುಪ್ಸೆ ಹುಟ್ಟಿತು. ಅಲ್ಲಿಯೂ ಮನಸ್ಸಿಗೆ ತೃಪ್ತಿ ಸಿಗಲಿಲ್ಲ.

ಈ ಸಮಯದಲ್ಲಿ ತನ್ನ ಕದಡಿದ ಮನಸ್ಸಿಗೆ ಶಾಂತಿಯನ್ನು ನೀಡಿದ ಷೋಪನ್‌ಹೌರ್ (Schopenhauer) ಎಂಬ ಪ್ರಸಿದ್ಧ ಜರ್ಮನ್ ದಾರ್ಶನಿಕನ ಗ್ರಂಥ ಈತನ ಕೈಗೆ ಸಿಕ್ಕಿತು. "ಸೃಷ್ಟಿ ಇಚ್ಛಾಶಕ್ತಿಯ ಆವಿಷ್ಕಾರ" (*World as Will and Idea*) ಎಂಬ ಈ ಗ್ರಂಥವನ್ನು ಓದಿದೊಡನೆ ತನಗೆ ಅನುಗುಣವಾದ ದರ್ಶನ ಇಲ್ಲಿ ದೊರಕಿತೆಂದು ಮನಗಂಡನು. ಈ ಕನ್ನಡಿಯಲ್ಲಿ ತನ್ನ ಪ್ರತಿಬಿಂಬವನ್ನು ಕಂಡುಕೊಂಡನು. ಷೋಪನ್‌ಹೌರನ ಪ್ರತಿಯೊಂದು ವಾಕ್ಯವೂ ಇವನ ಹೃದಯಕ್ಕೆ ನಾಟಿತು. ಜಗತ್ತು ಆತ್ಮನ ಮನಸ್ಸಿನಲ್ಲಿ ಇಚ್ಛಾರೂಪವಾಗಿ ಉದ್ಭವಿಸಿದ ಭಾವತರಂಗ (Idea) ಎಂಬ ಷೋಪನ್‌ಹೌರನ ತತ್ವ ಇವನಿಗೆ ಒಪ್ಪಿತು. ನೀಚ್ಚೆಯ ಮಾನಸಿಕ ಪ್ರಪಂಚವು ಅಲ್ಲಕಲ್ಲೋಲವಾಯಿತು. ಆ ಪ್ರಚಂಡಭಾವನಾತರಂಗಗಳ ವೇಗದಲ್ಲಿ ಇವನ ಆತ್ಮ ಕೊಚ್ಚಿಹೋಯಿತು. ಈ ವಿಚಾರ ವಿಮರ್ಶೆಗಳ ಮುಂದೆ ಯಾವುವೂ ನಿಲ್ಲಲಾರದೇ ಹೋದುವು. ಮಾನವನು ಬಹು ಶ್ರಮದಿಂದ ಕಟ್ಟಿದ್ದ ಮತಗಳು ಉರುಳಿದವು; ಧಾರ್ಮಿಕ ಭಾವನೆಗಳು ಚಂಡಾಡಿದವು; ಜಗತ್ತು ಗೌರವದಿಂದಲೂ ಪೂಜ್ಯಭಾವದಿಂದಲೂ ಆರಾಧಿಸುತ್ತಿದ್ದ ಧರ್ಮಪ್ರವಾದಿಗಳನ್ನು ಮರುಳರೆಂದೂ ಶಕ್ತಿಹೀನರೆಂದೂ,

ತಮ್ಮ ಶಕ್ತಿಹೀನತೆಯನ್ನೇ ಧರ್ಮವಾಗಿ ಬೋಧಿಸಿದ ಮೂಢರೆಂದೂ ಹಳಿದನು. ತನ್ನೊಳಗೆ ಕುದಿಯುತ್ತಿದ್ದ ಭಾವನೆಗಳನ್ನು ಹೊರಗೆಳೆದು ಸಮಾಜದಲ್ಲಿ ಕ್ರಾಂತಿಯನ್ನುಂಟುಮಾಡುವ ಪ್ರಯತ್ನವನ್ನು ಬೇರೊಂದು ವಿಧದಲ್ಲಿ ಸಾಧಿಸಲಾರದವನಾಗಿ ಬರವಣಿಗೆಯ ರೂಪದಲ್ಲಿ ಹೊರಗೆಡಹಿದನು. ಇವನ ಬರಹವನ್ನು ಓದಿದವರಿಗೆ ಇವನೇನು ಉನ್ಮತ್ತನೋ ಇಲ್ಲ ವಿಭೂತಿ ಪುರುಷನೋ ಎಂಬ ಸಂದೇಹ ಹುಟ್ಟಿತು. ಬಲ, ಅತಿಬಲ, ಮಹಾಬಲ ಇವುಗಳಿಗಾಗಿ ಹಾತೊರೆಯುವ ಶಕ್ತಿಯ ಉಪಾಸಕನಾದನು. ತಾನು ಕಂಡುಕೊಂಡ ಶಕ್ತಿಸಿದ್ಧಾಂತವನ್ನು ಪ್ರಪಂಚಕ್ಕೆ ಸಾರಿ ಕೃತಕೃತ್ಯನಾದನು.

ಸಿದ್ಧಾಂತದಲ್ಲಿ ಶಕ್ತಿಯ ಉಪಾಸಕನಾದ ನೀಚೆ ಕಾರ್ಯಪ್ರಪಂಚದಲ್ಲಿಯೂ ಅದರ ಸಾಧಕನಾಗಲು ಬಯಸಿ ತನ್ನ ಇಪ್ಪತ್ತುಮೂರನೆಯ ವಯಸ್ಸಿನಲ್ಲಿ ಸೈನ್ಯಕ್ಕೆ ಸೇರಿದನು. ಈ ಸೈನಿಕವೃತ್ತಿ ಬಹಳ ಬೇಗ ಕೊನೆಗಂಡಿತು. ಕುದುರೆಯ ಮೇಲಿಂದ ಬಿದ್ದು ಎದೆಗೆ ಬಲವಾದ ಪೆಟ್ಟು ತಗಲಿ ಸೈನಿಕವೃತ್ತಿಯನ್ನು ಬಿಡಬೇಕಾಯಿತು. ಇದಾದ ಮೇಲೆ ಇದರಿಂದ ಸಂಪೂರ್ಣವಾಗಿ ಚೇತರಿಸಿಕೊಳ್ಳಲೇ ಇಲ್ಲ. ಆದರೆ ಅದರ ವ್ಯಾಮೋಹ ಮಾತ್ರ ಮನಸ್ಸಿನಲ್ಲಿ ಉಳಿಯಿತು. ಸೈನಿಕನ ಪರಾಕ್ರಮ, ಮೃತ್ಯುವನ್ನು ಎದುರಿಸುವ ಕೆಚ್ಚು, ನಾಯಕನೊಬ್ಬನನ್ನು ಏನಾದರೂ ಸರಿಯೆ ಹಿಂಬಾಲಿಸಿ ಹೋಗುವ ಶಿಸ್ತು, ಕಷ್ಟಸಹಿಷ್ಣುತೆ, ಮುಖ್ಯವಾಗಿ ಶೌರ್ಯಪ್ರದರ್ಶನಕ್ಕೆ ಅವಕಾಶ—ಇವೆಲ್ಲವೂ ಅತ್ಯುತ್ತಮ ಗುಣಗಳೆಂದು ಭಾವಿಸಿದನು.

ಯೋಧಜೀವನ ತಪ್ಪಿತು. ಇನ್ನಾದರೂ ಮಾಡುವುದೇನು? ವಿಶ್ವವಿದ್ಯಾನಿಲಯ ಒಂದರಲ್ಲಿ ಭಾಷಾಶಾಸ್ತ್ರದ ಅಧ್ಯಾಪಕನಾದನು. ಶಾಸ್ತ್ರವ್ಯಾಸಂಗದಲ್ಲಿ ನಿರತನಾಗಿದ್ದ ಇವನಿಗೆ ಬಿಡುವಾದಾಗ ಸಂಗೀತದ ಅಭ್ಯಾಸದಲ್ಲಿ ಕಾಲ ಉರುಳಿತು. ಪಿಯಾನೋ ನುಡಿಸುವುದನ್ನು ಕಲಿತ. ಸಂಗೀತವಿಲ್ಲದ ಜೀವನ ವ್ಯರ್ಥವೆಂದ. ಆದರೆ ಇವನಿಗೆ ಬೇಕಾಗಿದ್ದ ಸಂಗೀತ ಕ್ಷಾತ್ರಸಂಗೀತ, ವೀರರಸ ಪ್ರಧಾನವಾದದ್ದು. ಕ್ಷಾತ್ರ ಸಂಗೀತ ನಿಪುಣರಲ್ಲಿ ಇವನಿಗೆ ಅಚ್ಚುಮೆಚ್ಚಾದವನು ವಾಗ್ನರ್ (Wagner) ಎಂಬ ಪ್ರಸಿದ್ಧ ಗಾಯಕ. ಷೋಪನ್‌ಹಾರ್ ಎಂಬ ದಾರ್ಶನಿಕನನ್ನು ಅತ್ಯುತ್ಸಾಹದಿಂದ ಹೊಗಳಿದಂತೆಯೇ ವಾಗ್ನರ್‌ನನ್ನು ಸಂಗೀತ ಸಾರ್ವಭೌಮನೆಂದು ಕೊಂಡಾಡಿದನು.

ಇವನು ತನ್ನ ಮೊತ್ತಮೊದಲಿನ ಗ್ರಂಥವನ್ನು ಬರೆದದ್ದು ವಾಗ್ನರನ ಸ್ಫೂರ್ತಿಯಿಂದ. ಈ ಗ್ರಂಥಕ್ಕೆ "ರೌದ್ರರಸದ ಸಂಭವ" (*The Birth of Tragedy*) ಎಂದು ಹೆಸರಿಟ್ಟನು. ವಾಣಿಯ ವೀಣಾವೇದಿಕೆಯಿಂದ ಪ್ರಳಯರುದ್ರನ ನಾಟ್ಯಲೀಲೆ ಹೊರಹೊಮ್ಮಿದುದು ಈ ಗ್ರಂಥದ ಮುಖ್ಯ ವಿಷಯವೆಂದು ಪ್ರತಿಪಾದಿಸಿದನು. ಆ ಗ್ರಂಥದ ತಾತ್ಪರ್ಯವಿದು:

ಗ್ರೀಕರು ಕಲಾನಿಪುಣರೆಂದೂ ಸೌಂದರ್ಯೋಪಾಸಕರೆಂದೂ ಹೆಸರುಗೊಂಡ ರಷ್ಟೆ. ಇವರ ಕಲೋಪಾಸನೆಯ ಅಧಿದೇವತೆಗಳು ಇಬ್ಬರು—ಡಯಾನಿಸಸ್ (Dionysus) ಮತ್ತು ಅಪೋಲೊ (Apollo). ಡಯಾನಿಸಸ್ ಭೋಗಜೀವನದ ಅಧಿದೇವತೆ; ಅಪೋಲೊ ಯೋಗಜೀವನದ ಅಧಿದೇವತೆ. ಡಯಾನಿಸಸನ ಮಾರ್ಗ ಪುಷ್ಟಿಮಾರ್ಗ. ಇಂದ್ರಿಯರಂಜಕಗಳಾದ ಸಾಹಿತ್ಯ, ಸಂಗೀತ, ಶೃಂಗಾರ, ನಾಟ್ಯ, ಭೋಜನವಸನಗಳು ಡಯಾನಿಸಸನ ಅನುಯಾಯಿಗಳಿಗೆ ಪ್ರಿಯವಾದುವು. ಶಾಂತಿ ಮಾರ್ಗ ಸಾಧನವಾದ ಸಾಹಿತ್ಯಸಂಗೀತಕಲೆಗಳು, ಜಪತಪಧ್ಯಾನಾದಿಗಳು, ವೈರಾಗ್ಯ ಪ್ರಸನ್ನತೆಗಳು ಅಪೋಲೊವಿನ ಅನುಯಾಯಿಗಳಿಗೆ ಹಿತವಾದುವು. ಒಂದು ಪ್ರವೃತ್ತಿ ಪರವಾದುದು, ಮತ್ತೊಂದು ನಿವೃತ್ತಿಪರವಾದುದು. ಒಂದು ಪುರುಷಶಕ್ತಿ, ಮತ್ತೊಂದು ಸ್ತ್ರೀಶಕ್ತಿ. ಹೀಗೆ ಈ ಎರಡು ಧ್ಯೇಯಗಳು ಪರಸ್ಪರ ವಿರುದ್ಧವಾಗಿ ಕಂಡರೂ ಉತ್ಕೃಷ್ಟವಾದ ಗ್ರೀಕರ ಕಲೆಯಲ್ಲಿ ಇವುಗಳ ಸಮನ್ವಯ ಕಂಡುಬಂದಿತು. ಯೋಗ ಭೋಗಗಳ ಸಾಮರಸ್ಯ, ಶಾಂತಿ ಶೃಂಗಾರಗಳ ಪರಸ್ಪರಾನುಸರಣ, ಪ್ರವೃತ್ತಿನಿವೃತ್ತಿ ಗಳ ಸಂಯೋಜನ, ಸ್ತ್ರೀಶಕ್ತಿ ಪುರುಷಶಕ್ತಿಗಳ ಮೇಳ—ಇವುಗಳಿಂದ ಗ್ರೀಕರ ಕಲಾ ನೈಪುಣ್ಯವು ಸೌಂದರ್ಯದ ಕಣಿಯಾಗಿತ್ತು. ಆದರೆ ಅಪೋಲೊವಿನ ಅಂಶ ಹೆಚ್ಚುತ್ತಾ ಡಯಾನಿಸಸನ ಅಂಶ ಗ್ರೀಕರ ಸಂಸ್ಕೃತಿಯಲ್ಲಿ ಕಡಮೆಯಾಗುತ್ತಾ ಬಂತು. ಗ್ರೀಕರು ತೇಜೋಹೀನರಾದರು. ಅವರಲ್ಲಿ ಪೌರುಷಪ್ರಯುಕ್ತವಾದ ಡಯಾನಿಸಸನ ಅಂಶ ಕಡಮೆಯಾಯಿತು. ಇದರಿಂದ ಜಗದ್ವಿಖ್ಯಾತವಾದ ಗ್ರೀಕರ ಸಂಸ್ಕೃತಿ ಅಳಿಯಿತು. ಇದು ಗ್ರೀಕ್ ಸಂಸ್ಕೃತಿಯ ದುರಂತ ನಾಟಕದ ವಸ್ತು. ನಮ್ಮ ಮನಸ್ಸಿನಲ್ಲಿ ತುಂಬಿದ ಕಲ್ಮಷವನ್ನು ತೊಳೆದು ನಮ್ಮನ್ನು ಸ್ವಚ್ಛಮಾಡುವ ಕೆಲಸ ದುರಂತನಾಟಕದ ಉದ್ದೇಶವೆಂದು ಅರಿಸ್ಟಾಟಲ್ ಹೇಳಿದಾನೆ. ಇದರಿಂದ ಜರ್ಮನ್ ಜನಾಂಗವು ಸಕಾಲದಲ್ಲಿ ಪಾಠ ಕಲಿಯುವುದಿದೆ. ಜರ್ಮನರು ನಿವೃತ್ತಿಯ ದಾರಿಯನ್ನು ಹಿಡಿಯ ದಿರಲಿ. ಡಯಾನೀಸಸನ ಪಂಥವನ್ನು ಹಿಡಿದು ತಮ್ಮ ಜೀವನದ ಉದ್ದೇಶವನ್ನು ನೆರವೇರಿಸಿಕೊಳ್ಳಲಿ. ಡಯಾನಿಸಸನ ಪ್ರವೃತ್ತ್ಯಾತ್ಮಕ ಪುರುಷಶಕ್ತಿ ಜರ್ಮನರಲ್ಲಿ ಹೊಸತಾಗಿ ಅವತರಿಸಲಿ. ಇದರಿಂದ ಹೊಸ ಜರ್ಮನ್ ಸಂಸ್ಕೃತಿಯ ಉದಯ ವಾಗುವುದಿದೆ. ಇದರ ಮುಂಬೆಳಗನ್ನು ವಾಗ್ನರನ ವೀರಾವೇಶಯುತವಾದ ಕ್ಷಾತ್ರ ಸಂಗೀತದಲ್ಲಿ ಕಾಣುತ್ತೇವೆ. ಈ ನವೋದಯ (Renaissance) ಸಂಗೀತದಿಂದ ಜರ್ಮನರ ರೌದ್ರಸಂಸ್ಕೃತಿ ಹುಟ್ಟಲಿ. ವೀರಾದಿವೀರರ ರಣರಂಗ ನಮ್ಮದು. ಇದರಿಂದ ಜಗತ್ತಿನ ಒಡೆಯತನ ನಮ್ಮದು—ಹೀಗೆಂದು ನೀಚ಼ೆ ಆ ರುದ್ರಗ್ರಂಥದಲ್ಲಿ ಬರೆದಿಟ್ಟನು.

ಸ್ವಲ್ಪ ಕಾಲವಾದನಂತರ ವಾಗ್ನರನು ಮಾನವರ ಎದೆಯನ್ನು ಕರಗಿಸುವ ಪ್ರೇಮ, ಕನಿಕರ, ಸ್ತ್ರೀಸ್ವಭಾವಾನುಗುಣವಾದ ಮಾರ್ದವ—ಇವುಗಳನ್ನು ತನ್ನ ಸಂಗೀತದಲ್ಲಿ ಬೆರಸಿ ಅದನ್ನು ಕೇಳಿದ ಜನರು ಕಣ್ಣೀರಿಡುವಂತೆ ಮಾಡಿದನು. ಮೊದಲು ವೀರರಸ ಪ್ರಧಾನವಾದ ಕೃತಿಗಳನ್ನೇ ರಚಿಸಿ ಜನರನ್ನು ಹುರಿದುಂಬಿಸುತ್ತಿದ್ದ ವಾಗ್ನರನು ಈಗ ಕರುಣರಸಕ್ಕೆ ಪ್ರಾಶಸ್ತ್ಯ ಕೊಟ್ಟನು. ನೀಚ಼ೆ ಕೆಲಸ ಕೆಟ್ಟಿತೆಂದು ಕೈಹಿಸುಕಿಕೊಂಡನು. ವಾಗ್ನರನಲ್ಲಿಟ್ಟಿದ್ದ ಇವನ ನಿರೀಕ್ಷೆಗಳು ನಿಷ್ಫಲವಾದುವು. ನೀಚ಼ೆಯ ಸ್ವಭಾವವೂ ಮೃದುವಾದ ಸ್ವಭಾವವೇ. ಆದರೆ ಈ ಮಾರ್ದವವು ಬಲಹೀನತೆಯ ಗುರುತೆಂದು ಭಾವಿಸಿ ಅದನ್ನು ತೊಡೆದುಹಾಕುವುದು ಯುಕ್ತವೆಂದು ನಂಬಿದ್ದನು. ವೀರನಾದವನು, ಧೀರನಾದವನು ಇಂತಹ ಹೃದಯದೌರ್ಬಲ್ಯಕ್ಕೆ ಎಡೆಕೊಡಕೂಡದೆಂದು ತನ್ನೊಳಗೇ ತರ್ಕಿಸಿಕೊಂಡನು. ಕಠೋರತೆ ಆವಶ್ಯಕವಾದ ಕಾಲದಲ್ಲಿ ಹೃದಯದೌರ್ಬಲ್ಯಕ್ಕೆ ಬೆಂಬಲಕೊಡುವ ಸಂಗೀತವನ್ನು ನಿರ್ಮಾಣಮಾಡಿದನೆಂದು ವಾಗ್ನರನ ಮೇಲೆ ರೇಗಿಬಿದ್ದನು. ಎಲ್ಲರೂ ಕೊಂಡಾಡುತ್ತಿದ್ದ ವಾಗ್ನರನನ್ನು ತ್ಯಜಿಸಿದನು; ಅವನನ್ನು ವಾಚಾಮಗೋಚರವಾಗಿ ಬೈದನು.

ನೀಚ಼ೆಯ ಕದಡಿದ ಚಿತ್ತಕ್ಕೆ ಕಲೋಪಾಸನೆಯಲ್ಲಿ ಶಾಂತಿ ಸಿಕ್ಕದಂತಾಯಿತು. ತತ್ವಚಿಂತನೆಯಲ್ಲಿ ಮನಸ್ಸನ್ನು ಸ್ತಿಮಿತಕ್ಕೆ ತರಲು ಪ್ರಯತ್ನಿಸಿದನು. ಮನಸ್ಸಿನ ಅಶಾಂತಿಯಿಂದ ದೇಹದ ಆರೋಗ್ಯವೂ ಕೆಟ್ಟಿತು. ಹಾಸಿಗೆ ಹಿಡಿಯುವಷ್ಟು ರೋಗ ಬಲಿಯಿತು. ಒಂದು ದಿನ, ಸಾವು ಸಮೀಪಿಸಿತೆಂದು ಭಾವಿಸಿ, ತನ್ನ ಸಹೋದರಿಯನ್ನು ಕರೆದು “ ನಾನು ಸತ್ತಮೇಲೆ ನನ್ನ ಶವದ ಸುತ್ತಲೂ ನನ್ನ ಆಪ್ತಸ್ನೇಹಿತರಲ್ಲದೆ ಇತರರ ಗುಂಪು ಸೇರದಂತೆ ನೋಡಿಕೊಳ್ಳುವೆನೆಂದು ಮಾತುಕೊಡು. ನನ್ನ ಗೋರಿಯ ಸಮೀಪದಲ್ಲಿ ನಿಂತು ಪುರೋಹಿತನು ಇಲ್ಲದ ಸಲ್ಲದ ಸುಳ್ಳುಪೊಳ್ಳು ಮಾತುಗಳನ್ನು ಹೇಳದಿರಲಿ; ಸತ್ಯನಿಷ್ಠನಾದ ವ್ರಾತ್ಯನಾಗಿಯೇ (‘ Honest pagan ’) ನನ್ನನ್ನು ಸಾಯಬಿಡಿರಿ ” ಎಂದನು. ಆದರೆ ರೋಗ ವಾಸಿಯಾಯಿತು. ಮನಸ್ಸೂ ಸ್ವಲ್ಪಮಟ್ಟಿಗೆ ಸ್ತಿಮಿತಕ್ಕೆ ಬಂದಿತು. ಅನಾರೋಗ್ಯದಿಂದ ಆರೋಗ್ಯದ ಮಹತ್ವದ ಅರಿವಾಯಿತು. ದೌರ್ಬಲ್ಯದಿಂದ ಬಲದ ಮಹಿಮೆಯನ್ನು ಅರಿತನು. ತಿರಸ್ಕಾರದಿಂದ ಪುರಸ್ಕಾರದ ಬೆಲೆ ತಿಳಿಯಿತು. ಆರೋಗ್ಯ, ಬಲ, ಪುರಸ್ಕಾರ ಇವುಗಳೇ ಜೀವನದಲ್ಲಿ ಮುಖ್ಯವೆಂದು ತೀರ್ಮಾನಮಾಡಿ ಇವುಗಳ ಮೇಲ್ಮೆಯೇ ತಿರುಳಾದ ತನ್ನ ಶಕ್ತಿ ಸಿದ್ಧಾಂತವನ್ನು ಕಟ್ಟಿದನು. ಆರೋಗ್ಯ ಸಾಧನೆಗಾಗಿ ಆಲ್ಪ್ಸ್ ಪರ್ವತಸ್ತೋಮದಲ್ಲಿ ಕೆಲಕಾಲ ಉಳಿದನು. ಪರ್ವತಾಗ್ರದ ಮೇಲೆ ನಿಂತು ಪ್ರಕೃತಿಯ ರೂಪಾಂತರಗಳನ್ನು ಅನುದಿನವೂ ಕಾಣುತ್ತಿದ್ದ ನೀಚ಼ೆಗೆ ಒಂದು ಹೊಸ ಸ್ಫೂರ್ತಿ ಉಂಟಾಯಿತು. ಆ ಸ್ಫೂರ್ತಿ

ಯ ಫಲವೇ "ಇಂತೆಂದನಾ ಜ಼ಾರತುಷ್ಟ್ರಂ" (*Thus Spake Zarathushtra*) ಎಂಬ ಗ್ರಂಥ. ಈ ಗ್ರಂಥಕ್ಕೆ ಜ಼ಾರತುಷ್ಟ್ರನ ಹೆಸರನ್ನಿಟ್ಟಿದ್ದಕ್ಕೆ ಅನೇಕ ಕಾರಣಗಳಿದ್ದಿರಬಹುದು. ಬಹುಶಃ 'ಜಾರತುಷ್ಟ್ರ' ಎಂಬ ಮಾತಿನಲ್ಲಿ ಐರೋಪ್ಯರು ಕಂಡರಿಯದ ಶಬ್ದಶಕ್ತಿ ಇದೆ ಎಂದು ಭಾವಿಸಿರಬಹುದು. ಅಥವಾ ಆತನ ತತ್ವಗಳಲ್ಲಿ ಕೆಲವು ಅಂಶಗಳು ನೀಚ಼್ಷೆಗೆ ಒಪ್ಪಿಗೆಯಾಗಿದ್ದಿರಬಹುದು. ಅಂತು ಓದುಗರ ಮನಸ್ಸಿಗೆ ನಾಟುವ ಹೆಸರು ಇದಾಯಿತು. ಜ಼ಾರತುಷ್ಟ್ರನಿಂದ ತನಗೆ ಸ್ಫೂರ್ತಿ ಬಂದ ವಿಷಯವಾಗಿ ಈ ಪದ್ಯದಲ್ಲಿ ಹೀಗೆ ಹೇಳಿದ್ದಾನೆ.

ದಿಗಂತದೃಷ್ಟಿಯಾಗಿ ನಿಂತೆ, ಪರ್ವತಾಗ್ರದಲಿ;
ಕಾದೆ, ಕಾದೆ, ಕಾದೆ—ಯಾವುದಕೊ ನಾನರಿಯೆ.
ನೆಳಲೊಮ್ಮೆ, ಬೆಳಕೊಮ್ಮೆ, ಸುಳಿದು ನಲಿಯುತಿರೆ, ಪುಣ್ಯಪಾಪಗಳ
ಸೋಂಕಿಲ್ಲದ ಆನಂದವನನುಭವಿಸುತಿದ್ದೆ.
ಅಲ್ಲಿ ಹಗಲಿತ್ತು.
ಅಲ್ಲಿ ಕನ್ನಡಿಯ ತೆರನ ತಿಳಿಗೊಳವಿತ್ತು;
ಅಲ್ಲಿ ನಡುವಗಲಿನ ತಿಳಿಬಾನಿತ್ತು.
ಇಂತು ಕೊನೆಮೊದಲಿಲ್ಲದ ಕಾಲದ ತೇರುರುಳಿತ್ತು.
ಅಲ್ಲಿ, ಬಾಳ್ಗೆಳೆಯ, ತಕ್ಕನೆ ಒಂದೆರಡಾಯ್ತು;
ಬಳಿಸುಳಿದುದು ಜ಼ಾರತುಷ್ಟ್ರನ ಮಹಚ್ಛಾಯೆ!

ತನ್ನ ಹೊಸ ಸಿದ್ಧಾಂತವನ್ನು ಜ಼ಾರತುಷ್ಟ್ರನ ಹೆಸರಿನಲ್ಲಿ ಸಾರಿದ. ಜ಼ಾರತುಷ್ಟ್ರನು ಪ್ರಾಚೀನ ಇರಾನಿಯರ ಗುರುದೇವ, ಮತಸ್ಥಾಪಕ. ಈತನ ಉಪದೇಶದ ಸಾರಾಂಶವಿದು: ಜಗತ್ತಿನಲ್ಲಿ ನಮಗೆ ಕಾಣುವುದು ಪಾಪಪುಣ್ಯಗಳ ದ್ವಂದ್ವಯುದ್ಧ. ದೇವದಾನವರ ಹೋರಾಟ. ಈ ಹೋರಾಟದಲ್ಲಿ ಮಾನವರೆಲ್ಲರೂ ಭಾಗಿಗಳು. ಮನೋವಾಕ್ಕಾಯಗಳಲ್ಲಿ ಪರಿಶುದ್ಧರಾಗಿ ದೇವತ್ವದ ಕಡೆಗೆ ಬಾಗಿದ ಮಾನವರು ಕೆಲವರು, ಆಸುರೀಸ್ವಭಾವದವರು ಮತ್ತೆ ಕೆಲವರು. ಇವರಿಬ್ಬರಿಗೂ ಹೋರಾಟ ಸಂತತವಾಗಿ ನಡೆಯುವುದೇ ಜಗತ್ತಿನ ಗತಿ. ಈ ಹೋರಾಟದಲ್ಲಿ ಧರ್ಮದ ಗೆಲವಿಗಾಗಿ ಅಧರ್ಮದ ಸೋಲಿಗಾಗಿ ಪ್ರಯತ್ನಿಸುವುದು ಮಾನವರ ಧ್ಯೇಯವಾಗಿರಬೇಕು. ಇದಕ್ಕಾಗಿ ಬೇಕಾದ ಸಾಮರ್ಥ್ಯವನ್ನು ಮಾನವನು ಗಳಿಸಬೇಕು. ಯಾವುದು ಹೇಗಾದರೂ ಹೋಗಲಿ ಎಂದು ಕೈಕಟ್ಟಿ, ಹಣೆಯುಬರಹವೆಂದು ಕುಳಿತುಕೊಳ್ಳುವುದು ಪುರುಷಲಕ್ಷಣವಲ್ಲ. ಸಾಹಸಜೀವನ ನಮ್ಮದಾಗಬೇಕು. ಇದರಲ್ಲಿ ಅಪಾಯ ಉಂಟು. ಆದರೆ ಅದಕ್ಕಾಗಿ ಹಿಂಜರಿಯಬಾರದು. ಸತತವಾದ ಉದ್ಯೋಗವೇ ಪುರುಷಲಕ್ಷಣ. ನಿವೃತ್ತಿಮಾರ್ಗಕ್ಕಿಂತಲೂ ಪ್ರವೃತ್ತಿಮಾರ್ಗವೇ ಶ್ರೇಷ್ಠ. ಇವು

ಜ಼ಾರತುಷ್ಟ್ರನ ಮತದ ಮುಖ್ಯಾಂಶಗಳು. ಇವನ್ನು ಸೂತ್ರವಾಗಿಟ್ಟುಕೊಂಡು ನೀಚ಼ೆ ತನ್ನ ಸಿದ್ಧಾಂತವನ್ನು ರಚಿಸಿದನು.

ನೀಚ಼ೆ ಭಾವಿಸಿದ ಜ಼ಾರತುಷ್ಟ್ರನು ಮೂವತ್ತು ವಯಸ್ಸಿನ ಯುವಕ. ಪರ್ವತದ ಗುಹೆಯೊಂದರಲ್ಲಿ ಧ್ಯಾನಾಸಕ್ತನಾಗಿದ್ದು ಸಿದ್ಧಿಪಡೆದವನಾಗಿ ಲೋಕದ ಜನರಿಗೆ ಉಪದೇಶ ಮಾಡಲು ಕೆಳಗಿಳಿದುಬರುತ್ತಾನೆ. ಜನರ ಗುಂಪು ಒಂದು ಕಡೆ ಸೇರಿದೆ. ಅಲ್ಲಿ ಡೊಂಬರವನೊಬ್ಬ ಅಪಾಯದ ಆಟವೊಂದನ್ನು ತೋರಿಸುತ್ತಿದ್ದಾನೆ. ಎತ್ತರದಲ್ಲಿ ಒಂದು ಹಗ್ಗಕಟ್ಟಿ ಹಗ್ಗದ ಮೇಲೆ ಒಂದು ಕಡೆಯಿಂದ ಮತ್ತೊಂದು ಕಡೆಗೆ ನಡೆಯುತ್ತಿರುತ್ತಾನೆ. ಎಲ್ಲರೂ ಎವೆಯಿಕ್ಕದೆ ನೋಡುತ್ತಿದ್ದಹಾಗೆ ಜಾರಿ ಕೆಳಗೆ ಬೀಳುತ್ತಾನೆ. ಮೃತಿಹೊಂದುತ್ತಾನೆ. ಇದನ್ನು ನೋಡುತ್ತಿದ್ದ ಜ಼ಾರತುಷ್ಟ್ರನು ದಾರಿ ಬಿಡಿಸಿಕೊಂಡು ಅವನೆಡೆಗೆ ಬಂದು ಅವನನ್ನು ಹೆಗಲ ಮೇಲೆ ಹಾಕಿಕೊಂಡು ನಡೆಯುತ್ತಾನೆ. ಜನರು ಮುಗ್ಧರಾಗಿ ನೋಡುತ್ತಿರಲು, "ನಿನ್ನ ಜೀವನವೀಗ ಸಾಹಸ ಜೀವನ, ಆದ್ದರಿಂದ ನನ್ನ ಕೈಯಿಂದಲೇ ನಿನಗೆ ಅಂತ್ಯಕ್ರಿಯೆಯನ್ನು ಸಲ್ಲಿಸುತ್ತೇನೆ" ಎನ್ನುತ್ತಾನೆ. "ಅಪಾಯದ ಬಾಳನ್ನು ಬಾಳಿ!" ("Live dangerously") ಎಂದು ಅವರಿಗೆ ತನ್ನ ವೀರಸಂದೇಶವನ್ನು ಸಾರುತ್ತಾನೆ.

ಈ ಗ್ರಂಥವನ್ನು ತೆರೆಯುತ್ತಿದ್ದಹಾಗೆ ಈ ವಾಕ್ಯ ನಮ್ಮ ಕಣ್ಣಿಗೆ ಬೀಳುತ್ತದೆ:

> ಕೇಳಿರೈ, ಸೋದರರೆ, ಮರ್ತ್ಯವ ನೆಚ್ಚಿ ಬಾಳಿ.
> ಕಿವಿಗೊಡದಿರಿ ಅಮರ್ತ್ಯಭೋಗದ ಕಟ್ಟುಕತೆಗಳಿಗೆ.
> ತಿಳಿದಿರಲಿ ತಿಳಿಯದಿರಲಿ ಅವರದು ಗರಳಸದೃಶ ಮಿಥ್ಯಾವಾಣಿ.

"ಇಂತೆಂದನಾ ಜ಼ಾರತುಷ್ಟ್ರಂ" ಗ್ರಂಥದ ಮೂಲ ತತ್ವಗಳ ವ್ಯಾಖ್ಯಾನವೇ ನೀಚ಼ೆಯ ಇತರ ಗ್ರಂಥಗಳೆಂದು ಧಾರಾಳವಾಗಿ ಹೇಳಬಹುದು. ಈ ಎಲ್ಲ ಗ್ರಂಥಗಳ ಸಿದ್ಧಾಂತ ಶಕ್ತಿ ಸಿದ್ಧಾಂತ.

ಆ ಶಕ್ತಿ ಸಿದ್ಧಾಂತವನ್ನು "The cult of the Superman" ಎಂದರೆ "ಅತಿಮಾನವ ಪಂಥ" ಎಂದು ಕರೆಯುವ ವಾಡಿಕೆ ಇದೆ. "ಹಿಂದಿನ ದೇವರುಗಳೆಲ್ಲ ಮಡಿದರು. ಅತಿ ಮಾನವನ ಅವತಾರವಾಗುವುದಿದೆ, ಅವನ ಮುಂದಾಳುಗಳು ನಾವು" ಎಂದು ಸಾರಿದನು ನೀಚ಼ೆ. ಈ ಅತಿಮಾನವನಿಗಾಗಿ ಲೋಕ ಕಾಯುತ್ತದೆ ಎಂದು ನೀಚ಼ೆ ದೃಢವಾಗಿ ನಂಬಿದ್ದನು. ಈ ಅತಿಮಾನವನು ಎಂಥವನು? ಎಲ್ಲರನ್ನೂ ತನ್ನ ಹುಟ್ಟುದರ್ಪದಿಂದ ತನ್ನಾಡಳಿತಕ್ಕೆ ಒಳಪಡಿಸಿಕೊಳ್ಳುವ ಸಾಮರ್ಥ್ಯವುಳ್ಳವನು. ಈ ಸಾಮರ್ಥ್ಯದಲ್ಲಿ ಇವನಿಗೆ ಸರಿಗಟ್ಟುವವರು ಇನ್ನಾರೂ ಇರಲಾರರು. ಇಂಥ ಅತಿಮಾನವನಿಗೆ ಅಡಿಯಾಳುಗಳಾಗಿರುವುದರಲ್ಲಿ ಇತರ ಜನರು ತೃಪ್ತಿಪಡೆಯು

ತ್ತಾರೆ. ಅತಿಮಾನವನ ಕೈಂಕರ್ಯವೇ ಇತರ ಜನರ ಶ್ರೇಯೋಜೀವನದ ಸಾರ. ಈ ಅತಿಮಾನವನು ಗುಣವಂತ, ವೀರ್ಯವಂತ, ಸರ್ವಜ್ಞ, ಸರ್ವಶಕ್ತ, ಲೋಕ ರಕ್ಷಕ. ಇಂತಹ ಅತಿಮಾನವನ ಉದ್ಭವಕ್ಕಾಗಿ ಎಷ್ಟೋ ಜನರು ತಮ್ಮ ಸ್ವಾರ್ಥ ವನ್ನೂ ಸುಖವನ್ನೂ ಬದಿಗಿಟ್ಟು ದುಡಿಯಲು ಸಿದ್ಧರಾಗಬೇಕು. ಹಾಗಾಗುವುದ ರಲ್ಲೇ ಒಂದು ಸಂತೋಷವಿದೆ, ತೃಪ್ತಿಯಿದೆ. ಮಹಾತ್ಮನೊಬ್ಬನ ಪದಾನುಸರಣ ದಲ್ಲಿಯೇ ತೃಪ್ತಿ ಸಂತೋಷಗಳನ್ನು ಪಡೆಯುವವರೇ ಲೋಕದಲ್ಲಿ ಹೆಚ್ಚು ಮಂದಿ ಇರುವರು. ಇದನ್ನು ಮೀರಿದ ಸಂತೋಷ ಅವರಿಗೆ ಬೇರೊಂದಿಲ್ಲ. ಇದೇ ಅವರ ತತ್ವ, ಹಿತ, ಪುರುಷಾರ್ಥ. ಇತರರು ಅತಿ ಮಾನವನಿಗಾಗಿ ಸ್ವಾರ್ಥತ್ಯಾಗ ಮಾಡ ಬೇಕಾದ ಅಗತ್ಯವೇನು?—ಅದು ನಿಸರ್ಗನಿಯಮ; ನಮ್ಮ ಸ್ವರೂಪಸಿದ್ಧಿಯೇ ಅತಿಮಾನವನ ಸೇವೆ. ಮಡಿದ ಹಿಂದಿನ ದೇವರುಗಳ ಸ್ಥಾನದಲ್ಲಿ ನೀಜ಼ೆ ತನ್ನ 'ಅತಿಮಾನವ'ನನ್ನು ಸ್ಥಾಪಿಸಿದನು. ಈ ಹೊಸ ದೇವರ ಆರಾಧನೆಗೆ ಜನರನ್ನು ಕರೆದನು.*

ಈ ಅತಿಮಾನವ ತತ್ವದೊಡನೆ ಮತ್ತೊಂದು ತತ್ವ ಪದೇ ಪದೇ ಅವನ ಗ್ರಂಥ ಗಳಲ್ಲಿ ಗೋಚರವಾಗುವುದು. ಆ ತತ್ವವನ್ನು "Eternal Recurrence" ಅಂದರೆ "ಅವಿರತ ಪ್ರತ್ಯಾವೃತ್ತಿ" ಎಂದು ಕರೆದಿರುವನು. ಜಗತ್ತಿನ ಚಕ್ರ ಅವಿರತವಾಗಿ ತಿರುಗುತ್ತಲೇ ಇರುವುದು. ಹಗಲು ಇರುಳು ಮತ್ತು ಋತುಗಳು ತಿರುಗಿ ತಿರುಗಿ ಬರುವಂತೆ ಸಮಸ್ತ ಚರಾಚರ ವಸ್ತುಗಳೆಲ್ಲವೂ ಹಿಂತಿರುಗುವುವು. ಇದಕ್ಕೆ ಮೊದ ಲಿಲ್ಲ, ಕೊನೆ ಇಲ್ಲ. ಹಾಗೆಯೇ ಅಳಿದ ಜನಾಂಗಗಳು ಪುನಃ ಹುಟ್ಟುವುವು; ಅಳಿದ ಸಂಸ್ಕೃತಿಗಳು ಪುನಃ ಪುನಃ ತಲೆದೋರುವುವು. ಕೊನೆಗೆ ನೀಜ಼ೆ, ಜರ್ಮನಿ, ನಾವು, ನೀವು, ಎಲ್ಲರೂ ಎಷ್ಟೋ ಸಲ ಹಿಂತಿರುಗಿ ಬರಬೇಕು. ಹಿಂದೆ ನಡೆದದ್ದೆಲ್ಲವೂ ಮುಂದೆ ನಡೆಯದೇ ಇರುವುದಿಲ್ಲ. ವ್ಯಕ್ತಿಗಳಿಗೂ, ಜನಾಂಗಗಳಿಗೂ, ಮತಗಳಿಗೂ, ಸಂಸ್ಕೃತಿ ಗಳಿಗೂ ಎಷ್ಟೋ ಜನ್ಮಗಳಾದುವು, ಇನ್ನೆಷ್ಟೋ ಜನ್ಮಗಳಾಗುವುದಿದೆ. ಈ ವಿಧ ವಾದ ಜನ್ಮಜನ್ಮಾಂತರ ಕಾಲವಿಪಾಕದ ಚಕ್ರಾರಪಙ್ಕ್ತಿ ಎಂಬ ವಾದ ನೀಜ಼ೆಯದು.

ಅತಿಮಾನವನಂತಹ ಉದಾತ್ತ ವ್ಯಕ್ತಿ ಅವತರಿಸಬೇಕಾದರೆ ಜಗತ್ತು ಅವನನ್ನು ಸ್ವೀಕರಿಸಲು ಒಂದು ಸಿದ್ಧತೆಯನ್ನು ಪಡೆಯಬೇಕು. ಇದನ್ನು ಪಡೆಯುವುದಕ್ಕಾಗಿ ಅವಲಂಬಿಸಬೇಕಾದ ನೀತಿ ಏನೆಂಬುದನ್ನು ವಿಚಾರಿಸಲು ತೊಡಗಿ ತನ್ನ ಅಭಿಪ್ರಾಯ

---

* ಇಲ್ಲಿ ಕಾರ್ಲೈಲಿನ "ಪುರುಷಶ್ರೇಷ್ಠ ಮತ್ತು ಅವನ ಪೂಜೆ" (*Heroes and Hero Worship*) ಯನ್ನು ನೆನಪಿಗೆ ತಂದುಕೊಳ್ಳಬಹುದು.

ಗಳನ್ನು ನೀಚ್ಚೆ ಎರಡು ಗ್ರಂಥಗಳಲ್ಲಿ[1] ಬರೆದನು. ಹಳೆಯ ದೇವರುಗಳು, ಹಳೆಯ ಮತಗಳು ಮಡಿದಂತೆ ಹಳೆಯ ಕಂದಾಚಾರದ ನೀತಿಗಳು ಅಳಿಯಬೇಕೆಂದು ವಾದಿಸಿ ತನ್ನ ನೀತಿಶಾಸ್ತ್ರವನ್ನು ಪ್ರತಿಪಾದಿಸಿದನು. ಅದರ ಮುಖ್ಯಾಭಿಪ್ರಾಯಗಳು ಈ ರೀತಿ ಇವೆ.

ಪ್ರಕೃತಿ ತಾನೇ ಎರಡು ವಿಧವಾದ ಮಾನವ ಕುಲಗಳನ್ನು ಸೃಷ್ಟಿಸಿದ್ದಾಳೆ. ಕೆಲವರು ಹುಟ್ಟೊಡೆಯರು. ಕೆಲವರು ಹುಟ್ಟಾಳುಗಳು. ಅವರವರಲ್ಲಿರುವ ಶಕ್ತಿಸಂಚಯದ ಪ್ರಮಾಣ ವ್ಯತ್ಯಾಸಗಳೇ ಇದಕ್ಕೆ ಕಾರಣ. ಈ ಶಕ್ತಿಯ ಪ್ರಾದುರ್ಭಾವದಲ್ಲಿ ವ್ಯಕ್ತಿಗತವಾದ ವ್ಯತ್ಯಾಸವಿದೆ—ತಾರತಮ್ಯವಿದೆ. ಈ ತಾರತಮ್ಯಕ್ಕೆ ತಕ್ಕಂತೆ ಮಾನವ ವರ್ಗಗಳು ಏರ್ಪಡುತ್ತವೆ. ಈ ವರ್ಗಗಳಲ್ಲಿ ಉತ್ಕೃಷ್ಟ ಅಪಕೃಷ್ಟ ಎಂಬ ಸಹಜವಾದ ತಾರತಮ್ಯವಿದೆ. ವರ್ಗಗಳ ತಾರತಮ್ಯವಿಲ್ಲದ ಸಮಾಜ ಉಳಿಯುವುದಿಲ್ಲ. ಈ ತಾರತಮ್ಯ ತತ್ವವನ್ನು ಅಂಗೀಕರಿಸುವುದು ನೀತಿಸಿದ್ಧಾಂತಗಳ ಆದ್ಯಕರ್ತವ್ಯ. ಒಬ್ಬನ ಧರ್ಮ ಇನ್ನೊಬ್ಬನಿಗೂ ಧರ್ಮವಾಗಬಲ್ಲದು ಎಂದು ಪ್ರತಿಪಾದಿಸುವುದು ಅನೀತಿ. ವ್ಯಕ್ತಿಗಳಲ್ಲಿ ಉತ್ಕೃಷ್ಟ ಅಪಕೃಷ್ಟ ಎಂಬುವ ವ್ಯತ್ಯಾಸಗಳಿರುವಂತೆ ಜನಾಂಗಗಳಲ್ಲಿಯೂ ಉಂಟು. ಉತ್ಕೃಷ್ಟರ ಧರ್ಮ ಒಂದು; ಅಪಕೃಷ್ಟರ ಧರ್ಮ ಮತ್ತೊಂದು. ಸಮಾಜ ವ್ಯವಸ್ಥೆಯಲ್ಲಿ ಧರ್ಮಸಂಕರವಾಗದ ಹಾಗೆ ಏರ್ಪಾಡುಗಳಿರಬೇಕು. ಒಬ್ಬರ ಧರ್ಮ ಮತ್ತೊಬ್ಬರು ಅವಲಂಬಿಸಿದರೆ ಕೇಡು ತಪ್ಪದು.

ಜಗತ್ತಿನಲ್ಲಿ ಎರಡು ವಿಧವಾದ ನೀತಿಗಳಿವೆ. ಈ ನೀತಿಗಳಲ್ಲಿ ಒಂದನ್ನು ಯಜಮಾನನೀತಿ ಅಥವಾ ಪ್ರಭುನೀತಿ (Master-morality) ಎಂದೂ ಮತ್ತೊಂದನ್ನು ಸೇವಕನೀತಿ ಅಥವಾ ದಾಸನೀತಿ (Slave-morality) ಎಂದೂ ನೀಚ್ಚೆ ಕರೆದಿರುತ್ತಾನೆ. ಒಂದು ಶಕ್ತರ ನೀತಿ, ಮತ್ತೊಂದು ಅಶಕ್ತರ ನೀತಿ. ಅಶಕ್ತರಾದವರು ತಮ್ಮ ಅಶಕ್ತಿಗೆ ತಕ್ಕ ನೀತಿಯನ್ನು ಅವಲಂಬಿಸುತ್ತಾರೆ; ಮತ್ತು ಶಕ್ತಿವಂತರಿಗೆ ಅನುಗುಣವಾದ ಗುಣಗಳನ್ನು ಅಲ್ಲಗಳೆಯುತ್ತಾರೆ. ದಯಾ, ದಾಕ್ಷಿಣ್ಯ, ಪ್ರೀತಿ, ನಯ, ಸಮಾಧಾನ, ಶಾಂತಿ, ವಿಧೇಯತೆ, ತ್ಯಾಗ, ದಾನ, ಇವೆಲ್ಲವೂ ದುರ್ಬಲರು ತಮ್ಮ ದೌರ್ಬಲ್ಯಕ್ಕೆ ತಕ್ಕಂತೆ ಏರ್ಪಡಿಸಿಕೊಳ್ಳತಕ್ಕ ನೀತಿಗಳು. ಈ ಬಾಳು ಎರಡು ದಿನದ ಬಾಳು, ಇವೆಲ್ಲವೂ ನಶ್ವರ, ನಾನು ಕೆಲಸಕ್ಕೆ ಬಾರದವನು ಎಂಬ ಆಭಾಸ ವೇದಾಂತ ದಾಸನೀತಿಯ ವೇದಾಂತ. ಇದು ಸಹಜದಾಸರಾದವರ ಮನೋಭಾವವಾಗಿರಬೇಕಾದುದೇನೋ ಸರಿ. ಆದರೆ ಇಂತಹ ವೇದಾಂತವನ್ನು ಶ್ರೇಷ್ಠವರ್ಗದವರು ಅನುಸರಿಸು

---

[1] ಆ ಗ್ರಂಥಗಳ ಹೆಸರು :

Beyond Good and Evil.
The Genealogy of Morals.

ವುದು ಹಾನಿಕರ. ಇದನ್ನು ಅನುಸರಿಸಿದ್ದರಿಂದಲೇ ಯೂರೋಪಿನ ಜನರು ಕ್ಷೀಣತೆಯನ್ನು ಹೊಂದುತ್ತಿರುವರು. ಇಂತಹ ಮತಗಳು ಏಷ್ಯಾಖಂಡಕ್ಕೆ ಸೇರಿದವು. ತೃಷ್ಣೆಯನ್ನೇ ನಿರ್ಮೂಲಮಾಡಬೇಕೆಂದು ಬೋಧಿಸುವ ಬೌದ್ಧರ ಶೂನ್ಯವಾದ, ಕ್ಷಣಿಕ ವಾದಗಳು ಯೂರೋಪ್ ಸಂಸ್ಕೃತಿಯನ್ನು ಮೂಲೋತ್ಪಾಟನೆಮಾಡುತ್ತಿವೆ.[1] ಸಂನ್ಯಾಸ ಮನೋಭಾವವನ್ನೇ ಪ್ರೋತ್ಸಾಹಿಸುವ ಕ್ರೈಸ್ತಮತವಂತೂ ಯೂರೋಪ್ ಜನರಲ್ಲಿ ದಾಸಭಾವವನ್ನು ರೂಢಿಸುತ್ತಿದೆ. ಈ ಭಾವ ಮಂದೆಗೆ (herd) ಸರಿಯಾದುದೇ ಹೊರತು ಜಗತ್ತಿನಲ್ಲಿ ಶ್ರೇಷ್ಠರೆಂದು ಬಾಳಬೇಕಾದವರಿಗೆ ತಕ್ಕುದಲ್ಲ.[2] ನಮಗೆ ಈಗ ಬೇಕಾದ ನೀತಿ ಯಜಮಾನನೀತಿ. ಜಗತ್ತಿನಲ್ಲಿ ನಾವು ಪ್ರೌಢಿಮೆಯಿಂದ ಬಾಳಬೇಕೆಂದು ಬಯಸುವುದು ಒಳ್ಳೆಯದು. ಹೃದಯದೌರ್ಬಲ್ಯಕ್ಕೆ ಅವಕಾಶಕೊಡದೆ ಬಲಿಷ್ಠರಾಗಿ ಆಢ್ಯತೆಯಿಂದ, ದರ್ಪದಿಂದ, ಬಾಳಬೇಕೆಂದು ಇಷ್ಟಪಡುವುದರಲ್ಲಿ ತಪ್ಪಿಲ್ಲ. ವೈರಾಗ್ಯದ ಮನೋಭಾವ ಹಾನಿಕರ. ಈ ದೇಹ ನಶ್ವರವಾದುದೆಂದು ಭಾವಿಸಿ ಶಾರೀರಕ ಸೌಖ್ಯಗಳನ್ನು ತೊರೆಯುವುದು ಮೌಢ್ಯ. ಇದನ್ನು ಬಿಟ್ಟು ಇನ್ನೆಲ್ಲೋ ಮುಂದೆ ಶಾಶ್ವತ ಸುಖವನ್ನನುಭವಿಸುವೆವೆಂದು ಭಾವಿಸುವುದು ಹಗಲುಗನಸು. ಮಾನವನ ಸ್ವಭಾವದಲ್ಲಿ ಅತ್ಯುತ್ಕೃಷ್ಟವಾದ ಗುಣ ಶೌರ್ಯಗಳು ಭೋಗೇಚ್ಛೆ, ದರ್ಪ. ಜನರು ಸಾಧಾರಣವಾಗಿ "ಸಾಧುತನ" ಎಂದು ಕರೆಯುವುದು "ಹೇಡಿತನ"ದ ಪರ್ಯಾಯ ಶಬ್ದ. ತೀರ ಒಳ್ಳೆಯತನ ನಮ್ಮನ್ನು ಆವರಿಸಿದರೆ ಅಪಾಯ. ಈಗಿರುವುದಕ್ಕಿಂತಲೂ ಇನ್ನೂ ಹೆಚ್ಚು ದೌಷ್ಟ್ಯವನ್ನು ಅಭ್ಯಾಸಮಾಡಿದರೂ ಒಳ್ಳೆಯದೇ.[3] ಮಾರ್ದವಕ್ಕಿಂತಲೂ ಮನಸ್ಸಿನಲ್ಲಿ ಕಾಠಿಣ್ಯವಿದ್ದರೆ ಹೆಚ್ಚು ಪ್ರಯೋಜನ ಉಂಟು. ಶ್ರೇಷ್ಠನಾಗಿ ಬಾಳಬೇಕೆಂದು ಬಯಸುವವನು ತನ್ನಲ್ಲಿ ಆದಷ್ಟುಮಟ್ಟಿಗೆ ರಾಜಸಗುಣಗಳನ್ನು ವೃದ್ಧಿಪಡಿಸಿಕೊಳ್ಳಬೇಕು. ರಾಜಸಗುಣಗಳು ವೃದ್ಧಿಯಾಗಬೇಕಾದರೆ ಅದಕ್ಕೆ ತಕ್ಕಂತೆ ಆಹಾರವಿಹಾರಗಳನ್ನು ಏರ್ಪಡಿಸಿಕೊಳ್ಳಬೇಕು. ಆಹಾರದಲ್ಲಿ ಸಾತ್ವಿಕ, ರಾಜಸ ಎಂಬ ಬೇಧವಿದೆ. ಸ್ಪರ್ಧಾರಂಗವಾದ ಈ ಪ್ರಪಂಚದಲ್ಲಿ ಯಶಸ್ವಿಯಾಗಿ ಬಾಳಬೇಕಾದರೆ ಸಾತ್ವಿಕ ಆಹಾರವನ್ನು ತೊರೆದು ರಾಜಸಾಹಾರವನ್ನು ತೆಗೆದುಕೊಳ್ಳಬೇಕು. ಆಹಾರಕ್ಕೂ ಚಿತ್ತವೃತ್ತಿಗಳಿಗೂ ನಿಕಟ ಸಂಬಂಧವಿದೆಯೆಂದು ನೀಜ್ಷೆ ನಂಬಿದ್ದನು. ಬೌದ್ಧಮತದಂತಹ ಅಹಿಂಸಾ ಬೋಧಕವಾದ ಸಾತ್ವಿಕ ಶಾಂತಿ ಪ್ರತಿಪಾದಕ ಮತಗಳು ತಂಡುಲ ಮೊದಲಾದ ಸಸ್ಯಾಹಾರದ

---

[1] "Europe is threatened with a new Buddhism."

[2] "The whole of the morality of Europe is based upon the values which are useful to the herd."

[3] "Man must become better and more evil."

ಫಲವೆಂದು ನೀಚ್ಛೆ ಅಭಿಪ್ರಾಯಪಟ್ಟನು. ಹಾಗೆಯೇ ಜರ್ಮನರು 'ಬೀರ್' ಕುಡಿದು ಕೆಟ್ಟರೆಂದು ಭಾವಿಸಿದನು. ಇದು ಶಕ್ತಿವರ್ಧಕವಲ್ಲವೆಂದು ತಿಳಿದನು. ಧರ್ಮದ ಮೂಲ ದಯೆಯಲ್ಲ ದರ್ಪ ಎಂಬುದು ನೀಚ್ಛೆಯ ನೀತಿಶಾಸ್ತ್ರದ ಸೂತ್ರ.

ದಯೆಯನ್ನೇ ಧರ್ಮದ ತಿರುಳನ್ನಾಗಿ ಮಾಡಿದ ಮತಗಳಲ್ಲಿ ಮುಖ್ಯವಾದುದು ಕ್ರೈಸ್ತ ಮತವೆಂದು ನೀಚ್ಛೆ ನಂಬಿದ್ದನು. ಇಂತಹ ಮತಗಳು ಜೀವನೋತ್ಸಾಹವನ್ನು ಕುಗ್ಗಿಸುವುವೆಂದೂ, ನಿರಾಶಾವಾದಿಗಳಿಗೆ ಬೆಂಬಲಕೊಡುವುವೆಂದೂ ಭಾವಿಸಿದನು. ಈ ಕಾರಣದಿಂದ ನೀಚ್ಛೆ ತನ್ನನ್ನು ಕ್ರಿಸ್ತ ಪ್ರತಿಕಕ್ಷಿ (Anti-Christ) ಎಂದು ಕರೆದು ಕೊಂಡಿದ್ದಾನೆ. ಅಪಕಾರಿಗೂ ಕೂಡ ಉಪಕಾರಮಾಡಬೇಕೆಂಬ ಯೇಸುವಿನ ನೀತಿ ಯನ್ನು ಯಾವ ಜನಾಂಗವಾದರೂ ಒಂದು ವಾರದ ಮಟ್ಟಿಗೆ ಆಚರಣೆಗೆ ತರಲಿ. ಆಗ ಅದರ ಗತಿ ಏನಾಗುವುದೆಂಬುದನ್ನು ನೀವೇ ನೋಡುವಿರಿ ಎಂದಿರುತ್ತಾನೆ. ಇದು ನಿಜವಿರಬಹುದು. ಆದರೆ ಈ ನೀತಿಗೆ ವಿರೋಧವಾದ ನೀತಿ ಮನುಷ್ಯನ ಮನುಷ್ಯತ್ವಕ್ಕೆ ಯೋಗ್ಯವಾದುದಲ್ಲವೆಂಬುದನ್ನು ನೀಚ್ಛೆ ಗಣಿಸಲಿಲ್ಲ. ಮಾನವನು ಇಂತಹ ಉತ್ತಮನೀತಿಯ ಅವಲಂಬನದಿಂದ ಪಶುಸ್ಥಿತಿಯಿಂದ ಮೇಲೇರಿ ದೇವತ್ವದ ಕಡೆಗೆ ಬಾಗಿರುತ್ತಾನೆ. ನೀಚ್ಛೆ ಒಪ್ಪುವ ನೀತಿಯನ್ನು ಅನುಸರಿಸುವುದರಿಂದ ಮಾನ ವನು ತನಗೂ ಇತರ ಪಶುಗಳಿಗೂ ಇರುವ ವ್ಯತ್ಯಾಸವನ್ನೇ ಮರೆತಂತಾಗುವುದು. ಇನ್ನೂ ಮಾನವನು ಮೃಗಪ್ರಾಯನಾಗಿ "ಅರಣ್ಯನೀತಿ" (Law of the Jungle) ಅಥವಾ "ಮತ್ಸ್ಯನ್ಯಾಯ"ವನ್ನು ಅನುಸರಿಸುತ್ತಿರುವುದು ವಿಷಾದಕ್ಕೆ ಕಾರಣ ವಾಗಿರಬೇಕಲ್ಲದೆ ಸ್ತುತ್ಯಾರ್ಹವಾದುದಲ್ಲ. ಆದರೆ ಇಂತಹ ಧೂರ್ತನೀತಿಯೇ ಸಾಧು ವಾದುದೆಂದು ಪ್ರತಿಪಾದಿಸುವ ನೀಚ್ಛೆಯ ತತ್ವಗಳಂತಹವು ನಮ್ಮನ್ನು ಅಂತಿಮ ವಿನಾಶಕ್ಕೆ ಒಯ್ಯುತ್ತಿರುವುದು ಈಗಾಗಲೇ ಗೋಚರವಾಗುತ್ತಿದೆ. ಸೌಮ್ಯನೀತಿ ಪ್ರತಿಪಾದಕವಾದ ಮತಗಳು ನೀತಿಪರಿಪಾಲನೆಯ ದೃಷ್ಟಿಯಿಂದ ಯಾವ ಗುಣಗಳನ್ನು ಶ್ರೇಷ್ಠವೆಂದು ಗಣಿಸುವುವೋ ಅವುಗಳನ್ನೇ ನೀಚ್ಛೆ ಮಾನವನ ದೌರ್ಬಲ್ಯಸೂಚಕ ವೆಂದು ಭಾವಿಸುವುದು ನಮಗೆ ಆಶ್ಚರ್ಯವನ್ನುಂಟುಮಾಡುತ್ತದೆ. ಆದರೆ ನೀಚ್ಛೆ ಕೆಲವು ಜನರು ಸೌಮ್ಯನೀತಿಯನ್ನು ಅವಲಂಬಿಸಲು ಕಾರಣ ಹೇಳುತ್ತಾನೆ. ಯಾವ ಜನಾಂಗ ವನ್ನು ತೆಗೆದುಕೊಂಡರೂ ಬಹುಮಂದಿ ದಾಸಭಾವವನ್ನೇ ಉಳ್ಳವರಾಗಿರುತ್ತಾರೆ. ಅವರಿಗೆ ಒಬ್ಬ ನಾಯಕನನ್ನು ವಿಧೇಯತೆಯಿಂದ ಹಿಂಬಾಲಿಸಿ ಹೋಗುವುದೇ ಹಿತವಾಗಿ ತೋರುವುದು. ಏತಕ್ಕೆಂದರೆ ಅವರಿಗೆ ಸ್ವಬುದ್ಧಿಯಿಂದ ಜೀವನದ ಉದ್ದೇಶಗಳನ್ನು ನಿರ್ಣಯಿಸಿ ನಡೆದುಕೊಳ್ಳುವುದು ಅವರ ಶಕ್ತಿಗೆ ಮೀರಿದ್ದು. ಬೆಳೆಯುವ ಮಕ್ಕಳು ತಮ್ಮ ರಕ್ಷಣೆ ಪೋಷಣೆಯನ್ನು ತಾವೇ ನೋಡಿಕೊಳ್ಳಲು ಶಕ್ತಿಸಾಲದೆ ತಮ್ಮ

ತಾಯಿತಂದೆಗಳನ್ನು ನಂಬಿರುವಂತೆ ಮಂದಿ ಮಾರ್ಗದರ್ಶಕನಾದ ಪ್ರತಿಭಾಶಾಲಿಯಾದ ನಾಯಕನೊಬ್ಬನನ್ನು ನಂಬುತ್ತದೆ. ನಾಯಕರಾಗಲು ಶಕ್ತಿಯುಳ್ಳವರ ಸಂಖ್ಯೆ ಯಾವಾಗಲೂ ವಿರಳ. ಆದರೂ ಬಹುಮಂದಿ ತಮ್ಮ ಕ್ಷೇಮಕ್ಕೆ ಇವರನ್ನೇ ನಂಬ ಬೇಕಾಗಿದೆ. ಆದ್ದರಿಂದ ಪ್ರತಿಯೊಂದು ಜನಾಂಗದಲ್ಲೂ ಒಂದು ನಾಯಕವರ್ಗ (Aristocracy) ಇರುವುದು ಸಹಜ.

ಇಂತಹ ನಾಯಕವರ್ಗವನ್ನು ಕಾಪಾಡಿಕೊಂಡು ಬರುವುದು ಲೋಕಕ್ಕೆ ಕ್ಷೇಮ. ಇದನ್ನು ಪೋಷಿಸಿಕೊಂಡು ಬರುವ ರೀತಿನೀತಿಗಳನ್ನು ನೀಚ್ಛೆ ವಿವರಿಸಿರುವನು. ಸಮಾಜದ ವ್ಯವಸ್ಥೆ ನಾಯಕವರ್ಗದ ಪೋಷಣೆಗೆ ಅನುಕೂಲವಾದದ್ದಾಗಿರಬೇಕು. 'ಎಲ್ಲರೂ ಸಮಾನರು' ಎಂಬ ಹಾನಿಕರ ಸಿದ್ಧಾಂತದ ಮೇಲೆ ಸಮಾಜವ್ಯವಸ್ಥೆ ಮಾಡಿದರೆ ಈ ನಾಯಕವರ್ಗಕ್ಕೆ ಚ್ಯುತಿಬರುವುದರಲ್ಲಿ ಸಂದೇಹವಿಲ್ಲ. ಇಂತಹ ಸಿದ್ಧಾಂತಗಳಿಗೆ ಅವಕಾಶಕೊಡದ ಸಿದ್ಧಾಂತ ನೀಚ್ಛೆಯದು. ಈ ನಾಯಕವರ್ಗವನ್ನು ಉಳಿಸುವುದೆಂತು ? ಇದಕ್ಕೆ ನೀಚ್ಛೆ ತನ್ನ ಏರ್ಪಾಡನ್ನು ಹೇಳುತ್ತಾನೆ. ಮಂದಿಯಲ್ಲಿ ಎಲ್ಲರೂ ನಾಯಕರಾಗಲು ಸಾಧ್ಯವಿಲ್ಲ. ಇದಕ್ಕಾಗಿ ಕೆಲವರಲ್ಲಿ ಹುಟ್ಟುಗುಣಗಳಿವೆ. ಇದೇ ಒಂದು ಪ್ರತ್ಯೇಕವಾದ ಜಾತಿ. ಈ ಜಾತಿಯ ಪರಿಶುದ್ಧಿಯನ್ನು ಉಳಿಸಿ ಕೊಳ್ಳಲು ಕೆಲವು ಸಂತಾನ ನಿಯಮಗಳನ್ನು ಏರ್ಪಡಿಸಬೇಕು. ಸಂತಾನಕ್ಕೆ ತಕ್ಕಂತೆ ಶಿಕ್ಷಣಪದ್ಧತಿ ಇರಬೇಕು. ಶ್ರೇಷ್ಠರಾದವರು ಶ್ರೇಷ್ಠರಾದವರನ್ನೇ ಮದುವೆ ಯಾಗಬೇಕು. ವರ್ಗಸಂಕರಕ್ಕೆ ಅವಕಾಶವಿರಬಾರದು. ವಿವಾಹ ಕೇವಲ ಸ್ತ್ರೀಪುರು ಷರ ಪ್ರೇಮಸಂಬಂಧವಾಗಿರಬಾರದು ; ಯುಕ್ತವಾದದ್ದಾಗಿರಬೇಕು. ತಮಗಿಂತಲೂ ಶ್ರೇಷ್ಠವಾದ ಉತ್ತಮವಾದ ಸಂತಾನೋತ್ಪತ್ತಿಗಾಗಿ ಕೈಗೊಂಡ ಸಂಕಲ್ಪವೇ ವಿವಾಹ ಎಂದು ನೀಚ್ಛೆಯ ಅಭಿಪ್ರಾಯ.[1] ಸಂತಾನಶಾಸ್ತ್ರದ (Eugenic) ವಿಷಯ ದಲ್ಲಿ ನೀಚ್ಛೆ ಕೊಟ್ಟ ಸಲಹೆಗಳು ಗ್ರೀಕರ ದಾರ್ಶನಿಕನಾದ ಪ್ಲೇಟೋವಿನ ಅಭಿಪ್ರಾಯ ವನ್ನು ಹೋಲುತ್ತವೆ. ರಕ್ತದಲ್ಲಿ ಶ್ರೇಷ್ಠನಲ್ಲದವನು ಗುಣ ಮತ್ತು ಕರ್ಮಗಳಲ್ಲಿ ಶ್ರೇಷ್ಠನಾಗಲಾರನೆಂಬುದು ನೀಚ್ಛೆಯ ಮತ. ಹೀಗೆ ಜನ್ಮತಃ ಶ್ರೇಷ್ಠನಾದವನಿಗೆ ತಕ್ಕ ಶಿಕ್ಷಣ ಏರ್ಪಡಿಸತಕ್ಕದ್ದು. ಶಾರೀರಕ ಮಾನಸಿಕ ಶಕ್ತಿಗಳು ಸಂಪೂರ್ಣ ವಿಕಾಸವಾಗುವಂತಹ ಶಿಕ್ಷಣ ಇದಾಗಿರಬೇಕು. ಯಾವ ವಿಧವಾದ ದೌರ್ಬಲ್ಯಕ್ಕೂ ಅವಕಾಶವಿರಬಾರದು. ದರ್ಪವನ್ನು ಹೆಚ್ಚುಮಾಡುವ ಅಂಶಗಳೆಲ್ಲವೂ ಒಳ್ಳೆಯವು ; ಇದನ್ನು ಕಡಮೆಮಾಡುವವೆಲ್ಲವೂ ಕೆಟ್ಟದ್ದು. ಸಾಹಸಜೀವನ ಶಿಕ್ಷಣದ ಧ್ಯೇಯ

[1] "Marriage: Thus I call the will of two to create that one which is more than they who created it."

(Thus spake Zarathushtra)

ವಾಗಿರಬೇಕು. ಇಂತಹ ನಾಯಕವರ್ಗದಿಂದ ಕಡೆದು ತೇಲಿ ನಿಲ್ಲುವವನು ಅತಿಮಾನವ (Superman) ನಾಗುತ್ತಾನೆ. ಮಂದಿಯಲ್ಲಿ ನಾಯಕವರ್ಗದವರು ಶ್ರೇಷ್ಠರಾದಂತೆ, ನಾಯಕವರ್ಗದಲ್ಲಿ ಶ್ರೇಷ್ಠತಮನಾದವನು ಅತಿಮಾನವನು. ಇಂತಹ ಅತಿಮಾನವನ ಅವತಾರಕ್ಕೆ ಅಣಿಮಾಡುವುದೇ ಎಲ್ಲರ ಗುರಿ. ನಾಯಕರು ಇಂದು ವಿರಳವಾಗಿರಬಹುದು, ಆದರೆ ಇವರು ಮಂದಿಯಿಂದ ಆರಿಸಿ ತೆಗೆದವರು; ಜಳ್ಳಿನಿಂದ ಆರಿಸಿದ ಕಾಳಿನಂತೆ. ಇವರಲ್ಲಿ ಸರ್ವೋತ್ತಮನಾದವನು, ವಿಶಿಷ್ಟನಾದವನು, ಉತ್ಕೃಷ್ಟನಾದವನು ಅತಿಮಾನವನು. ಅತಿಮಾನವನ ಉದಯ ಇನ್ನೂ ಆಗಿಲ್ಲವಾದುದರಿಂದ ಆ ಗುರಿಯನ್ನೇ ಎದುರುನೋಡುತ್ತಿರುವುದು ಎಲ್ಲರ ಜೀವನದ ಪರಮ ಪುರುಷಾರ್ಥ.

ನೀಚ್ಙೆಯ ಸಂಸ್ಕೃತಿ ಪೌರುಷಮಯವಾದುದು. ಎಲ್ಲರ ಸಮಾನತೆಯನ್ನು ಬೋಧಿಸುವ ಪ್ರಜಾತಂತ್ರವೂ, ನಮ್ರತೆ ದಯೆಗಳನ್ನು ಮುಖ್ಯವೆಂದು ಬೋಧಿಸುವ ಕ್ರೈಸ್ತಮತವೂ ಸ್ತ್ರೀ ಪ್ರಯುಕ್ತವಾದ ಅಂಶಗಳನ್ನು ಯೂರೋಪಿನ ಸಂಸ್ಕೃತಿಯಲ್ಲಿ ಬೆರಸಿ ಅದರ ಸಾರವನ್ನು ಹೀರುತ್ತಿವೆ ಎಂದು ಭಾವಿಸುದುದರಿಂದ ತಾನು ಅವೆರಡರ ವಿರೋಧಿ ಎಂದು ತಾನೇ ಸಾರಿದನು. ಸಮಾನತೆ ಸ್ತ್ರೀಪುರುಷರಲ್ಲಿಯೂ ಇರಲು ಸಾಧ್ಯವಿಲ್ಲವೆಂದು ನೀಚ್ಙೆಯ ನಂಬಿಕೆ. ಪುರುಷನ ಕೈ ಯಾವಾಗಲೂ ಮೇಲಾಗಿರುವುದು ಪ್ರಕೃತಿ ನಿಯಮವೆಂದು ಬೋಧಿಸಿದನು. ಸ್ತ್ರೀಯರ ಜೀವನದ ಗುರಿ ತಾಯಿತನ, ಕುಟುಂಬದ ಸೇವೆ ಎಂದನು. ಸಂತಾನವೇ ಹೆಂಗಸಿನ ಗುರಿ, ಅದಕ್ಕೆ ಸಾಧನಮಾತ್ರ ಗಂಡಸು. ಮತ್ತು ಪರಾಕ್ರಮಿಯಾದ ಗಂಡಸಿಗೆ ವಿರಾಮದ ಸಮಯದಲ್ಲಿ ಮನಸ್ಸಿಗೆ ಅಹ್ಲಾದವನ್ನು ಕೊಡುವ ರಮಣಿ ಹೆಂಗಸು. ಸಂಗ್ರಾಮ ವೃತ್ತಿಗೆ ಸಾಧಕವಾದ ಶಿಕ್ಷಣವನ್ನು ಗಂಡಸಿಗೂ, ಮನೋರಂಜನ ಅಥವಾ ವಿಹಾರ ಯೋಗ್ಯವಾದ ಶಿಕ್ಷಣವನ್ನು ಹೆಂಗಸಿಗೂ ಕೊಡಬೇಕಾದದು ಉತ್ತಮ—ಹೀಗೆಂದು ನೀಚ್ಙೆ ಬೋಧಿಸಿದನು. ರಾಜಕೀಯ ದೃಷ್ಟಿಯಿಂದ ನೋಡಿದರೆ, ಮತ್ತು ಇವನ ಸಿದ್ಧಾಂತದಲ್ಲಿ ಜನನಾಯಕರಾದವರಿಗೆ ಕೊಟ್ಟಿರುವ ಮಹತ್ವವನ್ನು ಅರಿತರೆ, ನೀಚ್ಙೆಯ ಸಿದ್ಧಾಂತವು ಫಾಸ್ಟಿಸಂ ಮತ್ತು ನಾಸ್ಟಿಸಂ ಶಕ್ತಿತತ್ವಗಳ ತಳಹದಿಯಾಗಿದೆ. ನೀಚ್ಙೆ ನಿರೂಪಿಸಿರುವ ಅತಿಮಾನವನ ಅಥವಾ ನಾಯಕವರ್ಗದವರ ಪದವಿಗೆ ಏರಲು ಯೋಗ್ಯತೆ ಇರಬಲ್ಲುದು ಬಹು ಕಡಮೆ ಜನರಿಗೆ. ಇಂತಹ ಪದವಿಗೆ ಏರಲು ಯೋಗ್ಯತೆಯುಳ್ಳವರು ಮಾತ್ರ ದಾಸನೀತಿಗೆ ಮನಸೋಲದಿರಬೇಕು. ದಾಸವರ್ಗದವರ ನೀತಿ ಕ್ರಮೇಣ ಇವರ ಶಕ್ತಿಯನ್ನು ಹೀರಿ ಇವರನ್ನು ಸಪ್ಪೆಯಾಗಿ ಮಾಡುವ ಅಪಾಯವಿದೆ. ಇಂತಹ ಸೌಮ್ಯನೀತಿಗೆ ಒಳಗಾಗದ ಹಾಗೆ ಯಾವಾಗಲೂ ರುದ್ರೋಪಾಸನೆ

ಯಲ್ಲಿ ತೊಡಗಿರಬೇಕಾದುದು ಶಕ್ತ್ಯುಪಾಸಕರ ಲಕ್ಷಣ. ಪ್ರಜಾಸಾಮಾನ್ಯಕ್ಕೆ ಅತಿಮಾನವತ್ವದ ಹಂತವನ್ನು ಏರಲು ಎಂದೆಂದೂ ಸಾಧ್ಯವಿಲ್ಲ. ಆದರೂ ಅನೇಕರು ಈ ಗಣ್ಯತೆಗಾಗಿ ಪ್ರಯತ್ನ ಮಾಡದೇ ಇರುವುದಿಲ್ಲ. ಈ ಯತ್ನದಲ್ಲಿ ಜಯಶೀಲ ರಾಗುವವರು ಅತಿವಿರಳ. ಹಾಗೆ ಜಯಶೀಲರಾಗುವವರು ಮಾನವರಲ್ಲಿ ಕಡೆದುಬಂದ ಕೆನೆ ಇದ್ದ ಹಾಗೆ. ಉತ್ಕರ್ಷ ಇಂಥವರಿಗೆ ಸಹಜವಾದುದು. ಇತರರ ಮೇಲಿನ ಒಡೆಯತನ ತಾನೇ ತಾನಾಗಿ ಇವರ ಕೈಸೇರುವುದು. ಇಂಥವರೇ ಜನನಾಯಕರು, ಪುರುಷೋತ್ತಮರು. ಹೀಗಾಗಲು ಶಕ್ತಿಯುಳ್ಳವರು ಜಗತ್ತಿನ ಒಡೆತನಕ್ಕೆ ಆಶೆ ಪಟ್ಟರೆ ಅದರಲ್ಲಿ ತಪ್ಪೇನು ಎಂದು ನೀಚ್ಥೆ ಕೇಳುತ್ತಾನೆ.

ಈ ಸಂದರ್ಭದಲ್ಲಿ ನೀಚ್ಥೆ ಮಾನವನ ಸ್ವಭಾವವನ್ನು ಪರೀಕ್ಷಿಸಿ ಕೆಲವು ತೀರ್ಮಾನಗಳಿಗೆ ಬಂದಿರುತ್ತಾನೆ. ದರ್ಪಾಕಾಂಕ್ಷೆ (The will to power) ಸಮಸ್ತ ಮಾನವರ ಹೃದಯದಲ್ಲಿಯೂ ಮನೆ ಮಾಡಿದೆ. ಮಾನವನಿಗೂ ಪಶುಗಳಿಗೂ ಬುದ್ಧಿ ಸಂಬಂಧವಾದ ಮತ್ತು ಭಾವಸಂಬಂಧವಾದ ವ್ಯತ್ಯಾಸಗಳು ಅನೇಕವಿವೆ. ಪಶುಗಳ ಬಯಕೆಗೆ ಒಂದು ಪರಿಮಿತಿ ಇದೆ; ಅದಕ್ಕೆ ತೃಪ್ತಿ ಸಾಧ್ಯ. ಆದರೆ ಮಾನವನ ಕೆಲವು ಬಯಕೆಗಳಿಗೆ ತೃಪ್ತಿ ಅಸಾಧ್ಯವಾಗಿರುವಂತೆ ನಮಗೆ ಕಂಡುಬರುತ್ತದೆ. ಅನ್ನ ತಿನ್ನುವುದರಿಂದ ಹಸಿವು ಹಿಂಗುವುದು; ನೀರು ಕುಡಿಯುವುದರಿಂದ ಬಾಯಾರಿಕೆ ಆರುವುದು; ಕಾಮದ ತೃಪ್ತಿಯೂ ಬೇಗನೇ ಆಗಬಲ್ಲದು. ಇವೆಲ್ಲ ತೀರಿದಮೇಲೆಯೂ ಮನುಷ್ಯನಲ್ಲಿ ಪ್ರಬಲತಾ ವಾಂಛೆ, ದರ್ಪಾಕಾಂಕ್ಷೆ ಹಾಗೆಯೇ ಉಳಿಯುವುದು. ಇದು ಈಶತ್ವವನ್ನೇ ವಶಮಾಡಿಕೊಳ್ಳಬೇಕೆಂಬ ವಾಂಛೆ. ಇದಕ್ಕೆ ತೃಪ್ತಿಯೇ ಇಲ್ಲ. ಈ ಬಯಕೆಯನ್ನು ತೀರಿಸಲು ಪ್ರಯತ್ನಪಟ್ಟಷ್ಟೂ ಪ್ರಬಲವಾಗುವುದೇ ಇದರ ಸ್ವಭಾವ. ಮಾನವನ ಹಂಬಲು ಬರಿ ಬದುಕಿಗಾಗಿ ಅಲ್ಲ; ಪೆರ್ಮೆಯ ಬದುಕಿಗಾಗಿ. ನೀಚ್ಥೆ ಹೇಳುವುದೇನೆಂದರೆ :

"ಉಸಿರಿರುವಲ್ಲೆಲ್ಲಾ, ಕಂಡುಬಂದಿದೆ ನನಗೆ, ಈ ಪ್ರಭುತ್ವಾಕಾಂಕ್ಷೆ. ಆಳಿಗೂ ಆಳುವಾಸೆ. ಬರಿಯ ಆವಶ್ಯಕತೆಯೂ ಅಲ್ಲ, ಬರಿಯ ಅಭಿಲಾಷೆಯೂ ಅಲ್ಲ, ಪ್ರಭುವಾಗುವುದರಲ್ಲಿ ಅದಮ್ಯವ್ಯಾಮೋಹ. ಇದು ಮನುಷ್ಯವರ್ಗಕ್ಕೆ ಹಿಡಿದ ಭೂತ. ಜನರಿಗೆ ನೀವು ಬೇಕಾದ್ದನ್ನು ಕೊಡಿ—ಆರೋಗ್ಯ, ಆಹಾರ, ಆವಾಸ, ಭೋಗ—ಅಷ್ಟಕ್ಕೆ ಅವರು ತೃಪ್ತರಾಗುವುದಿಲ್ಲ. ಅವರನ್ನು ಏನೋ ಒಂದು ಅಶಾಂತಿ ಕದಡುತ್ತಿರುತ್ತದೆ. ಏಕೆಂದರೆ ಈ ಪ್ರಭುತ್ವಮೋಹದ ಭೂತ ತಣಿಗಾಗಿ ತಣಿವಿಲ್ಲದೆ ಕಾಯುತ್ತಿರುತ್ತದೆ.

"ಈ ಪ್ರಬಲತಾ ವಾಂಛೆ, ಭೂಕಂಪದಂತೆ, ಹುಸಿ ಹೊಳ್ಳುಗಳನ್ನೆಲ್ಲಾ ಬಿರಿದು ತೂರುತ್ತದೆ. ಅಂತಶ್ಶೂನ್ಯವಾದ ಪ್ರಾಚೀನತಾ ಸಂಪ್ರದಾಯ ಗೋಪುರಗಳನ್ನು

ಬಡಿದುರುಳಿಸಿ ಸುಟ್ಟುರುಹುತ್ತದೆ. ಅನುಪಯುಕ್ತ, ಅಕಾಲಿಕ, ಮತ್ತು ಅಲ್ಪಾಯು ಗಳಾದ ನಿಕೃಷ್ಟ ಸಂತೃಪ್ತಿಗಳ ಮುಂದೆ ಪ್ರಶ್ನಚಿಹ್ನಾಕೃತಿಯ ತನ್ನಗ್ನಿಖಡ್ಗವನ್ನು ಝಳಪಿಸುತ್ತದೆ. ಪ್ರಬಲತಾವಾಂಛೆ: ಅದರ ದೃಷ್ಟಿಮಾತ್ರದಿಂದ ಸರಸು ಕ್ರಿಮಿ ಯಾಗುತ್ತಾನೆ, ಕುಗ್ಗುತ್ತಾನೆ, ಬೆನ್ನುರಿಯ ದುಡಿಯುತ್ತಾನೆ; ಹಾವು ಹಂದಿಗಳಿ ಗಿಂತಲೂ ಕೀಳಾಗಿ ತಿರಸ್ಕಾರವೇ ಮೂರ್ತಿಗೊಂಡಂತೆ ಆಗುತ್ತಾನೆ.''

ಇವು ನೀಚ್ಛೆಯ ವಾಕ್ಯಗಳ ಅನುವಾದ. ಇದರಲ್ಲಿ ಪ್ರಭಾವಶಾಲಿಗಳ ದರ್ಪ ವನ್ನೂ ಅವರಿಗೆ ಅಡಿಯಾಳುಗಳಾದ ಕ್ಷುದ್ರ ಜೀವಿಗಳ ಹೇಯ ಜೀವನವನ್ನೂ ತನ್ನ ಭೈರವಶೈಲಿಯಲ್ಲಿ ವರ್ಣಿಸಿದ್ದಾನೆ.

ನೀಚೆಯ ದರ್ಶನದಲ್ಲಿ ಕರುಣೆಗೆ ಅವಕಾಶವಿಲ್ಲ. ಅತಿಮಾನವನಲ್ಲಿ ನಿಪುಣತೆ ಒಂದು ಮುಖ್ಯವಾದ ಗುಣ. ಕರುಣೆ ಹುಟ್ಟುವುದು ದುರ್ಬಲರ ವಿಷಯದಲ್ಲಿ. ಕರುಣೆಯ ದೆಸೆಯಿಂದ ದುರ್ಬಲವಾದುವು ಕೆಲಸಕ್ಕೆ ಬಾರದಿದ್ದರೂ ಉಳಿಯು ವಂತಾಗುವುದು. ಹೀಗಾಗಿ ದುರ್ಬಲವಾದುವುಗಳ ಸಂಖ್ಯೆಯೇ ಹೆಚ್ಚುತ್ತಾ ಹೋಗಿ ಸಮಾಜದ ದಾರ್ಢ್ಯ ಕೆಡುವುದು. ಆದ್ದರಿಂದ ಕರುಣೆಯನ್ನು ಬೋಧಿಸುವ ಕ್ರೈಸ್ತ ಮತದಂತಹ ಮತಗಳು ನಮ್ಮ ಅವನತಿಗೆ ಕಾರಣವಾಗುವುವು. ಡಾರ್ವಿನನಂತೆ ನೀಚ್ಛೆ ಜೀವನವನ್ನು ಒಂದು ಹೋರಾಟವೆಂದು ಭಾವಿಸುತ್ತಾನೆ. ಈ ಹೋರಾಟದ ಪೈಪೋಟಿಯಲ್ಲಿ ಸಬಲವಾದುವು ಉಳಿಯುತ್ತವೆ, ನಿರ್ಬಲವಾದುವು ಅಳಿಯುತ್ತವೆ. ಹೀಗಾಗಬೇಕಾದುದು ನೈಸರ್ಗಿಕ ನಿಯಮ. ದುರ್ಬಲವಾದುವುಗಳ ವಿನಾಶಕ್ಕಾಗಿ ಕಣ್ಣೀರು ಬಿಡುವುದು ಹೃದಯದೌರ್ಬಲ್ಯದ ಲಕ್ಷಣ. ಎದೆಯನ್ನು ಕನಿಕರದ ಬಾಣಗಳು ಇರಿಯದಂತೆ ಕಠೋರತೆಯ ವಜ್ರಕವಚವನ್ನು ತೊಡಬೇಕೆಂದನು. ಕನಿಕರದ ಬಾಣಗಳು ನೀಚ್ಛೆಯ ಎದೆಯನ್ನು ಕೊರೆಯುತ್ತಿದ್ದುದೇ ಇಂತಹ ಕಠೋರ ಪ್ರತಿಜ್ಞೆಗೆ ಬೆಂಬಲ ಕೊಟ್ಟಿತು. ಇತರರ ದುಃಖವನ್ನು ನೋಡಿ ಸಹಿಸದ ನೀಚ್ಛೆ ಅದನ್ನು ಹೋಗಲಾಡಿಸಲು ಬೇರೊಂದು ಉಪಾಯವನ್ನು ಈ ಲೋಕದಲ್ಲಿ ಕಾಣದೆ ಕನಿಕರಕ್ಕೆ ಪಾತ್ರರಾದವರನ್ನು ತೊಡೆದುಬಿಡುವುದೇ ಉಪಾಯವೆಂದು ಬಗೆದನು. ದುರ್ಬಲವಾದುವುಗಳ ವಿನಾಶಕ್ಕಾಗಿ ಕಣ್ಣೀರು ಬಿಡುವ ಅಭ್ಯಾಸವನ್ನು ಬಿಡಬೇಕೆಂದು ಬೋಧಿಸಿದನು. ದುರ್ಬಲವಾದುವುಗಳು ಜಳ್ಳು, ಸಬಲವಾದುವು ಕಾಳು. ಜಳ್ಳನ್ನು ತೂರಿ ಕಾಳನ್ನು ಆರಿಸುವುದೇ ಪ್ರಕೃತಿಯ ಕೆಲಸವಾದ್ದರಿಂದ ಅದಕ್ಕೆ ಸಹಾಯಕ ರಾಗಿ ನಾವು ನಿಲ್ಲುವುದು ನಮ್ಮ ಕರ್ತವ್ಯವೆಂದು ಭಾವಿಸಿದನು. ಹೋಗಬೇಕಾದು ದಕ್ಕೆ ಮರುಗುವುದೇಕೆ, ಕೊರಗುವುದೇಕೆ ಎಂಬುದು ನೀಚ್ಛೆಯ ಪಕ್ಷ.

ವ್ಯಕ್ತಿಗಳಲ್ಲಿ ಸಬಲರು ಅಬಲರು ಹೇಗೋ ಹಾಗೆ ಜನಾಂಗಗಳಲ್ಲಿಯೂ

ವ್ಯತ್ಯಾಸ ಉಂಟು. ಜನಾಂಗಗಳು ಪ್ರಾಬಲ್ಯವನ್ನು ಗಳಿಸುವುದಕ್ಕಾಗಲಿ, ಗಳಿಸಿದುದನ್ನು ಉಳಿಸಿಕೊಳ್ಳುವುದಕ್ಕಾಗಲಿ ಸತತವಾದ ಜಾಗರೂಕತೆ ಆವಶ್ಯಕ. ಈ ಜಾಗರೂಕತೆ ಸಂಗ್ರಾಮಮನೋಭಾವವನ್ನು ತಾಳುತ್ತದೆ. ಹೋರಾಟ ನಿಂತರೆ, ಸ್ಪರ್ಧೆ ಮುಗಿಯಿತೆಂದರೆ ಅಲ್ಲಿಗೆ ಜನಾಂಗಗಳ ಪ್ರಗತಿ ಮುಕ್ತಾಯವಾದ ಹಾಗೆ. ಆದ್ದರಿಂದ ಯಾವುದಾದರೂ ಜನಾಂಗ ತಲೆಯೆತ್ತಿ ಜಗತ್ತಿನಲ್ಲಿ ನಿಲ್ಲಬೇಕಾದರೆ ಸದಾ ಅದು ಯುದ್ಧೋನ್ಮುಖವಾಗಿರಬೇಕು. ಇಂತಹ ಜನಾಂಗಕ್ಕೆ ಜಯ ಲಭಿಸಬೇಕಾದರೆ, ದುರ್ಬಲವಾದ ಜನಾಂಗಗಳು ಜಳ್ಳಿನಂತೆ ಬಲಪ್ರಯೋಗದ ಬಿರುಗಾಳಿಯಲ್ಲಿ ತೂರಿ ಹೋಗಬೇಕಾಗುತ್ತದೆ. ಈ ದೃಷ್ಟಿಯಿಂದ ನೀಚೆ ಯುದ್ಧನೀತಿಯನ್ನು ಪ್ರೋತ್ಸಾಹಿಸುವಂತಹ ಮಾತುಗಳನ್ನಾಡಿರುತ್ತಾನೆ. ಯುದ್ಧನೀತಿಯ ನಿರಾಕರಣೆಯಿಂದ ನೀಚ್ಚೆ ಊಹಿಸುವ ದೊಡ್ಡ ಆಪತ್ತೆಂದರೆ ಅಪಕೃಷ್ಟ ಜನಾಂಗಗಳು ಉತ್ಕೃಷ್ಟ ಜನಾಂಗಗಳನ್ನು ಕ್ರಮೇಣ ಮುಳುಗಿಸುವುದು. ಈ ದೃಷ್ಟಿಯಿಂದ ಶಾಂತಿಪ್ರಿಯರು (Pacifists) ದೇಶದ್ರೋಹಿಗಳು. ತಮ್ಮ ದೌರ್ಬಲ್ಯದ ದೆಸೆಯಿಂದ ಬಲಪ್ರಯೋಗಕ್ಕೆ ಸಿದ್ಧರಲ್ಲದವರು ತಮಗಿಂತಲೂ ಬಲಿಷ್ಠರಾದವರನ್ನು ತಮ್ಮ ಮೇಲೆ ಬೀಳದಂತೆ ಮಾಡಲು ಹೂಡಿದ ನರಿಯ ಉಪಾಯವಿದೆಂದು ನೀಚ್ಚೆ ಭಾವಿಸುತ್ತಾನೆ. ಜನಾಂಗದ ಸತ್ವವನ್ನು ಉಳಿಸಿಕೊಳ್ಳಬೇಕಾದರೆ ಯುದ್ಧ ಅತ್ಯಾವಶ್ಯಕವೆಂದು ನೀಚ್ಚೆಯ ಅಭಿಮತ. ಜನಾಂಗದಲ್ಲಿ ದೌರ್ಬಲ್ಯದ ಸೂಚನೆ ತೋರಿತೆಂದರೆ ಇದಕ್ಕೆ ಯುದ್ಧವಲ್ಲದೆ ಬೇರೆ ಮದ್ದಿಲ್ಲವೆಂದು ನೀಚ್ಚೆ ಬೋಧಿಸಿದನು. ಈ ಸಮರದರ್ಶನ (Militarism)ವನ್ನೇ ನೀಚ್ಚೆಯ ಅನುಯಾಯಿಗಳಾದ ಜರ್ಮನಿಯ ಶಕ್ತಿ ಸಿದ್ಧಾಂತಿಗಳು ಇಲ್ಲಿಯವರೆಗೂ ಪೋಷಿಸುತ್ತಾ ಬಂದಿರುತ್ತಾರೆ. ಈ ಶಕ್ತಿ ವಾದಿಗಳಲ್ಲಿ ಪ್ರಸಿದ್ಧನಾದ ಬರ್ನ್‌ಹಾರ್ಡಿ ಎಂಬಾತ ತನ್ನ "ಜರ್ಮನಿ ಮತ್ತು ಮುಂದಿನ ಯುದ್ಧ" (Germany and the Next War) ಎಂಬ ಗ್ರಂಥದಲ್ಲಿ ಈ ವಾದವನ್ನು ಅದರ ತಾರ್ಕಿಕ ತೀರ್ಮಾನದವರೆಗೂ ಎಳೆದೊಯ್ದಿರುತ್ತಾನೆ. ಅವನು ಹೇಳುವುದನ್ನು ಕೇಳಿದರೆ ಹೀಗೂ ಉಂಟೆ ಎಂದೆನಿಸುವುದು. "ಹೇಗಾದರೂ ಮಾಡಿ ಜನಾಂಗದ ಅಭ್ಯುದಯಕ್ಕಾಗಿ ಬೇಕಾಗಿ ಯುದ್ಧವನ್ನು ತಂದುಹಾಕುವುದು ರಾಜನೀತಿ ನಿಪುಣರ ನೈತಿಕ ಮತ್ತು ರಾಜಕೀಯ ಕರ್ತವ್ಯವಾಗಿದೆ"[1] ಎಂದು ಬರ್ನ್‌ಹಾರ್ಡಿ ಬರೆದಿರುವನು. ತನ್ನ ಪುಸ್ತಕದ ಮುಖಪತ್ರದ ಮೇಲೆ ನೀಚ್ಚೆಯ ಈ ವಾಕ್ಯವನ್ನು ತನ್ನ ಆದರ್ಶ

---

[1] "War is one of the essential factors of morality. If circumstances require, it is not only the right but the moral and political duty of a statesman to bring about a war!"

ವಾಕ್ಯವನ್ನಾಗಿ ಆರಿಸಿ ಬರೆದಿದ್ದಾನೆ. "ಧೈರ್ಯೋತ್ಸಾಹಗಳನ್ನು ಹುರುಪುಗೊಳಿಸುವ ರಣನೀತಿ ನೆರೆಹೊರೆಯರನ್ನು ನಿನ್ನಂತೆ ಪ್ರೀತಿಸು ಎನ್ನುವ ನೀತಿಗಿಂತಲೂ ಜಗತ್ತಿಗೆ ಹೆಚ್ಚು ಉಪಕಾರಮಾಡಿದೆ"—ಎಂಬುದೇ ಈ ವಾಕ್ಯ. ಈ ರೀತಿಯ ಸಿದ್ಧಾಂತಗಳ ರಣಭೇರಿಯೇ ಇಂದು ಜಗತ್ತಿನಲ್ಲಿ ಇಷ್ಟು ಅಶಾಂತಿಯನ್ನು ಎಬ್ಬಿಸಿರುವುದರಲ್ಲಿ ಸಂಶಯವಿಲ್ಲ.

ನೀತಿಬಾಹ್ಯವಾದ ಪ್ರಾಬಲ್ಯದ ಸ್ವೇಚ್ಛಾಪ್ರವರ್ತನೆ ಜನರ ಮನಸ್ಸನ್ನು ಆವರಿಸಿರುವುದು ನಮ್ಮ ಕಾಲದ ಭಯಂಕರ ಸನ್ನಿವೇಶ. ಈ ಸನ್ನಿವೇಶ ತೊಲಗಿ ಪುನಃ ಶಾಂತಿಸ್ಥಾಪನೆಯಾಗಬೇಕಾದರೆ ಅನಿಯತ ದುರಂತಶಕ್ತಿಗಳ ದಮನವಾಗಲೇಬೇಕು. ಇಂತಹ ಶಕ್ತಿಗಣಗಳ ದಮನವಾಗಬೇಕಾದರೆ ಅಧ್ಯಾತ್ಮಶಕ್ತಿಗಳು ಪ್ರಬಲವಾಗಬೇಕು, ಇವು ಎಚ್ಚತ್ತು ಆಸುರೀಶಕ್ತಿಗಳನ್ನು ತುಳಿಯಬೇಕು. ನಟರಾಜನ ನಾಟ್ಯಲೀಲೆಯಿಂದ ರಾಕ್ಷಸಶಕ್ತಿಗಳ ದಮನವಾಗಿ ಸುಖಶಾಂತಿಗಳ ಲಾಸ್ಯ ಜನರ ಮನಸ್ಸಿನ ಮೇಲೆ ತನ್ನ ಪ್ರಭಾವವನ್ನು ಬೀರಬೇಕು. ಮಾನವನಲ್ಲಿ ಹುದುಗಿರುವ ದೈವೀಶಕ್ತಿಯೇ ನಿಜವಾದ ಶಕ್ತಿ. ದೇವತ್ವದ ವಿಕಾಸ ಯಾವನಲ್ಲಿ ಸಂಪೂರ್ಣತೆಯನ್ನು ಹೊಂದಿ ಲೋಕಕಲ್ಯಾಣಕ್ಕಾಗಿ ತನ್ನ ಸ್ವಾರ್ಥವನ್ನು ಮರೆತು ದುಡಿಯುವನೋ ಅವನೇ ಅತಿಮಾನವನು, ಅವನೇ ಅವತಾರಪುರುಷ, ಧರ್ಮದ ಮೂರ್ತಿ, ಲೋಕರಕ್ಷಕ. ಇದನ್ನು ಬಿಟ್ಟು ಅಹಂಕಾರದಿಂದ, ಬರಿಯ ದರ್ಪದಿಂದ, ಅಧಿಕಾರಮದದಿಂದ 'ಈಶ್ವರೋಽಹಂ' ಎಂಬ ಅಮಲು ತಲೆಹತ್ತಿದವನು ಒಂದು ವಿಧವಾದ ಉನ್ಮತ್ತನೇ ಸರಿ. ಇಂತಹ ಉನ್ಮತ್ತರು ಶಕ್ತಿಯುತರಾದರೆ ಜಗತ್ತಿನ ಕ್ಷೋಭೆಗೆ ಕಾರಣರಾಗುವರು. ಈ ಪಾಠವನ್ನು ಚರಿತ್ರೆ ನಮಗೆ ಎಷ್ಟೋ ಸಾರಿ ಕಲಿಸಲು ಪ್ರಯತ್ನಪಟ್ಟಿದೆ.

ಯಾವ ವ್ಯಕ್ತಿಯಾಗಲಿ ಜನಾಂಗವಾಗಲಿ ನಿರ್ವೀರ್ಯವಾಗಿ ನಿಸ್ತೇಜವಾಗಿ ಬಾಳಲಾರದೆಂಬ ತತ್ವವನ್ನು ನೀಚ್ಚೆ ಪ್ರತಿಪಾದಿಸಿದಂತೆ ಇನ್ನಾವ ಜಗದ್ವಿಖ್ಯಾತ ಪುರುಷನೂ ಪ್ರತಿಪಾದಿಸಿಲ್ಲವೆಂದು ಧಾರಾಳವಾಗಿ ನಂಬಬಹುದು. ಆದರೆ ಈ ಬಲ, ಶಕ್ತಿ ಎಂತಹುದೆಂಬುದನ್ನು ನಿರ್ಣಯಮಾಡಿಕೊಂಡ ಹೊರತು ಶಕ್ತಿಸಿದ್ಧಾಂತಗಳು ನಮ್ಮನ್ನು ತಪ್ಪುದಾರಿಗೆ ಎಳೆಯುವುದರಲ್ಲಿ ಸಂದೇಹವಿಲ್ಲ. ಬಲದಲ್ಲಿಯೂ ಸಾತ್ವಿಕ, ರಾಜಸ, ತಾಮಸಗಳೆಂದು ವಿಂಗಡಿಸುವುದು ಒಳ್ಳೆಯದೆಂದು ನಮಗೆ ತೋರುವುದು. ನೀಚ್ಚೆಯಲ್ಲಿ ಇಂತಹ ವಿಂಗಡಣೆ ಇಲ್ಲದಿರುವುದು ಒಂದು ದೊಡ್ಡ ಲೋಪ. "ನಾಯಮಾತ್ಮಾ ಬಲಹೀನೇನ ಲಭ್ಯಃ" ಎಂದು ಉಪನಿಷತ್ತು ಸಾರುತ್ತದೆ. ಈ 'ಬಲ' ಎಂಬ ಮಾತಿನಿಂದ ಅಧ್ಯಾತ್ಮವಿಕಾಸಕ್ಕೆ ಒತ್ತಾಸೆಯಾಗುವ ದೈಹಿಕ ಮತ್ತು ಮಾನಸಿಕ ಬಲವೆಂದು ಅರ್ಥವಾದುದರಿಂದ ಇಂತಹ ಬಲ ಇರಬೇಕಾದುದು ಮನುಷ್ಯನಿಗೆ

ಅತ್ಯಗತ್ಯ. ಈ ವಿಷಯಗಳಲ್ಲಿ ದೌರ್ಬಲ್ಯ ಹಾನಿಕರ. ಆದರೆ ನೀಚ್ಚೆಯ ಅಭಿಪ್ರಾಯದಲ್ಲಿ 'ಬಲ' ಎನ್ನುವುದಕ್ಕೆ ಕ್ಷಾತ್ರಬಲ ಮಾತ್ರ ಎಂದೊಂದು ಸಲವೂ, ಬುದ್ಧಿಬಲವೆಂದು ಕೆಲವೆಡೆಗಳಲ್ಲಿಯೂ ಅರ್ಥವಾಗುವುದು. ಇದನ್ನೇ ಅಧ್ಯಾತ್ಮಬಲವೆಂದು ನೀಚ್ಚೆ ಭ್ರಮೆಪಟ್ಟಿರುವನು. ಯೇಸು, ಬುದ್ಧ, ಜ಼ಾರತುಷ್ಟ್ರ ಮೊದಲಾದ "ಅತಿಮಾನವರು" ಅಧ್ಯಾತ್ಮ ಬಲಪೂರಿತರಾಗಿದ್ದರು. ಇವರು ಅಹಂಕಾರವರ್ಜಿತರಾಗಿದ್ದರು. ತ್ಯಾಗ, ವೈರಾಗ್ಯ, ಭೂತದಯೆ ಪಶ್ಚಾತ್ತಾಪಪೂರಿತರಾಗಿದ್ದರು. ಇವರ ಸುಂದರ ಪವಿತ್ರಜೀವನವು ತಮ್ಮ ಕಾಲದವರ ಮೇಲಲ್ಲದೆ ಎಲ್ಲಾ ಕಾಲದವರ ಮೇಲೆಯೂ ತನ್ನ ಪ್ರಭಾವವನ್ನು ಬೀರಿತು. ನೀಚ್ಚೆ ನೆಪೋಲಿಯನ್‌ನಂಥವರನ್ನು ಮಾತ್ರ ಆದರ್ಶಪುರುಷರನ್ನಾಗಿ ಜಗತ್ತಿಗೆ ತೋರಿಸಿದನು. ಆದರೆ ಮಾನವನ ಭವಿಷ್ಯ ಕಲ್ಯಾಣದ ದೃಷ್ಟಿಯಿಂದ ನೆಪೋಲಿಯನ್ ಅಂಥವರು ಅಷ್ಟೇನೂ ಅತಿಮಾನವರಲ್ಲ. ಮಾನವನನ್ನು ಕೈಹಿಡಿದು ಪಶುಜೀವನದಿಂದ ಮೇಲೆತ್ತಿ ಅವನಲ್ಲಿ ಹುದುಗಿರುವ ದಿವ್ಯ ತೇಜಸ್ಸನ್ನು ಅವನಿಗೆ ತೋರಿಸಿಕೊಡುವವರು ನಿಜವಾದ 'ಅತಿಮಾನವರು' ಎಂದು ಗಣಿಸಬೇಕಾಗಿದೆ. ಈ ಅಂಶವನ್ನು ನೀಚ್ಚೆ ಅನೇಕ ಕಾರಣಗಳಿಂದ ಮರೆತನು. ಇದರಿಂದ ಅವನ ದೃಷ್ಟಿ ಸಂಕುಚಿತವಾಯಿತು ಮತ್ತು ಕಳಂಕಿತವಾಯಿತು. ಆದರೆ ಅಧ್ಯಾತ್ಮದ ಹೆಸರಿನಲ್ಲಿ, ಧರ್ಮದ ಹೆಸರಿನಲ್ಲಿ ಪ್ರಚಾರದಲ್ಲಿದ್ದ ದೋಷಗಳನ್ನು ನಿರ್ದಾಕ್ಷಿಣ್ಯವಾಗಿ ಮೂಲೋತ್ಪಾಟನ ಮಾಡಿದುದು ನೀಚ್ಚೆಯ ಮಹದುಪಕಾರ. ಶರೀರದಲ್ಲಿ ದೋಷ ಉತ್ಪತ್ತಿಯಾದರೆ ಅದನ್ನು ತೊಡೆಯಲು ವೈದ್ಯನು ಮದ್ದನ್ನು ಕೊಡುವನಷ್ಟೆ. ಆ ಮದ್ದು ರೋಗ ಇರುವವರೆಗೂ ಬಹಳ ಉಪಯೋಗವಾದದ್ದು. ಆದರೆ ರೋಗ ಹೋಗಿ ಆರೋಗ್ಯ ತೋರಿದಾಗ ಅದೇ ಮದ್ದು ನಿತ್ಯದ ಆಹಾರವಾಗಲಾರದು. ಹಾಗೆಯೇ ನೀಚ್ಚೆ ಯೂರೋಪಿನ ನಾಗರಿಕತೆಯಲ್ಲಿ ತೋರಿದ ರೋಗವನ್ನು ತೊಡೆಯಲು ಬಂದ ರಣವೈದ್ಯ. ಆದರೆ ರೋಗಸ್ಥಿತಿಯಲ್ಲಿ ಇವನು ಕೊಟ್ಟ ಮದ್ದು ಎಂದೆಂದಿಗೂ ಮಾನವರ ಆಹಾರವಾಗಲಾರದೆಂಬುದನ್ನು ನಾವು ನೆನಪಿನಲ್ಲಿಟ್ಟುಕೊಳ್ಳಬೇಕು.

ನೀಚ್ಚೆ ತನ್ನ ಸುತ್ತಲೂ ಕಂಡ ಕಾಪಟ್ಯವನ್ನು ನೋಡಿ ಸಹಿಸಲಾರದವನಾದ. ಲೋಕದಲ್ಲಿ ಜನರ ಬಡತನ ರೋಗ ಮತ್ತಿತರ ಕ್ಲೇಶಗಳನ್ನು ನೋಡಿ ಸಹಿಸಲಾರದೆ ಹೋದ. ಯಾರು ಯಾರು ಏನೇನು ಪ್ರಯತ್ನಗಳನ್ನು ಮಾಡಿದರೂ ಸಮಾಜದ ಸ್ಥಿತಿ ಇದ್ದ ಹಾಗೆಯೇ ಇದ್ದದ್ದನ್ನು ನೋಡಿ ನಿರುಪಾಯನಾದ. ಏನು ಮಾಡುವುದಕ್ಕೂ ತೋಚದೆ ಇರುವ ಸಮಾಜದ ವ್ಯವಸ್ಥೆಯನ್ನು ಅಳಿಸಿಹಾಕಿ ಹೊಸತಾದ ಸಮಾಜವನ್ನು ನಿರ್ಮಾಣಮಾಡಿದ ಹೊರತು ಗತಿ ಇಲ್ಲವೆಂದು ಮನಗಂಡನು.

ಇವೆಲ್ಲ ವಿಚಾರಗಳು ಇವನ ಮನಸ್ಸಿನಲ್ಲಿ ಎರಕಹುಯ್ದಂತಾಗಿ ಬಿಸಿಬಿಸಿಯಾಗಿ ಅವನ ಮನಸ್ಸಿನ ಭಾಂಡದಿಂದ ಹೊರಗೆ ಸುರಿಯಿತು. ಆ ಬಿಸಿಯನ್ನು ಅವನೇ ತಡೆಯಲಾರದವನಾದನು. ಮನಸ್ಸಿನ ನೆಮ್ಮದಿ ತಪ್ಪಿ ಚಿತ್ತಭ್ರಮೆ ಉಂಟಾಯಿತು. ಕಣ್ಣಿನ ದೃಷ್ಟಿ ಮಂದವಾಯಿತು. ಜಗತ್ತನ್ನು ಉದ್ಧಾರಮಾಡಲು ತಾನು ಅವತಾರ ವೆತ್ತಿರುವೆನೆಂದು ಭಾವಿಸಲು ಮೊದಲುಮಾಡಿದನು. ತನ್ನ ಮಹಿಮೆಯನ್ನು ತನ್ನ ಕಾಲದವರು ಅರಿಯಲಿಲ್ಲವೆಂದು ಎಲ್ಲರನ್ನೂ ದೂಷಿಸಲು ತೊಡಗಿದನು. "ನನ್ನ ಕಾಲ ಇನ್ನೂ ಒದಗಿಲ್ಲ; ಆದರೆ ನಾಳಿದ್ದು ನನ್ನದು" ಎಂದು ಅವನ ಕೊನೆಯ ಗ್ರಂಥದಲ್ಲಿ ಬರೆದನು.

ಇವನ ಕಡೆಯವರು ನೀಚ್ಚೆಯನ್ನು ಉನ್ಮತ್ತರ ವಿಶ್ರಾಂತಿ ಆಲಯಕ್ಕೆ ಕರೆದೊಯ್ದರು. ಆದರೆ ಇವನ ಮುದಿತಾಯಿ ಇವನನ್ನು ಬಹಳಕಾಲ ಅಲ್ಲಿ ಇರಗೊಡಲಿಲ್ಲ. ಕ್ರೈಸ್ತಧರ್ಮಶ್ರದ್ಧೆಯುಳ್ಳ ಈಕೆ ಅಷ್ಟು ದಿವಸವೂ ತನ್ನ ಮಗನ ಧರ್ಮಭ್ರಷ್ಟತೆಯನ್ನು ತಾಳ್ಮೆಯಿಂದ ಸಹಿಸಿದ್ದಳು. ಈಗ ನಿಸ್ಸಹಾಯಕನಾದ ತನ್ನ ಮಗನನ್ನು ಪುನಃ ತನ್ನ ಮಡಿಲಲ್ಲಿ ಹಾಕಿಕೊಂಡಳು. ತಾನಿರುವವರೆಗೂ ಆತನಿಗೆ ಬೇಕಾದ ಉಪಚಾರಮಾಡಿದಳು. ಅವಳು ತೀರಿದನಂತರ ಅವನ ಸಹೋದರಿಯು ಅವನನ್ನು ತನ್ನ ರಕ್ಷಣೆಗೆ ತೆಗೆದುಕೊಂಡಳು. ಈ ಸ್ಥಿತಿಯಲ್ಲಿ ಎಂದೂ ಕಾಣದ ಶಾಂತಿಯನ್ನು ನೀಚ್ಚೆ ಕಂಡನು. ಒಂದು ದಿನ ಅವನ ತಂಗಿ ಅವನ ಸ್ಥಿತಿಯನ್ನು ಕಂಡು ಕಣ್ಣೀರಿಟ್ಟಳು. ಆಗ ನೀಚ್ಚೆ ಅವಳನ್ನು ನೋಡಿ "ತಂಗಿ, ಅಳುವುದೇಕೆ? ನಾವೀಗ ಸುಖವಾಗಿರುವೆವಲ್ಲ" ಎಂದನಂತೆ.

ನೀಚ್ಚೆ ಅವನ ೫೬ ನೆಯ ವಯಸ್ಸಿನಲ್ಲಿ ಗತಿಸಿದನು. ಆದರೆ ಅವನು ಜರ್ಮನಿಯ ಮನಸ್ಸಿನ ಮೇಲೆ ಒತ್ತಿದ ಮುದ್ರೆ ಅಚ್ಚಳಿಯದೆ ನಿಂತಿತು. ನೀಚ್ಚೆ ಜರ್ಮನಿಯ ಶಕ್ತಿ ಸಿದ್ಧಾಂತದ ಆಚಾರ್ಯನಾದ.

ಎಂ. ಯಾಮುನಾಚಾರ್ಯ.

ವಾಲ್ಟ್ ವಿಟ್‌ಮನ್ ಇಂದ

ಪಶುಗಳೊಡನೆ ಪಶುವಾಗಿಯಾದರೂ ಬದುಕಲೇ? ಅವಕ್ಕೆನಿತು ಶಾಂತಿ, ಎನಿತು ತೃಪ್ತಿ!

ನೋಡುತ್ತಾ ನಿಂತೆನೆಂದರೆ ಘಂಟೆ ಘಂಟೆ ಹರಿದರೂ ಹೊತ್ತು ಗೊತ್ತಾಗುವುದಿಲ್ಲ.

ತಮ್ಮಿರವಿಗೆ ಮರುಗಿ ಅವು ಕುದಿಯುವುದಿಲ್ಲ, ಬಾಯಿ ಬಡಿದುಕೊಳ್ಳುವುದಿಲ್ಲ, ಪರದಾಡುವುದಿಲ್ಲ.

ಇರುಳೆಲ್ಲಾ ನಿದ್ದೆಗೆಟ್ಟು ಪಾಪಗಳಿಗಾಗಿ ಪಶ್ಚಾತ್ತಾಪಪಡುವುದಿಲ್ಲ.

ದೇವರು ಧರ್ಮಗಳನ್ನು ಕುರಿತು ಜಿಜ್ಞಾಸೆಮಾಡುತ್ತಾ ನನಗೆ ರೇಜಿಗೆ ಹಿಡಿಸುವುದಿಲ್ಲ.

ಅವುಗಳಲ್ಲಿ ಯಾವೊಂದಕ್ಕೂ ಅತ್ಯಾಸೆಯಿಲ್ಲ; ಯಾವೊಂದೂ ವಸ್ತುಗಳಿಗೆ ಒಡೆಯನಾಗಬೇಕೆಂದು ತಲೆಕೆಡಿಸಿಕೊಂಡಿಲ್ಲ.

ಒಂದಾದರೂ ಮತ್ತೊಂದಕ್ಕೆ ಮೊಣಕಾಲು ಮಣಿಯುವುದಿಲ್ಲ, ಕಾಲಿಗೆ ಬೀಳುವುದಿಲ್ಲ, ಜೊತೆ ಇರುವವಕ್ಕಾಗಲಿ, ಶತಮಾನಗಳಿಗೆ ಹಿಂದೆ ಬದುಕಿದ್ದವುಗಳಿಗಾಗಲಿ.

ಯಾವೊಂದೂ ಶ್ರೀಶ್ರೀಶ್ರೀಯಾಗಿಲ್ಲ; ಹುಡುಕಿದರೂ ಮತ್ಸರದ ಅಸುಖ ದೊರೆಯುವುದಿಲ್ಲ.

ಯಾವೊಂದೂ ಬಿರುದುವೊತ್ತು ಗೌರವ ಪದವಿಗೇರಿಲ್ಲ.

"ಹ್ರೀಂ"

ಕೈದಾಳದ ಗತವೈಭವ

ಭಾಗ ೧

ಸ್ಥೂಲವಿಚಾರ

ತುಮಕೂರಿನಲ್ಲಿ ಹುಟ್ಟಿ ಬೆಳೆದವರಿಗೆ ಕೈದಾಳವನ್ನೂ ದೇವರಾಯ ದುರ್ಗವನ್ನೂ ನೋಡಬೇಕೆಂಬುದು ಮಹತ್ಕಾಂಕ್ಷೆ. ಅದರಲ್ಲೂ ಕೈದಾಳಕ್ಕೆ ಹೋಗುವುದಕ್ಕೆ ಹೆಚ್ಚಿನ ಆಸೆ. ಏಕೆಂದರೆ ದೇವರಾಯ ದುರ್ಗವು ದೂರ; ಬೆಟ್ಟ ಹತ್ತುವುದು ಕಷ್ಟ ಸಾಧ್ಯ. ಕೈದಾಳವು ತುಮಕೂರಿಗೆ ಮೂರೇ ಮೈಲಿ; ಹೋಗಿಬರಲು ಭಾಟಾ ಮಾರ್ಗ. ಪ್ರಾಯಶಃ ಆಬಾಲವೃದ್ಧರಾರೂ ತಮ್ಮ ಜೀವಿತಕಾಲದಲ್ಲಿ ಕನಿಷ್ಠಪಕ್ಷ ಒಂದು ಸಾರಿಯಾದರೂ ಕೈದಾಳಕ್ಕೆ ಹೋಗದೆ ಇರುವುದಿಲ್ಲ. ಹಾಗಾದರೆ ಕೈದಾಳ ದಲ್ಲೇನಿದೆ? ಅಲ್ಲಿಗೆ ಹೋಗಲು ಜನರು ಸಂಭ್ರಮಪಡುವುದೇಕೆ? ಈ ಪ್ರಶ್ನೆಗಳಿಗೆ ಉತ್ತರವನ್ನು ಕೊಡುವುದೇ ಈ ಉಪನ್ಯಾಸದ ಉದ್ದೇಶವಾಗಿದೆ.

ಪ್ರಾಚೀನ ಕೈದಾಳ—ಕೈದಾಳವು ಪುರಾತನ ಕಾಲದಲ್ಲಿ ಪ್ರಸಿದ್ಧವಾದ ನಗರ. ಶಿಲ್ಪಚಾತುರ್ಯವನ್ನು ವ್ಯಕ್ತಗೊಳಿಸುವ ದೇವಾಲಯಗಳು ಅಲ್ಲಿವೆ. ದೇಶ ವಾತ್ಸಲ್ಯದಿಂದ ಶತ್ರುಗಳೊಡನೆ ಏಕಾಂಗಿಗಳಾಗಿ ಹೋರಾಡಿ ಮಡಿದ ಯೋಧರ ಸ್ಮಾರಕಗಳಾದ ವೀರಗಲ್ಲುಗಳು ಅಲ್ಲಿವೆ. ಸಾಮಂತರಾಜನಾಗಿದ್ದ ಬಾಚಿದೇವನು ಬರೆಯಿಸಿದ ಶಾಸನಗಳು ಇರುವುದು ಅಲ್ಲಿಯೇ. ಎಲ್ಲಕ್ಕಿಂತಲೂ ಹೆಚ್ಚಾಗಿ ಬುದ್ಧ, ಜೈನ, ಈಶ್ವರ, ವಿಷ್ಣು ಮತವಾದಿಗಳು ಸರ್ವಸಮತಾಭಾವದಿಂದ ಬಾಳಿದ ಪವಿತ್ರ ಸ್ಥಳವದು. ಅಲ್ಲಿ ದುರ್ಗಮವಾದ ಕೋಟೆಯಿತ್ತು, ಅರಮನೆಯಿತ್ತು, ಸೈನ್ಯವಿತ್ತು, ಧನಕನಕ ವಸ್ತು ವಾಹನಗಳಿದ್ದುವು. ರಾಜರು, ಮಂತ್ರಿಗಳು, ಪಂಡಿತರು, ಕವಿಗಳು, ಯೋಧರು, ವಣಿಗ್ವರರು ಅಲ್ಲಿ ಜನ್ಮವೆತ್ತಿದ್ದರು. ಉತ್ತಮವಾದ ಉಪ್ಪರಿಗೆ ಮನೆ ಗಳು, ಉದ್ಯಾನಗಳು, ವನಗಳು, ಕಲ್ಯಾಣಿಗಳು ಅಲ್ಲಿ ರಾಜಿಸುತ್ತಿದ್ದುವು. ಆದರೆ ಈಗ ಕೈದಾಳವು ಒಂದು ಹಳ್ಳಿ, ಅರಮನೆಯು ನೆಲಸಮವಾಗಿದೆ. ಕೋಟೆಯು ಮಣ್ಣುಗುಡ್ಡೆಯಾಗಿದೆ. ಯಾವ ಪ್ರದೇಶದಲ್ಲಿ ರಾಜ್ಯಲಕ್ಷ್ಮಿಯು ತಾಂಡವವಾಡು ತ್ತಿದ್ದಳೋ ಅಲ್ಲಿ ಈಗ ನಿರ್ಜನವಾದ ಅರಣ್ಯವಿದೆ. ಯಾವ ಪ್ರದೇಶವು ಧನಲಕ್ಷ್ಮಿಯ ಆವಾಸಸ್ಥಾನವಾಗಿದ್ದಿತೋ ಅದು ಈಗ ಕಷ್ಟಜೀವಿಗಳಾದ ರೈತರ ಬೀಡಾಗಿದೆ. ಕಾಲಪುರುಷನ ವ್ಯಾಪಾರವು ಅಚಿಂತ್ಯವಾದುದು, ಅಪರಿಹಾರ್ಯವಾದುದು.

ಈಗ ಎಂಟುನೂರು ವರ್ಷಗಳ ಕೆಳಗೆ ಬರೆದ ಶಾಸನದಲ್ಲಿ ಕೈದಾಳವನ್ನು ಕುರಿತು ಹೀಗೆ ಹೇಳಿದೆ:—

ಅನೇಕ ವಿಳಾಸಕ್ಕಂ ಸಕಳ ಲಕ್ಷ್ಮೀನಿವಾಸಮುಮೆನಿಸಿ ಸೊಗಯಿಸುವ ಕೈದಾಳಂ.

ತುರುಗಿದ ಮಾಮರದಿಂ ಬೆಳೆ |
ದೆರಗಿದ ಸೌಗಂಧ ಶಾಳಿಯಿಂ ಪೂಗೊಳದಿಂ ||
ಕೆರೆಯಿಂ ದೇವಾಳಯದಿಂ |
ನೆರೆ ಸೊಗಯಿಸಿ ತೋರ್ಕುಂ ಲೀಲೆಯಿಂ ಕಯ್ದಾಳಂ ||

ವಿವಿಧಾಳಂಕೃತ ದೇವಸೌಧ ತಳದಿಂ ವೇಶ್ಯಾಂಗನಾವಾಟದಿಂ |
ಕವಿರಾಜ ಪ್ರವರರ್ಕಳಿಂ ಸುಳಿವ ನಾನಾಗೇಯ ಚಾತುರ್ಯದಿಂ ||
ನವದೇಸೀಯ ವಿಳಾಸದಿಂ ಸುಬಗಿನಿಂ ಕಯ್ದಾಳವೊಪ್ಪಿರ್ದುದಾ |
ದಿವಿಜೇಂದ್ರೋನ್ನತ ಲೋಕಮಂ ನಗುವವೋಲ್ ತನ್ನುದ್ಧಸೌಂದರ್ಯದಿಂ ||

ಧನದನನಿಳಿಪ ಪರದರಿಂ |
ಮನುಗಳನಿಳಿಪ ಮುನಿಗಳಿಂ ಬಗೆಗರಿದೆಂಬೊಲ್ ||
ಮನಸಿಜನನಿಳಿಪ ವಿಟರಿಂ |
ವನಿತೆಯರಿಂ ನಾಡೆ ಸೊಗಯಿಕುಂ ಕೈದಾಳಂ ||

ಈಗಿನ ಕೈದಾಳ—ಆದರೆ ಈಗಿನ ಕೈದಾಳವೋ! ಅದೊಂದು ಕ್ಷುದ್ರಕೊಂಪೆ. ತುಮಕೂರಿನ ವಿಲಾಸಪಟುಗಳಿಗೂ ನಾಗರಿಕರಿಗೂ ಅದೊಂದು ವಿಹಾರ ಭೂಮಿ. ವಿರಾಮ ದೊರೆತಾಗ ಅವರು ವಿಹಾರಕ್ಕಾಗಲಿ, ಗಾಳಿಸವಾರಿ ವ್ಯಾಜದಿಂದಾಗಲಿ, ದೇವರ ದರ್ಶನಾರ್ಥಿಗಳಾಗಿಯಾಗಲಿ ಅಲ್ಲಿಗೆ ಹೋಗಿ ಬರುವರು. ಅವರು ಅಲ್ಲಿಗೆ ಹೋಗಿ ಮಾಡುವುದಾದರೂ ಏನು? ಶ್ರೀ ಚೆನ್ನಕೇಶವಸ್ವಾಮಿಯವರ ದೇವಾಲಯವನ್ನು ನೋಡುವುದು, ದೇವರಿಗೆ ಹಣ್ಣುಕಾಯಿ ಮಾಡಿಸಿ ಮಂಗಳಾರತಿ ಮಾಡಿಸುವುದು, ಅರ್ಚಕರಿಂದ ದೇವರ ಪ್ರತಿಷ್ಠೆ ವಿಷಯವನ್ನು ತಿಳಿಯುವುದು, ಜಕಣಾಚಾರಿಯ ಕತೆಯನ್ನು ಕೇಳುವುದು—ಇಷ್ಟರಲ್ಲೇ ಕೃತಾರ್ಥರಾಗುವರು. ಪ್ರೇಕ್ಷಕರು "ಸರ್ವದೇವಸಮಸ್ಕಾರಃ ಕೇಶವಂ ಪ್ರತಿಗಚ್ಛತಿ" ಎಂಬ ತತ್ವಾರ್ಥವನ್ನು ಚೆನ್ನಾಗಿ ಮನಗಂಡಿರುವರೋ ಎಂಬಂತೆ ಕೇಶವ ದೇವರನ್ನು ನೋಡಿದ ಮೇಲೆ ಮತ್ತಾವ ದೇವರನ್ನೂ ನೋಡಬೇಕಾದ ಅವಶ್ಯಕವಿಲ್ಲವೆಂದು ತಿಳಿದು "ತೃಪ್ತಾಸ್ಮಃ" ಎಂದು ಹೇಳಿಕೊಂಡು ಕೈದಾಳಕ್ಕೆ ಬೆನ್ನು ತಿರುಗಿಸುವರು. ಹೀಗೆ ಮಾಡುವುದರಿಂದ ಕೈದಾಳಕ್ಕೆ ಹೋಗಿ ಬರುವ ನೂರು ಮಂದಿಯಲ್ಲಿ ತೊಂಭತ್ತೊಂಭತ್ತು ಮಂದಿಗೆ ಹೆಚ್ಚು ಜ್ಞಾನಾರ್ಜನೆಯಾಗುವುದಿಲ್ಲ. ಈ ಸಂದರ್ಭದಲ್ಲಿ "ಅಣ್ಣಪ್ಪ ದಂಡಿಗೆ

ಹೋದರೂ ಒಂದೇ ಮನೆಯಲ್ಲಿದ್ದರೂ ಒಂದೇ " ಎಂದು ಸಾಮತಿಯು ಜ್ಞಾಪಕಕ್ಕೆ ಬರುತ್ತದೆ. ಯಾವುದಾದರೊಂದು ಸ್ಥಳಕ್ಕೆ ಹೋಗಿ ಬರುವುದರಿಂದ ನಿಜವಾದ ಪ್ರಯೋಜನವಾಗಬೇಕೆಂಬುದಕ್ಕೆ ಹಾಸನದ ಡಿಸ್ಟ್ರಿಕ್ಟಿನವರು ಹೇಳುವ ಕತೆಯೊಂದಿದೆ.

ಹಾಸನದಲ್ಲೊಬ್ಬ ಸಾಹುಕಾರ. ಅವನ ಮನೆಯಲ್ಲಿ ಮಾದನೆಂಬ ಒಬ್ಬ ಆಳು. ಅವನಿಗೆ ಪ್ರಪಂಚಜ್ಞಾನ ಕಡಿಮೆ. ಯಜಮಾನನ ಮನಸ್ಸನ್ನು ತಿಳಿದು ಕೆಲಸ ಮಾಡುವುದಿಲ್ಲವೆಂದು ಅವನಿಗೆ ಸದಾ ಆಕ್ಷೇಪಣೆ. ಹೀಗಿರುವಾಗ್ಗೆ ಒಂದಾನೊಂದು ರಾತ್ರೆ ಯಜಮಾನನು "ಬೇಲೂರಿಗೆ ಹೋಗಿ ಬರಬೇಕು" ಎಂದು ತನ್ನ ಹೆಂಡತಿಯೊಡನೆ ಹೇಳುತ್ತಿದ್ದನು. ಈ ಮಾತು ಮಾದನ ಕಿವಿಗೆ ಬಿತ್ತು. ಧಣಿಯ ಮೆಚ್ಚುಗೆಯನ್ನು ಪಡೆಯಲು ಒಳ್ಳೆಯ ಸಮಯ ಒದಗಿತೆಂದು ಯೋಚಿಸಿ ಅವನು ಬೆಳಗಿನಜಾವಕ್ಕೆ ಎದ್ದು ಬೇಲೂರಿಗೆ ಪ್ರಯಾಣಮಾಡಿದನು. ಬೆಳಗಾಗುತ್ತಲೇ ಮನೆಯ ಕೆಲಸಮಾಡಲು ಆಳು ಇಲ್ಲದುದು ಯಜಮಾನಿಗೆ ತಿಳಿದು ಆಕೆಯು ಸಿಡಿಮಿಡಿಗೊಂಡಳು. ವರ್ತಮಾನವು ಸಾಹುಕಾರನಿಗೂ ತಿಳಿದು ಅವನು ಜನರನ್ನು ಅಲ್ಲಿ ಇಲ್ಲಿ ಕಳುಹಿಸಿ ಆಳನ್ನು ಹುಡುಕಿಸಿದನು. ಏನುಮಾಡಿದರೂ ಆದಿನ ಸಾಯಂಕಾಲವಾಗುವ ವರೆಗೂ ಅವನ ಪತ್ತೆಯೇ ಹತ್ತಲಿಲ್ಲ. ರಾತ್ರಿಯೂ ಆಯಿತು. ಸಾಹುಕಾರನು ಊಟಮಾಡಿ ಆಳು ಎಲ್ಲಿ ಹೋದನೋ ಎಂದು ಚಿಂತಿಸುತ್ತ ಮಲಗಿದನು. ಕಣ್ಣಿಗೆ ನಿದ್ರೆಹತ್ತುವ ಸಮಯ. ಇದ್ದಕ್ಕಿದ್ದ ಹಾಗೆಯೇ ಹೊರಬಾಗಿಲಿನಲ್ಲಿ 'ಬುದ್ಧೀ' ಬುದ್ಧೀ ಎಂದು ಕೂಗಿದ ಸದ್ದು ಕೇಳಿಸಿತು. ಯಜಮಾನನೆದ್ದು ಬಂದು ಬಾಗಿಲು ತೆಗೆದು ನೋಡುತ್ತಾನೆ! ಎದುರಿಗೆ ನಿಂತಿದ್ದಾನೆ ಮಾದ!

ಸಾಹುಕಾರ—ಎಲ್ಲಿಗೆ ಹೋಗಿದ್ದೆಯೋ ಮಾದ?

ಮಾದ—ಬುದ್ಧೀ, ಬೇಲೂರಿಗೆ ಹೋಗಿದ್ದೆ?

ಸಾಹುಕಾರ—ಬೇಲೂರಿನಲ್ಲಿ ನಿನಗೇನು ಕೆಲಸವಿತ್ತು?

ಮಾದ—ಬುದ್ಧೀ, ತಾವು ನೆನ್ನೆರಾತ್ರಿ ಅಮ್ಮಾ ಅವರ ಸಂಗಡ "ಬೇಲೂರಿಗೆ ಹೋಗಿ ಬರಬೇಕು" ಎಂದು ಹೇಳುತ್ತಿದ್ದಿರಿ. ಬುದ್ಧಿಯವರಿಗೆ ಆಯಾಸವಾಗುತ್ತೆಂದು ಯೋಚಿಸಿ ನಾನೇ ಬೇಲೂರಿಗೆ ಹೋಗಿ ಬಂದೆ!

ಕೈದಾಳಕ್ಕೆ ಹೋಗಿಬರುವುದು ಮಾದ ಬೇಲೂರಿಗೆ ಹೋಗಿಬಂದ ಹಾಗಾಗಬಾರದು. ಕೈದಾಳದಲ್ಲೂ ಅದರ ಅಕ್ಕ ಪಕ್ಕದಲ್ಲೂ ನೋಡಬೇಕಾದ, ವಿಮರ್ಶೆಗರ್ಹವಾದ ಸ್ಥಳಗಳೂ ವಿಷಯಗಳೂ ಅನೇಕವಾಗಿವೆ. ಅಲ್ಲಿನ ಇತಿಹಾಸವು ಮಹತ್ತರವಾದುದು. ಮೈಸೂರು ದೇಶದವರು ಅದರಲ್ಲೂ ತುಮಕೂರಿನವರು ಹೆಮ್ಮೆಪಡಲರ್ಹವಾದುದು.

ಈ ಪುರಾತನ ನಗರದ ಮುಖ್ಯವಾದ ಸ್ಮಾರಕಗಳು ಯಾವುವೆಂದರೆ :—

(1) ಶ್ರೀ ಚೆನ್ನಕೇಶವದೇವರ ಗುಡಿ. ಇದರ ಮಹಾದ್ವಾರದಲ್ಲಿರುವ ಸಾಮಂತ ಬಾಚಿಯ ಶಿಲಾಪ್ರತಿಮೆ.

(2) ಶ್ರೀ ಗಂಗಾಧರೇಶ್ವರನ ಗುಡಿ, ಇದರ ಮುಂಭಾಗದಲ್ಲಿರುವ ವೀರಗಲ್ಲು, ಒಳಗೆ ನವರಂಗದಲ್ಲಿರುವ ಸಾಮಂತಬಾಚಿಯ ಧರ್ಮಶಾಸನದ ಕಲ್ಲುಗಳು.

(3) ಊರಿನ ಹೊರಗೆ ಕೈದಾಳದ ಕೆರೆಯ ಪಶ್ಚಿಮ ಕೋಡಿಬಳಿ ಇರುವ ರಾಮೇಶ್ವರನ ಗುಡಿ. ಇದರ ಪಕ್ಕದಲ್ಲಿರುವ ಗೌರೀಶ್ವರನ ಗುಡಿ. ಆವರಣದಲ್ಲಿ ದಿಕ್ಪಾಪಾಲಾಗಿ ಬಿದ್ದಿರುವ ವೀರಗಲ್ಲುಗಳು.

(4) ಊರಿನ ಉತ್ತರ ದಿಕ್ಕಿನಲ್ಲಿ ತೋಪಿನ ಮಧ್ಯೆ ಇರುವ ಅಮ್ಮನ ತೋಟದ ಬೃಂದಾವನ ಅಥವಾ ಭೀಮಜಿನಾಲಯವೆಂಬ ಅವಶೇಷ. ಮರದಡಿಯಲ್ಲಿರುವ ನಾಗಕನ್ಯೆಯ ವಿಗ್ರಹ—ಇವೆರಡೂ ಜೈನ ಯಾತ್ರಾಸ್ಥಳಗಳು.

(5) ದಕ್ಷಿಣಕ್ಕೆ ಕುಣಿಗಲ್ಲು ರಸ್ತೆಯಿಂದ ಕಾಣುವ ಶೂಲದ ಆಂಜನೇಯನ ಗುಡಿ. ಇದೇ ಕೈದಾಳ ನಗರದ ದಕ್ಷಿಣ ಗಡಿ. ತಪ್ಪಿತಸ್ಥರನ್ನು ಶೂಲಕ್ಕೆ ಹಾಕುತ್ತಿದ್ದ ಜಾಗ ಇದೇ.

(6) ಪೂರ್ವಕ್ಕೆ ಅನತಿದೂರದಲ್ಲಿ ಕಿತ್ತಿಗನ ಹಳ್ಳಿಯಲ್ಲಿರುವ ಚಲುವರೇಶ್ವರನ ಪಾಳುಬಿದ್ದ ಗುಡಿ.

(7) ಭಗ್ನಾವಶೇಷವಾಗಿರುವ ಕೋಟೆ, ಚತುರಂಗಬಲದ ಠಾಣ್ಯ, ಅರೆವಾಸಿ ಮುಚ್ಚಿಹೋಗಿರುವ ಮಾರಸಮುದ್ರ, ಅದಳಸಮುದ್ರ, ಗಂಗಸಮುದ್ರ, ಭೀಮ ಸಮುದ್ರ ಮೊದಲಾದ ಪ್ರಾಚೀನ ಸ್ಮಾರಕಗಳು.

ಗಂಗಾಧರೇಶ್ವರಾಲಯ—ಕೈದಾಳದಲ್ಲಿ ದ್ವಾರಸಮುದ್ರದ ಹೊಯ್ಸಳ ಬಳ್ಳಾಳ ನರಸಿಂಹನಕಾಲದ ಎಂದರೆ ೧೧೫೧ನೆಯ ಇಸವಿಯ ಶಾಸನಗಳಿರುವುವೆಂಬು ದನ್ನು ಎಷ್ಟುಮಂದಿ ಬಲ್ಲರು? ಶ್ರೀ ಚೆನ್ನಕೇಶವ ದೇವಾಲಯದ ಪಕ್ಕದಲ್ಲೇ ಇರುವ ಗಂಗಾಧರೇಶ್ವರನ ದೇವಸ್ಥಾನವನ್ನು ಕೈದಾಳಕ್ಕೆ ಹೋಗುವವರು ಕಡೆಗಣ್ಣಿನಿಂದಲೂ ನೋಡುವಹಾಗಿಲ್ಲ. ಎಷ್ಟೋ ವೈಭವದಿಂದ ಪ್ರತಿಷ್ಠೆಯಾದ ಈ ದೇವರಿಗೆ ವಾರ ಕ್ಕೊಂದುಸಾರಿ ಪೂಜೆ; ಹಾಕಿದ ಬಾಗಿಲು ತೆರೆಯುವುದೇ ಅಪರೂಪ; ಯಾತ್ರಿಕರಿಗೆ ಈಶ್ವರದರ್ಶನವೇ ದುರ್ಲಭ. ಸಾಮಂತಬಾಚಿಯ ಶಾಸನಗಳಿರುವುದು ಈ ಗುಡಿ ಯಲ್ಲಿಯೇ. ಕೈದಾಳದಲ್ಲಿ ಮೊದಲು ಕಟ್ಟಲ್ಪಟ್ಟ ದೇವಸ್ಥಾನವು ಇದೇ. ಈ ದೇವಾ ಲಯವು ದ್ರಾವಿಡ ಶಿಲ್ಪಶಾಸ್ತ್ರವನ್ನನುಸರಿಸಿದುದು. ಇದರ ನವರಂಗದಲ್ಲಿ ಕರಿಕಲ್ಲಿನಲ್ಲಿ ಅತ್ಯಂತ ನಯಗೆಲಸ ಮಾಡಿದ ನಾಲ್ಕು ಕಂಬಗಳಿವೆ. ಹೊಯ್ಸಳರ ಕಾಲದ ದೇವ

ಸ್ಥಾನಗಳಲ್ಲಿರುವಂತೆ ನವರಂಗದ ಮೇಲ್ಭಾವಣಿಯಲ್ಲಿ ಅಂದವಾಗಿ ಕಮಲ ಪುಷ್ಪವನ್ನು ಶಿಲ್ಪಿಯು ಕೊರೆದಿದ್ದಾನೆ. ಕಂಬಗಳ ನಾಲ್ಕು ಮುಖಗಳಲ್ಲಿಯೂ ಶಿವ, ಬ್ರಹ್ಮ, ವಿಷ್ಣು, ಭೈರವ, ಕೃಷ್ಣ, ಗಣಪತಿ, ವೀರಭದ್ರ ಮೊದಲಾದ ವಿಗ್ರಹಗಳಿವೆ. ನವರಂಗದ ಈಶಾನ್ಯಮೂಲೆಯಲ್ಲಿ ಪ್ರಸಿದ್ಧವಾದ ಶಾಸನಗಳಿವೆ. ಒಂದನೆಯ ಶಾಸನದ ಮೇಲ್ಭಾಗದಲ್ಲಿ ಲಿಂಗವೂ, ಮತ್ತೊಂದರ ಮೇಲ್ಭಾಗದಲ್ಲಿ ಒಂದರ ಪಕ್ಕದಲ್ಲೊಂದು ವಿಷ್ಣು ಮತ್ತು ಜಿನ ವಿಗ್ರಹಗಳೂ ಇವೆ.

ಕೇಶವಾಲಯ—ಈ ದೇವಾಲಯದ ಪಶ್ಚಿಮಕ್ಕೆ ಇದಕ್ಕೆ ಅಂಟಿಕೊಂಡಂತೆ ಇರುವ ಚೆನ್ನಕೇಶವ ದೇವಾಲಯವೂ ದ್ರಾವಿಡ ಶಿಲ್ಪಶಾಸ್ತ್ರವನ್ನನುಸರಿಸಿ ಮಹಾದ್ವಾರದ ಮೇಲ್ಗಡೆ ಗೋಪುರವುಳ್ಳುದಾಗಿದೆ. ನವರಂಗದ ಕಂಬಗಳಲ್ಲಿ ಉತ್ತಮವಾದ ಕೆತ್ತನೆಕೆಲಸ ಮಾಡಿದೆ. ಸಿಂಹಾರೂಢರ ಚಿತ್ರಗಳೂ ಆನೆಯ ಸಾಲುಗಳೂ ಅಶ್ವ ಮತ್ತು ಯಾಳಿ ಸಮೂಹಗಳೂ ಇಲ್ಲಿ ನಾಜೂಕಾಗಿ ಕಾಣುತ್ತವೆ. ಕೇಶವ ದೇವರ ವಿಗ್ರಹವು ಸುಮಾರು ಐದು ಅಡಿ ಎತ್ತರವಾಗಿ ಪಶ್ಚಿಮಾಭಿಮುಖವಾಗಿ ನಿಂತಿದೆ. ಪೀಠವು ಸುಮಾರು ಮೂರು ಅಡಿ ಎತ್ತರ. ಉಭಯಪಾರ್ಶ್ವಗಳಲ್ಲೂ ಶ್ರೀದೇವಿ ಭೂದೇವಿಯರು ನಿಂತಿದ್ದಾರೆ. ನವರಂಗಕ್ಕೆ ಉತ್ತರ ಮತ್ತು ದಕ್ಷಿಣ ದಿಕ್ಕುಗಳಲ್ಲಿ ಪ್ರವೇಶದ್ವಾರಗಳಿವೆ. ಉತ್ತರಬಾಗಿಲು ಮಹಾದ್ವಾರಕ್ಕೆ ಅಭಿಮುಖವಾಗಿದೆ. ಮಹಾದ್ವಾರದ ಎಡಗಡೆ ಕಂಬವೊಂದರಲ್ಲಿ ಗರ್ಭಗುಡಿಯಲ್ಲಿರುವ ಚೆನ್ನಕೇಶವದೇವರ ವಿಗ್ರಹದಂತೆಯೇ ಇರುವ ಚಿಕ್ಕಕೇಶವ ಪ್ರತಿಮೆಯು ಕೆತ್ತಲ್ಪಟ್ಟಿದೆ. ಈ ಕಂಬಕ್ಕೆ ಎದುರಾಗಿರುವ ಕಂಬದಲ್ಲಿ ಸುಮಾರು ಒಂದು ಅಡಿ ಮೂರು ಅಂಗುಲ ಎತ್ತರವಿರುವ, ಅಂಜಲಿಬದ್ಧವಾಗಿ ಉತ್ತರೀಯವನ್ನು ಧರಿಸಿ ಕೈಯಲ್ಲಿ ಈಟಿಯನ್ನು ಹಿಡಿದಿರುವ ವೀರಪುರುಷನ ವಿಗ್ರಹವಿದೆ. ಇದೇ ಸಾಮಂತಬಾಚಿಯ ಪ್ರತಿಮೆ. ಭಕ್ತನಾದ ಇವನು ಚೆನ್ನಕೇಶವ ದೇವರ ಎದುರಿಗೆ ಕೈಮುಗಿದುಕೊಂಡು ನಿಂತಿದ್ದಾನೆ. ಉತ್ತರ ಪ್ರಾಕಾರದ ಗೋಡೆಯಲ್ಲಿ ಸವೆದುಹೋಗಿರುವ ಎರಡು ಪುರುಷ ವಿಗ್ರಹಗಳಿವೆ. ಇವುಗಳಲ್ಲಿ ದೊಡ್ಡದು ಜಕಣಾಚಾರಿಯೆಂಬ ಶಿಲ್ಪಿಯದೆಂದೂ, ಸಣ್ಣದು ಡಂಕಣಾಚಾರಿಯದೆಂದೂ ಜನರು ಅಂದುಕೊಳ್ಳುತ್ತಾರೆ. ಈ ವಿಚಾರವು ಅನುಮಾನಾಸ್ಪದವಾದುದೆಂದು ಮುಂದೆ ತಿಳಿಯುವುದು.

ಭೀಮಜಿನಾಲಯ—ಕೈದಾಳದ ಪ್ರಾಚೀನ ವೈಭವಕ್ಕೆ ಕಾರಣನಾದ ಸಾಮಂತಬಾಚಿಯು ವಿಶೇಷವಾಗಿ ಜೈನಮತಾವಲಂಬಿ. ಆದರೂ ಇತರ ಮತಗಳ ದ್ವೇಷಿಯಲ್ಲ. ಅವನ ಪ್ರಿಯತಮೆಯಾದ ಭೀಮಳೆದೇವಿಯು ಮಾತ್ರ ಅನನ್ಯ ಸಾಧಾರಣ ಜಿನಭಕ್ತಳು. ಆಕೆಯ ಇಷ್ಟಾನುಸಾರ ಸಾಮಂತಬಾಚಿಯು ಭೀಮಜಿ

ನಾಲಯುವೆಂಬ ಬಸದಿಯುನ್ನು ಕಟ್ಟಿಸಿದನೆಂದು ಶಾಸನದಲ್ಲಿ ಹೇಳಿದೆ. ಆದರೆ ಆ ಬಸದಿಯ ಗುರುತೇ ಕೈದಾಳದಲ್ಲಿಲ್ಲ. ಈ ಬಸದಿಗೆ ಬಿಟ್ಟದತ್ತಿಯು ಯಾರ ಉದರಭರಣಕ್ಕೋ ಆಗಿಹೋಗಿದೆ. ಬಸದಿಯು ಕಾಲನ ಕರಾಳದಂಷ್ಟ್ರಕ್ಕೆ ಆಹುತಿಯಾಯಿತೋ, ಮತಾಂಧರ ಆಹುತಿಗೆ ಸಿಕ್ಕಿ ಧ್ವಂಸವಾಗಿ ಹೋಯಿತೋ ಹೇಳುವುದಕ್ಕಾಗುವುದಿಲ್ಲ. ಈ ಬಸದಿಯು ಕೈದಾಳದ ಕೆರೆಯ ಅಂಗಳದಲ್ಲಿತ್ತೆಂದೂಹಿಸಲವಕಾಶವಿದೆ.

ರಾಮೇಶ್ವರ, ಗೌರೀಶ್ವರರು—ಊರಹೊರಗಿರುವ ರಾಮೇಶ್ವರ, ಗೌರೀಶ್ವರರ ಪಾಳುಬಿದ್ದ ಗುಡಿಗಳನ್ನು ನೋಡಿದರೆ ಯಾರಿಗಾದರೂ ಮರುಕವುಂಟಾಗುವುದು. ಎತ್ತರವಾದ ದಿಣ್ಣೆಗಳ ಮೇಲೆ ಕಟ್ಟಿರುವ ಈ ಗುಡಿಗಳು ಒಂದಾನೊಂದು ಕಾಲದಲ್ಲಿ ಬಹು ಸುಂದರವಾಗಿದ್ದುವೆಂದು ತೋರುವುದು. ರಾಮೇಶ್ವರನ ಗುಡಿಯು ಬಾಚಿಯ ಮಗಳ ಸ್ಮಾರಕ. ಈ ದೇವರುಗಳಿಗೂ ಬಾಚಿಯು ದತ್ತಿಯನ್ನು ಬಿಟ್ಟಿದ್ದಾನೆ. ಆದರೆ ಅವುಗಳಿಗೆ ಪೂಜೆ ನಡೆಯುವುದು ಸಂದೇಹ.

ವೀರಗಲ್ಲುಗಳು—ಕೈದಾಳದಲ್ಲಿರುವ ವೀರಗಲ್ಲುಗಳ ಈಗಿನ ಸ್ಥಿತಿಯು ವಿಷಾದಕರವಾಗಿದೆ. ಪ್ರಾಣದ ಮೇಲಿನ ಆಸೆಯನ್ನು ತೊರೆದು ಗೋಗ್ರಹಣಾದಿ ಯುದ್ಧಗಳಲ್ಲಿ ಏಕಾಂಗಿಗಳಾಗಿ ಕಾದಿ ರಣರಂಗದಲ್ಲಿ ಮಡಿದ ಸ್ವಾಮಿ ಸೇವಾಧುರಂಧರರಾದ ಯೋಧರ ಸ್ಮಾರಕಗಳಾದ ವೀರಗಲ್ಲುಗಳು ರಾಮೇಶ್ವರ, ಗೌರೀಶ್ವರ ಗುಡಿಗಳ ಆವರಣದಲ್ಲಿ ಅಲ್ಲಲ್ಲಿ ಮಕ್ಕಡೆಯಾಗಿ ಬಿದ್ದು ಮಣ್ಣು ಮುಕ್ಕುತ್ತಿವೆ. ದನಕಾಯುವ ಹುಡುಗರಿಗೆ ಆಸನಗಳಾಗಿಯೋ, ಕುಡುಗೋಲು ಮಸೆಯುವುದಕ್ಕೆ ಚರ್ಕಿ ಕಲ್ಲುಗಳಾಗಿಯೋ, ಅಜ್ಜರಾದ ಹೆಂಗಸರು ಕಾರ ಅರೆಯುವುದಕ್ಕಾಗಿಯೋ ಅವು ಉಪಯೋಗವಾಗುತ್ತಿವೆ. ಬಟ್ಟೆಯೊಗೆಯುವುದಕ್ಕೂ ಬೆರಣಿ ತಟ್ಟುವುದಕ್ಕೂ ಅವು ಇನ್ನೂ ಉಪಯೋಗವಾಗದಿರುವುದು ಸಂತೋಷದ ಸಂಗತಿ.

ಚಲುವರೇಶ್ವರ ದೇವಾಲಯ—ಕೈದಾಳದ ಆಗ್ನೇಯಕ್ಕೆ ಸುಮಾರು ಮೂರು ಮೈಲಿ ದೂರದಲ್ಲಿರುವ ಕಿತ್ತಿಗನ ಹಳ್ಳಿಯಲ್ಲಿ ಸಾಮಂತಬಾಚಿಯು ತನ್ನ ಪಿತಾಮಹನ ಜ್ಞಾಪಕಾರ್ಥವಾಗಿ ಚಲುವರೇಶ್ವರ ದೇವಾಲಯುವನ್ನು ಕಟ್ಟಿಸಿದನು. ಅದರ ಈಗಿನ ಸ್ಥಿತಿಯು ಅತ್ಯಂತ ದುಃಖಾವಹವಾಗಿದೆ. ಈಗಿನ ಭಗ್ನಾವಶೇಷಾವಸ್ಥೆಯಲ್ಲೂ ಅದರ ತೇಜಸ್ಸು ಕುಂದಿಲ್ಲ. ಶಿಲ್ಪಿಯ ಉಚ್ಚತರವಾದ ಕೆಲಸವು ಈಗಲೂ ಅಚ್ಚಳಿಯದೆ ಇದೆ. ಇದರ ಅನೇಕ ಕಲ್ಲಿನ ದೂಲಗಳನ್ನು ದೈವದ್ರೋಹಿಗಳಾರೋ ಆಗಲೇ ಕದ್ದೊಯ್ದಿದ್ದಾರೆ. ಒಂದಾನೊಂದು ದೂಲವನ್ನು ರಾತ್ರಿವೇಳೆಯಲ್ಲಿ ಕದ್ದೊಯ್ಯುವಾಗ ಬಂಡಿಯ ಅಚ್ಚು ಮುರಿದುಹೋಗಿ ಅದು ಈಗಲೂ ಅಲ್ಲಿಯೇ ಬಿದ್ದು ಮಣ್ಣಿನಲ್ಲಿ ಹೂತುಹೋಗಿದೆ. ಗರ್ಭಗುಡಿಯಲ್ಲಿದ್ದ ಲಿಂಗವನ್ನು ಯಾರೋ

ಒಂದು ಪುರುಷ ಪ್ರಮಾಣ ಅಗೆದು ತೆಗೆದುಕೊಂಡು ಹೋಗಿರುತ್ತಾರೆ. ನವರಂಗದ ಮೇಲ್ಭಾವಣಿಯನ್ನು ಅರೂಪಮಾಡಿದ್ದಾರೆ. ಪೀಠವೂ ಲಿಂಗವೂ ಈಗಲೂ ಯಾರೋ ಪುಣ್ಯಾತ್ಮರ ಮನೆಯಲ್ಲಿ ಒರಳುಕಲ್ಲೂ ಗುಂಡೂ ಆಗಿವೆಯಂತೆ! ಈ ದೇವರಿಗೆ ಕಿತ್ತಿಗಳ್ಳಿಯಲ್ಲಿ ಬಾಚಿ ದೇವನು ಬಿಟ್ಟ ಜಮೀನು ಯಾರ ಪಾಲಾಗಿದೆಯೋ ಪರಮೇಶ್ವರನಿಗೇ ಗೊತ್ತು. ಈಚೆಗೆ ಈ ಗ್ರಾಮದಲ್ಲಿ ಸಿದ್ಧಲಿಂಗೇಶ್ವರ, ರಂಗನಾಥಸ್ವಾಮಿಯೆಂಬ ಹೊಸ ದೇವರುಗಳು ಹುಟ್ಟಿಕೊಂಡಿದ್ದಾರೆ. ಎಂಟುನೂರು ವರ್ಷಗಳ ಕೆಳಗೆ ಪ್ರತಿಷ್ಠಿತನಾದ ಚಲುವರೇಶ್ವರನು ಮಾಯವಾಗಿ ಹೋಗಿದ್ದಾನೆ. ಪಾಳು ಗುಡಿ ಮಾತ್ರ ಕೆರೆಯ ಅಂಗಳದಲ್ಲಿ ಎತ್ತರವಾದ ಮಣ್ಣು ಗುಡ್ಡೆಯ ಮೇಲೆ ನಿಂತಿದೆ. ಕೆರೆಯು ತುಂಬಿದಾಗ ಇದೊಂದು ದ್ವೀಪ. ಆವರಣದಲ್ಲಿ ನಿಲ್ಲಿಸಿರುವ ವಿಸ್ತಾರವಾದ ಚಪ್ಪಡಿ ಕಲ್ಲಿನಲ್ಲಿ ಏನೋ ಶಾಸನವಿತ್ತೆಂದು ಕಾಣುತ್ತದೆ. ಈಗ ಅದು ಸಾಣೆಯ ಕಲ್ಲಾಗಿದೆ. ಅಕ್ಷರಗಳೆಲ್ಲಾ ನುಣ್ಣಗೆ ಸವೆದುಹೋಗಿವೆ. ದುರಾತ್ಮರಾರೋ ಶಾಸನದಲ್ಲಿ ಒಂದು ಅಕ್ಷರವೂ ಕಾಣದಂತೆ ಕಲ್ಲನ್ನು ತೇದುಹಾಕಿರಬೇಕು. ಈ ತೆರನಾದ ಪರಿಸ್ಥಿತಿಯು ಕಿತ್ತಿಗಳ್ಳಿಯವರಿಗೆ ಕೀರ್ತಿ ತರುವಹಾಗಿಲ್ಲ. ಆದ್ದರಿಂದ ಅವರು ದೇವಾಲಯವನ್ನು ದುರಸ್ತು ಮಾಡಿ ಮಾಯವಾಗಿ ಹೋಗಿರುವ ಚಲುವರೇಶ್ವರನ ಪ್ರತ್ಯಾಮ್ನಾಯವಾಗಿ ಬೇರೊಂದು ಲಿಂಗವನ್ನು ಪ್ರತಿಷ್ಠೆ ಮಾಡಿಸಿದರೆ ಅವರಿಗೆ ದೇವರು ಒಳ್ಳೆಯದನ್ನು ಮಾಡಿಯಾನು.

ಅಮ್ಮನ ತೋಟದ ಬೃಂದಾವನ—ಕೈದಾಳದ ಉತ್ತರ ದಿಕ್ಕಿನಲ್ಲಿರುವ ತೋಪಿನ ಮಧ್ಯೆ ಇರುವ ಅಮ್ಮನ ತೋಟವೆಂಬ ಬೃಂದಾವನವು ಪ್ರಾಯಶಃ ಭೀಮಜಿನಾಲಯವೆಂಬ ಬಸದಿಯು ಇದ್ದ ಸ್ಥಳವೆಂದು ತೋರುತ್ತದೆ. ಈಗ ನಾವು ಅಲ್ಲಿ ನೋಡುವ ಬೃಂದಾವನವು ಯಾರೋ ಪತಿವ್ರತೆಯು ಸಹಗಮನ ಮಾಡಿದ ಜ್ಞಾಪಕಾರ್ಥವಾಗಿ ಕಟ್ಟಲ್ಪಟ್ಟುದೆಂದು ಜೈನರು ಹೇಳುತ್ತಾರೆ. ಈ ಅಭಿಪ್ರಾಯವು ಸಾಧುವಾಗಿ ಕಾಣುವುದಿಲ್ಲ. ಈ ಬೃಂದಾವನವನ್ನು ಜೈನ ನಿಷಿಧಿಯ ಸ್ಮಾರಕವೆಂದು ಹೇಳಲಾಗುವುದಿಲ್ಲ. ಆದರೂ ವಿಷಯವನ್ನು ಅಷ್ಟಕ್ಕೇ ಬಿಟ್ಟುಬಿಟ್ಟರೆ ಅನೇಕ ಶತಮಾನಗಳಿಂದ ವಂಶಪಾರಂಪರ್ಯವಾಗಿ, ಸಾಂಪ್ರದಾಯಕವಾಗಿ ನಡೆದು ಬಂದಿರುವ ಜಿನಮತಾಭಿಮಾನಿಗಳ ಅಭಿಪ್ರಾಯಕ್ಕೆ ಭಂಗಬರುವುದು. ಆದ್ದರಿಂದ ಹಿಂದಣ ಕಾಲದ ಜೈನಮತ ಸಂಪ್ರದಾಯವೊಂದನ್ನು ಕುರಿತು ಇಲ್ಲಿ ಪ್ರಸ್ತಾವಿಸಬೇಕಾದ ಪ್ರಸಂಗ ಬಂದಿದೆ. ವಾರ್ಧಕ್ಯದ ದೆಸೆಯಿಂದಲೂ, ಗುಣವಾಗುವ ಸಂಭವವೇ ಇಲ್ಲದ ಯಾವುದಾದರೊಂದು ರೋಗವು ಪ್ರಾಪ್ತವಾಗುವುದರಿಂದಲೂ, ಪ್ರಿಯತಮರಾದವರ ವಿಯೋಗದಿಂದುಂಟಾಗುವ ದುಃಖದಿಂದಲೂ, ಆಶಾಭಂಗದಿಂದಲೂ ಇಹ

ಲೋಕದ ಜೀವಿಕೆಯಲ್ಲಿ ಬೇಸರ ಉಂಟಾದಾಗ ಧೃಢಸಂಕಲ್ಪರಾದ ಜೈನರು ನಿರಶನ ವ್ರತವನ್ನು ಕೈಕೊಂಡು ಮರಣದ ದಾರಿಯನ್ನು ಹಿಡಿಯುತ್ತಿದ್ದರು. ಇದಕ್ಕೆ ಸಲ್ಲೇಖನ ವ್ರತವೆಂದು ಹೆಸರು. ಹೀಗೆ ಸತ್ತವರ ಮಹಿಮೆಯನ್ನು ಬರೆದಿರುವ ಕಲ್ಲಿಗೆ ನಿಷಿಧಿಯ ಕಲ್ಲು ಎಂದು ಹೆಸರು. ಈ ವ್ರತವನ್ನು ಕ್ರಿ.ಪೂ. 286 ರಲ್ಲಿ ಚಂದ್ರಗುಪ್ತನು ಶ್ರವಣಬೆಳಗೊಳದಲ್ಲಿಯೂ 982 ನೆಯ ಇಸವಿಯಲ್ಲಿ ರಾಷ್ಟ್ರಕೂಟ ಅರಸ ನಾಲ್ವಡಿ ಇಂದ್ರನು ಅದೇ ಶ್ರವಣಬೆಳಗೊಳದಲ್ಲಿಯೂ, ಚಾಳುಕ್ಯರ ಅರಸನಾದ ಇಮ್ಮಡಿ ಸೋಮೇಶ್ವರನು 1068 ನೆಯ ಇಸವಿಯಲ್ಲಿ ತುಂಗಭದ್ರಾನದಿಯಲ್ಲಿಯೂ, ಆಚರಿಸಿ ಪ್ರಾಣತ್ಯಾಗಮಾಡಿದರು. ಗುಬ್ಬಿ ತಾಲ್ಲೂಕು ನಿಟ್ಟೂರಿನಲ್ಲಿ ಆದೀಶ್ವರಬಸ್ತಿಯ ಉತ್ತರ ಕಡೆ ಗೋಡೆಯಲ್ಲಿ ಒಂದು ನಿಷದಿಯ ಕಲ್ಲಿನಲ್ಲಿ ಅತ್ತೆಯಾದ ಮಾಳವ್ವೆಯೆಂಬವಳು ತನ್ನ ಸೊಸೆ ಚೌಡಿಯಕ್ಕನನ್ನು ಯಮನು ಕೊಂಡೊಯ್ದನೆಂದು ದುಃಖಿತಳಾಗಿ ತಾನೂ ಅವಳ ಸಮಾಧಿಯನ್ನು ಪ್ರವೇಶಿಸಿ ಪ್ರಾಣತ್ಯಾಗ ಮಾಡಿಕೊಂಡುದನ್ನು ಹೇಳಿದೆ.

ಕೈದಾಳದಲ್ಲಿ ಜೈನಪ್ರಾಬಲ್ಯವು ಹನ್ನೆರಡನೆಯ ಶತಮಾನದಲ್ಲಿ ಹೆಚ್ಚಾಗಿತ್ತೆಂದು ತೋರುತ್ತದೆ. ಮೊನ್ನೆ ಮೊನ್ನೆವರೆಗೂ ಅಂದರೆ 1898 ನೆಯ ಇಸವಿಯವರೆಗೂ ಜೈನ ಸಂಸಾರಗಳು ಕೈದಾಳದಲ್ಲಿದ್ದವು. ಪ್ಲೇಗಿನ ಹಾವಳಿ ಅಲ್ಲಿ ಪ್ರಾರಂಭವಾದಂದಿನಿಂದ ಜೈನರು ಕೈದಾಳವನ್ನು ತ್ಯಜಿಸಿ ತುಮಕೂರನ್ನು ಸೇರಿದರು. ಜಿನಮತ ಪ್ರಾಬಲ್ಯ ಕಾಲದಲ್ಲಿ ಕೈದಾಳದಲ್ಲಿ ಎಷ್ಟೋ ಮಂದಿ ಸಲ್ಲೇಖನ ವ್ರತವನ್ನಾಚರಿಸಿರಬೇಕು. ಈ ವ್ರತವನ್ನು ಕೈಕೊಂಡು ಅದನ್ನು ಕೊನೆಗಾಣಿಸುವುದಕ್ಕೆ ಬಾಚಿದೇವನು ಕಟ್ಟಿಸಿದ್ದ ಬಸದಿಗಿಂತಲೂ ಪವಿತ್ರವಾದ ಸ್ಥಳ ಬೇರೊಂದಿರಲಾರದು. ಆದುದರಿಂದ ಅಮ್ಮನ ತೋಟ ಪ್ರದೇಶವು ಇಂತಹ ವ್ರತವನ್ನು ಆಚರಿಸಿದವರನೇಕರನ್ನು ನೋಡಿರಬೇಕು. ಆಧುನಿಕ ಕಾಲದಲ್ಲಿಯೂ ಜೈನರು ಹೇಳುವಂತೆ ಯಾರೋ ಒಬ್ಬಾಕೆಯು ಈ ಪ್ರದೇಶ ದಲ್ಲಿ ಸಲ್ಲೇಖನ ವ್ರತವನ್ನು ಆಚರಿಸಿರಬೇಕು. ಅದಕ್ಕೆ ಬಹು ಶತಮಾನಗಳ ಹಿಂದೆ ಕೈದಾಳವನ್ನು ಆಳಿದ ಬಾಚಿದೇವನೂ ಅವನ ರಾಣಿಯಾದ ಭೀಮಲೆಯೂ ಅಮ್ಮನ ತೋಟದ ಪ್ರದೇಶದಲ್ಲೇ ಸಮಾಧಿಯಾಗಿರಬೇಕು. ಆ ಸ್ಥಳದ ಪವಿತ್ರತೆಯು ತಲತಲಾಂತರಗಳಿಂದ ಜೈನರ ಚಿತ್ತಭಿತ್ತಿಯಲ್ಲಿ ಚಿತ್ರಿತವಾಗಿ, ಈಗ ಜೈನರ ಒಂದು ಪಿಳ್ಳೆಯೂ ಕೈದಾಳದಲ್ಲಿಲ್ಲದಿದ್ದರೂ ಪ್ರತಿ ಸಂವತ್ಸರದ ಕಾರ್ತಿಕ ಮಾಸದಲ್ಲಿ ತುಮ ಕೂರಿನ ಜೈನ ಪ್ರಜೆಗಳು ಅಮ್ಮನ ತೋಟಕ್ಕೆ ಯಾತ್ರಾರ್ಥಿಗಳಾಗಿ ಬಂದು ಹೋಗುವ ಪದ್ಧತಿಯಿದೆ.

ನಾಗಕನ್ಯೆ—ಅಮ್ಮನ ತೋಟದ ಬೃಂದಾವನಕ್ಕೆ ಪಶ್ಚಿಮದಲ್ಲಿರುವ ಮರದ ಕೆಳಗೆ ನಾಗಕನ್ಯೆಯ ವಿಗ್ರಹವಿದೆ. ಇದು ನೋಡುವುದಕ್ಕೆ ಬಹು ಸುಂದರವಾದುದು.

ವಿಗ್ರಹದ ತಲೆಯ ಮೇಲೆ ಸೂರ್ಯ ಚಂದ್ರಲಾಂಛನವೂ, ಛತ್ರಿಯಂತೆ ಸರ್ಪದ ಏಳು ಹೆಡೆಗಳೂ ಇವೆ. ನಾಗಕನ್ಯೆಯು ಕಂಕುಳುಗಳಲ್ಲಿ ಎರಡು ಸರ್ಪಗಳನ್ನು ಬಹು ಪ್ರೀತಿಯಿಂದ ಇರುಕಿಸಿಕೊಂಡಿದ್ದಾಳೆ. ಆಕೆಯ ಸೊಂಟದ ಮೇಲ್ಭಾಗವೆಲ್ಲಾ ಸ್ತ್ರೀಯಾಕಾರ, ಕೆಳಭಾಗವು ಸರ್ಪಪುಚ್ಛಾಕಾರ. ಇದೇ ಪ್ರಧಾನ ವಿಗ್ರಹ. ಇದರ ಸುತ್ತಲೂ ಇದನ್ನೇ ಹೋಲುವ ಅನೇಕ ಸಣ್ಣ ವಿಗ್ರಹಗಳು ಸಾಲು ಸಾಲಾಗಿ ನೆಡಲ್ಪಟ್ಟಿವೆ. ಇವುಗಳನ್ನು ನಾಗರ ಪ್ರತಿಷ್ಠೆಮಾಡಿದವರೂ, ಇತರ ಭಕ್ತರೂ ಮಾಡಿಸಿ ತಂದು ನೆಡಿಸಿದ ಹಾಗೆ ಕಾಣುತ್ತದೆ. ಈ ವಿಗ್ರಹಕ್ಕೂ ಅಮ್ಮನ ತೋಟದ ಬೃಂದಾ ವನಕ್ಕೂ ಜೈನರು ತಂಡತಂಡವಾಗಿ ಬಂದು ಹರಕೆಯನ್ನು ಸಲ್ಲಿಸುತ್ತಾರೆ.

ಶೂಲದಾಂಜನೇಯನ ಗುಡಿ—ಕೈದಾಳದ ದಕ್ಷಿಣಕ್ಕಿರುವ ಶೂಲದ ಆಂಜ ನೇಯನ ಗುಡಿಯ ಮುಂದೆ ತಪ್ಪಿತಸ್ಥರನ್ನು ಪೂರ್ವಕಾಲದಲ್ಲಿ ಶೂಲಕ್ಕೆ ಹಾಕು ತ್ತಿದ್ದರು. ಈ ಗುಡಿಯು ನಿರ್ಜನ ಪ್ರದೇಶದಲ್ಲಿ ಎತ್ತರವಾದ ಮಣ್ಣುಗುಡ್ಡೆಯ ಮೇಲಿದೆ. ಇದು ಸಮುದ್ರ ಮಟ್ಟದಿಂದ 2771 ಅಡಿ ಎತ್ತರವಾಗಿದ್ದು ಹಿತಕರವಾದ ಹವೆಯುಳ್ಳುದಾಗಿದೆ. ಈ ಸ್ಥಳಕ್ಕೂ ಈಗಿನ ಕೈದಾಳ ಗ್ರಾಮಕ್ಕೂ ಮಧ್ಯೆ ಇರುವ ಪ್ರದೇಶದಲ್ಲಿ ಪ್ರಾಕ್ತನ ವಿಮರ್ಶಕರೂ ಭೂಗರ್ಭಶಾಸ್ತ್ರಜ್ಞರೂ ಯುಕ್ತವಾದ ಶೋಧನೆಯನ್ನು ನಡೆಯಿಸಿದಲ್ಲಿ ಭೂಗತವಾಗಿರಬಹುದಾದ ಪುರಾತನ ಸ್ಮಾರಕಗಳು ಹೇರಳವಾಗಿ ದೊರೆಯುವುದರಲ್ಲಿ ಸಂದೇಹವಿಲ್ಲ.

ಭಾಗ ೨

ಸೂಕ್ಷ್ಮವಿಚಾರ

ತುಮಕೂರಿಗೆ ದಕ್ಷಿಣದಲ್ಲಿ ಮೂರು ಮೈಲಿ ದೂರದಲ್ಲಿ ಕೈದಾಳ ಗ್ರಾಮವಿದೆ. ಹೊಯ್ಸಳರ ಕಾಲದಲ್ಲಿ ಎಂದರೆ ಈಗ್ಗೆ ೮೦೦ ವರ್ಷಗಳ ಕೆಳಗೆ ಅದು ಬಹಳ ಪ್ರಸಿದ್ಧವಾದ ಸ್ಥಳವಾಗಿತ್ತೆಂದು ಶಾಸನಗಳಿಂದ ತಿಳಿಯಬರುತ್ತದೆ. ಈ ಊರು ಪ್ರಸಿದ್ಧ ಶಿಲ್ಪಿಯಾದ ಜಕಣಾಚಾರಿಯ ಜನ್ಮಸ್ಥಳವೆಂದೂ, ಇದಕ್ಕೆ ಬಹಳ ಹಿಂದಿನಕಾಲದಲ್ಲಿ ಕ್ರೀಡಾಪುರ ವೆಂದು ಹೆಸರಿತ್ತೆಂದೂ, ನೃಪರಾಯನೆಂಬರಸನ ರಾಜ್ಯಕ್ಕೆ ರಾಜಧಾನಿಯಾಗಿತ್ತೆಂದೂ ಅದು ದಕ್ಷಿಣಕ್ಕೆ ಶೂಲದ ಆಂಜನೇಯನ ಗುಡಿಯವರೆಗೂ ವ್ಯಾಪಿಸಿತ್ತೆಂದೂ— ಇವೇ ಮೊದಲಾದ ಜನಜನಿತವಾದ ಕತೆಗಳಿವೆ. ಕೈದಾಳದ ರಾಜನೊಬ್ಬನಿಗೆ ಆಗ ಹಳ್ಳಿಯಾಗಿದ್ದ ತುಮಕೂರು ಸಹ ಸೇರಿತ್ತೆಂದೂ, ತುಮಕೂರನ್ನು ಆ ರಾಜನು ತನ್ನ ಟುಮುಕಿ ಹೊಡೆಯುವವನಿಗೆ ಇನಾಮಾಗಿ ಕೊಟ್ಟನೆಂದೂ ಪ್ರವಾದವಿದೆ. ಈ ಕತೆಗಳಲ್ಲಿ ಕೆಲವು ತಥ್ಯ, ಕೆಲವು ಮಿಥ್ಯ. ಅವುಗಳನ್ನು "ತುಮಕೂರಿನ ಇತಿಹಾಸ"

ವೆಂಬ ಉಪನ್ಯಾಸದಲ್ಲಿ ವಿಮರ್ಶೆ ಮಾಡಿರುವುದರಿಂದ ಇಲ್ಲಿ ಪುನಃ ಬರೆಯುವುದರಲ್ಲಿ ಪ್ರಯೋಜನವಿಲ್ಲವೆಂದು ಕೈಬಿಟ್ಟಿದೆ.

ಪೂರ್ವಚರಿತ್ರೆ—ಕ್ರಿಸ್ತಶಕ 817 ರಿಂದ 845 ರ ವರೆಗೆ ಗಂಗರಾಜನಾಗಿದ್ದ ಒಂದನೆಯ ರಾಜಮಲ್ಲ ಸತ್ಯವಾಕ್ಯನ ಕಾಲದಲ್ಲಿ ರಾಷ್ಟ್ರಕೂಟರ ಅರಸ ನೃಪತುಂಗ ಅಥವಾ ಅಮೋಘವರ್ಷನ (815-878) ದಳಪತಿಯಾದ ಬಂಕೇಶನು ಕೈದಾಳಕ್ಕೆ ಮುತ್ತಿಗೆ ಹಾಕಿ ಅದನ್ನು ಹಿಡಿದುಕೊಂಡನೆಂದೂ ಆಗ್ಗೆ ಕೈದಾಳದಲ್ಲಿ ಬಲವಾದ ಸೈನ್ಯವೂ, ಭದ್ರವಾದ ಕೋಟೆಯೂ ಇತ್ತೆಂದೂ, ಕೈದಾಳದ ಸೈನ್ಯವು ಧೈರ್ಯ ಸಾಹಸಗಳಿಂದ ಶತ್ರುವಿನೊಡನೆ ಯುದ್ಧಮಾಡಿತೆಂದೂ ಚರಿತ್ರೆಯಿಂದ ತಿಳಿಯ ಬರುತ್ತದೆ. ಕೈದಾಳವು ಬಹು ಪುರಾತನಕಾಲದ ಚರಿತ್ರಾರ್ಹವಾದ ಸ್ಥಳವೆಂಬುದಕ್ಕೆ ಇದೊಂದೇ ಸಂಗತಿಯು ಸಾಕು.

ಜಕಣಾಚಾರಿಯ ಕತೆ—ಕೈದಾಳದವರಿಗೆ ಜಕಣಾಚಾರಿಯೆಂಬ ಹೆಸರು ಸ್ವಪ್ನಾವಸ್ಥೆಯಲ್ಲಿಯೂ ಮರೆಯುವ ಹಾಗಿಲ್ಲ. ಕೈದಾಳ—ಜಕಣಾಚಾರಿ ಇವೆರಡು ಶಬ್ದಗಳಿಗೂ ಅವರ್ಣನೀಯವಾದ ನಿಕಟಸಂಬಂಧವಾಗಿ ಹೋಗಿದೆ. ಕೈದಾಳವೆಂದ ಕೂಡಲೇ ಜಕಣಾಚಾರಿಯ ಹೆಸರು ನೆನಪಿಗೆ ಬರುವುದಕ್ಕೆ ಒಂದು ವಿಚಿತ್ರವಾದ ಕತೆಯಿದೆ. ಕೈದಾಳಕ್ಕೆ ಹೋದವರ ಕಿವಿಗೆ ಆ ಹೆಸರು ಬೀಳದಿರುವುದಿಲ್ಲ. ಜಕಣಾಚಾರಿಯೆಂಬ ಶಿಲ್ಪಿಯು ತನ್ನ ಹೆಂಡತಿ ಗರ್ಭಿಣಿಯಾಗಿದ್ದಾಗ ಊರು ಬಿಟ್ಟುಹೋದವನು ಅನೇಕ ವರ್ಷಗಳ ವರೆಗೂ ಹಿಂತಿರುಗದೆ ದೂರದೇಶದ ರಾಜರ ಬಳಿಯಲ್ಲಿ ತನ್ನ ಶಿಲ್ಪಕೌಶಲ್ಯವನ್ನು ತೋರ್ಪಡಿಸುತ್ತ ಕಾಲ ಕಳೆಯುತ್ತಿದ್ದನು. ಇತ್ತಲಾಗಿ ಅವನ ಹೆಂಡತಿಯು ನವಮಾಸ ತುಂಬಿ ಗಂಡುಮಗುವನ್ನು ಹೆತ್ತಳು. ಆ ಹುಡುಗನು ಪ್ರಾಪ್ತ ವಯಸ್ಕನಾಗುವ ವರೆಗೂ ತನ್ನ ತಂದೆಯ ವಿಷಯವೇ ತಿಳಿಯದುದನ್ನು ನೋಡಿ ವ್ಯಸನಾಕ್ರಾಂತನಾಗಿ ತಾಯಿಯ ಅಪ್ಪಣೆ ಪಡೆದು ಜಕಣಾಚಾರಿಯನ್ನು ಹುಡುಕುವುದಕ್ಕೆ ಹೊರಟನು. ಈ ಸಂಚಾರದಲ್ಲಿ ಅವನು ಒಂದುದಿನ ಬೇಲೂರಿಗೆ ಬಂದು ಅಲ್ಲಿ ಕಟ್ಟುತ್ತಿದ್ದ ಚೆನ್ನಕೇಶವ ದೇವಸ್ಥಾನವನ್ನು ನೋಡಲು ಕುತೂಹಲದಿಂದ ಹೋಗಿ ಅಲ್ಲಿನ ಕೆಲವು ವಿಗ್ರಹಗಳನ್ನು ಪರೀಕ್ಷಿಸಿ, ನೆರೆದಿದ್ದ ಜನರ ಮುಂದೆ ಒಂದು ವಿಗ್ರಹವನ್ನು ತೋರಿಸಿ ಅದರಲ್ಲಿ ಕಳಂಕವಿದೆಯೆಂದು ಹೇಳಿದನು. ಆ ಜನರ ಗುಂಪಿನಲ್ಲಿಯೇ ಮುಖ್ಯಶಿಲ್ಪಿಯಾದ ಜಕಣಾಚಾರಿಯೂ ಇದ್ದನು. ಅವನೇ ಆ ವಿಗ್ರಹವನ್ನು ಮಾಡಿದ್ದನು. ಕಳಂಕವಿರುವ ವಿಗ್ರಹವು ಪೂಜಾರ್ಹವಲ್ಲವಾದುದರಿಂದ ಜಕಣಾಚಾರಿಯು ತಾನು ಮಾಡಿದ ಕೆಲಸದಲ್ಲಿ ಚಿಕ್ಕ ವಯಸ್ಸಿನ ಹುಡುಗನೊಬ್ಬನು ತಪ್ಪುಹುಡುಕಿದನೆಂದು ಕೋಪಿಷ್ಠನಾಗಿ, ತಪ್ಪನ್ನು ತೋರಿಸಿಕೊಟ್ಟದ್ದೇ

ಆದರೆ ತನ್ನ ಬಲಗೈಯನ್ನು ಕತ್ತರಿಸಿಕೊಳ್ಳುತ್ತೇನೆಂದು ಹುಡುಗನನ್ನು ಗದರಿಸಿದನು. ಜನರೆಲ್ಲರೂ ಕುತೂಹಲಾವಿಷ್ಟರಾದರು. ಹುಡುಗನು ಸ್ವಲ್ಪವೂ ಭಯಪಡದೆ ತಪ್ಪನ್ನು ತೋರಿಸಿಕೊಡುತ್ತೇನೆಂದು ಒಪ್ಪಿಕೊಂಡು ಕೂಡಲೇ ತೇದ ಗಂಧವನ್ನು ತರಿಸಿ ವಿಗ್ರಹಕ್ಕೆ ಬಳಿಸಿದನು. ಗಂಧವು ಎಲ್ಲಾ ಕಡೆಯಲ್ಲೂ ಒಣಗಿಹೋಗಿ ಹೊಕ್ಕಳಿನ ಪ್ರದೇಶದಲ್ಲಿ ಮಾತ್ರ ತೇವವಾಗಿಯೇ ಉಳಿಯಿತು. ಆ ಭಾಗವನ್ನು ಉಳಿಯಿಂದ ಕೆತ್ತಿ ನೋಡುವಾಗ್ಗೆ ಒಳಗಡೆಯ ಟೊಳ್ಳಿನಲ್ಲಿ ಒಂದು ಕಪ್ಪೆಯೂ ಸ್ವಲ್ಪ ನೀರೂ ಮರಳೂ ಕಂಡುಬಂದುವು. ಈ ಕಳಂಕವುಳ್ಳ ವಿಗ್ರಹವು ಈಗಲೂ ಬೇಲೂರು ದೇವಸ್ಥಾನದಲ್ಲಿದೆ. ಅದಕ್ಕೆ ಪೂಜೆಯಿಲ್ಲ. ಅದನ್ನು ಕಪ್ಪೆ ಚೆನ್ನಿಗರಾಯನೆಂದು ಕರೆಯುತ್ತಾರೆ. ಈ ಆಶ್ಚರ್ಯವನ್ನು ಕಂಡು ಜಕಣಾಚಾರಿಗೆ ತಡೆಯಲಾರದಷ್ಟು ದುಃಖವಾಯಿತು. ಪ್ರತಿಜ್ಞೆಯಂತೆ ತನ್ನ ಬಲಗೈಯನ್ನು ಕತ್ತರಿಸಿಕೊಂಡನು. ಅನಂತರ ಇಷ್ಟು ಚಿಕ್ಕವಯಸ್ಸಿನಲ್ಲಿಯೇ ಶಿಲ್ಪಶಾಸ್ತ್ರದಲ್ಲಿ ಅಸಾಧಾರಣವಾದ ಪಾಂಡಿತ್ಯವನ್ನು ಪಡೆದ ಬಾಲಕನಾರೆಂದು ವಿಚಾರಿಸಿದಾಗ ಅವನು ತನ್ನ ಮಗನೇ ಎಂದು ತಿಳಿಯಿತು. ಆಮೇಲೆ ಒಂದಾನೊಂದು ದಿನ ಜಕಣಾಚಾರಿಗೆ ಕನಸಿನಲ್ಲಿ ಅವನ ಜನ್ಮಸ್ಥಳವಾದ ಕ್ರೀಡಾಪುರದಲ್ಲಿ ಕೇಶವ ದೇವರಿಗೆ ಅಂದವಾದ ದೇವಸ್ಥಾನವನ್ನು ಕಟ್ಟಬೇಕೆಂದು ಭಗವಂತನ ಆಜ್ಞೆಯಾಯಿತು. ಮಾರನೆಯ ದಿನವೇ ತಂದೆಯೂ ಮಗನೂ ಕ್ರೀಡಾಪುರಕ್ಕೆ ಪ್ರಯಾಣಮಾಡಿ ಬಂದು ದೇವಸ್ಥಾನ ಕಟ್ಟಲು ಪ್ರಾರಂಭಿಸಿದರು. ಜಕಣಾಚಾರಿಯು ಎಡಗೈಯಲ್ಲೇ ಸಾಧ್ಯವಾದಷ್ಟು ಕೆಲಸಮಾಡಿದನು. ಮಗನೂ ಅವನ ಸಹಾಯಕ್ಕೆ ನಿಂತಿದ್ದರಿಂದ ದೇವಾಲಯನಿರ್ಮಾಣವೂ ಜಾಗ್ರತೆಯಾಗಿಯೇ ಮುಗಿಯಿತು. ದೇವಾಲಯವು ಪೂರ್ತಿಯಾದ ಉತ್ತರಕ್ಷಣದಲ್ಲಿಯೇ ಜಕಣಾಚಾರಿಯು ಕತ್ತರಿಸಿಕೊಂಡಿದ್ದ ಕೈ ಬೆಳೆದು ಮೊದಲಿನಂತೆ ಆಯಿತು. ಈ ಸಂಘಟನೆಯ ಜ್ಞಾಪಕಾರ್ಥವಾಗಿ ಕ್ರೀಡಾಪುರಕ್ಕೆ ಅಂದಿನಿಂದ 'ಕೈದಳ' ಅಂದರೆ ಪುನರ್ಲಭ್ಯವಾದ ಕೈಯೆಂದು ಹೆಸರಾಯಿತು.

ಜಕಣಾಚಾರಿಯ ಕತೆ ವಿಮರ್ಶೆ—ತಲತಲಾಂತರದಿಂದ ಜನಜನಿತವಾಗಿರುವ ಈ ಕತೆಯಲ್ಲಿ ಲವಲೇಶವೂ ನಿಜವಿಲ್ಲವೆಂದು ಹೇಳಲು ಸಂಕೋಚವಾಗುತ್ತದೆ. ಹೇಳದಿದ್ದರೆ ವಿಧಿಯಿಲ್ಲ. ಇದು ಕಲ್ಪಿತ ಕತೆಯೆಂಬುದಕ್ಕೆ ಆಧಾರಗಳು ಬೇಕಾದಷ್ಟಿವೆ. ಒಂದೆರಡು ಆಧಾರಗಳನ್ನು ಕೊಟ್ಟರೆ ಸಾಕೆಂದು ತೋರುವುದು. ಶಾಸನದಲ್ಲಿಯೂ ಅದಕ್ಕೆ ಮುನ್ನೂರು ವರ್ಷಗಳ ಹಿಂದೆಯೂ 'ಕಯದಳ' 'ಕಯ್ದಾಳ' ಎಂಬ ಹೆಸರುಗಳಿವೆ. ಈ ಹೆಸರುಗಳು ಅಪಭ್ರಂಶವಾಗಿ 'ಕೈದಾಳ'ವಾಗಿದೆ. ಆದ್ದರಿಂದ 'ಕೈದಾಳ'ವೆಂಬುದು ಕೃತಕನಾಮ. ಕೈದಾಳದ ಕೇಶವ ದೇವರ ದೇವಸ್ಥಾನವನ್ನು ಕಟ್ಟಿದುದು

1151 ನೆಯ ಇಸವಿಯಲ್ಲಿ. ಇದಕ್ಕೆ 300 ವರ್ಷಗಳ ಹಿಂದೆಯೇ ಎಂದರೆ ರಾಷ್ಟ್ರಕೂಟರ ಅಮೋಘ ವರ್ಷನ ದಳಪತಿ ಬಂಕೇಶನು ಈ ಊರಿಗೆ ದಂಡೆತ್ತಿ ಬಂದಾಗ ಅದಕ್ಕೆ ಕಯದಳ ಅಥವಾ ಕಯ್ದಾಳವೆಂಬ ಹೆಸರಿತ್ತು. ಆದ್ದರಿಂದ ದೇವಸ್ಥಾನ ಕಟ್ಟಿದ ಮೇಲೆ ಕೈದಳವೆಂಬ ಹೆಸರು ಬಂದಿತೆಂದು ಹೇಳುವುದು ಅಸಮಂಜಸವೂ ಅಬದ್ಧವೂ ಆಗಿವೆ. ಕೈದಾಳವು ಜಕಣಾಚಾರಿಯ ಸ್ಥಳವಲ್ಲವೆಂಬುದಕ್ಕೂ ಈ ಆಧಾರವೇ ಸಾಕು. ಜಕಣಾಚಾರಿಯೆಂಬವನು ಪ್ರಸಿದ್ಧ ಶಿಲ್ಪಿಗಳಲ್ಲೊಬ್ಬನಾಗಿರಬೇಕು. ಅವನು ಕೈದಾಳದ ದೇವಸ್ಥಾನಗಳಲ್ಲಿ ಯಾವುದೊಂದನ್ನಾದರೂ ಕಟ್ಟಿದನೆಂಬುವಕ್ಕೆ ಯಾವ ಆಧಾರವೂ ಇಲ್ಲ. ಅವನ ಮಗನ ಹೆಸರೇನೋ ಅದೂ ಗೊತ್ತಾಗಿಲ್ಲ. ಡಂಕಣಾಚಾರಿ ಯೆಂದು ಕೆಲವರು ಹೇಳುತ್ತಾರೆ. ಇವರಿಬ್ಬರೂ ಜೀವಿಸಿದ್ದ ಕಾಲವೂ ನಿಷ್ಕರ್ಷೆ ಯಾಗಿಲ್ಲ. ಮೈಸೂರು ದೇಶದಲ್ಲಿರುವ ಅನೇಕ ದೇವಸ್ಥಾನಗಳನ್ನು ಜಕಣಾಚಾರಿಯು ಕಟ್ಟಿದನೆಂದು ಹೇಳುವುದು ವಾಡಿಕೆ. ಹಲವು ದೇವಸ್ಥಾನಗಳಲ್ಲಿಯೂ ಶಾಸನ ಗಳಲ್ಲಿಯೂ ಅವುಗಳನ್ನು ಕಟ್ಟಿದ ಅಥವಾ ಕೆತ್ತಿದ ಶಿಲ್ಪಿಗಳ ಹೆಸರುಗಳು ದೊರೆಯು ತ್ತವೆ. ಉದಾಹರಣೆಗಾಗಿ, ಬಿಡಿಗೋಜನೆಂಬ ಶಿಲ್ಪಿಯು ಶ್ರವಣಬೆಳಗೊಳದ ಗೊಮ್ಮ ಟೇಶ್ವರ ವಿಗ್ರಹವನ್ನು ಕೆತ್ತಿದನು. ಕೇದಾರೋಜನು ಬೇಲೂರು ದೇವಸ್ಥಾನವನ್ನು ಕಟ್ಟಿದನು. ಪಲ್ಲವಾಚಾರಿ ಎಂಬವನು ಶ್ರವಣಬೆಳಗೊಳದ 21 ನೆಯ ಶಾಸನವನ್ನು ಕೊರೆದನು. ಇದೇ ರೀತಿಯಲ್ಲಿ ಧರಣೋಜ, ಓಬೋಜ, ತಿಪ್ಪಣೋಜ, ನಾಗೋಜ, ದಾಸೋಜ, ಗಂಗಾಚಾರಿ, ಮಲ್ಲಿತಮ್ಮ, ಧನಪತಿಯಾಚಾರಿ, ವರ್ಧಮಾನಾಚಾರಿ, ಮಧುರೋಜ ಮೊದಲಾದ ಶಿಲ್ಪಿಗಳ ಹೆಸರು ಅವರು ಕಟ್ಟಿದ ದೇವಾಲಯಗಳ ಪ್ರಾಕಾರದ ಗೋಡೆಗಳಲ್ಲಿ ಕಂಡುಬರುತ್ತವೆ. ಜಕಣಾಚಾರಿಯೆಂಬ ಹೆಸರು ಎಲ್ಲಿಯೂ ಕಾಣದಿರುವುದು ಆಶ್ಚರ್ಯ. ಹೀಗಿರುವಾಗ ಅವನು ಅನೇಕ ದೇವಾಲಯಗಳನ್ನು ಕಟ್ಟಿದನೆಂಬುದನ್ನು ನಂಬುವ ಬಗೆ ಹೇಗೆ? ಬೇಲೂರು ಚೆನ್ನಕೇಶವ ದೇವಸ್ಥಾನವನ್ನು ಸ॥ 1117 ರ ಸುಮಾರಿನಲ್ಲಿ ಕಟ್ಟುವಾಗ್ಗೆ ಎಷ್ಟೇ ಕಡಿಮೆಯೆಂದರೂ ಇಪ್ಪತ್ತು ಪ್ರಸಿದ್ಧ ಶಿಲ್ಪಿಗಳು ಅಲ್ಲಿ ಕೆಲಸಮಾಡುತ್ತಿದ್ದರೆಂದು ತಿಳಿಯಬರುತ್ತದೆ. ಒಂದಲ್ಲ ಒಂದು ಬಳಿ ಅವರ ಹೆಸರುಗಳಿವೆ. ಜಕಣಾಚಾರಿಯ ಹೆಸರು ಅಲ್ಲಿಲ್ಲ. ಸ॥ 1141 ರಿಂದ 1173 ರ ವರೆಗೆ ಆಳಿದ ಹೊಯ್ಸಳ ಒಂದನೆಯ ನರಸಿಂಹರಾಜನಿಗೆ ಕೇದಾರೋಜನು ಆಸ್ಥಾನ ಶಿಲ್ಪಿಯಾಗಿದ್ದನು. ಕೈದಾಳದ ಚೆನ್ನಕೇಶವ ದೇವಾಲಯವನ್ನು ಕಟ್ಟಿದ್ದು 1151 ರಲ್ಲಿ. ಆದ್ದರಿಂದ ಕೇದಾರೋಜನ ಮೇಲ್ವಿಚಾರಣೆಗೊಳಪಟ್ಟ ಯಾವನೋ ಒಬ್ಬ ಶಿಲ್ಪಿಯು ಇದನ್ನು ಕಟ್ಟಿರಬೇಕು. ಜಕ್ಕಣ್ಣನೆಂಬೊಬ್ಬ ಶಿಲ್ಪಿಯು 1260 ರಲ್ಲಿ, ಎಂದರೆ ಕೈದಾಳ ದೇವಸ್ಥಾನ ನಿರ್ಮಾಣವಾದ 110 ವರ್ಷಗಳ ತರುವಾಯ, ತುರುವೇ

ಕೆರೆ ಮೂಲಶಂಕರೇಶ್ವರ ದೇವಸ್ಥಾನವನ್ನು ಕಟ್ಟಿದನೆಂದು ಗೊತ್ತಾಗಿದೆ. ಹೀಗಿರುವಲ್ಲಿ ಈ ಜಕ್ಕಣ್ಣನು ಕೈದಾಳದ ದೇವಸ್ಥಾನವನ್ನು ಕಟ್ಟಿದನೆಂದು ಹೇಳುವುದಕ್ಕೂ ಸಹ ಸಾಧ್ಯವಿಲ್ಲ. ಜಕಣಾಚಾರಿಯೆಂಬ ಪ್ರಸಿದ್ಧ ಶಿಲ್ಪಿಯು ಅನೇಕ ಶತಮಾನಗಳ ಹಿಂದೆ ಬದುಕಿದ್ದನೆಂದು ಯೋಚಿಸೋಣ. ಅವನ ಕಾಲಾನಂತರ ಅವನಲ್ಲೇ ಶಿಲ್ಪವಿದ್ಯೆಯನ್ನು ಕಲಿತ ಅನೇಕ ಶಿಷ್ಯರು ಅವನಷ್ಟೇ ಅಥವಾ ಅವನನ್ನು ಮೀರಿಸಿದ ಕೌಶಲ್ಯದಿಂದ ದೇವಸ್ಥಾನಗಳನ್ನು ರಚಿಸಿ ಗುರುದಕ್ಷಿಣಾರೂಪವಾಗಿ ಆ ದೇವಸ್ಥಾನಗಳು ಜಕಣಾಚಾರಿ ಕೃತವೆಂದು ಹೇಳಿಕೊಂಡಿರಬಹುದು. ಹೀಗೆ ವಿಚಾರವು ಒಬ್ಬರಿಂದೊಬ್ಬರಿಗೆ ಹರಡಿ ಜಕಣಾಚಾರಿಯು ಈ ಲೋಕವನ್ನು ಬಿಟ್ಟು ಹೋದಮೇಲೆ ಅನೇಕ ಶತಮಾನಗಳಾಗಿ ಹೋಗಿದ್ದಾಗ್ಯೂ ಎಲ್ಲಾ ಉತ್ಕೃಷ್ಟ ದೇವಾಲಯಗಳೂ ಜಕಣಾಚಾರಿಯು ಕಟ್ಟಿದುದೆಂದು ಹೇಳಿಬಡುವುದು ಸಂಪ್ರದಾಯವಾಗಿ ಹೋಗಿದೆ. ಇಂತಹ ಸಂದರ್ಭಗಳಲ್ಲಿ 'ಜಕಣಾಚಾರಿಕೃತ' ಎಂಬುದಕ್ಕೆ "ಜಕಣಾಚಾರಿ ಶಿಲ್ಪ ಕ್ರಮವನ್ನನುಸರಿಸಿದುದು" ಎಂದು ಅರ್ಥಮಾಡುವುದು ಯುಕ್ತವೆಂದು ತೋರುತ್ತದೆ.

ಒಟ್ಟಿನಲ್ಲಿ ಮೇಲೆ ಹೇಳಿದ ಜಕಣಾಚಾರಿ ಕತೆಯು ಕೇವಲ ಕಲ್ಪನೆಯೆಂದು ಹೇಳಿದರೆ ತಪ್ಪಾಗುವುದಿಲ್ಲ. ಜಕಣಾಚಾರಿ, ಡಂಕಣಾಚಾರಿ ಎಂಬ ಶಬ್ದಗಳು "ದಕ್ಷಿಣಾಚಾರ" ಅಥವ "ದಖ್ಖಣಾಚಾರ" ಎಂಬುದರಿಂದ ಹುಟ್ಟಿದವುಗಳೆಂದೂ "ದಕ್ಷಿಣ ದೇಶದ ಶಿಲ್ಪ" ಎಂದು ಅವಕ್ಕೆ ಅರ್ಥವೆಂದೂ ನಾವು ತಿಳಿಯಬೇಕು.

ವೀರಗಲ್ಲುಗಳು—ಕೈದಾಳದಲ್ಲಿ ಒಟ್ಟು ಆರು ವೀರಗಲ್ಲುಗಳಿವೆ. ಇವುಗಳಲ್ಲಿ ನಾಲ್ಕು ರಾಮೇಶ್ವರ ದೇವಸ್ಥಾನದ ಆವರಣದಲ್ಲೂ, ಒಂದು ಪ್ರಸನ್ನಗಂಗಾಧರೇಶ್ವರನ ಗುಡಿಯ ಮುಂದೆಯೂ ಇನ್ನೊಂದು ಕೈದಾಳದ ಕೆರೆಯ ಪಶ್ಚಿಮಕೋಡಿಗೆ ಹೋಗುವ ದಾರಿಯಲ್ಲಿರುವ ಗೊಬ್ಬರದ ಗುಂಡಿಗಳ ಮಧ್ಯದಲ್ಲೂ ಇದೆ. ರಾಮೇಶ್ವರ ದೇವಸ್ಥಾನದ ಆವರಣದಲ್ಲಿರುವ ನಾಲ್ಕು ವೀರಗಲ್ಲುಗಳಲ್ಲಿಯೂ ಅಕ್ಷರಗಳೊಂದೂ ಕಾಣಿಸುವುದಿಲ್ಲ. ಅವುಗಳಲ್ಲಿರುವ ಪ್ರತಿಮೆಗಳು ಮಾತ್ರ ಅಂದವಾಗಿವೆ. ಕೆರೆಯ ಪಶ್ಚಿಮಕೋಡಿ ದಾರಿಯಲ್ಲಿರುವ ವೀರಗಲ್ಲು ಬಹಳ ವಿಸ್ತಾರವಾದುದು. ಇದರಲ್ಲೂ ಮುಕ್ಕಾಲು ಮೂರುವೀಸವಾಲು ಅಕ್ಷರಗಳೆಲ್ಲಾ ಮಸುಣಿಸಿ ಹೋಗಿವೆ. ಇದು 1283 ನೆಯ ಇಸವಿಯದು, ಎಂದರೆ ಹೊಯ್ಸಳ ವೀರರಾಮನಾಥದೇವನ (1254-1295) ಕಾಲದ್ದು. ವಿಷಯವು ಸಮಗ್ರವಾಗಿ ಅರ್ಥವಾಗುವ ಹಾಗಿಲ್ಲ. ಯಾರೋ ಒಬ್ಬನು ಮಗಳ ಜೀತದ ಆಳಿನ ಮಗನು ಯುದ್ಧಮಾಡಿ ಕೈದಾಳದಲ್ಲಿ ಸತ್ತುದರ ಜ್ಞಾಪಕಾರ್ಥವಾಗಿ ಈ ಕಲ್ಲು ಸ್ಥಾಪಿಸಲ್ಪಟಿದೆ.

ವೀರಗಲ್ಲು ಕ್ರಿ. ಶ. 1121—ಪ್ರಸನ್ನ ಗಂಗಾಧರೇಶ್ವರನ ಗುಡಿಯ ಮುಂದಿರುವ ವೀರಗಲ್ಲು ಸಹ ಬಹಳ ಅರೂಪವಾಗಿದೆ. ಭಾಷೆಯು ಸ್ವಲ್ಪವೂ ಚೆನ್ನಾಗಿಲ್ಲ. ಗ್ರಾಮ್ಯ ಶಬ್ದಗಳೂ ಅಕ್ಷರ ದೋಷಗಳೂ ಬಹಳವಾಗಿವೆ. ಅಲ್ಲಲ್ಲಿ ಅಕ್ಷರಗಳು ಜಜ್ಜಿ ಹೋಗಿರುವುದರಿಂದ ವಿಷಯವು ಅಪೂರ್ಣವಾಗಿದೆ. ಕೊನೆಯಲ್ಲಿ ಅಶುದ್ಧವಾದ ಒಂದು ಕಂದಪದ್ಯವೂ ಒಂದು ವೃತ್ತವೂ ಇವೆ. ಈ ಕಲ್ಲಿನಲ್ಲಿ ವಾಡಿಕೆಯಲ್ಲಿದ್ದ ಶಾಲಿವಾಹನ ಶಕವನ್ನು ಹೇಳದೆ ಚಾಳುಕ್ಯ ವಿಕ್ರಮಾದಿತ್ಯ ಶಕೆಯನ್ನು ಹೇಳಿರುವುದು ವಿಶೇಷದ ಸಂಗತಿ. ಈ ಶಕವು 1076 ನೆಯ ಇಸವಿಯಲ್ಲಿ ಪ್ರಾರಂಭವಾಯಿತೆಂದು ನಿರ್ಧರವಾಗಿರುವುದರಿಂದಲೂ, ಈ ವೀರಗಲ್ಲಿನಲ್ಲಿ "ವಿಕ್ರಮ ವರ್ಷ ನಲವತ್ತೈದನೆಯ" ಎಂದಿರುವುದರಿಂದಲೂ, ಇದು 1121 ನೆಯ ಇಸವಿಯಲ್ಲಿ ಸ್ಥಾಪಿಸಲ್ಪಟ್ಟುದು. ಕೀರ್ತಿಶೇಷರಾದ ಮಿ|| ರೈಸ್ ಸಾಹೇಬರವರು ಇದರ ಇಸವಿ 1112 ಎಂದು ಹೇಳಿರುವುದಕ್ಕೆ ಆಧಾರವಿಲ್ಲ. ಈ ಕಲ್ಲಿನಲ್ಲಿ "ಚೆಲ್ಲೆನ ಸೀಬನೂ ಬರಮನೂ ಕಯ್ದಾಳಕ್ಕೆ ದಂಡೆತ್ತಿ ಬಂದಾಗ ಭಂಟನಾದ ಚಿರುಕುರುಪಾಲನೆಂಬುವನು ಸೈನ್ಯವನ್ನು ಏಕಾಂಗಿಯಾಗಿ ಎದುರಿಸಿ ರಣರಂಗದಲ್ಲಿ ಬಿದ್ದನು" ಎಂದು ಹೇಳಿದೆ. ಕ್ರಿ.ಶ. 800 ರಿಂದ 1121 ರ ವರೆಗೆ ಕೈದಾಳದಲ್ಲಿ ನಡೆದ ಹಲವು ಯುದ್ಧಗಳ ಫಲವಾಗಿ ಈ ವೀರಗಲ್ಲುಗಳು ಸ್ಥಾಪಿತವಾಗಿವೆಯೆಂಬುದರಲ್ಲಿ ಸಂದೇಹವಿಲ್ಲ.

ಶಿಲಾಶಾಸನಗಳು—ಕೈದಾಳದಲ್ಲಿರುವ ಎರಡು ಶಿಲಾಶಾಸನಗಳೂ ಪ್ರಸನ್ನ ಗಂಗಾಧರೇಶ್ವರ ದೇವಸ್ಥಾನದ ನವರಂಗದ ಈಶಾನ್ಯ ಮೂಲೆಯಲ್ಲಿವೆ. ಇವುಗಳನ್ನು ಹೊಳಪುಕೊಟ್ಟ ಬಳಪದ ಕಲ್ಲಿನ ಚಪ್ಪಡಿಗಳಲ್ಲಿ ಶಿಲ್ಪಿಯು ಕೆತ್ತಿದ್ದಾನೆ. ಭಾಷೆಯು ಗದ್ಯಪದ್ಯ ಮಿಶ್ರವಾಗಿ ದಂಡಾಕಾರವಾಗಿ ಬರೆಯಲ್ಪಟ್ಟಿದೆ. ಒಂದೊಂದು ಚಪ್ಪಡಿಯೂ ಐದು ಅಡಿ ಎತ್ತರ, ಎರಡುವರೆ ಅಡಿ ಅಗಲವಾಗಿದೆ. ಒಂದನೆಯ ಚಪ್ಪಡಿಯಲ್ಲಿ ಅರವತ್ತೊಂದು ಪಙ್ಕ್ತಿಗಳೂ, ಎರಡನೆಯ ಚಪ್ಪಡಿಯಲ್ಲಿ ಐವತ್ತಾರು ಪಙ್ಕ್ತಿಗಳೂ ಒಟ್ಟು 117 ಪಙ್ಕ್ತಿಗಳು ಇವೆ. ಅಂಚುಗಳಲ್ಲಿ ಬರೆದ ಕೆಲವು ಅಕ್ಷರಗಳು ಜಜ್ಜಿ ಹೋಗಿವೆ. ಆದ್ದರಿಂದ ಕೆಲವೆಡೆಗಳಲ್ಲಿ ಅರ್ಥಸಮನ್ವಯ ಮಾಡುವುದಕ್ಕೆ ಸಾಧ್ಯವಿಲ್ಲ. ಆದರೂ ಶಾಸನದ ಬರವಣಿಗೆಯು ಸ್ಫುಟವಾಗಿದೆ. ಶಿಲ್ಪಿಯ ಅಜ್ಞತೆಯಿಂದುಂಟಾದ ಕಾಗುಣಿತ ದೋಷಗಳೂ ಛಂದೋದೋಷಗಳೂ ಅಲ್ಲಲ್ಲಿ ಕಂಡುಬರುತ್ತವೆ. ಗದ್ಯವಲ್ಲದೆ 25 ವೃತ್ತಗಳೂ 28 ಕಂದಪದ್ಯಗಳೂ ಶಾಸನಗಳಲ್ಲಿ ಸೇರಿವೆ. ಮೂಲದ ಭಾಷಾಸ್ಖಾಲಿತ್ಯಗಳು ವಿಷಯಗ್ರಹಣಕ್ಕೇನೂ ಅಡ್ಡಿಮಾಡಲಾರವು.

ಚರಿತ್ರೆಯ ದೃಷ್ಟಿಯಿಂದ ಈ ಶಾಸನಗಳು ಬಹಳ ಮಹತ್ವವುಳ್ಳುವಾಗಿವೆ. ಇವುಗಳನ್ನು ಬರೆದುದು 1151 ನೆಯ ಇಸವಿಯಲ್ಲಿ ; ಸ್ 1141 ರಿಂದ 1173 ರ ವರೆಗೆ

ದ್ವಾರಸಮುದ್ರದಲ್ಲಿ ಆಳಿದ ಹೊಯ್ಸಳ ಒಂದನೆಯ ನರಸಿಂಹನ ಕಾಲಕ್ಕೆ ಸೇರಿದುವು. ಇವನಿಗೆ ಪ್ರತಾಪ ನರಸಿಂಹನೆಂತಲೂ ಹೆಸರಿದೆ. ಇವನ ರಾಜ್ಯವು ಸರಿಸುಮಾರಾಗಿ ಕೃಷ್ಣಾನದಿಯಿಂದ ರಾಮೇಶ್ವರದ ವರೆಗೂ ವ್ಯಾಪಿಸಿತ್ತು. ಇವನ ಕೈಕೆಳಗಿನ ಅಧಿರಾಜರುಗಳಲ್ಲಿ ತುಮಕೂರು ತಾಲ್ಲೂಕಿನ ಮಧ್ಯಭಾಗವಾದ ಮರುಗೆರೆನಾಡು ಎಂಬ ಪ್ರಾಂತವನ್ನು ಆಳುತ್ತಿದ್ದವನು ಈ ಸಾಮಂತ ಬಾಚಿದೇವನೆಂಬವನೊಬ್ಬನು. ಈ ಬಾಚಿದೇವನೇ ಕೈದಾಳದ ಶಾಸನವನ್ನು ಬರೆಯಿಸಿದವನು.

ಸಾಮಂತ ಬಾಚಿದೇವ—ಇನ್ನು ಮುಂದೆ ಹೇಳುವುದು ಸಾಮಂತ ಬಾಚಿದೇವನ ವಿಷಯವಾದುದರಿಂದ ಇವನು ಯಾರೆಂಬುದನ್ನು ತಿಳಿಯುವುದು ಅವಶ್ಯಕವಾಗಿದೆ. ಬಾಚಿದೇವನ ಪೂರ್ವಜರು ರಾಷ್ಟ್ರಕೂಟ ಅರಸರ ಆಶ್ರಿತರಾಜರು. ರಾಷ್ಟ್ರಕೂಟರು ಹೊಯ್ಸಳರಿಂದ ಪರಾಜಿತರಾದ ಮೇಲೆ (ಕ್ರಿ.ಶ. 950) ಇವರು ಮಾನ್ಯಖೇಟಪುರದಲ್ಲಿ ಎಂದರೆ ರಾಷ್ಟ್ರಕೂಟ ರಾಜಧಾನಿಯಾಗಿದ್ದು ಈಗ ಹೈದರಾಬಾದಿನಲ್ಲಿ ಮಳ್ಖೇಡ್ ಎಂದು ಕರೆಯಲ್ಪಡುವ ಊರಿನಲ್ಲಿ, ಹೊಯ್ಸಳರಸರ ಸಾಮಂತರಾಗಿ ಅಧಿಕಾರಮಾಡುತ್ತಿದ್ದರು. ಇವರು ಅದಳವಂಶ ಅಥವಾ ಮಿತ್ರಕುಲದವರು ಎಂದರೆ ಸೂರ್ಯವಂಶದವರು. ಇವರಿಗೆ ಗಂಗಪುತ್ರರೆಂಬ ಅನ್ವರ್ಥನಾಮವಿದೆ. ಇವರು ಪೌರುಷರು, ವೀರರಸಪ್ರಿಯರು, ಸಾಮಂತ ಸಂಕ್ರಂದರು, ಸಾಮಂತಕಾಳಾನಳರು ಎಂದು ಹೇಳಿದೆ. ಕೈದಾಳದ ಸಮೀಪದಲ್ಲಿರುವ ಅದಳಾಪುರದ ಕೆರೆಯನ್ನೂ ಗಂಗಸಂದ್ರವನ್ನೂ, ನಿಟ್ಟೂರು ಹೋಬಳಿಯಲ್ಲಿರುವ ಅದಲಗೆರೆಯನ್ನೂ ಕಟ್ಟಿಸಿದವರು ಈ ವಂಶದವರೇ.

ಬಾಚಿದೇವನ ವಂಶವೃಕ್ಷ—ಈ ವಂಶದ ಮೂಲಪುರುಷ ಬಾಸಯ. ಬಾಸಯನ ಮಗ ಗಡ್ಡದಗಂಗ, ಇವನ ಮಗ ನಾಯಕಬಸವ, ಇವನ ಮಗ ಗಂಗ, ಇವನ ಮಗ ಒಸವ, ಇವನ ಮಗ ಜಲುವರ, ಇವನ ಮಗ ವೀರಗಂಗ. ಕೊನೆಯಲ್ಲಿ ಹೇಳಿದ ವೀರಗಂಗನು ಹೊಯ್ಸಳ ವಿಷ್ಣುವರ್ಧನನ (1106-1141) ಸಾಮಂತನಾಗಿ ದೊರೆಯ ಮೆಚ್ಚುಗೆಗೋಸ್ಕರ ವಿಷ್ಣುಸಾಮಂತನೆಂದು ಹೆಸರಿಟ್ಟುಕೊಂಡಿದ್ದನು. ಇವನು ಶಿವಗಂಗೆ ಬೆಟ್ಟದ ಮೇಲೆ ಗಂಗಾಧರೇಶ್ವರನ ಗುಡಿಕಟ್ಟಿಸಿ ದತ್ತಿಯನ್ನು ಬಿಟ್ಟನು. ತುಮಕೂರು ತಾಲ್ಲೂಕು ಬ್ರಹ್ಮಸಂದ್ರ ಗ್ರಾಮವನ್ನೂ ಅಲ್ಲಿನ ಬ್ರಹ್ಮೇಶ್ವರ ದೇವಾಲಯವನ್ನೂ ತನ್ನ ತಂದೆ ಜಲುವರನ ಜ್ಞಾಪಕಾರ್ಥವಾಗಿ ಕಟ್ಟಿಸಿದನು. ತನ್ನ ತಾಯಿ ಜಿನವಾಂಬಿಕೆಯ ಹೆಸರಿನಲ್ಲಿ ಅನೇಕ ಜಿನಾಲಯಗಳನ್ನೂ ಅದಳೇಶ್ವರ ದೇವಾಲಯಗಳನ್ನೂ ತುಮಕೂರು ತಾಲ್ಲೂಕಿನ ವಿಷ್ಣುಸಮುದ್ರ, ಬೋಜಸಮುದ್ರ (ಬಾಚೆಂದ್ರ) ಎಂಬ ಕೆರೆಗಳನ್ನೂ ಕಟ್ಟಿಸಿದನು. ವೀರಗಂಗನು ಜಯಾಂಗನಾ ರಮಣನೂ ಕದನೋದ್ಯೋಗ ಧುರಂಧರನೂ ಹೌದು. ಇವನು

ಭೀಮಂಗೆಣೆ ಭುಜಬಳದಿಂ
ರಾಮಂಗೆಣೆ ಶೌರ್ಯದೇಳ್ಗೆಯಿಂ ರೂಪಿನೊಳಾ |
ಕಾಮಂಗೆಣೆಯೆನಲೊಪ್ಪಿದ
ನೀ ಮಹಿಯೊಳ್ ಗಂಗನಮಳ ಲಕ್ಷ್ಮೀಸಂಗಂ ||

ಈ ವೀರಗಂಗನ ಮಗನೇ ಬಾಚಿದೇವ. ಇವನು ಜನ್ಮವೆತ್ತಿದುದನ್ನು ಶಾಸನ ಕವಿಯು ಹೀಗೆ ವರ್ಣಿಸಿದ್ದಾನೆ:—

ಅದಳ ಕುಳವೆಂಬ ಕುಲದೊಳ |
ಗುದಯಿಸಿದಂ ದಿನಪನಂತೆ ತೇಜೋನಿಳಯಂ ||
ಕದನ ಧನಂಜಯನಹಿತರ |
ಮದಹರಣಂ ಶೂರಬಾಚಿ ತೊಡರ್ದರ ಡೊಂಕೀ ||

ಇವನಿಗೆ ಗೂಳಿ ಬಾಚಿಯೆಂತಲೂ, ಬಾಚಯನೆಂತಲೂ ಹೆಸರಿದೆ. ನೀಲಗ್ರೀವ ಪದಾಬ್ಜ ಭೃಂಗಂ, ಹರಪಾದಾಂಬುಜ ಭೃಂಗ ಬಾಚಯಂ ಎಂದು ಹೇಳಿದೆಯಾದ್ದರಿಂದ ಇವನು ಶೈವನು. ಆದರೂ ಕಾಲದೇಶಕ್ಕನುಸಾರವಾಗಿ ಜೈನಮತಾವಲಂಬಿಯಾಗಿಯೂ, ವೈಷ್ಣವನಾಗಿಯೂ ವರ್ತಿಸಿದ್ದಾನೆ. ಬಾಚಿದೇವ, ಬಾಚಯ, ಬಾಸಯ ಎಂಬ ಹೆಸರುಗಳು ವಾಸುದೇವ ಎಂಬುದರ ಅಪಭ್ರಂಶಗಳೆಂದು ಚರಿತ್ರಾಧಾರದಿಂದ ಕಂಡುಬಂದಿದೆ. ಇವನ ಹೆಂಡತಿಯ ಹೆಸರು ಭೀಮಳೆನಾಯಿಕಿತಿ, ಮಗಳ ಹೆಸರು ಚೆನ್ನವ್ವೆನಾಯಿಕಿತಿ. ಇದು ಬಾಚಿದೇವನ ವಂಶವೃಕ್ಷ.

ಮೇಲೆ ಹೇಳಿದ ಪ್ರಕಾರ ಬಾಚಿದೇವನು ಹೊಯ್ಸಳ ನರಸಿಂಹನ ಸಾಮಂತನೂ, ಮಾನ್ಯಖೇಡ ಪುರವರಾಧೀಶ್ವರನೂ, ಮರುಗೆರೆ ನಾಡಾಳುವವನೂ ಆಗಿದ್ದು ಕ್ರಿ. ಶ. 1151 ರಲ್ಲಿ ಕೈದಾಳ ನಗರದಲ್ಲಿ ಅನೇಕ ದೇವಸ್ಥಾನಗಳನ್ನೂ ಕೆರೆಗಳನ್ನೂ ಬಸದಿಯನ್ನೂ ಕಟ್ಟಿಸಿ ಎಲ್ಲ ದೇವರುಗಳಿಗೂ ಗೂಳೂರು, ಕಿತ್ತಿಗಳ್ಳಿ, ಮಾನಂಗಿ, ಭೀಮಸಮುದ್ರ, ದಿಬ್ಬೂರು ಮೊದಲಾದ ಗ್ರಾಮಗಳಲ್ಲಿ ತರಿ, ಖುಷ್ಕಿ ಜಮೀನುಗಳನ್ನು ದತ್ತಿಯಾಗಿ ಬಿಟ್ಟು ಶಾಸನ ಬರೆಯಿಸಿಕೊಟ್ಟನು. ಇವನು ಶೈವನಾಗಿದ್ದರೂ ಈಶ್ವರ, ಬ್ರಹ್ಮ, ಬುದ್ಧ, ವಿಷ್ಣು, ಜಿನ—ಇವರೆಲ್ಲರೂ ಒಂದೇ ಎಂಬ ಭಾವನೆಯನ್ನು ಹೊಂದಿದ್ದನು. ಆದ್ದರಿಂದಲೇ ಇವನನ್ನು "ಚತುಸ್ಸಮಯ ಧರ್ಮೋದ್ಧಾರ ಧೌರೇಯಂ" ಎಂದು ಹೇಳಿದೆ. ಇವನು ಬರೆಯಿಸಿರುವ ಶಾಸನದಲ್ಲಿ

ಶಿವಾಯ ಧಾತ್ರೇ ಸುಗತಾಯ ವಿಷ್ಣವೇ
ಜಿನಾಯ ತಸ್ಮೈ ಸಕಳಾತ್ಮನೇ ನಮಃ

ಎಂಬ ಅಮೂಲ್ಯವಾಕ್ಯವು ಆರಂಭದಲ್ಲಿಯೇ ಇದೆ. ಇದನ್ನು ನೋಡಿದರೆ ಬಾಚಿದೇವನು ಪಕ್ಷಪಾತವಿಲ್ಲದೆ ಎಲ್ಲ ಮತಗಳಿಗೂ ಆಶ್ರಯದಾತನಾಗಿದ್ದನೆಂದು ವ್ಯಕ್ತಪಡುತ್ತದೆ. ತನ್ನ ಪೂರ್ವಜರಂತೆ ಇವನೂ ಉದಾರಿಯೂ, ಧರ್ಮಿಷ್ಠನೂ, ಆಚಾರಸಂಪನ್ನನೂ, ಕಲಾಪ್ರೇಮಿಯೂ, ವಿದ್ವಜ್ಜನಸನ್ಮಾನಿತನೂ ಆಗಿದ್ದನು. ಕೈದಾಳವನ್ನು ಇವನು ಅತ್ಯಂತ ಶೋಭಾಯಮಾನವಾದ ನಗರವನ್ನಾಗಿ ಮಾಡಿದನು.

ಸಾಮಂತಬಾಚಿಯ ಬಿರುದುಗಳ, ಧೈರ್ಯ ಶೌರ್ಯ ಔದಾರ್ಯ ಸಾಹಸಾದಿಗಳ ವಿಚಾರವಾಗಿಯೂ ಕೈದಾಳದ ಗತಶೋಭೆಯ ವಿಚಾರವಾಗಿಯೂ ಕೆಲವು ಪದ್ಯಗಳನ್ನು ಶಾಸನದಿಂದೆತ್ತಿ ಕೊಟ್ಟಿದೆ.

ಸ್ವಸ್ತಿ ಸಮಧಿಗತ ಪಂಚ ಮಹಾಶಬ್ದ ಮಹಾಸಾಮಂತಂ, ವೀರಲಕ್ಷ್ಮೀಕಾಂತಂ, ನಾಲ್ವತ ನಾಲ್ವರ ಗಂಡ, ಮಾನ್ಯಖೇಡ ಪುರವರಾಧೀಶ್ವರಂ ಚತುರ್ಮುಖದಾಯಿಗ ಗೊಂದಳಂ ಬಡಿವಂ, ತೊಡರ್ದರ ಡೊಂಕಿಯದಳರಾದಿತ್ಯಂ ಮರುಗೆರೆ ನಾಡಾಳ್ವಂ ಸಾಮಂತಬಾಚಿಗೆ,

ಜನಪತಿ ಕೂರ್ತು ಕೀಳ್ವ ಸುಖಸಂಪದಮುಂ ಹರನೊಲ್ದು ಕೀರ್ತಿಯಂ |
ಕನಕಸರೋದ್ಭವಂ ವರಚಿರಾಯುವನಿಂಬಿನಲೀಗಳಚ್ಯುತಂ ||
ಮನವೊಸೆದೊಪ್ಪುತಿರ್ಪ ಸಿರಿಯಂ ವರಬುದ್ಧ ಜಯಾಭಿವೃದ್ಧಿಯಂ |
ಮನಸಿಜರೂಪ ಬಾಚಿ ನಿನಗೀಗೆ ಶಶಾಂಕ ಕುಳಾದ್ರಿಯುಳ್ಳಿನಂ ||

ಸಿಂಗದ ಶೌರ್ಯವಂಗಜನ ರೂಪು ಮುರಾರಿಯ ಶಕ್ತಿಯಾಗಳುಂ |
ಪಿಂಗದೆ ಕರ್ಣನೀವಗುಣವಿಂದ್ರನ ಲೀಳೆ ಭುಜಂಗ ರಾಜನೊಳ್ ||
ಸಂಗಳಿಸಿರ್ದ ಪೆರ್ಮೆ ಸುರಶೈಳದ ಬಿಣ್ಪುವೊರಲ್ದು ನಿಂದವೀ |
ಗಂಗನ ಪುತ್ರನೊಳ್ ಸುಭಟ ಬಾಚಿಯೊಳೂರ್ಜಿತ ಸಬ್ಯಸಾಚಿಯೊಳ್ ||

ತೊಡರ್ದ ವಿರೋಧಿಗಂತಕನು ಬೇಡಿದ ವಂದಿಗೆ ಕಳ್ಪಭೂರುಹಂ |
ತಡೆಯದೆ ಬಂದು ಕಂಡ ಶರಣಾರ್ತಿಗೆ ವಜ್ರದ ಕೋಟೆಯೆಂಬುದೀ ||
ಪೊಡವಿ ನಿರಂತರಂ ಜಸಕೆ ನಲ್ಲನನಂಬುಜ ನಾಭ ನಂದನಂ |
ತೊಡರ್ದರ ಡೊಂಕಿಯಂ ಸುಭಟ ಬಾಚಿಯಮಾರ್ಜಿತ ಸಬ್ಯಸಾಚಿಯಂ ||

ತೊಡರ್ದರ ಗಂಡ ವೈರಿಗಳ ಗಂಡ ಮದಾಂಧರ ಗಂಡ ಬೀರದಿಂ |
ದೆಡರ್ವರ ಗಂಡ ಮೆಚ್ಚದರ ಗಂಡ ಪಿಸುಣ್ಬರ ಗಂಡನೆಂದುದಂ ||
ತೊಡೆಯುದ ಗಂಡನಾಹವಕೆ ಸೋಲದ ಗಂಡನದೆಂದು ನೋಳ್ಪೊಡಂ |
ತೊಡರ್ದರ ಡೊಂಕಿ ಬಾಚಿ ನಿನಗಾರ್ದೊರೆ ಗಂಡರಿಳಾ ತಳಾಗ್ರದೊಳ್ ||

ಅಲ್ಲದೆ "ಬಾಚಿದೇವಂ, ಪೆಂಪಿನಿಂ ರವಿಸುತಂ, ಸಂಗ್ರಾಮದೊಳ್ ರಾಮನಿಂ ಪಿರಿಯಂ, ಶೌಚದೊಳಂ ಜನಾತನಯಂ, ಅದಳ ಕುಳಕಮಳ ಹಂಸಂ, ಇಳೆಯೊಳ್

ನಿರ್ಮಳ ಧರ್ಮಸೂನು, ಅದಳಾನ್ವಯು ರಾಜ್ಯಭವನಮಣಿ ತೋರಣಂ, ತ್ಯಾಗಕ್ಕೆ ದಿನೇಶಸೂನು ಸದೃಶಂ, ಶೌರ್ಯಕ್ಕೆ ತಾಸರವಿಂದೋದರಂ, ನಿಜರೂಪಿಂಗೆ ಪುಷ್ಪಾಯುಧಂ, ಬುಧ ಜನಕಂ ತಾಂ ಬಲಿಯೆನಿಪಂ "—ಎಂದು ಮುಂತಾಗಿ ಬಾಚಿದೇವನ ಗುಣಗಳನ್ನು ಕವಿಯು ವರ್ಣಿಸಿದ್ದಾನೆ.

ಇವನು ಕೈದಾಳದಲ್ಲಿ ಕಟ್ಟಿಸಿದ ಜೈನ, ಶೈವ, ವೈಷ್ಣವ ದೇವಾಲಯಗಳ ವಿಚಾರವಾಗಿ ಕವಿಯು ಹೀಗೆ ಹೇಳಿದ್ದಾನೆ:—

ಉದ್ಧರಿಸಿ ಜೈನ ಭವನಮ |
ನುದ್ಧರಿಸಿ ಶಿವಾಲಯಂಗಳಂ ಮುದದಿಂದ ||
ನ್ನುದ್ಧರಿಸಿ ವಿಷ್ಣುಗೇಹಮ |
ನುದ್ಧರಿಸಿದನಲ್ತೆ ಬಾಚಿ ಜಸದುನ್ನತಿಯಂ ||

ಕೈದಾಳದವರು ಬಾಚಿದೇವನಿಗೆ ಋಣಿಗಳು. ಈಗ ನಾವು ನೋಡುತ್ತಿರುವ ಕೈದಾಳಕ್ಕೂ ಬಾಚಿದೇವನ ಕಾಲದ ಕೈದಾಳಕ್ಕೂ ಅಜಗಜಾಂತರವಿದೆ. ಆಗಿನದು ನಗರ, ಈಗಿನದು ಗ್ರಾಮ; ಆಗಿನದು ರಾಜಧಾನಿ, ಈಗಿನದು ಪಾಳುಭೂಮಿ; ಆಗಿನವರು ಧನಿಕರು, ಈಗಿನವರು ಕೃಷಿಕರು; ಆದರೇನು? ಬಾಚಿದೇವನ ಸತ್ವವಿನ್ನೂ ಕೈದಾಳವನ್ನು ಬಿಟ್ಟುಹೋಗಿಲ್ಲ. ಕೈದಾಳದ ಸೌಭಾಗ್ಯವಿನ್ನೂ ಅಲ್ಪಸ್ವಲ್ಪವಾದರೂ ಉಳಿದಿದೆ. ಈ ಸೌಭಾಗ್ಯಾವಶೇಷಕ್ಕೆ ಸಾಮಂತಬಾಚಿಯೇ ಕಾರಣನು. ಆದರೂ ಕೈದಾಳದವರಿಗೆ ಬಾಚಿದೇವನ ಹೆಸರು ಕೂಡ ಗೊತ್ತಿಲ್ಲ. ಗೊತ್ತಿದ್ದರೆ ಅವರು ಅವನ ಜ್ಞಾಪಕಾರ್ಥವಾಗಿ ವರ್ಷದ ಯಾವುದಾದರೊಂದು ದಿನ ಅವನು ಕಟ್ಟಿಸಿರುವ ದೇವಸ್ಥಾನಗಳಲ್ಲಿ ಉತ್ಸವ, ಭಜನೆ ಮೊದಲಾದವುಗಳನ್ನು ನಡೆಯಿಸುತ್ತಿದ್ದರೆಂದು ತೋರುತ್ತದೆ. ಈ ದೇವಾಲಯಗಳಲ್ಲಿ ಪೂಜಾಸಮಯದಲ್ಲಿ ರಾಜಾಶೀರ್ವಾದ ಹೇಳುವಾಗ ಸಾಮಂತ ಬಾಚಿದೇವನ ಹೆಸರನ್ನೂ ಸಹ ಉಚ್ಚರಿಸುವುದಿಲ್ಲ. ಎಂತಹ ಕೃತಘ್ನತೆ! ಕೈದಾಳದ ಮಹಾಶಯರು ಇನ್ನು ಮುಂದಾದರೂ ತಮಗೆ ಈ ರಾಜನು ಒದವಿಸಿಕೊಟ್ಟ ದೇವಾಲಯಗಳು, ಕೆರೆಗಳು ಮೊದಲಾದ ಸೌಕರ್ಯಗಳಿಗಾಗಿ ಅವನ ಜ್ಞಾಪಕಾರ್ಥವಾಗಿ ವರ್ಷಕ್ಕೊಂದು ದಿನವಾದರೂ ಉತ್ಸವ ಸಮಾರಂಭಗಳನ್ನಿಟ್ಟುಕೊಳ್ಳುವುದು ಉಚಿತವಾದುದು ಮತ್ತು ಗೌರವವಾದುದು. ಅವರ ಊರಿನ ಕೀರ್ತಿಯು ಸಾಧಾರಣವಾದುದಲ್ಲ. ಅದನ್ನು ಕಾಪಾಡಿಕೊಳ್ಳುವುದು ಅವರಿಗೆ ಧರ್ಮವೂ ಶ್ರೇಯಸ್ಕರವೂ ಆಗಿದೆ. ಸಾಮಂತಬಾಚಿಯು ದೇವರುಗಳನ್ನು ಪ್ರತಿಷ್ಠೆಮಾಡಿಸಿ ಶಾಸನವನ್ನು ಬರೆಯಿಸಿದುದು ಶಾಲಿವಾಹನಶಕ 1072 ನೆಯ ಪ್ರಮಾಥಿ ಸಂವತ್ಸರದ ಫಾಲ್ಗುಣ ಬಹುಳ ಅಮಾವಾಸ್ಯೆಯ ದಿನವಾದುದರಿಂದ ಪ್ರತಿ ವರ್ಷದಲ್ಲೂ ಬರುವ ಆ ದಿನವು

ಬಾಚಿದೇವನ ಸ್ಮಾರಕೋತ್ಸವಕ್ಕೆ ಅತ್ಯುತ್ತಮವಾದ ದಿನವೆಂದು ತೋರುತ್ತದೆ. ಅವನು ಮಾಡಿರುವ ಕಾರ್ಯಗಳು ಕೈದಾಳದವರ ಕೃತಜ್ಞತೆಗೂ, ಕೇಶವದೇವಾಲಯದ ಮಹಾದ್ವಾರದಲ್ಲಿರುವ ಅವನ ವಿಗ್ರಹವು ದೇಶವತ್ಸಲರ ಮತ್ತು ಗ್ರಾಮಾಭಿಮಾನಿಗಳ ಪೂಜೆಗೂ ಅರ್ಹವಾಗಿವೆ. ಈ ವಿಗ್ರಹವು ಕೈದಾಳದಲ್ಲಿ ಇದುವರೆಗೂ ಉಳಿದಿರುವುದು ಅಲಭ್ಯವಾದ ಪುಣ್ಯವೆಂದು ಅವರು ಭಾವಿಸಬೇಕು.

ದೇವಾಲಯಗಳು, ದತ್ತಿಗಳು, ಕೆರೆಗಳು—ಬಾಚಿದೇವನು ಕಟ್ಟಿಸಿದ ದೇವಾಲಯಗಳ, ಕೆರೆಗಳ, ಮತ್ತು ದೇವಾಲಯಗಳಿಗೆ ಬಿಟ್ಟ ದತ್ತಿಗಳ ವಿಚಾರವಾಗಿ ಒಂದೆರಡು ಮಾತನ್ನು ಹೇಳದಿದ್ದರೆ ಈ ಉಪನ್ಯಾಸವು ಪೂರ್ಣವಾಗಲಾರದು. ಆದುದರಿಂದ ಅವುಗಳನ್ನು ಒಂದೊಂದಾಗಿ ಕೆಳಗೆ ಕೊಟ್ಟಿದೆ.

(1) ಚೆನ್ನಕೇಶವ ದೇವಸ್ಥಾನ. ಇದು ಸುಂದರವಾದ ಕಟ್ಟಡವೆಂದು ಮೊದಲೇ ಹೇಳಿದೆ. ಶ್ರೀ ನಾರಾಯಣ ಗೃಹವೆಂಬುದೂ ಇದೇ. ಬಾಚಿಯ ಸ್ಮಾರಕವೂ ಹೌದು.

ಶ್ರೀ ನಾರಾಯಣ ಗೃಹಮಂ
ಶ್ರೀ ನಾರೀ ರಮಣನದಳವಂಶ ಕುಳಾಂಬರ |
ಭಾನುವೆನಿಸಿರ್ದ ಬಾಚಿಯ
ನೂನಂ ಮಾಡಿಸಿದನಲ್ತೆ ತೊಡರ್ದರ ಡೊಂಕಿ ||

ಈ ದೇವರ ಅಂಗಭೋಗಕ್ಕೂ, ಅಷ್ಟವಿಧಾರ್ಚನೆಗೂ, ಬ್ರಾಹ್ಮಣರಾಹಾರ ದಾನಕ್ಕೂ, ದೇವಾಲಯದ ಖಂಡಸ್ಫುಟ ಜೀರ್ಣೋದ್ಧಾರಕ್ಕೂ ದಿಬ್ಬೂರು ಕೆರೆಯ ಕೆಳಗೆ ಹತ್ತು ಸಲಗೆ ಗದ್ದೆ, ಆ ಗದ್ದೆಯ ಬಳಿಯ ತೋಟ ಮತ್ತು ಹೊಲವನ್ನು ದತ್ತಿಯಾಗಿ ಬಿಟ್ಟನು.

(2) ತನ್ನ ತಂದೆ ವೀರಗಂಗನ ಜ್ಞಾಪಕಾರ್ಥವಾಗಿ ಪ್ರಸನ್ನ ಗಂಗಾಧರ ದೇವಸ್ಥಾನವನ್ನು ಕಟ್ಟಿಸಿದನು.

ಶ್ರೀ ಲೀಲಾಯತನಕ್ಕೆ ತಾನೇ ನೆಲೆಯಾಯ್ತೆಂಬೊಂದು ಸಂಸೇವ್ಯದಿಂ |
ನೀಲಗ್ರೀವ ಪದಾಬ್ಜ ಭೃಂಗನಧಿಕಂ ಶ್ರೀ ಬಾಚಿದೇವಂ ಯಶೋ ||
ಲೋಲಂ ವೀರಗುಣಾಂಬುರಾಸಿ ಮುದದಿಂ ಕಯ್ದಾಳದೊಳ್ ಚೆಲ್ವಿನಿಂ |
ಕೈಲಾಸಕ್ಕೆಣೆಯಾಗಿ ಮಾಡಿಸಿದನೀ ಗಂಗೇಶ್ವರಾವಾಸಮಂ ||

ಈ ದೇವರಂಗ ಭೋಗ, ಅಷ್ಟವಿಧಾರ್ಚನೆ, ತಪೋಧನರಾಹಾರದಾನ ಮೊದಲಾದುವುಗಳಿಗೆ ಹಿರಿಯಕೆರೆ ಎಂದರೆ ಗೂಳೂರು ಕೆರೆಯ ಕೆಳಗೆ ಮತ್ತು ಮಾನಂಗಿ ಗ್ರಾಮದಲ್ಲಿ ಒಟ್ಟು ಆರು ಸಲಗೆ ಗದ್ದೆ, ಒಂದು ಸಲಗೆ ಹೊಲ ದತ್ತಿ ಬಿಟ್ಟುದಲ್ಲದೆ

ತಂದೆಯ ಆತ್ಮಪ್ರೀತ್ಯರ್ಥವಾಗಿ ದಿಬ್ಬೂರನ್ನು ಸಬ್ರಾಹ್ಮಣರಿಗೆ ಸರ್ವಮಾನ್ಯವಾಗಿ ಧಾರಾಪೂರ್ವಕವಾಗಿ ಕೊಟ್ಟನು—

ದಿಬ್ಬೂರಂ ವಿಪ್ರಾಳಿಗೆ
ಸರ್ಬಜ್ಞ ಪದಾರವಿಂದನದಳರ ರಾಮಂ।
ದೋರ್ಬಲ ವಿಭಾಸಿ ಬಾಚಂ
ಸರ್ಬಾಬಾಧಂ ಪರಿಹಾರವೆನಿಸಿಯೆ ಕೊಟ್ಟಂ॥

(3) ತನ್ನ ಅಜ್ಜ ಸಾಮಂತ ಚಲುವರನ ಜ್ಞಾಪಕಾರ್ಥವಾಗಿ ಕಿತ್ತಿಗನ ಹಳ್ಳಿಯಲ್ಲಿ

ಚಲುವರಿವೇಶ್ವರಗಾ ಗುಣ
ಜಲಧಿ ಜಯಶ್ರೀಗಧಿಪಂ ಬುಧಜನಕಂ ತಾ।
ಬಲಿಯೆನಿಪ ಬಾಚಿದೇವಂ
ಕುಲನಗಮಂ ಮಿಗುವ ಪೆಂಪಿನಿಂ ಮಾಡಿಸಿದಂ॥

ಈ ದೇವರಂಗ ಭೋಗಾದಿಗಳಿಗೆ ಕಿತ್ತಿಗಳ್ಳಿಯ ಕೆರೆಯ ಕೆಳಗೆ ಮೂರು ಸಲಗೆ ಗದ್ದೆ ಒಂದು ಸಲಗೆ ಹೊಲವನ್ನು ದತ್ತಿಯಾಗಿ ಬಿಟ್ಟನು. ಈಗ ಈ ದೇವಸ್ಥಾನವು ಪಾಳುಬಿದ್ದಿದೆ. ದೇವರ ಗತಿ ಏನಾಯಿತೋ ತಿಳಿಯದು. ಇದಕ್ಕೆ ಬಿಟ್ಟಿದ್ದ ದತ್ತಿಯು ಈಗ ಗೂಳೂರು ಶ್ರೀನಿವಾಸ ದೇವರಿಗಾಗಿದೆಯೆಂದು ತಿಳಿಯಬರುತ್ತದೆ.

(4) ತನ್ನ ಮಗಳು ಕುಮಾರಿ ಚೆನ್ನವ್ವೆ ನಾಯಿಕಿತಿಯ ಹೆಸರಿನಲ್ಲಿ

ಶ್ರೀಮಹಿಮಂ ಗುಣನಿಳಯಂ
ಭೀಮ ಪರಾಕ್ರಮನು ಬಾಚಿದೇವಂ ಮುದದಿಂ।
ರಾಮೇಶ್ವರ ಸದನಮನಾ
ಹೇಮಾದ್ರಿಗೆ ಮಿಗಿಲೆಂಬಿನಂ ಮಾಡಿಸಿದಂ॥

ಈ ದೇವರಂಗ ಭೋಗಾದಿಗಳಿಗೆ ಹಿರಿಯ ಕೆರೆ ಎಂದರೆ ಗೂಳೂರು ಕೆರೆಯ ಕೆಳಗೂ ಮಾನಂಗಿಯಲ್ಲೂ ಒಟ್ಟು ಆರು ಸಲಗೆ ಗದ್ದೆ, ಒಂದು ಸಲಗೆ ಹೊಲ, ದೇವರ ನಂದಾದೀವಿಗೆಗೆ ಒಂದು ಎತ್ತು ಗಾಣ ಸಹ ದತ್ತಿಯಾಗಿ ಕೊಟ್ಟನು.

ಒಂದು ಸಮಸ್ಯೆ—ಈ ಗುಡಿಯ ದಕ್ಷಿಣಕ್ಕಿರುವ ಚಿಕ್ಕ ಈಶ್ವರನ ಗುಡಿಗೆ ಗೌರೀಶ್ವರ ದೇವಾಲಯವೆಂದು ಹೆಸರು. ಇದರ ವಿಚಾರವಾಗಿ ಶಾಸನದಲ್ಲಿ ಏನನ್ನೂ ಹೇಳಿಲ್ಲವಾದುದರಿಂದ ಇದು 1151 ನೆಯ ಇಸವಿಯ ಈಚೆಗೆ ಪ್ರತಿಷ್ಠೆಯಾಗಿರಬಹುದೆಂದು ತೋರುತ್ತದೆ. ಒಂದು ವೇಳೆ ಕಿತ್ತಿಗಳ್ಳಿಯಲ್ಲಿ ಮಾಯವಾಗಿ ಹೋಗಿರುವ ಚಲುವರೇಶ್ವರ ಲಿಂಗವನ್ನು ಯಾರಾದರೂ ಇಲ್ಲಿಗೆ ತಂದು ಪ್ರತಿಷ್ಠೆಮಾಡಿರಬಹುದೆಂದೂ

ಹಿಸೆಲವಕಾಶವಿದೆ. ಏಕೆಂದರೆ, ಬಾಚಿದೇವನು ತನ್ನ ಅನುಬಂಧಿಗಳಾದ ತಂದೆ, ಹೆಂಡತಿ, ಮಗಳು—ಇವರ ಹೆಸರಿನಲ್ಲಿ ದೇವಾಲಯಗಳನ್ನು ಕೈದಾಳದಲ್ಲಿ ಮಾಡಿಸಿ ತನ್ನ ಪಿತಾಮಹನ ಹೆಸರಿನಲ್ಲಿ, ದೂರವಾದ ಕಿತ್ತಿಗಳ್ಳಿಯಲ್ಲಿ ದೇವಾಲಯ ಕಟ್ಟಿಸಿದುದು ಔಚಿತ್ಯವಾಗಿ ಕಾಣುವುದಿಲ್ಲ. ಆದುದರಿಂದ ಶಾಸನ ಬರೆದನಂತರ ಜಲುನರೇಶ್ವರನನ್ನು ಕೈದಾಳಕ್ಕೇ ತಂದು ರಾಮೇಶ್ವರನ ಗುಡಿಯ ಪಕ್ಕದಲ್ಲಿ ಪ್ರತ್ಯೇಕ ಗುಡಿ ಕಟ್ಟಿ ಪ್ರತಿಷ್ಠೆ ಮಾಡಿರಬಹುದೆಂದು ತೋರುತ್ತದೆ. ಹೀಗೆ ಮಾಡಿದ್ದರೆ ಜಲುನರೇಶ್ವರನಿಗೆ ಗೌರೀಶ್ವರನೆಂದು ಏಕೆ ಹೆಸರಾಯಿತೆಂಬುದಕ್ಕೆ ತೃಪ್ತಿಕರವಾದ ಸಮಾಧಾನ ಕೊಡುವುದು ಕಷ್ಟವಾಗಿದೆ. ಕಿತ್ತಿಗಳ್ಳಿಯವರು ಜಲುನರೇಶ್ವರನ ಅಂಗಪೀಠಗಳು ಆ ಹಳ್ಳಿಯಲ್ಲೇ ಯಾರ ಮನೆಯಲ್ಲೋ ಒರಳುಕಲ್ಲು ಗುಂಡಾಗಿವೆಯೆಂದು ಹೇಳುತ್ತಾರೆ. ಕಿತ್ತಿಗಳ್ಳಿಯವರ ಮಾತು ನಿಜವಾದಲ್ಲಿ ಸಮಸ್ಯೆಯು ಪರಿಹಾರವಾದಂತೆಯೇ.

(5) ತನ್ನ ಹೆಂಡತಿಯಾದ "ಮನಸ್ಸರೋವರಾಳಂಕಾರ ರಾಜಹಂಸಿ, ಪುಣ್ಯಗುಣಾಭರಾಮೆ, ಮಹಾಸೌಭಾಗ್ಯಶೀಳ ಸೌಂದರ್ಯಸಂಪನ್ನೆ, ಪರಿವಾರ ಸುರಭಿ." ಭೀಮಲೆ ನಾಯಿಕಿತಿಯ ಹೆಸರಿನಲ್ಲಿ ಭೀಮಜಿನಾಲಯವೆಂದು ಬಸದಿಯನ್ನು ಮಾಡಿಸಿ, ಭೀಮಸಮುದ್ರವೆಂಬ ಕನ್ನೆಗೆರೆಯನ್ನು ಕಟ್ಟಿಸಿ ಆ ಕೆರೆಯ ಕೆಳಗೆ ಭೀಮಜಿನಾಲಯದ ಶ್ರೀ ಚೆನ್ನಪಾರಿಶ್ವದೇವರಂಗಭೋಗಾದಿಗಳಿಗೆ ಎಂಟು ಸಲಗೆ ಗದ್ದೆಯನ್ನೂ ಭೀಮಸಮುದ್ರಗ್ರಾಮದಲ್ಲಿ ಎರಡು ಸಲಗೆ ಹೊಲವನ್ನೂ ದತ್ತಿಯಾಗಿ ಕೊಟ್ಟನು. ಈಗಿನ ಮೆಳೆಕೋಟೆಗ್ರಾಮವು ಭೀಮಳೆ ನಾಯಿಕಿತಿಯ ಹೆಸರಿನಲ್ಲಿ ಕಟ್ಟಿದುದೆಂದು ತೋರುತ್ತದೆ. ಭೀಮಳೆಕೋಟೆಯೆಂಬ ಹೆಸರು ಕಾಲಕ್ರಮೇಣ ಮೆಳೆಕೋಟೆಯೆಂದು ಪರಿವರ್ತನವಾಗಿರಬಹುದು.

ಭೀಮಜಿನಾಲಯಕ್ಕೆ ಸೇನಬೋವ ಎಂದರೆ ಶಾನುಭೋಗ ಮಾರಯ್ಯನೆಂಬವನು ಬಾಚಿದೇವನಿಂದ ಭೂಮಿಯನ್ನು ಪಡೆದು ಮಾರಸಮುದ್ರವೆಂಬ ಕನ್ನೆಗೆರೆಯನ್ನು ಕಟ್ಟಿಸಿ ಅದನ್ನೂ ಚೆನ್ನಪಾರಿಶ್ವದೇವರಿಗೆ ದತ್ತಿಯಾಗಿ ಬಿಟ್ಟನು. ಭೀಮಜಿನಾಲಯವೆಂಬ ಬಸದಿಯು ಈಗ ಇಲ್ಲ. ಇದನ್ನು ಬಾಚಿದೇವನು ಅಮ್ಮನ ತೋಟದ ಬೃಂದಾವನ ಸಮೀಪದಲ್ಲಿ ಕಟ್ಟಿದನೆಂದು ಹೇಳಬಹುದು. ಮಾರಸಮುದ್ರವೆಂಬುದೇ ಕೈದಾಳದ ಕೆರೆ. ಈ ಕೆರೆಯಂಗಳದಲ್ಲಿ ಬಸದಿಯು ಕಟ್ಟಿರಬೇಕು.

ಮಾರಸಮುದ್ರ, ಅದಳಸಮುದ್ರ—ಒಟ್ಟಿನಲ್ಲಿ ಸಾಮಂತಬಾಚಿಯು ಕೈದಾಳ ಮತ್ತು ಅಕ್ಕಪಕ್ಕ ಪ್ರದೇಶಗಳಲ್ಲಿ ಭೀಮಜಿನಾಲಯ ಬಸದಿಯೂ ಸೇರಿ ಐದು ದೇವಸ್ಥಾನಗಳನ್ನೂ ಭೀಮಸಮುದ್ರ, ಮಾರಸಮುದ್ರ, ಅದಳಸಮುದ್ರಗಳೆಂಬ ತಟಾಕಗಳನ್ನೂ ಕಟ್ಟಿಸಿದನು. ದೇವಸ್ಥಾನಗಳ ವಿಚಾರವನ್ನು ವಿಸ್ತಾರವಾಗಿ ಮೇಲೆ

ಹೇಳಿಯಾಯಿತು. ಭೀಮಸಮುದ್ರದ ಕೆರೆಗೆ ಈಗಲೂ ಅದೇ ಹೆಸರಿದೆ. ಅದಳಸಮುದ್ರ ವೆಂಬುದು ಈಗ ಕೈದಾಳಕ್ಕೆ ಪಶ್ಚಿಮದಲ್ಲಿ ಮೂರುಮೈಲಿ ದೂರದಲ್ಲಿರುವ ಅದಲಾಪುರದ ಕೆರೆ. ಈ ಕೆರೆಗಳೆರಡನ್ನೂ ಕನ್ನೆಗೆರೆಗಳೆಂದು ಹೇಳಿರುವುದರಿಂದ ಇವು ಹೊಸದಾಗಿ ನಿರ್ಮಾಣವಾಗಿರಬೇಕೆಂಬುದು ಖಂಡಿತ. ಇನ್ನುಳಿದುದು ಮಾರಸಮುದ್ರ. ಇದೂ ಕನ್ನೆಗೆರೆಯೇ. ಇದು ಕೈದಾಳಕೆರೆಯೆಂದು ಮೇಲೆಯೇ ಹೇಳಿದೆಯಾದರೂ ಇದರ ವಿಚಾರವಾಗಿ ಸ್ವಲ್ಪ ಜಿಜ್ಞಾಸೆ ಅವಶ್ಯಕವಾಗಿದೆ. ಮಾರಸಮುದ್ರವನ್ನು ಕಟ್ಟಿದುದು "ಮುದುಗೆರೆಯ ಬಾಗಿನೊಳ್" ಎಂದು ಶಾಸನದಲ್ಲಿ ಹೇಳಿದೆ. ತುಮಕೂರು ತಾಲ್ಲೂಕಿನಲ್ಲಿರುವ ಮುದುಗೆರೆಗೂ ಶಾಸನದಲ್ಲಿ ಹೇಳಿರುವ ಮುದುಗೆರೆಗೂ ಸಂಬಂಧವಿಲ್ಲ. ಕೈದಾಳದಿಂದ ಉತ್ತರಕ್ಕೆ ಸುಮಾರು ಆರು ಮೈಲಿ ದೂರದಲ್ಲಿ ಮುದುಗೆರೆ ಗ್ರಾಮವಿದೆ. ಆ ಗ್ರಾಮದ ಉತ್ತರಭಾಗದಲ್ಲಿ ಮುದುಗೆರೆ ಕೆರೆಯಿದೆ. ಆದರೆ ಅದು ಮಾರಮಯ್ಯನು ಕಟ್ಟಿಸಿದುದಲ್ಲ. ಮಾರಸಮುದ್ರವು ಕೈದಾಳದ ಉತ್ತರಕ್ಕಿರುವ ಭಗ್ನಾವಶೇಷವಾದ ಕೆರೆ. ಕೈದಾಳವು ಈ ಕೆರೆಯ ಅಂಗಳದಲ್ಲಿದೆ. ಈ ಕೆರೆಯ ಏರಿಯು ಮರಳೂರು ಕೆರೆಯ ಮಧ್ಯಕೋಡಿ ಸಮೀಪದಲ್ಲಿ ಪ್ರಾರಂಭವಾಗಿ ಪಶ್ಚಿಮಕ್ಕೆ ಸುಮಾರು ಮೂರು ಫರ್ಲಾಂಗುಗಳ ವರೆಗೆ ಹಬ್ಬಿದೆ. ಇದರ ಅಗಲ ಕಮ್ಮಿ. ಆಕಾರದಲ್ಲಿ ಒಂದು ಕಾಲುನೆಯಂತಿದೆ. ಏರಿಯು ಬಹಳ ಹಳೆಯದೆಂದು ನೋಡಿದರೇ ಕಾಣುತ್ತದೆ. ಕೆಲವು ಸ್ಥಳಗಳಲ್ಲಿ ಆಳ ಜಾಸ್ತಿ. ಶಾಸನದಲ್ಲಿರುವ 'ಮುದುಗೆರೆ' ಎಂಬ ಶಬ್ದಕ್ಕೆ ಮೂಡುಕೆರೆ ಎಂದರೆ ಪೂರ್ವಕ್ಕಿರುವ ಮರಳೂರು ಕೆರೆಯೆಂದೂ, 'ಬಾಗಿನೊಳ್' ಎಂಬ ಶಬ್ದಕ್ಕೆ ಮರಳೂರು ಕೆರೆ ಏರಿಯು ಡೊಂಕಾಗಿ ಬಾಗಿಕೊಂಡಿರುವ ಕಡೆಯೆಂತಲೂ ಅರ್ಥಮಾಡಿದರೆ ಮಾರಸಮುದ್ರವು ಕೈದಾಳದ ಕೆರೆಯೆಂದೇ ಸಿದ್ಧಾಂತವಾಗುವುದು.

ಈ ಶಾಸನವನ್ನು ಬರೆದ ಕವಿ ಯಾರು?

ಹೊಸ ವಿಷಯ, ಮಾಚಿರಾಜಕವಿ 1151—ಈ ಶಾಸನವನ್ನು ಬರೆದವನು ಮಾಚಿರಾಜಕವಿಯೆಂದು ಶಾಸನದ ಕೊನೆಯ ಪದ್ಯದ ಮೇಲಿರುವ ಪದ್ಯದಿಂದ ತೋರಿಬರುತ್ತದೆ. ಗ್ರಂಥಕರ್ತರು ಗ್ರಂಥಾಂತದಲ್ಲಿ ತಮ್ಮ ಹೆಸರನ್ನು ಹೇಳಿಕೊಳ್ಳುವುದು ಪ್ರಾಚೀನವಾದ ವಾಡಿಕೆ. ಅನೇಕ ಶಾಸನಗಳಲ್ಲಿಯೂ ಈ ಪದ್ಧತಿಯು ಕಂಡುಬರುತ್ತದೆ. ಈ ಶಾಸನ ಬರೆದ ಕವಿಯು ತಾನು ಬರೆದೆನೆಂದು ಕಂಠೋಕ್ತವಾಗಿ ಹೇಳದಿದ್ದರೂ ಶಾಸನದ ಮುಖ್ಯ ವಿಷಯಗಳನ್ನೆಲ್ಲಾ ಉಲ್ಲೇಖಿಸಿದನಂತರ ಕಟ್ಟಕಡೆಯಲ್ಲಿ ಮಂಗಳಪದ್ಯವನ್ನು ಹೇಳುವ ಮೊದಲು ಮಾಚಿರಾಜನೆಂಬ ವಿದ್ವಾಂಸನಿಗೆ ಸಾಮಂತಬಾಚಿಯು ಸಂತೋಷಭರಿತನಾಗಿ ದಿಬ್ಬೂರಲ್ಲಿ ಗದ್ದೆ, ಹೊಲ, ತೋಟ,

ಮನೆಗಳನ್ನು ಸಂಭಾವನೆಯಾಗಿ ಕೊಟ್ಟುದನ್ನು ಹೇಳಿದೆ. ಈ ಸಂಭಾವನೆಯನ್ನು ಅವನ ಪಾಂಡಿತ್ಯಕ್ಕೆ ಕೊಟ್ಟುದೆಂದು ಹೇಳುವುದು ಅಷ್ಟೇನೂ ಸಾಧುವಾದ ಅಭಿಪ್ರಾಯವಲ್ಲ, ಶಾಸನ ಬರೆದುಕೊಟ್ಟುದಕ್ಕೆಂದು ಭಾವಿಸಬೇಕು.

ಶಾಸನಗಳನ್ನು ಬರೆದ ಕವಿಗಳಲ್ಲಿ ಕೆಲವರು ತಾವು ಬರೆದೆವೆಂದು ಹೇಳಿಕೊಂಡಿರುವುದಕ್ಕೂ ಹಾಗೆ ಹೇಳದೆ ಇರುವುದಕ್ಕೂ ಉದಾಹರಣೆಗಳಿವೆ. ಅರಸೀಕೆರೆಯ ಕೇಶವ ದೇವಸ್ಥಾನದ ಶಾಸನದ ಕೊನೆಯಲ್ಲಿ

ಭುವನನುತ ವಾಜಿವಂಶೋ
ದ್ಭವಕರವಿಭು ಸೋಮನಾಥ ರುದ್ರಂ ಪೇಳ್ದಂ |
ಕವಿರಾಜಂ ಕಾಶ್ಯಪಗೋ
ತ್ರವರ್ಧನಂ ದೇವಪಾರ್ಯನೀ ಶಾಸನಮಂ ||

ಆದರೆ ಸೊರಬದ ತಾಲ್ಲೂಕು ಕೊಡಕಣಿ ಗ್ರಾಮದಲ್ಲಿರುವ ಶಾಸನದ ಕೊನೆಯಲ್ಲಿ "ಕಡುಜಾಣಂ ಸತ್ಕವೀಂದ್ರ ಶಂಕರ ವಿಬುಧಂ" ಎಂದು ಮಾತ್ರ ಇದೆ. ಹೀಗಿದ್ದಾಗ್ಯೂ ಈ ಶಾಸನವನ್ನು ಅವನೇ ಬರೆದನೆಂದು ಪ್ರಾಜ್ಞರ ಅಭಿಪ್ರಾಯ.

ಈ ವಿಷಯಕ್ಕೆ ಸಂಬಂಧಪಟ್ಟ ಪದ್ಯವು ಹೀಗಿದೆ:—

ಪರಮಾನಂದದೆ ಬಾಚಿದೇವನ ಭಯಂ ದಿಬ್ಬೂರಲ್ಲೈಗಂಡುಗಂ |
ದೊರೆವೆತ್ತಗ್ಗದ ಗರ್ದೆ ಬೆರ್ದಲೆಯನಂತಾ ತೋಂಟ ಸದ್ಗೇಹಮಂ ||
ಸ್ಥಿರತೇಜಂ ಕುಡಲಿಂತುದಾತ್ತ ಪಡೆದಂ ಚಾತುರ್ಯ ಚಕ್ರೇಶ್ವರಂ |
ವರವಿದ್ಯಾನಿಧಿ ಮಾಚಿರಾಜ ವಿಬುಧಂ ಚಂದ್ರಾರ್ಕರುಳ್ಳನ್ನೆಗಂ ||

ಪದ್ಯದ ಅರ್ಥವು ಸುಲಭವಾಗಿಯೇ ಇದೆ:—

ಸಾಮಂತ ಬಾಚಿದೇವನು ಸಂತೋಷದಿಂದ ದಿಬ್ಬೂರಲ್ಲಿ ಭೂಸ್ಥಿತಿಯನ್ನು ಚಾತುರ್ಯ ಚಕ್ರೇಶ್ವರನೂ ವರವಿದ್ಯಾನಿಧಿಯೂ ಆದ ಮಾಚಿರಾಜನೆಂಬ ವಿದ್ವಾಂಸನಿಗೆ ಕೊಟ್ಟನು.

ಕವಿಚರಿತ್ರೆಯಲ್ಲಿ ಸೇರಿಲ್ಲ—ಈ ಕಾಲದಲ್ಲಿ, ಎಂದರೆ ಹನ್ನೆರಡನೆಯ ಶತಮಾನದಲ್ಲಿ ಮಾಚಿರಾಜನೆಂಬ ಹೆಸರಿನ ಕವಿ ಯಾರೂ ಇರಲಿಲ್ಲವೆಂದು ಕರ್ಣಾಟಕ ಕವಿಚರಿತೆಯ ಪ್ರಥಮ ಸಂಪುಟದಿಂದ ತಿಳಿಯಬರುತ್ತದೆ. ಆದರೆ 71 ನೆಯ ಪುಟದಲ್ಲಿ ಮಾಚಿರಾಜನೆಂಬ ಹೆಸರು ಹೇಳಲ್ಪಟ್ಟಿದೆ. ಆ ಮಾಚಿರಾಜನು ಚಾಳುಕ್ಯರಾಜ ಜಯಸಿಂಹದೇವನ ಮಹಾ ಸಾಮಂತರಲ್ಲೊಬ್ಬನು. ಅವನು ಕವಿಯಲ್ಲ, ಕವಿಗಳ ಪೋಷಕನಾಗಿದ್ದನು. ಅವನು ಬದುಕಿದ್ದುದು 1079 ನೆಯ ಇಸವಿಯಲ್ಲಿ. ಕೈದಾಳದ ಶಾಸನವು ಬರೆಯಲ್ಪಟ್ಟುದು 1151 ನೆಯ ಇಸವಿಯಲ್ಲಿ. ಮಾದಿರಾಜನೆಂಬ ಹೆಸರಿನ ಕವಿಗಳು ನಾಲ್ಕಾರು ಮಂದಿ ಇದ್ದಾರೆ. ಆದರೆ ಅವರಾರೂ ಈ ಶಾಸನಕ್ಕೆ ಸಂಬಂಧಪಟ್ಟವರಲ್ಲ—ಇತ್ಯಾದಿ

ಕಾರಣಗಳಿಂದ ಕರ್ಣಾಟಕ ಕವಿಚರಿತೆಯಲ್ಲಿ ಈ ಕವಿಯ ಹೆಸರು ಪ್ರಮಾದದಿಂದ ಕೈಬಿಟ್ಟು ಹೋಗಿದೆಯೆಂದು ತೋರುತ್ತದೆ.

ಬ್ರಾಹ್ಮಣ ಕವಿ—ಈ ಮಾಚಿರಾಜ ಕವಿಯು ಬ್ರಾಹ್ಮಣನೆಂಬುದರಲ್ಲಿ ಸಂದೇಹ ವಿಲ್ಲ. ಏಕೆಂದರೆ ಬಾಚಿದೇವನು ಮಾಚಿರಾಜನಿಗೆ ಭೂಸ್ಥಿತಿಯನ್ನು ಕೊಟ್ಟುದು ದಿಬ್ಬೂರಲ್ಲಿ. ದಿಬ್ಬೂರು ಗ್ರಾಮವನ್ನು ಸರ್ವಮಾನ್ಯವಾಗಿ ಸಬ್ರಾಹ್ಮಣರಿಗೆ ಬಾಚಿಯು ಕೊಟ್ಟನೆಂದು ಶಾಸನದಲ್ಲಿದೆ. ಆ ಕಾಲದಲ್ಲಿ ದಿಬ್ಬೂರಲ್ಲಿ ಬ್ರಾಹ್ಮಣ್ಯವು ಹೆಚ್ಚಾಗಿದ್ದಿತು. ಮಾಚಿರಾಜನು ಅನ್ಯಮತದವನಾಗಿದ್ದರೆ ಅವನು ದಿಬ್ಬೂರಲ್ಲಿ ಭೂಸ್ಥಿತಿಯನ್ನು ಪಡೆಯುವುದಕ್ಕೆ ಅಪೇಕ್ಷಿಸುತ್ತಿರಲಿಲ್ಲ. ಇವನ ಜನ್ಮಸ್ಥಳವೂ ದಿಬ್ಬೂರೇ ಆಗಿರಬೇಕು. ಕೈದಾಳಕ್ಕೂ ದಿಬ್ಬೂರಿಗೂ ಸುಮಾರು ನಾಲ್ಕು ಮೈಲಿ ದೂರವಿದೆ. ಕೈದಾಳವು ಅನೇಕ "ಕವಿರಾಜ ಪ್ರವರರ್ಕಳಿಂ" ತುಂಬಿತ್ತಾದರೂ ಮಾಚಿರಾಜನ ಜನ್ಮಭೂಮಿಯು ಕೈದಾಳವೇ ಆಗಿದ್ದರೆ ಅವನು ಭೂಸ್ಥಿತಿಯನ್ನು ದೂರವಾದ ಅನ್ಯಗ್ರಾಮದಲ್ಲಿ ಅಪೇಕ್ಷಿಸುತ್ತಿರಲಿಲ್ಲ. ಒಂದುವೇಳೆ ಮಾಚಿರಾಜನು ಸಾಮಂತಬಾಚಿಯ ಆಸ್ಥಾನ ವಿದ್ವಾಂಸನಾಗಿದ್ದರೂ ಇರಬಹುದು. "ವರವಿದ್ಯಾ ನಿಧಿ" "ಚಾತುರ್ಯ ಚಕ್ರೇಶ್ವರಂ" ಎಂಬಿವು ಅವನ ಬಿರುದುಗಳೆಂಬುದಕ್ಕೆ ಲೇಶವೂ ಸಂದೇಹವಿಲ್ಲ.

ಶಾಸನದಲ್ಲಿರುವ ಚಿಟಿಕುಳ ಪ್ರಯೋಗ, ಭಾಷಾಶೈಲಿ, ಅರ್ಥಗಾಂಭೀರ್ಯ ಪದಬಂಧಗಳನ್ನು ನೋಡಿದರೆ ಮಾಚಿರಾಜನು ಇವನ ಸಮಕಾಲೀನರಾದ ರಾಜಾ ದಿತ್ಯ, ಬ್ರಹ್ಮಶಿವ, ಕರ್ಣಪಾರ್ಯ, ಇಮ್ಮಡಿನಾಗವರ್ಮ, ಮಧುಸೂದನದೇವ, ಸುಮನೋಬಾಣ, ಶಾಂತಿನಾಥನೇ ಮೊದಲಾದವರ ಗುಂಪಿಗೆ ಸೇರಲರ್ಹನೆಂದು ತೋರುತ್ತದೆ. ಇವನ ಹೆಸರನ್ನು ಯಾವ ಕವಿಗಳೂ ಹೇಳಿಲ್ಲ. ಇವನು ಬರೆದ ಯಾವ ಗ್ರಂಥವೂ ಸಿಕ್ಕಿಲ್ಲ.

ಹೊಯ್ಸಳ ನರಸಿಂಹನ ಕಟಕೋಪಾಧ್ಯಾಯನಾಗಿದ್ದ ಸುಮನೋಬಾಣ ನಾಗಲಿ, ಶಾಂತಿನಾಥನಾಗಲಿ ಈ ಶಾಸನ ಬರೆದಿರಬಹುದೆಂದೂಹಿಸಲು ಅಲ್ಪ ಸ್ವಲ್ಪ ಅವಕಾಶವಿದೆ. ಆದರೆ ನಿರ್ದಿಷ್ಟವಾದ ಆಧಾರವಿಲ್ಲ. ಅಂತಹ ಊಹೆಯೂ ಬಹು ಕ್ಷಣಿಕವಾದುದು. ಕನ್ನಡಕವಿಗಳ ಮತ, ದೇಶ, ಕಾಲ ವರ್ತಮಾನಗಳ ವಿಷಯ ದಲ್ಲಿ ಭಿನ್ನಾಭಿಪ್ರಾಯಕ್ಕೆ ತುದಿ ಮೊದಲಿಲ್ಲ. ಪ್ರಾಚೀನ ಸಾಹಿತ್ಯದ ಹಣೆಯಬರ ಹವೇ ಇಷ್ಟೆಂದು ತೋರುತ್ತದೆ. ಈ ಭಿನ್ನಾಭಿಪ್ರಾಯಕ್ಷೇತ್ರದಲ್ಲಿ ಪ್ರಾಜ್ಞರ ಸಮಾಲೋಚನೆಗೆ ಯಾವಾಗಲೂ ಅವಕಾಶವಿದ್ದೇ ಇದೆ.

ಎ. ಶ್ರೀಕಂಠಯ್ಯ.

ಕಾಲೇಜುಗಳಲ್ಲಿ ಭಾಷೇತರ ವಿಷಯಗಳನ್ನು ಕನ್ನಡದಲ್ಲಿ ಬೋಧಿಸುವುದು

[ಇದೇ ಜೂನ್ ತಿಂಗಳು ಹನ್ನೆರಡನೆಯ ತಾರೀಖು ಮೈಸೂರು ಪ್ರಜಾಪ್ರತಿನಿಧಿ ಸಭೆ ಸೇರಿದ್ದಾಗ ಅಲ್ಲಿ, ಗುಂಡ್ಲುಪೇಟೆಯ ಶ್ರೀಮಾನ್ ಬಿ. ತಿಮ್ಮಾಜಯ್ಯನವರು, ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಕನ್ನಡವೇ ಶಿಕ್ಷಣ ಭಾಷೆಯಾಗಿರಬೇಕೆಂಬ ಒಂದು ನಿರ್ಣಯವನ್ನು ತಂದರು. ಅದು ಬಹುಮತದಿಂದ ಅಂಗೀಕೃತವಾಯಿತು. ವಿದ್ಯಾಮಂತ್ರಿಗಳು ಅಂದು ಅಪ್ಪಣೆ ಕೊಡಿಸಿದಂತೆ "ಈ ನಿರ್ಣಯದಲ್ಲಿರುವ ಒಂದು ಮುಖ್ಯ ತತ್ವವು ಎಲ್ಲರಿಗೂ ಬೇಕಾದುದಾಗಿದೆ. ಅದು ಎಲ್ಲರ ಆಸೆ, ಕನ್ನಡಿಗರ ಆಸೆ, ಮತ್ತು ಒಟ್ಟು ಮೈಸೂರು ಸಂಸ್ಥಾನದಲ್ಲಿರುವ ಎಲ್ಲರ ಆಸೆ.'' ಆದ್ದರಿಂದ, ಈ ನಿರ್ಣಯದ ಸಂಬಂಧವಾಗಿ ನಡೆದ ಭಾಷಣಾದಿಗಳ ಪೂರ್ತಿಯೂ ಅಧಿಕೃತವೂ ಆದ ವರದಿಯನ್ನು ಮುಂದೆ ಕೊಟ್ಟಿದ್ದೇವೆ —ಸಂ.]

ಶ್ರೀಮಾನ್ ಬಿ. ತಿಮ್ಮಾಜಯ್ಯನವರು

ಸ್ವಾಮಿ, ನನ್ನ ಹೆಸರಿನಲ್ಲಿರುವ ಈ ನಿರ್ಣಯವನ್ನು ಸಭೆಯ ಮುಂದಿಡುತ್ತೇನೆ :

"ಸರ್ಕಾರದ ವಿದ್ಯಾಭ್ಯಾಸದ ಇಲಾಖೆಯವರು ಸಂಸ್ಥಾನದ ಹೈಸ್ಕೂಲುಗಳಲ್ಲಿ ಯಾವ ರೀತಿ ಕನ್ನಡವನ್ನು ಭಾಷೇತರ ವಿಷಯಗಳನ್ನು ಬೋಧಿಸುವುದಕ್ಕಾಗಿ ಶಿಕ್ಷಣ ಭಾಷೆಯನ್ನಾಗಿ ಮಾಡಿರುತ್ತಾರೆಯೋ, ಅದೇ ರೀತಿಯಲ್ಲಿ ಮೈಸೂರು ವಿಶ್ವವಿದ್ಯಾನಿಲಯದವರೂ ಸಹ ಸಂಸ್ಥಾನದ ಇಂಟರ್‌ಮೀಡಿಯೆಟ್ ಕಾಲೇಜುಗಳಲ್ಲಿ ಕನ್ನಡವನ್ನು ಶಿಕ್ಷಣ ಭಾಷೆಯನ್ನಾಗಿ ಮಾಡಿ ಅದರಲ್ಲಿಯೇ ಪಾಠ ಹೇಳುವಂತೆ ಅವರಿಗೆ ಸೂಚಿಸಬೇಕೆಂದು ಈ ಸಭೆಯವರು ಶ್ರೀಮನ್ಮಹಾರಾಜರವರ ಸರ್ಕಾರದವರಿಗೆ ಸಲಹೆ ಮಾಡುತ್ತಾರೆ.''

ಎಲ್ಲಾ ದೇಶಗಳಲ್ಲಿಯೂ ಆಯಾ ದೇಶದ ಮಾತೃಭಾಷೆಗೆ ಒಂದು ಮುಖ್ಯ ಸ್ಥಾನವಿರುತ್ತದೆ. ನಮ್ಮ ಮೈಸೂರು ದೇಶದ ಮಾತೃಭಾಷೆ ಕನ್ನಡ. ಈ ಕಾರಣದಿಂದ ಹೈಸ್ಕೂಲುಗಳಲ್ಲಿ ಭಾಷೇತರ ಶಿಕ್ಷಣ ಭಾಗಗಳನ್ನು ಯಾವ ರೀತಿ ಕನ್ನಡದಲ್ಲೇ ಬೋಧಿಸುತ್ತಿದ್ದಾರೆಯೋ ಅದೇ ರೀತಿಯಲ್ಲಿ ವಿಶ್ವವಿದ್ಯಾನಿಲಯದವರೂ ಸಹ ಇಂಟರ್‌ಮೀಡಿಯೇಟ್ ಮತ್ತು ಬಿ.ಎ. ತರಗತಿಗಳಲ್ಲೂ ಸಹ ಮಾತೃಭಾಷೆಯಾದ ಕನ್ನಡ ಭಾಷೆಯ ಮೂಲಕವೇ ಬೋಧಿಸುವಂತೆ ಏರ್ಪಾಡುಮಾಡಬೇಕೆಂದು ನನ್ನ ಪ್ರಾರ್ಥನೆ.

ಶ್ರೀಮಾನ್ ಬಿ. ಆರ್. ಪುಟ್ಟನಂಜಪ್ಪನವರು

ಸ್ವಾಮಿ, ಈ ನಿರ್ಣಯವನ್ನು ಅನುಮೋದಿಸುತ್ತಾ ಒಂದೆರಡು ಅಂಶಗಳನ್ನು ತಮ್ಮ ಗಮನಕ್ಕೆ ತರಲಿಚ್ಛಿಸುತ್ತೇನೆ. ಈಗ ನಮ್ಮ ಸಂಸ್ಥಾನದಲ್ಲಿರುವ ಹೈಸ್ಕೂಲುಗಳಲ್ಲಿ ಕನ್ನಡವು ಶಿಕ್ಷಣ ಭಾಷೆಯಾಗಿದೆ. ೧೯೩೧-೩೨ನೆಯ ವರ್ಷದಲ್ಲಿ ಈ ಪದ್ಧತಿಯು ಜಾರಿಗೆ ಬಂದಿತು. ಪ್ರಾರಂಭದಲ್ಲಿ ಚರಿತ್ರೆ, ಭೂವಿವರಣೆಯನ್ನು ಕನ್ನಡದಲ್ಲಿಯೇ ಬೋಧಿಸಬೇಕೆಂದು ಹೇಳಿದರು. ಅದೇ ಪ್ರಕಾರ ಕನ್ನಡವು ಶಿಕ್ಷಣ ಭಾಷೆಯಾಗಿ ಏರ್ಪಟ್ಟು ಅದು ಬಹಳ ಪರಿಣಾಮಕಾರಿಯಾಗಿದೆ. ವಿದ್ಯಾರ್ಥಿಗಳು ವಿಷಯ ಗ್ರಹಣ ಮಾಡಿಕೊಳ್ಳುವುದಕ್ಕೆ ಬಹಳ ಮಟ್ಟಿಗೆ ಇದು ಸಾಧಕವಾಗಿದೆ. ಈ ವಿಷಯವನ್ನರಿತು ೧೯೩೪-೩೫ರಲ್ಲಿ ಗಣಿತವನ್ನು ಕೂಡ ಕನ್ನಡದಲ್ಲಿ ಬೋಧಿಸಬೇಕೆಂದು ಇಲಾಖೆ ಯವರು ಅಪ್ಪಣೆಮಾಡಿದರು. ಆಮೇಲೆ ೧೯೩೬-೩೭ ರಿಂದೀಚೆಗೆ ವಿಜ್ಞಾನ ಶಾಸ್ತ್ರ ವನ್ನು ಕೂಡ ಕನ್ನಡದಲ್ಲಿಯೇ ಹೇಳಿಕೊಡಲು ಏರ್ಪಾಡಾಯಿತು. ಹೀಗೆ ಕನ್ನಡವನ್ನು ಹೈಸ್ಕೂಲುಗಳಲ್ಲಿ ಶಿಕ್ಷಣ ಭಾಷೆಯನ್ನಾಗಿ ಮಾಡಿದ ಮೇಲೆ, ಇದು ಬಹಳ ಯಶಸ್ವಿ ಯಾಗಿ ನಡೆಯುತ್ತಿದೆಯೆಂದು ಸರ್ಕಾರದವರಿಗೆ ಇಲಾಖೆಯವರು ವರದಿ ಮಾಡಿರು ವುದು ಸರ್ಕಾರದವರು ಹೊರಡಿಸಿರುವ ಹುಕುಮುಗಳಿಂದಲೇ ವ್ಯಕ್ತವಾಗಿದೆ. ಅಂತೂ, ಹೈಸ್ಕೂಲಿನಲ್ಲಿ ಕನ್ನಡದ ಮೂಲಕ ಶಿಕ್ಷಣ ಕೊಡುವುದು ಯಶಸ್ವಿಯಾಗಿರುತ್ತ ದೆಂಬುದು ವ್ಯಕ್ತವಾದಂತಾಯಿತು. ಕನ್ನಡದಲ್ಲಿ ಶಿಕ್ಷಣ ಕೊಟ್ಟರೆ ವಿದ್ಯಾರ್ಥಿಗಳು ಪರೀಕ್ಷೆಗಳಲ್ಲಿ ಚೆನ್ನಾಗಿ ತೇರ್ಗಡೆ ಹೊಂದುತ್ತಾರೆಂದು ಉಪಾಧ್ಯಾಯರುಗಳು ಕೂಡ ಅಭಿಪ್ರಾಯಪಟ್ಟಿದ್ದಾರೆ. ಈಗ ನಾವು ಕೇಳುತ್ತಿರುವುದು ಇದೇ ಮಾರ್ಗವನ್ನನುಸರಿಸಿ ಇನ್ನೊಂದು ಹೆಜ್ಜೆ ಮುಂದಕ್ಕೆ ಹೋಗಬೇಕೆಂದು. ವರ್ಷೇ ವರ್ಷೇ ೧,೦೦೦-೧,೫೦೦ ಮಂದಿ ವಿದ್ಯಾರ್ಥಿಗಳು ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿ ಇಂಟರ್‌ಮೀಡಿಯಟ್ ತರಗತಿಗಳಿಗೆ ಹೋಗುತ್ತಿರುವುದು ಎಲ್ಲರಿಗೂ ತಿಳಿದ ಅಂಶವೇ ಆಗಿದೆ. ಅವರ ಪೈಕಿ ಬಹಳಮಂದಿ ಕನ್ನಡದಲ್ಲಿಯೇ ಹೆಚ್ಚು ಪರಿಶ್ರಮವುಳ್ಳವರಾಗಿರು ತ್ತಾರೆ. ಅವರಿಗೆ ಎಸ್.ಎಸ್.ಎಲ್.ಸಿ. ಯಲ್ಲಿ ಕನ್ನಡವೇ ಶಿಕ್ಷಣ ಭಾಷೆಯಾಗಿ ಇಂಟರ್ ಮೀಡಿಯಟ್ ತರಗತಿಗೆ ಬಂದಾಗ ಇಂಗ್ಲಿಷಿನಲ್ಲಿ ಪಾಠವನ್ನು ಕಲಿತುಕೊಳ್ಳು ವುದು ಕಷ್ಟವಾಗುತ್ತದೆ. ಇಂಗ್ಲಿಷಿನಲ್ಲಿ ಪಾಠ ಪ್ರವಚನಗಳನ್ನು ಕಲಿಯುವುದರಿಂದ ತಮ್ಮ ದೇಶಭಾಷೆಯಾದ ಕನ್ನಡಕ್ಕೆ ಚ್ಯುತಿ ಬರುತ್ತದೆಂದು ಯಾರು ಹೇಳುತ್ತಾರೆಯೋ ಅವರಿಗಾಗಿಯೇ ಅಲ್ಲವೇ ಸರ್ಕಾರದವರು ಮೈಸೂರು ವಿಶ್ವವಿದ್ಯಾನಿಲಯವನ್ನು ಸ್ಥಾಪಿಸಿರುವುದು? ಅಂಥಾದ್ದರಲ್ಲಿ ಈಗ ನಮ್ಮ ವಿಶ್ವವಿದ್ಯಾನಿಲಯದಲ್ಲಿ ಕನ್ನಡದಲ್ಲಿ ಪಾಠ ಪ್ರವಚನಗಳನ್ನು ಮಾಡಲು ತಕ್ಕ ಅನುಕೂಲವನ್ನು ಮಾಡಿಕೊಡದೆ ಹೋದರೆ

ಅದನ್ನು ತಾವು ಸ್ಥಾಪಿಸಿರುವ ಧ್ಯೇಯವು ನೆರವೇರಿದಂತಾಗುವುದಿಲ್ಲ. ಮೈಸೂರು ವಿಶ್ವವಿದ್ಯಾನಿಲಯವನ್ನು ಸ್ಥಾಪಿಸಿದ ಕಾಲದಲ್ಲಿ ಸರ್ ಎಂ. ವಿಶ್ವೇಶ್ವರಯ್ಯನವರು "ವಿದ್ಯಾಭ್ಯಾಸಕ್ಕೆ ಉತ್ತೇಜನ ಕೊಡುವುದು, ಪ್ರೌಢವಿದ್ಯಾಭ್ಯಾಸವನ್ನು ಅಭಿವೃದ್ಧಿ ಪಡಿಸುವುದು, ಸಂಸ್ಕೃತಿಯ ಒಂದು ಕೇಂದ್ರವನ್ನಾಗಿ ಮಾಡಬೇಕೆಂಬುದು, ಸಂಸ್ಥಾನದ ಮೂಲೆ ಮೂಲೆಗಳಲ್ಲೂ ಅಜ್ಞಾನವೆಂಬ ಕತ್ತಲನ್ನು ಹೋಗಲಾಡಿಸುವಂಥ ಒಂದು ಜ್ಯೋತಿಯನ್ನು ಏರ್ಪಡಿಸುವುದು ಇವುಗಳೇ ಸಾಮಾನ್ಯ ಉದ್ದೇಶಗಳೆಂದು ಸ್ಥೂಲವಾಗಿ ಹೇಳಬಹುದು" ಎಂದು ಹೇಳಿ ಆ ಮೂಲಕ ತಮ್ಮ ಧ್ಯೇಯವನ್ನು ಸೂಚಿಸಿದ್ದಾರೆ. ನಮ್ಮನ್ನಾಳಿದ ಮಹಾಸ್ವಾಮಿಯವರು, ಮೈಸೂರು ವಿಶ್ವವಿದ್ಯಾನಿಲಯದ ಸೆನೆಟ್ ಸಭೆಯ ಪ್ರಾರಂಭೋತ್ಸವ ಕಾಲದಲ್ಲಿ ಮಾಡಿದ ಭಾಷಣದಲ್ಲಿಯೂ ಇದೇ ಅಂಶವನ್ನೇ ವ್ಯಕ್ತಪಡಿಸಿದ್ದಾರೆ.

ಮಹಾಸ್ವಾಮಿಯವರು ಆಗ ಅಪ್ಪಣೆಕೊಡಿಸಿದುದೇನೆಂದರೆ,—"ವಿಶ್ವವಿದ್ಯಾನಿಲಯದ ಯೋಜನೆಯಲ್ಲಿ ಕನ್ನಡ ಸಾಹಿತ್ಯಕ್ಕೆ ವಿಶೇಷ ರೀತಿಯಲ್ಲಿ ಉತ್ತೇಜನವು ದೊರೆಯುವಂತೆ ಏರ್ಪಾಟು ಮಾಡಿರುವುದಕ್ಕಾಗಿ ನಮಗೆ ಸಹಜವಾದ ಆಸಕ್ತಿಯನ್ನುಂಟುಮಾಡಿದೆ; ಈಗಿನ ಕಾಲದಲ್ಲಿ ಕಾಲೇಜುಗಳಲ್ಲಿಯೂ ಮತ್ತು ಸ್ಕೂಲುಗಳಲ್ಲಿಯೂ ದೇಶಭಾಷೆಗಳ ವ್ಯಾಸಂಗವು ಉಪೇಕ್ಷೆಮಾಡಲ್ಪಡುತ್ತಿರುವುದು ನಮ್ಮಗಳೆಲ್ಲರಿಗೂ ಗೊತ್ತೇ ಇದೆ. ಮೈಸೂರಿನಲ್ಲಿ ಬಳಕೆಯಲ್ಲಿರುವ ಕನ್ನಡ ಭಾಷೆಯನ್ನೇ ಅಲ್ಲದೆ ದಕ್ಷಿಣ ಭಾರತದ ದೇಶಭಾಷೆಗಳಾಗಿದ್ದು ಮೈಸೂರಿನಲ್ಲಿ ಬಳಕೆಯಲ್ಲಿರುವಂಥ ಆ ಭಾಷೆಗಳನ್ನೂ ಪೂರ್ಣವಾಗಿಯೂ ಮತ್ತು ಏಕಮುಖವಾಗಿಯೂ ಶಿಕ್ಷಣ ಮಾಡಲು ವಿಶ್ವವಿದ್ಯಾನಿಲಯದ ಯೋಜನೆಯಲ್ಲಿ ಅವಕಾಶವನ್ನುಂಟುಮಾಡಿರುವುದು ನಮಗೆ ತುಂಬಾ ಸಂತೋಷವನ್ನುಂಟುಮಾಡಿದೆ.

ಕ್ರಮವಾಗಿ ಗೊತ್ತುಮಾಡಲಾಗಿರುವ ಪರೀಕ್ಷೆಗಳಲ್ಲಿ ಭಾಗವಹಿಸುವುದಕ್ಕೂ ಮತ್ತು ಶಿಕ್ಷಣವನ್ನು ಪಡೆಯುವುದಕ್ಕೂ ಕಾರಣಾಂತರಗಳಿಂದ ಅನುಕೂಲವಿಲ್ಲದೆ ಇದ್ದಂಥ ಪ್ರಜಾ ಸಮುದಾಯಕ್ಕೆ ಸೇರಿದ ಒಂದು ಭಾಗ ಜನಗಳ ಜ್ಞಾನ ಪ್ರಸಾರಣೆಯನ್ನು ನಡೆಯಿಸುವುದರಲ್ಲಿಯೂ ನಮ್ಮ ವಿಶ್ವವಿದ್ಯಾನಿಲಯದವರು ನಿರತರಾಗುವರು. ಈ ಉದ್ದೇಶ ಸಾಧನೆಗಾಗಿಯೆ ಯೋಜನೆಯಲ್ಲಿ ಪುಸ್ತಕಗಳನ್ನು ಪ್ರಕಟನೆ ಮಾಡುವ ಮತ್ತು ಅದನ್ನು ವಿಸ್ತಾರಮಾಡುವ ಇಲಾಖೆಗಳು ಸೇರಿರುತ್ತವೆ. ವಿಶ್ವವಿದ್ಯಾನಿಲಯದವರು ನಮ್ಮ ದೇಶದಲ್ಲಿ ಜೀವನಕ್ಕೆ ಆವಶ್ಯಕವಾದ ಸೌಕರ್ಯಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಜಾಗ್ರತೆಯಾಗಿ ಇದಕ್ಕೆ ಸಂಬಂಧಪಟ್ಟ ಕಾರ್ಯಾಚರಣೆಗಳನ್ನು ಅಭಿವೃದ್ಧಿಪಡಿಸುವರೆಂದು ನಮಗೆ ನಂಬಿಗೆ ಇದೆ."

ಈ ವಿಶ್ವವಿದ್ಯಾನಿಲಯವನ್ನು ಸ್ಥಾಪನೆ ಮಾಡಿದಾಗ, ಮಹಾಸ್ವಾಮಿಯವರು ಕೇವಲ ನೂರಾರು ವಿದ್ಯಾರ್ಥಿಗಳಿಗೆ ಮಾತ್ರ ಇದರಿಂದ ಉಪಯೋಗವಾಗಬೇಕೆಂಬ ಉದ್ದೇಶವನ್ನು ಇಟ್ಟುಕೊಂಡಿರಲಿಲ್ಲ. ಸಂಸ್ಥಾನದ ನಾನಾ ಕಡೆಗಳಿಂದ ಬೇರೆ ಬೇರೆ ಗ್ರಾಮಗಳಿಂದ ಎಲ್ಲಾ ವಿದ್ಯಾರ್ಥಿಗಳು ತಮ್ಮ ತಮ್ಮ ಗ್ರಾಮಗಳಿಗೆ ಹೋಗಿ ಜ್ಞಾನವನ್ನು ಹರಡಲು ಅವಕಾಶವಾಗಲೆಂಬ ಸದುದ್ದೇಶದಿಂದ ಈ ರೀತಿ ಮಾಡಿದರು. ಇದರ ವಿಚಾರವಾಗಿ ನಮ್ಮ ವಿಶ್ವವಿದ್ಯಾನಿಲಯದಲ್ಲಿ ಹೇಳಿಕೊಡುವ ಜ್ಞಾನವು ಸಂಸ್ಥಾನದ ಎಲ್ಲ ಮೂಲೆಗಳಲ್ಲೂ ಹರಡಬೇಕೆಂಬುದು ಆಳಿದ ಮಹಾಸ್ವಾಮಿಯವರ ತೀವ್ರಾಭಿಲಾಷೆಯಾಗಿದ್ದಿತು. ಆದರೆ ನಮ್ಮ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳು ತಾವು ಪಡೆದ ಜ್ಞಾನವನ್ನು ನಮ್ಮ ಹಳ್ಳಿಗಳಲ್ಲಿ ಕನ್ನಡದಲ್ಲಿ ಹರಡಲು ಶಕ್ತರಾಗಲಿಲ್ಲವಲ್ಲಾ ಎಂಬುದು ವಿಷಾದಪಡಬೇಕಾದ ಸಂಗತಿ. ಪರಕೀಯ ಭಾಷೆಯಲ್ಲಿ ಅವರು ವಿದ್ಯೆಯನ್ನು ಕಲಿತುದುದರಿಂದ ಅವರು ನಮ್ಮ ಕನ್ನಡ ಭಾಷೆಯಲ್ಲಿ ಹಳ್ಳಿಯವರಿಗೆ ತಿಳಿಯಪಡಿಸಲು ಸಾಧ್ಯವಿಲ್ಲದೆ ಹೋಯಿತು. ಆದಕಾರಣದಿಂದಲೇ ನಾವೀಗ ವಿಶ್ವವಿದ್ಯಾನಿಲಯದಲ್ಲಿಯೂ ಕನ್ನಡವನ್ನೇ ಶಿಕ್ಷಣ ಭಾಷೆಯನ್ನಾಗಿ ಏರ್ಪಡಿಸಬೇಕೆಂದು ಕೇಳಿಕೊಳ್ಳುತ್ತಿರುವುದು.

ಈ ಬಗೆಯ ಭಾವನೆಯು ನಮ್ಮ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಮಾತ್ರವೇ ಮೂಡಿಲ್ಲ. ಇಂಡಿಯಾ ದೇಶದ ಇತರ ವಿಶ್ವವಿದ್ಯಾನಿಲಯಗಳಲ್ಲಿಯೂ ಸಹ ಈ ಬಗೆಯ ಭಾವನೆಯು ಮೂಡಿದೆ. ಈ ಸಂದರ್ಭದಲ್ಲಿ ೧೯೩೭ನೆಯ ಇಸವಿ ಮೇ ೨೫ನೆ ತಾರೀಖಿನ "ಹಿಂದು" ಪತ್ರಿಕೆಯಲ್ಲಿ ಶ್ರೀಮಾನ್ ನಾರಾಯಣ ಅಗರ್‌ವಾಲ್ ಎಂಬವರು "ಶಿಕ್ಷಣ ಭಾಷೆ ಮತ್ತು ಭಾರತದ ವಿಶ್ವವಿದ್ಯಾನಿಲಯಗಳ ಪರಿಸ್ಥಿತಿ" ಎಂಬ ಶಿರೋನಾಮೆಯಲ್ಲಿ ಒಂದು ಲೇಖನವನ್ನು ಬರೆದಿದ್ದಾರೆ. ಆ ಲೇಖನದಲ್ಲಿ ಅವರು ಬೇರೆ ಬೇರೆ ವಿಶ್ವವಿದ್ಯಾನಿಲಯಗಳಲ್ಲಿ ಪಾಠಗಳನ್ನು ಆಯಾ ದೇಶಭಾಷೆಗಳಲ್ಲಿ ಹೇಳಿಕೊಡುವುದರಿಂದ ಅನುಕೂಲವೇನಿದೆಯೆಂಬುದನ್ನು ತಿಳಿಸಿದ್ದಾರೆ. ಕಾಶೀ ಹಿಂದೂ ವಿಶ್ವವಿದ್ಯಾನಿಲಯದಲ್ಲಿ ಇಂಟರ್‌ಮೀಡಿಯಟ್ ಪರೀಕ್ಷೆಯ ವರೆಗೂ ಐಚ್ಛಿಕ ಪಾಠಗಳ ಪ್ರಶ್ನೆಪತ್ರಿಕೆಗಳಿಗೆ ಉತ್ತರವನ್ನು ಹಿಂದಿಯಲ್ಲಿಯೇ ಬರೆಯಬಹುದೆಂದಿದೆ. ಅಷ್ಟೇ ಅಲ್ಲದೆ, ಉಪಾಧ್ಯಾಯರುಗಳು ಇಂಗ್ಲಿಷಿನಲ್ಲಿಯೇ ಪಾಠಗಳನ್ನು ಹೇಳಿಕೊಡಬೇಕೆಂಬ ನಿರ್ಬಂಧವೇನೂ ಇಲ್ಲ. ಅವರು ಇಷ್ಟಪಟ್ಟರೆ ಹಿಂದಿಯಲ್ಲಿಯೇ ಪಾಠ ಹೇಳಿಕೊಡಬಹುದು. ಅದೇ ರೀತಿಯಲ್ಲಿ ಲಕ್ನೋ ವಿಶ್ವವಿದ್ಯಾನಿಲಯದ ಅಕೆಡೆಮಿಕ್ ಕೌನ್ಸಿಲಿನವರೂ, ಅಲ್ಲಿನ ಭಾಷೆಯಾದ ಹಿಂದೂಸ್ಥಾನಿಯಲ್ಲಿಯೇ ಪಾಠಗಳನ್ನು ಹೇಳಿಕೊಡುವುದೇ ಅಲ್ಲದೆ ಪರೀಕ್ಷೆಗಳಲ್ಲಿಯೂ ಹಿಂದೂಸ್ಥಾನಿಯಲ್ಲಿಯೇ ಬರೆಯ

ಬೇಕೆಂದು ಶಿಫಾರ್ಸು ಕಳುಹಿಸಿದ್ದಾರೆ. ಹೀಗೆಯೇ ನಾಗಪುರದ ವಿಶ್ವವಿದ್ಯಾನಿಲಯದವರೂ, ಇದೇ ತತ್ವವನ್ನೊಪ್ಪಿಕೊಂಡಿದ್ದಾರೆ. ಅಲ್ಲದೆ ದೇಶಭಾಷೆಯಲ್ಲಿ ಪಾರಿಭಾಷಿಕ ಶಬ್ದಗಳನ್ನು ಸೃಷ್ಟಿಸುವ ವರೆಗೆ ಸಂಸ್ಕೃತ ಮತ್ತು ಇಂಗ್ಲಿಷ್ ಶಬ್ದಗಳನ್ನೇ ಉಪಯೋಗಿಸಿಕೊಳ್ಳುತ್ತಿರಬೇಕೆಂದೂ ಸಹ ಅವರು ಸಲಹೆಮಾಡಿದ್ದಾರೆ. ಅಣ್ಣಾಮಲೆ ವಿಶ್ವವಿದ್ಯಾನಿಲಯದಲ್ಲಿ ತಮಿಳಿನಲ್ಲಿ ಪಠ್ಯಪುಸ್ತಕಗಳನ್ನು ಬರೆಯಿಸುವ ಏರ್ಪಾಡು ಮಾಡಿದ್ದಾರೆ. ಅಲ್ಲಿ ತಮಿಳನ್ನು ಇನ್ನೂ ಶಿಕ್ಷಣಭಾಷೆಯನ್ನಾಗಿ ಮಾಡಿಲ್ಲವಾದರೂ ಇಂಟರ್ಮೀಡಿಯಟ್ ತರಗತಿಗಳಿಗೆ ಐಚ್ಛಿಕ ವಿಷಯಗಳ ಪಠ್ಯಪುಸ್ತಕಗಳು ಸಿದ್ಧವಾಗುವಂತೆ ಆಜ್ಞೆಯಾಗಿದೆ. ಈಗ ತರ್ಕ, ಅರ್ಥಶಾಸ್ತ್ರ, ಭೌತಶಾಸ್ತ್ರ ಮತ್ತು ರಸಾಯನಶಾಸ್ತ್ರ—ಇವುಗಳಲ್ಲಿ ಪಠ್ಯಪುಸ್ತಕಗಳು ಸಿದ್ಧವಾಗಿ ಪ್ರಕಟವಾಗಿವೆ. ಗಣಿತಶಾಸ್ತ್ರ, ಸಸ್ಯಶಾಸ್ತ್ರ, ಪ್ರಾಣಿಶಾಸ್ತ್ರ, ಚರಿತ್ರೆ ಮುಂತಾದುವುಗಳ ಪಠ್ಯಪುಸ್ತಕಗಳು ಪ್ರಕಟವಾಗುವುದರಲ್ಲಿವೆ. ಅವು ಪ್ರಕಟವಾದ ಬಳಿಕ ಆ ವಿಶ್ವವಿದ್ಯಾನಿಲಯದಲ್ಲಿ ತಮಿಳನ್ನು ಶಿಕ್ಷಣಭಾಷೆಯನ್ನಾಗಿ ಗೊತ್ತುಮಾಡುವ ವಿಚಾರವು ಪರ್ಯಾಲೋಚನೆಗೆ ಬರುತ್ತದೆ. ತಿರುವಾಂಕೂರು ವಿಶ್ವವಿದ್ಯಾನಿಲಯವಾದರೂ ಸಹ ತಮ್ಮ ಭಾಷೆಯಲ್ಲಿ ತಕ್ಕ ಪಠ್ಯಪುಸ್ತಕಗಳನ್ನು ತಯಾರುಮಾಡುವ ಕೆಲಸದಲ್ಲಿ ತೊಡಗಿದ್ದಾರೆ. ಈ ರೀತಿಯಲ್ಲಿ ನಮ್ಮ ಇಂಡಿಯಾದೇಶದ ಎಲ್ಲಾ ಪ್ರಾಮುಖ್ಯ ವಿಶ್ವವಿದ್ಯಾನಿಲಯಗಳಲ್ಲಿಯೂ ಆಯಾ ದೇಶಭಾಷೆಗಳಲ್ಲೇ ಪಾಠಪ್ರವಚನಗಳನ್ನು ನಡೆಯಿಸಬೇಕೆಂದು ಎಲ್ಲರೂ ಮುಂದುವರಿದಿದ್ದಾರೆ. ಈ ವಿಷಯದಲ್ಲಿ ವಿಶ್ವವಿದ್ಯಾನಿಲಯದವರೇ ಅಲ್ಲದೆ ನಿಜಾಂ ಸರ್ಕಾರದವರೂ ಸಹ ಶಿಕ್ಷಣಭಾಷೆಯನ್ನು ಉರ್ದುವನ್ನಾಗಿ ಮಾಡಿ, ಅದಕ್ಕಾಗಿ ಒಂದು ಭಾಷಾಂತರ ಶಾಖೆಯನ್ನು ಏರ್ಪಡಿಸಿ, ಅವಶ್ಯಕವಾದ ಪಠ್ಯಪುಸ್ತಕಗಳನ್ನು ಉರ್ದುಭಾಷೆಗೆ ಭಾಷಾಂತರಮಾಡುವುದಕ್ಕೂ ಮತ್ತು ಅವಶ್ಯಕವಾದ ಪದಗಳನ್ನು ಉರ್ದುವಿನಲ್ಲಿ ಸಂಗ್ರಹಿಸುವುದಕ್ಕೂ ತಕ್ಕ ಏರ್ಪಾಡುಗಳನ್ನು ಮಾಡಿರುತ್ತಾರೆ. ಅದೇ ರೀತಿಯಲ್ಲಿ ನಮ್ಮ ದೇಶದಲ್ಲಿಯೂ ಏರ್ಪಾಡು ಮಾಡಬೇಕು. ನಮ್ಮ ಸರ್ಕಾರದವರೂ ಅದೇ ನೀತಿಯನ್ನು ಅನುಸರಿಸುವುದು ಒಳ್ಳೆಯದು. ಹಾಗಿಲ್ಲದೆ ಈ ವಿಚಾರವನ್ನು ನಮ್ಮ ವಿಶ್ವವಿದ್ಯಾನಿಲಯದ ಕೌನ್ಸಿಲಿನ ಪರಿಶೀಲನೆಗೆ ಬಿಟ್ಟುಬಿಟ್ಟರೆ ಆದರಿಂದ ಏನೂ ಫಲವಾದಂತಾಗುವುದಿಲ್ಲ. ಈಗ ನಮ್ಮ ವಿಶ್ವವಿದ್ಯಾನಿಲಯದ ಸೆನೆಟ್‌ನಲ್ಲಿ ಎಪ್ಪತ್ತೈದು ಜನ ಸದಸ್ಯರಿದ್ದಾರೆ. ಅವರ ಪೈಕಿ ಚುನಾಯಿತ ಸದಸ್ಯರು ೧೮ ಮಂದಿ ಮಾತ್ರ ಎಂದಮೇಲೆ ಸಾರ್ವಜನಿಕರ ಅಭಿಪ್ರಾಯಕ್ಕೆ ಅಷ್ಟಾಗಿ ಅಲ್ಲಿ ಮನ್ನಣೆಯು ದೊರೆಯಲಾರದು. ಆದುದರಿಂದ ಸರ್ಕಾರದವರು ನಮ್ಮ ದೇಶಭಾಷೆ ಮತ್ತು ರಾಜಭಾಷೆಯಾದ ಕನ್ನಡಭಾಷೆಯನ್ನೇ ಶಿಕ್ಷಣಭಾಷೆಯನ್ನಾಗಿ ಏರ್ಪಡಿಸು

ವಂತೆ ವಿಶ್ವವಿದ್ಯಾನಿಲಯದವರಿಗೆ ಶಿಫಾರಸು ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಇಷ್ಟು ಹೇಳಿ, ಈ ನಿರ್ಣಯಕ್ಕೆ ನನ್ನ ಸಂಪೂರ್ಣ ಬೆಂಬಲವನ್ನು ಕೊಡುತ್ತಾ, ಇದರಲ್ಲಿ ಅಡಗಿರುವ ತತ್ವಗಳನ್ನು ಸಭೆಯ ಮಾನ್ಯ ಸದಸ್ಯರೆಲ್ಲರೂ ಒಪ್ಪಿಕೊಳ್ಳುತ್ತಾರೆಂದು ನಂಬಿದ್ದೇನೆ.

ಶ್ರೀಮಾನ್ ಟಿ. ಎಸ್. ರಾಜಗೋಪಾಲ ಐಯ್ಯಂಗಾರ್ಯರು

ಸ್ವಾಮಿ, ಈ ನಿರ್ಣಯದ ವಿಚಾರಕ್ಕೆ ಸಂಬಂಧಪಟ್ಟಂತೆ ನನ್ನ ಹೆಸರಿನಲ್ಲಿ ಎರಡು ತಿದ್ದುಪಡಿಗಳಿವೆ. ಅದರಲ್ಲಿ ಮೊದಲನೆಯ ತಿದ್ದುಪಡಿಯನ್ನು ಈಗ ಸಭೆಯ ಮುಂದಿಡುತ್ತೇನೆ. ಆ ತಿದ್ದುಪಡಿ ಈ ರೀತಿಯಾಗಿದೆ:—

"ಈ ನಿರ್ಣಯದ ಮೂರನೆಯ ಪಂಕ್ತಿಯಲ್ಲಿ ಬರುವ 'ಇಂಟರ್‌ಮೀಡಿಯೆಟ್' ಎಂಬ ಪದವನ್ನು ತೆಗೆದುಬಿಡಬೇಕು."

ಈಗ ನಿರ್ಣಯದಲ್ಲಿ ಹೇಳಿರುವುದು, ಕನ್ನಡ ಭಾಷೆಯಲ್ಲಿ ಶಿಕ್ಷಣಕೊಡುವ ಪದ್ಧತಿಯನ್ನು ಇಂಟರ್‌ಮೀಡಿಯಟ್ ಕಾಲೇಜಿನಲ್ಲಿ ಮಾತ್ರವೇ ಏರ್ಪಡಿಸಬೇಕೆಂದಿದೆ. ನನ್ನ ಅಭಿಪ್ರಾಯದಲ್ಲಿ ತಾವು ಇನ್ನು ಒಂದು ಹೆಜ್ಜೆ ಮುಂದುವರಿದು ಎಲ್ಲಾ ಕಾಲೇಜುಗಳಲ್ಲಿಯೂ ಕನ್ನಡವನ್ನೇ ಶಿಕ್ಷಣಭಾಷೆಯನ್ನಾಗಿ ಏರ್ಪಡಿಸಬೇಕೆಂದು ಹೇಳುತ್ತೇನೆ. ನಮ್ಮ ದೇಶವನ್ನು ಬಿಟ್ಟರೆ, ಮಿಕ್ಕ ಎಲ್ಲ ದೇಶಗಳಲ್ಲಿಯೂ ಶಿಕ್ಷಣವು ಆಯಾ ದೇಶಭಾಷೆಯಲ್ಲಿ ನಡೆಯುತ್ತಿದೆ. ಅಲ್ಲದೆ ಕೋರ್ಟು ವ್ಯವಹಾರಗಳು ಕೂಡ ಆಯಾ ದೇಶಭಾಷೆಯಲ್ಲಿಯೇ ನಡೆಯುತ್ತವೆಯೇ ಹೊರತು ಅನ್ಯಭಾಷೆಯಲ್ಲಿ ನಡೆಯುತ್ತಿಲ್ಲ. ಆದರೆ ನಮ್ಮ ದೇಶದಲ್ಲಿ ಕಾರಣಾಂತರಗಳಿಂದ ಇಂಗ್ಲಿಷ್ ಭಾಷೆಯು ಶಿಕ್ಷಣಭಾಷೆಯಾಗಿ ಅದೇರೀತಿ ಇದುವರೆಗೂ ನಡೆದುಕೊಂಡು ಬಂದಿದೆ. ಹಿಂದೂಸ್ಥಾನದಲ್ಲಿ ರಾಷ್ಟ್ರಭಾಷೆ ಮತ್ತು ದೇಶಭಾಷೆಯು ಹಿಂದಿಯಾಗಬೇಕೆಂಬ ಚಳುವಳಿ ಇದ್ದು ಅಲ್ಲಿಯ ಶಾಲೆಗಳಲ್ಲಿ ಆ ಭಾಷೆಗೇ ಹೆಚ್ಚು ಪ್ರಾಧಾನ್ಯತೆ ಇದೆ. ನಮ್ಮ ಮೈಸೂರು ದೇಶದಲ್ಲಿ ಕನ್ನಡವು ದೇಶಭಾಷೆ, ಇಂಥಾದ್ದರಲ್ಲಿ ಕನ್ನಡಕ್ಕೆ ಹೆಚ್ಚಿನ ಪ್ರಾಧಾನ್ಯವನ್ನು ಕೊಡದೆ, ಅನ್ಯಭಾಷೆಯಾದ ಇಂಗ್ಲಿಷಿಗೆ ಪ್ರಾಧಾನ್ಯತೆ ಕೊಡುವುದು ನ್ಯಾಯವಲ್ಲ. ಹಿಂದೆ ಹೈಸ್ಕೂಲುಗಳಲ್ಲಿ ಕನ್ನಡವನ್ನು ಶಿಕ್ಷಣಭಾಷೆಯನ್ನಾಗಿ ಏರ್ಪಡಿಸಬೇಕೆಂದು ಹೇಳಿದಾಗಲೂ ಅನೇಕ ಕಡೆಗಳಿಂದ ಅದಕ್ಕೆ ಪ್ರತಿಭಟನೆ ಬಂದಿತು. ಆದರೂ ಕೂಡ ಅದನ್ನು ಜಯಪ್ರದವಾಗಿ ಜಾರಿಗೆ ತರಲೇ ತರಲಾಯಿತು. ಆದುದರಿಂದ ಕಾಲೇಜುಗಳಲ್ಲಿಯೂ ತಾವು ಕನ್ನಡವನ್ನೇ ಶಿಕ್ಷಣಭಾಷೆಯನ್ನಾಗಿ ಏರ್ಪಡಿಸಬೇಕು. ಕಾಲೇಜಿನ ಅಧಿಕಾರಿಗಳೇನೋ ಈಗಿರುವ ಇಂಗ್ಲಿಷ್ ಶಿಕ್ಷಣಭಾಷೆಯ ಪದ್ಧತಿಯು ತಪ್ಪಿದರೆ ತಮ್ಮ ಪ್ರತಿಭೆಯು ಕಡಮೆ

ಯಾಗಬಹುದೆಂದು ಇದು ಬೇಡವೆಂದು ಹೇಳಬಹುದು. ಆದರೆ ತಾವು ಈ ವಿಚಾರವನ್ನು ಪರಿಶೀಲಿಸುವಾಗ ಮುಖ್ಯವಾಗಿ ಈಗಿರುವ ಕಾಲವೆಂಥಾದ್ದೆಂಬುದನ್ನು ಗಮನಕ್ಕೆ ತೆಗೆದುಕೊಳ್ಳಬೇಕು. ಈಗ ಕನ್ನಡ ರಾಜ್ಯದ ಎಲ್ಲಾ ಭಾಗಗಳನ್ನೂ ಒಂದುಗೂಡಿಸಿ ಕರ್ಣಾಟಕ ಪ್ರಾಂತವೊಂದನ್ನೇರ್ಪಡಿಸಬೇಕೆಂಬ ಯೋಜನೆಯು ನಡೆಯುತ್ತಿದೆ. ಅಷ್ಟೇ ಅಲ್ಲದೆ ಕರ್ಣಾಟಕದ ವಿಶ್ವವಿದ್ಯಾನಿಲಯವೊಂದನ್ನು ಸ್ಥಾಪಿಸಬೇಕೆಂಬ ಚಳುವಳಿಯು ಕೂಡ ನಡೆಯುತ್ತಿದೆ. ಇದಕ್ಕೆ ಇಡೀ ಮೈಸೂರು ದೇಶದವರು ಮತ್ತು ಇಡೀ ಕರ್ಣಾಟಕ ದೇಶದವರು ತಮ್ಮ ಪ್ರೋತ್ಸಾಹವನ್ನು ಕೊಡಬೇಕು. ಇಂಥಾದ್ದರಲ್ಲಿ ವಿಶ್ವವಿದ್ಯಾನಿಲಯಗಳಲ್ಲಿ ಕನ್ನಡವನ್ನು ಶಿಕ್ಷಣಭಾಷೆಯನ್ನಾಗಿ ಏರ್ಪಡಿಸಿದರೆ ಸರ್ಕಾರದವರು ಇದಕ್ಕೆ ಎಷ್ಟೋ ಪ್ರೋತ್ಸಾಹ ಕೊಟ್ಟಂತಾಗುತ್ತದೆ.

ಅಲ್ಲದೆ ಇನ್ನೊಂದು ವಿಷಯ. ನಮ್ಮ ವಿಶ್ವವಿದ್ಯಾನಿಲಯವನ್ನು ಸ್ಥಾಪನೆ ಮಾಡಿರುವುದರ ಉದ್ದೇಶವೇನೆಂಬುದನ್ನು ಶ್ರೀಮನ್ಮಹಾರಾಜರವರು ತಮ್ಮ ಭಾಷಣದಲ್ಲಿ ಶ್ರುತಪಡಿಸಿರುವುದನ್ನು ತಮ್ಮ ಗಮನಕ್ಕೆ ತರುತ್ತೇನೆ. 'ಮೈಸೂರು ವಿಶ್ವವಿದ್ಯಾನಿಲಯದ ಮೊದಲನೆಯ ಚಾನ್ಸಲರಾದ ಆಳಿದ ಮಹಾಸ್ವಾಮಿಯವರಾದ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರ್ ಅವರು ಮೊದಲನೆಯ ಸೆನೆಟ್ ಸಭೆಯ ಪ್ರಾರಂಭೋತ್ಸವದ ಭಾಷಣದಲ್ಲಿಯೂ ಪುನಃ ಮೊದಲನೆಯ ಕಾನ್ವೊಕೇಷನ್ ಮಹೋತ್ಸವದ ಭಾಷಣದಲ್ಲಿಯೂ ವಿಶ್ವವಿದ್ಯಾನಿಲಯದ ಪಾಲಿಗೆ ಹಲವು ಕರ್ತವ್ಯಗಳನ್ನು ಅಪ್ಪಣೆಮಾಡಿದರು. ಅವುಗಳಲ್ಲಿ ವಿಶೇಷವಾದುವು ಇವೆರಡು :—ಉತ್ತಮ ಶೈಲಿಯಲ್ಲಿ ಬರೆದ ಕನ್ನಡ ಪುಸ್ತಕಗಳ ಪ್ರಕಟಣೆ, ಹಾಗು ಕನ್ನಡ ಸಾಹಿತ್ಯಕ್ಕೆ ಪ್ರೋತ್ಸಾಹ ಮತ್ತು ಶ್ರೀಮನ್ಮಹಾರಾಜರವರ ಪ್ರಜೆಗಳಲ್ಲಿ ಯಾರು ಕಾರಣಾಂತರದಿಂದ ಕ್ರಮಬದ್ಧವಾದ ಶಿಕ್ಷಣ ವಸ್ತುಗಳಲ್ಲಿ ಭಾಗವಹಿಸಿ ಪರೀಕ್ಷೆಗಳಲ್ಲಿ ಕೂಡಲು ಶಕ್ತರಲ್ಲವೋ ಅಂಥವರಲ್ಲಿ ಜ್ಞಾನಪ್ರಸಾರ ಮಾಡುವುದು. ಅಲ್ಲದೆ ಮೈಸೂರು, ಬೆಂಗಳೂರು—ಈ ಎರಡು ದೊಡ್ಡ ಪಟ್ಟಣಗಳಲ್ಲಿ ದೊರೆಯುವ ವಿದ್ಯಾಭ್ಯಾಸದ ಅನುಕೂಲಗಳನ್ನು ಪಡೆದಿಲ್ಲದ ಸಂಸ್ಥಾನದ ದೂರ ಪ್ರದೇಶಗಳಲ್ಲಿ ವಾಸಿಸುವ ಉಚ್ಚವರ್ಗದ ಸಂಸ್ಕೃತಿಯನ್ನು ಹರಡುವುದು. ಈಗ ರೂಢಿಯಲ್ಲಿರುವ ಪ್ರಕಾರ ಶಿಕ್ಷಣ ಭಾಷೆಯು ಇಂಗ್ಲಿಷಿನಲ್ಲಿಯೇ ಇದ್ದರೆ, ವಿದ್ಯಾರ್ಥಿಗಳು ಎಲ್ಲವನ್ನು ಇಂಗ್ಲಿಷಿನಲ್ಲಿಯೇ ಯೋಚಿಸುವ ರೂಢಿಯುಂಟಾಗಿ ಕನ್ನಡದಲ್ಲಿ ಮಾತನಾಡುವುದು ಅವರಿಗೆ ಕಷ್ಟವಾಗಿರುತ್ತದೆ. ಹೀಗಿರುವಲ್ಲಿ ಅವರು ಹಳ್ಳಿಗಳಿಗೆ ಹೋಗಿ ತಮ್ಮಲ್ಲಿರುವ ಜ್ಞಾನವನ್ನು ಪ್ರಚಾರಮಾಡುವ ಬಗೆ ಹೇಗೆ? ಇದು ಎಷ್ಟು ಮಟ್ಟಿಗೆ ಸಾಧ್ಯವೆಂಬುದನ್ನು ತಾವು ಯೋಚನೆಮಾಡಬೇಕು.

ಎಲ್ಲಕ್ಕಿಂತಲೂ ಮಿಗಿಲಾಗಿ ನಮ್ಮ ಸಂಸ್ಥಾನವು ಕನ್ನಡ ರಾಜ್ಯ. ಮೈಸೂರು ಸಂಸ್ಥಾನ, ಮುಂಬಯಿ ಮತ್ತು ಮದರಾಸು ಪ್ರಾಂತಗಳಲ್ಲಿ ಕನ್ನಡ ಮಾತನಾಡುವ ಪ್ರದೇಶಗಳು—ಇವುಗಳನ್ನು ಸೇರಿಸಿ ಒಂದು ಕನ್ನಡ ಪ್ರಾಂತವನ್ನೇರ್ಪಡಿಸಿ ಕರ್ಣಾಟಕ ವಿಶ್ವವಿದ್ಯಾನಿಲಯವನ್ನು ಏರ್ಪಡಿಸಬೇಕೆಂಬ ಯೋಚನೆಯೂ ಜನರ ಮನಸ್ಸಿನಲ್ಲಿದೆ. ಆದುದರಿಂದ ಕಾಲೇಜುಗಳಲ್ಲಿ ತಾವು ಕನ್ನಡದಲ್ಲಿಯೇ ಬೋಧಿಸುವುದಕ್ಕೆ ಪ್ರಯತ್ನ ಮಾಡಿದರೆ, ಹುಡುಗರೂ ಬೇಗ ಕಲಿತುಕೊಳ್ಳುತ್ತಾರೆ. ಅಷ್ಟೇ ಅಲ್ಲದೆ, ಅವರುಗಳು ಗ್ರಾಮಾಂತರಗಳಿಗೆ ಹೋಗಿ ಅಲ್ಲಿ ಜ್ಞಾನಪ್ರಚಾರ ಮಾಡುವುದಕ್ಕೂ ಸಾಧ್ಯವಾಗುತ್ತದೆ. ಇಷ್ಟು ಹೇಳಿ ನನ್ನ ತಿದ್ದುಪಡಿಯೊಡನೆ ಈ ನಿರ್ಣಯವನ್ನು ಅನುಮೋದಿಸುತ್ತೇನೆ.

ಶ್ರೀಮಾನ್ ಟಿ. ತಿಮ್ಮಾಜಯ್ಯನವರು

ಸ್ವಾಮಿ, ನಾನು ಈ ತಿದ್ದುಪಡಿಯನ್ನು ಒಪ್ಪಿಕೊಳ್ಳುತ್ತೇನೆ.

ಶ್ರೀಮಾನ್ ಟಿ. ಎಸ್. ರಾಜಗೋಪಾಲ ಐಯಂಗಾರ್ಯರು, ಅವರು ಸೂಚಿಸಿದ್ದ ಎರಡನೆಯ ತಿದ್ದುಪಡಿಯನ್ನು ಎಂದರೆ "ಸರ್ಕಾರದ ವಿದ್ಯಾಭ್ಯಾಸದ ಇಲಾಖೆಯವರು" ಎಂಬ ಪದಗಳಿಂದ ಹಿಡಿದು "ಅದೇ ರೀತಿಯಲ್ಲಿ" ಎಂಬ ಪದಗಳೂ ಸೇರಿರುವಷ್ಟು ಭಾಗವನ್ನು ನಿರ್ಣಯದಿಂದ ತೆಗೆದುಹಾಕಬೇಕೆಂಬ ತಿದ್ದುಪಡಿಯನ್ನು ಸೂಚಿಸಲಿಲ್ಲ.

[ಅಷ್ಟು ಹೊತ್ತಿಗೆ ಅಪರಾಹ್ನ ಮೂರು ಘಂಟೆಯಾದುದರಿಂದ ಸದಸ್ಯರು ಉಪಾಹಾರಕ್ಕಾಗಿ ಹೋಗಿದ್ದು ಪುನಃ ಅಪರಾಹ್ನ ೩-೩೦ ಘಂಟೆಗೆ ಸಭೆ ಸೇರಿದರು.]

ಶ್ರೀಮಾನ್ ಟಿ. ಎಸ್. ರಾಜಗೋಪಾಲ ಅಯ್ಯಂಗಾರ್ಯರು

ನನ್ನ ಹೆಸರಿನಲ್ಲಿರುವ ಎರಡನೆಯ ತಿದ್ದುಪಡಿಯನ್ನು ನಾನು ವಾಪಸು ತೆಗೆದುಕೊಳ್ಳುತ್ತೇನೆ. ಈಗ ಹೈಸ್ಕೂಲುಗಳಲ್ಲಿ ಕನ್ನಡ ಬಾರದಿರುವವರ ಉಪಯೋಗಾರ್ಥವಾಗಿ ಇಂಗ್ಲಿಷು ಬೋಧಕ ಭಾಷೆಯಾಗಿರುವ ತರಗತಿಯನ್ನು ಹೇಗೆ ಏರ್ಪಡಿಸಲಾಗಿದೆಯೋ ಹಾಗೆಯೇ ಇಂಟರ್ ಮಿಾಡಿಯಟ್ ಕಾಲೇಜಿನಲ್ಲಿಯೂ ಸಹ ಅಂಥ ತರಗತಿಯನ್ನು ಏರ್ಪಡಿಸುವ ಉದ್ದೇಶದಿಂದ ನಾನು ಈ ರೀತಿ ನನ್ನ ಎರಡನೆಯ ತಿದ್ದುಪಡಿಯನ್ನು ವಾಪಸು ತೆಗೆದುಕೊಂಡಿರುತ್ತೇನೆ. ಇದರಿಂದ ಮುಸಲ್ಮಾನ ಸಹೋದರರೂ ಈ ನಿರ್ಣಯಕ್ಕೆ ತಮ್ಮ ಹೃತ್ಪೂರ್ವಕವಾದ ಬೆಂಬಲವನ್ನು ಕೊಡುವರೆಂದು ನಾನು ನಂಬಿದ್ದೇನೆ.

ಶ್ರೀಮಾನ್ ಮಿರ್ಜಾ ಅಜೀಜುಲ್ಲಾ ಬೇಗ್‌ರವರು

ಸ್ವಾಮಿ, ಇಂಟರ್‌ಮೀಡಿಯೆಟ್ ಕಾಲೇಜುಗಳಲ್ಲಿ ಕನ್ನಡವೇ ಶಿಕ್ಷಣಭಾಷೆಯಾಗಿರಬೇಕೆಂಬುದು ಈ ನಿರ್ಣಯದ ಮುಖ್ಯೋದ್ದೇಶವೆಂದು ಈ ನಿರ್ಣಯದ ಸೂಚಕರು ತಿಳಿಸಿದರು. ಈ ನಿರ್ಣಯಕ್ಕೆ ನನ್ನ ಮಿತ್ರರಾದ ಶ್ರೀಮಾನ್ ಟಿ. ಎಸ್. ರಾಜಗೋಪಾಲ ಐಯ್ಯಂಗಾರ್ಯರು ಒಂದು ತಿದ್ದುಪಡಿಯನ್ನು ಸೂಚಿಸಿ ಎಲ್ಲಾ ಕಾಲೇಜುಗಳಲ್ಲಿಯೂ ಕನ್ನಡವನ್ನೇ ಶಿಕ್ಷಣಭಾಷೆಯನ್ನಾಗಿ ಏರ್ಪಡಿಸಬೇಕೆಂದು ತಿಳಿಸಿದರು. ಅಲ್ಲದೆ ಅವರು ತಮ್ಮ ಎರಡನೆಯ ತಿದ್ದುಪಡಿಯನ್ನು ವಾಪಸು ತೆಗೆದುಕೊಂಡು ಮುಸಲ್ಮಾನ ಸದಸ್ಯರೂ ಈ ನಿರ್ಣಯಕ್ಕೆ ಬೆಂಬಲ ಕೊಡಬೇಕೆಂದು ಕೇಳಿದರು. ಈ ನಿರ್ಣಯದ ವಿಚಾರವಾಗಿ ಮಾತನಾಡುವುದಕ್ಕೆ ಮೊದಲು ನಾನು ಒಂದು ಅಂಶವನ್ನು ಸ್ಪಷ್ಟಪಡಿಸಬೇಕಾಗಿದೆ. ಕನ್ನಡದ ವಿಷಯದಲ್ಲಿ ಮೈಸೂರು ದೇಶದ ಯಾವನೊಬ್ಬನಿಗೇ ಆಗಲಿ, ಯಾವ ಮತದವನಿಗೇ ಆಗಲಿ ಸಂಪೂರ್ಣ ಗೌರವವಿದ್ದೇ ಇರಬೇಕು. ಅವನಿಗೆ ಆ ರೀತಿಯ ಗೌರವವಿಲ್ಲದಿದ್ದರೆ ಅವನು ಎಂದಿಗೂ ನಿಜವಾದ ದೇಶಾಭಿಮಾನಿಯೆಂದೆನಿಸಿಕೊಳ್ಳಲಾರನು. ನನಗೆ ಕನ್ನಡದ ವಿಚಾರದಲ್ಲಿ ಬಹಳಮಟ್ಟಿನ ಅಭಿಮಾನವಿದೆ. ದೇಶಾಭಿಮಾನಿಯೆನಿಸಿಕೊಂಡಿರುವ ಪ್ರತಿಯೊಬ್ಬನಿಗೂ ತನ್ನ ದೇಶಭಾಷೆಯ ಮೇಲೆ ಪೂರ್ಣ ಅಭಿಮಾನವಿರಬೇಕಾದುದು ಸಹಜವಾದುದು ಮತ್ತು ನ್ಯಾಯವಾದುದು. ನಮ್ಮ ಮೈಸೂರು ನಾಡು ಕನ್ನಡ ನಾಡು. ನಮ್ಮನ್ನಾಳುವ ಮಹಾಸ್ವಾಮಿಯವರ ಮಾತೃಭಾಷೆಯು ಕನ್ನಡ. ನಾವು ಈ ಕನ್ನಡ ಭಾಷೆಯನ್ನು ನಮ್ಮ ಶ್ರೇಯಸ್ಸಿಗಾಗಿ ಕಲಿಯಬೇಕು. ನಮ್ಮ ಮುಸಲ್ಮಾನ ಪಕ್ಷದವರು ಇಂಗ್ಲಿಷ್ ಭಾಷೆಯಲ್ಲಿ ಚೆನ್ನಾಗಿ ಮಾತನಾಡುವವರಾಗಿದ್ದರೂ ಮತ್ತು ವಿಶ್ವವಿದ್ಯಾನಿಲಯಗಳ ಪದವೀಧರರಾಗಿದ್ದರೂ ಸಹ ಅವರು ಈ ಸಭೆಯಲ್ಲಿ ಎಷ್ಟೋ ಉತ್ಸಾಹದಿಂದ ಕನ್ನಡದಲ್ಲಿಯೇ ಮಾತನಾಡುತ್ತಿರುವುದು ತಮ್ಮ ಗಮನಕ್ಕೆ ಬಂದಿದೆ. ಅವರ ಈ ವರ್ತನೆಯು ಕನ್ನಡಭಾಷೆಯ ಮೇಲೆ ಅವರಿಗಿರುವ ಅಭಿಮಾನವನ್ನು ತೋರಿಸುತ್ತದೆ. ಈ ಸಂದರ್ಭದಲ್ಲಿ ನನ್ನ ಸ್ವಂತ ವಿಚಾರವೊಂದನ್ನು ತಿಳಿಸಲು ಇಚ್ಛಿಸುತ್ತೇನೆ. ಕೆಲವು ದಿವಸಗಳ ಹಿಂದೆ ಎ.ಆರ್.ಪಿ. ಸಂಬಂಧವಾಗಿ ಏರ್ಪಟ್ಟ ಸಾರ್ವಜನಿಕ ಸಭೆಯಲ್ಲಿ ನಮ್ಮ ನ್ಯಾಯಶಾಖೆಯ ಸಚಿವರು ಅಧ್ಯಕ್ಷತೆಯನ್ನು ವಹಿಸಿದಾಗ್ಗೆ ನಾನು ಕನ್ನಡದಲ್ಲಿಯೇ ಭಾಷಣಮಾಡಿದೆ. ಹೀಗೆ ಕನ್ನಡಕ್ಕೆ ಉತ್ತೇಜನವನ್ನು ಕೊಡುವುದು ನಮ್ಮ ಕರ್ತವ್ಯವೆಂದು ನಾನು ತಿಳಿದಿದ್ದೇನೆ. ಆದರೆ ನಾವು ಈಗ ನಮ್ಮ ಮುಂದಿರುವ ವಿಚಾರವನ್ನು ಒಂದು ತತ್ವದ ದೃಷ್ಟಿಯಿಂದ ಯೋಚನೆ ಮಾಡಬೇಕಾಗಿದೆ. ನಾವೆಲ್ಲರೂ ಶಾಸನಸಭೆಯ ಸದಸ್ಯರಾಗಿ ಇಲ್ಲಿಗೆ ಬಂದಿದ್ದೇವೆ.

ಆದುದರಿಂದ ನಾನು ಯಾವ ಕಾನೂನನ್ನು ಜಾರಿಗೆ ತಂದರೂ ಅದರಿಂದ ಮುಂದೆ ಯಾರಿಗೂ ತೊಂದರೆಯಾಗಬಾರದು. ಸೂರ್ಯನ ಪ್ರಕಾಶವು ಹೇಗೆ ಎಲ್ಲರ ಮೇಲೆಯೂ ಏಕಪ್ರಕಾರವಾಗಿ ಬೀಳುತ್ತದೆಯೋ ಹಾಗೆ ನಾವು ರಚಿಸತಕ್ಕ ಕಾನೂನು ನಮ್ಮ ಶ್ರೀಮನ್ಮಹಾರಾಜರವರ ಆಶ್ರಯದಲ್ಲಿರುವವರೆಲ್ಲರಿಗೂ ಏಕ ಪ್ರಕಾರವಾಗಿ ಅನ್ವಯಿಸುವಂತಿರಬೇಕು. ಈಗ ನಮ್ಮ ದೇಶದಲ್ಲಿ ಮುಸಲ್ಮಾನ ಬಾಂಧವರೆಲ್ಲರೂ ಸಂತೋಷವಾಗಿದ್ದಾರೆ. ಎಲ್ಲರೊಡನೆ ಅಣ್ಣತಮ್ಮಂದಿರಂತೆ ಭಾವನೆಯನ್ನಿಟ್ಟುಕೊಂಡು ಮುಂದುವರಿಯುತ್ತಿದ್ದಾರೆ. ಹೀಗಿರುವಾಗ ಈ ನಿರ್ಣಯದಲ್ಲಿ ಹೇಳಿರುವಂತೆ ಮಾಡಿದರೆ ತೊಂದರೆಯಾಗುತ್ತದೆ. ಹೀಗೆ ಹೇಳಿದ ಮಾತ್ರಕ್ಕೇ ನಾನು ಈ ನಿರ್ಣಯವನ್ನು ವಿರೋಧಿಸುತ್ತಿದ್ದೇನೆಂದು ಯಾರೂ ಭಾವಿಸಬಾರದು. ಈಗ ಎಸ್.ಎಸ್.ಎಲ್.ಸಿ. ವರೆಗೂ ಹೈಸ್ಕೂಲುಗಳಲ್ಲಿ ಕನ್ನಡವೇ ಶಿಕ್ಷಣ ಭಾಷೆಯಾಗಿರುವುದರಿಂದ, ನಮ್ಮ ಮುಸಲ್ಮಾನರ ಹುಡುಗರಿಗೆ ತೊಂದರೆ ಯಾಗುತ್ತಿರುವುದು ಸರ್ಕಾರದವರ ಗಮನಕ್ಕೂ ಬಂದಿರಬಹುದು. ತರಗತಿಗಳಲ್ಲಿ ಇಂಗ್ಲಿಷಿನ ಮೂಲಕ ಬೋಧಿಸುವ ಶಾಖೆಗಳಿಗೆ ಸೇರಲು ಬಂದವರನೇಕರಿಗೆ ಅವಕಾಶ ದೊರೆಯಲಿಲ್ಲವೆಂದು ನಮಗೆ ತಿಳಿದುಬಂದಿದೆ. ಹೀಗೆ ಎಸ್.ಎಸ್.ಎಲ್.ಸಿ. ಯಲ್ಲಿಯೇ ಈ ರೀತಿ ತೊಂದರೆಯುಂಟಾದ ಮೇಲೆ, ಮುಂದೆ ವಿಶ್ವವಿದ್ಯಾನಿಲಯದಲ್ಲಿ ಇನ್ನೆಷ್ಟು ತೊಂದರೆಯೊದಗಬಹುದು! ಅಲ್ಲದೆ ಈಗ ಇಂಡಿಯಾ ದೇಶದಲ್ಲಿ ರಾಷ್ಟ್ರಭಾಷೆ ಯಾವುದೆಂಬುದನ್ನು ನಾವು ವಿಚಾರಮಾಡಬೇಕಾಗಿದೆ. ಈ ವಿಚಾರದಲ್ಲಿ ಇನ್ನೂ ವಿವಾದಗಳಾಗುತ್ತಿರುವುದು ಎಲ್ಲರಿಗೂ ತಿಳಿದ ವಿಚಾರವೇ ಆಗಿದೆ. ಹೈದರಾಬಾದ್, ಸಂಯುಕ್ತಪ್ರಾಂತ ಮುಂತಾದ ಕಡೆಗಳಲ್ಲಿ ಇಂಡಿಯಾದ ರಾಷ್ಟ್ರಭಾಷೆಯಾದ ಉರ್ದು ಭಾಷೆಗೆ—ವಿಶ್ವವಿದ್ಯಾನಿಲಯದ ಶಿಕ್ಷಣ ಪುಸ್ತಕಗಳನ್ನೆಲ್ಲಾ ತರ್ಜುಮೆ ಮಾಡುವುದಕ್ಕಾಗಿ ಭಾಷಾಂತರ ಶಾಖೆಯೊಂದನ್ನು ಏರ್ಪಾಡುಮಾಡಿದ್ದಾರೆ. ಹೈದರಾಬಾದಿನಲ್ಲಿ ಇಂಡಿಯಾ ದೇಶದ ನಾನಾ ಭಾಗಗಳಿಂದಲೂ ಪ್ರೊಫೆಸರಗಳನ್ನು ಕರೆಯಿಸಿ, ಉರ್ದು ಭಾಷಾಂತರ ಶಾಖೆಗೆ ನೇಮಕಮಾಡಿ ಇದುವರೆಗೆ ಎರಡು ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಅದೇ ರೀತಿ ನಮ್ಮ ವಿಶ್ವವಿದ್ಯಾ ನಿಲಯಗಳಲ್ಲಿ ಕನ್ನಡ ಭಾಷೆಯನ್ನು ಶಿಕ್ಷಣ ಭಾಷೆಯನ್ನಾಗಿ ಮಾಡಬೇಕಾದರೆ ಹೆಚ್ಚು ಹಣವನ್ನು ಖರ್ಚುಮಾಡಿ ಪಠ್ಯ ಪುಸ್ತಕಗಳನ್ನೆಲ್ಲ ಕನ್ನಡಕ್ಕೆ ತರ್ಜುಮೆ ಮಾಡಬೇಕಾಗುತ್ತದೆ. ಅಲ್ಲದೆ, ಇನ್ನೊಂದು ವಿಚಾರವನ್ನು ನಾವು ಗಮನಿಸ ಬೇಕಾಗುತ್ತದೆ. ಉರ್ದು ಇಂಡಿಯಾ ದೇಶದಲ್ಲಿ ಅನೇಕರಿಗೆ ಗೊತ್ತಾಗುವ ಭಾಷೆ. ಈ ಕಾರಣದಿಂದಲೇ ಹೈದರಾಬಾದ್ ಮತ್ತು ಸಂಯುಕ್ತ ಪ್ರಾಂತಗಳಲ್ಲಿ ಉರ್ದು

ವನ್ನು ಶಿಕ್ಷಣಭಾಷೆಯನ್ನಾಗಿ ಏರ್ಪಡಿಸಲಾಗಿದೆ. ಅಲ್ಲಿಯವರು ಅದೇ ರಾಷ್ಟ್ರ ಭಾಷೆಯೆಂಬ ಭಾವನೆಗನುಸಾರವಾಗಿ ಹಾಗೆ ಮಾಡಿದ್ದಾರೆ. ಉರ್ದುಭಾಷೆ ಬಹಳ ದಿವಸಗಳಿಂದ ನಮ್ಮ ದೇಶದಲ್ಲಿರುವುದರಿಂದಲೂ ಮತ್ತು ಹೆಚ್ಚು ಜನರಿಗೆ ತಿಳಿದಿರು ವುದರಿಂದಲೂ ಅದನ್ನು ಪ್ರತಿಯೊಬ್ಬರೂ ಕಲಿಯಬೇಕಾಗಿದೆ. ಉರ್ದುಭಾಷೆಯನ್ನು ಕಲಿತಿರುವ ಗ್ರ್ಯಾಜುಯೇಟುಗಳಿಗೆ ಇಂಡಿಯಾ ದೇಶದ ಇತರ ಕಡೆಗಳಲ್ಲಿಯೂ ಸಹ ಕೆಲಸವು ಸಿಕ್ಕುತ್ತದೆ. ಆದರೆ, ಕನ್ನಡಬರುವ ಗ್ರ್ಯಾಜುಯೇಟ್‌ಗಳ ಸ್ಥಿತಿಯು ಹಾಗಲ್ಲ. ಕನ್ನಡದಲ್ಲಿ ಶಿಕ್ಷಣಹೊಂದಿದ ಗ್ರ್ಯಾಜುಯೇಟ್‌ಗಳಿಗೆ ಬೇರೆ ಕಡೆಗಳಲ್ಲಿ ಕೆಲಸವು ದೊರೆಯುವ ಹಾಗಿಲ್ಲ. ನಮ್ಮ ಅಭಿಲಾಷೆಯೇನೋ ಇಂಡಿಯಾ ದೇಶದಲ್ಲೆಲ್ಲ ಕನ್ನಡವೇ ಪ್ರಚಾರಕ್ಕೆ ಬರಬೇಕೆಂಬುದು. ಆದರೆ ಈಗ ನಮ್ಮ ವಿಶ್ವವಿದ್ಯಾನಿಲಯ ದಲ್ಲಿ ಶಿಕ್ಷಣಹೊಂದಿದವರೆಲ್ಲರಿಗೂ ಸಂಸ್ಥಾನದಲ್ಲೇ ಉದ್ಯೋಗಗಳು ಸಿಕ್ಕುತ್ತವೆಂಬ ಭರವಸೆಯಿಲ್ಲ. ಹೀಗಿರುವಲ್ಲಿ ಕನ್ನಡದಲ್ಲಿ ಶಿಕ್ಷಣಹೊಂದಿದವರು ಬೇರೆ ಕಡೆಗಳಲ್ಲಿ ಕೆಲಸಕ್ಕೆ ಪ್ರಯತ್ನಪಡಲು ಅವಕಾಶವಿಲ್ಲದೆ, ಅವರಿಗೆ ಉದ್ಯೋಗಗಳು ದೊರೆಯುವ ಕ್ಷೇತ್ರವೇ ಕೇವಲ ಪರಿಮಿತವಾಗುತ್ತದೆ. ಮೈಸೂರು ಸಂಸ್ಥಾನದ ಹೊರಗಡೆ ಖಂಡಿತ ಉದ್ಯೋಗಗಳು ದೊರೆಯುವುದಿಲ್ಲ. ಮುಸಲ್ಮಾನ ಪಂಗಡದವರಿಗಂತು ಉತ್ತರದೇಶದಲ್ಲಿ ಉದ್ಯೋಗಗಳು ದೊರೆಯಬೇಕು. ಕನ್ನಡವೇ ಅವರ ಶಿಕ್ಷಣ ಭಾಷೆಯಾದರೆ ಅದಕ್ಕೆ ತೊಂದರೆಯಾಗುತ್ತದೆ. ವಿಶ್ವವಿದ್ಯಾನಿಲಯದಲ್ಲಿ ಕನ್ನಡವನ್ನು ಶಿಕ್ಷಣಭಾಷೆಯನ್ನಾಗಿ ಮಾಡುವುದಕ್ಕೆ ಮುಂಚೆ ತಕ್ಕ ಏರ್ಪಾಡುಗಳನ್ನು ಮಾಡ ಬೇಕು. ಮೊಟ್ಟಮೊದಲು ನಾವು ಒಂದು ಭಾಷಾಂತರ ಶಾಖೆಯನ್ನು ಏರ್ಪಡಿಸಿ ಕೊಳ್ಳಬೇಕು. ಈಗ ಕನ್ನಡವು ಧಾರವಾಡದ ವರೆಗೆ ಮಾತ್ರ ಬಳಕೆಯಲ್ಲಿದೆ; ಇಂಡಿಯಾ ದೇಶದಲ್ಲೆಲ್ಲ ಇದು ಬಳಕೆಯಲ್ಲಿ ಬರುವಂತೆ ಹೆಚ್ಚು ಪ್ರಚಾರಕಾರ್ಯವನ್ನು ಕೈಕೊಳ್ಳ ಬೇಕು. ಎಲ್ಲಾ ಭಾಗದವರೂ ಒಟ್ಟಾಗಿ ಸೇರಿ ಪಠ್ಯಪುಸ್ತಕಗಳನ್ನು ಕನ್ನಡಕ್ಕೆ ಭಾಷಾಂತರಮಾಡಿ ಹೆಚ್ಚು ಪ್ರೋತ್ಸಾಹವನ್ನು ಕೊಡಬೇಕು. ಅನಂತರ ನಮ್ಮ ದೇಶದ ಕನ್ನಡ ವಿದ್ಯಾರ್ಥಿಗಳಿಗೆ ಹೊರಗಡೆ ಉದ್ಯೋಗಗಳು ದೊರೆಯುವಂತೆ ತಕ್ಕ ಅವಕಾಶ ಕಲ್ಪಿಸಿಕೊಡಬೇಕು. ಹಾಗೆ ಮಾಡದೆ ನೀವು ಈಗಲೇ ಕನ್ನಡವನ್ನು ಶಿಕ್ಷಣ ಭಾಷೆಯಾಗಿ ಜಾರಿಗೆ ತಂದರೆ ಅದರಿಂದ ಅನೇಕ ಜನರಿಗೆ ಬಹಳ ತೊಂದರೆ ಯಾಗುತ್ತದೆ. ಈಗಾಗಲೇ ಹೈ ಸ್ಕೂಲುಗಳಲ್ಲಿ ಇಂಗ್ಲಿಷ್ ಭಾಷೆಯ ಮೂಲಕ ಶಿಕ್ಷಣಕೊಡುವ ಶಾಖೆಗಳ ಸಂಬಂಧವಾಗಿ ಅನೇಕ ತೊಂದರೆಗಳಿವೆ. ಈ ಕಾರಣ ಗಳಿಂದ ನನಗೆ ಕನ್ನಡದ ವಿಚಾರದಲ್ಲಿ ಬಹಳಮಟ್ಟಿಗೆ ಸಹಾನುಭೂತಿಯಿದ್ದರೂ ಕೂಡ, ಈ ನಿರ್ಣಯದಲ್ಲಿ ಸೂಚಿಸಿರುವ ಕ್ರಮವನ್ನು ಜಾರಿಗೆ ತರುವುದರಿಂದ

ಉಂಟಾಗಬಹುದಾದ ತೊಂದರೆಗಳನ್ನು ನೆನಪಿನಲ್ಲಿಟ್ಟುಕೊಂಡು ನಾನು ಈ ನಿರ್ಣಯವನ್ನು ತೀವ್ರವಾಗಿ ವಿರೋಧಿಸಬೇಕಾಗಿದೆ.

ಶ್ರೀಮಾನ್ ಎನ್. ರಾಮರಾಯರು

ಸ್ವಾಮಿ, ಈಗ ತಿದ್ದುಪಾಟಾಗಿರತಕ್ಕ ನಿರ್ಣಯವನ್ನು ನಾನು ಸಂಪೂರ್ಣವಾಗಿ ಸಮರ್ಥಿಸುತ್ತೇನೆ. ನಮ್ಮದು ಕರ್ಣಾಟಕ ಸೀಮೆ. ಇಲ್ಲಿಯ ವಿಶ್ವವಿದ್ಯಾನಿಲಯದಲ್ಲಿ ಕರ್ಣಾಟಕ ಭಾಷೆಯೇ ಇದ್ದು ಅದರಲ್ಲೇ ಎಲ್ಲಾ ಪಾಠಗಳನ್ನೂ ಹೇಳಿಕೊಡಬೇಕೆಂಬುದು ಒಂದು ವಾದ. ಇದೇ ವಿಚಾರದಲ್ಲಿ ಇನ್ನೊಂದು ವಾದವೂ ಇದೆ. ಅದರ ತತ್ತ್ವವು ಇನ್ನೂ ಸ್ವಲ್ಪದೂರ ಹೋಗುತ್ತದೆ. ಏನೆಂದರೆ, ಈಗ ಹಲವು ವರ್ಷಗಳಿಂದ ನಾವು ಇಂಗ್ಲಿಷ್ ವಿದ್ಯಾಭ್ಯಾಸ ಮಾಡುತ್ತಿದ್ದೇವೆ. ಇದರಿಂದ ನಮಗೆ ಎಷ್ಟು ಪ್ರಯೋಜನವಾಗಿದೆಯೆಂಬುದನ್ನು ನಾವು ನೋಡಬೇಕು. ಒಂದು ಪರಭಾಷೆಯಲ್ಲಿ ನಾವು ವಿದ್ಯೆಯನ್ನು ಕಲಿಯುತ್ತಿರುವುದರಿಂದ ನಮ್ಮ ಕೆಲಸಗಳಿಗೆಲ್ಲ ಅನ್ಯಭಾಷೆಯನ್ನು ಪ್ರಯೋಗಮಾಡಬೇಕಾಗಿ ಬಂದಿದೆ. ಯಾವ ಕೆಲಸವನ್ನು ಮಾಡಬೇಕಾದರೂ, ಮಾನಸಿಕ ಭಾಷೆಯೊಂದರಲ್ಲಿ ಅರ್ಥಮಾಡಿಕೊಂಡು, ಆ ಮೇಲೆ ಆ ಕೆಲಸಕ್ಕೆ ಪ್ರಾರಂಭಿಸಬೇಕಾಗಿ ಬಂದಿದೆ. ಹೀಗೆ ಯಾವಾಗಲೂ ಒಂದು ಪರಭಾಷೆಯ ಭಾರವನ್ನು ಹೊತ್ತುಕೊಳ್ಳಬೇಕಾಗಿರುವುದರಿಂದ, ನಮ್ಮ ಶಕ್ತಿಯಷ್ಟನ್ನೂ ವಸ್ತುಸಾಧನೆಯಲ್ಲಿ ಪ್ರಯೋಗಿಸುವುದಕ್ಕೆ ಸಾಧ್ಯವಿಲ್ಲದಂತಾಗಿದೆ. ಬೇರೊಂದು ಭಾಷೆಯನ್ನು ನಾವು ಮೊದಲು ಸ್ವಾಧೀನಮಾಡಿಕೊಂಡು, ಆಮೇಲೆ ಆ ಭಾಷೆಯನ್ನು ನಮ್ಮ ಬುದ್ಧಿಕಾರ್ಯಗಳಿಗೆ ಉಪಯೋಗಿಸಿಕೊಳ್ಳಬೇಕು. ಸಾಧಾರಣವಾಗಿ ಪ್ರತಿಯೊಬ್ಬನೂ ತನ್ನೊಬ್ಬನ ಹೊರೆಯನ್ನು ಹೊತ್ತುಕೊಂಡು ಹೋಗಬೇಕೇ ಹೊರತು, ಸುಮ್ಮನೆ ಹೆಚ್ಚಿನ ಹೊರೆಯನ್ನು ಹೊತ್ತುಕೊಂಡು ಹೋಗುವುದರಿಂದ ಯಾವ ಸಾರ್ಥಕವೂ ಇಲ್ಲ. ಅದು ನ್ಯಾಯವೂ ಅಲ್ಲ. ಅದೇ ರೀತಿಯಾಗಿ ನಾವು ಒಂದು ಹೊಸ ಭಾಷೆಯಲ್ಲಿ ನಮ್ಮ ಬುದ್ಧಿ ಕೆಲಸಗಳೆಲ್ಲವನ್ನೂ ತಿಳಿದುಕೊಳ್ಳುವುದನ್ನು ಬಿಡಬೇಕು.

ಕನ್ನಡ ಭಾಷೆಯಲ್ಲೇ ಕಾಲೇಜು ತರಗತಿಗಳಲ್ಲಿ ಶಿಕ್ಷಣವು ನಡೆಯಬೇಕೆಂಬ ವಿಚಾರದಲ್ಲೇನೊ ಈಗ ಅನೇಕ ಪ್ರತಿಬಂಧಕಗಳಿವೆ. ಈ ಪ್ರತಿಬಂಧಕಗಳು ಅಸಾಧ್ಯವಾಗಿದ್ದರೇನೋ ಅದನ್ನು ಮಾಡುವುದು ಬೇಡ. ಹಾಗಿಲ್ಲದಿದ್ದ ಮೇಲೆ ಅಡ್ಡಿ ಅಡಚಣೆಗಳು ಇದ್ದ ಮಾತ್ರದಿಂದಲೇ ಅದನ್ನು ಮಾಡದೆ ಇರತಕ್ಕುದು ಸರಿಯಲ್ಲ. "ಮನವಿದ್ದೆಡೆ ಮಾರ್ಗವುಂಟು" ಎಂಬಂತೆ ನಮ್ಮಲ್ಲಿ ಸಂಕಲ್ಪಮಾಡಿದರೆ ಅದರ

ಸಾಧನೋಪಾಯವೂ ಬರುತ್ತದೆ. ಈ ಸಂದರ್ಭದಲ್ಲಿ ಹೇಳಿರತಕ್ಕ ಒಂದು ಪದ್ಯವು ಉತ್ತಮ ಮಾರ್ಗದರ್ಶಕವಾಗಿದೆ :—

"ಸಹಜಂ ಕರ್ಮ ಕೌಂತೇಯ ಸದೋಷಮಪಿ ನ ತ್ಯಜೇತ್
ಸರ್ವಾರಂಭಾ ಹಿ ದೋಷೇಣ ಧೂಮೇನಾಗ್ನಿರಿವಾವೃತಾಃ ||"

ಎಂಬಂತೆ, ಒಂದು ಕಾರ್ಯವನ್ನು ಮಾಡಿದರೆ ಸಾಧ್ಯವಾಗುವುದೆಂಬ ಭರವಸೆ ಯಿದ್ದರೆ ಅದಕ್ಕೆ ಎಷ್ಟೇ ಕಷ್ಟಗಳು ಬರಲಿ, ಅದನ್ನು ಮಾಡಲೇಬೇಕು. ಅದರಲ್ಲಿ ಲೋಪದೋಷಗಳಿವೆಯೆಂದು ನಾವು ಎದೆಗೊಟ್ಟು ಮಾಡದೆ ಇರತಕ್ಕದ್ದಲ್ಲ. ನಾವು ಮಾಡತಕ್ಕ ಕರ್ತವ್ಯವನ್ನು ಮಾಡಿಯೇ ತೀರಬೇಕು. ಈಗ ಇಂಟರ್‌ಮೀಡಿಯೆಟ್ ಕಾಲೇಜಿನಲ್ಲಿ ಶಾಸ್ತ್ರಗಳನ್ನು ಕನ್ನಡದಲ್ಲಿ ಹೇಳಿಕೊಡುವುದಕ್ಕೆ ಅದಕ್ಕೆ ಸರಿಯಾದ ಮಾತುಗಳಿಲ್ಲವೆಂದೂ, ತಕ್ಕ ಪುಸ್ತಕಗಳಿಲ್ಲವೆಂದೂ ಸಾಧಾರಣವಾಗಿ ಎಲ್ಲರೂ ಹೇಳತಕ್ಕ ವಾದವಾಗಿದೆ. ಆದರೆ ನಾನು ಒಂದು ಅಂಶವನ್ನು ತಮಗೆ ತಿಳಿಸಬೇಕಾ ಗಿದೆ. ತಾವು ಇದನ್ನು ಕಾಲೇಜುಗಳಲ್ಲಿ ಪ್ರಾರಂಭಿಸುವುದಕ್ಕೆ ಪ್ರಯತ್ನಮಾಡಿದ ಮೇಲೆಯೇ ನಮಗೆ ಪುಸ್ತಕಗಳು ಬರುತ್ತವೆ. ಆಗ ಜನರು ಯಾರಾದರೂ ಪುಸ್ತಕ ಗಳನ್ನು ಬರೆದೇ ಬರೆಯುತ್ತಾರೆ.

ಕನ್ನಡವು ನಮ್ಮ ಮಾತೃಭಾಷೆ. ವಿದ್ಯಾವಂತರು ತಮ್ಮ ಮಾತೃಭಾಷೆಯಲ್ಲಿ ಇತರರಿಗೆ ಗೊತ್ತಾಗುವ ಹಾಗೆ ಹೇಳಿಕೊಡಲು ಅವರು ಪ್ರಯತ್ನಮಾಡಿದರೆ ಅದು ಅಸಾಧ್ಯವೆ? ಶಾಸ್ತ್ರಸಂಬಂಧವಾದ ಪದಗಳು ಕನ್ನಡದಲ್ಲಿಲ್ಲವೆಂಬುದೇನೊ ನಿಜ. ಇದಕ್ಕೆ ಕಾರಣವೇನೆಂದರೆ, ನಾವು ಕನ್ನಡದಲ್ಲಿ ಯೋಚನೆಮಾಡುವುದಕ್ಕೆ ಪ್ರಾರಂಭಿ ಸಿಲ್ಲ; ಕನ್ನಡದಲ್ಲಿ ಪುಸ್ತಕಗಳನ್ನು ಬರೆದಿಲ್ಲ. ನಾವು ಕನ್ನಡದಲ್ಲೇ ಪುಸ್ತಕಗಳನ್ನು ಬರೆಯುವುದಕ್ಕೆ ಕನ್ನಡದಲ್ಲಿಯೇ ಮಾತನಾಡುವುದಕ್ಕೆ ಪ್ರಾರಂಭಮಾಡಿದರೆ ಸಾಕು. ಭಾಷೆಯು ತಾನಾಗಿಯೇ ಅನುಸರಿಸಿಕೊಂಡು ಬರುತ್ತದೆ. ನಾನು ಬಹಳ ದಿವಸಗಳಿಂದ ಕನ್ನಡದಲ್ಲಿ ಮಾತನಾಡುತ್ತಿರಲಿಲ್ಲ. ಮಾತನಾಡಬೇಕೆಂದರೆ ಸಂಕೋಚ. ಮಾತುಗಳು ಸರಿಯಾಗಿ ಒದಗುತ್ತಿರಲಿಲ್ಲ. ಆದರೆ ಅಭ್ಯಾಸ ಬಲದಿಂದ ಈಗ ಸುಲಭವಾಗಿ ಮಾತ ನಾಡಬಲ್ಲವನಾಗಿದ್ದೇನೆ. ಆದರೆ, ಅಷ್ಟು ಚೆನ್ನಾಗಿ ಕನ್ನಡದಲ್ಲಿ ಮಾತನಾಡುವುದಕ್ಕೆ ಬರುವುದಿಲ್ಲ. ಈ ಸಭೆಯಲ್ಲಿರತಕ್ಕ ನಮ್ಮ ಮುಸಲ್ಮಾನ್ ಸ್ನೇಹಿತರಲ್ಲಿ ಕೆಲವರು ಕನ್ನಡದಲ್ಲಿ ನಿರರ್ಗಳವಾಗಿ ಮಾತನಾಡುತ್ತಾರೆ. ಶ್ರೀಮಾನ್ ಮಿರ್ಜಾ ಅಜೀಜುಲ್ಲಾ ಬೇಗ್‌ರವರು ಎಷ್ಟು ಚೆನ್ನಾಗಿ ಕನ್ನಡದಲ್ಲಿ ಮಾತನಾಡಿದರು. ನನಗೂ ಕೂಡ ಹಾಗೆ ಮಾತನಾಡುವುದಕ್ಕೆ ಬರುತ್ತಿದ್ದರೆ, ನಾನು ಇಂದಿನ ಭಾಷಣವನ್ನು ಅಷ್ಟೇ ಸ್ಫೂರ್ತಿಯಿಂದ ಮಾಡಬಹುದಾಗಿತ್ತಲ್ಲಾ ಎಂದು ಆಶೆಪಡುತ್ತೇನೆ. ನಮಗೆ ಭಾಷೆ

ಯಲ್ಲಿ ಆಸಕ್ತಿ ಹೆಚ್ಚಿದಷ್ಟೂ ಆ ಭಾಷೆಯನ್ನು ಕಲಿಯುವುದು ಸುಲಭ. ಒಂದುವೇಳೆ ನೀವು ಹೇಳಬಹುದು, ಕನ್ನಡದಲ್ಲಿ ಸೂಕ್ತವಾದ ಪದಗಳು ಸಿಕ್ಕುವುದಿಲ್ಲವೆಂದು. ಹಾಗಿದ್ದರೆ ಬೇರೆ ಪದಗಳನ್ನು ನಾವು ಕಲ್ಪನೆಮಾಡಿಕೊಳ್ಳೋಣ. ಯೋಚನೆಮಾಡಿ ಹೊಸ ಪದಗಳನ್ನು ಕಲ್ಪನೆಮಾಡಿಕೊಳ್ಳುವುದಕ್ಕೆ ನಾವು ತೊಡಗೋಣ. ಸುಲಭವಾಗಿ ಅರ್ಥವಾಗದ ಪದಗಳನ್ನು ನೋಡಿ ಬೇರೆ ಭಾಷೆಗಳಿಂದ ತೆಗೆದುಕೊಳ್ಳೋಣ. ಈಗ "ಕೋರ್ಟು" "ರೈಲ್" "ಮೋಷರ್" ಮುಂತಾದ ಇಂಗ್ಲಿಷ್ ಪದಗಳು ಧಾರಾಳವಾಗಿ ಉಪಯೋಗಿಸಲ್ಪಡುತ್ತವೆ. ಅವಕ್ಕೆ ಕನ್ನಡದಲ್ಲಿ ಸರಿಯಾದ ಪದಗಳು ಸಿಕ್ಕುವವರೆಗೆ, ಹೊಸ ಪದಗಳನ್ನು ಕಲ್ಪಿಸಿಕೊಂಡು ಅವುಗಳನ್ನು ರೂಢಿಗೆ ತರುವ ವರೆಗೆ, ಈಗಿರತಕ್ಕ ಪದಗಳನ್ನೇ ಉಪಯೋಗಿಸಿಕೊಳ್ಳೋಣ. ಅದರಿಂದ ನಮ್ಮ ಭಾಷೆಯೂ ಬೆಳೆಯುತ್ತದೆ. ಇತರ ಭಾಷೆಯ ಪದಗಳನ್ನು ಉಪಯೋಗಿಸಿಕೊಳ್ಳು ವುದರಲ್ಲಿ ಯಾವುದೊಂದು ಅವಮಾನವೂ ಇಲ್ಲ. ಏತಕ್ಕೆಂದರೆ ಭಾಷೆಯೆಂಬುದು ಜೀವವುಳ್ಳ ವಸ್ತು. ಅದೂ ಕೂಡ ಅಭಿವೃದ್ಧಿಗೆ ಬರಬೇಕಾದರೆ ಹೊರಗಿನಿಂದ ಆಹಾರವನ್ನು ತೆಗೆದುಕೊಳ್ಳಬೇಕು. ಹೊರಗಡೆಯಿಂದ ಯಾವ ಯಾವ ವಿಚಾರಗಳನ್ನು ಯಾವ ಯಾವ ಮಾತುಗಳನ್ನು ತೆಗೆದುಕೊಳ್ಳುತ್ತೀರೋ ಅವೇ ಭಾಷೆಗೆ ಆಹಾರ. ಆದುದರಿಂದ ನಾವು ಇತರ ಭಾಷೆಗಳಿಂದ ನಮಗೆ ಬೇಕಾದ ಪದಗಳನ್ನು ಉಪ ಯೋಗಿಸಿಕೊಳ್ಳುವುದರಿಂದ ಏನೂ ಕೆಡಕಿಲ್ಲ. ಆ ರೀತಿ ಮಾಡುವುದು ಯುಕ್ತವೆಂದು ನಾನು ತಿಳಿಯುತ್ತೇನೆ. ಈಗ ನಾನು ಹೇಳುವುದೇನೆಂದರೆ: "ಇದು ಬಹಳ ಕಷ್ಟ" ಎನ್ನುವುದು ನಮ್ಮ ಅಧೈರ್ಯದಿಂದಲೇ ಹೊರತು, ನಿಜವಾಗಿಯೂ ಅದು ಕಷ್ಟವಲ್ಲ. ಇದನ್ನು ನಾವು ನಮ್ಮ ಕರ್ತವ್ಯವೆಂದು ತಿಳಿದು ಮಾಡದೆ ಇದ್ದರೆ ನಮ್ಮ ಆತ್ಮ ಗೌರವವನ್ನು ಉಳಿಸಿಕೊಳ್ಳುವುದಕ್ಕಾಗುವುದಿಲ್ಲವೆಂದು ತಿಳಿದುಕೊಳ್ಳಬೇಕು. ನಾವು ಈ ಕೆಲಸವನ್ನು ಮಾಡಲೇಬೇಕೆಂದು ಪ್ರಯತ್ನಿಸಿದರೆ ಖಂಡಿತವಾಗಿಯೂ ನಮ್ಮ ಇಷ್ಟಾರ್ಥವು ಕೈಗೂಡುತ್ತದೆಂಬುದರಲ್ಲಿ ಸಂದೇಹವಿಲ್ಲ. ನಮ್ಮಲ್ಲಿಯೂ ಅನೇಕ ಶಾಸ್ತ್ರಜ್ಞರು ಇದ್ದಾರೆ. ಮಾತೃಭಾಷಾ ಪ್ರೇಮಿಗಳೂ ಇದ್ದಾರೆ. ಅವರನ್ನು ಪುಸ್ತಕ ಬರೆಯಬೇಕೆಂದು ತಾವು ಕೇಳಿಕೊಂಡರೆ ಚೆನ್ನಾಗಿಯೂ ಬರೆಯುತ್ತಾರೆ.

ಈಗ ನಮ್ಮಲ್ಲಿ ಇನ್ನೊಂದು ಶಂಕೆಯುಂಟಾಗಿದೆ. ಶ್ರೀಮಾನ್ ಮಿರ್ಜಾ ಅಜೀಜುಲ್ಲಾ ಬೇಗ್‌ರವರು ಅದನ್ನು ಸ್ಪಷ್ಟವಾಗಿ ಹೇಳಲಿಲ್ಲ. ಈ ವಿಚಾರದಲ್ಲಿ ಸ್ವಲ್ಪ ಮಾತ್ರ ಸಂಶಯವನ್ನು ವ್ಯಕ್ತಪಡಿಸಿದರು. ಇದನ್ನು ಮನಸ್ಸಿನಲ್ಲಿ ಯೋಚನೆ ಮಾಡಿಕೊಂಡೇ ಎರಡನೆಯ ತಿದ್ದುಪಡಿಯನ್ನು ನನ್ನ ಮಿತ್ರರು ಶ್ರೀಮಾನ್ ರಾಜ ಗೋಪಾಲ ಐಯಂಗಾರ್ಯರು ವಾಪಸು ತೆಗೆದುಕೊಂಡರೆಂದು ಕಾಣುತ್ತದೆ.

ಅದೇನೆಂದರೆ, ಇದುವರೆಗೆ ನಾವು ಒಂದು ಕ್ರಮವನ್ನು ಅನುಸರಿಸಿಕೊಂಡು ಬಂದಿದ್ದೇವೆ. ಈಗ ಅದನ್ನು ಒಮ್ಮೆಯೇ ಬದಲಾಯಿಸಿ ಎಲ್ಲವನ್ನೂ ಕನ್ನಡದಲ್ಲಿಯೇ ಬೋಧನೆಮಾಡಬೇಕೆಂದು ಹೇಳಿದರೆ, ಇದುವರೆಗೂ ಇಂಗ್ಲಿಷಿನಲ್ಲಿ ಅಭ್ಯಾಸಮಾಡುತ್ತಿರುವವರಿಗೆ ತೊಂದರೆಯಲ್ಲವೆ? ಇದೇ ಒಂದು ದೊಡ್ಡ ಪ್ರಶ್ನೆ. ನಿಜವಾಗಿಯೂ ಇದು ಒಂದು ತೊಂದರೆಯೆಂದೂ ನಾನು ತಿಳಿದಿದ್ದೇನೆ. ಇದನ್ನರಿತೇ ಅವರು ತಿದ್ದುಪಡಿಯನ್ನು ವಾಪಸು ತೆಗೆದುಕೊಂಡರು. ನಮ್ಮ ಮುಸಲ್ಮಾನ ಸಹೋದರರು ಅಪೇಕ್ಷೆಪಟ್ಟು ಇಂಗ್ಲಿಷನ್ನೇ ತೆಗೆದುಕೊಳ್ಳಬಹುದು. ಅವರಿಗೆ ಇರುವ ಆ ಮಾರ್ಗವನ್ನು ಮುಚ್ಚಿಬಿಡಬೇಕೆಂದು ನಮ್ಮ ಆಶೆಯಲ್ಲ. ಕೆಲವು ಕಾಲವಾದ ಮೇಲೆ ನಮ್ಮ ಮುಸಲ್ಮಾನ ಸಹೋದರರೂ ಅವರಲ್ಲಿರತಕ್ಕ ವಿಶೇಷ ದೇಶಭಕ್ತಿಯಿಂದ ದೇಶಭಾಷೆಯಾದ ಮತ್ತು ಸ್ವತಂತ್ರ ಭಾಷೆಯಾದ ಕನ್ನಡವನ್ನೇ ಗೌರವಿಸಬಹುದು. ಅವರುಗಳೇ ಇನ್ನು ಕೆಲವು ವರ್ಷಗಳ ಕಾಲದಲ್ಲಿ ಎಲ್ಲವೂ ಕನ್ನಡದಲ್ಲಿಯೇ ನಡೆಯಬೇಕೆಂದು ಕೇಳಬಹುದು. ಆದುದರಿಂದ ಇದು ಸಾಧುವಾದ ನಿರ್ಣಯವೆಂದು ಹೇಳಿ ಇದನ್ನು ಸಂಪೂರ್ಣವಾಗಿ ಪುಷ್ಟೀಕರಿಸುತ್ತೇನೆ. ಇದನ್ನು ಜಾರಿಗೆ ತರುವುದು ಬಹಳ ಆವಶ್ಯಕವಾಗಿದೆಯೆಂದು ನಾನು ತಿಳಿದಿದ್ದೇನೆ. ತಾವು ಇದನ್ನು ಖಂಡಿತವಾಗಿಯೂ ಒಪ್ಪಿಕೊಳ್ಳಲೇಬೇಕು. ಇದನ್ನು ಒಪ್ಪಿಕೊಳ್ಳದಿದ್ದರೆ, ನಮ್ಮ ಆತ್ಮಗೌರವವು ಉಳಿಯುವುದಿಲ್ಲವೆಂದು ನಾನು ಹೇಳುತ್ತೇನೆ. ಪ್ರಪಂಚದಲ್ಲಿ ಯಾವ ದೇಶದಲ್ಲಿಯೇ ಆಗಲಿ, ಇನ್ನಾವುದೋ ಭಾಷೆಯನ್ನು ಮೊದಲು ಕಲಿತು, ಆ ಮೇಲೆ ಶಾಸ್ತ್ರಗಳ ಪರಿಚಯ ಮಾಡಿಕೊಳ್ಳುವ ಪದ್ಧತಿ ಜಾರಿಯಲ್ಲಿದೆಯೇ? ಈಗ ಜಪಾನಿನವರ ವಿಷಯವನ್ನು ತೆಗೆದುಕೊಳ್ಳಿ. ಅವರು ಅನುಸರಿಸುವ ಮಾರ್ಗವನ್ನು ನಾವು ಮೆಚ್ಚಬೇಕು. ಎಷ್ಟು ಜಾಗ್ರತೆ ಅವರು ಅಭಿವೃದ್ಧಿಗೆ ಬಂದರು! ಇದಕ್ಕೆ ಮುಖ್ಯ ಕಾರಣವೇನು! ಅವರು, ಅವರ ಕೆಲಸಗಳೆಲ್ಲವನ್ನೂ ತಮ್ಮ ಭಾಷೆಯಲ್ಲಿಯೇ ನಡೆಯಿಸಬೇಕೆಂದು ವಿಧಾಯಕ ಮಾಡಿರುತ್ತಾರೆ. ಆದರೂ ಸಂಸ್ಕೃತಿಯ ಸಲುವಾಗಿ ಇಂಗ್ಲಿಷ್ ಮೊದಲಾದ ಇತರ ಭಾಷೆಗಳನ್ನೂ ಅವರು ಕಲಿಯುತ್ತಾರೆ. ಇದಕ್ಕಾಗಿಯೇ ಪಾಶ್ಚಾತ್ಯ ಭಾಷೆಗಳನ್ನು ಅವರು ಕಲಿಯುವುದು. ಹಾಗೆಯೇ, ನಾವೂ ಇಂಗ್ಲಿಷ್ ಭಾಷೆಯನ್ನು ತೆಗೆದುಬಿಡಬೇಕೆಂದು ಹೇಳುವುದಿಲ್ಲ. ಅದನ್ನು ನಾವು ಕಲಿಯಬೇಕು. ನನ್ನ ಅಭಿಪ್ರಾಯದಲ್ಲಿ, ಅದರ ಜೊತೆಗೆ, ಫ್ರೆಂಚ್, ಜರ್ಮನ್ ಮತ್ತು ರಷ್ಯನ್ ಭಾಷೆಗಳನ್ನೂ ಕೂಡ ನಾವು ಕಲಿಯಬೇಕು. ಹೀಗೆಂದ ಮಾತ್ರಕ್ಕೆ ನಮ್ಮ ದೇಶಭಾಷೆಯನ್ನು ನಾವು ಉದಾಸೀನ ಮಾಡಕೂಡದು. ಏನೇ ಆಗಲಿ, ಇದನ್ನು ತಾವು ಅಂಗೀಕಾರ ಮಾಡಲೇಬೇಕು. ಎಷ್ಟು ಜಾಗ್ರತೆ ಇದನ್ನು ಕಾರ್ಯರೂಪಕ್ಕೆ ತಂದರೆ ಅಷ್ಟು

ಒಳ್ಳೆಯದು. ತಾವು ಪ್ರಾರಂಭವೊಂದನ್ನು ಮಾಡಿದರೆ ಸಾಕು; ಮುಂದೆ ತಾನಾಗಿಯೇ ಸುಲಭವಾಗುತ್ತದೆ. ನಮಗೆ ಎದುರಿಸಲು ಅಸಾಧ್ಯವೆಂದು ತೋರತಕ್ಕ ಪ್ರತಿಬಂಧಕಗಳೆಲ್ಲವೂ ಮಾಯವಾಗಿ ಮುಂದಿನ ಮಾರ್ಗವು ಸುಗಮವಾಗುತ್ತದೆಂದು ನಾನು ಭರವಸೆಯನ್ನು ಕೊಡುತ್ತೇನೆ.

ಶ್ರೀಮಾನ್ ಜಾತರೆ ನಾಯಕರು

ಸ್ವಾಮಿ, ಈ ನಿರ್ಣಯವನ್ನು ನಾನು ಪುಷ್ಟೀಕರಿಸುತ್ತೇನೆ.

ಶ್ರೀಮಾನ್ ಎ. ಎನ್. ರಾಮರಾಯರು

ಸ್ವಾಮಿ, ಈ ನಿರ್ಣಯವನ್ನು ನಾನು ನಮ್ಮ ರಾಷ್ಟ್ರೀಯ ಪಕ್ಷದವರ ಪರವಾಗಿ ಅನುಮೋದಿಸುತ್ತಾ ಒಂದೆರಡು ಮಾತುಗಳನ್ನು ಹೇಳುತ್ತೇನೆ. ಕನ್ನಡ ಭಾಷೆಯೆನ್ನುವುದು ನಿನ್ನೆಯಾಗಲಿ ಅಥವಾ ಇವೊತ್ತಾಗಲಿ ಬಂದ ಭಾಷೆಯಲ್ಲ. ಅನೇಕ ವರ್ಷಗಳಿಂದ, ಎಂದರೆ, ಕ್ರಿ.ಪೂ. ೩೦೦ ಕ್ಕೆ ಮುಂಚಿನಿಂದಲೂ ಕನ್ನಡ ಭಾಷೆಯು ನಮ್ಮ ದೇಶದಲ್ಲಿ ರೂಢಿಯಲ್ಲಿತ್ತು. ಈಜಿಪ್ಟ್ ದೇಶದ ನಾಟಕಗಳಲ್ಲಿರತಕ್ಕ ಕೆಲವು ವಾಕ್ಯಗಳೇ ಇದಕ್ಕೆ ಸಾಕಾದಷ್ಟು ಆಧಾರವಾಗಿವೆ. ಕನ್ನಡದಲ್ಲಿ ಬರೆದಿರುವ ಕೆಲವು ಪೂರ್ತಿ ವಾಕ್ಯಗಳು ಅಲ್ಲಿನ ಕೆಲವು ಪತ್ರಗಳಲ್ಲಿಯೂ ಕಾಣಬರುತ್ತವೆ. ಹೀಗೆ ಇದು ಎಷ್ಟೋ ದಿವಸಗಳಿಂದ ಬೆಳೆದುಬಂದ ಭಾಷೆಯೆಂಬುದು ಎಲ್ಲರಿಗೂ ತಿಳಿದ ವಿಷಯವೆ ಆಗಿದೆ. ನೃಪತುಂಗನೆಂಬ ಮಹಾ ಕವಿಯು, ಈ ಕನ್ನಡ ಭಾಷೆಯು ಹಿಂದೆ ಎಷ್ಟರಮಟ್ಟಿಗೆ ಪ್ರಸಿದ್ಧಿಗೆ ಬಂದಿತ್ತೆಂಬುದನ್ನು ವರ್ಣಿಸಿದ್ದಾನೆ. ಕಾವೇರಿ ನದಿಯಿಂದ ಗೋದಾವರಿ ನದಿಯವರೆಗೂ ಕನ್ನಡ ಭಾಷೆಯು ಹಬ್ಬಿತ್ತೆಂಬುದು ಅವನ ಗ್ರಂಥದಿಂದ ವ್ಯಕ್ತಪಡುತ್ತದೆ. ನಮ್ಮ ಶ್ರೀಮನ್ಮಹಾರಾಜರವರೂ, ಅವರ ಸರ್ಕಾರದವರೂ ಕಳೆದ ೨೦ ವರ್ಷಗಳಿಂದೀಚೆಗೆ ಕನ್ನಡಕ್ಕೆ ಬಹಳ ಹೆಚ್ಚಿನ ಉತ್ತೇಜನವನ್ನು ಕೊಟ್ಟು, ಅನೇಕ ತೆರನಾಗಿ, ಕನ್ನಡದ ಬೆಳವಣಿಗೆಗೆ ಸಹಾಯ ಮಾಡಿದ್ದಾರೆ. ಕನ್ನಡದಲ್ಲಿ ಪುಸ್ತಕಗಳನ್ನು ಬರೆಯುವುದಕ್ಕೆ ವಿಶೇಷವಾಗಿ ಪ್ರೋತ್ಸಾಹಿಸಿ ಅನೇಕ ಕನ್ನಡ ಪುಸ್ತಕಗಳನ್ನು ಪಠ್ಯಪುಸ್ತಕಗಳನ್ನಾಗಿ ಏರ್ಪಡಿಸಿದ್ದಾರೆ. ಅಷ್ಟೇ ಅಲ್ಲದೆ, ಹೈಸ್ಕೂಲುಗಳಲ್ಲಿ ಕನ್ನಡವನ್ನು ಶಿಕ್ಷಣ ಭಾಷೆಯನ್ನಾಗಿ ಮಾಡಿದ್ದಾರೆ. ಇದಕ್ಕಾಗಿ ನಾವು ಶ್ರೀಮನ್ಮಹಾರಾಜರವರಿಗೂ ಮತ್ತು ಅವರ ಸರ್ಕಾರದವರಿಗೂ ಎಷ್ಟು ಕೃತಜ್ಞರಾಗಿದ್ದರೂ ಸಾಲದು. ಅಲ್ಲದೆ, ನಮ್ಮ ರಾಜ್ಯದ ಎಲ್ಲೆಯಲ್ಲಿರತಕ್ಕ ಧಾರವಾಡ, ಹುಬ್ಬಳ್ಳಿ, ಬಳ್ಳಾರಿ, ದಕ್ಷಿಣಕನ್ನಡ ಜಿಲ್ಲೆಗಳವರು ಕನ್ನಡಕ್ಕೆ ಎಷ್ಟರಮಟ್ಟಿಗೆ ದುಡಿಯುತ್ತಿದ್ದಾರೆಂಬುದು ತಮಗೇ ಗೊತ್ತಿದೆ. ಇದಕ್ಕೆ ಸರಿಯಾಗಿ ನಮ್ಮ ದಿವಾನರವರೂ ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯಕಲಾಪಗಳಲ್ಲಿ ವಿಶೇಷ ಉತ್ಸಾಹವನ್ನು ತೋರಿಸುತ್ತಿ

ದ್ದಾರೆಂದರೆ, ಅವರು ಕನ್ನಡಕ್ಕೆ ಎಷ್ಟು ಪ್ರಾಮುಖ್ಯತೆಯನ್ನು ಕೊಟ್ಟಿರುತ್ತಾರೆಂಬುದು ಗೊತ್ತಾಗುತ್ತದೆ.

ಅಲ್ಲದೆ ಇನ್ನೊಂದು ವಿಷಯ. ಈಗ ಕನ್ನಡಿಗರಲ್ಲಿ ಏಕೆ, ಇಡೀ ಕರ್ಣಾಟಕದ ಜನತೆಯಲ್ಲಿಯೇ ಒಂದು ಸಮಸ್ಯೆ ಎದ್ದಿದೆ. ಕನ್ನಡದ ಏಕೀಕರಣವಾಗಬೇಕೆಂಬುದೇ ಆ ಸಮಸ್ಯೆ. ಇದರ ಜೊತೆಗೆ ಕನ್ನಡ ವಿಶ್ವವಿದ್ಯಾನಿಲಯವೊಂದನ್ನು ಏರ್ಪಡಿಸಬೇಕೆಂದು ಅನೇಕರು ಪ್ರಚಾರಕಾರ್ಯವನ್ನು ನಡೆಯಿಸುತ್ತಿದ್ದಾರೆ. ಕರ್ಣಾಟಕ ಸಿಂಹಾಸನಾಧೀಶ್ವರರಾದ ನಮ್ಮ ಶ್ರೀಮನ್ಮಹಾರಾಜರವರು ಅಂಥ ವಿಶ್ವವಿದ್ಯಾನಿಲಯದ ಛಾನ್ಸೆಲರಾಗಬೇಕೆಂದು ಕರ್ಣಾಟಕದ ಜನರು ಬಯಸುವುದು ಉಚಿತವಾಗಿಯೇ ಇದೆ. ಮತ್ತು ಅದಕ್ಕಾಗಿ ಅವರು ಬಹಳಮಟ್ಟಿಗೆ ದುಡಿಯುತ್ತಿದ್ದಾರೆ. ಹೀಗಿರುವ ಸ್ಥಿತಿಯಲ್ಲಿ ಈ ನಿರ್ಣಯವು ಈ ಸಭೆಯ ಮುಂದೆ ಬಂದಿರುವುದು ಒಂದು ಶುಭಸೂಚನೆಯಾಗಿದೆಯೆಂದು ನಾನು ತಿಳಿದಿದ್ದೇನೆ. ಏಕೆಂದರೆ, ಈಗ ನಮ್ಮ ವಿಶ್ವವಿದ್ಯಾನಿಲಯವು ಕರ್ಣಾಟಕ ವಿಶ್ವವಿದ್ಯಾನಿಲಯವಲ್ಲ. ಕರ್ಣಾಟಕ ರಾಜ್ಯದಲ್ಲಿರುವ ಪ್ರತಿಯೊಬ್ಬರೂ ನಮ್ಮ ವಿಶ್ವವಿದ್ಯಾನಿಲಯಕ್ಕೇ ಬಂದು ವಿದ್ಯೆಯನ್ನು ಕಲಿಯುವಂತಿಲ್ಲ. ನಮ್ಮ ಸಂಸ್ಥಾನದ ಪಕ್ಕದಲ್ಲಿನ ಜನರು ಕನ್ನಡಿಗರೇ ಆಗಿದ್ದರೂ ಅವರು ಬೇರೆ ವಿಶ್ವವಿದ್ಯಾನಿಲಯಗಳಿಗೆ ಹೋಗಿ ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ನಮ್ಮ ವಿಶ್ವವಿದ್ಯಾನಿಲಯಕ್ಕೆ ಕರ್ಣಾಟಕದವರೆಲ್ಲರೂ ಬಂದು ಇಲ್ಲಿನ ಪ್ರಯೋಜನಗಳನ್ನು ಪಡೆಯುವುದಕ್ಕೆ ಅವರಿಗೆ ಅವಕಾಶವಿಲ್ಲ. ನಮ್ಮ ಭಾಷೆಯು ಈಗ ಕನ್ನಡ ಭಾಷೆಯಲ್ಲ. ಈಗ ಅದು ಇಂಗ್ಲಿಷ್ ಭಾಷೆಯಾಗಿಬಿಟ್ಟಿದೆ. ನಮ್ಮ ವಿಶ್ವವಿದ್ಯಾನಿಲಯದಲ್ಲಿ ಪಠ್ಯಪುಸ್ತಕಗಳು ಇಂಗ್ಲಿಷ್ ಭಾಷೆಯಲ್ಲಿರುವುದರಿಂದ ಹೊರಗಿನವರು ಇಲ್ಲಿಗೆ ಬರುವ ಹಾಗಿಲ್ಲ. ನಮ್ಮ ವಿಶ್ವವಿದ್ಯಾನಿಲಯದಲ್ಲಿ ಕನ್ನಡ ಭಾಷೆಯಲ್ಲಿಯೇ ಎಲ್ಲಾ ಪಾಠಗಳೂ ನಡೆಯುವಂತೆ ಮಾಡಿದರೆ, ಅಥವಾ ಪಠ್ಯಪುಸ್ತಕಗಳೆಲ್ಲವೂ ಕನ್ನಡದಲ್ಲಿಯೇ ಇರಬೇಕೆಂದು ಏರ್ಪಡಿಸಿದರೆ, ಹೊರಗಿನವರು ಇಲ್ಲಿಗೆ ಬರುವುದಕ್ಕಾಗಲಿ ಅಥವಾ ಇತರ ಕಡೆಗಳಲ್ಲಿರುವ ಕಾಲೇಜುಗಳು ನಮ್ಮ ವಿಶ್ವವಿದ್ಯಾನಿಲಯಕ್ಕೆ ಸೇರುವಂತೆ ಮಾಡುವುದಕ್ಕಾಗಲಿ ಆಗುವುದಿಲ್ಲವೆಂದು ಹೇಳಬಾರದು. ಮುಖ್ಯವಾಗಿ ಒಂದು ಅಂಶವನ್ನು ತಾವು ಗಮನದಲ್ಲಿಡಬೇಕು. ಇದರಿಂದ ಕರ್ಣಾಟಕ ವಿಶ್ವವಿದ್ಯಾನಿಲಯವು ಬೆಳೆಯುತ್ತದೆ. ಅದು ಹಾಗೆ ಬೆಳೆದ ಹಾಗೆಲ್ಲಾ ಕರ್ಣಾಟಕ ಏಕೀಕರಣವಾಗುವುದಕ್ಕೆ ಕಾರ್ಯರಂಗದಲ್ಲಿನ ಬಹಳಮಟ್ಟಿನ ಕೆಲಸ ಮಾಡಿದಂತಾಗುತ್ತದೆ.

ಇದೂ ಅಲ್ಲದೆ, ಕನ್ನಡದ ಲಿಪಿಯನ್ನು ಮತ್ತಷ್ಟು ಅಭಿವೃದ್ಧಿಗೆ ತರುವುದಕ್ಕಾಗಿಯೂ ಮತ್ತು ಕನ್ನಡ ಲಿಪಿಯಲ್ಲಿರುವ ಅಕ್ಷರಗಳನ್ನು ಕಡಮೆಮಾಡುವುದ

ಕ್ಕಾಗಿಯೂ ಲಿಪಿ ಸಂಸ್ಕರಣ ಕಾರ್ಯವು ನಡೆಯುತ್ತಿದೆ. ಈಗಿರುವ ೫೨ ಅಕ್ಷರ ಗಳನ್ನು ಕಡಮೆಮಾಡಿ ಲಿಪಿ ಸಂಸ್ಕರಣಕ್ಕೆ ತಕ್ಕ ಏರ್ಪಾಡು ನಡೆಯುತ್ತಿದೆ. ಇಷ್ಟೆಲ್ಲಾ ಆದಮೇಲೆ ನಮ್ಮ ಉದ್ದೇಶಗಳೆಲ್ಲವೂ ಸಫಲವಾಗಬೇಕಾದರೆ, ನಮ್ಮ ವಿಶ್ವವಿದ್ಯಾನಿಲಯದಲ್ಲಿ ಕನ್ನಡ ಭಾಷೆಯ ಪಠ್ಯಪುಸ್ತಕಗಳನ್ನು ಏರ್ಪಡಿಸುವ ಅವಕಾಶ ವನ್ನು ಕಲ್ಪಿಸಿಕೊಡುವುದು ಅತ್ಯಾವಶ್ಯಕವೆಂದು ನಾನು ತಿಳಿದಿದ್ದೇನೆ.

ಇನ್ನು ಪುಸ್ತಕಗಳ ವಿಷಯವಾಗಿ ಒಂದೆರಡು ಮಾತುಗಳನ್ನು ಹೇಳಬೇಕಾಗಿದೆ. ಈಗ ನಮ್ಮಲ್ಲಿ ಪ್ರೊಫೆಸರುಗಳೂ ಮತ್ತು ಅಸಿಸ್ಟೆಂಟ್ ಪ್ರೊಫೆಸರುಗಳೂ ಬಹಳ ದಕ್ಷರಾದವರಿದ್ದಾರೆ. ತಾವೇನೋ ಕನ್ನಡ ಭಾಷೆಯಲ್ಲಿ ಸರಿಯಾದ ಪುಸ್ತಕಗಳಿಗೆ ಕೊರತೆಯುಂಟಾಗಿದೆಯೆಂದು ಹೇಳಿದಿರಿ. ಈಗ ಜೀವಶಾಸ್ತ್ರ, ಸಸ್ಯಶಾಸ್ತ್ರ, ಪ್ರಾಣಿ ಶಾಸ್ತ್ರ, ಮನಶ್ಶಾಸ್ತ್ರ—ಇವೇ ಮುಂತಾದ ಶಾಸ್ತ್ರಗಳ ಮೇಲೆ ಪುಸ್ತಕಗಳನ್ನು ಕನ್ನಡದಲ್ಲಿ ಆಗಲೇ ಬರೆದಿದ್ದಾರೆ. ಅವರು ಹೈಸ್ಕೂಲ್ ದರ್ಜೆಗೆ ತಕ್ಕಂತಹ ಪುಸ್ತಕ ಗಳನ್ನು ಈಗ ಎಷ್ಟೆಷ್ಟೋ ಬರೆದಿದ್ದಾರೆ. ಅವರನ್ನು ಕಾಲೇಜಿನ ದರ್ಜೆಗೂ ಬರೆಯ ಬೇಕೆಂದು ಕೇಳಿದರೆ ಅವರು ಖಂಡಿತವಾಗಿಯೂ ಬರೆಯುತ್ತಾರೆ.

ಇನ್ನೊಂದು ವಿಚಾರ. ನಮ್ಮ ಭಾಷೆಯಲ್ಲಿ ಸರಿಯಾದ ಶಬ್ದಗಳು ಸಿಕ್ಕುವುದಿಲ್ಲ ವೆಂದು ಒಂದು ವಾದ ಬರಬಹುದು. ಈಗಾಗಲೇ ಘನ ಸರ್ಕಾರದವರು ಕನ್ನಡ ನಿಘಂಟನ್ನು ತಯಾರುಮಾಡಲು ವಿದ್ವಾಂಸರ ಸಮಿತಿಯನ್ನೇರ್ಪಡಿಸಿದ್ದಾರೆ. ಅದರ ಮುಖಾಂತರ ನಮಗೆ ಶಬ್ದಗಳೆಲ್ಲಾ ದೊರಕುವಂತೆ ಮಾಡಿಕೊಳ್ಳಬಹುದು. ಅಲ್ಲದೆ, ನಮ್ಮಲ್ಲಿ ಎಷ್ಟೋ ಪಂಡಿತರೂ ವಿದ್ವಾಂಸರೂ ಇದ್ದಾರೆ. ಅವರುಗಳನ್ನು ಪದಗಳನ್ನು ಬೇಕೆಂದು ಕೇಳಿದರೆ ಜೋಡಿಸಿ ಕೊಡುತ್ತಾರೆ. ಹೀಗೆ ಜೋಡಿಸಿಕೊಡುವುದರಲ್ಲಿ ಯಾವ ಬಾಧಕವೂ ಇಲ್ಲ. ಆದುದರಿಂದ ಒಟ್ಟಿನ ಮೇಲೆ ಕನ್ನಡವನ್ನು ಶಿಕ್ಷಣಭಾಷೆ ಯನ್ನಾಗಿ ಮಾಡುವುದರಲ್ಲಿ ಯಾವ ತೊಂದರೆಯೂ ಇಲ್ಲವೆಂದು ಹೇಳಿ ಈ ನಿರ್ಣಯ ವನ್ನು ನಾನು ಅನುಮೋದಿಸುತ್ತೇನೆ.

ಶ್ರೀಮಾನ್ ಭೂಪಾಳಂ ಆರ್. ಚಂದ್ರಶೇಖರಯ್ಯನವರು

ಸ್ವಾಮಿ, ಶ್ರೀಮನ್ಮಹಾರಾಜರವರು ಈಗ ಕೆಲವು ದಿವಸಗಳ ಹಿಂದೆ ಅಂದರೆ ಆಗಸ್ಟ್ ೩ ರಲ್ಲಿ ಯುದ್ಧದ ಸಂಬಂಧದಲ್ಲಿ ಒಂದು ಸಂದೇಶವನ್ನು ದಯಪಾಲಿಸಿದಾಗ ಆ ವಿಷಯದಲ್ಲಿ ಒಟ್ಟು ಕರ್ಣಾಟಕದ ೧೩೦ ಲಕ್ಷ ಪ್ರಜೆಗಳಿಗೇ ಯಾವ ರೀತಿಯ ಸಂತೋಷವುಂಟಾಯಿತೆಂಬುದು ಈ ಸಭಾಸದಸ್ಯರೆಲ್ಲರಿಗೂ ತಿಳಿದಿರುವ ಅಂಶವಾಗಿದೆ. ಕರ್ಣಾಟಕ ಸಿಂಹಾಸನಾಧೀಶ್ವರರೂ ನಮ್ಮನ್ನಾಳುವ ಮಹಾಸ್ವಾಮಿಯವರೂ ಆದ ಶ್ರೀಮನ್ಮಹಾರಾಜರವರ ಮಾತೃಭಾಷೆಯಾದ ಕನ್ನಡಕ್ಕೆ ಒಟ್ಟು ಸಂಸ್ಥಾನದಲ್ಲಿ

ಸಂಪೂರ್ಣ ಪ್ರೋತ್ಸಾಹವನ್ನು ಕೊಡಬೇಕೆಂದು ಇಷ್ಟು ನಿಧಾನವಾಗಿ ಈ ಸಭೆಯಲ್ಲಿ ಇದಕ್ಕೆ ಸಂಬಂಧಪಟ್ಟಂತೆ ಒಂದು ನಿರ್ಣಯವು ಬಂದಿತಲ್ಲಾ ಎಂದು ನಾವು ವಿಷಾದಪಡಬೇಕಾಗಿದೆ. ಶ್ರೀಮಾನ್ ಮಿರ್ಜಾ ಅಜೀಜುಲ್ಲಾ ಬೇಗ್‌ರವರು ಈ ವಿಚಾರವಾಗಿ ಮಾಡಿದ ಭಾಷಣದಲ್ಲಿ ಪೂರ್ವಾರ್ಧವನ್ನು ಮಾತ್ರ ನಾನು ಸಂಪೂರ್ಣವಾಗಿ ಅನುಮೋದಿಸುತ್ತೇನೆ. ಆದರೆ ಉತ್ತರಾರ್ಧದಲ್ಲಿ ಕೆಲವು ಅನವಶ್ಯವಾದ ಅಂಶಗಳನ್ನು ಸೇರಿಸಿಕೊಂಡು ಅವರು ಈ ನಿರ್ಣಯಕ್ಕೆ ವಿರೋಧವನ್ನು ವ್ಯಕ್ತಪಡಿಸಿದರು. "ಈಗ ಕನ್ನಡವು ಭರತಖಂಡಕ್ಕೆ ರಾಷ್ಟ್ರಭಾಷೆ ಆಗುವುದಿಲ್ಲವೆಂದೂ, ಉರ್ದುಭಾಷೆಯೇ ಏಕಮಾತ್ರ ರಾಷ್ಟ್ರಭಾಷೆಯಾಗಬೇಕೆಂದೂ" ಹೇಳಿದರು. ನಮ್ಮಮಟ್ಟಿಗೆ ನಾವು ಹೇಳುವುದಾದರೆ ಈಗ ನಿಜಾಮರ ರಾಜ್ಯದಲ್ಲಿ ಹೇಗೆ ಉರ್ದು ಭಾಷೆಯು ರಾಜಭಾಷೆ, ದೇಶಭಾಷೆ ಮತ್ತು ಶಿಕ್ಷಣಭಾಷೆಯಾಗಿದೆಯೋ ಅದೇ ರೀತಿಯಾಗಿ ನಮ್ಮ ಮೈಸೂರು ಸಂಸ್ಥಾನದಲ್ಲಿ ಕನ್ನಡವು ರಾಜಭಾಷೆಯಾಗಿದೆ, ಮತ್ತು ಪ್ರಚಾರಕ್ಕೆ ಬರತಕ್ಕ ಭಾಷೆಯಾಗಿದೆ. ನಮ್ಮ ಶ್ರೀಮನ್ಮಹಾರಾಜರವರ ಪ್ರಜೆಗಳಾಗಿ, ರಾಜಭಕ್ತಿಯುತರಾಗಿರುವವರೆಲ್ಲರೂ ಕನ್ನಡವನ್ನು ಕಲಿಯಲೇಬೇಕು. ಈ ವಿಷಯದಲ್ಲಿ ಒಂದು ಸೂಚನೆಯು ಅವರಿಂದ ಬಂದಿದೆ. ಶ್ರೀಮಾನ್ ರಸೂಲ್‌ರವರೇ ಈಗ ಎರಡು ವರ್ಷಗಳ ಕೆಳಗೆ ಇದೇ ಪ್ರಜಾಪ್ರತಿನಿಧಿ ಸಭೆಯಲ್ಲಿ ಎಲ್ಲಾ ಉರ್ದು ಪಾಠಶಾಲೆಗಳಲ್ಲಿಯೂ ಕನ್ನಡಭಾಷೆಯನ್ನು ಕಡ್ಡಾಯವಾಗಿ ಕಲಿಸಬೇಕೆಂದು ಹೇಳಿದರು. ಅದನ್ನು ಅಭಿನಂದಿಸಿ ಸರ್ ಮಿರ್ಜಾ ಇಸ್ಮಾಯಿಲ್‌ರವರು ಒಂದು ಅಮೋಘವಾದ ಸಲಹೆಯನ್ನು ಆಗ ಕೊಟ್ಟರು. ಅದನ್ನನುಸರಿಸಿ ನಡೆದರೆ ಉರ್ದು ಭಾಷೆಯನ್ನು ಕಲಿಯುವ ಹುಡುಗರಿಗೆ ಬಹಳ ಅನುಕೂಲವಾಗುತ್ತದೆ. ಕನ್ನಡಭಾಷೆಯು ಹುಡುಗರು ಚೆನ್ನಾಗಿ ಕಲಿತುಕೊಳ್ಳುವುದಕ್ಕೆ ಸಾಧ್ಯವಾದ ಭಾಷೆಯಾಗಿದೆ. ಉಪಾಧ್ಯಾಯರ ದೃಷ್ಟಿಯಿಂದ ಹೇಳುವುದಾದರೆ ಅವರಿಗೂ ಕೂಡ ಕನ್ನಡದಲ್ಲಿ ಬೋಧನೆಮಾಡುವುದು ಬಹಳ ಸುಲಭ. ಅವರೂ ವಿಷಯವನ್ನು ತಿಳಿದುಕೊಂಡು ಬೋಧನೆಮಾಡುತ್ತಾರೆ. ನನ್ನ ಸ್ನೇಹಿತರೊಬ್ಬರು ಗಣಿತಶಾಸ್ತ್ರವನ್ನು ಕನ್ನಡದಲ್ಲಿ ಬರೆದಿದ್ದಾರೆ. ಅವರು ಆ ಪುಸ್ತಕವನ್ನು ಕನ್ನಡದಲ್ಲಿ ಬರೆದಮೇಲೆ ಗಣಿತಶಾಸ್ತ್ರಕ್ಕೆ ಸಂಬಂಧಪಟ್ಟ ಅನೇಕ ವಿಷಯಗಳನ್ನು ಮೊದಲಿಗಿಂತ ಚೆನ್ನಾಗಿ ತಿಳಿದುಕೊಂಡರಂತೆ. ಬರೀ ಇಂಗ್ಲಿಷಿನಲ್ಲಿ ಅದನ್ನು ಬರೆಯುತ್ತಿದ್ದಾಗ ಮಕ್ಕೀಕಾಮಕ್ಕೀ ಎಂಬಂತೆ ಎಲ್ಲವನ್ನೂ ಬರೆದಿಡುತ್ತಿದ್ದರು. ಕನ್ನಡದಲ್ಲಿ ಬರೆಯುವಾಗ ಶಾಸ್ತ್ರದ ಅನೇಕ ಹೊಸ ವಿಷಯಗಳು ಅವರಿಗೆ ಭಾಸವಾದುವೆಂದೂ ಹೇಳಿದರು. ಆದುದರಿಂದ ನಾವು ಈ ನಿರ್ಣಯವನ್ನು ದೇಶದ ದೃಷ್ಟಿಯಿಂದಲೇ ಅಲ್ಲದೆ ಉಪಾಧ್ಯಾಯರ ಮತ್ತು ವಿದ್ಯಾರ್ಥಿಗಳ ದೃಷ್ಟಿಯಿಂದಲೂ

ಒಪ್ಪಿಕೊಳ್ಳಬೇಕೆಂದು ನಾನು ಹೇಳುತ್ತೇನೆ. ತಮಗೆ ಬರಬಹುದಾದ ಒಂದು ಅಡಚಣೆ ಯೇನೆಂದರೆ ಪುಸ್ತಕಗಳ ಅಭಾವ. ಪುಸ್ತಕಗಳನ್ನು ಬರೆಯಲಿ, ಆಮೇಲೆ ಇದನ್ನು ಆಚರಣೆಗೆ ತರೋಣವೆಂದು ಹೇಳಬಹುದು. ಈಗಿನ ನಮ್ಮ ವಿದ್ಯಾಮಂತ್ರಿಗಳು ಕನ್ನಡದ ವಿಷಯದಲ್ಲಿ ಹೆಚ್ಚಿನ ಅಭಿಮಾನವುಳ್ಳವರಾಗಿದ್ದಾರೆ. ಅವರ ಭಾಷಣಗಳನ್ನು ನಾನು ಅನೇಕ ಸಲ ಕುತೂಹಲದಿಂದ ಕೇಳಿದ್ದೇನೆ. ಕನ್ನಡದ ವಿಷಯದಲ್ಲಿ ವಿಶೇಷ ಆಸಕ್ತಿಯುಳ್ಳವರು ಅವರು. ಅದಕ್ಕೆ ಅವರಿಗೆ ನಮ್ಮ ಅಭಿನಂದನೆಗಳು. ಇಂಥಾ ವಿದ್ಯಾಮಂತ್ರಿಗಳಿರುವುದು ನಮ್ಮ ಅದೃಷ್ಟವೇ ಸರಿ. ತಾವು ಈ ನಿರ್ಣಯದ ತತ್ವವನ್ನು ಒಪ್ಪಿಕೊಂಡು ಇದನ್ನು ಆಚರಣೆಗೆ ತರಬೇಕೆಂದು ಅಪ್ಪಣೆಮಾಡಿದರೆ ಪಠ್ಯ ಪುಸ್ತಕಗಳು ತಾವಾಗಿಯೇ ಬರುತ್ತವೆ. ಹಾಗಿಲ್ಲದೆ ಪುಸ್ತಕಗಳು ಬರಲೆಂದು ಹೇಳುತ್ತಾ ಹಲವಾರು ವರ್ಷಗಳಿದ್ದರೂ ಅವುಗಳು ಬರುವುದೇ ಇಲ್ಲ. ಆದಕಾರಣ, ತಾವು ಹಾಗೆ ಹೇಳದೆ, ಆದಷ್ಟು ಜಾಗ್ರತೆಯಾಗಿ ಇದನ್ನು ಜಾರಿಗೆ ತರಬೇಕೆಂದು ವಿನಂತಿ.

ಶ್ರೀಮರ್ಾ ಎಚ್. ಹುಸೇ಼ ಆಲಿಬೇಗ್‌ರವರು

ಸ್ವಾಮಿ, ಈ ನಿರ್ಣಯದ ಆಶಯವು “ಕನ್ನಡಕ್ಕೆ ಒಂದು ಪ್ರಧಾನ ಸ್ಥಾನ ವನ್ನು ಕೊಡಬೇಕು, ನಮ್ಮ ಕನ್ನಡವು ಎಲ್ಲರಿಗೂ ತಿಳಿಯುವ ಹಾಗೆ ಮಾಡಬೇಕು, ನಮ್ಮ ಸಂಸ್ಥಾನದಲ್ಲಿ ಕನ್ನಡವು ಒಂದು ಮುಖ್ಯ ಭಾಷೆಯಾಗಬೇಕು” ಎಂದು. ತಾವು ಹಾಗೆ ಮಾಡಿದ ಪಕ್ಷದಲ್ಲಿ ಇಂಗ್ಲಿಷ್ ಭಾಷೆಯು ಬಹಳ ಮಟ್ಟಿಗೆ ಕಡಮೆ ಮಟ್ಟಕ್ಕೆ ಇಳಿಯುತ್ತದೆ. ಈ ನಿರ್ಣಯದಂತೆ ಸ್ಕೂಲು ಮತ್ತು ಕಾಲೇಜು ತರಗತಿ ಗಳಲ್ಲಿ ಕನ್ನಡ ಬರದೆ ಇರತಕ್ಕವರಿಗಾಗಿ ಒಂದೊಂದು ಶಾಖೆಯನ್ನಿಡಬೇಕಾಗುತ್ತದೆ. ಉಳಿದ ಎಲ್ಲ ಶಾಖೆಗಳಲ್ಲಿ ಕನ್ನಡವೇ ಶಿಕ್ಷಣಭಾಷೆಯಾಗಿರಬೇಕಾಗುತ್ತದೆ. ಆದರೆ ಒಂದು ವಿಷಯ. ನಮ್ಮ ವ್ಯಾಪಾರ ವ್ಯವಹಾರಗಳನ್ನು ಸಮರ್ಪಕವಾದ ರೀತಿಯಲ್ಲಿ ನಡೆಯಿಸಬೇಕಾದರೆ ಇಂಗ್ಲಿಷ್ ಭಾಷೆಯು ನಮಗೆ ಬರದೇ ಇದ್ದರೆ ಬಹಳ ಕಷ್ಟವೆಂದು ನಾನು ತಿಳಿಯುತ್ತೇನೆ. ಅಂತೂ ಬೇರೆ ಬೇರೆ ದೇಶಗಳೊಂದಿಗೆ ವ್ಯಾಪಾರ ವ್ಯವಹಾರ ಗಳಲ್ಲಿ ತೊಡಗಬೇಕಾದರೆ, ಇಂಗ್ಲಿಷ್ ಭಾಷಾಪರಿಚಯವು ನಮಗೆ ತಕ್ಕಷ್ಟು ಇದ್ದೇ ಇರಬೇಕು. ಕೆಲವು ಮಹನೀಯರು ಹೇಳಿದರು, ಹೈದರಾಬಾದಿನಲ್ಲಿ ಉರ್ದು ಭಾಷೆಗೆ ಯಾವ ರೀತಿಯ ಪ್ರಾಧಾನ್ಯವನ್ನು ಕೊಟ್ಟಿದ್ದಾರೆಯೋ, ಅದೇ ರೀತಿ ಇಲ್ಲಿ ಕನ್ನಡಕ್ಕೆ ಪ್ರಾಧಾನ್ಯವನ್ನು ಕೊಡಬೇಕೆಂದು. ಇದು ಸರಿಯಾದ ವಾದವಲ್ಲ. ಕನ್ನಡ ಭಾಷೆಯಿಂದ ನಮ್ಮ ಅಕ್ಕಪಕ್ಕದ ಪ್ರಾಂತಗಳಾದ ಮದರಾಸು ಮತ್ತು ಬೊಂಬಾಯಿ ಆಧಿಪತ್ಯಗಳಲ್ಲಿ ಏನೂ ಪ್ರಯೋಜನವಾಗುವಂತಿಲ್ಲ. ಆ ಪ್ರಾಂತ್ಯ ಗಳೊಂದಿಗೆ ನಾವು ವ್ಯಾಪಾರ ವ್ಯವಹಾರಗಳನ್ನು ನಡೆಯಿಸಲು ಇದರಿಂದ ತುಂಬಾ

ಕಷ್ಟವಾಗುತ್ತದೆ. ಉರ್ದು ಭಾಷೆಯು ಇಂಗ್ಲಿಷ್ ಭಾಷೆಯಂತೆ ಪ್ರಪಂಚದ ನಾನಾ ಭಾಗಗಳಲ್ಲಿ ಪ್ರಚಾರದಲ್ಲಿರುವ ಭಾಷೆ. ಅಂತೂ ನಾವು ಯಾವ ವ್ಯವಹಾರ ನಡೆಯಿಸ ಬೇಕಾದರೂ ನಮಗೆ ಇಂಗ್ಲಿಷ್ ಬೇಕು. ಬಹಳ ದಿವಸಗಳಿಂದಲೂ ಈ ಭಾಷೆಯು ಇಲ್ಲಿ ರೂಢಿಗೆ ಬಂದಿದೆ. ಅದರಿಂದ ನಾವು ಎಷ್ಟೋ ಏಳಿಗೆಗೆ ಬಂದಿದ್ದೇವೆ. ಹೀಗಿರು ವಲ್ಲಿ ಕನ್ನಡವನ್ನು ಮುಖ್ಯ ಭಾಷೆಯೆಂದು ಭಾವನೆಮಾಡಿ ಅದನ್ನು ಎಲ್ಲಾ ಪಾಠ ಶಾಲೆಗಳಲ್ಲಿಯೂ ಮುಖ್ಯ ಭಾಷೆಯೆಂದು ಪರಿಗಣಿಸುವುದಾದರೆ, ಅದೇ ರೀತಿಯಲ್ಲಿ ಸಂಸ್ಕೃತವನ್ನೂ ಏಕೆ ಪರಿಗಣಿಸಬಾರದು? ಈ ರೀತಿಯಲ್ಲಿ ನೋಡುತ್ತಾಹೋದರೆ, ಯಾವ ಭಾಷೆಯನ್ನೂ ನಾವು ಮುಖ್ಯವಲ್ಲವೆಂದು ಹೇಳುವುದಕ್ಕಾಗುವುದಿಲ್ಲ. ಆದುದ ರಿಂದ ತಾತ್ಕಾಲಿಕವಾಗಿ ನಮ್ಮಲ್ಲಿ ಯಾವ ಭಾಷೆಯು ಸರ್ಕಾರಿ ವ್ಯವಹಾರದ ಭಾಷೆಯಾಗಿದೆಯೋ ಮತ್ತು ವ್ಯಾಪಾರೋದ್ಯಮಗಳಲ್ಲಿ ವಿಶೇಷ ಬಳಕೆಯಲ್ಲಿದೆಯೋ ಆ ಇಂಗ್ಲಿಷ್ ಭಾಷೆಯನ್ನೇ ನಾವು ನಮ್ಮ ಸ್ಕೂಲು ಮತ್ತು ಕಾಲೇಜುಗಳ ಮುಖ್ಯ ಭಾಷೆಯನ್ನಾಗಿ ಪರಿಗಣಿಸಬೇಕೆಂದೂ, ಆ ಭಾಷೆಯೇ ಇಂಗ್ಲಿಷ್ ಭಾಷೆ ಯಾಗಿರಬೇಕೆಂದೂ ನನ್ನ ಅಭಿಲಾಷೆ.

ಅಲ್ಲದೆ ಇನ್ನೊಂದು ವಿಷಯ. ಈಗ ಕೆಲವು ಸದಸ್ಯರು ಹೇಳಿದರು, ಹೈ ಸ್ಕೂಲಿ ನಲ್ಲಿ ಕನ್ನಡದಲ್ಲಿ ಬೋಧನೆ ಮಾಡುತ್ತಿರುವುದು ಸಮರ್ಪಕವಾಗಿ ನಡೆಯುತ್ತಿರು ವುದರಿಂದ ಅದೇ ರೀತಿಯಾಗಿ ಕಾಲೇಜುಗಳಲ್ಲಿಯೂ ಏರ್ಪಡಿಸಿದರೆ ಅನುಕೂಲ ವಾಗಿರುತ್ತದೆಂದು. ಅವರಿಗೆ ಬಹುಶಃ ಎಲ್ಲಾ ಹೈ ಸ್ಕೂಲುಗಳಲ್ಲಿಯೂ ಈಗ ವಾಸ್ತವವಾಗಿ ಹೇಗೆ ಪಾಠಕ್ರಮಗಳು ನಡೆಯುತ್ತಿವೆಯೆಂಬುದು ತಿಳಿದಿರಬಹುದು. ಈಗ ಅನೇಕ ಹೈ ಸ್ಕೂಲುಗಳಲ್ಲಿ ಕನ್ನಡದಲ್ಲಿ ಪಾಠವನ್ನು ಮಾಡುತ್ತಲೇ ಇಲ್ಲ; ಇಂಗ್ಲಿಷಿನಲ್ಲಿಯೇ ಬೋಧಿಸುತ್ತಿದ್ದಾರೆ. ಇದನ್ನು ನೋಡಿದರೆ, ನೀವು ಕನ್ನಡ ದಲ್ಲಿಯೇ ಪಾಠ ಹೇಳಿಕೊಡಬೇಕೆಂದು ಗೊತ್ತುಮಾಡಿದ್ದರೂ ವಸ್ತುತಃ ಹಾಗೆ ನಡೆಯುತ್ತಿಲ್ಲವೆಂಬುದು ಗೊತ್ತಾಗುತ್ತದೆ.

ಅಲ್ಲದೆ, ಇಂಗ್ಲಿಷ್ ಭಾಷೆಯ ಆವಶ್ಯಕತೆ ನಮಗೆ ಎಷ್ಟಿದೆಯೆಂಬುದನ್ನು ನಾನು ಆಗಲೇ ತಮಗೆ ತಿಳಿಸಿದ್ದೇನೆ. ಯಾವ ವ್ಯಾಪಾರವೇ ಆಗಲಿ ಅದು ಅಭಿ ವೃದ್ಧಿಗೆ ಬರಬೇಕಾದರೆ ಇಂಗ್ಲಿಷಿನ ಆವಶ್ಯಕತೆಯು ಹೆಚ್ಚು ಹೆಚ್ಚಾಗಿ ಬೇಕಾಗಿದೆ. ಹೀಗಿರುವಲ್ಲಿ ತಾವು ಕನ್ನಡದಲ್ಲಿಯೇ ಎಲ್ಲಾ ಪಾಠಗಳನ್ನೂ ಹೇಳಿಕೊಡಲು ಪ್ರಾರಂಭಮಾಡಿದರೆ, ಹಾಗೆ ವ್ಯಾಸಂಗಮಾಡಿದವರು ಬಿ.ಎ. ಪರೀಕ್ಷೆಯಲ್ಲಿ ತೇರ್ಗಡೆ ಯಾದರೂ ಇಂಗ್ಲಿಷಿನಲ್ಲಿ ಸರಿಯಾಗಿ ಒಂದು ಭಾಷಣ ಮಾಡುವುದಕ್ಕೂ ಅವರಿಗೆ ಬರುವುದಿಲ್ಲ. ಆದುದರಿಂದ, ನಮ್ಮ ದೇಶದಲ್ಲಿ ತಾವು ಇಂಗ್ಲಿಷಿಗೆ ಕೊಟ್ಟಿರುವ ಅಂತ ಸ್ತನ್ನು ಮತ್ತಷ್ಟು ಹೆಚ್ಚು ಮಾಡಬೇಕಾದುದು ಅವಶ್ಯಕವೆಂದು ನಾನು ಹೇಳುತ್ತೇನೆ.

ಶ್ರೀಮಾನ್ ಜೆ. ಮುಹಮ್ಮದ್ ಇಮಾಂರವರು (ವಿದ್ಯಾಸಚಿವರು)

ತಾವುಗಳೆಲ್ಲರೂ ಕನ್ನಡಭಾಷೆಗೆ ಹೆಚ್ಚಿನ ಪ್ರಾಶಸ್ತ್ಯವನ್ನು ಕೊಡತಕ್ಕ ವಿಚಾರದಲ್ಲಿ ಮಾತನಾಡಿದುದೆಲ್ಲವನ್ನೂ ಸಾವಧಾನದಿಂದ ಕೇಳಿದ್ದೇನೆ. ಇದರಿಂದ ಒಂದು ವಿಷಯವು ವ್ಯಕ್ತಪಡುತ್ತದೆ. ಅದೇನೆಂದರೆ, ನಮ್ಮ ಮೈಸೂರು ಸಂಸ್ಥಾನ ದಲ್ಲಿರುವವರೆಲ್ಲರೂ, ಅವರು ಯಾವ ಮತಕ್ಕೆ ಅಥವಾ ಯಾವ ಪಂಗಡಕ್ಕೆ ಸೇರಿದ್ದರೂ, ಅವರೆಲ್ಲರೂ ಉಚ್ಚ ಕನ್ನಡ ಅಭಿಮಾನಗಳೆಂಬುದು. ಸರ್ವರೂ ಕನ್ನಡದ ಏಳಿಗೆಗಾಗಿ ಆಸಕ್ತಿವಹಿಸಿರುವುದು ಶ್ಲಾಘನೀಯವಾದುದೆಂದು ನಾನು ತಿಳಿದಿದ್ದೇನೆ. ಅದೇ ರೀತಿಯಲ್ಲಿಯೇ ಸರ್ಕಾರದವರೂ ಕನ್ನಡದ ಪ್ರಾಶಸ್ತ್ಯಕ್ಕೆ, ಕನ್ನಡದ ಅಭಿವೃದ್ಧಿಗೆ ಮತ್ತು ಕನ್ನಡಕ್ಕೆ ಒಂದು ಸ್ಥಾನಮಾನವನ್ನು ಕಲ್ಪಿಸಿಕೊಡುವುದಕ್ಕೆ ಬಹಳ ಆಸಕ್ತಿಯುಳ್ಳವರಾಗಿದ್ದಾರೆಂಬುದನ್ನೂ ತಮಗೆ ಬಹಳ ಸಂತೋಷದಿಂದ ತಿಳಿಸುತ್ತೇನೆ. ಶ್ರೀಮಾನ್ ಟಿ. ಎಸ್. ರಾಜಗೋಪಾಲ ಐಯಂಗಾರ್ಯರು ಹೇಳಿದರು, ನಮ್ಮ ಇಂಡಿಯಾ ದೇಶದಲ್ಲಿ ಸ್ವಭಾಷೆಯನ್ನು ಬಿಟ್ಟು ಪರಭಾಷೆಯ ಮೂಲಕ ಸ್ಕೂಲುಗಳಲ್ಲಿಯೂ, ಕಾಲೇಜುಗಳಲ್ಲಿಯೂ ಬೋಧನೆಯು ನಡೆಯುತ್ತಿದೆಯೆಂದು. ನಮ್ಮ ಇಂಡಿಯಾ ದೇಶದಲ್ಲಿ ಕೆಲವು ದೇಶಾಭಿಮಾನಿಗಳು ತಮ್ಮ ತಮ್ಮ ಸ್ವಭಾಷೆಯನ್ನು ಬಿಟ್ಟು ಬೇರೆ ಭಾಷೆಗಳಿಗೆ ಪ್ರಾಶಸ್ತ್ಯವನ್ನು ಕೊಟ್ಟಿದ್ದಾರೆ. ಮುಖ್ಯವಾಗಿ ನಮ್ಮಲ್ಲಿ ನಮ್ಮ ಸ್ವಭಾಷೆಗೆ ಬದಲಾಗಿ ಇಂಗ್ಲಿಷ್ ಭಾಷೆಗೆ ಹೆಚ್ಚಿಗೆ ಪ್ರಾಶಸ್ತ್ಯ ಕೊಟ್ಟಿರುವುದರಿಂದ ದೇಶಕ್ಕೆ ಒಳ್ಳೆಯದಾಗಿದೆಯೋ, ಕೆಟ್ಟದ್ದಾಗಿದೆಯೋ ಆ ಚರ್ಚೆಗೆ ನಾನು ಹೋಗುವುದಿಲ್ಲ. ತಾವು ಹೇಳುವ ಹಾಗೆ ಕನ್ನಡಭಾಷೆಯು ನಮ್ಮ ಸ್ವಭಾಷೆ, ನಮ್ಮ ದೇಶಭಾಷೆ, ನಮ್ಮ ರಾಜಭಾಷೆ ಮತ್ತು ರಾಜಕೀಯ ಭಾಷೆ. ಇದರಲ್ಲಿ ಸ್ವಲ್ಪವೂ ಭಿನ್ನಾಭಿಪ್ರಾಯವಿಲ್ಲ. ಅದಕ್ಕೆ ತಕ್ಕಷ್ಟು ಪ್ರೋತ್ಸಾಹವನ್ನು ಕೊಡುವುದೂ ಮತ್ತು ನಮ್ಮ ಸಂಸ್ಥಾನದಲ್ಲಿ ಅದಕ್ಕೆ ತಕ್ಕ ಸ್ಥಾನವನ್ನು ಕಲ್ಪಿಸಿಕೊಡುವುದೂ ನಮ್ಮ ಆದ್ಯ ಕರ್ತವ್ಯವೆಂದು ನಾನು ತಿಳಿದಿದ್ದೇನೆ. ಶ್ರೀಮಾನ್ ಎ. ಎನ್. ರಾಮರಾಯರು ಹೇಳಿದಂತೆ ಕನ್ನಡವು ಬಹು ಪೂರ್ವಕಾಲದ ಲಾಗಾಯಿತು ಬಳಕೆಯಲ್ಲಿದೆ. ಕನ್ನಡಭಾಷೆಯು ಈಜಿಪ್ಟ್‌ನಲ್ಲಿ ಬಳಕೆಯಲ್ಲಿತ್ತೆಂಬುದಕ್ಕೂ ಆಧಾರಗಳು ದೊರೆತಿವೆ. ಹಿಂದಿನ ಕಾಲದಲ್ಲಿ ಬಹು ಪ್ರಖ್ಯಾತರಾದ ಕನ್ನಡ ಕವಿಗಳೂ ಮತ್ತು ಇತರ ಗ್ರಂಥಕರ್ತರೂ ಇದ್ದರೆಂಬುದು ನಮಗೆಲ್ಲಾ ತಿಳಿದ ವಿಷಯವೇ ಆಗಿದೆ. ಕುಮಾರವ್ಯಾಸ ಮುಂತಾದ ಪ್ರಸಿದ್ಧ ಕನ್ನಡ ಕವಿಗಳ ಹೆಸರನ್ನು ನಾವು ನಿತ್ಯವೂ ಸ್ಮರಿಸಲೇಬೇಕಾಗಿದೆ. ಅತ್ಯುನ್ನತ ಸ್ಥಿತಿಯಲ್ಲಿದ್ದ ಕನ್ನಡ ನುಡಿಯು ಅವನತಿಗೆ ಬರಲು ಪ್ರಾರಂಭವಾಗಿ ಈಗ ಸುಮಾರು ೧೫೦ ವರ್ಷಗಳಾದುವು.

ಕನ್ನಡಕ್ಕೆ ಒಂದಾನೊಂದು ಕಾಲದಲ್ಲಿದ್ದ ಸ್ಥಾನವು ಈಗ ಇಂಗ್ಲಿಷ್ ಭಾಷೆಗೆ ಬಂದಿದೆ. ಇದಕ್ಕೆ ಮುಖ್ಯ ಕಾರಣರಾರು? ಈಗ್ಗೆ ೧೫೦ ವರ್ಷಗಳ ಹಿಂದೆ ವೈಸರಾಯರವರ ಆಡಳಿತ ವರ್ಗದಲ್ಲಿ ವಿದ್ಯಾಶಾಖಾಧಿಕಾರಿಗಳಾಗಿದ್ದ ಶ್ರೀಮರ್ಾ ಮೆಕಾಲೆಯವರೇ ಇದಕ್ಕೆ ಮುಖ್ಯಕಾರಣರು. ಅವರೇ ಇಂಡಿಯಾ ದೇಶದಲ್ಲಿ ಇಂಗ್ಲಿಷ್ ಭಾಷೆಯನ್ನು ಪ್ರಚಾರಮಾಡಬೇಕೆಂದು ಹೇಳಿ ಎಲ್ಲಾ ಇಲಾಖೆಗಳಲ್ಲಿಯೂ ಇಂಗ್ಲಿಷಿಗೆ ಉತ್ತೇಜನವು ಸಿಕ್ಕುವ ಹಾಗೆ ಮಾಡಿದರು. ಅದಕ್ಕೆ ಎರಡು ಕಾರಣಗಳಿದ್ದುವು. ಮೊದಲನೆಯದಾಗಿ, ಇಂಗ್ಲಿಷರ ಆಳ್ವಿಕೆಯು ಇಂಡಿಯಾ ದೇಶಕ್ಕೆ ಬಂದ ಮೇಲೆ ಅವರು ಏರ್ಪಡಿಸಿದ ಸ್ಕೂಲುಗಳಲ್ಲಿಯೂ, ಕಾಲೇಜುಗಳಲ್ಲಿಯೂ ಇಂಗ್ಲಿಷ್ ಭಾಷೆಯನ್ನು ಬೋಧಿಸಲಾರಂಭಿಸಿದರು. ವಿಜ್ಞಾನಶಾಸ್ತ್ರ, ಗಣಿತಶಾಸ್ತ್ರ ಮತ್ತು ಅರ್ಥಶಾಸ್ತ್ರ ಮುಂತಾದುವುಗಳನ್ನು ಭಾರತೀಯರಿಗೆ ಕಲಿಸಬೇಕಾಗಿ ಬಂದಿತು. ನಮ್ಮ ಕನ್ನಡ ದೇಶದಲ್ಲಿ ಸರಿಯಾದ ಕನ್ನಡ ಪುಸ್ತಕಗಳಿಲ್ಲದುದರಿಂದ ಇವುಗಳನ್ನೆಲ್ಲಾ ಇಂಗ್ಲಿಷಿನಲ್ಲಿಯೇ ಕಲಿಸಬೇಕಾಗಿ ಬಂದಿತು. ಇಂಗ್ಲಿಷ್ ಭಾಷೆಯು ಪ್ರಚಾರಕ್ಕೆ ಬಂದುದಕ್ಕೆ ಅದೊಂದು ಕಾರಣ. ಎರಡನೆಯದಾಗಿ, ಇಂಗ್ಲಿಷ್ ಭಾಷೆಯನ್ನು ಕಲಿತವರಿಗೆ ಹೆಚ್ಚಿನ ಉತ್ತೇಜನವು ಬೇರೆ ದೊರೆಯುವುದಕ್ಕೆ ಪ್ರಾರಂಭವಾಯಿತು. ಆ ಲಾಗಾಯಿತು ಇಂಗ್ಲಿಷನ್ನು ಕಲಿತವರಿಗೆ ಅದರಲ್ಲಿಯೂ ಇಂಗ್ಲಿಷಿನಲ್ಲಿ ಹೆಚ್ಚಿನ ಪಾಂಡಿತ್ಯವಿದ್ದವರಿಗೆ ಹೆಚ್ಚಿನ ಲಾಭವೂ, ಪ್ರಾಶಸ್ತ್ಯವೂ, ದೊಡ್ಡ ದೊಡ್ಡ ಸರ್ಕಾರಿ ಹುದ್ದೆಗಳೂ, ಹಣವೂ ಸಿಕ್ಕಿ ಒಟ್ಟಿನ ಮೇಲೆ ಆರ್ಥಿಕದೃಷ್ಟಿಯಿಂದ ಇಂಗ್ಲಿಷ್ ಭಾಷೆಗೆ ಹೆಚ್ಚು ಪ್ರಾಧಾನ್ಯವುಂಟಾಯಿತು. ಇಷ್ಟೊಂದು ಸೌಕರ್ಯಗಳನ್ನೊದಗಿಸತಕ್ಕ ಇಂಗ್ಲಿಷ್ ಭಾಷೆಯನ್ನು ಜನರು ಕಲಿಯಲು ಆರಂಭಿಸಿದರು. ಕನ್ನಡ ಭಾಷೆಯು ಹಿನ್ನೆಲೆಗೆ ಸರಿಯಬೇಕಾಯಿತು. ತಮಗೆ ಸಮಾಜದಲ್ಲಿ ಗೌರವವನ್ನೂ ಜೀವನಕ್ಕೆ ಮಾರ್ಗವನ್ನೂ ಕಲ್ಪಿಸಿಕೊಡತಕ್ಕ ಭಾಷೆಯನ್ನು ಜನರು ಆದರದಿಂದ ಕಲಿತು ಕನ್ನಡ ಭಾಷೆಯನ್ನು ಅಲಕ್ಷ್ಯಮಾಡಿದರು. ಹೊಸ ಭಾಷೆಯು ಎಲ್ಲೆಲ್ಲಿಯೂ ರೂಢಿಗೆ ಬರಲು ಪ್ರಾರಂಭವಾಯಿತು. ಆಮೇಲೆ ಕ್ರಮಕ್ರಮವಾಗಿ ಇಂಗ್ಲಿಷ್ ಜನರ ಉಡುಪುಗಳೂ, ಅವರ ಉಡಿಗೆ ತೊಡಿಗೆಗಳೂ, ಅವರ ಪದ್ಧತಿಗಳೂ ಸ್ವಲ್ಪಮಟ್ಟಿಗೆ ನಮಗೂ ಬಂದುವು. ನಮ್ಮ ಮೈಸೂರು ಸಂಸ್ಥಾನದಲ್ಲಿ ಮಾತ್ರವೇ ಅಲ್ಲದೆ ಇಂಡಿಯಾ ದೇಶದ ಇತರ ಸ್ಥಳಗಳಲ್ಲಿಯೂ ಇದೇ ರೀತಿ ಇಂಗ್ಲಿಷ್ ಭಾಷೆಗೆ ಪ್ರಾಶಸ್ತ್ಯ ದೊರೆತು ಆಯಾ ಪ್ರಾಂತದ ದೇಶಭಾಷೆಯು ಹಿಂದೆ ಬೀಳಲೇಬೇಕಾಯಿತು. ನಾನು ಆಗಲೇ ಹೇಳಿದಂತೆ ಇಂಡಿಯಾ ದೇಶಕ್ಕೆ ಸಸ್ಯಶಾಸ್ತ್ರ, ಪ್ರಾಣಿಶಾಸ್ತ್ರ, ವಿಜ್ಞಾನಶಾಸ್ತ್ರ, ಇವುಗಳು ಬಂದಾಗ, ಅವುಗಳು ನಮ್ಮ ಭಾಷೆಯಲ್ಲಿ ಇಲ್ಲದಿದ್ದುದರಿಂದ ಇಂಗ್ಲಿಷ್ ಭಾಷೆಯನ್ನು

ಕಲಿಯಬೇಕಾಗಿ ಬಂದಿತು. ಕಾಲಕ್ರಮೇಣ ಇಂಗ್ಲಿಷ್ ಭಾಷೆಗೆ ಹೆಚ್ಚು ಮನ್ನಣೆ ದೊರೆಯಲು ಪ್ರಾರಂಭವಾಗಿ ಸ್ವಭಾಷೆಗೆ ಇದ್ದ ಸ್ಥಾನವು ಕಡಮೆಯಾಯಿತು.

ಮೊದಮೊದಲು ನಮ್ಮ ವಿಶ್ವವಿದ್ಯಾನಿಲಯವು ಸ್ಥಾಪಿತವಾಗುವುದಕ್ಕೆ ಮುಂಚೆ ನಮ್ಮ ಸಂಸ್ಥಾನದ ವಿದ್ಯಾರ್ಥಿಗಳು ಮದರಾಸು ವಿಶ್ವವಿದ್ಯಾನಿಲಯದ ಪರೀಕ್ಷೆಗಳಿಗೆ ಹೋಗುತ್ತಿದ್ದರು. ಆದರೆ ಅಲ್ಲಿ ಕನ್ನಡಭಾಷೆಗೆ ಪ್ರಾಶಸ್ತ್ಯವಿರಲಿಲ್ಲ. ಹೀಗಾಗಿ ನಮ್ಮ ನಾಡಿನ ಕನ್ನಡಭಾಷೆಯು ಏಳಿಗೆಗೆ ಬರುವುದಕ್ಕೆ ಅವಕಾಶವೇ ಇರಲಿಲ್ಲ. ಇದಕ್ಕಾಗಿ ನಮ್ಮ ಮೈಸೂರು ದೇಶದಲ್ಲಿಯೂ ಒಂದು ವಿಶ್ವವಿದ್ಯಾನಿಲಯವನ್ನು ಸ್ಥಾಪಿಸಿದರು. ಇದು ಸ್ಥಾಪಿತವಾದ ಮೇಲೆ ಕನ್ನಡಕ್ಕೆ ಒಂದು ಸ್ಥಾನವು ದೊರೆಯುವಂತಾಯಿತು. ಆಗಿನಿಂದ ನಮ್ಮ ಮೈಸೂರು ವಿಶ್ವವಿದ್ಯಾನಿಲಯದವರು ಕನ್ನಡ ಭಾಷಾಭಿವೃದ್ಧಿಯ ವಿಚಾರದಲ್ಲಿ ಹೆಚ್ಚಿನ ಆಸಕ್ತಿ ವಹಿಸಿದುದರಿಂದಲೂ ಮತ್ತು ಕನ್ನಡ ಸಾಹಿತ್ಯ ಪರಿಷತ್ತಿನವರ ಶ್ರಮದಿಂದಲೂ ಈಗ ಕನ್ನಡ ಸಾಹಿತ್ಯವು ಹೆಚ್ಚು ಹೆಚ್ಚಾಗಿ ಬೆಳೆಯಲು ಅನುಕೂಲವಾಯಿತು. ಇಂದು ನಮ್ಮ ಕನ್ನಡಕ್ಕೆ ಒಂದು ಸ್ಥಾನವು ದೊರೆತಿದ್ದರೆ ಅದು ನಮ್ಮ ವಿಶ್ವವಿದ್ಯಾನಿಲಯದ ಕನ್ನಡ ಪ್ರೇಮಿಗಳಿಂದ ಎಂದು ಹೇಳಬೇಕು.

ಅನೇಕ ಮಹನೀಯರ ಕೋರಿಕೆಯ ಮೇಲೆ ಮೈಸೂರು ಸರ್ಕಾರದವರು ಹೈಸ್ಕೂಲುಗಳಲ್ಲಿ ಕನ್ನಡವನ್ನು ಶಿಕ್ಷಣಭಾಷೆಯನ್ನಾಗಿ ಏರ್ಪಡಿಸಿರುವುದು ತಮ್ಮೆಲ್ಲರಿಗೂ ಗೊತ್ತಿದೆ. ಇದು ೧೯೩೩ನೆಯ ಇಸವಿಯಲ್ಲಿ ಏರ್ಪಾಡಾಯಿತು. ಆಗಿನಿಂದ ಇದುವರೆಗೂ ಇದು ಜಾರಿಯಲ್ಲಿದೆ. ಅದು ಹೇಗೆ ಕೆಲಸಮಾಡುತ್ತಿದೆ ಎಂಬುದೂ ನಮಗೆ ಗೊತ್ತಿದೆ. ಇಷ್ಟೇ ಅಲ್ಲದೆ ಶ್ರೀಮಾನ್ ಎ. ಎನ್. ರಾಮರಾಯರು ಹೇಳಿದಂತೆ ನಮ್ಮ ವಿಶ್ವವಿದ್ಯಾನಿಲಯದಲ್ಲಿರುವ ದೊಡ್ಡದೊಡ್ಡ ವಿದ್ವಾಂಸರು ಸೇರಿ ಕನ್ನಡವನ್ನು ಅಭಿವೃದ್ಧಿಗೆ ತರಬೇಕೆಂಬ ಆಕಾಂಕ್ಷೆಯಿಂದ ಕಳೆದ ಹಲವು ವರ್ಷಗಳಿಂದ ಒಂದು ನಿಘಂಟನ್ನು ರಚಿಸಲು ಶ್ರಮಿಸುತ್ತಿರುವುದು ನಿಮಗೆ ಗೊತ್ತಿದೆ. ಅದು ಪ್ರಕಟವಾಗುವುದರಿಂದ ಕನ್ನಡದ ಪುರೋಭಿವೃದ್ಧಿಗೆ ದೃಢವಾದ ತಳಹದಿಯನ್ನು ಹಾಕಿಕೊಟ್ಟಂತಾಗುತ್ತದೆ.

ಈಗ ಕಾಲೇಜುಗಳಲ್ಲಿ ಕನ್ನಡವನ್ನು ಶಿಕ್ಷಣಭಾಷೆಯನ್ನಾಗಿ ಏರ್ಪಡಿಸುವುದರಿಂದ ಒದಗಬಹುದಾದ ಮತ್ತು ನಾವು ನಿರೀಕ್ಷಿಸಬಹುದಾದ ಕೆಲವು ಅನಾನುಕೂಲಗಳನ್ನು ತಮ್ಮ ಗಮನಕ್ಕೆ ತರಲಿಚ್ಛಿಸುತ್ತೇನೆ. ನಾನು ಹೀಗೆ ಹೇಳಿದ ಮಾತ್ರದಿಂದಲೇ ಕನ್ನಡಕ್ಕೆ ಪ್ರೋತ್ಸಾಹವನ್ನು ನಾನು ಕೊಡುವವನಲ್ಲವೆಂದು ತಾವು ಗಣಿಸಬಾರದು. ಮೊಟ್ಟ ಮೊದಲನೆಯ ತೊಂದರೆಯು ಆರ್ಥಿಕ ವಿಚಾರಕ್ಕೆ ಸಂಬಂಧಪಟ್ಟುದು. ಇಂಗ್ಲಿಷ್

ಭಾಷೆಯನ್ನು ಕಲಿತುಕೊಳ್ಳುತ್ತಿರುವವರು, ಅದು ನಮ್ಮ ದೇಶದಲ್ಲಿ ಪ್ರಾಮುಖ್ಯವಾದ ಭಾಷೆಯೆಂದಾಗಲಿ, ರಾಜಭಾಷೆಯೆಂದಾಗಲಿ ಅಥವಾ ದೇಶಭಾಷೆಯೆಂದಾಗಲಿ ಎಣಿಸಿಕೊಂಡು ಯಾರೂ ಕಲಿಯುತ್ತಿಲ್ಲ. ಆರ್ಥಿಕದೃಷ್ಟಿಯಿಂದ ಅದು ಅನುಕೂಲ ವಾಗಿ ಕಂಡುಬಂದಿರುವುದರಿಂದ ಅದನ್ನು ಕಲಿಯುತ್ತಿದ್ದಾರೆ. ಇಂಗ್ಲಿಷ್ ಭಾಷೆಯು ನಮ್ಮನ್ನು ಮುಂದೆ ಸಾಕುತ್ತದೆ ಮತ್ತು ಅದರಿಂದ ನಮಗೆ ದೊಡ್ಡ ಸ್ಥಾನವೊಂದು ಲಭಿಸುತ್ತದೆ ಎಂಬ ದೃಷ್ಟಿಯಿಂದ ಆ ಭಾಷೆಯನ್ನು ಓದುತ್ತಿದ್ದಾರೆಯೇ ಹೊರತು ಯಾರೂ ಸ್ವಂತ ಭಾಷಾಪ್ರೇಮದಿಂದ ಅದನ್ನು ಓದುತ್ತಿಲ್ಲ. ಎರಡನೆಯದಾಗಿ ನಮ್ಮ ದೇಶದಲ್ಲಿ ತಂದೆತಾಯಿಗಳು ಅವರ ಬಾಲಕ ಬಾಲಕಿಯರು ಇಂಗ್ಲಿಷ್ ಭಾಷೆಯನ್ನು ಕಲಿಯುವುದಕ್ಕಾಗಿ ವಿಪರೀತ ಹಣವನ್ನು ವೆಚ್ಚಮಾಡುತ್ತಿದ್ದಾರೆ. ಅವರು ವೆಚ್ಚ ಮಾಡಿದ ಹಣಕ್ಕೆ ಸರಿಯಾದ ಅನುಕೂಲವು ಲಭಿಸಬೇಕಾದರೆ ಇಂಗ್ಲಿಷ್ ಭಾಷೆ ಯಿರುವುದೇ ಒಳ್ಳೆಯದು. ಸರ್ಕಾರದವರು ಹಠಾತ್ತನೆ ಕನ್ನಡವನ್ನು ಕಾಲೇಜು ಗಳಲ್ಲಿ ಶಿಕ್ಷಣದ ಮುಖ್ಯಭಾಷೆಯನ್ನಾಗಿ ಮಾಡಿದರೆ ಅದರಿಂದ ಆ ತಂದೆತಾಯಿಗಳ ಮೇಲೆಯೂ ಮತ್ತು ಓದುವ ಅವರ ಮಕ್ಕಳ ಮೇಲೆಯೂ ಯಾವರೀತಿಯ ಪರಿಣಾಮ ವುಂಟಾಗುತ್ತದೆಂಬುದನ್ನು ಯೋಚನೆ ಮಾಡಬೇಕು. ಇದಕ್ಕೆ ತಕ್ಕ ಕಾಲವು ಬರುವವರೆಗೂ ಇದನ್ನು ಜಾರಿಗೆ ತರುವುದು ಸೂಕ್ತವಲ್ಲ.

ಈ ಸಂದರ್ಭದಲ್ಲಿ ನಾವು ಮತ್ತೊಂದು ಅಂಶವನ್ನು ಗಮನದಲ್ಲಿಟ್ಟುಕೊಳ್ಳ ಬೇಕಾಗಿದೆ. ನಮ್ಮ ಮೈಸೂರು ಸಂಸ್ಥಾನದ ವಿಶ್ವವಿದ್ಯಾನಿಲಯದಲ್ಲಿ ತರಪೇತಾದ ವಿದ್ಯಾರ್ಥಿಗಳೆಲ್ಲರಿಗೂ ಮುಂದೆ ನಮ್ಮ ದೇಶದಲ್ಲಿಯೇ ನೌಕರಿಗಳು ಸಿಕ್ಕುತ್ತವೆ ಎಂಬ ಭರವಸೆ ಇಲ್ಲ. ನಮ್ಮ ದೇಶದಲ್ಲಿ ವ್ಯಾಸಂಗವನ್ನು ಮುಗಿಸಿದ ವಿದ್ಯಾರ್ಥಿಗಳು ಹೊರಗಡೆ ಹೋದರೆ ಅವರಿಗೆ ಅವಕಾಶವಿರಬೇಕೆಂಬುದನ್ನು ನಾವು ಯೋಚನೆ ಮಾಡಬೇಕು. ಅವರಿಗೆ ಇಂಗ್ಲಿಷಿನಲ್ಲಿ ಶಿಕ್ಷಣವಾಗಿಲ್ಲದಿದ್ದರೆ ಅಲ್ಲಿ ಅವರಿಗೆ ಉದ್ಯೋಗಗಳು ದೊರೆಯುವ ಬಗೆ ಹೇಗೆ? ಸದ್ಯಕ್ಕೇನೋ, ಅಲ್ಲೆಲ್ಲ ಇಂಗ್ಲಿಷ್ ಭಾಷೆಯು ಪ್ರಚಾರದಲ್ಲಿದೆ. ಆದುದರಿಂದ ಈಗ ನಾವು ಇದನ್ನು ಕುರಿತು ಆಲೋಚಿಸ ಬೇಕು. ಆದರೆ ಇಂಡಿಯಾ ದೇಶದ ಎಲ್ಲಾ ವಿಶ್ವವಿದ್ಯಾನಿಲಯಗಳವರೂ ಈಗ ಇಂಗ್ಲಿಷಿಗಿರುವ ಪ್ರಾಶಸ್ತ್ಯವನ್ನು ತಪ್ಪಿಸಿ ಆಯಾ ದೇಶಭಾಷೆಗೆ ಪ್ರಾಶಸ್ತ್ಯವನ್ನು ಕೊಡುವಂತೆ ಏರ್ಪಾಡಿಸಿಕೊಂಡಾಗ್ಗೆ ನಾವೂ ಅದೇ ರೀತಿ ಮೈಸೂರು ಸಂಸ್ಥಾನ ದಲ್ಲಿ ಕನ್ನಡಕ್ಕೆ ಪ್ರಾಶಸ್ತ್ಯ ಕೊಡಬಹುದು. ತಾವು ಈಗ ಉಸ್ಮಾನಿಯ ವಿಶ್ವವಿದ್ಯಾ ನಿಲಯವನ್ನು ಉದಾಹರಿಸಬಹುದು. ಅಲ್ಲಿ ಉರ್ದು ಭಾಷೆಯನ್ನೇ ಬೋಧನೆಯ ಭಾಷೆಯನ್ನಾಗಿಟ್ಟುಕೊಂಡಿರುತ್ತಾರೆ. ಈ ಕಾರಣದಿಂದಲೇ ಆ ವಿಶ್ವವಿದ್ಯಾನಿಲಯ

ದಲ್ಲಿ ತೇರ್ಗಡೆಯಾದವರನ್ನು ಬೇರೆಕಡೆಯವರು ಅಂಗೀಕಾರ ಮಾಡದೆ ಇರುವುದು. ಇದನ್ನು ನಮ್ಮ ಮನಸ್ಸಿಗೆ ತಂದುಕೊಂಡು, ನಾವೂ ಕೂಡ ಕನ್ನಡವನ್ನೇ ವಿಶ್ವ ವಿದ್ಯಾನಿಲಯಗಳಲ್ಲಿ ಶಿಕ್ಷಣಭಾಷೆಯನ್ನಾಗಿ ಮಾಡಿದರೆ ಇದರಿಂದ ನಮ್ಮ ಹುಡುಗ ರಿಗೆ ಪ್ರಯೋಜನವು ಹೆಚ್ಚಾಗಿ ಆಗುತ್ತದೆಯೇ ಹೇಗೆ ಎಂಬುದನ್ನು ಯೋಚನೆ ಮಾಡಬೇಕು. ಆದುದರಿಂದ ಕರ್ಣಾಟಕದವರೆಲ್ಲರೂ ಸೇರಿ, ನಮ್ಮ ಶ್ರೀಮನ್ ಮಹಾರಾಜರವರು ಕರ್ಣಾಟಕ ಸಿಂಹಾಸನಾಧೀಶ್ವರರಾದಕಾರಣ ನಮ್ಮ ವಿಶ್ವವಿದ್ಯಾ ನಿಲಯವನ್ನು ಕರ್ಣಾಟಕ ವಿಶ್ವವಿದ್ಯಾನಿಲಯವೆಂದು ತಿಳಿದುಕೊಂಡು, ಕೆಲಸ ಮಾಡುವುದಕ್ಕೆ ಪ್ರಾರಂಭಿಸಿದರೆ, ಆಗ ಈ ಸಮಸ್ಯೆಯು ಇಷ್ಟು ಕಠಿಣತರವಾಗಿರುವು ದಿಲ್ಲವೆಂದು ನನ್ನ ಭಾವನೆ.

ಮತ್ತೊಂದು ವಿಷಯವೇನೆಂದರೆ, ಸರಿಯಾದ ಪಠ್ಯಪುಸ್ತಕಗಳ ಅಭಾವ. ಈ ಕಷ್ಟವೇನೋ ಈಗ ಇರುವುದು ನಿಜ. ಪಠ್ಯಪುಸ್ತಕಗಳು ನಾನಾವಿಧವಾಗಿವೆ. ಚರಿತ್ರೆ ಮತ್ತು ಆರ್ಟ್ಸ್ ಪುಸ್ತಕಗಳೇ ಅಲ್ಲದೆ ಪಾರಿಭಾಷಿಕ (technical) ಕಾಲೇಜು ಗಳಾದ ಇಂಜನಿಯರಿಂಗ್ ಮತ್ತು ಮೆಡಿಕಲ್ ಕಾಲೇಜುಗಳಲ್ಲಿ ಕನ್ನಡದಲ್ಲಿ ಪುಸ್ತಕ ಗಳು ಸಿಕ್ಕುವುದೇ ದುರ್ಲಭ. ಈ ಪಾರಿಭಾಷಿಕ ಕಾಲೇಜುಗಳಲ್ಲಂತೂ ಸರಿಯಾದ ಶಿಕ್ಷಣವು ದೊರೆಯಬೇಕಾದರೆ ಒಳ್ಳೆಯ ಪಠ್ಯಪುಸ್ತಕಗಳು ಇರಬೇಕಾದುದು ಬಹಳ ಆವಶ್ಯಕವೆಂಬುದನ್ನು ನಾನು ಹೇಳಬೇಕಾಗಿಲ್ಲ. ಇನ್ನೊಂದು ವಿಷಯ. ಈಗಲೂ ಕೂಡ ನಮ್ಮ ಮೆಡಿಕಲ್ ಗ್ರಾಜ್ಯುಯೇಟುಗಳಿಗೆ ನಮ್ಮ ಸಂಸ್ಥಾನದ ಹೊರಗಡೆ ಅವರ ಡಿಗ್ರಿಗಳಿಗೆ ಅಂಗೀಕಾರ ದೊರೆಯದಿರುವುದು ತಮಗೆ ತಿಳಿದಿರುವ ವಿಷಯವೇ ಆಗಿದೆ. "ಇಂಡಿಯನ್ ಮೆಡಿಕಲ್ ಕೌನ್ಸಿಲ್" ಸಭೆಯವರು ನಮ್ಮ ವಿಶ್ವವಿದ್ಯಾನಿಲಯದ ಡಿಗ್ರಿಯನ್ನು ಅಂಗೀಕರಿಸಿಲ್ಲ. ಆದಕಾರಣ, ಇಲ್ಲಿಯ ಮೆಡಿ ಕಲ್ ಗ್ರಾಜ್ಯುಯೇಟುಗಳಿಗೆ ಸಂಸ್ಥಾನದ ಹೊರಗೆ ಉದ್ಯೋಗಗಳು ದೊರೆಯು ವುದಕ್ಕೂ ಅವರು ಮುಂದೆ ಸರಿಯಾದ ಸ್ಥಿತಿಗೆ ಬರುವುದಕ್ಕೂ ನಮ್ಮ ವಿಶ್ವವಿದ್ಯಾ ನಿಲಯದ ಡಿಗ್ರಿ ಪ್ರಶಸ್ತಿಗಳಿಗೆ ಅಂಗೀಕಾರ ಇರಬೇಕಾದುದು ಅತ್ಯಗತ್ಯ. ಈಗಲೇ ಸ್ಥಿತಿಯು ಹೀಗಿದೆ. ಕನ್ನಡವು ಶಿಕ್ಷಣ ಭಾಷೆಯಾದರೆ, ಅದರಿಂದ ಅಂಗೀಕಾರ ದೊರೆಯುವುದು ಇನ್ನೂ ಕಷ್ಟವಾಗುತ್ತದೆ. ಇದನ್ನು ಪಡೆಯಬೇಕಾದರೆ ಸರಿಯಾದ ಪಠ್ಯಪುಸ್ತಕಗಳು ನಮ್ಮ ಕಾಲೇಜುಗಳಲ್ಲಿಯೂ ಇದ್ದ ಹೊರತು ಸಾಧ್ಯವಿಲ್ಲ.

ಕೊನೆಯದಾಗಿ, ಈ ನಿರ್ಣಯವನ್ನು ಒಪ್ಪಿಕೊಳ್ಳುವುದರಲ್ಲಿರುವ ಮುಖ್ಯವಾದ ತೊಂದರೆಯನ್ನು ತಮಗೆ ತಿಳಿಸಬೇಕಾಗಿದೆ. ಅದೇನೆಂದರೆ, ಆರ್ಥಿಕದೃಷ್ಟಿಯಿಂದ ಈ ಕಾರ್ಯವನ್ನು ಕೈಕೊಳ್ಳುವುದಕ್ಕೆ ಸಾಧ್ಯವಿಲ್ಲವೆಂಬುದು. ಈಗ ತಾವು ಹೇಳುವ

ಪದ್ಧತಿಯನ್ನು ನಮ್ಮ ವಿಶ್ವವಿದ್ಯಾನಿಲಯದಲ್ಲಿ ಜಾರಿಗೆ ತಂದರೆ ಆಗ ವಿಶ್ವವಿದ್ಯಾನಿಲಯದ ವೆಚ್ಚವು ಹೆಚ್ಚಾಗುತ್ತದೆ. ಮೊದಲನೆಯದಾಗಿ, ಎಲ್ಲಾ ಪಠ್ಯಪುಸ್ತಕಗಳನ್ನೂ ಕನ್ನಡಕ್ಕೆ ತರ್ಜುಮೆಮಾಡಿಸಬೇಕಾದರೆ, ಅದಕ್ಕೆ ಬಹಳ ಹಣಬೇಕಾಗುತ್ತದೆ. ಈಗ ಹೈದರಾಬಾದಿನಲ್ಲಿ ಇದಕ್ಕಾಗಿ ಅನೇಕ ಕೋಟಿ ರೂಪಾಯಿಗಳನ್ನು ಖರ್ಚುಮಾಡಿದ್ದಾರೆ. ಎರಡನೆಯದಾಗಿ, ನಾವು ಕನ್ನಡವನ್ನು ವಿಶ್ವವಿದ್ಯಾನಿಲಯದಲ್ಲಿ ಪಾಠಹೇಳತಕ್ಕ ಮುಖ್ಯಭಾಷೆಯನ್ನಾಗಿ ಏರ್ಪಡಿಸಿದ ಮಾತ್ರಕ್ಕೇ ಇಂಗ್ಲಿಷ್ ತರಗತಿಗಳನ್ನು ತೆಗೆದುಬಿಡುವುದಕ್ಕಾಗುವುದಿಲ್ಲ. ಎಂದರೆ ಕನ್ನಡಬಾರದೆ ಇರತಕ್ಕವರ ಸೌಕರ್ಯಕ್ಕಾಗಿಯಾದರೂ ಹೈಸ್ಕೂಲುಗಳಲ್ಲಿ ಮಾಡಿರುವ ರೀತಿಯಲ್ಲಿ ಇಂಗ್ಲಿಷಿನಲ್ಲಿ ಪಾಠಹೇಳತಕ್ಕ ತರಗತಿಗಳನ್ನು ನಾವು ಏರ್ಪಡಿಸಬೇಕಾಗುತ್ತದೆ. ಇದಕ್ಕೆ ಬೇರೆ ವೆಚ್ಚವು ಬೀಳುತ್ತದೆ. ಆದುದರಿಂದ ನಾವು ಈಗಿರುವ ಪದ್ಧತಿಯನ್ನು ಬದಲಾವಣೆ ಮಾಡುವುದಕ್ಕೆ ಮುಂಚೆ ಇವೆಲ್ಲವನ್ನೂ ವಿಮರ್ಶೆಮಾಡಬೇಕಾದುದು ಅತ್ಯಗತ್ಯ.

ಒಟ್ಟಿನಲ್ಲಿ ಒಂದು ಮಾತನ್ನು ಹೇಳಬಹುದು. ಈ ನಿರ್ಣಯದಲ್ಲಿರುವ ಒಂದು ಮುಖ್ಯ ತತ್ತ್ವವು ಎಲ್ಲರಿಗೂ ಬೇಕಾದುದಾಗಿದೆ. ಅದು ಎಲ್ಲರ ಆಸೆ, ಕನ್ನಡಿಗರ ಆಸೆ, ಮತ್ತು ನಮ್ಮ ಒಟ್ಟು ಮೈಸೂರು ಸಂಸ್ಥಾನದಲ್ಲಿರುವ ಎಲ್ಲರ ಆಸೆ. ಒಂದಾನೊಂದು ದಿವಸ ನಮ್ಮ ಸಂಸ್ಥಾನದಲ್ಲಿ ಕರ್ಣಾಟಕ ವಿಶ್ವವಿದ್ಯಾನಿಲಯವನ್ನು ಸ್ಥಾಪಿಸಬೇಕೆಂಬುದು ಒಟ್ಟು ಮೈಸೂರಿನವರ ಆಸೆಯೇ ಆಗಿದೆ. ಆದರೆ ಈಗಿನ ಸ್ಥಿತಿಯಲ್ಲಿ, ಈ ನಿರ್ಣಯದ ವಿಷಯವಾಗಿ ಏನನ್ನೂ ಹೇಳುವುದಕ್ಕಾಗುವುದಿಲ್ಲ. ಅದು ಎಷ್ಟರಮಟ್ಟಿಗೆ ಸಾಧ್ಯ, ಎಷ್ಟರಮಟ್ಟಿಗೆ ಅಸಾಧ್ಯ, ಆದರಿಂದ ದೇಶಕ್ಕೆ ಎಷ್ಟರಮಟ್ಟಿಗೆ ಕ್ಷೇಮವಾಗುತ್ತದೆ, ಅದರ ಸಾಧಕಬಾಧಕಗಳೇನು, ಇಂಡಿಯಾ ದೇಶದ ಇತರ ವಿಶ್ವವಿದ್ಯಾನಿಲಯಗಳೊಡನೆ ನಮಗೆ ಯಾವ ರೀತಿಯ ಸಂಬಂಧವಿರಬೇಕು, ಇದು ಆರ್ಥಿಕ ದೃಷ್ಟಿಯಿಂದ ಎಷ್ಟು ಕಷ್ಟಸಾಧ್ಯವಾದುದು—ಎಂಬಿವೇ ಮುಂತಾದ ವಿಷಯಗಳನ್ನು ನಾವು ಕೂಲಂಕಷವಾಗಿ ಪರ್ಯಾಲೋಚನೆಮಾಡಬೇಕು. ಅವುಗಳನ್ನೆಲ್ಲ ಕುರಿತು ಆಲೋಚನೆಮಾಡಿದಲ್ಲದೆ ತೀರ್ಮಾನಕ್ಕೆ ಬರುವುದು ಸಾಧ್ಯವಿಲ್ಲ. ಈ ನಿರ್ಣಯವನ್ನು ಜಾರಿಗೆ ತರುವುದರಲ್ಲಿ ಅನೇಕ ಕಷ್ಟಗಳಿರಬಹುದು. ಆದರೆ ಅವುಗಳನ್ನು ಪರಿಹರಿಸುವುದು ಅಸಾಧ್ಯವಾಗಿಲ್ಲದೆ ಇದ್ದರೂ ಇರಬಹುದು; ಕೂಲಂಕಷವಾಗಿ ಪರಿಶೀಲಿಸಿ ಯೋಚಿಸಿದಲ್ಲದೆ ಈಗಲೇ ಯಾವುದೊಂದನ್ನೂ ಹೇಳುವಂತಿಲ್ಲ. ಆದಕಾರಣ ತಮ್ಮ ಈ ಸಲಹೆಯನ್ನು ಯೂನಿವರ್ಸಿಟಿ ಕೌನ್ಸಿಲಿಗೆ ಕಳುಹಿಸಿಕೊಟ್ಟು ಅವರ ಅಭಿಪ್ರಾಯವನ್ನೂ ತೆಗೆದುಕೊಂಡು ಈ ನಿರ್ಣಯವನ್ನು ಪರಿಶೀಲಿಸುತ್ತೇವೆ. ಹಾಗೆ ಮಾಡದೆ ಏಕಾಏಕಿ ಅವಸರವಾಗಿ ಯಾವ ಕಾರ್ಯವನ್ನೂ ಮಾಡುವುದು ಒಳ್ಳೆಯದಲ್ಲ. ಇಷ್ಟು ಭರವಸೆಯನ್ನು ಮಾತ್ರ ನಾನು ಕೊಡಬಲ್ಲೆನು. ಈ ಭರವಸೆಯ

ಮೇಲೆ ನಿರ್ಣಯದ ಸೂಚಕರು ಇದನ್ನು ವಾಪಸು ತೆಗೆದುಕೊಳ್ಳುತ್ತಾರೆಂದು ನಾನು ನಂಬಿದ್ದೇನೆ.

ಈ ವಿಚಾರದಲ್ಲಿ ಮುಂದೆ ಯಾವರೀತಿ ಮಾಡಬೇಕೆಂಬುದನ್ನು ಯೋಚನೆಮಾಡುತ್ತೇವೆ. ಯಾವುದಕ್ಕೂ ಈ ವಿಚಾರದಲ್ಲಿ ಅನುಭವಸ್ಥರ ಅಭಿಪ್ರಾಯವನ್ನು ತೆಗೆದುಕೊಳ್ಳದೆ ಏನನ್ನೂ ಹೇಳುವುದಕ್ಕಾಗುವುದಿಲ್ಲ. ಯೂನಿವರ್ಸಿಟಿ ಕೌನ್ಸಿಲ್ ಸಭೆಯಲ್ಲಿಯೂ ಕನ್ನಡದ ಅಭಿಮಾನಿಗಳಿದ್ದಾರೆ. ಅವರು ಹೇಳುವುದೆಲ್ಲವನ್ನೂ ಕೇಳಿದ ಹೊರತು ಇದನ್ನು ಒಪ್ಪಿಕೊಳ್ಳಬೇಕೇ ಬಿಡಬೇಕೇ ಎಂಬುದನ್ನು ನಿರ್ಧರವಾಗಿ ಹೇಳಲು ಸಾಧ್ಯವಿಲ್ಲ. ಇಷ್ಟುಮಾತ್ರ ನಾನು ಹೇಳಬಲ್ಲೆ; ಸರ್ಕಾರದವರೂ ಈ ವಿಚಾರದಲ್ಲಿ ಬಹಳ ಸಹಾನುಭೂತಿಯುಳ್ಳವರಾಗಿ ಇದನ್ನು ಪರಿಶೀಲನೆಮಾಡುತ್ತಾರೆಂದು. ನಮ್ಮ ಸಂಸ್ಥಾನದಲ್ಲಿ ಕನ್ನಡಕ್ಕೆ ಸರಿಯಾದ ಸ್ಥಾನಮಾನಗಳನ್ನು ಕೊಡಬೇಕೆಂದು ಎಲ್ಲರಿಗೂ ಇಷ್ಟ. ಆದರೆ ಇದಕ್ಕೆ ಸಂಬಂಧಪಟ್ಟ ವಿಚಾರಗಳನ್ನು ತೀರ್ಮಾನಿಸುವುದು ಒಂದು ದಿವಸದಲ್ಲಿ ಆಗುವುದಿಲ್ಲ. ಇದರಲ್ಲಿ ಅನೇಕ ಸಮಸ್ಯೆಗಳಿವೆ. ಅವೆಲ್ಲಾ ಬಗೆಹರಿಯಬೇಕು. ಆಮೇಲೆ ಏನುಮಾಡಬೇಕೋ ಅದನ್ನು ಮಾಡುತ್ತೇವೆ.

ಶ್ರೀಮಾನ್ ಕೆ. ಹನುಮಂತಯ್ಯನವರು

ಈ ವಿಚಾರವನ್ನು ಪರಿಶೀಲಿಸಲು ಸರ್ಕಾರದವರು ಯೂನಿವರ್ಸಿಟಿ ಕೌನ್ಸಿಲಿಗಿಂತಲೂ ಈ ಸಭಾಸದಸ್ಯರನ್ನು ಒಳಗೊಂಡ ಒಂದು ಸಮಿತಿಯನ್ನು ಮಾಡಿದರೆ ಒಳ್ಳೆಯದೆಂದು ನನ್ನ ಸಲಹೆ.

ಶ್ರೀಮಾನ್ ಟಿ. ತಿಮ್ಮಾಜಯ್ಯನವರು

ಈ ನಿರ್ಣಯಕ್ಕೆ ಬೆಂಬಲವನ್ನು ಕೊಟ್ಟಿರತಕ್ಕ ಮಹನೀಯರಿಗೆ ನನ್ನ ವಂದನೆಗಳು. ಈ ನಿರ್ಣಯದ ವಿಚಾರವಾಗಿ ಸದಸ್ಯರ ಅಭಿಮತವನ್ನು ಕೇಳಬೇಕೆಂದು ನಾನು ಒತ್ತಾಯಮಾಡುತ್ತೇನೆ.

ಶ್ರೀಮಾನ್ ಎಸ್. ಎ. ಎಂ. ರಜ್ವಿಯವರು

ಸ್ವಾಮಿ, ಮುಸ್ಲಿಂ ಲೀಗ್ ಪಕ್ಷದ ಸದಸ್ಯರು ಇದಕ್ಕೆ ವಿರೋಧವಾಗಿದ್ದಾರೆಂದು ಆ ಪಕ್ಷದ ಪರವಾಗಿ ನಾನು ತಿಳಿಸುತ್ತೇನೆ.

(ಅನಂತರ ನಿರ್ಣಯದ ವಿಚಾರದಲ್ಲಿ ಅಭಿಮತಗಳನ್ನು ಕೇಳಲಾಯಿತು. ೩೫ ಮಂದಿ ಸದಸ್ಯರು ವಿರೋಧವಾಗಿಯೂ ಇನ್ನುಳಿದ ಬಹುಮಂದಿ ಸದಸ್ಯರು ಎಂದರೆ ೨೫೩ ಮಂದಿ ಸದಸ್ಯರು ನಿರ್ಣಯದ ಪರವಾಗಿಯೂ ಅಭಿಮತಗಳನ್ನು ಕೊಟ್ಟರು. ನಿರ್ಣಯವು ಬಹುಮತದಿಂದ ಅಂಗೀಕೃತವಾಯಿತು.)

ವಡ್ಡಾರಾಧನೆಯೆಂಬ ಹಳಗನ್ನಡ ಗದ್ಯಗ್ರಂಥ[1]

(ಕರ್ತೃತ್ವ ಮತ್ತು ಕಾಲವಿಚಾರ)

೧೮೮೩ನೆಯ ಇಸವಿಯಷ್ಟು ಹಿಂದೆಯೇ ಕೆ.ಬಿ. ಪಾಠಕರೂ ಅವರನ್ನು ಅನುಸರಿಸಿ ಜೆ. ಎಫ್. ಫ್ಲೀಟರೂ ಪಂಚಮಹಾಶಬ್ದ, ನಿಸಿಧಿ ಮುಂತಾದ ಕೆಲವು ಪದಗಳ ಅರ್ಥವಿವರಣೆ ಮಾಡುವುದಕ್ಕಾಗಿ ರೇವಾಕೋಟ್ಯಾಚಾರ್ಯ ರಚಿತವಾದ 'ಉಪಸರ್ಗ ಕೇವಲಿಗಳ ಕಥೆ' ಎಂದು ಅವರೇ ಕರೆದಿರುವ ಗ್ರಂಥದಿಂದ ಕೆಲವು ಪಂಕ್ತಿಗಳನ್ನು ಉದ್ಧರಿಸಿ ಪ್ರಕಟಿಸಿದರು.[2] ಅವರು ಉಪಯೋಗಿಸಿದ ಪ್ರತಿಯ ವಿಚಾರವಾಗಿ ನನಗೆ ತಿಳಿದಮಟ್ಟಿಗೆ ಅವರು ಯಾವ ಸಂಗತಿಯನ್ನೂ ತಿಳಿಸಿಲ್ಲ. ಆದರೆ ಫ್ಲೀಟರ ಮತ್ತೊಂದು ಟಿಪ್ಪಣಿಯಿಂದ[3] ಆ ಪ್ರತಿಯ ಹೊಲಬು ನನಗೆ ಪ್ರಾಸಂಗಿಕವಾಗಿ ತಿಳಿದುಬಂದ ಮೇಲೆ ಕೊಲ್ಲಾಪುರದ ಶ್ರೀ ಲಕ್ಷ್ಮೀಸೇನ ಭಟ್ಟಾರಕರ ಜೈನಮಠದಲ್ಲಿ ಅದಕ್ಕಾಗಿ ಬಲು ಎಚ್ಚರಿಕೆಯಿಂದ ಹುಡುಕಿದೆನು; ಮೇಲೆ ಹೇಳಿದ ಹೆಸರನ್ನೇ ಹೆಚ್ಚುಕಡಮೆ ಹೊಂದಿರುವ ಒಂದು ಓಲೆಯ ಗ್ರಂಥ ನನಗೆ ಸಿಕ್ಕಿತು (ಓಲೆ ಪ್ರತಿ ನಂ. ೪೫)[4]; ಅದರ ಮರದ ಪಟ್ಟಿಯ ಮೇಲೆ ಈ ಹೆಸರು

---

1 ಸಿಂಘೀ ಗ್ರಂಥಮಾಲೆಯಲ್ಲಿ ಮುದ್ರಿತವಾಗುತ್ತಿರುವ ಹರಿಷೇಣ ಕಥಾಕೋಶದ ಇಂಗ್ಲಿಷ ಪ್ರಸ್ತಾವನೆಯ ಒಂದು ಭಾಗವಿದು. ಆ ಗ್ರಂಥವು ನಾಲ್ಕಾರು ತಿಂಗಳಲ್ಲಿ ಪ್ರಕಟವಾಗಬಹುದು. ಕನ್ನಡಪಂಡಿತರ ವಿಮರ್ಶನೆಯ ಲಾಭವು ದೊರೆಯಬೇಕೆಂದು ಆ ಭಾಗದ ಕನ್ನಡ ಸಾರಾನುವಾದವನ್ನು ಇಲ್ಲಿ ಕೊಟ್ಟಿದೆ.

2 *Indian Antiquary*, XII, pp. 95f., 99f.

3 ಅದೇ. ಪು. 216.

4 ಈ ಕೊಲ್ಲಾಪುರ ಪ್ರತಿಯ ಸ್ವರೂಪ ಹೀಗಿದೆ: ಎರಡು ಕಡೆಯೂ ಲಿಖಿತವಾದ ೧೪೭ ಪತ್ರಗಳನ್ನುಳ್ಳ ಓಲೆಯ ಗ್ರಂಥವಿದು; ಕೊನೆಯ ಪುಟ ಖಾಲಿ ಇದೆ. ರಕ್ಷಾಪಟ್ಟಿಗಳನ್ನು ಬಿಟ್ಟು ಅದರ ಗಾತ್ರ ಸುಮಾರು ೧೧·೭೫ × ೧·೫ × ೭ ಇಂಚುಗಳು. ದಾರ ಪೋಣಿಸುವ ವೆಜ್ಜ ಮತ್ತು ಅದನ್ನು ಬಳಸಿರುವ ಜಾಗ ಕಾರಣವಾಗಿ ಪ್ರತಿ ಪುಟದ ಬರವಣಿಗೆಯೂ ಮೂರು ಭಾಗಗಳಾಗಿ ವಿಭಕ್ತವಾಗಿದೆ. ಪಂಕ್ತಿಯೊಂದಕ್ಕೆ ೫೫-೬೦ ಅಕ್ಷರಗಳನ್ನುಳ್ಳ ೮ ಪಂಕ್ತಿಗಳು ಪ್ರತಿ ಪುಟದಲ್ಲಿಯೂ ಇವೆ. ಲಿಪಿ ಹಳಗನ್ನಡ; ಱಕಾರಳಕಾರಗಳನ್ನು ಬಳಸಿದೆ; ಆ ಲಿಪಿಯ ಇನ್ನೂ ಕೆಲವು ವೈಲಕ್ಷಣ್ಯಗಳು ಎಂದರೆ, ಹ್ರಸ್ವ ದೀರ್ಘಗಳಿಗೆ ಪ್ರತ್ಯೇಕವಾದ ಚಿಹ್ನೆಗಳಿಲ್ಲದಿರುವುದೂ ಅಲ್ಪಪ್ರಾಣ ಮಹಾ

ಬರೆದಿದೆ. ಈ ಪ್ರತಿಯ ೧೧೩(*a*)–೧೧ಳನೆಯ ಪತ್ರಗಳಲ್ಲಿ ಕೆ. ಬಿ. ಪಾಠಕರು ಉದ್ಧರಿಸಿರುವ ದೀರ್ಘತರವಾದ ಉದ್ಧರಣವು ಕಾಣುತ್ತದೆ. ಗ್ರಂಥನಾಮವಾದ 'ಉಪಸರ್ಗಕೇವಲಿ ಕಥೆ' ಎಂಬುದನ್ನು ಮರದ ಪಟ್ಟಿಕೆಯ ಮೇಲೆ ಹಳಗನ್ನಡದ ಅಕ್ಷರಗಳಲ್ಲಿ ಕೊರೆದಿದೆ; ಈ ಹೆಸರು ಅನುಕೂಲವಾಗಿ ಕಂಡ ಊಹೆಯ ಹೆಸರೆಂದು ಕಾಣುತ್ತದೆ; ಬಹುಶಃ ಆ ಪುಸ್ತಕ ಭಂಡಾರದ ಅಧಿಕಾರಿ ಗ್ರಂಥದ ಆರಂಭದಲ್ಲಿರುವ ಕೆಲವು ಪಂಕ್ತಿಗಳನ್ನು ನೋಡಿ ಇಟ್ಟ ಹೆಸರಾಗಿರಬೇಕು. ಗ್ರಂಥದ ಒಳಗಡೆ ಎಲ್ಲಿಯೂ ಈ ಹೆಸರು ಕಾಣುವುದಿಲ್ಲ. 'ಸುಕುಮಾರಸ್ವಾಮಿ' ಎಂಬುದು ಆರಂಭದಲ್ಲಿರುವ ಪದ; ಗ್ರಂಥದ ಪರಿಸಮಾಪ್ತಿ ಭಾಗದಲ್ಲಿ ಕೆಳಗೆ ಕಂಡಂತೆ ಇದೆ:

> ಯಿಾ ಪೇಳ್ದ ಪತ್ತೊಂಭತ್ತು ಕಥೆಯ ರೇವಾಕೋಟ್ಯಾಚಾರ್ಯಪ್ಪೇೞ್ದ
> ವಡ್ಡಾರಾಧನೆಯ ಕವಚಮೆಂಬಧಿಕಾರಊ।

ಈ ಮಾತುಗಳೂ ಇದುವರೆಗೆ ಈ ಪ್ರತಿಯ ವಿಚಾರವಾಗಿ ಬರೆದಿರುವುದೂ ಈ ಗ್ರಂಥನನ್ನ ಮಿತ್ರರಾದ ಶ್ರೀ ಡಿ. ಎಲ್. ನರಸಿಂಹಾಚಾರ್, ಮೈಸೂರು, ಅವರು ಸಂಪಾ

ಪ್ರಾಣಗಳಿಗೆ ವ್ಯತ್ಯಾಸಮಾಡದಿರುವುದೂ ಈ ಬರವಣಿಗೆಯಲ್ಲಿವೆ. ಗ್ರಂಥವು ಆರಂಭವಾಗುವುದು ಹೀಗೆ:

> ಸುಕುಮಾರಸ್ವಾಮಿ॥ ನಮಃಸಿದ್ಧೇಭ್ಯಃ॥ ಇಂದಸಮವಂದಿಯಾಣಂ ಇತ್ಯಾದಿ॥ ಏಸ ಸುರಾಸುರ ಇತ್ಯಾದಿ॥ ತಿಲೋಯಸವ್ವಜೀವಾಣಂ ಹಿಯಂ ಧಮ್ಮೋವದೇಸಿಣಂ। ವಡ್ಢಮಾಣಂ ಮಹಾವೀರಂ ವಂದಿತ್ತಾ ಸವ್ವ ವೇಇಣಂ॥ ನಮಃ ಶ್ರೀವರ್ಧಮಾನಾಯ ಇತ್ಯಾದಿ॥ ಯೆಂದಿಂತು ಶ್ರೀವರ್ಧಮಾನ ಭಟ್ಟಾರಕರ್ಗ್ಗೆ ಇಶ್ಯಾದಿ.

ಕೊನೆಯ ಕಥೆಯ ಅಂತ್ಯದಲ್ಲಿ ಅಶುದ್ಧ ಪಾಠಗಳಿಂದ ತುಂಬಿದ ಮೂರು ಪ್ರಾಕೃತ ಪದ್ಯಗಳಿವೆ: ಜದಿ ತಾ ಏವಂ ಇತ್ಯಾದಿ॥ ಕಿಂ ಪುಣ ಇತ್ಯಾದಿ॥ ಜಿಣವಯಣ ಇತ್ಯಾದಿ॥ ಅನಂತರ ಈ ಕನ್ನಡಗದ್ಯವಿದೆ:

ಈ ಪೇಳ್ದ ಪತ್ತೊಂಭತ್ತು ಕಥೆಯ ರೇವಾಕೋಟ್ಯಾಚಾರ್ಯಪ್ಪೇೞ್ದ ವಡ್ಡಾರಾಧನೆಯ ಕವಚಮೆಂಬಧಿಕಾರಊ॥ ಶ್ರೀ ಪಂಚಗುರುವೇ ಶರಣು॥ ಪ್ಲವಸಂವತ್ಸರದ ಕಾರ್ತಿಕ ಸುದ ೧ ಸುಕ್ರವಾರ ಬೇಲೂರ ಚಂದ್ರಯ್ಯ ವೈಶ್ಯರ ಚಂದ್ರಯ್ಯನು ವಡ್ಡಾರಾಧನೆಯ ಪುಸ್ತಕವನು ಬರದನು ಮಂಗಲಮಹಾಶ್ರೀ॥

ಅಡ್ಡಲಾಗಿ ಮುರಿದಿರುವ, ಆದರೆ ಈಚೆಗೆ ಹೊಲಿದಿರುವ ಕೆಲವು ಪತ್ರಗಳು ಹೊರತಾಗಿ ಈ ಪ್ರತಿ ಸಮಗ್ರವಾದ ಸ್ಥಿತಿಯಲ್ಲಿದೆ. ಇದನ್ನು ಪ್ರತಿ ಮಾಡಿದ್ದು ಮೈಸೂರು ಸಂಸ್ಥಾನದ ಬೇಲೂರಿನಲ್ಲಿ. ಪ್ರತಿಯಾದ ಶಕ ವರ್ಷ ಕೊಟ್ಟಿಲ್ಲ. ಪ್ರತಿಯ ಸ್ಥಿತಿಯನ್ನು ನೋಡಿದರೆ ಅದು ಬಹು ಹಳೆಯದಾಗಿ ಕಾಣುತ್ತದೆ—ಕನಿಷ್ಠ ಪಕ್ಷ ಮುನ್ನೂರು ವರ್ಷಗಳಷ್ಟು. ನಾನು ಹೋಲಿಸಿರುವ ಭಾಗವಷ್ಟರಿಂದಲೇ ಹೇಳಬಹುದಾದರೆ, ಶ್ರೀ ಡಿ. ಎಲ್. ನರಸಿಂಹಾಚಾರ್ಯರು ವರ್ಣಿಸಿರುವ ಘ, ಚ, ಛ ಪ್ರತಿಗಳ ಪಂಗಡಕ್ಕೆ ಇದೂ ಸೇರಿದೆಯೆಂದು ನನಗೆ ತೋರುತ್ತದೆ.

ದಿಸಿ ಪ್ರಕಟಿಸುತ್ತಿರುವ 'ವಡ್ಡಾರಾಧನೆ'ಯೇ ಆಗಿದೆಯೆಂದು ತಿಳಿಸಲು ಸಾಕಾಗಿವೆ; ಈ ಪುಸ್ತಕದ ಕಾಲ ವಿಚಾರವಾಗಿ ವಿದ್ವಾಂಸರು ತಮ್ಮ ಅಭಿಪ್ರಾಯಗಳನ್ನು ವಾಗ್ಮಿತೆಯಿಂದ ನಿರೂಪಿಸಿರುವರು.[1]

ಸುಕುಮಾರನ ಕಥೆಯಿಂದ ಆರಂಭವಾಗಿ ವೃಷಭಸೇನನ ಕಥೆಯಿಂದ ಮುಗಿಯುವ ಈ ಕಥಾಗುಚ್ಛಕ್ಕೆ 'ವಡ್ಡಾರಾಧನೆ' ಎಂಬ ಹೆಸರನ್ನು ಅಂಗೀಕರಿಸಬಹುದು. 'ಭಗವತೀ ಆರಾಧನಾ' ಎಂಬ ಗ್ರಂಥದಲ್ಲಿ ಕೆಲವು ಕಥೆಗಳು ಸೂಚಿತವಾಗಿರುವುದನ್ನೂ, ಆ ಗ್ರಂಥಕ್ಕೆ ಇದ್ದಿರಬಹುದಾದ ಸಂಸ್ಕೃತ ಮತ್ತು ಪ್ರಾಕೃತ ವ್ಯಾಖ್ಯಾನಗಳಲ್ಲಿ ಈ ಕಥೆಗಳು ಮೊದಲು ಅಡಕವಾಗಿದ್ದುವೆಂಬುದನ್ನೂ, ಕಾಲಕ್ರಮದಲ್ಲಿ ಈ ಕಥೆಗಳೇ ಭಿನ್ನ ಭಿನ್ನ ಕೋಶಗಳಾಗಿ ಪರಿಣಮಿಸಿದುವೆಂಬುದನ್ನೂ ಹಿಂದೆಯೇ ನೋಡಿದ್ದೇವೆ[2]; ಇಂತಹ ಕಥಾಕೋಶಗಳನ್ನು ಹಿಂದೆಯೇ ಹೆಸರಿಸಿದ್ದೇವೆ. ಈ ಕನ್ನಡ ಗ್ರಂಥವೂ ಶಿವಾರ್ಯ ಅಥವಾ ಶಿವಕೋಟಿ ರಚಿತವಾದ 'ಭಗವತೀ ಆರಾಧನಾ' ಎಂಬ ಪುಸ್ತಕದಲ್ಲಿ ೧೫೩೯–೧೫೫೭ರ ವರೆಗಿನ ಗಾಹೆಗಳಲ್ಲಿ ಸೂಚಿತವಾಗಿರುವ ಹತ್ತೊಂಬತ್ತು ಕಥೆಗಳನ್ನೊಳಕೊಂಡ ಅಪೂರ್ಣ ಕಥಾಕೋಶವಾಗಿದೆ. ಅಮುಖ್ಯವಾದ ಪಾಠ ವ್ಯತ್ಯಾಸಗಳಿದ್ದರೂ ಈ ಪ್ರಾಕೃತ ಗಾಹೆಗಳು ಒಂದೊಂದು ಆಯಾ ಕಥೆಯ ಆರಂಭದಲ್ಲಿ ಉದ್ಧೃತವಾಗಿ ಅವಕ್ಕೆ ಕನ್ನಡದಲ್ಲಿ

---

[1] ವಡ್ಡಾರಾಧನೆಯ ಪ್ರಕಟಿತ ಭಾಗವೂ ಅದನ್ನು ಕುರಿತ ವಿಮರ್ಶೆ ವಿಚಾರಗಳೂ ನನಗೆ ತಿಳಿದಮಟ್ಟಿಗೆ ಕೆಳಗೆ ಹೇಳಿದೆ. ಪಾಠಕ್ ಮತ್ತು ಫ್ಲೀಟ್: *Indian Antiquary*, XII, pp. 95, 96, etc. ರಾ. ನರಸಿಂಹಾಚಾರ್ಯರು: ಕವಿಚರಿತೆ I, ಪು. 282. ಡಿ. ಎಲ್. ನರಸಿಂಹಾಚಾರ್: ಕರ್ಣಾಟಕ ಸಾಹಿತ್ಯ ಪರಿಷತ್ಪತ್ರಿಕೆ, XVI, ಪು. ೧೭೩–೨೩೧ (ಪೀಠಿಕೆ ಮತ್ತು ಸುಕುಮಾರ ಭದ್ರಬಾಹು ವಿದ್ಯುಚ್ಚೋರರ ಕಥೆಗಳು. ಇದನ್ನು ನಿರ್ದೇಶಿಸುವಾಗ ಪುಟಸಂಖ್ಯೆಯ ಹಿಂದೆ ನಕ್ಷತ್ರ ಚಿಹ್ನೆಯನ್ನು ಹಾಕಿದೆ); ಕನ್ನಡಸಾಹಿತ್ಯ ಪರಿಷತ್ಪತ್ರಿಕೆ, XXIV, ಸಂ. ೪, ಪು. i-iii ಮತ್ತು ೧-೨೬ (೧ನೆಯ ಕಥೆ); ಅದೇ, XXV, ಸಂ. ೨-೩, ಪು. i-v ಮತ್ತು i-viii ೨೭-೪೪ (೨ನೆಯ ಕಥೆ); ಅದೇ, XXV, ಸಂ. ೪, ಪು. ೪೫-೬೬ (೩-೫ ಕಥೆಗಳು); ಅದೇ, XXVI, ಸಂ. ೧, ಪು. ೬೭-೮೮ (೬ನೆಯ ಕಥೆ); ಅದೇ, XXVI, ಸಂ. ೨, ಪು. ೮೯-೧೦೮ (೭-೧೦ ಕಥೆಗಳು); ಅದೇ, XXVII, ಸಂ. ೧, ಪು. ೧೦೬-೧೨೮ (೧೧-೧೩ ಕಥೆಗಳು ಮತ್ತು ೧೪ನೆಯ ಕಥೆಯ ಒಂದು ಪುಟ). ಮಂಜೇಶ್ವರ ಗೋವಿಂದ ಪೈ: ಮೂರು ಉಪನ್ಯಾಸಗಳು (ಧಾರವಾಡ, ೧೯೪೦), ಪು. ೧೧೧-೧೨೨; ಕನ್ನಡಸಾಹಿತ್ಯ ಪರಿಷತ್ಪತ್ರಿಕೆ, XXVI, ಸಂ. ೨, ಪು. ೧೩೪-೩೬. ಎಸ್. ಶ್ರೀಕಂಠ ಶಾಸ್ತ್ರಿ: *Sources of Karṇāṭaka History*, Vol. I, (Mysore, 1940), p. XX.

[2] ಇಂಗ್ಲಿಷ್ ಪ್ರಸ್ತಾವನೆಯಲ್ಲಿ ಈ ವಿಷಯಗಳು ಮುಂಚೆಯೇ ಚರ್ಚಿತವಾಗಿವೆ.

ಆರ್ಥೈಸಿದೆ. ಕೊಲ್ಲಾಪುರದ ಪ್ರತಿಯ ಕೊನೆಯಲ್ಲಿ ಮೂರು ಗಾಹೆಗಳು ಅಧಿಕವಾಗಿವೆ (ಜದಿ ತಾ ಏವಂ . . . ಇತ್ಯಾದಿ) ; ಇವು 'ಭಗವತೀ ಆರಾಧನಾ'ದಲ್ಲಿರುವ ೧೫೫೮-೬೦ ಸಂಖ್ಯೆಯ ಗಾಹೆಗಳೇ ಆಗಿದ್ದು ಮೇಲ್ಕಂಡ ೧೯ ಗಾಹೆಗಳ ನಂತರ ಬಂದಿರುವುವು. ಈ ಕಥೆಗಳನ್ನು ಸಾಲಂಕಾರವಾದ ಕನ್ನಡ ಗದ್ಯದಲ್ಲಿ ನಡುನಡುವೆ ಪ್ರಾಕೃತ (ಅಪಭ್ರಂಶವೂ ಸೇರಿ) ಸಂಸ್ಕೃತ ಕನ್ನಡ ಪದ್ಯವೇಷ್ಟನಗಳನ್ನು ಮಾಡಿ ಪ್ರತಿಪಾದಿಸಿದೆ. 'ಚಾಮುಂಡರಾಯ ಪುರಾಣ'ದ ಶೈಲಿಗಿಂತಲೂ ಇದರ ಶೈಲಿ ಕಡಮೆ ಸಂಸ್ಕೃತಮಯವಾಗಿದ್ದು ವಿಪುಲವಾಗಿ ದೊರೆಯುವ ಈಚಿನ ನೋಂಪಿ ಕಥೆಗಳ ಶೈಲಿಗಿಂತ ಹೆಚ್ಚು ಗಂಭೀರವಾಗಿದೆ. ಧರ್ಮೋಪದೇಶಗಳೂ ಸಾಂಪ್ರದಾಯಕ ಸಂಗತಿಗಳೂ ನಿರೂಪಿತವಾಗುವ ಸಂದರ್ಭಗಳು ಹೊರತಾಗಿ ಮಿಕ್ಕೆಡೆಗಳಲ್ಲಿ ಬರುವ ಈ ಗ್ರಂಥದ ಗದ್ಯ ಶಕ್ತಿಯುಕ್ತವಾಗಿದ್ದು ಸಂಸ್ಕೃತ ಕನ್ನಡ ಶಬ್ದಗಳನ್ನು ಸಮತೂಕದಲ್ಲಿ ಬಳಸಿಕೊಂಡಿದೆ. ಕೆಲವು ಕನ್ನಡ ಚಂಪು ಗ್ರಂಥಗಳಲ್ಲಿ ಕಾಣುವ ಸಂಸ್ಕೃತಪದ ಭೂಯಿಷ್ಠವಾದ ಸಾಂಪ್ರದಾಯಕ ಗದ್ಯಶೈಲಿಯನ್ನು ಇದು ಅನುಕರಿಸದೆ ಸೊಗಸಾದ ದೇಶೀಶೈಲಿಯನ್ನು ಬೆಳಸಿಕೊಂಡಿದೆ; ಸಂಸ್ಕೃತ ಪದಗಳ ವಿಷಯದಲ್ಲಿ ಅಧಿಕ ಪಕ್ಷಪಾತವಿಲ್ಲದೆ ದೇಶಿ ತದ್ಭವ ಪದಗಳನ್ನು ಔಚಿತ್ಯದಿಂದ ಪ್ರಯೋಗಿಸಿದೆ. ಆದರೆ ಅನೇಕ ಕೃದಂತಗಳನ್ನೂ ಕ್ರಿಯಾ ವಿಶೇಷಣಗಳನ್ನೂ ಬಳಸಿರುವುದರಿಂದ ವಾಕ್ಯಗಳ ರಚನೆ ತೊಡಕಾಗಿದೆಯೆಂದೂ ಅಲ್ಲಿ ಇಲ್ಲಿ ಭಾವಗಳ ಸ್ಫುಟವಾದ ನಿರೂಪಣೆ ಪ್ರಯತ್ನಪೂರ್ವಕವಾಗಿದೆಯೆಂದೂ ಕೆಲವರಿಗೆ ತೋರಬಹುದು. ಶಬ್ದಪ್ರಯೋಗದಲ್ಲಿ ಮಿತವ್ಯಯಾಸಕ್ತಿ ಗ್ರಂಥಕರ್ತೃವಿಗೆ ಅಷ್ಟಾಗಿ ಇಲ್ಲ; ಅರ್ಧಮಾಗಧೀ ಗದ್ಯಗ್ರಂಥಗಳಲ್ಲಿರುವಂತೆ ವರ್ಣಕನಿರೂಪಕ ಪುನರುಕ್ತಿಗಳು ಗ್ರಂಥದಲ್ಲೆಲ್ಲ ಧಾರಾಳವಾಗಿ ಬಂದಿವೆ.[1] ಈ ಗ್ರಂಥದ ಶೈಲಿಯ ನಾನಾ ಅಂಶಗಳನ್ನು ಇನ್ನೂ ಹೆಚ್ಚು ಕೂಲಂಕಷವಾಗಿ ಅಭ್ಯಾಸಮಾಡುವ ಆವಶ್ಯಕತೆಯಿದೆ. ಬೇರೆ ಬೇರೆ ಕಥೆಗಳಲ್ಲಿರುವ ಸಮಾನ ಶಬ್ದಪ್ರಯೋಗಗಳಿಂದಲೂ, ಸಮಾನ ಭಾವಗಳಿಂದಲೂ, ಸಮಾನ ಪದ್ಯವೇಷ್ಟನಗಳಿಂದಲೂ ಈ ಹತ್ತೊಂಬತ್ತು ಕಥೆಗಳನ್ನು ರಚಿಸಿದಾತನು—ಅವನು ಯಾರೇ ಇರಲಿ—ಒಬ್ಬನೇ ಎಂಬುದರಲ್ಲಿ ಯಾವ ಸಂದೇಹವೂ ಇಲ್ಲ. ಹರಿಷೇಣನ 'ಕಥಾಕೋಶ'ದ ೧೨೬-೧೪೪ರ ವರೆಗಿರುವ ಕಥೆಗಳ ಅನುಕ್ರಮವೂ ಈ

---

[1] ನೋಡು : ಗ್ರಾಮೇಕರಾತ್ರಂ, ಇತ್ಯಾದಿ., ಪು. ೪೬ ಅಡಿಟಿಪ್ಪಣಿ ೮, ಪು. ೬೬, ಪಂಕ್ತಿ ೧೬; ವ್ಯಾಧಿಗಳ ಹೆಸರುಗಳು, ವಾತ, ಪಿತ್ತ ಇತ್ಯಾದಿ. ಪು. ೬೩, ೯೨; ಗ್ರಾಮನಗರಖೇಡಖ ಇತ್ಯಾದಿಯಾದ ಊರುಗಳ ಹೆಸರುಗಳು, ಪು. ೪೬, ೬೬, ೭೭, ೮೨, ೯೬, ೧೧೩ ೧೦೭, ಇತ್ಯಾದಿ.

ಹತ್ತೊಂಬತ್ತು ಕಥೆಗಳ ಕ್ರಮವೂ ಒಂದರ ಹೊರತಾಗಿ[1] ಒಂದೇ ಆಗಿದೆ; ಮೇಲೆ ವಿಮರ್ಶಿಸಿರುವ ಮಿಕ್ಕೆಲ್ಲ ಕೋಶಗಳಿಗಿಂತ ಹರಿಷೇಣನ ಕಥಾಕೋಶವನ್ನು ಈ ಹತ್ತೊಂಬತ್ತು ಕಥೆಗಳು ಬಲು ಹೋಲುತ್ತವೆ. ಒಂದರೊಡನೆ ಒಂದನ್ನು ಹೋಲಿಸಿ ಇವುಗಳನ್ನು ಓದಿದಾಗ ಹಲವು ಸ್ವಾರಸ್ಯಕರವಾದ ವಿಷಯಗಳು ತಿಳಿದುಬರುತ್ತವೆ.[2] ಹರಿಷೇಣನ ಕೋಶದಲ್ಲಿ ಅಲ್ಲಿ ಇಲ್ಲಿ ಕಾಣುವ ಕೆಲವು ಪದ್ಯವೃಂದಗಳಿಗೂ (೧೨೬.೧೯ಇ,, ೧೬೨ಇ., ೨೨೦ಇ., ೨೫೬ಇ., ೧೨೭.೧೪೫ಇ., ೨೫೯ಇ., ೮೭ಇ, ೧೩೧.೬೭ಇ. ಇತ್ಯಾದಿ) ವಡ್ಡಾರಾಧನೆಯ ಆಯಾ ಸಂದರ್ಭಗಳಿಗೂ ಬಹು ನಿಕಟವಾದ ಸಾದೃಶ್ಯವಿದೆ. ಇನ್ನೂ ಹೆಚ್ಚು ವಿವರವಾಗಿ ಪರಿಶೀಲಿಸಿದರೆ ಎರಡರಲ್ಲಿಯೂ ಹೆಚ್ಚುಕಡಮೆ ಒಂದೇ ವಿಷಯ ವ್ಯಾಪ್ತಿಯುಳ್ಳ ವೃಷಭಸೇನನ ಕಥೆ ಹೊರತಾಗಿ (ಕಥಾಕೋಶ ೧೩೫ ಮತ್ತು ವಡ್ಡಾರಾಧನೆ ೧೦) ವಡ್ಡಾರಾಧನೆಯ ಮಿಕ್ಕೆಲ್ಲ ಕಥೆಗಳೂ ದೀರ್ಘತರವಾಗಿದ್ದು ಹರಿಷೇಣನು ಹೇಳಿರುವ ವಿಷಯಗಳಿಗಿಂತ ಹೆಚ್ಚು ವಿವರಗಳನ್ನೊಳಕೊಂಡಿವೆ. ಕನ್ನಡ ಗ್ರಂಥದಲ್ಲಿ ಬರುವ ಸುಕೋಶಲನ ಕಥೆ ಹರಿಷೇಣನು ಬರೆದಿರುವ ಅದೇ ಕಥೆಯ ೧೦೭ನೆಯ ಪದ್ಯದಿಂದ ಆರಂಭವಾಗಿ ಅನಂತರ ಮೊದಲ ೧೦೬ ಪದ್ಯಗಳ ವಿಷಯವನ್ನು ನಿರೂಪಿಸುತ್ತದೆ; ಎರಡು ಗ್ರಂಥಗಳಲ್ಲಿಯೂ ವಿಷಯನಿರೂಪಣೆ ಅವಶ್ಯವಾಗಿ ಒಂದೇ ಕ್ರಮವನ್ನನುಸರಿಸಿಲ್ಲವೆಂಬುದಕ್ಕೆ ಇದು ಉತ್ಕೃಷ್ಟವಾದ ನಿದರ್ಶನವಾಗಿದೆ. ಸನತ್ಕುಮಾರನ ಕಥೆಯಲ್ಲಿ[3] ಕಾಣುವಂತೆ ಬೇರೆ ಕಥೆಗಳಲ್ಲಿಯೂ ಇರುವ ಉಪಕಥೆಗಳೂ, ಭವಾವಳಿಯ ವಿವರಗಳೂ, ಸಾಂಪ್ರದಾಯಕ ವರ್ಣನೆಗಳೂ, ನಿರೂಪಣೆಗಳೂ ವಡ್ಡಾರಾಧನೆಯಲ್ಲಿ ಅಧಿಕತರವಾಗಿ ತೋರಿಬರುವುದರಿಂದ ಕೆಲವುವೇಳೆ ಆಯಾ ಕಥಾವಿವರಗಳಿಗಾಗಿ ಬಹುಶಃ ಬೇರೊಂದು ಕಥಾಸಂಪ್ರದಾಯವನ್ನೂ ಅವಲಂಬಿಸಿರುವಂತೆ ಭಾಸವಾಗುತ್ತದೆ. ಈ ಹತ್ತೊಂ

[1] ನನ್ನ ಪರಿಶೀಲನೆಗೆ ಇದುವರೆಗೆ ಅಚ್ಚಾಗಿರುವ ೧೦ ಕಥೆಗಳು ಮಾತ್ರ ಒಳಪಟ್ಟಿವೆ. ಮುಂದಿನ ಮೂರು ಕಥೆಗಳು ನನ್ನ ಕೈಸೇರುವುದು ತಡವಾಯಿತು.

[2] ಭಗವತೀ ಆರಾಧನೆಯ ಗಾಥಾನುಕ್ರಮವನ್ನು ನೋಡಿದರೆ ಏಣಿಕಾಪುತ್ರನ ಕಥೆಯು ೫ನೆಯದಾಗಿರಬೇಕು, ಮತ್ತು ಭದ್ರಬಾಹುವಿನ ಕಥೆಯು ೬ನೆಯದಾಗಿರಬೇಕು; ಮುದ್ರಿತ ಪ್ರತಿಯಲ್ಲಿ ಈ ಕ್ರಮವೇ ದೊರೆಯುತ್ತದೆ; ಆದರೆ ಸಂಪಾದಕರು ಈ ೧೬ ಕಥೆಗಳ ಕ್ರಮವನ್ನು ಕೊಟ್ಟ ಸಂದರ್ಭದಲ್ಲಿ ಭದ್ರಬಾಹುವಿನ ಕಥೆಯು ೫ನೆಯದಿದ್ದು ಏಣಿಕಾಪುತ್ರನ ಕಥೆಯು ೬ನೆಯದಾಗಿದೆ.

[3] ಈ ಕನ್ನಡ ಕಥೆ ಉತ್ತರಾಧ್ಯಯನ ಸೂತ್ರಕ್ಕೆ ದೇವೇಂದ್ರನು ಬರೆದಿರುವ ವ್ಯಾಖ್ಯಾನದಲ್ಲಿ ಕಾಣುವ ಕಥೆಯನ್ನು ಕೆಲವು ಭಾಗಗಳಲ್ಲಿಯಾದರೂ ಹೋಲುತ್ತಿರುವುದು ನನ್ನ ನೆನಪಿಗೆ ಬರುತ್ತದೆ; ಪ್ರಾಕೃತ ಕಥಾಸಂಗ್ರಹ (ಅಹಮದಾಬಾದ್, ಸಂವತ್ ೧೯೭೮), ಪು. ೧೭-೨೮.

ಬತ್ತು ಕಥೆಗಳನ್ನಷ್ಟೇ ನೋಡಿದರೆ ಹರಿಷೇಣನು ಪ್ರತಿಯೊಂದು ಕಥೆಯ ಮುಖ್ಯ ಘಟನೆಗಳನ್ನು ಬಳಸಿಲ್ಲದೆ, ಅನಾವಶ್ಯಕವಾದ ಇತರ ಸಂಗತಿಗಳನ್ನು ಸೇರಿಸದೆ ನೇರವಾಗಿ ನಿರೂಪಿಸಿರುವುದು[1] ಕಂಡುಬರುತ್ತದೆ. ಹರಿಷೇಣನು ತನ್ನ ದೊಡ್ಡ ಗ್ರಂಥವನ್ನು ಪರಿಸಮಾಪ್ತಿಗೊಳಿಸುವ ಆತುರದಲ್ಲಿ ಹೆಚ್ಚು ವಿವರಗಳಿಗೆ ಕೈಹಾಕದಿರಬಹುದು; ಕನ್ನಡ ಗ್ರಂಥದ ಕರ್ತನಾದರೆ ಸತ್ವಶಾಲಿಯಾಗಿ ತನ್ನ ಕಥೆಗಳನ್ನು ರಚಿಸುತ್ತ ನಿರೂಪಿಸುತ್ತ ಲಂಬಿಸಿರಬಹುದು; ಅವನು ಈ ಸಂದರ್ಭದಲ್ಲಿ ಬರೆದಿರುವುದೆಲ್ಲ ಇಷ್ಟೇ ಇರಬಹುದು. ಒಟ್ಟಿನ ಮೇಲೆ ಎರಡು ಗ್ರಂಥಗಳಲ್ಲಿಯೂ ಬರುವ ಕಥೆಗಳಲ್ಲಿ ಇರುವ ಅಂಕಿತನಾಮಗಳೇ ಮುಂತಾದುವು ಒಂದೇ ರೀತಿಯವಾಗಿದ್ದರೂ ಎತ್ತಿತೋರಿಸಬಹುದಾದ ಕೆಲವು ಮುಖ್ಯವಾದ ವ್ಯತ್ಯಾಸಗಳಿವೆ. ಕಥಾಕೋಶದಲ್ಲಿ (೧೨೬*a*·೨೪೩) ಶೈಲಪುರ, ಜಯಕಾ, ಮೋದಕ ಎಂದಿದ್ದರೆ ವಡ್ಡಾರಾಧನೆಯಲ್ಲಿ (i ಪು. ೧೭) ಶ್ವೇತಪುರ, ಜೈಸೆ, ಬೋಧನ ಎಂದಿದೆ; ಕಥಾಕೋಶದಲ್ಲಿನ (೧೨೭.೧೫೨) ಗಂಧರ್ವಭೂಪಾಲ ಎಂಬುದು ವಡ್ಡಾರಾಧನೆಯಲ್ಲಿ (ii ಪು. ౩೧) ಸುಂದರ (ಪಾಠಾಂತರಗಳು: ಗಂದರ, ಇತ್ಯಾದಿ) ಪಾಂಡ್ಯನೆಂದಾಗಿದೆ; ಸುರೇಂದ್ರದತ್ತ (ಕಥಾ. ೧೨೬.೨೧೦) ಎಂಬುದು ಸೂರದತ್ತ (ವಡ್ಡಾ. i. ಪು. ೨೦) ಎಂದೂ ಗೋಮಿನೀ (ಕಥಾ. ೧೨೭, ೨೦೬) ಎಂಬುದು ಗೌರೀ (ವಡ್ಡಾ. ii. ಪು. ೩೩) ಎಂದೂ ಆಗಿವೆ; ಇತ್ಯಾದಿ. ಭಿನ್ನವಾದ ಮತ್ತು ಅಧಿಕವಾದ ಕಥಾವಿವರಗಳು, ಕಥಾಸರಣಿಯಲ್ಲಿ ನಿಕಟವಾದ ಸಾದೃಶ್ಯವಿಲ್ಲದಿರುವುದು, ಅಂಕಿತನಾಮಗಳಲ್ಲಿ ಕಾಣುವ ವ್ಯತ್ಯಾಸಗಳು—ಇವು ಒಂದು ಗ್ರಂಥ ಇನ್ನೊಂದು ಗ್ರಂಥವನ್ನು ನೇರವಾಗಿ ಅವಲಂಬಿಸಿ ಅನುಸರಿಸುತ್ತದೆಂಬುದಕ್ಕೆ ಪ್ರತಿಬಂಧಕಗಳಾಗಿವೆ. ಈ ಅಂಶಗಳನ್ನೂ ಎರಡಕ್ಕೂ ಸಮಾನವಾದ ಇತರ ಸಂಗತಿಗಳನ್ನೂ ಗಮನಿಸಿ ನೋಡಿದಾಗ, ಎರಡಕ್ಕೂ ಒಂದೇ ಮೂಲವಿದ್ದಿರಬೇಕೆಂಬ ನಿರ್ಣಯ ಉಂಟಾಗುತ್ತದೆ; ಈ ಮೂಲ ಬಹುಶಃ 'ಭಗವತೀ ಆರಾಧನಾ' ಎಂಬ ಗ್ರಂಥಕ್ಕೆ ಇದ್ದಿರಬಹುದಾದ, ಪ್ರಾಕೃತ ಭಾಷಾನಿಬದ್ಧವಾದ ವ್ಯಾಖ್ಯಾನವಿರಬಹುದು; ಇಬ್ಬರು ಗ್ರಂಥಕರ್ತರೂ ತಮತಮಗೆ ಉಚಿತವಾಗಿ ಕಂಡ ರೀತಿಯಲ್ಲಿ ಕಥೆಗಳ ಮೆಯ್ಯನ್ನು ಕೆಡಿಸದೆ, ಉದ್ದೇಶಕ್ಕೆ ಭಂಗತಾರದೆ, ಅವುಗಳನ್ನು ವಿವರವಾಗಿ ನಿರೂಪಿಸಿರಬಹುದು.

ಈ ಕನ್ನಡ ಕಥಾಗುಚ್ಛಕ್ಕೆ 'ವಡ್ಡಾರಾಧನೆ' ಎಂಬ ಹೆಸರಿರುವುದೂ, ಅದು ಭಗವತೀ ಆರಾಧನಾ' ಎಂಬ ಗ್ರಂಥದ ಗಾಹೆಗಳನ್ನು, ಶ್ರೀ ಚಂದ್ರನು ಮಾಡಿರು

[1] ಹರಿಷೇಣನು ವಿವಾಹಸಂದರ್ಭವನ್ನು ಪ್ರಸ್ತಾವಿಸಿದ್ದರೆ ಈ ಕನ್ನಡ ಗ್ರಂಥ ಸ್ವಯಂವರವನ್ನು ವರ್ಣಿಸಿದೆ.

ವಂತೆಯೇ, ಮೂಲವಾಗಿಟ್ಟುಕೊಂಡು ವಿವರಿಸಿರುವುದೂ ಅದು 'ಭಗವತೀ ಆರಾಧನಾ' ಗ್ರಂಥಕ್ಕಿದ್ದ ಯಾವುದೋ ವ್ಯಾಖ್ಯಾನವನ್ನು ಅವಲಂಬಿಸಿರಬೇಕೆಂಬ ವಾದಕ್ಕೆ ಪುಷ್ಟಿಕೊಡುತ್ತದೆ; ಕನ್ನಡ ಗ್ರಂಥಕರ್ತನು ಹರಿಷೇಣನ ಅಥವಾ ಬೇರೆಯೊಬ್ಬನ ಸಂಸ್ಕೃತ ಕಥಾಕೋಶವನ್ನಷ್ಟೇ ಅವಲಂಬಿಸಿದ್ದ ಪಕ್ಷದಲ್ಲಿ ಅವನು ಸಾಧಾರಣವಾಗಿ ಪ್ರಾಕೃತ ಗಾಹೆಗಳನ್ನು ಉದ್ಧರಿಸುತ್ತಿರಲಿಲ್ಲ; ಅಷ್ಟೇ ಅಲ್ಲದೆ ಅಂಕಿತನಾಮಗಳಲ್ಲಿ ವ್ಯತ್ಯಾಸವನ್ನು ಮಾಡುತ್ತಿರಲಿಲ್ಲ. ಮುಂದೆ ತೋರಿಸಿರುವಂತೆ ಹರಿಷೇಣನ ಗ್ರಂಥವೊಂದೇ ಅಲ್ಲದೆ ಈ ಕನ್ನಡ ಕಥೆಗಳೂ ಕೂಡ ಪ್ರಾಕೃತ ಮೂಲವನ್ನು ಅನುಸರಿಸಿರಬೇಕೆಂಬುದಕ್ಕೆ ಕೆಲವು ಕುರುಹುಗಳು ಎರಡರಲ್ಲಿಯೂ ವ್ಯಕ್ತವಾಗಿವೆ.

ಕನ್ನಡ ನುಡಿಯ ಶಬ್ದಕೋಶದ ಬೆಳವಣಿಗೆಗೆ ಪ್ರಾಕೃತಭಾಷಾವ್ಯಾಪಾರಗಳು ಮಾರ್ಗದರ್ಶಕವಾದುವೆಂಬ ಅಂಶವನ್ನು—ಇನ್ನೂ ಕೂಲಂಕಷವಾದ ಅಭ್ಯಾಸ ವಿಮರ್ಶೆಗಳು ಈ ವಿಷಯದಲ್ಲಿ ನಡೆಯದಿದ್ದರೂ—ಎಲ್ಲರೂ ಒಪ್ಪತಕ್ಕದ್ದಾಗಿದೆ; ತದ್ಭವಗಳಿರುವ ಅಚ್ಚಸಂಸ್ಕೃತ ಶಬ್ದಗಳ ಪ್ರಯೋಗಪ್ರಾಚುರ್ಯವು ನಿಂತು ಹೋಗುತ್ತ ಬಂದಿತು; ಈ ತದ್ಭವಗಳು ಪ್ರಾಕೃತ ಲಕ್ಷಣಗಳಿಗೆ ಅನುಸಾರವಾಗಿ ಆಗಲು ಮೊದಲಾಗಿ ಕನ್ನಡದ ಉಚ್ಚಾರಣಾವಿಧಿಗಳಿಗೆ ಅಧೀನವಾಗಿ ಕನ್ನಡದಲ್ಲಿ ತದ್ಭವಗಳಾಗಿ ಪರಿಣಮಿಸಿ ಅಚ್ಚಸಂಸ್ಕೃತ ಪದಗಳಿಗೆ ಪ್ರತಿಯಾಗಿ ಪ್ರಯೋಗವಾದುವು. ಪ್ರಾಕೃತಭಾಷೆಯ ಈ ರೀತಿಯಾದ ಪ್ರಭಾವ ಕನ್ನಡದಲ್ಲಿ ಪೂರ್ತಿಯಾಗಿ ಇರಲಿ, ಇಲ್ಲದಿರಲಿ, ಈ ಕನ್ನಡ ಕಥೆಗಳಿಗೆ ಪ್ರಾಕೃತ ಗ್ರಂಥವೇ ಆಧಾರವೆಂದು ಸೂಚಿಸುವ ಕೆಲವು ಸಂಗತಿಗಳನ್ನು ಕಾಣುತ್ತೇವೆ. ಭದ್ರಬಾಹುವಿನ ಕಥೆಯಲ್ಲಿ ಮಧ್ಯದೇಶದ ಮೇರೆಯನ್ನು ಪ್ರಾಕೃತ ಪದ್ಯದಲ್ಲಿ ನಿರೂಪಿಸಿದೆ (ವಡ್ಡಾ. ಪು. ೮೦); ಈ ಪದ್ಯ ಮೂಲಪ್ರಾಕೃತ ಗ್ರಂಥದ ಅವಶೇಷವಾಗಿರಬಹುದು. ಪ್ರಾಕೃತಾವಶೇಷಗಳಂತೆ ಕಾಣುವ ಅನೇಕ ಶಬ್ದಗಳು ದೊರೆಯುತ್ತವೆ: ಆಯಂಬಿಲ (ಪು. ೯೧, ಅಡಿ ಟಿಪ್ಪಣಿ ೨), ಛಟ್ಠಟ್ಠಮದಸಮದುವಾಳಸ (ಪು. ೪೦). ಜಾವಜ್ಜೀವಂ (ಪುಟ ೭೬, ೮೨, ೧೦೮). ಪಚ್ಚಕ್ಖಾಣ (ಪು. ೭೬), ಪಡಿಕಮಣ (ಪುಟ ೨೪, ೮೬ ಇತ್ಯಾದಿ), ಬೋಳಹ ಬೋಳಹ (ಪು. ೭೯, ವಿಧಿರೂಪದ ಮಧ್ಯಮ ಪುರುಷ ಬಹುವಚನ, ವೋಲ=ತೊಲಗು, ಹೊರಟುಹೋಗು)[1], ವಕ್ಖಾಣಿಸಿ (ಪು. ೩, ೫೫); ಇವಲ್ಲದೆ ಲಚ್ಛಿ (ಪು. ೯೧), ಸವಣ (ಪು. ೬), ರಿಸಿ (ಪು. ೯), ಇತ್ಯಾದಿಯಾದ ಇತರ ಶಬ್ದಗಳೂ ಉಂಟು; ಈ ಶಬ್ದಗಳು ಮಾತ್ರ ಪ್ರಾಕೃತ ಮೂಲವನ್ನು ಹೊಂದಿಲ್ಲದ

---

[1] ಇದಕ್ಕೆ ಸಂವಾದಿಯಾದ ಭಾಗದಲ್ಲಿ (೧೩೦.೩೦) ಹರಿಷೇಣನು 'ಗಚ್ಛ' ಎಂದು ಪ್ರಯೋಗಿಸಿದ್ದಾನೆ.

ಯಾವ ಕನ್ನಡ ಕೃತಿಯಲ್ಲಾದರೂ ದೊರೆಯುವುದು ಅಸಂಭವವೇನೂ ಅಲ್ಲ ಪ್ರಾಕೃತ ಮೂಲವನ್ನು ಕಣ್ಣೆದುರಿರಿಸಿಕೊಂಡು ಹರಿಷೇಣನು ತನ್ನ ಗ್ರಂಥವನ್ನು ರಚಿಸಿರುವನು; ಪ್ರಾಕೃತದ ಹೆಸರುಗಳನ್ನು ಸಂಸ್ಕೃತೀಕರಿಸುವಾಗ ಕಥಾಕೋಶದ್ದೇ ಒಂದುರೀತಿ, ಈ ಕನ್ನಡ ಗ್ರಂಥದ್ದೇ ಒಂದುರೀತಿ. ಉಚ್ಚಾರಣೆಯ ವಿಕಾರಗಳನ್ನೂ ಕಾಗುಣಿತದ ಭ್ರಾಂತಿಗಳನ್ನೂ ಗಮನಿಸಿ ಪರೀಕ್ಷಿಸಿದರೆ ಕೆಲವುವೇಳೆ ಮೂಲಗ್ರಂಥದ ಪ್ರಾಕೃತದ ಹೆಸರು ಯಾವುದಿರಬೇಕೆಂಬುದನ್ನು ನಿರ್ಣಯಿಸಬಹುದು. ದಯಾವಾದ ಮತ್ತು ದಯಾವತ (ಕಥಾ ೧೨೬, ೨೬; ವಡ್ಡಾ ಪು. ೫, ೬); ಶೈಲಪುರ ಮತ್ತು ಶ್ವೇತಪುರ (ಕಥಾ ೧೨೬. ೧೨೪; ವಡ್ಡಾ. ಪು. ೧೭), ಸಂವಲ ಮತ್ತು ಶಂಬರ (ಕಥಾ ೧೨೬.೫೭; ವಡ್ಡಾ. ಪು. ೧೦); ಸೋದಾಲಿಕಾ ಮತ್ತು ಮೋದಾಳಿ (ಕಥಾ ೧೨೬.೧೩೦; ವಡ್ಡಾ. ೧೭); ರವಿಬಿಂದು ಮತ್ತು ರತಿಬಿಂದು (ಕಥಾ ೧೨೭.೨೪೨; ವಡ್ಡಾ. ಪು. ೩೬); ಜಯಮತೀ ಮತ್ತು ಜಯಾವತಿ (ಕಥಾ ೧೨೭.೨೬೩; ವಡ್ಡಾ. ಪು. ೩೮); ವಪ್ರವಾದ ಮತ್ತು ವಪ್ರಪಾಳ (ಕಥಾ ೧೩೧.೬೯; ವಡ್ಡಾ. ಪು. ೮೭); ಅಂಶುಮಾನ್ ಮತ್ತು ಸುಮಸ್ತ—ಪಾಠಾಂತರ: ಸುಮನ—(ಕಥಾ ೧೩೪.೨; ವಡ್ಡಾ. ಪು. ೧೦೦); ಜಿನಪಾಲಿತ ಮತ್ತು ಜಿನವಾದಿಕ (ಕಥಾ ೧೩೫.೭; ವಡ್ಡಾ. ಪು. ೧೦೪); ವಿನ್ಯಾತಟ ಮತ್ತು ವೇಣಾತಟ (ಕಥಾ ೧೩೮.೪೦; ವಡ್ಡಾ. ಪು. *೨೨೬); ಇತ್ಯಾದಿ. ಕೊಲ್ಲಾಪುರದ ಪ್ರತಿಯನ್ನು ಹಾಗೆಯೇ ನೋಡುವಾಗ ವಜ್ರದಾಡ (ಪತ್ರ ೧೧೭), ಮತ್ತು ಭಟ್ಟಿಮಿತ್ರ (ಪತ್ರ ೧೩೭) ಎಂಬ ಹೆಸರುಗಳು ಕಂಡುಬಂದುವು. ಮೇಲೆ ಕಾಣಿಸಿರುವ ಜೊತೆ ಹೆಸರುಗಳು ಎರಡು ಗ್ರಂಥಗಳೂ ಒಂದೇ ಸಂಸ್ಕೃತ ಮೂಲವನ್ನು ಹೊಂದಿದ್ದ ಪಕ್ಷದಲ್ಲಿ ಅಸಂಭವವಾಗುತ್ತಿದ್ದುವು; ಇಂತೆಯೇ ಒಂದನ್ನೊಂದು ಅನುಸರಿಸಿದ್ದರೂ. ಈ ಆಧಾರವು ಬಹು ಮುಖ್ಯವಾದುದು; ಈ ಕಥೆಗಳಿಗೆ ಮೂಲ ಪ್ರಾಕೃತ ಗ್ರಂಥವೆಂಬುದನ್ನೂ ಬಹುಶಃ ಎರಡು ಗ್ರಂಥಗಳಿಗೂ ಒಂದೇ ಮೂಲವೆಂಬುದನ್ನೂ ನಿರ್ಣಾಯಕವಾಗಿ ಇದು ಸೂಚಿಸುತ್ತದೆ.

ಈ ಕನ್ನಡ ಕಥೆಗಳಿಗೆ 'ವಡ್ಡಾರಾಧನೆ' ಎಂಬ ಹೆಸರು ಬಂದುಬಿಟ್ಟಿದೆ: ಅವುಗಳ ಸಂಪಾದಕರೂ ಈಚಿನ ಇತರ ಲೇಖಕರೂ ಕಾರಣವಾಗಿ ಈ ಹೆಸರು ಜನವಿದಿತವಾಗಿದೆ; ಮೂಡಬಿದರೆ ಕೊಲ್ಲಾಪುರ ಪ್ರತಿಗಳ ಲೇಖಕರು ಇದೇ ಹೆಸರನ್ನೇ ತಮ್ಮ ಪ್ರತಿಗಳಿಗೆ ಧಾರಾಳವಾಗಿ ಇರಿಸಿದ್ದಾರೆ. ಖಚಿತವಾಗಿ ಹೇಳುವುದಾದರೆ, ಈ ಹತ್ತೊಂಬತ್ತು ಕಥೆಗಳಿಗೆ ಅವುಗಳನ್ನು ರಚಿಸಿದಾತನು ಒಟ್ಟಾಗಿ ಇಟ್ಟ ಹೆಸರೇನೋ ನಿರ್ಣಯಿಸಲು ಯಾವ ಆಧಾರವೂ ಇಲ್ಲ; ನನ್ನ ಅಭಿಪ್ರಾಯದಲ್ಲಿ ಆ ಹೆಸರು ನಮ್ಮ

ವರೆಗೆ ಉಳಿದುಕೊಂಡು ಬಂದಿಲ್ಲ. ಪ್ರತಿಗಳ ಕೊನೆಯಲ್ಲಿ ದೊರೆಯುವ ಪ್ರತಿಕಾರರ ವಿಷಯವನ್ನು ತಿಳಿಸುವ ವಾಕ್ಯಗಳನ್ನು ಬಿಟ್ಟು ಗ್ರಂಥದ ಪರಿಸಮಾಪ್ತಿ ವಾಕ್ಯವನ್ನು ಪರಿಶೀಲಿಸಿದರೆ ಈ ಸಂಗತಿ ವಿಶದವಾಗುವುದು; ಅದನ್ನು ಹೀಗೆ ಬರೆಯಬಹುದು:

> ಈ ಪೇಳ್ದ ಪತ್ತೊಂಬತ್ತು ಕಥೆಗಳು [|] ಶಿವಕೋಟ್ಯಾಚಾರ್ಯರ್ ಪೇಳ್ದ
> ವೊಡ್ಡಾರಾಧನೆಯ ಕವಚವು ಮಂಗಳಂ ಮಹಾ ಶ್ರೀ |

ಇದು ಮೂಡಬಿದರೆ ಪ್ರತಿಯ ಪಾಠ; ಕೊಲ್ಲಾಪುರದ ಪ್ರತಿಯಲ್ಲಿ ಕೆಲವು ವ್ಯತ್ಯಾಸಗಳಿವೆ; ಅವುಗಳಲ್ಲಿ ಮುಖ್ಯವಾದದ್ದು 'ವಡ್ಡಾರಾಧನೆಯ'. ಅರ್ಥವೇನೋ ಎರಡಕ್ಕೂ ಒಂದೇ; ತಾತ್ಪರ್ಯ ಹೀಗೆ: ಇಲ್ಲಿ ಅಥವಾ ಹೀಗೆ ಹತ್ತೊಂಬತ್ತು ಕಥೆಗಳನ್ನು ಹೇಳಿದೆ; ಶಿವಕೋಟ್ಯಾಚಾರ್ಯರ ವಡ್ಡಾರಾಧನೆಗೆ ಸಂಬಂಧಿಸಿದ ಕವಚವು ಮಂಗಳ, ಮಹಾಶ್ರೀ. ಭಾರತೀಯ ಸಾಹಿತ್ಯದಲ್ಲಿ 'ಕವಚ' ಎಂಬ ಪದವು ಯಾವುದಾದರೂ ದೇವತೆಯನ್ನು ಕುರಿತ ಮಂತ್ರ ಅಥವಾ ಸ್ತೋತ್ರವಿಭಾಗದ ಗ್ರಂಥಗಳನ್ನು ನಿರ್ದೇಶಿಸುತ್ತದೆ; ಈ ಮಂತ್ರಗಳ ಪುನಶ್ಚರಣೆಯಿಂದ ಭಕ್ತನಿಗೆ ಎಲ್ಲ ತೊಂದರೆಗಳೂ ನಿವಾರಣೆಯಾಗುತ್ತವೆಂದೂ ಅವುಗಳಲ್ಲಿ ಅದ್ಭುತವಾದ ಶಕ್ತಿ ಇರುವುದೆಂದೂ ಭಕ್ತನು ಭಾವಿಸುತ್ತಾನೆ; ಸಿಪಾಯಿಯನ್ನು ಕವಚವು ರಕ್ಷಿಸುವಂತೆ ಈ ಮಂತ್ರಗಳೂ ರಕ್ಷಿಸುತ್ತವೆಂದು ನಂಬಿಕೆಯಿದೆ. ಇಂಥ ಕವಚಗ್ರಂಥಗಳನ್ನು ರಚಿಸುವುದು ಜೈನಕವಿಗಳಲ್ಲಿ ಹೆಚ್ಚು ಬಳಕೆಯಲ್ಲಿಲ್ಲ; ಒಂದುವೇಳೆ ರಚಿಸಿದರೆ ಜ್ವಾಲಾಮಾಲಿನೀ, ಪದ್ಮಾವತೀ ಮುಂತಾದ ಶಾಸನ ದೇವತೆಗಳಿಗೆ ಸಂಬಂಧಿಸಿದ್ದಾಗಿರುತ್ತವೆ. ರಕ್ಷಣೆಯನ್ನು ಬೇಡುವ ಕೆಲವು ಪದ್ಯಗಳನ್ನೊಳಕೊಂಡ 'ಶ್ರೀ ಪದ್ಮಾವತೀ ಕವಚ' ಎಂಬೊಂದು ಗ್ರಂಥವು ಭಂಡಾರಕರ್ ಓರಿಯಂಟಲ್ ರಿಸರ್ಚ್ ಇನ್ಸ್ಟಿಟ್ಯೂಷನ್ನಿನಲ್ಲಿದೆ (ಸಂ. ೫೭೫, ೧೮೯೫–೯೮ ವರ್ಷ). ಆರಾಧನಾ ಗ್ರಂಥಗಳಿಗೆ ಸೇರಿದ ಕವಚಭಾಗವು ತೀರ ಬೇರೆಯಾದದ್ದು. ಹಲವು ಪರೀಷಹಗಳನ್ನು ಎದುರಿಸುವಷ್ಟು ಧೈರ್ಯ ಬರುವುದಕ್ಕಾಗಿ ಆರಾಧಕನಿಗೆ ಅವನ ಆಯುರವಸಾನ ಸಮಯದಲ್ಲಿ ಇತರರು ಹೇಳುವ ಧರ್ಮವೀರರ ಕಥಾನಕಗಳು ಕವಚವೆನ್ನಿಸಿಕೊಳ್ಳುತ್ತವೆ. ಇದು ಕವಚದಂತೆ ಆಧ್ಯಾತ್ಮಿಕ ರಕ್ಷಣಾಕಾರ್ಯವನ್ನು ಮಾಡುತ್ತದೆ. 'ಜೀತಕಲ್ಪಸೂತ್ರಂ' ಎಂಬ ಗ್ರಂಥದ ಭಾಷ್ಯದಲ್ಲಿ[1] ಕವಚದ್ವಾರ (ಗಾಥಗಳು ४೭೬–४೯೦) ಎಂಬೊಂದು ವಿಭಾಗವಿದೆ; 'ಕವಚದ್ವಾರ'ದ ಕೈ ಬರಹದ ಪ್ರತಿಗಳೇ ಸ್ವತಂತ್ರವಾಗಿಯೂ ದೊರೆಯುತ್ತವೆ.[2] (ಭ.ಓ.ರಿ.ಇ, ಪೂನ. ೧೮೯೫–೯೮ ವರ್ಷ

---

[1] ಪುಣ್ಯವಿಜಯರಿಂದ ಸಂಪಾದಿತ, ಅಹಮದಾಬಾದ್, ಸಂವತ್ ೧೯೯४.

[2] *Descriptive Catalogue*, Vol. XVIII, part I (Poona, 1935), pp. 330, 380.

ಗಳ ಸಂ. ೫೭೯); ಜೈನಸಿದ್ಧಾಂತದ ಪ್ರಕೀರ್ಣಕ ಗ್ರಂಥ ಸಮುದಾಯದಲ್ಲಿ ಹಲವುವೇಳೆ ಇದನ್ನು ಸೇರಿಸುತ್ತಾರೆ. ಮೇಲೆ ಕಾಣಿಸಿರುವ ಗ್ರಂಥ ಪರಿಸಮಾಪ್ತಿ ವಾಕ್ಯದಲ್ಲಿ ಶಿವಕೋಟ್ಯಾಚಾರ್ಯನದೆಂದು ಹೇಳಿರುವ 'ಕವಚ'ವು 'ಭಗವತೀ ಆರಾಧನಾ' ಎಂಬ ಗ್ರಂಥದ (೧೫೦೯-೧೬೮೨) ವರೆಗಿರುವ ಗಾಥಗಳನ್ನೊಳ ಕೊಂಡ, 'ಕವಚ' ಎಂಬ ಹೆಸರನ್ನೇ ಉಳ್ಳ ಅಧಿಕಾರವೆಂದು ನಿರ್ದಿಷ್ಟವಾಗಿ ಹೇಳ ಬಹುದು; ಇದರಲ್ಲಿ ಪರೀಷಹ ಜಯಕ್ಕಾಗಿ ಕವಚದಂತಿರುವ ಕೆಲವು ಧರ್ಮ ಬೋಧೆ ಗಳು ಅಡಕವಾಗಿವೆ. ಕನ್ನಡ ಕಥೆಗಳ ಆರಂಭದಲ್ಲಿ ಉದ್ಧರಿಸಿರುವ ಪ್ರಾಕೃತ ಗಾಥ ಗಳು 'ಈ ಕವಚ' ವಿಭಾಗದಿಂದ ಎತ್ತಿಕೊಂಡುವು; ಇವು ಇಂಥ ನಿದರ್ಶನಾತ್ಮಕ ವಾದ ಗಾಥಗಳಲ್ಲಿ ಬಹು ಶ್ರೇಷ್ಠವಾದವು. 'ವೃಷಭಸೇನ'ನ ಕಥೆ ಮುಗಿದ ಕೂಡಲೇ ಶ್ರೀಚಂದ್ರನು ತನ್ನ ಅಪಭ್ರಂಶ 'ಕಥಾಕೋಷ'ದಲ್ಲಿ 'ಕವಚಾಹಿಯಾರೋಯಂ' ಎಂಬ ವಾಕ್ಯವನ್ನು ಬರೆದಿದ್ದಾನೆ; ಈ ಕವಚಾಧಿಕಾರವು ಈ ಹತ್ತೊಂಬತ್ತು ಕಥೆ ಗಳಿಂದ ಏಕೆ ಮುಕ್ತಾಯವಾಗಿದೆಯೆಂಬುದನ್ನು ಇದು ಸ್ವಲ್ಪ ತಿಳಿಸುತ್ತದೆ. ವಡ್ಡಾ ರಾಧನೆ ಅಥವಾ ವಡ್ಡಾರಾಧಣಾ (ಪ್ರಾಕೃತ) ಎಂಬುದು ಶಿವಕೋಟಿಯ 'ಭಗ ವತೀ ಆರಾಧನಾ' ಎಂಬ ಗ್ರಂಥದ ಮತ್ತೊಂದು ಹೆಸರೆಂದು ಇದರಿಂದ ವ್ಯಕ್ತ ವಾಗುತ್ತದೆ. ಈ ಹೆಸರಿನ ರೂಪಸಿದ್ಧಿಯ ವಿಚಾರದಲ್ಲಿ ಈಗಾಗಲೇ ಬಹು ಚರ್ಚೆ ವಿಮರ್ಶೆಗಳು ನಡೆದಿವೆ. ವೃಧ್ ಮತ್ತು ಬೃಹ್ ಎಂಬ ಧಾತುಗಳು ಸಮಾನಾರ್ಥಕ ವಾಗಿದ್ದು ಬೇರೆಬೇರೆ ರೂಪಗಳಾಗಿರುವಂತೆ ಕಾಣುತ್ತವೆ; ವಡ್ಡ (=ದೊಡ್ಡ) ಎಂಬ ಪ್ರಾಕೃತ ಪದಕ್ಕೆ ಇದು ಮೂಲವಾಗಿದೆ. ಅದರ ರೂಪನಿಷ್ಪತ್ತಿ ಕೊಂಚ ಕ್ಲೇಶದಾಯಕವಾಗಿರುವುದರಿಂದ ಪ್ರಾಕೃತಜ್ಞರು ಅದನ್ನು ದೇಶೀಶಬ್ದಗಳ ಪಟ್ಟಿ ಯಲ್ಲಿ ಸೇರಿಸಿದ್ದಾರೆ. ಏನೇ ಆಗಿರಲಿ, ವಡ್ಡಾರಾಧಣಾ ಎಂದರೆ ದೊಡ್ಡ ಆರಾಧನೆ ಎಂದರ್ಥ; ಮೇಲೆ ತೋರಿಸಿರುವಂತೆ 'ಭಗವತೀ ಆರಾಧನಾ' ಗ್ರಂಥವು ಇದು ವರೆಗೆ ದೊರೆತಿರುವ ಆರಾಧನಾ ಗ್ರಂಥಗಳಲ್ಲಿ ಒಂದು ದೊಡ್ಡ ಗ್ರಂಥವಾಗಿದೆ. ಆದ್ದರಿಂದ 'ಭಗವತೀ ಆರಾಧನಾ' ಗ್ರಂಥವನ್ನು ಇತ್ತೀಚೆಗೆ ರಚಿತವಾದ ಇತರ ಸಣ್ಣ ಆರಾಧನಾ ಗ್ರಂಥಗಳಿಂದ ಪ್ರತ್ಯೇಕಿಸುವುದಕ್ಕಾಗಿ 'ಮೂಲಾರಾಧನಾ' 'ವಡ್ಡಾರಾಧಣಾ' ಎಂಬಿತ್ಯಾದಿ ಹೆಸರುಗಳಿಂದ ಕರೆದರೆಂದು ಕಾಣುತ್ತದೆ. ಮೇಲೆ ಹೇಳಿದ ಕವಚವಿಶಿಷ್ಟವಾದ ಪರಿಸಮಾಪ್ತಿ ವಾಕ್ಯವು ಭಗವತೀ ಆರಾಧನಾ ಗ್ರಂಥ ವನ್ನೂ ಅದರ ಕರ್ತೃ ಶಿವಕೋಟಿಯನ್ನೂ ನಿರ್ದೇಶಿಸುತ್ತಿದೆಯೇ ಹೊರತು ಕನ್ನಡ ಗ್ರಂಥದ ಹೆಸರನ್ನಾಗಲಿ ಅದರ ಕರ್ತನನ್ನಾಗಲಿ ಕುರಿತು ಏನನ್ನೂ ತಿಳಿಸುತ್ತಿಲ್ಲ.

ಕೊಲ್ಲಾಪುರದ ಪ್ರತಿಯನ್ನು ಅನುಸರಿಸಿ ಪಾಠಕರು ಗ್ರಂಥಕರ್ತನ ಹೆಸರನ್ನು

ರೇವಾಕೋಟ್ಯಾಚಾರ್ಯ ಎಂದು ಪ್ರಚಾರಕ್ಕೆ ತಂದರು. ಜೈನ ಲೇಖಕರಲ್ಲಿ ಯಾರಿಗಾದರೂ ಈ ಹೆಸರಿದ್ದುದು ತೀರ ಅಸಂಭವ ; ಮೂಲಮಾತೃಕೆಯಲ್ಲಿದ್ದ ಹಳಗನ್ನಡದ 'ಶಿ' ಎಂಬಕ್ಷರವನ್ನು ಕೊಲ್ಲಾಪುರ ಪ್ರತಿಯ ಲೇಖಕನು 'ರೆ' ಎಂದು ತಪ್ಪಾಗಿ ಬರೆದಿರುವುದು ಹೆಚ್ಚು ಸಂಭವವಾಗಿದೆ; ಈಚೆಗೆ 'ಶಿವಕೋಟ್ಯಾಚಾರ್ಯ' ಎಂಬ ಪಾಠವನ್ನು ಕೊಡುವ ಇತರ ಪ್ರತಿಗಳು ಬೆಳಕಿಗೆ ಬಂದಿವೆ. ಈ ಕನ್ನಡ ಕಥೆಗಳಿಗೆ ಮೂಲವಾದ ಪದ್ಯಗಳನ್ನುಳ್ಳ ವಡ್ಡಾರಾಧಣಾ ಎಂಬ ಗ್ರಂಥದ ಕರ್ತ ಶಿವಕೋಟಿಯೆಂದು ಮೇಲೆ ಕೊಟ್ಟಿರುವ ಗ್ರಂಥ ಪರಿಸಮಾಪ್ತಿವಾಕ್ಯದ ಅಭಿಪ್ರಾಯವೆಂದು ಇದುವರೆಗೆ ಮಾಡಿರುವ ವಿಚಾರದಿಂದ ಸ್ಪಷ್ಟವಾಗಿದೆ. ಮೂಡಬಿದರೆ ಕೊಲ್ಲಾಪುರ ಪ್ರತಿಗಳನ್ನು ಅನುಸರಿಸಿ ಈ ಕನ್ನಡ ಕೃತಿಯನ್ನು 'ವಡ್ಡಾರಾಧನೆ' ಎಂದು ಕರೆಯಬಹುದಾದರೂ ಆ ಕಥೆಗಳ ರಚನೆಯನ್ನು ಶಿವಕೋಟಿಯ ತಲೆಗೆ ಕಟ್ಟುವುದಕ್ಕೆ ಯಾವ ಆಧಾರವೂ ಕಾಣುವುದಿಲ್ಲ. ನಿರ್ಣಯವಿಷ್ಟು : ಈ ಕಥೆಗಳನ್ನು ವಡ್ಡಾರಾಧನೆ ಎಂದು ಕರೆಯಬಹುದು; ಅವುಗಳ ಕರ್ತೃ ಯಾರೋ ನಮಗೆ ತಿಳಿಯದು.

ಶಿವಕೋಟಿಯ ಮತ್ತು ಅವನ 'ಭಗವತೀ ಆರಾಧನಾ' ಗ್ರಂಥದ ಕಾಲ ಇಂಥದಿರಬಹುದೆಂಬುದನ್ನು ನಾನು ಆಗಲೇ ಚರ್ಚಿಸಿದ್ದೇನೆ.[1] ಈಗ ಈ ಕನ್ನಡ ಗ್ರಂಥದ ಕಾಲವನ್ನು ಸುಮಾರಾಗಿ ಕಂಡುಹಿಡಿಯುವ ಪ್ರಯತ್ನಕ್ಕೆ ತೊಡಗಬೇಕಾಗಿದೆ; ಈ ವಿಷಯವಾಗಿ ಆಗಲೇ ಕೆಲವು ಅಭಿಪ್ರಾಯಗಳು ಪ್ರಕಟವಾಗಿವೆ. (1) ಪಾಠಕರು ಈ ಗ್ರಂಥ ಕ್ರಿ.ಶ. ೧೧೮೮ರಲ್ಲಿ ಹುಟ್ಟಿದ ತೊರಗಲ್ಲು ಶಾಸನಕ್ಕೆ ಸಮಕಾಲಿಕವಾದದ್ದೆಂಬ ಸೂಚನೆಯನ್ನು ಪ್ರಾಸಂಗಿಕವಾಗಿ ಹೇಳಿದ್ದಾರೆ; ಈ ಗ್ರಂಥದ ಪೂರ್ಣಪ್ರತಿಯನ್ನು ಪರೀಕ್ಷೆಮಾಡುವ ಅವಕಾಶ ದೊರೆಯದ್ದರಿಂದ ರಾ. ನರಸಿಂಹಾಚಾರ್ಯರು ಪಾಠಕರ ಅಭಿಪ್ರಾಯವನ್ನು ಸುಮ್ಮನೆ ಒಪ್ಪಿಕೊಂಡು ಸು. ೧೧೮೦ (ಕ್ರಿ.ಶ.) ಎಂದು ಗ್ರಂಥರಚನೆಯ ಕಾಲವನ್ನು ಕೊಟ್ಟಿದ್ದಾರೆ. (2) ಕ್ರಿ.ಶ. ೮ನೆಯ ಶತಮಾನದ ವರೆಗೆ ಕನ್ನಡ ಶಾಸನಗಳಲ್ಲಿ ದೊರೆಯುವ ಒಂ, ಒಳ್, ಒರ್, ಮುಂತಾದ ಹಳೆಯ ಪ್ರತ್ಯಯಗಳು ಈ ಗ್ರಂಥದಲ್ಲಿ ಪ್ರಯೋಗವಾಗಿವೆ; ಇರ್ದೊನ್, ಪೊರ್ದಿದೊನ್ ಮುಂತಾದ ಹಳೆಯ ಕ್ರಿಯಾರೂಪಗಳು ಇಲ್ಲಿವೆ; ಹತ್ತನೆಯ ಶತಮಾನದ ವರೆಗಿನ ಕನ್ನಡ ಗ್ರಂಥಗಳಲ್ಲಿ ದೊರೆಯುವ ಅಮ್ಮ (= ಅಪ್ಪ) ಎಂಬುದು ಈ ಗ್ರಂಥದಲ್ಲಿ ಸಿಕ್ಕುವುದು; ಚಾವುಂಡರಾಯ ಪುರಾಣದ (ಕ್ರಿ.ಶ. ೯೭೮) ಶೈಲಿಗೂ ಇದರ ಶೈಲಿಗೂ ಸಾದೃಶ್ಯವಿದೆ; ಇಲ್ಲಿ ಬರುವ ಭದ್ರಬಾಹುವಿನ ಕಥೆಗೂ ಕ್ರಿ.ಶ. ೯೩೧ರಲ್ಲಿ ಹರಿಷೇಣನಿಂದ ರಚಿತವಾದ 'ಕಥಾಕೋಶ'ದಲ್ಲಿರುವ

[1] ಈ ವಿಷಯವು ಇಂಗ್ಲಿಷ್ ಪ್ರಸ್ತಾವನೆಯ ಮುಂಚಿನ ಅಂಶದಲ್ಲಿ ಚರ್ಚಿತವಾಗಿದೆ.

ಭದ್ರಬಾಹುವಿನ ಕಥೆಗೂ ಹೋಲಿಕೆಯಿರುವುದರಿಂದ ಆ ಸಂಸ್ಕೃತ ಗ್ರಂಥ ಇದಕ್ಕೆ ಆಕರವಾಗಿರಬಹುದು—ಈ ಕಾರಣಗಳಿಂದ ಶ್ರೀ ಡಿ. ಎಲ್. ನರಸಿಂಹಾಚಾರ್ಯರು ಈ ಗ್ರಂಥದ ಕಾಲ ಸು. ೯೪೦ ಇರಬೇಕೆಂದು ಹೇಳಿದ್ದಾರೆ. (3) ಈ ಗ್ರಂಥದ ಕಾಲನಿರ್ಣಯಕ್ಕೆ ಶ್ರೀ ಎಂ. ಗೋವಿಂದ ಪೈ ಅವರು ಈ ಮುಂದೆ ಹೇಳುವ ವಾದವನ್ನು ಹೂಡಿದ್ದಾರೆ. ಭರ್ತೃಹರಿ ಶತಕಗಳಲ್ಲಿರುವ ಕೆಲವು ಪದ್ಯಗಳು 'ವಡ್ಡಾರಾಧನೆ'ಯಲ್ಲಿ ಉದ್ಧೃತವಾಗಿವೆ; ಆದರೆ ಆ ಶತಕಗಳ ಪಾಠವಾಗಲಿ ಕಾಲವಾಗಲಿ ನಿರ್ಣೀತವಾಗಿಲ್ಲ. 'ವಡ್ಡಾರಾಧನೆ'ಯಲ್ಲಿ ದೀನಾರ ಎಂಬ ಪದವು ಪ್ರಯೋಗವಾಗಿರುವುದರಿಂದ ಆ ಗ್ರಂಥ ಕ್ರಿ.ಶ. ೨ನೆಯ ಶತಮಾನಕ್ಕಿಂತ ಈಚಿನದಾಗಿರಬೇಕು. ಕ್ರಿ.ಶ. ೬೫೦ ರ ಶ್ರವಣಬೆಳಗೊಳದ ಶಾಸನದಲ್ಲಿ ಪ್ರಥಮತಃ ಪ್ರಯುಕ್ತವಾಗಿರುವ ಕಬ್ಬಪ್ಪು ಎಂಬ ಪದದಿಂದಲೇ ಬೆಳಗೊಳವನ್ನು ಈ ಗ್ರಂಥದಲ್ಲಿ ಕರೆದಿರುವುದರಿಂದ ಈ ಗ್ರಂಥ ಕ್ರಿ.ಶ. ೬೫೦ ಕ್ಕಿಂತ ಸಾಕಷ್ಟು ಹಿಂದಿನದಾಗಿರಬೇಕು. ಇದನ್ನು ಸಮರ್ಥಿಸುವುದಕ್ಕಾಗಿ ಅವರು ಪ್ರಾಚೀನ ಕನ್ನಡ ಗ್ರಂಥಗಳಿಂದಲೂ ಶಾಸನಗಳಿಂದಲೂ ಶಬ್ದಗಳನ್ನೂ ಶಬ್ದರೂಪಗಳನ್ನೂ ಕ್ರೋಡೀಕರಿಸಿದ್ದಾರೆ; ಆದ್ದರಿಂದ ಕನ್ನಡ 'ವಡ್ಡಾರಾಧನೆ'ಯ ಕಾಲವನ್ನು ಕ್ರಿ.ಶ. ೬ನೆಯ ಶತಮಾನಕ್ಕಿಂತ ಈಚೆಗೆ ಹಾಕಲಾಗುವುದಿಲ್ಲ. ಅವರ ಕೆಲವು ಹೇಳಿಕೆಗಳು ಆಧಾರರಹಿತವಾದುವು, ಕಾಲ್ಪನಿಕವಾದುವು; ತಮ್ಮ ಉದ್ದೇಶಸಾಧನೆಗಾಗಿ ಎಲ್ಲ ಯುಕ್ತಿಗಳನ್ನೂ ಹೇಗೋ ಬಳಸಿಕೊಂಡು ಈ ಗ್ರಂಥಕ್ಕೆ ಅತಿಪ್ರಾಚೀನವಾದ ಕಾಲವನ್ನು ಕೊಡಲೇಬೇಕೆಂಬ ಆಗ್ರಹವನ್ನು ಅವರು ತೊಟ್ಟಿರುವಂತೆ ಯಾರಿಗಾದರೂ ತೋರಬಹುದು.[1] ಅವರು ಕೊಡುವ ಕಾರಣಗಳೂ ಹೂಡಿರುವ ಪೂರ್ವಪಕ್ಷಗಳೂ ಅವರ ಸಿದ್ಧಾಂತದ ಕಡೆಗೆ ತರ್ಕಬದ್ಧವಾಗಿ ಸಾಗುವುದಿಲ್ಲ. ಕಾಲನಿರ್ಣಯ ಕಾರ್ಯವು ಅಭಿರುಚಿಯ ಮತ್ತು ಅಭಿಪ್ರಾಯತೀವ್ರತೆಯ ವಿಷಯವಲ್ಲ: ದೊರೆಯುವ ಆಧಾರಗಳನ್ನು ನಿಷ್ಪಕ್ಷಪಾತತೆಯಿಂದ ವಿಮರ್ಶಿಸಿ ಈ ಗ್ರಂಥದ ಕಾಲವಿಷಯವಾಗಿ ವರಿಷ್ಠ ಕನಿಷ್ಠ ಕಾಲಾವಧಿಗಳಾವುವೆಂಬುದನ್ನು ಕಂಡುಹಿಡಿಯಬೇಕಾಗಿದೆ. (೪) ಪ್ರೊ. ಎಸ್. ಶ್ರೀಕಂಠ ಶಾಸ್ತ್ರಿಗಳು ತಮ್ಮ ನಿರ್ಣಯಕ್ಕೆ ಯಾವ ವಾದವನ್ನೂ ಹೂಡದೆ ಶಿವಕೋಟಿಯ 'ವಡ್ಡಾರಾಧನೆ' ಕ್ರಿ.ಶ. ೭ನೆಯ ಶತಮಾನಕ್ಕೆ ಸೇರುತ್ತದೆಂದು ಹೇಳಿದ್ದಾರೆ.

[1] ಶ್ರೀ. ಪೈ ಅವರ ಕೆಲವು ಹೇಳಿಕೆಗಳೂ ಪೂರ್ವಪಕ್ಷಗಳೂ ತಪ್ಪಾಗಿವೆಯಲ್ಲದೆ ತಿಳಿದ ಸಂಗತಿಗಳಿಗೆ ವಿರುದ್ಧವೂ ಆಗಿವೆ. ಸಂಸ್ಕೃತ ಕೃತಿಯಲ್ಲಿ ಪ್ರಾಕೃತ ಗಾಥಗಳನ್ನು ರಚಿಸಿಡುವ ಅಥವಾ ಉದ್ಧರಿಸುವ ಪದ್ಧತಿಯಿಲ್ಲವೆಂದೂ, ಪ್ರಾಕೃತ ಕೃತಿಗಳಲ್ಲಿ ಸಂಸ್ಕೃತ ಪದ್ಯವೇಷ್ಟನವಾಗಲಾರದೆಂದೂ, ಪ್ರಾಕೃತವು ಪ್ರೌಢ ಸಾಹಿತ್ಯವಲ್ಲವೆಂದೂ ಇರುವ ಅವರ ಹೇಳಿಕೆಗಳೆಲ್ಲ ಕಾಲ್ಪನಿಕವಾದುವು; ಚರ್ಚಿಸಿ ಸುಳ್ಳೆಂದು ಸಾಧಿಸುವುದಕ್ಕೂ ಅವು ಅನರ್ಹ.

ಈ ಗ್ರಂಥವನ್ನು, ಅದರಲ್ಲಿಯೂ ಅಚ್ಚಾಗಿರುವ ಭಾಗವನ್ನು, ಕಣ್ಣಿಟ್ಟು ಓದಿರುವುದರಿಂದ ನನಗೆ ಕೆಲವು ಸಂಗತಿಗಳು ತಿಳಿದುಬಂದಿವೆ; ಅವುಗಳನ್ನು ಇಲ್ಲಿ ನಮೂದಿಸಿ ಈ ಮುಖ್ಯವಾದ ಕನ್ನಡ ಗ್ರಂಥದ ರಚನೆ ಯಾವ ಕಾಲಾವಧಿಯಲ್ಲಿ ನಡೆದಿರಬೇಕೆಂಬುದನ್ನು ತಿಳಿಸಲು ಪ್ರಯತ್ನಿಸುತ್ತೇನೆ. ಆಂತರಿಕ ಆಧಾರಗಳನ್ನು ಪರಿಶೀಲಿಸುವಾಗ ಈ ಗ್ರಂಥದಲ್ಲಿ ಪ್ರಾಕೃತ (ಅಪಭ್ರಂಶವೂ ಸೇರಿ), ಸಂಸ್ಕೃತ ಕನ್ನಡ ಪದ್ಯವೇಷ್ಟನಗಳು ಹೇರಳವಾಗಿರುವುದು ಕಂಡುಬರುತ್ತದೆ. ಕೆಲವು ಪ್ರಾಕೃತ ಸಂಸ್ಕೃತ ಪದ್ಯಗಳು ಈ ಗ್ರಂಥದ ಪ್ರಾಕೃತ ಮೂಲದಿಂದ ನೇರವಾಗಿ ಬಂದಿರಲೂ ಬಹುದು; ಉಳಿದ ಕೆಲವು, ಕನ್ನಡ ಪದ್ಯಗಳೂ ಸೇರಿ, ಈ ಕನ್ನಡ ಗ್ರಂಥಕರ್ತನೇ ಸೇರಿಸಿದುವಾಗಿರಬಹುದು. ಒಂದೇ ಅರ್ಥವನ್ನು ಕೊಡುವ ಪದ್ಯವೃಂದಗಳು ಏಕೆ ಬಂದಿವೆಯೆಂಬುದು (ಪು. ೮, ೯, ೯೬, ೯೭, ಇತ್ಯಾದಿ) ಇದರಿಂದ ಸ್ವಲ್ಪ ವಿಶದ ವಾಗಬಹುದು. ಎಲ್ಲ ದೊರೆಯುವ ಪ್ರತಿಗಳಲ್ಲಿಯೂ ಏಕಕಂಠವಾಗಿ ಉದ್ಧೃತ ವಾಗಿರುವ ಈ ಪದ್ಯವೇಷ್ಟನಗಳ ಮೂಲಗಳನ್ನು ನಾವು ಕಂಡುಹಿಡಿದರೆ ಈ ಗ್ರಂಥದ ವರಿಷ್ಠಕಾಲಾವಧಿಯನ್ನು ಗೊತ್ತುಮಾಡಲು ಅಷ್ಟೇನೂ ಕಷ್ಟವಾಗಲಾರದು. ಕೆಲವು ಪದ್ಯವೇಷ್ಟನಗಳ ಮೂಲಗಳನ್ನು ನನಗೆ ಕಂಡುಹಿಡಿಯಲು ಸಾಧ್ಯವಾಯಿತು; ಅವುಗಳನ್ನು ಈಗಿನ ಮಟ್ಟಿಗೆ ತಿಳಿದಿರುವ ಕಾಲಕ್ರಮದ ಪ್ರಕಾರ ಕೆಳಗೆ ನಮೂದಿಸು ತ್ತೇನೆ. ಹತ್ತೊಂಬತ್ತು ಕಥೆಗಳ ಆರಂಭದಲ್ಲಿರುವ ಗಾಹೆಗಳೂ, ಕೊಲ್ಲಾಪುರದ ಪ್ರತಿಯ ಕೊನೆಯಲ್ಲಿರುವ ಮೂರು ಗಾಹೆಗಳೂ ಗುರುದತ್ತನ ಕಥೆಯಲ್ಲಿ ಉದ್ಧೃತ ವಾಗಿರುವ "ಜಹ ಜಹ" ಎಂದು ಮೊದಲಾಗುವ ಗಾಹೆಯೂ (ಕೊಲ್ಲಾಪುರದ ಪ್ರತಿ, ಪು. ೧೨೦) ಶಿವಕೋಟಿಯಿಂದ ರಚಿತವಾದ 'ಭಗವತೀ ಆರಾಧನಾ' ಗ್ರಂಥ ದಲ್ಲಿ ಅಲ್ಪಪಾಠಭೇದಗಳೊಡನೆ ದೊರೆಯುತ್ತವೆ. ಕನ್ನಡ ಗ್ರಂಥಕರ್ತನು ಮಂಗಳ ಶ್ಲೋಕಗಳೆಂದು, ಕೊಲ್ಲಾಪುರದ ಪ್ರತಿಯ ಪ್ರಕಾರ, ಗ್ರಂಥಾದಿಯಲ್ಲಿ ಕೊಟ್ಟಿರುವ ಮೂರು ಪ್ರಾಕೃತಪದ್ಯಗಳಲ್ಲಿ ಮೊದಲನೆಯದು ಕುಂದಕುಂದಾಚಾರ್ಯರ 'ಪಂಚಾಸ್ತಿ ಕಾಯ' (ಸಂ. ೧)ದಲ್ಲಿಯೂ ಎರಡನೆಯದು 'ಪ್ರವಚನಸಾರ' (ಸಂ. ೧) ದಲ್ಲಿಯೂ ಸಿಕ್ಕುತ್ತವೆ. 'ಖಮ್ಮಾಮಿ . . .' ಎಂದು ಮೊದಲಾಗುವ ಗಾಹೆ (ಪು. ೪೩) 'ಮೂಲಾಚಾರ'ದಲ್ಲಿಯೂ (II. ೭) 'ಪ್ರತಿಕ್ರಮಣ'ದಲ್ಲಿಯೂ (ಪು. ೯, ಭಾವನಗರ ಮುದ್ರಣ, ಸಂವತ್ ೧೯೫೪) ದೊರೆಯುತ್ತದೆ; 'ಹಾದುಟ್ಠು . . .' ಎಂದು ಪ್ರಾರಂಭವಾಗುವ ಪದ್ಯವೂ ಅಲ್ಪಪಾಠವ್ಯತ್ಯಾಸಗಳನ್ನು ಹೊಂದಿ 'ಪ್ರತಿಕ್ರಮಣ' ಗ್ರಂಥಕ್ಕೇ ಸೇರಿರುವಂತೆ (ಅದೇ, ಪು. ೧೦) ಕಾಣುತ್ತದೆ. 'ಯದ್ಯಪಿ . . . .' ಎಂಬ ಪದ್ಯ ಉಮಾಸ್ವಾತಿಯ 'ಪ್ರಶಮರತಿ ಪ್ರಕರಣ'ದಿಂದ ಉದ್ಧೃತವಾದದ್ದು.

ಗ್ರಂಥಾದಿಯ 'ನಮಃ ಶ್ರೀ . . .' ಎಂಬ ಸಂಸ್ಕೃತ ಪದ್ಯ, ಸು. ಕ್ರಿ.ಶ. ೨ನೆಯ ಶತಮಾನಕ್ಕೆ ಸೇರಿದವರಾದ ಸಮಂತ ಭದ್ರರ 'ರತ್ನಕರಂಡಕ' ಗ್ರಂಥದ ಮಂಗಳ ಶ್ಲೋಕವಾಗಿದೆ. 'ಯೇಷಾಂ ನವಿದ್ಯಾ . . .' (ಪು. ೯೭), 'ಯಾವತ್ ಸ್ವಸ್ಥ ಮಿದಂ . . .' (ಪು. ೨೨೯), ಮತ್ತು 'ತೃಷ್ಣಾಂಥಿಂಧಿ . . . (ಪು. ೧೨೧ (*a*) ಕೊಲ್ಲಾಪುರ ಪ್ರತಿ) ಎಂಬ ಪದ್ಯಗಳು ಭರ್ತೃಹರಿಯ ಶತಕಗಳಿಂದ (ನೀತಿ, ೧೩; ವೈರಾಗ್ಯ, ೮೮; ನೀತಿ, ೭೭)[1] ಬಂದಿವೆ; ಆದರೆ ಭರ್ತೃಹರಿಯ ಕಾಲವಾಗಲಿ ಆತನ ಶತಕಗಳಲ್ಲಿ ಇಂಥ ಮತ್ತು ಇಷ್ಟೇ ಪದ್ಯಗಳಿದ್ದಿರಬೇಕೆಂಬ ವಿಷಯವಾಗಲಿ ಅನಿರ್ದಿಷ್ಟ ವಾಗಿದೆ. 'ಛಿಜ್ಜಉ . . .' ಎಂಬ ಅಪಭ್ರಂಶ ಪದ್ಯವೇಷ್ಟನವು ಕ್ರಿ.ಶ. ೬ನೆಯ ಶತಮಾನದಲ್ಲಿ ಪ್ರಾಯಶಃ ಜೀವಿಸಿದ್ದ ಜೋಇಂದು[2] ಎಂಬಾತನ 'ಪರಮಾತ್ಮ ಪ್ರಕಾಶ'ಕ್ಕೆ ಸೇರಿದ್ದಾಗಿದೆ. ಗುರುದತ್ತನ ಕಥೆಯಲ್ಲಿ ಕಾಣುವ 'ಕಸ್ಯಮಾತಾ . . .' ಎಂದು ಮೊದಲಾಗುವ ಪದ್ಯ (ಪು. ೧೧೯ (*a*) ಕೊ. ಪ್ರತಿ) ಕ್ರಿ.ಶ. ಸು. ೭ನೆಯ ಶತಮಾನದ ಅಂತ್ಯದಲ್ಲಿದ್ದ ಜಟಾಸಿಂಹನಂದಿಯಿಂದ ವಿರಚಿತವಾದ 'ವರಾಂಗಚರಿತ' ದಲ್ಲಿ ದೊರೆಯುತ್ತದೆ (xv. ೭೮)[3]. 'ಆದೌಜನ್ಮ . . .' ಎಂದು ಮೊದಲಿಡುವ ಪದ್ಯ 'ಮಹಾಪುರಾಣ'ದಲ್ಲಿ, ಗುಣಭದ್ರರು ವಿರಚಿಸಿದ ಭಾಗದಲ್ಲಿ, ದೊರೆಯುತ್ತದೆ (ಆದಿ. ೪೬–೧೯೬, ಪು. ೩೧೨೧, ಕೊಲ್ಲಾಪುರ ಮುದ್ರಣ); ಗುಣಭದ್ರರು ಈ ಭಾಗವನ್ನು ಶಕ ೮೨೦ (+ ೭೮ = ಕ್ರಿ.ಶ. ೮೯೮) ಕ್ಕೆ, ಎಂದರೆ ಲೋಕಸೇನನು ಆ ಗ್ರಂಥಕ್ಕೆ ಪ್ರತಿಷ್ಠೆಯನ್ನುಂಟುಮಾಡಿದ ಕಾಲಕ್ಕೆ, ಕೊಂಚ ಹಿಂದೆಯೇ ಪೂರ್ಣಗೊಳಿಸಿದರು.[4] ಈ ಪದ್ಯವೇಷ್ಟನಗಳು ಮೇಲೆ ಹೇಳಿರುವ ಆಕರ ಗ್ರಂಥಗಳಿಗಿಂತ ಇನ್ನೂ ಹೆಚ್ಚು ಪ್ರಾಚೀನವಾದ ಗ್ರಂಥಗಳಲ್ಲಿ ದೊರೆಯುವುವೆಂದೂ ಕನ್ನಡ ಗ್ರಂಥದಲ್ಲಿ ಉದ್ಧೃತ ವಾಗಿರುವ ಪದ್ಯಗಳ ಸತ್ಯತೆಯ ಬಗ್ಗೆ ಸಂದೇಹವಿದೆಯೆಂದೂ ಬೇರೆ ಆಧಾರಗಳನ್ನಿತ್ತು ತೋರಿಸಿಕೊಡುವ ವರೆಗೆ ಕನ್ನಡ 'ವಡ್ಡಾರಾಧನೆ' ಶಕ ೮೨೦ ಅಥವಾ ಕ್ರಿ.ಶ. ೮೯೮ಕ್ಕಿಂತ ಹಿಂದಿನದಲ್ಲವೆಂದು ಒಪ್ಪಿಕೊಳ್ಳಲೇಬೇಕಾಗುತ್ತದೆ.

ಇತರ ಪದ್ಯವೇಷ್ಟನಗಳಲ್ಲಿ 'ಸೋಽಧರ್ಮ್ಮೋ - - -' ಎಂಬ ಪದ್ಯ (ಪು. ೯) ವನ್ನು ಪದ್ಮಪ್ರಭಾನೆಂಬಾತನು[5] (ಕಾಲ. ಸು. ೧೨–೧೩ನೆಯ ಶತಮಾನಗಳ ಅಂತ್ಯಾದಿ)

---

[1] ಈ ಸಂಖ್ಯೆಗಳು ತೆಲಾಂಗ್ ಅವರ ಮುದ್ರಣದಿಂದ (ಬೊಂಬಾಯಿ, ೧೮೭೪).

[2] ಆ ಗ್ರಂಥದ ಪೀಠಿಕೆ ಪು. 67. ನನ್ನಿಂದ ಸಂಪಾದಿತವಾದದ್ದು (ಬೊಂಬಾಯಿ, 1937).

[3] ಮಾಣಿಕಚಂದ್ರ ದಿ. ಜೈ. ಗ್ರಂಥಮಾಲೆಯಲ್ಲಿ ನನ್ನಿಂದ ಸಂಪಾದಿತವಾದದ್ದು (ಬೊಂಬಾಯಿ, ೧೯೩೮), ಪೀಠಿಕೆ, ಪು. 22; ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ, XXV, ಸಂ. ೩, ಪು. ೧೩೩-೧೪೬.

[4] ಪ್ರೇಮಿ : ಜೈನ ಸಾಹಿತ್ಯ ಔರ್ ಇತಿಹಾಸ್, ಪು. ೫೧೩f.

[5] *Journal of the University of Bombay*, September, 1942.

'ನಿಯಮಸಾರ' ಕ್ಕೆ ತಾನು ಬರೆದಿರುವ ವ್ಯಾಖ್ಯಾನದಲ್ಲಿ (I. ೬, ಪು. ೬) 'ತಥಾ ಚೋಕ್ತಂ' ಎಂದು ಉದ್ಧರಿಸಿರುವುದು ಕಾಣುತ್ತದೆ; 'ಕಾಲೇ ಸಂಪ್ರತಿ' ಎಂಬ ಪದ್ಯ (ಪು. ೮೧) ಸು. ಕ್ರಿ.ಶ. ೧೪೯೪ರಲ್ಲಿದ್ದ ಸಕಲಕೀರ್ತಿಯ 'ಸುಭಾಷಿತಾವಲೀ' ಎಂಬ ಗ್ರಂಥದಲ್ಲಿ ಅಲ್ಪಪಾಠ ಭೇದಸಹಿತವಾಗಿ ದೊರೆಯುತ್ತದೆ; ಆದರೆ ಇದು ಸಂಕಲನ ಗ್ರಂಥ. ಪ್ರಕೃತ ನಮ್ಮ ಗ್ರಂಥದ ಕಾಲನಿರ್ಣಯಕ್ಕೆ ಈ ಆಧಾರಗಳಿಂದ ಯಾವ ಪ್ರಯೋಜನವೂ ಇಲ್ಲ.

ಹರಿಷೇಣನ 'ಕಥಾಕೋಶ'ವು ಗಂಧರ್ವಭೂಪಾಲ ಎಂಬ ರಾಜನೊಬ್ಬನನ್ನು ಹೆಸರಿಸಿದೆ (೧೨೭–೧೫೨); ಆದರೆ ಅದೇ ಸಂದರ್ಭದಲ್ಲಿ ಈ ಕನ್ನಡ ಗ್ರಂಥ 'ಸುಂದರ ಪಾಂಡ್ಯ' ಎಂದು ಆ ರಾಜನ ಹೆಸರನ್ನು ಹೇಳುತ್ತದೆ; ಇದಕ್ಕೆ ಗಂದರ, ಗಾಂದಾರ, ಗಂದಾರ (ಪು. ೩೧) ಎಂಬ ಪಾಠಾಂತರಗಳಿವೆ. ಪಾಂಡ್ಯರಾಜರ ಹೆಸರುಗಳ ಹಿಂದೆ 'ಸುಂದರ' ಎಂಬ ಅಂಕಿತ ಹಲವುಬಾರಿ ಪ್ರಯುಕ್ತವಾಗಿರುವುದರಿಂದಲೂ[1] ಸರಿಯಾದ ಪಾಠವೇ ಅನಿಶ್ಚಿತವಾಗಿರುವುದರಿಂದಲೂ ಈ ಅಂಶವನ್ನು ಕಾಲನಿರ್ಣಯ ಕಾರ್ಯಕ್ಕೆ ಉಪಯೋಗಿಸಿಕೊಳ್ಳುವುದು ಅಪಾಯಕರ.

ಹೀಗೆ 'ವಡ್ಡಾರಾಧನೆ' ಕ್ರಿ.ಶ. ೮೯೮ಕ್ಕಿಂತ ಈಚಿನದೆಂದೂ ಕ್ರಿ.ಶ. ೧೪೦೩ಕ್ಕಿಂತ (ಈಗ ದೊರೆತಿರುವ ಪ್ರಾಚೀನತಮ ಪ್ರತಿಯ ಕಾಲ) ಹಿಂದಿನದೆಂದೂ ದೃಢವಾಗಿ ಸ್ಥಾಪಿಸಬಹುದು.

ಈ ಗ್ರಂಥದ ಶೈಲಿಯನ್ನೂ ವ್ಯಾಕರಣದ ದೃಷ್ಟಿಯಿಂದ ಅಪೂರ್ವವಾದ ಪ್ರಯೋಗಗಳನ್ನೂ ಪರಿಶೀಲಿಸಿ ಮೇಲೆ ಕೊಟ್ಟಿರುವ ಕಾಲಗಳ ಅಂತರವನ್ನು ಕುಗ್ಗಿಸಲು ಸಾಧ್ಯವೇ, ಇಲ್ಲವೇ ಎಂಬುದನ್ನು ನೋಡೋಣ. ಈ ಗ್ರಂಥದ ಗದ್ಯಶೈಲಿ 'ಚಾವುಂಡರಾಯ ಪುರಾಣ'ದ ಶೈಲಿಗಿಂತ ಈಚಿನದೆಂದೂ ನೋಂಪಿ ಕಥೆಗಳ ಗದ್ಯಶೈಲಿಗಿಂತ ಹಳೆಯದೆಂದೂ ನನಗೆ ತೋರುತ್ತದೆ; ಹೀಗೆ ಹೇಳುವಾಗ ಈ ಕಥೆಗಳಲ್ಲಿ ಸಂಸ್ಕೃತ ಪದಪ್ರಯೋಗ ಅಲ್ಪತರವಾಗಿರುವುದನ್ನೂ ಇವುಗಳ ದೇಶೀಯವಾದ ನುಡಿಗಟ್ಟನ್ನೂ ಗಮನಿಸಿದೆ. ಆದ್ದರಿಂದ ಈ ಗ್ರಂಥದ ಕಾಲವನ್ನು ನಾನು 'ಚಾವುಂಡರಾಯ ಪುರಾಣ'ದ ಕಾಲಕ್ಕಿಂತ (ಕ್ರಿ.ಶ. ೯೭೮) ಈಚೆಗೆ ಹಾಕುತ್ತೇನೆ. ಹಳೆಯ ಶಬ್ದರೂಪಗಳೇ ಮುಂತಾದ ಆಧಾರಗಳ ಮೇಲೆ ಈ ಗ್ರಂಥಕ್ಕೆ ಅತಿಪ್ರಾಚೀನತೆಯನ್ನು ಕೊಡುವ ಪ್ರಯತ್ನವಾಗಿದೆ. ಈ ಶಬ್ದರೂಪಗಳ ಮತ್ತು ಪ್ರಯೋಗಗಳ ಬೆಲೆಯನ್ನು ನಿರ್ಣಯಿಸುವಾಗ ಪ್ರತಿಗಳ ಲೇಖಕರು ತಮ್ಮ ತಮ್ಮ

---

[1] Smith: *Early History of India*, 3rd. edition, Oxford, (1914, ಪು. 456, Banerji: *Prehistoric, Ancient and Hindu India*, Calcutta, 1939, ಪು. 283.

ಕಾಲಗಳಲ್ಲಿ ಬಳಕೆಯಲ್ಲಿದ್ದ ಪ್ರಯೋಗಗಳನ್ನು ಅಲ್ಲಿ ಇಲ್ಲಿ ಗ್ರಂಥದಲ್ಲಿ ತಂದುಹಾಕಿ ತಿದ್ದಿರಬಹುದೆಂಬುದನ್ನು ಗಮನದಲ್ಲಿರಿಸಿಕೊಳ್ಳಬೇಕು; ಹೀಗೆ ನಡೆದಿದೆಯೆಂಬುದಕ್ಕೆ ಗ್ರಂಥದಲ್ಲಿರುವ ಹಲವು ಪಾಠಾಂತರಗಳೇ ಸಾಕ್ಷಿಯಾಗಿವೆ; ಆದ್ದರಿಂದ ಇವುಗಳನ್ನು ಆಧಾರವಾಗಿರಿಸಿಕೊಂಡು ಮಾಡುವ ನಿರ್ಣಯಗಳೆಲ್ಲ ಸ್ಥಿರವಾದುವಲ್ಲ. ವ್ಯಾಕರಣದ ದೃಷ್ಟಿಯಿಂದ ಪ್ರಾಚೀನತರವಾದ ಪ್ರಯೋಗರೂಪ ಸಾಮಗ್ರಿ ಗ್ರಂಥದಲ್ಲಿದೆಯೆಂದು ಅನ್ನಿಸುತ್ತದೆ; ಆದರೆ ಇದಿಷ್ಟರಿಂದಲೇ ಗ್ರಂಥದ ಪ್ರಾಚೀನತೆಯನ್ನು ಪ್ರಮಾಣಿಸಲು ಸಾಧ್ಯವಿಲ್ಲ; ಗ್ರಂಥಕರ್ತನು ಕನ್ನಡನುಡಿಯ ಪ್ರಾಚೀನ ಅವಸ್ಥಾಭೇದಗಳಲ್ಲಿ ಪರಿಣತನಾಗಿದ್ದನೆಂಬುದನ್ನು ಇವು ಸೂಚಿಸಬಹುದು. ಶ್ರೀವರ್ಾ ಪೈಗಳು ಮಾಡಿರುವಂತೆ ಹಳೆಯ ಶಬ್ದರೂಪಗಳನ್ನು ಕಂಡು ಹಿಡಿಯುವುದಷ್ಟೇ ಸಾಲದು; ಅವು ಎಲ್ಲಿಯವರೆಗೆ ಬಳಕೆಯಲ್ಲಿದ್ದುವು, ಯಾವಾಗ ಅವು ತಪ್ಪಿಹೋಗಿ ಹೊಸರೂಪಗಳಿಗೆ ಎಡೆಕೊಟ್ಟವು ಎಂಬ ಕಾಲಾವಧಿಯನ್ನು ನಿರ್ಣಯಿಸಲು ಸಾಧ್ಯವಾಗಿರಬೇಕು; ಹೀಗೆ ಮಾಡಿದರೂ ಕೂಡ ಆ ಕಾಲದ ಈಚಿನ ಎಲ್ಲೆಯನ್ನು ಸದ್ಯದ ಮಟ್ಟಿಗೆ ಹೇಳಲು ಸಹಾಯವಾಗುವುದೇ ಹೊರತು ಹಿಂದಿನಕಾಲದ ಎಲ್ಲೆಗಲ್ಲ. ನಾನು ಹೇಳುವ ಮಾತುಗಳಿಗೆ ಗ್ರಂಥದ ಸಕೃದವಲೋಕನ ಮಾತ್ರ ಆಧಾರವಾಗಿದೆ; ಕನ್ನಡ ಪಂಡಿತರು ಯಾರಾದರೂ ಕೂಲಂಕಷವಾಗಿ ಗ್ರಂಥವನ್ನು ಅಭ್ಯಾಸಮಾಡಿ ಪ್ರಾಚೀನರೂಪಗಳ ಸಂಖ್ಯಾಬಲಾಬಲಗಳನ್ನು ಗೊತ್ತುಹಚ್ಚಿ ವಿಚಾರಮಾಡುವರೆಂದು ನಂಬಿದ್ದೇನೆ. ಈ ಗ್ರಂಥದಲ್ಲಿ ಪದಾದಿಯ ಪಕಾರಕ್ಕೆ ಸಾಧಾರಣವಾಗಿ 'ಹ' ಬರುವುದಿಲ್ಲ; ಪೋದಪೆಂ (ಪು. ೩), ಪೇಟ್ದಂ (ಪು. ೧೧), ಪುಟ್ಟಿದೊಂ, ಪುಟ್ಟಿದಳ್ (ಪು. ೩೩); ಪೋದನ್ ಎಂಬ ರೂಪವೂ ಉಂಟು (ಪು. ೨೮). ಪಕಾರ ಕ್ರಮೇಣ ಹಕಾರಕ್ಕೆ ಮಾರ್ಪಾಟಾದದ್ದು ಕ್ರಿ.ಶ. ೧೧ನೆಯ ಶತಮಾನವಾದ ಮೇಲೆ ಎಂದು ಶಾಸನಗಳಿಂದ ತಿಳಿದುಬರುತ್ತದೆ.[1] ಇರ್ದ್ದು (ಪು. ೪೮), ಇರ್ಪ್ಪೊರ್ (ಪು. ೫೫), ಕರ್ಚಿತ್ತು (ಪು. ೩೧) ಮುಂತಾದೆಡೆಗಳಲ್ಲಿ ರೇಫಸಂಯುಕ್ತ ಈ ಗ್ರಂಥದಲ್ಲಿ ದೊರಕುತ್ತದೆಯೇ ಹೊರತು ಅದಕ್ಕೆ ಸಜಾತೀಯತ್ವ ಪ್ರಾಪ್ತಿಯಾಗಿಲ್ಲ. ಹೀಗೆ ಸಜಾತೀಯವಾಗುವುದು ಹನ್ನೆರಡನೆಯ ಶತಮಾನದ ಮಧ್ಯಭಾಗದ ಜನರ ಬಾಯಿಮಾತಿನಲ್ಲಿ ತಲೆದೋರಿತಾದರೂ ೧೩ನೆಯ ಶತಮಾನ ಮುಗಿಯುವ ಹೊತ್ತಿಗೆ ಸಾರ್ವತ್ರಿಕವಾದ ಭಾಷಾವ್ಯಾಪಾರವಾಗಿ ಪರಿಣಮಿಸಿತು.[2] ಕೊನೆಯದಾಗಿ ಪೊರ್ದಿದೊಂ (ಪು. ೧),

---

[1] A. N. Narasimhaiya: *A Grammar of the Oldest Kanarese Inscriptions*; Mysore (1941) ಪು. 2.

[2] ಅದೇ, ಪು. 92.

ಕಳ್ವೊಂ (ಪು. ೧೨), ಕೂಡಿದೊಂ (ಪು. ೨೭), ಸತ್ತೊಳ್ (ಪು. ೩೪)—ಸತ್ತಳ್ ಎಂದೂ ಉಂಟು (ಪು. ೩೮)—ಎಂಬಂಥ ಕ್ರಿಯಾರೂಪಗಳು ಇಲ್ಲಿ ದೊರೆಯುತ್ತವೆ; ನಿಸ್ಸಂದೇಹವಾಗಿ ಇವು ಪ್ರಾಚೀನರೂಪಗಳು[1]; ಆದರೆ ೧೧ನೆಯ ಶತಮಾನವಾದ ಮೇಲೆ ಇವುಗಳ ಪ್ರಯೋಗ ವಿರಲವಾಗುತ್ತದೆ.[2] ಮೇಲೆ ಹೇಳಿದ ಭಾಷಾವೈಲಕ್ಷಣ್ಯಗಳು ಕನ್ನಡ 'ವಡ್ಡಾರಾಧನೆ'ಯ ಕಾಲ ಕ್ರಿ.ಶ. ೮೯೮–೧೪೦೩ರ ವರೆಗಿರುವ ವಿಶಾಲವಾದ, ಆದರೆ ನಿಷ್ಕೃಷ್ಟವಾದ ಅಂತರಕ್ಕೆ ಸೇರಿದೆಯೆಂಬುದನ್ನೂ, ಬಹುಶಃ ಅದು ೧೧ನೆಯ ಶತಮಾನದಲ್ಲಿ ರಚಿತವಾಗಿರಬಹುದೆಂಬುದನ್ನೂ ಸೂಚಿಸುತ್ತವೆ.

ಮೂಲ (ಇಂಗ್ಲಿಷ್) ಲೇಖಕರು : ಡಾ|| ಎ. ಎನ್. ಉಪಾಧ್ಯೆ
(ಅನುವಾದಕರು : ಡಿ. ಎಲ್. ಎನ್.)

---

[1] ಅದೇ, ಪು. 168, 206.

[2] ಕ್ರಿ.ಶ. ೫ನೆಯ ಶತಮಾನದ, ಅದಕ್ಕೂ ಸ್ವಲ್ಪ ಈಚಿನ, ಶಾಸನಗಳಲ್ಲಿ ದೊರೆಯುವ-ಆನ್, -ಉಳ್ ಎಂಬ ದ್ವಿತೀಯಾ ಸಪ್ತಮೀ ವಿಭಕ್ತಿಗಳೂ,-ಆನ್,-ಆಳ್ ಮತ್ತು-ಅರ್ ಎಂಬ ಪ್ರಥಮ ಪುರುಷ ಏಕ ಬಹುವಚನಗಳ ಪ್ರತ್ಯಯಗಳೂ ವಡ್ಡಾರಾಧನೆಯಲ್ಲಿ ಕಾಣುತ್ತಿಲ್ಲವೆಂದು ನನಗೆ ನನ್ನ ಮಿತ್ರರಾದ ಪ್ರೊ|| ಕುಂದಣಗಾರರು ತಿಳಿಸಿದ್ದಾರೆ (ಹಲ್ಮಿಡಿ ಶಾಸನವನ್ನು ನೋಡುವುದು, *Sources of Karṇāṭaka History*, p. 20)

ಸಂಧ್ಯಾಯಕ್ಷಿಣಿ

ಸಂಧ್ಯಾಶಿಲ್ಪಿಯ ಸುವರ್ಣಯಕ್ಷಿಣಿ
ಮೇಘಲೋಕಕೆ ಓಕುಳಿಯೆರಚಿದೆ
ವಿಧವಿಧ ರೂಪದ ವಿಧವಿಧ ವರ್ಣದ
ಚಿತ್ರರಥೋತ್ಸವಕೆ.
ಚಿಂತಾತೀತಂ ಭಾಷಾತೀತಂ
ಬುದ್ಧಿಗಸಾಧ್ಯಂ ಹೃತ್‌ಸಂವೇದ್ಯಂ
ಭಾವ ತರಂಗಗಳೇಳುತಿವೆ,
ವಿವಿಧಾಕಾರವ ತಾಳುತಿವೆ,
ಗಗನ ಮಹಾ ಮನದಿ !
ನಿಶ್ಚಳ ಪಕ್ಷ್ಮಂ ನಿಶ್ಚಳ ತಾರಂ
ನಿಷ್ಪಂದಿತ ತನು ತಾನ್,
ಕಾಯ್ದ ಕಬ್ಬುನ ನೀರಾಗುವವೋಲ್
ಹೊಮ್ಮಿದ ಗಾನಂ ದೂರಾಗುವವೋಲ್,
ಭಾವ ಸಮಾಧಿಯಿನಂತಸ್ಸಾರನ್
ಧ್ಯಾನಪ್ರಲಯಿತ ಕವಿ ತಾನಾದನ್
ಬೈಗಿನ ಬಾನ್ !

"ಕುವೆಂಪು"

ರಾಹು

'ಒಯ್ಯನೆ ಬಂದಂಬರದೊಳ್
ಮೆಯ್ಯಂ ಮಱೆಮಾಡಿ ಕಲಸಿದಮೃತದ ತುತ್ತಂ
ಸುಯ್ಯದೆಳೆದುಂಬ ಕಾಲನ
ಕಯ್ಯೆನೆ ನಿಮಿರ್ದತ್ತು ರಾಹು ಸಸಿವಿಡಿದೆಡೆಯೊಳ್'

—ಮಧುರ.

ಬಾಬಯ್ಯನ ಮೆರವಣಿಗೆ ಅಂಗಡಿಬೀದಿಯ ಚೌಕಕ್ಕೆ ಬಂದಿತ್ತು. ಜನ ಸುತ್ತಲೂ ಘೇರಾಯಿಸಿ ನಿಂತು ಕೌತುಕದಿಂದ ನೋಡುತ್ತಿದ್ದರು. ಕಿವಿ ಕಿವುಡಾಗುವಂತೆ ಒಂದೆಸಮನೆ ತಂಬಟೆ ಭೋರಿಡುತ್ತಿತ್ತು. ಮಧ್ಯೆಮಧ್ಯೆ ಅದರ ಹೊಯ್ಲನ್ನು ಮೆಟ್ಟಿ 'ಆಲಿ—ದೂಲ' ಎಂಬ ಕೂಗೂ ಅದಕ್ಕೆ ಮರುದನಿ ಕೊಟ್ಟಂತೆ 'ಅಬೀರ್—ಅಜೀರ್' ಎಂಬ ಕೂಗೂ ಅದರ ಜೊತೆಯಲ್ಲಿ ಜನ ಸಮ್ಮರ್ದದ ಮೂಕ ಗದ್ದಲವೂ ಕೇಳಿಬರುತ್ತಿದ್ದುವು. ನಿಮಿಷಕ್ಕೊಮ್ಮೆ ಬಾಬಯ್ಯನ ಮಂಟಪಗಳ ಮುಂದೆ ಗುಗ್ಗುಳ ಹಾಕಿದಂತೆ ಭುಗ್ಗನೆ ಹೊಗೆ ಉರಿಗಳೆದ್ದು ಸಾಂಬ್ರಾಣಿಯ ವಾಸನೆ ಸುತ್ತಿಕೊಳ್ಳುತ್ತಿತ್ತು. ಮಂಟಪಗಳನ್ನು ಹೊತ್ತಿದ್ದವರು ತಪ್ಪುಹೆಜ್ಜೆ ಹಾಕುತ್ತಿದ್ದರು. ಚಿಲ್ಲರೆ ವೇಷಗಳನ್ನು ಹಾಕಿದ್ದ ನಾಲ್ಕಾರುಮಂದಿ ಗರಡಿಯ ಹುಡುಗರು ಮಂಟಪಗಳ ಮುಂದೆ ಅವರಿಗಾಗಿ ತೆರವು ಮಾಡಿದ್ದ ಜಾಗದಲ್ಲಿ ಹಿಡಿತವಿಲ್ಲದ ಕುಣಿತಗಳನ್ನು ಕುಣಿಯುತ್ತಿದ್ದರು. ಮೆರವಣಿಗೆಯ ಮುಂದಾಳುಗಳಂತೆ ಕಂಡುಬರುತ್ತಿದ್ದ ಹಲವುಮಂದಿ ಇಳಿವಯಸ್ಸಿನ ಮುಸಲ್ಮಾನರು ಮೌನವಾಗಿ ತಲೆ ಬಗ್ಗಿಸಿಕೊಂಡು ಮುಂದೆ ನಡೆದುಬರುತ್ತಿದ್ದರು. ನೋಟ ನೋಡುತ್ತಿದ್ದ ಜನದ ದೃಷ್ಟಿ ಗುಂಪಿನಲ್ಲಿ ಏನನ್ನೊ ಹುಡುಕುವಂತೆ ಅಲ್ಲಿಂದಿಲ್ಲಿಗೆ ಇಲ್ಲಿಂದಲ್ಲಿಗೆ ಚಲಿಸುತ್ತಿತ್ತು. ಒಂದನ್ನು ಇನ್ನೊಂದು ಸಂಧಿಸಿ ಏನನ್ನೊ ಪ್ರಶ್ನಿಸುವಂತೆ ತೋರುತ್ತಿತ್ತು. ಆದರೆ ಈ ದೃಷ್ಟಿಪ್ರಶ್ನೆಗೆ ಮೌನವೆ ಉತ್ತರವಾಗಿ ಎಲ್ಲರೂ ಸುಮ್ಮನಾಗಿ ಮತ್ತೆ ಮೂಕನೋಟದಲ್ಲಿ ಮುಳುಗುತ್ತಿದ್ದರು.

ಇಷ್ಟಕ್ಕೂ ಕಾರಣವಿತ್ತು. ಕಳೆದ ಎಂಟು ಹತ್ತು ವರ್ಷಗಳಿಂದ ತಪ್ಪದೆ ಹುಲಿವೇಷ ಹಾಕುತ್ತಿದ್ದ ಅಮೀರ್ ಸಾಬಿ ಈಸಲ ವೇಷ ಹಾಕಿರಲಿಲ್ಲ. ಕೊನೆಗೆ ಗುಂಪಿನಲ್ಲಿ ಕೂಡ ಅವನು ಎಲ್ಲೂ ಕಂಡುಬರಲಿಲ್ಲ. ಅವನೆಲ್ಲಿದ್ದಾನೆಂದೂ ಏಕೆ ವೇಷ ಹಾಕಲಿಲ್ಲವೆಂದೂ ಕೇಳುವ ಕುತೂಹಲ ಗುಂಪಿನಲ್ಲಿ ಬಹುಮಂದಿಗೆ ಇದ್ದರೂ ಅದೇಕೊ ಬಾಯಿಗೆ ಬಂದ ಪ್ರಶ್ನೆಯನ್ನು ನಾಲಗೆಯಿಂದ ತಡೆದು ಸುಮ್ಮನಾಗಿಬಿಡುತ್ತಿದ್ದರು.

ಅಮೀರ್ ಎಲ್ಲಿದ್ದಾನೆಂಬುದು ಗುಂಪಿನಲ್ಲಿ ಯಾರಿಗೂ ತಿಳಿಯದು. ಅವನು ಇಂದು ವೇಷ ಹಾಕದಿರುವುದಕ್ಕೆ ಕಾರಣವನ್ನು ಮಾತ್ರ ಎಲ್ಲರೂ ಹುಡುಕುವವರೆ ಆಗಿದ್ದರು.

ಆದರೆ ಅಮೀರ್ ತನ್ನ ಮನೆಯಲ್ಲೆ ಇದ್ದ. ಮನಸ್ಸನ್ನು ಕಲ್ಲುಮಾಡಿಕೊಂಡು ಕುಳಿತಿದ್ದರೂ ಬಾಬಯ್ಯನ ಮೆರವಣಿಗೆ ಅಂಗಡಿಬೀದಿಗೆ ಬಂದ ಸದ್ದನ್ನೂ ವಾದ್ಯ ಘೋರ್ಗರೆಯುತ್ತಿದ್ದುದನ್ನೂ ಕಿವಿ ಕದ್ದು ಕೇಳಿತು. ಅಮೀರನ ಮೈ ಒಂದು ಕ್ಷಣ ನಡುಗಿಹೋಯಿತು. ಮೈಯಲ್ಲಿ ವಿದ್ಯುತ್ತು ಹರಿದಂತಾಯಿತು. ಕಣ್ಣು ಮುಚ್ಚಿಕೊಂಡು ಹಣೆಯಮೇಲೆ ಕೈಯಿಟ್ಟುಕೊಂಡು ಕುಳಿತ. ಹಣೆ ಕೆಂಡದಂತೆ ಸುಡುತ್ತಿತ್ತು, ಒಡೆದುಹೋಗುವಷ್ಟು ಮಟ್ಟಿಗೆ ಬಡಿದುಕೊಳ್ಳುತ್ತಿತ್ತು. ಕ್ಷಣಕ್ಷಣಕ್ಕೆ ಬಿಸಿಯುಸಿರು ಧಾವಿಸಿ ಬರುತ್ತಿತ್ತು. ಮುಖದಮೇಲೆ ಅಲ್ಲೊಂದು ಇಲ್ಲೊಂದು ಬೆವರು ಹನಿ ಮೂಡುತ್ತಿತ್ತು. ಇದ್ದಕ್ಕಿದ್ದ ಹಾಗೆ ಹೊಸದೊಂದು ಭಾವನೆ ಮನಸ್ಸಿನಲ್ಲಿ ಮಿಂಚಿನಂತೆ ಸುಳಿದುಹೋಯಿತು. ಅಮೀರನ ಮೈ ಮತ್ತೆ ನಡುಗಿತು. ಕಣ್ಣುಬಿಟ್ಟು ಮೈಯನ್ನು ಮೇಲಿನಿಂದ ಕೆಳಗಿನವರೆಗೂ ಒಂದುಸಲ ನೋಡಿಕೊಂಡ. ಥಟ್ಟನೆ ಎರಡು ಕೈಗಳನ್ನೂ ಮೇಲಕ್ಕೆ ಎತ್ತಿ ಹುಲಿವೇಷದ ಒಂದು ವಿಚಿತ್ರ ವಿನ್ಯಾಸವನ್ನು ಅನುಭವಿಸಿದ. ಕಟ್ಟೆಯೊಡೆದು ಕಿತ್ತುಕೊಂಡು ಬರುವ ಪ್ರವಾಹದಂತೆ ಮನಸ್ಸಿನಲ್ಲಿ ನೂರಾರು ಭಾವನೆಗಳು ತುಮುಲವಾಗಿ ಸೆಣಸಿ ಒಂದರಮೇಲೊಂದು ಹಾಯ್ದು ಬಂದವು. ಸರಪಳಿಯಂತೆ ಒಂದಕ್ಕೊಂದು ಕೊಂಡಿಬಿದ್ದು ಹಿಂದಿನದೆಲ್ಲ ಮನಸ್ಸಿನ ಮುಂದೆ ಅಲೆಅಲೆಯಾಗಿ ಸುಳಿಯಿತು. ಅಮೀರ್ ಅದರಲ್ಲಿ ಮುಳುಗಿದ.

* * * * *

ಅಮೀರನ ಹುಲಿವೇಷವೆಂದರೆ ಸೀಮೆಗೇ ಪ್ರಸಿದ್ಧಿ. ಪ್ರತಿವರ್ಷವೂ ಮೊಹರಮಿನಲ್ಲಿ ಅವನು ಹುಲಿವೇಷ ಹಾಕದಿದ್ದ ಸಂದರ್ಭ ಒಂದಾದರೂ ಇಲ್ಲ. ಸುತ್ತ ನಾಲ್ಕೈದು ಊರುಗಳಿಂದ ಜನ ಬಂದು ಅವನ ವೇಷವನ್ನು ನೋಡಿ ಊರ ಮರ್ಯಾದೆ ಸಲ್ಲಿಸಿ ಹೋಗುತ್ತಿದ್ದುದು ವಾಡಿಕೆ. ಹುಲಿವೇಷ ಕಟ್ಟುವುದರಲ್ಲಿ ಬಣ್ಣನೆಗೆ ನಿಲುಕದ ಒಂದು ನೈಪುಣ್ಯವನ್ನು ಅಮೀರ್ ತೋರಿಸುತ್ತಿದ್ದುದೆ ಜನದ ಈ ಮೆಚ್ಚುಗೆಗೆ ಕಾರಣ. ಅವನ ನೃತ್ಯದಲ್ಲಿ ವಿಶಿಷ್ಟವಾದ ಒಂದು ಗಾರುಡಿ ಮೈವೆತ್ತು ನೋಟಕರನ್ನು ಆಶ್ಚರ್ಯ ಮುಗ್ಧರನ್ನಾಗಿ ಮಾಡುತ್ತಿತ್ತು. ಇದನ್ನು ಅರಿತಿದ್ದ ಊರಜನ ಅಮೀರನನ್ನು ನೋಡಿ ಹೆಮ್ಮೆಪಟ್ಟುಕೊಳ್ಳುತ್ತಿದ್ದರು. ಮುಸಲ್ಮಾನರ ಗುಂಪಿಗಂತು ಇದೊಂದು ದೊಡ್ಡ ಗೌರವವೆ ಆಗಿಹೋಗಿತ್ತು.

ಮೊಹರಮಿನಲ್ಲಿ ಅಮೀರ್ ಹುಲಿವೇಷ ಹಾಕುತ್ತಿದ್ದುದು ಒಂದೆ ಒಂದು ದಿನ; ಕೊನೆಯ ದಿನ. ಅದೂ ಕೆಲವು ಘಂಟೆಗಳು ಮಾತ್ರ. ಈ ಕೆಲವು ಗಂಟೆಗಳ ಅವನ

ನೃತ್ಯಕೌಶಲವನ್ನು ನೋಡುವುದಕ್ಕೆ ಜನ ಸಾವಿರವಾಗಿ ಬರುತ್ತಿದ್ದರು. ಮೆರವಣಿಗೆ ಗರಡಿಯ ಕಡೆಯಿಂದ ಹೊರಟು ಕೆಲವು ಮುಖ್ಯ ಬೀದಿಗಳಲ್ಲಿ ಬಂದು ಅಂಗಡಿಬೀದಿಯ ಚೌಕದಲ್ಲಿ ಸ್ವಲ್ಪಹೊತ್ತು ನಿಂತುಕೊಳ್ಳುತ್ತಿತ್ತು. ಅಲ್ಲಿಂದ ಮುಂದೆ ಹೊರಟು ಪಕ್ಕದ ಬೀದಿಯಲ್ಲಿ ಅಮೀರನ ಮನೆಯ ಮುಂದೆ ಹಾದು ಕೆರೆಗೆ ಹೋಗುತ್ತಿತ್ತು. ಆಟ ವಿಶೇಷ ಸಂಭ್ರಮದಿಂದ ನಡೆಯುತ್ತಿದ್ದುದು ಎರಡೆ ಕಡೆ. ಅಂಗಡಿಬೀದಿಯ ಚೌಕದಲ್ಲಿ; ಅಮೀರನ ಮನೆಯ ಮುಂದೆ. ಈ ಎರಡು ಕಡೆಗಳಲ್ಲೂ ಮೆರವಣಿಗೆ ಬರುವುದಕ್ಕೆ ಬಹಳ ಹೊತ್ತು ಮೊದಲೆ ಜನ ಗುಂಪು ಸೇರಿಬಿಡುತ್ತಿದ್ದರು. ಅಂಗಡಿಬೀದಿಯ ಚೌಕಕ್ಕಿಂತಲೂ ಅಮೀರನ ಮನೆಯ ಮುಂದೆಯೆ ಆಟದ ಸ್ವಾರಸ್ಯ ಹೆಚ್ಚು.

ಮೆರವಣಿಗೆ ವಾದ್ಯಘೋಷದೊಡನೆ ಬಂದು ಮನೆಯ ಮುಂದೆ ನಿಂತಾಗ ಗುಂಪಿನ ಮುಂದಾಳುಗಳು ಅಮೀರನ ನೃತ್ಯಕ್ಕೆ ಜಾಗ ತೆರವುಮಾಡಿಕೊಟ್ಟು ಜನವನ್ನು ಸುತ್ತಲೂ ಒಂದು ಆವರಣವಾಗಿ ನಿಲ್ಲಿಸುತ್ತಿದ್ದರು. ಆಟ ಸ್ವಲ್ಪ ಹೊತ್ತು ನಡೆದ ಮೇಲೆ ಅಮೀರನ ಪುಟ್ಟಮಗಳು ಕೈಯಲ್ಲಿ ನಿಂಬೆಹಣ್ಣು ಹೂವಿನ ಹಾರಗಳನ್ನು ಹಿಡಿದುಕೊಂಡು, ಮನೆಯ ಮೆಟ್ಟಲಿಳಿದು ಮೆಲ್ಲನೆ ಗುಂಪು ಬಿಡಿಸಿಕೊಂಡು ಬಂದು, ಅಂಜಿಕೆ ಕುತೂಹಲಗಳು ಬೆರೆತ ಕಣ್ಣುಗಳಿಂದ ಅಮೀರನನ್ನು ನೋಡುತ್ತಾ ಸ್ವಲ್ಪ ಹೊತ್ತು ನಿಂತುಕೊಳ್ಳುತ್ತಿತ್ತು. ಮಗಳ ಕೈಯಲ್ಲಿ ಹೂವಿನಹಾರ ನಿಂಬೆಹಣ್ಣುಗಳನ್ನು ಕೊಟ್ಟು ಕಳಿಸುತ್ತಿದ್ದ ಮಡದಿ ಬಾಗಿಲಿಗೆ ಹಾಕಿದ್ದ ಪರದೆಯನ್ನು ಅರ್ಧ ಓರೆಮಾಡಿ ಕೊಂಡು ನೋಡುತ್ತಾ ನಿಂತಿರುತ್ತಿದ್ದುದೂ ಅಮೀರನಿಗೆ ಕಾಣುತ್ತಿತ್ತು. ಆಟ ಮುಗಿಯುವ ವೇಳೆಗೆ ಅಮೀರ್ ನೃತ್ಯದ ಒಂದು ಭಂಗಿಯಲ್ಲಿ ಮಂಡಿಯೂರಿ ನೆಲದ ವರೆಗೂ ಬಗ್ಗಿ, ಮಗು ಹಾಕುವ ಹಾರವನ್ನು ಕತ್ತಿನಲ್ಲಿ ತಳೆದು, ಮಗುವನ್ನು ಎತ್ತಿಕೊಂಡು ಒಂದು ನಿಮಿಷ ತಲೆಯ ಎತ್ತರದಲ್ಲಿ ಮೆಲ್ಲನೆ ತಿರುಗಿಸುತ್ತಿದ್ದ. ಆಮೇಲೆ ಮಗುವಿನ ಹೂಗೆನ್ನೆಗೆ ಒಂದು ಮುತ್ತಿಟ್ಟು ಅದನ್ನು ಕೆಳಗೆ ಇಳಿಸುತ್ತಿದ್ದ. ಮಗುವಿನ ಕೈಯ ನಿಂಬೆಹಣ್ಣನ್ನು ತೆಗೆದುಕೊಂಡು ತನ್ನ ಬಾಯಲ್ಲಿಟ್ಟುಕೊಂಡು, ಮನೆಯ ಒಳಬಾಗಿಲಲ್ಲಿ ಒಲುಮೆಸೂಸುವ ಕಣ್ಣುಗಳಿಂದ ತನ್ನನ್ನೆ ನೋಡುತ್ತಾ ನಿಂತಿರುತ್ತಿದ್ದ ನಲ್ಲೆಯ ಕಡೆಗೆ ಒಂದು ನೋಟವನ್ನು ಎಸೆದು ಮುಂದೆ ಹೆಜ್ಜೆಹಾಕುತ್ತಿದ್ದ. ಆಗ ಜನ ಜಯಘೋಷಮಾಡುತ್ತಿದ್ದರು. ಆಮೇಲೆ ಕೆರೆಗೆ ಹೋಗಿ ಬಣ್ಣತೊಳೆದುಕೊಂಡು ಮುಸಲ್ಮಾನರ ಗುಂಪಿನ ಗರಡಿ ಜನದ ಮರ್ಯಾದೆ ತೆಗೆದುಕೊಂಡು ಮನೆಗೆ ಬರುತ್ತಿದ್ದ. ಇದು ಯಾವಾಗಲೂ ನಡೆಯುವ ಕಾರ್ಯಕ್ರಮ, ಪದ್ಧತಿ.

ಅಮೀರನಿಗೆ ಜನರಿಂದ ಸಲ್ಲುತ್ತಿದ್ದ ಈ ಗೌರವ ಅವನ ಚಮತ್ಕಾರವಾದ ನೃತ್ಯಕಲೆಗೆ ಇಟ್ಟ ಕಲಶದಂತಿತ್ತು. ಹೊರಗಿನ ಈ ಹೆಮ್ಮೆಯೊಡನೆ ಮನೆಯ ಸುಖವೂ

ಬೆರೆತಿತ್ತು. ಚಿನ್ನದಂಥ ಹೆಂಡತಿ; ಮುತ್ತಿನಂಥ ಮಗು. ಬಡತನದ್ದಾದರೂ ಯಾವ ಕೊರತೆಯನ್ನೂ ಕಾಣದ ಸಂಸಾರ. ಈ ಸಂಸಾರದ ಕೊಡ ತೃಪ್ತಿಯಿಂದ ತುಂಬಿತ್ತು. ಅಂತೆಯೆ ಆ ಮೂವರ ಜೀವ ಒಂದಾಗಿ ಒಬ್ಬರ ಮನಸ್ಸು ಮೂವರದಾಗಿ ಹೆಣೆದು ಹೋಗಿತ್ತು. ಒಲುಮೆಯ ಜೇಡ ಮೂವರನ್ನೂ ಸೇರಿಸಿ ಬಲೆ ನೆಯ್ದಿತ್ತು. ನೂರ್ ಎಂದರೆ ಉನ್ನೀಸಳಿಗೆ ಪ್ರಾಣ. ಆ ಮಗುವಿಗೂ ಅಷ್ಟೆ. ಹುಟ್ಟಿದೊಡನೆ ತಾಯಿ ಯನ್ನು ಕಳೆದುಕೊಂಡಿದ್ದ ಆ ಹಸುಳೆಗೆ ಉನ್ನೀಸಾ ನಿಜವಾಗಿಯೂ ತಾಯಿಯಂತೆ ಇದ್ದಳು. ಆ ಋಣಾನುಬಂಧವಾಗಿತ್ತು. ಈ ತಾಯ್ತನ ಮಡದಿತನಗಳ ಎರಡು ಸುಂದರ ಮುಖಗಳನ್ನು ಹೆಂಡತಿಯಲ್ಲಿ ಕಾಣುತ್ತಾ ಅಮಿೂರ್ ಅಪೂರ್ವಸುಖಿಯಾಗಿದ್ದ. ಅವನ ಸಂಸಾರದಲ್ಲಿ ಸುಖದ ಬುಗ್ಗೆ ಉಕ್ಕುವುದಕ್ಕೆ ಇದೇ ಕಾರಣವಿರಬಹುದು. ತೀರಿಹೋದ ಹೆಂಡತಿ ತಿರುಗಿಬಂದು ಉನ್ನೀಸಳಾಗಿರುವಂತೆ ಅವನಿಗೆ ತೋರುತ್ತಿತ್ತು.

ಆದರೆ ವಿಧಿ ಬೆನ್ನಹಿಂದೆ ನಿಂತು ಬೇರೊಂದು ಹೂಟ ಹೂಡಿತ್ತು. ಉನ್ನೀಸಳ ಒಲುಮೆಯಲ್ಲಿ, ನೂರಳ ಲಲ್ಲೆಯಲ್ಲಿ ಮುಳುಗಿ ಮೈಮರೆತಿದ್ದ ಅಮಿೂರನಿಗೆ ಅದರ ಸೋಂಕು ಬಡಿದಿದ್ದರೂ ಗೊತ್ತಾಗುತ್ತಿರಲಿಲ್ಲ. ಅವನು ಈ ಸ್ಥಿತಿಯಲ್ಲಿದ್ದಾಗಲೆ ಅವನಿಗೆ ಆ ಬರಸಿಡಿಲು ಬಡಿದದ್ದು. ಅವನ ಮುದ್ದಿನ ಮಡದಿ ಉನ್ನೀಸಾ, ಅವನ ಬಾಳನ್ನು ಐದು ವರ್ಷಕಾಲ ಬೆಳಗಿದ್ದ ಉನ್ನೀಸಾ, ಅವನ ಜೀವಕ್ಕೆ ಜೀವವಾಗಿ ತಾಯಿಯಿಲ್ಲದ ನೂರಳಿಗೆ ತಾಯಿಯಾಗಿದ್ದ ಉನ್ನೀಸಾ ಹೀಗೆ ನಂಬಿಸಿ ಕೊರಳು ಕೊಯ್ಯುವಳೆಂದು ಅಮಿೂರ್ ಕನಸಿನಲ್ಲೂ ಎಣಿಸಿರಲಿಲ್ಲ. ಮುಡಿದ ಹೂವಿನಲ್ಲಿ ವಿಡಿ ನಾಗರ ಅಡಗಿತ್ತೆಂಬುದು ಅವನಿಗೆ ತಿಳಿದಿರಲಿಲ್ಲ. ತನ್ನ ಬಾಳನ್ನು ನೆಮ್ಮಿ ಹಬ್ಬುತ್ತಿದ್ದ ಉನ್ನೀಸಳ ಒಲುಮೆಯ ಬಳ್ಳಿ ಬೇರೆ ಜಾಡು ಹಿಡಿದೀತೆಂಬ ಯೋಚನೆಯೆ ಅವನಿಗೆ ಬಂದಿರಲಿಲ್ಲ. ಅವಳಿಗೆ ಏನು ಅರೆಯಾಗಿತ್ತು; ಯಾವುದು ಬೇಡವಾಗಿತ್ತು? ಈ ಸುಖದ ಕೆನೆಹಾಲಿಗೆ ವಂಚನೆಯ ಹುಳಿಹಿಂಡಿ ಹೋಗುವುದಕ್ಕೆ ಅವಳ ಮನಸ್ಸು ಹೇಸಲಿಲ್ಲವೆ? ಹೃದಯ ಕುದಿಯಲಿಲ್ಲವೆ? ಈ ಸಂಸಾರ ಅವಳಿಗೆ ಅಷ್ಟು ನಿಕೃಷ್ಟವಾಗಿ ಕಂಡಿತೆ? ಹಾಗಾದರೆ ಅವಳು ತೋರಿಸುತ್ತಿದ್ದ ಪ್ರೀತಿ ಬರಿ ಬೂಟಾಟಿಕೆಯೆ? ತನ್ನ ನಂಬಿಕೆಯೆ ಕುರುಡೆ? ಇರಬಹುದು. ಆದರೆ ಇಷ್ಟಾದರೂ ತುಂಬಿದ ತನ್ನ ಒಲುವಿನ ಹಿಂದೆ ಇಂಥ ಒಳಸಂಚು ನಡೆದಿತ್ತೆಂಬ ಅರಿವೆ ಅವನಿಗಿರಲಿಲ್ಲ. ಈ ನಾಟಕದ ಮೋಸದ ಮುಖವಾಡ ಕಳಚಿದ ಮೇಲೂ, ಭ್ರಾಂತಿ ಬಯಲಾದ ಮೇಲೂ ಮನಸ್ಸು ಇದರ ಕಠೋರ ನಿಜತ್ವವನ್ನು ಗ್ರಹಿಸಲಾರದಾಗಿತ್ತು. ಯಾವುದು ಆಗಬಾರದೊ ಅದು ಆಗಿಹೋಗಿತ್ತು. ಈ ಹಠಾತ್ ಘಟನೆ ಅವನ ಜೀವವನ್ನೆ ಹಿಂಡಿಬಿಟ್ಟಿತ್ತು. ರೋಷ ಕ್ಕಿಂತ ಹೆಚ್ಚಾಗಿ ದುಃಖ, ಅಪಮಾನ, ನಿರಾಶೆ, ಜುಗುಪ್ಸೆಗಳು ಅವನನ್ನು ಮುತ್ತಿ

ಮೂದಲಿಸುತ್ತಿದ್ದವು. ಯಾರಿಗೂ ಮುಖತೋರಿಸದೆ ಹಲವು ದಿನಗಳನ್ನು ಕಳೆದ. ದೇಶಾಂತರ ಹೊರಟುಹೋಗಬೇಕೆಂದೂ ಎಷ್ಟೋ ಸಲ ಯೋಚಿಸಿದ್ದ. ಆದರೆ ಪುಟ್ಟ ಮಗಳನ್ನು ನೋಡಿಕೊಂಡು, ಅವಳಿಗಾಗಿ ಎಲ್ಲ ಚಿಂತೆಯನ್ನೂ ನುಂಗಿಕೊಂಡು ಬಾಳನ್ನ ನೂಕಬೇಕೆಂದು ಬಗೆದ. ಅಂಥ ಬಾಳೂ ಕೆಲವುಕಾಲ ಕಳೆಯಿತು. ಆದರೆ ವಿಧಿಗೆ ಇದನ್ನೂ ನೋಡಿ ಸಹನೆಯಿದ್ದಂತೆ ಕಾಣಲಿಲ್ಲ. ವಿಷಮಶೀತಜ್ವರ ಬಂದು ನಲವತ್ತು ದಿನ ನರಳಿ ನೂರ್ ಕಣ್ಣು ಮುಚ್ಚಿಕೊಂಡಿತು.

ಕಷ್ಟದ ಮೇಲೆ ಕಷ್ಟ; ಗಾಯದ ಮೇಲೆ ಬರೆ. ಜೀವ ಬೇಸತ್ತು ಬಾಳು ಬೆಂಡಾಯಿತು. ಕೊನೆಯ ಜೀವದುಸಿರು ಹಾರಿಹೋಯಿತು. ಎದೆ ಗೋರಿಯಾಯಿತು. ಇನ್ನು ಉಳಿದಿರುವುದು ಗಾಳಿಯಾಡುತ್ತಿರುವ ಈ ಕಳೇಬರ. ಇದನ್ನಿಟ್ಟುಕೊಂಡು ಯಾವ ಪುರುಷಾರ್ಥ ಸಾಧಿಸಬೇಕು? ಇದಕ್ಕೆ ಆಶೆ ಭರವಸೆಗಳೇನು? ಯಾರ ಸಂತೋಷಕ್ಕಾಗಿ ಎಲ್ಲ ಸಡಗರ ಸಮಾರಂಭಗಳೂ ಬೇಕಾಗಿದ್ದುವೊ, ಯಾರ ಪ್ರೇಮ ಇವೆಲ್ಲಕ್ಕೂ ಒಂದು ಬಲವಾಗಿತ್ತೊ ಅವರೆ ಇಲ್ಲದೆ ಹೋದಮೇಲೆ ಯಾವುದರಿಂದ ತಾನೆ ಏನು ಪ್ರಯೋಜನ? ಇನ್ನು ಯಾವುದಕ್ಕಾಗಿ ಯೋಚಿಸಬೇಕು? ಶೋಕ ಬಾಳನ್ನು ತಬ್ಬಿರುವಾಗ, ಜಗತ್ತೆ ತನ್ನ ಪಾಲಿಗೆ ಅಳಿದಿರುವಾಗ ಯಾವುದರ ಗೊಡವೆಯೂ ಬೇಡವೆಂದು ರೋಸಿ ನಿರ್ಧಾರಮಾಡಿಬಿಟ್ಟ. ಇನ್ನು ಮುಂದೆ ತನ್ನ ಬಳಿ ಹುಲಿವೇಷದ ಮಾತನ್ನೆ ಎತ್ತಬೇಡಿರೆಂದು ಗುಂಪಿನವರಿಗೆ ಕಂಡಿತವಾಗಿ ಹೇಳಿಬಿಟ್ಟ. ಇದರಮೇಲೆ ದೊಡ್ಡ ಚರ್ಚೆ ಎದ್ದಿತ್ತು. ಆದರೆ ಗುಂಪಿನ ಕೆಲವು ಮುಂದಾಳುಗಳ ಸಲಹೆಯಿಂದ ಅದು ಹಾಗೆಯೆ ಅಡಗಿತ್ತು.

ಕಳೆದ ಆ ವರ್ಷಕ್ಕೂ ಈ ವರ್ಷಕ್ಕೂ ಎಷ್ಟು ವ್ಯತ್ಯಾಸ. ಅಂದಿನ ಮೊಹರಮಿಗೂ ಇಂದಿನ ಈ ಮೊಹರಮಿಗೂ ಎಷ್ಟು ತೀವ್ರವಾದ ಅಂತರ. ಏಳೆಂಟು ತಿಂಗಳಲ್ಲಿ ಎಂಥ ಬದಲಾವಣೆ. ಹೀಗಾದೀತೆಂದು ಅಮೀರ್ ಕಲ್ಪನೆಯಲ್ಲಿ ಕೂಡ ಎಣಿಸಿರಲಿಲ್ಲ. ಒಂದು ಚರಿತ್ರೆಯಲ್ಲಿ ನಡೆಯುವಂಥ ಘಟನಾವಳಿ ವಿದ್ಯುದ್ವೇಗದಿಂದ ಅತ್ಯಲ್ಪಕಾಲದಲ್ಲಿ ಅವನ ಬಾಳಿನಲ್ಲಿ ಜರುಗಿಹೋಗಿತ್ತು. ಅದರ ಕಾವು ಮರುಕೊಳಿಸುವ ಜ್ವರದಂತೆ ಈಗ ಮತ್ತೆ ಮೈದೋರಿ ಅವನ ಮನಸ್ಸಿನ ಕಗ್ಗತ್ತಲಿನ ಮೂಲೆಗಳಲ್ಲಿ ಸುಪ್ತವಾಗುತ್ತಿದ್ದ ಭಾವನೆಗಳನ್ನು ಕೆರಳಿಸಬೇಕೆ?

* * * * *

ಧಡಧಡನೆ ಬಾಗಿಲು ಬಡಿದ ಸದ್ದಾಯಿತು. ಅಮೀರನ ಯೋಚನೆಗೆ ಕಲ್ಲು ಬಿತ್ತು. ಒಂದು ಕ್ಷಣ ಅವನ ಮುಖ ವ್ಯಗ್ರವಾಯಿತು. ಮೇಲೆದ್ದು ನಿಂತು ಮನಸ್ಸನ್ನು ಮುತ್ತುತ್ತಿದ್ದ ಆಲೋಚನೆಗಳನ್ನು ಪ್ರಯತ್ನಪೂರ್ವಕವಾಗಿ ಕೊಡವುತ್ತಾ ಕುಗ್ಗಿದ

ಧ್ವನಿಯಲ್ಲಿ 'ಯಾರದು?' ಎಂದ. ಮತ್ತೆ ಬಾಗಿಲು ಬಡಿಯುವ ಸದ್ದು; ಹೆಸರು ಹಿಡಿದು ಕೂಗುವ ಸದ್ದು; ಹೊರಗೆ ಜನ ಸೇರಿರುವಂತೆ ಸದ್ದು.

"ಅಮೀರ್, ಅಮೀರ್."

"ಯಾರಯ್ಯ ಅದು?"

"ಬಾಗಿಲು ತೆಗೆ ಅಮೀರ್."

ಮನಸ್ಸಿಲ್ಲದ ಮನಸ್ಸಿನಿಂದ ಹೋಗಿ ಬಾಗಿಲು ತೆಗೆದು ನೋಡಿದ. ಖಾದರ್ ಸಾಬರ ಗರಡಿಯ ಗುಂಪೆ ಬಂದು ನಿಂತಿತ್ತು. ಬೆಳ್ಳಗಾಗಿದ್ದ ಗಡ್ಡವನ್ನು ನೇವರಿಸುತ್ತಾ ಖಾದರ್ ಒಳಗೆ ಬಂದು, ಅಮೀರನ ಹೆಗಲಮೇಲೆ ಕೈಯಿಟ್ಟು ಅವನ ಮುಖವನ್ನು ದಿಟ್ಟಿಸಿ ನೋಡಿದ. ಅಮೀರ್ ಮಾತನಾಡದೆ ಅವಡು ಕಚ್ಚಿಕೊಂಡು ನಿಂತಿದ್ದ. ಒದ್ದೆಯಾಗಿದ್ದ ಕಣ್ಣುಗಳು ಇನ್ನೂ ಪೂರ್ತಿ ಆರಿರಲಿಲ್ಲ. ಮನಸ್ಸಿನ ಬೇಗುದಿ ಕಣ್ಣಿನಿಂದ ಧುಮುಕುತ್ತಿತ್ತು. ಆದರೆ ಖಾದರ್ ಬೇರೆ ಅವಸರದಲ್ಲಿದ್ದ.

"ಅಮೀರ್."

"ಏನು ಖಾದರ್?"

"ಏನು ಎನ್ನಬೇಡ ಅಮೀರ್. ನಾನು ಬಂದಿರುವುದೇಕೆಂದು ನೀನು ಬಲ್ಲೆ."

"ಹಾಂ? . . ."

"ಹೌದು, ನಿನಗೆ ಗೊತ್ತು ಅಮೀರ್."

"ಆ ಮಾತು ಈಗ ಬೇಡ ಖಾದರ್; ಅದನ್ನು ಮರೆತುಬಿಡು."

"ಮರೆಯುವ ಹಾಗಿಲ್ಲ ಅಮೀರ್; ಇದೊಂದು ದಿನ ನೀನು ಮನಸ್ಸು ಮಾಡಬೇಕು."

"ಇಲ್ಲ, ಅದಾಗುವುದಿಲ್ಲ; ಸೆಲೆಗೆ ನಿಂತ ಮನಸ್ಸು ತಿರುಗುವಂತಿಲ್ಲ. ಅದು ಬಿಟ್ಟು ಬೇರೆ ಮಾತಾಡು, ಖಾದರ್."

"ಯೋಚನೆಮಾಡಿ ನೋಡು ಅಮೀರ್. ನಿನ್ನ ಇಷ್ಟಕ್ಕೆ ನಾವು ಯಾವಾಗಲೂ ಅಡ್ಡಬಂದಿಲ್ಲ. ಆದರೆ ಈಗ . . . ನಮ್ಮ ಸತ್ವದ ಪರೀಕ್ಷೆ ಬಂದಿರುವಾಗ . . ."

"ನಿಲ್ಲಿಸು ಖಾದರ್, ಮುಂದೆ ಹೇಳಬೇಡ."

"ಇಲ್ಲ ಅಮೀರ್, ಹಾಗೆನ್ನಬೇಡ, ಇತರರು ನಮ್ಮನ್ನು ನೋಡಿ ನಗುತ್ತಾರೆ. ನಮ್ಮ ಹೆಸರಿಗೆ ಕಳಂಕ ತಟ್ಟುತ್ತದೆ. ಗುಂಪಿಗೆ ಅಪಮಾನವಾಗುತ್ತದೆ. ಇದನ್ನು ನೀನು ಬಲ್ಲೆ, ಇದನ್ನು ನೀನು ಪರಿಹರಿಸಲೂ ಬಲ್ಲೆ."

"ಖಾದರ್, ಖಾದರ್, ನೀನು ನನ್ನನ್ನು ಕೊಲ್ಲುತ್ತಿರುವೆ."

"ಇಲ್ಲ ಅಮೀರ್, ಒಂದು ಗಳಿಗೆ ಯೋಚನೆಮಾಡು. ಇಲ್ಲ ಎನ್ನಬೇಡ.

ಮೆರವಣಿಗೆ ಅಂಗಡಿಬೀದಿಯ ಚೌಕಕ್ಕೆ ಬಂದು ನಿಂತಿದೆ. ಅಲ್ಲಿಂದ ಕದಲುವಂತಿಲ್ಲ. ಜನಕ್ಕೆ ಬಾಯಿಕೊಡುವಂತಿಲ್ಲ. ಗುಂಪಿನ ಗೌರವ ನಿನ್ನ ಕೈಯಲ್ಲಿದೆ.''

ಗುಂಪಿನ ಮಾತೆತ್ತಿದ್ದು ಅವಿಾರನ ಮನಸ್ಸನ್ನು ಈಟಿಯಿಂದ ಇರಿದಂತಾಯಿತು. ತನ್ನೊಬ್ಬನಿಂದ ಇಷ್ಟಾಗುವುದೆಂದು ಅವನು ಎಣಿಸಿರಲಿಲ್ಲ. ಅವನ ಮನಸ್ಸು ಒಂದು ಕ್ಷಣ ಹೀಗೊ ಹಾಗೊ ತೂಗಿರಬಹುದು. ಈ ಸಮಯ ಕಾಯುತ್ತಿದ್ದ ಖಾದರ್ ತನ್ನವರ ಕಡೆ ತಿರುಗಿ ಕಣ್ಣುಸನ್ನೆಮಾಡಿದ. ಗರಡಿಯ ಜನ ಒಳನುಗ್ಗಿ ಬೇಡ ಬೇಡ ಎನ್ನುತ್ತಿದ್ದ ಅವಿಾರನನ್ನು ಅನಾಮತ್ತಾಗಿ ಎತ್ತಿಕೊಂಡು ಹೊರಟುಹೋದರು.

* * * * *

ಬಾಬಯ್ಯನ ಮೆರವಣಿಗೆ ಆ ನೂಕುನುಗ್ಗಲಿನಲ್ಲಿ ಅಂಗಡಿಬೀದಿಯ ಚೌಕದಿಂದ ಮುಂದೆ ಹೊರಡುವುದೆ ಕಷ್ಟವಾಗಿತ್ತು. ಜನ ನಾಲ್ಕೂಕಡೆ ಕೋಟೆಯಂತೆ ಕಟ್ಟಿಕೊಂಡು ನಿಂತುಬಿಟ್ಟಿದ್ದರು. ಕಾವೇರಿದ್ದ ತಂಬಟೆ ಒಂದೆ ತಾನದಲ್ಲಿ ನುಡಿಯುತ್ತಿತ್ತು. ಯಾವುದೊ ಒಂದು ಅವ್ಯಕ್ತಗತಿಗೆ ಸಿಕ್ಕಿದಂತೆ ಎಲ್ಲ ಸದ್ದೂ ಕೂಡಿ ಮಹತ್ತರವಾದ ಒಂದು ಧ್ವನಿಮಂಡಲ ಏರ್ಪಟ್ಟಂತೆ ತೋರುತ್ತಿತ್ತು. ಎಲ್ಲ ಕಣ್ಣುಗಳೂ ಬಾಬಯ್ಯನ ಮಂಟಪಗಳ ಮುಂದೆ ಹೋಗಿ ಸೆಲಸಿ ಕ್ಷಣಕ್ಕೊಮ್ಮೆ ಹಾಗೆ ಹೀಗೆ ತಿರುಗುತ್ತಿದ್ದುವು. ಜನದ ಉತ್ಸಾಹ ನಿರೀಕ್ಷೆಗಳು ಮೇರೆಮಿಾರುವಂತಿದ್ದುವು.

ಉಕ್ಕಿನಂಥ ಮೈಕಟ್ಟು; ವಿಚಿತ್ರವರ್ಣಸಂಯೋಜನದಿಂದ ಕೂಡಿದ ಮೈ; ಅಪೂರ್ವವಾದ ರೇಖಾವಿನ್ಯಾಸ; ರಾಗೋಜ್ವಲವಾದ ದೇಹಕಾಂತಿಯ ಥಾಳಥಳ್ಯ; ವ್ಯಾಘ್ರನಖಖಚಿತವಾದ ವಜ್ರಮುಷ್ಟಿ; ಬಾಯಿಯಲ್ಲಿ ಗಜನಿಂಬೆ ಹಣ್ಣು; ಅದನ್ನು ಹಾಯ್ದುಬರುವಂತಿರುವ ನಿಗಿನಿಗಿಸುವ ಕೋರೆ ಹಲ್ಲುಗಳು; ಹೊರಚಾಚಿರುವ ಕೆನ್ನಾಲಗೆ; ಕುಣಿಯುತ್ತಿರುವ ಕೆಮ್ಮೀಸೆ; ರಕ್ತವರ್ಣರಂಜಿತವಾದ ಮುಖ; ಒಂದನ್ನೊಂದು ಸಂಧಿಸಿ ಹಿಮ್ಮೆಟ್ಟುತ್ತಿರುವ ಭ್ರುಕುಟಿಗಳು; ಇವುಗಳ ನಡುವೆ ಕೆಂಡ ಕಾರುವಂಥ ಕಣ್ಣುಗಳು; ತಲೆಯನ್ನು ಅಪ್ಪಿ ಕುಳಿತಿರುವ ಸ್ವರ್ಣವರ್ಣದ ಕುಲಾವಿ; ಹೆಗಲ ಮೇಲೆ ಸೆರೆಸಿಕ್ಕಿ ಕ್ಷಣಕ್ಷಣಕ್ಕೆ ಭಯದಿಂದ ಚೀರುತ್ತಿರುವ ಮೇಕೆಯ ಮರಿ; ಅದರ ಸಮೇತ ಹಾರಿ ಹೂಂಕರಿಸಿ, ಸೆಲಕ್ಕಿಳಿದು, ಅತ್ತ ಇತ್ತ ಧಾವಿಸಿ, ತಂಬಟೆಯ ಗತಿಗೆ ತಕ್ಕಂತೆ ನಡೆಕೊಡುತ್ತಿರುವ ಪದಾಘಾತ; ಆ ಚಪಲಗತಿಗೆ ಹೊಂದಿಕೊಂಡಂತೆ ಅವಿಚ್ಛಿನ್ನವಾಗಿ ತಲೆಯ ಮೇಲಿಳಿದು ಮತ್ತೆ ಮೇಲೆ ಚಿಮ್ಮುತ್ತಾ 'ಝುಲ್-ಝುಲ್' ಎಂದು ದನಿಗೈಯುತ್ತಿರುವ ಡಬ್ಬೆಕಟ್ಟಿದ ಕಾಗದದ ಭಾರಿ ಹೂಚೆಂಡು; ಮಧ್ಯೆ ಮಧ್ಯೆ ಕಾಲ್ಗೆಜ್ಜೆಯೂ ನಾಲ್ಕೂಕಡೆ ಹಾಕಿ ಹಿಡಿದಿರುವ ಸರಪಳಿಯೂ ಮೇಳೈಸಿರುವ ಝಣತ್ಕೃತಿ. ವಿಚಿತ್ರ ನೃತ್ಯಗತಿಯಿಂದ ಎಲ್ಲೆಲ್ಲೂ ತಾನೆ ಆಗಿ ಕಣ್ಗೊಳಿಸುತ್ತಿದಾನೆ

ಅಮಿಾರ್. ಈ ನೃತ್ಯದಲ್ಲಿ ಜನದ ದೃಷ್ಟಿಯೆಲ್ಲವೂ ಕೀಲಿಸಿದೆ, 'ಆಲಿ-ದೂಲ' ಅಬೀರ್-ಅಬೀರ್' ಎಂಬ ಕೂಗು ಸುತ್ತಲೂ ವ್ಯಾಪಿಸಿದೆ; ಧೂಪದ ಹೊಗೆ ಮುಚ್ಚಿದೆ.

ಅಮಿಾರ್ ಇಂದು ತನ್ನ ಸರ್ವಶಕ್ತಿಯನ್ನೂ ವಿನಿಯೋಗಿಸಿ ನೃತ್ಯಮಾಡುತ್ತಿದಾನೆ. ತಂಬಟೆಯ ಉಚ್ಚಘೋಷದಲ್ಲಿ, ಆ ಶಬ್ದಮಂಡಲದಲ್ಲಿ ಬುದ್ಧಿ ಹೊರಗಿನ ಪ್ರಪಂಚವನ್ನು ಸ್ವಲ್ಪಸ್ವಲ್ಪವಾಗಿ ಮರೆತು ಅಂತರ್ಮುಖವಾಗುತ್ತಿದೆ. ರಾಗಮತ್ತವಾಗಿರುವ ಮನಸ್ಸಿನ ಪ್ರಬಲಪ್ರೇರಣೆಗೆ ಸಿಕ್ಕಿ ಮೈ ನಾನಾ ರೀತಿಗಳಲ್ಲಿ ನಾಟ್ಯಕಟ್ಟುತ್ತಿದೆ. ಕಣ್ಣು ಅರ್ಧನಿಮಿಾಲಿತವಾಗಿದೆ. ಮನಸ್ಸು ಅನಿರ್ವಚನೀಯವಾದ ಒಂದು ಭಾವದ ಉಯ್ಯಾಲೆಯಲ್ಲಿ ತೂಗುತ್ತಿದೆ. ಇದರ ಯಾತಾಯಾತದಿಂದ, ಒಳಮುಖವಾಗಿರುವ ಪ್ರಜ್ಞೆ ಜೋಂಪಿಸುತ್ತಿದೆ. ಈ ಸ್ಥಿತಿಯಲ್ಲಿ ಮೆರವಣಿಗೆ ತನ್ನ ಮನೆಯ ಮುಂದೆ ಬಂದು ಎಂದಿನಂತೆ ನಿಂತದ್ದು ಅಮಿಾರನಿಗೆ ಗೋಚರವಾಗಲಿಲ್ಲ. ಆ ವೇಳೆಗೆ ಸರಿಯಾಗಿ ಅವನು ಪುಟಗೊಳಿಸಿದ ಅಗ್ನಿಯಂತೆ ಚಿಮ್ಮಿ ಅಪೂರ್ವವಾದ ಒಂದು ನೃತ್ಯವಿನ್ಯಾಸವಿಸ್ತರಣೆಯಲ್ಲಿ ಮುಳುಗಿದ. ತಂಬಟೆಯ ಸದ್ದು ಇಮ್ಮಡಿಸಿತು. ತಾನತಾನವಾದ ಅದರ ದುಡಿತ ಮನಸ್ಸನ್ನು ಹುರುಪುಗೊಳಿಸಿ ಬಗೆಬಗೆಯ ಭಾವಗಳನ್ನು ಕೆರಳಿಸತೊಡಗಿತು. ಅದನ್ನು ಮೆಟ್ಟಿನಿಲ್ಲುವಂತೆ ಅಮಿಾರನ ನೃತ್ಯವೂ ರಾಗೋದ್ರೇಕದಿಂದ ಇಮ್ಮಡಿಯಾಗಿ ಜನವನ್ನು ಒಂದು ಮಾಟದಲ್ಲಿ ಕಟ್ಟಿ ನಿಲ್ಲಿಸಿತು. ಲಯಬದ್ಧವಾದ ಆ ಪದಾಘಾತ; ಅಲೆಅಲೆಯಾದ ಆ ತೋಳ್‌ಬಳಸು; ಹೊಂಚುಕಾದು ಮೇಲೆ ಬೀಳುವಂಥ ಆ ನಿಲುವು; ಈದ ಹೆಬ್ಬುಲಿಯಂತೆ ಕುಪ್ಪಳಿಸಿ ಪಂಜವನ್ನೆತ್ತಿ ಪ್ರತಿಭಟಿಸುವಂತೆ ಮೈತೂಗಿ ನಿಲ್ಲುವ ಆ ಠೀವಿ; ಹೆಗಲಮೇಲಿನ ಮೇಕೆಯ ಮರಿ ಹವಣುತಪ್ಪದಂಥ ಆ ಸಂಚಲನೆಯ ಜಾಣ್ಮೆ. ಅನನ್ಯಸಾಧಾರಣವಾದ ಈ ನೃತ್ಯಕೌಶಲಕ್ಕೆ ಮಾರುಹೋದ ಜನ ಕ್ಷಣಕ್ಷಣಕ್ಕೆ ಉತ್ತೇಜನಧ್ವನಿಗಳನ್ನು ಮಾಡತೊಡಗಿದರು.

ಹೀಗೆ ಕಾಲುಘಂಟೆ ನೃತ್ಯ ನಡೆದಿರಬಹುದು. ಹೊತ್ತಿನ ಅರಿವು ಯಾರಿಗೂ ಇಲ್ಲ. ಎಲ್ಲರ ಕಣ್ಣೂ ಮನಸ್ಸೂ ಒಂದಾಗಿ ಅಮಿಾರನ ವಿಚಿತ್ರ ಚಪಲಗತಿಯ ಸುಳಿಯಲ್ಲಿ ಸಿಕ್ಕಿಹೋಗಿದೆ. ಜನ ಉಸಿರು ಹಿಡಿದು ಹಿಡಿದು ಬಿಡುತ್ತಿದಾರೆ, ಕೌತುಕ ಮೈಯಾಂತು ನಿಂತಿದೆ. ವಾತಾವರಣವೆ ವಿಲಕ್ಷಣ ರಾಗೋದ್ವೇಗದಿಂದ ತುಂಬಿ ಸಿಡಿಯುವಂತಿದೆ. ಎಲ್ಲವೂ ಅಮಿಾರನ ನೃತ್ಯಾಧೀನವಾಗಿ ಪರವಶತೆಯ ಪರಾಕಾಷ್ಠೆಗೇರಿದೆ. ಈ ಇಂದ್ರಜಾಲದಲ್ಲಿ ಜನವನ್ನು ಹಿಡಿದು ನಿಲ್ಲಿಸಿದ್ದ ಅಮಿಾರ್ ನೃತ್ಯದ ಕೊನೆಯ ಆವರ್ತಕ್ಕೆ ಮುಕ್ತಾಯಕೊಡುವ ಸಂರಂಭದಲ್ಲಿ ಛಂಗನೆ ನೆಗೆದು, ರಾಟಳದಂತೆ ಗಿರಗಿರನೆ ತಿರುಗಿ ನಿಂತು, ಎರಡು ತೋಳುಗಳನ್ನೂ ಹಾವಿನಂತೆ ಬಳಸಿ, ಮಂಡಿಯೂರಿ ಒಂದು

ಕಾಲನ್ನು ಮುಂದಿಟ್ಟು ಹಾರಸ್ವೀಕಾರಕ್ಕೆ ಕತ್ತುಬಗ್ಗಿಸುವಂತೆ ನೆಲದವರೆಗೂ ಬಾಗಿದ. ಅಭ್ಯಾಸಬಲದಿಂದೆಂಬಂತೆ ದೃಷ್ಟಿ ಮನೆಯ ಕಡೆ ಹೊರಳಿತು. ಕೆಂಡದಿಂದ ಕಿಡಿ ಸಿಡಿಯುವಂತೆ ಮನಸ್ಸಿನ ಅಂತರಾಳದಿಂದ ನೆನಪು ಉಕ್ಕಿ ಉಜ್ವಲವಾಯಿತು. ಕಣ್ಣು ನೀರಿನಲ್ಲಿ ತೇಲಿ ಮಂಜಾಯಿತು; ಮುಖ ವಿವರ್ಣವಾಯಿತು; ಶಕ್ತಿ ಉಡುಗಿತು; ಮೈ ಭಾರವಾಯಿತು; ನಾಟ್ಯಚೇತನ ಕಂಗೆಟ್ಟು ಕುಸಿಯಿತು. ಒಂದು ಕ್ಷಣ ಆ ನಿಲುವಿನಲ್ಲಿದ್ದವನು ಬವಳಿಬಂದವನಂತೆ ಧೊಪ್ಪನೆ ನೆಲಕ್ಕೆ ಕುಸಿದು ಬಿದ್ದುಬಿಟ್ಟ. ಸುತ್ತಲೂ ಘೇರಾಯಿಸಿ ನೋಟದಲ್ಲಿ ಮುಳುಗಿಹೋಗಿದ್ದ ಜನ ಪ್ರಜ್ಞೆಬಂದವರಂತೆ ಎಚ್ಚತ್ತು ಹೋ ಎಂದು ಏಕ ಕಂಠದಲ್ಲಿ ಕೂಗಿಕೊಂಡರು. ನಾಲ್ಕೂಕಡೆಯಿಂದ ಅವಿಾರನ ಬಳಿಗೆ ಧಾವಿಸಿ ಬಂದರು. ಬೇಟೆಗಾರನ ಗುಂಡಿನೇಟಿಗೆ ಸಿಕ್ಕಿ ನೆಗೆದು ನೆಲಕ್ಕುರುಳುವ ಹುಲಿಯಂತೆ ಆ ಹುಡಿಯಲ್ಲಿ ಹೊರಳಿಬಿದ್ದಿದ್ದ.

* * * * *

ಗರಡಿ ಗೋವಿಂದಯ್ಯನ ಬೀದಿಯಲ್ಲಿ ನಾಲ್ಕುಮಾರು ದೂರ ಹೋದರೆ ಬಲಗಡೆ ಒಂದು ಸಣ್ಣ ಮನೆ ಕಂಡುಬರುತ್ತದೆ. ಮನೆಯ ಮೇಲ್ಛಾವಣಿಯೆಲ್ಲಾ ಕುಸಿದು ಮುಂದಕ್ಕೆ ಚಾಚಿಕೊಂಡಿದೆ. ಗೋಡೆಗಳು ಅಲ್ಲಲ್ಲೆ ಬಿದ್ದುಹೋಗಿವೆ. ಎಷ್ಟೊ ಕಾಲದಿಂದ ಮುಚ್ಚಿರುವ ಬಾಗಿಲ ಮೇಲೆ ಗೆದ್ದಲು ತೊಗಟೆ ತೊಗಟೆಯಾಗಿ ಹಬ್ಬಿಕೊಂಡಿದೆ. ಪಕ್ಕದಲ್ಲಿ ಒಂದೆ ಒಂದು ಸಣ್ಣ ಕಿಟಕಿ. ಅದಕ್ಕೆ ಬಾಗಿಲಿಲ್ಲ. ಮನೆಯ ಮುಂದಿದ್ದ ಮೆಟ್ಟಲುಗಳೆಲ್ಲಾ ಮುರಿದುಹೋಗಿ ಆ ಜಾಗದಲ್ಲಿ ಸೊಪ್ಪುಸದೆ ಬೆಳೆದುಕೊಂಡಿದೆ. ಅದನ್ನು ದಾಟಿಕೊಂಡು ಬಾಗಿಲ ಬಳಿಗೆ ಹೋದರೆ ಜೇಡ ನಿರಾತಂಕವಾಗಿ ನೆಯ್ದಿರುವ ದಪ್ಪ ಪೊರೆ ಮುಖಕ್ಕೆ ಸುತ್ತಿಕೊಳ್ಳುತ್ತದೆ. ಪಕ್ಕದ ಕಿಟಕಿಯಿಂದ ಒಳಗಿನ ಗಾಳಿ ಸುಯ್ಯೆಂದು ಬೀಸಿಬಂದು ಬಡಿಯುತ್ತದೆ. ಒಂದು ಕ್ಷಣಕ್ಕಿಂತ ಹೆಚ್ಚಾಗಿ ಇಲ್ಲಿ ನಿಲ್ಲುವುದಕ್ಕೆ ಆಗುವುದಿಲ್ಲ. ಈ ಮನೆ ಅವಿಾರನದೆಂದು ಜನ ಈಗಲೂ ಹೇಳುತ್ತಾರೆ.

ಭಾರತೀಪ್ರಿಯ.

ಕಾವ್ಯಾವಲೋಕನ

ಸತ್ವಶಾಲಿ ರಶಿಯಾ: (ಮಿಂಚಿನ ಬಳ್ಳಿಯ ೫ನೆಯ ವರುಷದ ಒಂದನೆಯ ಕುಡಿ)—ಪುಟಗಳು, ೧೨೫+೩೦; ಬೆಲೆ, ರೂ. ೧-೪-೦.

ಈ ಪುಟ್ಟ ಪುಸ್ತಕ ಶ್ರೀಮಾನ್ ಶ್ರೀ ನಿತ್ಯನಾರಾಯಣ ಬ್ಯಾನರ್ಜಿ ಅವರು ಬರೆದಿರುವ ಆಧುನಿಕರಶಿಯಾ (*Russia Today*) ಎಂಬ ಇಂಗ್ಲಿಷ್ ಪುಸ್ತಕದ ಅನುವಾದ. ಅನುವಾದಕರು ಶ್ರೀಮಾನ್ ಡಿ. ಎಸ್. ಶರ್ಮ; ಸಂಪಾದಕರು: ಶ್ರೀಮಾನ್ ಬುರ್ಲಿ ಬಿಂದುಮಾಧವ. ಗ್ರಂಥಕರ್ತರು ಸ್ವತಃ ರಶಿಯಾಕ್ಕೆ ಹೋಗಿ ತಮಗೆ ಪ್ರತ್ಯಕ್ಷವಾಗಿ ಕಂಡುಬಂದ ಸಂಗತಿಗಳ ವಿವರಗಳನ್ನೇ ತಮ್ಮ ಗ್ರಂಥದಲ್ಲಿ ಕೊಟ್ಟಿದ್ದಾರೆ. ಶ್ರೀಮಾನ್ ಡಿ. ಎಸ್. ಶರ್ಮ ಅವರು ಈ ಗ್ರಂಥವನ್ನು ತಿಳಿಗನ್ನಡದಲ್ಲಿ ಅನುವಾದಮಾಡಿ ಕನ್ನಡಿಗರ ಕೃತಜ್ಞತೆಗೆ ಪಾತ್ರರಾಗಿದ್ದಾರೆ. ಈ ಪುಸ್ತಕದಲ್ಲಿ ೧೯ ಅಧ್ಯಾಯಗಳ ಜೊತೆಗೆ ಹೊಸನೋಟವೆಂಬ ಹಿಸ್ಸೆಯೂ ಇದೇ.

ಅನುವಾದಕರು ರಶಿಯಾದ ಮುಖ್ಯಪಟ್ಟಣಗಳಲ್ಲಿ ಒಂದಾದ ಲೆನಿನ್‌ಗ್ರಾಡಿನಲ್ಲಿ ಪ್ರಭುತ್ವಸರ್ಕಾರ ಏರ್ಪಡಿಸಿರುವ 'ಯಾತ್ರಿಕಶಾಖೆ', ಹೋಟಲು, ಸರ್ವರ ಮನಸ್ಸನ್ನು ಆಕರ್ಷಿಸುವ ನಾಟಕ ರಂಗಸ್ಥಳ ಇವುಗಳ ಪ್ರಥಮ ಪರಿಚಯವನ್ನು ವಾಚಕರಿಗೆ ಮಾಡಿಸುವರು. ಇದಾದ ಮೇಲೆ ರಶಿಯಾ ಜನರ ಹೊಸ ರಾಜಕೀಯ, ಆರ್ಥಿಕ, ಸಾಮಾಜಿಕ ಜೀವನದ ಮುಖ್ಯ ಅಂಶಗಳನ್ನು ಉದಾಹರಣೆಯಾಗಿಟ್ಟುಕೊಂಡು ಸಮಾಜವಾದವನ್ನು ವ್ಯಾವಹಾರಿಕ ದೃಷ್ಟಿಯಿಂದ ವಿವರಿಸಿರುವರು.

ಈಗಿನ ರಶಿಯಾ ದೇಶ ಕೂಲಿಗಾರರ ದೇಶ. ಎಲ್ಲವೂ—ಅಂಗಡಿ ವಾಹನ, ವಿನೋದ ಮಂದಿರ, ಆಸ್ಪತ್ರೆ ಮೊದಲಾದವು—ಕೂಲಿಗಾರರ ಸೌಕರ್ಯಕ್ಕಾಗಿಯೇ ಏರ್ಪಾಡಾಗಿರುವುವು. ರಶಿಯಾದಲ್ಲಿ ಬಂಡವಾಳಗಾರರ ಸುಳಿವಿಲ್ಲ, ಮೋಜಕಾರಿಕೆ ಜೀವನಕ್ಕೆ ಅವಕಾಶವಿಲ್ಲ. ಎಲ್ಲಿ ನೋಡಿದರೂ ಜನಜೀವನದಲ್ಲಿ ಸರಳಸ್ವಭಾವವೇ ಕಂಡುಬರುತ್ತಿರುವುದು. ಜನಜೀವನದ ಪ್ರತಿ ಒಂದು ಅಂಶವೂ ದೇಶೋನ್ನತಿಗಾಗಿರುವುದೇ ಹೊರತು ಸ್ವಾರ್ಥಕ್ಕಲ್ಲ.

'ಇಂದಿನ ಬಾಲಕರು ಮುಂದಿನ ಪಾಲಕರು' ಎಂಬ ಧ್ಯೇಯಸಾಧನೆಗಾಗಿ ಪ್ರಭುತ್ವಸರ್ಕಾರ 'ಶಿಶುಸಂರಕ್ಷಣಾಲಯ' (ಕ್ರೇಚಿ)ವನ್ನು ಸ್ಥಾಪಿಸಿರುವುದು. ಇದರ ರೀತಿನೀತಿಗಳು, ಇದರ ಕಾರ್ಯಕಲಾಪಗಳ ಸಿಸ್ತು ಇತರ ಜನಾಂಗದವರಿಗೆ ಆಶ್ಚರ್ಯವನ್ನುಂಟುಮಾಡದಿರಲಾರವು. ವಿವಾಹ ಭೋಗತೃಪ್ತಿಗಲ್ಲ, ಮಕ್ಕ

ಳನ್ನ ಪಡೆಯಬಾರದೆಂದಿರುವ ಸ್ತ್ರೀಯರೇ ವ್ಯಭಿಚಾರಿಣಿಯರು, ಮಕ್ಕಳೇ ದೇಶದ ಸರ್ವಸಂಪತ್ತು ಎಂದು ಹೇಳುವುದು ರಶಿಯನ್ನರ ಹೊಸ ನೀತಿ. ರಶಿಯನ್ನರ ಮದುವೆಗೆ ಪ್ರೇಮವೇ ಬಂಧನವೆಂದೂ, ಯಾವಾಗ ಪ್ರೇಮ ಹಾರಿಹೋಗುವುದೋ ಅಂದು ಗಂಡಹೆಂಡರು ಬೇರೆಯಾಗಬಹುದೆಂದೂ ಸರ್ಕಾರ ತೀರ್ಪುಕೊಟ್ಟಿರುವುದು.

ಕೇವಲ ಆರ್ಥಿಕ ಮಾರ್ಗವನ್ನೇ ಅವಲಂಬಿಸಿರುವ ರಶಿಯಾ ದೇಶದ ಜನರಿಗೆ ಕಲಾಕುಶಲತೆಗಳಲ್ಲಿ ಅಭಿರುಚಿ ಹುಟ್ಟುವುದು ಅಪೂರ್ವವೆಂದು ಕೆಲವರು ತಿಳಿದಿರುವರು. ಇದು ತಪ್ಪುತಿಳುವಳಿಕೆ. ಹರ್ಮಿಟೇಜ್ ಎಂಬ ಸೌಧದಲ್ಲಿ ಪುರಾತನ ಚಿತ್ರಗಳನ್ನು ಪ್ರಭುತ್ವ ಸರ್ಕಾರ ಇಟ್ಟಿರುವುದಲ್ಲದೆ, ಕಲಾಮಂದಿರವೆಂಬ ಹೊಸ ಕಟ್ಟಡದಲ್ಲಿ ವಿಪ್ಲವದ ಕಾಲದಿಂದೀಚೆಗೆ ಕಲಾಕೋವಿದರು ಬರೆದಿರುವ ಚಿತ್ರ, ಮೂರ್ತಿಗಳನ್ನು ಕ್ರಮವಾಗಿ ಪ್ರದರ್ಶಿಸಿರುವುದು. ಈ ಚಿತ್ರಗಳನ್ನು ನೋಡುವುದರಿಂದ ರಶಿಯಾ ಜನರ ಮಾನಸಿಕ ಪ್ರವೃತ್ತಿವಿಕಾಸವು ಹೇಗೆ ಕಾಲಧರ್ಮಕ್ಕನುಸಾರವಾಗಿ ವ್ಯತ್ಯಾಸವಾಗುತ್ತಿರುವುದು ಎಂಬ ಅಂಶ ಚೆನ್ನಾಗಿ ವ್ಯಕ್ತವಾಗುವುದು.

ಆಧುನಿಕ ರಶಿಯಾದಲ್ಲಿ ಇತರ ದೇಶಗಳಲ್ಲಿರುವಂತೆ ನ್ಯಾಯಸ್ಥಾನ ಮತ್ತು ನ್ಯಾಯವನ್ನು ದೊರಕಿಸುವ ವಿಧಾನಗಳು ಇಲ್ಲ. ರಶಿಯಾದ ನ್ಯಾಯಸ್ಥಾನಗಳಲ್ಲಿ ಫೀಜು ಇಲ್ಲ; ವಾದಿಸಲು ವಕೀಲರು ಇದ್ದೇತೀರಬೇಕೆಂಬ ನಿರ್ಬಂಧವಿಲ್ಲ; ಸಾವಿರಾರು ರೂಪಾಯಿ ಸಂಬಳವಿರುವ ದೊಡ್ಡ ನ್ಯಾಯಾಧೀಶರೂ ಇಲ್ಲ; ಸಿವಿಲ್, ಕ್ರಿಮಿನಲ್ ಕೋರ್ಟುಗಳೆಂಬ ಪ್ರತ್ಯೇಕ ನ್ಯಾಯಸ್ಥಾನಗಳಿಲ್ಲ. ಇವು ಇತರರಿಗೆ ಆಶ್ಚರ್ಯಕರವಾಗಿದ್ದರೂ ರಶಿಯಾದಲ್ಲಿ ಪ್ರತಿದಿವಸವೂ ನೋಡಬಹುದಾದ ದೃಶ್ಯಗಳು. ಪ್ರಾಂತೀಯ ನ್ಯಾಯಸ್ಥಾನ, ಕೇಂದ್ರನ್ಯಾಯಸ್ಥಾನಗಳಲ್ಲದೆ ಪ್ರಜೆಗಳ ನ್ಯಾಯಸ್ಥಾನ (Peoples' Court) ಕೂಲಿಗಾರರ ನ್ಯಾಯಸ್ಥಾನ (Comrade Courts) ಎಂಬ ವಿಶೇಷ ನ್ಯಾಯಸ್ಥಾನಗಳು ರಶಿಯಾದಲ್ಲಿರುವುದು ಒಂದು ವಿಶೇಷ ಸಂಗತಿ.

ವ್ಯವಸಾಯದ ವಸ್ತುಪ್ರದರ್ಶನಶಾಲೆ, ವೈಜ್ಞಾನಿಕ ಪದ್ಧತಿಯ ಪ್ರಕಾರ ಕಟ್ಟಿರುವ ಪಶುಶಾಲೆ, ರೈತರ ಮನೆಗಳು, ವ್ಯವಸಾಯದ ಉಪಕರಣಗಳು ಇವುಗಳನ್ನೊಳಗೊಂಡ ಸರ್ಕಾರದಿಂದ ಸ್ಥಾಪಿತವಾಗಿರುವ ರೈತರ ಭವನ, ಇಡೀ ಪ್ರಪಂಚಕ್ಕೆ ಮಾರ್ಗದರ್ಶಿ ಎನ್ನಬಹುದು. ಜನರ ಮಾನಸಿಕಾಭಿವೃದ್ಧಿಗಾಗಿ ಕ್ಲಬ್ಬು, ಪಾಠಶಾಲೆ, ಗ್ರಂಥಾಲಯ, ರೇಡಿಯೋ, ಶರೀರಾಭಿವೃದ್ಧಿಗಾಗಿ ಮಲ್ಲಶಾಲೆ, ಭೋಜನಶಾಲೆ ಆಸ್ಪತ್ರೆ, ವಿಶ್ರಾಂತಿ ಗೃಹಗಳು, ಪುರೋಭಿವೃದ್ಧಿಗಾಗಿ ಜೀವವಿಮಾ ಪದ್ಧತಿ ಇವುಗಳನ್ನೆಲ್ಲಾ ಸರ್ಕಾರ ಏರ್ಪಡಿಸಿ ದೇಶವು ಸರ್ವತೋಮುಖವಾಗಿ ಬೆಳೆಯಲು ಸರ್ಕಾರ ಅವಕಾಶವನ್ನು ಕಲ್ಪಿಸಿರುವುದು.

ಒಟ್ಟಿನಲ್ಲಿ ಪುಸ್ತಕದ ಕೊನೆಯಲ್ಲಿ ಬರೆದಿರುವ ಹಿನ್ನುಡಿಯಲ್ಲಿ ಕ್ರಾಂತಿಯ ತತ್ವ, ಹೆಂಗಸರ ಉತ್ತಮಸ್ಥಿತಿ, ದೇಶ ನಮ್ಮದೆಂಬ ಜನರ ಹೊಸ ಹೆಮ್ಮೆ, ಆಚಾರದಿಂದ ಅಭ್ಯಾಸ ಎನ್ನುವ ಹೊಸ ವಿದ್ಯಾಭ್ಯಾಸದ ನೀತಿ, ಔದ್ಯೋಗಿಕ ಪ್ರಗತಿಗಾಗಿ ಮಾಡುತ್ತಿರುವ ಪ್ರಯತ್ನ, ಕೌಟುಂಬಿಕಜೀವನ ಸೌಕರ್ಯ ಮೊದಲಾದ ವಿಷಯಗಳ ಸಾರಾಂಶವನ್ನು ಅನುವಾದಕರು ವಿವರಿಸಿರುವರು. ಪುಸ್ತಕ ಸಣ್ಣದು; ಅದರಲ್ಲಿ ಅಡಗಿರುವ ವಿಷಯವಾದರೋ ಬಹು ದೊಡ್ಡದು. ಪುಸ್ತಕದ ಪ್ರತಿಪಙ್ತಿ ಪ್ರತಿ ಪುಟ ವಿಷಯಗರ್ಭಿತವಾಗಿದ್ದರೂ ಶೈಲಿಯಲ್ಲಿ ಕಾಠಿಣ್ಯವಿಲ್ಲ. ಪುಸ್ತಕ ಕಾದಂಬರಿಯಂತೆ ಬಹು ಸ್ವಾರಸ್ಯವಾಗಿಯೂ ಜ್ಞಾನದಾಯಕವಾಗಿಯೂ ಇರುವುದು. ಶ್ರೀಮಾನ್ ಶರ್ಮ ಅವರು ಮತ್ತಿಷ್ಟು ಗ್ರಂಥಗಳನ್ನು ಅನುವಾದಮಾಡಿ ಕನ್ನಡ ಭಾಷೆಯ ಸೇವೆಯನ್ನು ಮಾಡಲೆಂದು ಹಾರೈಸುವ.

ಹ.ಕೃ.

“ವಿಶ್ವಮೇಧ”—ಸಂಯುಕ್ತ ಕರ್ನಾಟಕ ಮುದ್ರಣಮಂದಿರ, ಹುಬ್ಬಳ್ಳಿ. ಪುಟಗಳು, ೨೨೦; ಬೆಲೆ, ರೂ. ೦-೧೨-೦.

ಈ ಪುಸ್ತಕವನ್ನು ಶ್ರೀಮಾನ್ ಸಂಜಯ ಅವರು ಬರೆದಿರುವರು. ಇದಕ್ಕೆ ಶ್ರೀಮಾನ್ ಮೋಹರೆ ಹನುಮಂತರಾಯರು ಮುನ್ನುಡಿಯನ್ನು ಬರೆದಿರುತ್ತಾರೆ. ಕಳೆದ ಮೂರು ವರ್ಷಗಳಿಂದ ಅವಿಚ್ಛಿನ್ನವಾಗಿ ನಡೆಯುತ್ತಿರುವ ವಿಶ್ವಮೇಧಯಾಗ ಅಥವಾ ನರಯಜ್ಞದ ಸಮಗ್ರವೃತ್ತಾಂತವನ್ನು ಸಂಕ್ಷೇಪವಾಗಿ ಗ್ರಂಥಕರ್ತರು ತಿಳಿಸಿರುವರು. ಪುಸ್ತಕದಲ್ಲಿ ೧೭ ಅಧ್ಯಾಯಗಳೂ, ಕಾಂಗ್ರೆಸ್ಸಿನ ಯುದ್ಧನೀತಿ, ಮಹಾತ್ಮಾ ಗಾಂಧಿಯವರ ಯುದ್ಧನೀತಿ, ಫ್ರಾನ್ಸ್-ಜರ್ಮನಿ ಒಪ್ಪಂದದ ಕರಾರು. ಫ್ರಾನ್ಸ್-ಇಟಲಿ ಒಪ್ಪಂದದ ಕರಾರುಗಳೆಂಬ ನಾಲ್ಕು ಪರಿಶಿಷ್ಟಗಳೂ ಇವೆ. ಪುಸ್ತಕದ ಕೊನೆಯಲ್ಲಿ ವಿಶ್ವಸಂಗ್ರಾಮದ ದಿನಚರ್ಯದ ಪಟ್ಟಿಯನ್ನು ಸಹ ಕೊಟ್ಟಿರುವರು. ವಿಷಯಗಳನ್ನು ಪಾಠಕರಿಗೆ ಮಂದಟ್ಟುಮಾಡುವ ಉದ್ದೇಶದಿಂದ ಅಲ್ಲಲ್ಲೆ ನಕ್ಷೆ, ವ್ಯಂಗ್ಯಚಿತ್ರ (ಕಾರ್ಟೂನ್) ಗಳನ್ನು ಬರೆದಿರುವರು. ಉದಾಹರಣೆಗಾಗಿ ರಣಕುಂಡವೆಂಬ ಚಿತ್ರ ಹಿಟ್ಲರಿನ ರಾಷ್ಟ್ರಾಕಾಂಕ್ಷೆ, ಅರ್ಥಕಾಂಕ್ಷೆ, ವರ್ಣದ್ವೇಷ; ಅಧಿಕಾರತೃಷ್ಣೆ ಇವುಗಳನ್ನು ಉದಹರಿಸುವುದು. ಮತ್ತೊಂದು ಚಿತ್ರದಲ್ಲಿ ಗೋಳಾಕಾರವಾಗಿರುವ ವಿಶ್ವವನ್ನು ಹಿಟ್ಲರನು ಬಲಾತ್ಕಾರದಿಂದ ಜರ್ಮನಿಯ ಒಳಕ್ಕೆ ನೂಕಬೇಕೆಂದು ಪ್ರಯತ್ನಿಸುತ್ತಿರುವನು. ಇದು ಅವನ ಮಹತ್ವಾಕಾಂಕ್ಷೆಯನ್ನು ವಿಶದಗೊಳಿಸುವುದು.

ಒಟ್ಟಿನಲ್ಲಿ ಗ್ರಂಥಕರ್ತರು ಈಗ ನಡೆಯುತ್ತಿರುವ ಪ್ರಚಂಡ ಯುದ್ಧದಕಾರಣ, ಅಂತರರಾಷ್ಟ್ರೀಯ ಅರಾಜಕತ್ವ, ಈ ಮಹಾ ಯಜ್ಞದಲ್ಲಿ ಭಾಗವನ್ನು ವಹಿಸಿರುವ ರಾಷ್ಟ್ರಗಳ ಬಲಾಬಲ, ಸರ್ವತೋಮುಖಯುದ್ಧದ ಅರ್ಥ ಇವೇ ಮೊದಲಾದ ವಿಷಯಗಳನ್ನೂ, ಹಿಟ್ಲರನು ರ್ಹಾಯರ್ಲ್ಯಾಂಡ್‌ನ್ನು ಆಕ್ರಮಿಸಿಕೊಂಡ ದಿನದಿಂದ ಜಪಾನೀಯರು ಈ ಯುದ್ಧಕ್ಕೆ ಸೇರಿ ಸಿಂಗಪುರವನ್ನು ಆಕ್ರಮಿಸಿಕೊಂಡ ದಿನದ ವರೆಗೆ ನಡೆದಿರುವ ಮುಖ್ಯವಾದ ಘಟನೆಗಳನ್ನೂ ಚೆನ್ನಾಗಿ ವಿವರಿಸಿರುವರು. ಈಗಿನ ಅಂತರರಾಷ್ಟ್ರೀಯ ಪರಿಸ್ಥಿತಿಯನ್ನು ತಿಳಿಯಬೇಕೆಂದಿರುವ ಕನ್ನಡಿಗರಿಗೆ ಸಂಜಯ ಅವರು ಬರೆದಿರುವ ಗ್ರಂಥವು ಒಂದು ಸಣ್ಣ ಕೈಪಿಡಿಯಾಗಿರುವುದರಲ್ಲಿ ಸಂದೇಹವಿಲ್ಲ.

ಹ.ಕೃ.

"ಚಿಗುರು"—ಬರೆದವರು : ದಿವಂಗತೆ ಸೌ. ಗೌರಮ್ಮ ; ಸಂಪಾದಕರು : ಚುಳಕಿ ಗೋವಿಂದರಾಯರು, ಲಲಿತ ಸಾಹಿತ್ಯಮಾಲೆ ; ಪ್ರಕಾಶಕರು : ದ. ಬಾ. ಕುಲಕರ್ಣಿ, ಮನೋಹರ ಗ್ರಂಥಭಾಂಡಾರ, ಧಾರವಾಡ ; ಬೆಲೆ, ೦-೧೪-೦.

ಸೌ. ಗೌರಮ್ಮನವರು "ಕಂಬನಿ"ಯನ್ನೇ ಮೊದಲು "ಚಿಗುರು" ಎಂದು ಕರೆಯಬೇಕೆಂದಿದ್ದುದು ಅವರ ಧ್ಯೇಯದ ಔನ್ನತಿಯನ್ನು ಮಾತ್ರ ಸೂಚಿಸುತ್ತದೆ. ಆ ಕಥಾಸಂಗ್ರಹದಲ್ಲಿ ಅವರ ಕಲೆಯು ಪೂರ್ಣವಾಗಿ ಅರಳಿದೆ. ಆದರೆ ಅದರಲ್ಲಿ ಪ್ರಕಟಿತವಾಗದೆ ಉಳಿದಿದ್ದ ಕಥೆಗಳಲ್ಲಿ ಒಂಬತ್ತರ "ಚಿಗುರು" ಎಂಬ ಈ ಸಂಗ್ರಹಕ್ಕೆ ಈ ಹೆಸರು ಒಪ್ಪುತ್ತದೆ. ಇಲ್ಲಿ ಕಾಣುವುದು ಚಿಗುರಿನ ಎಳಸು, ಚಿಗುರಿನ ಸೊಗಸು.

ಸಮಾಜದ ಕುರುಡುಕಟ್ಟುಗಳೂ ತರುಣಮನದ ಲೋಭಮೋಹಗಳೂ ಪ್ರೇಮ ಪಥದಲ್ಲಿ ಭೂತಗಳಂತೆ ಸುಳಿದು ಒಮ್ಮೊಮ್ಮೆ ಪ್ರೇಮಿಗಳ ಸೌಖ್ಯವನ್ನು ನುಂಗುವುವು. ಈ ದುರಂತದ ಜವಾಬ್ದಾರಿ ಬಹುಮಟ್ಟಿಗೆ ಪುರುಷರ ಮೇಲೆ. ಬಾಲೆಯರು ಅಸ್ವತಂತ್ರರಾಗಿರುವುದರಿಂದ ಎಷ್ಟೋ ಬಾರಿ ನಿರಪರಾಧಿನಿಯರಾದರೂ ದುಃಖಕ್ಕೆ ಗುರಿಯಾಗುವರು. ಒಮ್ಮೊಮ್ಮೆ ಪ್ರೇಮಿಯ, ಪ್ರೇಯಸಿಯ ಅಥವಾ ಅವರ ಮಿತ್ರರ ಚಾತುರ್ಯ, ಸರಳತೆ ಅಥವಾ ಧೈರ್ಯದಿಂದ ಪ್ರೇಮವು ವಿಜಯಿಯಾಗುವುದು. ಇದು ಈ ಕಥೆಗಳ ವಸ್ತು. ಪ್ರೇಮದ ಗೆಲವಿನಲ್ಲಿ ನಲ್ಮೆ, ಪ್ರೇಮದ ಸೋಲಿನಲ್ಲಿ ಮರುಕ—ಇವು ಈ ಕಥೆಗಳ ಸ್ಫೂರ್ತಿ. ಈ ಸುಧಾರಕದೃಷ್ಟಿಯು ಸ್ಫೂರ್ತಿಯಾಗುಳಿದಿದೆಯೇ ಹೊರತು ರಸಸೃಷ್ಟಿಯ ಧ್ಯೇಯಪ್ರಮುಖತೆಗೆ ಎಳ್ಳಷ್ಟೂ ಕುಂದು ತಂದಿಲ್ಲ. ಸಮಾಜದ ವಿಮರ್ಶೆಯಲ್ಲಿ ರೋಷದ ರೊಚ್ಚಿಲ್ಲ, ದುಃಖದ ವರ್ಣನೆಯಲ್ಲಿ ಕರುಣದ

ಅತಿರೇಕವಿಲ್ಲ. ಪ್ರತಿ ಕಥಾನಕದಲ್ಲಿಯೂ ಒಂದೊಂದು ಮೌಢ್ಯದಿಂದ ಪ್ರತ್ಯೇಕಿಸಲ್ಪಟ್ಟು ಪ್ರೇಮವು ಸಾಣೆಯ ಮೇಲಿನ ಸ್ವರ್ಣರೇಖೆಯಂತೆ ಥಳಿಸುತ್ತದೆ.

ಈ ಕಥೆಗಳಲ್ಲಿ ವ್ಯಕ್ತಿಗಳ ಚಿತ್ತದ ಚಲನವಲನಗಳ ಕಡೆಗೇ ದೃಷ್ಟಿ ಹೆಚ್ಚು. ಆದರೆ "ನನ್ನ ಮದುವೆ" ಎಂಬ ಕಥೆಯ ನಾಯಕನಲ್ಲಿ ಮಾತ್ರ "ಕಂಬನಿ"ಯ ಪಾತ್ರಗಳ ಸ್ವಭಾವಸೂಕ್ಷ್ಮತೆಯು ಕಂಡುಬರುತ್ತದೆ. ಅಲ್ಲದೆ ಅವನ ವಿಷಯದಲ್ಲಿ ವಿಧಿಯು ನಿರ್ಘೃಣನ್ಯಾಯದಿಂದ ನಡೆದುಕೊಳ್ಳುತ್ತದೆ. ಈ ಕಾರಣಗಳ ಪ್ರಭಾವದಿಂದ ಈ ಕಥೆಯು ಈ ಸಂಗ್ರಹದಲ್ಲೆಲ್ಲಾ ಅತ್ಯಂತ ಪರಿಣಾಮಕಾರಿಯಾಗಿ ಎದ್ದು ನಿಲ್ಲುತ್ತದೆ.

ಸೀಮೆಗೆ ಹೋಗಬೇಕೆಂಬಾಸೆಯು ರಾಮುವಿನಲ್ಲಿ ಬಾಲ್ಯದಿಂದಲೂ ಬೆಳೆದು ಉತ್ಕಟವಾಗಿತ್ತು. ಅದರ ಸಿದ್ಧಿಗೆ ಅವನ ತಂದೆ ನೆರವಾಗಲಿಲ್ಲ. ಆದರೆ ಹೈದರಾಬಾದಿನ ಜಮೀನ್ದಾರರೊಬ್ಬರು ತಮ್ಮ ಮಗಳು ಶಾರದೆಯನ್ನು ಅವನು ಮದುವೆಯಾಗುವುದಾದರೆ ಈ ವಿಷಯದಲ್ಲಿ ಅವನಿಗೆ ಸಹಾಯಮಾಡಲು ಒಪ್ಪಿದರು. ವರದಕ್ಷಿಣೆಯ ಪದ್ಧತಿಯನ್ನು ಮೊದಲಿನಿಂದ ವಿರೋಧಿಸುತ್ತಿದ್ದರೂ ರಾಮುವು ಅವರ ಮಾತಿಗೆ ಸಮ್ಮತಿಸಿದನು. ಆದರೆ ತಾನು ಹಣಕ್ಕಾಗಿ ಮಾತ್ರ ಮದುವೆಯಾಗುವುದರಿಂದ ಹೆಣ್ಣನ್ನು ಮದುವೆಗೆ ಮುನ್ನ ಒಮ್ಮೆ ನೋಡಲು ತಾನು ಅರ್ಹನಲ್ಲವೆಂದು ಅವನು ತನ್ನ ತಂದೆಗೆ ಹೇಳಿಬಿಟ್ಟನು. ಆದರೂ ಮೊದಲಿನಿಂದ ತಾನು ಮದುವೆಯಾಗುವವಳ ರೂಪವೈಭವವನ್ನು ಮನಸ್ಸಿನಲ್ಲಿ ಕಲ್ಪಿಸಿಕೊಳ್ಳುತ್ತಿದ್ದ ರಾಮುವಿಗೆ ಶಾರಿಯು ಹೇಗಿರುವಳೋ ಎಂದು ಅಂತರಂಗವು ತುಡಿಯುತ್ತಿತ್ತು. ಧಾರೆಯ ಸಮಯದಲ್ಲಿ ಅವನು ಮೊದಲಸಲ ಶಾರಿಯನ್ನು ನೋಡಿದುದನ್ನೂ ಆಗ ಅವರಲ್ಲುಂಟಾದ ಭಾವಗಳನ್ನೂ ಕಥೆಯು ಮುಕ್ತಾಯವು ಉಜ್ಜ್ವಲವಾಗಿ, ಕರುಣಭೀಷಣವಾಗಿ ಚಿತ್ರಿಸುತ್ತದೆ. ಅವಳು ಎಣ್ಣೆಗೆಂಪಾಗಿ ತೆಳ್ಳಗೆ ಉದ್ದವಾಗಿದ್ದುದಷ್ಟೇ ಅಲ್ಲ. ಪುರೋಹಿತರು ಮಾಲೆ ಹಾಕೆಂದು ಎರಡುಸಲ ಹೇಳಿದರೂ ಅವಳು ಸುಮ್ಮನಿದ್ದಳು. ಅವಳ ಮುಂದೆಯೇ ನಿಂತಿರುವರೆಂದೂ ಮಾಲೆಹಾಕಬೇಕೆಂದೂ ಅವಳ ತಾಯಿ ಹೇಳಿದಾಗ ಮಾತ್ರ ಶಾರಿಯು ತಡವರಿಸುತ್ತ ರಾಮುವಿಗೆ ಮಾಲೆ ಹಾಕಿದಳು. ಅವಳ ಕಣ್ಣುಗಳಲ್ಲಿ ತುಂಬಿದ್ದ ಕಣ್ಣೀರಿನ ತೊಟ್ಟುಗಳೆರಡು ಕಪೋಲಗಳ ಮೇಲುರುಳಿದುವು. ತನ್ನ ಕಡೆಯವರಾರಿಗೂ ಗೊತ್ತಾಗದ ಆ ವಿಷಯ ರಾಮುವಿಗೆ ಆಗ ತಿಳಿಯಿತು—ಅವನ ಹೆಂಡತಿ ಶಾರಿ ಕುರುಡಿಯೆಂದು.

"ಮುನ್ನಾದಿನ" ಎಂಬುದು ಇನ್ನೊಂದು ಉತ್ತಮಕಥೆ. ಗೌರಮ್ಮನವರು ಮೃತ್ಯುವಶರಾಗುವ ಮುನ್ನಾದಿನ ಇದನ್ನು ಬರೆದುದರಿಂದ ಇದನ್ನು ಸಂಪಾದಕರು ಈ ಹೆಸರಿನಿಂದ ಕರೆದಿದ್ದಾರೆ. ಇದು ಸಶೇಷವಾದರೂ ಇರುವಷ್ಟೆ ನಮ್ಮ ಮನಸ್ಸಿನ

ಮೇಲೆ ಪೂರ್ಣ ಕೃತಿಯಂತೆ ಪರಿಣಾಮವನ್ನುಂಟುಮಾಡುತ್ತದೆ. ಇದರ ಮೊದಲ ರ್ಧವು ಬಡ ಹುಡುಗನೊಬ್ಬನು ಜೀವನೋಪಾಯಕ್ಕಾಗಿ ಕಾಫೀ ತೋಟದಲ್ಲಿ ಕೆಲಸಕ್ಕೆ ಸೇರಿ ದೊರೆಯ ಇಚ್ಛೆಯನ್ನನುಸರಿಸಿ ಕ್ರಿಶ್ಚಿಯನ್ನಾಗುವುದನ್ನು ಚಿತ್ರಿಸಿದರೆ, ಇನ್ನೊಂದರ್ಧವು ಅವನು ಹರಯದಲ್ಲಿ ಆಗಾಗ ಬೀಡಿಯಂಗಡಿಯೊಂದರಲ್ಲಿ ವ್ಯಾಪಾರಕ್ಕೆ ಕುಳಿತುಕೊಳ್ಳುತ್ತಿದ್ದ ಮಾಪಿಳ್ಳೆ ತರುಣಿಯೊಬ್ಬಳನ್ನು ಪ್ರೇಮಿಸಿ ಅವಳನ್ನು ಮದುವೆಯಾಗುವುದಕ್ಕೋಸ್ಕರ ಮತ್ತೊಮ್ಮೆ ತನ್ನ ಮತವನ್ನು ಬದಲಾಯಿಸಿ ಮುಸಲ್ಮಾನನಾದುದನ್ನು ವರ್ಣಿಸುತ್ತದೆ. ಮೊದಲರ್ಧಕ್ಕೆ ಎರಡನೆಯರ್ಧವು ಸಮತೂಕವಾಗಿ ಮೊದಲನೆಯದರ ಪರಿಣಾಮವು ಎರಡನೆಯದರದನ್ನು ಸಮರ್ಥಿಸುತ್ತದೆ. ಈ ವೈಶಿಷ್ಟ್ಯದಿಂದ ಅವನ ಸರಳಮನಸ್ಸಿನ ಅಧೈರ್ಯದ ಭಾವವು ಸುಂದರವಾಗಿ ಮೂರ್ತಿಗೊಳ್ಳುತ್ತದೆ. ಆವರಣದ ನಾವೀನ್ಯದಿಂದಲೂ ವರ್ಣನೆಯ ಸಹಜತೆಯಿಂದಲೂ ಅವನೂ ಹುಸೇನ್ ಬೀಯೂ ಒಬ್ಬರನ್ನೊಬ್ಬರು ಪ್ರೇಮಿಸುವ ಚಿತ್ರವು ಬಹು ಮೋಹಕವಾಗಿದೆ. ಚೆನ್ನಾಗಿರುವ ಇತರ ಕಥೆಗಳೆಂದರೆ "ಪಾಪನ ಮದುವೆ", "ಮರದ ಬೊಂಬೆ" ಮತ್ತು "ಅದೃಷ್ಟದ ಆಟ". ಪಾಪ ಆಂಟಿಯರ ಬಾಲ್ಯದ ಚಿತ್ರವೂ, ತರಗತಿಯಲ್ಲಿ ಬಾಲೆಯರನ್ನು ನೋಡಲೂ ಮಾತಾಡಿಸಲೂ ಅಳುಕುತ್ತಿದ್ದ ಮರದ ಗೊಂಬೆ ಉಪಾಧ್ಯಾಯ ಕೃಷ್ಣಮೂರ್ತಿ ಚದುರೆ ವಿದ್ಯಾರ್ಥಿನಿ ಶೈಲೆಯರ ಪ್ರೇಮದ ಚಿತ್ರವೂ, ಮಣಿ ಲತೆಯರ ಅನುರಾಗವು ಪಗಡೆಯಾಟಗಳ ಆವರಣದಲ್ಲಿ ಹುಟ್ಟಿ ಬೆಳೆದುದರ ಮತ್ತು ಅದಕ್ಕೆ ತಟ್ಟಿದ ವಿಘ್ನದ ವಿಷಾದಾಂತದ ಚಿತ್ರಗಳೂ ಹೃದಯಂಗಮವಾಗಿವೆ.

ಆದರೆ ಈ ಎಲ್ಲ ಕಥೆಗಳಿಗೂ ಬೆಳೆವಣಿಗೆ, ಪುಷ್ಟಿ, ಸಾಲದು. ಈ ದೋಷದ ಜೊತೆಗೆ "ಪಾಪನ ಮದುವೆ"ಯಲ್ಲಿ ಕ್ರಿಯೆಯ ಐಕ್ಯಕ್ಕೂ, "ಮರದ ಗೊಂಬೆ"ಯಲ್ಲಿ ಕಥೆಯ ಓಟದ ನಿರ್ವಾಹದಲ್ಲಿ ಸಹಜತೆಗೂ ಭಂಗಬಂದಿದೆ. ಅಲ್ಲದೆ ಸಂಗ್ರಹದ ಮೊದಲನೆಯ ಮತ್ತು ಮೂರನೆಯ ಕಥೆಗಳು ಲೇಖಕಿಯರು ಮೊದಲುಮೊದಲು ಬರೆದುವು, ಅವುಗಳ ಕಲೆ ಬಾಲಿಶವಾಗಿದೆ. "ಚಿಗುರಿ"ನಲ್ಲಿ ಶೈಲಿ ಸರಳವಾಗಿ ಸೂಕ್ಷ್ಮವಾಗಿದೆ, ಆದರೆ "ಕಂಬನಿ"ಯ ಶೈಲಿಯು ಮೃದುಮಧುರತೆಯನ್ನು ಹೊಂದಿಲ್ಲ. ಈ ಬಗೆಯಲ್ಲಿ "ಚಿಗುರಿ"ನ ಕಲೆಯು ಪಕ್ವಸ್ಥಿತಿಯನ್ನು ಮುಟ್ಟಿಲ್ಲವಾದರೂ ಇಲ್ಲಿನ ಕಥೆಗಳಲ್ಲಿ ರಸಿಕರ ಮನವೊಲಿಸಿ ನಲಿಸಲು ಸಾಕಾದಷ್ಟು ಸತ್ತ್ವವಿದೆ, ಸೌಂದರ್ಯವಿದೆ. "ಚಿಗುರು" ಗೌರಮ್ಮನವರ ಕಲೆಯ ಮಾಮರದ ಚಿಗುರು. "ಕಂಬನಿ" ಅದರ ಮೊದಲಹಣ್ಣು. ಅವರ ಅಕಾಲಮರಣದ ಸಿಡಿಲಿನಿಂದ ತಟ್ಟನೆ ಆ ಕಲಾವೃಕ್ಷವು ಭಸ್ಮೀಭೂತವಾದುದು ಕನ್ನಡಿಗರ ದುರ್ದೈವವೇ ಸರಿ.

ಕೆ. ನರಸಿಂಹಮೂರ್ತಿ.

“ ಆರತಿ ”—ಹೆಣ್ಣುಮಕ್ಕಳ ಕಥಾಸಂಕಲನ ; ಸಂಪಾದಕರು : ಮೇವುಂಡಿ ಮಲ್ಲಾರಿ, ಕುಲಕರಣಿ ದತ್ತಾತ್ರೇಯ ; ಪ್ರಕಾಶಕರು : ದ. ಬಾ. ಕುಲಕರ್ಣಿ, ಮನೋಹರ ಗ್ರಂಥಭಾಂಡಾರ, ಧಾರವಾಡ ; ಬೆಲೆ, ಹನ್ನೆರಡಾಣೆ.

ಸ್ತ್ರೀ ಜೀವನದ ಸುಖದುಃಖಗಳನ್ನು ತಮ್ಮ ದೃಷ್ಟಿಕೋನದಿಂದಲೇ ಸ್ತ್ರೀಯರೇ ಚಿತ್ರಿಸಿರುವ ಒಂಬತ್ತು ಸಣ್ಣಕತೆಗಳ ಸಂಗ್ರಹ, “ಆರತಿ”. ಸ್ತ್ರೀ ಜೀವನದ ದುಃಖಗಳ ಮೇಲೆಯೇ ಈ ಸಣ್ಣಕತೆಗಳು ಹೆಚ್ಚಾಗಿ ಬೆಳಕುಬೀರುವುದು. ಬಹುಪತ್ನೀತ್ವ ವಿಧವಾಕೇಶಖಂಡನವಿಧಿಗಳಿಂದುಂಟಾಗುವ ಶೋಕವನ್ನು ಕೆಲವು ವಿವರಿಸಿದರೆ, ಅಪುತ್ರತೆ ದಾರಿದ್ರ್ಯಗಳಿಂದುಂಟಾಗುವ ಅಳಲನ್ನು ಇನ್ನು ಕೆಲವು ಬಣ್ಣಿಸುತ್ತವೆ.

ಮೊದಲೆರಡು ಕಥೆಗಳು ಗೌರಮ್ಮನವರ ನೆನಪಿನ ಕಥಾಸ್ಪರ್ಧೆಯಲ್ಲಿ ಬಹುಮಾನ ಪಡೆದುವು. ಕುಸುಮಾ ಹತ್ತಿರದಲ್ಲಿರುವುದು ಪರೀಕ್ಷೆಗೆ ಓದುವ ರಾಮುವಿಗೆ ನೆರವೇ ವಿನಾ ಅಡ್ಡಿಯಲ್ಲವೆಂಬುದರ ಸರಸಚಿತ್ರ ಸುಮಿತ್ರಮ್ಮನವರ “ನನ್ನ ಪರೀಕ್ಷೆ.” ಭಾವದ ಸೂಕ್ಷ್ಮತೆಯು ಆದರ ಉನ್ಮೇಷದಲ್ಲಿ ಪೂರ್ಣವಾಗಿ ಉಳಿದುಬಂದಿರದಿದ್ದರೂ, ಈ ಕಥೆಯು ಆಹ್ಲಾದಕರವಾಗಿದೆ. ಎರಡನೆಯ ಕಥೆ “ ವಾಣಿ ”ಯವರ “ ಕನಸೋ ನೆನಸೋ.” ಒಂದು ರಾತ್ರಿ ಬೃಂದಾವನದಲ್ಲಿ ಬಹಳ ಹೊತ್ತು ತಮ್ಮ ಗುಂಪು ಉಳಿಯಬೇಕಾಗಿ ಬಂದ ಪ್ರಸಂಗವನ್ನು ಲೇಖಕಿಯರು ಗೌರಮ್ಮನವರಿಗೆ ವಿವರಿಸಿದಾಗ ಅವರು ತಾವು ಆಗ ಅಲ್ಲಿದ್ದಿದ್ದರೆ ಅಪಾಯಕ್ಕಳುಕದೆ ಈಸಿ ಆನಂದಿಸುತ್ತಿದ್ದರೆಂದು ನುಡಿದುದು ನೆನಪೆಂದೇ ಭಾಸವಾಗುತ್ತಿರುತ್ತದೆ. ಆದರೆ ಇದ್ದಕ್ಕಿದ್ದಂತೆ ಅವರು ಈಸಲಿಳಿಯುವುದೂ ಲೇಖಕಿಯರು ಭಯಚಕಿತರಾಗಿ ಅವರನ್ನು ತಡೆಯ ಹೋಗುವುದೂ ಇದೆಲ್ಲವೂ ಗೌರಮ್ಮನವರ ಅಕಾಲಮರಣವು ಪ್ರಚೋದಿಸಿದ ಕನಸೆಂದು ಸ್ಪಷ್ಟಗೊಳಿಸುವುವು. ಈ ಕಥೆಯಲ್ಲಿನ ವರ್ಣನೆಯ ರಮ್ಯತೆಯಿಂದಲೂ ರಚನೆಯ ಚಾತುರ್ಯದಿಂದಲೂ ಪರಿಣಾಮವು ಕರುಣಾವ್ಯಂಜಕವಾಗಿದೆ. ಪ್ರಕೃತಿಯ ಚೆಲುವಿನಲ್ಲಿ ಗೌರಮ್ಮನವರಿಗಿದ್ದ ತೀವ್ರವಾದ ಒಲವು ಕಥೆಯುದ್ದಕ್ಕೂ ಹೆಚ್ಚು ಅಭಿವ್ಯಕ್ತವಾಗಿದ್ದು, ಸನ್ನಿವೇಶವಿವರಣೆ ಇನ್ನಷ್ಟು ಶಕ್ತಿಯುತವಾಗಿದ್ದಿದ್ದರೆ ಈ ಕಥೆಯು ಮಹತ್ತ್ವಕ್ಕೇರುತ್ತಿದ್ದಿತು.

ಆರ್. ರತ್ನಾಬಾಯಿಯವರ “ ಚೆನ್ನಿ ” ಘೋರವಾದ ಸನ್ನಿವೇಶವೊಂದನ್ನು ಚಿತ್ರಿಸುತ್ತದೆ. ಮಾದನ ಪ್ರೇಮವನ್ನು ವಿರಸಗೊಳಿಸಿ ಅವನ ಮನಸ್ಸನ್ನು ಹಿಂಸಿಸುತ್ತಿದ್ದ ತನ್ನ ಅಪುತ್ರತೆಯನ್ನು ನೀಗಿಕೊಳ್ಳಲು ಅಸಹ್ಯವಾದ ಅಪರಾಧವನ್ನು ಮಾಡಿ ಅರಿಯದ ಮಾದನು ಹರ್ಷಿಸಿದರೂ ಚೆನ್ನಿ ತಾನು ಕೊರಗಿನಲ್ಲಿ ಮಡಿಯುವುದು ಹೃದಯವಿದ್ರಾವಕವಾಗಿ ಬಂದಿದೆ. ಕುಮಾರಿ ದೇವಾಂಗನಾ ಶಾಸ್ತ್ರಿಯವರ ಬಹು

ಮಾನಪಡೆದ "ವೇಣೀಸಂಹಾರ" ಎಂಬ ಕಥೆ ಹಲವರು ಉಪಯೋಗಿಸಿರುವ ವಸ್ತುವನ್ನೇ ತೆಗೆದುಕೊಂಡರೂ ಅದನ್ನು ಬಳಸಿಕೊಂಡಿರುವ ಬಗೆಯಿಂದ ಉತ್ತಮ ಕಲಾಕೃತಿಯಾಗಿದೆ. ಬಾಲವಿಧವೆಯಾದ ಶಾಂತೆ ಬಡಪುರೋಹಿತನ ಮಗಳು. ಜನರ ಮೆಚ್ಚುಗೆಯನ್ನೂ ಆ ಮೂಲಕ ತನ್ನ ವೃತ್ತಿಯನ್ನೂ ಉಳಿಸಿಕೊಳ್ಳಲು ತಂದೆ ನವಪ್ರಾಯದ ಮಗಳ ಕೇಶವಾಪನಕ್ಕೆ ಒಪ್ಪುವನು. ಸನ್ನಿವೇಶರಚನೆಯಲ್ಲಿ ಸಾಕಷ್ಟು ಶಕ್ತಿಯಿದೆ, ವರ್ಣನೆಯಲ್ಲಿ ಸಾಕಷ್ಟು ಉಜ್ಜ್ವಲತೆಯಿದೆ. ಕೇಶಖಂಡನದ ಮುನ್ನ ಹೆರಳುಹಾಕಿಕೊಂಡು ಅರಳಿದ ಹೂ ಮುಡಿದು ಅವಳು ಕನ್ನಡಿಯಲ್ಲಿ ತನ್ನನ್ನು ನೋಡಿಕೊಳ್ಳುತ್ತ ಬಹುಹೊತ್ತು ನಿಲ್ಲಬೇಕೆಂದಿರುವ ದೃಶ್ಯವು ಕಾರ್ಮೋಡದ ಮಿಂಚಿನಂತೆ ಹೃದ್ಯವೂ ಹೃದ್ವೇಧಕವೂ ಆಗಿದೆ.

ಎರಡನೆಯ ಮಟ್ಟದ ಈ ಉತ್ತಮ ಕಥೆಗಳ ಜೊತೆಗಿರುವ ಉಳಿದೈದು ಕಥೆಗಳು ಅಷ್ಟು ನೀರಸವಾಗಿರದಿದ್ದರೆ "ಆರತಿ" ಹೆಚ್ಚು ಆಕರ್ಷಕವಾಗಿರುತ್ತಿತ್ತು.

ಕೆ. ನರಸಿಂಹಮೂರ್ತಿ.

ಸಾಹಿತ್ಯದ ಜೀವಾಳ (ಷೋಪನ್‌ಹೌರನ ಪ್ರಬಂಧಗಳು)—ಅನುವಾದಕರು: ಶ್ರೀ ಗೊರೂರು ರಾಮಸ್ವಾಮಿ ಐಯಂಗಾರ್ ಅವರು; ಪ್ರಕಾಶಕರು: ಕಾವ್ಯಾಲಯ, ಮೈಸೂರು; ಬೆಲೆ, ೦-೧೦-೦.

ಜರ್ಮನಿಯ ತಾತ್ವಿಕರಲ್ಲಿ ಷೋಪನ್‌ಹೌರನೂ ಒಬ್ಬನು. ತತ್ವವಿಚಾರದಲ್ಲಿ ಅವನು ಹೆಚ್ಚಾಗಿ ಬರೆದಿದ್ದರೂ ಮಿಕ್ಕ ವಿಚಾರಗಳಲ್ಲೂ ಅನೇಕ ಪ್ರಬಂಧಗಳನ್ನು ಬರೆದಿದ್ದಾನೆ. ಅವುಗಳಲ್ಲಿ ಸಾಹಿತ್ಯಭಾಗದ ನಾಲ್ಕು ಪ್ರಬಂಧಗಳನ್ನು ಶ್ರೀ ಗೊರೂರು ರಾಮಸ್ವಾಮಿ ಐಯಂಗಾರ್ಯರು ಅನುವಾದಮಾಡಿದ್ದಾರೆ.

'ಲೇಖನಕಲೆ' ಎಂಬುವುದು ಮೊದಲನೆಯ ಪ್ರಬಂಧ. ಷೋಪನ್‌ಹೌರನ ಅಭಿಪ್ರಾಯ ಹೀಗಿದೆ: ಲೇಖನಕಲೆಯು ಬರೆಯುವ ಶೈಲಿಯಲ್ಲೂ, ಬರೆಯಬೇಕಾದ ವಿಷಯದಲ್ಲೂ, ಆ ವಿಷಯವು ತೆಗೆದುಕೊಳ್ಳುವ ರೂಪದಲ್ಲೂ ಕಂಡುಬರುತ್ತದೆ. ಹಣದಾಸೆಯಿಂದ ಯೋಚನೆಮಾಡದೆ ಬರೆದ ಕೆಟ್ಟಬರೆವಣಿಗೆಯಲ್ಲಿ ಸಡಿಲವಾದ ಗುರಿಯಿಲ್ಲದ ಶೈಲಿಯಿದೆ, ವಿಚಾರಮಾಡದ ವಿಷಯವಿದೆ, ರಸವಿಲ್ಲದ ರೂಪವಿದೆ. ಆದರೆ ವಿಷಯಪ್ರತಿಪಾದನೆಗಾಗಿ ಯೋಚಿಸಿದ ಮೇಲೆ ಬರೆದ ಒಳ್ಳೆ ಬರೆವಣಿಗೆಯಲ್ಲಿ ಬಿಗಿಯಾದ ಶೈಲಿ, ಗಹನವಾದ ವಿಷಯ, ಕಾವ್ಯರೂಪ ಇವು ಕಾಣುತ್ತವೆ. 'ತನ್ನಷ್ಟಕ್ಕೆ ತಾನು ಆಲೋಚನೆಮಾಡುವುದು' ಎಂಬ ಎರಡನೆಯ ಪ್ರಬಂಧದಲ್ಲಿ ಷೋಪನ್‌ಹೌರನು ಬರಿಯ ಓದಿನಿಂದುಂಟಾಗುವ ಕುರುಡು ಪಾಂಡಿತ್ಯಕ್ಕೂ ಸ್ವಂತ ಆಲೋಚನೆ

ಯಿಂದುಂಟಾಗುವ ವ್ಯವಸ್ಥಿತ ಜ್ಞಾನಕ್ಕೂ ಭೇದವನ್ನು ತೋರಿಸುತ್ತಾನೆ. ಮೂರನೆಯದಾದ 'ಗ್ರಂಥಗಳು ಮತ್ತು ಅವುಗಳ ವ್ಯಾಸಂಗ' ಎಂಬ ಪ್ರಬಂಧದಲ್ಲಿ ನಿಜವಾದ ಶಾಶ್ವತವಾದ ಸಾಹಿತ್ಯಕ್ಕೂ ತೋರಿಕೆಯ ಕ್ಷಣಿಕವಾದ ಬರೆವಣಿಗೆಗೂ ವ್ಯತ್ಯಾಸವನ್ನು ತಿಳಿಸಿ, ಗ್ರಂಥ ಓದುವುದಕ್ಕೆ ಸಂಯಮ ಮುಖ್ಯವೆಂದು ಹೇಳುತ್ತಾನೆ. ನಾಲ್ಕನೆಯ ಪ್ರಬಂಧ, 'ಶೈಲಿ'. ಇದರಲ್ಲಿ ಮಧ್ಯಮತರಗತಿಯ ಮತ್ತು ಉತ್ತಮತರಗತಿಯ ಶೈಲಿಗಳ ವ್ಯತ್ಯಾಸವನ್ನು ಹೇಳಿ, ಅದರ ಮೂಲಕ ಒಳ್ಳೆ ಶೈಲಿಯ ಲಕ್ಷಣವನ್ನು ತಿಳಿಸುತ್ತಾನೆ; ಬರೆವಣಿಗೆಯು ಅವ್ಯವಸ್ಥೆಯಾಗಿರದೆ ಸ್ಪಷ್ಟವಾಗಿ, ಸರಳವಾಗಿ, ಸ್ವಾಭಾವಿಕವಾಗಿರಬೇಕೆಂದು ಅವನ ಅಭಿಪ್ರಾಯ.

ಈ ಪ್ರಬಂಧಗಳಲ್ಲೇ ಕಂಡುಬರುವಂತೆ, ತನಗೆ ಬೇಡದವರನ್ನು ಯಾವುದಾದರೂ ಒಂದು ರೀತಿಯಲ್ಲಿ ಹಿಯ್ಯಾಳಿಸದಿದ್ದರೆ ಷೋಪನ್‌ಹೌರನಿಗೆ ಸಮಾಧಾನವೇ ಇಲ್ಲ. ಅವನಿಗೆ ಜೀವನದ ಮೇಲೆ ಸಿಟ್ಟು; ಹಾಗಿರುವಾಗ ಅವನು ಯಾರನ್ನಾದರೂ ಬಯ್ಯುವುದೇನೂ ದೊಡ್ಡದಲ್ಲ. ಆದರೆ ಎಂಥ ಗಹನವಾದ ವಿಷಯ ಹೇಳಬೇಕಾದರೂ ಅವನಿಗೆ ಸ್ಪಷ್ಟವಾಗಿ ಸುಲಭವಾಗಿ ಹೇಳುವ ಶಕ್ತಿಯಿದೆ. ಅದಕ್ಕನುಗುಣವಾಗಿ ಶ್ರೀರಾಮಸ್ವಾಮಿ ಐಯಂಗಾರ್ಯರ ಅನುವಾದವು ಮೂಲದ ತಿರುಳನ್ನು ಗ್ರಹಿಸಿದೆ.

ಶ್ರೀ ಗೊರೂರವರ ಬರೆವಣಿಗೆಯೆಂದರೆ ಯಾರಿಗಾದರೂ ಓದೋಣವೆನ್ನಿಸುತ್ತದೆ. ಅವರದು ಒಳ್ಳೆ ನುರಿತ ಕೈ. ಆದರೆ ಇಲ್ಲಿ ಇನ್ನೊಬ್ಬರ ಮಾತನ್ನು ಬರೆಯಬೇಕಾಗಿರುವುದರಿಂದ ಕೈ ಸ್ವಲ್ಪ ತಡೆದಿದೆ. ಶಬ್ದ ಸುಲಭವಾಗಿದ್ದರೂ ಭಾವ ಸುಲಭವಾದದ್ದಲ್ಲ. ಆದ್ದರಿಂದ ಕೆಲವು ವಾಕ್ಯಗಳನ್ನರ್ಥಮಾಡಿಕೊಳ್ಳಬೇಕಾದರೆ ಎರಡು ಮೂರು ಬಾರಿ ಓದಬೇಕಾಗುವುದು. ಉದಾ: "ಅವನು (ಮಧ್ಯಮತರಗತಿಯ ಲೇಖಕ) ಪ್ರಾರಂಭದಿಂದಲೂ ನಿಷ್ಕಪಟಿಯೂ, ಸರಳವಾದವನೂ ಆಗಿರುವ ಸ್ವಾತಂತ್ರ್ಯವನ್ನು ಕಳೆದುಕೊಳ್ಳುತ್ತಾನೆ." (ಪು. ೩೦). "ಆಲೋಚನೆ ಮತ್ತೆ ಭಾವವಾಗಿ ರೂಪವನ್ನು ಹೊಂದಲು ಅವರ (ಅಸ್ಪಷ್ಟವಾಗಿ ಬರೆಯುವವರ) ಮನಸ್ಸು ತೊಳಲಾಡುತ್ತಿರುವುದರ ಸೂಚನೆಮಾತ್ರ ಅವರಿಗೆ ತೋರುತ್ತದೆ." (ಪು. ೩೯).

ಅಚ್ಚಿನ ತಪ್ಪನ್ನು ತಿದ್ದಿಕೊಂಡು ಓದಬೇಕೆಂದು ಅನುವಾದಕರೇ ಹೇಳಿಬಿಟ್ಟಿದ್ದಾರೆ. ಆದರೆ ಅದರ ಜೊತೆಗೆ ಇನ್ನೂ ಕೆಲವು ಚಿಕ್ಕ ತಪ್ಪುಗಳು ನುಣುಚಿಕೊಂಡು ಬಂದಿವೆ. ಪುಸ್ತಕದ ಹೆಸರು ರಟ್ಟಿನ ಮೇಲೆ ಇರುವುದು "ಸಾಹಿತ್ಯದ ಜೀವಾಳ"; ಆದರೆ ಪುಸ್ತಕದ ಒಳಗೆ ಎಡಗಡೆ ಪುಟಗಳ ಮೇಲೆಲ್ಲಾ ಇರುವುದು "ಲೇಖನಕಲೆ" ಎಂಬ ಮೊದಲನೆಯ ಪ್ರಬಂಧದ ಹೆಸರು. ಮುನ್ನುಡಿಯಲ್ಲಿ ಈ ವಿಚಾರವಾಗಿ ಒಂದು ಮಾತು ಹೇಳಬಹುದಾಗಿತ್ತು.—ಪುಸ್ತಕದ ಚಿಕ್ಕ ಹೆಸರಿನಲ್ಲಿರುವಂತೆ 'ಷೋಪನ್'

'ಹೌರ್' ಎಂದು ಎರಡು ಶಬ್ದಗಳಿಲ್ಲ; 'ಷೋಪನ್‌ಹೌರ್' ಎಂದು ಒಂದೇ ಶಬ್ದ, ಮತ್ತು, ಡೆಸ್‌ಕಾರ್ಟೆಸ್ (ಡೇಕಾರ್ಟ್), ಫಿಟ್‌ಜೆ (ಫಿಶ್ಟೆ) ಮುಂತಾದ ಹೆಸರುಗಳನ್ನು ಸರಿಯಾಗಿ ಬರೆಯಬಹುದಾಗಿತ್ತು.

ಈ ಸಣ್ಣ ತಪ್ಪುಗಳು ಪುಸ್ತಕದ ಮಹತ್ವವನ್ನು ಮುಚ್ಚಿಲ್ಲ. ಷೋಪನ್ ಹೌರನಿಗೆ ಸಹಜವಾದ ಕಾರದ, ಕುಚೋದ್ಯದ ಮಾತುಗಳನ್ನೂ ಅವುಗಳೊಡನೆಯೆ ಹೆಣೆದುಕೊಂಡಿರುವ ಉದಾತ್ತವಾದ ಭಾವನೆಗಳನ್ನೂ ಶ್ರೀ ರಾಮಸ್ವಾಮಿ ಐಯಂಗಾರ್ ಆದದ್ದರಿಂದ ಅಷ್ಟು ಚೆನ್ನಾಗಿ ಬರೆಯುವುದಕ್ಕಾಯಿತೆಂದು ಹೇಳಬಹುದು. ಸರಿಯಾದ ಅನುವಾದಗಳು ಕನ್ನಡದಲ್ಲಿ ಕಡಮೆಯಾಗಿರುವಾಗ ಶ್ರೀ ಗೊರೂರವರ ಬರೆವಣಿಗೆಯು ಒಳ್ಳೆದಾರಿಯನ್ನು ತೋರಿಸಿದೆ ಎನ್ನುವುದರಲ್ಲಿ ಸಂದೇಹವಿಲ್ಲ.

ಹೆಚ್. ಕೆ. ರಾಜಾರಾವ್.

ಸಾದರ ಸ್ವೀಕಾರ

೧. **ಹಿಂದೂದೇಶದ ಚರಿತ್ರೆ**—ಮೊದಲನೆಯ ಪುಸ್ತಕ; ಲೇಖಕರು : ಶ್ರೀ|| ಎಸ್. ಕಾಳಪ್ಪ, ಎಂ.ಎ., ಬಿ.ಟಿ. ; ಪ್ರಕಾಶಕರು : ಗವರ್ನಮೆಂಟ್ ಪ್ರೆಸ್, ಬೆಂಗಳೂರು ; ಬೆಲೆ, ೦-೪-೬.

೨. **ಹಿಂದೂದೇಶದ ಚರಿತ್ರೆ**—ಎರಡನೆಯ ಪುಸ್ತಕ; ಲೇಖಕರು : ಶ್ರೀ|| ಎ. ಶೇಷಯಂಗಾರ್, ಎಂ.ಎ. ಮತ್ತು ಎ. ಮೈಲಾರಿರಾವ್, ಎಂ.ಎ., ಬಿ.ಟಿ. ; ಪ್ರಕಾಶಕರು : ವಿದ್ಯಾಭ್ಯಾಸದ ಇಲಾಖೆ, ಮೈಸೂರು.

೩. **ಮಳೆರಾಯ ; (೪) ಸುಳ್ಳಿನ ಸೋಲು**—ಲೇಖಕರು : ಶ್ರೀ|| ಬಿ. ಶ್ರೀ. ಪಾಂಡುರಂಗರಾವ್, ಶ್ರೀಮತಿ ಆರ್. ಕಲ್ಯಾಣಮ್ಮನವರ ಮುನ್ನುಡಿಯೊಡನೆ.

೪. **ಮೊಗವೀರ**—ತ್ರೈಮಾಸಿಕ ಪತ್ರಿಕೆ; ಮೊಗವೀರ ವ್ಯವಸ್ಥಾಪಕ ಮಂಡಲಿ, ಬೊಂಬಾಯಿ.

೫. **ವಿದ್ಯೋದಯ**—ಸಂಪುಟ. ೧, ಸಂಚಿಕೆ ೧. ಸಂಪಾದಕರು : ಎಸ್. ಮುಕುಂದ ರಾವ್, ದಕ್ಷಿಣಕನ್ನಡ.

೭. **ಸಂದೇಶ** (ಮೋಟರ ಕಾಂಗ್ರೆಸ್ ಸಂಚಿಕೆ)—

೮. **ಮರಳಿ ಮಣ್ಣಿಗೆ** (ಕಾದಂಬರಿ)—ಲೇಖಕರು : ಶ್ರೀ|| ಶಿವರಾಮಕಾರಂತರು, ಸು. ೬೦೦ ಪುಟಗಳಿವೆ ಬೆಲೆ, ರೂ. ೩-೮-೦; ಪ್ರಕಾಶಕರು : ಮನೋಹರ ಗ್ರಂಥಪ್ರಕಾಶನ ಸಮಿತಿ, ಧಾರವಾಡ.

೯. **ಕೌಟಿಲ್ಯ**—ಶ್ರೀ|| ಎಂ. ವಿ. ಕೃಷ್ಣರಾವ್, ಎಂ.ಎ., ಬಿ.ಟಿ. ; ವಿ. ವಿ. ನಿಲಯದ ಪ್ರ. ಪುಸ್ತಕಮಾಲೆ.

೧೦. **ತೆಲುಗು ಚಾಟುಪದ್ಯಗಳು**—ಶ್ರೀ|| ಕೆ. ವೆಂಕಟರಾಮಪ್ಪ, ಎಂ.ಎ. ವಿ. ವಿ. ನಿಲಯದ ಪ್ರಚಾರ ಪುಸ್ತಕಮಾಲೆ—೪೨ ; ಬೆಲೆ, ೦-೩-೦.

ವಸ್ತು ಕೋಶ

ಕನ್ನಡ ಸಾಹಿತ್ಯ ಪರಿಷತ್ತಿನ ಮಾಜಿ ಉಪಾಧ್ಯಕ್ಷರಾದ ಶ್ರೀಮಾನ್ ವ್ಯಾಕರಣ ತೀರ್ಥ ಚಂದ್ರಶೇಖರ ಶಾಸ್ತ್ರಿಗಳು ಇತ್ತೀಚಿನ "ಕನ್ನಡ ನುಡಿ" (೨-೧೦-೪೨)ಯಲ್ಲಿ "ಮೈಸೂರಿನಲ್ಲಿ ಕನ್ನಡದ ಬೆಳೆವಣಿಗೆ" ಎಂಬ ಒಂದು ಲೇಖನದಲ್ಲಿ ಮೈಸೂರು ಸರ್ಕಾರಕ್ಕೂ ಕನ್ನಡಕ್ಕೂ ಇರುವ ಸಂಬಂಧವನ್ನು ಕುರಿತು ಹಲವು ಮಾತುಗಳನ್ನಾಡಿದ್ದಾರೆ. ಅವುಗಳನ್ನು ಇಲ್ಲಿ ಉದ್ಧರಿಸಿದೆ.

ಕನ್ನಡದ ಬೆಳವಣಿಗೆ

ಶ್ರೀಯುತರು ಸರ್ಕಾರಕ್ಕೂ ಆಯಾ ನಾಡಿನ ಭಾಷೆಗೂ ಇರುವ ನಿಕಟ ಬಾಂಧವ್ಯ, ಹಕ್ಕು, ಹೊಣೆಗಳನ್ನು ಪ್ರಸ್ತಾಪಿಸುತ್ತ, ಐರ್ಲೆಂಡ್ ಸರ್ಕಾರದ ಬೆಂಬಲದಿಂದ ಐರಿಷ್ ಭಾಷೆ ಉದ್ಧಾರವಾಯಿತು ; ರಷ್ಯಾ ದೇಶದಲ್ಲಿ ಸ್ವಾತಂತ್ರ್ಯ ಬಂದ ಮೇಲೆ ಹಲವಾರು ದೇಶಭಾಷೆಗಳು ಬೆಳೆದವು ; ನಮ್ಮ ಕಣ್ಣೆದುರಿನಲ್ಲಿಯೇ ಹೈದರಾಬಾದಿನಲ್ಲಿ ನೈಜಾಂ ಸರ್ಕಾರದ ಆಶ್ರಯದಲ್ಲಿ ಉರ್ದುಭಾಷೆಗೆ ಪ್ರಬಲವಾದ ಉತ್ತೇಜನ ದೊರೆತಿದೆ; ಭಾಷಾಂತರಕ್ಕಾಗಿಯೇ ೨೫ ಲಕ್ಷ ರೂ. ಗಳನ್ನು ವಿನಿಯೋಗಿಸಿದ್ದಾರೆ! ಎಂಬುದಾಗಿ ಹೇಳಿ ಇದೇ ರೀತಿಯಾಗಿ ಮೈಸೂರು ಸರ್ಕಾರದ ಪೋಷಣೆಯಲ್ಲಿ ಕರ್ಣಾಟಕದ ದೇಶಭಾಷೆಯಾದ ಕನ್ನಡದ ಮುನ್ನಡೆ ಸಾಗಬೇಕೆಂದು ಸೂಚಿಸಿರುತ್ತಾರೆ.

"ಮೈಸೂರು ಸಂಸ್ಥಾನ ಕರ್ನಾಟಕದ ಹೃದಯ. ಅಲ್ಲಿ ನಡೆದ ಕಾರ್ಯಗಳು ಇಡಿಯ ಕರ್ನಾಟಕವನ್ನೇ ಆಕರ್ಷಿಸುತ್ತವೆ. ಮೈಸೂರು ಸರ್ಕಾರದ ಭಾಷೆ ಕನ್ನಡವಾಗಬೇಕು, ಮೈಸೂರು ವಿಶ್ವವಿದ್ಯಾನಿಲಯ ಕನ್ನಡಮಯವಾಗಬೇಕು, ನಮ್ಮ (ಕನ್ನಡಿಗರ) ಅರಮನೆ ಭಾಷೆ ಕನ್ನಡವಿರುವುದರಿಂದ ಸರ್ಕಾರದ ಭಾಷೆ ಕನ್ನಡವಾಗಲೆ ಬೇಕು."

". . . . ಹೈದರಾಬಾದಿನವರಂತೆ ಕನ್ನಡ 'ಭಾಷಾಂತರ ಸಂಘ'ವನ್ನು ಸ್ಥಾಪಿಸಿ ಪ್ರತಿವರುಷ ಆ ಸಂಘಕ್ಕೆ ಸರ್ಕಾರದವರು ಸಹಾಯಮಾಡಿದರೆ ಬೇಕಾದ ಗ್ರಂಥಗಳನ್ನು ಸಿದ್ಧಪಡಿಸಬಹುದು. ಕನ್ನಡದಲ್ಲಿ ಅಂತಹ ವಿದ್ವಾಂಸರು ಬೇಕಾದಷ್ಟು ಜನರಿರುತ್ತಾರೆ."

ಈ ಅಭಿಪ್ರಾಯಕ್ಕೆ ಎಲ್ಲರ ಸಮ್ಮತಿಯೂ ಉಂಟು. ಈಗಾಗಲೇ ಆಗಿರುವ ಕಾರ್ಯ ಇನ್ನೂ ಸಾಲದೆಂಬ ಶ್ರೀಯುತರ ಅಭಿಪ್ರಾಯವು ಕನ್ನಡದ ಅಭಿಮಾನಿಗಳೆಲ್ಲರ ಮನಸ್ಸಿನ ಪ್ರತಿಧ್ವನಿಯೇ ಆಗಿದೆ.

ಜಿ. ವ. ರಾ.

೪-೧೦-೧೯೪೨ ರಲ್ಲಿ ಮೈಸೂರು ನಗರದಲ್ಲಿ ಮಹಾರಾಜರವರ ಹೈಸ್ಕೂಲಿನಲ್ಲಿ ನೂತನ ವಿದ್ಯಾಸಮಿತಿಯ (New Educational Fellowship) ವಾರ್ಷಿಕ ಸಭೆ ನಡೆಯಿತು. ಅಂದಿನ ಕಾರ್ಯಕಲಾಪಗಳಲ್ಲಿ ಮುಖ್ಯವಾದುದು ಹೈಸ್ಕೂಲುಗಳಲ್ಲಿ ಈಗ ಜಾರಿಯಲ್ಲಿರುವ ಕನ್ನಡ ಮಾಧ್ಯಮ ಎಷ್ಟರಮಟ್ಟಿಗೆ ಯಶಸ್ವಿಯಾಗಿದೆ ಎಂಬುದು. ಇದರ ಪರಿಶೀಲನೆಗಾಗಿ ಒಂದು ಉಪಸಮಿತಿ ಏರ್ಪಟ್ಟಿತು. ಇದನ್ನು ಕುರಿತು "ಕನ್ನಡ ನುಡಿ" (೯-೧೦-೪೨)ಯ ಸಂಪಾದಕರು ಬರೆದಿರುವ ಅಗ್ರಲೇಖನದಲ್ಲಿ ಹಲವು ಮಾತುಗಳನ್ನು ಎತ್ತಿ ಹೇಳಲು ಆಶಿಸುತ್ತೇವೆ.

ಕನ್ನಡ ಮಾಧ್ಯಮ ಸಮಸ್ಯೆ

"ಹಲವು ವರ್ಷಗಳ ಕಾಲ ಚರ್ಚೆ, ಪರಿಶೀಲನೆ ಆಗಿ ಹೈಸ್ಕೂಲುಗಳಲ್ಲಿ ಭಾಷೇತರ ವಿಷಯಗಳನ್ನು ಕನ್ನಡದಲ್ಲಿ ಕಲಿಸುವ ಪ್ರಯೋಗ ಮಾಡಬಹುದೆಂದು ಆಜ್ಞೆ ಹೊರಟಿತು. ಕೆಲವು ವರ್ಷಗಳಿಂದ ಸಂಸ್ಥಾನದ ಹಲವು ಶಾಲೆಗಳಲ್ಲಿ—ಕೆಲವು ಶಾಲೆಗಳಲ್ಲಿ ಒಂದೆರಡು ತರಗತಿಗಳಲ್ಲಿ, ಮತ್ತೆ ಕೆಲವು ಶಾಲೆಗಳಲ್ಲಿ ಎಲ್ಲಾ ತರಗತಿಗಳಲ್ಲಿ—ಪ್ರಯೋಗ ನಡೆಯುತ್ತಿದೆ. ಈ ಪ್ರಯೋಗ ಫಲಕಾರಿಯಾಗುತ್ತಿದೆ ಎಂದು ಹಲವರು ಅಭಿಪ್ರಾಯಪಡುತ್ತಿದ್ದಾರೆ, ಮತ್ತು ಪರಿಷತ್ತು ಹೊರಡಿಸಿದ "ಪ್ರಶ್ನಾವಳಿ"ಗೆ ಬಂದಿರುವ ಬಹು ಸಂಖ್ಯೆಯ ಉತ್ತರಗಳು ಈ ಅಭಿಪ್ರಾಯಗಳನ್ನು ಸಮರ್ಥಿಸಿ, ಹೈಸ್ಕೂಲುಗಳಲ್ಲಿ ಕನ್ನಡಕ್ಕೆ ಸ್ಥಿರವಾದ ಮುಖ್ಯಸ್ಥಾನವನ್ನು ಕೊಡಬೇಕೆಂದು ಬಯಸಿವೆ."

"ವಿಶ್ವವಿದ್ಯಾನಿಲಯದಲ್ಲಿಯೂ ಕನ್ನಡದ ಸ್ಥಾನ ಉತ್ತಮವಾಗಬೇಕೆಂದು ಹಲವು ಶಿಕ್ಷಣ ಶಾಸ್ತ್ರಜ್ಞರ ಅಭಿಮತವಾಗಿದೆ. ಇದಕ್ಕೆ ಹಾಸನದಲ್ಲಿ ನಡೆದ ಶಿಕ್ಷಣ ಸಮ್ಮೇಳನದ, ಮತ್ತು ಹೋದಸಲದ ಪ್ರಜಾಪ್ರತಿನಿಧಿ ಸಭೆಯ ನಿರ್ಣಯಗಳೇ ನಿದರ್ಶನ. ವಿಶ್ವವಿದ್ಯಾನಿಲಯವೆಲ್ಲ ಕನ್ನಡವಾಗುವ ಮುನ್ನ ಮೊದಲ ಮೆಟ್ಟಲಾಗಿ ಹೈಸ್ಕೂಲಿನಿಂದ ಇಂಟರ್‌ಮೀಡಿಯೆಟ್ ಮಟ್ಟದ ಪೂರ್ತ ಕನ್ನಡವೇ ಮುಖ್ಯ ಭಾಷೆಯಾಗಿ ಎಲ್ಲಾ ಜ್ಞಾನವಿಷಯಗಳನ್ನೂ ಕನ್ನಡದಲ್ಲೇ ಬೋಧಿಸುವಂತಾಗುವುದು ಸಾಧ್ಯವಾದರೆಯೆ ಕನ್ನಡದ ಸಾರಸತ್ವಗಳು ತುಂಬಿಕೊಂಡು, ಆ ಫಲವಾಗಿ ಜನರ ಜ್ಞಾನಾನುಭವಗಳೂ ಹೆಚ್ಚಲು ಸಾಧ್ಯವಾಗುವುದು."

ಈ ಅಭಿಪ್ರಾಯವನ್ನು ಯಾರೂ ವಿರೋಧಿಸಲಾರರು. ಇದೇ ಸಂದರ್ಭದಲ್ಲಿ, "ಸಂಭಾವನೆ" ಎಂಬ ಗ್ರಂಥದಲ್ಲಿ ಶ್ರೀಮಾನ್ ಕೋಲಾರ ಸಂಪದ್ಗಿರಿರಾಯರು "ಕನ್ನಡನಾಡಿನ ಪ್ರೌಢಶಿಕ್ಷಣ ಕನ್ನಡದಲ್ಲಿ" ಎಂಬ ಲೇಖನದಲ್ಲಿ ಬರೆದಿರುವ ಹಲವು ವಿಚಾರಗಳ ಕಡೆಗೆ ಗಮನಕೊಡುವುದು ಮೇಲು; ಹಾಗೂ ಅಗತ್ಯ.

"ಈ ಹೊಸ ಕ್ರಮವು (ಕನ್ನಡ ಮಾಧ್ಯಮ) ಆರಂಭವಾದಾಗ ತೋರಿದ್ದ ಅಧೈರ್ಯವೂ ಸಂಕೋಚವೂ ಈಗ ಬಹುಮಟ್ಟಿಗೆ ದೂರವಾಗಿದೆ. ಈ ಕ್ರಮವನ್ನು ಕೇವಲ ಪ್ರಯೋಗವೆಂದು ಭಾವಿಸುತ್ತಿದ್ದವರು ಕೆಲವರು. ಇದು ಆಚರಣೆಗೆ ಬರಬೇಕಾದ ಸುಧಾರಣೆಯೆಂದು ಬಯಸಿದವರು ಕೆಲವರು. ಇದು ಒಂದು ಪ್ರಯೋಗ ಮಾತ್ರವಾದ್ದು, ಇದು ನಿಷ್ಫಲವಾಯಿತೆಂದು ನಿರ್ಧರವಾದರೆ ಇದನ್ನು ರದ್ದುಮಾಡ ಬೇಕು ಎಂಬ ಕುತೂಹಲವಾಗಲೀ, ಹವಣಿಕೆಯಾಗಲೀ, ಈಗ ಯಾರಲ್ಲಿಯೂ ಇರಲಾರದು. ಈ ಸುಧಾರಣೆಯು ಸಾಧುವೆಂದೂ ಅನುಸರಣೀಯವೆಂದೂ ಬಹು ಜನರ ಮತ . . . . ಈ ಸುಧಾರಣೆಯು ಇನ್ನೂ ಹೆಚ್ಚಿಗೆ ವ್ಯಾಪಿಸುವುದಕ್ಕೆ ಬೇರೆ ಯಾವ ಆತಂಕವೂ ಇರುವುದಿಲ್ಲ. ಪಠ್ಯಪುಸ್ತಕಗಳು ಸಿದ್ಧವಾಗಿವೆ. ವರ್ಷೇ ವರ್ಷೇ ನೂರಾರು ವಿದ್ಯಾರ್ಥಿಗಳು ಕನ್ನಡದಲ್ಲಿಯೇ ಪಾಠಗಳನ್ನು ಕಲಿತು ಕಾಲೇಜುಗಳಿಗೆ ಸೇರುತ್ತಿರುವರು. ಅಲ್ಲಿ ಇಂಗ್ಲೀಷು ಮೂಲಕ ವ್ಯಾಸಂಗಗಳನ್ನೂ ಮಾಡಿ ಪರೀಕ್ಷೆ ಗಳಲ್ಲಿ ಉತ್ತೀರ್ಣರಾಗುತ್ತಿರುವರು."

ಈ ಮಾತುಗಳು ಹೈಸ್ಕೂಲಿನ ಕನ್ನಡ ಮಾಧ್ಯಮಕ್ಕೆ ಸಂಬಂಧಪಟ್ಟವು. ಶ್ರೀಯುತರು ಇನ್ನೂ ದೀರ್ಘವಾಗಿ ಪ್ರಸ್ತಾಪಿಸುತ್ತಾ, ಕನ್ನಡ ಮಾಧ್ಯಮ ವಾಗುವುದರಿಂದ ಕನ್ನಡನಾಡಿನ ಒಗ್ಗಟ್ಟು, ಸಂಸ್ಕೃತಿ, ತಾಯಿನುಡಿಯ ಪುರೋಭಿ ವೃದ್ಧಿ ಎಲ್ಲವೂ ಏಕಕಾಲದಲ್ಲಿ ಮುಂದುವರಿಯಲು ನೆರವಾಗುತ್ತದೆಂದು ಹೇಳಿದ್ದಾರೆ. ಆದ್ದರಿಂದ ದೇಶಭಾಷೆಯ ಪ್ರಾಧಾನ್ಯ ಕೇವಲ ವಿದ್ಯಾಭ್ಯಾಸಕ್ಕೆ ಮಾತ್ರ ಸೇರಿದು ದಲ್ಲ; ಅದರ ಅಭಿವೃದ್ಧಿ ಇಡೀ ನಾಡಿನ ಬಾಳಿಗೇ ಸೇರಿದ್ದು.

"ದೇಶಭಾಷೆಯನ್ನು ಬೆಳಸಬೇಕಾದರೆ ಅದನ್ನು ಬದುಕಿನ ಎಲ್ಲ ವ್ಯಾಪಾರದ ಸಾಧನವಾಗಿ ಮಾಡಿಕೊಳ್ಳದೆ ವಿಧಿಯಿಲ್ಲ. ಹಾಗೆ ಭಾಷೆಯನ್ನು ಬೆಳಸಿ ಬಳಸುವ ವರೆಗೆ ಜನದ ಬೆಳವಣಿಗೆ ಕುಂಟುತ್ತಿರಬೇಕಾಗುವುದು. ಈ ಸತ್ಯವನ್ನು ಎಷ್ಟುಬೇಗ ಕನ್ನಡಿಗರು ಅರಿತು ಆಚರಣೆಗೆ ತಂದರೆ ಅಷ್ಟುಬೇಗ ದೇಶಕ್ಕೆ ಅಭ್ಯುದಯ."

ಆದ್ದರಿಂದ ನೂತನ ವಿದ್ಯಾಸಮಿತಿಯವರು ಕೈಗೊಂಡಿರುವ ಅಂಕಿ ಅಂಶಗಳ ಪರಿಶೀಲನೆಯೊಂದಿಗೆ ಕರ್ಣಾಟಕದ ಉದ್ಧಾರಕ್ಕೆ ಸಂಬಂಧಿಸಿರುವ ನುಡಿಯ ಏಳಿಗೆ ಯನ್ನೂ ಗಮನದಲ್ಲಿಟ್ಟುಕೊಳ್ಳಬೇಕೆಂದು ನಮ್ಮ ಪ್ರಾರ್ಥನೆ. ಇಂದಿನ ಪ್ರಯೋಗವೇ ಮುಂದೆ ನಮಗಾಗಿ ಕಾದಿರುವ ಸುಯೋಗದ ಬೀಜ.

ಜಿ. ವ. ರಾ.

೧೯೪೨ನೆಯ ಸಾಲಿನ ಪದವೀಧರರ ಪೈಕಿ ಪದಕಗಳು ಮತ್ತು ಬಹುಮಾನ ಗಳನ್ನು ಪಡೆಯಲು ಅರ್ಹರಾದವರ ಹೆಸರುಗಳು.

೧. ಪದಕಗಳು

ಎಂ.ಎ.

ಪದಕಗಳ ಹೆಸರುಗಳು :	ಪಡೆದವರ ಹೆಸರುಗಳು :
	ಶ್ರೀಗಳಾದ
೧. ಸರ್ ಹ್ಯೂ ಡೇಲಿ ಮೆಮೋರಿಯಲ್ ಪದಕ	ಎ. ಎನ್. ಸುಬ್ರಹ್ಮಣ್ಯಂ.
೨. ಪಂಡಿತ ನವೀನಂ ರಾಮಾನುಜಾಚಾರ್ಯರ ಪದಕ	.... ಕೆ. ಸುಬ್ರಹ್ಮಣ್ಯಂ.

ಬಿ.ಎ. (ಆನರ್ಸ್)

೩. ಕೇಣಿ ಸಿದ್ದಪ್ಪನವರ ಪದಕ	.... ಜಿ. ವರದರಾಜರಾವ್.
೪. ಪಂಡಿತ ನವೀನಂ ರಾಮಾನುಜಾಚಾರ್ಯರ ಪದಕ	.... ಕೆ. ಕೃಷ್ಣಮೂರ್ತಿ.
೫. ಮೊದಲನೆಯ ವೈಸ್-ಛಾನ್ಸಲರ್ ಎಚ್. ವಿ. ಸಂಜುಂಡಯ್ಯನವರ ಪದಕ	.... ಎಸ್. ಎಂ. ಕೃಷ್ಣಮಾಚಾರ್.
೬. ಭಾಭಾ ಮೆಮೋರಿಯಲ್ ಪದಕ	.... ಎಸ್. ನಾಗಪ್ಪ.
೭. ಪೂರ್ಣ ಕೃಷ್ಣರಾಯರ ಪದಕ (ಇಂಗ್ಲಿಷ್)	ಸಿ. ಡಿ. ನರಸಿಂಹಯ್ಯ.
೮. ಪೂರ್ಣ ಕೃಷ್ಣರಾಯರ ಪದಕ (ಸಂಸ್ಕೃತ)	ಕೆ. ಕೃಷ್ಣಮೂರ್ತಿ.
೯. ಕ್ಯಾಂಡಿ ಪದಕ	.... ವಿ. ರಾಮಾಚಾರ್.
೧೦. ಪ್ರಧಾನಶಿರೋಮಣಿ ಆನಂದರಾವ್, ಸಿ.ಐ.ಇ. ಅವರ ಪದಕ	.... ವಿ. ರಾಮಾಚಾರ್.
೧೧. ಸರ್ ಎಂ. ಕಾಂತರಾಜಾ ಅರಸರವರ ಪದಕ	.... ಬಷೀರ್ ಅಹಮದ್ ಷರೀಫ್.
೧೨. ಎಂ. ಹಿರಿಯಣ್ಣನವರ ಪದಕ	.... ಪಿ. ಪರಶುರಾಂ.
೧೩. ಶ್ರೀ ಬಾಲಾಮಣಿಯವರ ಪದಕ	.... ಬಷೀರ್ ಅಹಮದ್ ಷರೀಫ್.
೧೪. ಶ್ರೀಮದ್ಯುವರಾಜರವರ ಪದಕ	.... ಅಬ್ದುಲ್ ಖಾದರ್.

ಬಿ.ಎ.

೧೫. ಸರ್ ಪಿ. ಎನ್. ಕೃಷ್ಣಮೂರ್ತಿಯವರ ಪದಕ	.... ಎನ್. ಸುಬ್ರಹ್ಮಣ್ಯ.

೧೬. ಅಲಮೇಲಮ್ಮಾಳ್ ಎಚ್. ರಾಮಾನುಜ
ಯ್ಯಂಗಾರ್ ಅವರ ಪದಕ .... ಕೆ. ಎನ್. ಶ್ರೀನಿವಾಸಮೂರ್ತಿ.
೧೭. ವಿಯರ್ ಮೆಮೋರಿಯಲ್ ಪದಕ .... ಭಾಸ್ಕರ್ ಜೇಸುಪ್ರಿಯ.
೧೮. ಸಕಲೇಶಪುರದ ಷಾಪುಸಿದ್ದೇಗೌಡರ ಪದಕ ಕೆ. ಎನ್. ಶ್ರೀನಿವಾಸಮೂರ್ತಿ.
೧೯. ಶ್ರೀ ಲಕ್ಷ್ಮಮ್ಮನವರ ಪದಕ .... ಬಿ. ಎನ್. ಲಕ್ಷ್ಮಿ.

ಎಂ. ಎಸ್‌ಸಿ.

೨೦. ಪೂರ್ಣ ಕೃಷ್ಣರಾಯರ ಪದಕ .... (i) ಪಿ. ಜಗನ್ನಾಥ್.
(ii) ಎಂ. ಎ. ಶ್ರೀರಂಗರಾಜನ್.
೨೧. ಪೂರ್ಣ ಕೃಷ್ಣರಾಯರ ಪದಕ .... ಜಿ. ಎನ್. ಸುಬ್ಬರಾವ್.

ಬಿ. ಎಸ್‌ಸಿ. (ಆನರ್ಸ್)

೨೨. ಹನುಮಪ್ಪನವರ ಪದಕ .... ಎಸ್. ವಿ. ಪಾರ್ಥಸಾರಥಿ ಐಯಂಗಾರ್.
೨೩. ಧರ್ಮಪ್ರವರ್ತ ಅಂಬಿಲ್ ಎಸ್. ರಂಗ
ಸ್ವಾಮಿ ಅಯ್ಯಂಗಾರ್ ಪದಕ .... ಕೆ. ನಾಗರಾಜರಾವ್
೨೪. ಶ್ರೀ ಮುಮ್ಮಡಿ ಕೃಷ್ಣರಾಜ ಒಡೆಯರವರ
ಪದಕ .... ರಾಜೇಶ್ವರಿ.

ಬಿ. ಎಸ್‌ಸಿ.

೨೫. ಸರ್ ಶೇಷಾದ್ರಿಯವರ ಪದಕ .... ಎಂ. ರುದ್ರಪ್ಪ.
೨೬. ಎಚ್. ರಾಮಾನುಜಯ್ಯಂಗಾರ್ ಅವರ
ಪದಕ .... ಡಿ. ಎಲ್. ಸುಬ್ರಹ್ಮಣ್ಯಂ.
೨೭. ಶ್ರೀ ಲಕ್ಷ್ಮೀದೇವಮ್ಮನವರ ಪದಕ .... ಎನ್. ಎಸ್. ವೀರರಾಘವನ್.
೨೮. ಬಿ. ಕೆ. ಶ್ರೀನಿವಾಸಯ್ಯಂಗಾರ್ ಮೆಮೋ
ರಿಯಲ್ ಪದಕ .... ಡಿ. ಎಲ್. ಸುಬ್ರಹ್ಮಣ್ಯಂ.
೨೯. ಷಾ. ಚುರ್ಮನ್ಮಾಲ್ ದುಂಗಾಜಿ ಅವರ
ಪದಕ .... ಎಂ. ರುದ್ರಪ್ಪ.

ಬಿ. ಇ.

೩೦. ಬಿ. ವಿ. ಕೃಷ್ಣಯ್ಯಂಗಾರ್ಯರ ಪದಕ .... ಎಚ್. ಕೆ. ಪಂಡಿತಾರಾಧ್ಯ.
೩೧. ಬಿ. ಬಿ. ಗರುಡಾಚಾರ್ಯರ ಪದಕ .... ಎಚ್. ಕೆ. ಪಂಡಿತಾರಾಧ್ಯ.

ಎಂ. ಬಿ., ಬಿ. ಎಸ್.

೩೨. ಆರ್ಮುಗಂ ಪದಕ .... ಬಿ. ರಾಘವನ್.
೩೩. ಬೇಲಿ ವೆಂಕೋಬರಾವ್ ಪದಕ .... ಬಿ. ರಾಘವನ್.
೩೪. ಟಿ. ಆರ್. ಎ. ತಂಬೂಚೆಟ್ಟಿ ಪದಕ .... ಕೆ. ಕೃಷ್ಣಮೂರ್ತಿರಾವ್.
೩೫. ಎ. ಆರ್. ಸೀತಮ್ಮನವರ ಪದಕ .... ಬಿ. ಎಸ್. ವೆಂಕಟಶಾಮಣ್ಣ.

ಕನ್ನಡ ಕವಿತೆ

೩೬. ರಜತಮಹೋತ್ಸವದ ಕನ್ನಡ ಪದಕ .... ಜಿ. ವರದರಾಜರಾವ್.
೩೭. ರಜತಮಹೋತ್ಸವದ ಕನ್ನಡ ಪದಕ
(೧೯೪೧) ಎಂ. ಗೋಪಾಲಕೃಷ್ಣ ಅಡಿಗ.

೨. ಬಹುಮಾನಗಳು

ಎಂ. ಎಸ್ ಸಿ.

೧. ಎಂ. ಟಿ. ನಾರಣಯ್ಯಂಗಾರ್ಯರವರ
ಬಹುಮಾನ .... ಎಂ. ಎ. ಶ್ರೀರಂಗನಾರಾಯಣ.

ಬಿ. ಎ. (ಆನರ್ಸ್)

೨. ಎನ್. ಎಸ್. ಸುಬ್ಬರಾಯರ ಬಹುಮಾನ ಬಷೀರ್ ಅಹಮದ್ ಷರೀಫ್.

ಬಿ. ಎ.

೩. ಎಂ. ವೆಂಕಟಕೃಷ್ಣಯ್ಯನವರ ಬಹುಮಾನ ಕೆ. ಎನ್. ಶ್ರೀನಿವಾಸಮೂರ್ತಿ.
೪. ಅನ್ನಪೂರ್ಣಮ್ಮನವರ ಬಹುಮಾನ .... ಎಂ. ಅನುಸೂಯ.
೫. ಟಿ. ಆನಂದರಾವ್ ಸುಂದರಾಬಾಯಿ ಅವರ
ಬಹುಮಾನ .... ಕೆ. ವಿ. ವೈದೇಹಿ.
೬. ಪಾಲಮಂಡ ಅಕ್ಕಯ್ಯಮ್ಮನವರ ಬಹು
ಮಾನ .... ಎಂ. ಅನುಸೂಯ.
೭. ಭಾಸ್ಕರಮ್ಮಾಳ್ ಅವರ ಬಹುಮಾನ .... ಎನ್. ಎಸ್. ವಿಶ್ವೇಶ್ವರಯ್ಯ
೮. ರಂಗೇಗೌಡರ ಬಹುಮಾನ .... ಕಾಶಿ ಪುಟ್ಟಸೋಮಾರಾಧ್ಯ.

ಬಿ. ಎಸ್‌ಸಿ. (ಆನರ್ಸ್)

೯. ವಾಟರ್ಸ್ ಮೆಮೋರಿಯಲ್ ಬಹುಮಾನ ರಾಜೇಶ್ವರಿ.

೧೦. ಪ್ರೊಫೆಸರ್ ಎಂ. ಜಿ. ಶ್ರೀನಿವಾಸರಾಯರ ಆರ್ಗ್ಯಾನಿಕ್ ಕೆಮಿಸ್ಟ್ರಿ ಬಹುಮಾನ ಎಚ್. ಎಸ್. ವೆಂಕಟರಮಣ.

೧೧. ಮೈಸೂರು ಸರ್ಕಾರದ ಭೌತಶಾಸ್ತ್ರ ಬಹುಮಾನ .... ಸಿ. ಕೆ. ರಾಮನಾಥರಾವ್.

೧೨. ಮೈಸೂರು ಸರ್ಕಾರದ ರಸಾಯನಶಾಸ್ತ್ರದ ಬಹುಮಾನ .... ಎಚ್. ಎಸ್. ವೆಂಕಟರಮಣ.

ಬಿ. ಎಸ್‌ಸಿ.

೧೩. ಟೇಟ್ ಮೆಮೋರಿಯಲ್ ಫಂಡ್ ಬಹುಮಾನ .... ಎನ್. ನರಸಿಂಹರಾವ್.

೧೪. ಸೆಂಟ್ರಲ್ ಕಾಲೇಜಿನ ವಜ್ರಮಹೋತ್ಸವದ ಬಹುಮಾನ .... ಡಿ. ಎಲ್. ಸುಬ್ರಹ್ಮಣ್ಯಂ

ಬಿ. ಟಿ.

೧೫. ಭಾಭಾ ಮೆಮೋರಿಯಲ್ ಬಹುಮಾನ .... ಡಿ. ವಿಶ್ವೇಶ್ವರಯ್ಯ.

೧೬. ಭಾಭಾ ಮೆಮೋರಿಯಲ್ ಬಹುಮಾನ .... ಡಿ. ವಿಶ್ವೇಶ್ವರಯ್ಯ.

ಬಿ. ಇ.

೧೭. ವಿ. ರಂಗಸ್ವಾಮಿ ಅಯ್ಯಂಗಾರ್ಯರ ಬಹುಮಾನ .... (i) ಎಂ. ಕೇಶವಯ್ಯಂಗಾರ್. (ii) ಸಿ. ಕೆ. ಶ್ರೀಕಂಠರಾವ್.

ಎಂ. ಬಿ., ಬಿ. ಎಸ್.

೧೮. ಮೈಸೂರು ಫ್ರೀಮೇಸನ್ಸ್ ಲಾಡ್ಜ್ ಸುವರ್ಣಮಹೋತ್ಸವ ಬಹುಮಾನ .... (i) ಬಿ. ರಾಘವನ್. (ii) ಕೆ. ಕೃಷ್ಣಮೂರ್ತಿರಾವ್.

ಕನ್ನಡ ಪ್ರಬಂಧ

೧೯. ಹೊನ್ನಶೆಟ್ಟಿಯವರ ಬಹುಮಾನ .... ಜಿ. ವರದರಾಜರಾವ್.

ಈ ಪದಕ, ಬಹುಮಾನಗಳನ್ನು ಪಡೆದ ಮಿತ್ರರನ್ನು ನಾವು ಹೃತ್ಪೂರ್ವಕವಾಗಿ ಅಭಿನಂದಿಸುತ್ತೇವೆ,

ಮೈಸೂರು ವಿಶ್ವವಿದ್ಯಾನಿಲಯ ಕನ್ನಡ ಗ್ರಂಥಮಾಲೆ

ಬೆಲೆ: ಕ್ಯಾಲಿಕೊ ರೂ. ೧—೪—೦, ಸಾದಾ ೧೨ ಆಣೆ.

ಪ್ರಧಾನಸಂಪಾದಕರು : ಬಿ. ಎಂ. ಶ್ರೀಕಂಠಯ್ಯ, ಎಂ.ಎ., ಬಿ.ಎಲ್.

೧. **ಹರಿಶ್ಚಂದ್ರಕಾವ್ಯ ಸಂಗ್ರಹ** (ತೃತೀಯ ಮುದ್ರಣ)—ಸಂಪಾದಕರು : ಟಿ. ಎಸ್. ವೆಂಕಣ್ಣಯ್ಯ, ಎಂ.ಎ. ಮತ್ತು ಎ. ಆರ್. ಕೃಷ್ಣಶಾಸ್ತ್ರೀ, ಎಂ.ಎ.

೨. **ಕರ್ಣಾಟಕ ಕಾದಂಬರೀ ಸಂಗ್ರಹ**—ಸಂಪಾದಕರು : ಟಿ. ಎಸ್. ವೆಂಕಣ್ಣಯ್ಯ, ಎಂ.ಎ.

೩. **ಪ್ರಭುಲಿಂಗಲೀಲೆಯ ಸಂಗ್ರಹ** (ಸಚಿತ್ರ)—ಸಂಪಾದಕರು : ಎಂ. ಎಸ್. ಬಸವಲಿಂಗಯ್ಯ, ಎಂ.ಎ., ಬಿ.ಎಲ್. ಮತ್ತು ಎಂ. ಆರ್. ಶ್ರೀನಿವಾಸ ಮೂರ್ತಿ, ಬಿ.ಎ.

೪. **ಸಾಕ್ರೆಟೀಸನ ಕೊನೆಯ ದಿನಗಳು**(ಸಚಿತ್ರ)—ಅನುವಾದಕರು: ಎ. ಎನ್. ಮೂರ್ತಿರಾವ್, ಎಂ.ಎ.

೫. **ಶ್ರೀರಾಮಕೃಷ್ಣ ಪರಮಹಂಸ**—ಲೇಖಕರು : ಕೆ. ವಿ. ಪುಟ್ಟಪ್ಪ, ಎಂ.ಎ.

೬. **ರವೀಂದ್ರನಾಥ ಠಾಕೂರರು** (ಸಚಿತ್ರ)—ಲೇಖಕರು : ಮಾಸ್ತಿ ವೆಂಕಟೇಶ ಐಯಂಗಾರ್, ಎಂ.ಎ.

೭. **ಆರೋಗ್ಯ ಅದರ ಜ್ಞಾನ ಮತ್ತು ಸಾಧನ** (ಸಚಿತ್ರ)—ಲೇಖಕರು : ಜೆ. ಎ. ಈಶ್ವರ ಮೂರ್ತಿ, ಬಿ.ಎ., ಎಲ್.ಎಂ.ಎಸ್., ಬಿ.ಎಸ್.ಎಸ್‌ಸಿ.

೮. **ಪಂಪರಾಮಾಯಣ ಸಂಗ್ರಹ**—ಸಂಪಾದಕರು : ಆಸ್ಥಾನ ಮಹಾ ವಿದ್ವಾನ್ ತಿರುವಳ್ಳೂರ್ ಶ್ರೀನಿವಾಸರಾಘವಾಚಾರ್ ಮತ್ತು ಡಿ. ಎಲ್. ನರಸಿಂಹಾಚಾರ್, ಎಂ.ಎ.

೯. **ಹಣ ಪ್ರಪಂಚ**—ಲೇಖಕರು : ವಿ. ಸೀತಾರಾಮಯ್ಯ, ಎಂ.ಎ.

೧೦. **ಸಂಸ್ಕೃತ ನಾಟಕ**—ಲೇಖಕರು : ಎ. ಆರ್. ಕೃಷ್ಣಶಾಸ್ತ್ರೀ, ಎಂ.ಎ.

೧೧. **ಜೀವವಿಜ್ಞಾನ**—ಲೇಖಕರು : ಬಿ. ವೆಂಕಟನಾರಾಯಣಪ್ಪ, ಎಂ.ಎ.

೧೨. **ಹಿಂದೂದರ್ಶನಸಾರ**—ಲೇಖಕರು : ಪಂಡಿತರತ್ನಂ ಲಕ್ಷ್ಮೀಪುರಂ ಶ್ರೀನಿವಾಸಾಚಾರ್ಯರು.

೧೩. **ರಾಜನೀತಿ**—ಲೇಖಕರು : ಎಚ್. ಕೃಷ್ಣರಾವ್, ಎಂ.ಎ.

೧೪. **ಹದಿಬದೆಯ ಧರ್ಮ**—ಸಂಪಾದಕಿಯರು: ಡಿ. ಚಂಪಾಬಾಯಿ, ಎಂ.ಎ

೧೫. **ಪುರಾಣನಾಮ ಚೂಡಾಮಣಿ**—ಲೇಖಕರು : ಬೆನಗಲ್ ರಾಮರಾವ್, ಎಂ.ಎ., ಎಲ್ ಎಲ್.ಬಿ., ಮತ್ತು ಪಾರ್‍ನ್ಯಂ ಸುಂದರಶಾಸ್ತ್ರಿ, ಬೆಲೆ, ರೂ.೩-೪-೦

೧೬. **ಯಶೋಧರ ಚರಿತ್ರೆಯ ಸಂಗ್ರಹ**—ಸಂಪಾದಕರು : ಕೆ. ವಿ. ರಾಘವಾಚಾರ್, ಎಂ.ಎ., ಬಿ.ಟಿ.

೧೭. **ಗ್ರೀಕರ ತತ್ವಶಾಸ್ತ್ರಸಾರ ಸಂಗ್ರಹ**—ಲೇಖಕರು : ಕೆ. ಆರ್. ಶ್ರೀನಿವಾಸ ಅಯ್ಯಂಗಾರ್, ಎಂ.ಎ. ; ಬೆಲೆ, ಸಾದಾ ರೂ. ೧—೦—೦.

೧೮. **ಹಿಂದೂ ದೇಶದ ಭೂಚರಿತ್ರೆ**—ಲೇಖಕರು : ಟಿ. ನಾಗಪ್ಪ, ಎಂ.ಎಸ್ಸಿ.

೧೯. **ವಚನಧರ್ಮಸಾರ**—ಲೇಖಕರು: ಎಂ. ಆರ್. ಶ್ರೀನಿವಾಸಮೂರ್ತಿ, ಬಿ.ಎ.

ಕ್ಯೂರೇಟರ್,
ಓರಿಯೆಂಟಲ್ ಲೈಬ್ರೆರಿ, ಮೈಸೂರು.

ಮೈಸೂರು ವಿಶ್ವವಿದ್ಯಾನಿಲಯದ ಪ್ರಚಾರ ಪುಸ್ತಕಮಾಲೆ

೧. ಖಗೋಳಶಾಸ್ತ್ರಪ್ರವೇಶ—ಸಿ. ಎನ್. ಶ್ರೀನಿವಾಸ ಅಯ್ಯಂಗಾರ್, ಡಿ.ಎಸ್ಸಿ.
೨. ಸಮಾಜದ ರೋಗರುಜಿನಗಳು—ಜಿ. ಹನುಮಂತರಾವ್, ಎಂ.ಎ.
೩. ತೆರಿಗೆ—ಬಿ. ಆರ್. ಸುಬ್ಬರಾವ್, ಎಂ.ಎ.
೪. ನವರತ್ನಗಳು—ಎಚ್. ಸುಬ್ಬಾಜೋಯಿಸ್, ಎಂ.ಎಸ್ಸಿ.
೫. ನಮ್ಮ ಹಳ್ಳಿಗಳು—ಜಿ. ಎನ್. ಕೃಷ್ಣಮೂರ್ತಿ, ಎಂ.ಎ.
೬. ಕುಮಾರವ್ಯಾಸ—ಎಸ್. ವಿ. ರಂಗಣ್ಣ, ಎಂ.ಎ.
೭. ಹಂಪೆಯ ಹರಿಹರ—ಡಿ. ಎಲ್. ನರಸಿಂಹಾಚಾರ್, ಎಂ.ಎ.
೮. ಕನ್ನಡ ಸಾಹಿತ್ಯ—ಕೆ. ವೆಂಕಟರಾಮಪ್ಪ, ಎಂ.ಎ.
೯. ವಿದ್ಯುಚ್ಛಕ್ತಿಯ ವೈಭವ—ಬಿ. ಎ. ಕೃಷ್ಣಸ್ವಾಮಿರಾವ್, ಎಂ.ಎಸ್ಸಿ.
೧೦. ಪಂಪ—ಟಿ. ಎನ್. ಶ್ರೀಕಂಠಯ್ಯ, ಎಂ.ಎ.
೧೧. ಪ್ರಾಣಿಜೀವನ—ಎ. ನಾರಾಯಣರಾವ್, ಎಂ.ಎಸ್ಸಿ.
೧೨. ಕನಸುಗಳು—ಎನ್. ಎಸ್. ನಾರಾಯಣಶಾಸ್ತ್ರಿ, ಎಂ.ಎ.
೧೩. ಮದುವೆಯ ಇತಿಹಾಸ—ಎನ್. ಕಸ್ತೂರಿ, ಎಂ.ಎ., ಬಿ.ಎಲ್.
೧೪. ನಮ್ಮ ಆರ್ಥಿಕ ದೃಷ್ಟಿ—ಎಸ್. ಗೋಪಾಲಸ್ವಾಮಿ, ಎಂ.ಎ.
೧೫. ವಾಯುಗುಣ—ಕೆ. ಶೇಷಾದ್ರಿ ಅಯ್ಯಂಗಾರ್, ಎಂ.ಎಸ್ಸಿ., ಎಲ್ಎಲ್.ಬಿ.
೧೬. ಬೆಳಕು—ಟಿ. ಎಸ್. ಸುಬ್ಬರಾಯ, ಎಂ.ಎಸ್ಸಿ.
೧೭. ಕನ್ನಡ ಕಾದಂಬರಿ—ವಿ. ಸೀತಾರಾಮಯ್ಯ, ಎಂ.ಎ.
೧೮. ಕಾಳಿದಾಸನ ಕಾವ್ಯಗಳು—ಎಸ್. ರಾಮಚಂದ್ರರಾವ್, ಎಂ.ಎ.
೧೯. ಇಂಗ್ಲೆಂಡಿನ ರಾಜಕೀಯ ಬೆಳವಣಿಗೆ—ಪಿ. ಜಿ. ಸತ್ಯಗಿರಿನಾಥನ್, ಎಂ.ಎ.

೨೦. ಕಣ್ಣು ಮತ್ತು ಅದರ ರಕ್ಷಣೆ*—ಡಿ. ಶಾಮಣ್ಣ, ಬಿ.ಎ., ಎಂ.ಬಿ., ಬಿ.ಎಸ್.
೨೧. ಸಾರ್ವಜನಿಕ ವೆಚ್ಚ*—ಎಂ. ಎಚ್. ಗೋಪಾಲ್, ಎಂ.ಎ., ಪಿಎಚ್.ಡಿ.
೨೨. ಶಿಶುವಿಹಾರಗಳು*—ಸಿ. ರಂಗಾಚಾರ್, ಬಿ.ಎಸ್‌ಸಿ., ಎಂ.ಎಡ್.
೨೩. ಸಸ್ಯೋದ್ಯಾನ—ಬಿ. ಸೀತಾರಾಮಶಾಸ್ತ್ರಿ, ಎಂ.ಎ.
೨೪. ವಿಡಂಬನ—ಎಸ್. ವಿ ರಂಗಣ್ಣ, ಎಂ.ಎ.
೨೫. ಎಲ್ಲೋರ ಮತ್ತು ಅಜಂತಾ—ಎಂ. ಎಚ್. ಕೃಷ್ಣ, ಎಂ.ಎ., ಡಿ.ಲಿಟ್.
೨೬. ಸಾರಜನಕದ ಮಹತ್ವ—ಎಚ್. ಸುಬ್ಬಾಜೋಯಿಸ್, ಎಂ.ಎಸ್‌ಸಿ.
೨೭. ಭಾಸ—ಎಚ್. ಎಲ್. ಹರಿಯಪ್ಪ, ಎಂ.ಎ.
೨೮. ಪಾಶ್ಚಾತ್ಯ ರಾಜಕೀಯ ತತ್ವಗಳು—ಎಂ. ಯಾಮುನಾಚಾರ್ಯ, ಎಂ.ಎ.
೨೯. ಸರ್ವಜ್ಞಕವಿ—ಎ. ಆರ್. ಕೃಷ್ಣಶಾಸ್ತ್ರೀ, ಎಂ.ಎ.
೩೦. ರಕ್ತ—ಡಿ. ಶಾಮಣ್ಣ, ಬಿ.ಎ., ಎಂ.ಬಿ., ಬಿ.ಎಸ್.
೩೧. ಇಂಗ್ಲಿಷ್ ಪ್ರಬಂಧಗಳು—ಎಸ್. ಮಂಜುನಾಥ್, ಎಂ.ಎ.
೩೨. ಅಕ್ಕಮಹಾದೇವಿ—ಎಸ್. ವಿ. ಪರಮೇಶ್ವರಭಟ್ಟ, ಎಂ.ಎ.
೩೩. ಗಣಿತಶಾಸ್ತ್ರದ ಸ್ವರೂಪ—ಸಿ. ಎನ್. ಶ್ರೀನಿವಾಸ ಅಯ್ಯಂಗಾರ್, ಡಿ.ಎಸ್‌ಸಿ.
೩೪. ಋಗ್ವೇದ—ಎಂ. ಎ. ಕೃಷ್ಣಸ್ವಾಮಿ, ಎಂ.ಎ.
೩೫. ಕುಮಾರವ್ಯಾಸ ವಾಣಿ—ಎಸ್. ವಿ. ರಂಗಣ್ಣ, ಎಂ.ಎ.
೩೬. ಆಳ್ವಾರುಗಳು—ಎಂ. ಯಾಮುನಾಚಾರ್ಯ, ಎಂ.ಎ.
೩೭. ಹಿಂದು ಮುಸ್ಲಿಂ ಮೈತ್ರಿಯನ್ನು ಬೆಳೆಸಿದ ರಾಜರು—
ವಿ. ರಾಘವೇಂದ್ರರಾವ್, ಎಂ.ಎ., ಬಿ.ಟಿ.
೩೮. ಸುಭಾಷಿತ ಸಂಗ್ರಹಗಳು—ಎಂ. ಪಿ. ಲಕ್ಷ್ಮೀನರಸಿಂಹಶಾಸ್ತ್ರೀ, ಎಂ.ಎ.
೩೯. ಮಕ್ಕಳ ಭಾವಜೀವನ—ಬಿ. ಕುಪ್ಪುಸ್ವಾಮಿ ನಾಯಿಡು, ಎಂ.ಎ.
೪೦. ಸಹಕಾರ—ಎಸ್. ಗೋಪಾಲಸ್ವಾಮಿ, ಎಂ.ಎ.
೪೧. ನಯಸೇನ—ಜಿ. ವೆಂಕಟಸುಬ್ಬಯ್ಯ, ಎಂ.ಎ., ಬಿ.ಟಿ.
೪೨. ಕೌಟಿಲ್ಯ—ಎಂ. ವಿ. ಕೃಷ್ಣರಾವ್, ಎಂ.ಎ., ಬಿ.ಟಿ.
೪೩. ಚಾಟುಪದ್ಯಗಳು—ಕೆ. ವೆಂಕಟರಾಮಪ್ಪ, ಎಂ.ಎ.
೪೪. ಮುನಿಸಿಪಾಲಿಟಿಗಳು—ಎಚ್. ಕೃಷ್ಣರಾವ್, ಎಂ.ಎ.

೧೯೪೨ನೆಯ ಜುಲೈನಿಂದ ಮುಂದಕ್ಕೆ ಅಚ್ಚಾಗುವ ಪುಸ್ತಕಗಳ ಸಾಧಾರಣ ಪ್ರತಿ ೩ ಆಣೆ, ವಾರ್ಷಿಕ ಚಂದಾ (೯ ಪುಸ್ತಕಗಳಿಗೆ) ರೂ. ೧—೪—೦; ಉತ್ತಮ ಪ್ರತಿ ೪ ಆಣೆ, ವಾರ್ಷಿಕ ಚಂದಾ (೯ ಪುಸ್ತಕಗಳಿಗೆ) ರೂ. ೨—೦—೦.

ಸಂಪಾದಕ,
ಪ್ರಚಾರಕ ಪುಸ್ತಕಮಾಲೆ,
ಯೂನಿವರ್ಸಿಟಿ ಆಫೀಸ್, ಮೈಸೂರು.

* ಈ ಪುಸ್ತಕಗಳು ಮುಗಿದುಹೋಗಿವೆ



ನಟರಾಜ

(ಡೈರೆಕ್ಟರ್ ಆಫ್ ಆರ್ಕಿಯಾಲಜಿ, ಮೈಸೂರು, ಅವರ ಕೃಪೆಯಿಂದ)

ಪುಟ ೪೧

ಪ್ರಬುದ್ಧ
ಕರ್ಣಾಟಕ

ಚಿತ್ರಭಾನು ಸಂವತ್ಸರ — ೯೩ — ಸಂಕ್ರಾಂತಿಯ ಸಂಚಿಕೆ

ರೋರಿಕ್ ಚಿತ್ರಶಾಲಾ ಸ್ಮೃತಿ*

ರೋರಿಕ್, ಓ ರೋರಿಕ್, ವರುಷವೊಂದರ ಹಿಂದೆ,
ಮೈಸೂರಿನಲಿ, ನಿನ್ನ ದಿವ್ಯಕಲೆಯನು ಕಂಡೆ:
ಕಂಡುದೆ ತಡಂ ಸ್ಫುರಿಸಿತೆನ್ನೆದೆಗೆ ದಿವ್ಯಾಗ್ನಿ,
ಪೂರ್ವಪರಿಚಿತ ಭವ್ಯಮಂ ತೆಕ್ಕನೆಯೆ ಮತ್ತೆ
ಸಂಧಿಸುತದರ ಗುರುತು ಹಿಡಿದಂತೆ! ನಿಚ್ಚಮುಂ
ಯಾತ್ರೆಗೈದೆನ್ ಚಿತ್ರಶಾಲಾ ಪ್ರದರ್ಶನಕೆ;

---

* [ಬೆಂಗಳೂರಿನಲ್ಲಿ ವಿಶ್ವೇಶ್ವರಪುರದಲ್ಲಿ ಮನೆಯ ತಾರಸಿಯ ಮೇಲೆ ಕುಳಿತು ಭಾದ್ರಪದ ಮಾಸದ ದಿಗಂತಾಕಾಶದಲ್ಲಿ ಸಂಧ್ಯಾಶಿಲ್ಪಿ ರಚಿಸುತ್ತಿದ್ದ ಮೇಘಕಾವ್ಯಗಳನ್ನು ಅವಲೋಕಿಸುತ್ತಾ ಒಂದು ವರುಷದ ಹಿಂದೆ ಮೈಸೂರಿನಲ್ಲಿ, ದಸರಾ ಪ್ರದರ್ಶನದಲ್ಲಿ, ಶ್ರೀಯುತ ಜೆ. ಎಚ್. ಕಸಿನ್ಸ್ ಅವರು ಅಣಿಗೈದಿದ್ದ ರೋರಿಕ್ ಚಿತ್ರಶಾಲೆಯಲ್ಲಿ ನೋಡಿ ಸವಿದಿದ್ದ ನಿಕೊಲಾಸ್ ರೋರಿಕ್ ಎಂಬ ಹಿಮಾಲಯವಾಸಿ ರಷ್ಯಾದೇಶದ ವರ್ಣಶಿಲ್ಪಿಯ ಮತ್ತು ಆತನ ಕುಮಾರನ ಭವ್ಯ ಚಿತ್ರಕಲಾಕೃತಿಗಳ ನೆನಪು ಮಲರ್ದು ರಚಿಸಿದುದು.]

ಸಮಹೃದಯಸೆಂ ನಿನ್ನ ಹೃದಯ ಸಂದರ್ಶನಕೆ;
ರಸಕಲಾ ಸಂಕೇತದಾ ದಿವ್ಯದರ್ಶನಕೆ.
ದಿನಗಳೈದಂ, ಬಿಡದೆ, ರವಿಯುದಯದಿಂ ತೊಟ್ಟು
ನಡುವಗಲೊಳವನು ಬಾನ್ನೆತ್ತಿಗೇರ್ವನ್ನೆಗಂ,
ಹೇ ವರ್ಣಶಿಲ್ಪಿ, ನಿನ್ನಗ್ನಿಕೃತಿಗಳ ಮಧ್ಯೆ
ನಿಲ್ಲುತೆ, ತಪಂ ಗೈದೆನೆನ್ನಾತ್ಮಮುಂ ನಿನ್ನ
ಸೋಂಪಿಯ ಪರಂಜ್ಯೋತಿಯಿಂ ಜ್ವಾಲೆಯಪ್ಪಂತೆ.
ಹೈಮಾಚಲೀಯಮಾ ನಿನ್ನ ಕಲೆ: ಮನ್ಮನಂ
ತಾನಾಯ್ತು ಹೈಮಾಚಲಸ್ಪರ್ಧಿ, ನಭಶ್ಚುಂಬಿ,
ರಸವಾರ್ಧಿಸಂಗಿ, ವಿಶ್ವವ್ಯಾಪಿ, ಬ್ರಹ್ಮಾಸ್ಮಿ!
ಆನಂದವೊಳ್ಕುತೆ, ಕೃತಜ್ಞತಾ ಭಾರದಿಂ
ಮತ್ತೊಮ್ಮೆ ಋಣಿಯಾದೆನೈರ್ಲೆಂಡಿನಾ ಕವಿಗೆ,
ವರ್ಣಶಿಲ್ಪದ ನಿನ್ನ ರಸಸೃಷ್ಟಿಗಳನಲ್ಲಿ
ತಂದು ಮಂದಿರಗೈದ ಪುಣ್ಯಾತ್ಮನಿಗೆ.

ಆಹ,

ಏನು ಕಲೆ ನಿನ್ನದಯ್: ವಿಶ್ವತಾ ಸಂಸ್ಪರ್ಶಿ,
ಮೇಣ್ ಬ್ರಹ್ಮದರ್ಶಿ! ಕಲ್ಪನೆ ಅಲ್ಪಮಾತ್ರದಿಂ
ಭೂಮಾನುಭೂತಿಯಂ ಮಂತ್ರಿಸಿ ಮಥಿಪುದಲ್ಲಿ:—
ಬೈಗುಗೆಂಪಿನ ಮಬ್ಬಿನಂಚುಕಟ್ಟಿದ ಬಂಡೆ
ತಾನಾಯಿತದೊ ಸಮಾಧಿಸ್ಥಯೋಗೀಶ್ವರಂ;—
ಉಷೆಯ ತಾವರೆವೆಳಗು ತುಟಿಸೋಂಕಿಸಿದ ತಳಿರ
ನೆತ್ತಿಯ ಮರಂ ಪ್ರಕೃತಿಯಾತ್ಮಕ್ಕೆ ತಾನಾಯ್ತು
ಸ್ವಾಪ್ನರೇಖಾ ಲಿಪಿಯ ಹಸ್ತಾಕ್ಷರಂ;—ಶಿಲಾ
ಚೇತನವೆ, ತನ್ನ ಚಿರಜಡನಿದ್ರೆಯಸ್ನುಳಿದು,
ಫೇನರೂಪಿಂ ಫಣೆಯನೆತ್ತಿ ಭೋರ್ಗರೆವಂತೆ
ಬಂದಪ್ಪಳಿಸಿತಿದೊ ಜಲೋಲ್ಲಾಸ ಕಲ್ಲೋಲ
ಮಾಲೆ;—ಲೀಲಾಯಾತ್ರಿ ಲೋಲ ಪುಣ್ಯಾನಿಲಂ,
ಕಾಣ್, ಆಲಿಸದೊ ಅಲ್ಲಿ, ಮುಗುಳನೆಳ್ಚರಿಸುತಿದೆ
ರಸದ ಗರ್ಭದ ಗುಹ್ಯಮಂತ್ರಮಂ ಕಿವಿದೆಸೆಗೆ

ಪರ್ಚಿ ಸುಯ್ವಂತೆ;—ಕಾಣದೊ ಅಲ್ಲಿ, ಕಾರ್ಗಾಳಿ
ಬಂಡೆಮಂಡೆಯ ಬೆಟ್ಟದೊಂದು ಚಂಡಿಕೆಯಂತೆ
ನಿಂದ ತಾಳೆಯ ಮರದ ಗರಿಗರಿ ತಲೆಯನೆಳೆದು
ಜಗ್ಗುರ್ಗತಿದೆ, ಸೃಷ್ಟಿಕಾಳಿಯ ಕೆದರ್ಮುಡಿವಿಡಿದ
ಮೋಕ್ಷತಾಂಡವ ಮುಷ್ಟಿಯೋಲ್ ;—ಮೇಘಪಂಕ್ತಿಯದೊ
ನಾವರಿಯದಸ್ತಿತ್ವದಾಶ್ಚರ್ಯಸಂಕುಲಕೆ
ಸಂಕೇತ ಲಿಪಿಯವೊಲ್ ಪ್ರತಿಮಿಸಿದೆ, ಬಹುರೂಪಿ,
ಬಹುವರ್ಣಿ, ಬಹುಳ ಭಾವಪ್ರಚೋದಿ, ಅನಂತ
ಸಂವೇದಿ! ಓ ಇಲ್ಲಿ, ವಿಸ್ತೃತ ಸರೋವರದ
ನಿಸ್ತರಂಗಿತ ಸುಪ್ತಿ. ನೋಡಲ್ಲಿ, ದಡದಲ್ಲಿ,
ಕಂಡರಿಸಿದೊಲ್ ಗುಂಡುಗುಂಡಾಗಿ ಸಾಲ್ಗೊಂಡ
ಬಂಡೆಯ ಸುಖದ ತೃಪ್ತಿ. ಇಲ್ಲಿ ರಾತ್ರಿಯ ನಿದ್ರೆ;
ಅಲ್ಲಿ ತಿಮಿರದ ಘನಿತ ಶಾಂತಿ. ಕಾಣೆಲ್ಲಿ ಅದೊ,
ಪಕ್ಷಿಯಿಂಚರ ಮಂಚದುಯ್ಯಾಲೆಯಂ ತೂಗಿ
ದುಮುಕುತಿದೆ ಬೆಳ್ಳಂಗೆಡೆಯುತರ್ಬಿ!
ಮೊದಲೆಲ್ಲಿ
ಕೊನೆಯಲ್ಲಿ ನಿನ್ನ ರಚನೆಯ ವಿಶ್ವವಿಸ್ತರಕೆ,
ರಸಋಷಿಯೆ, ಓ ವರ್ಣಶಿಲ್ಪಿ? ಬಣ್ಣಗಳಲ್ತು,
ನಿನ್ನ ಹೃದಯದ ರಕ್ತವರ್ಣಗಳೆ ಕುಂಚಿಕೆಗೆ
ತೀರ್ಥಮೈಸಲೆ ಬರೆವ ಸಾಧನೆಗೆ! ಚಿತ್ರಗಳೊ,
ಬರಿಯ ಬರೆಪಗಳಲ್ತು: ಕಾಲಮಂ ದೇಶಮಂ
ಮೇಣನಂತಾಕಾಶದಾಂತರ್ಯಮಂ ಕೊರೆದು,
ಅವ್ಯಕ್ತದಂಗಂಗಳಂ ಬಣ್ಣದಿ ಪೊರಳ್ಚಿ,
ಕಡೆದ ಕನಸುಗಳಲ್ತೆ? ಧ್ಯಾನದಶರೀರತೆಗೆ
ಸಾಕಾರತೆಯನಿತ್ತು, ಮೌನಮಾಕೃತಿವೆತ್ತು,
ಕಲೆಯ ಹೆಪ್ಪಿಗೆ ಕನಸುಗಳೆ ಹೆತ್ತು, ಕಣ್ಬಿಡೆದು,
ರಸವೆ ಸಾಕ್ಷಾತ್ಕಾರಗೊಂಡಿರ್ಪುದೈ ನಿನ್ನ
ಈ ಪವಾಡದ ಚಿತ್ರ ನಾಕ್ಷತ್ರ ಶಾಲೆಯಲಿ:
ಧ್ಯಾನದಾನಂದದಲಿ ಲೀನವೆನ್ನಾತ್ಮಮುಂ

ತಾನಿದೊ ಗಗನ ಚುಕ್ಕಿ !
ಓವ್ಹೊ, ಸ್ಮೃತಿ ಎಂಬುದೆಯೆ
ಅಂದಿನನುಭವದೊಂದು ನೆನಪನೀಂಟುವ ಬಗೆಗೆ
ಇಂದು ವಿಸ್ಮೃತಿಯಾಯ್ತೆ ! ಸಾಮಾನ್ಯದೀ ಮನೆಯ
ತಾರಸಿಯ ಮೇಲಿರ್ದು, ಭಾದ್ರಪದ ಮಾಸದೀ
ಸಂಧ್ಯಾದಿಗಂತದಾಕಾಶ ಶಿಲ್ಪಿಯ ಋಷಿಯ
ನೀಲ ಮನದಲಿ ಭವಿಸುತಿಹ ಮೇಘಕಲ್ಪನಾ
ಕ್ಷಣಿಕ ಗೋಪುರಗಳಂ, ನಂದನಾಪ್ಸರಿಯರಂ,
ಧೂಮ್ರಾದ್ರಿಯಂ, ಮುಗಿಲ ಕಣಿವೆಯ ಸರೋವರದ
ತಾಮ್ರಾರುಣ ಹರಿದ್ರ ಬಹುವರ್ಣ ರಮಣೀಯ
ಸಲಿಲಮಂ, ಮೋಡನಾಡಿನ ಕಾಡಿನೆತ್ತರದ
ಮರದ ಕೋಡಂ, ಹಿಂಗಾಲ್ಗಳೊಳ್ ನಿಮಿರ್ದೆದ್ದ
ಕಿರಣ ಧೂರ್ಜಟಿಕೇಸರಿಯ ಧೀರಭಂಗಿಯಂ,
ಮದ್ದಾನೆ ಸೊಂಡಿಲಂ, ಹೆಡೆಯ ಹಾವಂ, ಕಲಾಜಗದ
ಸಾಹಿತ್ಯ ಸಂಗೀತದಖಿಲ ವಿಭವಂಗಳಂ
ನೋಡುತಾತ್ಮೈಸುತಿರೆ, ಬಗೆಗೆ ಪೊತ್ತಿತೊ ನಿನ್ನ
ಅಂದಿನಾ ಚಿತ್ರಪ್ರದರ್ಶನದ ದರ್ಶನಂ,
ರೋರಿಕ್, ವಿದೇಶೀಯ ಹೇ ವರ್ಣಶಿಲ್ಪರ್ಷಿ !
ನಳನಿಲ್ಲಿ ತೊರೆದಗಲುತಿಹನು ದಮಯಂತಿಯಂ,
ನಿದ್ದೆಗೈದರ್ಧಾಂಗಿಯಂ. ಪ್ರಾಣಕಾಂತನಂ
ತನ್ನಂಕಪರ್ಯಂಕದೊಳಗಿಟ್ಟ ಸಾವಿತ್ರಿ
ನುಡಿಸುತಿಹಳಿದೊ ಮೃತ್ಯುರೂಪಮಂ. ಸೀತೆಯಂ
ಪೊತ್ತೋಡುತಿಹುದದೊ ದಶಗ್ರೀವ ಪುಷ್ಪಕಂ.
ಧ್ಯಾನಗೈದಿಹನದೋ ಬುದ್ಧದೇವಂ ; ನೋಡು,
ಕಾಣ್ಬುದಾ ಗುರುಮುದ್ರೆ. ಅದೊ ಅಲ್ಲಿ ; ಬೇಲೂರೊ ?
ಹಳೆಬೀಡೊ ? ಶ್ರವಣಬೆಳ್ಗೊಳ ಗೋಮಟೇಶ್ವರನೊ ?
ಕಣ್ಣು ಕಿವಿಯಾಗುವೊಡೆ, ಕಾಣ್ಬುದನೆ ಕೇಳುವೊಡೆ,
ಆಲಿಸದೊ : ಪೊಣ್ಮುತಿಹುದಲ್ಲಿ ವೀಣಾಕ್ವಣಂ
ತಾನತಾನದ ಮಹಾಗಾನಮಂ ! ನೋಡಲ್ಲಿ ;

ವಾಸುಕಿಯ ಮಿಣಿಮಾಡಿ, ಮಂದರವ ಮಥಿಮಾಡಿ,
ದೈತ್ಯದಾನವರದೊ ಕಲಂಕುವರ್ ಸಮುದ್ರಮಂ,
ಮಲೆಗೆ ಮಲೆವಂತೆ ತೆರೆಯುಬ್ಬಿ ಮೇಲ್ವಾಯ್ವವೋಲ್ !
    ಕವನಗಳ್, ಬಿಳಿಕಾಗದದ ಮೇಲೆ ಬರಿಮಸಿಯ
ಬೀಳಲ್ತೆ, ಓದರಿಯದಾತಂಗೆ ? ಅಂತೆ, ತ್ರಿಳಿ,
ಮುಗಿಲುಗಳ್ :—ಬರಿಯ ನೀರಾವಿಗಳ್ ಜಡಮತಿಯ
ವಿಜ್ಞಾನಿಯಜ್ಞತೆಗೆ ; ಗಗನ ಕವಿ ಕಲ್ಪನೆಯ
ಸಂಜೀವ ಭಾವಗಳ್ ಋಷಿಯ ರಸವಿಜ್ಞಾನ
ದರ್ಶನಕೆ : ಸಾಕ್ಷಿಗಳತೀತದಸ್ತಿತ್ವಕ್ಕೆ ;
ಅನ್ಯಲೋಕಗಳನ್ಯ ರೀತಿಗೆ ಗವಾಕ್ಷಗಳ್ ;
ಭೂನಿಸರ್ಗದ ಪ್ರಾಕ್ತನಾದ್ಭುತ ಪೆಡಂಭೂತ
ಸೃಷ್ಟಿಯ ಪುನಃಸ್ಮೃತಿಯ ಬಾನ್‌ಬಗೆಯ ವಿಕೃತಿಗಳ್ ;
ಅಧ್ಯಾತ್ಮದರ್ಥಪ್ರತೀಕಗಳ್ ; ಆವೇಶ
ಚಿಹ್ನೆಗಳ್ ; ತಿರೆಗೆ ಸಗ್ಗದ ಸೆರಗುಸನ್ನೆಗಳ್ ;
ಆಕಾಶಪುಸ್ತಕದ ಅತ್ಯನಿರ್ವಚನೀಯ
ದೇವಭಾಷಾ ದೃಶ್ಯಕಾವ್ಯಗಳ್ !
                                    ಈ ಊರೊ,
ಆ ಊರೊ, ಯಾವ ಊರಾದರೇನ್ ? ಗಿರಿಶಿರವೊ,
ಗೃಹಶಿರವೊ, ಅಲ್ಲಿಲ್ಲಿ ಎಂಬುದೇನ್ ? ಕಣ್ಮುಚ್ಚಿ
ಕಾಣೆ ಕಲಿಯಲ್, ಪರಬ್ರಹ್ಮದರ್ಶನವೀವ
ವೇದ ಮೇಣುಪನಿಷತ್ತುಕ್ಕುವಿಾ ಬಾನ್ಮುಗಿಲ್,
ಮೂಕ ಘೋಷಂಗೈವ ಮಂತ್ರಂಗಳಂತೆವೋಲ್,
ಸಿದ್ಧಗುರು ಮೌನದೋಲ್, ಶಬ್ದ ಪ್ರಮಾಣದೋಲ್ !

೧೩-೯-೧೯೪೦ ಕೆ. ವಿ. ಪುಟ್ಟಪ್ಪ.

ಯಮನಲ್ಲಿ ಭಿಕ್ಷೆ

ಈ ಕೊಂದ ಕಾಲವನು ಕೂಡಿ ಕೊಡುವೆಯ ಕೊನೆಗೆ
ನನ್ನಾಯುಮಾನಕ್ಕೆ, ಮೃತ್ಯುದೇವ?
ಏಕೆಂದರಿಷ್ಟು ದಿನವೂ ನಾನೆ ಸತ್ತಿದ್ದೆ!
(ನೀನೊಯ್ಯದಿದ್ದರೂ ನಾನಲ್ಲಿ ಬಂದಿದ್ದೆ!)
ನಲ್ಲಳನು ಕರೆದೊಯ್ಯೆ ಮನೆಗೆ ಮಾವ!

"ಕುವೆಂಪು"

ಆಶೆ ಸ್ವಪ್ನಚುಂಬಿ!

ಅಲ್ಲಿ ಅರಳಿದೆ ಹೂವು, ಮಕರಂದ ತುಂಬಿ;
ಇಲ್ಲಿ ಬಾಯಾರಿ ಹಾರಾಡುತಿದೆ ದುಂಬಿ.
ಅಂತರವೊ? ಇನ್ನೂರು ಮೈಲಿಗಳ ಕಂಬಿ,
ಅಲ್ಲಾಡದಿರುವ ಕಬ್ಬಿಣದ ಕಂಬಿ!
ದೇಶವನು ಕಾಲ ಗೆಲ್ಲುವುದೆಂದು ನಂಬಿ
ಆಶೆ ಕುಳಿತಿಹುದಿಲ್ಲಿ ಸ್ವಪ್ನಚುಂಬಿ!

"ಕುವೆಂಪು"

ಕೊಂತೆಮ್ಮನ ಪದಗಳು

೧೯೩೧ ನೆಯ ಇಸವಿಯಲ್ಲಿ ನಾವು ಅಗಸಗೇರಿಯ ಮುಂಭಾಗದ ರಸ್ತೆಯೊಂದರಲ್ಲಿ ವಾಸವಾಗಿದ್ದೆವು. ಆ ಮನೆಯ ಮಹಡಿಯ ಹಿಂಭಾಗದ ಕಿಟಿಕಿಯ ಹತ್ತಿರ ನಿಂತರೆ, ಅಗಸಗೇರಿಯ ಎಂಟು ಹತ್ತು ಮನೆಗಳು ಕಾಣಬರುತ್ತಿದ್ದುವು. ನಾವು ಅಲ್ಲಿ ನಿಂತು, ಬೀದಿಯ ಓಡಾಟ, ಬೀದಿಯ ನಲ್ಲಿಯ ಎದುರಿಗೆ ಸೇರಿದ ಹೆಂಗಸರಲ್ಲಿ ಆಗಾಗ್ಗೆ ನಡೆಯುತ್ತಿದ್ದ ಪುಟ್ಟ ದೊಡ್ಡ ಕದನಗಳು ಇವನ್ನೆಲ್ಲಾ ನೋಡಬಹುದಾಗಿತ್ತು. ಹೀಗಿರುವಲ್ಲಿ ಒಂದು ಕಾರ್ತಿಕಮಾಸದ ರಾತ್ರಿ—ಇದ್ದಕ್ಕಿದ್ದ ಹಾಗೆಯೇ ಏಳೆಂಟು ಹೆಂಗಸರು ಒಟ್ಟಿಗೆ ಹಾಡುತ್ತಿದ್ದುದು ಕೇಳಬಂದಿತು. ಮಹಡಿಯ ಮೇಲೆ ನುಗ್ಗಿ ನೋಡಿದೆವು. ಒಂದಾನೊಂದು ಮನೆಯ ಕಟ್ಟೆ. ಅದರ ಮೇಲೆಯೂ, ಅದರ ಸುತ್ತ ಮುತ್ತಲೂ ಹತ್ತು ಹನ್ನೆರಡು ಹೆಂಗಸರು ಚಿಳ್ಳೆಪಿಳ್ಳೆ ಸಹಿತ ಗುಂಪುಗೂಡಿದ್ದಾರೆ. ಮೂಲೆಯಲ್ಲಿ ಒಂದು ಅಷ್ಟೇನೂ ಎತ್ತರವಲ್ಲದ ಜಗಲಿಯ ಮೇಲೆ ದೀವಿಗೆಗಳು ಉರಿಯುತ್ತಿವೆ. ಬಿಡಿ ಹೂಗಳನ್ನು ತುಂಬಾ ಏರಿಸಿರುವಂತಿದೆ. ಹೆಂಗಸರಲ್ಲಿ ಕೆಲವರು ಹಾಡುತ್ತಿದ್ದರು. ಕೆಲವರು ಹಿಮ್ಮೇಳವಾಗಿದ್ದರು. ಒಟ್ಟಿನಲ್ಲಿ ಅವರು ಅಷ್ಟೊಂದು ನುಡಿಯನ್ನು ಉತ್ಸಾಹದಿಂದ, ಅಷ್ಟೊಂದು ಒಮ್ಮತದಿಂದ ಹಾಡುತ್ತಿದ್ದುದನ್ನು ನೋಡಿದರೆ, ಹಿಂದೆ ಇವರಲ್ಲಿ ನಡೆಯುತ್ತಿದ್ದ ಪುಟ್ಟದೊಡ್ಡ ಕದನಗಳು ಕೇವಲ ನಮ್ಮ ಭ್ರಮೆ ಎನ್ನುವಂತಿತ್ತು. ನಾವು ಸೋಜಿಗಪಟ್ಟು ನೋಡುತ್ತಿರುವ ಹಾಗೇ ಇನ್ನೊಂದು ಮನೆಯಿಂದಲೂ ಇದೇ ಸಂಭ್ರಮದ ನಾದವು ಹೊರಟಿತು. ಹತ್ತೆಂಟು ನಿಮಿಷಗಳಲ್ಲಿ ಅರ್ಧ ಫರ್ಲಾಂಗು ಉದ್ದವಿರಬಹುದಾದ ಆ ಬೀದಿಯಲ್ಲಿ ನಾಲ್ಕೈದು ಮನೆಗಳ ಮುಂದೆ ಮಹಿಳೆಯರು ಸೇರಿ ಹೀಗೆಯೇ ಪೂಜೆಮಾಡಿದರು. ಒಂದೇ ಕಾಲದಲ್ಲಿ ಆ ನಾಲ್ಕೈದು ತಂಡದವರೂ ಬೇರೆ ಬೇರೆ ಹಾಡನ್ನು ಬೇರೆ ಬೇರೆ ಶ್ರುತಿಯಲ್ಲಿ ಎಳೆದೆಳೆದು ಹೇಳುತ್ತ ಅದೊಂದು ವಿಚಿತ್ರ ಸಮ್ಮೇಳನವನ್ನೇ ಕೂಡಿಸಿಬಿಟ್ಟರು.

ಒಂದು ತಿಂಗಳ ಕಾಲ ದಿನದಿನವೂ ಈ ರೀತಿ ನಡೆಯಿತು. ಸರಿರಾತ್ರಿಯ ವರೆಗೆ ನಾವು ನಿದ್ರೆಮಾಡುವುದಿರಲಿ, ಭಯಂಕರ ಪತ್ತೇದಾರಿ ಕಾದಂಬರಿ ಓದಿದರೂ ಮನಸ್ಸಿಗೆ ಹತ್ತುವಂತಿರಲಿಲ್ಲ. ಕಂಬಳಿ ಮುಸುಕಿಟ್ಟರೂ ಇಲ್ಲ, ಕಿವಿಗೆ ಹತ್ತಿತುರುಕಿದರೂ ಇಲ್ಲ, ಕೊಂತಿಪದಗಳನ್ನು ಶ್ರೋತೃಗಳಾಗಿ ಲಾಲಿಸದೆ ಬೇರೆ ವಿಧಿಯೇ ಇರಲಿಲ್ಲ. ಕೊನೆಗೆ ಮನೆಯವರೆಲ್ಲಾ, ಈಗಿನ ಹುಡುಗರು ಸಿನೆಮಾ ಹಾಡಿನ ಒಂದೆರಡು ಸಾಲನ್ನು ಅನ್ನುವ ಹಾಗೆ, ಕೊಂತೆಮ್ಮನ ಪದಗಳನ್ನು ಗೊಣಗೊಣಿಸಲಾರಂಭಿಸಿದರು.

ಇದು ೧೯೩೧ ನೆಯ ಇಸವಿಯ ಮಾತು. ಈಚೆಗೆ ಮೊದಲಿನ ಉತ್ಸಾಹ, ಹುರುಪು ಇಲ್ಲವೇ ಇಲ್ಲ; ಬೀದಿಗೆಲ್ಲಾ ಒಂದು ಮನೆಯಲ್ಲಿ ಶಾಂಕ್ತವಾಗಿ ನಡೆದರೇ ಹೆಚ್ಚು ಎಂದು ಆ ಬೀದಿಯವರೊಬ್ಬಾಕೆ ತಿಳಿಸಿದರು. ಇದು ಉತ್ಪ್ರೇಕ್ಷೆಯೋ ಏನೋ ಗೊತ್ತಿಲ್ಲ. ಆದರೂ ಈಗಿನ ಸಿನೆಮಾ ಹಾಡುಗಳಿಗೆ ಮನಸೋತ ಹೆಂಗಸರಿಗೆ, ಅವರಿಗಿಂತ ಹೆಚ್ಚಾಗಿ ಅವರ ಮನೆಯ ಗಂಡಸರಿಗೆ, ಹಳೆಯ ಕಾಲದ ಈ ಪದಗಳು ರುಚಿಸದೆ ಇರುವುದರಲ್ಲಿ ಆಶ್ಚರ್ಯವೇನಿದೆ?

ಕೊಂತಿಯನ್ನು ಪೂಜಿಸುವ ವಿಧಾನ ಮತ್ತು ಉದ್ದೇಶವನ್ನು ಮೈಸೂರಿನಲ್ಲಿರುವ ನಮ್ಮ ಕವಾಡಿಗನ ಅಕ್ಕ ಹೀಗೆಂದು ತಿಳಿಸಿದಳು.—

"ದೀವಳಿಗೆ ಅಬ್ಬದಲ್ಲಿ ಕಡೇ ಸೋಮಾರ ಬರಾಕಿಲ್ವೇ ಆಗ ಪೂಜ್ತೀವಿ. ಪುರಸತ್ತಿರೋರು ಮೊದಲ್ನೇ ಸೋಮಾರಕ್ಕೆ ಮಡಗ್ತಾರೆ. ಮಣ್ಣಲ್ಲಿ ಜಗತಿ ಐದು ಅಂತ ಆಕೋದು. ಬಳಪದ ಕಲ್ಲಲ್ಲಿ ಇಲ್ದಿದ್ರೆ ತ್ಯಾಗದ ಮರದಲ್ಲಿ, ಇಲ್ದಿದ್ರೆ ಮಣ್ಣಲ್ಲಿ ಕೊಂತೆಮ್ಮನ ಮಾಡಿ ಕುಂಡ್ರಿಸ್ತೀವಿ. ಮೈತುಂಬ ಹೂ ಆಕೋದು. ಸಟಾಗು ಕುಂಕುಮ ಇಡೋದು. ಎಣ್ಣೆ ಅಚ್ಚೋದು ಮುಖಕ್ಕೆ. ದೀಪ ಇಡೋದು ಈಟು ತೋರ. ಮಂಗಳಾರತಿ ಮಾಡೋದು ಕುಂಡ್ರಿಸಿದಾಗ. ಏಳೋವಾಗ ತೆಂಗಿನಕಾಯಿ ಒಡೆದು ಚಚ್ಚಿ ಬಂದೋರಿಗೆಲ್ಲಾ ಕೊಡೋದು, ಮಕ್ಕಳಿಗೆ ಕಡಲೆಪುರಿ ಅಂಚೋದು.

"ಕಡೇ ಸೋಮಾರ ಉಪಾಸ ಮಾಡೋದು. ರಾತ್ರೆ ಎಡೆಮಾಡಿ ಅಮ್ಮನ ಮುಂದೆ ಮಡಗ್ತಾರೆ. ನೇಮದ ಕಡಲೆ ಇಟ್ಟು ಪಂಚಾಮ್ರಿತ ಇಡೋದು. ಅಮ್ಮನ್ನ ಆಮೇಕ್ಕೆ ಬೋಸಿ ಳಗೆ ಇಟ್ಟು ಗಂಡು ಐಕಳ ಕೈಲಿ ಕೆರೇ ಇಲ್ಲಾ ನಲ್ಲೀ ತಾವ ಓಗಿ ಕೊಂತೆಮ್ಮನ ತೊಳಕೊಂಡು, ದೇವರು ಕೊಟ್ಟಿದ್ದಂತೇ ತಿಂಡೀ ತಿಂದುಕೊಂಡು ಬರ್ತಾರೆ ಅಷ್ಟೆ.

"ಪೂಜ್ತಾ ಇದ್ರೆ ಗಲಾಟೆ, ಕಲಿ ಇರುತ್ತೆ. ಆತಾಯಿ ಕಷ್ಟಸುಖ ಏಳಿದ್ರೆ ಎಂಗಿರ್ತದೆ! ಮಾತಾಯಿ ಒಳ್ಳೇದು ಮಾಡ್ತಾಳೆ. ನಾನೇಳ್ತೀನಿ ನಮ್ಮ ಬೀದಿಯೋರಿಗೆ, 'ಬನ್ರೇ, ಪೂಜಿರೇ, ನಿಮಗೇನು ಕೇಡಾಯ್ತದೆ, ಮಾತಾಯಿ ಒಳ್ಳೇದು ಮಾಡ್ತಾಳೆ' ಅಂತ. ಈ ಕಾಲದವರು ಕೇಳಾಕಿಲ್ಲ ಕಣವ್ವ ಕಾಲ ಎಲ್ಲಾ ಕೆಟ್ಟೋಯ್ತು.

"ಹಿಂದೆ ಅವ್ವ, ನನ್ನ ಕಾಲ್ದಲ್ಲಿ ಎಂಗೆ ಪೂಜ್ತಿದ್ದೆ! ಕದಳಿ ಆಕಿಸ್ತಿದ್ದೆ. ಗರುಗಣ ಮದುವನದಿಂದ ತಂದು ಚಿತ್ರಾವ ಕೊರೇಸಿ ಮಂಟಪ ಕಟ್ಟಿಸಿ ಮಾವಿನಸೊಪ್ಪು ಕಟ್ಟಿಸಿ ಮ್ಯಾಳಮಾಡಿಸ್ತಿದ್ದೆ. ಕಾಲ ಎಲ್ಲಾ ಕೆಟ್ಟೋಯ್ತು ಕಣವ್ವ."

ಹಳ್ಳಿಯ ಕಡೆಗಳಲ್ಲಿ ಕುಂತೀಪೂಜೆಯನ್ನು ಹೆಚ್ಚಿನ ಹುರುಪಿನಿಂದ ಆಚರಿಸುತ್ತಾರೆ. ನಮ್ಮ ಮನೆ ಮೊಸರಿನವಳು ಹಳ್ಳಿಯ ಕಡೆಯವಳು. ಅವಳನ್ನು "ನೀನು ಕೊಂತೆಮ್ಮನ

ಪೂಜೆ ಮಾಡ್ತೀಯೇನೇ" ಅಂದಿದ್ದಕ್ಕೆ ಅವಳು, "ಮಾಡ್ದೇ ಏನವ್ವಾ! ಮಾಡಿದರೇ ದನಕರ ಅಟ್ಟಿಗೆ ಅಚ್ಚುಕಟ್ಟಾಯ್ತದೆ . . . . ದಿನಾ ಅವರಿಕೆಹೂ, ಅಣ್ಣೇಹೂ ಆ ಗುಂಡುಕಲ್ಲು ಅಲ್ಲ ಆ ಕೊಂತಿಕಲ್ಲು ತುಂಬ ಆಕ್ತೀವಿ . . . ಕಡೇದಿನ ಸಿಗೇಕಾಯಿ ಒಡಪು ಕಣ್ಣಂಗೆಮಾಡಿ ಸುತ್ತಾ ನಾಮ ಒಳಿದು ಕಣ್ಣು ಮಾಡ್ತೀವಿ. ಕಣ್ಣು ಮೂಗು ಬಾಯಿ ತಿದ್ದಿ, ಎಣ್ಣೆ ಅಚ್ಚಿ, ಮೂಗುಬಟ್ಟಿಕ್ಕಿ, ಕೆನ್ನೆಮೇಕ್ಕೆ ಚೇಪು ಅಚ್ಚಿ, ಸೀರೆ ಉಡೀಸಿ, ಗೆಜ್ಜೆಡಾಬಿಕ್ಕಿ ಮಾಡ್ತೀವವ್ವ. ಮನೆಗೊಂಬತ್ತು ತಟ್ಟೆ ತರ್ತೀವಿ. ಅರಿಸಿಣ ಕುಂಕುಮ ಎಲೆ ಅಡಕೆತಟ್ಟೆ, ಹೂತಟ್ಟೆ, ಕಡಲೆಇಟ್ಟು, ಚಿಗಳಿ, ತಂಬಿಟ್ಟು, ಪುರಿಉಂಡೆ, ಕಜ್ಜಾಯ, ಜಿಲೇಬಿ,—ಊಕಣವ್ವ ಜಿಲೇಬಿ! ಒಂಬತ್ತು ತಟ್ಟೇಲಿ ಮಡಗಿಕೊಂಡು, ತಮಟೆ ಮದ್ದಲೆ ಒಂದಿಗೆ ಹೊಲಕ್ಕೆ ಹೋಗಿ ಅಮ್ಮನ್ನ ಬಿಡ್ತೀವಿ ಕಣವ್ವ."

ವಿಚಾರಿಸಿದ್ದರಲ್ಲಿ ಈ ಪೂಜೆ ನಮ್ಮ ನಾಡಿನ ಎಲ್ಲ ಕಡೆಗಳಲ್ಲೂ ಆಚರಣೆಯಲ್ಲಿಲ್ಲ ವೆಂದು ತಿಳಿಯಿತು. ಸಾಮಾನ್ಯವಾಗಿ ಹಾಸನ ಡಿಸ್ಟ್ರಿಕ್ಟಿನಲ್ಲಿ ಈ ಪೂಜೆಯ ಹೆಸರೇ ಇಲ್ಲ. ಮೈಸೂರು ಮಂಡ್ಯ ಡಿಸ್ಟ್ರಿಕ್ಟುಗಳಲ್ಲಿ, ಅದರಲ್ಲೂ ಮುಖ್ಯವಾಗಿ ಮಳವಳ್ಳಿ ತಿರುಮಕೂಡಲುನರಸೀಪುರ ಬನ್ನೂರು ಈ ಕಡೆಗಳಲ್ಲಿ, ಪೂಜೆಯ ಪದ್ಧತಿ ವಿಶೇಷ ವಾಗಿ ಹಬ್ಬಿದೆ. ಆದಿಕರ್ಣಾಟಕರು, ಗಂಗಡಿಕಾರ ಒಕ್ಕಲಿಗರು, ಗೊಲ್ಲರು, ಕುಂಚಿಟಿ ಗರು, ಕೆಲವೆಡೆಗಳಲ್ಲಿ ಶಿವಭಕ್ತರು ಸಹ, ಕೊಂತೆಮ್ಮನನ್ನು ಪೂಜೆಮಾಡುತ್ತಾರೆ. ಶಿವಮೊಗ್ಗೆಯ ಹತ್ತಿರದ ನಂದಿಕೊಪ್ಪಲು, ಬೆಂಗಳೂರಿಗೆ ಸೇರಿದ ಕಾನಕಾನಹಳ್ಳಿ, ತುಮಕೂರಿನ ಶಿರಾ ಈ ಕಡೆಗಳಲ್ಲಿ ಕೊಂತಿಪೂಜೆ ಮಾಡುತ್ತಾರೆಂದು ತಿಳಿದುಬಂದಿದೆ. ಆದರೂ ಒಟ್ಟಿನಲ್ಲಿ ಆಕಡೆ ಹೆಚ್ಚು ಆಚರಣೆಯಲ್ಲಿಲ್ಲವೆಂದು ಹೇಳಬಹುದು.

ಕೊಂತಿಪೂಜೆ ಮತ್ತು ಪದಗಳು, ಗೌರಿಹಬ್ಬ ಮತ್ತು ಹಾಡುಗಳ ಹಾಗೆ ಕೇವಲ ಹೆಣ್ಣುಮಕ್ಕಳ ಪ್ರಪಂಚಕ್ಕೆ ಸೇರಿದವು. ಕೆಲವು ಕೂಲಿಯಾಳುಗಳನ್ನು ನಾನು ಕೊಂತಿಪದ ಹೇಳಿರೆಂದು ಕೇಳಲಾಗಿ "ಅದೆಲ್ಲಾ ಹೆಣ್ಣುಮಕ್ಕಳ ಪದ. ಅವರ ಕುಸಿ ಬಂದಂಗೆ 'ಕೊಂತಿ ಕೋಣೇಲಿ ಕುಂತವ್ಳೆ, ಕೊಂತಿ ನಡುಮನೇಲಿ ಕುಂತವ್ಳೆ' ಅಂತ ಹೇಳಿಕೊಳ್ತಾರೆ. ನಮಗೆಲ್ಲಾ ಅವು ಬರಾಕಿಲ್ಲ" ಎಂದು ನಗೆಯಾಡಿದರು.

ಇನ್ನು ಪದಗಳ ವಿಚಾರ. ಕೊಂತಿ ಅಥವಾ ಕುಂತೀದೇವಿ, ಪಾಂಡವರ ತಾಯಿ. ಯಾವ ಮಹಾತ್ಮಳ ಧೈರ್ಯಸ್ಥೈರ್ಯಗಳನ್ನು ಮಹಾಭಾರತದಲ್ಲಿ ಕೊಂಡಾಡಿದೆಯೋ ಆ ವೀರಮಾತೆಯ ಸುಖದುಃಖಗಳ ಸಂಗತಿಗಳನ್ನೇ ವಿಷಯವನ್ನಾಗಿ ಆಯ್ದುಕೊಂಡು ಇವರು ಹಾಡುವರು. ಆಕೆ ಸುಖದಲ್ಲಿದ್ದ ಸಮಯವನ್ನು ನೆನೆದಾಗ ಓರಗೆಯ ಗೆಳತಿಯರಂತೆ ವಿನೋದಮಾಡುವರು. ಆಕೆ ಕಷ್ಟಪಟ್ಟ ಸಂಗತಿಯನ್ನು ನೆನೆದು ಮರುಗುವರು. ಕೊನೆಗೆ ಅವಳು ದೇವಿಯೆಂದು ಬಗೆದು ಪೂಜಿಸುವರು. ಜನಪದ

ಸಾಹಿತ್ಯಕ್ಕೆ ಸಹಜವಾದ ಸರಳತೆ ಸೌಜನ್ಯ ಮತ್ತು ಮಧುರಭಾವನೆಗಳು ಇವುಗಳಲ್ಲೂ ತೋರಿಬರುತ್ತದೆ.

ಈ ಕೆಳಗೆ ಮುಖ್ಯವಾದ ಹಾಡುಗಳನ್ನು ಉದ್ಧರಿಸಿದ್ದೇನೆ:

ಕೊಂತೆಮ್ಮನನ್ನು ಪೂಜಿಸುವ ಮೊದಲು ದೀಪವನ್ನು ತಂದಾಗ ಈ ಹಾಡುಗಳನ್ನು ಹೇಳುತ್ತಾರೆ:

ಕೊಂತೆಮ್ಮ ನಿನ ಗುಡಿಗೇ
ಎಂತೇವ್ರು ಬರಬೇಕು
ಮುತ್ತೀನ ಬಲುತಾಲೇ[1] ಮುದುಕೀರು
ಮುತ್ತೀನ ಬಲುತಾಲೇ ಮುದುಕೀರು ಬಂದಾರೆ
ಕೊಂತೆಮನ ಗುಡಿಗೇ ಕಲಿ[2]ಯಾಯ್ತು.

ಒಂದು ದೀಪಕ್ಕೆ
ಒಂದೇ ಬತ್ತಿಯನ್ಹಾಕಿ
ಒಂದೂಮಾನೆಣ್ಣೇ ಅಳಾದ್ಹೂದು,

ಹಿಮ್ಮೇಳ—ಒಂದು ಬಗೆ

ತೂಗುದೀಪ ಉರಿದುವಮ್ಮ
ತಾಯಿ ಕೊಂತಿಗುಡಿಯಲ್ಲಿ
ಬಾಗುವಂತರಾಡುತಾರಮ್ಮ

ಹಿಮ್ಮೇಳ—ಇನ್ನೊಂದು ಬಗೆ

ಕತ್ತಲಲಿ ಕಾಳದೀವಿಗೆ
ಎಲೆ ಹುಂಜಾ ಹೊತ್ತಿನಲಿ ಎದ್ದುಕೂಗ್ಗೋ
ಬರುವದೂ ರಾಜಬೀದೀ
ತಿಂಗಳುಮಾಮಾ ಹೋಗೋದು ತೇರಬೀದಿ
ಒಣಗ್ಯಾಲೇಕಾಯಾಗೋ
ಜಸವಂಗಾ ಹೂವಾಗಿ ನೆಲಕೆ ಸುರಿದೋ

[ಹೀಗೆಯೇ ಎರಡು ದೀಪಕ್ಕೆ ಮೂರು ದೀಪಕ್ಕೆ ಎಂದು ಕ್ರಮವಾಗಿ ಐದು ನುಡಿ ಹಾಡಬೇಕು]

ಕುಂತಿ ಇನ್ನೂ ಕನ್ಯೆ ಆಗಿದ್ದಾಗಲೇ ಕರ್ಣನನ್ನು ಪಡೆದು ಆ ಮಗುವನ್ನು ತಾನು ಸಾಕುವ ಧೈರ್ಯವಿಲ್ಲದೆ ಗಂಗೆಯ ವಶಕ್ಕೆ ಕೊಡುವಳು.

*ಕತ್ತಲೆಮಲ್ಲಿ[3] ಹೆತ್ತಾಳೆ ಕೊಂತಮ್ಮ
ಒತ್ತುಗುಂಡಿಲ್ಲ[4] ಬೆಳಕಿಲ್ಲ

---

[1] ಬಲುತಲೆ = ಬೈತಲೆ. [2] ಕಲಿ = ಕಳೆ. * ಈ ಹಾಡು ಬಹಳ ಅಪರೂಪದ್ದು.

[3] ಮಲ್ಲಿ = ಮನೆಯಲ್ಲಿ. [4] ಒತ್ತುಗುಂಡು = ಬೇಗನೆ ಸುಖಪ್ರಸವವಾಗಲೆಂದು ಹೆರಿಗೆಯ ಮನೆಯಲ್ಲಿ ಒಂದು ಗುಂಡುಕಲ್ಲನ್ನು ಇಟ್ಟಿರುತ್ತಾರಂತೆ.

ಒತ್ತುಗುಂಡಿಲ್ಲ ಬೆಳಕಿಲ್ಲ ಕನ್ನೇರಾಯ[1]
ಪಟ್ಟುನೂಲಾಗೀ ಹೊಳೇದಾನ

[ಹಿಮ್ಮೇಳ—ಕೊಣಣೇ[2] ನಂದನಾಬನವೇ]

ಮಾಳಿಗೆಮಲ್ಲಿ ಮಗನಾ ಪಡೆದಳು ಕುಂತಿ
ಮಾನಗುಂಡಿಲ್ಲ ಸೊಡಲಿಲ್ಲ
ಮಾನಗುಂಡಿಲ್ಲ ಸೊಡಲಿಲ್ಲ ಕನ್ನೇರಾಯ
ಮಾಣಿಕದ್ಹೊರವಾಗಿ ಹೊಳೆದಾನ

[ಕೊಣಣೇ ನಂದನಾಬನವೇ]

ಎತ್ತಾಳೆ ಕೊಂತೀ ಇಟ್ಟಾಳೆ ಮಡುವೀಗೆ
ಮತ್ಸ್ಯಳಮೀನಾ ಮೊಸಳೇಯ
ಮತ್ಸ್ಯಳಮೀನ ಮೊಸಳೆಬಾಯನು ಕಟ್ಟಿ
ಸಾಕಮ್ಮ ಗಂಗೇ ಅನೂಗಾಲ

[ಕೊಣಣೇ ನಂದನಾಬನವೇ]

ಅಡುವದ[3]ಕ್ಹಾಲಿಲ್ಲ ಕಟ್ಟಾಕೆ ನ್ಯಾಕ್ಕಿ[4]ಲ್ಲ
ನಾ ಹ್ಯಾಗೆ ಸಾಕಾಲೀ ಅನೂಗಾಲ
ನೀರು ನ್ಯಾಕ್ಕೆಯ ಮಾಡು ಮರಳ ಮಂಚವ ಮಾಡು
ಸಾಕಮ್ಮ ಗಂಗೇ ಅನೂಗಾಲ

ಗುಂಡುಕಲ್ಲಿನ ಸುತ್ತ ದುಂಡುಮುತ್ತಿನಾರತಿ[5]
ದುಂಡಿಯಾ ಮಗಾ ಬೇಲಾಮಣ್ಣ[6]
ದುಂಡಿಯಾ ಮಗಾ ಬೆಲಮಣ್ಣಬಂದಾನು
ನಂದದೀವಿಗೇ ಬೆಳಾಕೀಲಿ

[ಕೊಣಣೇ ನಂದನಾಬನವೇ]

ಅಸಿಯಕಲ್ಲಿನ ಸುತ್ತ ಹೊಸ ಮುತ್ತಿನಾರತಿ
ಅಸಿಯಾಳ ಮಗಾ ಬೇಲಾಮಣ್ಣ
ಅಸಿಯಾಳ ಮಗ ಬೆಲಮಣ್ಣ ಬಂದಾನೇ
ಎಸಳು ದೀವಿಗೇ ಬೆಳಾಕೀಲಿ

[ಕೊಣಣೇ ನಂದನಾಬನವೇ]

---

[1] ಕನ್ನೇರಾಯ = ಕರ್ಣ. [2] ಕೊಣಣೇ = ಮಂಗಳ ಸೂಚಕಶಬ್ದ. [3] ಅಡುವದಕೆ = ಅಡಿಗೆಮಾಡಲು. [4] ನ್ಯಾಕ್ಕು = ತೊಟ್ಟಿಲಕಟ್ಟುವ ಗೂಟ ಮತ್ತು ಹಗ್ಗ. [5] ಕರ್ಣನನ್ನು ಹೆತ್ತಾಗ ಇದ್ದ ಕಷ್ಟ ಸ್ಥಿತಿಗೆ ಬದಲು, ಭೀಮನನ್ನು ಹೆತ್ತಾಗ ಇದ್ದ ವೈಭವ. [6] ಬೆಲಾಮಣ್ಣ = ಭೀಮಣ್ಣ.

ಬಾಣಂತಿ ಕೊಂತಿಗೆ 'ಕಾರಪತ್ಯ' ಈ ರೀತಿ ನಡೆಯಿತು:

[1]ಒಂದ್ಹೇರ ಮೆಣಸಾ ನಿನಗಾಗಿ ನಾ ತಂದೆ
ಬಾಣತಿ ನನ್ನವ್ವ ಬೀಗತಿಯೇ
ಹಾವಿನಂಜರವೋ ಚೇಳಿನುಪ್ಪರಿಗೆಯೋ
ಮರಳುಸದನವೋ ಮಣ್ಣುಮಾಳಿಗೆಯೋ
ರಾಗದೀವಿಗೆಯೋ ರಾಣಿವಾಲಗವೋ
ಪಚ್ಚೆಪನ್ವಾರವೋ ಮುತ್ತಿನ್‌ಜನ್ವಾರವೋ

ಹಿಮ್ಮೇಳ

ಅಚ್ಚಚ್ಚ ಬೆಳದಿಂಗಳೋ ನಮ ಕೊಂತೆಮಗೆ
ನಿಚ್ಚವು ಐಭೋಗವೋ

ಕುಂತಿಯ ಮದುವೆಗೆ ಏರ್ಪಾಟುಗಳು ನಡೆಯುವುವು. ಅವಳು ಅತಿಶಯ ರೂಪವತಿಯಾಗಿದ್ದುದರಿಂದ ಅನೇಕ ರಾಜಾಧಿರಾಜರುಗಳು ಸ್ವಯಂವರಕ್ಕೆ ಬಂದು ಸೇರುವರು. ಇದೇ ಸಂದರ್ಭದಲ್ಲಿ ಕೊಂತಿಯನ್ನು ಹಳ್ಳಿಯ ಹೆಣ್ಣಿನಂತೆ ಚಿತ್ರಿಸಿ

---

[1] ಈ ಹಾಡನ್ನು ಹೇಳಿದ ಮೂವರು ಇದಕ್ಕೆ ಮೂರುಬಗೆ ಅರ್ಥ ಹೇಳಿದ್ದಾರೆ—

ಮೊದಲನೆಯವಳು—ಕುಂತಿಗೆ ಸಖಿಯೊಬ್ಬಳು ಒಂದು ಹೇರು ಮೆಣಸನ್ನು ಪಥ್ಯಕ್ಕೆ ತಂದು ಕೊಟ್ಟಳೆಂದೂ, ಅವರು ಬಡತನದಲ್ಲಿದ್ದುದರಿಂದ ಹಾವು ಚೇಳು ಸೇರತಕ್ಕ ಮನೆಯೇ ಉಪ್ಪರಿಗೆಯಾಗಿಯೂ, ಹೆಂಗಸರ ಸಭೆಯೇ ಸಂತೋಷಕೂಟವಾಗಿಯೂ, ಹಸುರೆಲೆಗಳೇ ಪಣಿವಾರವಾಗಿ ಮಗುವಿಗೆ ಇತ್ತ ಮುತ್ತುಗಳೇ ಅಲಂಕಾರದ ಒಡವೆಯಾಗಿ ತಿಳಿಯಬೇಕೆಂದೂ ಅರ್ಥ ಹೇಳಿದಳು. ಇದೇ ಉಚಿತವಾದ ಅರ್ಥವೆಂದು ತೋರುತ್ತದೆ.

ಎರಡನೆಯವಳು—ಇಲ್ಲಿ ಬಾಣಂತಿ ಕುಂತಿ ಅಲ್ಲ; ದ್ರೌಪದಿ ಉಪಪಾಂಡವರನ್ನು ಹೆತ್ತಿದ್ದಾಳೆ. ಆ ಸುದ್ದಿ ಕೇಳಿ ದ್ರೌಪದಿಯ ತಾಯಿ ಒಂದು ಹೇರು ಮೆಣಸು ತಂದಿದಾಳೆ. ಪಾಂಡವರ ಮನೆ ಕೌರವರ ಗೂಢಚಾರರ ದೃಷ್ಟಿಗೆ ಬೀಳದಿರಲೆಂದು ಆದಿಶೇಷನು ಹಂಜರ ಎಂದರೆ ಹೆಂಚಿನಂತೆ ತನ್ನ ಮೈಯನ್ನು ಹೊದಿಸಿದಾನೆ. ಚೋಳರಾಜನು ತನ್ನ ಹುತ್ತವನ್ನೇ ಉಪ್ಪರಿಗೆ ಮಾಡಿಟ್ಟಿದಾನೆ. ಪಾಂಡವರಿಗೆ ಸಾಧನೆಮಾಡಲು ಯೋಗ್ಯ ಅಖಾಡವಿಲ್ಲದೆ ಮರಳಬಯಲಲ್ಲೇ ಕುಸ್ತಿಮಾಡಿದರು. ರಾಗದೀವಿಗೆ, ರಾಣಿ ಎಂಬ ಓಲಗ, ಪಚ್ಚೆಯ ಪನ್ವಾರದ ತಟ್ಟೆ, ಮುತ್ತಿನ ಜನ್ವಾರ ಎಲ್ಲವನ್ನೂ ದ್ರೌಪದಿಯ ತಾಯಿ ತಂದುಕೊಟ್ಟಳು. ಈ ಅರ್ಥಸರಣಿಯು ವಿಚಿತ್ರವಾಗಿದೆ.

ಮೂರನೆಯವಳು—ಪಾಂಡುವು ತನ್ನ ಹೆಂಡತಿ ಬಾಣಂತಿ ಕೊಂತಿಗೆ ಒಂದು ಹೇರು ಮೆಣಸು ತಂದುಕೊಟ್ಟರೂ ಅತ್ತೆಯಾದವಳು ಅದನ್ನು ಕೊಡಲೀಸದೆ ಹೋದಳು ಎಂದು ತನ್ನ ಹಳ್ಳಿ ಸಂಸಾರದ ಅನುಭವವನ್ನು ಈ ಪದಕ್ಕೆ ಅನ್ವಯಿಸಿದಳು. ಮುಂದೆ ಕುಂತಿ ಮೆಣಸಿನಬದಲು "ಬೇವನೇ ಹರಿದಳು, ಬೇವನೇ ಕುಡಿದಳು" ಎಂಬ ಪದವನ್ನು ಈ ಮೂರನೆಯಾಕೆ ಹೇಳಿ ತನ್ನ ಅರ್ಥವನ್ನು ಸಮರ್ಥಿಸಿಯೂ ಬಿಟ್ಟಳು.

ಅವಳು ಒಂದೆರಡು ವರಹದ ತೆರಕ್ಕೆ ಒಪ್ಪುವಂತಹ ಸಾಮಾನ್ಯ ಹೆಣ್ಣಲ್ಲವೆಂದು ತಂದೆಯು ಹೆಮ್ಮೆಯಿಂದ ಹೇಳುವಂತೆ ಪದವನ್ನು ಹಾಡುವರು :

ಒಂದ್ವೋರಕ್ಕೆ ನಮ್ಮೆಣ್ಣೊಪ್ಪೋದಲ್ಲ
ತೆಪ್ಪೋದಲ್ಲ
ಆಡೋದರಗಿಣಿ
ನೋಡೋದು ಕನ್ನಡಿ
ಹಿಡಿಯೋದು ಮಲ್ಲಿಗೆ
ಮುಡಿಯೋದು ಸಂಪಿಗೆ

ಚಿಟ್ಟುಂಡೆಕಾಯಿ ಚಿನ್ನಾದ ವೈಕಟ್ಟು
ರನ್ನಾದ ಕೈಕಟ್ಟು ಚಿಕ್ಕೊಯಸಿನ ಮಲ್ಲಿ
ಹೆಣ್ಣಲ್ಲವಮ್ಮೋ ಹೆಣ್ಣಲ್ಲವೇ

ಹಿಮ್ಮೇಳ

ಹೆಣ್ಣಲ್ಲವಮ್ಮೋ ಹೆಣ್ಣಲ್ಲವೇ

ಕುಂತಿಯು ಪಾಂಡುರಾಯನನ್ನು ಸ್ವಯಂವರದಲ್ಲಿ ಮದುವೆಯಾಗುವಳು. ಸೋಬಲಕ್ಕಿ ಶಾಸ್ತ್ರವಾದ ಮೇಲೆ, ತಾವರೆಕೊಳದಲ್ಲಿ ಪದ್ಮವು ಸೇರುವಂತೆ, ಕುಂತಿ ಪಾಂಡುರಾಯನ ಮನೆಯನ್ನು ಹೊಗುವಳು :

ಒಂದುಕೊಟ್ಣ ಹಾಸೀ
ಒಂದುಕೊಟ್ಣ ಬೀಸೀ
ಒಂದರಾಮ್ಯಾಲೆ
ಗಂಧವಾ ತೇದಿ
ಸಬಣ[1]ಕ್ಕೆ ಬಂದೂ
ಸವಲಕ್ಕಿ[2] ತಂದೂ

ಹಿಮ್ಮೇಳ

ತಾವರೆಕೊಳಕೆ
ತಣ್ಣೀರುಪದ್ಮ
ತಾವರೆಲೆಗಳಿರಾ

ಪಾಂಡುವು ಮದುವೆಯಾದನಂತರ ವಿವಿಧ ದೇಶಗಳಿಗೆ ದಂಡೆತ್ತಿಹೋಗಿ ದಿಗ್ವಿಜಯಮಾಡಿಕೊಂಡು ಬರುವನು. ಆ ಅರ್ಥವನ್ನು ಕೊಡುವ ಹಾಡಿದು :

---

[1] ಸಬಣ = ಶೋಭನ. [2] ಸವಲಕ್ಕಿ = ಸೋಬಲಕ್ಕಿ.

ಒಂದು ಮಣೆಯಾಮ್ಯಾಲೇ
ತಂಬಿಟ್ಟು ಬೆಲ್ಲದಚ್ಚು
ರಂಭೆ ನೀಯಾರೇ ಮನೆಗ್ಹೋಗೇ

ಹಿಮ್ಮೇಳ

ನಂದೀನಂದನವೋ
ನಮಕೊಂತೆಮಗೆ ಎಂದೀನೈಭೋಗವೋ

ಒಂದು ಮಣೆಮ್ಯಾಲೇ ಅದು ಇತ್ತೊ ಕಂಸಾಲೆ
ರಂಭೆ ನೀಯಾರೇ ಮನೆಗ್ಹೋಗೇ

ಹಿಮ್ಮೇಳ

ನಂದೀನಂದನವೋ ನಮಕೊಂತೆಮಗೆ
ಎಂದೀನೈಭೋಗವೋ

ಅಡುಬಲೆ ಎಂದರೆ ಬರೆಯೆಂದಾ
ಕಬುಜಲೆ[1] ಎಂದರೆ ಕರೆಯೆಂದಾ
ಕಠಾಣಿಸೀರೆ ಉಡು ಎಂದಾ
ಪುಠಾಣಿರವಿಕೆ ತೊಡು ಎಂದಾ

ಹಿಮ್ಮೇಳ

ತಾಯಿ ಕೊಂತೆಮ್ಮ ನಿನ ಗಂಡ ದಂಡೆತ್ತಿಹೋಗುತಾನೆ
ಹೋಗೆ ಕೊಂತೆಮ್ಮ ಅರಮನೆಗೇ

ಮುಂದೆ ಪಾಂಡುರಾಜನು ಮುನಿಯ ಶಾಪದಿಂದ ವ್ಯಸ್ತನಾಗಿ ವಾನಪ್ರಸ್ಥಾಶ್ರಮವನ್ನು ಸ್ವೀಕರಿಸಿ ವನಕ್ಕೆ ಪತ್ನಿಯರೊಂದಿಗೆ ತೆರಳುವನು. ಅಲ್ಲಿ ದುರ್ವಾಸ ಮುನಿಯ ಮಂತ್ರಪ್ರಭಾವದಿಂದ ಕುಂತಿಯು ಗರ್ಭಿಣಿಯಾಗುವಳು. ಈ ಸಂಗತಿಯನ್ನು 'ಗೀಜಗನ ಹೆಂಡತಿ ಬಿಮ್ಮನಸಿ ಆದಳು' ಎಂಬ ಸಾಮ್ಯದ ಮೂಲಕ ತಿಳಿಸುವರು :

ಗೀಜಗನರಮನೆ ಗಾಜಾನೆ ಗಟ್ಟ್ಯಾನೆ
ಏಳುಸುತ್ತಿನ ಕೋಟೆ
ಏಳುಸುತ್ತೀನ ಕೋಟೆ ಒಳಗಿರುವೋ
ಗೀಜಗನ ಹೆಣ್ತೀ ಬಿಮ್ಮನಸೀ

---

[1] ಕಬುಜಲೆ ಬದಲು ಕಪ್ಪುಶಿಲೆ ಎಂದರೆ ಕುಂತಿ ಎಂದು ಒಬ್ಬಾಕೆಯ ಪಾಠಾಂತರ; ಕುಂತಿ ಕೃಷ್ಣವರ್ಣದವಳಂತೆ. ಅದರಿಂದಲೇ ಕೊಂತಿಪೂಜೆ ಮಾಡುವವರೂ ಕೂಡ ಕರೀಶಿಲೆಯನ್ನೇ ಆರಿಸುವರಂತೆ.

ಹಿಮ್ಮೇಳ
ಬಾರೋ ಗೀಜಗನೆ, ಪಕ್ಷಿಗೊಳರಸೇ
ಬಾರೈಯ ಗೀಜಗನೇ
ಗೀಜಗನ ಹೆಣ್ತೀ ಬಿಮ್ಮನಸಿ ಆದರೆ
ನೇರಲಹಣ್ಣು ಬವ[1]ಸಿದಳು.
ನೇರಲಹಣ್ಣ ಬವಸಿ ಗಂಡನಕೂಟೆ
ಹೋರಾಟ ಜಗಳ ಘನವಾದೋ

ಹಿಮ್ಮೇಳ
ಬಾರೋ ಗೀಜಗನೇ ಪಕ್ಷಿಗೊಳರಸೇ
ಬಾರೈಯ ಗೀಜಗನೇ
ಗೀಜಗನ ಹೆಣ್ತೀ ಎರಡು ತಿಂಗಳ ಬಸುರಿ
ಏರಿಯ ಮಣ್ಣಾ ಬವಸಿದಳು
ಏರಿಯ ಮಣ್ಣಾ ಬವಸಿ ಭಾವನಕೂಡೆ
ಹೋರಾಟ ಜಗಳ ಘನವಾದೋ

ಇದೇ ರೀತಿ ಮೂರನೆಯ ತಿಂಗಳು ಮಾವಿನಹಣ್ಣನ್ನೂ ಐದನೆಯ ತಿಂಗಳು ಅಂಜೂರವನ್ನೂ ಒಂಬತ್ತು ತಿಂಗಳಕಾಲ ವಿವಿಧ ಫಲಗಳನ್ನು ಬಯಸುವಳು.[2]

ಕಾಲಾನುಕ್ರಮದಲ್ಲಿ ಮುತ್ತಿನಂತಹ ಮಕ್ಕಳನ್ನು ಪಡೆದ ಕುಂತಿ ಆನಂದದಿಂದ ಕಾಲ ಕಳೆಯುವಳು. ಒಂದುದಿನ ಓಕುಳಿಯಾಡಿ ಮಗುವನ್ನೆತ್ತಿಕೊಳ್ಳಲು ಬಂದ ಬಗೆಯನ್ನು ಈ ರೀತಿ ಹೇಳುತ್ತಾರೆ:

ಒಂದೋರದೋಲೇ[3]
ನಲವಿಕ್ಷ ತಂದೋಲೇ
ಕೆತ್ತಾಲೆಬಾವಾಲೆ[4]
ಕಿವಿತುಂಬಲಾಲೇ[5]

---

[1] ಬವಸಿದಳು = ಬಯಸಿದಳು.

[2] ಹೀಗೆಯೇ ಹೂಮುಡಿಯಲು ಆಸೆಪಟ್ಟ ಕುಂತಿಗೆ ಪಾಂಡುವು ಹೂಗಳನ್ನು ತಂದುಕೊಟ್ಟು ಆನಂದಪಡಿಸುವನು.

ಹುಚ್ಚೆಳ್ಳುಹೂವ ನಮ ಹುಚ್ಚಣ್ಣ ಕುಯ್ತಂದ
ಉಚ್ಚ ಸ್ತ್ರೀ ಕುಂತೀ ಮುಡಿ ಬಾರೆ.
ಉಚ್ಚ ಸ್ತ್ರೀ ಕುಂತೀ ಮುಡಿ ಬಾರೆ ಆ ಹೂವ
ನಮ್ಮ ಹುಚ್ಚಣ್ಣ ಕುಯ್ತಂದ ಹೊಸಹೂವ.

[3] ಒಂದೋರದೋಲೆ = ಒಂದು ವರಹದ ಓಲೆ. [4] ಕೆತ್ತಾಲೆಬಾವಾಲೆ = ಕೆತ್ತಿದ ಬಾವಲಿ.

[5] ಕಿವಿತುಂಬಲಾಲೇ =ಓಲೆ ಕಿವಿಯನ್ನು ತುಂಬಿತ್ತು. ಎಂದರೆ ಅಷ್ಟು ದೊಡ್ಡದು.

ಪುತ್ರನಾಡಿದ ಮಾತು
ಮುತ್ತುಕೋರೆಂದಾ
ಪದನ ಪಾಡೆಂದಾ
ತೋಳು ನೀಡೆಂದಾ.

ಹಿಮ್ಮೇಳ

ಸಿರಿಮೊಗದ ಕೊಂತೆಮ್ಮ ಜಲನಾಡಿ ಬಂದಾಗ
ರಸದಾಳಿ ಕಬ್ಬಿನೋಕಳಿಯಾ.

ಇನ್ನೊಂದು ದಿನ,

ಒಂದೇ ಬೆಟ್ಟಕೆ ಪೋದನು ಭೀಮ
ಒಂದೇ ಬಿದುರೆಲೆ ತಂದನು ಭೀಮ
ಕೊಂತಿ ನಿನ್ನ ಮಗುವು ಅಳುತದೇ
ಕೊಂತಿ ನಿನ ಮೈದನ ತೂಗಾನೇ
ಕೊಂತಿ ಜಾಣ ನಿನ ಗಂಡಾ
ಕೊಂತಿ ಜಾಲದ್ದೂ ತಂದಾ
ಕೊಂತಿ ಸೂರ ನಿನ ಗಂಡಾ
ಕೊಂತಿ ಸೂರಾಳ್ದೂ ತಂದಾ

ಹಿಮ್ಮೇಳ

ಏನಾಯಿತೇ ನಾಯಿತೇ
ಮಾಗಾಡಿ ಕೊಂತೆಮಗೆ[1] ಪಂಚಂಪಾಡಾಯಿತೇ
ಗಿಣಿಹೋಗಿ ವನಸೇರಿತೇ
ಕೋಗುಲೇ ವನದಲ್ಲಿ ದನಿತೋರಿತೇ

ಕೊನೆಗೂ ಮುನಿಯ ಶಾಪ ತಪ್ಪಲಿಲ್ಲ. ಕುಂತಿಯು ಪತಿಯನ್ನು ಕಳೆದುಕೊಂಡಳು. ಮತ್ತೆ ಹಸ್ತಿನಾವತೀ ನಗರಕ್ಕೆ ಹೋಗಿ ಸೇರುವಳು. (ನಮ್ಮ ಪದಗಳ ಪ್ರಕಾರ ಮೊದಲು ತೌರೂರಿಗೆ ಹೋಗುವಳು.) ಪ್ರಯಾಣದ ದಾರಿಯಲ್ಲಿ ಮೆರೆದ ವನಶೋಭೆ ಎಂತಹುದು!

ಒಂದು ತೆನೆಯಮೇಲೇ
ಬಂದು ಕೂತೋ ಗಿಣಿಯೇ
ಎಲೆ ಮುದ್ದುಗಿಣಿಯೇ
ಸುಳಿ ಮುದ್ದುಗಿಣಿಯೇ

---

[1] ಮಾಗಡಿ ಪ್ಯಾಟೇಲಿ ಎಂತಲೂ ಪಾಠಾಂತರವಿದೆ. ಮೈಸೂರು ನಗರ ಕೋಟೆ ಪಾಳಾಯಿತೇ ಎಂದು ಮೂರನೆಯ ಪಾಠಾಂತರವಿದೆ.

ತೊಟ್ಟಿಲಬಿಲ್ಲೀ
ತಾವರೆಕೊಕ್ಕೀ
ಮಿಟಮಿಟನೆ ಮೇಯ್ತಾ
ಗೀಜಗನ ಹಿಂಡೇ
ಸೋಗನೂಲೀ[1]
ಸೋಗನೂಲ ಕಂಡೇ
ಸೊಡಲಕುಡಿಯ[2] ಕಂಡೇ
ಮಾವಿನ ಮೊಗುಳೀ
ಮರಿದುಂಬಿ ಕಂಡೇ

ಹಿರಿದರ್ಥವನ್ನು ಕಿರಿದುಮಾತಿನಲ್ಲಿ ತೋರುವುದು ಶ್ರೇಷ್ಠ ಸಾಹಿತ್ಯದ ಹೆಗ್ಗುರುತು. ಕೇವಲ ಒಂದೆರಡು ಸಣ್ಣ ನುಡಿಗಳಲ್ಲಿ ಅರ್ಜುನನ ಕೈಚಳಕ; ಅವನು ರಾತ್ರಿಯೆಲ್ಲಾ ಗುರಿ ಇಟ್ಟು ಬಾಣ ಹೊಡೆಯುವುದನ್ನು ಅಭ್ಯಾಸಿಸುತ್ತಿದ್ದುದು; ಅವನ ಬಾಣಗಳಿಂದ ಅಕ್ಕಪಕ್ಕದ ಮನೆಗಳಲ್ಲಿ ಆಗಬಹುದಾದ ಅನಾಹುತ; ತಮ್ಮ ತರಕಾರಿ ಬಳ್ಳಿಗಳನ್ನು ಕಳೆದುಕೊಂಡು ನಷ್ಟಹೊಂದಿದ ಹೆಂಗಸರು ಕುಂತಿಯಲ್ಲಿ ದೂರು ಹೇಳುವುದು; ಆ ದೂರಿನ ಪರಿವೆಯೇ ಇಲ್ಲದೆ ತಾಯಿ ಕುಂತಿಯು ತನ್ನ ಮಗ ರಾತ್ರಿಯೆಲ್ಲಾ ನಿದ್ರೆಗೆಟ್ಟನಲ್ಲಾ ಎಂದು ಯೋಚಿಸುವುದು—ಇಷ್ಟೆಲ್ಲವನ್ನೂ ಹಳ್ಳಿಗರ ಮಾತಿನಲ್ಲಿ ಹಳ್ಳಿಗರ ಉದಾಹರಣೆಯೊಂದಿಗೆ ಬಲು ಸುಂದರರೀತಿಯಲ್ಲಿ ಅಡಕಮಾಡಿದ್ದಾರೆ!

ಕುಂಬಳದ ಕುಡಿ ನಮ್ಮ
ಅಂಗಳಕೆ ಹರಿದಾವು
ನೋಡೆ ಕೊಂತೆಮ್ಮ ನಿನ ಮಗನ—
ನೋಡೆ ಕೊಂತೆಮ್ಮ ನಿನ ಮಗ ಅರ್ಜುಳರಾಯ
ನಮ್ಮ ಕುಂಬಳದ ಕುಡಿಗೇ ಗುರಿ ಇಟ್ಟ

ಹಿಮ್ಮೇಳ

ಝುಲರ್[3]ನ್ನಿರೇ ಮುತ್ತೀನ ಭರಣಿಗೆ ಸುಳರ್[4]ನ್ನಿರೇ

ಅವನು ಗುರಿಯಿಟ್ಟಲಿರಲಿ
ನಮ್ಮನೆಗ್ಯಾಕೆ ಬರಲಿಲ್ಲ
ಅವಗ್ಹಾಕಿದ ಮಂಚ
ಸಡಲಿದ್ದೋ

[1] ಸೋಗನೂಲು = ಸೋಗೆನವಿಲು. [2] ಅದರ ಗರಿಯ ಮಧ್ಯಭಾಗ ಸೊಡಲಕುಡಿಯಂತಿತ್ತು.
[3] ಝುಲರ್ = ಶಬ್ದ. [4] ಸುಳರ್ = ಸೂಳೈಸು (?) ಮಂಗಳಶಬ್ದ.

ಹಿಮ್ಮೇಳ

ಝುಲರನ್ನಿರೇ ಮುತ್ತೀನ ಭರಣಿಗೆ ಸುಳರನ್ನಿರೇ

ಹೀಗೆಯೇ 'ಹಾಗಲಕುಡಿ ಅವರ ಬಾಗಿಲಿಗೆ ಹರಿದಾವು. ಹೀರೆಯಕುಡಿ ಅವರ ಹೊಸ್ತಿಲಿಗೆ ಹರಿದಾವು.' ಅವರ ದೂರಿಗೂ ಮತ್ತೆ ಅದೇ ಪ್ರತ್ಯುತ್ತರ ದೊರಕಿತು.

ಮುಂದೆ, ಅರಗಿನ ಮನೆಯ ಬೆಂಕಿಯಿಂದ ತಪ್ಪಿಸಿಕೊಂಡು ಕುಂತಿಯು ತನ್ನೈವರು ಮಕ್ಕಳೊಡನೆ ಏಕಚಕ್ರನಗರಕ್ಕೆ ಬರುವಳು. ಆಗ

ನಿಂಬೆಯಾ ಫಳರವಂತೇ
ನಮ ಕೊಂತೆಮಗೆ
ಕಣ್ಣೀರಾ ಸ್ನಾನವಂತೇ
ಅಪ್ಪುನೇಮದಲ್ಲಿರುವಾ ಪಾಂಡುರಾ ಮಕ್ಕಳಿಗೇ
ಬಹಳ ಬಡಸ್ತನವಂತೆ

ಎಂದೂ,

ಕೊಂತಿ ಕೊಟ್ಟ್ನಾವ ಕುಟ್ಟೀ
ಭೀಮಣ ಭಿಕ್ಷ್ನವ ಬೇಡಿ
ಎಂತಪ್ಪರಾಯಾ ಕರು ಕಾದ
ಎಂತಪ್ಪರಾಯ ಕರುಕಾದ ಕಂಬಳಿ ಹೊದ್ದು
ಎಂತವರಿಗೆ ಬಂತೂ ಬಡಸ್ತಾನ

ಎಂದು ಹೇಳಿಕೊಂಡು ನಮ್ಮ ಹೆಂಗಸರು ಮರುಗುವರು. ಈ ಮಧ್ಯೆ ಅರ್ಜುನನು ದ್ರೌಪದಿಯನ್ನು ಗೆದ್ದು ತರುವನು. ತಾಯಿಯ ಅಚಾತುರ್ಯದಿಂದ ಅವರಿಗೊಂದು ದೊಡ್ಡ ಸಮಸ್ಯೆಯೊದಗಿ,[1] ಕೊನೆಗೆ ಐವರೂ ಅವಳನ್ನು ಮದುವೆಯಾಗಬೇಕೆಂದು ನಿರ್ಧಾರವಾಗುವುದು:

ಮಲ್ಲೀಗೆ ಬನಕೆ ಪೋಗಿ ಅರುಜಾಣ[2]
ನಲ್ಲೆ ದ್ರೌಪದಿಯ ತಂದಾ ಅರುಜಾಣ
ನಲ್ಲೆ ದ್ರೌಪದಿಯ ತಂದೂ
ಪಂಚಪಾಂಡೋರು ಹಂಚುಣ್ಣೊ ಕಾಲಕ್ಕೆ
ದಾನವೂ ಉಂಟೆ ತಾಯೀ.
ದಾನವೂ ಉಂಟೆ ತಾಯೀ ತಾಯಮ್ಮ
ಧರ್ಮವೂ ಉಂಟೆ ತಾಯಿ.
ಪಂಚಪಾಂಡೋರು ಹಂಚುಣ್ಣೊ ಕಾಲಕ್ಕೆ

---

[1] ಇದರಿಂದ ಕುಂತಿ ಕಿವುಡಿಯೆಂದು ನಂಬಿಕೆ ಹುಟ್ಟಿದೆ!

[2] ಅರುಜಾಣ = ಅರ್ಜುನ.

ದಾನವು ಉಂಟು ತಾಯಿ.
ದಾನವೂ ನಮಗೆ ಬೇಕು ತಾಯಮ್ಮ
ಧರ್ಮವೂ ನಮಗೆ ಬೇಕು.
ಮಾಳಿಗೆ ಮಲ್ಲಿರುವ ದ್ರೌಪದಿಯ ಕೊಟ್ಟಾರೆ
ಆನಂದ ಉಂಟು ತಾಯಿ.

ಹಿರಿಯರ ಅನುಮತಿ ಪಡೆದು ಪಾಂಡವರು ಕೆಲಕಾಲ ಇಂದ್ರಪ್ರಸ್ಥದಲ್ಲಿ ನೆಲಸುವರು. ಆಗ ಪ್ರಮಾದವಶದಿಂದ ಅರ್ಜುನನು ಜೋಗಿಯಾಗಿ ಒಂದು ವರ್ಷ ತೀರ್ಥಯಾತ್ರೆ ಹೊರಡುವನು. ದಾರಿಯಲ್ಲಿ ಬಾಲೆಯರ ತಂಡವೇ ಅವನನ್ನು ಪ್ರೇಮಿಸಿ ಪತಿಪುತ್ರರನ್ನು ಮರೆತು, ಅತ್ತೆಯರನ್ನು ಲೆಕ್ಕಿಸದೆ, ಅವನನ್ನು ಹಿಂಬಾಲಿಸುವುದು. ಅರ್ಜುನನ ಸಮಾಚಾರವು ತಿಳಿಯದೆ ಯೋಚಿಸುತ್ತ ಒಂದು ದಿನ ಗೋಡೆಗೆ ಒರಗಿ ನಿಂತಿದ್ದ ದ್ರೌಪದಿಯ ಮುಂದೆ ಚಿತ್ರಾಂಗದೆಯು ಕಳುಹಿಸಿದ್ದ ಕೆಲವು ಗಿಣಿಗಳು ಹಾರಿಬಂದು ಅವಳ ಇನಿಯನ ವೃತ್ತಾಂತವನ್ನು ತಿಳಿಸುವುವು :

ಮೂಡಲಾ ನಾಡಿನಿಂದಾ ಅಕ್ಕೈಯ
ಮುತ್ತಿನರಗಿಣಿ ಬಂದೋ ;
ಅಕ್ಕನಾ ಮನೆಗೆಂದು ನೆಪ್ಪು ಕಾಣದ ಗಿಣಿ
ರೆಕ್ಕೆ ಪನ್ನಣಿಸಿ ಪೋದೋ.

ಹಿಮ್ಮೇಳ

[ಜೋಗಿಯಾ ಹಾಡುಕಾಣೇ ಕೊಂತೆಮನ
ಪ್ರೇಮದಾ ಮಗನು ಕಾಣೇ
ರಾಯರಾಯರಿಗೆಲ್ಲ ಅತಿಚೆಲ್ವ ಫಲುಗುಣ
ಆನಂದ ಜೋಗಿಕಾಣೇ.]

ಚೆಂದದಲಿ ಚೆಲುವನಂತೇ ಜೋಗ್ಯೆಯ
ಗಂದದಲಿ ಗರುಡನಂತೇ ಜೋಗ್ಯೆಯ
ಗಂಧಶ್ರೀ ಗಂಧಗರಡಿ ಬಾಗಿಲಮುಂದೆ
ತಾ ಬಂದು ನಿಂತನಂತೇ

ಹಿಮ್ಮೇಳ . . .

ಹಾರುವಗೇರಿಗ್ಹೋಗೀ ಜೋಗ್ಯೆಯ
ಹರದು ಭಿಕ್ಷವ ಮಾಡೀ
ಹಾರೋರ ಬಾಲೇರು ಬೆನ್ನತ್ತಿ ಬಂದಾಗ
ಎತ್ತಮ್ಮ ತಿರುಗಲೆಂದ

ಹಿಮ್ಮೇಳ . . . . .

ನಿಮ್ಮತ್ತೆ ಬಂದಾಳು ಪೋಗೇ ಎಲೆಬಾಲೆ
ನಿನ ಪುತ್ರನತ್ತಾನು ಪೋಗೇ ಎಲೆಬಾಲೆ
ದೇಶದೇಶದಲಿ ತಿರಿದುಂಬ ಜೋಗೀಗೆ
ಮಾತು ಬಂದಾವು ಪೋಗೇ

ಹಿಮ್ಮೇಳ . . .

ನಮ್ಮತ್ತೆ ಬಂದಾರು ಬರಲೀ ಜೋಗ್ಯೆಯ
ನನ ಪುತ್ರನತ್ತಾರು ಅಳಲೀ
ದೇಶದೇಶದಲಿ ತಿರಿದುಂಬೊ ಜೋಗ್ಯೆಗೆ
ಮಾತು ಬಂದಾರೆ ಬರಲಿ.

ಅನಂತರ ಜೂಜಾಡಿ ಪಾಂಡವರು ಸರ್ವಸ್ವವನ್ನೂ ಕಳೆದುಕೊಳ್ಳುವರು.

ಹಿಮ್ಮೇಳ

ಜೂಜೊಂದಾಡಿದರೋ ಧರುಮಾರೂ
ಸೋತೋರೇನಂಬೆನೋ—
ಒಂದು ಮಣೆಯ ಮ್ಯಾಲೇ ಒಂದಡಕೆ ಜೂಜಾಡಿ
ಒಂದಕ್ಕೆ ನೂರಡಕೇ ತೆಗೆಜೂಜು

ಹಸ್ತಿನಾಪುರಕ್ಕೆ ಎಷ್ಟೋ ವೈಭವದಿಂದ ಪ್ರಯಾಣ ಬೆಳೆಯಿಸಿದ್ದರು—ಅವರ ಕುದುರೆಸಾಲು, ಆನೆಸಾಲು, ಎತ್ತಿನಸಾಲು ಬರುವಾಗ ದಾರಿಕಲ್ಲೆಲ್ಲಾ ಅದುರಿದುವು. ಮರಳಿನ ಧೂಳು ಎದ್ದಿತು. ಸೋತು ಹೊರಟಾಗ ಅವರ ಐಶ್ವರ್ಯವೆಲ್ಲವೂ ಮಾಯವಾಗಿ ಅತ್ತಿ ಆಲ ಇವುಗಳ ಕಾಯನ್ನು ಬೇಯಿಸಿ ತಿನ್ನಬೇಕಾದ ಕಷ್ಟಸ್ಥಿತಿಯೊದಗಿತು:

ಧರುಮರೋಗುವಾಗ ದಾರಿಗಲ್ಲದುರೀದೋ
ದಾರಿಗಲ್ಲದುರೀ ಮರಳೆದ್ದು
ದಾರಿಗಲ್ಲದುರೀ ಮರಳೆದ್ದು ಧರುಮಾರ
ಅವರಾನೆಯ ಸಾಲು ಬರುವಾಗ

[ಕೊಣಣೇ ನಂದನಾಬನಮೇ.]

ಅತ್ತಿಯ ಮರದಡುಗೆ ಅಟ್ಟುಂಡ್ರು ಪಾಂಡೋರು
ಅತ್ತಿಯ ಕಾಯ ಒಲೆಹೂಡಿ
ಅತ್ತಿಯ ಕಾಯ ಒಲೆಹೂಡಿ ಪಾಂಡೋರು
ಅಟ್ಟುಂಡ್ರವರಲ್ಲೇ ವನದೇಶ.

ಮುಂದಿನ ಕತೆಯನ್ನು ತಿಳಿಸುವ ಪದಗಳು ಇದ್ದಹಾಗೆ ಕಾಣಲಿಲ್ಲ. ಭಕ್ತೆಯರು

ಕುಂತೀ ದೇವತೆಯನ್ನು ವರಬೇಡಿದ ಹಾಡಿನಿಂದ ಈ ಸಂಗ್ರಹವನ್ನು ಮುಕ್ತಾಯಗೊಳಿಸುವೆನು :

ಒಂದು ಮುಡಿಗೆ ಒಂದು ಪತ್ತರೇ ಕೊಂತಿ ನಿನ್ನ
ಸಾಲುಮುಡಿಗೆ ಬಿಲ್ಲಪತ್ತರೇ
ಆ ಹೂವ ತಂದು ಆಗ ಮುಜ್ಜನಮಾಡಿ
ಹೂವ ಕೊಂಡು ವರವ ಕೊಡೇ.

. . . .

ವರವ ಕೊಡು ಇಂಬ ಕೋಡೇ ರಾಜೂರು
ದಂಡೆತ್ತಿ ಕೊನೆಯ ಸಾಗಿಸೇ.

ಎಂ. ಆರ್. ಲಕ್ಷಮ್ಮ.

ಆಸೆ

ಅಮರರಿಗೆ ಮೃತರ ಕಳೆ ಕಾಲನಿಗು ಮುಪ್ಪ ಕಳೆ
ಬಂದರೂ ನೀನಿರುವೆ ಚಿರಯೌವನೆ!

ಚಿಂತೆಗಳ ಸಂತೆಯುಸೆ ಚಿತೆಯ ಮೇಲಿರಿಸುತ್ತ
ಎದೆ ಎದೆಯ ಚಿಗುರಿಸುವ ಚಿರನೂತನೆ!

ಪರಿಸರದ ಜಟಿಲತೆಯು ಕುಟಿಲತೆಯು ಬಾಳುವೆಯು
ಕೆಳೆಯಾದ ಎಳೆಗನಸ ತೊತ್ತುಳಿಯುಲು

ಮಿಣುಕುಹುಳದೊಲು ನಗೆಯನಿನಿಸನೆದೆಯಲಿ ಬೆಳಗಿ
ಹೆಣವಾದ ದೇಹವನು ಉಜ್ಜೀವಿಪೆ.

ಯಾತನೆಯ ಯಾಮಿನಿಯಲಮರತಾರೆ,
ನಿಟ್ಟುಸಿರ-ಮನೆಯೊಳಗೆ ಬೆಳಗು ಬಾರೆ!
ಕಹಿಬಸಿರಿಗೂ ನಿನ್ನ ಸುಧೆಯ ತಾರೆ.
ನಿನ್ನವೊಲು ಅಭಯವನು ನೀಡಲಿಹರೆ?

ಹೇಮಂತ.

ಶೃಂಗೇರಿ*

ಯಸ್ಯ ನಿಶ್ವಸಿತಂ ವೇದಾಃ ಯೋವೇದೇಭ್ಯೋಽಖಿಲಂ ಜಗತ್ |
ನಿರ್ಮಮೇ ತಮಹಂ ವಂದೇ ವಿದ್ಯಾತೀರ್ಥಮಹೇಶ್ವರಮ್ ||

ಶೃಂಗಗಿರಿಯು ತುಂಗಾತಟದಲ್ಲಿ ವಿರಾಜಿಸುತ್ತಿರುವ ಒಂದು ಪಾವನಕ್ಷೇತ್ರ. ಜಗತ್ತಿನ ಭೂಮಾಪುರುಷರಲ್ಲಿ ಓರ್ವರಾದ ಶ್ರೀ ಶಂಕರಾಚಾರ್ಯರ ಚರಣ ಪಾಂಸುವಿನಿಂದ ಪವಿತ್ರವಾದುದು ಈ ಪ್ರದೇಶ. ವೇದಸಂಪೂಜಿತಳೂ, ಆಗಮ ಸ್ತುತಳೂ, ಚೈತನ್ಯಸ್ವರೂಪಿಣಿಯೂ, ಓಂಕಾರಮಯಿಯೂ ಆದ ಶ್ರೀ ಶಾರದೆಯ ದಿವ್ಯಸನ್ನಿಧಿಯಿಂದ ಪವಿತ್ರತರವಾಗಿ ಪ್ರಕಾಶಿಸುತ್ತಿದೆ. ಇದು ರಾಮಾಯಣದಲ್ಲಿ ಕೀರ್ತಿತನಾದ ಋಷ್ಯಶೃಂಗನ ಜನ್ಮಸ್ಥಳವೆಂದೂ, ಅದರಿಂದ ಇದಕ್ಕೆ 'ಋಷ್ಯಶೃಂಗ ಗಿರಿ' ಅಥವಾ 'ಶೃಂಗಗಿರಿ' ಎಂಬ ಹೆಸರು ಕೊಡಲ್ಪಟ್ಟಿತೆಂದೂ ಐತಿಹ್ಯವಿದೆ. ಇಲ್ಲಿ ಇನ್ನೂ ಒಂದೆರಡು ವಿಷಯಗಳನ್ನು ವಿವರವಾಗಿ ಹೇಳಿದರೆ ಅಪ್ರಕೃತವಾಗಲಾರದು. ಇದೇ ತಾಲ್ಲೂಕಿಗೆ ಸೇರಿದ ಕಿಗ್ಗಗ್ರಾಮದಲ್ಲಿ ಶೃಂಗೇಶ್ವರ ದೇವಾಲಯವಿದೆ. ಇದರ ನವರಂಗವನ್ನು ಪ್ರವೇಶಿಸಲು ಮೂರು ದ್ವಾರಗಳಿವೆ. ಇದು ಸೊಗಸಾಗಿ ಕೆತ್ತಲ್ಪಟ್ಟ ನಾಲ್ಕು ಕಂಬಗಳಿಂದ ಕೂಡಿದೆ. ಒಂದರಲ್ಲಿ ನರ್ತಕಿಯರು ಋಷ್ಯಶೃಂಗನನ್ನು ರೋಮಪಾದ ರಾಜನ ಪಟ್ಟಣಕ್ಕೆ ಕರೆದೊಯ್ಯುತ್ತಿರುವಂತೆ ತೋರಿಸಲ್ಪಟ್ಟಿದೆ. ಸ್ತ್ರೀಯರು ಎತ್ತಿಹಿಡಿದಿರುವ ಪಲ್ಲಕ್ಕಿಯನ್ನು ಎರಡು ಹರಿಣಗಳು ಹೊತ್ತುಕೊಂಡಿವೆ. ಸುಕನಾಸಿಯ ಬಲಭಾಗದಲ್ಲಿ ಗಣಪತಿಯ ಗುಡಿಯೂ, ಎಡಭಾಗದಲ್ಲಿ ಮಹಿಷಾ ಸುರಮರ್ದಿನಿಯ ಗುಡಿಯೂ ಇವೆ. ಇಲ್ಲಿನ ಗಣಪತಿಯ ವಿಗ್ರಹವು ಅಪೂರ್ವ ವಾದುದು. ಇದಕ್ಕೆ ಎರಡು ಕೈಗಳಿದ್ದು, ಸೊಂಡಿಲು ಬಲಗಡೆಗೆ ತಿರುಗಿಕೊಂಡಿದೆ. ಗರ್ಭಗುಡಿಯಲ್ಲಿರುವ ಲಿಂಗಕ್ಕೆ 'ಶೃಂಗೇಶ್ವರ'ನೆಂದು ಹೆಸರು. ಇದರ ಎಡಪಕ್ಕದಲ್ಲಿ ಋಷ್ಯಶೃಂಗನ ಪತ್ನಿಯಾದ ಶಾಂತಾದೇವಿಯ ವಿಗ್ರಹವಿದೆಯೆಂದೂ, ಅವಳಿಗೂ ಮುನಿಯಂತೆಯೇ ತಲೆಯ ಮೇಲೆ ಎರಡು ಕೋಡುಗಳಿವೆಯೆಂದೂ, ಈ ಲಿಂಗದಲ್ಲೇ ಅವನು ಐಕ್ಯವಾದನೆಂದೂ ಪ್ರವಾದವಿದೆ. ಸ್ಥಳಪುರಾಣದಿಂದ ಉದ್ಧರಿಸಲ್ಪಟ್ಟ ಒಂದು ಶ್ಲೋಕದಲ್ಲಿ ಲಿಂಗವನ್ನು ಕುರಿತು ಈ ವರ್ಣನೆಯಿದೆ :

---

*ನಾನು ಶೃಂಗೇರಿಯ ದೇವಾಲಯಗಳ ಕಲಾಚಾತುರ್ಯವನ್ನು ಕಣ್ಣಾರೆ ಕಂಡು ಮೆಚ್ಚಿದುದರ ಫಲವೇ ಈ ಲೇಖನ. ಇದನ್ನು ಬರೆಯುವುದರಲ್ಲಿ ಮೈಸೂರು ಶಾಸನದ ಇಲಾಖೆಯ ವರದಿಗಳಿಂದ ತುಂಬ ಉಪಕಾರವಾಗಿದೆ. ಆದ್ದರಿಂದ ಆ ಇಲಾಖೆಯ ಚಾಲಕರಿಗೆ ನಾನು ಚಿರಋಣಿ.—ಸಿ.ಬಿ.ಸೀ.

ಯಸ್ತು ದ್ವಾದಶ ಯೋಜನಾನ್ವಿತ ಮಹೀ ಕ್ಷಾಮಂ ಸಮುತ್ಸಾದಯನ್ |
ವಾಮಾಂಕಸ್ಥಿತ ಶೀತಶೈಲತನಯಾಽಶ್ಲೇಷ ಪ್ರಹೃಷ್ಯನ್-ಮನಃ |
ಭಕ್ತಾಭೀಷ್ಟ ವರಪ್ರದಾನ ನಿರತಸ್ಸರ್ವಾಮರಾಭ್ಯರ್ಚಿತೋ |
ರುದ್ರಾಕ್ಷೀಕೃತ ಲಿಂಗರೂಪ ಸಹಿತಃ ಶೃಂಗೇಶ್ವರಃ ಪಾತು ಮಾಂ ||
ನಮಃ ಶಾಂತಾಸಮೇತಾಯ ನಂದಿನೀತೀರವಾಸಿನೇ |
ರುದ್ರಾಕ್ಷ ಭೂಷಿತಾಂಗಾಯ ಋಷ್ಯಶೃಂಗಾಯ ಮಂಗಲಮ್ ||

"ದ್ವಾದಶ ಯೋಜನ ಪರ್ಯಂತ ಹಬ್ಬಿದ ಕ್ಷಾಮವನ್ನು ತೊಲಗಿಸಿದವನೂ, ವಾಮಾಂಕಸ್ಥಿತಳಾದ ಪಾರ್ವತಿಯನ್ನು ನೋಡಿ ಆನಂದಿಸುವವನೂ, ಭಕ್ತಾಭೀಷ್ಟ ಪ್ರದನೂ, ಸುರರಿಂದ ಅರ್ಚಿಸಲ್ಪಟ್ಟವನೂ, ರುದ್ರಾಕ್ಷೀಕೃತ ಲಿಂಗರೂಪನೂ, ಶಾಂತಾದೇವೀ ಸಮೇತನಾಗಿ ನಂದಿನೀ ತೀರದಲ್ಲಿ ವಾಸಿಸುವವನೂ ಆದ ಋಷ್ಯ ಶೃಂಗೇಶ್ವರನು ನಮ್ಮನ್ನು ಪಾಲಿಸಲಿ"

ಇದು ಮೇಲಿನ ಹೇಳಿಕೆಯನ್ನು ಪುಷ್ಟೀಕರಿಸುತ್ತದೆ.

ನಂದಿನಿಯು ಕಿಗ್ಗ ಗ್ರಾಮದ ಬಳಿ ಹರಿಯುವ ಒಂದು ಸಣ್ಣ ನದಿ. ಇದು ಅನತಿದೂರದಲ್ಲಿರುವ ನರಸೀಬೆಟ್ಟದಲ್ಲಿ ನಳಿನೀ ಮತ್ತು ಸೀತಾ ಎಂಬ ಮತ್ತೆರಡು ತೊರೆಗಳ ಸಮೇತ ಹುಟ್ಟುತ್ತದೆ. ನಂದಿನಿಯು ನೆಮ್ಮಾರ್ ಎಂಬಲ್ಲಿ ತುಂಗಾನದಿಯನ್ನು ಸಂಗಮಿಸುತ್ತದೆ. ಸೀತಾನದಿಯು ದಕ್ಷಿಣಕನ್ನಡ ಜಿಲ್ಲೆಯಲ್ಲಿ ಪ್ರವಹಿಸುತ್ತದೆ. ಗುಡಿಯ ಉತ್ಸವವಿಗ್ರಹವು ಕ್ರಿ.ಶ. ೧೬೭೪ರಲ್ಲಿ ಇಕ್ಕೇರಿಯ ರಾಣಿ ಚೆನ್ನಮ್ಮಾಜಿಯ ಕೈಕೆಳಗಿನ ಅಧಿಕಾರಿಯಾದ ಗುರುಬಸವಪ್ಪನಿಂದ ಕೊಡಲ್ಪಟ್ಟಿತೆಂದು ಆದರ ಪೀಠದ ಮೇಲಿರುವ ಶಾಸನವು ತಿಳಿಸುತ್ತದೆ.

ಈಗಿನ ಶೃಂಗೇರಿ ಗ್ರಾಮಕ್ಕೆ ಸೇರಿದಂತೆ ಒಂದು ಗುಡ್ಡವಿದೆ. ಅದರ ಶಿಖರದಲ್ಲಿ ಮಲ್ಲಿಕಾರ್ಜುನ ದೇವಾಲಯವಿದೆ. ಈ ಗಿರಿಯಲ್ಲಿ ಹಿಂದೆ ವಿಭಾಂಡಕ ಮಹರ್ಷಿಗಳ ಆಶ್ರಮವಿತ್ತೆಂದೂ, ಅವರು ಈ ಮಲ್ಲಿಕಾರ್ಜುನ ಲಿಂಗದಲ್ಲಿ ಐಕ್ಯವಾದರೆಂದೂ ಐತಿಹ್ಯವು ತಿಳಿಸುತ್ತದೆ. ಕೆಲವು ಶಾಸನಗಳಲ್ಲಿ ಇದನ್ನು 'ಶೃಂಗಿಪುರ'ವೆಂದು ನಿರ್ದೇಶಿಸಿದೆ. ಶ್ರೀ ವಿದ್ಯಾರಣ್ಯರಿಂದ ನಿರ್ಮಿತವಾದ ಈ ಊರು ಅತಿ ಪ್ರಾಚೀನವೂ ಪ್ರಸಿದ್ಧವೂ ಆಗಿ, ಸ್ಮಾರ್ತ ಪ್ರಪಂಚದ ಕೇಂದ್ರಸ್ಥಾನವಾಗಿ ಕಂಗೊಳಿಸುತ್ತಿದೆ. ಕ್ರಿ.ಶ. ೭ನೆಯ ಶತಮಾನದಲ್ಲಿ, ಅದ್ವೈತ ಸಿದ್ಧಾಂತ ಪ್ರತಿಪಾದಕರಾದ ಶ್ರೀಮಚ್ಛಂಕರ ಭಗವತ್ಪಾದಾಚಾರ್ಯರಿಂದ ಸ್ಥಾಪಿತವಾದ ನಾಲ್ಕು ಆಮ್ನಾಯ ಮಠಗಳಲ್ಲಿ ಶೃಂಗೇರಿಯು ಬಹು ಮುಖ್ಯವಾದುದು. ಇದಲ್ಲದೆ ಪಶ್ಚಿಮದಲ್ಲಿ ದ್ವಾರಕಾ, ಉತ್ತರದಲ್ಲಿ ಬದರಿ, ಪೂರ್ವದಲ್ಲಿ ಜಗನ್ನಾಥ—ಈ ಎಡೆಗಳಲ್ಲಿ ಮಠಗಳನ್ನು ನಿರ್ಮಿಸಿ, ಸುರೇಶ್ವರ, ಪದ್ಮಪಾದ, ತ್ರೋಟಕ ಮತ್ತು ಹಸ್ತಾಮಲಕರೆಂಬ ತಮ್ಮ ನಾಲ್ವರು ಶಿಷ್ಯರನ್ನು

ಆ ಮಠಗಳ ಅಧಿಪತಿಗಳನ್ನಾಗಿ ಮಾಡಿದರು. ಇವುಗಳ ಅಭಿಧಾನ, ದೇವ, ದೇವಿ, ಸಂಪ್ರದಾಯ, ವೇದ, ಮಹಾವಾಕ್ಯ, ಪಾವನಕ್ಷೇತ್ರ, ಪುಣ್ಯತೀರ್ಥಗಳಲ್ಲಿ ಪರಸ್ಪರ ಭಿನ್ನಭೇದಗಳು ಕಂಡುಬರುವುದಲ್ಲದೆ, ಗುರುಸ್ವರೂಪ, ಯತಿನಾಮಧೇಯಗಳಲ್ಲೂ ಸಹ ವ್ಯತ್ಯಾಸಗಳು ಕಾಣುತ್ತವೆ. ಅವುಗಳನ್ನು ಕೆಳಗೆ ಕೋಷ್ಠಕ ರೂಪದಲ್ಲಿ ಕೊಟ್ಟಿದೆ:

		ಶೃಂಗೇರಿ	ದ್ವಾರಕಾ	ಬದರಿ	ಜಗನ್ನಾಥ
ಅಭಿಧಾನ	....	ಶಾರದಾ ಮಠ	ಕಾಳಿಕಾ ಮಠ	ಶ್ರೀಮಠ	ಗೋವರ್ಧನ ಮಠ
ದೇವರು	....	ವರಾಹ	ಸಿದ್ಧೇಶ್ವರ	ನಾರಾಯಣ	ಜಗನ್ನಾಥ
ದೇವತೆ	....	ಶಾರದಾ	ಭದ್ರಕಾಳಿ	ಪೂರ್ಣಗಿರಿ	ವೃಷಲಾ
ಸಂಪ್ರದಾಯ	....	ಭೂರಿವಾಲ	ಕೀಟವಾಲ	ನಂದವಾಲ	ಭೋಗವಾಲ
ವೇದ	....	ಯಜುಸ್	ಸಾಮ	ಅಥರ್ವಣ	ಋಕ್
ಮಹಾವಾಕ್ಯ	....	ಅಹಂ-ಬ್ರಹ್ಮಾಸ್ಮಿ	ತತ್ತ್ವಮಸಿ	ಆತ್ಮಾಚಬ್ರಹ್ಮ	ಪ್ರಜ್ಞಾನಂಬ್ರಹ್ಮ
ಪಾವನಕ್ಷೇತ್ರ	....	ರಾಮಕ್ಷೇತ್ರ	ದ್ವಾರಕಾ	ಬದರಿಕಾಶ್ರಮ	ಪುರುಷೋತ್ತಮ ಕ್ಷೇತ್ರ
ಪುಣ್ಯತೀರ್ಥ	....	ತುಂಗಭದ್ರ	ಗೋಮತೀ	ಅಲಕನಂದಿಕಾ	ಮಹೋದಧಿ
ಗುರುಸ್ವರೂಪ	....	ಚೈತನ್ಯ-ಬ್ರಹ್ಮಚಾರಿ	ಸ್ವರೂಪ-ಬ್ರಹ್ಮಚಾರಿ	ಆನಂದ-ಬ್ರಹ್ಮಚಾರಿ	ಪ್ರಕಾಶಬ್ರಹ್ಮಚಾರಿ
ಯತಿನಾಮಧೇಯ		ಸರಸ್ವತಿ, ಪುರಿ, ಭಾರತಿ, ಅರಣ್ಯ, ಗಿರಿ, ತೀರ್ಥ, ಆಶ್ರಮ	ತೀರ್ಥ, ಆಶ್ರಮ	ಗಿರಿ, ಪರ್ವತ, ಸಾಗರ	ಅರಣ್ಯ ವನ

ಶೃಂಗೇರಿಯಲ್ಲಿ ಶ್ರೀಮಚ್ಛಂಕರಾಚಾರ್ಯರಿಂದ ನಿರ್ಮಿತವಾದ ಗುರುಪರಂಪರೆಯು ಕುಲನದಿಯಂತೆ ಅವ್ಯವಚ್ಛಿನ್ನ ರೂಪವನ್ನು ಧರಿಸಿದೆ. ಆದರೆ ವಿದ್ಯಾತೀರ್ಥರ ಕಾಲಕ್ಕೆ ಹಿಂದೆ ಶೃಂಗೇರಿಯ ಹೆಸರು ಶಾಸನಗಳಲ್ಲಿ ಕಂಡುಬರುವುದಿಲ್ಲ. ಶೃಂಗಗಿರಿಯ ಶಾರದಾ ಪೀಠವನ್ನಾರೋಹಿಸಿದ ಗುರುವರ್ಯರಲ್ಲಿ ವಿದ್ಯಾತೀರ್ಥರು ಅಗ್ರಗಣ್ಯರು. ಇಲ್ಲಿ ಈ ಸೀಮಾಪುರುಷರ ಸೂಕ್ಷ್ಮ ಪರಿಚಯವು ಅಸಂಗತವಾಗಲಾರದು. ವಿದ್ಯಾಶಂಕರರು ಬಿಲ್ವಾರಣ್ಯದಲ್ಲಿ ಜನ್ಮವೆತ್ತಿದರು. ಶಾರ್ಙ್ಗಪಾಣಿಯೆಂಬಾತನು ಇವರ ತಂದೆ. ಇವರ ಪೂರ್ವಾಶ್ರಮದ ಅಭಿಧಾನವು ಸರ್ವಜ್ಞವಿಷ್ಣುವೆಂದು. ಇವರು ಖಿಲವಾಗುತ್ತಿದ್ದ ಶೃಂಗೇರಿಯ ಮಠದ ಪ್ರಾಬಲ್ಯವನ್ನು ಪುನರುತ್ಥಾನಮಾಡಿ, ಅದಕ್ಕೆ ಕರ್ಣಾಟಕ ಇತಿಹಾಸದಲ್ಲ ಒಂದು ಅಪೂರ್ವವಾದ ಸ್ಥಾನವನ್ನು ಗಳಿಸಿಕೊಟ್ಟರು. ಈ ಮಹಾತ್ಮರು ಬುಕ್ಕ, ಮಾಧವ, ಭಾರತಿಯತಿ ಮುಂತಾದ ಸಚ್ಛಿಷ್ಯರಿಂದ ಪರಿವೃತರಾಗಿ,

ಕಂಚಿಯ ಏಕಾಮ್ರನಾಥ ಮತ್ತು ಶ್ರೀ ಚಕ್ರವಾಸಿನಿಯಾದ ಕಾಮಾಕ್ಷೀದೇವಿಯ ಆರಾಧನೆಯಲ್ಲಿ ನಿರತರಾಗಿದ್ದರು. ಈ ಯತಿವರೇಣ್ಯರು ಎಪ್ಪತ್ತುಮೂರು ವರ್ಷಗಳ ಕಾಲ ಗುರುಪೀಠವನ್ನಲಂಕರಿಸಿ, ಅಷ್ಟದಿಗ್ಗಜಗಳನ್ನು ಹೋಲುವ ಎಂಟುಮಂದಿ ಅಂತರಂಗ ಶಿಷ್ಯರನ್ನು ತಾವು ಪ್ರತಿಷ್ಠಿಸಿದ ಮಠಗಳ ಅಧಿಪತಿಗಳನ್ನಾಗಿ ಮಾಡಿದರು. ಇವರು 'ಲಂಬಿಕಾಯೋಗ'ದಲ್ಲಿ ಪರಮಪ್ರೀತರಾಗಿ, ಬ್ರಹ್ಮವಿದ್ಯೆಯಲ್ಲಿ ಮಹಾ ಉತ್ಕರ್ಷವನ್ನು ಪಡೆದವರಾಗಿದ್ದರು. ವಿದ್ಯಾಶಂಕರರ ಅಂತೇವಾಸಿಗಳಲ್ಲಿ ಅದ್ವಿತೀಯರೂ, ಕನ್ನಡನಾಡಿನ ವಿಭೂತಿಪುರುಷರಲ್ಲಿ ಒಬ್ಬರೂ ಆದ ವಿದ್ಯಾರಣ್ಯರು, ಇವರ ಆಶೀರ್ವಾದಬಲದಿಂದಲೇ ಭಾರತೀಯ ಇತಿಹಾಸದಲ್ಲಿ ಚಿರಸ್ಮರಣೀಯವಾದ ವಿಜಯನಗರ ಸಾಮ್ರಾಜ್ಯದ ಸ್ಥಾಪನೆಯನ್ನು ಕೈಗೊಂಡರು.

ಕ್ರಿ.ಶ. ೧೪ನೆಯ ಶತಮಾನದಲ್ಲಿ ಶೃಂಗೇರಿಯು ವಿಜಯನಗರದ ಅರಸರ ಸನ್ಮಾನಕ್ಕೆ ಒಳಗಾಗಿ ವೈಭವದ ಉಚ್ಚಶಿಖರವನ್ನೇರಿ ರಾರಾಜಿಸುತ್ತಿತ್ತು. ಕ್ರಿ.ಶ. ೧೩೪೬ರಲ್ಲಿ ಒಂದನೆಯ ಹರಿಹರನೂ, ೧೩೫೬ರಲ್ಲಿ ಒಂದನೆಯ ಬುಕ್ಕನೂ ವಿದ್ಯಾತೀರ್ಥರಿಗೆ ತಮ್ಮಲ್ಲಿದ್ದ ಭಕ್ತಿವಿಶ್ವಾಸಗಳನ್ನು ತೋರ್ಪಡಿಸಲು ಶೃಂಗೇರಿಗೆ ಹೋಗಿ ಭಾರತೀ ಕೃಷ್ಣತೀರ್ಥರಿಗೆ ದತ್ತಿಗಳನ್ನು ಕೊಟ್ಟರೆಂದು ಶಾಸನಗಳು ತಿಳಿಸುತ್ತವೆ. ಈ ಶಾಸನಗಳ ಮಂಗಳಶ್ಲೋಕದಲ್ಲಿ "ವಿದ್ಯಾತೀರ್ಥಾಯ ಗುರವೇ ಪರಸ್ಮೈ ತೇಜಸೇ ನಮಃ" ಎಂದು ಹೇಳಿದೆ. ಈ ರೀತಿಯಲ್ಲಿ ಪರಬ್ರಹ್ಮವಾಚಕ ಶಬ್ದವನ್ನು ವಿದ್ಯಾತೀರ್ಥರ ಪರವಾಗಿ ಪ್ರಯೋಗಿಸಿರುವುದು ವಿಜಯನಗರದ ಭೂಪಾಲಕರು ಅವರಲ್ಲಿ ಇಟ್ಟಿದ್ದ ಅಲೌಕಿಕಪ್ರೇಮಕ್ಕೆ ಹಿರಿಯ ಸಾಕ್ಷಿಯಾಗಿದೆ. ಆ ತರುವಾಯ ಇದು ಇಕ್ಕೇರಿಯ ನಾಯಕರ ಕೃಪೆಗೆ ಈಡಾಯಿತು. ಅವರಲ್ಲಿ ಒಬ್ಬನಾದ ವೆಂಕಟಪ್ಪ ನಾಯಕನು ಇದನ್ನು ೧೬೨೧ರಲ್ಲಿ ಪುನರುದ್ಧಾರಮಾಡಿದನೆಂದು ಹೇಳಲ್ಪಟ್ಟಿದೆ. ಇದೇ ವಂಶಕ್ಕೆ ಸೇರಿದ ಮತ್ತೊಬ್ಬ ನಾಯಕನಾದ ಶಿವಪ್ಪನು, ಕೆಲವು ದುರಾತ್ಮರು ಮೋಸದಿಂದ ಅಪಹರಿಸಿದ್ದ ಭೂಮಿಕಾಣಿಗಳನ್ನು ೧೬೫೨ರಲ್ಲಿ ಹಿಂದಕ್ಕೆ ಕೊಟ್ಟನು. ಟಿಪ್ಪುವು ಮಠದ ಸ್ವಾಮಿಯವರಿಗೆ ಬರೆದ ಕೆಲವು ಕಾಗದಪತ್ರಗಳಿಂದ ಮರಾಟರು ೧೭೯೧ರಲ್ಲಿ ಪರಶುರಾಮ ಭಾವು ಎಂಬ ಸರದಾರನ ಕೈಕೆಳಗೆ ಶೃಂಗೇರಿಯನ್ನು ಮುತ್ತಿದರೆಂದೂ, ಈ ದುಷ್ಟರು ಮಠಕ್ಕೆ ನುಗ್ಗಿ ೬೦ ಲಕ್ಷ ರೂಪಾಯಿಗಳು ಬೆಲೆ ಬಾಳುವ ಸ್ವತ್ತುಗಳನ್ನು ಅಪಹರಿಸಿದ್ದಲ್ಲದೆ, ಶಾರದಾ ವಿಗ್ರಹವನ್ನು ಕೂಡ ಕಿತ್ತು ಹಾಕಿದರೆಂದೂ ತಿಳಿದುಬರುತ್ತದೆ.

ಶೃಂಗೇರಿ ಗ್ರಾಮದಲ್ಲಿ ಒಂದು ಉದ್ದವಾದ ಬೀದಿಯಿದೆ. ಅದು ಈಗಿನ ಮಲ್ಲಿಕಾರ್ಜುನ ದೇವಾಲಯವಿರುವ ಗುಡ್ಡವನ್ನು ಬಳಸಿಕೊಂಡು ಹೋಗುತ್ತದೆ.

ಮಠದ ಹತ್ತಿರ ಸುಮಾರು ಇಪ್ಪತ್ತು ವರ್ಷಗಳ ಹಿಂದೆ ಆಧುನಿಕ ರೀತಿಯಲ್ಲಿ ಕಟ್ಟಲ್ಪಟ್ಟ ಒಂದು ಶಿಲಾಗೃಹವಿದೆ. ಇದನ್ನು 'ಹೊಸಮಠ'ವೆಂದು ಕರೆಯುತ್ತಾರೆ. ಸ್ವಾಮಿಯವರು ಮಳೆಗಾಲದಲ್ಲಿ ಇಲ್ಲಿ ತಂಗಿ 'ಚಾತುರ್ಮಾಸ್ಯ' ವ್ರತವನ್ನು ಆಚರಿಸುತ್ತಾರೆ. ಇತರ ಕಾಲಗಳಲ್ಲಿ ನದಿಯ ಆಚೆ ದಡದಲ್ಲಿರುವ, ಊರಿನ ಗಲಿಬಿಲಿ ತಟ್ಟದ ದಿವ್ಯ ಭವನವೊಂದರಲ್ಲಿ ವಾಸಿಸುತ್ತಾ, ಪ್ರತಿ ಶುಕ್ರವಾರವೂ ಈ ದಡದಲ್ಲಿರುವ ವಿದ್ಯಾಶಂಕರ, ಶಾರದೆ, ಜನಾರ್ದನ ದೇವಾಲಯಗಳನ್ನು ಸಂದರ್ಶಿಸುತ್ತಾರೆ. ನದಿಯ ಆಚೆ ಇರುವ ಕಟ್ಟಡವು 'ನರಸಿಂಹ ವನ'ವೆಂಬ ಒಂದು ಉದ್ಯಾನದ ಮಧ್ಯದಲ್ಲಿದೆ. ಪ್ರಶಾಂತ ಮೌನಮುದ್ರಿತವಾದ ಈ ವನವು ಈಶ್ವರಚಿಂತನೆಗೆ ಅರ್ಹವಾದ ಸ್ಥಾನವಾಗಿದೆ. ಇಲ್ಲಿ ರುದ್ರಾಕ್ಷಮಾಲಾಮಂಡಿತವಾದ ಶ್ರೀ ಶಂಕರಾಚಾರ್ಯರ ಲೋಹದ ಪ್ರತಿಮೆಯನ್ನು ಪೂಜಿಸುತ್ತಾರೆ. ಇದು ಸುಮಾರು ಒಂದೂವರೆ ಅಡಿ ಎತ್ತರವಾಗಿದ್ದು, ಬಲಗೈಯಲ್ಲಿ 'ಚಿನ್ಮುದ್ರೆ'ಯನ್ನೂ, ಎಡಗೈಯಲ್ಲಿ 'ವರದ ಹಸ್ತ'ವನ್ನೂ ಪ್ರದರ್ಶಿಸುತ್ತಿದೆ. ೧೯೧೨ರಲ್ಲಿ ಪರಂಧಾಮವನ್ನೈದಿದ ಶ್ರೀ ಸಚ್ಚಿದಾನಂದ ಶಿವಾಭಿನವ ನೃಸಿಂಹಭಾರತೀ ಸ್ವಾಮಿಗಳ ಸ್ಮಾರಕವಾಗಿ ಉದ್ಯಾನದಲ್ಲಿ ಒಂದು ದೇವಾಲಯವನ್ನು ಕಟ್ಟಿಸಿ ಅಲ್ಲಿ ಅಮೃತಶಿಲೆಯಿಂದ ಮಾಡಿದ ಅವರ ಮೂರ್ತಿಯನ್ನು ಪ್ರತಿಷ್ಠಿಸಿದೆ. ಶ್ರೀಮಠವು ಸುಮಾರು ಐವತ್ತುಮಂದಿ ಸಚ್ಛಾತ್ರರಿಗೆ ಅನ್ನದಾನ ಮಾಡುವುದಲ್ಲದೆ, ಸ್ವಾಮಿಗಳೂ, ಇತರ ಪಂಡಿತರೂ ಅವರಿಗೆ ಸಾಹಿತ್ಯ, ತರ್ಕ, ವ್ಯಾಕರಣ, ವೇದಾಂತಗಳಲ್ಲಿ ಪಾಠಪ್ರವಚನಗಳನ್ನು ನಡೆಸುವರು.

ಶ್ರೀ ವಿದ್ಯಾಶಂಕರ ದೇವಾಲಯ


ಶೃಂಗೇರಿಯಲ್ಲಿ ಅಲ್ಲಿರುವ ಜೈನಬಸ್ತಿಯನ್ನೂ ಸೇರಿಸಿಕೊಂಡು ನಲವತ್ತು ಗುಡಿಗಳಿವೆ. ಇವುಗಳಲ್ಲನೇಕ ಕಟ್ಟಡಗಳು ವಾಸಿಸುವ ಮನೆಗಳ ಅಂಗಳದಲ್ಲಿದ್ದು ಹೆಂಚಿನ ಹೊದಿಕೆಯಿಂದ ಕೂಡಿವೆ. ಇವು ಸರ್ಕಾರದಿಂದ 'ಇನಾಮತಿ'ಯನ್ನು ಪಡೆದುಕೊಂಡಿವೆ.

ಈ ಗುಡಿಗಳ ಪೈಕಿ ವಿದ್ಯಾಶಂಕರ ದೇವಾಲಯವು ಕಲಾದೃಷ್ಟಿಯಿಂದ ಅತ್ಯುತ್ತಮವಾದುದೆಂದು ಹೇಳಬಹುದು. ಇದು ಒಳ್ಳೆಯ ಆಯಕಟ್ಟಾಗಿಯೂ, ಹೊಂದಿಕೆಯಾಗಿಯೂ ಕಟ್ಟಲ್ಪಟ್ಟು ಹೆಚ್ಚು ಹೃದಯಂಗಮವಾಗಿದೆ. ನಮ್ಮ ಸಂಸ್ಥಾನದೊಳಗೆ ದ್ರಾವಿಡರೀತಿಯಲ್ಲಿ ನಿರ್ಮಿತವಾದ ಅತಿ ವಿಸ್ತಾರವೂ ವಿಭೂಷಿತವೂ ಆದ ಕಟ್ಟಡಗಳಲ್ಲಿ ಇದು ಒಂದಾಗಿದೆ. ಈ ದೇವಾಲಯವು ಶಾಲಿವಾಹನಶಕ ೧೨೬೮–೬೯ನೆಯ ಧಾತು ಸಂವತ್ಸರದಲ್ಲಿ ವಿಜಯನಗರದ ಅರಸರಿಂದ ಕಟ್ಟಲ್ಪಟ್ಟಿತೆಂದೂ, ವಿದ್ಯಾತೀರ್ಥ ಶ್ರೀಪಾದರವರು ೧೨೬೬ನೆಯ ಶ್ರೀಮುಖ ಸಂವತ್ಸರದ ಕಾರ್ತಿಕ ಶುಕ್ಲ ಸಪ್ತಮಿ

ಯಲ್ಲಿ ಲಂಬಿಕಾಯೋಗ ನಿರತರಾದಂತೆಯೂ ಶ್ರೀಮಠದ ಕೆಲವು ಕಡತಗಳಿಂದ ತಿಳಿದುಬರುತ್ತದೆ. ಆದರೆ ಈಚೆಗೆ ಉಪಲಬ್ಧವಾದ ಒಂದು ಶಾಸನದಿಂದ ಇದು ಕ್ರಿ.ಶ. ೧೩೫೬ ರಲ್ಲಿ ಕಟ್ಟಲ್ಪಟ್ಟಿತೆಂದು ಉಲ್ಲೇಖಿಸಲು ಆಧಾರವಿದೆ.

ಶೃಂಗೇರಿಯಲ್ಲಿ ವಿದ್ಯಾಶಂಕರ ದೇವಾಲಯವು ರೂಪಿತವಾಗಿರುವ ಪ್ರದೇಶವು ಸೌಂದರ್ಯಲಕ್ಷ್ಮಿಯ ನೆಲವೀಡಾಗಿದೆ. ಸಿಡಿದಾಗಿ ಹಬ್ಬಿರುವ ಗುಡ್ಡಗಳ ಓರೆಯಿಂದ ಧುಮುಕಿ ಕ್ರಾಂತಿಯನ್ನು ವಿರಚಿಸುವ ಜಲಸುಂದರಿ ತುಂಗೆ ಇಲ್ಲಿ ಶಾಂತಿಯನ್ನು ನಟಿಸುತ್ತಾ, ಮೊದಲು ಪಶ್ಚಿಮ, ಆ ಮೇಲೆ ಉತ್ತರ, ತರುವಾಯ ಪೂರ್ವಗಾಮಿನಿಯಾಗಿ ಸಾಗುತ್ತಾಳೆ. ನದಿಯು ಪೂರ್ವವಾಹಿನಿಯಾಗಿರುವ ಕಡೆ ಪಾರ್ಶ್ವ ಭೂಮಿಯು ಕಡಿದಾಗಿಯೂ ಎತ್ತರವಾಗಿಯೂ ಇದ್ದು, ಅದರ ನೆತ್ತಿಯಲ್ಲಿ ವಿದ್ಯಾಶಂಕರ ದೇವಾಲಯವು ಕಲೆಯ ವೈಜಯಂತಿಯಂತೆ ಧೀರಗಂಭೀರವಾಗಿ ನಿಂತಿದೆ. ನಿರ್ಮಲ ಸುನೀಲವ್ಯೋಮ, ಶ್ಯಾಮಲ ಕೋಮಲ ಸುಂದರ ವನರಾಜಿ, ದಿಗಂತ ವಿಶ್ರಾಂತ ಉತ್ತುಂಗ ಶೃಂಗ ಪರಿಶೋಭಿತ ಮಹಾ ಅಚಲಪಂಕ್ತಿ, ಚಿರತರಂಗಿಣಿ ತುಂಗೆಯ ಅನಂತ ಸಲಿಲಯಾತ್ರೆ ಮುಂತಾದ ನೂರಾರು ಕವನ ಚಿತ್ರಗಳಿಂದ ಈ ಎಡೆಯು ಪ್ರಕೃತಿದೇವಿಯ ಲೀಲಾನಾಟ್ಯರಂಗವಾಗಿ ಶೋಭಿಸುತ್ತಿದೆ.

ದೇವಾಲಯದ ಬಾಹ್ಯದರ್ಶನದಿಂದ ಇದು ಹೊಯ್ಸಳ ರೀತಿಯ ಕಟ್ಟಡಗಳ ವಿನ್ಯಾಸವನ್ನು ಅನುಸರಿಸುವಂತೆ ಭಾಸವಾಗುತ್ತದೆ. ಆದರೆ ಇದರ ಹೊರಭಾಗವನ್ನು ಸೂಕ್ಷ್ಮವಾಗಿ ಪರಿಶೀಲಿಸಿ, ಒಮ್ಮೆ ಒಳಹೊಕ್ಕು ನೋಡಿದರೆ, ಇದು ದ್ರಾವಿಡ ರೀತಿಯಲ್ಲಿ ನಿರ್ಮಿತವಾದ ಕಟ್ಟಡವೆಂಬುದು ಸುಲಭವಾಗಿ ಮನದಟ್ಟಾಗುತ್ತದೆ. ಕ್ರಿ.ಶ. ೧೪ನೆಯ ಶತಮಾನದಿಂದೀಚೆಗೆ ಹೊಯ್ಸಳ ರೀತಿಯಲ್ಲಿ ಕಟ್ಟಲ್ಪಟ್ಟ ದೇವಸ್ಥಾನವು ತಿಳಿದುಬಂದಿಲ್ಲವಾಗಿ, ಹೊಯ್ಸಳರ ಪ್ರಭುತ್ವದೊಡನೆ ಈ ಪದ್ಧತಿಯು ಕೊನೆಗಂಡಿರಬೇಕು. ದೇವಾಲಯದ ವಿನ್ಯಾಸವು ಬಹು ಅಪೂರ್ವವಾದುದು. ಭರತಖಂಡದಲ್ಲಿ ಅರ್ಧವರ್ತುಲಾಕಾರದ ಕಟ್ಟಡಗಳು ಎಲ್ಲೋ ಕೆಲವು ಇವೆ. ಮೌರ್ಯರ ಕಾಲದ ಕೆಲವು ಬೌದ್ಧ ಚೈತ್ಯಗಳು, ಕಾರ್ಲೆ, ಅಜಂತ, ಕಾನ್ಹೇರಿ ಮತ್ತು ಎಲ್ಲೋರದ ಕೆಲವು ಗುಹಾಲಯಗಳು, ಕ್ರಿ.ಶ. ೬ನೆಯ ಶತಮಾನಕ್ಕೆ ಸೇರಿದ ಐಹೊಳೆಯ ವಿಷ್ಣುದೇವಾಲಯ—ಇವುಗಳಲ್ಲಿ ಮಾತ್ರ ಈ ಲಕ್ಷಣವು ಕಂಡುಬರುತ್ತದೆ. ಹೀಗಿರುವಲ್ಲಿ ಇದು ಪೂರ್ವ-ಪಶ್ಚಿಮ ಭಾಗದಲ್ಲಿ ಅರ್ಧವರ್ತುಲಾಕಾರವನ್ನು ಹೊಂದಿ, ಈ ಅರ್ಧವರ್ತುಲಗಳನ್ನು ಆಯತಚತುರಸ್ರಾಕಾರದ (Rectangular) ಬಂಡೆಯಿಂದ ಕೂಡಿಸಿ ಕಟ್ಟಿರುವ ಆಕಾರವು ದೀರ್ಘವರ್ತುಲವಾಗಿದೆ. ಇದು ಕ್ರಿ.ಶ. ೯೮ರಲ್ಲಿ ರೋಮನ್ ಚಕ್ರವರ್ತಿಯಾದ ಟ್ರಾಜಾನನಿಂದ ಕಟ್ಟಲ್ಪಟ್ಟ 'ಬಾಸಲಿಕಾ' ಎಂಬ ಕಟ್ಟಡದ



ವಿದ್ಯಾಶಂಕರ ದೇವಾಲಯದ ತಲವಿನ್ಯಾಸ

(ಡೈರೆಕ್ಟರ್ ಆಫ್ ಆರ್ಕಿಯಾಲಜಿ, ಮೈಸೂರು, ಅವರ ಕೃಪೆಯಿಂದ)

ವಿನ್ಯಾಸವನ್ನು ಹೋಲುತ್ತದೆ. ಈ ದೃಷ್ಟಿಯಿಂದ ಅಖಿಲ ಹಿಂದೂಸ್ಥಾನದಲ್ಲೇ ಇದಕ್ಕೆ ಸಮನಾದ ಮತ್ತೊಂದು ಭವನವಿಲ್ಲವೆನ್ನಬಹುದು.

ದೇವಾಲಯವು ಕಟ್ಟಡದ ವಿನ್ಯಾಸವನ್ನೇ ಎಡೆಬಿಡದೆ ಅನುಸರಿಸಿಕೊಂಡು ಬರುವ ಸುಮಾರು ನಾಲ್ಕು ಅಡಿ ಎತ್ತರವಾದ 'ಜಗತಿ'ಯ ಮೇಲೆ ಪೂರ್ವಾಭಿಮುಖವಾಗಿ ನಿಂತಿದೆ. ಇದರಲ್ಲಿ ಒಂದು ಗರ್ಭಗುಡಿ, ಒಂದು ಸುಕನಾಸಿ, ಅದನ್ನು ಹೊಂದಿಕೊಂಡಿರುವ ಅರ್ಧವರ್ತುಲಾಕಾರದ ಪ್ರದಕ್ಷಿಣೆ, ಅದಕ್ಕೆ ಸೇರಿದಂತೆ ನವರಂಗದ ಚೌಕವೂ ಇವೆ. ಹೀಗೆ ಇದು ಚಾಲುಕ್ಯ ಮತ್ತು ದ್ರಾವಿಡ ರೀತಿಗಳ ಮಧುರಸಂಗಮವಾಗಿ ಶೋಭಿಸುತ್ತಲಿದೆ.

ದೇವಾಲಯವನ್ನು ಪ್ರವೇಶಿಸಲು ಪೂರ್ವ ಮತ್ತು ದಕ್ಷಿಣೋತ್ತರ ಭಾಗಗಳಲ್ಲಿ ಮೂರು ದ್ವಾರಗಳಿವೆ. ಹೀಗೆಯೇ ಪ್ರದಕ್ಷಿಣೆಗೂ ಮೂರು ಬಾಗಿಲುಗಳಿವೆ. ಆದರೆ ಇವು ಗರ್ಭಗೃಹದ ಹೊರಗೋಡೆಯಲ್ಲಿರುವ ಗೂಡುಗಳಿಗೆ ಅಭಿಮುಖವಾಗಿವೆ. ಈ ಗೂಡುಗಳ ಪೈಕಿ ದಕ್ಷಿಣ ದಿಕ್ಕಿನಲ್ಲಿರುವುದರಲ್ಲಿ ಬ್ರಹ್ಮಸರಸ್ವತಿಯರೂ, ಪಶ್ಚಿಮದಲ್ಲಿ ಲಕ್ಷ್ಮೀನಾರಾಯಣಮೂರ್ತಿಯೂ, ಉತ್ತರದಲ್ಲಿ ಉಮಾಮಹೇಶ್ವರ ವಿಗ್ರಹವೂ ಇವೆ. ಈ ಆರು ದ್ವಾರಗಳ ಎರಡು ಪಕ್ಕಗಳಲ್ಲಿಯೂ ಸುಂದರವಾದ ದ್ವಾರಪಾಲಕ ವಿಗ್ರಹಗಳಿವೆ. ಇವುಗಳಲ್ಲಿ ಎರಡು ಶೈವ, ಎರಡು ಶಾಕ್ತ, ಎರಡು ವೈಷ್ಣವ. ಬಾಗಿಲುವಾಡಗಳ ಮೇಲೆ ಅಂದವಾದ ಬೇಲೂ, ಪುಷ್ಪತೋರಣಗಳೂ ಕೆತ್ತಲ್ಪಟ್ಟಿವೆ. ಪ್ರತಿಯೊಂದು ಬಾಗಿಲುವಾಡದ ಮೇಲೂ ಮಕರದ ಮೇಲೆ ಕುಳಿತಿರುವ ನದೀದೇವತೆಯ (ಗಂಗಾದೇವಿ ?) ವಿಗ್ರಹವಿದೆ. ದ್ವಾರಮುಖಗಳಲ್ಲಿ ಗಜಲಕ್ಷ್ಮಿಯನ್ನು ಕೆತ್ತಿದೆ. ಪ್ರತಿಯೊಂದು ದ್ವಾರದ ಮುಂದೂ ಹತ್ತಿಹೋಗಲು ಮೆಟ್ಟಿಲುಗಳಿವೆ. ಇವುಗಳ ಎಡಬಲ ಪಾರ್ಶ್ವಗಳಲ್ಲಿ ಸಿಂಹಗಳೂ, ಅವುಗಳ ಬಾಯಿಂದ ಹೊರಡುತ್ತಿರುವ ಲತೆಗಳೂ ತೋರಿಸಲ್ಪಟ್ಟಿವೆ.

ಗೋಡೆಗಳ ಹೊರಮುಖದಲ್ಲಿ ಸುತ್ತಲೂ ಒಂದರಮೇಲೊಂದರಂತೆ ಎಂಟು ಸಾಲುಳ್ಳ ಚಿತ್ರಪಟ್ಟಿಕೆ ಇದೆ. ಈ ಚಿತ್ರಪಟ್ಟಿಕೆಯ ಮೇಲೆ ದೊಡ್ಡ ವಿಗ್ರಹಗಳಿದ್ದು ಅವುಗಳ ಮಸ್ತಕವನ್ನು ರಮ್ಯವಾದ ತೋರಣಗಳು ಅಲಂಕರಿಸಿವೆ. ಆದರೆ ಇವುಗಳ ಪೈಕಿ ಬಹು ಮುಖ್ಯವಾದುವು ಗೂಡುಗಳಲ್ಲಿ ಪ್ರತಿಷ್ಠಿಸಲ್ಪಟ್ಟು ಆ ಗೂಡುಗಳ ತಲೆಯಮೇಲೆ ಮನೋಹರವಾಗಿ ಕೆತ್ತಲ್ಪಟ್ಟ ಗೋಪುರಗಳಿವೆ. ಈ ಗೋಪುರಗಳು ಸುಂದರವಾದ ಅರೆಗಂಬಗಳ ಮೇಲೆ ನಿಂತಿವೆ. ಗೋಡೆಗಳು ಹಿಂದಕ್ಕೂ ಮುಂದಕ್ಕೂ ಹೋಗುವಂತೆ ಕಟ್ಟಿರುವ ರೀತಿಯೂ ನೆರಳೂ ಬೆಳಕೂ ಬೀಳುವಂತೆ ಮಾಡಿರುವ ಏರ್ಪಾಡೂ ಬಹು ಕೌಶಲಪ್ರದವಾಗಿವೆ.

ಚಿತ್ರಪಟ್ಟಿಕೆಗಳು

ಮೊದಲನೆಯ ಚಿತ್ರಪಟ್ಟಿಕೆ:

ಅಶ್ವಪಂಕ್ತಿ—ಸಾಲಂಕೃತವಾದ ತುರಗಗಳನ್ನು ಅಶ್ವಾರೋಹಿಗಳು ಕರೆದೊಯ್ಯುತ್ತಿದ್ದಾರೆ. ಅಲ್ಲಲ್ಲಿ ಸರ್ಪ, ಉಷ್ಟ್ರ, ವ್ಯಾಘ್ರ, ಸಿಂಹ, ಹರಿಣ ಮುಂತಾದ ಮೃಗಗಳು ಕಂಡುಬರುತ್ತವೆ.

ಎರಡನೆಯ ಚಿತ್ರಪಟ್ಟಿಕೆ:

ಗಜಪಂಕ್ತಿ—ಅಲಂಕಾರಯುಕ್ತವಾದ ನಾನಾ ಭಾವ ಭಂಗಿಗಳಲ್ಲಿರುವ ಗಜಸಾಲು.

ಮೂರನೆಯ ಚಿತ್ರಪಟ್ಟಿಕೆ:

ಹೂಗೊಂಚಲಿನಿಂದ ಕೂಡಿದ ಹಗ್ಗದ ಹೆಣಿಕೆ. ಈ ಹೆಣಿಕೆಗಳ ಮಧ್ಯೆ ಮಣಿಗಳನ್ನು ಕೆತ್ತಿದೆ.

ನಾಲ್ಕನೆಯ ಚಿತ್ರಪಟ್ಟಿಕೆ:

ಸಿಂಹಗಳ ಬಳಗ, ಅಲ್ಲಲ್ಲಿ ಯಕ್ಷ, ಯಾಳಿ, ಸರ್ಪ, ವಾನರ, ವರಾಹ ಮುಂತಾದುವು ಕಂಡುಬರುತ್ತವೆ.

ಐದನೆಯ ಚಿತ್ರಪಟ್ಟಿಕೆ:

ಲೋವೆಯಾಕಾರದ ಈ ಚಿತ್ರಪಟ್ಟಿಕೆಯು ಅಂಚಿನಲ್ಲಿ ಸಣ್ಣ ಸಣ್ಣ ಗೋಳಾಕೃತಿಗಳಿಂದ ಕೂಡಿದೆ. ಅದರ ಮುಖದಮೇಲೆ 'ಕೀರ್ತಿಮುಖ'ಗಳ ಸಾಲು ಕೆತ್ತಲ್ಪಟ್ಟಿದೆ. ಈ ಕೀರ್ತಿಮುಖಗಳ ಕೆಳಗೆ ನಾಗಿಣಿಯರು, ಯಕ್ಷರು, ವಾನರಗಳು, ಆಸನಾರೂಢರಾದ ಋಷಿಗಳು, ಮಂಡೂಕಗಳು, ಶುಕ, ಸರ್ಪ ಮತ್ತು ವಾನರ ಸಹಿತನಾದ ಗಾರುಡಿಗ ಮುಂತಾದುವು ಕಂಡುಬರುತ್ತವೆ.

ಆರನೆಯ ಚಿತ್ರಪಟ್ಟಿಕೆ:

ಪುರಾಣೇತಿಹಾಸಗಳನ್ನು ಕೆತ್ತಿರುವ ಈ ಚಿತ್ರಪಟ್ಟಿಕೆಯ ವಸ್ತು ಬಹು ಸ್ವಾರಸ್ಯವಾದದ್ದು. ಇದರಲ್ಲಿ ಶ್ರೀ ಶಂಕರಾಚಾರ್ಯರ ಜೀವಿತದಲ್ಲಿನ ಮುಖ್ಯ ಘಟನೆಗಳು ಚಿತ್ರಿತವಾಗಿವೆಯೆಂದು ಸ್ಥಳೀಯ ನಿವಾಸಿಗಳ ಅಭಿಮತ. ಆದರೆ ಇಲ್ಲಿ ಅರ್ಜುನನು ಅಶ್ವಮೇಧಯಾಗದ ಕುದುರೆಯನ್ನು ಹಿಂಬಾಲಿಸಿ ಸಂರಕ್ಷಿಸಿದ ರಮ್ಯ ಕಥಾನಕವು ಉಲ್ಲೇಖಿಸಲ್ಪಟ್ಟಿದೆಯೆಂದು ತೋರುತ್ತದೆ. ಅದು ಪೂರ್ವದಿಂದ ಪ್ರಾರಂಭಿಸಿ ಕ್ರಮವಾಗಿ ಹೀಗಿದೆ:

ಆಗ್ನೇಯ :

(೧) ಭರ್ಜಿ, ಬಿಲ್ಲು, ಜಾಗಟೆ, ನಗಾರಿ, ಭೇರಿಗಳನ್ನು ಹೊತ್ತ ಭಟರು ಅಶ್ವಮೇಧ ವಾಜಿಯೊಂದನ್ನು ಕರೆದೊಯ್ಯುತ್ತಿದ್ದಾರೆ. ಕೆಲವರು ತುತ್ತೂರಿಯನ್ನು ಊದುತ್ತಿದ್ದಾರೆ. ಇತರರು ಶಂಖವನ್ನು ಧ್ವನಿಗೈಯುತ್ತಿದ್ದಾರೆ. ಒಬ್ಬ ರಾಜಪುರುಷನು ಪಲ್ಲಕ್ಕಿಯಲ್ಲಿ ಕುಳಿತು ಆ ತುರಗವನ್ನು ಹಿಂಬಾಲಿಸುತ್ತಿದ್ದಾನೆ. ಅವನ ಮೇಲೆ ಶ್ವೇತ ಛತ್ರವು ಎತ್ತಿಹಿಡಿಯಲ್ಪಟ್ಟಿದೆ. ವಂದಿಮಾಗಧರು ಅವನ ಬಿರುದುಗಳನ್ನು ಉಗ್ಗಡಿಸುತ್ತಿದ್ದಾರೆ. ಗಜಾರೂಢಳಾದ ಒಬ್ಬ ರಾಜಕುಮಾರಿಯೂ, ಅಶ್ವಾರೋಹಿಯಾದ ಒಬ್ಬ ರಾಜಕುಮಾರನೂ ಪರಿವಾರ ಸಮೇತರಾಗಿ ಅವನನ್ನು ಅನುಸರಿಸುತ್ತಿದ್ದಾರೆ.

ದಕ್ಷಿಣದ ಗೋಡೆ :

ಮೆರವಣಿಗೆಯು ಅಟ್ಟಹಾಸದಿಂದ ಮುಂದುವರಿಯುತ್ತದೆ. ರಾಜವೀರನನ್ನು ಒಂದು ಗುಂಪು ಎದುರುಗೊಳ್ಳುತ್ತಿದೆ. ಅದರಲ್ಲಿ ಪುರುಷರೂ ಸ್ತ್ರೀಯರೂ, ಆಯುಧ ಪಾಣಿಗಳಾದ ಭಟರೂ, ಗಾಯಕರೂ ಕಾಣಬರುತ್ತಾರೆ. ಅವನು ಸಿಂಹಾಸನಾಸೀನನಾಗಿದ್ದಾನೆ. ಸೇವಕರು ಅವನ ಪಾದಗಳನ್ನು ಒತ್ತುತ್ತಿದ್ದಾರೆ. ವೀರನು ತನ್ನ ಧನುರ್ಬಾಣಗಳನ್ನು ಒತ್ತಟ್ಟಿಗಿಟ್ಟು ಅಷ್ಟದಿಕ್ಪಾಲಕರಿಂದ ಸೇವಿಸಲ್ಪಡುತ್ತಿರುವ ಮೂರು ಮುಖವುಳ್ಳ ಒಬ್ಬ ದೇವನನ್ನು (ಅಗ್ನಿ ಅಥವಾ ಬ್ರಹ್ಮ) ಪ್ರಾರ್ಥಿಸುತ್ತಿದ್ದಾನೆ. ವೀರನು ಋಷಿಶಿಷ್ಯರಿಂದ ಪರಿವೃತರಾದ ಬ್ರಹ್ಮ ಸರಸ್ವತಿಯರಿಗೆ ಸಾಷ್ಟಾಂಗ ಪ್ರಣಾಮವನ್ನು ಮಾಡುತ್ತಿದ್ದಾನೆ. ಒಬ್ಬ ರಮಣಿಯು ಬ್ರಹ್ಮನನ್ನು ಮೆಚ್ಚಿಸಿ ವರವನ್ನು ಪಡೆಯುತ್ತಾಳೆ. ಇದರಿಂದ ಆನಂದಿತಳಾದ ಆಕೆಯು ರುದ್ರವೀಣೆಯನ್ನು ನುಡಿಸುತ್ತಿದ್ದಾಳೆ. ವೀರನು ಯಾಗದ ಕುದುರೆಯನ್ನು ಹಿಂಬಾಲಿಸುತ್ತಾನೆ. ಅದು ಒಂದು ಗುಡ್ಡವನ್ನು ಅಡರುತ್ತದೆ. ಲಿಂಗವೊಂದು ಅರ್ಚಿಸಲ್ಪಡುತ್ತಿದೆ. ಪರಾಜಿತನಾದ ವೀರನನ್ನು ಮೇಲೆ ಹೇಳಿದ ರಮಣಿಯು ಪಾನೀಯದಿಂದ ಚೇತನಗೊಳಿಸುತ್ತಾಳೆ. ವೀರನು ಆಕೆಯನ್ನು ವಿವಾಹವಾಗುತ್ತಾನೆ.

ನೈಋತ್ಯ :

ಲಿಂಗದ ಪ್ರಸಾದವನ್ನು ಸ್ವೀಕರಿಸಿ, ಅವರು ಅದೇ ಕುದುರೆಯ ಮೇಲೆ ಕುಳಿತು ನಕುಲದಿಂದೊಡಗೂಡಿದ ಒಬ್ಬ ವನಿತೆಯನ್ನು, ಪ್ರಾಯಶಃ ಪಾರ್ವತಿಯನ್ನು, ಎದುರುಗೊಳ್ಳಲು ಸಾಗುತ್ತಾರೆ. ಅವರನ್ನು ಒಬ್ಬ ಅರಸನು ಭಕ್ತಿಯಿಂದ ಆದರಿಸಿ ದೀರ್ಘದಂಡ ಪ್ರಣಾಮವನ್ನು ಮಾಡುತ್ತಿದ್ದಾನೆ. ಅವನು ಸತಿಪತಿಯರನ್ನು ಪಲ್ಲಕ್ಕಿಯಲ್ಲಿ ಕುಳ್ಳಿರಿಸಿ ಅರಮನೆಗೆ ಬಿಜಮಾಡಿಸುತ್ತಿದ್ದಾನೆ.

ವಾಯುವ್ಯ :

ಅರಮನೆಯಲ್ಲಿ ಅವರನ್ನು ರಾಜರಾಣಿಯರು ಸತ್ಕರಿಸಿ ಆಶೀರ್ವದಿಸುತ್ತಿದ್ದಾರೆ. ಶತ್ರುಗಳ ಖಡ್ಗಕ್ಕೆ ತುತ್ತಾಗಲಿದ್ದ ನೂತನ ದಂಪತಿಗಳನ್ನು ವಿಷ್ಣುವು ಸಂರಕ್ಷಿಸುತ್ತಾನೆ.

(೨) ಅರ್ಜುನನು ಇಂದ್ರಕೀಲದ ಋಷಿಗಳೊಡನೆ ತಪಸ್ಸನ್ನು ಆಚರಿಸುತ್ತಿದ್ದಾನೆ. ಶಿವನು ಕಿರಾತವೇಷಧಾರಿಯಾಗಿ ವರಾಹವೊಂದನ್ನು ಅಟ್ಟಿಸಿಕೊಂಡು ಬರುತ್ತಿದ್ದಾನೆ. ಅರ್ಜುನನು ಕಿರಾತನೊಡನೆ ಹೋರಾಡುತ್ತಿದ್ದಾನೆ. ಇಬ್ಬರೂ ಬಿಲ್ಲು, ಕತ್ತಿ, ಬಂಡೆಗಳನ್ನು ಹಿಡಿದು ಯುದ್ಧಮಾಡುತ್ತಿದ್ದಾರೆ.

ಉತ್ತರದ ಗೋಡೆ :

ಅರ್ಜುನನು ಶಬರನೊಡನೆ ಮುಷ್ಟಿಯುದ್ಧ, ಮಲ್ಲಯುದ್ಧಗಳನ್ನು ಮಾಡುತ್ತಿದ್ದಾನೆ. ಪಾರ್ವತಿಯು ಕುತೂಹಲಾವಿಷ್ಟಳಾಗಿ ಈಕ್ಷಿಸುತ್ತಿದ್ದಾಳೆ.

ಸೋತ ಅರ್ಜುನನು ಲಿಂಗವೊಂದನ್ನು ಪುಷ್ಪಗಳಿಂದ ಅರ್ಚಿಸುತ್ತಿದ್ದಾನೆ. ಬೇಡಬೇಡಿತಿಯರು ಶಿವಪಾರ್ವತಿಯರೆಂದು ಅರಿತು ಸಾಷ್ಟಾಂಗ ಪ್ರಣಾಮವನ್ನು ಮಾಡುತ್ತಿದ್ದಾನೆ.

ಗಣವೃಂದದಿಂದ ಪರಿವೃತರಾದ ಉಮಾಮಹೇಶ್ವರರು ಒಡ್ಡೋಲಗದಲ್ಲಿ ಕುಳಿತು ಅರ್ಜುನನಿಗೆ ಪಾಶುಪತಾಸ್ತ್ರವನ್ನು ಅನುಗ್ರಹಿಸುತ್ತಿದ್ದಾರೆ.

(೩) ಶ್ರೀ ಶಂಕರಾಚಾರ್ಯರು ತಮ್ಮ ಶಿಷ್ಯರಿಗೆ ಬೋಧಿಸುತ್ತಿದ್ದಾರೆ. ಅವರು ಹಾರವನ್ನೂ, ಮೊನೆಯಾದ ಕಿರೀಟವನ್ನೂ ಧರಿಸಿ ಎತ್ತರವಾದ ಆಸನದಲ್ಲಿ ಮಂಡಿಸಿದ್ದಾರೆ. ಅವರ ಬಲಗೈ 'ಚಿನ್ಮುದ್ರೆ'ಯನ್ನು ತಳೆದಿದೆ; ಎಡಗೈಯಲ್ಲಿ 'ಪುಸ್ತಕ'ವನ್ನು ಹಿಡಿದಿದ್ದಾರೆ. ಅವರ ಎಡಪಕ್ಕದಲ್ಲಿ ಇಬ್ಬರು, ಬಲಪಕ್ಕದಲ್ಲಿ ಇಬ್ಬರು ಶಿಷ್ಯರು ಕುಳಿತಿದ್ದಾರೆ. ಇದಲ್ಲದೆ ಆಚಾರ್ಯರ ಬಲಪಾರ್ಶ್ವದಲ್ಲಿ ಹನ್ನೊಂದು ಜನ, ಎಡಪಾರ್ಶ್ವದಲ್ಲಿ ಐದು ಜನ ಇತರ ಶಿಷ್ಯರು ಹೊತ್ತಿಗೆಗಳನ್ನು ಹಿಡಿದು ಕುಳಿತಿದ್ದಾರೆ. ಇವರ ಮಗ್ಗುಲಲ್ಲಿರುವ ವ್ಯಾಸಪೀಠಗಳ ಮೇಲೆ ಕೆಲವು ಗ್ರಂಥಗಳು ಇಡಲ್ಪಟ್ಟಿವೆ. ಒಬ್ಬ ಗೃಹಸ್ಥವಿದ್ವಾಂಸನು ಬೋಧಿಸುತ್ತಿದ್ದಾನೆ. ಕೆಲವು ಮಂದಿ ರಾಜಪುರುಷರು ಅದನ್ನು ಆಲಿಸುತ್ತಿದ್ದಾರೆ ಅಥವಾ ನಮಸ್ಕರಿಸುತ್ತಿದ್ದಾರೆ.

(೪) ತಾಳಪತ್ರದ ಗ್ರಂಥವೊಂದು ಅರ್ಪಿಸಲ್ಪಡುತ್ತಿದೆ.

(೫) ವಿವಿಧಾಸನಗಳಲ್ಲಿರುವ ಯೋಗಿಗಳೂ, ಕೂರ್ಮ, ವರಾಹ, ಮತ್ಸ್ಯ, ಸಿಂಹ, ಹರಿಣ, ಮಕರ, ಸರ್ಪ, ವೃಶ್ಚಿಕ, ಇವುಗಳ ಮೇಲೆ ಕುಳಿತಿರುವ ಋಷಿಗಳೂ ತೋರಿಸಲ್ಪಟ್ಟಿದ್ದಾರೆ.

ಏಳನೆಯ ಚಿತ್ರಪಟ್ಟಿಕೆ:

ಇದರ ಮುಖದ ಮೇಲೆ ಪುಷ್ಪತೋರಣವು ಕೆತ್ತಲ್ಪಟ್ಟಿದೆ. ದ್ವಾರಗಳ ಬಳಿ ವಿವಿಧ ರೀತಿಯ ಶ್ರೀಚಕ್ರಗಳು ತೋರಿಸಲ್ಪಟ್ಟಿವೆ.

ಎಂಟನೆಯ ಚಿತ್ರಪಟ್ಟಿಕೆ:

ಇದರಲ್ಲಿ ಯಕ್ಷರೂ, ನಾನಾ ಭಾವ ಭಂಗಿಯಲ್ಲಿರುವ ನರ್ತಕರೂ ತೋರಿಸಲ್ಪಟ್ಟಿದ್ದಾರೆ.

ದೊಡ್ಡ ವಿಗ್ರಹಗಳು

ಆಗ್ನೇಯ:

(೧) ಇಂದ್ರ (ಅಭಯ, ಕಿಗ್ಗತ್ತಿ, ಕಠಾರಿ, ದಾನ), ಪೀಠದ ಮೇಲೆ ಆನೆಯು ಕೆತ್ತಲ್ಪಟ್ಟಿದೆ.

(೨) ನಾಲ್ಕು ಕೈಗಳುಳ್ಳ ಪುರುಷವಿಗ್ರಹ (ಇದು ಎರಡು ಕೈಗಳಲ್ಲಿ ಕಲಶವನ್ನೂ ಅಕ್ಷಮಾಲೆಯನ್ನೂ ಹಿಡಿದುಕೊಂಡಿದೆ. ಉಳಿದ ಎರಡು ಕೈಗಳ ಪೈಕಿ, ಒಂದರ ಲಾಂಛನವು ಕೆತ್ತಲ್ಪಟ್ಟಿಲ್ಲ; ಮತ್ತೊಂದು ಕೈಯನ್ನು ತೊಡೆಯ ಮೇಲೆ ಇಟ್ಟುಕೊಂಡಿದೆ). ಧನ್ವಂತರಿ?

(೩) ಕೋದಂಡರಾಮ.

(೪) ವ್ಯಾಸ—ವಿಗ್ರಹವು ಮೊನೆಯಾದ ಕಿರೀಟವನ್ನು ಧರಿಸಿದೆ. ಇದರ ಎರಡು ಕೈಗಳ ಪೈಕಿ, ಒಂದು 'ಚಿನ್ಮುದ್ರೆ'ಯನ್ನು ಪ್ರದರ್ಶಿಸುತ್ತಿದೆ. ಇನ್ನೊಂದು 'ಕಟಿಹಸ್ತ'.

(೫) ಶಿವ (ಸ್ಥಾನಕಮೂರ್ತಿ. ಅಭಯ, ಪರಶು, ಹರಿಣ, ದಾನ). ಪೀಠದ ಮೇಲೆ ವೃಷಭವು ಕೆತ್ತಲ್ಪಟ್ಟಿದೆ.

(೬) ಭೈರವ—ಇದು ನಗ್ನವಾಗಿದ್ದು, ಸರ್ಪಗಳನ್ನು ಧರಿಸಿದೆ. ಇದು ಒಂದು ಕರದಲ್ಲಿ 'ದಂಡ'ವನ್ನೂ, ಇನ್ನೊಂದು ಕರದಲ್ಲಿ 'ಕಪಾಲ'ವನ್ನೂ ಹಿಡಿದುಕೊಂಡಿದೆ. ಪೀಠದ ಮೇಲೆ ವೃಶ್ಚಿಕವು ಕೆತ್ತಲ್ಪಟ್ಟಿದೆ.

(೭) ಏಕಮುಖಬ್ರಹ್ಮ ಅಥವಾ ನಾಲ್ಕು ಕೈಗಳುಳ್ಳ ಪ್ರಜಾಪತಿ (ಅಭಯ, ಸ್ರುಕ್ಕು, ಸ್ರುವ, ದಾನ). ಬಲಪಾರ್ಶ್ವದಲ್ಲಿ ನೃತ್ತಗಣಪತಿ. ಎಡಪಾರ್ಶ್ವದಲ್ಲಿ ಚಾಮರಧಾರಿಣಿ.

(೮) ಸಿಂಹವಾಹನೆಯಾದ ದುರ್ಗಾ. ದೇವಿಯು 'ಕುಚಬಂಧ'ವನ್ನೂ ಕಿರೀಟವನ್ನೂ ಧರಿಸಿದ್ದಾಳೆ. ಈಕೆಯ ಮೂರು ಕರಗಳಲ್ಲಿ ತ್ರಿಶೂಲ, ಚಕ್ರ, ಶಂಖಗಳು ಶೋಭಿಸುತ್ತಿವೆ. ಒಂದು 'ತರ್ಜನಿ ಮುದ್ರೆ'ಯನ್ನು ಸೂಚಿಸುತ್ತಿದೆ.

(೯) ಲಿಂಗವನ್ನು ಅರ್ಚಿಸುತ್ತಿರುವ ಶ್ರೀ ರಾಮ.

(೧೦) ಶನಿ—ಇದು ನಗ್ನವಾಗಿದ್ದು, ಮೊನೆಯಾದ ಕಿರೀಟವನ್ನು ಧರಿಸಿದೆ. ಇದು ಮೂರು ಕೈಗಳಲ್ಲಿ ತ್ರಿಶೂಲ, ಬಾಣ, ಧನುಸ್ಸು—ಇವುಗಳನ್ನು ಹಿಡಿದು ಕೊಂಡಿದೆ.ಇನ್ನೊಂದು 'ವರದ ಹಸ್ತ'.

(೧೧) ಮೃತ್ಯುದೇವ—ಇದು 'ಸರ್ಪಹಾರ'ವನ್ನು ಧರಿಸಿದೆ. ಈ ಹಾರದ ಪ್ರತಿಯೊಂದು ಕೊನೆಯಲ್ಲಿಯೂ ವ್ಯಾಳವು ಐದು ಹೆಡೆಗಳಿಂದ ಕೂಡಿದೆ.

(೧೨) ಶಿವ (ಸ್ಥಾನಕಮೂರ್ತಿ) ಖಡ್ಗ, ತ್ರಿಶೂಲ, ಪಾಶ ಮತ್ತು ದಾನ. ಪೀಠದ ಮೇಲೆ ಪದ್ಮವು ಕೆತ್ತಲ್ಪಟ್ಟಿದೆ.

(೧೩) ಎರಡು ಕೈಗಳುಳ್ಳ ಪುರುಷವಿಗ್ರಹ—ಇದು ಕಿರೀಟವನ್ನೂ ಯಜ್ಞೋಪವೀತವನ್ನೂ ಧರಿಸಿದೆ. ಕೈಯಲ್ಲಿ 'ಕಂಠಪತ್ರ'ಗಳನ್ನು ಹಿಡಿದುಕೊಂಡಿದೆ—ಚಿತ್ರಗುಪ್ತ(?)

(೧೪) ಯಮ (ಅಭಯ, ಪರಶು, ಸರ್ಪ ಮತ್ತು ದಾನ). ಬಲಪಾರ್ಶ್ವದಲ್ಲಿ ಶುನಕರೂಪದ ಧರ್ಮನೂ, ಎಡಪಾರ್ಶ್ವದಲ್ಲಿ ಮೃತ್ಯುವೂ ನಿಂತಿದ್ದಾರೆ. ಪೀಠದ ಮೇಲೆ ಮಹಿಷವು ಕೆತ್ತಲ್ಪಟ್ಟಿದೆ.

ಮೊದಲನೆಯ ದಕ್ಷಿಣ ದ್ವಾರ:

ದಕ್ಷಿಣದ ಗೋಡೆ:

(೧೫) ಮೃತ್ಯು—ಇದು ಸರ್ಪಹಾರವನ್ನು ಧರಿಸಿದೆ.

(೧೬) ದೇವಸಮೂಹ—ಮಧ್ಯದಲ್ಲಿ ಲಕ್ಷ್ಮೀನರಸಿಂಹ ಮತ್ತು ದ್ವಾರಪಾಲ; ಬಲಪಾರ್ಶ್ವದಲ್ಲಿ ಉಮಾಮಹೇಶ್ವರ ಮತ್ತು ಹನುಮಂತ; ಎಡಪಾರ್ಶ್ವದಲ್ಲಿ ಬ್ರಹ್ಮ ಸರಸ್ವತಿಯರು (ಪೀಠದ ಮೇಲೆ ಹಂಸ) ಮತ್ತು ಗರುಡ.

(೧೭) 'ಸುಖಾಸನ'ದಲ್ಲಿ ಕುಳಿತಿರುವ ದಕ್ಷಿಣಾಮೂರ್ತಿ (ಚಿನ್ಮುದ್ರೆ, ಅಕ್ಷಮಾಲೆ, ಕಲಶ, ಪುಸ್ತಕ). ಬಲಗಾಲಿನಿಂದ ದೈತ್ಯನನ್ನು ಮೆಟ್ಟಿದ್ದಾನೆ. ಆತನ ಎಡಬಲ ಪಾರ್ಶ್ವಗಳಲ್ಲಿ ದೇವತೆಗಳು 'ಕಂಠಪತ್ರ'ಗಳನ್ನು ಹಿಡಿದು ಕುಳಿತಿದ್ದಾರೆ. ಪೀಠದ ಮೇಲೆ ಋಷಿಗಳ ಮೂರ್ತಿಗಳು ಕೆತ್ತಲ್ಪಟ್ಟಿವೆ.

(೧೮) ಮಂಡಲದಲ್ಲಿ ಪದ್ಮಾಸನಾಸೀನಳಾಗಿರುವ ಸಾವಿತ್ರಿ (ಗಾಯತ್ರಿ?)[1] ಈಕೆಗೆ ನಾಲ್ಕು ಮುಖಗಳೂ, ಹತ್ತು ಕೈಗಳೂ ಇವೆ. ಈ ಹತ್ತು ಕೈಗಳ ಪೈಕಿ

---

[1] ಈ ಮೂರ್ತಿಯ ಸ್ವರೂಪನಿರ್ಣಯದಲ್ಲಿ ಭಿನ್ನಾಭಿಪ್ರಾಯಗಳಿವೆ. ೧೯೩೬ ನೇ ಇಸವಿಯ ಶಾಸನ ಇಲಾಖೆಯ ವರದಿಯಲ್ಲಿ ಇದನ್ನು 'ಸಾವಿತ್ರಿ'ಯೆಂದು ಕರೆದಿದೆ (*M.A.R.* 1936, p. 30). ಆದರೆ ದಶಭುಜಳಾದ ಸಾವಿತ್ರಿಯ ವರ್ಣನೆಯು ಎಲ್ಲಿಯೂ ಕಂಡುಬರುವುದಿಲ್ಲ. ನಿದರ್ಶನಕ್ಕಾಗಿ 'ರೂಪಮಂಡನ'ದಲ್ಲಿ ಹೀಗೆ ಹೇಳಿದೆ:

ಎಂಟರಲ್ಲಿ ಅಂಕುಶ, ತ್ರಿಶೂಲ, ಚಕ್ರ, ಪದ್ಮ, ಪದ್ಮ, ಶಂಖ, ಕಪಾಲ, ಸರ್ಪಗಳನ್ನು ಧರಿಸಿದ್ದಾಳೆ. ಮಿಕ್ಕ ಎರಡು ಕೈಗಳಲ್ಲಿ ಒಂದು 'ಅಭಯ ಹಸ್ತ', ಇನ್ನೊಂದು 'ವರದ ಹಸ್ತ'. ದೇವಿಯು ಎರಡು ಸಿಂಹಗಳನ್ನು ಹೂಡಿದ ರಥದಲ್ಲಿ ಕುಳಿತಿದ್ದಾಳೆ. (*M.A.R.* 1936, pl. XVI, 1). ಆಕೆಯ ಪಾರ್ಶ್ವಗಳಲ್ಲಿ ಕ್ರಮವಾಗಿ ಒಂದೊಂದು ದ್ವಾರಪಾಲಕ ವಿಗ್ರಹವೂ, ಅರ್ಘ್ಯವನ್ನು ಅರ್ಪಿಸುತ್ತಿರುವ ಎರಡು ಕೈಗಳುಳ್ಳ ದೇವತಾಮೂರ್ತಿಯೂ ಇವೆ. ಬಲಭಾಗದ ಕೊನೆಯಲ್ಲಿ ಬ್ರಹ್ಮನ ಎರಡು ವಿಗ್ರಹಗಳಿವೆ; ಇವುಗಳ ಪೀಠಗಳ ಮೇಲೆ ಮಯೂರವು ಕೆತ್ತಲ್ಪಟ್ಟಿದೆ. ಎಡಭಾಗದ ಕೊನೆಯಲ್ಲಿ ಎರಡು ಕೈಗಳುಳ್ಳ ದೇವಮೂರ್ತಿಯಿದೆ; ಇದರ ಪೀಠದಮೇಲೆ ಸಿಂಹವನ್ನು ಕೆತ್ತಿದೆ. ದೇವಿಯ ನಾಲ್ಕು ಮುಖಗಳ ಪೈಕಿ ಮೂರು ಒಂದು ಸಾಲಿನಲ್ಲಿವೆ. ಇನ್ನೊಂದು ಮುಖವು ಈ ಸಾಲಿನ ಮೇಲ್ಭಾಗದಲ್ಲಿದೆ. ಈ ರೀತಿಯಲ್ಲಿ ಬಹುಮುಖ

ಅಕ್ಷಸೂತ್ರಂ ಪುಸ್ತಕಂ ಚ ಧತ್ತೇ ಪದ್ಮಂ ಕಮಂಡುಲಂ |
ಚತುರ್ವಕ್ತ್ರಾತು ಸಾವಿತ್ರೀ ಶ್ರೋತ್ರಿಯಾಣಾಂ ಗೃಹೇ ಸ್ಥಿತಾ ||

ಇದೇ ಶ್ಲೋಕವು "ದೇವತಾಮೂರ್ತಿಲಕ್ಷಣ"ದಲ್ಲಿಯೂ ದೊರೆಯುತ್ತದೆ (ಅ. ೪, ಶ್ಲೋ. ೮). ಇದರಲ್ಲಿ ಪದ್ಮವೊಂದು ವಿನಾ ಮಿಕ್ಕ ಲಾಂಛನಗಳು ಮೇಲಿನ ವಿಗ್ರಹದಲ್ಲಿ ಕಂಡುಬರುವುದಿಲ್ಲ. ಸಾವಿತ್ರಿಯು ರುದ್ರಾಂಶ ಸಂಭೂತಳೆಂದೂ, ಆಕೆಗೆ ನಾಲ್ಕು ಮುಖಗಳೂ, ನಾಲ್ಕು ಕೈಗಳೂ ಇರಬೇಕೆಂದೂ, ಆಕೆಯು ವೃಷಭವಾಹನೆಯೆಂದೂ ಹೇಳಲ್ಪಟ್ಟಿದೆ (H. Krishna Sastry: *The South Indian Images*, p. 218, *Footnote*). ಮೇಲಿನ ವಿಗ್ರಹದಲ್ಲಿ ದೇವಿಯು ಎರಡು ಸಿಂಹಗಳನ್ನು ಹೂಡಿದ ರಥದಲ್ಲಿ ಕುಳಿತಿದ್ದಾಳೆ ಎಂದಮೇಲೆ ಇದನ್ನು 'ಸಾವಿತ್ರಿ'ಯೆಂದು ಕರೆಯುವುದು ಹೇಗೆ? ಗಾಯತ್ರಿಯು ಅಗ್ನಿ ಅಥವಾ ಬ್ರಹ್ಮಾಂಶಸಂಭೂತಳೆಂದೂ, ಆಕೆಗೆ ನಾಲ್ಕು ಮುಖಗಳೂ, ಹತ್ತು ಕೈಗಳೂ ಇರಬೇಕೆಂದೂ, ಆಕೆಯು ಹಂಸವಾಹನೆಯೆಂದೂ ಹೇಳಲ್ಪಟ್ಟಿದೆ (H. K. Sastry, *Ibid*). ಇದು ಗಾಯತ್ರಿಯ ವಿಗ್ರಹವಾಗಿರಬಹುದೆ? ರಾವ್ ಬಹಾದುರ್ ಆರ್. ನರಸಿಂಹಾಚಾರ್ಯರು ಇದು ಸ್ತ್ರೀರೂಪದ ಸೂರ್ಯವಿಗ್ರಹವೆಂದು ಹೇಳಿದ್ದಾರೆ (*M.A.R.* 1916, p. 13). ಆದರೆ ಸೂರ್ಯನು ಎಂದು ಸ್ತ್ರೀರೂಪವನ್ನು ಧರಿಸಿದನೆಂಬುದು ನಮಗೆ ತಿಳಿಯದು. ಪುರಾಣಗಳಲ್ಲಿ ಇದಕ್ಕೆ ಆಧಾರವಿಲ್ಲ. ಇದನ್ನು ಒಪ್ಪಿಕೊಂಡರೂ, ಸೂರ್ಯನಿಗೆ ನಾಲ್ಕು ಮುಖಗಳೂ, ಹತ್ತು ಕೈಗಳೂ ಇರುವ ಪ್ರಸ್ತಾಪವು ಎಲ್ಲಿಯೂ ಕಂಡುಬರುವುದಿಲ್ಲ. ಆದರೆ ಚಿದಂಬರದಲ್ಲಿರುವ ಒಂದು ಮೂರ್ತಿಗೆ ಮೂರು ಮುಖಗಳೂ, ಎಂಟು ಕೈಗಳೂ ಇವೆ (H. K. Sastry, *Ibid*, p. 238, Fig. 144). ಭದ್ರಕಾಳಿಗೆ ಹದಿನೆಂಟು ಕೈಗಳಿರಬೇಕೆಂದೂ, ಆಕೆಯು ನಾಲ್ಕು ಸಿಂಹಗಳನ್ನು ಹೂಡಿದ ರಥದಲ್ಲಿ 'ಅಲೀಢಾಸನ'ದಲ್ಲಿ ಕುಳಿತಿರುವಳೆಂದೂ 'ವಿಷ್ಣುಧರ್ಮೋತ್ತರ'ದಲ್ಲಿ ಹೇಳಿದೆ. ಬ್ರಾಹ್ಮಣರಿಂದ ಅರ್ಚಿಸಲ್ಪಟ್ಟಾಗ ಆಕೆಯು ಹತ್ತು ಕೈಗಳನ್ನು ಹೊಂದಿ, 'ಜಟಾಮುಕುಟ'ಧಾರಿಣಿಯಾಗಿರಬೇಕೆಂದೂ ಅದೇ ಗ್ರಂಥದಲ್ಲಿ ಉಕ್ತವಾಗಿದೆ (H. K. Sastry, *Ibid*, p. 197). ಇದು ಭದ್ರಕಾಳಿಯ ಇನ್ನೊಂದು ರೂಪವಾಗಿರಬಹುದೆ?

ಗಳುಳ್ಳ ವಿಗ್ರಹಗಳು ಹೊಯ್ಸಳ ದೇವಾಲಯಗಳಲ್ಲಿ ಕಂಡುಬರುವುದಿಲ್ಲ. ಆದರೆ ಅಂಕೋರವಾಟದ 'ಉಬ್ಬುಚಿತ್ರ'ಗಳಲ್ಲಿ ಸಿಂಹಗಳನ್ನು ಹೂಡಿದ ತೇರಿನಲ್ಲಿ ಕುಳಿತು ಶೋಭಿಸುತ್ತಿರುವ ಅನೇಕ ತಲೆಗಳುಳ್ಳ ಒಂದು ದೇವತಾಮೂರ್ತಿಯನ್ನು ಕಾಣಬಹುದು. ಹಾಸನ ತಾಲ್ಲೂಕಿಗೆ ಸೇರಿದ ಮೊಸಳೆ ಗ್ರಾಮದಲ್ಲಿರುವ ಶಿವಾಲಯದಲ್ಲಿ ಈಶ್ವರನ ಇಂತಹ ಒಂದು ಭಿತ್ತಿಚಿತ್ರವಿದೆ. (*M.A.R.* 1933, Pl. IX, 3).

ಎರಡನೆಯ ದಕ್ಷಿಣದ್ವಾರ:

ನೈಋತ್ಯದ ಮೂಲೆ—ಸಪ್ತ ಪ್ರಜಾಪತಿಗಳು.

ಪಶ್ಚಿಮ:

(೨೦) ಕಲ್ಕಿ ದೇವನು ಒಂದು ಕೈಯಲ್ಲಿ ಖಡ್ಗವನ್ನೂ, ಇನ್ನೊಂದು ಕೈಯಲ್ಲಿ ಕಡಿವಾಣವನ್ನೂ ಹಿಡಿದು, ಸಾಲಂಕೃತವಾದ ಅಶ್ವದಮೇಲೆ ಕುಳಿತಿದ್ದಾನೆ. ಪೀಠದ ಮೇಲೆ ಯೋಧನ ಚಿತ್ರವಿದೆ.

(೨೧) ಬುದ್ಧ—ಸಮಭಂಗ ಭಂಗಿಯಲ್ಲಿ ನಿಂತಿರುವ ನಗ್ನಮೂರ್ತಿ. ಪೀಠದ ಮೇಲೆ ನಾಲ್ಕು ನಿರ್ವಾಣಮೂರ್ತಿಗಳನ್ನು ಕೆತ್ತಿದೆ.

(೨೨) ವೇಣುಗೋಪಾಲ—ಮೂರ್ತಿಯ ಪಾರ್ಶ್ವಗಳಲ್ಲಿ ದೇವಿಯರು ನಿಂತಿದ್ದಾರೆ. ಗರುಡನು ಮಂಡಿಯೂರಿ ದೇವನಿಗೆ ನಮಸ್ಕರಿಸುತ್ತಿದ್ದಾನೆ. ಪೀಠದ ಮೇಲೆ ಗೋವುಗಳು ವೇಣುಗಾನಾಮೃತ ಪಾನವನ್ನು ಮಾಡುತ್ತಿರುವಂತೆ ತೋರಿಸಲ್ಪಟ್ಟಿದೆ.

(೨೩) ಬಲರಾಮ—ಈತನು ಒಂದು ಕೈಯಲ್ಲಿ 'ಪರಶು'ವನ್ನೂ, ಇನ್ನೊಂದು ಕೈಯಲ್ಲಿ 'ಹಲಾಯುಧ'ವನ್ನೂ ಧರಿಸಿದ್ದಾನೆ. ಪೀಠದ ಮೇಲೆ ಆಯುಧಪಾಣಿಗಳಾದ ಭಟರು ತೋರಿಸಲ್ಪಟ್ಟಿದ್ದಾರೆ. ಬಲಪಾರ್ಶ್ವದಲ್ಲಿ ಒಬ್ಬ ಋಷಿಯು ಪದ್ಮದಿಂದೊಡಗೂಡಿದ್ದಾನೆ.

(೨೪) ಕೋದಂಡರಾಮ—ಅವನ ಎಡಪಾರ್ಶ್ವದಲ್ಲಿ ಸೀತೆಯೂ ಬಲಪಾರ್ಶ್ವದಲ್ಲಿ ಧನುರ್ಧರನಾದ ಲಕ್ಷ್ಮಣನೂ ನಿಂತಿದ್ದಾರೆ.

(೨೫) ಪರಶುರಾಮ—ಒಂದು ಕೈಯಲ್ಲಿ 'ಪರಶು'ವನ್ನೂ, ಇನ್ನೊಂದು ಕೈಯಲ್ಲಿ 'ಧನುರ್ಬಾಣ'ಗಳನ್ನೂ ಧರಿಸಿದ್ದಾನೆ. ಪೀಠದ ಮೇಲೆ ಗರುಡನೂ ಸರ್ಪಗಳೂ ಕೆತ್ತಲ್ಪಟ್ಟಿವೆ.

ಪಶ್ಚಿಮದ್ವಾರ:

(೨೬) ವಾಮನಾವತಾರ—ಛತ್ರಧರನಾದ ವಾಮನನಿಗೆ ಬಲಿಯು ಧಾರೆಯೆರೆಯುತ್ತಿದ್ದಾನೆ.

(೨೭) ನರಸಿಂಹಾವತಾರ—ಹಿರಣ್ಯಕಶಿಪುವನ್ನು ಸಂಹರಿಸಲು ಸ್ತಂಭವನ್ನು ಭೇದಿಸಿಕೊಂಡು ಬರುತ್ತಿದ್ದಾನೆ. ಅವನ ಎಡಪಾರ್ಶ್ವದಲ್ಲಿ ನಾಲ್ಕು ಕೈಗಳುಳ್ಳ ಲಕ್ಷ್ಮಿಯೂ, ಬಲಪಾರ್ಶ್ವದಲ್ಲಿ 'ಅಂಜಲಿಹಸ್ತ'ನಾದ ಪ್ರಹ್ಲಾದನೂ ನಿಂತಿದ್ದಾರೆ. ಪೀಠದಮೇಲೆ ಹೋರುವ ರಾಕ್ಷಸನ ಚಿತ್ರವಿದೆ.

(೨೮) ಧರಣೀವರಾಹ—ನಿಂತಿರುವ ಮಾನವರೂಪದ ವರಾಹ. ಆತನ ಕಟಿ ಪ್ರದೇಶದಲ್ಲಿ ಲಕ್ಷ್ಮಿಯು ಶೋಭಿಸುತ್ತಿದ್ದಾಳೆ. ಆತನು ತನ್ನ ನಾಲ್ಕು ಕೈಗಳ ಪೈಕಿ ಎರಡರಲ್ಲಿ ಶಂಖಚಕ್ರಗಳನ್ನು ಧರಿಸಿದ್ದಾನೆ. ಮಿಕ್ಕ ಎರಡು ಕೈಗಳಲ್ಲಿ ಒಂದು ಲಕ್ಷ್ಮಿಯನ್ನು ಆಲಿಂಗಿಸಿದೆ; ಇನ್ನೊಂದು 'ಅಭಯಹಸ್ತ.' ಪೀಠದ ಮೇಲೆ ಬಿದ್ದಿರುವ ಹಿರಣ್ಯಾಕ್ಷ.

ವಾಯುವ್ಯ:

(೨೯) ಕೂರ್ಮಾವತಾರ—ಪೀಠದ ಮೇಲೆ ದೈತ್ಯನ ಚಿತ್ರವಿದೆ.

(೩೦) ಮತ್ಸ್ಯಾವತಾರ—ಪೀಠದ ಮೇಲೆ ಗರುಡ.

(೩೧) ಹರಿಹರ[1]—(ಅಭಯ, ತ್ರಿಶೂಲ, ಚಕ್ರ, ಶುಕ).

(೩೨) ಮಾರ್ಕಂಡೇಶ್ವರ ಅಥವಾ ಕಾಲಸಂಹಾರಮೂರ್ತಿ—ಯಮನು ಮಾರ್ಕಂಡೇಯನನ್ನು ಪಾಶದಿಂದ ಬಂಧಿಸಿ ಸೆಳೆದೊಯ್ಯಲು ಯತ್ನಿಸುತ್ತಿದ್ದಾನೆ. ಶಿವನು ತ್ರಿಶೂಲದಿಂದ ಕಾಲನನ್ನು ಇರಿಯುತ್ತಿದ್ದಾನೆ.

(೩೩) ಸೋಮಸ್ಕಂದಮೂರ್ತಿ—ಶಿವಪಾರ್ವತಿಯರು ಷಣ್ಮುಖನೊಡನೆ ನಿಂತಿದ್ದಾರೆ. ಪೀಠದ ಮೇಲೆ ವೃಷಭವೂ, ಮಯೂರವೂ ಕೆತ್ತಲ್ಪಟ್ಟಿವೆ.

(೩೪) ಅರ್ಧನಾರೀಶ್ವರ—(ಅಭಯ, ತ್ರಿಶೂಲ, ಸರ್ಪ, ದಾನ).

(೩೫) ತ್ರಿಪುರಸಂಹಾರಮೂರ್ತಿ—ಶಿವನು ಏಕಬಾಣದಿಂದ ತ್ರಿಪುರಗಳನ್ನು ದಹಿಸುತ್ತಿದ್ದಾನೆ. ಆ ಬಾಣದ ತುದಿಯಲ್ಲಿ ಬುದ್ಧನೂ, ಮಧ್ಯದಲ್ಲಿ ವಿಷ್ಣುವೂ ಇದ್ದಾರೆ. ಶಿವನ ಪಾರ್ಶ್ವಗಳಲ್ಲಿ ಬ್ರಹ್ಮನೂ ಪಾರ್ವತಿಯೂ ಸಹಾಯಕರಾಗಿ ನಿಂತಿದ್ದಾರೆ.

---

[1] ಇದನ್ನು ೧೯೩೭ನೆಯ ಇಸವಿಯ ಶಾಸನ ಇಲಾಖೆಯ ವರದಿಯಲ್ಲಿ 'ಅಂಧಕಾಸುರವಧ ಮೂರ್ತಿ'ಯೆಂದು ಕರೆದಿದೆ. ಆದರೆ ಈ ಮೂರ್ತಿಯು ತನ್ನ ನಾಲ್ಕು ಕೈಗಳ ಪೈಕಿ ಒಂದರಲ್ಲಿ ವೈಷ್ಣವಚಿಹ್ನೆಯಾದ 'ಚಕ್ರ'ವನ್ನು ಧರಿಸಿದೆ (*M.A.R.* 1936, p. 31). ಅಲ್ಲದೆ ಅಂಧಕಾರಿ ಮೂರ್ತಿಯ ಲಕ್ಷಣಗಳು (T. A. Gopinatha Rao: *Elements of Hindu Iconography*, Vol. II, Part I, pp. 192-94). ಈ ವಿಗ್ರಹದಲ್ಲಿ ಕಂಡುಬರುವುದಿಲ್ಲ. ಇದು ಶ್ರೀಮಾನ್ ರಾ. ನರಸಿಂಹಾಚಾರ್ಯರು ಹೇಳುವಂತೆ 'ಹರಿಹರ'ನ ವಿಗ್ರಹವಿರಬಹುದು (*M.A.R.* 1916, p. 13).

(೩೬) ಚಂದ್ರಶೇಖರಮೂರ್ತಿ—(ಅಭಯ, ಪರಶು, ಮೃಗ, ದಾನ).

(೩೭) ಕಾಮದಹನಮೂರ್ತಿ—ಶಿವನು 'ಸುಖಾಸನ'ದಲ್ಲಿ ಕುಳಿತಿದ್ದಾನೆ. ಅವನ ಬಲಗೈಯು 'ಚಿನ್ಮುದ್ರೆ'ಯನ್ನು ಪ್ರದರ್ಶಿಸುತ್ತಿದೆ. ಶಂಭುವು ತನ್ನ ಭೀಷಣ ನೇತ್ರಗಳಿಂದ ಕಾಮನನ್ನು ಸಿಟ್ಟಿಸುತ್ತಿದ್ದಾನೆ.

ಮನ್ಮಥನು ಕಬ್ಬಿನ ಬಿಲ್ಲಿನಿಂದ ಪುಷ್ಪಬಾಣಗಳನ್ನು ಪ್ರಯೋಗಿಸುತ್ತಿದ್ದಾನೆ.

ಮೊದಲನೆಯ ಉತ್ತರ ದ್ವಾರ:

ಉತ್ತರದ ಗೋಡೆ:

(೩೮) ಅಂಧಕಾಸುರವಧಮೂರ್ತಿ.

(೩೯) ಶ್ರೀಕಂಠ ಅಥವಾ ವಿಷಕಂಠ—(ವಿಷಜ್ವಾಲೆ, ತ್ರಿಶೂಲ, ಡಮರುಗ, ದಾನ). ಶಿವನ ಮುಂದಿನ ಬಲಗೈ ವಿಷವನ್ನು ಕಂಠದ ಬಳಿ ಹಿಡಿದುಕೊಂಡಿದೆ.

(೪೦) ವೀರಭದ್ರ—(? ಖಡ್ಗ, ತ್ರಿಶೂಲ, ಗದೆ, ಭರ್ಜಿ). ಬಲಪಾರ್ಶ್ವದಲ್ಲಿ ಹನುಮಂತ. ಪೀಠದ ಮೇಲೆ ರಾಕ್ಷಸರು.

(೪೧) ಚಂದ್ರ—ಮನೋಹರವಾದ ಛತ್ರದ ಕೆಳಗೆ ಮಂಡಲದಲ್ಲಿ ಚಂದ್ರನು ಪದ್ಮಾಸನಾಸೀನನಾಗಿದ್ದಾನೆ. ಆತನು ತನ್ನ ಹತ್ತು ಕೈಗಳಲ್ಲಿ ಕಲಶ, ಕಲಶ, ಅಕ್ಷಮಾಲೆ, ಕಲಶ, ಘಂಟೆ, ಘಂಟೆ, ಕಲಶ, ಪುಸ್ತಕ, ಕಲಶ, ಕಲಶಗಳನ್ನು ಧರಿಸಿದ್ದಾನೆ. ದೇವನು ಕುದುರೆಗಳಿಂದ ಎಳೆಯಲ್ಪಟ್ಟ ರಥದಲ್ಲಿ ಕುಳಿತಿದ್ದಾನೆ. ಅವನ ಪಾರ್ಶ್ವಗಳಲ್ಲಿ ಇಬ್ಬರು ದೇವತೆಗಳು ಕಲಶಗಳನ್ನು ಹಿಡಿದು ನಿಂತಿದ್ದಾರೆ.

(೪೨) ಶಿವ (ಸ್ಥಾನಕಮೂರ್ತಿ)—ಅಭಯ, ಪರಶು, ಡಮರುಗ, ದಾನ.

(೪೩) ಗಜಾಸುರಮರ್ದನ.

(೪೪) ಹಯಗ್ರೀವ (ಅಕ್ಷಮಾಲೆ, ಚಕ್ರ, ಶಂಖ, ಪುಸ್ತಕ)—ಪದ್ಮಾಸನದಲ್ಲಿ ಕುಳಿತಿದ್ದಾನೆ. ಅವನ ಪಾರ್ಶ್ವಗಳಲ್ಲಿ ವೈಷ್ಣವ ದ್ವಾರಪಾಲಕರೂ, ಇಬ್ಬರು ದೇವ ಶಿಷ್ಯರೂ ಇದ್ದಾರೆ.

(೪೫) ಅನ್ನಪೂರ್ಣಾ—ಎರಡು ಕೈಗಳಲ್ಲಿ 'ಸ್ರುಕ್ಕ'ನ್ನೂ, 'ಕಲಶ'ವನ್ನೂ ಹಿಡಿದಿದ್ದಾಳೆ.

(೪೬) ಪಾರ್ವತೀ ಸಮೂಹ—ಮಧ್ಯದಲ್ಲಿ ಪಾರ್ವತೀ. ಆಕೆಯ ಬಲಪಾರ್ಶ್ವದಲ್ಲಿ ಒಬ್ಬ ಶಕ್ತಿದ್ವಾರಪಾಲಿಕೆಯೂ, ಲಕ್ಷ್ಮಿಯೂ ನಿಂತಿದ್ದಾರೆ. ದೇವಿಯ ಎಡ ಪಾರ್ಶ್ವದಲ್ಲಿ ಮತ್ತೊಬ್ಬಳು ಶಕ್ತಿದ್ವಾರಪಾಲಿಕೆಯೂ, ಸರಸ್ವತಿಯೂ ನಿಂತಿದ್ದಾರೆ. ಸರಸ್ವತಿಯ ಬಳಿ ಒಬ್ಬ ಮಾತೆಯು ಶಿಶುವನ್ನು ಮಡಿಲಲ್ಲಿಟ್ಟುಕೊಂಡಿದ್ದಾಳೆ.

(೪೭) ಲಕ್ಷ್ಮೀ (ಸ್ಥಾನಕಮೂರ್ತಿ)—ಅಭಯ, ಚಕ್ರ, ಶಂಖ, ದಾನ.

(೪೮) ಭಿಕ್ಷಾಟನಮೂರ್ತಿ (ಖಡ್ಗ, ತ್ರಿಶೂಲ, ಡಮರುಗ, ಕಪಾಲ).

ಎರಡನೆಯ ಉತ್ತರದ್ವಾರ:

ಈಶಾನ್ಯದ ಗೋಡೆ:

(೪೯) ಕುಬೇರ (ಅಭಯ, ಗದೆ, ಕಲಶ, ದಾನ)—ಪೀಠದ ಮೇಲೆ ಅಶ್ವ.

(೫೦) ಈಶ್ವರ (ತ್ರಿಶೂಲ, ಖಡ್ಗ, ಡಮರುಗ, ರುಂಡ ಸಹಿತವಾದ ಕಪಾಲ)—ಪೀಠದ ಮೇಲೆ ವೃಷಭ. ಎಡಗಡೆ ತ್ರಿಶೂಲ ಮತ್ತು ಕಪಾಲಗಳನ್ನು ಹಿಡಿದು ನಿಂದಿರುವ ದೇವಿ. ಉಮಾಮಹೇಶ್ವರರು ಕಂಕಾಳಮಾಲೆಗಳನ್ನು ಧರಿಸಿದ್ದಾರೆ.

(೫೧) ಭೃಂಗಿ—ಮೂರು ಪಾದಗಳುಳ್ಳ ಮುನಿಯು ಅಸ್ಥಿಪಂಜರ ಮಾತ್ರವಾಗಿದ್ದಾನೆ. ಆತನು 'ದಂಡ'ವನ್ನು ಹಿಡಿದು ನರ್ತಿಸುತ್ತಿದ್ದಾನೆ.

(೫೨) ಭೈರವ—ಪೀಠದ ಮೇಲೆ ವೃಶ್ಚಿಕ.

(೫೩) ವೀರಭದ್ರ—ಮೂರ್ತಿಯ ಬಲಭಾಗದಲ್ಲಿ ದಕ್ಷಬ್ರಹ್ಮನೂ, ಎಡಭಾಗದಲ್ಲಿ ನಂದಿಯೂ ನಿಂತಿದ್ದಾರೆ.

(೫೪) ಶಿವ (ಸ್ಥಾನಕಮೂರ್ತಿ)—ಅಭಯ, ತ್ರಿಶೂಲ, ಡಮರುಗ, ದಾನ. ಪೀಠದ ಮೇಲೆ ನಂದಿ.

(೫೫) ಶಿವ (ಸ್ಥಾನಕಮೂರ್ತಿ)—ಅಭಯ, ಅಂಕುಶ, ಡಮರುಗ, ದಾನ. ಪೀಠದ ಮೇಲೆ ವೃಷಭ.

(೫೬) ವೆಂಕಟೇಶ (ದಾನ, ಚಕ್ರ, ಶಂಖ, ಕಟಿಹಸ್ತ)—ದೇವನ ಬಲಪಾರ್ಶ್ವದಲ್ಲಿ ಲಕ್ಷ್ಮಿಯು ನಿಂತಿದ್ದಾಳೆ. ಪೀಠದ ಮೇಲೆ ಗರುಡ.

(೫೭) ವ್ಯಾಸ (?)—ಮೂರ್ತಿಯು ಮೊನೆಯಾದ ಕಿರೀಟ, ಯಜ್ಞೋಪವೀತ ಮತ್ತು ಚಿಕ್ಕ ಧೋತಿಗಳನ್ನು ಧರಿಸಿದೆ. ಅದರ ಒಂದು ಕೈ 'ಚಿನ್ಮುದ್ರೆ'ಯನ್ನು ಪ್ರದರ್ಶಿಸುತ್ತಿದೆ; ಇನ್ನೊಂದು 'ಕಟಿಹಸ್ತ'.

(೫೮) ಶ್ರೀ ಶಂಕರಾಚಾರ್ಯರು—[ಎಡಗೈಯಲ್ಲಿ ತಾಳಪತ್ರದ ಗ್ರಂಥವೊಂದನ್ನು ಹಿಡಿದಿದ್ದಾರೆ; ಬಲಗೈ 'ವರದ ಹಸ್ತ' (?)]

(೫೯) ವೀರಭದ್ರ—ಎಡಗೈಯಲ್ಲಿ ವೀಣೆಯನ್ನು ಧರಿಸಿದ್ದಾನೆ; ಬಲಗೈಯಿಂದ ಏನನ್ನೋ ಬೇಡುತ್ತಿದ್ದಾನೆ. ಅವನ ಎಡಪಾರ್ಶ್ವದಲ್ಲಿ ಒಬ್ಬ ದೇವನು ನಿಂತಿದ್ದಾನೆ. ಅವನ ಎರಡು ಕೈಗಳ ಪೈಕಿ, ಒಂದು 'ಚಿನ್ಮುದ್ರೆ'ಯನ್ನು ಪ್ರದರ್ಶಿಸುತ್ತಿದೆ; ಇನ್ನೊಂದು 'ಕಟಿಹಸ್ತ'. ಪ್ರಾಯಶಃ ಶಿವನು ವೀರಭದ್ರನಿಗೆ ವೀಣೆಯನ್ನು ಕಲಿಸುವ ದೃಶ್ಯವಿರಬಹುದು.

(೬೦) ನೃತ್ತಗಣಪತಿ—ಪೀಠದ ಮೇಲೆ ಮೂಷಕ.

(೬೧) ಷಣ್ಮುಖ (ಸ್ಥಾನಕಮೂರ್ತಿ)—ಅಭಯ, ಭರ್ಜಿ, ಶುಕ, ದಾನ.

ಮೇಲೆ ಹೇಳಿದ ದೊಡ್ಡ ವಿಗ್ರಹಗಳ ಮಸ್ತಕವನ್ನು ರಮ್ಯವಾದ ತೋರಣಗಳು ಅಲಂಕರಿಸಿವೆ. ಆದರೆ ಇವುಗಳ ಪೈಕಿ ಬಹು ಮುಖ್ಯವಾದುವು ಗೂಡುಗಳಲ್ಲಿ ಪ್ರತಿಷ್ಠಿಸಲ್ಪಟ್ಟಿವೆ. ಆ ಗೂಡುಗಳ ತಲೆಯಮೇಲೆ ಮನೋಹರವಾಗಿ ಕೆತ್ತಲ್ಪಟ್ಟ ಗೋಪುರಗಳಿವೆ. ಈ ಗೋಪುರಗಳು ಸುಂದರವಾದ ಅರೆಗಂಬಗಳ ಮೇಲೆ ನಿಂತಿವೆ.

ಈ ವಿಗ್ರಹಗಳ ತಲೆಯಮೇಲೆ ಎರಡಂತಸ್ತಿನ ಲೋವೆಕಲ್ಲು (Eaves) ಬರುತ್ತದೆ. ಇದರಿಂದ ಗುಡಿಯ ಮೂಲೆಗಳಲ್ಲಿ ಕಲ್ಲಿನ ಸರಪಣಿಗಳು ಇಳಿಬಿದ್ದಿವೆ. ಇದರ ಮೇಲೆ ಸೂರುಗಲ್ಲು (Roof) ಬರುತ್ತದೆ. ಇದು ಶಿಲೆಯಿಂದ ರೂಪಿತವಾಗಿ 'ಸಂಧಿಕರ್ಮ'ದ ಕುಶಲತೆಯನ್ನು ಎತ್ತಿತೋರುತ್ತದೆ. ಇದಕ್ಕೆ ಸೇರಿದ ಹಾಗೆ ಮಳೆಯ ನೀರು ಹರಿದು ಹೋಗಲು ಸುಂದರವಾದ ಕಲ್ಲಿನ 'ಪ್ರಣಾಳ'ಗಳಿವೆ.

ಈ ಗುಡಿಯ ಗೋಪುರವು 'ಶಿಲ್ಪಕಲೆಯ ಗೋಪುರ'ವೆನ್ನುವಷ್ಟು ಸೊಗಸಾಗಿದೆ. ಇದರಲ್ಲಿ ಚಾಲುಕ್ಯ ದ್ರಾವಿಡ ರೀತಿಗಳ ಮಧುರ ಸಮನ್ವಯವನ್ನು ಕಾಣಬಹುದು. ಗೋಪುರವು ಮೂರು 'ನೆಲೆ'ಗಳುಳ್ಳದ್ದಾಗಿದೆ. ಈ ನೆಲೆಗಳ ಅಂಚಿನಲ್ಲಿ ನಯನರಂಜಕವಾದ ಸಣ್ಣಸಣ್ಣ ಗೋಳಾಕೃತಿಗಳು ಕೆತ್ತಲ್ಪಟ್ಟಿವೆ. ಎಲ್ಲಕ್ಕಿಂತ ಮೇಲಿನ ನೆಲೆಯಲ್ಲಿ ನಾಲ್ಕು ಮೂಲೆಗಳಲ್ಲಿಯೂ ನಾಲ್ಕು ಕಲ್ಲಿನ ನಂದಿಗಳನ್ನು ಇಟ್ಟಿದೆ. ಗೋಪುರದ ಮೇಲೆ ಒಂದು ದೊಡ್ಡ ಚಿನ್ನದ ಕಲಶವೂ, ಅದರ ಸುತ್ತಲೂ ನಾಲ್ಕು ಚಿಕ್ಕ ಕಲಶಗಳೂ ಇವೆ. ಇದನ್ನು ಚಾಲುಕ್ಯರೀತಿಯಲ್ಲಿ ನಿರ್ಮಿತವಾದ ಗೋಪುರಗಳೊಡನೆ ಹೋಲಿಸಿದರೆ, ಇದರ ತುದಿಯಲ್ಲಿರುವ 'ಶಿಖರ'ವೂ ಅದರ 'ಗ್ರೀವ'ವೂ ಬಹುಚಿಕ್ಕವಾದುವೆಂದು ಹೇಳಬೇಕು. ಗೋಪುರದ ಮುಂದೆ ತೇರಿನಾಕಾರದ ಒಂದು ಆಕೃತಿಯಿದೆ. ಇದರ ಮೇಲ್ಭಾಗದಲ್ಲಿ ಒಂದು 'ಕೀರ್ತಿಮುಖ'ವೂ ಅದರಲ್ಲಿ ಸದಾಶಿವಮೂರ್ತಿಯೂ (ಅಭಯ, ಪರಶು, ಮೃಗ, ದಾನ) ಕೆತ್ತಲ್ಪಟ್ಟಿವೆ.

ದೇವಾಲಯದ ಅಂತಃಸೌಂದರ್ಯವು ಬಾಹ್ಯವನ್ನು ಮೀರಿಸುವಂತಹದು. ನವರಂಗವು ಸೊಗಸಾಗಿ ಕೆತ್ತಲ್ಪಟ್ಟ ದ್ರಾವಿಡರೀತಿಯ ಹನ್ನೆರಡು ಕಂಬಗಳುಳ್ಳದ್ದಾಗಿದೆ. ಈ ಕಂಬಗಳ 'ಪಾದ'ಗಳು ಅಂದವಾಗಿ ಕೆತ್ತಲ್ಪಟ್ಟು, ಬೋದಿಗೆಗಳು ಮಾವಿನಕಾಯಿಯ ಆಕೃತಿಯಲ್ಲಿವೆ. ಸ್ತಂಭಶೀರ್ಷಗಳು ವಿಶಾಲವಾಗಿದ್ದು ಅವುಗಳ ಅಂತ್ಯಭಾಗವು ಸೊಂಡಿಲನ್ನು ಎತ್ತಿರುವ ಆನೆಯಂತೆಯೂ, ಮಧ್ಯಭಾಗವು ಹಿಮ್ಮಡಿಯ ಮೇಲೆ ನಿಂತಿರುವ ಸಿಂಹದಂತೆಯೂ, ಅಗ್ರಭಾಗವು ಸಿಂಹಗಳು, ಆನೆಗಳು ಮತ್ತು ಶರಭಗಳಿಂದ ಕೂಡಿರುವಂತೆಯೂ ತೋರಿಸಲ್ಪಟ್ಟಿದೆ. ಪ್ರತಿಯೊಂದು ಕಂಬದ ಹಿಂಭಾಗದಲ್ಲಿಯೂ ಕಲಶದಿಂದ ಹೊರಟು ನಿಂತಿರುವ ಸುಂದರವಾದ ಅರೆಗಂಬವಿದೆ.

ಇದೇ ರೀತಿಯಲ್ಲಿ ಪ್ರತಿಯೊಂದು ಸಿಂಹದ ಮೇಲೂ ಒಬ್ಬ ವೀರಸವಾರನು ಕುಳಿತಿದ್ದಾನೆ. ಪ್ರತಿಯೊಬ್ಬನೂ ಒಂದು ಕೈಯಲ್ಲಿ ಕಡಿವಾಣವನ್ನು ಹಿಡಿದು, ಮತ್ತೊಂದು ಕೈಯಲ್ಲಿ ಆಯುಧವನ್ನೋ ಪುಷ್ಪವನ್ನೋ ಎತ್ತಿಹಿಡಿದಿದ್ದಾನೆ. ಸಿಂಹಗಳ ಬಾಯಲ್ಲಿರುವ ಕಲ್ಲುಗುಂಡುಗಳನ್ನು ತಿರುಗಿಸಬಹುದು. ಆದರೆ ಅವುಗಳನ್ನು ಹೊರಕ್ಕೆ ತೆಗೆಯಲು ಸಾಧ್ಯವಿಲ್ಲ. ಈ ಸ್ತಂಭಗಳು ಮೇಷಾದಿ ದ್ವಾದಶರಾಶಿಗಳಿಂದ ಗುರುತಿಸಲ್ಪಟ್ಟಿವೆ. ಸೂರ್ಯನು ಮೇಷರಾಶಿಯಲ್ಲಿರುವಾಗ ಸೂರ್ಯಕಿರಣಗಳು ಆ ರಾಶಿಯಿಂದ ಚಿಹ್ನಿತವಾದ ಸ್ತಂಭದ ಮೇಲೆ ಬೀಳುವುವು. ಇದರಂತೆ ಸೂರ್ಯನು ಆಯಾ ರಾಶಿಯನ್ನು ಹೊಂದಿದಾಗ ಸೂರ್ಯರಶ್ಮಿಗಳು ಆಯಾ ರಾಶಿಯಿಂದ ಅಂಕಿತವಾದ ಸ್ತಂಭಗಳನ್ನು ಸ್ಪರ್ಶಿಸುವುವು. ಇದನ್ನು ಪರಿಶೀಲಿಸಿದರೆ ಶಿಲ್ಪಿಯು ಚಾತುರ್ಯದಿಂದಲೂ, ಗಣತ ವಿದ್ಯಾಪರಿಣತಿಯಿಂದಲೂ ಇದನ್ನು ಕಲ್ಪಿಸಿರುವುದು ಸ್ಪಷ್ಟವಾಗಿ ಕಂಡುಬರುವುದು. ಇದೇ ರೀತಿಯಲ್ಲಿ ಪ್ರತಿಯೊಂದು ಕಂಬದ ಮೇಲೂ ಆಯಾ ರಾಶಿಗೆ ಅಧಿಪತಿಯಾದ 'ಗ್ರಹ'ವನ್ನು ಕೆತ್ತಿದೆ. ಸೂರ್ಯನು ಗ್ರಹಗಳ ಅಧಿಪತಿಯಾದ ಕಾರಣ ಪ್ರತಿಯೊಂದು ಕಂಬದ ಮೇಲ್ಭಾಗದಲ್ಲಿರುವ ಶಿಲಾಫಲಕದಲ್ಲಿಯೂ ಸೂರ್ಯವಿಗ್ರಹವು ಕೆತ್ತಲ್ಪಟ್ಟಿದೆ.

ನವರಂಗವು ಹದಿನೆಂಟು ಅಡಿ ಎತ್ತರವಾಗಿದೆ. ಮಧ್ಯೆ ಭುವನೇಶ್ವರಿಯು ಎರಡು ಅಡಿ ಆಳವಾಗಿದ್ದು, ಅದರಲ್ಲಿ ಐದು ಸುತ್ತು ದಳಗಳುಳ್ಳ ಪದ್ಮವು ಕೊರೆಯಲ್ಪಟ್ಟಿದೆ. ಅದರ ಮುಖದಲ್ಲಿ ಒಂದು ಮೊಗ್ಗು ಇಳಿಬಿದ್ದಿದೆ. ಅದನ್ನು ನಾಲ್ಕು ಗಿಣಿಗಳು ತಲೆ ಕೆಳಗಾಗಿ ಮೂಗಿನಲ್ಲಿ ಹಿಡಿದುಕೊಂಡಿವೆ. ನಾಲ್ಕು ಕಡೆಗಳಲ್ಲಿಯೂ ಮಧ್ಯದ ಎರಡು ಕಂಬಗಳಿಗೆ ಸೇರಿದ ಬೋದಿಗೆಗಳ ಮಧ್ಯೆ ದ್ವಾರಗಳಿಗೆ ಅಭಿಮುಖವಾಗಿ—ನಾಲ್ಕು ಶಿಲಾಫಲಕಗಳಿವೆ. ಇವುಗಳಲ್ಲಿ ಹೂವುಗಳು ಮನೋಹರವಾಗಿ ಬಿಡಿಸಲ್ಪಟ್ಟು, ಭುವನೇಶ್ವರಿಗೆ ಸೇರಿಕೊಂಡಹಾಗಿವೆ. ಈ ಸ್ತಂಭಗಳ ನಿಲುವಿನ ಮೇಲ್ಗಡೆ ಅರೆಗಂಬಗಳಿಂದ ವಿಭಾಗಿಸಲ್ಪಟ್ಟ ಶಿಲಾಫಲಕದಲ್ಲಿ ನಿಂತಿರುವ ಮೂರು ಮೂರ್ತಿಗಳಿವೆ.

ನವರಂಗದ ಬಲಭಾಗದಲ್ಲಿ ಕೆಲವು ಕಂಚಿನ ವಿಗ್ರಹಗಳೂ, ಅಮೃತಶಿಲೆಯ ಲಿಂಗಗಳೂ ಇಡಲ್ಪಟ್ಟಿವೆ. ಇವುಗಳಲ್ಲಿ ನಂಬಿನಾರಾಯಣ, ನಟರಾಜ, ಶ್ರೀನಿವಾಸ, ಇವು ಮುಖ್ಯವಾದುವು. ಮುಂದಿನ ಕೈಗಳಲ್ಲಿ ಶಂಖಚಕ್ರಗಳನ್ನು ಧರಿಸಿರುವ ವಿಷ್ಣು ಮೂರ್ತಿಯನ್ನು ಶ್ರೀವೈಷ್ಣವರು "ನಂಬಿನಾರಾಯಣ'ನೆಂದು ಕರೆಯುತ್ತಾರೆ. ನಟರಾಜನ ಮೂರ್ತಿಯು 'ಅಗ್ನಿ ತೋರಣ'ದಿಂದಲೂ ಜಟಾಮಕುಟದಲ್ಲಿ 'ಅಂಜಲಿ ಹಸ್ತ'ಳಾಗಿ ಮಂಡಿಸಿರುವ ಗಂಗೆಯಿಂದಲೂ, ಶಿರದಲ್ಲಿ ಶೋಭಿಸುತ್ತಿರುವ ಕಿಶೋರ ಚಂದ್ರನಿಂದಲೂ ಕೂಡಿದೆ. ಇದು 'ಸಮಪದ ಸ್ಥಾನಕ ಮೂರ್ತಿ'; ಇದಕ್ಕೆ ನಾಲ್ಕು ಕೈಗಳಿವೆ. ಹಿಂದಿನ ಬಲಗೈ 'ಡಮರುಗ'ವನ್ನು ಹಿಡಿದುಕೊಂಡಿದೆ; ಎಡಗೈ 'ಅರ್ಧ

ಚಂದ್ರಹಸ್ತ'; ಅದರಲ್ಲಿ 'ಅಗ್ನಿ'ಯನ್ನು ಧರಿಸಿದೆ. ಮುಂದಿನ ಬಲಗೈ 'ಅಭಯಹಸ್ತ'; ಮುಂದಿನ ಎಡಗೈ 'ಗಜಹಸ್ತ' ಅಥವಾ 'ದಂಡಹಸ್ತ'.[1] ಇದರಿಂದ ಎತ್ತಿಹಿಡಿದಿರುವ ಎಡಗಾಲನ್ನು ತೋರಿಸುತ್ತಿದೆ. ಬಲಗಾಲಿನಿಂದ ಅಪಸ್ಮಾರಪುರುಷನನ್ನು ಮೆಟ್ಟಿ ನಿಂತಿದೆ.

ಅಪಸ್ಮಾರಪುರುಷನು ಅಜ್ಞಾನದ ಸಂಕೇತ; ಅವನ ಮೇಲೆ ನಿಂತಿರುವ ಶಿವನು ಸತ್ಯಜ್ಞಾನಾನಂದ ಸ್ವರೂಪಿ. ಅವನ ನೃತ್ಯವೇ ಸೃಷ್ಟಿ, ಸ್ಥಿತಿ, ಲಯಾದಿಗಳು.

ಶೃಂಗೇರಿಯಲ್ಲಿರುವ ಕಂಚಿನ ತಾಂಡವಮೂರ್ತಿಯು ಭಾವಭಂಗಿ, ರಚನಾ ಚಾತುರ್ಯ, ಅಲಂಕಾರ ವೈಖರಿಗಳಲ್ಲಿ ಮದರಾಸು ಮತ್ತು ಸಿಂಹಳದ್ವೀಪಗಳ ಪ್ರಾಚೀನ ವಸ್ತುಪ್ರದರ್ಶನಾಲಯಗಳಲ್ಲಿರುವ ಲೋಕಪ್ರಸಿದ್ಧವಾದ ನಟರಾಜ ವಿಗ್ರಹಗಳಿಗೆ ಸರಿದೂಗುತ್ತದೆ. ಎಂದಮೇಲೆ ಶೃಂಗೇರಿಯ ಮೂರ್ತಿಯು ಕರ್ಣಾಟಕ ಕಲಾದೇವಿಯ ಮಕುಟವನ್ನು ಬೆಳಗುತ್ತಿರುವ ಅಮೂಲ್ಯ ರತ್ನಗಳಲ್ಲಿ ಒಂದಾಗಿದೆಯೆಂದು ಹೇಳುವುದರಲ್ಲಿ ಯಾವ ಬಾಧಕವೂ ಇಲ್ಲ.

ನವರಂಗದ ಹಿಂದೆ 'ಪ್ರದಕ್ಷಿ'ಣೆಯನ್ನು ಪ್ರವೇಶಿಸಲು ಮೂರು ದ್ವಾರಗಳಿವೆ. ಮುಖ್ಯದ್ವಾರದ ಅಕ್ಕಪಕ್ಕಗಳಲ್ಲಿ ಎರಡು ಶೈವ ದ್ವಾರಪಾಲಕ ವಿಗ್ರಹಗಳಿವೆ. ಪ್ರದಕ್ಷಿಣೆಯು ಇಕ್ಕಟ್ಟಾಗಿದ್ದು ಸುಕನಾಸಿ, ಗರ್ಭಗೃಹಗಳನ್ನು ಬಳಸಿಕೊಂಡು ಹೋಗುತ್ತದೆ. ಗರ್ಭಗೃಹದಲ್ಲಿ ವಿದ್ಯಾಶಂಕರ ಲಿಂಗವಿದೆ. 'ಯೋನಿ' ಅಥವಾ 'ಗೌರೀ ಪಟ್ಟ'ವು ವಿಶಾಲವಾಗಿದ್ದು ಲಿಂಗವು ಎತ್ತರವಾಗಿದೆ. ಗರ್ಭಗೃಹದ ಸುತ್ತಲೂ ಇರುವ ಗೂಡುಗಳಲ್ಲಿ ವಿದ್ಯಾಗಣಪತಿ, ಬ್ರಹ್ಮ, ವಿಷ್ಣು, ಮಹೇಶ್ವರ, ಮಹಿಷಾಸುರಮರ್ದಿನಿ ಈ ವಿಗ್ರಹಗಳಿವೆ. ಬ್ರಹ್ಮನು ನಾಲ್ಕು ಮುಖಗಳಿಂದ ಕೂಡಿದ್ದಾನೆ. ಹಿಂದಿನ ಮುಖಕ್ಕೆ ಗಡ್ಡವಿದೆ. ಸರಸ್ವತಿಯು ಅವನ ತೊಡೆಯಮೇಲೆ ಕುಳಿತಿದ್ದಾಳೆ. ಆಕೆಯು ಎರಡು ಕೈಗಳಲ್ಲಿ 'ಪದ್ಮ'ಗಳನ್ನು ಧರಿಸಿದ್ದಾಳೆ; ಇನ್ನೊಂದು 'ಅಕ್ಷಮಾಲೆ'ಯನ್ನು ಹಿಡಿದುಕೊಂಡಿದೆ; ಮತ್ತೊಂದು 'ವರದಹಸ್ತ.' ಪೀಠದಲ್ಲಿ ಹಂಸವು ಕೆತ್ತಲ್ಪಟ್ಟಿದೆ. ಲಕ್ಷ್ಮೀನಾರಾಯಣನು ಎರಡು ಕೈಗಳಲ್ಲಿ ಶಂಖಚಕ್ರಗಳನ್ನು ಹಿಡಿದು ಇನ್ನೊಂದು ಕೈಯಿಂದ ಲಕ್ಷ್ಮಿಯನ್ನು ಆಲಿಂಗಿಸಿದ್ದಾನೆ; ಮತ್ತೊಂದು 'ಅಭಯಹಸ್ತ.' ಪೀಠದಲ್ಲಿ ಗರುಡವಿಗ್ರಹವಿದೆ. ಉಮಾಮಹೇಶ್ವರನು ಎರಡು ಕೈಗಳಲ್ಲಿ ಪರಶು, ಮೃಗಗಳನ್ನು ಧರಿಸಿ ಒಂದು ಕೈಯಿಂದ ಪಾರ್ವತಿಯನ್ನು ತಬ್ಬಿಕೊಂಡಿದ್ದಾನೆ; ಮತ್ತೊಂದು 'ಅಭಯಹಸ್ತ.' ಪೀಠದಲ್ಲಿ ವೃಷಭ. ಮಹಿಷಾಸುರಮರ್ದಿನಿಯು ಅಷ್ಟಭುಜಳಾಗಿ ಸಿಂಹಪೀಠದಮೇಲೆ ಕುಳಿತಿದ್ದಾಳೆ. ಅದೇ ಗೂಡಿನಲ್ಲಿ ಕಾಲಭೈರವನ ವಿಗ್ರಹವಿದೆ.

---

[1] ಅಭಿನವಗುಪ್ತನು 'ಗಜಹಸ್ತ'ವನ್ನು 'ಅಲಪಲ್ಲವ'ವೆಂದು ಕರೆದಿದ್ದಾನೆ.

ಗಣಪತಿಯ ಗೂಡಿನಲ್ಲಿ ಶನಿಗ್ರಹದ ಉಕ್ಕಿನ ವಿಗ್ರಹವಿದೆ; ಅದನ್ನು ಎಣ್ಣೆಯಲ್ಲಿ ಅದ್ದಿದ್ದಾರೆ. ಇದಕ್ಕೆ ಹರಕೆಯನ್ನು ಹೊತ್ತು ಕಾಣಿಕೆ ನೀಡುವುದು ವಾಡಿಕೆಯಾಗಿದೆ. ಪರ್ವಕಾಲಗಳಲ್ಲಿ ಇದನ್ನು ನವರಂಗಕ್ಕೆ ತಂದು ತೈಲಾಭಿಷೇಕವನ್ನು ಮಾಡುತ್ತಾರೆ. ಈ ಅಭಿಷೇಕವು ಶನಿಗೆ ಪ್ರಿಯತಮವಾದುದಂತೆ. ಸುಕನಾಸಿಯಲ್ಲಿ ಹರಿಹರನ ಉತ್ಸವ ವಿಗ್ರಹವು ಇಡಲ್ಪಟ್ಟಿದೆ. ಇಲ್ಲಿ ಭಿನ್ನವಾದ ಸರಸ್ವತಿಯ ದಾರುಮೂರ್ತಿಯಿದೆ. ಇದನ್ನು ಒಮ್ಮೆ ಆಭರಣಗಳಿಂದ ಅಲಂಕರಿಸಿ ಶಾರದಾ ದೇವಾಲಯದ ಗರ್ಭಗುಡಿಯ ಮುಂದೆ ಇಟ್ಟಿದ್ದಾಗ ಮಹಮ್ಮದೀಯರು ನುಗ್ಗಿ ಒಡವೆಗಳನ್ನು ಅಪಹರಿಸಿ ಮೂರ್ತಿಯನ್ನು ಭಿನ್ನಮಾಡಿ ನದಿಗೆ ಹಾಕಿಬಿಟ್ಟರಂತೆ. ತರುವಾಯ ಅದನ್ನು ಹೊರಕ್ಕೆ ತೆಗೆದು ಈ ದೇವಾಲಯದಲ್ಲಿ ಇಟ್ಟರಂತೆ. ಈಗ ಇದಕ್ಕೆ ಕ್ರಮವಾಗಿ ಪೂಜೆ ಸಲ್ಲುತ್ತಿದೆ.

ಶಾರದಾ ದೇವಾಲಯ

ಸರ್ವವಿದ್ಯಾಪ್ರದಾಯಿನಿಯಾದ ಶಾರದೆಯು ಶೃಂಗೇರಿಯಲ್ಲಿ ಅರ್ಚಿಸಲ್ಪಡುವ ಮುಖ್ಯದೇವತೆ. ಹಿಂದೆ ವಿದ್ಯಾಶಂಕರ ದೇವಾಲಯಕ್ಕೆ ಬಡಗಲಲ್ಲಿ ಶಾರದೆಯ ಚಿಕ್ಕ ಗುಡಿಯೊಂದಿತ್ತು. ಈಚೆಗೆ ೧೯೦೬ರಲ್ಲಿ ಇದನ್ನು ಕೆಡವಿಸಿ ಈ ದೇವಿಗಾಗಿ ನೂತನ ಶಿಲಾಗೃಹವೊಂದನ್ನು ನಿರ್ಮಿಸಲಾಯಿತು.

ಈ ದೇವಾಲಯವು ದ್ರಾವಿಡ ರೀತಿಯಲ್ಲಿ ಕಟ್ಟಿದ ಸುಂದರವಾದ ಕಟ್ಟಡ. ಇದರಲ್ಲಿ ಗರ್ಭಗುಡಿ, ಸುಕನಾಸಿ, ನವರಂಗ—ಈ ಭಾಗಗಳಿವೆ. ಗರ್ಭಗುಡಿಯ ಸುತ್ತಲೂ ಇಕ್ಕಟ್ಟಾದ ಪ್ರದಕ್ಷಿಣೆಯಿದೆ. ಇದಕ್ಕೆ ಸೇರಿದಹಾಗೆ ಪೂರ್ವದಲ್ಲಿ ರಂಗಮಂಟಪವಿದೆ. ಈ ಮಂಟಪದ ಹೊರಗೆ ಪ್ರಾಕಾರವೂ, ಅದರ ಸುತ್ತಲೂ ಕಂಬಗಳುಳ್ಳ ಕೈಸಾಲೆಯೂ ಇವೆ. ಈ ಕೈಸಾಲೆಯು ಪೂರ್ವಭಾಗದಲ್ಲಿ ಮುಖಮಂಟಪವಾಗಿ ಅದರ ಮುಂದೆ ಒಂದು ಪಾತಾಳಾಂಕಣವಿದೆ.

ಈಗ ಈ ದೇವಾಲಯದಲ್ಲಿ ಶಾರದಾ ಅಥವಾ ಸರಸ್ವತಿಯ ಎರಡು ಲೋಹದ ಪ್ರತಿಮೆಗಳಿವೆ. ಒಂದು ದೊಡ್ಡದು, ಮೂರು ಅಡಿ ಎತ್ತರವಾಗಿದೆ; ಇನ್ನೊಂದು ಚಿಕ್ಕದು, ಸುಮಾರು ಎರಡೂವರೆ ಅಡಿ ಇದೆ. ಇವೆರಡೂ ಬಹು ಪ್ರಾಚೀನವಾಗಿದ್ದು ವಿದ್ಯಾತೀರ್ಥರ ಕಾಲಕ್ಕೆ ಸೇರಿದವುಗಳಾಗಿವೆ. ಇವರು ಮೇಲೆ ಹೇಳಿದ ಎರಡು ಮೂರ್ತಿಗಳಲ್ಲಿ ದೊಡ್ಡದನ್ನು ಹಿಂದೆ ಶ್ರೀ ಶಂಕರಾಚಾರ್ಯರು ಶ್ರೀಚಕ್ರಯಂತ್ರವನ್ನು ಸ್ಥಾಪಿಸಿದ್ದ ಸ್ಥಳದಲ್ಲಿ ಪ್ರತಿಷ್ಠಿಸಿದರಂತೆ. ವಿದ್ಯಾತೀರ್ಥರು ಮೊದಲುಮಾಡಿದ ಚಿಕ್ಕ ಮೂರ್ತಿಯ ಪ್ರಮಾಣದಿಂದ ತೃಪ್ತರಾಗದೆ ಈಗಿರುವ ದೊಡ್ಡ ಮೂರ್ತಿಯನ್ನು ತಮ್ಮ ನೇತೃತ್ವದಲ್ಲಿ ಮಾಡಿಸಿ ಸ್ಥಾಪಿಸಿದರು. ಇದೇ ಈ ಎರಡು ಮೂರ್ತಿಗಳಿರಲು ಕಾರಣವೆಂದು ಹೇಳುತ್ತಾರೆ. ಇವೆರಡೂ ಈಗ ಪೂಜಿಸಲ್ಪಡುತ್ತಿವೆ. ಇವು

'ಆಸನಮೂರ್ತಿ'ಗಳು. ಇವುಗಳ ನಾಲ್ಕು ಕೈಗಳ ಪೈಕಿ, ಮೂರರಲ್ಲಿ ಅಕ್ಷಮಾಲೆ, ಕಲಶ, ಪುಸ್ತಕಗಳನ್ನು ಧರಿಸಿವೆ; ಇನ್ನೊಂದು 'ವ್ಯಾಖ್ಯಾನಮುದ್ರೆ'ಯಲ್ಲಿದೆ. ಅಲ್ಲದೆ ಈ ವಿಗ್ರಹಗಳ ದಕ್ಷಿಣಹಸ್ತವನ್ನು ಲೀಲಾಶುಕವು ಅಲಂಕರಿಸಿದೆ. ಈ ಲಾಂಛನಗಳು ಶೃಂಗೇರಿಯ ಸರಸ್ವತೀ ವಿಗ್ರಹಗಳಲ್ಲಿ ಕಂಡುಬರುವ ಒಂದು ವಿಶೇಷವೆಂದು ಹೇಳಬೇಕು. ಏಕೆಂದರೆ ಪಾಶ ಮತ್ತು ಅಂಕುಶಗಳು ಈಕೆಯ ಲಾಂಛನಗಳು. ಇದು ಈ ದೇವತೆಯ ಮೂರ್ತಿಗಳಲ್ಲಿ ಕಂಡುಬರುವ ಸಾಮಾನ್ಯಲಕ್ಷಣ.[1] ಇವಲ್ಲದೆ ಹಬ್ಬಗಳಲ್ಲಿ ಉತ್ಸವಾದಿಗಳಿಗಾಗಿ ಉಪಯೋಗಿಸಲು ಎರಡು ವಿಗ್ರಹಗಳಿವೆ. ಒಂದು ಬೆಳ್ಳಿಯಿಂದ ಮಾಡಲ್ಪಟ್ಟ ಕುಳಿತ ವಿಗ್ರಹ; ಇನ್ನೊಂದು ಕಂಚಿನಿಂದ ರೂಪಿತವಾದ ನಿಂತ ವಿಗ್ರಹ. ಆಗಮೋಕ್ತ ಕರ್ಮಗಳನ್ನು ಆಚರಿಸುವಾಗಲೂ, ಸ್ವಾಮಿಗಳು ತೀರ್ಥಯಾತ್ರೆ ಹೊರಟಾಗಲೂ ಬೆಳ್ಳಿಯ ವಿಗ್ರಹವನ್ನು ಉಪಯೋಗಿಸುತ್ತಾರೆ. ಕಂಚಿನ ಮೂರ್ತಿಯನ್ನು ನವರಾತ್ರಿ ಮುಂತಾದ ಹಬ್ಬಗಳಲ್ಲಿ ಉಪಯೋಗಿಸುತ್ತಾರೆ. ರಥೋತ್ಸವ ಕಾಲದಲ್ಲಿ ಇವೆರಡು ಮೂರ್ತಿಗಳನ್ನೂ ಒಟ್ಟಿಗೆ ಬಿಜಮಾಡಿಸುತ್ತಾರೆ. ಟಿಪ್ಪುವು ಸ್ವಾಮಿಗಳಿಗೆ ಬರೆದ ಕೆಲವು ಬಿನ್ನಹದ ಓಲೆಗಳಿಂದ ಮರಾಟರು ಕ್ರಿ.ಶ. ೧೭೯೧ರಲ್ಲಿ ಪರಶುರಾಮಭಾವು ಎಂಬ ಸರದಾರನ ಕೈಕೆಳಗೆ ಶೃಂಗೇರಿಯನ್ನು ಮುತ್ತಿ ಹಿಂದೆ ಹೇಳಿದ ದೇವಿಯ ದೊಡ್ಡ ವಿಗ್ರಹವನ್ನು ಕಿತ್ತುಹಾಕಿದರೆಂದೂ, ಟಿಪ್ಪುವು ಈ ವಿಗ್ರಹವನ್ನು ಯಥಾರೀತಿಯಲ್ಲಿ ಪ್ರತಿಷ್ಠಿಸಲು ದ್ರವ್ಯಸಹಾಯ ಮಾಡಿದ್ದಲ್ಲದೆ, ದೇವಿಗೆ ಬೆಳ್ಳಿಯ ಪಲ್ಲಕ್ಕಿಯನ್ನೂ, ಒಂದು ಜೋಡಿ ಬೆಳ್ಳಿಯ ಚಾಮರಗಳನ್ನೂ ಕಳುಹಿಸಿಕೊಟ್ಟನೆಂದೂ ತಿಳಿದುಬರುತ್ತದೆ.

ಮುಖಮಂಟಪದಲ್ಲಿ ಸುಂದರವಾಗಿ ಕೆತ್ತಲ್ಪಟ್ಟ ದ್ರಾವಿಡ ರೀತಿಯ ಸ್ತಂಭಗಳಿವೆ. ಈ ಸ್ತಂಭಗಳ 'ಶೀರ್ಷ'ಗಳು ಮೂರು ಸಾಲುಳ್ಳವುಗಳಾಗಿವೆ. ಇವುಗಳಲ್ಲಿ

---

[1] ಶ್ರೀಮಾನ್ ಎನ್. ಕೆ. ಭಟ್ಟಸಾಲಿಯವರು ತಮ್ಮ ಗ್ರಂಥದಲ್ಲಿ ಹತ್ತು ಮಾದರಿಯ ಸರಸ್ವತೀ ವಿಗ್ರಹಗಳನ್ನು ವರ್ಣಿಸಿದ್ದಾರೆ. (Bhattasali: *The Iconography of Buddhist and Brahmanical Sculptures in the Dacca Museum:* The Chart of the images of Sarasvati). ಅವುಗಳಲ್ಲಿ 'ಶಾರದಾತಿಲಕತಂತ್ರ'ದ ಸಪ್ತಮ ಪಟಲದಲ್ಲಿ ಹೇಳಿರುವ ಲಕ್ಷಣಗಳು ಶೃಂಗೇರಿಯ ಸರಸ್ವತೀ ವಿಗ್ರಹಗಳಲ್ಲಿ ಕಂಡುಬರುತ್ತವೆ. (No. 3, Vyakhyānamudra, Rosary, Pitcher of Nectar, Book). ಆದರೆ ಶೃಂಗೇರಿಯಲ್ಲಿರುವ ಮುಖ್ಯದೇವಿಯನ್ನು 'ಶಾರದಾ' ಎಂದು ನಿರ್ದೇಶಿಸುವುದು ಪದ್ಧತಿಯಾಗಿದೆ. ಶಾರದೆಯು ಚತುಃಷಷ್ಟಿಕಲಾಭಿಮಾನ ದೇವತೆಯೆಂದೂ, ಆಕೆಗೆ ಐದು ಮುಖಗಳೂ, ಹತ್ತು ಕೈಗಳೂ ಇರಬೇಕೆಂದೂ ರಾವ್ ಬಹದ್ದೂರ್ ಕೃಷ್ಣಶಾಸ್ತ್ರಿಗಳು ಹೇಳಿದ್ದಾರೆ. (H. K. Sastry, *Ibid*, p. 187). ಶೃಂಗೇರಿಯ ಮೂರ್ತಿಗಳಲ್ಲಿ ಈ ಲಕ್ಷಣಗಳು ಕಂಡುಬರುವುದಿಲ್ಲ.

ಎಲ್ಲಕ್ಕಿಂತ ಕೆಳಗಡೆ 'ಗ್ರೀಕ್' ರೀತಿಯ ಪುಷ್ಪಾಲಂಕಾರವೂ ಅದರ ಮೇಲೆ ಸಿಂಹವೂ ಅದರ ಮೇಲೆ ಮಾವಿನ ಕಾಯಿಯ ಆಕೃತಿಯಿಂದೊಡಗೂಡಿದ ಮಕರವೂ ಕೆತ್ತಲ್ಪಟ್ಟಿವೆ. ಇವುಗಳಲ್ಲಿ ಕೆಲವು ತಲೆಕೆಳಕಾಗಿ ಹಾರುತ್ತಿರುವ ಗಿಳಿಗಳನ್ನು ಹೊಂದಿವೆ.

ನವರಂಗದಲ್ಲಿರುವ ಸ್ತಂಭಗಳು ಈ ದೇವಾಲಯವನ್ನು ನಿರ್ಮಿಸಿದ ಶಿಲ್ಪಿಗಳ ನೈಪುಣ್ಯವನ್ನು ಎತ್ತಿತೋರುತ್ತಿವೆ. ಇಲ್ಲಿರುವ ಹತ್ತು ಕಂಬಗಳ ಪೈಕಿ, ಪೂರ್ವ ಭಾಗದಲ್ಲಿರುವ ಮೊದಲನೆಯ ಜೋಡಿಯ ಮೇಲೆ ಆರು ಅಡಿ ಎತ್ತರವಾದ ಸ್ತ್ರೀ ವಿಗ್ರಹಗಳು ಕೆತ್ತಲ್ಪಟ್ಟಿವೆ. ಮೊದಲನೆಯದು ಪಾರ್ವತಿ (ಅಭಯ, ಹರಿಣ, ಸರ್ಪ ಯುಕ್ತವಾದ ಡಮರುಗ, ವರದ), ಎರಡನೆಯದು ಒಬ್ಬ ದೇವತೆ (?) ಅಭಯ, ಅಕ್ಷಮಾಲೆ, ಪದ್ಮ, ವರದಹಸ್ತ). ಎರಡನೆಯ ಜೋಡಿಯ ಪೈಕಿ, ಒಂದರ ಮೇಲೆ ಮಹಿಷಾಸುರಮರ್ದಿನಿಯನ್ನು ಕೆತ್ತಿದೆ. ಆಕೆಗೆ ಎಂಟು ಕೈಗಳಿವೆ. ಅವುಗಳಲ್ಲಿ ಒಂದು 'ಅಭಯ ಹಸ್ತ'; ಇನ್ನೊಂದು 'ಕಟಿಹಸ್ತ'. ಮಿಕ್ಕವುಗಳಲ್ಲಿ ಕಿಗ್ಗತ್ತಿ, ಬಾಣ, ಚಕ್ರ, ಶಂಖ, ಬಿಲ್ಲು, ಖೇಟಕಗಳನ್ನು ಧರಿಸಿದ್ದಾಳೆ. ಆದರೆ ಇದು ಪರಿಮಾಣ ಸಾಮಂಜಸ್ಯವಿಲ್ಲದೆ ಸ್ವಲ್ಪ ವಿಕಾರವಾಗಿದೆ. ಆದರೆ ಇದೇ ಜೋಡಿಯ ಮತ್ತೊಂದು ಕಂಬದ ಮೇಲೆ ಕೆತ್ತಿರುವ ರಾಜರಾಜೇಶ್ವರಿಯ ವಿಗ್ರಹವು ದಿವ್ಯಸುಂದರವಾಗಿದೆ. ದೇವಿಯು ಸುಖಾಸನದಲ್ಲಿ ಕುಳಿತಿದ್ದಾಳೆ; ಕಿರೀಟದ ಮೇಲೆ ಅರ್ಧಚಂದ್ರ; ನಾಲ್ಕು ಕೈಗಳಲ್ಲಿ ಭರ್ಜಿ (?), ಒಟ್ಟಿಗಿರುವ ಗದೆ ಮತ್ತು ಅಂಕುಶ, ಪಾಶ, ಇಕ್ಷುದಂಡಗಳನ್ನು ಹಿಡಿದಿದ್ದಾಳೆ. ಆಕೆಯ ವಸ್ತ್ರಗಳಲ್ಲಿ ಅಲ್ಲಲ್ಲಿ ಗುಲಾಬಿ ಹೂವುಗಳು ಎದ್ದು ಕಾಣುತ್ತವೆ. ಆಕೆಯ ತಲೆಯ ಮೇಲೆ ಗಂಧರ್ವ ಸ್ತ್ರೀಯ ವಿಗ್ರಹವಿದೆ. ಈಕೆಯ ಮುಖ, ಅಂಗಾಂಗಗಳು, ಪಕ್ಷದ್ವಯಗಳು, ತೆರೆದ ಕುಚಕುಂಭಗಳು, ಬಂಧರಹಿತವಾದ ಕುಚಾಗ್ರಗಳು, ಕೈಗಳಲ್ಲಿ ಹಿಡಿದಿರುವ 'ಲಾರೆಲ್' ಹೂವು ಮತ್ತು ಎಲೆಗಳು—ಇವುಗಳಿಂದ ಈಕೆಯು ಭಾರತೀಯ ವೇಷವನ್ನು ಧರಿಸಿದ ಪಾಶ್ಚಾತ್ಯ ರಮಣಿಯೆಂಬುದು ಪ್ರೇಕ್ಷಕರಿಗೆ ಥಟ್ಟನೆ ಗೋಚರಿಸುವಂತಿದೆ.

ಜನಾರ್ದನ ದೇವಾಲಯ

ವಿದ್ಯಾಶಂಕರ ದೇವಾಲಯದ ಉತ್ತರಕ್ಕೆ ಜನಾರ್ದನನ ಸಣ್ಣ ಗುಡಿಯಿದೆ. ಈ ದೇವಾಲಯಕ್ಕೆ ೧೩೮೭ರಲ್ಲಿ ಇಮ್ಮಡಿ ಹರಿಹರನು ದತ್ತಿಯನ್ನು ಕೊಟ್ಟನೆಂದು ತಿಳಿಸುವ ಒಂದು ತಾಮ್ರಶಾಸನವಿರುವುದರಿಂದ, ಇದು ಕೊನೆಯ ಪಕ್ಷ ಆ ಕಾಲದಲ್ಲಾದರೂ ಇದ್ದಿರಬೇಕು. ನವರಂಗದ್ವಾರದ ಬಲಪಾರ್ಶ್ವದಲ್ಲಿ ಹನುಮಂತನ ಗುಡಿಯೂ, ಎಡಪಾರ್ಶ್ವದಲ್ಲಿ ಗರುಡನ ಗುಡಿಯೂ ಇವೆ. ನವರಂಗದ ಬಲಭಾಗದಲ್ಲಿರುವ ಗೂಡಿನಲ್ಲಿ ಶ್ರೀ ಶಂಕರಾಚಾರ್ಯರ ಶಿಲಾವಿಗ್ರಹವಿದೆ. ಇದರ ಎರಡು

ಕೈಗಳಲ್ಲೊಂದು 'ಅಭಯಹಸ್ತ'; ಇನ್ನೊಂದು 'ವ್ಯಾಖ್ಯಾನಮುದ್ರೆ'ಯಲ್ಲಿದೆ. ಆಚಾರ್ಯರ ಪಕ್ಕಗಳಲ್ಲಿ 'ದಂಡ' ಮತ್ತು 'ಕಮಂಡಲು'ಗಳು ಕೆತ್ತಲ್ಪಟ್ಟಿವೆ. ಮೂರ್ತಿಯ ಹಿಂದುಗಡೆ ಸುಂದರವಾದ ತಾಮ್ರದ ಪ್ರಭಾವಳಿಯಿದೆ; ಅದರ ಮಧ್ಯದಲ್ಲಿ ಪತ್ನೀಸಮೇತನಾದ ವೇಣುಗೋಪಾಲನ ಮೂರ್ತಿಯೂ, ಎರಡು ಕಡೆಗಳಲ್ಲಿ ವಿಷ್ಣುವಿನ ದಶಾವತಾರಗಳೂ ಕೆತ್ತಲ್ಪಟ್ಟಿವೆ. ದೇವಾಲಯದ ದಕ್ಷಿಣ ಗೋಡೆಯ ಮೇಲೆ ಒರಗಿರುವ ಒಂದು ಶಿಲಾಶಾಸನವಿದೆ. ಇದರ ಮೇಲ್ಭಾಗದಲ್ಲಿ ಎರಡು ಮೂರ್ತಿಗಳಿವೆ. ಇವು ಬ್ರಹ್ಮ ಮತ್ತು ವೇದವ್ಯಾಸರೆಂದು ಅವುಗಳ ಕೆಳಗೆ ಕೆತ್ತಿರುವ ಹೆಸರುಗಳಿಂದ ತಿಳಿದುಬರುತ್ತದೆ.

ಬೆಟ್ಟದ ಮಲ್ಲಿಕಾರ್ಜುನ ದೇವಾಲಯ

ಈ ದೇವಾಲಯವು ಶೃಂಗಗಿರಿಯ ಮೇಲಿರುವುದರಿಂದ ಇದಕ್ಕೆ ಈ ಹೆಸರು ಬಂದಿದೆ. ಇದು ದ್ರಾವಿಡ ರೀತಿಯಲ್ಲಿ ಕಟ್ಟಲ್ಪಟ್ಟು ಪೂರ್ವಾಭಿಮುಖವಾಗಿದೆ. ಬೆಟ್ಟಕ್ಕೆ ಹತ್ತಿಹೋಗಲು ನೂರು ಮೆಟ್ಟಲುಗಳಿವೆ. ನವರಂಗದಲ್ಲಿ ಸೊಗಸಾಗಿ ಕೆತ್ತಲ್ಪಟ್ಟ ನಾಲ್ಕು ಕಂಬಗಳಿವೆ. ಭುವನೇಶ್ವರಿಯಲ್ಲಿ ಸುಂದರವಾದ ಕಮಲವು ಬಿಡಿಸಲ್ಪಟ್ಟಿದೆ. ಅದರ ಮುಖದಲ್ಲಿ ಒಂದು ಮೊಗ್ಗು ಇಳಿಬಿದ್ದಿದೆ. ಕಂಬಗಳ ಮೇಲೆ ಕೆತ್ತಲ್ಪಟ್ಟಿರುವ ಮೂರ್ತಿಗಳಲ್ಲಿ ಚಂದ್ರನ ವಿಗ್ರಹವು ಬಹು ಮುಖ್ಯವಾದುದು. ಇದಕ್ಕೆ ಹತ್ತು ಕೈಗಳಿವೆ. ಪ್ರಾಕಾರದಲ್ಲಿ ಬಿಂದುಮಾಧವನ ಗುಡಿಯಿದೆ. ಮೂರ್ತಿಯ ಪೀಠದಲ್ಲಿ ಮಧ್ಯೆ ಲಕ್ಷ್ಮಿಯೂ, ಪಕ್ಕಗಳಲ್ಲಿ ಗರುಡ ಹನುಮಂತರೂ ತೋರಿಸಲ್ಪಟ್ಟಿದ್ದಾರೆ. ದೀಪಸ್ತಂಭದಂತೆ ತೋರುವ ಒಂದು ಕಂಬದ ಮೇಲೆ ಗಣಪತಿಯ ಒರಟಾದ ಬಿಂಬವಿದೆ. ಇದನ್ನು ಅಭಿನವ ನರಸಿಂಹ ಭಾರತೀ ಸ್ವಾಮಿಗಳು (೧೫೯೯–೧೬೨೨) ಅರಿಸಿನದಿಂದ ಬರೆದರಂತೆ. ಈ ಕಂಬದಿಂದ ಹೊರಡುವ ಶಬ್ದವು ಮೂರ್ತಿಯ ಮೇಲು ಮತ್ತು ಕೆಳಭಾಗಗಳಲ್ಲಿ ಗಟ್ಟಿಯಾಗಿದ್ದು, ಅದಿರುವ ಜಾಗದಲ್ಲಿ ಮಾತ್ರ ಟೊಳ್ಳಾಗಿದೆ. ಇದನ್ನು ಜನಗಳು 'ಪವಾಡ'ವೆಂದು ತಿಳಿಯುತ್ತಾರೆ. ಅಲ್ಲದೆ ಈ ಬಿಂಬವು ಮೊದಲು ಮಸಕುಮಸಕಾಗಿದ್ದು ಈಗ ಸ್ಪಷ್ಟವಾಗಿ ಕಾಣಲು ಪ್ರಾರಂಭವಾಗಿದೆಯಂತೆ. ಇಕ್ಕೇರಿಯ ಶಿವಪ್ಪನಾಯಕನ ಪುತ್ರಿಯಾದ ಸಿದ್ದಮ್ಮಾಜಿಯು ಇದಕ್ಕೆ ೧೬೮೫ರಲ್ಲಿ ದತ್ತಿಯನ್ನು ಬಿಟ್ಟಳೆಂದು ಒಂದು ಶಾಸನವು ತಿಳಿಸುತ್ತದೆ.

ಇತರ ದೇವಾಲಯಗಳು

ಜನಾರ್ದನ ದೇವಾಲಯಕ್ಕೆ ಬಡಗಲಾಗಿ ಒಂದು ಪುಟ್ಟ ದೇವಾಲಯವಿದೆ. ಅದರಲ್ಲಿ ಒಂದು ಗೂಡಿನಲ್ಲಿರುವ ಶಕ್ತಿಗಣಪತಿಯೂ, ಸಣ್ಣ ಗುಡಿಯಲ್ಲಿರುವ ವಾಗೀ

ಶ್ವರಿಯ ಮೂರ್ತಿಯೂ ಇವೆ. ಈ ದೇವತೆಗಳು ಶ್ರೀ ವಿದ್ಯಾರಣ್ಯರಿಗೆ ಅತ್ಯಂತ ಪ್ರಿಯವಾಗಿದ್ದುವಂತೆ.

ವಿದ್ಯಾಶಂಕರ ದೇವಾಲಯಕ್ಕೆ ಪಡುವಲಾಗಿ ಹನ್ನೆರಡು 'ಸಮಾಧಿಗುಡಿಗಳಿವೆ.' ಇವುಗಳ ಮೇಲೆ ಸಾಲಾಗಿ ಲಿಂಗಪ್ರತಿಷ್ಠೆಮಾಡಿದೆ. ಹೊಸ ಮಠದ ಮುಂದೆ ಎರಡು ಚಿಕ್ಕ ಗುಡಿಗಳಿವೆ. ಒಂದರಲ್ಲಿ ಸಾಲಾಗಿರುವ ಸೀತಾ, ರಾಮ, ಲಕ್ಷ್ಮಣರ ವಿಗ್ರಹಗಳಿವೆ. ಇವುಗಳ ಹಿಂದೆ ಸುಂದರವಾದ ಪ್ರಭಾವಳಿಯಿದೆ. ಬಳಿಯಲ್ಲಿ ಹನುಮಂತನು 'ಅಂಜಲಿಹಸ್ತ'ನಾಗಿ ನಿಂತಿದ್ದಾನೆ. ಇನ್ನೊಂದು ಮಲೆಯಾಳ ಬ್ರಹ್ಮನ ಗುಡಿ. ಈತನು ಸ್ಥೂಲಕಾಯನಾಗಿ ಒಂದು ಕೈಯಲ್ಲಿ ಗದೆಯನ್ನು ಹಿಡಿದು ನಿಂತಿದ್ದಾನೆ; ಇನ್ನೊಂದು 'ಲೋಲಹಸ್ತ' ಅಥವಾ 'ಲಂಬಹಸ್ತ'. ಕಾಲಿನಲ್ಲಿ ಪಾದರಕ್ಷೆಗಳನ್ನು ಧರಿಸಿದ್ದಾನೆ. ಮಲೆಯಾಳ ಬ್ರಹ್ಮನು ಬ್ರಾಹ್ಮಣ ಬ್ರಹ್ಮರಾಕ್ಷಸನೆಂದೂ, ವಿದ್ಯಾರಣ್ಯರು ಅವನಿಗೆ ಯಥೇಷ್ಟವಾಗಿ ಭೋಜನಮಾಡಿಸುವ ಹಾಗೆ ಹೇಳಿ ತಮ್ಮೊಡನೆ ಕರೆತಂದರೆಂದೂ ಐತಿಹ್ಯವು ತಿಳಿಸುತ್ತದೆ. ಈಗಲೂ ಕೂಡ ಈ ರಾಕ್ಷಸನನ್ನು ಮೊದಲು ಊಟ ಉಪಚಾರಗಳಿಂದ ತೃಪ್ತಿಪಡಿಸದೆ ಶೃಂಗೇರಿಯಲ್ಲಿ ಯಾವ ಹಬ್ಬವನ್ನೂ ಆಚರಿಸುವಂತಿಲ್ಲ. ಇದಕ್ಕೆ ತಪ್ಪಿದರೆ ಭಕ್ಷ್ಯಭೋಜ್ಯಗಳನ್ನು ಮಾಡಲು ಉಪಯೋಗಿಸಿದ ಎಣ್ಣೆ ಅಥವಾ ತುಪ್ಪವು ಕುದಿಯುವುದೇ ಇಲ್ಲವಂತೆ.

ಹರಿಹರನ ಗುಡಿಯಲ್ಲಿರುವ ಮೂರ್ತಿಗೆ ನಾಲ್ಕು ಕೈಗಳಿವೆ. ಮೇಲಿನ ಬಲಗೈಯಲ್ಲಿ 'ತ್ರಿಶೂಲ'ವನ್ನೂ, ಎಡಗೈಯಲ್ಲಿ 'ಶಂಖ'ವನ್ನೂ ಧರಿಸಿಕೊಂಡಿದೆ; ಮುಂದಿನ ಬಲಗೈ 'ಅಭಯಹಸ್ತ'ದಲ್ಲಿ 'ಅಕ್ಷಮಾಲೆ'ಯನ್ನು ಹೊಂದಿದೆ; ಎಡಗೈಯಲ್ಲಿ 'ಚಕ್ರ'ವಿದೆ. ಶಂಕರನಾರಾಯಣ ಗುಡಿಯಲ್ಲಿರುವ ಮೂರ್ತಿಯು ಬಲಗೈಗಳಲ್ಲಿ ಪರಶು ಡಮರುಗಗಳನ್ನೂ, ಮೇಲಿನ ಎಡಗೈಯಲ್ಲಿ 'ಚಕ್ರ'ವನ್ನೂ ಧರಿಸಿಕೊಂಡಿದೆ; ಕೆಳಗಿನ ಎಡಗೈ 'ಅಭಯಹಸ್ತ.'

ಮೈಲಾರನ ಗುಡಿಯಲ್ಲಿರುವ ಮೂರ್ತಿಯು ತನ್ನ ನಾಲ್ಕು ಕೈಗಳಲ್ಲಿ ಡಮರುಗ, ತ್ರಿಶೂಲ, ಖಡ್ಗ, ಕಪಾಲಗಳನ್ನು ಹಿಡಿದುಕೊಂಡಿದೆ. ಪೀಠದ ಮೇಲೆ ಪ್ರಾಯಶಃ ಮೈಲಾರನಿಂದ ಯುದ್ಧದಲ್ಲಿ ಹತರಾದ ಮೂವರು ರಾಕ್ಷಸರ ರುಂಡಗಳು ಕೆತ್ತಲ್ಪಟ್ಟಿವೆ. ಬಳಿಯಲ್ಲಿ ಕಂಕಾಳಮಾಲಾಧಾರಿಣಿಯಾಗಿ ನಿಂತಿರುವ ದುರ್ಗೆಯ ವಿಗ್ರಹವಿದೆ. ನವರಂಗ ದ್ವಾರದ ಅಕ್ಕಪಕ್ಕಗಳಲ್ಲಿ ಭೈರವ, ವೀರಭದ್ರರ ಮೂರ್ತಿಗಳಿವೆ.

ಶೃಂಗೇರಿ ತಾಲ್ಲೂಕಿನಲ್ಲಿರುವ ಇತರ ಸ್ಥಳಗಳಲ್ಲಿ ಸಿಂಹಗಿರಿಯು ಬಹು ಮುಖ್ಯವಾದುದು. ಇಲ್ಲಿರುವ ವಿದ್ಯಾಶಂಕರ ದೇವಾಲಯದಲ್ಲಿ ಒಂದು ಬೃಹಲ್ಲಿಂಗವಿದೆ. ಇದು ಶಿಲ್ಪಕಲೆಯ ದೃಷ್ಟಿಯಿಂದ ಗಮನಾರ್ಹವಾದುದು. ಲಿಂಗವು ಕರಿಯ ಕಲ್ಲಿನಿಂದ

ಮಾಡಲ್ಪಟ್ಟು, ಅದರ ನಾಲ್ಕು ಮುಖಗಳಲ್ಲಿ ಗೂಡುಗಳನ್ನು ಕೆತ್ತಿದೆ. ಪೂರ್ವಭಾಗ ದಲ್ಲಿರುವ ಗೂಡಿನಲ್ಲಿ ವಿದ್ಯಾಶಂಕರರು ಶಿಷ್ಯಸಮೇತರಾಗಿ ಸಿದ್ಧಾಸನದಲ್ಲಿ ಕುಳಿತಿದ್ದಾರೆ. ಅವರು ಕೃಶಾಂಗರಾಗಿದ್ದಾರೆ. ಇದು ಸ್ವಾಮಿಗಳು ಲಂಬಿಕಾಯೋಗ ತತ್ಪರರಾಗಿರು ವದನ್ನು ಸೂಚಿಸುತ್ತದೆಂದು ಹೇಳುತ್ತಾರೆ. ಇವರ ಹಿಂದಿರುವ ಪ್ರಭಾವಳಿಯಲ್ಲಿ ಮಧ್ಯೆ ಲಕ್ಷ್ಮೀನರಸಿಂಹನ ವಿಗ್ರಹವಿದೆ. ಪಾರ್ಶ್ವಗಳಲ್ಲಿ ಶ್ರೀದೇವಿ ಭೂದೇವಿಯರು ನಿಂತಿ ದ್ದಾರೆ. ದಕ್ಷಿಣದಲ್ಲಿರುವ ಗೂಡಿನಲ್ಲಿ ಬ್ರಹ್ಮನ ಮೂರ್ತಿಯಿದೆ. ಇದರ ಹಿಂದಿರುವ ಪ್ರಭಾವಳಿಯಲ್ಲಿ ವಿಷ್ಣುವಿನ ದಶಾವತಾರಗಳು ಕೆತ್ತಲ್ಪಟ್ಟಿವೆ. ಪಶ್ಚಿಮದಲ್ಲಿರುವ ಗೂಡಿನಲ್ಲಿ ಅನಂತನ ಮೇಲೆ ಕುಳಿತಿರುವ ಪರವಾಸುದೇವನ ವಿಗ್ರಹವಿದೆ. ಇದು ಎರಡು ಕೈಗಳಲ್ಲಿ ಶಂಖಚಕ್ರಗಳನ್ನು ಧರಿಸಿದೆ. ಉಳಿದ ಎರಡು ಕೈಗಳಲ್ಲಿ ಒಂದು 'ಲೋಲ ಹಸ್ತ'; ಇನ್ನೊಂದು 'ಚಿನ್ಮುದ್ರೆ'ಯನ್ನು ಪ್ರದರ್ಶಿಸುತ್ತಿದೆ. ಉತ್ತರದ ಗೂಡಿನಲ್ಲಿ ಪಂಚಮುಖ ಈಶ್ವರನ ವಿಗ್ರಹವಿದೆ. ಇವನ ಹಿಂದಿರುವ ಪ್ರಭಾವಳಿಯಲ್ಲಿ ಅಷ್ಟದಿಕ್ಪಾ ಲಕರು ಕೆತ್ತಲ್ಪಟ್ಟಿದ್ದಾರೆ.

ಶ್ರೀ ಶಾರದಾ ಮಠ

ಶ್ರೀ ಶಂಕರಾಚಾರ್ಯರಿಂದ ಸ್ಥಾಪಿತವಾದ ನಾಲ್ಕು ಆಮ್ನಾಯ ಮಠಗಳಲ್ಲಿ ಶೃಂಗಗಿರಿಯ ಶಾರದಾ ಮಠವು ಬಹು ಮುಖ್ಯವಾದುದೆಂದೂ, ಇದೇ ಸ್ಮಾರ್ತ ಪ್ರಪಂಚದ ಜೀವನಾಡಿಯೆಂದೂ ಹಿಂದೆ ಹೇಳಿದೆಯಷ್ಟೆ. ಇಲ್ಲಿ ಮಠವನ್ನು ಕುರಿತು ಇನ್ನೂ ಒಂದೆರಡು ವಿಷಯಗಳನ್ನು ಹೇಳುತ್ತೇವೆ. ಇದರಲ್ಲಿ ಶ್ರೀ ಶಾರದಾದೇವಿಯ ಅಮೂಲ್ಯವಾದ ಆಭರಣಗಳಿವೆ. ಇವು ಸುವರ್ಣದಿಂದ ಮಾಡಲ್ಪಟ್ಟು ನವರತ್ನಖಚಿತ ವಾಗಿವೆ. ಇದಲ್ಲದೆ ರತ್ನ ಖಚಿತವಾದ ಅಡ್ಡಿಕೆಗಳುಳ್ಳ ಅನೇಕ ಮುತ್ತಿನ ಸರಗಳಿವೆ. ಇತರ ಬೆಲೆಬಾಳುವ ವಸ್ತುಗಳಲ್ಲಿ ಮುಖ್ಯವಾದುವನ್ನು ಇಲ್ಲಿ ಹೇಳಿದೆ: ಕೆಂಪುಕಲ್ಲಿನಿಂದ ಮಾಡ ಲ್ಪಟ್ಟ ಪತ್ನೀಸಮೇತನಾದ ವೇಣುಗೋಪಾಲ; ಮುತ್ತಿನಲ್ಲಿ ಕೊರೆದು ಮಾಡಿರುವ ನಂದಿ; ಚಿನ್ನದ ಲಿಂಗವನ್ನುಳ್ಳ ಪಚ್ಚೆಯ ಮಂಟಪ; ವಜ್ರಖಚಿತವಾದ ಚಿನ್ನದ ಪಂಚಪಾತ್ರೆ; ಕೆಂಪುಕಲ್ಲುಗಳಿಂದ ಕೂಡಿದ ಉದ್ಧರಣೆ; ಚಂದ್ರಮೌಳೀಶ್ವರನ ಚಿನ್ನದ ಕವಚ; ತಿರುವಾಂಕೂರು ಮಹಾರಾಜರು ಕೊಟ್ಟ ದೊಡ್ಡ ಚಿನ್ನದ ಮಂಟಪ; ಜಮುಖಂಡಿ ಅರಸಿನವರು ಅರ್ಪಿಸಿದ ಬೆಳ್ಳಿಯ ಸಿಂಹಾಸನ; ಬಾಳೀ ಅರಸಿನವರು ಕೊಟ್ಟ ಬೆಳ್ಳಿಯ ಪಾತ್ರೆಗಳು. ೧೭೯೧ರಲ್ಲಿ ಮರಾಟರು ಶೃಂಗೇರಿಯ ಮಠಕ್ಕೆ ನುಗ್ಗಿ ೬೦ಲಕ್ಷ ರೂಪಾಯಿಗಳು ಬೆಲೆಬಾಳುವ ವಸ್ತುಗಳನ್ನು ಅಪಹರಿಸಿಕೊಂಡು ಹೋದಕಾರಣ, ಮುಮ್ಮಡಿ ಕೃಷ್ಣರಾಜ ಒಡೆಯರವರ ಕಾಲಕ್ಕೆ ಹಿಂದಿನ ಆಭರಣ ಗಳು ಕಂಡುಬರುವುದಿಲ್ಲ. ಇದಲ್ಲದೆ ಮಠದಲ್ಲಿ ಕಡತಗಳೂ, ಆಜ್ಞಾಪತ್ರಗಳೂ,

ಬಿನ್ನಹದ ಓಲೆಗಳೂ ಹೇರಳವಾಗಿವೆ. ಒಂದರಲ್ಲಿ ಹೈದರ್ ಆಲಿಯು ತನ್ನ ಪರವಾಗಿ ಸ್ವಾಮಿಗಳು ಪೇಷ್ವೆ ರಘುನಾಥರಾಯನನ್ನು ಕಾಣಬೇಕೆಂತಲೂ, ತಾನು ಅವರ ಪ್ರಯಾಣಕ್ಕೆ ಸಕಲ ಸೌಲಭ್ಯಗಳನ್ನೂ ಕಲ್ಪಿಸುವುದಾಗಿಯೂ ವೆಚ್ಚಕ್ಕೆ ಹತ್ತು ಸಾವಿರದ ಐನೂರು ರೂಪಾಯಿಗಳನ್ನು ಒದಗಿಸುವುದಾಗಿಯೂ ಕೇಳಿಕೊಳ್ಳುತ್ತಾನೆ. ಮತ್ತೊಂದರಲ್ಲಿ ಟಿಪ್ಪುವು ತನ್ನ ಪ್ರಬಲ ವೈರಿಗಳ ನಾಶಕ್ಕಾಗಿ ಸ್ವಾಮಿಗಳು ಶತಚಂಡೀ ಮತ್ತು ಸಹಸ್ರಚಂಡೀ ಜಪಗಳನ್ನು ಮಾಡಬೇಕೆಂದು ಪ್ರಾರ್ಥಿಸುತ್ತಾನೆ. ಇವು ಐತಿಹಾಸಿಕ ದೃಷ್ಟಿಯಿಂದ ಬಹು ಮುಖ್ಯವಾಗಿವೆ.[4]

ಒಟ್ಟಿನಲ್ಲಿ ಶೃಂಗೇರಿಯು ಪುರಾಣಪ್ರಶಂಸಿತವಾಗಿ ಧರ್ಮಾಭಿಲಾಷಿಗಳಿಗೂ ಕಲಾಪ್ರೇಮಿಗಳಿಗೂ ಪವಿತ್ರ ಯಾತ್ರಾಸ್ಥಳವಾಗಿದೆ. ಯವನರ ಉಪಟಳಕ್ಕೆ ಸಿಲುಕಿ ಸಂಪೂರ್ಣ ನಾಶವಾಗುವಂತಿದ್ದ ಹಿಂದೂ ಸಂಸ್ಕೃತಿಯನ್ನು ಉದ್ಧರಿಸಿ ಸಂರಕ್ಷಿಸುವ ಮಹತ್ಕಾರ್ಯದಲ್ಲಿ ಭಾಗಿಗಳಾಗಿ ಶೃಂಗೇರಿಯ ಗುರುಗಳು ಸಲ್ಲಿಸಿದ ಸೇವೆಯು ಸುವರ್ಣಾಕ್ಷರಗಳಲ್ಲಿ ಬರೆದಿಡಲು ಯೋಗ್ಯವಾಗಿದೆ. ವಿಜಯನಗರ ಸಾಮ್ರಾಜ್ಯ ಸ್ಥಾಪನೆಯಲ್ಲಿ ವಿದ್ಯಾರಣ್ಯರು ನೀಡಿದ ಸಹಾಯವು ಪ್ರಾತಃಸ್ಮರಣೀಯವಾಗಿದೆ. ಈ ದೃಷ್ಟಿಯಿಂದ ಶೃಂಗೇರಿಗೆ ಕನ್ನಡನಾಡಿನ ಇತಿಹಾಸದಲ್ಲಿ ಮಾತ್ರವಲ್ಲ, ಇಡೀ ಭರತಖಂಡದ ಇತಿಹಾಸದಲ್ಲಿ ಅಗ್ರಸ್ಥಾನವು ದೊರಕಬೇಕಾದುದು ಯುಕ್ತವಾಗಿದೆ.

ಜೀವನ್ಮುಕ್ತಿವಿವೇಕೇನ ಬನ್ಧಂ ಹಾರ್ದಂ ನಿವಾರಯನ್ |
ಪುಮರ್ಥಮಖಿಲಂ ದೇಯಾದ್ವಿದ್ಯಾತೀರ್ಥಮಹೇಶ್ವರಃ ||

ಸಿ. ಬಿ. ಸೀತಾರಾಂ

---

[4] ಈ ಬಿನ್ನಹದ ಓಲೆಗಳನ್ನು ಶ್ರೀಮಾನ್ ರಾ. ನರಸಿಂಹಾಚಾರ್ಯರು ತಮ್ಮ ವರದಿಯಲ್ಲಿ ಪ್ರಕಟಿಸಿದ್ದಾರೆ (*M.A.R.* 1916). ಇವುಗಳ ಶೈಲಿಯು ಬಲು ನಯವಾಗಿ ಗೌರವಸೂಚಕವಾಗಿದೆ. ಇದರಿಂದ ಆಗ ಶೃಂಗೇರಿಯ ಗುರುಗಳಿಗಿದ್ದ ಪ್ರಾಶಸ್ತ್ಯವನ್ನೂ, ಅನ್ಯಮತೀಯರು ಸಹ ಅವರ ವಿಷಯದಲ್ಲಿ ತೋರುತ್ತಿದ್ದ ಮನ್ನಣೆಯನ್ನೂ ಮನಗಾಣಬಹುದು.

ಗ್ರಂಥ ಋಣ

BHATTACHARYA—*The Indian Images*, Part I.

BHATTASALI—*The Iconography of Buddhist and Brahmanical Sculptures in the Dacca Museum.*

GOPINATHA RAO, T. A.—*Elements of Hindu Iconography*, Vols. I, II.

HAYAVADANA RAO—*Mysore Gazetteer.*

KRISHNA, M. H., DR.—*Mysore Archæological Report*, 1936.

KRISHNA SASTRY, H.—*The South Indian Images.*

NARASIMHACHAR, R.—*The Mysore Archæological Report*, 1916.

RICE, LEWIS—*Sringeri*, No. 1, *Epi. Car.*

ಪ್ರಾಚೀನ ಹಳಗನ್ನಡದಲ್ಲಿ ಲಿಂಗವ್ಯವಸ್ಥೆ

ಇಂದು ನಮ್ಮ ಕನ್ನಡ ನುಡಿಯಲ್ಲಿ ಪುಂ ಸ್ತ್ರೀ ನಪುಂಸಕಗಳೆಂಬ ಲಿಂಗತ್ರಯಗಳು ಬಳಕೆಯಲ್ಲಿದ್ದರೂ ರೈಸ್ ಸಾಹೇಬರ ಅಭಿಪ್ರಾಯದ ಪೂರ್ವದ ಹಳಗನ್ನಡದಲ್ಲಿ ಅಥವಾ ಆ ಪೂರ್ವದ ಹಳಗನ್ನಡಕ್ಕಿಂತಲೂ ಪ್ರಾಚೀನವಾದ ಹಳಗನ್ನಡದಲ್ಲಿ ಲಿಂಗವ್ಯವಸ್ಥೆಯು ಹೀಗಿದ್ದಿರಲಾರದೆಂಬ ಊಹೆಗೆ ಬಲವಾದ ಕೆಲವು ಕಾರಣಗಳಿವೆ.

"ದ್ರಾವಿಡಭಾಷೆಗಳಲ್ಲಿ ಲಿಂಗವು ಅರ್ಥಕ್ಕೆ ಅನುಸಾರವಾಗಿರುತ್ತದೆ" ಎಂಬ ಭಾಷಾಶಾಸ್ತ್ರಜ್ಞರ ಹೇಳಿಕೆಯಂತೆ, ಪ್ರಾಚೀನ ಹಳಗನ್ನಡದಲ್ಲಿ, ಏಕೆ, ಮೂಲದ್ರಾವಿಡ ಭಾಷೆಯಲ್ಲಿ ಸಹ ಲಿಂಗಗಳ ಗೊಂದಲವಿಲ್ಲದೆ ಜನರು ಸಂದರ್ಭಕ್ಕನುಸಾರವಾಗಿ ಅರ್ಥಮಾಡಿಕೊಳ್ಳುತ್ತಿದ್ದರೆಂದು ನಿರ್ಣೈಸಬಹುದು. ಪರಿಷ್ಕೃತ ವ್ಯಾಕರಣಪ್ರಕ್ರಿಯೆಗಳಿಂದೊಡಗೂಡಿದ ಇಂದಿನ ಭಾಷೆಯಲ್ಲಾದರೂ "ಆ ಮಗು ಅಳುತ್ತಿದೆ" ಎಂದರೆ ಬರಿಯ 'ಅಳುತ್ತಿದೆ' ಎಂಬ ಕ್ರಿಯಾಪದದ ದೆಸೆಯಿಂದ ಯಾರೂ 'ಮಗು' ಶಬ್ದವು ನಪುಂಸಕಲಿಂಗವೆಂದು ಹೇಳರು. ಈ ಕುರಿತು ಮಲೆಯಾಳದಿಂದ ಒಂದು ನಿದರ್ಶನವನ್ನು ಗಮನಿಸೋಣ.

ಞಾನ್	ಪೋಕುನ್ನು	(ನಾನು ಹೋಗುತ್ತೇನೆ)
ನೀ	ಪೋಕುನ್ನು	(ನೀನು ಹೋಗುತ್ತೀಯೆ)
ಅವನ್	ಪೋಕುನ್ನು	(ಅವನು ಹೋಗುತ್ತಾನೆ)
ಅವಳ್	ಪೋಕುನ್ನು	(ಅವಳು ಹೋಗುತ್ತಾಳೆ)
ಅದು	ಪೋಕುನ್ನು	(ಅದು ಹೋಗುತ್ತದೆ)
ಞಙ್ಙಳ್	ಪೋಕುನ್ನು	(ನಾವು ಹೋಗುತ್ತೇವೆ)
ನಿಙ್ಙಳ್	ಪೋಕುನ್ನು	(ನೀವು ಹೋಗುತ್ತೀರಿ)
ಅವರ್	ಪೋಕುನ್ನು	(ಅವರು ಹೋಗುತ್ತಾರೆ)
ಅವ	ಪೋಕುನ್ನು	(ಅವು ಹೋಗುತ್ತವೆ)

ಈ ಉದಾಹರಣೆಯಿಂದ ಮಲೆಯಾಳದಲ್ಲಿ ಇಂದಿಗೂ ವಚನ ಪುರುಷಲಿಂಗ ಭೇದಗಳಿಲ್ಲದೆ ಕ್ರಿಯಾಪದವು ಒಂದೇ ರೂಪಿನಲ್ಲಿ ವ್ಯವಹರಿಸುತ್ತಿದೆ ಎಂಬ ವಿಷಯವು ಮುಂದಟ್ಟಾಗದಿರದು. ದ್ರಾವಿಡಭಾಷೆಗಳು ಪರಿಷ್ಕಾರ ಹೊಂದುವುದಕ್ಕೆ ಮೊದಲಿನ ಒಂದು ವೈಲಕ್ಷಣ್ಯವಾಗಿರಬೇಕಿದು. ಮಲೆಯಾಳದ ಇತಿಹಾಸವು ಮಿಕ್ಕ ದ್ರಾವಿಡ ಭಾಷೆಗಳಿಗಿಂತ ಈಚೆಗಿನದಾದರೂ, ಮಲೆಯಾಳವು ಇದೊಂದು ವಿಷಯದಲ್ಲಿ ತನ್ನ

ಪ್ರಾಚೀನತೆಯನ್ನುಳಿಸಿಕೊಂಡು, ಮೂಲದ್ರಾವಿಡ ಭಾಷೆಯ ಸ್ವರೂಪದ ಸುತ್ತಲೂ ಕವಿದಿರುವ ಕತ್ತಲೆಗೆ ಒಂದು ಪ್ರಭೆಯ ಕಿರಣವನ್ನು ಬೀರುತ್ತಿದೆ.

ಹಾಗೆಯೇ, ಕೇಶಿರಾಜನು ಕನ್ನಡಮಾತೆಯು ಪ್ರಕಾಶಿಸುವ ಒಂದು ನಂದಾದೀಪವನ್ನು ತೋರಿಸಿಕೊಟ್ಟಿದ್ದಾನೆ—

ಸವನಾಗಿ ಭೂತದೊಳ್ ಲಿಂ
ಗ ವಚನದೊಳ್ ತಳ್ತು ವರ್ತಮಾನ ಭವಿಷ್ಯ
ದ್ವ್ಯವಹೃತಿಗಳ ಗುಂ ಕುಂ ಸ
ಲ್ವುವು ತಾವನ್ಯೈಕ ವಚನದೊಳ್ ನೆಲಸಿರ್ದುಂ ||

ಗುಂ, ಕುಂ ಪ್ರತ್ಯಯುಗಳ ಪೊರ್ದುಗೆಯಿಂದ ಕಾಲಲಿಂಗ ವಚನಭೇದಗಳಿಲ್ಲದೆ ಕ್ರಿಯಾಪದವು ವ್ಯವಹರಿಸುವುದೆಂಬುದೇ ಇದರ ತಾತ್ಪರ್ಯ. ಕೇಶಿರಾಜನು ಕೊಟ್ಟ ಉದಾಹರಣೆಗಳು :—

೧. ಕಾಲತ್ರಯಕ್ಕೆ :

ಭೂತ: ಅಂದು ಮಾಡುಗುಂ, ಅಂದು ಮಾಬ್ಕುಂ.
ವರ್ತಮಾನ: ಎಮಗೀಗಳೆ ಸೂಚಿಸುಗುಂ.
ಭವಿಷ್ಯತ್ಕಾಲಕ್ಕೆ: ಅವರ್ ನಾಳೆ ಕಾಣ್ಗುಂ.

೨. ಲಿಂಗತ್ರಯಕ್ಕೆ :

ಪುಲ್ಲಿಂಗ: ಭೂವಳಯಾಧಿಪಂ ನುಡಿಗುಂ . . . .
ಸ್ತ್ರೀಲಿಂಗ: . . . ತಳೋದರಿ ಬಿಸುಸುಯ್ಗುಂ ಬಯ್ಗುಂ . . . .
ನಪುಂಸಕ: . . . ಬೀಸುಗುಂ ಗಂಧವಾಹಂ.

೩. ವಚನತ್ರಯಕ್ಕೆ :

ಒರ್ವನೆ ಗೆಲ್ಗುಂ ಕಿರೀಟಿ ಕೌರವ ಬಲಮಂ.
ಬಲನಾರಾಯಣರಿರ್ವರುಂ ನುಡಿಗುಂ . . . .
ಸಿಡಿಲ್ಗಳೆಱಗುಗುಂ . . . .

ಇತ್ಯಾದಿ.

ಈ ಅಂಶಗಳನ್ನು ನೋಡಿದರೆ ಇಂದಿರುವ ಲಿಂಗವಿಭಾಗವು ಕನ್ನಡ (ದ್ರಾವಿಡ) ಭಾಷೆಗೆ ಸಹಜವಲ್ಲವೆಂದು ಹೇಳಬಹುದು. ದ್ರಾವಿಡಭಾಷೆಗಳ ಉದಯಕಾಲದಲ್ಲಿ

ಪ್ರಾಯಶಃ ನಾಮಪದಗಳಲ್ಲಿ ಸಹ ಲಿಂಗಭೇದಗಳಿರಲಿಲ್ಲವೆನ್ನಲೂಬಹುದು.[1] ಕ್ರಮೇಣ ನಾಮಪದಗಳಲ್ಲಿ ಲಿಂಗಭೇದಗಳು ಬಂದಿರಬಹುದು. ಆದರೂ ಕ್ರಿಯಾಪದಗಳಲ್ಲಿ ಆ ಭೇದವು ಬಹಳಕಾಲದ ವರೆಗೆ ಬಾರದಿದ್ದಿರಬೇಕು (ಈಗ ಮಲೆಯಾಳದಲ್ಲಿರುವಂತೆ). ತದನಂತರ ಭಾಷಾ ಬೆಳವಣಿಗೆಯಿಂದ ಮತ್ತು ಪರಭಾಷಾ ಸಂಸ್ಕೃತಿಗಳ ಸಂಪರ್ಕದಿಂದ ಸಾವಿರಾರು ವರ್ಷಗಳ ಕಾಲದಲ್ಲಿ ನುಡಿಯು ಹೀಗೆ ಪರಿಷ್ಕೃತವಾಗಿರಬೇಕು.

ಈ ಸಂದರ್ಭದಲ್ಲಿ ಇನ್ನೊಂದು ಗಮನಾರ್ಹವಾದ ಸಂಗತಿ. ಪ್ರಾಚೀನ ಹಳಗನ್ನಡದ ಬೆಳವಣಿಗೆಯು ಒಂದು ಅವಸ್ಥೆಯಲ್ಲಿ ಪುಂನಪುಂಸಕಗಳೆಂಬೆರಡು ಲಿಂಗಗಳು ಮಾತ್ರವಿದ್ದಿರಬೇಕೆಂಬುದಕ್ಕೆ ತಕ್ಕ ಕಾರಣಗಳಿವೆ.

ಕವಿರಾಜಮಾರ್ಗದ ಕಾಲಕ್ಕಿಂತ ಹಿಂದಣ ಕನ್ನಡ ಗ್ರಂಥಗಳಾವುವೂ ನಮಗೆ ಈ ವರೆಗೆ ದೊರಕಲಿಲ್ಲ. ಈಗ ಸಾಹಿತ್ಯಪರಿಷತ್ಪತ್ರಿಕೆಯಲ್ಲಿ ಅಚ್ಚಾಗುತ್ತಲಿರುವ ವಡ್ಡಾರಾಧನೆಯು ಕ್ರಿ.ಶ. ೭ನೆಯ ಶತಮಾನದ (?) ಕೃತಿಯೆಂದು ನಿರ್ಣಯವಾದರೆ ಅದೇ ಪ್ರಾಚೀನವಾಯಿತು. ಈ ಗ್ರಂಥಗಳನ್ನುಳಿದರೆ ಇವಕ್ಕಿಂತ ಹಿಂದಣ ಬರವಣಿಗೆಗಳೆಂದರೆ ಶಾಸನಗಳು. ಪ್ರಾಕ್ತನ ವಿಮರ್ಶವಿಚಕ್ಷಣರು ಕ್ರಿ.ಶ. ೪೫೦ರಷ್ಟು ಹಿಂದಣ ಕಾಲದ ಕನ್ನಡಶಾಸನವನ್ನು ಬೆಳಕಿಗೆ ತಂದಿದ್ದಾರೆ. (ಹಲ್ಮಿಡಿಶಾಸನ: ಪು. ೭೩ ; ಮೈ. ಆ. ರಿ. ೧೯೩೬).

(೧) ರೈಸರ ಅಭಿಪ್ರಾಯದ ಪೂರ್ವದ ಹಳಗನ್ನಡದ (ಎಂದರೆ ಕ್ರಿ.ಶ. ೭ನೆಯ ಶತಮಾನಕ್ಕೆ ಹಿಂದಣ) ಕನ್ನಡ ಶಾಸನಗಳನ್ನು ಪರೀಕ್ಷಿಸಿದರೆ ಒಂದು ಶಾಸನ

---

[1] ಇಂದಿಗೂ ಅಂಥ ಕೆಲವು ಅಚ್ಚಗನ್ನಡ ಶಬ್ದಗಳಿವೆ. ಉದಾ.—ತಂದೆ, ತಂಗಿ, ಗಿಡ—ಈ ಮೂರು ಶಬ್ದಗಳು ಸಮಾನಲಿಂಗ ಚಿಹ್ನೆಯುಳ್ಳ ವಿಭಕ್ತಿಗಳನ್ನು ಪಡೆಯುತ್ತವೆ. "ತಂದೆಂ, ತಂಗಿಯಳ್ . . ." ಮುಂತಾಗಿ ಯಾರೂ ಎಂದೂ ಹೇಳಲಿಲ್ಲ, ಹೇಳುವುದಿಲ್ಲ, ಹೇಳರು.

1.	ತಂದೆ	ತಂಗಿ	ನಾಯಿ
2.	ತಂದೆಯನ್ನು	ತಂಗಿಯನ್ನು	ನಾಯಿಯನ್ನು
3.	ತಂದೆಯಿಂದ	ತಂಗಿಯಿಂದ	ನಾಯಿಯಿಂದ
4.	ತಂದೆಗೆ	ತಂಗಿಗೆ	ನಾಯಿಗೆ
5.			
6.	ತಂದೆಯ	ತಂಗಿಯ	ನಾಯಿಯ
7.	ತಂದೆಯಲ್ಲಿ	ತಂಗಿಯಲ್ಲಿ	ನಾಯಿಯಲ್ಲಿ

ಇದೇ ರೀತಿ ತಮಿಳು ತೆಲುಗುಗಳ ತನ್ದೈ, ತನ್ಡ್ರಿ ಶಬ್ದಗಳು ವ್ಯವಹರಿಸುತ್ತಿವೆಯೆಂಬುದೂ ಗಮನಾರ್ಹ.

ದಲ್ಲಾದರೂ ಏಕವಚನ ಸ್ತ್ರೀಲಿಂಗಕ್ಕೆ ಉದಾಹರಣೆ ಸಿಗಲಿಲ್ಲ.[1] ಆದುದರಿಂದ ಅಂದಿನ ಕಾಲದ ಸ್ತ್ರೀಲಿಂಗ ಏಕವಚನವು ನಾಮಪದ ಕ್ರಿಯಾಪದಗಳಲ್ಲಿ ಎಂತಹ ರೂಪನ್ನು ಪಡೆದಿದ್ದಿತೆಂಬುದನ್ನು ಹೇಳಲಾಗುವುದಿಲ್ಲ.

(೨) ಈ ಶಾಸನಗಳಲ್ಲಿ ಸ್ತ್ರೀಲಿಂಗ ಸರ್ವನಾಮ ಪದವೂ ಉಪಯೋಗವಾಗಲಿಲ್ಲ.

(೩) ಈಗ ತೀರ ಗ್ರಾಮ್ಯವೆಂದು ಹೇಳಿಸಿಕೊಂಡಿರುವ, ಒಂದಿಷ್ಟೂ ಪರಿಷ್ಕಾರ ವನ್ನು ಪಡೆಯದ, ಹಳಗನ್ನಡವನ್ನು ಇಂದಿಗೂ ಮನೆಮಾತನ್ನಾಗಿ ಆಡುವ ಪಂಗಡ ದವರು[2] ದಕ್ಷಿಣ ಕನ್ನಡಜಿಲ್ಲೆಯಲ್ಲಿದ್ದಾರೆ. ಅವರಾಡುವ ಈ ಹಳಗನ್ನಡವು ನಿಶ್ಚಯ ವಾಗಿಯೂ ಪ್ರಾಚೀನಕಾಲದ ಭಾಷಾಸ್ವರೂಪವನ್ನು ಬಹಳ ಮಟ್ಟಿಗೆ ಕಾದಿಟ್ಟಿದೆ. ಏಕೆಂದರೆ ಸಂಭಾಷಣೆಯ ಮಾತಿನಲ್ಲಿ ಯಾರೂ ಪರಿಷ್ಕಾರವನ್ನಷ್ಟು ನೋಡುವುದಿಲ್ಲ. ಮಾತ್ರವಲ್ಲ; ಇದನ್ನಾಡುವ ಜನಗಳು ಹೆಚ್ಚಾಗಿ ಮಲೆನಾಡಿನಲ್ಲಿದ್ದು ಕೃಷಿಕೆಲಸಗಳಲ್ಲಿ ತಮ್ಮ ಆಯುಸ್ಸನ್ನು ಕಳೆಯುವುದರಿಂದ ಹೊರಗಿನ ಸಂಸ್ಕಾರವವರಿಗಿಲ್ಲದೆ, ಅವರ ನುಡಿ ಯಿನ್ನೂ ತನ್ನ ರೂಪನ್ನು ಬಹಳ ಬದಲಾಯಿಸಲಿಲ್ಲ. ಈ ಭಾಷೆಯಲ್ಲಿ ಅತಿ ಪ್ರಾಚೀನ ಪ್ರಕ್ರಿಯೆಗಳೂ, ಶಬ್ದಗಳೂ, ನುಡಿಗಟ್ಟುಗಳೂ ಇಂದಿಗೂ ಬಾಳಿಕೊಂಡಿವೆ.[3] ಈ ಹಳೆಯ ಭಾಷೆಯಲ್ಲಿ ಸ್ತ್ರೀಲಿಂಗವನ್ನು ಪಯೋಗಿಸತಕ್ಕ ಎಲ್ಲಾ ಎಡೆಗಳಲ್ಲಿ ನಪುಂಸಕ ಲಿಂಗವೇ ಉಪಯೋಗವಾಗುತ್ತಿದೆ. (ಸಂದರ್ಭದಿಂದ ಅರ್ಥವು ತಿಳಿಯುತ್ತಿದೆ); ಉದಾ: ಅಕ್ಕ ನಿನ್ನೆ ಬಂದಿದು. ಅದರ ಮನೆಯೋರು ನಾಳೆ ಬಕ್ಕು, ಇತ್ಯಾದಿ. (ಅಕ್ಕ ನಿನ್ನೆ ಬಂದಳು. ಅವಳ ಮನೆಯವರು ನಾಳೆ ಬರುವರು. . . .)

(೪) ನಮ್ಮ ನುಡಿಯ ಸಹೋದರಿಯೆನಿಸಿಕೊಂಡಿರುವ ತೆಲುಗಿನಲ್ಲಿ ಇಂದಿಗೂ ಲಿಂಗಗಳೆರಡೇ ಸರಿ. ಪುಲ್ಲಿಂಗ ನಪುಂಸಕಲಿಂಗಗಳನ್ನು ಮಹತ್ ಅಮಹತ್ ಶಬ್ದ ಗಳೆನ್ನುವರು. ಮೇಲೆ ಹೇಳಿದ ಹಳಗನ್ನಡದಲ್ಲಿರುವಂತೆ ಇಲ್ಲಿಯೂ ಸ್ತ್ರೀಲಿಂಗದ ಸ್ಥಾನವೆಲ್ಲಾ ನಪುಂಸಕಲಿಂಗಕ್ಕೆ ಸೇರಿಕೊಂಡಿದೆ.

---

[1] ಇತ್ತೀಚೆಗೆ ಡಾ|| ನರಸಿಂಹಯ್ಯನವರು ಬರೆದ *A Grammar of the Oldest Kanarese Inscriptions* ಎಂಬ ಗ್ರಂಥದಲ್ಲೂ 'ತಪಚ್ಚಲೆ' ಎಂಬ ಒಂದು ಪದವು ಮಾತ್ರ ಸ್ತ್ರೀಲಿಂಗಕ್ಕೆ ಉದಾಹರಣೆಯಾಗಿ ಕೊಡಲ್ಪಟ್ಟಿದೆ (ಪು. ೩೦೪). ಅದೂ ಸರಿಯಾದ ಉದಾಹರಣೆಯಲ್ಲೆಂಬುದು ಅದರ ಪಕ್ಕದ (?) ಚಿಹ್ನೆಯೂ ಹೇಳುತ್ತಿದೆ.

[2] ಹವ್ಯಕ ಬ್ರಾಹ್ಮಣರು, ಮಲೆನಾಡಿನ ಗೌಡರು ಮೊದಲಾದವರು.

[3] ಉತ್ತಮಪುರುಷ ಸರ್ವನಾಮಕ್ಕೆ ಎದುರಿಗಿರುವವರನ್ನು ಸೇರಿಸಿಕೊಳ್ಳುವ ಮತ್ತು ಸೇರಿಸಿ ಕೊಳ್ಳದ ಎರಡು ಬಹುವಚನಗಳಿರುವುವು (ಎಂಗೊ, ನಾವು): ಒಂದೋನ್, ಇಪ್ಪೋನ್ ಇತ್ಯಾದಿ ಹಳೆಯರೂಪಗಳು.—ಇಂದಿಗೂ ರೂಢಿಯಲ್ಲಿವೆ.

ಉದಾ: ಅಕ್ಕ ವಚ್ಚಿನದಿ (ಅಕ್ಕ ಬಂದಳು) ಅದಿ ಬಾಗವುನ್ನದಿ (ಅವಳು ಚೆನ್ನಾಗಿದ್ದಾಳೆ) ಇತ್ಯಾದಿ.

ಈ ಕ್ರಮವು ನಮ್ಮ ಆಡುವ ಹಳಗನ್ನಡದಂತೆ ಬರಿಯ ಸಂಭಾಷಣೆಯಲ್ಲಲ್ಲದೆ ಸಾಹಿತ್ಯದಲ್ಲೂ ತೆಲುಗಿನಲ್ಲಿ ಉಪಯೋಗವಾಗುತ್ತಿದೆ. ಇದರಿಂದಾಗಿ ತೆಲುಗರ ಸಂಸ್ಕೃತಿಯು ಇತರ ದ್ರಾವಿಡರ ಸಂಸ್ಕೃತಿಗಿಂತ ಕೆಳಮಟ್ಟಿನದೆಂದು ಸರ್ವಥಾ ಹೇಳಲಾಗದು. ಎಂತಹ ಸಂಸ್ಕಾರಗಳೂ ಪರಿಷ್ಕಾರಗಳೂ, ಅವರ ನುಡಿಯಲ್ಲಿರುವ ಇದೊಂದು ಪ್ರಾಚೀನಾಂಶವನ್ನು ಮಾರ್ಪಡಿಸಲಾರದೆ ಹೋದುವು. ಪ್ರಗತಿಗೂ ಪ್ರಾಚೀನತೆಗೂ ಆವ ವಿರೋಧವೂ ಇರುವುದಿಲ್ಲ.

ಈ ಕಾರಣಗಳಿಂದ ಅತಿ ಪ್ರಾಚೀನಕಾಲದಲ್ಲಿ ಮೂಲದ್ರಾವಿಡ ಭಾಷೆಯಲ್ಲಿ ಲಿಂಗಭೇದಗಳಿದ್ದಿರಲಾರದೆಂದೂ, ವ್ಯಾಕರಣವು ಬಹಳ ಸುಲಭವಿದ್ದಿತೆಂದೂ, ಕ್ರಮೇಣ ಬೆಳವಣಿಗೆಯ ಒಂದು ಅವಸ್ಥಾನದಲ್ಲಿ ಪುಂಸಪುಂಸಕ ಲಿಂಗಗಳು ಮಾತ್ರ ವಿದ್ದಿರಬೇಕೆಂದೂ ಪ್ರತಿಪಾದಿಸುವುದರಲ್ಲಿ ಯುಕ್ತಿ ಇದೆ. ನುಡಿಗಳಲ್ಲಿ ಕಂಡುಬರುವ ಇಂತಹ ಅಪೂರ್ವವಾದ ವ್ಯಕ್ತಿತ್ವದ ಚಿಹ್ನೆಗಳು ಅವುಗಳ ಪ್ರಾಚೀನ ಸ್ವರೂಪವನ್ನು ಕಿಂಚಿತ್ತಾದರೂ ಬೆಳಗಿಸಲಾರವೆ?

ಎಂ. ಮರಿಯಪ್ಪ ಭಟ್.

ಓಬವ್ವೆ

೧

ಚಿತ್ರದುರ್ಗದಾ ಕೋಟೆಯ ಸುತ್ತಿ
ನಿಂತಿದ್ದರು ಸೈನಿಕರು
ತುರುಷ್ಕ ಸೈನಿಕರು !
ಅಲುಗದೆ ಕದಲದೆ ಕಣ್ಣೆವೆಯಿಕ್ಕದೆ
ನಿಂತಿದ್ದರು ಸೈನಿಕರು
ತುರುಷ್ಕ ಸೈನಿಕರು !

ಮದಕರಿನಾಯಕನೇಳ್ಗೆಯ ಕಂಡು
ಹೈದರನಟ್ಟಿದ ಕಡುಗಲಿ ದಂಡು
ಹೆಂಡಿರು ಮಕ್ಕಳ ಊರಲಿ ಬಿಟ್ಟು
ದಳಪತಿಯಾಜ್ಞೆಗೆ ಮನಸ್ಸು ಕೊಟ್ಟು
ಬಂದು, ಕೋಟೆಯ ಮುತ್ತಿದುದು
ಸೈನ್ಯದ ಕೋಟೆಯ ಕಟ್ಟಿದುದು !

ಮೂಡಿತು ಹೊತ್ತು, ಮುಳುಗಿತು ಹೊತ್ತು
ಕತ್ತಲಾಯಿತು ಬೆಳಗಾಯಿತು
ದಿನದಿನ ದಿನಗಳು ಮುಂದುರುಳಿ
ಪಕ್ಷಗಳಾದವು ಗ್ರಹಹೊರಳಿ

ಲಗ್ಗೆಯ ಹತ್ತಲು ತೊಡಗಿದರು
ನೆಲಕ್ಕೆ ಬಿದ್ದರು, ಒರಗಿದರು.
ದುರ್ಗವ ಭೇದಿಸಲಡಹಾಯ್ತು
ಕಾದಿ ಮಡಿದರು ತಲೆಹೊಯ್ತು.
ನಿಷ್ಫಲವಾದವು ಯತ್ನಗಳು,
ಎಲ್ಲ ಪ್ರಯತ್ನಗಳು !

ನೋವು ನಿರಾಶೆಗೆ ಆಹುತಿಯಾಗುತ
ತುರುಕರ ಪಡೆ ಬಲು ಕುಗ್ಗಿದುದು
ಕ್ಷಣ ಕ್ಷಣಕೂ ಕಳೆಗುಂದಿದುದು
ಕಳವಳ ಕವಿಯಿತು, ಹುರುಪೋ ಇಂಗಿತು
ಮಂಕು ಬಡಿಯಿತು ಯೋಧರಿಗೆ
ಬಿರುದಾಂಕಿತ ರಣಧೀರರಿಗೆ.

ಹೈದರನೆದೆಯಲಿ ಕಿಚ್ಚು ಕೆರಳಿತ್ತು
ಯಜ್ಞದ ಕುಂಡವ ಹೋಲಿತ್ತು.
ಕುದಿವ ಅಶಾಂತಿಯ ತಾಂಡವದಬ್ಬರ
ಕಡಲಲೆ ಘೋಷವ ಮೀರಿತ್ತು.
ಏಕಾಂತದಿ ತಲೆ ಕೊಡಹುವ ವರ್ತನೆ
ಕೆರಳಿಹ ಸಿಂಹವ ಜರೆದಿತ್ತು.

ಸಾಗಿತು ಕಾಲವು ಮುಂದು ಮುಂದಕ್ಕೆ!
ಉಳಿದುದು ಭರವಸೆ ಹಿಂದು ಹಿಂದಕ್ಕೆ!

*　　　*　　　*

ಕ್ರೂರ ವಿರೋಧಿಯು ಮುತ್ತಿಗೆ ಹಾಕಲು
ಮದಕರಿನಾಯಕ ಕೆರಳಿದನು
ಮದಿಸಿದ ಗಜದೊಲು ಗದರಿದನು.
ಎಂತು ವಿರೋಧಿಯನಟ್ಟುವುದೆನ್ನುತ
ಅನುಚಣ ಸೈನ್ಯವು ನಿಂತಿತ್ತು
ಕೋಟೆಯ ಬಾಗಿಲ ಬಲಿದಿತ್ತು.
ಕಗ್ಗವಿ ಸೆರೆಯುಲಿ ಸರಳುವ ಸರರೊಲು
ಅಪಮಾನದ ಕಾಳ್ಗಿಚ್ಚಿನಲಿ
ಸಿಡಿದುದು ಸ್ವತಂತ್ರ ದಾಹದಲಿ.

ಊರಿನ ಮಂದಿಗೆ ಅಲುಗದೆ ಕದಲದೆ
ಹೊಸ ಹೊಸ ಯಾತನೆ ಮೈದೋರಿ
ಕಾಣದೆ ಹೋಯಿತು ಹೊಸದಾರಿ.

ತುರುಷ್ಕರೊಂದಿಗೆ ಗೆಲ್ಲುವುದೆಂದಿಗೆ
ಎನುವ ಕುತೂಹಲ ಒಡಮೂಡಿ
ಕಳವಳ ಹೊಮ್ಮಿತು ಬಲು ಕಾಡಿ.

ಎರಡೂ ಪಡೆಯಲಿ ಕಡುಚಿಂತೆ
ಧಗಧಗಿಸಿದ್ದಿತು ಉರಿಯಂತೆ!

ಸಾಗಿತು ಕಾಲವು ಮುಂದು ಮುಂದಕ್ಕೆ!
ಉಳಿದುದು ಭರವಸೆ ಹಿಂದು ಹಿಂದಕ್ಕೆ!

೨

ಹೈದರನಾಶಾಭಂಗವ ನೆನೆಯುತ
ದಳಪತಿ ಮನದಲಿ ಕನಲಿದನು.
ಅಭೇದ್ಯ ಕೋಟೆಯ ನೋಡುತ ನೋಡುತ
ದಿಕ್ಕೇ ಕಾಣದೆ ಮರುಗಿದನು.
ಸೋತಿಹ ತೋಳ್ಗಳ ನೋಡುತ ನೋಡುತ
ಬದುಕನು ದೂರುತ ಕೊರಗಿದನು.

ಚಿಂತಿಸುತಿಂತಿರೆ ಇದ್ದಕ್ಕಿದ್ದೊಲು
ಖುರಪುಟದಬ್ಬರ ಕೇಳಿದುದು!
ದೂರ ದಿಗಂತದಿ ಓಕುಳಿಯೆರಚುತ
ಧೂಳಿನ ಹೊಗೆ ಮೇಲೇರಿದುದು!
ಸಮಸ್ತ ಸೈನ್ಯವೆ ತವಕಕೆ ಸಿಲುಕಿ
ಬಂದವರಾರೋ ಎನ್ನುತ ಅಳುಕಿ
ಹೈದರ್ ಬಂದನೆ? ಎನ್ನುತ ನಡುಗಿ
ನಿಂತ ನಿಲುವಲಿ ನಿಂತಿತ್ತು!

ಹೈದರನಟ್ಟಿದ ರಾಹುತನೊಬ್ಬನು
ನುಗ್ಗುತ ಬಂದನು ಶರವೇಗದಲಿ,
ಕಾತರ ಕೆರಳಿತು ಆತುರ ಹೆಚ್ಚಿತು
ದಳಪತಿ ನಿಂತನು ಆಶ್ಚರ್ಯದಲಿ!

ನೆಲಕ್ಕೆ ಧುಮುಕಿದ ರಾಹುತನಂದು
ಕ್ಷಣವಾದರು ತಡಮಾಡದೆ ಬಂದು
ದಳಪತಿ ಎದುರಲಿ ಸಲಾಮು ಮಾಡಿ
ಏನನೊ ಪಿಸುಪಿಸುಗುಟ್ಟಿದನು
ಸದ್ದು ಮಾಡದೆ ಹೇಳಿದನು.

ಹೇಳುತ ಹೇಳುತ ಅವನೆದೆ ಉಬ್ಬಲು
ಕೇಳುತ ಕೇಳುತ ದಳಪತಿ ಕೂಡ
ಹರುಷದ ಭರದಲಿ ಹಿಗ್ಗಿದನು!
ದಳಪತಿ ಮುಖದಲಿ ಗೆಲುವನು ನೋಡುತ
ಕಾತರ ತಾಳಿದ ಸೈನ್ಯ ಸಮೂಹ
ಏನೂ ಅರಿಯದೆ ಹಿಗ್ಗಿದುದು!

* * *

ಮರುದಿನ ಪಾಳೆಯದಗಲಕು ಗುಜುಗುಜು
ಪಿಸುಪಿಸು ಸುದ್ದಿಯು ಸಾಗಿತ್ತು.

"ಕಳ್ಳದಾರಿಯು ಇರುವುದು ಎಂಬರು
ನಿನಗದು ಗೊತ್ತೇ ಹೇಳಣ್ಣ?"

"ಎಲ್ಲೊ ರಹಸ್ಯದ ಪಥವಿಹುದಂತೆ!"
"ಗುಪ್ತ ಮಾರ್ಗವು ಉಂಟಂತೆ!"

"ಎತ್ತಲಿರುವುದೊ ಬಲ್ಲವರಾರು?"
"ಹುಡುಕಲು ಭೂಪತಿ ಮೆಚ್ಚುವನು!"

ಇಂತು ವಿಚಾರವು ನಡೆದಿತ್ತು
ಹೊಸ ಸಂಗತಿ ಹಬ್ಬಿತ್ತು.

ವೀರ್ಯ ಪರಾಕ್ರಮ ಶೌರ್ಯೋತ್ಸಾಹದ
ಇನ್ನೂರಾಳ್ಗಳ ಬಳಿ ಕರೆದು
ಗುಪ್ತ ಮಾರ್ಗವ ಹುಡುಕುವ ಕಜ್ಜಕೆ
ದಳಪತಿ ನೇಮಕ ಮಾಡಿದನು.

ಮದಕರಿನಾಯಕನಾಶೆಗೆ ಇಂದು
ಕೊನೆಗೂ ತುದಿ, ಬಳಿಸಾರಿತು ಎಂದು
ರೆಪ್ಪೆಯ ಮುಚ್ಚದೆ ಕಾತರದಿಂದ
ಎಂದಿಗೆ ಜಯ ಎಂಬಾತುರದಿಂದ
ಚಳಿ, ಮಳೆ, ಬಿಸಿಲನು ಲೆಕ್ಕಿಸದಂತೆ
ಕಿರುದಾರಿಯ ತಡಕಾಡಿದರು,
ಕಿಬ್ಬಾಗಿಲ ಹುಡುಕಾಡಿದರು.

ದಿನಗಳು ಬಂದವು, ದಿನಗಳು ಕಳೆದವು,
ಕಳ್ಳ ದಾರಿಯು ಕಾಣದಿರೆ,
ಚೇತನಗುಂದಿತು, ಯಾತನೆ ಹೆಚ್ಚಿತು,
ಮರಳಿ ನಿರಾಶೆಯು ಆಳಿದುದು.

ತೆಪ್ಪಗಾಯಿತು ಮತ್ತೊಮ್ಮೆ
ತಣ್ಣಗಾಯಿತು ಒಣ ಹೆಮ್ಮೆ!

ಸಾಗಿತು ಕಾಲವು ಮುಂದು ಮುಂದಕ್ಕೆ!
ಉಳಿದುದು ಭರವಸೆ ಹಿಂದು ಹಿಂದಕ್ಕೆ!

೩

ಸಂಧ್ಯಾಗಗನದ ವರ್ಣವಿತಾನದಿ
ದಿಕ್ತಟ ಶಾಂತಿಯನೊಲಿಸಿತ್ತು.
ಗಿರಿ, ನದಿ, ಗಹ್ವರ ಕೋಟೆಯ ಬಳಸುತ
ಮಬ್ಬಿನ ಛಾಯೆಯು ಬರುತಿತ್ತು,
ಸಕಲ ಜಗತ್ತೂ ಮೌನದಿ ಜೆರೆಯುತ
ನಿದ್ರಿತ ಶಿಶುವನು ಹೋಲಿತ್ತು!

ಹೈದರನಾಳ್ಗಳು ತಿರುಗುತ್ತಿರಲು
ತಟ್ಟನೆ ಕಂಡರು ಕೌತುಕವ!
ಮಬ್ಬಿನ ಮರೆಯಲಿ ಯಾವುದೊ ವ್ಯಕ್ತಿ
ಕೋಟೆಯ ಹತ್ತಿರ ಬರುತಿತ್ತು

ಹೆಜ್ಜೆಯ ಸಪ್ಪಳ ಕೇಳದ ತೆರದಲಿ
ಮೆಲ್ಲಗೆ ಮೆಲ್ಲಗೆ ನಡೆದಿತ್ತು.
ಏನು ವಿಚಾರವೊ ಎನ್ನುತ ಶಂಕಿಸಿ
ಕಣ್ಮರೆಯಾದರು ಹಿಂದುಗಡೆ.
ದೂರದ ವ್ಯಕ್ತಿಯು ಹತ್ತಿರ ಸಾರಲು
ಕಣ್ಣೆವೆ ಮುಚ್ಚದೆ ನೋಡಿದರು
ದೃಷ್ಟಿಸಿ ಕಂಡರು ಬುಟ್ಟಿಯ ಹೊತ್ತಿಹ
ಮೊಸರನು ಮಾರುವ ಹೆಂಗಸನು !

ಆಕೆ, ಕೋಟೆಯ ಹತ್ತಿರ ಬಂದು
ಸುತ್ತಮುತ್ತಲು ನೋಡಿದಳು . . !
ಮೆಲ್ಲಗೆ ಹೆಜ್ಜೆಯ ಸಪ್ಪಳ ಮಾಡಿ
ಯಾರೂ ಕಾಣದ ಪರಿಯನು ನೋಡಿ
ಕದ್ದು ನಡೆದಳು ಮುಂದುಗಡೆ
ಕಣ್ಮರೆಯಾದಳು ನಿಂತಕಡೆ !

ಅಡಗಿದ ಸೈನಿಕರಚ್ಚರಿಗೊಂಡರು
ದಳಪತಿ ಸನಿಹಕೆ ಓಡಿದರು
ಹಿರಿಯ ರಹಸ್ಯವು ಭೇದಿಸಿತೆನ್ನುತ
ದಳಪತಿ ಬೀಡಿಗೆ ನುಗ್ಗಿದರು
ಅರಳಿದ ಭಟರನು ನೋಡಿದ ಕೂಡಲೆ
ದಳಪತಿ ನಿಂತನು ಬೆರಗಾಗಿ !
ಸುದ್ದಿಯ ಕೇಳ್ದನು ಕಿವಿಯಾಗಿ !

ಸಮಸ್ತ ಸೈನ್ಯವೆ ಚೇತನಗೊಂಡಿತು !
ಎಲ್ಲರು ಭುಜಗಳ ತಟ್ಟಿದರು.
ಹೊಸ ಹೊಸ ಭಾಷೆಯ ಮಾಡಿದರು

ಈ ಶುಭ ಸುದ್ದಿಯ ಹೈದರ್ ಕೇಳಿ
ಉಬ್ಬಿ ನಲಿದನು ಬಲು ಮುದ ತಾಳಿ !

* * *

ಕಳ್ಳಗಂಡಿಯ ಕಾವಲುಗಾರನು
ಕಾಯುತಲಿದ್ದನು ಅದುವರೆಗೆ,
ಕತ್ತಲೆ ಕವಿಯಲು ಊಟಕೆ ನಡೆದನು
ತುಸು ದೂರದೊಳಿಹ ಜೋಪಡಿಗೆ.
ಮುದವನು ಪಡೆದುದು ದುಡಿದ ಶರೀರವು
ಪ್ರೇಮದಿ ಬಡಿಸಲು ಓಬವ್ವ.

ಆಕೆಯೆ ಅವನ ವಿನೋದದ ಕಣ್ಣು
ಆತನ ನಚ್ಚಿನ ಒಲುಮೆಯ ಹೆಣ್ಣು
ಆತನ ಬದುಕಿನ ಒಡನಾಡಿ
ಮೆಚ್ಚಿನ ಮುದ್ದಿನ ಸಮಜೋಡಿ!

ಊಟವ ಮಾಡುತ ಕುಳಿತಿರೆ ಗಂಡನು
ನೀರಿಗೆ ನಡೆದಳು ಓಬವ್ವ.
ಕಳ್ಳಗಂಡಿಯ ಹತ್ತಿರ ಕಟ್ಟಿಹ
ಕೊಳದೆಡೆ ನಡೆದಳು ಓಬವ್ವ.

ಘನಿಸಿದ ಶಾಂತತೆ ಎಲ್ಲೆಡೆ ಬಳಸುತ
ಗಭೀರ ಭಾವವ ಬೀರಿತ್ತು.
ಎಲೆಗಳ ಸಪ್ಪುಳ ಕೀಟದ ಕಿರುದನಿ
ಎಲ್ಲವು ಮೌನವ ತಾಳಿತ್ತು.
ಕೂಗುವ ಬಂಡೆಯ ಕೀಚಲು ಮಾರ್ದನಿ
ನೀರವ ಶಾಂತಿಗೆ ಸಿಲುಕಿತ್ತು.
ಕತ್ತಲೆ ಕಾರುವ ಮೋಡದ ಪಂಕ್ತಿಯು
ಬಾನಿನ ಬಯಲಲಿ ನೆರೆದಿತ್ತು.
ಬೆಳಕನು ಚಿಮುಕಿಸಿ ತಾರೆಗಳಿಣುಕುವ
ಕಣ್ ಮುಚ್ಚಾಲೆಯು ನಡೆದಿತ್ತು.
ಇಂಥ ಗಭೀರದ ಶಾಂತಿಯ ಹೊತ್ತಲಿ
ಬಂದಳು ಕೊಳದೆಡೆ ಓಬವ್ವ.
ಮೆಲ್ಲನೆ ಬರುತಿರೆ ಬಳೆಗಳ ಸದ್ದಲಿ
ಮೌನ ಸರೋವರ ಕಲಕಿದುದು!

ಮೆಟ್ಟಿಲನಿಳಿಯುತ ನೀರನು ತುಂಬಲು
ಬುಳು ಬುಳು ಶಬ್ದವು ಹೊರಹೊಮ್ಮಿ
ಅಲುಗಿತು ಶಾಂತಿಯು ತೆರೆ ಚಿಮ್ಮಿ!

ಏನೋ ಎಂತೋ ಇದ್ದಕ್ಕಿದ್ದೊಲು
ತುಸು ಸದ್ದಾಯಿತು ಒಂದು ಕಡೆ.
ನೀರನು ತುಂಬದೆ, ಓಬವ್ವನ ಕಿವಿ
ತಟ್ಟನೆ ತಿರುಗಿತು ಅತ್ತ ಕಡೆ.
ಸರ ಸರ ಮೆಟ್ಟಿಲ ಹತ್ತುತ ಬಂದಳು
ಸುತ್ತಲು ಭಯದಲಿ ನೋಡಿದಳು.

ಎಲ್ಲಿ ನೋಡಲಿ ಕತ್ತಲೆ!
ಎತ್ತ ನೋಡಲಿ ಕತ್ತಲೆ!

ಅಸ್ಪಷ್ಟದ ದನಿ ಕೇಳಿತು ಮತ್ತೆ!
ಅದನೇ ಬೆನ್ನಟ್ಟುತ ಸಾಗಿದಳು,
ಕಳ್ಳಗಂಡಿಯ ಬಳಿ ಸೇರಿದಳು.

ಮಾತಿನ ಮರುದನಿ ಕೇಳುತ ಬಂತು
ಅರ್ಥವಾದರೊ ಆಗದೆ ಹೋಯ್ತು.
ಹಿಂದೂಸ್ಥಾನಿಯ ಪಿಸುಪಿಸು ನುಡಿಗಳು
ಕೇಳಿದವು — ಮತ್ತೆ ಕೇಳಿದುವು!

ಅರೆಚಣ ಅಚ್ಚರಿ ಮೂಡಿದುದು
ಮರುಚಣ ಎಲ್ಲವು ತೋರಿದುದು!

ಹೈದರನಟ್ಟಿದ ಸೈನ್ಯ ಸಮೂಹವು
ಹೊಂಚು ಹಾಕುತ್ತಿದೆ ಎಂದು
ತಟ್ಟನೆ ನಿರ್ಧರ ಮಾಡಿದಳು
ತುಸು ಕಂಪಿಸಿ ಕನಲಿದಳು.

"ಏನಿದು ದುರ್ಗತಿ! ಏನಿದು ಅವನತಿ!
ಇದರ ವಿನಾಶದ ಬಗೆಯೆಂತು?

ಪತಿ ಸುಖಭೋಜನ ಮಾಡುತ್ತಿರುವನು
ಇದ ತಿಳಿಯಲು ಬಿಟ್ಟೇಳುವನು
ಹೇಳದೆ ಹೋದರೆ ಹಗೆಗಳು ನುಗ್ಗುತ
ಕೋಟೆಯ ಲೂಟಿಯ ಮಾಡುವರು
ಎಚ್ಚರದಪ್ಪಿದ ನನ್ನ ನಲ್ಲನ
ಊರವರೆಲ್ಲ ದೂರುವರು.
ಅಯ್ಯೋ! ಇಂದಿನ ಗತಿ ಏನು?
ಇದಕೆ ಉಪಾಯವು ಮತ್ತೇನು!"
ಎನ್ನುತ ಚಿಂತಿಸಿ ಮೌನದಿ ಕಂಪಿಸಿ
ಇಬ್ಬಗೆಯಲಿ ಕೆಡೆದಳು ಓಬವ್ವ
ಬಲು ಕಂಗೆಟ್ಟಳು ಓಬವ್ವ.

ಗಗನವ ನಿಟ್ಟಿಸಿ ಇದ್ದಕ್ಕಿದ್ದೊಲು
ಏನನೊ ನಿರ್ಧರ ಮಾಡಿದಳು.
ಏನೊ ಉಪಾಯವು ತೋರಿದ ತೆರದಲಿ
ಹೊಮ್ಮಿತು ತಿಳಿವಿನ ಹೊನ್ನ ಕಳೆ.
ಕೂಡಲೆ ನಡೆದಳು ತವಕದಲಿ
ಮಿಂಚಿನ ನಗೆಯನು ಬೀರುತಲಿ.

ಗುಡಿಸಿಲ ಬಳಿ ಸಾರಿದಳು . . .
ನಗುತಿಹ ನಲ್ಲನ ನೋಡಿದಳು . . .
ತುಸು ಹೊತ್ತಾಯಿತು . . .
ಓಡುತ ಓಡುತ ಓಡುತ ಬಂದಳು
ಕಳ್ಳಗಂಡಿಯ ಹತ್ತಿರಕೆ.

ಕೈಯಲ್ಲಿದ್ದಿತು ಹಿರಿ ಒನಕೆ!
ಕಣ್ಣಲ್ಲಿದ್ದಿತು ಹೊಸ ಹರಕೆ!

*　　　*　　　*

ಕೋಟೆಯ ಹೊರಗಡೆ ಹೈದರನಾಳ್ಗಳು
ಕಳ್ಳದಾರಿಯ ನೋಡಿದರು
ಬಲು ಕಿರುದಾರಿಯ ನೋಡಿದರು.

ತಲೆಯನು ಎತ್ತಲು ಆಗುವುದಿಲ್ಲ
ಬಾಗುತ ನುಗ್ಗಲು ಸಾಧ್ಯವೆ ಇಲ್ಲ
ತೆವಳುವುದೊಂದೇ ದಾರಿಯು ಎಂದು
ಚರ್ಚಿಸಿ ನಿರ್ಧರ ಮಾಡಿದರು.

ಎಲ್ಲರ ಹರಕೆಯ ತಲೆಯಲಿ ಹೊತ್ತು
ಮೊದಲನೆ ಯೋಧನು ನುಗ್ಗಿದನು
ಮೆಲ್ಲನೆ ಮೆಲ್ಲನೆ ತೆವಳಿದನು.

ತೆವಳುವ ಶಬ್ದವು ತುಸು ತುಸು ಕೇಳಲು
ಉಸಿರಾಡದೆ ನಿಂತಳು ಓಬವ್ವ!
ಚೇತನಗೊಂಡಳು ಓಬವ್ವ!
ಮೆಲ್ಲನೆ ಯೋಧನ ನೆತ್ತಿಯು ಕಾಣಲು
ಕೂಡಲೆ ಬಡಿದಳು ಒನಕೆಯಲಿ
ಸಾಯಲು ಸೆಳೆದಳು ಪಕ್ಕದಲಿ.

ಇಬ್ಬರು ಸತ್ತರು ಮೂವರು ಸತ್ತರು
ನಾಲ್ವರು ಸತ್ತರು ಐವರು ಸತ್ತರು
ಓಬವ್ವನ ಕೈ ಬಲು ಮೇಲಾಯಿತು
ಬಿದ್ದರು ಹಗೆಗಳು ಹೊರಳುತಲಿ
ಚಿಟ್ಟನೆ ಚೀರುತ ನರಳುತಲಿ.

ಹೈದರನಾಳ್ಗಳು ಒಳಗಿನ ಪರಿಯನು
ಅರಿಯದೆ ಜವದಲಿ ನುಗ್ಗಿದರು.
ಏಳುವ ಮುನ್ನವೆ ನೋಡುವ ಮುನ್ನವೆ
ಸತ್ತರು ಸೊರಗುತ ತಲೆಯೊಡೆದು.

ಓಬವ್ವನು ಖತಿ ಕಾರಿದಳು
ಹುಚ್ಚು ಕೆಚ್ಚನು ತೋರಿದಳು!
ರುದ್ರ ವಿನೋದವು ತಾಂಡವಗೈದಿರೆ
ಮೆಲ್ಲ ಮೆಲ್ಲನೆ ಮೂಡುತಲಿ
ಚಂದಿರ ಬಂದನು ಮೂಡಲಲಿ!

ಹೆಜ್ಜೆ ಹೆಜ್ಜೆಗೆ ಕತ್ತಲೆ ಕರಗಲು
ನೆತ್ತರ ಕಾಲುವೆ ಕಾಣಿಸಿತು
ಸುತ್ತಮುತ್ತಲು ವ್ಯಾಪಿಸಿತು.
ಕಂಗಳ ಹೊರಳಿಸಿ ಹಲ್ಗಳ ಕಿರಿಯುವ
ಹೆಣಗಳ ಸಾಲು ಸಾಲಿನಲಿ
ಬಿರಿದಿಹ ರುಂಡ ರುಂಡದಲಿ,
ಎಡೆ ಎಡೆಯೇ ಬಲು ಭೀಕರವಾಯಿತು
ಎಳೆ ಬೆಳುದಿಂಗಳ ಬೆಳಕಿನಲಿ
ಭೀಮ ಭಯಂಕರ ರಾತ್ರಿಯಲಿ !

ಓಬವ್ವನ ಪತಿ ಊಟವ ಮುಗಿಸುತ
ಮನೆಯಲಿ ಹೆಂಡತಿ ಕಾಣದಿರೆ
ಬಂದನು ಕರೆಯುತ ಹೊರಗಡೆಗೆ.
ಮಬ್ಬಿನ ಮರೆಯಲಿ ಚೀರುಲಿ ಕೇಳಲು
ತಿಂಗಳ ಬೆಳಕಲಿ ನೋಡಿದನು
ಬೆಚ್ಚಿ ನಿಂತನು, ನೋಡಿದನು !

ಕಿಕ್ಕಿರಿ ತುಂಬಿದೆ ಹೆಣಗಳ ರಾಶಿ
ನೆತ್ತರು ಹರಿದಿದೆ ಕೋಟೆಯ ಹಾಸಿ
ಓಬವ್ವನ ಮುಡಿ ಕೆದರಿದೆ ಸುತ್ತ
ಕೈಮೈಗೆಲ್ಲಾ ಬಳಿದಿದೆ ರಕ್ತ
ಹಣೆಯಲಿ ಕುಂಕುಮ ಕಾಣುವುದಿಲ್ಲ
ಬಲು ಭೀಕರವಾಗಿದೆ ಮುಖಮುದ್ರೆ
ಕಂಗಳು ಕೋಪದ ಕೆಂಡಗಳಂತಿವೆ
ಕೋಮಲ ಹೃದಯವು ಭೀಷಣವಾಗಿದೆ
ನೆತ್ತರು ಚಿಮ್ಮಿದೆ ಕುಪ್ಪುಸ, ಸೀರೆಗೆ,
ಮಾಂಸವು ಮೆತ್ತಿದೆ ಒನಕೆಯ ತುಂಡಿಗೆ
ಅವಳ ಭಯಂಕರ ರೂಪವ ನೋಡುತ
ಅಚ್ಚರಿಗೊಂಡನು ಭ್ರಾಂತಿಯಲಿ
ಸಂಶಯಗೊಂಡನು ಭೀತಿಯಲಿ !

ಅತ್ತ ನೋಡಿದನು . . . . . . !

ನುಗ್ಗಿ ಬರುತಿಹ ಹಗೆಗಳ ಕಂಡು
ಕಜ್ಜ ಕೆಟ್ಟಿತು ಎಂದುಕೊಂಡು
ತಾನೇ ಹೋರಲು ಒನಕೆಯ ಕೊಂಡು
ತಡೆಮಾಡದೆ ಮುನ್ನುಗ್ಗಿದನು
ನಿಂತ ನಿಲುವಲಿ ನುಗ್ಗಿದನು !

ಹಗೆಗಳ ಹಿಂಡನು ಖಂಡಿಸಿ ಖಂಡಿಸಿ
ಇಹವನೆ ಮರೆತಿಹ ಓಬವ್ವ,
ನುಗ್ಗಿ ಬರುತಿಹ ಗಂಡನ ನೋಡದೆ
ಕೂಡಲೆ ಒನಕೆಯನೆತ್ತಿದಳು
ಹಗೆಯನೆಗೆತ್ತು ಎತ್ತಿದಳು !

ಕಡುಗಲಿ ಪಕ್ಕಕೆ ಚಿಮ್ಮಿದನು
ಕೈಲಿಹ ಕಹಳೆಯನೂದಿದನು !

ಕಹಳೆಯ ಬಿರುದನಿಗೆಚ್ಚತ್ತು
ಕೋಟೆ ಕೋಟೆಯೆ ನಡುಗಿತ್ತು !

ಆ ಕ್ಷಣ ಬಂದರು ಆಳುಗಳು,
ಮದಕರಿನಾಯಕನಾಳುಗಳು !
ನಭದಿಂದಿಳಿದೊಲು ಸಾರಿದರು,
ಪಂಕ್ತಿ ಪಂಕ್ತಿಯಲಿ ಸೇರಿದರು !

ತಿಂಗಳ ಬೆಳಕಲಿ ದೀವಿಗೆ ಬೆಳಗಲು
ಸಕಲ ದಿಗಂತವು ತೊಳಗಿದುದು.
ಕಳ್ಳಗಂಡಿಯ ಅಚ್ಚರಿ ನೋಡುತ
ಎಲ್ಲರು ನಡುಗುತ ಬೆದರಿದರು.

“ಯಾರಿದು ? ದೇವಿಯೊ, ಶಕ್ತಿಯೊ, ಇವಳು !
ಹೆಣ್ಣಿನ ತೋಳಲಿ ಬಲವುಂಟೆ !

ಈಕೆಗೆ ಹೆಣ್ಣಿನ ಕರುಳುಂಟೆ? ”
ಎನ್ನುತ ನಿಂತರು ತಮತಮಗೆ.

ಗದ್ದಲವಾಯಿತು ಗಜಿಬಿಜಿಯಾಯಿತು
ಅರೆಚಣ ನಿಂತಳು ಓಬವ್ವ
ನಿಟ್ಟುಸಿರೆಳೆದಳು ಓಬವ್ವ.

ನುಗ್ಗುತ ಬಂದರು ಮುಸ್ಲಿಮರು
ತಕ್ಷಣ ಬಂದರು ಮುಸ್ಲಿಮರು !

ಕಿಟ್ಟನೆ ಕಿರಚುತ ಓಬವ್ವ
ನೆಲಕ್ಕೆ ಬಿದ್ದಳು ಓಬವ್ವ !

ತುರುಷ್ಕ ಯೋಧನು ಗುರಿಯಿಟ್ಟು
ನೆತ್ತಿಗೆ ಹೊಡೆಯಲು ಹಟತೊಟ್ಟು
ವೀರಾವೇಶದ ಹೆಣ್ಣುಗಲಿ
ಜೀವವ ತೆತ್ತಳು ಗಾಯದಲಿ !

ಎರಡೂ ಪಡೆಗಳು ಹೋರಿದುವು.
ವೀರಾವೇಶದಿ ಕಾದಿದುವು.
ಹೈದರ್ ಕಡೆಯಲಿ ಸೋಲಾಯ್ತು.
ಮುಸ್ಲಿಮರಾಸೆಯು ಬಯಲಾಯ್ತು !

೪

ಅನಿರೀಕ್ಷಿತ ಜಯವಾರ್ತೆಯು ಹಬ್ಬಿತು
ಊರಿನ ಎಂಟೂ ದಿಕ್ಕಿನಲಿ.
ಹೇಳದೆ ಕೇಳದೆ ಜನಗಣ ನೆರೆಯಿತು
ನಿರ್ಭೀತಿಯ ಹೊಸ ಹರುಷದಲಿ.

ಈ ಶುಭ ಸುದ್ದಿಯ ಕೇಳಿದ ಕೂಡಲೆ
ಮದಕರಿನಾಯಕ ಬೆರಗಾದ !
ಓಬವ್ವನ ಕಲಿತನವನು ಕೇಳುತ
‘ ಹೌದೇ ’ ಎನ್ನುತ ಬೆರಗಾದ !

ಕ್ರೂರ ವಿಪತ್ತದು ತೊಲಗಿತು ಎನ್ನುತ
ಹಿಗ್ಗುತ ಹೊರಟನು ಹರುಷದಲಿ.

ಹಬ್ಬಿಹರಡಿದ ಕಡು ಚಿಂತೆ
ಹಿಂಗಿತು ಅಡಗುವ ಇರುಳಂತೆ.

"ಪತಿ ಕಣ್ ಮುಚ್ಚಲು ಚಿತೆಯನು ಏರುವ
ಅನುಪಮ ಸತಿಯರ ಕಂಡಿಹೆವು.
ಹಗೆಗಳನೆದುರಿಸಿ ಜೀವವ ನೀಡಿದ
ಹೆಣ್ ಮಕ್ಕಳ ಕಥೆ ಕೇಳಿಹೆವು.
ಮಾನದ ಮೇಲ್ಮೆಗೆ ದೇಹವ ತೆತ್ತಿಹ
ಸಾಧ್ವೀ ಮಣಿಯರ ನೋಡಿಹೆವು.
ಪತಿಭಕ್ತಿಯ ಒಡಗೂಡಿಸಿ ಮೆರೆದಿಹ
ದೇಶಪ್ರೇಮದ ಕೀರ್ತಿಯನು,
ಕಂಡೆವು ನಾವ್ ಓಬವ್ವನಲಿ.
ಕಲಿತನ ಪೆಣ್‌ತನ ಎರಡೂ ಬೆರೆತಿಹ
ಕನ್ನಡ ನಾಡಿನ ಚಿನ್ನವನು,
ಕಂಡೆವು ನಾವ್ ಓಬವ್ವನಲಿ"

ಎನ್ನುತ ಹೊಗಳುತ ಹಿಗ್ಗಿದರು
ಒಕ್ಕೊರಲಲಿ ನಿಡು ಕೂಗಿದರು
ಹೊಸ ಹಬ್ಬವ ಮಾಡಿದರು.

ಕಳ್ಳದಾರಿಗೆ "ಒನಕೆಯ ಕಂಡಿ"
ಎನ್ನುವ ಹೆಸರನು ಸಾರಿದರು!
ಆಕೆಯ ಕೀರ್ತಿಯ ಬೆಳಗಿದರು!

ಸತ್ತರು ಬದುಕಿಹ ಓಬವ್ವ!
ಚಿತ್ರದುರ್ಗದಾ ಓಬವ್ವ!
ಎಂದೆಂದಿಗು ನೀ ಬಾಳವ್ವ!*

ಜಿ. ವರದರಾಜರಾವ್.

---

* ೧೯೪೩ರಲ್ಲಿ ರಾಜಸೇವಾಸಕ್ತ ಶ್ರೀಮಾನ್ ಬಿ. ಎಂ. ಶ್ರೀಕಂಠಯ್ಯ, ಎಂ.ಎ., ಬಿ.ಎಲ್. ಅವರ "ರಜತೋತ್ಸವ ಕನ್ನಡ ಸ್ವರ್ಣಪದಕ"ವನ್ನು ಪಡೆದ ಕವಿತೆ.

ಪದಾರ್ಥಸ್ವರೂಪ

೪

ನಮ್ಮ ಜೀವಮಾನದಲ್ಲಿ ಒದಗುವ ಪ್ರಾಪಂಚಿಕ ಅನುಭವಗಳ ವಿಷಯವಾಗಿ ಪ್ರತಿಯೊಬ್ಬರೂ ಒಮ್ಮೆಯಾದರೂ ವಿಚಾರಮಾಡದೆ ಇರುವುದಿಲ್ಲ; ವಿಚಾರಮಾಡದಿದ್ದರೂ ಆಶ್ಚರ್ಯಪಡದೆ ಇರುವುದಿಲ್ಲ. ನಮ್ಮ ಅನುಭವಕ್ಕೆ ಗೋಚರವಾದ ವಿಷಯಗಳಲ್ಲಿ ಕೆಲವು ನಮ್ಮ ಒಳಗೆ ಇರುವ ಆತ್ಮ ಅಥವಾ ಮನಸ್ಸಿಗೆ ಸಂಬಂಧಪಟ್ಟವುಗಳು; ಇನ್ನು ಕೆಲವು ನಮಗೆ ಬಾಹ್ಯವಾಗಿರುವ ಪ್ರಪಂಚದಲ್ಲಿರುವ ಪದಾರ್ಥಗಳಿಗೆ ಸಂಬಂಧಪಟ್ಟವುಗಳು. ಭೌತಶಾಸ್ತ್ರವು ಬಾಹ್ಯದಲ್ಲಿರುವ ಪದಾರ್ಥಗಳ ಸ್ವರೂಪವನ್ನು ನಿರ್ಣಯಿಸುವುದರಲ್ಲಿ ತೊಡಗಿದೆ. ಹೊರಗಿನ ಪದಾರ್ಥಗಳು ನಾನಾ ಬಗೆಯಾಗಿ ಅನುಭವ ಗೋಚರವಾಗಿವೆ. ಬೆಟ್ಟಗಳು, ನದಿಗಳು, ಗಿಡಮರಗಳು, ಗಾಳಿ, ಪ್ರಾಣಿಗಳ ದೇಹಗಳು ಇವೇ ಮೊದಲಾಗಿ ನಾನಾ ರೂಪಗಳಲ್ಲಿ ಪದಾರ್ಥಗಳು ಗೋಚರವಾಗಿರುವುವು. ಈ ಪದಾರ್ಥಗಳ ಸ್ವರೂಪವು ಏನು, ಅವುಗಳ ರಚನೆ ಹೇಗೆ, ಅವು ಎಷ್ಟು ವಿಧವಾಗಿದೆ, ಅವು ಪರಸ್ಪರ ಭಿನ್ನವಾಗಿ ತೋರಲು ಏನು ಕಾರಣ ಎಂಬ ಪ್ರಶ್ನೆಗಳು ಅನೇಕವೇಳೆ ನಮ್ಮ ಮನಸ್ಸಿನಲ್ಲಿ ಏಳುವುವು. ಒಂದು ಪದಾರ್ಥವು ಮತ್ತೊಂದು ಪದಾರ್ಥದಿಂದ ಭಿನ್ನವಾದುದೇ ಅಥವಾ ಎಲ್ಲಾ ಪದಾರ್ಥಗಳೂ ಯಾವುದಾದರೊಂದು ಮೂಲಭೂತವಾದ ಪದಾರ್ಥದಿಂದ ಮಾಡಲ್ಪಟ್ಟುದಾಗಿರುವುವೇ ಹಾಗಿದ್ದರೆ ಅವುಗಳ ರಚನೆ ಹೇಗೆ ಎಂಬುದೇ ಪದಾರ್ಥಸ್ವರೂಪ ನಿರ್ಣಯದಲ್ಲಿ ಮುಖ್ಯ ಪ್ರಶ್ನೆ.

ಈ ವಿಷಯದಲ್ಲಿ ಬಹಳ ಹಿಂದಿನ ಕಾಲದಿಂದಲೂ ವಿಚಾರವು ನಡೆಯುತ್ತಿತ್ತು. ನಮ್ಮ ಆರ್ಯ ಸಂಸ್ಕೃತಿಯ ಮುಖ್ಯ ಗ್ರಂಥಗಳಾದ ಉಪನಿಷತ್ತುಗಳಲ್ಲಿ ಬಾಹ್ಯ ಪದಾರ್ಥಗಳು "ಪೃಥಿವ್ಯಾಪಸ್ತೇಜೋವಾಯುರಾಕಾಶಃ" ಎಂದು ಪೃಥಿವಿ, ನೀರು, ತೇಜಸ್ಸು, ಗಾಳಿ ಮತ್ತು ಆಕಾಶ ಎಂಬ ಪಂಚಭೂತಗಳಿಂದ ನಿರ್ಮಾಣ ಮಾಡಲ್ಪಟ್ಟುವುಗಳೆಂದು ಹೇಳಲ್ಪಟ್ಟಿದೆ. ಹೀಗೆ ಹೇಳಲು ಅನುಭವವೇ ಕಾರಣ. ಪದಾರ್ಥಗಳು ನಮಗೆ ಐದು ವಿಧದಲ್ಲಿ ಅಥವಾ ರೂಪದಲ್ಲಿ ಗೋಚರವಾಗಿವೆ. ಕಲ್ಲು, ಮರ, ಮಂಜಿನಗಡ್ಡೆ ಮೊದಲಾದುವುಗಳು ಘನೀಭೂತವಾಗಿ ಕಂಡುಬರುವುವು. ನೀರು, ಹಾಲು, ಎಣ್ಣೆ ಮುಂತಾದುವುಗಳು ದ್ರವರೂಪದಲ್ಲಿ ಕಂಡುಬರುವುವು; ಗಾಳಿ, ನೀರಿನ ಆವಿ ಮುಂತಾದುವುಗಳು ಸೂಕ್ಷ್ಮವಾದ ಅನಿಲರೂಪದಲ್ಲಿ ಕಂಡು

ಬರುವುವು ; ಬೆಳಕು, ಉಷ್ಣ ಮುಂತಾದುವುಗಳು ತೇಜೋರೂಪದಲ್ಲಿ ಕಂಡುಬರುವುವು ; ಎಲ್ಲಾ ಪದಾರ್ಥಗಳೂ ಯಾವುದರಲ್ಲಿ ಆಶ್ರಿತವಾಗಿ ಕಂಡುಬರುವುವೋ ಅದೇ ಆಕಾಶ. ಈ ಪದಾರ್ಥಗಳು ನಮ್ಮ ಪಂಚೇಂದ್ರಿಯಗಳಿಂದ ಗ್ರಾಹ್ಯ. ಹೀಗೆ ನಮ್ಮ ಇಂದ್ರಿಯಗಳ ದ್ವಾರಾ ಐದು ರೀತಿಯಲ್ಲಿ ಅಥವಾ ರೂಪದಲ್ಲಿ ಪದಾರ್ಥಗಳು ಪಂಚಭೂತಗಳೆಂದು ನಮ್ಮ ಪೂರ್ವಿಕರು ತಿಳಿದರು. ಸ್ಥೂಲದೃಷ್ಟಿಯಿಂದ ಇದು ಸರಿಯಾದುದೆಂದೇ ಹೇಳಬಹುದು. ಆದರೆ ಘನೀಭೂತವಾದ ಪದಾರ್ಥಗಳಿಗೆ ಪರಸ್ಪರ ಭೇದವಿದೆಯೇ, ದ್ರವೀಭೂತವಾದ ಪದಾರ್ಥಗಳಿಗೆ ಪರಸ್ಪರ ಭೇದವಿದೆಯೇ ಎಂಬ ಪ್ರಶ್ನೆಯು ಉಳಿದೇ ಇರುವುದು. ಇದು ಪದಾರ್ಥಗಳ ಸ್ವರೂಪವಿಚಾರ.

ಪದಾರ್ಥಗಳ ರಚನೆ ಹೇಗೆ ಎಂಬುದು ಮತ್ತೊಂದು ಪ್ರಶ್ನೆ. ಪದಾರ್ಥಗಳು ಸಣ್ಣಸಣ್ಣ ಅಣುಗಳಿಂದ, ಇಟ್ಟಿಗೆಗಳಿಂದ ಮನೆಯನ್ನು ಕಟ್ಟುವಂತೆ, ರಚಿಸಲ್ಪಟ್ಟಿವೆಯೇ ಅಥವಾ ಬೆಣ್ಣೆಯಹಾಗೆ ಅಖಂಡವಾಗಿವೆಯೇ ಎಂಬ ವಿಷಯದಲ್ಲಿ ಹಿಂದಿನ ಕಾಲದಲ್ಲಿ ಭಿನ್ನಾಭಿಪ್ರಾಯವಿತ್ತು. ಕ್ರಿ.ಪೂ. ೫ನೆಯ ಶತಮಾನದಲ್ಲಿದ್ದ ಕ್ಸೆನೋಫೇನಸ್ ಎಂಬವನು ಪದಾರ್ಥಗಳು ಅಖಂಡವಾಗಿವೆ ಎಂದು ಹೇಳುತ್ತಿದ್ದನು. ಇವನಿಗೂ ಹಿಂದೆ ಇದ್ದ ಡಿಮೋಕ್ರಿಟೀಸ್ ಎಂಬವನು ಪದಾರ್ಥಗಳು ಅತ್ಯಂತ ಸೂಕ್ಷ್ಮವಾದ ಪರಮಾಣುಗಳಿಂದ ರಚಿಸಲ್ಪಟ್ಟಿವೆ ಎಂದು ಹೇಳುತ್ತಿದ್ದನು. ಪದಾರ್ಥಗಳು ಪರಮಾಣುಗಳಿಂದ ರಚಿಸಲ್ಪಟ್ಟಿವೆ ಎಂಬ ವಾದವು ಹಿಂದಿನ ಕಾಲದಲ್ಲಿಯೂ ಈಗಿನ ಕಾಲದಲ್ಲಿಯೂ ಆದರಣೀಯವಾಗಿದೆ. ಡಿಮೋಕ್ರಿಟೀಸನು ಒಂದೊಂದು ಪದಾರ್ಥವೂ ಒಂದೊಂದು ಜಾತಿಯ ಪರಮಾಣುಗಳಿಂದ ಮಾಡಲ್ಪಟ್ಟಿದೆ; ಆದುದರಿಂದ ಪರಮಾಣುಗಳು ಪದಾರ್ಥಗಳಂತೆ ಅನೇಕ ಜಾತಿಯುಳ್ಳವು ಎಂದು ತಿಳಿದನು. ಎಂಪಿಡೋಕಲ್ಸ್ (Empedocles) ಎಂಬ ಗ್ರೀಸ್ ತತ್ವಜ್ಞನು ಪರಮಾಣುಗಳು ಪೃಥ್ವಿ, ಅಪ್ಪು, ತೇಜಸ್ಸು, ವಾಯು ಎಂದು ನಾಲ್ಕು ವಿಧ; ಎಲ್ಲಾ ಪದಾರ್ಥಗಳೂ ಈ ನಾಲ್ಕು ಜಾತಿಯ ಪರಮಾಣುಗಳ ಸಂಯೋಗದಿಂದ ಉಂಟಾದುವುಗಳು ; ಪರಮಾಣುಗಳ ಪರಸ್ಪರ ಸಂಯೋಗ ವೈವಿಧ್ಯದಿಂದ ವಿವಿಧ ಪದಾರ್ಥಗಳು ಉತ್ಪನ್ನವಾಗುವುವು ಎಂದು ತಿಳಿದನು. ಈ ನಾಲ್ಕು ವಿಧವಾದ ಪರಮಾಣುಗಳೇ ಮೂಲಭೂತವಾದ ವಸ್ತುಗಳು (Elements).

ಪರಮಾಣುವಾದವು ನಮ್ಮ ದೇಶದಲ್ಲಿ ಕ್ರಿ.ಶ. ೧ನೆಯ ಶತಮಾನದಲ್ಲಿ ವೈಶೇಷಿಕ ಮತದಲ್ಲಿ ಹೆಚ್ಚು ಪ್ರಾಮುಖ್ಯತೆಗೆ ಬಂದಿತು. ವೈಶೇಷಿಕ ಮತದ ಅಭಿಪ್ರಾಯವು ಹೀಗಿರುವುದು. ಪದಾರ್ಥಗಳೆಲ್ಲವೂ ಪೃಥ್ವಿ, ಅಪ್ಪು, ತೇಜಸ್ಸು ಮತ್ತು ವಾಯು ಎಂಬ ನಾಲ್ಕು ವಿಧವಾದ ಪರಮಾಣುಗಳಿಂದ ಮಾಡಲ್ಪಟ್ಟಿದೆ. ಪಾರ್ಥಿವ ಪರಮಾಣು

ಗಳು ಪರಸ್ಪರ ಸದೃಶಗಳು; ತೈಜಸ ಪರಮಾಣುಗಳಿಂದ ಭಿನ್ನ. ಈ ಸೂಕ್ಷ್ಮವಾದ ಪರಮಾಣುಗಳು ಪರಸ್ಪರ ಸಂಯೋಗ ಹೊಂದಿ ಸ್ಥೂಲವಾದ ಪದಾರ್ಥಗಳಾಗುವುವು; ಪದಾರ್ಥಗಳ ಸೃಷ್ಟಿಯು ಹೀಗಿರುವುದು. ಎರಡು ಪರಮಾಣುಗಳು ಸೇರಿ ದ್ವ್ಯಣುಕವೆಂಬ ಅಣುವು ಉಂಟಾಗುವುದು; ಮೂರು ದ್ವ್ಯಣುಕಗಳು ಸೇರಿ ತ್ರ್ಯಣುಕವೆಂಬ ಅಣುವು ಹುಟ್ಟುವುದು; ನಾಲ್ಕು ತ್ರ್ಯಣುಕಗಳು ಸೇರಿದರೆ ನಮ್ಮ ಕಣ್ಣಿಗೆ ಕಾಣುವಂತಾಗಿ ಸೂರ್ಯರಶ್ಮಿಯಲ್ಲಿ ಕಾಣುವ ಕಣಗಳಿಗೆ ಸಮನಾದ ಆಕಾರವುಳ್ಳ ಸ್ಥೂಲಪದಾರ್ಥವು ಉಂಟಾಗುವುದು. ಈ ರೀತಿಯಲ್ಲಿ ನಾಲ್ಕು ಮೂಲ ಭೂತವಾದ ವಸ್ತುಗಳ ಪರಮಾಣುಸಂಯೋಗದಿಂದ ಎಲ್ಲಾ ಪದಾರ್ಥಗಳೂ ಉಂಟಾಗುವುವು ಎಂದು ವೈಶೇಷಿಕ ಮತದವರು ತಿಳಿದರು. ಇದಕ್ಕೆ ಆರಂಭವಾದ ಎಂದು ಹೆಸರು.

ಈಗಿನ ವಿಜ್ಞಾನಶಾಸ್ತ್ರದಲ್ಲಿಯೂ ಪರಮಾಣುವಾದವು ಅಂಗೀಕೃತವಾಗಿದೆ. ಆದರೆ ಹಿಂದಿನ ಕಾಲದಲ್ಲಿ ಕೇವಲ ಬುದ್ಧಿಶಕ್ತಿಯಿಂದ ಊಹಿಸಲ್ಪಟ್ಟ ಪರಮಾಣುವಾದಕ್ಕೂ ವೈಜ್ಞಾನಿಕ ಪರಮಾಣುವಾದಕ್ಕೂ ಬಹಳ ವ್ಯತ್ಯಾಸಗಳಿವೆ. ವೈಜ್ಞಾನಿಕ ಪರಮಾಣುವಾದಕ್ಕೆ ಪ್ರಯೋಗಗಳೇ ಆಧಾರ. ವಿವಿಧವಾದ ಪ್ರಯೋಗಗಳನ್ನು ಸಮಂಜಸವಾಗಿ ಅರ್ಥಮಾಡಲು ಮತ್ತು ಸಮನ್ವಯಮಾಡಲು ಪದಾರ್ಥಗಳೆಲ್ಲವೂ ಪರಮಾಣುಗಳಿಂದ ರಚಿತವಾದುವುಗಳೆಂದು ಒಡಂಬಡಬೇಕಾಗುವುದು. ವೈಜ್ಞಾನಿಕ ಶಾಸ್ತ್ರದ ಪರಮಾಣುವಾದವನ್ನು ಸ್ಥಾಪಿಸಿದವನು ೧೯ನೆಯ ಶತಮಾನದ ಆದಿಭಾಗದಲ್ಲಿದ್ದ ಇಂಗ್ಲೆಂಡ್ ದೇಶದವನಾದ ಜಾನ್ ಡಾಲ್ಟನ್ ಎಂಬವನು. ರಸಾಯನಶಾಸ್ತ್ರದ ಕೆಲವು ಪ್ರಯೋಗಗಳನ್ನು ಸರಿಯಾಗಿ ಅರ್ಥಮಾಡಲು ಪರಮಾಣುವಾದವನ್ನು ಒಡಂಬಡಬೇಕೆಂದು ಈತನು ಸ್ಥಾಪಿಸಿದನು. ಮೂಲಭೂತವಾದ ವಸ್ತುಗಳು ಹಿಂದಿನ ಕಾಲದವರು ತಿಳಿದಂತೆ ಕೇವಲ ನಾಲ್ಕು ಮಾತ್ರವೇ ಅಲ್ಲ; ಇನ್ನೂ ಅನೇಕವಾಗಿರುವುವು; ಒಂದು ಮೂಲಭೂತ ವಸ್ತುವಿನ ಪರಮಾಣುಗಳು ಎಲ್ಲಾ ವಿಧದಲ್ಲಿಯೂ ಪರಸ್ಪರ ಸದೃಶಗಳು; ಅವುಗಳ ಆಕಾರ, ತೂಕ ಮುಂತಾದ ಧರ್ಮಗಳು ಸಮ; ಒಂದು ಮೂಲಭೂತವಾದ ವಸ್ತುವಿನ ಪರಮಾಣುಗಳು ಮತ್ತೊಂದು ಮೂಲಭೂತವಾದ ವಸ್ತುವಿನ ಪರಮಾಣುಗಳಿಂದ ಭಿನ್ನ ಎಂದು ಡಾಲ್ಟನನು ಸ್ಥಾಪಿಸಿದನು. ಇಷ್ಟೇ ಅಲ್ಲದೆ ಮೂಲಭೂತವಾದ ವಸ್ತು (Element) ಎಂದರೇನು ಎಂಬುದನ್ನು ರಾಬರ್ಟ್ ಬಾಯಿಲ್ ಎಂಬವನು ಸ್ಥಾಪಿಸಿದನು. ಯಾವ ಪದಾರ್ಥದ ಅಣುವನ್ನು ಬೇರೆ ಪದಾರ್ಥವನ್ನಾಗಿ ವಿಭಾಗಿಸಲು ಸಾಧ್ಯವಿಲ್ಲವೋ ಆ ಪದಾರ್ಥವೇ ಮೂಲಭೂತವಾದ ವಸ್ತು. ಅಪ್ಪು ಅಥವಾ ನೀರನ್ನು ಮೂಲ

ಭೂತವಾದ ವಸ್ತುವೆಂದು ಹಿಂದಿನವರು ಪರಿಗಣಿಸಿದ್ದರು. ಆದರೆ ನೀರನ್ನು ಆಮ್ಲ ಜನಕ ಜಲಜನಕಗಳೆಂಬ ವಸ್ತುಗಳಾಗಿ ಭಾಗಿಸಲು ಸಾಧ್ಯವೆಂದು ಪ್ರಾಯೋಗಿಕ ವಾಗಿ ತೋರಿಸಲ್ಪಟ್ಟಿತು. ಆದುದರಿಂದ ನೀರನ್ನು ಮೂಲಭೂತವಾದ ವಸ್ತುವೆಂದು ಪರಿಗಣಿಸುವುದು ಸಮ್ಮತವಲ್ಲ. ತೇಜಸ್ಸೆಂಬುದು ಪದಾರ್ಥವೆಂದು ಪರಿಗಣಿಸಿದ್ದೂ ಸರಿಯಲ್ಲ; ತೇಜಸ್ಸೆಂಬುದು ಶಕ್ತಿರೂಪವಾದದ್ದು. ಈ ರೀತಿಯಲ್ಲಿ ಸಾವಿರಾರು ವರ್ಷ ಗಳಿಂದ ಅನುಸ್ಯೂತವಾಗಿ ಬಂದಿದ್ದ ಪರಮಾಣುವಾದವು ಈಚಿನ ಮುನ್ನೂರು ವರ್ಷ ಗಳಿಂದ ಅನೇಕ ವಿಧದಲ್ಲಿ ಮಾರ್ಪಾಡನ್ನು ಹೊಂದಿತು. ಮೂಲಭೂತವಾದ ವಸ್ತು ಗಳು ಕೇವಲ ನಾಲ್ಕು ಅಥವಾ ಐದೇ ಅಲ್ಲ; ಅಲ್ಲದೆ ಮೂಲಭೂತವಾದುದೆಂದು ಪರಿಗಣಿಸಲ್ಪಟ್ಟ ವಸ್ತುಗಳು ನಿಜವಾಗಿ ಮೂಲಭೂತಗಳಲ್ಲ ಎಂದು ಡಾಲ್ಟನ್ ಎಂಬ ವನ ಕಾಲದಿಂದ ವಿಜ್ಞಾನಶಾಸ್ತ್ರದಲ್ಲಿ ಸ್ಥಿರಮಾಡಲ್ಪಟ್ಟಿದೆ. ಈ ಮೂಲಭೂತ ವಸ್ತು ಗಳು ಹೆಚ್ಚು ಕಡಮೆ ೯೨ ಇವೆ ಎಂದು ಈಗಿನ ವಿಜ್ಞಾನದ ನಂಬಿಕೆ. ಆಮ್ಲ ಜನಕ, ಜಲಜನಕ, ಅರ್ಕಾನಿಲ, ಇದ್ದಲು, ಬೆಳ್ಳಿ, ಭಂಗಾರ, ತಾಮ್ರ ಮುಂತಾದುವುಗಳು ಮೂಲಭೂತ ವಸ್ತುಗಳು. ನೀರು, ಉಪ್ಪು, ಸಕ್ಕರೆ ಮುಂತಾದುವುಗಳು ಸಂಯುಕ್ತ ವಸ್ತುಗಳು. ಮೂಲಭೂತ ವಸ್ತುಗಳನ್ನು ಕಂಡುಹಿಡಿದುದರ ಚರಿತ್ರೆ ಅತ್ಯಂತ ಆಕರ್ಷ ಣೀಯವಾದುದು. ಅರ್ಕಾನಿಲ ಅಥವಾ ಹೀಲಿಯಂ ಎಂಬ ವಸ್ತುವು ಮೊದಲು ಸೂರ್ಯನಲ್ಲಿ ಕಂಡುಹಿಡಿಯಲ್ಪಟ್ಟಿತು; ಅನಂತರದಲ್ಲಿ ಭೂಮಿಯ ಸುತ್ತಲೂ ಆವೃತವಾಗಿರುವ ಗಾಳಿಯಲ್ಲಿಯೂ ಇದೆ ಎಂದು ಕಂಡುಹಿಡಿಯಲ್ಪಟ್ಟಿತು.

ಮೂಲಭೂತವಾದ ವಸ್ತುಗಳು ೯೨ ಎಂದು ಹೇಳಿದೆ. ಅವು ಪರಸ್ಪರ ಭಿನ್ನ ವಾದರೂ ಅವುಗಳ ಗುಣಗಳಲ್ಲಿ ಕೆಲವು ಸಾಧರ್ಮ್ಯಗಳು ಕಂಡುಬರುವುವು. ೯೨ ಮೂಲಭೂತ ವಸ್ತುಗಳಲ್ಲಿ ಸಮಾನ ಧರ್ಮವುಳ್ಳವುಗಳನ್ನು ಗುಂಪುಗುಂಪಾಗಿ ಸೇರಿಸಿ ದರೆ ವೈವಿಧ್ಯಭಿನ್ನತೆಯು ಇನ್ನೂ ಕಡಮೆಯಾಗುವುದು.

ಹೀಗೆ ಮೂಲಭೂತವಾದ ವಸ್ತುಗಳು ೯೨ ಎಂದು ಕಂಡುಬಂದರೂ ಅವುಗಳಲ್ಲಿ ಪರಸ್ಪರ ಸಾಮ್ಯವು ಕಂಡುಬಂದಿದ್ದರಿಂದ ಅವುಗಳಿಗೂ ಮೂಲಭೂತವಾದುದು ಯಾವುದಾದರೂ ಒಂದು ವಸ್ತುವು ಇರಬಹುದೇ ಎಂಬ ಸಂದೇಹವು ಹುಟ್ಟಿತು. ಇಂಗ್ಲೆಂಡ್ ದೇಶದ ರಸಾಯನ ವೈಜ್ಞಾನಿಕನಾದ ಪ್ರೌಟ್ (Prout) ಎಂಬವನು ಎಲ್ಲಾ ಮೂಲಭೂತವಾದ ವಸ್ತುಗಳ ಪರಮಾಣುಗಳೂ ಜಲಜನಕದ ಪರಮಾಣು ಗಳಿಂದ ಮಾಡಲ್ಪಟ್ಟಿವೆ ಎಂದು ಅಭಿಪ್ರಾಯಪಟ್ಟನು. ಈಚಿನ ಸಂಶೋಧನೆಗಳು ಈತನ ಅಭಿಪ್ರಾಯದ ತತ್ವವನ್ನು ಬಹುಮಟ್ಟಿಗೆ ಸಮರ್ಥಿಸಿವೆ.

ಕ್ರಿ.ಶ. ೧೮೮೭ರಲ್ಲಿ ಸರ್ ಜೆ. ಜೆ. ಥಾಂಸನ್ ಎಂಬವರು ಕೆಲವು ಅದ್ಭುತವಾದ

ಪ್ರಯೋಗಗಳನ್ನು ನಡೆಸಿದರು. ಈ ಪ್ರಯೋಗಗಳಿಂದ ಪರಮಾಣುಗಳ ವಿಷಯದಲ್ಲಿಯೂ ಮೂಲಭೂತ ವಸ್ತುಗಳ ವಿಷಯದಲ್ಲಿಯೂ ಅತ್ಯಂತ ಕ್ರಾಂತಿಕಾರಕವಾದ ಅಭಿಪ್ರಾಯಗಳು ಹೊರಟವು. ಎಲ್ಲಾ ಪದಾರ್ಥಗಳ ಪರಮಾಣುಗಳೂ ಸಹ ಇನ್ನೂ ಸೂಕ್ಷ್ಮವಾದ ಪರಮಾಣುತರಗಳಾದ ವಿದ್ಯುತ್ತಿನ ಅಣುಗಳಿಂದ ಮಾಡಲ್ಪಟ್ಟವುಗಳೆಂದು ಈ ಪ್ರಯೋಗಗಳಿಂದ ಕಂಡುಬಂದಿದೆ. ಮೂಲಭೂತ ವಸ್ತುವಿನ ಪರಮಾಣುವು ಅಭೇದ್ಯವೆಂದೂ ಅದನ್ನು ವಿಭಾಗಿಸಲು ಸಾಧ್ಯವಿಲ್ಲವೆಂದೂ ನಂಬಿಕೆಯಿತ್ತು. ಆದರೆ ಪರಮಾಣುವನ್ನು ವಿದ್ಯುತ್ತಿನ ಅಣುಗಳನ್ನಾಗಿ ವಿಭಾಗಿಸಲು ಸಾಧ್ಯವೆಂದು ಕಂಡುಬಂದಿದೆ. ಇಷ್ಟೇ ಅಲ್ಲದೆ ಈ ವಿದ್ಯುದಣುಗಳು ಎಲ್ಲಾ ವಸ್ತುಗಳ ಪರಮಾಣುಗಳಲ್ಲಿಯೂ ಇರುವುದರಿಂದ ೯೨ ವಿಧದ ಪರಮಾಣುಗಳು ಅತ್ಯಂತ ಭಿನ್ನವಲ್ಲವೆಂದೂ ಕಂಡುಬರುವುದು. ಪರಮಾಣುಗಳಲ್ಲಿ ಅತ್ಯಂತ ಹಗುರವಾದುದು ಜಲಜನಕದ ಪರಮಾಣು; ಅತ್ಯಂತ ಭಾರವಾದುದು ಯುರೇನಿಯಂ ಎಂಬುದು. ಪರಮಾಣುಗಳು ಹೇಗೆ ರಚಿತವಾಗಿವೆ ಎಂಬುದನ್ನು ರದರ್‌ಫೋರ್ಡ್ ಎಂಬ ವೈಜ್ಞಾನಿಕರು ಸ್ಥಾಪಿಸಿದರು. ಜಲಜನಕದ ಪರಮಾಣುವಿನ ರಚನೆ ಹೀಗಿರುವುದು: ಅದರ ಮಧ್ಯದಲ್ಲಿ ಒಂದು ವಿದ್ಯುತ್ತಿನ ಕಣವಿರುವುದು; ಇದನ್ನು ಪ್ರೋಟಾನ್ ಅಥವಾ ಧನವಿದ್ಯುತ್ಕಣವೆಂದು ಕರೆಯುವರು; ಇದರ ಸುತ್ತಲೂ ಮತ್ತೊಂದು ತರದ ವಿದ್ಯುತ್ಕಣವು ಸುತ್ತುತ್ತಿರುವುದು; ಇದನ್ನು ಎಲೆಕ್ಟ್ರಾನ್ ಅಥವಾ ಋಣ ವಿದ್ಯುತ್ಕಣವೆಂದು ಕರೆಯುವರು. ಸೂರ್ಯನ ಸುತ್ತಲೂ ಭೂಮಿಯು ಸುತ್ತುವಂತೆ ಋಣವಿದ್ಯುತ್ಕಣವು ಮಧ್ಯದಲ್ಲಿರುವ ಬೀಜಾಣುವಿನ (Nucleus) ಸುತ್ತಲೂ ಒಂದು ಪಥದಲ್ಲಿ ಸುತ್ತುತ್ತಿರುವುದು. ಜಲಜನಕವು ಎಲ್ಲಾ ವಸ್ತುಗಳಿಗಿಂತಲೂ ಹಗುರವಾದುದು. ಇದಕ್ಕಿಂತ ಸ್ವಲ್ಪ ಭಾರವಾದುದು ಹೀಲಿಯಂ ಅಥವಾ ಅರ್ಕಾನಿಲ ಎಂಬುದು. ಇದರ ಪರಮಾಣುವಿನ ರಚನೆಯು ಹೀಗಿರುವುದು: ಮಧ್ಯದಲ್ಲಿ ಬೀಜಾಣುವಾಗಿ ೪ ಧನವಿದ್ಯುತ್ಕಣಗಳ ಗುಂಪಿರುವುದು; ಇದರ ಸುತ್ತಲೂ ೨ ಋಣ ವಿದ್ಯುತ್ಕಣಗಳು ಗ್ರಹಗಳೋಪಾದಿಯಲ್ಲಿ ಸುತ್ತುತ್ತಿರುವುವು. ಇದೇ ರೀತಿಯಲ್ಲಿ ಧನವಿದ್ಯುತ್ಕಣಗಳೂ ಋಣವಿದ್ಯುತ್ಕಣಗಳೂ ಸೇರಿ ಇತರ ಮೂಲಭೂತ ವಸ್ತುಗಳ ಪರಮಾಣುಗಳಾಗಿವೆ. ಭಂಗಾರದ ಪರಮಾಣುವಿನಲ್ಲಿ ೧೯೭ ಪ್ರೋಟಾನುಗಳೂ ೭೯ ಎಲೆಕ್ಟ್ರಾನುಗಳೂ ಇವೆ. ಅತ್ಯಂತ ಭಾರವಾದ ಯುರೇನಿಯಮ್ಮಿನ ಪರಮಾಣುವಿನಲ್ಲಿ ೨೩೮ ಪ್ರೋಟಾನ್‌ಗಳು ಮಧ್ಯದಲ್ಲಿದ್ದು ಅವುಗಳ ಸುತ್ತಲೂ ೯೨ ಎಲೆಕ್ಟ್ರಾನ್ ಸುತ್ತುತ್ತಿರುವುವು. ಹೀಗೆ ಎಲ್ಲಾ ಮೂಲವಸ್ತುಗಳ ಪರಮಾಣುಗಳೂ ವಿದ್ಯುತ್ ಪರಮಾಣುಗಳಿಂದ ರಚಿಸಲ್ಪಟ್ಟುವಾಗಿವೆ. ಪಾದರಸವನ್ನೊ ಬೆಳ್ಳಿಯನ್ನೊ ಭಂಗಾರ

ವನ್ನಾಗಿ ಮಾಡುವೆವೆಂದು ಅನೇಕರು ಮೋಸಮಾಡುವುದನ್ನು ನಾವು ಕೇಳಿರುವೆವು. ಅವರೇನೋ ಮೋಸಗಾರರಾದರೂ, ಅಲ್ಪ ಲೋಹವನ್ನು ಭಂಗಾರವಾಗಿ ಮಾಡುವುದು ಅಸಂಭವವಲ್ಲ. ಹೀನಲೋಹವನ್ನು ಭಂಗಾರವನ್ನಾಗಿ ಮಾಡುವುದು ಈಗ ಅಸಾಧ್ಯವಾದರೂ ಕಾಲಾಂತರದಲ್ಲಿ ಸಾಧ್ಯವಾಗಲು ಏನೂ ಅಡ್ಡಿಯಿಲ್ಲ.

ಪದಾರ್ಥಗಳಲ್ಲಿ ಕಂಡುಬರುವ ಭೌತ ಮತ್ತು ರಾಸಾಯನಿಕ ಗುಣಗಳು ಈ ವಿದ್ಯುದಣುಗಳ ಮಹಿಮೆಯಿಂದ ಉಂಟಾದುವುಗಳು. ಪ್ರಪಂಚದ ಎಲ್ಲಾ ಕಾರ್ಯಕ್ಕೂ ಈ ಅಣುಗಳ ವ್ಯವಹಾರವೇ ಮೂಲಕಾರಣ. ಬೆಳಕು ಅಥವಾ ತೇಜಸ್ಸು ಇವುಗಳಿಂದಲೇ ಬರುವುದು. ಜಲಜನಕದ ಪರಮಾಣುವಿನಲ್ಲಿ ಮಧ್ಯದಲ್ಲಿರುವ ಬೀಜಾಣುವಿನ ಸುತ್ತಲೂ ಒಂದು ಋಣವಿದ್ಯುತ್ಕಣವು ಸುತ್ತುತ್ತಿರುವುದೆಂದು ಹಿಂದೆಯೇ ಹೇಳಿದೆ. ಈ ಋಣವಿದ್ಯುತ್ಕಣವು ಬೀಜಾಣುವಿನ ಸುತ್ತಲೂ ಅನೇಕ ಪಥಗಳಲ್ಲಿ ಸುತ್ತಬಹುದು. ಇದು ಒಂದು ಪಥದಿಂದ ಮತ್ತೊಂದು ಪಥಕ್ಕೆ ಹಾರುವಾಗ ಅದರಲ್ಲಿದ್ದ ಶಕ್ತಿಯ ಸ್ವಲ್ಪಭಾಗವನ್ನು ಬೆಳಕಿನ ರೂಪದಲ್ಲಿ ವಿಸರ್ಜಿಸುವುದು. ಇದೇ ಬೆಳಕು ಎಂಬುದು. ಪರಮಾಣುಗಳ ರಚನೆಯ ವೈವಿಧ್ಯದಿಂದ ವಿವಿಧವಾದ ಬಣ್ಣಗಳ ಬೆಳಕು ಉಂಟಾಗಲು ಅವಕಾಶವಾಗುವುದು. ಇದೇ ರೀತಿಯಲ್ಲಿ ಪದಾರ್ಥಗಳಲ್ಲಿರುವ ಎಲ್ಲಾ ಗುಣಗಳೂ ವಿದ್ಯುದಣುಗಳ ಮಹಿಮೆಯಿಂದ ಉಂಟಾದುವೆಂದು ಸ್ಥಾಪಿಸಲ್ಪಟ್ಟಿರುವುದು.

ಪರಮಾಣುಗಳು ಧನವಿದ್ಯುತ್ಕಣ ಮತ್ತು ಋಣವಿದ್ಯುತ್ಕಣಗಳಿಂದ ರಚನೆ ಮಾಡಲ್ಪಟ್ಟಿವೆ ಎಂದು ಹೇಳಿದೆ. ಪರಮಾಣುವೆಂಬ ಮನೆಯನ್ನು ಕಟ್ಟಲು ಎರಡು ವಿಧವಾದ ಇಟ್ಟಿಗೆಗಳು ಬೇಕೆಂದು ಹೇಳಿದೆ. ಆದರೆ ಪರಮಾಣುವನ್ನು ರಚಿಸಲು ಇಟ್ಟಿಗೆಗಳು ಇನ್ನೂ ಅನೇಕ ವಿಧವಾಗಿವೆ ಎಂದು ಈಚಿನ ಹತ್ತು ವರ್ಷಗಳ ಪರಿಶೋಧನೆಯಿಂದ ಕಂಡುಬರುವುದು. ಈ ಅಣುಗಳನ್ನು ನ್ಯೂಟ್ರಾನ್‌ಗಳು (Neutrons) ಪಾಸಿಟ್ರಾನ್‌ಗಳು (Positrons) ನೆಗೆಟ್ರಾನ್‌ಗಳು (Negatrons) ಎಂದು ಕರೆಯುವರು. ಇವೆಲ್ಲವೂ ಸ್ವರೂಪದಲ್ಲಿ ವಿದ್ಯುತ್ಕಣಗಳೇ.

ಬಿ. ಎ. ಕೃಷ್ಣಸ್ವಾಮಿರಾವ್.

ಹೈಸ್ಕೂಲುಗಳಲ್ಲಿರುವ ಕನ್ನಡ ಮಾಧ್ಯಮ ಮತ್ತು ಕಾಲೇಜ್ ಶಿಕ್ಷಣ

[ಆಕ್ಸ್‌ಫರ್ಡ್ ಯೂನಿವರ್ಸಿಟಿ ಪ್ರೆಸ್ಸಿನವರ 'ಟೀಚಿಂಗ್' (*Teaching*) ಎಂಬ ತ್ರೈಮಾಸಿಕ ಪತ್ರಿಕೆಯ ಡಿಸೆಂಬರ್ ಸಂಚಿಕೆಯಲ್ಲಿ ಈ ಲೇಖಕರು ಪ್ರಕಟಿಸಿದ ತಮ್ಮ ಇಂಗ್ಲಿಷ್ ಲೇಖನವನ್ನು ಆ ಪತ್ರಿಕೆಯ ಅನುಮತಿ ಪಡೆದು ಇಲ್ಲಿ ಕನ್ನಡಿಸಿರುತ್ತಾರೆ. ಇದಕ್ಕಾಗಿ ಆ ಪತ್ರಿಕೆಗೂ ಪ್ರಕಟನಕಾರರಿಗೂ ಲೇಖಕರಿಗೂ ಪ್ರಬುದ್ಧಕರ್ಣಾಟಕವು ಋಣಿಯಾಗಿದೆ]

—ಸಂ.

ಹೈಸ್ಕೂಲುಗಳಲ್ಲಿ ಕನ್ನಡ ಮಾಧ್ಯಮವನ್ನು ತೆಗೆದುಕೊಂಡ ಬಾಲಕರು ಕಾಲೇಜಿಗೆ ಹೋದಾಗ ಅವರಿಗೆ ಅದರಿಂದ ಏನಾದರೂ ತೊಡಕುಂಟಾಗುತ್ತದೆಯೆ? ಈ ವಿಷಯವನ್ನು ಪರಿಶೀಲಿಸುವುದಕ್ಕಾಗಿ ಒಂದು ಸಂಶೋಧನೆಯನ್ನು ಕೈಗೊಳ್ಳಲಾಯಿತು. ಇಂಗ್ಲಿಷ್ ಮಾಧ್ಯಮವನ್ನು ತೆಗೆದುಕೊಂಡಿದ್ದ ಬಾಲಕರು ಕಾಲೇಜಿನಲ್ಲಿ ತೋರಿಸುವ ಅಭಿವೃದ್ಧಿಯನ್ನು ಕನ್ನಡ ಮಾಧ್ಯಮದ ಬಾಲಕರ ಅಭಿವೃದ್ಧಿಯೊಂದಿಗೆ ಹೋಲಿಸುವುದು ಇದಕ್ಕೆ ಸೂಕ್ತವಾದ ಮಾರ್ಗ. ಈ ಎರಡು ಗುಂಪುಗಳಲ್ಲಿಯೂ ಹೆಚ್ಚು ಸಂಖ್ಯೆಯ ಬಾಲಕರಿರುವುದು ನಮ್ಮ ಸಂಶೋಧನೆಗೆ ಅಗತ್ಯ; ಏಕೆಂದರೆ ಒಬ್ಬೊಬ್ಬ ಬಾಲಕರಲ್ಲಿ ಕಾಣಬಹುದಾದ ವ್ಯತ್ಯಾಸ ವೈಶಿಷ್ಟ್ಯಗಳನ್ನು ಆಯಾ ಗುಂಪಿನ ಗುಣವೆನ್ನಲಾಗುವುದಿಲ್ಲ.

ಕನ್ನಡ ಮಾಧ್ಯಮದಿಂದ ಹೈಸ್ಕೂಲು ಶಿಕ್ಷಣಕ್ಕೆ ಅನುಕೂಲವೇ, ಅನನುಕೂಲವೆ? ಇದರಿಂದ ಇಂಗ್ಲಿಷ್ ಅಥವಾ ಇತರ ಪಾಠಗಳ ಮೇಲೆ ಯಾವರೀತಿ ಪರಿಣಾಮವಾಗುತ್ತದೆ? ಕನ್ನಡ ಮಾಧ್ಯಮವು ಕಾಲೇಜ್ ಶಿಕ್ಷಣಕ್ಕೆ ಅಗತ್ಯವಲ್ಲವೆ? ಈ ಮುಂತಾದ ಪ್ರಶ್ನೆಗಳನ್ನು ಇಲ್ಲಿ ಪರಿಶೀಲಿಸಿಲ್ಲ. ಇಲ್ಲಿ ಪರೀಕ್ಷಿಸಿರುವ ಪ್ರಶ್ನೆ ಒಂದು ಮಾತ್ರ; **ಹೈಸ್ಕೂಲಿನಲ್ಲಿರುವ ಕನ್ನಡ ಮಾಧ್ಯಮದಿಂದ ಕಾಲೇಜ್ ಶಿಕ್ಷಣಕ್ಕೆ ತೊಂದರೆಯುಂಟಾಗಿದೆಯೆ?** ಈ ವಿಧವಾದ ಸಂದೇಹ ಕೆಲವರಲ್ಲಿ ಇದೆ. ಅದಕ್ಕಾಗಿಯೇ ಈ ಸಂಶೋಧನೆಯನ್ನು ಕೈಗೊಂಡಿರುವುದು.

ಮೈಸೂರಿನ ದೇಶಭಾಷೆ ಕನ್ನಡ; ಆದುದರಿಂದ ಭಾಷೇತರ ವಿಷಯಗಳನ್ನು ಕನ್ನಡದಲ್ಲಿ ಕಲಿಸುವ ಏರ್ಪಾಡು ರೂಢಿಗೆ ಬಂದಿದೆ. ಕನ್ನಡವನ್ನು ತಿಳಿಯದವರ ಸೌಕರ್ಯಕ್ಕಾಗಿ ಕೆಲವು ಕಡೆ ಇಂಗ್ಲಿಷ್ ಮಾಧ್ಯಮವಿದೆ. ಆದರೆ ಕನ್ನಡವೇ

ತಾಯ್ನುಡಿಯಾದ ಕೆಲವು ಪೋಷಕರೂ ಕನ್ನಡ ಮಾಧ್ಯಮದಲ್ಲಿ ನಂಬಿಕೆಯಿಲ್ಲದೆ ತಮ್ಮ ಮಕ್ಕಳನ್ನು ಒತ್ತಾಯದಿಂದ ಇಂಗ್ಲಿಷ್ ಮಾಧ್ಯಮಕ್ಕೆ ಸೇರಿಸುತ್ತಾರೆ. ಕನ್ನಡ ಮಾಧ್ಯಮದಲ್ಲಿ ಚರಿತ್ರೆ ಭೂಗೋಳಗಳ ಬೋಧನೆ ಪ್ರಾರಂಭವಾಯಿತು. ಕ್ರಮೇಣ, ತಕ್ಕ ಪಠ್ಯಪುಸ್ತಕಗಳು ಒದಗಿದ ಮೇಲೆ, ಗಣಿತ ಮತ್ತಿತರ ಶಾಸ್ತ್ರಗಳ ಬೋಧನೆಗೂ ಈ ಮಾಧ್ಯಮವು ವ್ಯಾಪಿಸಿತು. ಬಾಲಕರು ಎಲ್ಲ ಪಾಠಗಳನ್ನೂ ಕನ್ನಡದಲ್ಲಿ ಓದಿ ಎಸ್.ಎಸ್.ಎಲ್.ಸಿ. ಗೆ ಕೂರಲು ಮೊದಲು ಅವಕಾಶವಾದದ್ದು ೧೯೩೯ ರಲ್ಲಿ. ಇವರ ಪೈಕಿ ಕಾಲೇಜಿಗೆ ಸೇರಿದವರ ಅಭಿವೃದ್ಧಿಯ ವಿವರವೂ ಪೂರ್ತಿಯಾಗಿ ದೊರೆಯಿತು. ಆದುದರಿಂದ ಆ ವರ್ಷ ಎಸ್.ಎಸ್.ಎಲ್. ಸಿ.ಗೆ ಕುಳಿತು ಕಾಲೇಜ್ ಶಿಕ್ಷಣಕ್ಕೆ ಯೋಗ್ಯರೆಂದು ಪ್ರಶಸ್ತಿ ಪಡೆದ ಬಾಲಕರನ್ನು ಆರಿಸಿಕೊಳ್ಳಲಾಗಿದೆ. ಮೈಸೂರು ನಗರದಲ್ಲಿರುವ ಈ ಕೆಳಗೆ ಕಂಡ ಐದು ಹೈ ಸ್ಕೂಲುಗಳಿಂದ ಆ ವರ್ಷ ತೇರ್ಗಡೆಯಾದ ಬಾಲಕರನ್ನೆಲ್ಲ **ಒಟ್ಟಾಗಿ** ಆರಿಸಿಕೊಳ್ಳಲಾಗಿದೆ—ಯೋಗ್ಯತೆಯ ಪ್ರಕಾರ ಅವರನ್ನು ಚುನಾಯಿಸಿಕೊಂಡಿಲ್ಲ. ಈ ಶಾಲೆಗಳ ಪೈಕಿ ಎರಡರಲ್ಲಿ ಎರಡು ಮಾಧ್ಯಮಗಳೂ ಇವೆ; ಇನ್ನೆರಡರಲ್ಲಿ ಇಂಗ್ಲಿಷ್ ಮಾಧ್ಯಮ ಮಾತ್ರ ಇದೆ; ಉಳಿದ ಒಂದರಲ್ಲಿ ಕನ್ನಡ ಮಾಧ್ಯಮ ಮಟ್ಟಿಗೆ ಇದೆ. ಎರಡು ಗುಂಪುಗಳಿಗೂ ನೂರು ಮಂದಿ ಬಾಲಕರಿರಬೇಕೆಂಬ ಉದ್ದೇಶದಿಂದ ಈ ಐದು ಶಾಲೆಗಳನ್ನು ತೆಗೆದುಕೊಳ್ಳಲಾಗಿದೆ. ಈ ಶಾಲೆಗಳ ಹೆಸರು, ಅವುಗಳಿಂದ ಆರಿಸಿಕೊಂಡ ಬಾಲಕರ ಸಂಖ್ಯೆ ಮತ್ತು ವಿವರಗಳನ್ನು ಈ ಪಟ್ಟಿಯಲ್ಲಿ ಕಾಣಿಸಿದೆ :

ಸಂಖ್ಯೆ	ಶಾಲೆಯ ಹೆಸರು	ಬಾಲಕರ ಸಂಖ್ಯೆ	
		ಇಂಗ್ಲಿಷ್ ಮಾಧ್ಯಮ	ಕನ್ನಡ ಮಾಧ್ಯಮ
೧	ಮಹಾರಾಜಾ ಹೈ ಸ್ಕೂಲು	೪೦	೪೯
೨	ಬನುಮಯ್ಯ ಹೈ ಸ್ಕೂಲು	೪೯	೪೩
೩	ಮೆಥೊಡಿಸ್ಟ್ ಮಿಷನ್ ಹೈ ಸ್ಕೂಲು	೨೬	....
೪	ಮಹಾಜನ ಹೈ ಸ್ಕೂಲು	೧೪	....
೫	ಮರಿಮಲ್ಲಪ್ಪ ಹೈ ಸ್ಕೂಲು	....	೩೬
	ಒಟ್ಟು	೧೨೯	೧೨೮

ಮೈಸೂರು ಇಂಟರ್‌ಮೀಡಿಯಟ್ ಕಾಲೇಜಿನ ರಿಜಿಸ್ಟರುಗಳನ್ನು ನೋಡಲು ಮೇಲ್ಕಂಡ ೧೨೯ ಮಂದಿ ಇಂಗ್ಲಿಷ್ ಮಾಧ್ಯಮದವರ ಪೈಕಿ ೯೭ ಮಂದಿ ಅಲ್ಲಿಗೆ ಸೇರಿದ್ದರು; ಇವರ ಪೈಕಿ ೮ ಮಂದಿ ಮಧ್ಯೆ ಬಿಟ್ಟು ಹೋಗಿ, ಉಳಿದ ೮೯ ಮಂದಿ

ಮಾತ್ರ ಇಂಟರ್‌ಮಿಾಡಿಯಟ್ ಪೂರ್ತಿ ವ್ಯಾಸಂಗಮಾಡಿ ಪರೀಕ್ಷೆಗೆ ಕಟ್ಟಿದ್ದರು. ಇದೇ ರೀತಿ ೧೨೮ ಮಂದಿ ಕನ್ನಡ ಮಾಧ್ಯಮದವರ ಪೈಕಿ ೯೦ ಮಂದಿ ಸೇರಿ ೫ ಮಂದಿ ಮಧ್ಯೆ ಬಿಟ್ಟು ಉಳಿದ ೮೫ ಮಂದಿ ಎರಡು ವರ್ಷವೂ ವ್ಯಾಸಂಗಮಾಡಿ ಪರೀಕ್ಷೆಗೆ ಕುಳಿತಿದ್ದರು. ಈ ಎರಡು ಗುಂಪಿನ ಬಾಲಕರ ಪರಸ್ಪರ ಯೋಗ್ಯತೆಯ ಮಟ್ಟವು ಈ ಕೆಳಗೆ ಕಂಡ ಅಂಶಗಳಿಂದ ವ್ಯಕ್ತವಾಗುತ್ತದೆ—

ಎಸ್.ಎಸ್.ಎಲ್.ಸಿ. ಪರೀಕ್ಷೆಯ ವಿವರ	ಇಂಗ್ಲಿಷ್ ಮಾಧ್ಯಮ	ಕನ್ನಡ ಮಾಧ್ಯಮ
ಗಣಿತವನ್ನು ಐಚ್ಛಿಕವಾಗಿ ತೆಗೆದುಕೊಂಡವರ ಸಂಖ್ಯೆ	೫೩	೪೫
ಚರಿತ್ರೆ ಅಥವಾ ವಾಣಿಜ್ಯ ವಿಷಯಗಳನ್ನು ತೆಗೆದುಕೊಂಡವರ ಸಂಖ್ಯೆ	೩೧	೩೪
ಚಿತ್ರ ಅಥವಾ ಇತರ ಕಲೆಗಳನ್ನು ತೆಗೆದುಕೊಂಡವರ ಸಂಖ್ಯೆ	೫	೬
ಒಟ್ಟು	೮೯	೮೫
ಮೊದಲನೆಯ ತರಗತಿಯಲ್ಲಿ ಉತ್ತೀರ್ಣರಾದವರ ಸಂಖ್ಯೆ	೧೬	೧೮
ಇಂಗ್ಲೀಷಿನಲ್ಲಿ ಬಾಲಕರ ಸರಾಸರಿ ಅಂಕಗಳು	೫೦	೪೮
ಗಣಿತದಲ್ಲಿ ಬಾಲಕರ ಸರಾಸರಿ ಅಂಕಗಳು	೭೦	೭೨

ಈ ವಿವರಗಳಿಂದ ಎರಡು ಗುಂಪಿನ ಬಾಲಕರ ಯೋಗ್ಯತೆಯೂ ಸುಮಾರು ಒಂದೇ ಎಂದು ವ್ಯಕ್ತವಾಗುತ್ತದೆ.

ಇಂಟರ್‌ಮಿಾಡಿಯಟ್ ತರಗತಿಯಲ್ಲಿ ಈ ಬಾಲಕರಿಗೆ ದೊರೆತ ಐಚ್ಛಿಕ ವಿಷಯಗಳ ವಿವರವನ್ನು ಈ ಕೆಳಗೆ ಕಾಣಿಸಿದೆ—

ಸಂಖ್ಯೆ	ಐಚ್ಛಿಕ ವಿಷಯಗಳು	ಇಂಗ್ಲಿಷ್ ಮಾಧ್ಯಮ	ಕನ್ನಡ ಮಾಧ್ಯಮ
	ಶಾಸ್ತ್ರಗಳ ಶಾಖೆ		
೧	ಗಣಿತ, ಭೌತಶಾಸ್ತ್ರ, ರಸಾಯನಶಾಸ್ತ್ರ	೨೮	೩೦
೨	ರಸಾಯನಶಾಸ್ತ್ರ, ಸಸ್ಯಶಾಸ್ತ್ರ, ಪ್ರಾಣಿಶಾಸ್ತ್ರ	೧೦	೧೨
೩	ರಸಾಯನಶಾಸ್ತ್ರ, ಸಸ್ಯಶಾಸ್ತ್ರ, ಭೂಶಾಸ್ತ್ರ	೫	೩
೪	ರಸಾಯನಶಾಸ್ತ್ರ. ಭೂಶಾಸ್ತ್ರ, ಅರ್ಥಶಾಸ್ತ್ರ	೧	೩
೫	ಗಣಿತ, ಭೌತಶಾಸ್ತ್ರ, ಅರ್ಥಶಾಸ್ತ್ರ	೫	೫
	ಒಟ್ಟು	೪೯	೫೩

ಸಂಖ್ಯೆ	ಐಚ್ಛಿಕ ವಿಷಯಗಳು	ಇಂಗ್ಲಿಷ್ ಮಾಧ್ಯಮ	ಕನ್ನಡ ಮಾಧ್ಯಮ
	ಚರಿತ್ರೆ ಇತ್ಯಾದಿ ಸಮಾಜವಿಜ್ಞಾನ ಶಾಖೆ		
೧	ಚರಿತ್ರೆ, ಗಣಿತ, ಅರ್ಥಶಾಸ್ತ್ರ	೯	೯
೨	ಚರಿತ್ರೆ, ಅರ್ಥಶಾಸ್ತ್ರ, ತರ್ಕ	೨೮	೨೨
೩	ಇತರ ಸಮಾಜ ಶಾಸ್ತ್ರಗಳು	೩	೧
	ಒಟ್ಟು	೪೦	೩೨
	ಎರಡೂ ಸೇರಿ	೮೯	೮೫

ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಸೈನ್ಸ್ ಅಥವಾ ವಿಜ್ಞಾನಶಾಸ್ತ್ರದ ತರಗತಿಗಳಿಗೆ ಪ್ರವೇಶ ದೊರೆಯುವುದು ಕಷ್ಟ. ನೂರಾರು ಅರ್ಜಿದಾರರ ಪೈಕಿ ಉತ್ತಮ ಯೋಗ್ಯತೆಯುಳ್ಳ ಕೆಲವರಿಗೆ ಮಾತ್ರ ಈ ತರಗತಿಗಳಲ್ಲಿ ವ್ಯಾಸಂಗಮಾಡಲು ಅವಕಾಶ ದೊರೆಯುತ್ತದೆ. ಮೇಲಿನ ಪಟ್ಟಿಯನ್ನು ಪರೀಕ್ಷಿಸಿದರೆ ಎರಡು ಮಾಧ್ಯಮಗಳಿಂದಲೂ ಸುಮಾರು ಒಂದೇ ಸಂಖ್ಯೆಯ ಬಾಲಕರು ಈ ಶಾಸ್ತ್ರ ತರಗತಿಗಳಿಗೆ ಸೇರಿರುತ್ತಾರೆ. ಈ ಎರಡು ಗುಂಪುಗಳ ಯೋಗ್ಯತೆಯೂ ಸುಮಾರು ಒಂದೇ ಎಂಬುದಕ್ಕೆ ಇದೊಂದು ಸೂಚನೆ.

ಜೂನಿಯರ್ ಇಂಟರ್‌ಮೀಡಿಯಟ್ ವಾರ್ಷಿಕ ಪರೀಕ್ಷೆಯಲ್ಲಿ ಈ ಬಾಲಕರ ಯೋಗ್ಯತೆ ಈ ರೀತಿ ಇತ್ತು:

(i) ಬಾಲಕರ ಅಂಕಗಳ ಸೇಕಡ ಸರಾಸರಿ.

ವಿಷಯಗಳು	ಇಂಗ್ಲಿಷ್ ಮಾಧ್ಯಮ	ಕನ್ನಡ ಮಾಧ್ಯಮ
ಇಂಗ್ಲಿಷ್	೩೯	೩೮
ಐಚ್ಛಿಕ ೧	೩೯	೪೨
ಐಚ್ಛಿಕ ೨	೪೪	೪೯
ಐಚ್ಛಿಕ ೩	೪೩	೪೭
ಐಚ್ಛಿಕ ೪ (ಸಿ; ಬಿ, ಜಡ್, ಇತ್ಯಾದಿಯವರಿಗೆ ಮಾತ್ರ)	೪೦	೪೦

(ii) ವ್ಯಾಸಂಗ ವಿಷಯಗಳಲ್ಲಿ ಫೇಲಾದವರ—ಎಂದರೆ ಇಂಗ್ಲಿಷಿನಲ್ಲಿ ೩೫% ಕ್ಕಿಂತ ಕಡಮೆಯಾಗಿಯೂ, ಐಚ್ಛಿಕಗಳಲ್ಲಿ ೩೦% ಕಡಮೆಯಾಗಿಯೂ ಪಡೆದವರ ಸೇಕಡ.

ಪಾಠಗಳು	ಇಂಗ್ಲಿಷ್ ಮಾಧ್ಯಮ	ಕನ್ನಡ ಮಾಧ್ಯಮ
ಇಂಗ್ಲಿಷ್	೩೪	೩೭
ಐಚ್ಛಿಕ ೧	೧೬	೧೬
ಐಚ್ಛಿಕ ೨	೧೧	೧೧
ಐಚ್ಛಿಕ ೩	೯	೧೧
ಐಚ್ಛಿಕ ೪ (ಸಿ, ಬಿ, ಜಡ್, ಇತ್ಯಾದಿಯವರಿಗೆ ಮಾತ್ರ)	೧೯	೧೭

(iii) ವ್ಯಾಸಂಗ ವಿಷಯಗಳಲ್ಲಿ ೫೦% ಕ್ಕಿಂತ ಹೆಚ್ಚಾಗಿ ಪಡೆದವರ ಸೇಕಡ.

ಪಾಠಗಳು	ಇಂಗ್ಲಿಷ್ ಮಾಧ್ಯಮ	ಕನ್ನಡ ಮಾಧ್ಯಮ
ಇಂಗ್ಲಿಷ್	೧೫	೧೨
ಐಚ್ಛಿಕ ೧	೧೭	೨೭
ಐಚ್ಛಿಕ ೨	೩೫	೪೧
ಐಚ್ಛಿಕ ೩	೨೬	೪೨
ಐಚ್ಛಿಳ ೪ (ಸಿ, ಬಿ, ಜಡ್, ಇತ್ಯಾದಿಯವರಿಗೆ ಮಾತ್ರ)	೧೩	೧೧

(iv) ವಿಶ್ವವಿದ್ಯಾನಿಲಯದ ನಿಯಮದಂತೆ ತೇರ್ಗಡೆಯಾದವರ ಸಂಖ್ಯೆ, ಸೇಕಡ.

	ಇಂಗ್ಲಿಷ್ ಮಾಧ್ಯಮ	ಕನ್ನಡ ಮಾಧ್ಯಮ
ಎಲ್ಲ ವ್ಯಾಸಂಗವಿಷಯಗಳಲ್ಲಿಯೂ ತೇರ್ಗಡೆ ಹೊಂದಿ (ಎಂದರೆ ಇಂಗ್ಲಿಷಿನಲ್ಲಿ ೩೫%, ಇತರ ಪಾಠಗಳಲ್ಲಿ ೩೦% ಪಡೆದು) ಉತ್ತೀರ್ಣರಾದವರ ಸಂಖ್ಯೆ	೪೭	೪೯
ಹೀಗೆ ಉತ್ತೀರ್ಣರಾದವರ ಸೇಕಡ	೫೩	೫೮

ಮೇಲಿನ ಅಂಕಿ ಅಂಶಗಳಿಂದ ಕನ್ನಡ ಮಾಧ್ಯಮವು ಬಾಲಕರಿಗೆ ಯಾವ ವಿಧವಾದ ತೊಂದರೆಯನ್ನೂ ಉಂಟುಮಾಡುವುದಿಲ್ಲವೆಂದು ಸ್ಪಷ್ಟವಾಗುತ್ತದೆ. ಕನ್ನಡ

ಮಾಧ್ಯಮದವರ ಯೋಗ್ಯತೆ ಇಂಗ್ಲಿಷಿನಲ್ಲಿ ಸೇಕಡ ಒಂದು ಅಥವಾ ಎರಡು ಕಡಮೆ ಇದ್ದರೆ, ಇತರ ವಿಷಯಗಳಲ್ಲಿ ಅವರ ಯೋಗ್ಯತೆ ಇಂಗ್ಲಿಷ್ ಮಾಧ್ಯಮದವರದಕ್ಕಿಂತ ಬಹಳ ಮಟ್ಟಿಗೆ ಉತ್ತಮವಾಗಿರುತ್ತದೆ. ಎಸ್.ಎಸ್.ಎಲ್.ಸಿ. ಪರೀಕ್ಷೆಯ ಫಲಿತಾಂಶ ದಿಂದಲೂ ಈ ವಿಷಯ ಕಂಡುಬರುತ್ತದೆ. ಇದರಿಂದ ತಿಳಿಯಬರುವುದೇನು? ತಮಗೆ ಚಿರಪರಿಚಿತವಾಗಿರುವ ದೇಶಭಾಷೆಯಲ್ಲಿ ಕಲಿಯುವುದರಿಂದ ವಿಷಯಗಳು ಬಾಲಕರಿಗೆ ಹೆಚ್ಚು ವಿಶದವಾಗಿ, ಚೆನ್ನಾಗಿ, ತಿಳಿಯುತ್ತವೆ; ಆದುದರಿಂದ ಅವು ನೆನಪಿನಲ್ಲಿ ನಿಲ್ಲುತ್ತವೆ, ಅವನ್ನು ವಿವರಿಸುವುದೂ ಸುಲಭ.

ಈ ತನಿಖೆಯನ್ನು ಸೀನಿಯರ್ ಇಂಟರ್‌ಮೀಡಿಯಟ್ ಪರೀಕ್ಷೆಯಲ್ಲಿ ನಡೆಸುವ ಅಗತ್ಯವೇ ಉಳಿಯುವುದಿಲ್ಲ. ಈ ಪರೀಕ್ಷೆಗೆ ಕುಳಿತ ಮೇಲ್ಕಂಡ ಪ್ರತಿಯೊಬ್ಬ ಬಾಲಕನ ಫಲಿತಾಂಶದ ವಿವರಗಳನ್ನು ತಿಳಿಯಲೂ ಸಾಧ್ಯವಾಗಿಲ್ಲ. ಪರೀಕ್ಷೆಯಲ್ಲಿ ಎಲ್ಲ ಭಾಗಗಳಲ್ಲಿಯೂ ತೇರ್ಗಡೆಹೊಂದಿ ಮೇಲಿನ ತರಗತಿಗೆ ಯೋಗ್ಯರಾದವರ ಸಂಖ್ಯೆ ಮಟ್ಟಿಗೆ ತಿಳಿಯಬಂದಿದೆ. ಇಂಗ್ಲಿಷ್ ಮಾಧ್ಯಮದವರ ಪೈಕಿ ೨೪ ಅಥವಾ ಸೇಕಡ ೨೭ ಮಂದಿಯೂ, ಕನ್ನಡ ಮಾಧ್ಯಮದವರ ಪೈಕಿ ೨೩ ಅಥವಾ ಸೇಕಡ ಅದೇ ೨೭ ಮಂದಿಯೂ ಈ ರೀತಿ ತೇರ್ಗಡೆಹೊಂದಿರುತ್ತಾರೆ.

ವಿಜ್ಞಾನವನ್ನು ತೆಗೆದುಕೊಳ್ಳುವ ಬಾಲಕರಿಗೆ ಕನ್ನಡ ಮಾಧ್ಯಮದಿಂದ ವಿಶೇಷ ಅನನುಕೂಲವೆಂದು ಕೆಲವರ ಅಭಿಪ್ರಾಯ. ಇದಕ್ಕೆ ಸರಿಯಾದ ಆಧಾರವಿಲ್ಲವೆಂದು ಈ ಕೆಳಗಿನ ಪಟ್ಟಿಯಿಂದ ಕಂಡುಬರುತ್ತದೆ. ಇದರಲ್ಲಿ ವಿಜ್ಞಾನವನ್ನು ತೆಗೆದುಕೊಂಡವರ ಫಲಿತಾಂಶವನ್ನೇ ಬೇರೆ ಪರಿಶೀಲಿಸಿ ಕೊಡಲಾಗಿದೆ.

ಜೂನಿಯರ್ ಇಂಟರ್‌ಮೀಡಿಯಟ್ ವಾರ್ಷಿಕ ಪರೀಕ್ಷೆಯಲ್ಲಿ ವಿಜ್ಞಾನವನ್ನು ತೆಗೆದುಕೊಂಡ ಬಾಲಕರ ಅಭಿವೃದ್ಧಿಯ ವಿವರ:

ವ್ಯಾಸಂಗ ವಿಷಯಗಳು	ಬಾಲಕರ ಸರಾಸರಿ ಅಂಕ—೧೦೦ ಕ್ಕೆ	
	ಇಂಗ್ಲಿಷ್ ಮಾಧ್ಯಮ	ಕನ್ನಡ ಮಾಧ್ಯಮ
ಐಚ್ಛಿಕ ಭಾಷೆ ೧	೩೮	೪೨
ಐಚ್ಛಿಕ ಭಾಷೆ ೨	೪೧	೪೭
ಐಚ್ಛಿಕ ಭಾಷೆ ೩	೪೩	೪೮
ಐಚ್ಛಿಕ ಭಾಷೆ ೪ (ಸಿ, ಬಿ, ಜಡ್; ಇತ್ಯಾದಿ ಯವರಿಗೆ)	೪೦	೪೦

ಆದುದರಿಂದ ಈ ವಿಧವಾದ ಭೀತಿಗೆ ಬುಡವಿಲ್ಲ.

ಮೇಲಿನ ತನಿಖೆಯಿಂದ ಹೈಸ್ಕೂಲಿನಲ್ಲಿರುವ ಕನ್ನಡ ಮಾಧ್ಯಮದಿಂದ ಕಾಲೇಜಿನಲ್ಲಿ ಯಾವ ವಿಧವಾದ ತೊಂದರೆಯೂ ಉಂಟಾಗುವುದಿಲ್ಲವೆಂದು ನಿರ್ಧರವಾಗುತ್ತದೆ.

ಬಾಲಕರ ಹೆಸರು, ಪರೀಕ್ಷೆಗಳಲ್ಲಿ ಅವರ ಫಲಿತಾಂಶಗಳು, ಇವೆರಡನ್ನೂ ಒಳಗೊಂಡ ಅನುಬಂಧವನ್ನು ಸಿದ್ಧಮಾಡಿದೆ. ಆದರೆ ಸ್ಥಳಸಂಕೋಚದಿಂದ ಅದನ್ನು ಇಲ್ಲಿ ಪ್ರಕಟಿಸಿಲ್ಲ.

ಜಿ. ಆರ್. ರಂಗಸ್ವಾಮಿ.

[ಕನ್ನಡ ಸಾಹಿತ್ಯಪರಿಷತ್ತಿನ ಪ್ರಾಂತಸಮಿತಿಯು ನನ್ನನ್ನು ಈ ತನಿಖೆ ನಡೆಸಲು ನೇಮಿಸಿ ಒಂದು ಸಮಿತಿಯನ್ನು ಏರ್ಪಡಿಸಿ ತಕ್ಕ ಧನಸಹಾಯವನ್ನು ಒದಗಿಸಿತು. ಹೈಸ್ಕೂಲಿನಲ್ಲಿ ಕನ್ನಡ ಮಾಧ್ಯಮದ ಪರಿಣಾಮವೇನೆಂಬುದನ್ನು ಪರಿಶೀಲಿಸಲಾಗುತ್ತಿದೆ. ಬೇರೊಂದು ಲೇಖನದಲ್ಲಿ ಅದನ್ನು ಮಹಾಜನರ ಮುಂದೆ ಇಡಬೇಕೆಂದಿದ್ದೇನೆ. ಸಾಹಿತ್ಯಪರಿಷತ್ತಿನ ಪ್ರಾಂತಸಮಿತಿಗೆ ನನ್ನ ವಂದನೆ.—ಜಿ. ಆರ್. ರಂ.]

ಪುನರ್ಜನ್ಮ

೧

ನಾನು ಕುಳಿತಿದ್ದುದು ಹೆಂಗಸರ ಆಸ್ಪತ್ರೆಯ ಬಲಗಡೆ ಇರುವ ಕೈಸಾಲೆಯಲ್ಲಿ. ಅಲ್ಲಿ ನಾಲ್ಕಾರು ಬೆಂಚುಗಳನ್ನು ಹಾಕಿದ್ದರು. ಅವುಗಳಲ್ಲೊಂದರ ಮೇಲೆ ಕುಳಿತು ಸುತ್ತಲೂ ನೋಡುತ್ತಿದ್ದೆ. ಎಷ್ಟೋ ಜನ ಹೆಂಗಸರು ಇನ್ನೂ ಬರುತ್ತಲೇ ಇದ್ದರು. ಗಾಡಿಗಳಲ್ಲಿ ಬರುವವರು ಕೆಲವರು. ಕಾರುಗಳಲ್ಲಿ ಬರುವವರು ಕೆಲವರು. ಆದರೆ ನಡೆದು ಕೊಂಡು ಬರುವವರೇ ಹೆಚ್ಚು ಜನ. ಹೀಗೆ ಬರುವವರಲ್ಲಿ ದಂಪತಿಗಳಿಬ್ಬರು ಬೇಗ ಬೇಗ ಬರುತ್ತಿದ್ದರು. ಆಗಲೇ ಹನ್ನೊಂದು ಗಂಟೆಯಾಗಿ ಹೋಗಿತ್ತು. ಹೆಂಡತಿ ಯಾದವಳು ಕಾಲನ್ನು ಎಳೆದೆಳೆದು ಹಾಕುತ್ತಿದ್ದಳು. ಆಕೆಯ ಮುಖದಲ್ಲಿ ರೋಗದ ಚಿಹ್ನೆಯಿತ್ತು. ಆದರೆ ಮಾತ್ರ ಉತ್ತಮವಾದ ಸೀರೆಯನ್ನು ಉಟ್ಟಿದ್ದಳು; ತಲೆ ಬಾಚಿಕೊಂಡು ಹೂಗಳನ್ನು ಮುಡಿದಿದ್ದಳು. ಅವಳ ಗಂಡ ಮಧ್ಯವಯಸ್ಸಿನವನು. ಆತ ಹೆಂಡತಿಯನ್ನು ಒಳಕ್ಕೆ ಕಳುಹಿಸಿ, "ಉಸ್!" ಎನ್ನುತ್ತಾ ತಾನು ಹೊದೆ ದಿದ್ದ ವಲ್ಲಿಯಿಂದ ಬೆವರೊರೆಸಿಕೊಳ್ಳುತ್ತಾ, ಗಾಳಿ ಹಾಕಿಕೊಳ್ಳುತ್ತಾ ನನ್ನ ಬಳಿ ಬಂದು ಕುಳಿತ.

ನಾನು ಅವನ ಕಡೆ ನೋಡಲಿಲ್ಲ. ಅಪರಿಚಿತರ ಸಂಗಡ ಪರಿಚಯವಿಲ್ಲದೆ, ಮಾತ ನಾಡುವುದು ಅಸಭ್ಯವರ್ತನವೆಂದು ಸುಮ್ಮನಿದ್ದೆ.

"ತಮ್ಮದು ಯಾವೂರು, ಸಾರ್?" ಎಂದ ಆತ.

"ಆಂ!" ಎಂದೆ.

"ತಮ್ಮದು ಯಾವೂರು, ಎಂದೆ!"

"ನಮ್ಮದೇ? . . . ಆ ಕಡೆ!"

"ಯಾವ ಕಡೆ?"

"ಮಲೆನಾಡು ಕಡೆ."

"ಹಾಗೋ! ಯಾವೂರು?"

ಇವನೇನೋ ಬಿಡುವಹಾಗಿಲ್ಲವೆಂದು "ಶಿವಮೊಗ್ಗ" ಎಂದೆ.

"ಶಿವಮೊಗ್ಗಾನೇ? . . . ಸರಿಸರಿ!" ಎಂದು ತಲೆಯಲ್ಲಾಡಿಸಿದ.

ಮಾತು ಬೆಳೆಸಲಿಷ್ಟವಿಲ್ಲದೆ ಸುಮ್ಮನಿದ್ದೆ.

"ನಿಮ್ಮ ಕಡೆ ಮಳೆ ಜಾಸ್ತಿ ಅಲ್ವೆ?" ಎಂದ.

"ಹೌದು" ಎಂದೆ.

"ಹಾಗಾದರೆ ಈಗ ಅಲ್ಲಿ ಮಳೆ ಜಾಸ್ತಿ ಬೀಳ್ತಾ ಇರಬಹುದಲ್ವೆ?"

"ಇರಬಹುದು."

"ಈ ಊರಿನಲ್ಲಿ, ನೋಡಿ, ಒಂದು ಹನಿ ಕೂಡ ಮಳೆ ಇಲ್ಲ."

". . . ."

"ಬೇಸಗೆ ಇದ್ದ ಹಾಗಿದೆ."

". . . ."

"ಏನು ಕಲಿಕಾಲವೋ ಏನೋ ಸಾರ್!"

ಕಾಲಮಹಿಮೆಯನ್ನು ಚರ್ಚಿಸಲು ನಾನು ಸಿದ್ಧನಾಗಿರಲಿಲ್ಲ. ಆದರೆ ಆತ ನನ್ನನ್ನು ಸುಮ್ಮನೆ ಬಿಡಲೂ ಸಿದ್ಧನಾಗಿರಲಿಲ್ಲ.

"ಏನೋ ಸಾರ್! ಪ್ರಪಂಚದಲ್ಲಿ ಯಾವುದನ್ನಾದರೂ ಹೇಳಬಹುದು. ಈ ಹೆಂಗಸರ ಕಾಯಿಲೆ ಮಾತ್ರ ಹೇಳೋದು ಕಷ್ಟ!" ಎಂದ.

"ಹೌದು, ಹೌದು!" ಎಂದೆ.

"ನೋಡಿ, ಗಂಡಸರಿಗೆ ಕಾಯಿಲೆ ಬಂದರೆ ಬೇಗ ಗುಣಮಾಡಬಹುದು. ಹೆಂಗಸರಿಗೆ ಮಾತ್ರ ಹಾಗಲ್ಲ."

"ಪಾಪ! ಪಾಪ!"

"ಅವರ ಕಾಯಿಲೆ ಹೀಗೇಂತ ಹೇಳೋದೇ ಕಷ್ಟ ನೋಡಿ ಸಾರ್! ಇವೊತ್ತು ಒಂದು ಕಾಯಿಲೆಯಾದರೆ ನಾಳೆ ಮತ್ತೊಂದು. ಬೆಳಗ್ಗೆ ಚೆನ್ನಾಗಿದ್ದರೆ, ಮಧ್ಯಾಹ್ನಕ್ಕೆ ಏನಾದರೂ ಹಾಜರಿ."

ನಾನು ಸುಮ್ಮನಿದ್ದೆ.

"ತಮ್ಮ ಹೆಸರೇನು?" ಎಂದ. ಹೇಳಿದೆ.

"ಕೆಲಸ?"

ನನಗೂ ಬೇಸರ ಬಂತು. "ಏನ್ರೀ, ಇಷ್ಟೊಂದು ವಿಚಾರಿಸುತ್ತಾ ಇದ್ದೀರಿ? . . . . ಬೇರೆ ಎಲ್ಲಾದರೂ ವರನನ್ನ ನೋಡಿ! ನನಗೆ ಮದುವೆಯಾಗಿದೆ!" ಎಂದು ಸ್ವಲ್ಪ ಬಿರುಸಾಗಿಯೇ ಹೇಳಿದೆ. ಪ್ರತಿಕಕ್ಷಿಯನ್ನು ತುಳಿಯುವ ನೋಟದಿಂದ ಅವನನ್ನು ನೋಡಿದೆ.

ಆದರೆ ಅವನು ಅಪ್ರತಿಭನಾಗಲಿಲ್ಲ. ಅವನೂ ಸ್ವಲ್ಪ ಜೋರಾಗಿಯೇ ಪ್ರಾರಂಭಿಸಿದ. "ತಮ್ಮನ್ನ ನೋಡಿದರೇ ಹೇಳುತ್ತೆ ಸಾರ್, ಮದುವೆ ಆಗಿದೇಂತ!

ವರಾನ್ವೇಷಣಕ್ಕೆ ಆಸ್ಪತ್ರೆ ತಕ್ಕ ಸ್ಥಳವಲ್ಲ. ಇದೂ ನನಗೆ ಗೊತ್ತಿದೆ. . . . ಏನೋ ಹೊತ್ತು ಕಳೆಯೋಣ ಎಂತ ಮಾತಾಡಿಸಿದೆ ಅಷ್ಟೆ! ನಿಮಗೆ ಬೇಸರವಾದರೆ, ಬೇಡ!'' ಎಂದು ಬೇರೆ ಕಡೆಗೆ ಮುಖ ತಿರುಗಿಸಿ ಹುಬ್ಬುಗಂಟುಹಾಕಿದ.

ನನ್ನದೇ ಏನೋ ತಪ್ಪಾಯಿತೆಂಬಂತೆ ನಾನು, "ಕ್ಷಮಿಸಿ ಸಾರ್! ಹಾಗಲ್ಲ, ನನ್ನ ಮನಸ್ಸಿಗೆ ಏನೋ ಬೇಸರವಾಗಿತ್ತು" ಎಂದೆ.

ಲಲಿತೆ ಇನ್ನೂ ಆಸ್ಪತ್ರೆಯಿಂದ ಹೊರಹೊರಡಲಿಲ್ಲ. ಬೇಗ ಬಂದರೆ ಈ ಪೀಡೆಯಿಂದ ತಪ್ಪಿಸಿಕೊಳ್ಳಬಹುದು. . . .

"ನಿಮ್ಮ ಕುಟುಂಬಾನ ಕರಕೊಂಡು ಬಂದಿದ್ದೀರಾ?" ಎಂದ.

"ಹೌದು" ಎಂದೆ.

"ಏನು ಕಾಯಿಲೆ?"

"ಏನೂ ಕಾಯಿಲೆಯಿಲ್ಲ."

"ಹೊಟ್ಟೆ ನೋವೇ"

"ಇಲ್ಲ."

"ಹಾಗಾದರೆ?"

"ಮೈ ಇಳಿದಿತ್ತು. ಅದಕ್ಕೆ!"

"ಪಾಪ! ಕಷ್ಟ!"

" . . . . . "

"ನಮ್ಮವಳಿಗೆ ಏನೂ ಇಲ್ಲ ಸಾರ್! ದೇವರು ದೊಡ್ಡವನು. ಇದುವರೆಗೆ ಐದು ಹೆರಿಗೆ ಆಗಿದೆ. ಸುಖವಾಗಿ ಕಳೀತು."

ಇಷ್ಟು ಹೊತ್ತಿಗೆ ಲಲಿತೆ ಹೊರಗೆ ಬಂದಳು. ನಾನು ಎದ್ದೆ. "ತಮ್ಮ ಹೆಸರೇನು?" ಎಂದೆ. "ಸುಬ್ರಹ್ಮಣ್ಯಶಾಸ್ತ್ರಿ" ಎಂದ. "ಹಾಗಾದರೆ ಬರ್ತೀನಿ ಸಾರ್!" ಎಂದು ಹೊರಟೆ.

ಸ್ವಲ್ಪದೂರ ಹೋದಮೇಲೆ "ಗೆದ್ದೆ ಲಲಿತಾ!" ಎಂದೆ.

"ಏನು ಗೆದ್ದಿರಿ?"

"ಆ ಶನಿಯ ಕೈಯಿಂದ ತಪ್ಪಿಸಿಕೊಂಡು ಬಂದೆ."

"ಯಾವ ಶನಿ? ಇದೇನು ಹೇಳ್ತಾ ಇದ್ದೀರಿ?"

"ಅಲ್ಲೊಂದು ಶನಿ ಬಂದು ಕೂತಿತ್ತು!" ಎಂದು ನಡೆದ ಸಂಗತಿಯನ್ನೆಲ್ಲಾ ಹೇಳಿದೆ.

"ಗಾಡಿ ತರಲೇ ಲಲಿತಾ?"

"ಬೇಡ ಬನ್ನಿ."

"ಇಂಜಕ್ಷನ್ ಕೊಟ್ಟರೆ?"

"ಹುಂ."

"ಕೈ ನೊಯ್ಯೊಲ್ವೆ?"

"ಪರವಾಯಿಲ್ಲ, ಬನ್ನಿ!"

"ಡಾಕ್ಟರು ಏನು ಹೇಳಿದಳು?"

"ಬಹಳ ಸಮಾಧಾನಿ ಅವಳು. ನಮ್ಮೂರಿನಲ್ಲಿ ಇದ್ದಹಾಗಲ್ಲ ಅವಳಂತೆ ಸಿಡುಕಿಯಲ್ಲ. ನಾ ಹೇಳೋದನ್ನೆಲ್ಲ ಶಾಂತವಾಗಿ ಕೇಳಿದಳು. ನೀನೇನೂ ಹೆದರಬೇಡಮ್ಮ, ಈ ಇಂಜಕ್ಷನ್ ಬಹಳ ಒಳ್ಳೇದು, ಪ್ರತಿ ಗುರುವಾರ ಇಲ್ಲಿಗೆ ಬಂದು ತೋರಿಸಿಕೊಂಡು ಹೋಗು" ಎಂದಳು.

*   *   *   *   *

"ಇವೊತ್ತು ಹೇಗಿದೆ, ಲಲಿತಾ, ಕೈನೋವು?"

"ಹೇಗಿದೇಂತ ಹೇಳಲಿ, ನಿಮಿಷ ನಿಮಿಷಕ್ಕೂ ಕೇಳಿದರೆ?"

"ನೋವು ಹೇಗಿದೆ? ಹೆಚ್ಚೋ, ಕಡಿಮೆಯೋ?"

"ಹಾಗೇ ಇದೆ."

"ಹಾಗಂದ್ರೆ?"

"ಹಾ . . . ಗೇ . . . ಇದೆ."

"ಕಡಿಮೆ ಆಗಿಲ್ವೆ?"

"ಇಲ್ಲ!"

"ಹೆಚ್ಚಾಗಿದೆಯೇ?"

"ಇಲ್ಲ!"

ಬಗೆ ಹರಿಯದೆ ಸುಮ್ಮನಾದೆ.

"ಅಲ್ಲಾಂದ್ರೆ . . ." ಎಂದಳು.

"ಏನು ಲಲಿತಾ, ಏನುಬೇಕು?"

"ದೇವರು ಎಂಥವನೂಂತ!"

"ಅವನಿಗೇನು ಬಂತು, ಹೊತ್ತು?"

"ಛೂ! ಥೂ! ಹಾಗೆಲ್ಲಾ ಹೇಳಬೇಡಿ. . . . ಅವನ ಲೀಲೆ ನೋಡಿ ಎಂದೆ!"

"ನನಗೇನೂ ಅವನ ಲೀಲೆ ಕಾಣಿಸೋದಿಲ್ಲ!"

"ಅಯ್ಯೋ ನೀವೊಬ್ಬರು . . . ಅಲ್ಲಾ . . . ಕೊಟ್ಟಹಾಗೆ ಮಾಡಿ ಮತ್ತೆ ಕಿತ್ತುಕೋತಾನಲ್ಲಾ . . ."

"ಇದೆಂಥಾ ಲೀಲೆ ಲಲಿತಾ! . . . ಇದು ಲೀಲೆಯಲ್ಲ . . . ನನ್ನ ಹೊಟ್ಟೆ ಬೆಂದುಹೋಯ್ತು ಅವನ ಲೀಲೇಲಿ! . . . ಅವನು ದೇವರಲ್ಲ! ರಾಕ್ಷಸ! . . ."

"ಸಾಕು, ಸ್ವಲ್ಪ ನಿಲ್ಲಿಸೀಂದ್ರೆ! . . . ಪಾಪ! ನೀವು . . . ಬಹಾಳ . . . ಹೊತ್ತಿದ್ದೋರು ಭಾರಾನ! . . . ಹೊಟ್ಟೆ ಬೆಂದು ಹೋಯ್ತಂತೆ! . . ." ಲಲಿತ ಬೇರೆ ಕಡೆಗೆ ಮುಖತಿರುಗಿಸಿದಳು.

* * * * *

೨

ಸಾಯಂಕಾಲ ನಾನು ಮನೆಗೆ ಬಂದ ಕೂಡಲೆ ಲಲಿತ ಕೇಳಿದಳು:

"ಈ ಊರಿನಲ್ಲಿ ಆಲದ ಮೊಗ್ಗು ಸಿಕ್ಕುತ್ತೆಯೇ?"

ನಾನಿನ್ನೂ ಕೋಟು ಬಿಚ್ಚುವುದರಲ್ಲಿದ್ದೆ; ಗಾಬರಿಯಾಗಿ "ಅಂ?" ಎಂದೆ.

"ಆಲದ ಮೊಗ್ಗು!" ಎಂದಳು.

"ಆಲದ ಮೊಗ್ಗೇ?"

"ಹೌದು, ಆಲದ ಮೊಗ್ಗು!"

"ಯಾಕೆ, ಲಲಿತಾ, ಆಲದ ಮೊಗ್ಗು?"

"ಬೇಕಾಗಿದೆ. ಸಿಕ್ಕುತ್ತೋ, ಇಲ್ಲವೋ, ಹೇಳಿ."

"ಅಲ್ಲ ಲಲಿತಾ, ಇದೇನು ಇಂದು ಆಲದ ಮೊಗ್ಗಿನ ಮೇಲೆ ಇಷ್ಟು? ಬೇರೆ ಮೊಗ್ಗಿನ ಹೆಸರೇ ಗೊತ್ತಿಲ್ಲವೆ? ಮಲ್ಲಿಗೆ ಮೊಗ್ಗು ಗುಲಾಬಿ ಮೊಗ್ಗು, ಸಂಪಿಗೆ, ಜಾಜಿ, ಮೊಲ್ಲೆ . . ."

"ಈಗ ನನಗೆ ಬೇಕಾದದ್ದು ಆಲದ ಮೊಗ್ಗು!"

"ಅದ್ಯಾತಕ್ಕೆ? ಅಂದವಿಲ್ಲ ಗಂಧವಿಲ್ಲ; ಇದುವರೆಗೂ ಯಾರೂ ಅದನ್ನ ಮುಡಕೊಂಡ ಹಾಗೆ ಕಾಣೆ, ಯಾವ ದೇವರೂ ಅದನ್ನು ಅಪೇಕ್ಷಿಸಿಲ್ಲ!"

"ಅದೆಲ್ಲ ನಿಮಗೆ ಯಾಕೆ? ಸಿಕ್ಕುತ್ತೆ ತಾನೆ?"

"ಸಿಕ್ಕುತ್ತೆ!"

"ಹಾಗಾದರೆ ಒಂದಿಷ್ಟು ತರಿಸಿಕೊಡಿ . . . ನಾಳೆ ಸಾಯಂಕಾಲದ ಒಳಗೆ ಆಗಬೇಕು!"

ಆಗಲೆಂದು ತಲೆಯಲ್ಲಾಡಿಸಿ ಕೋಟು ಬಿಚ್ಚಿದೆ. ಅಷ್ಟರಲ್ಲಿ ಲಲಿತ ಒಂದು ಚೀಟಿ ಕೊಟ್ಟಳು. ಓದಿದೆ. . . . "ಕೇಸರಿ ನಾಲ್ಕಾಣೆ ತೂಕ, ಒಂದು ಸೇರು ಕಲ್ಸಕ್ಕರೆ, ಒಂದು ಪಾವು ಲವಂಗ, ಯಾಲಕ್ಕಿ ಒಂದು ತೊಲ. . . ."

“ನಾಳೆ ಏನು ಲಲಿತ?” ಎಂದೆ.

“ಏನು, ನಾಳೆ?” ಎಂದಳು.

“ನಾನು ಕೇಳಿದ್ದು . . . ನಾಳೆ ಏನೂಂತ!”

“ನಾನೂ ಅದನ್ನೇ ಕೇಳ್ತೀನಿ!”

“ನಾಳೆ ಹಬ್ಬವೆ?”

“ಯಾವ ಹಬ್ಬ?”

“ಯಾರಿಗಾದರೂ ಔತಣವೆ?”

“ಯಾರಿಗೆ?”

“ಹಾಗಾದರೆ ಶಾಮಿಗೆ ಖೀರು ಯಾತಕ್ಕೆ?”

“ಖೀರು ಯಾರು ಮಾಡುತಾರೆ?”

“ಹಾಗಾದರೆ ಇವೆಲ್ಲಾ ಏನು?” ಎಂದು ಚೀಟಿ ತೋರಿಸಿದೆ.

“ನಿಮಗೆ ಯಾಕೇಂದ್ರೆ ಅವೆಲ್ಲಾ! ಸುಮ್ಮನೆ ತನ್ನಿ.”

ಉಸ್ಸೆಂದು ಮತ್ತೆ ಕೋಟನ್ನು ಕೈಲಿ ತೆಗೆದುಕೊಂಡು ಹೊರಡಲು ಅನುವಾದೆ. ಲಲಿತ ನಕ್ಕಳು. “ಅದು ಹಾಗಿರಲಿ ಏಳಿ, ಕಾಲುತೊಳಕೊಳ್ಳಿ, ಮೊದಲು” ಎಂದಳು. ಥಳಥಳ ಮಿರುಗುವ ಪ್ಲೇಟಿನಲ್ಲಿ ತಿಂಡಿ, ಎರಡು ಕಪ್ಪುಗಳಲ್ಲಿ ಕಾಫಿ ತಂದಳು. ತಾನೂ ಒಂದು ಪ್ಲೇಟಿನಲ್ಲಿ ತಿಂಡಿಯನ್ನಿಟ್ಟುಕೊಂಡು ಬಂದು ಕುಳಿತಳು. ಇಬ್ಬರೂ ತಿನ್ನುವುದಕ್ಕೆ ಪ್ರಾರಂಭಿಸಿದೆವು. ತಿಂಡಿ ಚೆನ್ನಾಗಿತ್ತು. “ಬಹಳ ಚೆನ್ನಾಗಿದೆ ಲಲಿತಾ!” ಎಂದೆ.

ಲಲಿತ ಸ್ವಲ್ಪಹೊತ್ತು ಸುಮ್ಮನಿದ್ದು “ಅದು ಯಾಕೆ ಗೊತ್ತಾಯಿತೆ?” ಎಂದಳು.

“ನನಗೆ ಗೊತ್ತಿಲ್ಲ. ಅಂತೂ ಬಹಳ ರುಚಿಯಾಗಿದೆ” ಎಂದೆ.

“ಅದಲ್ಲಾಂದ್ರೆ! . . . ನಾ ಹೇಳಿದೆನಲ್ಲ ಅದು ಯಾಕೆ ಗೊತ್ತಾಯಿತೆ? ಎಂದು ಕೇಳಿದೆ.”

“ಯಾವುದು ಲಲಿತಾ ನೀ ಹೇಳಿದ್ದು?”

“ಸರಿ, ನೀವೊಬ್ಬರು! ಈಗ ಹೇಳಿದೆನಲ್ಲ, ಆ ಸಾಮಾನು!”

“ಓಹೋ, ಅದೇ! . . . ಗೊತ್ತಿಲ್ಲ; ಹ್ಯಾಗೆ ಗೊತ್ತಾಗಬೇಕು?”

“ಇಷ್ಟೇನೆ? . . . ಮತ್ತೇನು, ಬೇಕಾದಷ್ಟು ಓದಿದ್ದೀರಿ?”

“ಇದನ್ನೆಲ್ಲ ನಮಗೆ ಹೇಳಿಕೊಡಲಿಲ್ಲ ಲಲಿತ!”

“ಇವೊತ್ತು ಯಾವ ವಾರ ಹೇಳಿ.”

"ಸೋಮವಾರ!"

"ತಿಥಿ ಯಾವುದು ಹೇಳಿ."

"ಅದೆಲ್ಲಾ ಯಾರಿಗೆ ಗೊತ್ತು, ಲಲಿತಾ?"

"ಪಾಪ! ನಿಮಗೆ ಹೇಗೆ ಗೊತ್ತಾಗುತ್ತೆ? . . . ನಾ ಹೇಳ್ತೀನಿ, ಕೇಳಿ . . ಚೌತಿ!"

"ಚೌತಿ ಆದರೇನು ಪಂಚಮಿ ಆದರೇನು? ತಿಳಿದುಕೊಳ್ಳದಿದ್ದರೆ ಯಾವ ರಾಜ್ಯ ಮುಳುಗಿಹೋಗುತ್ತೆ?"

"ಮೊನ್ನೆ ಆದದ್ದು ಅಮಾವಾಸ್ಯೆ ಅಲ್ಲವೆ?"

"ಹೌದು."

"ಈ ಚೌತಿಗೂ ಹಿಂದಿನ ಅಮಾವಾಸ್ಯೆ ಆದ ಚೌತಿಗೂ ಎಷ್ಟು ದಿನ ಆಯಿತು, ಹೇಳಿ!"

"ಒಂದು ತಿಂಗಳು."

"ಅದರ ಹಿಂದಿನ ಹುಣ್ಣಿಮೆ ಚೌತಿಗೆ?"

"ಇನ್ನು ಹದಿನೈದು ದಿನ"

"ಒಟ್ಟು?"

"ಒಂದು ತಿಂಗಳು ಹದಿನೈದು ದಿನ"

"ಒಂದೂವರೆ ಅನ್ನಿ"

"ಆಗಲಿ ಒಂದೂವರೆ"

"ಇನ್ನೂ ಗೊತ್ತಾಗಲಿಲ್ವೆ?"

"ಓಹ್!" ಎಂದು ಅರ್ಥಪತ್ತಾಗಿ ತಲೆಯಲ್ಲಾಡಿಸಿದೆ.

"ನೀವು ಓಹ್ ಎಂದು ತಲೆಯಲ್ಲಾಡಿಸಬೇಡಿ!"

"ಮತ್ತೇನು ಮಾಡಲಿ ಲಲಿತಾ?"

"ಹಿಂದೇನೋ ದೇವರು ಕಣ್ಣು ತೆರಿಯಲಿಲ್ಲ. ಔಷಧಿ, ಇಂಜಕ್ಷನ್ನು ಎಲ್ಲಾ ವ್ಯರ್ಥವಾಯಿತು. ಈಗಲಾದರೂ . . . ." ಲಲಿತೆಯ ಕಣ್ಣಲ್ಲಿ ಹನಿಯೂರಿತು.

"ಬೇಡ ಲಲಿತಾ! . . . ." ಎಂದು ಸಂತೈಸಲು ಯತ್ನಿಸಿದೆ. ಅದಕ್ಕೆ ಮೊದಲೇ ಅವಳು ಸಂತೈಸಿಕೊಂಡಳು. ದುಃಖ ನುಂಗಿಕೊಳ್ಳಲು ಲಲಿತೆಯನ್ನು ಬಿಟ್ಟರೆ ಇಲ್ಲ!

"ಪಕ್ಕದ ಮನೆ ಭಾಗಮ್ಮ ಇಲ್ವೆ, ಅವರ ಕೈ ಬಹಳ ಒಳ್ಳೆಯದಂತೆ, ಎಲ್ಲರೂ ಹೇಳ್ತಾರೆ. ನಾ ಔಷಧಿ ಕೊಡ್ತೀನೀಂತ ಹೇಳಿದರು ಅವರು."

"ಅದಕ್ಕೇನೋ ಇಷ್ಟೆಲ್ಲಾ? . . . ಆದರೆ ಮೊದಲೇ ಸ್ಪಷ್ಟವಾಗಿ ಹೇಳಿ ಬಿಡಬಾರದಾಗಿತ್ತೆ?"

“ಸರಿ . . . ನಿಮಗೆ ಅರ್ಥವಾಗೊಲ್ಲಾಂದ್ರೆ . . . ಇನ್ನೇನು ಹೇಳೋದು ಹೇಳಿ, ಸ್ಪಷ್ಟವಾಗಿ !”

* * * * *

ಔಷಧಿ ಕುಡಿದು ಬಂದಾಗ ಲಲಿತಾಸ ಮುಖ ನೋಡುವಹಾಗಿರಲಿಲ್ಲ. ಬಂದವಳೇ ಹಾಸಿಗೆ ಹಾಸಿ ಮಲಗಿಕೊಂಡಳು. ಅಸಾಧ್ಯ ಸಂಕಟ ಎಂತ ಕಾಣುತ್ತೆ, ತಳಮಳಿಸುವುದಕ್ಕೆ ಪ್ರಾರಂಭಿಸಿದಳು. ಮುಖವೆಲ್ಲಾ ಬಿಳುಪೇರಿತ್ತು. ಕಣ್ಣುಗಳು ಗುಳಿ ಬಿದ್ದಿದ್ದುವು. ಬುಸುಬುಸು ಎಂದು ಕ್ಷಣಕ್ಕೊಂದು ಸಲ ನಿಟ್ಟುಸಿರು ಬಿಡುತ್ತಿದ್ದಳು. ಮೊದಲೇ ಬೇಸಗೆ, ಜೊತೆಗೆ ರಗ್ಗು ಬೇರೆ ಹೊದೆದಿದ್ದಾಳೆ ; ಬೇಡವೆಂದರೆ ಕೇಳುವುದಿಲ್ಲ.

ಲಲಿತೆ ಏಕೆ ಇಷ್ಟು ಕಷ್ಟಪಡುತ್ತಾಳೆ? ತನ್ನ ಕಣ್ಮಣಿಗಾಗಿ ತನ್ನ ಶರೀರವನ್ನೇ ತೊಳಲಿಸುತ್ತಿದ್ದಾಳೆ! ಎಲ್ಲವೂ ಸರಿಯಾಗಿ, ಮಗು ಉಸಿರಾಡಿದರೆ, ಒಂದು ಬಾರಿ ಅತ್ತರೆ, ಅದನ್ನೊಂದು ಸಲ ಕಣ್ತುಂಬ ನೋಡಿ, ಅದರ ಪುಟ್ಟಪುಟ್ಟ ಕೈಕಾಲುಗಳನ್ನು . . . ಅಷ್ಟಾದರೆ ತನ್ನ ಕಷ್ಟ ಸಾರ್ಥಕವೆಂದು ಅವಳ ನಂಬಿಕೆ.

“ಏನಾಗುತ್ತೆ ಲಲಿತಾ ?” ಎಂದೆ.

“ಏನಾಗುತ್ತೆ ಎಂತ ಹೇಳಲಿ ?” ಎಂದಳು.

“ಸಂಕಟವೆ ?”

“ಯಾವಾಗಲೂ ಔಷಧಿ ಕುಡಿಯೋದೇ ನನ್ನ ಹಣೇಲಿ ಬರೆದಿದಾನೆ, ದೇವರು!”

ನಾನು ಸುಮ್ಮನಿದ್ದೆ.

“ಪ್ರಪಂಚದಲ್ಲಿ ಎಷ್ಟೋ ಜನ ಹೆಂಗಸರಿಲ್ಲವೇ? ನನಗೇ ಏಕೆ ಹೀಗಾಗಬೇಕು ? ಹೇಳಿ !”

“ಎಲ್ಲಾ ಹಣೆಯ ಬರೆಹ ಲಲಿತಾ! . . . ಹೋಗಲಿ, ಬೆಳಗ್ಗೆಯಿಂದ ಕಾಫಿಯಿಲ್ಲ, ಈಗಲಾದರೂ ಕುಡೀತೀಯಾ ?”

“ಇಲ್ಲ ; ಕುಡಿಯಬಾರದಂತೆ!”

ಕಾಫಿಯಿಲ್ಲದೆ ಒಂದು ಹೊತ್ತೂ ಇದ್ದ ಪ್ರಾಣಿಯಲ್ಲ ಅದು !

“ತಣ್ಣೀರು ಮುಟ್ಟಬಾರದಂತೆ!” ಎಂದಳು.

“ಸರಿ, ಅಡಿಗೆ ನನ್ನ ಪಾಲಿಗೆ ತಾನೆ ?”

“ಬರೀ ಹಾಲೂ ಅನ್ನ ಊಟವಂತೆ!”

“ಅಮೃತಾನ್ನ. . . .”

“ಇನ್ನು ಮೂರು ದಿನ ಹೀಗೇ ಪಥ್ಯವಂತೆ!”

“ಇನ್ನೂ ಏನೇನಿದೆಯೋ ಒಟ್ಟಿಗೆ ಹೇಳಿಬಿಡು ಲಲಿತಾ, ಕೇಳಿಯಾದರೂ ಸಂತೋಷಪಡ್ತೇನೆ!”

“ಒಟ್ಟು ಮೂರು ಸಾರಿ ಹೀಗೆ ತಗೋಬೇಕಂತೆ! ಪ್ರತಿಸಾರಿಯೂ ಮೂರು ಮೂರು ದಿನ ಔಷಧಿ ಪಥ್ಯ!”

*   *   *   *   *

೩

ಯಥಾಪ್ರಕಾರ ಆಸ್ಪತ್ರೆಯ ಕೈಸಾಲೆಯಲ್ಲಿ ಕಟಾಂಜನದ ಹತ್ತಿರ ಕುಳಿತಿದ್ದೆ. ಎಂದಿನಂತೆ ಶಾಸ್ತ್ರಿ ಬಂದು ಕುಳಿತ. “ಏನು ಸಾರ್! ಏನು ಸಮಾಚಾರ?” ಎಂದ. ಈ ಹೊತ್ತಿಗಾಗಲೇ ನಾವಿಬ್ಬರೂ ಪರಿಚಿತರಾಗಿದ್ದೆವು.

“ಬನ್ನಿ” ಎಂದೆ.

“ಇವೊತ್ತೇನು, ಬಹಳ ಮುಂಚೆ ಬಂದಿದ್ದೀರಿ?” ಎಂದ.

“ಏನೋ ಬಂದು ಬಿಟ್ಟೆ, ಸಾರ್!”

“ಇಂಜಕ್ಷನ್ ಮುಗೀತೋ ನಿಮ್ಮವರಿಗೆ?”

“ಮುಗೀತು!”

“ಪಾಪ! ಕಷ್ಟ . . .”

“ಹೌದು! ಹೌದು!”

ಹಿಂದಿನದೆಲ್ಲ ಕಣ್ಣಿಗೆ ಕಟ್ಟಿದಂತಾಗಿತ್ತು. ಶಾಸ್ತ್ರಿ ಅಷ್ಟಕ್ಕೆ ಬಿಡುವುದಿಲ್ಲವೆಂದು ಗೊತ್ತಿತ್ತು. ಅವನಿಂದ ಪ್ರಶ್ನೆಗಳನ್ನು ಹಾಕಿಸಿಕೊಂಡು ಉತ್ತರಕೊಡುವುದೇನೆಂದು ನಾನೇ ಆರಂಭಿಸಿದೆ.—

“ನೋಡಿ ಸಾರ್, ಕಷ್ಟ ಎಂದರೆ ಏನು ಹೇಳ್ತೀರಿ? . . . ಆ ಸಾರಿ ಔಷಧಿ, ಇಂಜಕ್ಷನ್ ಎಲ್ಲಾ ಸರಿಯಾಗಿ ನಡೀತು. ಅಪಾಯದ ಗಡು, ಆರನೆಯ ತಿಂಗಳು ದಾಟಿತು. ಮಾವನವರೂ ಜಾತಕ ಗುಣಿಸಿ ದೇವರು ದೊಡ್ಡವನು, ಎಲ್ಲಾ ಸರಿಯಾಗುತ್ತೆ, ಎಂತ ಧೈರ್ಯ ಹೇಳಿದರು. . . .”

ನನ್ನ ಮಾತು ಮುಗಿದೇ ಇರಲಿಲ್ಲ; ಲಲಿತೆ ಆಸ್ಪತ್ರೆಯಿಂದ ಹೊರಹೊರಟಳು; “ಬರ್ತೀನಿ ಸಾರ್!” ಎಂದು ನಾನೂ ಹೊರಟೆ.

“ಅದೇನು ಮಾತಾಡ್ತಾ ಇದ್ದದ್ದು?”

“ಏನೂ ಇಲ್ಲ, ಅದೂ ಇದೂ ವಿಚಾರ!”

“ನನಗೆ ಗೊತ್ತಿದೆ, ನಿಮ್ಮ ಪುರಾಣ ಬಿಚ್ಚಿದಿರಿ ತಾನೆ?”

“ಇಲ್ಲ ಲಲಿತಾ, ಖಂಡಿತಾ ಇಲ್ಲ.”

“ಆತನ ಹೆಂಡತಿ ಬಂದಿದ್ರು; ಮೀನಾಕ್ಷಮ್ಮ ಎಂತ ಆಕೆಯ ಹೆಸರು; ಅವರೇ ಹೇಳಿದರು. ನಮ್ಮ ವಿಚಾರಾನೆಲ್ಲಾ ಹೇಳಿದ್ದೀರಂತೆ, ಆಗಲೆ!”

ಅವಳ ಕಡೆ ನೋಡದೆ ತಲೆಯೆತ್ತಿಕೊಂಡು ನಗುತ್ತಾ ಹೊರಟೆ.

"ಸ್ವಲ್ಪ ನಿಧಾನವಾಗಿ ಕಾಲುಹಾಕಿ" ಎಂದಳು ಲಲಿತಾ.

"ನನ್ನ ಕಾಲಿಗೆ ಏನು ಬಂತು ಲಲಿತಾ?"

"ಆನೆ ಹಾಗೆ ಹೆಜ್ಜೆ ಹಾಕಿದರೆ ಹೇಗೆ? ನಾನು ಬರಬೇಕೋ ಬೇಡವೋ? ಅಷ್ಟು ಅವಸರವಾಗಿದ್ರೆ ನೀವು ಹೋಗಿ, ನಾನು ನಿಧಾನವಾಗಿ ಬರ್ತೇನೆ" ಎಂದಳು.

"ಹೆಂಗಸರ ಜೊತೆಯಲ್ಲಿ ನಡೆಯುವುದು ಎಂದರೇ ಹೀಗೆ; ಬಲುಕಷ್ಟ!"

"ನಿಮಗೆ ಏನೇನೂ ತಿಳಿಯೊಲ್ಲ ನೋಡಿ!" ಎಂದಳು.

ಸುಮ್ಮನಿದ್ದೆ.

"ಡಾಕ್ಟರು ಹೇಳಿದಳು . . . ಚೆನ್ನಾಗಿ ಬೆಳೀತಾ ಇದೆ ಎಂತ!"

"ಸರಿ!"

"ನರ್ಸ್ ಹೇಳಿದಳು—ನನ್ನ ಮರೆಯಬೇಡಿ, ಎಂತ!"

"ಬೇಡ ಲಲಿತಾ, ಯಾರನ್ನೂ ಮರೆಯಬೇಡ; ಎಲ್ಲಾರ ಅಡ್ರೆಸ್ಸನ್ನೂ ಬರೆದಿಟ್ಟುಕೋ!"

"ನೋಡಿ . . . ಈ ಸಾರಿ ಯಾರಿಗೂ ಬರೆಯೋದು ಬೇಡ!"

"ಯಾಕೆ?"

"ಸುಮ್ಮನೆ ಗಾಬರಿ ಮಾಡುತಾರೆ!"

"ಗಾಬರಿ ಇಲ್ಲದೆ ಇರುತ್ತೆಯೇ"

"ಸುಖವಾದ ಮೇಲೆ ಬರೆಯೋಣ!"

* * * * *

ಕಾರಿನಲ್ಲಿ ಲಲಿತೆಯನ್ನು ಆಸ್ಪತ್ರೆಗೆ ಕರೆದುಕೊಂಡು ಬಂದೆ. ಆಗಲೆ ಸಂಕಟ ಅವಳಿಗೆ. ಎಷ್ಟೋ ಧೈರ್ಯ ಹೇಳುತ್ತಾ ಬಂದಿದ್ದೆ. ಆದರೆ ಕೇಳಳು.

"ಯಾಕೋ ಹೆದರಿಕೆ ಆಗುತ್ತೇಂದ್ರೆ!" ಎಂದಳು.

"ಹೆದರಬೇಡ ಲಲಿತಾ, ದೇವರಿದ್ದಾನೆ!" ಎಂದೆ.

"ಅಲ್ಲಾ, ನಾನು ಒಂದುವೇಳೆ ಹೋದರೂ ಪರವಾ ಇಲ್ಲ. ಅದೊಂದಾದರೂ ಉಳಿದರೆ. . ."

"ಯಾಕೆ ಲಲಿತಾ, ನನ್ನ ಹೊಟ್ಟೇಲಿ ಬೆಂಕಿ ಇಡ್ತೀಯೇನು? ಗೋಡೆ ಇದ್ದರೆ ಸಹಸ್ರ ಚಿತ್ತಾರ!"

"ಹಾಗಲ್ಲ. . ."

ಕಾರು ಆಸ್ಪತ್ರೆಯ ಕಾಂಪೌಂಡ್ ಹೊಕ್ಕಿತು.

"ಅಪ್ಪನಿಗೆ ವೈರ್ ಕಳಿಸ್ತೀರಾ?"

"ಇಲ್ಲ, ಈಗ ಎಲ್ಲೂ ಕದಲೂದಿಲ್ಲ!"

ಕಾರು ನಿಂತಿತು. ನರ್ಸ್ ಬಂದಳು.

"ಇಳಿ, ಲಲಿತಾ!" ಎಂದೆ.

"ಹೆದರಬೇಡಿ . . . ದೇವರಿದ್ದಾನೆ!" ಎಂದಳು ಲಲಿತಾ. ಅವಳ ಮುಖ ನಿಶ್ಚಲವಾಗಿತ್ತು.

ನಾನು ಕಟಾಂಜನದ ಹತ್ತಿರದಲ್ಲೇ ಕುಳಿತೆ. ನನ್ನ ಯೋಜನೆಗಳಿಗೆ ತುದಿ ಮೊದಲೇ ಇಲ್ಲ . . . ಲಲಿತೆಯನ್ನು ಒಳಕ್ಕೆ ಕಳುಹಿಸಿದ್ದೇನೆ. ಸಾವಿನ ಬಳಿಗೆ ಕಳುಹಿಸಿದ್ದೇನೆ. ಮೃತ್ಯುವಿನ ದವಡೆಯಲ್ಲಿ ಸಿಕ್ಕಿದ್ದಾಳೆ. ನರ್ಸ್ ಮತ್ತು ಡಾಕ್ಟರು ಸಾಹಸಪಟ್ಟರೆ ಮಾತ್ರ ಅವಳನ್ನು ಬಿಡಿಸಿಕೊಳ್ಳಬಹುದು. . . . ಅವರಿಂದೇನಾದೀತು? ದೇವರೊಬ್ಬನಿಂದ ಸಾಧ್ಯ! . . . ದೇವರು! . . . ಹಿಂದೆರಡುಬಾರಿ ಕೈಕೊಟ್ಟಿದ್ದ! . . . ಈಗ? . . .

ಲಲಿತ! . . . ಎಂತಹ ಕೋಮಲೆ! . . . ಎಷ್ಟು ನಯ! ನನಗೆ ಬೇಸರವಾಗದಿರಲೆಂದು, ನನ್ನನ್ನು ಮೆಚ್ಚಿಸಲೆಂದು, ಅದೆಷ್ಟುಪರಿಯಲ್ಲಿ ಕಾತರಿಸುವಳು! ನನಗೆ ಕೊಂಚ ತಲೆನೋವು ಬಂದರೂ ಅದೆಷ್ಟುಪರಿಯಲ್ಲಿ ತಪಿಸುವಳು! ದೇವರಿಗೆ ತುಪ್ಪದ ದೀಪ ಹಚ್ಚಿಡುವಳು! ರಾತ್ರಿಯೆಲ್ಲಾ ಕುಳಿತುಕೊಂಡೇ ಕಾಲ ಕಳೆಯುವಳು. . . . ಈಗ? ಅವಳಿಗೆ ಪ್ರಾಣಾಪಾಯ! . . .

ಲಲಿತೆ ಹೋದರೆ? . . . .

"ಏನು ಸಾರ್?" ಶಾಸ್ತ್ರಿ ಹಾಜರು.

ಸುಮ್ಮನಿದ್ದೆ.

"ಏನು ಸಮಾಚಾರ?" ಎಂದ.

ನಾನು ಆಸ್ಪತ್ರೆಯ ಕಡೆ ನೋಡಿದೆ.

"ಇನ್ನೂ ಊಟವಾದ ಹಾಗೆ ಕಾಣೋದಿಲ್ಲ!" ಎಂದ.

"ಊಟ ಎಲ್ಲಿಂದ ಬಂತು ಸಾರ್!"

"ಪಾಪ! ಗಾಬರಿಪಡಬೇಡಿ!"

". . . . ."

"ನಮ್ಮಾಕೆಯನ್ನೂ ಈಗ ಒಳಕ್ಕೆ ಸೇರಿಸಿ ಬಂದೆ."

"ಅವರಿಗೂ ದಿನವಾಗಿದೆಯೆ?"

"ಹುಂ!"

ಇಬ್ಬರೂ ಸುಮ್ಮನೆ ಕುಳಿತೆವು.

"ಬಹಳ ಕಷ್ಟ" ಎಂದೆ.

"ಪುಣ್ಯಕ್ಕೆ ನಮ್ಮ ಮನೆಯಲ್ಲಿ ಎಂದೂ ಕಷ್ಟವಾಗಿಲ್ಲ ಸ್ವಾಮಿ; ಸುಖವಾಗಿ ಪ್ರಸವವಾಗಿಬಿಟ್ಟಿದೆ ಯಾವಾಗಲೂ!"

ನಾನು ಆ ಕಡೆಯೇ ನೋಡುತ್ತಿದ್ದೆ.

"ಹೆರಿಗೆ ಎಂದರೆ ಒಂದು ಗಂಡಾಂತರ ಸಾರ್" ಎಂದೆ.

ಶಾಸ್ತ್ರಿ ತಮ್ಮ ಮನೆಯವರ ಮಾತಿನ್ನೇನೋ ಹೇಳುತ್ತಿದ್ದ, ಅವನ ಮಾತು ಬೇಕಾಗಿರಲಿಲ್ಲ ನನಗೆ.

"ಬದುಕಿ ಬಂದರೆ ಪುನರ್ಜನ್ಮವಾಗಿ ಬಂದ ಹಾಗೆ!" ಎಂದೆ.

*   *   *   *   *

ನರ್ಸಿನ ಮುಖ ಕಂಡಹಾಗಾಯಿತು ಬಾಗಿಲಲ್ಲಿ! ಓಡಿದೆ, ಅವಳ ಮುಖ ನೋಡಿದೆ....

ಶಾಸ್ತ್ರೀನೂ ಓಡಿಬಂದ.

"ಅಯ್ಯೋ ಪಾಪ!" ಎಂದಳು ನರ್ಸ್.

ನಾನು ತಲೆಯ ಮೇಲೆ ಕೈಹೊತ್ತೆ.

"ಅಯ್ಯೋ, ನೀವ್ಯಾಕೆ ಹೆದರುತೀರಿ ಸಾರ್! ಅವರು!" ಎಂದು ಶಾಸ್ತ್ರಿಯಕಡೆ ತೋರಿಸಿದಳು.

"ಏಸು? ಏನು?... ಏನಾಯ್ತು?" ಶಾಸ್ತ್ರಿಯು ಗಾಬರಿಯಿಂದ ಕೇಳಿದ. ಶಾಸ್ತ್ರಿಯನ್ನು ಒಳಕ್ಕೆ ಕರೆದುಕೊಂಡು ಹೋದಳು. ವಿಚಾರವೇನೆಂದು ತಿಳಿಯಲಿಲ್ಲ. ಮತ್ತೆ ಕಟಾಂಜನದ ಹತ್ತಿರ ಹೋಗಿ ಕುಳಿತೆ.

ಸ್ವಲ್ಪ ಹೊತ್ತಾದ ನಂತರ ಯಾರನ್ನೋ ಹಿಂಬಾಗಿಲಿನಿಂದ ಒಯ್ಯುತ್ತಿದ್ದುದು ಕಾಣಬಂದಿತು. ಶಾಸ್ತ್ರಿ ಹಿಂಬಾಲಿಸುತ್ತಿದ್ದ....

ಶಾಸ್ತ್ರಿಯ ಹೆಂಡತಿಗೇ ಹೀಗಾದರೆ ಲಲಿತನ ಗತಿಯೇನು?...

"ಬನ್ನಿ" ಎಂದಳು ನರ್ಸ್. ಒಳಹೊಕ್ಕೆ.

ಲಲಿತೆ ಮಂಚದ ಮೇಲೆ ಮಲಗಿದ್ದಳು. ಎಲ್ಲೆಲ್ಲೂ ಸ್ವಚ್ಛತೆ, ಎಲ್ಲೆಲ್ಲೂ ಶಾಂತಿ. ಲಲಿತೆಯು ಹೋರಾಟದಲ್ಲಿ ಗೆದ್ದಿದ್ದಳು.

ನರ್ಸ್ ತೊಟ್ಟಿಲಿಗೆ ಹೊದಿಸಿದ್ದ ತೆಳ್ಳನೆಯ ಬಟ್ಟೆಯನ್ನು ತೆರೆದಳು. ಗುಲಾಬಿ ಎಸಳಿನ ಮೈ, ಅದೇ ಲಲಿತೆಯ ತಿದ್ದಿದ ಮೂಗು, ತುಟಿಗಳು... ದೇವರಿಗೆ ವಂದಿಸಿದೆ.

ತಲೆಯೆತ್ತಿ ಲಲಿತೆಯ ಮುಖ ನೋಡಿದೆ. ಅವಳ ನಿಸ್ತೇಜವಾದ ಮುಖದಲ್ಲಿ ಮುಗುಳುನಗೆ ಉಕ್ಕಿತು. ಆಲದ ಮೊಗ್ಗು ಮಲ್ಲಿಗೆಯ ಹೂವಾಯಿತು.

"ಶೇಷು"

ಕಾವ್ಯಾವಲೋಕನ

History and Philosophy of Lingayat Religion, (being an introduction to) **Lingadharana Chandrika** of Nandikeshvara (with translation and full notes)—by M. R. SAKHARE, Esq., M.A., T.D. (Cantab); Professor of Sanskrit and Education, Lingaraj College, Belgaum; ಡೆಮ್ಮಿ ಅಷ್ಟಪತ್ರ ಪುಟಗಳು XXIV+೬೮೨+೭೬+೧೦೪+೨೫೦+೨೦; ಬೆಲೆ, ರೂ. ೧೫.

[ಸೂಚನೆ.—ಇಂಗ್ಲಿಷಿನ ಭಾಗಗಳನ್ನು ಕನ್ನಡಕ್ಕೆ ಭಾಷಾಂತರಮಾಡಿ ಈ ವಿಮರ್ಶೆಯಲ್ಲಿ ಕೊಟ್ಟಿದೆ. ಭಾಶಾಂತರ ಸಮರ್ಪಕವಾಗಿಲ್ಲದಿರಬಹುದು. ಮೂಲವನ್ನು ಇಂಗ್ಲಿಷಿನಲ್ಲಿ ಅಡಿಟಿಪ್ಪಣಿಯಾಗಿ ಕೊಟ್ಟಿದೆ. ಅದನ್ನೂ ಓದಿಕೊಳ್ಳಬೇಕು].

ಕಳೆದ ಜನಗಣಿತಿಯ ಕಾಲಕ್ಕೆ ವೀರಶೈವರು ತಾವು ಹಿಂದುಗಳಲ್ಲಿ ಸೇರಿದವರೆಂದು ಲೆಕ್ಕಕೊಡಬೇಕೇ ಅಥವಾ ಸೇರದವರೆಂದು ಲೆಕ್ಕಕೊಡಬೇಕೇ ಎಂಬ ವಿಚಾರವಾಗಿ ಲೇಖನಗಳೂ ಪ್ರತಿಲೇಖನಗಳೂ ಕೆಲವು ವೃತ್ತಪತ್ರಿಕೆಗಳಲ್ಲಿ ಬಂದುವು. 'ಹಿಂದುಗಳು' ಎಂದರೆ ಯಾರು? 'ಹಿಂದುಮತ' ಎಂದರೆ ಯಾವುದು? ಎಂದು ಕೇಳಿದರೆ ಸಮರ್ಪಕವಾದ ಉತ್ತರಗಳನ್ನು ಕೊಡುವುದು ಕಷ್ಟ. ಆದುದರಿಂದ ಮೇಲಿನ ವಿಚಾರ ಸುಲಭದಲ್ಲಿ ಇತ್ಯರ್ಥವಾಗತಕ್ಕದ್ದಲ್ಲ. ಶ್ರೀಮಾನ್ ಸಖರೆ ಅವರು ಸಂಪಾದಿಸಿರುವ "ಲಿಂಗಧಾರಣ ಚಂದ್ರಿಕಾ" ಎಂಬ ಗ್ರಂಥ ಸಂಸ್ಕೃತಗ್ರಂಥ. ಅದು ೭೬ ಪುಟಗಳಷ್ಟಿದೆ. ಅದರ ಇಂಗ್ಲಿಷಿನ ಭಾಷಾಂತರ ಟೀಕೆ ಟಿಪ್ಪಣಿಗಳು ೨೫೦ ಪುಟಗಳಷ್ಟಿವೆ. ಅದಕ್ಕೆ ಅವರು ೬೮೨ ಪುಟಗಳಷ್ಟು ವಿಸ್ತಾರವಾದ ಪೀಠಿಕೆಯನ್ನು ಇಂಗ್ಲಿಷಿನಲ್ಲಿ ಬರೆದು ಲಿಂಗಾಯತಮತ ಅಥವಾ ವೀರಶೈವಮತವು ಹಿಂದುಮತಕ್ಕಿಂತ ಭಿನ್ನವಾದುದು ಎಂದು ತಮ್ಮ ತೀರ್ಮಾನ ಹೇಳಿದ್ದಾರೆ. ಅವರ ಸಂಪಾದನೆಗೆ ಸಿಕ್ಕಿದ ಲಿಂಗಧಾರಣ ಚಂದ್ರಿಕಾಕಾರನಾದರೋ "ಸರ್ವಲಿಂಗಂ ಸ್ಥಾಪಯತಿ ಪಾಣಿಮಂತ್ರಂ ಪವಿತ್ರಂ", "ಪವಿತ್ರಂತೇ ವಿತತಂ ಬ್ರಹ್ಮಣಸ್ಪತೇ", "ಅಯಂ ಮೇ ಹಸ್ತೋ ಭಗವಾನ್" ಮೊದಲಾದುವನ್ನು ಇಷ್ಟಲಿಂಗದ ಪರವಾಗಿ ಅರ್ಥಮಾಡಿ ಇಷ್ಟಲಿಂಗಧಾರಣವು ವೇದೋಕ್ತವಾದುದೆಂದು ಸಾಧಿಸಿದ್ದಾನೆ. ಹೀಗೆ ಸಾಧಿಸುವುದರಲ್ಲಿ ವೇದ, ಉಪನಿಷತ್ತು, ಆಗಮ, ಪುರಾಣ—ಇವುಗಳ ಆಧಾರಗಳನ್ನು ಬೇಕಾದಷ್ಟು ಕೊಟ್ಟಿದ್ದಾನೆ. ಸಖರೆ ಅವರು ಲಿಂಗಧಾರಣ ಚಂದ್ರಿಕೆಯಂಥ ಗ್ರಂಥಗಳಿಂದ ತಮ್ಮ ವಾದಸರಣಿಗೆ ದೊಡ್ಡ ತೊಂದರೆಯೆಂದೇ ಭಾವಿಸಿದ್ದಾರೆ.

ಲಿಂಗಧಾರಣ ಚಂದ್ರಿಕೆಯಂಥ ಗ್ರಂಥಗಳು ಲಿಂಗಾಯತಮತದ ಮೂಲತತ್ತ್ವಗಳಿಗೆ ವೇದಗಳಲ್ಲಿ, ಮುಖ್ಯವಾಗಿ ಉಪನಿಷತ್ತುಗಳಲ್ಲಿ ಆಧಾರ ಹುಡುಕಲು ಹೊರಟಿರುವುದು ಈ ಅವ್ಯವಸ್ಥೆಗೆಲ್ಲ ಕಾರಣ; ಲಿಂಗಾಯತ ಮತತತ್ತ್ವಗಳನ್ನೂ ಪ್ರಕ್ರಿಯೆಗಳನ್ನೂ ಸಿದ್ಧಾಂತವನ್ನೂ ಸೂಕ್ಷ್ಮವಾಗಿ ಪರಿಶೀಲಿಸಿದರೆ ಅದು ಮೂಲತಃ ಹಿಂದುಮತಕ್ಕೆ ಬೇರೆಯಾಗಿರುವುದು ಸ್ಪಷ್ಟವಾಗುತ್ತದೆ—ಎಂದು ಅವರು ಹೇಳುತ್ತಾರೆ.[1]

ಲಿಂಗಾಯತಮತ ಹಿಂದೂಮತದಿಂದ ಭಿನ್ನವಾದುದು ಎಂದು ಹೇಳುವುದಕ್ಕೆ ಸಬೂಬು ಅವರ ಮುಖ್ಯ ಕಾರಣಗಳಿವು: (೧) ಲಿಂಗಾಯತಮತ ಆಗಮಗಳಿಂದ ಹುಟ್ಟಿದುದು. (೨) ಲಿಂಗಾಯತಮತದಲ್ಲಿ ವರ್ಣಾಶ್ರಮಗಳಿಲ್ಲ, ಶ್ರೌತಕರ್ಮ ಸ್ಮಾರ್ತ ಕರ್ಮಗಳಿಲ್ಲ. (೩) ಈಗಿನ ಹಿಂದೂಮತದಲ್ಲಿ ವಿಗ್ರಹಾರಾಧನೆ ಇದೆ. ಲಿಂಗಾಯತರಲ್ಲಿ ಅದಿಲ್ಲ.

ಲಿಂಗಾಯತರು ಶಿವೋಪಾಸನೆಯನ್ನು ಮಾಡುವರಲ್ಲವೆ? ಎಂಬ ಪ್ರಶ್ನೆಗೆ ಅವರು ಈ ರೀತಿ ಉತ್ತರ ಹೇಳುತ್ತಾರೆ:

"ಒಂದೇ ಒಂದು ವಿಷಯದಲ್ಲಿ—(ಈಗಿನ) ಹಿಂದು ದೇವರುಗಳಲ್ಲಿ ಒಬ್ಬನಾದ ಶಿವನನ್ನು ಆರಾಧಿಸುವ ವಿಷಯದಲ್ಲಿ—ಅವರು ಮತದಲ್ಲಿ ಹಿಂದುಗಳಾಗಿದ್ದಾರೆ. ಒಂದು ಮತಕ್ಕೆ ವಿಶಿಷ್ಟ ಲಕ್ಷಣಗಳಾದ ಬೇರೆ ದರ್ಶನವೂ ಬೇರೆ ಮತ ಪ್ರಕ್ರಿಯೆಗಳೂ ಇರುವುದಾದರೆ, ಆ ಒಬ್ಬ ದೇವರ ಆರಾಧನೆಯೇ ಹಿಂದು ಮತವಾಗುವುದಿಲ್ಲ. ಲಿಂಗಾಯತಮತಕ್ಕೆ ಅದರದೇ ಆದ ಒಂದು ದರ್ಶನವೂ ಅದಕ್ಕೇ ಪ್ರತ್ಯೇಕವಾದ ಮತ ಪ್ರಕ್ರಿಯೆಗಳೂ ಇರುವುದರಿಂದ ಅದು ಹಿಂದು ಮತದ ಒಳಶಾಖೆಯಾಗಲಾರದು."[2]

---

[1] "The confusion became much worse later, when support of the basic principles of the religion was sought from the Vedic, especially the Upanishadic literature. 'ಲಿಂಗಧಾರಣ ಚಂದ್ರಿಕಾ' was one such work. But if the creed, the tenets and principles of the religion are closely studied it will be clear that the Lingayat religion fundamentally differs from the Hindu religion which eludes definition" (ಪುಟ ೬೭೩).

"They profess and own the Agamas being the bases and parents of their religion. However, their respect for the Vedas has made confusion worse confounded and their position and status of the community very anomalous" (ಪುಟ ೬೬೯).

[2] "Only in one respect they are Hindus in religion, namely, in respect of worshipping one of the (now) Hindu Gods ಶಿವ. But mere worship of God is no religion, if it should have philosophy and practice forming its differentia. And because Lingayat religion has its own philosophy and practice distinct to itself it cannot be a sub-religion of Hinduism" (ಪುಟ ೬೭೦).

ಸಖರೆ ಅವರು ವೇದಮತವೇ ಹಿಂದುಮತವೆಂದೂ ಆ ವೇದಮತಾನುಯಾಯಿಗಳೇ ಇಂಡಿಯದಲ್ಲಿ ತುಂಬಿಕೊಂಡು ಹಿಂದುಗಳೆನಿಸಿರುವರೆಂದೂ ತಿಳಿದ ಹಾಗೆ ಕಾಣುತ್ತದೆ. ಈ ಸಂಬಂಧದಲ್ಲಿ ನಾವು ಕೆಲವು ವಿಷಯಗಳನ್ನು ಜ್ಞಾಪಕಕ್ಕೆ ತಂದುಕೊಳ್ಳುವುದು ಒಳ್ಳೆಯದು. ನಮ್ಮ ದೇಶದಲ್ಲಿ ನೆಲಸಿದ ಆರ್ಯರು ವೇದಮತಾನುಯಾಯಿಗಳು. ಅವರು ತಮ್ಮ ಮತವನ್ನು ಹಿಂದುಮತವೆಂದು ಎಲ್ಲಿಯೂ ಕರೆದಿಲ್ಲ. ಆರ್ಯರಲ್ಲಿಯೆ ವೇದಾಂತಮತದ ಪೂರ್ವರೂಪವಾದ ಯಾಜ್ಞಿಕಮತವನ್ನು ಪ್ರತಿಭಟಿಸಿದವರುಂಟು. ಇದು ಮುಖ್ಯವಾಗಿ ಉಪನಿಷತ್ತುಗಳಲ್ಲಿ ನಡೆಯಿತು. ಮುಂಡಕೋಪನಿಷತ್ತಿನಲ್ಲಿ ಯಜ್ಞಯಾಗಗಳ ಸ್ಪಷ್ಟವಾದ ಖಂಡನೆ ಇದೆ.[1] ಬೃಹದಾರಣ್ಯಕದಲ್ಲಿ ಅಶ್ವಮೇಧಯಾಗಕ್ಕೆ ಅರ್ಥಾಂತರವನ್ನು ಕಲ್ಪಿಸಲಾಗಿದೆ.[2] ವೇದಗಳ ಬಹು ದೇವತೋಪಾಸನೆ ಉಪನಿಷತ್ತುಗಳಲ್ಲಿ ಏಕದೇವೋಪಾಸನೆಯಾಗಿ ಮಾರ್ಪಟ್ಟಿದೆ. ಹಿಂದಿನ ದೇವರುಗಳ ಸ್ಥಾನಪಲ್ಲಟವಾಗಿ ಪರಬ್ರಹ್ಮ ಪರವಸ್ತು ಎಂಬುದರ ಏಕಾಧಿಪತ್ಯ ಕಂಡುಬರುತ್ತದೆ. ಯಾವುದನ್ನು ಆಗಮಿಕ ಉಪನಿಷತ್ತೆಂದು ಸಖರೆ ಅವರು ಹೇಳುವರೋ ಆ [3]ಶ್ವೇತಾಶ್ವತರೋಪನಿಷತ್ತಿನಲ್ಲಿ ಪರಬ್ರಹ್ಮವಾದವೂ ಯಜ್ಞಯಾಗಗಳ ದೇವತೆಗಳಾದ ಅಗ್ನಿ ಮತ್ತು ಸೋಮರ ವಿಷಯದಲ್ಲಿ ಸ್ಮರಣೆಯೂ ಮಿಳಿತವಾಗಿವೆ. ವಿಗ್ರಹಾರಾಧನೆಯನ್ನು ಪ್ರಾಚೀನ ಉಪನಿಷತ್ತುಗಳೇನೂ ಉಪದೇಶಿಸಿಲ್ಲ. ವರ್ಣಾಶ್ರಮಗಳ ಈಗಿನ ಕಟ್ಟುನಿಟ್ಟು ಹಿಂದೇನೂ ಇರಲಿಲ್ಲ.

ಮತ್ತೊಂದುಕಡೆ ಆಗಮಗಳು ಆರ್ಯರಿಗಿಂತಲೂ ಹಿಂದಿನವರಾದ ದ್ರಾವಿಡರ ಮೂಲಮತಗ್ರಂಥಗಳೆಂದು ಕುಳಿತಿವೆ. ಆಗಮಗಳು ಸಂಸ್ಕೃತಭಾಷೆಯಲ್ಲಿ ರಚಿತವಾಗಿವೆಯಲ್ಲ, ಸಂಸ್ಕೃತ ಆರ್ಯರ ಭಾಷೆಯಲ್ಲವೆ? ಎಂದು ಕೇಳಬಹುದು. ಈ ಸಂಸ್ಕೃತಭಾಷೆಯ ಆಗಮಗಳಿಗೆ ಮೂಲ ಹಳೆಯ ತಮಿಳಿನ ಅಥವಾ ಮೂಲದ್ರಾವಿಡ ಭಾಷೆಯ ಗ್ರಂಥಗಳಾಗಿರಬೇಕೆಂದೂ, ಅವು ಈಗ ಉಪಲಬ್ಧವಾಗಿಲ್ಲದಿರಬಹುದೆಂದೂ ಸಖರೆ ಅವರು ಸಮಾಧಾನ ಹೇಳುತ್ತಾರೆ. ದ್ರಾವಿಡರ ದೇವರು ಶಿವ. 'ಲಿಂಗ'

---

1 "ಪ್ಲವಾಹ್ಯೇತೇ ಅದೃಢಾ ಯಜ್ಞರೂಪಾ ಅಷ್ಟಾದಶೋಕ್ತಮವರಂ ಯೇಷು ಕರ್ಮ |
ಏತಚ್ಛ್ರೇಯೋ ಯೇಽಭಿನಂದನ್ತಿ ಮೂಢಾ ಜರಾಮೃತ್ಯುನ್ತೇ ಪುನರೇವಾಪಿ ಯನ್ತಿ ||
(ಅಧ್ಯಾಯ ೨, ಶ್ಲೋಕ ೭).

2 ಬ್ರಾಹ್ಮಣ ೧.

3 "ಅಗ್ನಿರ್ಯತ್ರಾಭಿಮಥ್ಯತೇ ವಾಯುರ್ಯತ್ರಾಭಿಯುಂಜತೇ |
ಸೋಮೋ ಯತ್ರಾತಿರಿಚ್ಯತೇ ತತ್ರ ಸಂಜಾಯತೇ ಮನಃ"
(ಅಧ್ಯಾಯ ೨, ಶ್ಲೋಕ ೬).

ಎಂಬುದಾದರೂ ಸಂಸ್ಕೃತವೆಂದು ಸಿದ್ಧಮಾಡಿಕೊಡುವುದು ಕಷ್ಟ.[1] ಮೊಹೆಂಜದಾರೊ ಮೊದಲಾದ ಸ್ಥಳಗಳಲ್ಲಿಯ ಭೂಗರ್ಭಶೋಧನೆಗಳಿಂದ ಲಿಂಗಗಳೂ ಲಿಂಗಪೂಜೆಯ ಕುರುಹುಗಳೂ ಕಂಡುಬರುತ್ತವೆ. ಆರ್ಯರು ಹಿಂದುಸ್ಥಾನಕ್ಕೆ ಬರುವ ಪೂರ್ವದಲ್ಲಿಯೇ ಇಲ್ಲಿ ಒಳ್ಳೆಯ ನಾಗರಿಕಸ್ಥಿತಿಯಿತ್ತೆಂದೂ ಲಿಂಗಪೂಜೆಯ ಮೂಲಕ ಶಿವೋಪಾಸನೆ ಜನತೆಯಲ್ಲಿ ಹರಡಿತ್ತೆಂದೂ ಪಂಡಿತರು ಅಭಿಪ್ರಾಯ ಪಡುತ್ತಾರೆ. ಸಖರೆ ಅವರು ಇವುಗಳನ್ನೆಲ್ಲ ತಮ್ಮ ವಾದಕ್ಕೆ ಆಧಾರವಾಗಿಟ್ಟುಕೊಂಡಿದ್ದಾರೆ; ಮತ್ತು ಆ ವಿಷಯದಲ್ಲಿ ಹೆಮ್ಮೆಯನ್ನೂ ತೋರಿಸುತ್ತಾರೆ.

ಮೊದಲಿನಲ್ಲಿ ವೇದಗಳಷ್ಟೆ ಪ್ರಬಲವಾಗಿ ತರುವಾಯ ಅವಕ್ಕಿಂತಲೂ ಹೆಚ್ಚು ಪ್ರಬಲವಾಗಿ ಆಗಮಗಳು ಜನತೆಯ ಮೇಲೆ ಪ್ರಭಾವವನ್ನು ಬೀರಿವೆ. ಆರ್ಯರಿಗೂ ದ್ರಾವಿಡರಿಗೂ ಸಂಘಟ್ಟನೆ ಸಂಘರ್ಷಣೆಗಳಾದಂತೆ ವೇದಗಳಿಗೂ ಆಗಮಗಳಿಗೂ ಸಂಘಟ್ಟನೆ ಸಂಘರ್ಷಣೆಗಳಾಗಿವೆ. "ವೇದಗಳು ಹೆಚ್ಚು", "ಆಗಮಗಳು ಹೆಚ್ಚು" ಎಂಬ ವಾದವಿವಾದಗಳ ಒಂದು ಅಂತಸ್ತೂ, "ಎರಡೂ ಹೆಚ್ಚು, ಎರಡೂ ಪರಸ್ಪರ ಸಮಾನ" ಎಂಬ ಸಂಧಿಸಮಾಧಾನಗಳ ಮತ್ತೊಂದು ಅಂತಸ್ತೂ ಕಂಡುಬರುತ್ತವೆ. ಇವುಗಳೆರಡಕ್ಕೂ ಲೌಕಿಕವಾಗಿಯೂ ತಾತ್ತ್ವಿಕವಾಗಿಯೂ ಕೊಳ್ಳುಕೊಡೆಗಳು ನಡೆದು ವರ್ಣಾಶ್ರಮಗಳಿಲ್ಲದಿದ್ದ ಕಡೆ ವರ್ಣಾಶ್ರಮಗಳೂ, ವಿಗ್ರಹಾರಾಧನೆಗಳಿಲ್ಲದಿದ್ದ ಕಡೆ ವಿಗ್ರಹಾರಾಧನೆಗಳೂ ತಲೆದೋರಿ ಈಗ ಎಲ್ಲಕ್ಕೂ ವೇದ, ಉಪನಿಷತ್ತು, ಆಗಮ ಮತ್ತು ಪುರಾಣಗಳನ್ನು ಅಧಾರವಾಗಿ ಕೊಡುತ್ತ ಬಹಳ ತೊಡಕು ತೊಳಸುಗಳ ಒಂದು ಹಿಂದು ಜನತೆಯೂ, ಹಿಂದುಮತ ಎಂದು ಹೇಳಬಹುದಾದರೆ ಒಂದು ಹಿಂದುಮತವೂ ಹೇಗೋ ನಡೆದುಕೊಂಡು ಹೋಗುತ್ತಿವೆ. ಆದ್ದರಿಂದ ಹಿಂದುಮತ ಎಂಬುದು ಯಾವುದು? ಅದು ಶುದ್ಧ ಯಾಜ್ಞಿಕಮತವಲ್ಲ; ಅದು ಶುದ್ಧ ವೈದಿಕಮತವೂ ಅಲ್ಲ. ಹಿಂದುಗಳು ಎಂದರೆ ಶುದ್ಧ ಆರ್ಯರೂ ಅಲ್ಲ. ಮೊಹೆಂಜದಾರೋ ಮೊದಲಾದ ಸ್ಥಳಗಳಲ್ಲಿ ಕಂಡುಬಂದ ಪ್ರಾಚೀನ ಮತವಾದರೂ ಯಾವುದು ಎಂದು ನೋಡಿದರೆ "ಅವರ ಮತ ಈಗಲೂ ಜೀವಂತವಾಗಿ ಆಚರಣೆಯಲ್ಲಿರುವ ಹಿಂದುಮತಕ್ಕೆ ಅಥವಾ ಕಡೆಗೆ ಅದರ ಭಾಗವಾಗಿ ಸೇರಿಕೊಂಡಿರುವ ಸರ್ವಚೇತನವಾದ ಮತ್ತು ಶಿವಶಕ್ತಿಯರ ಉಪಾಸನೆಗೆ ವ್ಯತ್ಯಾಸವೇ ತೋರದಷ್ಟು ಮಟ್ಟಿಗೆ ವಿಶೇಷತಃ ಇಂಡಿಯದ್ದೇ ಆಗಿದೆ"[2] ಎಂಬ ಸರ್ ಜಾನ್

---

[1] ನಿಷ್ಠೂರ ನಂಜಣಾಚಾರ್ಯನೂ ಶಿವಯೋಗಿ ಶಿವಾಚಾರ್ಯನೂ ಆ ಪದಕ್ಕೆ ವ್ಯುತ್ಪತ್ತಿಯನ್ನು ಹೇಗೋ ಹೇಳಿದ್ದಾರೆ.

[2] 'But taken as a whole, their religion is so characteristically Indian as hardly to be distinguishable from still living Hinduism or at least from that

ಮಾರ್ಷಲ್ ಅವರ ಅಭಿಪ್ರಾಯ ದೃಢಪಡುತ್ತದೆ. ಈಗ ಉಳಿದಿರುವ, ಕಾಣಬರು ತ್ತಿರುವ ಮತವಾದರೂ ಯಾವುದು? ಸಖರೆ ಅವರು ಉದ್ಧರಿಸಿರುವ ವಾಕ್ಯಗಳನ್ನೇ ನೋಡೋಣ: "ಈ ದಿನ ಹಿಂದುಗಳು ಆಚರಿಸುತ್ತಿರುವ ಮತ ಬಹುಮಟ್ಟಿಗೆ ಸಂಪೂರ್ಣವಾಗಿಯೇ ಆಗಮಿಕವಾಗಿದೆ. ಅದಕ್ಕೂ ವೇದಗಳಿಗೂ ಯಾವ ಸಂಬಂಧವೂ ಇಲ್ಲ. . . . . ಆದರೂ ಇಂಡಿಯ ತೀವ್ರ ಮತಶ್ರದ್ಧೆಯುಳ್ಳದ್ದು. ಈ ತೀವ್ರ ಮತಶ್ರದ್ಧೆ ಆಗಮಿಕ ಮತಕ್ಕೆ ಮಾತ್ರ, ವೇದಮತಕ್ಕಲ್ಲ."[1] ಐದು ಸಾವಿರ ವರ್ಷಗಳಿಗೂ ಹಿಂದಿನದಾದ ಮತವನ್ನು ನೋಡಿದೆವು. ಈ ಕಾಲದ ಬಳಕೆಯ ಮತ ವನ್ನೂ ನೋಡಿದೆವು. ಹಿಂದುಗಳೆಂದರೆ ಆರ್ಯರೇ ಸರಿ, ಹಿಂದುಮತವೆಂದರೆ ಆರ್ಯರ ಯಾಜ್ಞಿಕ ಅಥವಾ ವೈದಿಕಮತವೇ ಸರಿ, ಎಂದು ಪ್ರತಿಜ್ಞೆಮಾಡಿಕೊಂಡು ಹೊರಟರೆ ಅದು ಅಬದ್ಧವಾಗುವುದಲ್ಲದೆ ಸಮಂಜಸವಾಗಲಾರದು. ಕರ್ಮಕಾಂಡಕ್ಕೆ ಪ್ರಾಶಸ್ತ್ಯ ಎಂದೋ ತಪ್ಪಿಹೋಯಿತು. ಯಜ್ಞಯಾಗಗಳ ಪ್ರಾಬಲ್ಯ ಎಂದೋ ತಗ್ಗಿಹೋಯಿತು. ಹೊಸ ದೇವರುಗಳು ಪ್ರಬಲರಾದರು. ಹೊಸ ಪದ್ಧತಿಗಳು ಬೇರೂರಿದವು. ಆದರೂ ಎಲ್ಲ ಆಚಾರ್ಯರುಗಳೂ ವೇದ, ಉಪನಿಷತ್ತು, ಆಗಮ ಮತ್ತು ಪುರಾಣಗಳನ್ನು ಆಧಾರವಾಗಿಟ್ಟುಕೊಂಡು ತಂತಮ್ಮ ಪಂಥಕ್ಕೆ ಬಲವನ್ನು ಕೊಡಲು ಆಶಿಸಿದ್ದಾರೆ. ಸಮಾಜದಲ್ಲಿ ಕಳೆಗಳೂ ಕುರುಕುತ್ತಗಳೂ ಬೆಳೆದುಕೊಂಡು ಬರುತ್ತವೆ. ವಾದಗಳು ವಚನಗಳು ಗ್ರಂಥಗಳಲ್ಲಿ ಮಾತ್ರ ನಿಂತುಹೋಗುತ್ತವೆ. ಯಾವಾಗಲಾದರೂ ಅನ್ಯಪಂಥಗಳ ಮೇಲೆ ದಾಳಿ ಮಾಡಬೇಕಾದಾಗ ಅಥವಾ ಸ್ವಮತದ ಹೆಚ್ಚುಳಿಕೆಯನ್ನು ತೋರಿಸಬೇಕಾದಾಗ ಅವುಗಳೆಲ್ಲ ಗ್ರಂಥಗಳಿಂದ ಉದ್ಧೃತವಾಗುತ್ತವೆ. "ಅದರ ವಾದಿಗಳೂ ಸಮರ್ಥನಕಾರರೂ ಏನೇ ಹೇಳಿದರೂ ವರ್ಣಾಶ್ರಮಧರ್ಮ ದೀರ್ಘಕಾಲದಿಂದ ನಡೆದುಬಂದಿರುವಂತೆ ಜನ್ಮಸಿದ್ಧವಾದು ದಾಗಿ ಉಚ್ಚನೀಚ ಭಾವಗಳನ್ನು ಸ್ಥಾಪಿಸುವ ಅದೊಂದು ಅನ್ಯಾಯದ ವ್ಯವಸ್ಥೆಯೇ ಆಗಿದೆ. ಲಿಂಗಾಯತ ಮತವಾದರೊ ಆ ವರ್ಣಾಶ್ರಮಧರ್ಮವನ್ನು ನಿರಾಕರಿಸಿದೆ; ಮತ್ತು ಸಾಮಾಜಿಕಧರ್ಮ ಜೀವನದಲ್ಲಿ ಒಂದು ಹೊಸ ಶಕೆಯನ್ನು ಸ್ಥಾಪಿಸಿದೆ.

---

aspect of it which is bound up with animism and the cults of Siva and the other Goddess—still the two most potent forces in popular worship" (*Mohenjo-Daro and the Indus civilization*, Vol. I, preface viii).

[1] "The religion as practised today by the Hindus is almost entirely based on the Agamas and has little or nothing to do with the Vedas. . . Yet India is intensely religious; but the intensity of religion is confined to the cult of the Agamas and not to those of the Vedas" (P. T. S. Iyengar's *History of the Tamils* ಎಂಬುದರಿಂದ ಪುಟಗಳು ೬೬೯–೭೦ರಲ್ಲಿ ಸಖರೆ ಅವರು ಉದ್ಧರಿ ಸಿರುವ ಭಾಗ.)

ಈ ಹೊಸ ಸಾಮಾಜಿಕಧರ್ಮ ಪದ್ಧತಿಯಿಂದ ವರ್ಣಾಶ್ರಮ ಧರ್ಮವನ್ನು ತೊಡೆದು ಹಾಕಿರುವುದು ಎಲ್ಲ ಲಿಂಗಾಯತ ಮತಗ್ರಂಥಗಳಲ್ಲಿಯೂ ಕಂಡುಬರುತ್ತದೆ"[1] ಎಂದು "ಹಿಂದುಮತ"ದಲ್ಲಿರುವ ಅನ್ಯಾಯವನ್ನು ತೋರಿಸಿ ಲಿಂಗಾಯತ ಮತದ ಶ್ರೇಷ್ಠತೆಯನ್ನು ಮನಗಾಣಿಸಿದ ಸಖರೆ ಅವರು ಲಿಂಗಾಯತ ಸಮಾಜದ ಪ್ರಕೃತಸ್ಥಿತಿಯನ್ನು ಹೇಗೆ ವರ್ಣಿಸಿರುವರೆಂಬುದನ್ನು ನೋಡೋಣ: "ಸಾಲದುದಕ್ಕೆ ಇಂಡಿಯದ ಬೇರೆ ಬೇರೆ ಭಾಗಗಳಲ್ಲಿರುವ ಲಿಂಗಾಯತರಲ್ಲಿಯೇ ಒಳಭೇದಗಳೂ, ಅಭಿಪ್ರಾಯ ಮತಪ್ರಕ್ರಿಯೆಗಳಲ್ಲಿ ವ್ಯತ್ಯಾಸಗಳೂ ಕಂಡುಬಂದು, ಬೇರೆ ಬೇರೆ ಆಚಾರವ್ಯವಹಾರಗಳ ನಡೆನುಡಿಗಳ ಕಾರಣದಿಂದಲೂ ತಮ್ಮ ಮತ್ತು ತಮ್ಮ ಮತವಿಷಯಗಳಲ್ಲಿ ಪಡೆದಿರುವ ಭಿನ್ನಾಭಿಪ್ರಾಯಗಳ ಕಾರಣದಿಂದಲೂ ಅವರು ಬಹುಮಟ್ಟಿಗೆ ಬೇರೆ ಬೇರೆ ಪಂಗಡಗಳಾಗಿಯೇ ವಿಭಾಗವಾಗಿದ್ದಾರೆ."[2]

"ಎತ್ತ ನೋಡಿದರೂ ವಿವಿಧ ಜಾತಿಮತಗಳಂಥ ಹಲವು ಪಂಗಡಗಳು ಎಲ್ಲ ಭಾಗಗಳ ಲಿಂಗಾಯತರಲ್ಲೂ ಕಂಡುಬರುತ್ತವೆ. ಈ ವ್ಯತ್ಯಾಸಭಾವನೆ ನಿಜವಾದ ಲಿಂಗಾಯತ ಮತಕ್ಕೆ ಸೇರಿದುದಲ್ಲ; ಅದರ ಮೇಲೆ ಬೆಳೆದುಬಂದಿರುವ ಕುರುಕುತ್ತ. ಲಿಂಗಾಯತ ಸಮಾಜದ ಹೃದಯವನ್ನೇ ಅದು ತಿಂದುಹಾಕುತ್ತಿದೆ. ಆ ಕಾರಣದಿಂದಲೇ ಈಗ ಲಿಂಗಾಯತ ಸಮಾಜ ಮುಂದುವರಿಯದೆ ನಿಂತುಹೋಗಿದೆ . . . ಸಾರಾಂಶವನ್ನು ಎರಡು ಮಾತಿನಲ್ಲಿ ಹೇಳುವುದಾದರೆ ಎಲ್ಲ ಭಾಗಗಳ ಲಿಂಗಾಯತರೂ ಮೈಮೇಲೆ ಲಿಂಗವನ್ನು ತಪ್ಪದೆ ಧರಿಸುತ್ತಾರೆ; ತಮ್ಮದೇ ಆದ ಒಂದು ಪಂಗಡವನ್ನು ಮಾಡಿಕೊಂಡು, ಜಂಗಮರೆಂದು ತಮ್ಮನ್ನು ಕರೆದುಕೊಳ್ಳುತ್ತ ಅವಿದ್ಯಾವಂತರೂ ಶುದ್ಧ ಶುಂಠಕಾಯಿಗಳೂ ಆಗಿದ್ದರೂ ಜನ್ಮತಃ ಜಂಗಮರೆಂಬ ಹೆಮ್ಮೆಯುಳ್ಳವರಾಗಿ ಹಿಂದುಸಮಾಜದ ಬ್ರಾಹ್ಮಣರಂತೆ ಮೂಢಜನತೆಯನ್ನು ಕಿತ್ತು ತಿನ್ನುತ್ತ ಹೊಟ್ಟೆ ಹೊರೆದುಕೊಳ್ಳುತ್ತಿರುವ ಸ್ವಾಮಿಗಳು ಅಥವಾ ಅಯ್ಯನವರುಗಳನ್ನು ಕೆಲವು ಉತ್ಸವ

---

[1] "The Varnashrama Dharma, based on birth, as it has long since come to be, has been an iniquitous institution inspite of its champions and defenders. The Lingayat religion has done away with it and ushered in a new era of socio-religious life. The abolition of varnashrama dharma from the new socio-religious system is to be found in all Lingayat religious books" (ಪುಟ ೬೬೭).

[2] "To add to all this there is such a sharp division and difference of opinion and of religious practices among the Lingayats themselves of different parts of India that they are almost divided into different camps an account of different customs, manners, views about themselves and their religion" (ಪುಟ ೬೬೨).

ಸಂದರ್ಭಗಳಲ್ಲಿ ಪೂಜಿಸುತ್ತಾರೆ. ಇಷ್ಟೇ ಹೊರತು ಮತಪ್ರಕ್ರಿಯೆಗಳಲ್ಲಾಗಲಿ, ಸಂಪ್ರದಾಯಗಳಲ್ಲಾಗಲಿ ನಿಜವಾದ ಮತಧರ್ಮ ಜೀವನದಲ್ಲಾಗಲಿ ಲಿಂಗಾಯತರಲ್ಲಿ ಏಕರೂಪತೆ ಏಕಮತಗಳಿಲ್ಲ. ಅಕಟಾ! ಎಂಥ ಶೋಚನೀಯವಾದ ಸ್ಥಿತಿ, ಮತದ ಎಂಥ ವಿಷಾದಕರವಾದ ವಿಕಟಹಾಸ್ಯ, ಲಿಂಗಾಯತಸಮಾಜ ಎಂಥ ಅಧೋಗತಿಗೆ ಇಳಿದಿದೆ!"[1]

ಸಖರೆ ಅವರಿಗೆ ನಮ್ಮ ಸಹಾನುಭೂತಿಯನ್ನು ತೋರಿ "ಲಿಂಗಾಯತರು ಹಿಂದುಗಳಿಗಿಂತ ಭಿನ್ನರು, ಲಿಂಗಾಯತಮತ ಹಿಂದುಮತದಿಂದ ಭಿನ್ನವಾದುದು" ಎಂಬ ಅವರ ತೀರ್ಮಾನಕ್ಕೆ ಬೆಳಗಾಮಿನ ಅದೇ ಲಿಂಗರಾಜ ಕಾಲೇಜಿನ ಪ್ರಿನ್ಸಿಪಾಲರೂ ಲಿಂಗಾಯತರೂ ಆದ ಡಾ|| ಎಸ್. ಸಿ. ನಂದಿಮಠ ಅವರ "ಈ ರೂಪಗಳನ್ನು ಉಳಿಸಿಕೊಂಡರೂ ಜೈನಪಂಥ ಹಿಂದೂಮತದ ಎಲ್ಲ ಸಂಬಂಧಗಳನ್ನೂ ಕತ್ತರಿಸಿಕೊಂಡು ಪ್ರತ್ಯೇಕಮತವಾಯಿತು. ವೀರಶೈವಪಂಥ ಇನ್ನೂ ಒಂದು ಹೆಜ್ಜೆ ಮುಂದೆ ಹೋದರೂ ಹಿಂದುಮತದಲ್ಲಿಯೇ ಉಳಿಯಿತು"[2] ಎಂಬ ತೀರ್ಮಾನವನ್ನು ಎದುರಿಗಿಟ್ಟು ಈ ಪ್ರಕರಣವನ್ನು ಮುಗಿಸುತ್ತೇವೆ.

ಪೀಠಿಕೆಯಲ್ಲಿ ಹೀಗೆ ಭಿನ್ನಾಭಿಪ್ರಾಯಗಳು ಬರಬಹುದಾದ ಹಲವು ವಿಚಾರಗಳಿವೆ. ಅವುಗಳಲ್ಲಿ ಇನ್ನೂ ಕೆಲವನ್ನು ಮುಂದೆ ತೋರಿಸಿದ್ದೇವೆ.—

(೧) "ಋಗ್ವೇದದಲ್ಲಿ ಎರಡು ಕಡೆ ಬರುವ 'ಶಿಶ್ನದೇವಾಃ' ಎಂಬುದರಿಂದ ಶಿಶ್ನದೇವೋಪಾಸನೆ ಆಚರಣೆಯಲ್ಲಿತ್ತೆಂದು ಸಾಕ್ಷ್ಯ ತೋರಿಸುತ್ತಾರೆ. ಆದರೆ 'ಶಿಶ್ನದೇವಾಃ' ಎಂಬ ಪದ ವೇದಗಳ ಕಾಲದ ದುರ್ನೀತಿಗೂ ಅಕ್ರಮ ಪ್ರೇಮ

---

[1] "Everywhere there are to be seen so many different caste-like divisions among Lingayats of all parts. This is an excrescence that has grown on the real religion and is eating into the heart of the religious community, which on that account is stagnant. . . . In short there is little unanimity in religious rites and customs or real religious life among the Lingayats, except that everywhere they invariably wear Linga on the bodies and worship on occasions Swamies or Ayyanavarus, which have made a class of their own and call themselves Jangamas, though they are no better than birth-made pretentious ignoramuses, but like Brahmins of the Hindu fold simply prey upon the masses ignorant and stagnant. Alas! What a lamentable state of affairs, what grievious parody of the religion, what a tragic condition into which the community has fallen!" (ಪುಟಗಳು ೬೬೩–೬೪).

[2] "Although preserving those forms Jainism severed all its connections with Hinduism and formed a separate religion of its own. Virasaivism, though going a step further, remained within Hinduism" (*A Handbook of Virasaivism.* ಪುಟ ೯೦).

ಸಂಧಾನಗಳಿಗೂ ಅನ್ವಯಿಸುತ್ತದೆ. ಹಲವು ಋಕ್ಕುಗಳಲ್ಲಿ ಈ ವ್ಯಭಿಚಾರ ನಿದರ್ಶನಗಳಿವೆ. ಯಾವ ನಡತೆಗೆಟ್ಟ ಹೆಂಡತಿಯರು ತಮ್ಮ ಗಂಡಂದಿರಿಗೆ ವಿರೋಧವಾಗಿ ವರ್ತಿಸಿ ಪ್ರೇಮವಂಚನೆಮಾಡುತ್ತಿದ್ದರೋ ಅವರಿಗಾಗಿಯೇ ದೇವತೆಗಳು ಒಂದು ನರಕವನ್ನು ಸೃಷ್ಟಿಸಿದರು. . . . ಅವರು ತಮ್ಮ ಪ್ರಿಯರನ್ನು ತಮ್ಮ ಮನೆಗಳಿಗೇ ಬರಮಾಡಿಕೊಳ್ಳುತ್ತಿದ್ದರು. . . . ಹೀಗೆಯೇ ಕೆಲವರು ಹೆಂಗಸರು ಐಶ್ವರ್ಯ ಸಂಪಾದನೆಗಾಗಿ ಪರಪುರುಷರನ್ನು ಆಶ್ರಯಿಸುತ್ತಿದ್ದರು. . . ಬ್ರಾಹ್ಮಣಸ್ತ್ರೀಯರೆಂದು ಪೂಜ್ಯಭಾವನೆಯಿಂದ ಯಾರೂ ಏನೂ ನೋಡುತ್ತಿರಲಿಲ್ಲ. ಅವರನ್ನು ಕೆಡಿಸಿದನಂತರ ಪುನಃ ಅವರ ಗಂಡಂದಿರಿಗೆ ತಂದು ಒಪ್ಪಿಸುತ್ತಿದ್ದರು. ಬ್ರಾಹ್ಮಣನ ಹೆಂಡತಿಯನ್ನು ತಮ್ಮ ಮನೆಯಲ್ಲಿ 'ತಡೆದಿಟ್ಟುಕೊಂಡಿರುವ' ಜನಗಳ ಮೇಲೆ ಶಾಪಹಾಕಿರುವುದು ಕಂಡು ಬರುವುದರಿಂದ ಇದು ಸಾಮಾನ್ಯವಾಗಿ ನಡೆಯುತ್ತಿತ್ತೆಂದು ಸಿದ್ಧವಾಗುತ್ತದೆ; ನ್ಯಾಯವಾಗಿಯೋ ಅಕ್ರಮವಾಗಿಯೋ ತಮ್ಮ ಕಾಮತೃಪ್ತಿಯನ್ನು ಮಾಡಿಕೊಳ್ಳುತ್ತಿದ್ದ ಪ್ರಿಯ ಪ್ರೇಯಸಿಯರ ಪ್ರೇಮಸಂಧಾನಗಳಿಗೆ 'ಶಿಶ್ನದೇವಾಃ' ಎಂಬುದು ಅನ್ವಯಿಸುತ್ತದೆಂದು ಇವೆಲ್ಲ ತೋರಿಸುತ್ತವೆ."[1] ಸಖರೆ ಅವರ ವಾದಸರಣಿಯನ್ನೂ ತೀರ್ಮಾನವನ್ನೂ ಬಹುಶಃ ಅನೇಕ ಪಂಡಿತರು ಒಪ್ಪಲಾರರು. ಸರ್ ಜಾನ್ ಮಾರ್ಷಲ್ ಅವರು ಮೊಹೆಂಜದಾರೊ ಹರಪ್ಪಾಗಳಲ್ಲಿ ದೊರೆತ ಕೆಲವು ಲಿಂಗಗಳ ವಿಷಯವಾಗಿ (ಅವರ ಗ್ರಂಥದ ಚಿತ್ರಪಟ XIV, 2 ಮತ್ತು 4) ಹೀಗೆ ಹೇಳಿದ್ದಾರೆ: "ಇವುಗಳಲ್ಲಿ ಎರಡು ನಿಸ್ಸಂಶಯವಾಗಿಯೂ ಶಿಶ್ನಗಳು; ಹೆಚ್ಚುಕಡಮೆ ಸಹಜ ಶಿಶ್ನಾಕಾರದಲ್ಲಿ ರೂಪಿತವಾದುವು. ಇಂಡಿಯದಲ್ಲಿ ಶಿಶ್ನದೇವೋಪಾಸನೆ ಆರ್ಯರಿಗಿಂತ ಪೂರ್ವದಲ್ಲಿತ್ತೆಂದು ಇವು ಮುಖ್ಯಾಯವಾಗಿ ದೃಢಪಡಿಸಿ ಅದು ಗ್ರೀಕರಿಂದ

---

[1] "A proof of phallic worship is sought from the word 'ಶಿಶ್ನದೇವಾಃ' occurring twice in the Rigveda" . . . "The word ಶಿಶ್ನದೇವಾಃ refers to the immorality of the Vedic times and illicit love intrigues. . . . References to libertinism are found in various hymns. Thus evil disposed wives, hostile to their husbands, for whom a special hell was created by the gods (R. V. IV, 5-5), were unfaithful to their spouses. They seem to have received lovers in their houses. . . . Some women sought men, 'mounting their cars to gather riches' (R. V. I, 124-7) and 'went about displaying themselves with glittering ornaments like the heavens with stars' (R. V. I, 87-1). Brahmin women were not regarded sacrosanct but could be restored to their husbands after being seduced (R. V. X, 109-6). Curses are levelled against people who 'shut up' within their houses a Brahmin's wife (R. V. V, 17-11), thereby proving that this was not uncommon. All this shows that ಶಿಶ್ನದೇವಾಃ refers to love intrigues of beaux and belles who sought to satisty their passion by means fair or foul" (ಪುಟಗಳು ೩೧೧, ೩೧೩, ೩೧೪).

ಅಥವಾ ಪಶ್ಚಿಮದಿಂದ ಬಂದ ಇತರ ಆಕ್ರಮಣಕಾರರಿಂದ ಇಂಡಿಯಕ್ಕೆ ತರಲ್ಪಟ್ಟಿತೆಂಬ ಶುದ್ಧ ಕಲ್ಪನೆಯ ಸಿದ್ಧಾಂತವನ್ನು ಒಮ್ಮೆಗೇ ನಿರಾಕರಿಸುತ್ತವೆ"[1] ಆರ್ಯರಿಗೆ ಪೂರ್ವದಲ್ಲಿ ದ್ರಾವಿಡರು ನಾಗರಿಕರಾಗಿದ್ದರೆಂದು ಹೇಳಿದರೆ ಇಂಡಿಯದಲ್ಲಿ ಶಿಶ್ನದೇವೋಪಾಸನೆಯೇ ಇರಲಿಲ್ಲವೆಂದು ಸಿದ್ಧಾಂತ ಮಾಡಿದ ಹಾಗಾಗುವುದಿಲ್ಲ. ಈ ೨೦ ನೆಯ ಶತಮಾನದಲ್ಲಿಯೂ ಇಂಡಿಯದ ಜನತೆಯೆಲ್ಲ ಒಂದೇ ಮಟ್ಟದ ನಾಗರಿಕ ಸ್ಥಿತಿಯಲ್ಲಿಲ್ಲವೆಂಬುದು ಜನಗಣಿತಿಯ ವರದಿಗಳಿಂದ ಕಂಡುಬರುತ್ತದೆ. ಇನ್ನು ಐದು ಸಾವಿರ ವರ್ಷಗಳಿಗೂ ಹಿಂದಿನ ಮಾತನ್ನು ಹೇಗೆ ಹೇಳಬಹುದು ?

(೨) "ಕಾಳಿದಾಸನು ಕ್ರಿ. ಪೂ. ೧ ನೆಯ ಶತಮಾನದ ಕಾಶ್ಮೀರ ಶೈವ. ಅವನು ಕೂಡ ಶಕ್ತಿವಿಶಿಷ್ಟಾದ್ವೈತವನ್ನು ಅಡಕವಾಗಿ ಆದರೆ ಅತ್ಯಂತ ಸುಂದರವಾಗಿ ರಘುವಂಶದ

ವಾಗರ್ಥಾವಿವ ಸಂಪೃಕ್ತೌ ವಾಗರ್ಥಪ್ರತಿಪತ್ತಯೇ |
ಜಗತಃ ಪಿತರೌ ವಂದೇ ಪಾರ್ವತೀಪರಮೇಶ್ವರೌ ||

ಎಂಬ ಮಂಗಳಶ್ಲೋಕದಲ್ಲಿ ನಿರೂಪಿಸಿದ್ದಾನೆ. ಎಂದರೆ, ಕಾಶ್ಮೀರದ ಶಿವಾದ್ವೈತದಲ್ಲಿ ಬರುವ ಶಕ್ತಿವಿಶಿಷ್ಟಾದ್ವೈತ ಸಿದ್ಧಾಂತ ಕಾಳಿದಾಸನ ಕಾಲದಲ್ಲಿಯೇ ಚೆನ್ನಾಗಿ ಸ್ಥಾಪಿತವಾಗಿತ್ತು"[2] ಎಂದು ಸಖರೆ ಅವರು ಅಭಿಮಾನಪೂರ್ವಕವಾಗಿ ಹೇಳಿದ್ದಾರೆ. ಕಾಳಿದಾಸನ ಕಾಲದೇಶಗಳ ವಿಚಾರ ಒತ್ತಟ್ಟಿಗಿರಲಿ. ಕಾಶ್ಮೀರ ಶೈವಮತದ ಪ್ರಸ್ತಾಪಮಾಡುತ್ತ "ಕಾಶ್ಮೀರದ ಶಿವಾದ್ವೈತ ಕ್ರಿ. ಶ. ೯ ನೆಯ ಶತಮಾನಕ್ಕೆ ಹಿಂದೆ ಇರಲಿಲ್ಲ . . .[3] ಕಾಶ್ಮೀರ (ಶೈವ) ದರ್ಶನವನ್ನು ಸ್ಥಾಪಿಸಿದ ವಸುಗುಪ್ತನು ೯ ನೆಯ ಶತಮಾನದಲ್ಲಿ ಜೀವಿಸಿದ್ದನೆಂದು ದೃಢಪಟ್ಟಿದೆ. ಆದ್ದರಿಂದ ಶಕ್ತಿವಿಶಿಷ್ಟಾ

---

[1] "Two of these (Pl. XIV, 2 and 4) are unquestionably Phalli, more or less realistically modelled, and prove conclusivelly that phallism in India had a pre-Aryan origin, thus disposing once and for all of the fantastic theory that it was introduced into India by the Greeks or other Western invaders" (*Mohenjo-Daro and the Indus civilization*, ಪುಟ 59).

[2] "Kalidas was a Kashmere Shaiva of the first century B.C. He also expresses tersely and most beautifully the ಶಕ್ತಿವಿಶಿಷ್ಟಾದ್ವೈತ in the invocatory stanza of ರಘುವಂಶ.

*　　*　　*　　*　　*

This means that ಶಕ್ತಿವಿಶಿಷ್ಟಾದ್ವೈತ or Kashmere monistic ಶಿವಾದ್ವೈತ was a well established doctrine in the times of Kalidas" (ಪುಟ ೨೪೦–೪೧).

[3] "Kashmere Shivadvaita on which the Shaktivishistadvaita of the Lingayat religion is based with an improved appropriate name, did not exist before ninth century" (ಪುಟ ३೭೫–೬).

ದ್ವೈತ ಅದಕ್ಕಿಂತ ಮೊದಲಿನದೂ ಪ್ರಾಚೀನವೂ ಆಗಿರಲು ಸಾಧ್ಯವಿಲ್ಲ"[1] ಎಂದು ಸಖರೆ ಅವರೇ ಹೇಳಿದ್ದಾರೆ. ಈ ಹೇಳಿಕೆಗಳು ಪರಸ್ಪರ ಸಂಗತವಾಗುತ್ತವೆಯೆ?

(೩) ಭಗವದ್ಗೀತೆಯಲ್ಲಿ ಪಾರಮೇಶ್ವರಾಗಮ ಮೊದಲಾದುವುಗಳ ಶ್ಲೋಕಗಳಿವೆಯೆಂದು ಕೆಲವನ್ನು ಉದಾಹರಿಸಿ ಗೀತೆಯು ಆಗಮಗಳ ಪ್ರಭಾವದಿಂದ ರಚಿಸಲ್ಪಟ್ಟಂತೆ ತೋರುತ್ತದೆ ಎಂದು ಹೇಳಿರುವುದು[2] ವಿಚಾರಮಾಡತಕ್ಕದ್ದಾಗಿದೆ. ನಮಗೆ ಈಗ ತಿಳಿದ ಮಟ್ಟಿಗೆ ಗೀತೆಯ ಕಾಲ ಕ್ರಿ. ಪೂ. ೨ನೆಯ ಶತಮಾನಕ್ಕಿಂತ ಈಚಿನದೇನೂ ಅಲ್ಲ. ಉಪನಿಷತ್ತುಗಳ ಪ್ರಭಾವವನ್ನು ಗೀತೆಯಲ್ಲಿ ಸ್ಪಷ್ಟವಾಗಿ ಕಾಣಬಹುದು; ಭಾಗವತ ತತ್ತ್ವದ—ವಾಸುದೇವ ಕೃಷ್ಣ ಭಕ್ತಿಪಂಥದ—ಪ್ರಭಾವವನ್ನೂ ಅದರಲ್ಲಿ ಕಾಣಬಹುದು; ಮೂರನೆಯದಾಗಿ, ಸಾಂಖ್ಯದರ್ಶನದ ಪ್ರಭಾವವನ್ನೂ ಅದರಲ್ಲಿ ಕಾಣಬಹುದು. ಶೈವಾಗಮಗಳ ಪ್ರಭಾವ ಗೀತೆಯ ಮೇಲಿದೆ ಎಂದು ಹೇಳುವುದಾದರೂ ಹೊಸತು. ಪಾರಮೇಶ್ವರಾದಿ ಕೆಲವು ಆಗಮಗಳಲ್ಲಿ ಬಸವ, ಚೆನ್ನಬಸವ, ಅಲ್ಲಮಪ್ರಭು ಮತ್ತು ರೇಣುಕಾದಿ ಪಂಚಾಚಾರ್ಯರ ಹೆಸರುಗಳು ಬರುತ್ತವೆಯೆಂದೂ ಕಾಲಕಾಲಕ್ಕೆ ಶ್ಲೋಕಗಳು ಬೆಳೆದು ಬಂದಿವೆಯೆಂದೂ ಸಖರೆ ಅವರೇ ೨೯೫, ೨೯೬ ಮತ್ತು ೩೮೩ನೆಯ ಪುಟಗಳಲ್ಲಿ ತಿಳಿಸಿದ್ದಾರೆ. ಹೀಗಿರುವುದರಿಂದ ಗೀತೆಯಿಂದಲೇ ಆ ಶ್ಲೋಕಗಳು ಪಾರಮೇಶ್ವರಾದಿ ಆಗಮಗಳಿಗೆ ಹೋಗಿರಬಹುದೆಂದು ಇತರರು ತರ್ಕಿಸಬಹುದು. ಆದರೆ ಸಖರೆ ಅವರು ಅದನ್ನೊಪ್ಪುವುದಿಲ್ಲ. "ಶ್ರೀ ಕೃಷ್ಣನು ಶಿವಭಕ್ತನೆಂದು ಮಹಾಭಾರತದಲ್ಲಿಯೂ ಪುರಾಣಗಳಲ್ಲಿಯೂ ಕಂಡುಬರುವುದರಿಂದ"[3] ಶ್ರೀ ಕೃಷ್ಣನು ಆಗಮಗಳಿಂದಲೇ ತೆಗೆದು ಅರ್ಜುನನಿಗೆ ಉಪದೇಶಿಸಿರಬೇಕು. ಆದುದರಿಂದ "ಉಪನಿಷತ್ತುಗಳಿಂದ ಗೀತೆ ತೆಗೆದುಕೊಂಡಿರಬಹುದು. ಆದರೆ ಗೀತೆಯ ಮೂಲ ಅವು ಮಾತ್ರವಲ್ಲ. ಅದು ಹಾಗೆಯೇ

---

[1] "Vasugupta, the founder of Kashmere philosophy, has been proved to have lived in the ninth century. Hence ಶಕ್ತಿವಿಶಿಷ್ಟಾದ್ವೈತ cannot be early and ancient" (ಪುಟ ೩೭೭).

[2] "The *Bhagavadgita* itself seems to have been written under the influence of the Agamas. . . . Secondly very many Agamic passages of the *Gita* differ but little from various Agamic passages" (ಪುಟ ೨೪೬).

"We have already seen how the Agamas have grown so bulky by continuous additions made to them even in times after Basava" (ಪುಟ ೩೮೩).

[3] "But this contention cannot stand; for ಶ್ರೀ ಕೃಷ್ಣ the author of the ಗೀತ, was himself a devotee of Shiva, as is positively known from ಮಹಾಭಾರತ and other *Puranas*" (ಪುಟ ೨೫೬).

ಆಗಮಗಳಿಂದ ತೆಗೆದುಕೊಂಡಿದೆ ಮತ್ತು ತಾನು ಬೋಧಿಸುವ ತತ್ತ್ವಕ್ಕೆ ಉಪ ನಿಷತ್ತುಗಳಿಗಿಂತ ಹೆಚ್ಚಾಗಿ ಆಗಮಗಳಿಗೇ ಋಣಿಯಾಗಿದೆ''[1] ಎಂದು ಅವರು ಹೇಳುತ್ತಾರೆ. ಆಗಮಗಳ ಪ್ರಭಾವ ಎಂದು ಹೇಳುವಾಗ ವಾಸುದೇವಕೃಷ್ಣ ಭಕ್ತಿ ಪಂಥದ, ಭಾಗವತ ತತ್ತ್ವಗಳ, ಪ್ರಭಾವ ಎಂದು ಅರ್ಥಮಾಡಿದರೆ ಹೆಚ್ಚು ಸಮಂಜಸ ವಾಗಬಹುದು. ಪಾರಮೇಶ್ವರಾದಿ ಶೈವಾಗಮಗಳನ್ನು ಉದಾಹರಿಸಿದರೆ ಸಮಂಜಸ ವಾಗಲಾರದೆಂದು ನಮ್ಮ ಅಭಿಪ್ರಾಯ.

(೪) ಲಿಂಗಾಯತರ ಶಕ್ತಿವಿಶಿಷ್ಟಾದ್ವೈತಮತ ಕಾಶ್ಮೀರದ ಶಿವಾದ್ವೈತದ ಆಧಾರದ ಮೇಲೆ ಏರ್ಪಟ್ಟಿದೆ ಎಂದೂ, ಶಿವಾದ್ವೈತಮಂಜರಿಯಲ್ಲಿ ಹೇಳಿರುವುದು ಕೂಡ ಇದಕ್ಕೆ ಪುಷ್ಟಿಕೊಡುತ್ತದೆಂದೂ ಸಖರೆ ಅವರು ತಿಳಿಸುತ್ತಾರೆ. ಇಲ್ಲಿ ಎರಡು ವಿಚಾರಗಳನ್ನು ಚರ್ಚಿಸುವುದು ಯುಕ್ತವಾಗಿದೆ. ಪೀಠಿಕೆಯಲ್ಲಿ ಉದ್ದಕ್ಕೂ ಲಿಂಗಾ ಯತಮತ ಸಿದ್ಧಾಂತವನ್ನು ಶಕ್ತಿವಿಶಿಷ್ಟಾದ್ವೈತವೆಂದು ಸಖರೆ ಅವರು ಕರೆದಿದ್ದಾರೆ. 'ಕ್ರಿಯಾಸಾರ'ದ ಕರ್ತೃವಾದ ನೀಲಕಂಠ ಶಿವಾಚಾರ್ಯನು ಈ ಪದಪ್ರಯೋಗಕ್ಕೆ ಅಂಕುರಾರ್ಪಣಮಾಡಿದ್ದು ನಿಜ. ಆದರೆ ಸಾಮಾನ್ಯವಾಗಿ ಎಲ್ಲ ಶೈವಾಗಮ ಗಳಲ್ಲಿಯೂ ಶಿವಶಕ್ತಿಯರ ವಿಚಾರಗಳು ಬರುತ್ತವೆ. ಎಲ್ಲ ಶೈವಮತಪ್ರಭೇದಗಳೂ ಶಕ್ತಿವಿಶಿಷ್ಟನಾದ ಶಿವನನ್ನು ಉಪಾಸಿಸುತ್ತವೆ. ಈ ಶಿವಶಕ್ತಿಯರ ಸಂಬಂಧ, ವಿವರಣೆ, ಎಲ್ಲಕ್ಕೂ ಒಂದೇ ಸಮನಾಗಿದೆ. ಆದ್ದರಿಂದ ಲಿಂಗಾಯತ ಮತಸಿದ್ಧಾಂತಕ್ಕೆ ವಿಶೇಷವಾದುದು ಯಾವುದೂ 'ಶಕ್ತಿವಿಶಿಷ್ಟಾದ್ವೈತ' ಎಂಬುದರಿಂದ ಬೋಧೆ ಯಾಗುವುದಿಲ್ಲ. 'ವಿಶಿಷ್ಟಾದ್ವೈತ' ಎಂಬುದರಿಂದ ರಾಮಾನುಜ ಮತಸಿದ್ಧಾಂತವೆಂಬ ಭಾವನೆ ಬರುವುದೂ ಉಂಟು. ರಾಮಾನುಜ ಮತದಲ್ಲಿ ವಿಷ್ಣುಸರ್ವೋತ್ತಮತ್ವ ವಿರುವಂತೆ ತಮಿಳುನಾಡಿನ ಶೈವಸಿದ್ಧಾಂತದಲ್ಲಿ—ಮುಖ್ಯವಾಗಿ ಶಿವಜ್ಞಾನಬೋಧಂ ಎಂಬುದರಲ್ಲಿ—ಶಿವಪಾರಮ್ಯವೂ ವಿಶಿಷ್ಟಾದ್ವೈತ ರೀತಿಯ ಮೋಕ್ಷವೂ ನಿರೂಪಿತ ವಾಗಿವೆ. 'ಶಕ್ತಿವಿಶಿಷ್ಟಾದ್ವೈತ' ಎಂದು ವೀರಶೈವಮತವನ್ನು ಕರೆದು ವ್ಯಾಖ್ಯಾನ ಮಾಡಿದ 'ಕ್ರಿಯಾಸಾರ' ಕರ್ತನಾದ ನೀಲಕಂಠಶಿವಾಚಾರ್ಯನು ಸಹ ಮುಕ್ತಿ ಯನ್ನು ವಿಶಿಷ್ಟಾದ್ವೈತದ ರೀತಿಯೇ ನಿರೂಪಿಸಿದ್ದಾನೆಂದು ಡಾ|| ನಂದಿಮಠ ಅವರು ಹೇಳುತ್ತಾರೆ.[2] ಆದುದರಿಂದ ಶೈವಮತಕ್ಕೂ ಶಾಕ್ತಮತಕ್ಕೂ ಇರುವ ಸಾಮಾನ್ಯ

---

[1] "The *Gita* might have borrowed from the Upanishads. But they are not the only source. It has barrowed likewise from and more obliged to the Agamas for the philosophy it teaches" (ಪುಟ ೨೫೯).

[2] "Accordingly he makes the philosophy of Virasaivism a system of qualified monism (Visistadvaita)." [*A Handbook of Virasaivism*, page 40].

ವಾದ ನಿಕಟಸಂಬಂಧದಿಂದ ಶಕ್ತಿವಿಶಿಷ್ಟಾದ್ವೈತ ಎನ್ನುವುದನ್ನೂ ಶಕ್ತಿಪಾರಮ್ಯವೂ ವಿಶಿಷ್ಟಾದ್ವೈತವೂ ಇರುವ ಸಿದ್ಧಾಂತವೆಂದು ಬೇರೆ ವಿಧದಲ್ಲಿ ಅರ್ಥಮಾಡಬಹುದಾದ ಪ್ರಮಾದವೂ ಒಂದಿದೆ. 'ವೀರಶೈವ' ಎಂಬುದಕ್ಕಿಂತ 'ಲಿಂಗಾಯತ' ಎಂಬ ಪದವೇ ಹೆಚ್ಚು ಯುಕ್ತವಾದುದೆಂದು ಸಮರ್ಥಿಸಿ ಆ ಪದವನ್ನು ಉಪಯೋಗಿಸಿದವರು 'ಶಕ್ತಿವಿಶಿಷ್ಟಾದ್ವೈತ' ಎಂಬ ಪದದ ಪ್ರಯೋಗದ ವಿಚಾರದಲ್ಲಿಯೂ ಆಲೋಚನೆಮಾಡಬೇಕಾಗಿತ್ತೆಂದು ನಾವು ಅಭಿಪ್ರಾಯಪಡುತ್ತೇವೆ.

ಎರಡನೆಯದಾಗಿ, ಲಿಂಗಾಯತ ಮತಸಿದ್ಧಾಂತದ ಮೇಲೆ ವೇದೋಪನಿಷತ್ತುಗಳ ಪ್ರಭಾವ ಬಿದ್ದೇ ಇಲ್ಲವೆಂದು ಶಪಥಮಾಡಿ ಹೇಳುವುದಕ್ಕಾದೀತೆ? ಸಖರೆ ಅವರು ದೊಡ್ಡ ವಿದ್ವಾಂಸರು. ಈ ವಿಚಾರವನ್ನು ಸಮತಾಭಾವದಿಂದಲೂ ನಿಷ್ಪಕ್ಷಪಾತವಾಗಿಯೂ ವಿಮರ್ಶಿಸಬೇಕಾಗಿತ್ತೆಂದು ನಾವು ಅಭಿಪ್ರಾಯಪಡುತ್ತೇವೆ. ಆರ್ಯರು ದ್ರಾವಿಡರಿಂದ ಶಿವನನ್ನೂ ಇತರ ದೇವತೆಗಳನ್ನೂ ತೆಗೆದುಕೊಂಡರೆಂದೂ, ಮೂರ್ತಿಪೂಜಾಕ್ರಮಗಳನ್ನೂ ಜನ್ಮಾಂತರಗಳುಂಟೆಂಬುದನ್ನೂ ಕರ್ಮವಾದವನ್ನೂ ದ್ರಾವಿಡರಿಂದ ಪಡೆದರೆಂದೂ, ಪರಬ್ರಹ್ಮ ಅಥವಾ ಪರವಸ್ತು ಎಂಬ ಭಾವನೆಯನ್ನೂ ಶಕ್ತಿತತ್ತ್ವವನ್ನೂ ಆರ್ಯರು ದ್ರಾವಿಡರಿಂದ ಗ್ರಹಿಸಿ ಬಹುದೇವತೋಪಾಸನೆಯನ್ನು ಬಿಟ್ಟು ಒಬ್ಬ ದೇವರ ಉಪಾಸನೆಗೆ ತಿರುಗಿದರೆಂದೂ ಹೇಳಿ, ವೇದೋಪನಿಷತ್ತುಗಳ ಪ್ರಭಾವ ಶೈವದರ್ಶನಗಳ ಮೇಲೆ ಹೇಗೆ ಬಿದ್ದಿರಬಹುದೆಂಬುದರ ಬಗ್ಗೆ ತಾಟಸ್ಥ್ಯ ವಹಿಸಿ, ಲಿಂಗಧಾರಣ ಚಂದ್ರಿಕಾಕಾರರಂಥ ವೈದಿಕಪ್ರೇಮಿಗಳು ವೇದೋಪನಿಷತ್ತುಗಳಿಗೆ ಗೌರವ ತೋರುವುದನ್ನೂ ಅವುಗಳ ಆಧಾರ ಕೊಡುವುದನ್ನೂ ಸಹಿಸದೆ ಸಿದ್ಧಾಂತಮಾಡಲು ಹೊರಟಿರುವುದು ಆಶ್ಚರ್ಯಕರವಾಗಿದೆ, ಇತಿಹಾಸಕ್ಕೆ ವಿರುದ್ಧವಾಗಿದೆ. ಲಿಂಗಧಾರಣ ಚಂದ್ರಿಕಾಕಾರರಂಥ ವೈದಿಕಪ್ರೇಮಿಗಳಿಂದ ಗೊಂದಲವೂ ಅವ್ಯವಸ್ಥೆಯೂ ಉಂಟಾಗಿವೆಯೆಂದೂ ಕನ್ನಡಸಾಹಿತ್ಯದ ವಚನಗಳೇ ಲಿಂಗಾಯತ ಮತಕ್ಕೆ ಮೂಲಾಧಾರಗಳೆಂದೂ, ಬಸವಣ್ಣನವರೇ ಲಿಂಗಾಯತ ಮತಸ್ಥಾಪಕರೆಂದೂ ಅಭಿಪ್ರಾಯಪಡುವ ಸಖರೆ ಅವರು, ಬಸವಣ್ಣನವರೂ, ತಪ್ಪದೆ ವಚನಕಾರರೂ ವೇದೋಪನಿಷತ್ತುಗಳ ಆಧಾರ ಕೊಡುವುದರ, ಒಂದು ಉದ್ದೇಶವನ್ನು, ಒಂದು ತತ್ತ್ವವನ್ನು, ಗ್ರಹಿಸಬೇಕಾಗಿದೆ. ಬಸವಣ್ಣನವರ ಈ ವಚನಗಳನ್ನು ನೋಡೋಣ :

"ಇಬ್ಬರು ಮೂವರು ದೇವರೆಂದು ಉಬ್ಬಿ ಮಾತನಾಡಬೇಡವೋ ! ದೇವ ಒಬ್ಬನೇ ಕಾಣಿರೋ ! ಇಬ್ಬರೆಂಬುದು ಹುಸಿನೋಡಾ ! ಕೂಡಲಸಂಗಮದೇವನಲ್ಲದಿಲ್ಲೆಂದಿತ್ತು ವೇದ"[1]

". . . ಶೃತಿಗಳು ನಾಲ್ಕುವೇದವು ಹುಸಿಯದೆ 'ಭರ್ಗೋ ದೇವಸ್ಯ ಧೀಮಹಿ' ಎಂದುದಾಗಿ ಕೂಡಲಸಂಗನಲ್ಲದಿಲ್ಲೆಂದುದು ವೇದ"[2]

1, 2 ಬಸವೇಶ್ವರನ ವಚನಗಳು, ಪುಟ. ೮೧, ೭೮, ೧೨೪.

"... ಕೋಹಂ ಬ್ರಹ್ಮರಂಧ್ರದೊಳಗೆ *ಯತೋವಾಚೋನಿವರ್ತಂತೆ ಅಪ್ರಾಪ್ಯ ಮನಸಾ ಸಹ| ಆನಂದಂ ಬ್ರಹ್ಮಣೋ ವಿದ್ವಾನ್| ನಬಿಭೇತಿ ಕುತಶ್ಚನ[1] ಇಂತೆಂದುದಾಗಿ ಅಗಮ್ಯ ಕೂಡಲಸಂಗಮದೇವನಲ್ಲದೆ ಮತ್ತಾರೂ ಇಲ್ಲ"

ಕಾಶ್ಮೀರದ ತ್ರಿಕಧರ್ಮದ ಪ್ರಭಾವವನ್ನೇನೂ ನಾವು ಅಲ್ಲಗಳೆಯುವುದಿಲ್ಲ. ಅನೇಕ ವಿಚಾರಗಳಲ್ಲಿ ಷಟ್ಸ್ಥಲಸಿದ್ಧಾಂತಕ್ಕೂ ಕಾಶ್ಮೀರದ ಶಿವಾದ್ವೈತಕ್ಕೂ ಹೋಲಿಕೆಗಳಿವೆ. ಕಡೆಗೆ ಯಾವುದನ್ನು ಐಕ್ಯಸ್ಥಲವೆಂದು ಷಟ್ಸ್ಥಲಸಿದ್ಧಾಂತಕಾರರು ಕರೆದಿರುವರೋ ಅದು 'ಸಮಾವೇಶ' ಎಂಬುದಾಗಿ ಕಾಶ್ಮೀರಶೈವದಲ್ಲಿ ನಿರೂಪಿತ ವಾಗಿದೆ. ತಮಿಳುನಾಡಿನ ಅರುವತ್ತುಮೂವರ ಪುರಾತನರ, ತಮಿಳುನಾಡಿನ ಶೈವ ಸಿದ್ಧಾಂತದ, ಪ್ರಭಾವಗಳು ಷಟ್ಸ್ಥಲಸಿದ್ಧಾಂತದ ಮೇಲೆ ಪ್ರಬಲವಾಗಿವೆ. ಆದರೂ ಅದ್ವೈತವೇದಾಂತವು ನೇರವಾಗಿಯೂ ಪ್ರಕಾರಾಂತರವಾಗಿಯೂ ಲಿಂಗಾಯತ ಮತಸಿದ್ಧಾಂತದ ಮೇಲೆ ಪ್ರಭಾವವನ್ನು ಬೀರದೆ ಬಿಟ್ಟಿಲ್ಲ. ಹಿಂದಿನ ಗ್ರಂಥ ಗಳಲ್ಲಿ ವೇದೋಪನಿಷತ್ತುಗಳ ಆಧಾರಗಳನ್ನೂ ಕೊಡುತ್ತ ಬಂದಿರುವುದೇ ಅದಕ್ಕೆ ಸಾಕ್ಷಿ. ಆದುದರಿಂದ ವೀರಶೈವಾಮೃತಮಹಾಪುರಾಣದಲ್ಲಿ[2] ಹಲಗೆಯಾಚಾರ್ಯನು ಹೇಳಿರುವ ವೇದಾಂತ ಸಿದ್ಧಾಂತಗಳೆರಡೂ "ಷಟ್ಸ್ಥಲಾಚಾರ ಪುರುಷಸ್ವರೂಪದ ಪುರುಷನಳ್ತಿಯಿಂದೇ || ಭೂಮಿಯೊಳ್ ಮೆಟ್ಟುತಿಹ ಹೊಂಬಾವುಗೆಗಳೈಸೆ" ಎನ್ನು ವುದು ಹೆಚ್ಚು ಅಂಗೀಕಾರ ಯೋಗ್ಯವೆಂದು ನಾವು ಹೇಳಬೇಕಾಗಿದೆ.

(೫) ವೀರಶೈವ ಮತಚರಿತ್ರೆಯಲ್ಲಿ ಬಸವಣ್ಣನವರ ಮತ್ತು ಅವರ ಕಾಲದ ವಚನ ಕಾರರ ಸ್ಥಾನವೇನು? ಎಂಬುದನ್ನು ವಿಮರ್ಶಿಸಬೇಕಾಗಿದೆ. ಆ ಮತವನ್ನು ಬಸವಣ್ಣ ನವರೇನಾದರೂ 'ವೀರಶೈವ' ಎಂದು ತಮ್ಮ ವಚನಗಳಲ್ಲಿ ಕರೆದಿದ್ದಾರೆಯೆ? 'ಲಿಂಗಾ ಯತ ಮತ' ಎಂದು ಎಲ್ಲಿಯಾದರೂ ಕರೆದಿದ್ದಾರೆಯೆ? ಚೆನ್ನಬಸವ, ಮಹದೇವಿಯಕ್ಕ ಮೊದಲಾದವರ ವಚನಗಳಲ್ಲಿ ಕೆಲವು ಕಡೆ 'ವೀರಶೈವ' ಎಂದು ಬಂದಿದ್ದರೆ ಅದು ಪ್ರಕ್ಷಿಪ್ತವೆ? ಅಥವಾ ಮೂಲದ ಪ್ರಯೋಗವೆ? ಈ ಮತಚರಿತ್ರೆಯಲ್ಲಿ ಬಸವಣ್ಣ ನವರ ಕಾರ್ಯಕಲಾಪಗಳಿಗೆ ಮಹತ್ತರವಾದ ಸ್ಥಾನವಿದೆ. ಆದರೂ ಬಸವಣ್ಣನವರಿಗೆ ಹಿಂದೆ ಏನಿತ್ತು? ಎಂದು ಕೇಳಬೇಕಾಗಿದೆ. ಷಟ್ಸ್ಥಲಸಿದ್ಧಾಂತವೆಂಬುದು ಈಗಿನ ರೂಪದಲ್ಲಿ ಬಸವಣ್ಣನವರಿಗೆ ಹಿಂದೆ ಕಂಡುಬರುವುದಿಲ್ಲವೆಂಬುದು ಒಪ್ಪತಕ್ಕ ಮಾತು. ಹಾಗೆಯೇ ಬಸವಣ್ಣನವರಿಗೆ ಹಿಂದೆ ವೀರಶೈವದ ಕೆಲವು ಮುಖ್ಯ ಲಕ್ಷಣಗಳುಳ್ಳ ಒಂದು

---

* ತೈತ್ತಿರೀಯೋಪನಿಷತ್ತು: ಆನಂದವಲ್ಲಿ, ೨ನೆಯ ಅಧ್ಯಾಯ.

[1] ಬಸವೇಶ್ವರನ ವಚನಗಳು, ಪುಟ. ೮೧, ೭೮, ೧೨೪.

[2] ೬ನೆಯ ಕಾಂಡ, ೬ನೆಯ ಸಂಧಿ, ೭೭ನೆಯ ಪದ್ಯ.

ಪಂಥ ನಾಮಾಂತರದಿಂದ ನಡೆದುಬರುತ್ತಿದ್ದಿತೆಂಬುದೂ ಒಪ್ಪತಕ್ಕದ್ದಾಗಿದೆ. ಶೈವಮತ ಬಹಳ ಪ್ರಾಚೀನವಾದುದು. ಅದರಲ್ಲಿ ಕೆಲವು ಭೇದಗಳೂ ಉಂಟು. ಪ್ರಾಚೀನ ಶೈವಮತದಲ್ಲಿ ವರ್ಣಾಶ್ರಮಗಳಿರಲಿಲ್ಲವೆಂಬುದನ್ನು ಸಖರೆ ಅವರೇ ತಿಳಿಸುತ್ತಾರೆ. ಅರುವತ್ತುಮೂವರು ಪುರಾತನರ ಚರಿತ್ರೆಯನ್ನು ನೋಡಿದರೆ ಭಕ್ತಿಗೆ ಪ್ರಾಶಸ್ತ್ಯವೂ ಸ್ತ್ರೀಯರಿಗೆ ಮುಕ್ತಿಯ ವಿಚಾರದಲ್ಲಿ ಸಮನಾದ ಹಕ್ಕೂ, ಜಾತಿಪಂಗಡಗಳೆಂಬ ಭೇದಭಾವವಿಲ್ಲದಿರುವುದೂ ಕಂಡುಬರುತ್ತವೆ.[1] ವೈದಿಕಮತದ ಪ್ರಾಬಲ್ಯದಿಂದ ಶೈವಮತದಲ್ಲಿ ಕೆಲವು ಮಾರ್ಪಾಟುಗಳಾಗುತ್ತಿದ್ದಾಗ ಈ ಮಾರ್ಪಾಟುಗಳಿಗೆ ಒಳಗಾಗದೆ ಹಳೆಯ ಸಂಪ್ರದಾಯವನ್ನು ವೀರನಿಷ್ಠೆಯಿಂದ ಪಾಲಿಸಿಕೊಂಡು ಬರುತ್ತಿದ್ದ ಒಂದು ಸಣ್ಣ ಪಂಗಡವಿದ್ದಿರಬೇಕೆಂದು ನಾವು ಹೇಳಬೇಕಾಗಿದೆ. ಈ ವೀರನಿಷ್ಠೆಗೆ ಉದಾಹರಣೆಯಾಗಿ ಅವರನ್ನು 'ವೀರಶೈವ'ರೆಂದೇ ತಿಳಿದು ವಚನಕಾರರು ತಮ್ಮ ವಚನಗಳಲ್ಲಿಯೂ ವೀರಶೈವ ಪುರಾಣಕರ್ತೃಗಳು ತಮ್ಮ ಪುರಾಣಗಳಲ್ಲಿಯೂ ಪುರಾತನರ ಮತ್ತು ಕೆಲವು ಶಿವಭಕ್ತರ ಹೆಸರುಗಳನ್ನೂ ಕಥೆಗಳನ್ನೂ ಹೇಳಿರುವರೆಂಬುದು ಸ್ಪಷ್ಟವಾಗಿದೆ. ಬಸವಣ್ಣನವರಾಗಲಿ, ಆಗಿನ ವಚನಕಾರರಾಗಲಿ ತಾವು ಒಂದು ಹೊಸ ಮತವನ್ನು ಸ್ಥಾಪಿಸುತ್ತಿರುವುದಾಗಿ ತಿಳಿಯಲೂ ಇಲ್ಲ, ಹೇಳಲೂ ಇಲ್ಲ, ಕಾರ್ಯಮಾಡಲೂ ಇಲ್ಲ. ಚೆನ್ನಬಸವನು ಸೃಷ್ಟಿಯ ವಿಚಾರ ವರ್ಣಿಸಿರುವುದು ತ್ರಿಕಧರ್ಮದ್ದಕ್ಕಾಗಲಿ, ತಮಿಳುನಾಡಿನ ಶೈವಸಿದ್ಧಾಂತದ್ದಕ್ಕಾಗಲಿ ಹೋಲದೆ ಮಹಾಭಾರತದಲ್ಲಿ ಕಂಡುಬರುವುದರೊಡನೆ ಹೋಲುವುದಾದರೆ ಆ ಸಣ್ಣ ಪಂಗಡದವರ ಸಿದ್ಧಾಂತದ ಮೂಲ ಮಹಾಭಾರತದಲ್ಲಿ ಕಂಡುಬರುವ ಪಾಶುಪತ ಪಂಗಡದಂತೆ ಒಂದುಕಡೆ ಅಡಗಿತ್ತೆಂದೂ ನಿಷ್ಠೂರ ಸಂಜಣಾಚಾರ್ಯನು ವೀರಶೈವರನ್ನು ಮಹಾಪಾಶುಪತರೆಂದು ಅರ್ಥಗರ್ಭಿತವಾಗಿಯೇ ಕರೆದಿರುವನೆಂದೂ ಹೇಳಬೇಕಾಗುತ್ತದೆ. ವಚನಕಾರರು ಮತದಲ್ಲಿಯೂ ಸಮಾಜದಲ್ಲಿಯೂ ಬೆಳೆದುಬಂದಿದ್ದ ವೈಪರೀತ್ಯಗಳನ್ನು ಖಂಡಿಸಿರುವುದು ಕೂಡ ಹಿಂದಿನ ಶುದ್ಧಪಂಥವನ್ನು ಪುನಃ ಸ್ಥಾಪಿಸುವುದಕ್ಕೆ ಎಂದು ಹೇಳಬೇಕಾಗುತ್ತದೆ. ಈ ಜೀರ್ಣೋದ್ಧಾರಕಾರ್ಯವನ್ನು ಹುರುಪಿನಿಂದಲೂ ಪ್ರಗತಿಯ ದೃಷ್ಟಿಯಿಂದಲೂ, ಪ್ರಚಾರದೃಷ್ಟಿಯಿಂದಲೂ ಮಾಡುವಲ್ಲಿ ಅವರು ಕೆಲವು ಹೆಜ್ಜೆ ಮುಂದೆ ಹೋದರೆಂದೂ, ಆಗಲೇ ಪ್ರಚಾರದಲ್ಲಿದ್ದ ಭಕ್ತಿ ಜ್ಞಾನ ಕರ್ಮ ಯೋಗಮಾರ್ಗಗಳನ್ನು ಹಿಂದೊಮ್ಮೆ ಭಗವದ್ಗೀತೆಯಲ್ಲಿ ಶ್ರೀ ಕೃಷ್ಣಪರಮಾತ್ಮನೋ ಮತ್ತೆ ಯಾವ ಮಹಾತ್ಮನೋ ಸಮರಸವಾಗಿ ಹೊಂದಿಸಿ

[1] ಇದೇ ಲಕ್ಷಣಗಳನ್ನು ಶ್ರೀವೈಷ್ಣವರ ಆಳ್ವಾರುಗಳಲ್ಲಿಯೂ, ಮಹಾರಾಷ್ಟ್ರದ ೬೩ ಸಂತರಲ್ಲಿಯೂ ಕಾಣಬಹುದಾಗಿದೆ.

ಮುಕ್ತಿಗೆ ಪ್ರಪತ್ತಿಯನ್ನು ಕಲಶವಾಗಿಟ್ಟಂತೆ ಪುನಃ ಅದೇ ಕರ್ಮ ಭಕ್ತಿ ಜ್ಞಾನ ಮತ್ತು ಯೋಗಮಾರ್ಗಗಳನ್ನೂ ಪ್ರಪತ್ತಿಯನ್ನೂ ಸಮರಸವಾಗಿ ಹೊಂದಿಸಿ ಐಕ್ಯಸ್ಥಲದ ಕಲಶವಿಟ್ಟು ಷಟ್ಸ್ಥಲ ಸಿದ್ಧಾಂತವನ್ನು ಕಟ್ಟಿ, ಭಗವಂತನು ಹೇಗೆ ವಿಶ್ವವ್ಯಾಪಿಯೋ ಭಗವಂತನ ಮತವೂ ಹಾಗೆಯೇ ವಿಶ್ವವ್ಯಾಪಿಯಾಗಿರಲೆಂದು ಸ್ತ್ರೀಪುರುಷರೆಂಬ ಭೇದಗಳನ್ನು ಮಾಡದೆ, ಉಚ್ಚನೀಚಗಳೆಂಬ ತಾರತಮ್ಯ ತೋರದೆ, ಜಾತಿ ಪಂಗಡಗಳೆಂದು ವಿಂಗಡಮಾಡದೆ ಎಲ್ಲರಿಗೂ ಅವಕಾಶಕೊಟ್ಟು ಉದ್ಧರಿಸಲು ಪ್ರಯತ್ನಿಸಿದರೆಂದೂ ಹೇಳಬೇಕಾಗುತ್ತದೆ. ಮೂಲೆಗಳಲ್ಲಿದ್ದ ಗುರು ಲಿಂಗ ಜಂಗಮ ಪ್ರಸಾದ ಪಾದೋದಕ ರುದ್ರಾಕ್ಷ ವಿಭೂತಿ ಮಂತ್ರಗಳನ್ನು ಹೊರಕ್ಕೆ ತಂದು ಅವುಗಳಲ್ಲಿ ಪ್ರಾಣಪ್ರತಿಷ್ಠೆಮಾಡಿ ಒಂದುಕಡೆ ಕೂಡಿಸಿ, ಹೀಗೆ ವ್ಯವಸ್ಥೆಯಿಂದ ಸಜ್ಜುಗೊಳಿಸಿದ ಅಷ್ಟಾವರಣಗಳೆಂಬ ಅಶ್ವಗಳನ್ನು ಹೂಡಿ ಪಂಚಾಚಾರ ಸಾರಥಿಗಳನ್ನು ಸಿದ್ಧಗೊಳಿಸಿ, ಷಟ್ಸ್ಥಲ ರಥವನ್ನು ಮುಮುಕ್ಷುಗಳ ಎದುರಿಗೆ ತಂದು ನಿಲ್ಲಿಸಿದರು. ಅದು ಆಕರ್ಷಕವಾಗಿ ನವೀನವಾಗಿ ಕಾಣುತ್ತಿದೆ.[1] ಬಸವಣ್ಣನವರ ಕಾಲದಲ್ಲಿಯೆ ಈ ಷಟ್ಸ್ಥಲ ಸಿದ್ಧಾಂತ ಈಗಿರುವಂತೆ ರೂಪುಗೊಂಡಿತೆ ಹೇಗೆ? ಇದಕ್ಕೆ ಸಮರ್ಪಕವಾದ ಉತ್ತರವನ್ನು ಕೊಡುವುದು ಕಷ್ಟ. ಮೊದಲಿನ ವಚನಕಾರರು ಸಮಾಜದಲ್ಲಿಯೂ ಮತದಲ್ಲಿಯೂ ಬೆಳೆದುಬಂದಿದ್ದ ವಿಷಮೂಲಗಳನ್ನು ನಿರ್ಮೂಲಮಾಡಿ ಸಾಮಾಜಿಕ ಮತ್ತು ಪಾರಮಾರ್ಥಿಕ ದೃಷ್ಟಿಗಳಿಂದ ನೀತಿ ಸದಾಚಾರ, ನಿಷ್ಠೆ, ಐಕಮತ್ಯ ಮೊದಲಾದುವನ್ನು ಸ್ಥಾಪಿಸಿರುವುದು ಸ್ಪಷ್ಟವಾಗಿ ಕಂಡುಬರುತ್ತದೆ. ಆ ವಚನಕಾರರು ಯಾವ ಕ್ರಮದಲ್ಲಿ ವಚನಗಳನ್ನು ಹೇಳಿದರೆಂಬುದಕ್ಕೂ ಜೋಡಿಸಿದರೆಂಬುದಕ್ಕೂ ತಕ್ಕ ಆಧಾರಗಳು ದೊರೆತಿಲ್ಲವಾದ್ದರಿಂದಲೂ, ಈಗ ದೊರೆತಿರುವ ಹಸ್ತಪ್ರತಿಯ ಅಥವಾ ಮುದ್ರಣದ ಗ್ರಂಥಗಳಲ್ಲಿರುವಂತೆಯೇ ಒಂದು ಪರಕದಚ್ಚಿನಲ್ಲಿ ಅವುಗಳನ್ನು ಅವರು ಹಾಕಿಟ್ಟರೆಂದು ಹೇಳುವುದು ಸಾಧ್ಯವಿಲ್ಲದ್ದರಿಂದಲೂ ಷಟ್ಸ್ಥಲ ಸಿದ್ಧಾಂತದ ಪೂರ್ಣ ಸ್ವರೂಪ ಆಗಲೇ ಬಂದಿರಲಾರದೆಂದು ನಾವು ಅಭಿಪ್ರಾಯಪಡುತ್ತೇವೆ. ವಿನ್ಯಾಸವನ್ನೂ ತಳಹದಿಯನ್ನೂ ಹೆಗ್ಗುರುತುಗಳನ್ನೂ ಹಾಕುತ್ತಿರುವಷ್ಟರಲ್ಲಿಯೇ ಕಲ್ಯಾಣಪಟ್ಟಣದಲ್ಲಾದ ವಿಪ್ಲವದಿಂದ ಕೆಲಸ

---

[1] ಆದರೆ ಅದನ್ನು ಹತ್ತಿ ಉದ್ಧಾರವಾಗಬೇಕಾದ ಜನ ಬಾಗೇವಾಡಿಯ ಬಸವೇಶ್ವರ ದೇವಸ್ಥಾನ, ಕೂಡಲ ಸಂಗಮೇಶ್ವರನ ದೇವಸ್ಥಾನ, ಸೊನ್ನಲಾಪುರದ ಸಿದ್ಧರಾಮೇಶ್ವರ ದೇವಸ್ಥಾನ, ಗುಬ್ಬಿಯ ಚೆನ್ನಬಸವೇಶ್ವರನ ದೇವಸ್ಥಾನ ಮೊದಲಾದ ದೇವಸ್ಥಾನಗಳಲ್ಲಿ ಆರಾಧನೆ ಮಾಡುತ್ತ ಜಾತ್ರೆಗಳನ್ನೂ ರಥೋತ್ಸವಗಳನ್ನೂ ನಡಸುತ್ತಲಿದ್ದಾರೆ. ಈ ರಥಗಳೆಲ್ಲ ಮುಂದೆ ಹೋಗುತ್ತಿವೆ. ಷಟ್ಸ್ಥಲ ರಥ ನವೀನವಾಗಿ ಆಕರ್ಷಕವಾಗಿ, ಏರುವವರಿಲ್ಲದೆ ನಿಂತೇ ಇದೆ.

ನಿಂತುಹೋಯಿತೆಂದೂ ತರುವಾಯ ಬಂದವರು ಆ ಸಾಮಗ್ರಿಗಳನ್ನು ಉಪಯೋಗಿಸಿ, ಸರಿಯಾದ ಜೋಡಣೆಯಿಂದ ಭದ್ರವಾದ ಸುಂದರವಾದ ಸಿದ್ಧಾಂತವನ್ನು ಈಗಿನ ರೂಪದಲ್ಲಿ ಸಿದ್ಧಪಡಿಸಿದರೆಂದೂ ಹೇಳಬೇಕಾಗಿದೆ. ಆದುದರಿಂದ ಲಿಂಗಾಯತ ಮತಚರಿತ್ರೆಯಲ್ಲಿ ಬಸವಣ್ಣನವರ ಸ್ಥಾನವೇನು? ಸಖರೆ ಅವರು "ಬಸವನೇ ಷಟ್ಸ್ಥಲಸಿದ್ಧಾಂತವನ್ನು ಸ್ಥಾಪಿಸಿದವನು. ಬಸವನೇ ಲಿಂಗಾಯತ ಮತಸ್ಥಾಪಕನು" ಎಂದು ಹೇಳುತ್ತಾರೆ.[1] ಒಂದು ದೃಷ್ಟಿಯಿಂದ ಈ ತೀರ್ಮಾನಗಳು ಸರಿ. ಮತ್ತೊಂದು ದೃಷ್ಟಿಯಿಂದ ಬಸವಣ್ಣನವರು ವೀರಶೈವದ ಜೀರ್ಣೋದ್ಧಾರಕರು, ಷಟ್ಸ್ಥಲಕ್ಕೆ ತಳಹದಿಯನ್ನು ಹಾಕಿದವರು.

(೬) ಕೊಲ್ಲಿಪಾಕಿ ಎಂಬುದು ಕಡೂರು ಡಿಸ್ಟ್ರಿಕ್ಟಿನಲ್ಲಿರುವ ಬಾಳೇಹೊನ್ನೂರು—ಬಾಳೇಹಳ್ಳಿ—ಎಂಬುದೇ; ಹಾಗಿಲ್ಲದಿದ್ದರೆ ಅಲ್ಲಿ ರೇಣುಕಾಚಾರ್ಯರ ಪೀಠ ಏಕಿರಬೇಕು? ಎಂದು ಸಖರೆ ಅವರು ಹೇಳುತ್ತಾರೆ.[2] ಇದು ಸಮಂಜಸವಾಗಿಲ್ಲ. ಕೊಲ್ಲಿಪಾಕಿ ಎಂಬುದು ಹೈದರಾಬಾದು ಸಂಸ್ಥಾನದಲ್ಲಿರುವುದೇ ಆಗಬೇಕೆಂದೂ[3] ಬಾಳೇಹೊನ್ನೂರಿನ ಮಠ ರೇಣುಕಾಚಾರ್ಯರಿಂದಲೊ ಅವರ ಶಿಷ್ಯ ಪರಂಪರೆಯಲ್ಲಿ ಒಬ್ಬರಿಂದಲೋ ಸ್ಥಾಪಿತವಾಯಿತೆಂಬ ಸಂಪ್ರದಾಯದ ಹೇಳಿಕೆಯನ್ನು ನಂಬಬಹುದೆಂದೂ ನಾವು ಅಭಿಪ್ರಾಯಪಡುತ್ತೇವೆ. ಪಂಚಾಚಾರ್ಯರೆಲ್ಲ ಬಹುಶಃ ಆಂಧ್ರದೇಶದಲ್ಲಿ ಜನಿಸಿದವರೆಂದೇ ತೋರುತ್ತದೆ.

(೭) ಮಂಗಳವಾಡ ಎನ್ನುವುದು ಕಲ್ಯಾಣಪಟ್ಟಣದ ಪರ್ಯಾಯನಾಮವೆಂದು ಸಖರೆ ಅವರು ತಿಳಿಸುತ್ತಾರೆ.[4] ಇದು ಸರಿಯಲ್ಲ. ಮಂಗಳವಾಡವೇ ಬೇರೆ, ಕಲ್ಯಾಣವೇ ಬೇರೆ. ಹರಿಹರನು ತನ್ನ ರೇವಣಸಿದ್ಧ ರಗಳೆಯಲ್ಲಿ ರೇವಣಸಿದ್ಧನು ಮೊದಲು "ಕಲ್ಯಾಣದ ತೆಲ್ಲಿಗನಪ್ಪ ಕಲ್ಲಿಶೆಟ್ಟಿಯ ಗಾಣದ ಕೊಟ್ಟಿಗೆಗೆ" ಬಂದನೆಂದೂ ಅನಂತರ ಆ ಊರನ್ನು ಬಿಟ್ಟು "ಮಂಗಳವಾಡಕ್ಕೆ ಬಂದು ಪುರದ ರಾಜವೀಧಿಯೊಳ್"

---

[1] "It is already established that prophet Basava, the Prime Minister of Bijjala founded the Lingayat religion. . . . He framed ಷಟ್ಸ್ಥಲ, the technique of ಶಿವಯೋಗ on scientific basis" (ಪುಟ ೬೭೫).

[2] "Kollipaki is the modern Balehonnur, Mysore State, and cannot be otherwise, as it is a well-known pontifical seat or Math of Renukacharya or Revanaradya and his successors" (ಪುಟ ೩೬೮).

[3] ಇದು ನಲ್ಲಗೊಂಡ ಜಿಲ್ಲೆಯಲ್ಲಿದೆ. ಹೈದರಾಬಾದಿನಿಂದ ಓರಗಲ್ಲು ಬೆಜವಾಡಗಳಿಗೆ ಹೋಗುವ ರೈಲು ಮಾರ್ಗದಲ್ಲಿ ಹೈದರಾಬಾದಿನಿಂದ ೬ ನೆಯ ನಿಲ್ದಾಣವಾದ ಆಲೇರು ಎಂಬುದಕ್ಕೆ ಕೆಲವು ಮೈಲಿಗಳ ದೂರದಲ್ಲಿದೆ.

[4] "Mangalwad has been only another (translated) name for Kalyan" (ಪುಟ ೩೯೦).

ನಡೆತಂದನೆಂದೂ ಹೇಳಿದ್ದಾನೆ.[1] ಅಲ್ಲದೆ, ಬಿಜ್ಜಳನ ರಾಜಧಾನಿಗಳಲ್ಲಿ ಮಂಗಳವಾಡವೂ ಒಂದಾಗಿತ್ತು ಎಂದು ಊಹಿಸುವುದಕ್ಕೆ ಶಾಸನಾಧಾರಗಳೂ ಇವೆ.[2]

ಹೀಗೆ ಅಲ್ಲಲ್ಲಿ ಭಿನ್ನಾಭಿಪ್ರಾಯಗಳೂ ಸಣ್ಣಪುಟ್ಟ ದೋಷಗಳೂ ಕಂಡು ಬಂದರೂ ಶೈವಮತದ ಸಂಪೂರ್ಣ ಚರಿತ್ರೆಯನ್ನೂ ಲಿಂಗಾಯತಮತ ಸಿದ್ಧಾಂತವನ್ನೂ ತಿಳಿದುಕೊಳ್ಳುವುದಕ್ಕೆ ಈ ಗ್ರಂಥ ಬಹಳ ಸಹಾಯಮಾಡುತ್ತದೆ. ಇದರಲ್ಲಿ ಶ್ರೀಮರ್ಾ ಸಖರೆಯವರು ವೀರಶೈವ ಮತಕ್ಕೆ ಹಿನ್ನೆಲೆಯನ್ನು ವಿಸ್ತಾರವಾಗಿಯೂ ಬಹುಮಟ್ಟಿಗೆ ಸಮರ್ಪಕವಾಗಿಯೂ ತೋರಿಸಿದ್ದಾರೆ. ಫಾದರ್ ಹೆರಾಸ್ ಅವರು ಮೊಹೆಂಜದಾರೊ ಮತ್ತು ಹರಪ್ಪಗಳಲ್ಲಿಯ ಸ್ಮಾರಕ ಲೇಖನಗಳನ್ನು ಅರ್ಥಮಾಡಿರುವ ಕ್ರಮ ಈಗಾಗಲೆ ತಿಳಿದಿದೆ. ಅದು ತಮಿಳರಿಗೂ ಕನ್ನಡಿಗರಿಗೂ ಹೆಮ್ಮೆಗೆ ಕಾರಣವಾಗಿದ್ದರೂ ಅವರ ಅರ್ಥಕ್ರಮ ಇನ್ನೂ ಹಲವು ಪಂಡಿತರಿಂದ ಅಂಗೀಕಾರವಾಗಿಲ್ಲ. ಸಖರೆ ಅವರು ಹೆರಾಸ್ ಅವರ ಅರ್ಥಕ್ರಮವನ್ನೇ ಸಂಪೂರ್ಣವಾಗಿ ಆಧಾರಮಾಡಿಕೊಂಡು ಪ್ರಾಚೀನ ದ್ರಾವಿಡರ ನಾಗರಿಕತೆಯನ್ನೂ ಮೊಹೆಂಜದಾರೊವಿನ ಭೂಗರ್ಭಶೋಧನೆಯ ಫಲಗಳನ್ನೂ ವಿವರಿಸಿದ್ದಾರೆ. ಶೈವಮತದ ಪ್ರಭೇದಗಳು, ಆಗಮಗಳ ಸಾರ, ಶೈವ ಮತ್ತು ಶಾಕ್ತೇಯ ಮತಗಳ ಹೋಲಿಕೆ ಮತ್ತು ವ್ಯತ್ಯಾಸಗಳು, ಯೋಗದರ್ಶನ, ಪಂಚಾಚಾರ್ಯರ ಸ್ಥಾನಮಾನ ಮೊದಲಾದವನ್ನೆಲ್ಲ ಚೆನ್ನಾಗಿ ವಿವರಿಸಿ ವಿಮರ್ಶೆಮಾಡಿದ್ದಾರೆ. ಅಷ್ಟಾವರಣಗಳು ಷಟ್ಸ್ಥಲ ಮತ್ತು ಪಂಚಾಚಾರ ಇವುಗಳ ಸಂಪೂರ್ಣ ವಿವರಣಗಳನ್ನು ಕೊಟ್ಟಿದ್ದಾರೆ. ಲಿಂಗಧಾರಣ ಚಂದ್ರಿಕೆಗೆ ಬರೆದಿರುವ ಟೀಕೆಟಿಪ್ಪಣಿಗಳೂ ಚೆನ್ನಾಗಿವೆ. ಆದರೆ ಪೀಠಿಕೆ, ಮೊದಲಾದುವನ್ನು ಆತುರಾತುರವಾಗಿ ಬರೆದಂತೆ ಕಾಣುವುದರಿಂದ ಕೆಲವು ವಿಷಯಗಳ ಮೇಲೆ ಸಮಾಲೋಚನೆ ಸಾಲದು ; ಸ್ವಲ್ಪ ದುಡುಕೂ ಪಕ್ಷಪಾತವೂ ಕಂಡುಬರುತ್ತವೆ. ಗ್ರಂಥದ ಮುದ್ರಣವೂ ಆತುರವಾಗಿ ನಡೆದಂತೆ ತೋರುವುದರಿಂದ ಮೂಲ ಟೀಕೆ ಟಿಪ್ಪಣಿಗಳಲ್ಲಿ ಮುದ್ರಣ ಸ್ಖಾಲಿತ್ಯ ಬಹಳ ಹೆಚ್ಚಾಗಿದ್ದು ಗ್ರಂಥವಿರೂಪವಾಗಿದೆಯೆಂದೇ ನಾವು ಹೇಳಬೇಕಾಗಿದೆ. ಆದರೆ ಇವುಗಳನ್ನೆಲ್ಲ ಎರಡನೆಯ ಮುದ್ರಣದಲ್ಲಿ ಸರಿಪಡಿಸಿಕೊಳ್ಳಬಹುದಾಗಿದೆ. ಕನ್ನಡಿಗರಿಗೆ ಹೆಚ್ಚು ಪ್ರಯೋಜನವಾಗುವಂತೆ ಶ್ರೀಮರ್ಾ ಸಖರೆಯವರು ಗ್ರಂಥದ ಮುಖ್ಯಭಾಗಗಳನ್ನಾದರೂ ಕನ್ನಡದಲ್ಲಿ ಬರೆದು ಪ್ರಕಟಿಸುವರೆಂದು ನಾವು ಆಶಿಸುತ್ತೇವೆ.

ಎಂ. ಆರ್. ಶ್ರೀ.

---

[1] ರೇವಣಸಿದ್ಧ ರಗಳೆ : ದ್ವಿತೀಯಸ್ಥಲ.

[2] ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ, ಸಂಪುಟ ೨೬, ಸಂಚಿಕೆ ೨.

ಸಾದರ ಸ್ವೀಕಾರ

೧. **ಸರಲ ಹಿಂದೀ ವ್ಯಾಕರಣ**—ಲೇಖಕರು : ಶ್ರೀಮಾನ್ ಎಂ. ವಿ. ಜಂಬುನಾಥನ್, ಎಂ.ಎ., ಬಿ.ಎಸ್‌ಸಿ.; ಪ್ರಕಾಶಕರು: ಎಂ. ವಿ. ಶೇಷಾದ್ರಿ ಅಂಡ್ ಕೋ, ಬಳೆಪೇಟೆ, ಬೆಂಗಳೂರು ಸಿಟಿ; ಕ್ರೌನ್ ಅ. ೨೪೨; ಬೆಲೆ, ರೂ. ೧-೪-೦.

೨. **ಹಿಂದೀ ಮುಹಾವರೇ**—(ಹಿಂದೀಭಾಷಾ ಸಂಪ್ರದಾಯಗಳು) ಲೇಖಕರು: ಶ್ರೀಮಾನ್ ಎಂ. ವಿ. ಜಂಬುನಾಥನ್, ಎಂ.ಎ., ಬಿ.ಎಸ್‌ಸಿ.; ಪ್ರಕಾಶಕರು: ಎಂ ವಿ. ಶೇಷಾದ್ರಿ ಅಂಡ್ ಕೋ, ಬಳೇಪೇಟೆ, ಬೆಂಗಳೂರು ಸಿಟಿ; ಕ್ರೌನ್ ಅ. ೧೭ ; ಬೆಲೆ, ೧ ಆಣೆ.

೩. **ಅಂತರಗಂಗೆ**—ಕೋಲಾರದ ಗ॥ ಹೈಸ್ಕೂಲಿನ ಪತ್ರಿಕೆ (ಸಂಪುಟ ೨, ಸಂಚಿಕೆ ೧) ಅಕ್ಟೋಬರ್ ೧೯೪೨ ; ಬಿಡಿ ಪ್ರತಿ, ೪ ಆಣೆ.

೪. **ವಚನ ಧರ್ಮಸಾರ**—ಲೇಖಕರು : ಶ್ರೀಮಾನ್ ಎಂ. ಆರ್. ಶ್ರೀನಿವಾಸಮೂರ್ತಿ, ಬಿ.ಎ.; ಮೈಸೂರು ವಿಶ್ವವಿದ್ಯಾನಿಲಯ ಕನ್ನಡ ಗ್ರಂಥಮಾಲೆ ೧೯ ; ಕ್ರೌನ್ ಅ. ೧೬+೨೯೮. ಬೆಲೆ, ೧೨ ಆಣೆ.

೫. **ವಾಗ್ಭೂಷಣ**—ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘದ ತ್ರೈಮಾಸಿಕ ಪತ್ರಿಕೆ, ದಸರೆಯ ಸಂಚಿಕೆ, ೧೯೪೨; ಕಾರ್ಯನಿರ್ವಾಹಕ ಸಂಪಾದಕ : ಶ್ರೀ ಪಾಂಡೇಶ್ವರ ಗಣಪತ ರಾವ; ಡೆಮ್ಮಿ ಅ. ೭೮; ವಾರ್ಷಿಕ ಚಂದಾ, ರೂ. ೧-೮-೦.

೬. **ವೀರೇಶ ಚರಿತೆ**—ಲೇಖಕ : ಮಹಾಕವಿ ರಾಘವಾಂಕ; ಪ್ರಕಾಶಕರು ಮತ್ತು ಸಂಪಾದಕರು : ಕೀರ್ತನ ಕೇಸರಿ ಶ್ರೀಮಾನ್ ಬಿ. ಶಿವಮೂರ್ತಿ ಶಾಸ್ತ್ರಿಗಳು ; ಹುಲಕುಂಟೆ ಮಠ, ತುಮಕೂರು ; ಕ್ರೌನ್ ಅ. ೧೧೨ ; ಬೆಲೆ, ರೂ. ೧-೦-೦.

೭. **ಮೆಡೇಮ್ ಕ್ಯೂರಿ**—ಸಂಗ್ರಹಿಸಿದವರು : ಶ್ರೀಮತಿ ಕೆ. ವಿ. ರತ್ನಮ್ಮ; ಮನೋಹರ ಗ್ರಂಥಮಾಲೆಯ ೫೭ನೆಯ ಕುಸುಮ ; ಕ್ರೌನ್ ಅ. ೧೭೬ ; ಬೆಲೆ, ರೂ. ೧-೪-೦.

೮. **ಸಮಾಜ ವಿಕಾಸಕ್ರಮ**—ಬರೆದವರು : ಶ್ರೀಮಾನ್ ನೆಗಳೂರ ಶ್ರೀನಿವಾಸ; ಮಿಂಚಿನಬಳ್ಳಿಯ ೫ನೆಯ ವರ್ಷದ ೩ನೆಯ ಕುಡಿ; ಕ್ರೌನ್ ಅ. ೧೦ + ೧೫೪; ಬೆಲೆ, ರೂ. ೧-೪-೦.

೯. **ಪ್ರಶಸ್ತಿಸಂಗ್ರಹ**—ಸಂಪಾದಕರು : ಶ್ರೀಮಾನ್ ವಿದ್ಯಾಭೂಷಣ ಪಂಡಿತ ಕೆ. ಭುಜ ಬಲಿಶಾಸ್ತ್ರೀ, ಆರಾ ; ರಾಯಲ್ ಅ. ೨೦೦ + ೨೦ ; ಬೆಲೆ, ರೂ. ೧-೮-೦.

೧೦. **ಕುಲದೀಪಕರು** (ವ್ಯಕ್ತಿ ಚಿತ್ರಗಳು)—ಬರೆದವರು : ಶ್ರೀಮಾನ್ ಸಿದ್ದವ್ವನಹಳ್ಳಿ ಕೃಷ್ಣ ಶರ್ಮ ; ಧಾರವಾಡದ ಲಲಿತಸಾಹಿತ್ಯಮಾಲೆಯ ಮೂರನೆಯ ಕುಡಿ ; ಕ್ರೌನ್ ಅ. ೭೫ ; ಬೆಲೆ, ೧೦ ಆಣೆ.

೧೧. ಮುನಿಸಿಪಾಲಿಟಿಗಳು—ಲೇಖಕರು : ಶ್ರೀಮಾನ್ ಎಚ್. ಕೃಷ್ಣರಾವ್, ಎಂ.ಎ. ; ಮೈಸೂರು ವಿಶ್ವವಿದ್ಯಾನಿಲಯ ಪ್ರಚಾರ ಪುಸ್ತಕಮಾಲೆ ೪೪ ; ಪು. ಸೋ. ೬೧ ; ಬೆಲೆ, ೩ ಆಣೆ.

೧೨. ಹಿಂದೂದೇಶದ ಚರಿತ್ರೆ (ಮೂರನೆಯ ಪುಸ್ತಕ)—ಲೇಖಕರು : ಶ್ರೀಮಾನ್ ಡಾ|| ಕೆ. ಆರ್. ರಾಮಸ್ವಾಮಿ, ಎಂ.ಎ., ಡಿ.ಲಿಟ್, ಎಂ.ಎಡ್ ; ಡೆಮ್ಮಿ ಅ. xviii + ೨೪೮ ; ಬೆಲೆ, ರೂ. ೦-೮-೯.

೧೩. ಶಾಂತಶೃಂಗಾರ ವಿಲಾಸಃ—ಪ್ರಣೇತರು : ಶ್ರೀಮಾನ್ ವಿದ್ಯಾಭೂಷಣ ಪಂಡಿತ ಕೆ. ಭುಜಬಲಿಶಾಸ್ತ್ರೀ, ಆರಾ ; ಸಣ್ಣ ಪುಟಗಳು ೧೫ ; ಬೆಲೆ, "ಸದುಪಯೋಗ"

೧೪. ಹರಿದಾಸರ ಕೃತಿಗಳು (ಸ್ವರಪ್ರಸ್ತಾರ ಸಹಿತ)—ಸ್ವರಸಂಯೋಜಕರು : ವೈಣಿಕವಿದ್ವಾನ್ ಮೈಸೂರು ಎಲ್. ರಾಜಾರಾವ್ ; ಪ್ರಕಾಶಕರು : ಕನ್ನಡಸಾಹಿತ್ಯ ಪರಿಷತ್ತು, ಬೆಂಗಳೂರು ; ಕ್ರೌನ್ ಅ. xvi + ೧೨೬ ; ಬೆಲೆ, ೧೨ ಆಣೆ.

೧೫. **Bengali Literature**—by Annadasankar and Lila Ray; The P.E.N. Books, The Indian Literatures; Publishers: International Book House, Ash Lane, Mahatma Gandhi Road, Bombay; Crown 8vo. xx + 126; Price, Rs. 2.

೧೬. **Kannada for Soldiers**—Printed and published by the Bangalore Kannada Press, Bombay 2; Crown 8vo. 48; Price, Re. 1.

೧೭. **History and Philosophy of Lingayat Religion**—(being an Introduction to) **Lingadharana Chandrika of Nandikeshwara** (with a translation and full notes) by M. R. Sakhare, M.A., T.D. (Cantab); Professor of Sanskrit and Education, Lingaraja College, Belgaum; Demy 8vo. pp. xxiv + 682 + 76 + 104 + 250 + 20 Price, Rs. 15.

೧೮ **A Handbook of Virasaivism**—by S. C. Nandimath, M.A., Ph.D.; with a foreword by Prof. R. D. Ranade, M.A. and published by The Literary Committee, L. E. Association, Dharwar; 1941. Crown 8vo. xv + 268. Price, Rs. 3.

ವಸ್ತುಕೋಶ

ಕಳೆದ ತಿಂಗಳು ಇಪ್ಪತ್ತನೆಯ ತಾರೀಖಿನ ದಿನ ಬೆಂಗಳೂರಿನಲ್ಲಿ ಸೇರಿದ್ದ ಸಕಲ ಸದಸ್ಯರ ಅಧಿವೇಶನದಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿಗೆ ಮುಂದೆ ಹೇಳುವಂತೆ ಸರ್ವಾನುಮತದಿಂದ ಅಧಿಕಾರಿಗಳು ಚುನಾಯಿಸಲ್ಪಟ್ಟರು. ಅಧ್ಯಕ್ಷರು: ಶ್ರೀಮಂತ ಬಸವಪ್ರಭು ರಾಜಾ ಲಖಮಗೌಡ ಸರದೇಸಾಯಿ, ಒ.ಬಿ.ಇ. ಒಂಟಮುರಿ ಅವರು. ಉಪಾಧ್ಯಕ್ಷರು: ರಾಜಸೇವಾಪ್ರಸಕ್ತ ಶ್ರೀಮಾನ್ ಎಂ. ವೆಂಕಟೇಶಯ್ಯಂಗಾರ್ಯರು, ಎಂ.ಎ.; ಕಾರ್ಯದರ್ಶಿಗಳು: ಶ್ರೀಮಾನ್ ಬಿ. ವೆಂಕೋಬರಾಯರು, ಬಿ.ಎ.; ಕೋಶಾಧಿಕಾರಿಗಳು: ಶ್ರೀಮಾನ್ ಡಿ. ಸಿ. ಸುಬ್ಬರಾಯಪ್ಪನವರು, ಬಿ.ಎ., ಬಿ.ಎಲ್., ಇವರನ್ನು ನಾವು ಹೃತ್ಪೂರ್ವಕವಾಗಿ ಅಭಿನಂದಿಸುತ್ತೇವೆ; ಅಪಾರವಾದ ಕಾರ್ಯಗೌರವವುಳ್ಳ ಈ ಗೌರವಾಧಿಕಾರಗಳನ್ನು ಒಪ್ಪಿಕೊಂಡದ್ದಾಗಿ ವಂದಿಸುತ್ತೇವೆ.

ಕನ್ನಡ ಸಾಹಿತ್ಯ ಪರಿಷತ್ತು ಅಖಿಲ ಕರ್ಣಾಟಕಕ್ಕೂ ಸಂಬಂಧಪಟ್ಟ ಏಕಮಾತ್ರ ಸಂಸ್ಥೆ; ಅದರ ಆಗು ಹೋಗುಗಳಲ್ಲಿ ಕನ್ನಡಿಗರೆಲ್ಲರೂ ಆಸಕ್ತರಾಗಿದ್ದಾರೆ. ಅದು

ಕನ್ನಡ ಸಾಹಿತ್ಯ ಪರಿಷತ್ತಿನ ಉಪಾಧ್ಯಕ್ಷರುಗಳು ಮತ್ತು ಪರಿಷತ್ತಿನ ಮುನ್ನಡೆ

ನಿಲ್ಲಲು ಒಂದು ನೆಲೆಯಾದಮೇಲೆ ಶ್ರೀಮಾನ್ ಡಿ. ವಿ. ಗುಂಡಪ್ಪನವರು ಅದರ ಉಪಾಧ್ಯಕ್ಷರಾಗಿ ನಿಂತು ಅದನ್ನು ಬಲಪಡಿಸಿ, ಅದರ ಕಾರ್ಯಕ್ಷೇತ್ರವನ್ನು ಬಹುಮುಖವಾಗಿ ವಿಸ್ತರಿಸಿ ವಿಶ್ರಾಂತಿ ಪಡೆದರು. ಅವರನಂತರ ಜಮಖಂಡಿಯ ಸಾಹಿತ್ಯ ಸಮ್ಮೇಳನದ ಕಾಲದಲ್ಲಿ ಸರ್ವಾನುಮತದಿಂದ ರಾಜಸೇವಾಸಕ್ತ ಶ್ರೀಮಾನ್ ಬಿ. ಎಂ. ಶ್ರೀಕಂಠಯ್ಯನವರು ಉಪಾಧ್ಯಕ್ಷ ಸ್ಥಾನಕ್ಕೆ ಆಯ್ಕೆಯಾಗಿ ಅಧಿಕಾರವನ್ನು ವಹಿಸಿಕೊಂಡು ಅಲ್ಲಿಂದ ಇಲ್ಲಿಯ ವರೆಗೆ ಐದು ವರ್ಷಗಳ ಕಾಲ ಎಡೆಬಿಡದೆ ದುಡಿದು ಪರಿಷತ್ತಿಗೆ ಬಲ ಹಿರಿಮೆಗಳನ್ನೂ, ಪುಷ್ಟಿ ಪ್ರಾಶಸ್ತ್ಯಗಳನ್ನೂ ಗಳಿಸಿಕೊಟ್ಟಿದ್ದಾರೆ. ಪರಿಷತ್ತಿನ ಕಾರ್ಯಕ್ಷೇತ್ರವನ್ನು ನಾನಾ ಮುಖವಾಗಿ ವಿಸ್ತರಿಸಿ, ನಾಡಿನ ಎಲ್ಲ ಜನರೂ ಅದರಲ್ಲಿ ಅಕ್ಕರೆ ಆಸಕ್ತಿ ವಹಿಸುವಂತೆ ಮಾಡಿದ್ದಾರೆ. ಇಂದು ಯಾವೊಂದು ಕಾರ್ಯಸಾಧನೆಯಾಗಬೇಕಾದರೂ ಸುನಿಯೋಜಿತವೂ ಸುನಿಯಂತ್ರಿತವೂ ಆದ ಚಳುವಳಿ ಅತ್ಯಾವಶ್ಯಕವೆಂಬುದನ್ನೂ ಅಂಥ ಚಳುವಳಿಗೆ ವೃತ್ತಪತ್ರವೂ ಉಪನ್ಯಾಸವೇದಿಕೆಯೂ ಬಹು ಮುಖ್ಯವಾದ ಅಂಗಗಳೆಂಬುದನ್ನೂ ಚೆನ್ನಾಗಿ ಮನಗಂಡು, ಅವರು ತಮ್ಮ ಕಾಲದಲ್ಲಿ ಪರಿಷತ್ತಿಗೆ ಅವೆರಡನ್ನೂ ಒದಗಿಸಿ

ಕೊಟ್ಟು ಶಕ್ತಿಸಾಮರ್ಥ್ಯಗಳನ್ನು ನೀಡಿದ್ದಾರೆ. ತಮ್ಮ ಕೊಡುಗೆಯಾಗಿ ಪರಿಷತ್ತಿಗೆ ಅಚ್ಚುಕೂಟವೊಂದನ್ನು ದೊರಕಿಸಿಕೊಟ್ಟು ಕನ್ನಡ ಪ್ರಕಟನೆಗಳಿಗೆ ಬಹಳ ಸಹಾಯ ಮಾಡಿದ್ದಾರೆ. ವರ್ಷಕ್ಕೆ (ನಾಲ್ಕುಸಲ, ಈಗ) ಎರಡುಸಲ ಮಾತ್ರ ಹೊರಡುವ, ಕೇವಲ ಪ್ರೌಢ ಲೇಖನಗಳಿಗಾಗಿಯೇ ಮೀಸಲಾಗಿರುವ, ಸಾಹಿತ್ಯ ಪರಿಷತ್ ಪತ್ರಿಕೆಯೊಂದೇ ಕನ್ನಡದ ಪ್ರಚಾರಕ್ಕೆ ಸಾಲದೆಂದೂ, ಪರಿಷತ್ತಿನ ದಿನಗಟ್ಟಳೆಯ ಕಾರ್ಯಕಲಾಪಗಳನ್ನೂ ನಾಡಿನ ಎಲ್ಲೆಡೆಯ ಕನ್ನಡ ಸುದ್ದಿಗಳನ್ನೂ ತಿಳಿಸುವುದಕ್ಕೆ ವಾರಪತ್ರಿಕೆಯೊಂದು ಆವಶ್ಯಕವೆಂದೂ ಬಗೆದು, ತಾವು ಉಪಾಧ್ಯಕ್ಷಸ್ಥಾನಕ್ಕೆ ಬಂದ ವರ್ಷವೇ "ಕನ್ನಡ ನುಡಿ"ಯನ್ನು ಪ್ರಾರಂಭಿಸಿ ಕಳೆದ ವರ್ಷ ಅವರೇ ಅದರ ಸಂಪಾದಕರೂ ಆಗಿದ್ದು ನಡಸಿಕೊಂಡು ಬಂದರು. ಕನ್ನಡ ಚಳುವಳಿಗೆ ಬರಹ ಎಷ್ಟೋ ಅಷ್ಟೇಮಟ್ಟಿಗೆ ಭಾಷಣವೂ ಆವಶ್ಯಕವೆಂದು ಮನವರಿತು, ಅದಕ್ಕೆ ತಾವೇ ಮೇಲ್ಪಂಕ್ತಿ ಹಾಕಿಕೊಟ್ಟರು. ಕನ್ನಡನಾಡಿನ ಎಲ್ಲೆಡೆಯನ್ನೂ ಮೂಲೆಮೂಲೆಯನ್ನೂ, ಒಂಟಿಯಾಗಿಯೂ ಕೆಳೆಯರೊಡಗೂಡಿಯೂ ಸುತ್ತಾಡಿ, ಭಾಷಣಗಳನ್ನು ಕೊಟ್ಟು ಜನರ ಸ್ನೇಹ ವಿಶ್ವಾಸ ಪ್ರೀತಿ ಗೌರವಗಳನ್ನು ಗಳಿಸಿ ಕನ್ನಡ ಜನರನ್ನು ಎಚ್ಚರಿಸಿ ಹುರಿದುಂಬಿಸಿ ಮತ್ತೆ ಒಂದಾಗಿ ಕಟ್ಟಲು ಶ್ರಮಿಸಿದರು. ಪತ್ರಿಕಾಪ್ರಕಟನೆ ಪುಸ್ತಕಪ್ರಚಾರ ಭಾಷಣಗಳ ಜತೆಗೆ, ಜನಸಾಮಾನ್ಯದಲ್ಲಿ ಅದರಲ್ಲಿಯೂ ಗಡಿನಾಡಿನ ಕನ್ನಡಿಗರಲ್ಲಿ ಮತ್ತು ಶಾಲೆಗೆ ಹೋಗಲು ಸೌಕರ್ಯವಿಲ್ಲದ ಹೆಣ್ಣು ಮಕ್ಕಳಲ್ಲಿ ಕನ್ನಡಭಾಷೆ ಸಾಹಿತ್ಯಗಳ ಪ್ರಸಾರ ವ್ಯಾಸಂಗಗಳಿಗಾಗಿ ತಕ್ಕ ಏರ್ಪಾಟು ಮಾಡುವುದು ಆವಶ್ಯಕವೆಂದು ಯೋಚಿಸಿ, ಅದಕ್ಕಾಗಿ ಸಾಹಿತ್ಯ ತರಗತಿಗಳನ್ನೂ ಪರೀಕ್ಷೆಗಳನ್ನೂ ಏರ್ಪಡಿಸಿ, ಆ ಮೂಲಕ ಸಾವಿರಾರು ಮಂದಿ ಕನ್ನಡ ವಿದ್ಯಾರ್ಥಿ ವಿದ್ಯಾರ್ಥಿನಿಯರನ್ನು ಸಿದ್ಧಗೊಳಿಸಿದರು. ಒಂದು ಜನ ಎಚ್ಚತ್ತು, ಮುನ್ನಡೆದು, ಏಳಿಗೆ ಪಡೆಯಬೇಕಾದರೆ ಆ ಜನದ ಅರೆಪಾಲಾದ ಹೆಣ್ಣುಮಕ್ಕಳೂ ಎಚ್ಚತ್ತು ಮುನ್ನಡೆಯುವುದು ಆವಶ್ಯಕವೆಂಬುದು ಮೊದಲಿನಿಂದಲೂ ಇವರ ದೃಢ ನಂಬಿಕೆ. ಅದಕ್ಕಾಗಿ ಇವರು ತಮ್ಮ ಕೈಯಲ್ಲಾದ ಸಹಾಯವನ್ನೆಲ್ಲ ಮಾಡಿದ್ದಾರೆ. ಪರಿಷತ್ತಿನಲ್ಲಿ ಒಂದು ಮಹಿಳಾಶಾಖೆ ಏರ್ಪಡುವುದಕ್ಕೂ ಅದರ ಚಟುವಟಿಕೆಗಳಿಗೂ ಈ ಮಹನೀಯರೇ ಮುಖ್ಯ ಪ್ರೇರಣಕರ್ತರು. ತನ್ನ ಅಂಗಗಳೆಲ್ಲವೂ ತುಂಬಿ ಬೆಳೆಯದ ಹೊರತು ಪರಿಷತ್ತು ಕೇಂದ್ರದಲ್ಲಿ ಪುಷ್ಟಿಗೊಂಡು ಬಲವಾಗದು ಎಂದು ಅರಿತು, ಅದಕ್ಕಾಗಿ ಕನ್ನಡನಾಡಿನ ಒಂದೊಂದು ಜಿಲ್ಲೆಯನ್ನೂ ಬಲಪಡಿಸಿ, ಅಂಥ ಸುಸಂಘಟಿತ ಜಿಲ್ಲಾ ಸಂಸ್ಥೆಗಳ ಮೂಲಕ ಕೇಂದ್ರ ಸಂಸ್ಥೆಗೆ ಜೀವಶಕ್ತಿಗಳನ್ನು ಹರಿಸಬೇಕೆಂಬುದು ಅವರ ದೊಡ್ಡ ಹಂಬಲಾಗಿತ್ತು. ಅದು ಕಾರ್ಯರೂಪಕ್ಕೆ

ಬರುವ ಮೊದಲೆ ಅವರು ಬಿಡುವುಗೊಳ್ಳಬೇಕಾಗಿ ಬಂದು ಅದು ಮುಂದೆ ಬರುವ ಅಧಿಕಾರಿಗಳ ಮೇಲೆ ಬಿದ್ದ ಭಾರವಾಗಿದೆ.

ಕಳೆದ ಜನವರಿಯಲ್ಲಿ ಈ ಮಹನೀಯರು ವಿಶ್ವವಿದ್ಯಾನಿಲಯದ ಅಧಿಕಾರದಿಂದ ವಿಶ್ರಾಂತಿಗೊಂಡಾಗ, ಇವರ ಹಲವು ಭಾಷೆ ಸಾಹಿತ್ಯಗಳ ದೀರ್ಘ ಪರಿಶ್ರಮ, ತುಂಬುಪಾಂಡಿತ್ಯ, ಹದಗೊಂಡ ಅನುಭವಗಳ ಪ್ರಯೋಜನ ಇವು ವಿಶ್ವವಿದ್ಯಾನಿಲಯಕ್ಕೂ ವಿದ್ಯಾರ್ಥಿ ವೃಂದಕ್ಕೂ ಇನ್ನು ತಪ್ಪಿಹೋಯಿತೆ ಎಂಬ ಕೊರತೆ ಮತ್ತೊಂದು ಬಗೆಯಲ್ಲಿ ತುಂಬಿತು—ಅವರು ಪರಿಷತ್ತಿನ ಮೂಲಕ ಕನ್ನಡಕ್ಕಾಗಿ, ಜನತೆಗಾಗಿ ಸದಾ ಸೇವೆ ಸಲ್ಲಿಸಲು ಪೂರ್ಣ ಬಿಡುವಾಯಿತು ಎಂಬ ದೃಷ್ಟಿಯಿಂದ. ಅವರು ದೇಹಾಲಸ್ಯದ ಕಾರಣ ತಾವು ಉಪಾಧ್ಯಕ್ಷಸ್ಥಾನದಿಂದ ವಿಶ್ರಾಂತಿಪಡೆಯಬೇಕಾಗಿದೆಯೆಂದು ಕೆಲವು ತಿಂಗಳುಗಳಿಂದ ಆಪ್ತ ಮಿತ್ರವರ್ಗದಲ್ಲಿ ಹೇಳುತ್ತಲಿದ್ದರೂ ಆ ಅನಿವಾರ್ಯಪ್ರಸಂಗ ಈಗ ವಾಸ್ತವವಾಗಿ ಘಟಿಸುತ್ತದೆಂದು ಯಾರೂ ನಂಬಿರಲಿಲ್ಲ. ವೈದ್ಯರ ಸಲಹೆಯ ಮೇಲೆ ತಾವು ಬಿಡುವು ಪಡೆಯುವುದು ಅಗತ್ಯವಾಗಿದೆಯೆಂದು ಅವರು ಖಂಡಿತ ಹೇಳಿಬಿಟ್ಟ ಮೇಲೆ ಗತ್ಯಂತರವಿಲ್ಲದೆ ಅವರನ್ನು ಸದಸ್ಯರು ಬಿಟ್ಟುಕೊಡಬೇಕಾಯಿತು. ಅವರು ಬೇಗ ಪೂರ್ಣಾರೋಗ್ಯಹೊಂದಿ ಮತ್ತೆ ಕನ್ನಡದ ಸೇವೆಗೆ ಬಂದು ಮೊದಲ ಹುರುಪಿನಿಂದ ಅನುವಾಗುವಂತೆ ಭಗವಂತನು ಅನುಗ್ರಹಿಸಲೆಂದು ನಾವು ಪ್ರಾರ್ಥಿಸುತ್ತೇವೆ. ಇವರು ದೀರ್ಘಕಾಲ ನಿರ್ವಂಚನೆಯಾಗಿ ಮಾಡಿರುವ ವಿದ್ಯಾದಾನ ದ್ರವ್ಯದಾನಗಳಿಗಾಗಿಯೂ ಕನ್ನಡಕ್ಕೂ ಕನ್ನಡ ಜನಕ್ಕೂ ಗಳಿಸಿಕೊಟ್ಟಿರುವ ಶಕ್ತಿಸಾಮರ್ಥ್ಯಗಳಿಗಾಗಿಯೂ ಪ್ರೇರಣೆ ಪ್ರೋತ್ಸಾಹಗಳಿಗಾಗಿಯೂ ಕನ್ನಡಿಗರು ಈ ಮಹನೀಯರಿಗೆ ಚಿರಋಣಿಗಳಾಗಿದ್ದಾರೆ. ಗಮಕಕಲೆಯ ಅಭಿವೃದ್ಧಿಗಾಗಿ ಒಂದುಸಾವಿರ ರೂಪಾಯನ್ನೂ ಅಚ್ಚುಕೂಟಕ್ಕಾಗಿ ಆರುಸಾವಿರ ರೂಪಾಯನ್ನೂ ಪರಿಷತ್ತಿಗೆ, ಶ್ರೀ ಕೃಷ್ಣರಾಜ ಒಡೆಯರವರ ರಜತಮಹೋತ್ಸವದ ಸ್ಮಾರಕ ಪದಕಕ್ಕಾಗಿ ಒಂದುಸಾವಿರ ರೂಪಾಯನ್ನೂ ಕನ್ನಡ ವಿದ್ಯಾರ್ಥಿಗಳ ವೇತನಕ್ಕಾಗಿ ಐದುಸಾವಿರ ರೂಪಾಯನ್ನೂ ವಿಶ್ವವಿದ್ಯಾನಿಲಯಕ್ಕೆ, ಕೊಟ್ಟಿರುವ ಇವರ ಉದಾರ ದಾನವನ್ನು ನಾಡು ಸದಾ ಕೃತಜ್ಞತೆಯಿಂದ ಸ್ಮರಿಸುತ್ತದೆ. ಇವರ ಶಿಷ್ಯರೂ ಮಿತ್ರರೂ ಇವರ ವಿಷಯದಲ್ಲಿಟ್ಟಿರುವ ಪ್ರೀತಿ ಗೌರವಗಳಿಗೆ ಇವರಿಗೆ ಒಪ್ಪಿಸಿರುವ "ಸಂಭಾವನೆ"ಯೇ ಸಾಕ್ಷಿಯಾಗಿದೆ. ಉಪಾಧ್ಯಕ್ಷಸ್ಥಾನದಿಂದ ಬಿಡವುಗೊಂಡಾಗ ಇವರು ಎದೆಯುಕ್ಕಿ ಆಡಿರುವ ಈ ಮಾತುಗಳನ್ನು ಯಾವ ಕನ್ನಡಿಗನೂ ಮರೆಯುವಂತಿಲ್ಲ.—

ಬೀಳ್ಕೊಡಿಗೆ

ಕನ್ನಡದ ಕೆಲಸದಲ್ಲಿ ನನಗೆ ನೆರವಾದ ಮಾನ್ಯ ಮಿತ್ರರಿಗೆಲ್ಲ ನನ್ನ ಪ್ರೀತಿಯ ವಂದನೆಗಳು.

ಪರಿಷತ್ತಿನ ಉಪಾಧ್ಯಕ್ಷನ ಹೊಣೆಗಾರಿಕೆಯನ್ನು ಇಳುಹುತ್ತ, ಅದನ್ನು ಸರಿಯಾದ ಕೈಯಲ್ಲಿ ಬಿಟ್ಟಿರುತ್ತೇನೆಂದು ಸಂತೋಷಪಡುತ್ತೇನೆ. ಶ್ರೀ. ಮಾಸ್ತಿಯವರಿಗೆ ಜಯವಾಗಲಿ.

ಪರಿಷತ್ತಿನ ನಮ್ಮ ಆಸೆ, ನೋಟ, ಕನಸು ಬಲು ದೊಡ್ಡದು. ಕನ್ನಡದ ಸಾರ್ವಜನಿಕ ವಿದ್ಯಾಪೀಠ, ಹೊಸ ಕರ್ನಾಟಕವನ್ನು ರೂಪಿಸುತ್ತಿರುವ ಕನ್ನಡಮ್ಮನ ಗುಡಿ ಅದು. ಯಾರೊಬ್ಬನ ಸೇವೆಯೂ ಅಲ್ಲಿ ಅಖಿಲ ಸೇವೆಗಿಂತ ಹೆಚ್ಚಾಗದು. ನನ್ನಿಂದಾದಷ್ಟೂ, ದುಡಿದೆನೋ ಇಲ್ಲವೋ ಅನ್ನುವುದು ನನ್ನ ಅಳುಕು.

ಕನ್ನಡಿಗರು ಎಚ್ಚತ್ತಿದ್ದೀರಿ. ಬೇಗ ಒಂದಾಗಿ, ಮುಂದಾಗಿ, ಕರ್ನಾಟಕ ರತ್ನಸಿಂಹಾಸನದ ದಿವ್ಯ ತೇಜಸ್ಸನ್ನು ಎಲ್ಲರೂ ಕೂಡಿ ಬೆಳಸಿ; ನಿಮ್ಮ ಹೆಮ್ಮೆಯ ಒಡವೆಯನ್ನಾಗಿ ಮಾಡಿಕೊಳ್ಳಿ. ಕನ್ನಡ ಬಾವುಟ ಒಂದಾಗಲಿ.

ನನ್ನ ಕನ್ನಡದ ಉರುಬಿನಲ್ಲಿ ಕಾವು ನೋವುಗಳಿಗೆ ಎಡೆಕೊಟ್ಟಿದ್ದೇನೆ. ಕನ್ನಡಕ್ಕಾಗಿ, ಕನ್ನಡ ನಾಡಿಗಾಗಿ. ಹಟಕ್ಕಲ್ಲ, ನಾನು ಕಂಡ ದಿಟಕ್ಕಾಗಿ. ಮರೆತುಬಿಡಿ, ಮನ್ನಿಸಿಬಿಡಿ. 'ನೆನೆಯದಿರಿ ಹಿಂದಿನದನೆಲ್ಲ.'

ಇನ್ನು ನನ್ನ ಇಸಿಯು ಕೆಳೆಯರಿಗೆ, ಹಿರಿಯರಿಗೆ. ಕನ್ನಡ ನಾಡನ್ನು ಸುತ್ತುವುದು ನನಗೊಂದು ಪವಿತ್ರ ಯಾತ್ರೆಯಾಗಿತ್ತು. ಮೈಸೂರಿನಲ್ಲಿ, ಹೊರಗೆ—ಮಡಕೇರಿ ಮೊದಲು ಬೆಳವಡಿ ಕಡೆಯಾಗಿ—ಯಾರ ಹೆಸರನ್ನು ಹೇಳಲಿ, ಯಾರ ಹೆಸರನ್ನು ಬಿಡಲಿ?—ಜೈನರಲ್ಲಿ, ವೀರಶೈವರಲ್ಲಿ, ಮಾಧ್ವರಲ್ಲಿ, ಶ್ರೀವೈಷ್ಣವರಲ್ಲಿ, ಸ್ಮಾರ್ತರಲ್ಲಿ, ಒಕ್ಕಲಿಗರಲ್ಲಿ, ಮುಸಲ್ಮಾನರಲ್ಲಿ, ಕ್ರೈಸ್ತರಲ್ಲಿ—ಗಂಡಸರು ಹೆಂಗಸರು, ಸಾಲೆಯ ಮಕ್ಕಳು—ಎಲ್ಲರೂ ನನಗೆ ಒಳ್ಳೆಯ ಮಾತು ಆಡಿದ್ದೀರಿ; ನಲುಮೆಯ ನಡತೆಯನ್ನು ನಡೆದಿದ್ದೀರಿ; ಬೆನ್ನುತಟ್ಟಿ ಮುಂದೆ ಬಿಟ್ಟಿದ್ದೀರಿ—ಕನ್ನಡದ ಅಣುಗನೆಂದು. ಏನು ಚೆಲುವು ಕನ್ನಡ ನಾಡಿನದು, ಏನು ನಯ ಕನ್ನಡ ಮಕ್ಕಳದು! ನಿಮ್ಮ ಪ್ರೇಮವನ್ನೆಲ್ಲಾ ನನ್ನ ಹೃದಯದಲ್ಲಿ ತುಂಬಿಕೊಂಡಿದ್ದೇನೆ—ಹಿಡಿಯಲಾರದೆ ಅದು ಬಿರಿಯುತ್ತಿದೆ, ದಾಳಿಂಬೆಯ ಹಣ್ಣಿನಂತೆ! ನಾನು ಇದರಲ್ಲಿ ಧನ್ಯ.

ಒಲುಮೆಗಿಂತ ಗೆಲವಿಲ್ಲ. ಒಕ್ಕೂಟಕ್ಕಿಂತ ಬಲವಿಲ್ಲ. ಸಣ್ಣದನ್ನು ದೊಡ್ಡದು ಮಾಡದೆ, ದೊಡ್ಡದನ್ನು ಸಣ್ಣದು ಮಾಡದೆ, ತಾಳ್ಮೆ, ಶಿಸ್ತು, ಅಚ್ಚುಕಟ್ಟು, ಒಕ್ಕೂಟ, ಒಲುಮೆ ಇವು ಕಲೆತರೆ ಕನ್ನಡನಾಡಿನ ಮಣ್ಣು ಹೊನ್ನಾಗುವುದು; ಬಾಳು ಬಾನಾಗುವುದು.

ಧರ್ಮದ ಹೊಸಹುಟ್ಟು, ಭಾರತದ ಬಿಡುಗಡೆ, ಕರ್ನಾಟಕದ ಒಕ್ಕೂಟ, ಕನ್ನಡದಲ್ಲಿ ವಿಶ್ವಸಂಸ್ಕೃತಿ ಇವು ಎಲ್ಲೆಲ್ಲಿ ಮಿಡಿಯುತ್ತಿವೆ ಅಲ್ಲಿ ನಾನೂ ಮಿಡಿಯುತ್ತಿದ್ದೇನೆ. ನನ್ನ ಬಾಳಿಕೆಯಲ್ಲಿ ಮಿಕ್ಕಿರುವ ದುಡಿತವೂ ಇವಕ್ಕೇ.

ನಮಸ್ಕಾರ.

ಬೀಳ್ಕೊಡಿಂ, ಎನಗೆ ಜೀವಾನಂದವಮಾಗಿರ್ದಿರೆಲ್ಲರ್
ಬೀಳ್ಕೊಡಿಂ, ನಾನ್ ಪೋಗಿ ಬರ್ಪೆನ್!,

೨೧—೧೬—೪೨ ನಿಮ್ಮ 'ಕರುಣದ ಶಿಶು'

ಬೆಂಗಳೂರು. **ಬಿ. ಎಂ. ಶ್ರೀಕಂಠಯ್ಯ.**

ಹೀಗೆ ಉಪಾಧ್ಯಕ್ಷಸ್ಥಾನ ಅನಿರೀಕ್ಷಿತವಾಗಿ ತೆರಪಾಗಿ ಮುಂದೆ ದಾರಿ ಕಾಣದಿದ್ದಾಗ ರಾಜಸೇವಾಪ್ರಸಕ್ತ ಶ್ರೀಮಾನ್ ಮಾಸ್ತಿ ವೆಂಕಟೇಶ ಅಯ್ಯಂಗಾರ್ಯರು ದೊಡ್ಡ ಮನಸ್ಸುಮಾಡಿ ಪರಿಷತ್ತಿನ ಸಹಾಯಕ್ಕೆ ಬಂದದ್ದು ಕನ್ನಡಿಗರ ಭಾಗ್ಯ. ಇವರು ತಮ್ಮ ಸರ್ಕಾರಿ ಅಧಿಕಾರದ ಕಾರ್ಯಗೌರವದ ಜತೆಗೆ ಮಿತ್ರರು ಹೊರಿಸಿದ ಈ ಭಾರವನ್ನೂ ಹೊರಲು ಒಪ್ಪಿ ಸದಸ್ಯರ ಸರ್ವಾನುಮತದ ಕೋರಿಕೆಯನ್ನು ನೆರವೇರಿಸಿಕೊಟ್ಟು ಉಪಕಾರಮಾಡಿದ್ದಾರೆ. ಶ್ರೀಮಾನ್ ಶ್ರೀಕಂಠಯ್ಯನವರು ಉಪಾಧ್ಯಕ್ಷರ ಹೊಣೆಗಾರಿಕೆಯನ್ನು ಸರಿಯಾದ ಕಯ್ಯಲ್ಲೇ ಬಿಟ್ಟಿರುತ್ತಾರೆ. ಪರಿಷತ್ತಿನ ಪುಣ್ಯದಿಂದ ಆ ಹೊಣೆಗಾರಿಕೆ ಸರಿಯಾದ ಕಯ್ಯಲ್ಲೇ ಮೊದಲಿನಿಂದ ನಡೆದುಬಂದಿದೆ.—ಕರ್ಪೂರ ಶ್ರೀನಿವಾಸರಾಯರು, ಡಿ. ವಿ. ಗುಂಡಪ್ಪನವರು, ಬಿ. ಎಂ. ಶ್ರೀಕಂಠಯ್ಯನವರು, ಈಗ ಮಾಸ್ತಿ ವೆಂಕಟೇಶ ಅಯ್ಯಂಗಾರ್ಯರು. ಇದಕ್ಕಿಂತ ಹೆಚ್ಚಿನ ಭಾಗ್ಯ ಗೌರವಗಳು ಯಾವದೇಶದ ಯಾವ ಸಂಸ್ಥೆಗೂ ಸಂದಿರಲಾರವು, ಸಲ್ಲಲಾರವು. ವಿದ್ಯೆ, ವಿನಯ, ಸೌಜನ್ಯ, ಸೌಶೀಲ್ಯ, ಸರ್ವತೋಮುಖವಾದ ಸಾಹಿತ್ಯ ಸೇವೆ, ದೇಶವ್ಯಾಪಕ ಕೀರ್ತಿ, ಗೌರವ, ಉನ್ನತ ಅಧಿಕಾರ, ರಾಜಪ್ರಶಸ್ತಿ, ಜನಮನ್ನಣೆ—ಯಾವೊಂದು ದೃಷ್ಟಿಯಿಂದ ನೋಡಿದರೂ ಈ ಸ್ಥಾನಕ್ಕೆ ಶ್ರೀ ವೆಂಕಟೇಶಯ್ಯಂಗಾರ್ಯರವರಿಗಿಂತ ಮೇಲಾದವರು ಬೇರೊಬ್ಬರಿಲ್ಲ. ಇವರ ಉಪಾಧ್ಯಕ್ಷತೆಯಲ್ಲಿ ಪರಿಷತ್ತು ಇನ್ನೂ ಮುಂಬರಿದು ಏಳಿಗೆ ಹೊಂದುವುದೆಂದು ನಮಗೆ ಭರವಸೆಯಿದೆ.

ಅವರು ಈಗಾಗಲೇ "ಪರಿಷತ್ತಿನ ಮುನ್ನಡೆ"ಯನ್ನು ಕುರಿತು "ಕನ್ನಡ ನುಡಿ"ಯ ಮೂರು ಸಂಚಿಕೆಗಳಲ್ಲಿ ಬರೆದಿರುತ್ತಾರೆ. ಅದನ್ನು ಕನ್ನಡ ನಾಡು ನುಡಿಗಳಲ್ಲಿ ಪ್ರೇಮವಿರುವವರೆಲ್ಲರೂ ಮನಸ್ಸಿಗೆ ತಂದುಕೊಂಡು ನಡಸಬೇಕಾಗಿದೆ. ಅವರ ಲೇಖನದಿಂದ ಒಂದೆರಡು ಸೂತ್ರವಾಕ್ಯಗಳನ್ನು ಇಲ್ಲಿ ಎತ್ತಿ ಬರೆದಿದ್ದೇವೆ:—

ಕನ್ನಡದ ಜನ ಉದ್ಧಾರವಾಗುವುದು ಕನ್ನಡದ ಮೂಲಕವೇ. ಕನ್ನಡದ ಕನ್ನಡತನ ಉಳಿಯುವುದಕ್ಕೆ ಬೆಳೆಯುವುದಕ್ಕೆ ಕನ್ನಡಿಗರು ಮೊದಲು ಸಾಧಿಸಬೇಕಾಗಿರುವುದು ಕನ್ನಡ ಜನತೆಯ ಏಕೀಕರಣ. ಎಲ್ಲ ಪ್ರಾಂತದವರೂ ಪರಿಷತ್ತಿಗಾಗಿ ಕೆಲಸಮಾಡಿ ತಮ್ಮದಾದ ಕನ್ನಡನಾಡಿನ ಒಂದೇ ಆದ ಮೂರ್ತರೂಪವನ್ನು ಬೆಳಗಿಸಬೇಕು. ಪರಿಷತ್ತು ಎನ್ನುವುದು ಎಲ್ಲ ಸದಸ್ಯರ ಸಮುದಾಯ. ಕನ್ನಡಿಗನೆಂದರೆ ಕನ್ನಡನಾಡಿನ ವಾಸಿ. ಎಲ್ಲ ವಿಷಯಗಳನ್ನು ಕುರಿತ ವಿದ್ವಾಂಸರೂ ತಮ್ಮ ಜ್ಞಾನವನ್ನು ಕನ್ನಡಭಾಷೆಯ ಮೂಲಕ ಪ್ರಚಾರಪಡಿಸುವುದನ್ನು ಅಭ್ಯಾಸಮಾಡಬೇಕು. ಬರುವ ವರ್ಷದಲ್ಲಿ ತಕ್ಕಷ್ಟು ದೊಡ್ಡ ಊರುಗಳಲ್ಲೆಲ್ಲ ಒಂದೊಂದು ಕನ್ನಡ ಸಂಘ ಏರ್ಪಡುವಂತೆಯಾದರೂ ವ್ಯವಸ್ಥೆ ಮಾಡುವುದು ತುಂಬ ಆವಶ್ಯಕ. ಹಿಂದಿನಿಂದ ನಡೆದುಬಂದು ಅಲ್ಲಲ್ಲಿ ವಾಡಿಕೆಯಾಗಿರುವ ವಿನೋದ ಕಾರ್ಯಕ್ರಮಗಳನ್ನು ಉಜ್ಜೀವನಗೊಳಿಸಿ ಜನತೆಯಲ್ಲಿ ಉಲ್ಲಾಸವನ್ನು ಮೊಳೆಸುವುದು, ಬೆಳಸುವುದು ಈ ಸ್ಥಳೀಯ ಸಂಘಗಳ ಮೊದಲನೆಯ ಕೆಲಸ.

ಪ್ರಾಚ್ಯಲೇಖನಾವಳಿ

The Poona Orientalist—Vol. VI, Nos. 3 and 4, October, 1941 and January, 1942.

'On the present needs of Indian Linguistics'—By S. M. KHATRE.

Journal of Indian History—April and August, 1942.

'Bhaktisāra Yogi and his Philosophy of Religion—Ālwar of Tirumalasai'—By DR. K. C. VARADACHARI.

Journal of the Bihar and Orissa Research Society—Sept., 1942.

'Early History of Vaishnava Faith and Movement in Bengal'—By SUSIL KUMAR DE.

Journal of Sri Venkateswara Oriental Institute—Vol. III, No. 1.

1. 'Sri Kulaśekara's Philosophy of Devotion'—By DR. K. C. VARADACHARI.
2. 'Mudrārākśasa'—By N. AYYASWAMI SASTRY.

Do. Vol. III, No. 2.

1. 'The Philosophy of the Religion of the Ālwārs' (1-3)—By DR. K. C. VARADACHARI.
2. 'Syllogistic Reasoning' (A Comparison of Indian with European Logic)—By N. SUBRAHMANYA SASTRY.
3. 'Bhāmaha'—By N. AYYASWAMI SASTRY.

Journal of the University of Bombay—Vol. X (new series), Part I, September, 1941.

'Mudrārākśasa and Kaumudi Mahōtsava'—By DR. MANKAD.

[Kaumudi Mahōtsava was composed on the occasion of Kalyanavarma's accession. Mudrārākśasa on Chandragupta I's reaccession and Devichandragupta on the occasion of Chandragupta II's accession.]

New Indian Antiquary—Vol. IV, Nos. 5-7.

1. 'The Language of Nakkīrar' (a poet of the 3rd Sangam age)—By CHIDAMBARANĀTH CHETTIYAR.

2. 'A study of personal Pronouns in the South Dravidian languages'—By K. GŌDAVARMA.

Do. Vol. V, No. 9.

'Bhoja's Śringara Prakāśa'—By RAGHAVAN.

The Journal of Oriental Research, Madras—Oct. and Dec., 1940.

1. 'Technical terms in Ashtādhyāyi'—By K. MADHAVA KRISHNA SARMA.
2. 'The works of Abhinavagupta'—By S. R. BĀLASUBRAHMANYAN.
3. 'Tolkāppiyam'—By DR. P. S. SUBRAHMANYA SASTRY.

The Quarterly Journal of the Mythic Society—July, 1942.

'Society and education in Medieval Karnataka'—By A. P. KARMARKAR.

The Jaina Antiquary—Vol. VIII, No. 11.

1. 'Nārāyanas, Pratinārāyanas and Balabhadrās' (contd.)—By DR. HARISATYA BHATTACHARYA.
2. 'Magic and Miracle in Jaina Literature'—By KALIPĀDAMITRA.
3. 'Prakrit Studies' (Their latest progress and future)—By DR. A. N. UPADHYE.

Journal of the Andhra Historical Research Society—Vol. VIII, Parts 3 and 4, 1942.

1. 'The Pasupatha and other Saiva Schools of Philosophy'—By V. APPA RAO.
2. 'Jainism in Andhradesa'—By B. V. KRISHNA RAO.

ಲಿಂಗಾಯತ ವಿದ್ಯಾಭಿವೃದ್ಧಿಸಂಸ್ಥೆಯ ಸಾಹಿತ್ಯಸಮಿತಿ ಪತ್ರಿಕೆ—ಅಕ್ಟೋಬರ್, ೧೯೪೨.

ಶೂನ್ಯಸಂಪಾದನೆ—ವೀರಭದ್ರಪ್ಪ ಕೊಪ್ಪಳ.



ಶ್ರೀಮಾನ್ ಹಸೂಡಿ ವೆಂಕಟಶಾಸ್ತ್ರಿಗಳು

(ಶಿವಮೊಗ್ಗದ ಕರ್ಣಾಟಕ ಸಂಘದ ಕಟ್ಟಡಕ್ಕೆ ಮೂವತ್ತು ಸಾವಿರ ರೂಪಾಯಿಗಳನ್ನು
ದಾನಮಾಡಿದ ಕನ್ನಡದ ಅಭಿಮಾನಿಗಳು)

—ಪಡಿಯಚ್ಚು, ಕನ್ನಡ ಸಾಹಿತ್ಯಪರಿಷತ್ತಿನ ಕೃಪೆಯಿಂದ

ಪ್ರಬುದ್ಧ ಕರ್ಣಾಟಕ

ಚಿತ್ರಭಾನು ಸಂವತ್ಸರ — ೯೪ — ಕಾಮನ ಸಂಚಿಕೆ

ಬಾಲ್ಯ

ಎಳೆಯತನದಲಿ ನಾನು ಎತ್ತ ತಿರುಗಿದರತ್ತ
ಜಗವೆ ಕಣ್ದೆರೆದಿತ್ತು ಮೋಹತೆಯ ಬೀರಿ;
ಹೊಳೆ, ಬಯಲು, ಗಿರಿ, ಕಾನು—ಎಲ್ಲ ಬೆಳಕೆಯ ನೋಟ—
ಸೊಗದಿ ಮೆರೆದುವು ಸುತ್ತ ಸಗ್ಗ ಸವಿದೋರಿ.
ಕನಸೆ ಸೊಗಸದು ಒಂದು ನನಸದಾಗಿಯೆ ಬಂದು
ಕುಣಿಸುತಿದ್ದಿತು ಎನ್ನ ಮನಕೊಸಗೆ ತಂದು.
ಜನದೇವಿ ಕೈಬೀಸಿ ಕರೆದು ನಸುನಗೆ ಸೂಸಿ
ಜನದದಿಂದಾಡಿದಳು ಎನ್ನೊಡನೆಯಂದು.

ಕಾಣೆ, ಅದರದೇನೊ! ಸುತ್ತ ಕಣ್ಣನು ಸುಳಿಸೆ
ಮೊದಲ ಸವಿ ತೋರದಿದೆ ಎನ್ನ ಮನಕಿಂದು.
ತಾಣವಾವುದು ನನಗೆ ಮೊದಲು, ಹೊಳೆಬಳಿಯಲ್ಲಿ,
ಮುದವನೂಡಿಸುತಿತ್ತೊ, ಅದೆ—ಹೃದಯ ಬಂಧು!—

ಮುನ್ನಂತೆ ಹೊಳೆ ಜಾರಿ ಜೋಗುಳವ ಹಾಡಿರಲು
ಬೆಳೆದ ಮನಕಿಂದೇನೊ ತಾ ಸೊಗಸದಿಹುದು.
ಬನ್ನಬಡುತಿಹ ಮನಕೆ ತಣ್ಪನೊಡರಿಸುತಿದ್ದ
ಬಳಿಯ ಈ ಮಳಲೊಟ್ಟು ಇಂದೇಕೊ ತಗದು.

ಮುನ್ನಂತೆ ಮಳೆಬಿಲ್ಲು ಕಾರಮುಗಿಲೊಡಲಲ್ಲಿ
ಬಣ್ಣಬಣ್ಣವ ಬಳಿದು ನಿಲ್ಲುವುದು ಮಣಿದು;
ಹೊನ್ನಕಿರಣದಿ ಮಿಂದ ರತ್ನರಸದಾ ಬುಗ್ಗೆ
ಮುನ್ನಂತೆ ಬೈಗಿನಲಿ ಚಿಮ್ಮುವುದು ನಗೆದು;
ರಂಗುರಂಗನು ಬೀರಿ ಕುಸುಮಗಳ ಪರಿಷತ್ತು
ಕಣ್ಗೆ ಹಬ್ಬವ ತಹುದು ದಳಗಳನು ತೆರೆದು;
ಭೃಂಗಬಳಗವು ಬಂಡನುಂಡು ಝೇಂಕರಿಸಿರಲು
ಸುಳಿಯುವುದು ತಣ್ಣೆಲರು ಮನಕಿಂಬನೆರೆದು.

ಬೆಂಗದಿರನುದಿಸುವನು ಕಮಲಿನಿಗೆ ಮೊಗದೆರೆದು
ಕುಮುದಿನಿಗೆ ಮೊಗಬಿಗಿದು ಬೆಳುಬೆಳಗಿನಲ್ಲಿ;
ತಂಗದಿರನೈತಹನು ಕುಮುದಿನಿಗೆ ಮೊಗದೆರೆದು
ಕಮಲಿನಿಗೆ ಮೊಗಬಿಗಿದು ಚೆಲುರಜನಿಯಲ್ಲಿ;
ದೂರದೂರದಿ ನೆಗೆವ ನೀರಬೀಳಿಂದಿಗುಂ
ಬೀರುತ್ತ ರಮ್ಯತೆಯು ಮುನ್ನಂತೆ ಮನಕೆ
ತೋರುತಿಹುದಾದರೂ ಏನೊ ಶೋಭೆಯದೊಂದು
ಹಾರಿಹುದು—ಇಂದಿರದೆ—ತಿರೆಯಿಂದ ದಿವಕೆ!

ಜಿ. ಎಸ್. ಶಾಮಣ್ಣ.

ಗೀತಗೋವಿಂದ

ಪ್ರಪಂಚದ ಮುಕ್ಕಾಲುಪಾಲು ಕಾವ್ಯಗಳೆಲ್ಲಾ ಶೃಂಗಾರ ರಸವನ್ನು ಪ್ರತಿಪಾದಿಸುತ್ತವೆ. ಅವುಗಳಲ್ಲಿ ಗೀತಗೋವಿಂದವು ಒಂದು ಉತ್ತಮವಾದ ಕಾವ್ಯ—ಗೀತಕಾವ್ಯ. ಆಸೇತುಹಿಮಾಚಲ ಪರ್ಯಂತ ಈ ಗೀತಗಳು ಪ್ರಸಿದ್ಧವಾಗಿವೆ. ಕನ್ನಡ ನಾಡಿನಲ್ಲಿ ಜೈಮಿನಿಭಾರತವು ಹೇಗೆ ಜನಪ್ರಿಯವೋ ಹಾಗೆ ಇವು ಇಡೀ ಭರತವರ್ಷದಲ್ಲಿಯೇ ವಿದ್ವಾಂಸರ, ಕವಿಗಳ, ಗಮಕಿಗಳ ಚೇತೋಹಾರಿಯಾಗಿವೆ. ಪೂರ್ವದಲ್ಲಿ ಒಂದು ವಿದ್ವದ್ಗೋಷ್ಠಿ, ಒಂದು ಉತ್ಸವ, ಒಂದು ಹಬ್ಬ, ಹವ್ಯ-ಕವ್ಯಗಳೆಂದರೆ ಅದರ ಮುಖ್ಯ ಅಂಗವಾಗಿ ವಿನೋದವಿರುತ್ತಿತ್ತು. ನರ್ತನ, ಸಂಗೀತ, ಆಟಗಳು ವಿನೋದದಲ್ಲಿ ಮುಖ್ಯವಾದುವು. ಈಗ ನರ್ತನವು ಇಂತಹ ಸಂದರ್ಭಗಳಲ್ಲಿ ಮರೆಯಾಗಿದ್ದರೂ ಹಲವು ಶ್ರೀಮಂತರ ಮತ್ತು ಅರಸುಗಳ ಮನೆಗಳಲ್ಲಿ ನಡೆಯುವ ಮದುವೆಗಳಲ್ಲಿಯೂ ಕೆಲವೆಡೆಗಳಲ್ಲಿ ರಂಗುಹಬ್ಬದಲ್ಲಿಯೂ ಇದು ಅನೂಚಾನವಾಗಿ ನಡೆದುಕೊಂಡು ಬಂದಿರುವ ಪದ್ಧತಿ. ನರ್ತನದಲ್ಲಿ ಚೂರ್ಣಿಕೆಯನ್ನೋ ಅಷ್ಟಪದಿಯನ್ನೋ ಹಾಡುವ, ಅಭಿನಯಿಸುವ, ಅಭ್ಯಾಸ ಸಂಪ್ರದಾಯವಾಗಿ ಬಂದಿದೆ. ಈ ಅಷ್ಟಪದಿಗಳು ಗೀತಗೋವಿಂದದಿಂದ ಆರಿಸಿದವು.

ಭಕ್ತಾಗ್ರಣಿಗಳಲ್ಲಿ ಶ್ರೇಷ್ಠನಾದ ಜಯದೇವ ಕವಿಯಿಂದ ರಚಿತವಾದುದು ಈ ಕಾವ್ಯ. ಶ್ರೀಕೃಷ್ಣಜನ್ಮಖಂಡವೆಂಬ ಗ್ರಂಥದಿಂದ ಜಯದೇವ ಕವಿಯು ಪ್ರೇರಿತನಾಗಿ ಗೀತಗೋವಿಂದವನ್ನು ರಚಿಸಿದನೆಂದು ಕೆಲವರು ಅಭಿಪ್ರಾಯಪಡುತ್ತಾರೆ. ಇದು ಇನ್ನೂ ಇತ್ಯರ್ಥವಾಗಿಲ್ಲ. ಈ ಕಾವ್ಯವು ಸುಂದರವಾದ ಸೊಗಸಾದ, ಭಾವಗೀತವಾಗಿದೆ; ಇದನ್ನು ಓದಿ, ಕೇಳಿ, ಒಂದೆಡೆ ಗೀರ್ವಾಣಶಬ್ದ ಭಾಂಡಾಗಾರದ ಮೃದುಪದ ರಚನೆ ಕವಿಚಮತ್ಕಾರ ಅಲಂಕಾರ ಸರಣಿ ಇವುಗಳಿಗೆ ತಲೆದೂಗಿ ಭಲೆ ಎಂದು ರಸಿಕರು ನಲಿದರೆ, ಇನ್ನೊಂದು ಕಡೆ ಲೀಲಾಮಾನುಷ ವಿಗ್ರಹನಾದ ಶ್ರೀ ಕೃಷ್ಣಪರಮಾತ್ಮನು ಮೆರೆದ ಲೀಲೆಗಳನ್ನು ನೆನೆದು ಕಣ್ಣೀರುಮಿಡಿದು ಆನಂದದಿಂದ ಸಾಮಾನ್ಯ ಜನರು ಮೈಮರೆಯುತ್ತಾರೆ. ಶೃಂಗಾರಶೇಖರನಿಂದ ಹಿಡಿದು ವೇದಾಂತಕೇಸರಿಯ ವರೆಗೆ ಎಲ್ಲರಿಗೂ ಮೆಚ್ಚುಗೆಗೆ ಪಾತ್ರವಾದ ಇಂಥ ಗ್ರಂಥಗಳು ಸಂಸ್ಕೃತದಲ್ಲಿ ಅಪರೂಪ.

"ಕೃಷ್ಣನು ರಾಧೆಯನ್ನು ಬಿಟ್ಟು ಹೊರಟುಹೋಗಿದ್ದಾನೆ. ಇರುವಂತಿಗೆಯಂತೆ ಸುಕುಮಾರಿಯಾದ ರಾಧೆಯು ವಿರಹದಿಂದ ತಪ್ತಳಾಗಿ ವಸಂತ ಋತುವಿನಲ್ಲಿ ವನದಲ್ಲಿ

ಸಂಚರಿಸುತ್ತಿದ್ದಾಳೆ. ಬರಬರುತ್ತಾ ಅವಳಿಗೆ ಅಗಲಿಕೆಯ ನೋವು ಹೆಚ್ಚುತ್ತಿದೆ. ವ್ಯಥೆಪಡುತ್ತಿರುವ ಆಕೆಯನ್ನು ಸಖಿಯು ಸಮಾಧಾನಪಡಿಸುತ್ತ ಹೀಗೆ ಹೇಳುತ್ತಾಳೆ: 'ಲಲಿತ ಲವಂಗ ಲತೆಗಳ ಸ್ಪರ್ಶದಿಂದ ಕೋಮಲವಾದ ಮಲಯಾನಿಲವು ಬೀಸುತ್ತಿದೆ. ದುಂಬಿಗಳ ಝೇಂಕಾರದಿಂದ, ಕೋಗಿಲೆಗಳ ಕೂಜನದಿಂದ, ತುಂಬಿದ ಬಳ್ಳಿಮಾಡಗಳಿವು. ಮಾರ್ಗದಲ್ಲಿರುವ ಪಗಡೆ ಮರಗಳು ಹೂಗೊಂಚಲುಗಳಿಂದ ಅಳಿಗಳು ಮೊರೆಯುತ್ತಿರಲು ಪ್ರಲಾಪಿಸುವ ವಧೂಜನದಂತಿವೆ. ನಾಗಕೇಸರ ಪಾಟಲೀ ಸುಮಗಳು ಕುಸುಮ-ಶರಗಳು. ಹೊಂಗೆಯ ಎಳೆದಳಿರೂ ಮುತ್ತುಗದ ಹೂವೂ ಯುವತಿಯರ ಹೃದಯವನ್ನು ಸೀಳುತ್ತಿವೆ. ತುಂಬುಮೊಗ್ಗಿನಿಂದ ಮಾಧವೀಲತೆಯು ಚೂತವೃಕ್ಷವನ್ನು ಆಲಂಗಿಸಿಕೊಂಡಿರುವುದು. ಯಮುನಾ ನದಿಯ ನೀರಿನಿಂದ ಪವಿತ್ರವಾದ ಬೃಂದಾವನದಲ್ಲಿ ಗೋಪಿಯರೊಡನೆ ಈ ವಸಂತದಲ್ಲಿ ಕೃಷ್ಣನು ಕ್ರೀಡಿಸುತ್ತಿರಬಹುದು.' ರಾಧೆಯು ಸಖಿಯ ಕೈಯನ್ನು ಹಿಡಿದು ಮುಂದೆ ನಡೆಯುತ್ತಾಳೆ. ಗೋಪಿಯರೊಡನಿರುವ ಕೃಷ್ಣನನ್ನು ಅವರಿಬ್ಬರೂ ಕಾಣುತ್ತಾರೆ. ಆತನು ರಾಸ ಕ್ರೀಡಾಮಗ್ನನಾಗಿರುವನು. ಅಸೂಯೆಗೊಂಡು ರಾಧೆಯು ಒಂದು ಲತಾಕುಂಜದಲ್ಲಿ ಅಡಗಿಕೊಳ್ಳುವಳು. 'ಸಖಿ! ಕೃಷ್ಣನು ನನ್ನನ್ನು ಳಿದು ಆ ಗೋಪಿಯರಲ್ಲಿಯೇ ಮೋಹಗೊಂಡಿರುವನು; ಆದರೂ ನನ್ನ ಚಪಲಚಿತ್ತವು ಗುಣಗಣಿಯಾದ ಆ ಕೊಂಕಿದ ಶಿರದ ಮುರಳೀಧರನನ್ನೇ ಸ್ಮರಿಸುತ್ತಿದೆ. ಹೇಗಾದರೂ ಮಾಡಿ ಆತನನ್ನು ಸೇರುವಂತೆ ಮಾಡು' ಎನ್ನುತ್ತಾಳೆ. ಇತ್ತಲಾಗಿ ರಾಧೆಯ ನೆನಪು ಬಂದು ಮಾಧವನು ವ್ರಜ ಸುಂದರಿಯರನ್ನುಪೇಕ್ಷಿಸಿ ಆ ದೇವಿಯನ್ನು ಅಲ್ಲಿ ಇಲ್ಲಿ ಹುಡುಕುತ್ತಾನೆ. ಅವಳು ಎಲ್ಲಿಯೂ ಇಲ್ಲ. ಆದ್ದರಿಂದ ಕಾಳಿಂದೀನದಿಯ ದಡದಲ್ಲಿರುವ ಹೊದರಿನಲ್ಲಿ ತಲೆಯ ಮೇಲೆ ಕೈಯಿಟ್ಟು ಕುಳಿತುಬಿಡುತ್ತಾನೆ. ಮುಖದಲ್ಲಿ ಬೆವರು ಹನಿಗಳು! 'ಗೊಲ್ಲರ ಹುಡುಗಿಯರೊಡನೆ ವಿಹರಿಸುತ್ತಿದ್ದ ನನ್ನನ್ನು ಕಂಡು ರಾಧೆಯು ಮುನಿಸಿನಿಂದ ಹೊರಟುಹೋದಳು. ಅವಳಲ್ಲಿ ತಪ್ಪುಮಾಡಿದ ನಾನಾದರೂ ಅವಳನ್ನು ತಡೆಯಲಿಲ್ಲ. ಪುನಃ ವಿಪ್ರಯೋಗದಿಂದ ತಪ್ತಳಾದ ಆ ನನ್ನ ಪ್ರೇಯಸಿಯು ಇನ್ನು ನನಗೆ ಒಲಿಯುವಳೆ? ಇಲ್ಲ; ಇಲ್ಲ!' ಎನ್ನುತ್ತಿದ್ದಾನೆ. ಭಯಕಾತರನಾದ ಮಾಧವನು ಉನ್ಮತ್ತನಾಗಿರುವುದನ್ನು ತಿಳಿದು ಅಲ್ಲಿಗೆ ಬಂದ ರಾಧೆಯ ಸಖಿಯು ತನ್ನ ಕೆಳದಿಯು ಈ ವಸಂತ ಋತುವಿನಲ್ಲಿ ಅವನ ವಿರಹದಿಂದ ಬಹುಕಾಲ ಜೀವಿಸಿರಲಾರಳೆಂದೆನ್ನುವಳು. ರಾಧೆಯನ್ನು ಸಮಾಧಾನಪಡಿಸಿ ಅಲ್ಲಿಗೆ ಕರೆದುಕೊಂಡು ಬರಬೇಕೆಂದು ಕೃಷ್ಣನು ಬೇಡುವನು. ಅವಳು ಸುಮಕೋಮಲೆ; ಮನ ನೊಂದು ದೇಹ ಕುಂದಿದೆ. ಒಂದು ಹಜ್ಜೆಯನ್ನೂ ಮುಂದಿಡಲಾರಳು. ಕೃಷ್ಣನೇ ಇಲ್ಲಿಗೆ ಒಂದು ಹಜ್ಜೆ ಬರಬಾರದೇ

ಎಂಬುದು ಅವಳ ಸೂಚನೆ. ಕತ್ತಲೆ ಕಳೆದು ಚಂದ್ರೋದಯವಾಗಿದೆ. 'ಅಯ್ಯೋ! ನಾನು ಸಖಿಯ ಮಾತಿಗೆ ಮರುಳಾದೆ. ನೀನು ಏಕೆ ಅವನನ್ನು ಜತೆಯಲ್ಲಿ ಕರೆತರಲಿಲ್ಲ?' ಎನ್ನುವಳು ರಾಧೆ. ಎಲ್ಲೋ ಯಾವ ಸುಂದರಿಯ ಜತೆಗೋ ಹೋಗಿರುವನೆಂದೇ ಆ ಸಖಿಯರಿಬ್ಬರ ಊಹೆ—ಆ ಸುಂದರಿಯು ಪುಣ್ಯವಂತಳು. ಅಂತೂ ಇರುಳು ಕಳೆಯಿತು. ಬೆಳಗ್ಗೆ ಅತ್ಯಂತ ವಿಧೇಯನಾದ ಕೃಷ್ಣನು ರಾಧೆಗೆ ಮನಕರಗುವ ಮಾತು ಹೇಳಿದರೂ ಪ್ರಯೋಜನವೇನು? ಅಸೂಯೆಯಿಂದಲೂ ಕೋಪದಿಂದಲೂ ರಾಧೆಯು 'ಕೈತವದ ನುಡಿಗಳು ಸಾಕು! ನನ್ನ ಮುಂದೆ ನಿಲ್ಲಬೇಡ. ನಿನ್ನ ಪ್ರಿಯರಮಣಿಯನ್ನನು ಸರಿಸು ಹೋಗು. ನಿನ್ನನ್ನು ನೋಡಿದರೆ ನನಗೆ ನಾಚಿಕೆಯಾಗುತ್ತದೆ' ಎಂದು ನಿಂದಿಸುತ್ತಾಳೆ. ಕೃಷ್ಣನು ಆಗ ಹಿಂತಿರುಗುವನು. ಸಖಿಯು ತಾನಾಗಿ ಒಲಿದು ಬಂದಿರುವ ಸ್ವಾಮಿಯಲ್ಲಿ ಕೋಪಮಾಡಬೇಡವೆಂದು ಎಷ್ಟು ಹೇಳಿದರೂ ರಾಧೆ ಕೇಳುವುದಿಲ್ಲ. ಸಾಯಂಕಾಲವಾಗುತ್ತ ರಾಧೆಗೆ ಕಡುಕೋಪ! ನಿಡುಸುಯ್ಲು! ಆ ಪ್ರದೋಷವೇಳೆ ಕೃಷ್ಣನು ವಿವಿಧ ಅನುನಯಗಳಿಂದ ದೇವಿಯನ್ನು ಸಮಾಧಾನ ಪಡಿಸುವನು. ಸಖಿಯು ದೇವಿಯನ್ನು ಸಿಂಗರಿಸಿ ಬಳ್ಳಿಮನೆಗೆ ಕರತರಲು, ಬಾಗಿಲಿನಲ್ಲಿ ನಿಂದ ರಾಧೆಗೆ ನಾಚಿಕೆಯಾಗುವುದು. ಆಗ ಅವಳಿಗೆ ಕಿಂಚಿತ್ ಕಂಪನ; ಕೊಂಚ ಬೆಮರು; ಸ್ವಲ್ಪ ಕಣ್ಣೀರು. ಆನಂದಿತಳಾದ ರಾಧೆಯು ಒಳಕ್ಕೆ ಬರಲು ಹುಸಿನಗುವ ಕೆಳದಿಯರು ತಲೆ ಕೆರೆಯುತ್ತಾ ಹೊರಟುಹೋಗುವರು. ನಲ್ಲನಲ್ಲೆಯರು ಪ್ರೇಮ ಸಲ್ಲಾಪಗಳಲ್ಲಿ ಭಾಗಿಗಳಾಗುವರು"—ಇದಿಷ್ಟು ಕಾವ್ಯದಲ್ಲಿ ಹೇಳಿರುವುದು.

ಜಯದೇವನು ಅದೃಷ್ಟವಂತ. ಅವನಿಗೆ ಅನುಕೂಲಳಾದ ಹೆಂಡತಿ ಇದ್ದಳು. ದಾಂಪತ್ಯವು ಸುಖಮಯವಾಗಿತ್ತು. ಕವಿಯ ಜೀವನವೇ ಈ ಕಾವ್ಯದಲ್ಲಿ ಒಂದು ಚಿತ್ರವನ್ನು ತಾಳಿದೆ ಎಂದರೆ ತಪ್ಪಾಗದು.

ವಾಗ್ದೇವತಾಚರಿತಚಿತ್ರಿತಚಿತ್ತಸದ್ಮಾ
ಪದ್ಮಾವತೀಚರಣಚಾರಣಚಕ್ರವರ್ತೀ |
ಶ್ರೀ ವಾಸುದೇವರತಿಕೇಳಿಕಥಾಸಮೇತ
ಮೇತಂ ಕರೋತಿ ಜಯದೇವಕವಿಃ ಪ್ರಬಂಧಂ ||

ಈ ಮೇಲಣ ಶ್ಲೋಕದಿಂದ ಅದನ್ನು ಊಹಿಸಬಹುದು. ಸೌಂದರ್ಯವನ್ನು ಕಾಣುವ ಒಳಗಣ್ಣು, ಒಲುಮೆಯ ಸ್ವಾರ್ಥತ್ಯಾಗ, ದೈವಭಕ್ತಿ, ಲೀಲಾಜಾಲವಾಗಿ ಓಡುವ ಕಾವ್ಯ ಹೊಸಲಿನ ಶಕ್ತಿ, ಇವೆಲ್ಲವೂ ಈ ಕವಿತಾಗುಚ್ಛದ ಗುಣಗಳು. ಹರಿ ಸ್ಮರಣೆಯಲ್ಲಿಯೂ ವಿಲಾಸಕಥೆಗಳಲ್ಲಿಯೂ ಮನಸ್ಸು ಕುತೂಹಲಪಟ್ಟರೆ ಆಗ ಮಧುರ ಕೋಮಲ ಕಾಂತ ಪದಾವಳಿಯ ಜಯದೇವ ಸರಸ್ವತಿಯನ್ನು ಕಾಣಬೇಕಂತೆ!

ಇಷ್ಟು ಸೊಗಸಾದ ಶುದ್ಧಾಂತಃಕರಣದಿಂದ ಹೊಮ್ಮಿದ ಪ್ರಣಯಗೀತೆಯು, ಕವಿಯು ತನ್ನ ಆರಾಧ್ಯಪ್ರೇಮ ದೇವತೆಗೆ ಕಾಣಿಕೆಯಾಗಿತ್ತ ಒಂದು ಅನರ್ಘ್ಯರತ್ನ.

ಕವಿಯ ವಿಷಯವಾಗಿ ಅನೇಕ ಕಥೆಗಳಿವೆ. ಅವುಗಳಲ್ಲಿ ಒಂದನ್ನು ಮುಂದೆ ಕೊಟ್ಟಿದೆ.—ಗೀತಗೋವಿಂದವು ಜನಾದರಣೀಯವಾಯಿತು. ಜಗನ್ನಾಥದ ಸಾತ್ವಿಕ ನೆಂಬ ದೊರೆ ರಸಿಕ; ಕವಿ; ಅವನಿಗೆ ಅಸೂಯೆ ಹುಟ್ಟಿತು. ಸರಿ, ತಾನೂ ಅಂಥ ಒಂದು ಶೃಂಗಾರ ಕಾವ್ಯವನ್ನು ರಚಿಸಿ "ಇದನ್ನು ಎಲ್ಲರೂ ಓದಬೇಕು, ಮೆಚ್ಚ ಬೇಕು" ಎಂದು ಕಟ್ಟುಮಾಡಿದನಂತೆ. ಕೆಲವು ವಿದ್ವಾಂಸರು ದೊರೆಯನ್ನು ಎದುರಿ ನಲ್ಲಿಯೇ ಹೀಯಾಳಿಸಿ ಅವನ ಕಾವ್ಯವನ್ನು ಧಿಕ್ಕರಿಸಿದರು. ಪ್ರತಿಯಾಗಿ ಜಯದೇವ ನನ್ನು ಹೊಗಳಿದರು. ಅವರವರ ಮನಸ್ತಾಪ ಒಂದು ತೀರ್ಮಾನಕ್ಕೆ ಬಂತು. ದೇವರ ಮನೆಯಲ್ಲಿ ಎರಡು ಗ್ರಂಥಗಳನ್ನೂ ರಾತ್ರಿ ಇಟ್ಟು ಬಾಗಿಲಿಗೆ ಮೊಹರು ಮಾಡಿದರು. ಇರುಳು ಕಳೆಯಿತು. ಬೆಳಗ್ಗೆ ದೊರೆಯ ಕಾವ್ಯ ಹೊರಗೆ ಬಿದ್ದಿತ್ತು. ದೊರೆಯ ಮುಖ ಚಿಕ್ಕದಾಯಿತು. ಜಯದೇವನಿಗೆ ಪ್ರೇರೇಪಿಸಿದ ದೇವರೇ ಅಲ್ಲವೇ ತನಗೂ ಬುದ್ಧಿಕೊಟ್ಟುದು ಎಂದು ಗರ್ವತೊರೆದು ಹಂಬಲಿಸಿದಾಗ, ಸಾತ್ವಿಕನಿಗೆ ಹರಿಯು ಪ್ರತ್ಯಕ್ಷನಾಗಿ ಅವನ ಕಾವ್ಯದಿಂದ ಇಪ್ಪತ್ತುನಾಲ್ಕು ಶ್ಲೋಕಗಳನ್ನು ತೆಗೆದು ಗೀತಗೋವಿಂದದಲ್ಲಿ ಬರೆದಿಟ್ಟನಂತೆ.

ಕವಿಯು ಮಂಗಳಾಚರಣೆಯನ್ನು ಮಾಡಿದನಂತರ ಒಮ್ಮೆಗೇ ಕಾವ್ಯವಾಹಿನಿ ಯನ್ನು ಹರಿಸಿಬಿಡುತ್ತಾನೆ.—

ವಸಂತೇ ವಾಸಂತೀಕುಸುಮಸುಕುಮಾರೈರವಯವೈ-
ರ್ಭ್ರಮಂತೀಂ ಕಾಂತಾರೇ ಬಹುವಿಹಿತಕೃಷ್ಣಾನುಸರಣಾಂ |
ಅಮಂದಂ ಕಂದರ್ಪಜ್ವರಜನಿತಚಿಂತಾಕುಲತಯಾ
ವಲದ್ಬಾಧಾಂ ರಾಧಾಂ ಸರಸಮಿದಮೂಚೇ ಸಹಚರೀ ||

ವಸಂತಋತು. ಸುಕುಮಾರ ಶರೀರೆಯಾದ ರಾಧೆಯು ಬೃಂದಾವನದಲ್ಲಿ ಕೃಷ್ಣನನ್ನು ಹುಡುಕುತ್ತಾ ತಿರುಗುತ್ತಿದ್ದಾಳೆ. ಕ್ಷಣಕ್ಷಣಕ್ಕೂ ಹೆಚ್ಚು ವ್ಯಥೆಯನ್ನನುಭವಿಸುತ್ತಿ ರುವ ರಾಧೆಯನ್ನು ಕುರಿತು ಸ್ನೇಹಿತೆ ಆದರದ ಮಾತಾಡುತ್ತಾಳೆ. ರಾಧೆಗೆ ಸ್ನೇಹಿ ತೆಯು ಏನು ಹೇಳಿದಳೆಂಬುದು ಮುಂದೆ ವಸಂತರಾಗದ ಒಂದು ಗೀತವಾಗಿದೆ. ಪದ್ಮಾವತಿಗೆ ತನ್ನ ಇನಿಯನ ಕೃತಿ ಅಚ್ಚುಮೆಚ್ಚು. ಪ್ರತಿದಿನವೂ ಪ್ರಭಾತದಲ್ಲೂ ರಾತ್ರಿಯಲ್ಲೂ ದೇವರಪೂಜೆ ಆದಮೇಲೆ ಪ್ರಾಯಶಃ ಸರದಿಯ ಪ್ರಕಾರ ಗಂಡನೋ ಹೆಂಡತಿಯೋ ನರ್ತಿಸಬೇಕು; ಮತ್ತೊಬ್ಬರು ತಂಬೂರಿ ಶ್ರುತಿ ಹಿಡಿದು ತಾಳ ಹಾಕುತ್ತಾ ಜತೆಗೆ ಹಾಡಬೇಕು. ಇಂಥ ಸುಖದ ದಿನಗಳೇ ಅವರ ಸಂಸಾರದಲ್ಲಿ

ಆನಂದದಿಂದ ನಡೆದುಹೋಗಿರಬೇಕೆಂದು ಊಹಿಸಬಹುದು. ಇಲ್ಲಿರುವ ಇಪ್ಪತ್ತು ನಾಲ್ಕು ಅಷ್ಟಪದಿಗಳೂ ಅಷ್ಟು ಬೇರೆ ಬೇರೆ ರಾಗಗಳಲ್ಲಿವೆ. ಮುಂದೆ ಮೊದಲ ಗೀತವನ್ನು ಕನ್ನಡದಲ್ಲಿ ಪರಿಚಯಮಾಡಿಕೊಟ್ಟಿದೆ. ಇದರಿಂದ ಆ ಗೀತಗಳ ಸೊಬಗನ್ನು ಕೊಂಚ ಮನನಮಾಡಬಹುದು.—

ವಿಹರಿಪ ಹರಿ ಈ ಸರಸ ವಸಂತದಿ ಯುವತಿಯರನು ಕೂಡಿ |
ಸಖಿ ! ವಿರಹಿಜನಕೆ ದುರಂತ ! ವಿಹರಿಪ ಹರಿ ಈ— || ಪಲ್ಲವಿ ||
ಲಲಿತ ಲವಂಗದ ಲತೆಗಳ ಸೋಂಕಿನ ಮಲಯ ಸಮೀರದಲಿ |
ಬಂಡುಣಿತಂಡವು ಎಸೆದಿರೆ ಕೋಗಿಲೆಪಾಡುವ ಕುಂಜಕುಟೀರದಲಿ || ೧ ||
ಮದನೋನ್ಮಾದ ಮನೋರಥಪಥಿಕರ ವಧುಗಳು ಪ್ರಲಪಿಸಲು |
ಪಗಡೆಯ ಮರಗಳ ಹೂಗೊಂಚಲುಗಳಲಿ ಅಳಿಕುಲ ನಲಿಯಲು || ೨ ||
ಅನಂಗರಾಜನ ದಂಡದೊಲು ಪೊಱಕೇಸರ ಸುಮವರಳೆ |
ಮಿಳಿತ ಪರಮೆಗಳ ಪಾದರಿಯಲರಿನ ಕಂತುತೂಣ ಮೆರೆಯೆ || ೩ ||
ಮೃಗದ ಸುರಭಿಗೆ ತೂಗುವ ತಳಿರೆಳಹೊಂಗೆಯ ತರುಗಳ್ |
ಹರೆಯದ ಹೃದಯವ ಸೀಳುವ ಮನ್ಮಥ-ನಖದೊಲು ಕಿಂಶುಕ ತರುಗಳ್ || ೪ ||
ಲಜ್ಜೆಯ ಕಳೆದಿಹ ಲೋಕವ ನೋಡುತ ನಗುವುವು ಕರುಣಲರುಗಳು |
ವಿರಹಿವಿಚ್ಛೇದನ ಕುಂತದೊಲೆಲ್ಲೆಡೆ ಇವೆ ತಾಳೆಯ ಮಲರುಗಳು || ೫ ||
ಮಾಧವಿ ಪರಿಮಳ ಪೊಸಮಲ್ಲಿಗೆ ಕಂಪೊಳು ಬೆರೆಯುತ ಬರಲು |
ಮುನಿಮನಸೂ ಸಹ ಮೋಹಿತವಾಗಲು ತರುಣರಕಾರಣ ಬಂಧು || ೬ ||
ಸ್ಫುರದತಿಮುಕ್ತಲತೆಯಾಲಿಂಗಿಸೆ ಮುಕುಳಿತ ಪುಳುಕಿತ ಮಾಮರವ |
ಬೃಂದಾವನ ವಿಪಿನಸಮೀಪದಿ ಪುಣ್ಯಯಮುನಾಜಲ ಸಾರುವ || ೭ ||

* * * * *

ಸಾವಧಾನದಿಂದ ಹರಿಯುವ ಯಮುನಾ ನದಿಯ ಪವಿತ್ರ ಜಲದಿಂದ ವಿಶುದ್ಧವಾದ ಬೃಂದಾವನ ವಿಪಿನ! ರಾಧೆಯು ವಿರಹಿಣಿಯಾಗಿ ಅಲ್ಲಲ್ಲಿ ಪರ್ಯಟನ ಮಾಡುತ್ತಿದ್ದಾಳೆ ಕೃಷ್ಣನ ಅನ್ವೇಷಣೆಯಲ್ಲಿ. ವಕುಳ ಪುಷ್ಪಗಳಲ್ಲಿ, ಪಾದರಿ ಹೂವುಗಳಲ್ಲಿ, ದುಂಬಿಗಳು ತಂತಮ್ಮ ಪ್ರಿಯ ವಸ್ತುಗಳನ್ನು ಕಂಡು ನಲಿಯುತ್ತಿವೆ. ಹೊಂಗೇದಿಗೆಗಳು, ಕರುಣಸುಮಗಳು ಲಜ್ಜೆಯುಳಿದ ಸುಗ್ಗಿಯನ್ನು ಹಾಸ್ಯಮಾಡುತ್ತಿವೆ. ಮೊಗ್ಗುವಿಡಿದ ಮಾಮರವು ಅತಿಮುಕ್ತಲತೆಯ ಆಲಿಂಗನದಿಂದ ಪುಳಕಿತವಾಗಿದೆ. ಮಲ್ಲಿಗೆ ಮಾಧವಿ ಮೊದಲಾದವುಗಳ ಗಮಲು ಮುನಿಯ ಮನಸ್ಸನ್ನೂ ಚಲಿಸುವಂತಿದೆ. ಇಂಥ ವಿಶಾಲವಾದ ಅರಣ್ಯದಲ್ಲಿ ಎಲ್ಲಿಯೋ ಕೃಷ್ಣನು ಕ್ರೀಡಿಸುತ್ತಿರುವನೆಂದರೆ ಮನಸ್ಸಿಗೆ ಸಮಾಧಾನವಾಗುವುದಿಲ್ಲ. ಊಹೆಯ ಕಣ್ಣು ಅದನ್ನರಸಿಕೊಂಡು ಹೋಗಿ, ಭಾವಿಸಿ ತೃಪ್ತಿಪಡೆಯುವುದು. ಆಗತಾನೆ ಭಾವಗೀತೆಯ ಸಾರ್ಥಕತೆ. ಭಾವಿಸಿದ ಭಾವ

ಗೀತೆಯು ಮುಂದಿನ ಅಷ್ಟಪದಿಯೆಂಬುದರಲ್ಲಿ ಸಂದೇಹವಿಲ್ಲ. ರಾಧೆಯೂ ಸಖಿಯೂ ಅಲ್ಲಿ ಇಲ್ಲಿ ಹುಡುಕುತ್ತಾ ಒಂದೆಡೆ ಪ್ರತ್ಯಕ್ಷವಾಗಿ ತಮ್ಮ ಸ್ವಾಮಿಯನ್ನು ಕಾಣು ತ್ತಾರೆ. ಮುಗ್ಧವಧೂನಿಕರದ ಮಧ್ಯೆ ಮದನಮೋಹನ ಶ್ಯಾಮಸುಂದರನು ತುಲಸೀ ಮಾಲೆಯನ್ನು ಧರಿಸಿ, ಪೀತಾಂಬರವನ್ನುಟ್ಟು, ರತ್ನಕುಂಡಲಮಂಡಿತನಾಗಿ ಮುಗುಳು ನಗೆ ನಗುತ್ತಿದ್ದಾನೆ. "ನೀಲ ಕಳೇಬರ ಪೀತವಸನ ವನಮಾಲೀ| ಕೇಳೀಚಲತ್ ಮಣಿಕುಂಡಲಮಂಡಿತ ಗಂಡಯುಗ್ಮ ಸ್ಮಿತಶಾಲೀ" ಎಂಬ ಮಧುರವಾದ ಮಾತು ಗಳಲ್ಲಿ ಇಷ್ಟು ಚಿತ್ರವನ್ನು ಕಟ್ಟಿದ್ದಾನೆ ಕವಿ. ಓರ್ವ ಗೋಪಿ ಆ ಮೂರ್ತಿಯನ್ನಪ್ಪಿ ಕೊಂಡು ಅವನಿಗೆ ಪ್ರಿಯವಾದ ಹಾಡನ್ನು ತಾರಕಸ್ಥಾಯಿಯಲ್ಲಿ ಅನ್ನುತ್ತಿದ್ದಾಳೆ. ಬಾಗಿದ ಹುಬ್ಬಿನ ವಿಶಾಲವಾದ ಕಣ್ಣಿನ ಕುಡಿನೋಟದಿಂದ ಕರೆಯುವಳು. ಏನನ್ನೋ ಕಿವಿಯಲ್ಲಿ ಗುಟ್ಟು ಹೇಳುವಂತೆ ನಟಿಸಿ ನಲ್ಲನಿಗೆ ಮುತ್ತಿಡುವಳು. ನದೀತೀರದ ಲತಾಕುಂಜದ ಕಡೆಗೆ ಸೆಳೆಯುವ ನೋಟವೀಗ! ಆ ಗೋಪೀವಧೂ ಚಪ್ಪಾಳೆಯಿಂದ ಕೈಬಳೆಗಳು ಕಲಕಲ ಧ್ವನಿಗುಡಲು, ಆ ಕೊಳಲ ನಾದಕ್ಕೆ ಸರಿಯಾಗಿ ನರ್ತಿಸಿ ಮೆಚ್ಚಿಗೆ ಪಡೆದವಳು. ಆ ಕೋರೆ ಹುಡುಗಿಯನ್ನು ಕೃಷ್ಣನು ಹಾಸ್ಯಮಾಡುತ್ತಿದ್ದಾನೆ.

ಇಷ್ಟು ವರ್ಣಿಸಿ ಮುಂದೆ ಕಾವ್ಯವು ಹರಿಯುತ್ತಿದ್ದರೂ ನಾವು ರಾಧೆಯ ಚಿತ್ರವನ್ನೇನೂ ಮರೆಯುವಂತಿಲ್ಲ. ಕೃಷ್ಣನ ಚರ್ಯೆಯನ್ನು ಕಂಡು ಅವಳಿಗೆ ಅಸಮಾಧಾನ. ಎಲ್ಲೋ ದೂರದ ಬಳ್ಳಿಮಾಡದಲ್ಲಿ ಕುಳಿತುಕೊಳ್ಳುತ್ತಾಳೆ. ಆದರೆ ಗುಣವನ್ನೇ ದೊಡ್ಡದು ಮಾಡಿಕೊಂಡು ಮೆಚ್ಚುವ ಅಂತಃಕರಣ ಅವಳದು. ಅವಳು ಸ್ಮರಿಸುವ ಆ ಮೋಹನ ಮೂರ್ತಿಯ ಚಿತ್ರವು ಸುಂದರವಾಗಿದೆ. ಕವಿಯ ಮಾತು ಗಳಲ್ಲೇ ಕೇಳಿ:

> ಸಂಚರದಧರಸುಧಾ ಮಧುರಧ್ವನಿ ಮುಖರಿತ ಮೋಹನವಂಶಂ
> ಚಲಿತ ದೃಗಂಚಲ ಚಂಚಲ ಮೌಳಿ ಕಪೋಲ ವಿಲೋಲವತಂಸಂ|
> ಚಂದ್ರಕ ಚಾರು ಮಯೂರಶಿಖಂಡಕ ಮಂಡಲ ವಲಯಿತಕೇಶಂ
> ಪ್ರಚುರ ಪುರಂದರ ಧನುರನುರಂಜಿತ ಮೇದುರ ಮುದಿರ ಸುರವೇಷಂ||

ಕೃಷ್ಣನು ಮೋಹಕವಾದ ಕೊಳಲನ್ನು ಹಿಡಿದು, ಚಲಿಸುವ ತುಟಿಗಳಿಂದ ಅಮೃತ ಮಯವಾದ ಮಧುರಗಾನವನ್ನು ಮಾಡುತ್ತಿದ್ದಾನೆ. ಕಣ್ಣಾಲಿ ಹಾಗೊಮ್ಮೆ ಹೀಗೊಮ್ಮೆ ಅಲೆಯುವಂತೆ, ಅವನು ತಲೆದೂಗುವುದರಲ್ಲಿ ಕರ್ಣಾವತಂಸವು ಕೆನ್ನೆಯ ಮೇಲೆ ಜೋಲಾಡುತ್ತಿದೆ. ಚೆಲುವಾದ ನವಿಲುಗರಿಯಿಂದ ಅಲಂಕರಿಸಲ್ಪಟ್ಟ ಶಿಖೆಯು ವಿಸ್ತಾರವಾದ ಮತ್ತು ಒತ್ತಾದ ಮುಗಿಲೊಡ್ಡಿನ ಮೇಲೆ ರಂಜಿಸುವ ಸಪ್ತವರ್ಣದ ಕಾಮನ ಬಿಲ್ಲಿನಂತೆ ಕಣ್ಮನಗಳನ್ನು ತಣಿಸುತ್ತದೆ. ಎಂಥ ಸೊಗಸಿದು! ಆ ದೇವನನ್ನು

ನೆನೆದರೆ ಅವಳಿಗೆ ರೋಷವೆಲ್ಲ ದೂರವಾಗುತ್ತದೆ; ಅವನಲ್ಲಿ ಭಕ್ತಿ ಹೆಚ್ಚುತ್ತದೆ. ಸವತಿಯರ ಕಡೆಗೆ ಲಕ್ಷ್ಯವಿರುವುದಿಲ್ಲ. ಅವನನ್ನು ತನ್ನವನನ್ನಾಗಿ ಮಾಡಿಕೊಳ್ಳಬೇಕೆಂಬ ಬಲಿತ ಆಸೆಯವಳಿಗೆ. ವಿರಹಿಗಳ ಮೃದುವಾದ ಪ್ರೇಮವೇ ಅಂತಹುದು. ಪ್ರಥಮ ಸಮಾಗಮದ ಕಥೆಯೆಲ್ಲಾ ಜ್ಞಾಪಕವಾಗುವುದು. ಆ ದಿವಸ ಬೆಳುದಿಂಗಳ ರಾತ್ರಿಯಲ್ಲ. ಕಾರಿರುಳಲ್ಲಿ ಕದ್ದುಬಂದಿದ್ದ. ಅದೇ ಲತಾಗೃಹದಲ್ಲಿ ಅವರ ಮಿಲನ. ಲಜ್ಜೆಯಿಂದ ತಾನು ಮೌನವಾಗಿದ್ದಾಗ ಕೃಷ್ಣನು ಪ್ರೀತಿಯ ನುಡಿಗಳಾಡಿ ಪರಿಹಾಸ್ಯ ಮಾಡಿದ ವಿನೋದಕೇಳಿ. ಆ ದಿವಸ ಚಿಗುರೆಲೆಯ ಹಾಸಿನಲ್ಲಿಯೇ ಅವರು ಮಲಗಿದ್ದು. ಒಂದು ದಿನ ವ್ಯಸನಗೊಂಡಿದ್ದ ತನ್ನನ್ನು ಮುಂಗುರುಳುಗಳನ್ನು ನೇವರಿಸುತ್ತಾ ಸಮಾಧಾನಪಡಿಸಿದ ಚಿತ್ರ. ಒಂದು ದಿನ ರಾಧೆಯು ಅಲಂಕಾರಮಾಡಿಕೊಂಡು ಗೋಪಿಯರೊಡನಿರಲು ಕೃಷ್ಣನು ತನ್ನನ್ನು ನೋಡಿದಾಗ ನಾಚಿಕೆಯಾಗಿ ಕೈಯಿಂದ ಕೊಳಲು ಜಾರಿ ಕೆಳಗೆ ಬಿದ್ದಾಗ ಮಂದಸ್ಮಿತವಾಗಿದ್ದ ಮುಖದ ಕಳೆ—ಇವೇ ಮುಂತಾದವು ಬಗೆಯಲ್ಲಿ ಸಾಗಿಹೋಗುತ್ತವೆ. ಇವನ್ನೆಲ್ಲಾ ಸಖಿಯ ಮುಂದೆ ಹೇಳಿಕೊಂಡು ಕೃಷ್ಣನನ್ನು ಹೇಗಾದರೂ ಸೇರುವಂತೆ ಮಾಡು ಎನ್ನುತ್ತಾಳೆ.

ಇತ್ತ ಕಡೆ ತನ್ನನ್ನು ನೋಡಿ ಹೊರಟುಹೋದ ರಾಧೆಯ ನೆನಪು ಬಂದು ಕೃಷ್ಣನ ಮನಸ್ಸನ್ನು ಚುಚ್ಚುತ್ತದೆ. ಅವನು ವ್ರಜಸುಂದರಿಯರನ್ನು ಬಿಟ್ಟು ಯಮುನಾ ನದಿಯ ದಡದಲ್ಲಿರುವ ಒಂದು ಪೊದರಿನಲ್ಲಿ ಕುಳಿತು ಪಶ್ಚಾತ್ತಾಪಪಡುತ್ತಿದ್ದಾನೆ. ಎಲ್ಲೆಲ್ಲಿ ಹುಡುಕಿದರೂ ಅವಳು ಸಿಗಲಿಲ್ಲ. ಕೃಷ್ಣನು ಅಪರಾಧಿ. ಆದ್ದರಿಂದ ಅವನು ಅವಳನ್ನು ತಡೆಯಲಿಲ್ಲ. ಪಾಪ! ಅವಳೀಗ ಏನು ಮಾಡುವಳೋ? ಇನ್ನು ಜನ, ಧನ, ಗೃಹ, ಭೂಷಣಗಳಿಂದ ಮಾಧವನಿಗೆ ಮನಸ್ಸು ನೆಮ್ಮದಿಯಿಲ್ಲ. ಬಹುಶಃ ಆ ರಾಧೆಯ ಹುಬ್ಬು ಗಂಟಿಕ್ಕಿರಬೇಕು; ಕೋಪದಿಂದ ಅವಳ ಮುಖವು ಕೆಂಪೇರಿರಬೇಕು. ಅಸೂಯೆಗೊಂಡು ಎಲ್ಲಿ ಹೊರಟುಹೋಗಿರುವಳೋ ಅವನು ಕಾಣ. ಅವಳಿಗೆ ನಮಸ್ಕರಿಸುವುದಕ್ಕೂ ಹಿಂತೆಗೆಯುವುದಿಲ್ಲವಂತೆ! ರಾಧೆಯು ತನ್ನ ಮುಂದೆ ಸುಳಿದ ಹಾಗೆ, ನಲಿದ ಹಾಗೆ, ಕಲ್ಪಿಸಿಕೊಳ್ಳುತ್ತಾನೆ. ಓ ಚೆಲುವೆ! ಇನ್ನೊಂದು ಸಲ ಈ ರೀತಿಯಾದ ತಪ್ಪು ಮಾಡುವುದಿಲ್ಲ. ಹರಿ, ಹರಿ!—ಎಂದುಕೊಳ್ಳುತ್ತಾನೆ.

ಹೃದಿ ಬಿಸಲತಾಹಾರೋ ನಾಯಂ ಭುಜಂಗಮನಾಯಕಃ
ಕುವಲಯದಳಶ್ರೇಣೀ ಕಂಠೇ ನ ಸಾ ಗರಳದ್ಯುತಿಃ |
ಮಲಯಜರಜೋ ನೇದಂ ಭಸ್ಮ ಪ್ರಿಯಾರಹಿತೇ ಮಯಿ
ಪ್ರಹರ ನ ಹರಭ್ರಾಂತ್ಯಾನಂಗ ಕ್ರುಧಾ ಕಿಮು ಧಾವಸಿ ||

ಕೃಷ್ಣನು ಮನ್ಮಥನನ್ನು ಸಂಬೋಧಿಸುವ ಮಾತುಗಳಿವು: "ಅಯ್ಯಾ! ನಾನು ಧರಿಸಿರುವುದು ತಾವರೆಬಳ್ಳಿ; ಹಾವಿನ ಸರವಲ್ಲ. ಕತ್ತಿನಲ್ಲಿರುವುದು ಕನ್ನೈದಿಲೆ ದಳಗಳ

ದಂಡೆ; ವಿಷದ ಕಪ್ಪು ಗುರುತಲ್ಲ. ನಾನು ತೊಡೆದಿರುವುದು ಶ್ರೀಗಂಧ; ಭಸ್ಮವಲ್ಲ. ನನ್ನನ್ನು ಈಶ್ವರನೆಂಬ ಭ್ರಾಂತಿಯಿಂದ ವೃಥಾ ಏಕೆ ಕೊಲ್ಲುವೆ?"

ಇವು ಕವಿಯ ಕಲ್ಪನೆಯ ಕೆಲವು ಚಿತ್ರಗಳು: ಚೇತೋಹಾರಿಯಾದ ಸುಂದರ ಸನ್ನಿವೇಶಗಳ ವರ್ಣನೆಗಳು. ಯಮುನೆಯ ತಟದ ನೀರವಂಜಿ ಲತಾಗೃಹದಲ್ಲಿ ಪ್ರೇಮ ಭಯೋದ್ಭ್ರಾಂತನಾದ ಮಾಧವನು ಪಶ್ಚಾತ್ತಾಪಪಡುತ್ತಿದ್ದಾನೆ.

ಅಲ್ಲಿಗೆ ರಾಧೆಯ ಸಖಿಯು ಬಂದು ಹೀಗೆನ್ನುವಳು: "ರಾಧೆಯು ನಿನ್ನ ವಿರಹ ದಿಂದ ದೀನಳಾಗಿರುವಳು. ನಿನಗಾಗಿ ಕುಸುಮಶಯ್ಯೆಯನ್ನು ಕಲ್ಪಿಸುವ ವ್ರತವನ್ನು ಕೈಗೊಂಡಿರುವಳು. ನೀರೊಡಗೂಡಿದ ಕಮಲದ ದಳಗಳನ್ನು ಧರಿಸಿರುವಳು. ಆ ಕಮಲಮುಖಿಯ ವಿಶಾಲನೇತ್ರಗಳಿಂದ ಕಣ್ಣೀರು ಧಾರಾಕಾರವಾಗಿ ಸುರಿಯುತ್ತಿದೆ. ಅದನ್ನು ನೆನೆದರೆ ರಾಹುವಿನ ದಂಶನದಿಂದ ಸುರಿಯುವ ಸುಧಾರಸದ ಚಂದ್ರಮಂಡಲ ದಂತಿದೆ. ತಾನು ನವರಿರುವ ಕಸ್ತೂರಿಯಿಂದ ನಿನ್ನನ್ನೇ ಕಾಮದೇವನಂತೆ ಭಾವಿಸಿ ಬರೆದು ನೋಡುತ್ತಾಳೆ; ಆಮೇಲೆ ಕೈಯಲ್ಲಿ ಮಾವಿನಹೂವಿನ ಸರಳನ್ನೂ ಮಕರವನ್ನೂ ಇಟ್ಟು ನಮಸ್ಕರಿಸುತ್ತಾಳೆ. 'ಕೃಷ್ಣ, ನಿನ್ನ ಪಾದದಲ್ಲಿ ಬಿದ್ದವಳು ನಾನು. ನೀನು ಉದಾಸೀನನಾಗುತ್ತಿರಲಾಗಿ ಶೀತಲನಾದ ಚಂದ್ರನೂ ಕೂಡ ಅತ್ಯಂತ ಸಂತಾಪ ವನ್ನುಂಟುಮಾಡುತ್ತಾನೆ' ಹೀಗೆಂದು ಕ್ಷಣಕ್ಷಣವೂ ಎನ್ನುತ್ತಾಳೆ. ನಿನ್ನನ್ನು ಹೊಂದುವುದಕ್ಕೆ ಸಾಧ್ಯವಿಲ್ಲ. ಆದ್ದರಿಂದ ಅವಳು ಧ್ಯಾನದಿಂದಲೇ ನಿನ್ನನ್ನು ತನ್ನ ಮುಂದೆ ನಿಲ್ಲಿಸಿಕೊಂಡು ಪ್ರಲಾಪಿಸುವಳು; ದುಃಖಿಸುವಳು; ನಗುವಳು; ಅಳುವಳು; ಭ್ರಮಿಸುವಳು. ಆ ಕೃಶಾಂಗಿಗೆ ಮುತ್ತಿನ ಹಾರವೂ ಕೂಡ ಭಾರ ವಾದಂತೆ ತೋರುತ್ತದೆ. ಅವಳು ಆಗಾಗ ಬಿಡುವ ನಿಟ್ಟುಸಿರೇ ಅವಳನ್ನು ಸುಡುತ್ತಿದೆ. ಶ್ರೀಗಂಧವು ರಾಧೆಗೆ ವಿಷಸಮಾನ. ನೀರುತುಂಬಿದ ತನ್ನ ಕಣ್ಣುಗಳಿಂದ ದಿಕ್ಕು ದಿಕ್ಕಿನಲ್ಲಿಯೂ ನಿನ್ನನ್ನೇ ಹುಡುಕುತ್ತಲಿದ್ದಾಳೆ. ತಳಿರ ಹಾಸಿಗೆಯು ಅವಳ ದುಃಖ ದಿಂದ ಬಾಡಿಹೋಗಿದೆ. ಸಂಧ್ಯಾಕಾಲದಲ್ಲಿ ಬಾಲಚಂದ್ರನು ಚಲಿಸದಿರುವನಲ್ಲವೆ. ಹಾಗೇ ಸದಾ ರಾಧೆಯು ತನ್ನ ಅಂಗೈಯಲ್ಲಿ ತನ್ನ ದುಂಡಾದ ಕಪೋಲಗಳನ್ನಿಟ್ಟು ಕುಳಿತುಬಿಟ್ಟಿರುತ್ತಾಳೆ. ಯಾವಾಗಲೂ ಹರಿ! ಹರಿ! ಎಂದು ಜಪಮಾಡುತ್ತಿದ್ದಾಳೆ. ಅದು ವಿರಹದಿಂದ ಮರಣಹೊಂದುವ ಕಡೆಗಾಲವೆಂದೇ ತೋರುವುದು. ಈಗ ನೀನು ಬಂದು ಅವಳನ್ನು ಸಮಾಧಾನಪಡಿಸದೆ ಹೋದರೆ ವಜ್ರಾಯುಧಕ್ಕಿಂತಲೂ ಕಠಿಣ ನಾಗುವೆ." ಆಗ ಕೃಷ್ಣನು ಸಖಿಗೆ ರಾಧೆಯನ್ನು ತನ್ನ ಮಾತುಗಳಿಂದ ಸಮಾಧಾನ ಪಡಿಸಿ ಕರೆತರುವಂತೆ ಆಜ್ಞಾಪಿಸುತ್ತಾನೆ. ಇಲ್ಲಿಯ ಸ್ವಾಭಾವಿಕವಾದ ವರ್ಣನೆಯು ಬಹಳ ಚೆನ್ನಾಗಿದೆ.

ಗೀತಗೋವಿಂದದ ಮೊದಲ ಅಷ್ಟಪದಿಗಳಲ್ಲಿ ಕಾವ್ಯನಾಯಿಕೆಯ ವಿರಹವನ್ನೂ, ಪ್ರೇಮಸಮಾಧಿಯ ಭಾವವನ್ನೂ ಚಿತ್ರಿಸಿದೆ ಎಂಬುದು ಈಗಾಗಲೇ ತಿಳಿದಿರುವ ವಿಷಯ. ಅಂಥ ಭಾವೋನ್ಮಾದದಲ್ಲಿ ಎಲ್ಲೆಲ್ಲಿ ಕಣ್ಣೆತ್ತಿ ನೋಡಿದರೂ ತನ್ನನ್ನು ಅಣಕಿಸುವ, ಕೆರಳಿಸುವ, ದೃಶ್ಯಗಳೇ ಕಂಡುಬರುತ್ತವೆ. ಸನ್ನಿವೇಶಕ್ಕೆ ತಕ್ಕಂತೆ ಎಲ್ಲ ವಸ್ತುಗಳೂ ಕಾವ್ಯವಾಗುತ್ತಿವೆ. ಕಾಳಿಂದೀ ಹೊಳೆಯ ನೀರಿನಿಂದ ಶುದ್ಧವಾದ ಬೃಂದಾವನ ವಿಪಿನದ ವಸಂತ ಮಾರ್ಗದಲ್ಲಿ ಇರುವಂತಿಗೆಯ ಆಲಿಂಗನದಿಂದ ಮೊಗ್ಗು ಬಿಡಿದ ಚೂತರಾಜನು ಪುಳಕಿತನಾಗಿರುವನಂತೆ! ಬಕುಳ ಪುಷ್ಪಗಳ ಗೊಂಚಲು ಗಳಲ್ಲಿ ತಾವೇ ತಾವಾಗಿ ಉನ್ಮತ್ತತೆಯಿಂದ ಮಧುಕರಗಳು ಝೇಂಕರಿಸುವುದು ವಧೂಜನ ವಿಹಿತವಿಲಾಸ! ಮಲಯಮಾರುತನು ಲವಂಗಿಯ ಆಲಿಂಗನದಿಂದ ತಾನೂ ಹೆಣ್ಣಿನ ಭಾವವನ್ನು ತಳೆದಿದ್ದಾನೆ! 'ಕೋಮಲ ಮಲಯ ಸಮೀರ'ನಾಗಿದ್ದಾನೆ! ಹಾಗೆ ಕಾಣುವುದು ರಾಧೆಯ ಭಾವ. ಎಲ್ಲೆಲ್ಲೂ ಒಂದನ್ನು ಒಂದು ಆಶ್ರಯಿಸುತ್ತಿದೆ. ಪರಿಮಳವು ಸುಗಂಧವನ್ನೇ ಅರಸುತ್ತಿದೆ! "ಮಾಧವಿಕಾ ಪರಿಮಳಲಲಿತೇ ನವ ಮಲ್ಲಿಕಾ ಜಾತಿ!" ಇರುವಂತಿಗೆಯ ಕಂಪು ಮಲ್ಲಿಗೆಯ ನರುಗಂಪಿನಲ್ಲಿ ಬೆರೆತು ಕೊಂಡಿದೆ. ಪಾಪ! ಈಗ ರಾಧೆಯೊಬ್ಬಳೇ ಒಂಟಿ.

ಹೇಗೋ ರಾತ್ರಿ ಕಳೆಯಿತು. ಪ್ರಾತಃಕಾಲದಲ್ಲಿ ಬಹು ಸಭ್ಯನಂತೆ ಕೃಷ್ಣನು ನಮಸ್ಕರಿಸಿ ವಿನಯವಾಗಿ ನುಡಿಸಲು ಯತ್ನಿಸುತ್ತಿರುವನು. ಇಬ್ಬರೂ ಒಬ್ಬರನ್ನೊಬ್ಬರು ಕೂಡಲು ಬಂದವರು. ತನ್ನನ್ನು ಅವಮಾನಪಡಿಸಿ ಬೇಗೆ ಹಿಂಸಿಸಿದ ಗಂಡಿಗೆ ಹೆಣ್ಣು ಏಕಾಏಕಿ ಮಣಿಯತಕ್ಕದ್ದಲ್ಲ. "ತಾಮನುಸರ ಸರಸೀರುಹಲೋಚನ ಯಾ ತವ ಹರತಿ ವಿಷಾದಂ! ಯಾಹಿ." ಸಾಧ್ವೀಮಣಿಯಾದ ರಾಧೆಯು ಅನುನಯ ವಿನಯದಿಂದ ಎದುರಿನಲ್ಲಿ ಪ್ರಣತನಾಗಿರುವ ತನ್ನ ನಾಥನನ್ನು ಹಾಗೆನ್ನುತ್ತಾಳೆ. "ಎಲೈ ಕೃಷ್ಣನೆ! ಜಾಗರಣೆಯಿಂದ ಕೆಂಪಾದ ನಿನ್ನ ಕಣ್ಣುಗಳು, ನೇತ್ರಾಂಜನ ದಿಂದ ಕಪ್ಪಾದ ನಿನ್ನ ತುಟಿಗಳು, ಆರಕ್ತವಾದ ನಿನ್ನ ಎದೆ, ಇವುಗಳೆಲ್ಲಾ ನಿನ್ನ ಪ್ರೀತಿಯನ್ನು ಎತ್ತಿ ತೋರಿಸುತ್ತಿವೆ. ಪಾಪ! ನಿನ್ನ ವ್ಯಥೆಯನ್ನು ಪರಿಹರಿಸುವವಳ ಬಳಿಗೆ ಹೊರಟುಹೋಗು. ಇಲ್ಲಿ ನಿಲ್ಲಬೇಡ. ಸಾಕುಮಾಡು ನಿನ್ನ ಮರುಳುಮಾತು ಗಳನ್ನು. ಇಷ್ಟು ಸ್ಪಷ್ಟವಾಗಿ ನಿನ್ನ ಚರ್ಯೆಯು ಎದ್ದು ಕಾಣುತ್ತಿರುವಾಗ ನೀನು ಹೇಗೆ ತಾನೆ ವಂಚಿಸಲು ಸಮರ್ಥನಾದೀಯೆ? ಇವೆಲ್ಲಾ ನನ್ನ ಮನಸ್ಸಿನಲ್ಲಿ ಬಹಳ ಖೇದವನ್ನುಂಟುಮಾಡಿದೆ. ಆದಾಗ್ಯೂ ಈಗ ನನ್ನ ನಿನ್ನಲ್ಲಿ ಏಕದೇಶಸಾಮ್ಯವನ್ನು ಯಾವ ರೀತಿಯಿಂದ ಕಲ್ಪಿಸುತ್ತಿದ್ದೀಯೆ? ಶರೀರದಂತೆಯೇ ಮನಸ್ಸೂ ಸಹ ಮಲಿನ ವಾಗಿದೆ. ನಿನ್ನ ಬಾಲಚರಿತ್ರೆಯು ಬಲ್ಲದ್ದೇ ಆಗಿದೆ. ಅಬಲಾಕಬಳಕ್ಕಾಗಿ ವನವನ

ಗಳಲ್ಲಿ ತಿರುಗುವ ನಿನ್ನ ಚರಿತ್ರೆಯು ಸಾಕು. ವ್ಯಸನಗೊಂಡಿರುವ ನನ್ನ ಮುಂದೆ ವೃಥಾ ನಟಿಗಳನ್ನಾಡದೆ ತೊಲಗು! ಪ್ರಣಯಭಂಗದ ದೆಸೆಯಿಂದ ನನಗೆ ನಿನ್ನ ಅವಲೋಕನವು ಶೋಕಾಧಿಕ್ಯವನ್ನೂ ನಾಚಿಕೆಯನ್ನೂ ಉಂಟುಮಾಡುತ್ತಿದೆ.''

ಬಹಿರಿವ ಮಲಿನತರಂ ತವ ಕೃಷ್ಣ ಮನೋಽಪಿ ಭವಿಷ್ಯತಿ ನೂನಂ |
ಯಾಹಿ ಮಾಧವ ಯಾಹಿ ಕೇಶವ ಮಾವದ ಕೈತವವಾದಂ ||

ಈ ರೀತಿಯಾಗಿ ಪರಿತಪಿಸಿದ ರಾಧಾದೇವಿಯನ್ನು ಸಖಿಯು ಅನೇಕ ಸಾಂತ್ವ ವಚನಗಳಿಂದ ಸಮಾಧಾನಪಡಿಸಲು ಯತ್ನಿಸಿ ಸಾಧ್ಯವಾಗದೆ ಕಡೆಗೆ "ಎಲ್ಲಾ ರೀತಿ ಯಲ್ಲಿಯೂ ಪ್ರತಿಕೂಲ ಕಾರ್ಯವನ್ನು ಮಾಡುತ್ತಿರುವ ನಿನಗೆ ಹಾಗೆ ಆಗುವುದೇ ಸರಿ'' ಎಂದು ಮೂದಲಿಸಿದಳು. ಇತ್ತಲಾಗಿ ಶ್ರೀ ಕೃಷ್ಣನು ಅನುನಯದಿಂದ ಹೀಗೆಂದನು.—"ಹೇ ಪ್ರಿಯೆ, ಚಾರುಶೀಲೆ! ಅಕಾರಣವಾದ ಕೋಪವನ್ನು ಬಿಟ್ಟು ಬಿಡು. ಸ್ವಲ್ಪವಾದರೂ ಮಾತಾಡಿ ನಗೆಯ ಬೆಳುದಿಂಗಳನ್ನು ಬೀರು. ಮನ್ಮಥನಿಂದ ಬೆಂದ ನನಗೆ ನಿನ್ನ ಮುಖಕಮಲ ಮಧುಪಾನವನ್ನು ನೀಡು. ನೀನು ನಿಜವಾಗಿಯೂ ನನ್ನಲ್ಲಿ ಕೋಪಗೊಂಡಿರುವಿಯಾದರೆ ಇಗೋ ನನ್ನನ್ನು ನಿನ್ನ ಉಗುರುಗಳಿಂದ ಜಿಗುಟು; ತೋಳುಗಳಿಂದ ಬಂಧಿಸಿಬಿಡು. ನಿನ್ನ ಕಣ್ಣುಗಳೇನೋ ಈಗ ಕೆಂಪ ಗಾಗುತ್ತಿವೆ ಕೆಂದಾವರೆಯಂತೆ. ಅದೂ ನನಗೆ ವಿಲಾಸವೇ; ಅನುರೂಪವೇ. ನೀನು ನನಗೆ ಭೂಷಣ! ಜೀವನ! ಭವಜಲಧಿರತ್ನ! ನನಗೆ ಪ್ರಿಯವಾದ, ರತಿರಂಗವಾದ ನಿನ್ನ ಪಾದಗಳನ್ನು ನನ್ನ ಶಿರಸ್ಸಿನಲ್ಲಿ ಮಂಡಿಸು. . . . ಹೇ ಚಂಡಿ! ಎಲ್ಲವನ್ನೂ ಅರಿತ ನೀನು ಹೀಗಿರುವುದು ಆಶ್ಚರ್ಯವೇ ಸರಿ.''

ಜಯದೇವನು ಕಲ್ಪನೆಯ ಮುಸುಕಿನಲ್ಲೋ, ಅನುಭವದ ಸುಣ್ಣರದಲ್ಲೋ, ಸಂಪ್ರದಾಯದ ಕವಿಸಮಯದ ಆವೇಶದಲ್ಲೋ, ಅಂತು ಒಂದು ವಿಶಿಷ್ಟವಾದ ನುಡಿಯ ವೈಖರಿಯಲ್ಲಿ ಈ ಪ್ರಣಯ ಸಂಭಾಷಣೆಗಳನ್ನು ಬಹು ರಸವತ್ತಾಗಿ ಅಷ್ಟ ಪದಿಗಳಲ್ಲಿ ಸುಖವಾಗಿ ಹಾಡಿ ಮೈಮರೆತಿದ್ದಾನೆ. ಆಮೇಲೆ ರಾಧೆಗೆ ಅಲಂಕಾರ ವಾದದ್ದು, ಸತಿಪತಿಯರ ಸಮಾಗಮ, ಇವೆಲ್ಲಾ ಮುಂದಿನ ನಾಲ್ಕು ಕೀರ್ತನೆಗಳಲ್ಲಿ ಬಂದು ಕಾವ್ಯವು ಮುಗಿದಿದೆ. ಈ ಕಾವ್ಯಪರಿಚಯವನ್ನು ಇಲ್ಲಿಗೆ ನಿಲ್ಲಿಸಬಹುದಾ ದರೂ ಜಯದೇವ ಕವಿಯ ಕಾವ್ಯಶಕ್ತಿ, ದೈವಭಕ್ತಿ, ಸಂಗೀತಸಾಮರಸ್ಯ ಮತ್ತು ಆತನ ಕಾಲದ ಅಭಿರುಚಿ ಇವುಗಳನ್ನು ಕುರಿತು ಸ್ವಲ್ಪ ತಿಳಿಸಬಹುದು.

ಕವಿಯು ತನ್ನ ಕಾವ್ಯರಚನೆಯಲ್ಲಿ ತನ್ನ ಅನುಭವಜ್ಞಾನವನ್ನೇ ಹರಡಿರುವ ನೆಂದು ಮೇಲೆ ಹೇಳಿದ್ದಾಗಿದೆ. ಜಯದೇವನ ಶೈಲಿಯು ಸರಳವಾದುದು. ಮನೋ ಹರವಾದುದು. ಅವನ ಪದಮೈತ್ರಿ, ವಿಲಾಸ, ಬೆಡಗು, ಯಮಕ—ಗಮಕಗಳ ಸಂಮೋಹಿನೀಶಕ್ತಿ, ಮೇಲಾಗಿ ತನ್ನ ಮನೋರಾಜ್ಯದ ಸೌಂದರ್ಯವನ್ನು ಚಿತ್ರಿ

ಸುವ ಶಕ್ತಿ ಇವೆಲ್ಲಾ ಮನೋಜ್ಞವಾಗಿವೆ. ಕಾವ್ಯದಲ್ಲಿ ಎಲ್ಲಿಯೂ ಆತನ ಉಲ್ಲಾಸ ಕುಗ್ಗಿಲ್ಲ; ನೀರಿನ ಬುಗ್ಗೆಯಂತೆ ಚಿಮ್ಮುತ್ತಿದೆ. ಉಪಯೋಗಿಸುವ ಮಾತುಗಳು ಸನ್ನಿವೇಶವನ್ನು ಸಾಧಿಸುತ್ತಿವೆ. ಕೃಷ್ಣನನ್ನು ಹೊಂದಿದ ರಾಧೆಯ ನಗುಮೊಗವನ್ನು ಕವಿಯು "ರತಿರಭಸಹಸಿತವದನೆ" ಎಂದು ವರ್ಣಿಸಿದ್ದಾನೆ. ಸಮಾಗಮದ ವೇಳೆಯಲ್ಲಿ ಲಜ್ಜೆಯು ದೂರವಾಗುವುದಿಲ್ಲ. ನಾಚಿಕೆಯೇ ನಾಚಿಕೊಳ್ಳುತ್ತದಂತೆ—"ಲಜ್ಜಾಪಿ ಸಲಜ್ಜಾ". ರಾಧೆಗೆ ಕೃಷ್ಣದರ್ಶನವಾದಾಗ ಹರ್ಷಭಯ ರೋಮಾಂಚನಗಳಾದುವಂತೆ! ಆ ಆನಂದಬಾಷ್ಪವನ್ನು ಕವಿಯು "ಇದಾನೀಂ ರಾಧಾಯಾಃ ಪ್ರಿಯತಮಸಮಾಲೋಕಸಮಯೇ ಪಪಾತ ಸ್ವೇದಾಂಬುಪ್ರಸರ ಇವ ಹರ್ಷಾಶ್ರುನಿಕರಃ" ಎಂದು ಚಿತ್ರಿಸಿದ್ದಾನೆ.

ಯಮಕ—ಅನುಪ್ರಾಸಾದಿಗಳನ್ನೂ ಇತರ ಅಲಂಕಾರಗಳನ್ನೂ ನುಡಿನುಡಿಗೂ ಈ ಕಾವ್ಯದಲ್ಲಿ ನಾವು ಕಾಣಬಹುದಾಗಿದೆ. ಈಗಾಗಲೇ ಎಷ್ಟೋ ಗೊತ್ತಾಗಿದೆ. ಇನ್ನಷ್ಟನ್ನು ಕೊಡಬಹುದು.—

ರತಿಸುಖಸಾರೇ ಗತಮಭಿಸಾರೇ ಮದನ ಮನೋಹರ ವೇಷಂ
ಅಮಲಕಮಲದಳಲೋಚನ ಭವಮೋಚನ ತ್ರಿಭುವನ ವಿಧಾನ
ಅಲಸ ನಿಮೀಲಿತಲೋಚನಯಾ ಪುಲಕಾವಳಿ ಲಲಿತ ಕಪೋಲಂ
ಅಸ್ತೋಕಸ್ತಬಕನಮಿತಾಶೋಕಕಲಿಕಾ ವಿಕಾಸಃ
ಪಾಟಲ ಪಾಣಿಜಾಂಕಿತಮುರಃ
ರಾಧಾ ಮುಗ್ಧಾ ಸ್ವಾಧೀನ ಭರ್ತೃಕಾ

ಕಾವ್ಯದ ಉದ್ದಕ್ಕೂ ಪದಗಳು ತಮಗೆ ತಾವೇ ಜೋಡಿಸಿಕೊಂಡು ತಮಗೆ ತಾವೇ ಹರಿದಂತೆ ಕಾಣುತ್ತವೆ.

ಒಟ್ಟಿನಲ್ಲಿ ಕಾವ್ಯವು ಮೊದಲಿಂದ ತುದಿಯವರೆಗೆ ಸರಳವಾಗಿದೆ. ಎಲ್ಲಿಯೂ ಎಡವದೆ ತೊಡಕದೆ ತನ್ನ ಗುರಿಯನ್ನು ಸಾಧಿಸಿದೆ. ಕಾವ್ಯಚಿತ್ರಕ್ಕೆ ಭಾಷೆಯ ಚೌಕಟ್ಟು ಸುಂದರವಾಗಿ ಹೊಂದಿಕೊಂಡಿದೆ.

ಇದರಲ್ಲಿ ಇಂದಿನ ದೃಷ್ಟಿಯಿಂದ ಆಕ್ಷೇಪಣೆಗೆ ಸಿಲುಕಬಹುದಾದ ಅನೇಕ ಬಣ್ಣನೆಗಳಿವೆ. ದಿಟ; ಆದರೆ ಕವಿಯ ಕಾಲದ ರಸಿಕತೆಗೆ ಈ ಕಾವ್ಯವು ಒಂದು ಸಾಕ್ಷಿಯಾಗಿ ನಿಂತಿದೆ; ಮತ್ತು ಪ್ರತ್ಯೇಕಿಸಿ ತೆಗೆಯಬಹುದಾದ ಭಾಗವು ಸ್ವಲ್ಪವಾಗಿದೆ. ಏನೇ ಇರಲಿ, ಜಯದೇವನು ಭಕ್ತಿಯ ಹೊದಿಕೆಯನ್ನು ಕಾವ್ಯವಲ್ಲರಿಗೆ ತೊಡಿಸಿದ್ದಾನೆ. ನಮ್ಮ ಮನಸ್ಸು ಅತ್ತ ಇತ್ತ ತೂಗಾಡುವಷ್ಟರಲ್ಲಿ ಮತ್ತೆ ಮತ್ತೆ ಎಚ್ಚರಿಕೆ ಕೊಡುತ್ತಾನೆ.—"ಹರಿಚರಣ ಶರಣ ಜಯದೇವ ಕವಿ ಭಾರತೀ", "ಶ್ರೀ ಜಯದೇವ ಭಣಿತಂ ಹರಿಚರಿತಂ", "ಭಣಿತ ವಚನೇನ ಪ್ರವಿಶತು ಹರಿರಪಿ ಹೃದಯಂ",

"ಅತಿ ಲಲಿತಂ ಸುಖಯತು ರಸಿಕಜನಂ ಹರಿಚರಿತಂ." ಮೊದಲೇ ಹೇಳಿದಂತೆ ಮಧುರಕೋಮಲಕಾಂತಪದಾವಳಿಯ ಜಯದೇವ ಸರಸ್ವತಿಯು ಹರಿಸ್ಮರಣೆಯನ್ನು ವಿಲಾಸಕಥೆಯಲ್ಲಿ ನಿರೂಪಿಸತಕ್ಕದ್ದು. ಕೊನೆಯಲ್ಲಿಯೂ ಜಯದೇವನು "ಸಂಗೀತ ಕಲೆಯಲ್ಲಿ ಯಾವುದು ಸೂಕ್ಷ್ಮಜ್ಞಾನವೋ, ಯಾವುದು ವಿಷ್ಣುವಿನ ಧ್ಯಾನವೋ, ಯಾವುದು ಶೃಂಗಾರರಸದ ಸದಸದ್ವಿವೇಚನೆಯೋ ಮತ್ತು ಯಾವುದು ಕಾವ್ಯಗಳಲ್ಲಿ ಲೀಲೆಯೋ, ಅದನ್ನು ಆನಂದಿತರಾದ ರಸಿಕಜಾಣರು ಈ ಕಾವ್ಯದಲ್ಲಿ ಅರಸಲಿ" ಎಂದು ಬೇಡಿದ್ದಾನೆ.

ಜಯದೇವ ಕವಿಯ ಭಕ್ತಿಯು ಪರಮ ಅದ್ಭುತವಾದುದೆಂದು ತಿಳಿದುಬರುತ್ತದೆ. ಆತನು ಬರೆದಿರುವ

> ವೇದಾನುದ್ಧರತೇ ಜಗಂತಿ ವಹತೇ ಭೂಗೋಳಮುದ್ಬಿಭ್ರತೇ
> ದೈತ್ಯಂ ದಾರಯತೇ ಬಲಿಂ ಛಲಯತೇ ಕ್ಷತ್ರಕ್ಷಯಂ ಕುರ್ವತೇ |
> ಪೌಲಸ್ತ್ಯಂ ಜಯತೇ ಹಲಂ ಕಲಯತೇ ಕಾರುಣ್ಯಮಾತನ್ವತೇ
> ಮ್ಲೇಚ್ಛಾನ್ಮೂರ್ಛಯತೇ ದಶಾಕೃತಿಕೃತೇ ಕೃಷ್ಣಾಯ ತುಭ್ಯಂ ನಮಃ ||

ಎಂಬ ದಶಾವತಾರದ ಶ್ಲೋಕವು ಇಂದಿಗೂ ನಮ್ಮ ದೇಶದಲ್ಲಿ ಎಲ್ಲರ ಬಾಯಲ್ಲೂ ನಲಿಯುತ್ತಿದೆ. ಆತನು ಬರೆದಿರುವ ಮೊದಲನೆಯ ಅಷ್ಟಪದಿಯೇ ಮಾಳವಿರಾಗದ ದಶಾವತಾರ ಸ್ತೋತ್ರ. ಇದರಲ್ಲಿ ಬರುವ "ಮ್ಲೇಚ್ಛನಿವಹ ನಿಧನೇ ಕಲಯಸಿ ಕರವಾಲಂ" ಎಂಬುದು ಪ್ರಸಿದ್ಧವಾದ 'ಕೊಹಿನೂರು' ಕಾದಂಬರಿಯಲ್ಲಿ ಮೂಡಿರುವುದನ್ನು ನಾವು ನೋಡಬಹುದು.

ಜಯದೇವ ಕವಿಯು ಒಂದಾನೊಂದು ಸಲ ತನ್ನ ಶ್ರೀಮಂತ ಶಿಷ್ಯನೊಬ್ಬನನ್ನು ಜೀಳ್ಕೊಂಡು ಜಗನ್ನಾಥಕ್ಕೆ ಹಿಂತಿರುಗಿ ಹೋಗುವಾಗ ದಾರಿಯಲ್ಲಿ ಕಳ್ಳರು ಬಂದು ಅವನಲ್ಲಿದ್ದ ಧನವನ್ನು ಅಪಹರಿಸಿದರು. (ಗುರುವಿಗೆ ತಿಳಿಯದಂತೆ ಶಿಷ್ಯನು ಅವನ ಗಂಟಿನಲ್ಲಿ ಒಡವೆಗಳನ್ನಿಟ್ಟಿದ್ದನು.) ಅಷ್ಟಕ್ಕೆ ಸುಮ್ಮನಾಗದೆ ಅವರು ಆತನನ್ನು ಕೈಕಾಲು ಕಡಿದು ಒಂದು ಹಳ್ಳದಲ್ಲಿ ಹಾಕಿ ಅರಣ್ಯದಲ್ಲಿ ಬಿಟ್ಟುಹೋದರು. ಆ ದಿವಸ ಕ್ರೌಂಚರಾಜನೆಂಬ ಒಬ್ಬ ಅರಸು ಬೇಟೆಯಾಡುವುದಕ್ಕೋಸ್ಕರ ಆ ಅರಣ್ಯಕ್ಕೆ ಬಂದು ಸಂಚರಿಸುತ್ತ, ಅಲ್ಲಿ ಹರಿಧ್ಯಾನಮಾಡುತ್ತಿದ್ದ ಈತನನ್ನು ಕಂಡು, ವಿಚಾರಿಸಿ, ತನ್ನ ಜತೆಗೆ ಕರೆದುಕೊಂಡು ಹೋದನು. ಸಾಧುಸೇವಾತತ್ಪರನಾದ ಆ ರಾಜನ ಬಳಿಗೆ ಅನೇಕರು ಬರುತ್ತಿದ್ದಂತೆಯೇ ಆ ಕಳ್ಳರೂ ಬಂದರು. ಎಲ್ಲರಿಗಿಂತ ಹೆಚ್ಚಾಗಿ ಅವರು ಜಯದೇವನಿಂದ ಉಪಚರಿಸಲ್ಪಟ್ಟರಂತೆ. ಅನಂತರ ಅವರು ಬಹು ಧನಸಮೇತ ಹೊರಡುವಾಗ ಆಳುಗಳು ಆಶ್ಚರ್ಯದಿಂದ ಜಯದೇವನ ನಡತೆಯನ್ನು ಕುರಿತು

ಪ್ರಶ್ನಿಸಿದರು. ಕಳ್ಳರು ಸುಳ್ಳು ಹೇಳಿದ್ದರಿಂದ ಭೂಕಂಪವಾಗಿ ನೆಲ ಬಾಯಿಬಿಟ್ಟು ಅವರು ಇಳೆಗೆ ಇಳಿದರು. ಅಂಜುತ್ತಂಜುತ್ತ ಈ ಸುದ್ದಿಯನ್ನು ಆಳುಗಳು ಅರಸನಿಗೆ ತಿಳಿಸಲು, ಜಯದೇವನೂ ಅರಿತು "ಶತ್ರುಗಳನ್ನು ನಾಶಪಡಿಸಬಹುದೆ? ಹೇ, ರುಕ್ಮಿಣೀಪತಿ! ನೀನು ನಿನ್ನ ಶತ್ರುಗಳನ್ನು ಅನುಗ್ರಹಿಸಲಿಲ್ಲವೆ?" ಎಂದು ಪರಿಪರಿಯಾಗಿ ಬೇಡಲು, ದೇವರು ಪ್ರತ್ಯಕ್ಷನಾಗಿ ಆತನ ಶಮದಮಾದಿಗಳನ್ನು ಕೊಂಡಾಡಿ ಕೈಕಾಲು ಕೊಟ್ಟನಂತೆ.

ಒಂದು ಸಲ ಜಯದೇವನ ಪತ್ನಿ ಪದ್ಮಾವತಿಯು ಕ್ರೌಂಚರಾಜನ ರಾಣಿಯ ಬಳಿ ಇದ್ದಾಗ ಆಕಸ್ಮಿಕವಾಗಿ ದೂತನೊಬ್ಬನು ಬಂದು—ತಮ್ಮ ನಂಟನೊಬ್ಬನು ಸಾಯಲು ಅವನ ಹೆಂಡತಿಯು ಸಹಗಮನಮಾಡಿದಳೆಂದನು. ಸಹಗಮನವು ಅಸಾಮಾನ್ಯವಾದುದೆಂದು ಎಲ್ಲರೂ ಆಶ್ಚರ್ಯಪಟ್ಟರು. ಪದ್ಮಾವತಿಯು ಮಾತ್ರ ಸುಮ್ಮನೆ ಇದ್ದಳು. ರಾಣಿಯು ಇದೇನೆಂದು ಕೇಳಲು ಆಕೆ "ಪತಿಯೊಡನೆಯೇ ಪ್ರಾಣವೂ ಹೋಗಬೇಕು. ಸತ್ತು ಎಷ್ಟೋ ಹೊತ್ತಾದಮೇಲೆ ಸಹಗಮನವೆಂಥಾದ್ದು!" ಎಂದಳಂತೆ. ರಾಣಿಗೆ ಅಸಮಾಧಾನವಾಗಿ ಆಕೆಯ ಸತ್ವವನ್ನು ಪರೀಕ್ಷಿಸಲು, ಒಂದು ದಿನ ಜಯದೇವನು ದೊರೆಯೊಡನೆ ಬೇಟೆಗೆ ಹೋಗಿದ್ದಾಗ, ಹುಲಿ ಕೊಂದು ಅವನು ಸತ್ತನೆಂಬ ಸುಳ್ಳುಸುದ್ದಿಯನ್ನು ಹಠಾತ್ತಾಗಿ ತರಿಸಿದಳು. ಸತ್ಯವೆಂದು ತೋರುವಂತೆ ರಕ್ತಕಲೆಯ ಬಟ್ಟೆಗಳನ್ನು ತೋರಿಸಿದ ತಕ್ಷಣ ಪದ್ಮಾವತಿ ಪ್ರಾಣಬಿಟ್ಟಳಂತೆ. ಅನರ್ಥವಾಗಿ ಹೋಯಿತು. ಈ ಅಚಾತುರ್ಯ ನಡೆದ ಸ್ವಲ್ಪ ಹೊತ್ತಿನಲ್ಲಿಯೇ ದೊರೆಯೂ ಕವಿಯೂ ಬಂದರು. ಜಯದೇವನು ದುಃಖಿತನಾದ ಅರಸನನ್ನು ಸಮಾಧಾನಮಾಡಿ ತಾನು ಪತ್ನಿಯ ಬಳಿ ನಿಂತು ಇಪ್ಪತ್ತುನಾಲ್ಕು ಅಷ್ಟಪದಿಗಳನ್ನೂ ರಾಗರಾಗವಾಗಿ ಹಾಡಲು, ನಾರಾಯಣನು ಪ್ರತ್ಯಕ್ಷನಾಗಿ ಪದ್ಮಾವತಿಗೆ ಜೀವದಾನ ಮಾಡಿದನಂತೆ.

ಜಯದೇವನು ಹತ್ತೊಂಬತ್ತನೆಯ ಅಷ್ಟಪದಿಯನ್ನು ಬರೆದು ಮುಗಿಸುವಾಗ "ಪದ್ಮಾವತೀ ರಮಣ ಜಯದೇವ ಕವಿ ಭಾರತೀ" ಎಂದು ಬರೆದು 'ಪದ್ಮಾವತೀ' ಎಂಬುದನ್ನು ಹೊಡೆದು ಮರಳಿ ಬರೆಯಲು ಏನೂ ತೋಚದೆ, ಗ್ರಂಥವನ್ನು ತೆಗೆದಿಡೆಂದು ಹೆಂಡತಿಗೆ ಹೇಳಿ ಸ್ನಾನಕ್ಕೆ ಹೋದನಂತೆ. ಪುನಃ ಅವನೇ ಹಿಂತಿರುಗಿ ಬಂದು ಗ್ರಂಥವನ್ನು ತರಿಸಿ ಬರೆದು ಹೋದಹಾಗೆ ಆಯಿತಂತೆ. ಮಧ್ಯಾಹ್ನ ಊಟವಾದ ಮೇಲೆ ಗ್ರಂಥವನ್ನು ತೆರೆದು ಅದರಲ್ಲಿ ತನ್ನ ಮನಸ್ಸಿನ ಪಂಕ್ತಿಗಳೇ ಇದ್ದುದನ್ನು ಕಂಡು ಅದನ್ನು ಯಾರು ಬರೆದರೆಂದು ಕೇಳಲು ಆಕೆ 'ನೀವೇ' ಎಂದಳು. "ಶ್ರೀಕೃಷ್ಣನೇ ಆ ರೂಪವಾಗಿ ಬಂದು ನಿನಗೆ ದರ್ಶನವಿತ್ತನು. ನೀನು ಧನ್ಯೆ" ಎಂದು ಜಯದೇವನು ಹೇಳಿದಂತೆ ಒಂದು ಕಥೆ ಇದೆ. ಹೀಗೆಯೇ ಓರ್ವ ನೆಯ್ಗೆಯವನು ಮಗ್ಗ ಹಾಕು

ವಾಗ 'ಜಯ ಜಗದೀಶಹರೆ' ಎಂಬ ಪಲ್ಲವಿಯನ್ನು ಕುರುಕುತ್ತಿದ್ದುದರಿಂದ ಅಲ್ಲಿ ಸನ್ನಿಹಿತನಾದ ಕೃಷ್ಣನು ಕುಣಿದು ಅದೆಲ್ಲಾ ಹಾಳಾಗುತ್ತಿತ್ತೆಂದೂ, ಆ ಕುಣಿತದಲ್ಲಿ ಗೆಜ್ಜೆಯ ಶಬ್ದ ಕೇಳಿಬರುತ್ತಿತ್ತೆಂದೂ ಜನಜನಿತವಾಗಿದೆ.

ಇವೆಲ್ಲಾ ಏನೇ ಇರಲಿ, ಜಯದೇವನು ಈ ಕಾವ್ಯದಲ್ಲಿ ತನ್ನ ಅಂತರಂಗವನ್ನು ಚೆನ್ನಾಗಿ ಬೆಳಗಿಸಿ ತೋರಿದ್ದಾನೆ ಎಂಬುದನ್ನು ನಾವು ಒಪ್ಪುವುದಾದರೆ 'ಗೀತಗೋವಿಂದ'ಕಾರನ ಅಂತಃಕರಣದಲ್ಲಿ ಎದ್ದುಬರುವ ಭಾವಗೀತದ ಸುಂದರ ತೆರೆಗಳನ್ನು ನಾವು ಕಾಣಬಹುದು. ಆತನ ಕಲಾಪರಿಣತೆ, ರಸಿಕತೆ, ಸಂಗೀತಜ್ಞಾನ, ಸಾಹಿತ್ಯಲೋಲುಪತೆ, ಅಸೀಮವಾದ ದೈವಭಕ್ತಿ, ಲೋಕಾನುಭವದ ಮಾರ್ದವದಿಂದ ಕೂಡಿದ ಮನೋವೇಧಕಚಿತ್ರ ಮುಂತಾದುವನ್ನೆಲ್ಲಾ ಪಾಠಮಾಡಬಹುದು. ಪದ್ಮಾವತಿಯೂ ಜಯದೇವನೂ ಒಂದುಗೂಡಿ ಹಾಡುತ್ತಿರುವ ಚಿತ್ರವು ನಮ್ಮ ಚಿತ್ತಭಿತ್ತಿಯಲ್ಲಿ ಮಸುಳಿಹೋಗುವಂತಿಲ್ಲ. ಆ ದಂಪತಿಗಳು ದೇವರಮನೆಯ ಬಳಿ ಕುಳಿತು ಈಗಲೂ ಸುಖವಾಗಿ ಹಾಡಿಕೊಳ್ಳುತ್ತಿರುವಂತೆ, ಹಾಡಿನಲ್ಲಿ ಮೈಮರೆತಿರುವಂತೆ, ಕಾಣುತ್ತದೆ.

ಸಾಹಿತಿಯೂ ಗಾಯನಕುಶಲನೂ ಮೇಳವಿಸುವುದು ಅಪರೂಪ. ಅದರಲ್ಲಿ ದೈವಭಕ್ತಿಯು ಕೂಡಿರುವುದೆಂದರೆ ರಸಾಯನಕ್ಕೆ ಹೆಜ್ಜೇನು ಸೇರಿದಂತೆಯೇ ಸರಿ. ಇಂಥ ಪುಣ್ಯವು ಅನೇಕ ಕವಿಗಳಿಗಿಲ್ಲ. ಈ ದೇವಾಂಶ ಪುರುಷನಲ್ಲಿ ಸಂಗೀತ ಸಾಹಿತ್ಯಗಳು ಸಮರಸ ಹೊಂದಿ ರಸಪ್ರವಾಹವು ಕಾವ್ಯದ ಹೊನಲಾಗಿ ಪ್ರೇಮಮೂರ್ತಿಯಾದ ಮುರಲೀಧರನನ್ನು ಆರಾಧಿಸುತ್ತಿದೆ.

ಎಂ. ನಂಜುಂಡ ಶಾಸ್ತ್ರೀ.

ಬ್ರಹ್ಮಶಿವನ ಕಾಲವಿಚಾರ

ಸಮಯಪರೀಕ್ಷೆಯನ್ನೂ ತ್ರೈಲೋಕ್ಯ ಚೂಡಾಮಣಿ ಸ್ತೋತ್ರವನ್ನೂ ಬರೆದಿರುವ ಬ್ರಹ್ಮಶಿವನ ಕಾಲದ ಬಗ್ಗೆ ಭಿನ್ನಾಭಿಪ್ರಾಯಗಳಿವೆ. ಬ್ರಹ್ಮಶಿವನು ಚಾಳುಕ್ಯ ರಾಜನಾದ ತ್ರೈಲೋಕ್ಯಮಲ್ಲನ ಮಗ ಕವಿ ಕೀರ್ತಿವರ್ಮ ('ಗೋವೈದ್ಯ'ದ ಕರ್ತೃ) ನನ್ನೂ ದೇವನಾಗನ ಮಗನಾದ ಆಹವಮಲ್ಲಮಹೀಶನನ್ನೂ ಸ್ತುತಿಸಿ ತನ್ನ ಗ್ರಂಥವನ್ನು ಆರಂಭಮಾಡಿರುವುದರಿಂದ ಈ ಕವಿಗೆ ಕೀರ್ತಿವರ್ಮ ಕವಿ ಸಮಕಾಲದವನಾಗಿದ್ದಿರಬೇಕೆಂದೂ ಆದುದರಿಂದ ಇವನೂ ಸುಮಾರು ೧೧೦೦ ರಲ್ಲಿದ್ದಿರಬೇಕೆಂದೂ ಕವಿಚರಿತಕಾರರು ಅಭಿಪ್ರಾಯಪಡುತ್ತಾರೆ. ಅಲ್ಲದೆ ಈ ಕವಿಯು ಗುರುವಾದ ವೀರಣಂದಿಮುನಿ ೧೧೧೫ ರಲ್ಲಿ ಗತಿಸಿದ ಮೇಘಚಂದ್ರ ತ್ರೈವಿದ್ಯನ ಮಗನಾಗಿರಬೇಕೆಂದೂ ಕವಿಚರಿತಕಾರರು ಹೇಳುತ್ತಾರೆ.

ಡಾಕ್ಟರ್ ವೆಂಕಟಸುಬ್ಬಯ್ಯನವರು ಗೋವೈದ್ಯವನ್ನು ಬರೆದ ಕೀರ್ತಿವರ್ಮನ ತಂದೆಯಾದ ತ್ರೈಲೋಕ್ಯಮಲ್ಲನೆಂಬವನು ಚಾಲುಕ್ಯ ಚಕ್ರವರ್ತಿಯಾದ ತ್ರೈಲೋಕ್ಯ ಮಲ್ಲನ ಕಾಲದಲ್ಲಿ ಪಾಲಭ ಎಂಬ ನಗರವನ್ನೋ ನಾಡನ್ನೋ ಆಳುತ್ತಿದ್ದ ಒಬ್ಬ ಸಣ್ಣ ಅಧಿಕಾರಿಯಿರಬೇಕೆಂದೂ, ಸಮಯಪರೀಕ್ಷೆಯಲ್ಲಿ ಸ್ತುತಿಸಲ್ಪಟ್ಟಿರುವ ಆಹವ ಮಲ್ಲಮಹೀಶನು ಪ್ರಾಯಃ ಚಾಲುಕ್ಯ ಚಕ್ರವರ್ತಿಯಾದ ತ್ರೈಲೋಕ್ಯಮಲ್ಲ ಆಹವಮಲ್ಲನೇ ಇರಬೇಕೆಂದೂ ಆದುದರಿಂದ ಕೀರ್ತಿವರ್ಮ ಬ್ರಹ್ಮಶಿವರು ೧೦೬೦–೧೦೬೫ ರಲ್ಲಿ ಜೀವಿಸುತ್ತಿದ್ದಿರಬೇಕೆಂದೂ ಅಭಿಪ್ರಾಯಪಟ್ಟಿದ್ದಾರೆ. ಬ್ರಹ್ಮಶಿವನ ಗುರುವಾದ ವೀರಣಂದಿಯು ೧೧೧೫ ರಲ್ಲಿ ಗತಿಸಿದ ಮೇಘಚಂದ್ರನ ಶಿಷ್ಯನಲ್ಲವೆಂಬುದು ಡಾಕ್ಟರ್ ವೆಂಕಟಸುಬ್ಬಯ್ಯನವರ ಹೇಳಿಕೆ.

ಸಮಯಪರೀಕ್ಷೆಯ ಮೊದಲ ಕೆಲವು ಪದ್ಯಗಳನ್ನು ಕವಿಚರಿತಕಾರರೂ ಡಾಕ್ಟರ್ ವೆಂಕಟಸುಬ್ಬಯ್ಯನವರೂ ನೋಡಿರಲಿಲ್ಲವಾದುದರಿಂದ ಅವರಿಬ್ಬರಿಗೂ ಭಿನ್ನಾಭಿಪ್ರಾಯಕ್ಕೆ ಎಡೆಯುಂಟಾಗಿದೆ. ಬ್ರಹ್ಮಶಿವನು ತನ್ನ ಗ್ರಂಥದ ಆದಿಯಲ್ಲಿ ಕೀರ್ತಿವರ್ಮನನ್ನು ಹೊಗಳಿರುವುದರಿಂದ ಅವನು ಕೀರ್ತಿವರ್ಮನ ಕಾಲದಲ್ಲಿಯೇ ಇದ್ದನೆಂದು ಅವರ ಭಾವನೆ. ಈಗ ಸಮಯಪರೀಕ್ಷೆಯ ಪ್ರತಿಯು ಸಮಗ್ರವಾಗಿ ದೊರೆತಿರುವುದರಿಂದ[1] ಕವಿಯ ಕಾಲವನ್ನು ಇನ್ನೂ ಖಚಿತವಾಗಿ ನಿರ್ಧರಿಸಬಹುದು.

---

[1] ತಮ್ಮಲ್ಲಿದ್ದ ಸಮಯಪರೀಕ್ಷೆಯ ಪ್ರತಿಯಿಂದ ಆ ಗ್ರಂಥದ ಆದಿಯ ಕೆಲವು ಪದ್ಯಗಳನ್ನು ಎತ್ತಿ ಬರೆದುಕೊಳ್ಳುವುದಕ್ಕೆ ಅವಕಾಶವಿತ್ತುದಕ್ಕಾಗಿ ಮೂಡುಬಿದಿರೆ ಮಠದ ಶ್ರೀಗಳವರಿಗೆ ನಮ್ಮ ವಂದನೆಗಳು. ಈ ಪದ್ಯಗಳನ್ನು ಪರಿಶಿಷ್ಟದಲ್ಲಿ ಕೊಟ್ಟಿದೆ.

ಕವಿಯು ತನ್ನ ಗ್ರಂಥದ ಆದಿಯಲ್ಲಿ ಗೃದ್ಧ್ರಪಿಂಛರು, ಸಮಂತಭದ್ರರು, ಜಟಾಚಾರ್ಯರು, ಅಕಳಂಕದೇವರು, ಕೊಂಡಕುಂದರು, ಸೋಮದೇವಪಂಡಿತರು, ಚತುರ್ಮುಖದೇವರು, ಬೆಟ್ಟದ ದೇವರು, ವಾದಿರಾಜರು, ಮೇಘಚಂದ್ರರು ಇವರನ್ನೂ

ವೀರದಗುರ್ವಿಂದುಗ್ರನ | ವೀರಮನದಟಲೆದು ನೆಗಳ್ದ ಮದನನ ಮದಮಂ |
ಬೀರಮುಮನಲೆದು ಗೆಲ್ದುದು | ವೀರತಪಂ ವೀರಣಂದಿ ಮಲಧಾರಿಗಳಾ ||

ಎಂದು ಮುಂತಾಗಿ ನಾಲ್ಕು ಪದ್ಯಗಳಲ್ಲಿ ವೀರಣಂದಿಯನ್ನೂ ಸ್ತುತಿಸಿ ಪುನಃ ಕವಿಪರಮೇಷ್ಠಿ ಬಾಳಚಂದ್ರ ಇವರನ್ನೂ ಹೊಗಳಿ

ಧರೆಯೊಳ್ ಸಂದ ಮೊರಂಬದೊಳ್ ನಿಜನಿಶಿಧಿಸ್ಥಾನದೊಳ್ ಮಣ್ಣನಾ
ದರದಿಂದೊರ್ವೆಯೆ ತಂದು ಪೂಸಲೊಡನತ್ಯುಗ್ರಗ್ರಹಾನೇಕ ಸ |
ರ್ವರುಜಾಪೀಡೆಗಳಾಗಳಂತೆ ಕೆಡುಗುಂ ತಾನೆಂದೊಡಮ್ಮಮ್ಮ ಬಾ
ಪ್ಪುರೆ ಸಾಮಾನ್ಯಮೆ ಮೇಘಚಂದ್ರಮುನಿ ಮಾಹಾತ್ಮ್ಯಂ ಧರಾಚಕ್ರದೊಳ್ ||

ಎಂಬ ಪದ್ಯದಲ್ಲಿ ಇನ್ನೊಬ್ಬ ಮೇಘಚಂದ್ರನನ್ನೂ

ಪದಿಮೂಱುದಿನಂ ಸಂನ್ಯಸ | ನದೆ ಕಾಯೋತ್ಸರ್ಗದಿಂದೆ ನಿಂದುಂ ನಿಂದಂ |
ದದಿನಸುವಂ ಬಿಟ್ಟು ಜಗದ್ವಿದಿತಯಶಂ ವೀರಣಂದಿ ಸುಗತಿಗೆ ಸಂದಂ ||

ಎಂಬ ಪದ್ಯದಲ್ಲಿ ಇನ್ನೊಬ್ಬ ವೀರಣಂದಿಯನ್ನೂ ಸ್ತುತಿಸಿದ್ದಾನೆ. ಜೀವಸಂಬೋಧನೆಯನ್ನು ಬರೆದಿರುವ ಬಂಧುವರ್ಮ[1], ಪಂಪ ಪೊನ್ನ ರನ್ನರು, "ಕವಿತೆಯೊಳವರನ್ನನೆ ವಿದಿತಾತ್ಮಭಾವಸಗ್ಗಳದೇವ", ನಾಗಚಂದ್ರ, ಇವರನ್ನು ಹೆಸರಿಸಿದ್ದಾನೆ.

ಜೈನಮತಕ್ಕೂ ಜೈನವಿದ್ವಾಂಸರಿಗೂ ಹೆಚ್ಚು ಆಶ್ರಯವಿತ್ತ ಶಂಖಾವನೀಶ (?), ದಾನಚಿಂತಾಮಣಿ ಅತ್ತಿಮಬ್ಬೆ, ಚಾವುಂಡರಾಯ,[2] ರಾಚಮಲ್ಲ, 'ಮಂತ್ರಿತಿಳಕ'ನಾದ ಭರತ, ಪೆರ್ಗಡೆಬೊಮ್ಮ, ಬೊಮ್ಮನ ಅಗ್ರತನಯನೂ ಮಂಡಳೇಶ್ವರತಿಳಕನೂ ಆದ ನಾಗದೇವ, ಕೀರ್ತಿವರ್ಮ, ಕೀರ್ತಿವರ್ಮನಂತೆಯೇ ದಾನಶೂರನಾಗಿದ್ದ ದೇವನಾಗನ ಮಗ ಆಹವಮಲ್ಲ ಮಹೀಶ—ಇವರುಗಳ ಸ್ತುತಿಯೂ ಇದೆ.

---

[1] ಬಂಧುವರ್ಮನ ಕಾಲ ಸು. ೧೨೦೦ ಎಂದು ಕವಿಚರಿತಕಾರರು ಹೇಳುತ್ತಾರೆ. ಬ್ರಹ್ಮಶಿವನು ಇವನನ್ನು ಸ್ತುತಿಸಿರುವುದರಿಂದ ಇವನು ಬ್ರಹ್ಮಶಿವನ ಸಮಕಾಲಿಕನೋ ಬ್ರಹ್ಮಶಿವನಿಗಿಂತ ಹಿಂದಿನವನೋ ಇರಬೇಕು.

[2] ಕವಿಚರಿತೆಯಲ್ಲಿಯೂ, ಮೈಸೂರು ಓರಿಯಂಟಲ್ ಲೈಬ್ರರಿಯ ಪ್ರತಿಯಲ್ಲಿಯೂ "ರಾಮತರಾಯ" ಎಂದಿದೆ. ಮೂಡುಬಿದಿರೆಯ ಪ್ರತಿಯಲ್ಲಿ "ರಾಯನನುದಾರಿಯಂ ಪೊಗಳದರಾರ್" ಎಂದಿದೆ. ಇವನು ಚಾವುಂಡರಾಯನೇ ಇರಬೇಕು.

ಸುಮಾರು ೧೨೬೦ರಲ್ಲಿದ್ದ ಕೇಶಿರಾಜನು ತನ್ನ ಶಬ್ದಮಣಿದರ್ಪಣದಲ್ಲಿ ಬ್ರಹ್ಮಶಿವನ ತ್ರೈಲೋಕ್ಯ ಚೂಡಾಮಣಿಯಲ್ಲಿ ಬರುವ ಒಂದು ಪದ್ಯದ "ಅಹಿಂಸಾ ಲಕ್ಷಣೋ ಧರ್ಮ ಎಂಬುದನೀ ತತ್ತ್ವವಿತುರ್ವರೇಣ್ಯರಱಿದರ್ ತ್ರೈಲೋಕ್ಯ ಚೂಡಾಮಣೀ" ಎಂಬ ಭಾಗವನ್ನು ಉದಾಹರಿಸಿದ್ದಾನೆ. ಸಮಯಪರೀಕ್ಷೆಯಲ್ಲಿ

ಪುಲಿಗೆರೆಯಲ್ಲಿ ಮುಂ ವೃಷಭವಾಹನ ಯಕ್ಷನನಾದಿಕಾಲದೊಳ್
ನೆಲದೊಳೆ ಪೂಳ್ದುದಂ ಬುರುಟಿ ಕಂಡದನೊರ್ಮೆಯೆ ನಂದಿವಾಹನಂ|
ನೆಲದೊಳಗಿರ್ದ ರುದ್ರನೊಗೆತಂದನಿದಲ್ತೆ ಸ್ವಯಂಭುವೆಂದು ಗಾ
ವಿಲರದನೀಗಳರ್ಚಿಸುವರೇನದು ತಮ್ಮ ಸ್ವಯಂಭುಲಿಂಗವೆ? ||

ಈ ಪದ್ಯವಿದೆ. ಪುಲಿಗೆರೆಯ ಸೋಮನಾಥ ಬಸದಿಯಲ್ಲಿ ಸೋಮನಾಥ ಲಿಂಗವನ್ನು ಸ್ಥಾಪಿಸಿದವನು ಆದಯ್ಯ. ಆದಯ್ಯನ ೩೯ನೆಯ ಮತ್ತು ೪೦ನೆಯ ವಚನಗಳಲ್ಲಿ ಬಸವೇಶ್ವರನ ಹೊಗಳಿಕೆ ಇದೆಯಾದುದರಿಂದ ಆದಯ್ಯನ ಕಾಲ ಸುಮಾರು ೧೧೬೦ ಎಂದು ಹೇಳಬಹುದು. ಆದುದರಿಂದ ಬ್ರಹ್ಮಶಿವನು ಸುಮಾರು ೧೧೬೦ರಿಂದ ಈಚೆಗೆ ಕೇಶಿರಾಜನ ಕಾಲವಾದ ೧೨೬೦ಕ್ಕಿಂತ ಮುಂಚೆ ಜೀವಿಸಿದ್ದನೆಂದು ಸಿದ್ಧವಾಗುತ್ತದೆ.

ಬ್ರಹ್ಮಶಿವನ ಗ್ರಂಥಗಳ ಅನೇಕ ಪದ್ಯಗಳಲ್ಲಿ 'ಲಿಂಗಿಗಳ್' 'ಮಹೇಶ್ವರರ್' 'ಶಿವಭಕ್ತರ್' 'ಚರಲಿಂಗಿಗಳ್' 'ಪರಲಿಂಗಿಗಳ್' ಈ ಮಾತುಗಳನ್ನು ನಾವು ಬೇಕಾದಷ್ಟು ಕಡೆ ನೋಡಬಹುದು. ಈ ಪದಗಳನ್ನು ಕವಿ ವೀರಶೈವರನ್ನು ನಿರ್ದೇಶಿಸಿಯೇ ಹೇಳುತ್ತಿದ್ದಾನೆಂದು ತೋರುತ್ತದೆ. ಹನ್ನೊಂದನೆಯ ಶತಮಾನದ ಆದಿಯಿಂದಲೇ ಎಂದರೆ ಶೈವಮತವು ಚಿಗುರೊಡೆಯುವುದಕ್ಕೆ ಪ್ರಾರಂಭವಾದಾಗಲೇ ಜೈನಮತವು ಅವನತಿಯ ಹಾದಿಗೆ ತಿರುಗಿತ್ತಾದರೂ ಬ್ರಹ್ಮಶಿವ ಮತ್ತು ವೃತ್ತವಿಲಾಸ ಇವರನ್ನು ಕೆರಳಿಸಿದ್ದು ಕಲ್ಯಾಣನಗರದಲ್ಲಿ ನಡೆದ ವೀರಶೈವರ ಉಗ್ರ ಚಳುವಳಿ. ಆ ಕಾಲಕ್ಕೆ ಅನೇಕರು ಜೈನಮತವನ್ನು ಬಿಟ್ಟು ವೀರಶೈವಮತಕ್ಕೆ ಸೇರಿಕೊಂಡಿರಬೇಕು. ಪಂಡಿತನಾಗಿದ್ದ ಬ್ರಹ್ಮಶಿವನೇ ಶೈವಚಳುವಳಿಯ ಸುಳಿಗೆ ಸಿಕ್ಕಿ "ಪಿರಿದಟ್ಟಿಯಿಂ"ದ ಮಾಹೇಶ್ವರ ಧರ್ಮವನ್ನು ಸ್ವೀಕರಿಸಿರಬೇಕಾದರೆ ಜನಸಾಮಾನ್ಯರ ಮೇಲೆ ಆ ಚಳುವಳಿಯ ಪ್ರಭಾವವು ಇನ್ನೆಷ್ಟರ ಮಟ್ಟಿಗಿತ್ತೆಂಬುದನ್ನು ಹೇಳಬೇಕಾಗಿಲ್ಲ. ಬ್ರಹ್ಮಶಿವನು ಮಾಹೇಶ್ವರ ಧರ್ಮದಲ್ಲಿ "ಒಳ್ಪುಗಾಣದೆ ಮಗುೞ್ದು" ಪರಮಜಿನಧರ್ಮವನ್ನು ಸ್ವೀಕರಿಸಿದನಂತೆ. ಸ್ವೀಕರಿಸಿ ಬಡವನಾದನಂತೆ. ಅದನ್ನು ಕಂಡ ಆಗದವರು ಆಡಿಕೊಂಡರಂತೆ. ಆ ಸಂಗತಿಯನ್ನೇ ಈ ಕೆಳಗಿನ ಪದ್ಯದಲ್ಲಿ ಹೇಳಿದ್ದಾನೆ.[1]

---

[1] ಪದ್ಯಗಳನ್ನು ಹೆಚ್ಚಿಗೆ ತಿದ್ದುವ ಗೋಜಿಗೆ ಹೋಗಿಲ್ಲ.

ಸಿರಿವಂತಂ ತಾನೆನಲ್ ಜೀವಿಸಿದನಿವನೆ ಮುನ್ನೆ ಮಾಹೇ |
ಶ್ವರನಾಗಿರ್ದಂದು ಮತ್ತಾರ್ಹತದೊಳೆ ಪುಗಲೀತಂಗೆ ದಾರಿದ್ರ್ಯಮಾಯ್ತು |
ದನಿಬರ್ ಮೂಢಾತ್ಮರೆಂಬರ್ ಸಿರಿಯುಮವನ ದಾರಿದ್ರ್ಯಮುಂ ಪೂರ್ವಜನ್ಮಾಂ |
ತರ ಕರ್ಮಂ ಮತ್ತದಂ ಬಿತ್ತಿದನೆ ಬೆಳಸನುಣ್ಬಂದದಿಂದುಣ್ಬನಾತಂ ||

ಈ ಕವಿಯ ಕಾಲದಲ್ಲಿ ಜೈನಮತಕ್ಕೆ ಎಷ್ಟರಮಟ್ಟಿಗೆ ಪೆಟ್ಟುತಗುಲಿತ್ತೆಂಬುದನ್ನು ಈ ಕೆಳಗಿನ ಪದ್ಯಗಳಲ್ಲಿ ಕಾಣಬಹುದು.

ಅರುಹಂತನೆ ದೆಯ್ವಂ ಮಿ | ಕ್ಕರೆಲ್ಲರುಂ ದೇವರಲ್ಲರೇ ಗುಣಿಗಳ್ ಜೈ |
ನರೆ ಮಿಕ್ಕರೆಲ್ಲರುಂ ಕ | ಷ್ಟರೆ ಪೇಳಿಮೆನುತ್ತೆ ಕರ್ಚಿಕೊಲುವರ್ ಮೂರ್ಖರ್ ||
ಧರಣೀತಳದೊಳ್ ಮಾಹೇ | ಶ್ವರರುಂ ವೈದಿಕರೆ ಪಲಬರಲ್ಲದೆ ಜೈನರ್ |
ಪಲ (?) ರಿಲ್ಲರೆಂಬರಂತುಟೆ | ಸಿರಿವಂತರ್ ಕೆಲಬರುಳಿದವರ್ ಪಲರೆ ಪೊಲಂ ||
ಬಲ್ಲಹನುಂ ಸಾಮಂತರು | ಮೆಲ್ಲಾ ಪ್ರಜೆಯುಂ ಶಿವಂಗೆ ಭಕ್ತರೆ ಜೈನರ್ |
ಪೊಲ್ಲಪ್ಪ ಕತದೆ ಕೈಕೊಳ | ಲೊಲ್ಲರ್ ನಾಡವರ್ಗೆಳದಱಿನೆಂಬರ್ ಮೂಢರ್ ||

ಬ್ರಹ್ಮಶಿವನ ಸಮಯ ಪರೀಕ್ಷೆಯು ಹನ್ನೆರಡನೆಯ ಶತಮಾನದ ಉತ್ತರಾರ್ಧದ ಕನ್ನಡನಾಡಿನ ಧಾರ್ಮಿಕ ಪರಿಸ್ಥಿತಿಯನ್ನು ಪ್ರತಿಬಿಂಬಿಸುತ್ತಿದೆಯೆಂದು ಹೇಳಬಹುದು. ಜೈನಮತವು ಎಷ್ಟು ತ್ವರಿತಗತಿಯಿಂದ ಕ್ಷೀಣವಾಗುತ್ತಿತ್ತೆಂಬುದನ್ನು ಉದ್ವೇಗ ಪೂರಿತವಾದ ಬ್ರಹ್ಮಶಿವನ ಪದ್ಯಗಳೇ ಹೇಳಬಲ್ಲುವು. ಜನಗಳು—ಹೆಚ್ಚಾಗಿ ಹೆಣ್ಣು ಮಕ್ಕಳು—ಜೈನಮತವನ್ನು ತಿರಸ್ಕರಿಸಿ ಶೈವಮತಕ್ಕೇ ಹೆಚ್ಚು ಒಲಿದಿರಬೇಕೆಂದು ಕಾಣುತ್ತದೆ. ಕವಿ ಸುಮಾರು ಮೂವತ್ತು ಪದ್ಯಗಳಲ್ಲಿ ಸ್ತ್ರೀಯರನ್ನು ಅಲ್ಲಗಳೆದಿದ್ದಾನೆ. ಪ್ರಾಯಃ ಪ್ರತಿಪದ್ಯವೂ "ಅಱಗುಲಿ ವೆಂಡಿರ್" ಎಂತಲೇ ಕೊನೆಗಾಣುತ್ತದೆ. ಹೆಣ್ಣುಮಕ್ಕಳು ತಾವು ಜೈನರ ಹೊಟ್ಟೆಯಲ್ಲಿ ಹುಟ್ಟಿರಲಿ ಶೈವರ ಹೊಟ್ಟೆಯಲ್ಲಿ ಹುಟ್ಟಿರಲಿ ತಮ್ಮನ್ನು ಕೊಟ್ಟ ಮನೆಯಲ್ಲಂತೂ ಶಿವನನ್ನೇ ಆರಾಧಿಸುತ್ತಿದ್ದಿರಬೇಕು. ಬ್ರಹ್ಮಶಿವನಿಗೂ ಅಂತಹ ಶಿವಭಕ್ತೆ ಹೆಂಡತಿಯೇ ಗಂಟುಬಿದ್ದಿರಬೇಕು. ಆದುದರಿಂದ ಬ್ರಹ್ಮಶಿವನನ್ನು ಕೆರಳಿಸುವುದಕ್ಕೆ ಸಾಕಷ್ಟು ಕಾರಣಗಳಿದ್ದುವೆಂದೇ ಹೇಳಬಹುದು. ಕವಿಯ ಎದೆಯ ಕುದಿಯಿಂದ ಉಕ್ಕಿಬಂದ ಪದ್ಯಗಳು ಈ ಕೆಳಗಿನವು.

ಮನೆಯೊಡೆಯಳ್ ಮೇಣ್ ಮಕ್ಕಳೆ | ಜಿನಧರ್ಮಮನೆಂತುಮೊಲ್ಲದಿರ್ದೊಡೆ ಬಳಿಯಂ |
ಜಿನಸಮಯಿಗಳ್ಗೆ ತವಿಪುದು | ಧನಮಂ ಮನೆಯವರ್ಗೆ ತವಿಸದಿರ್ಪುದು ಜೈನಂ ||
ಮದುವೆಗಿದು ಪೆತ್ತಮಕ್ಕಳೆ | ಗಿದು ಬಾಳ್ಕೆ ಮ್ದಲೆನ್ನದುಳ್ಳುದಂ ಸವಣರ್ಗಿ |
ಕ್ಕಿದಪಂ ಕೂರ್ಪವರಿದ ವೇ | ಳ್ಪುದು ಬುದ್ಧಿಯನೆಂದು ದೂರುತಿರ್ಪರ್ ವೆಂಡಿರ್ ||
. . . . ಶಾಸನ ದೇವತೆಗೆಂದಡೆ | ವೀಸದ ಪುಷ್ಪಮುಮನೀಯರಱಗುಲಿ ವೆಂಡಿರ್ ||
ಗಂಡನ ದೆಸೆವುತ್ತಮರಂ | ಕಂಡಡೆ ಕಡೆಗಾಣಿಸುವರ್ ತವರ್ಮನೆಯವರಂ |

ಕಂಡೊಡೆ ರಾಗಿಸಿ ಕರೆದೊಡ | ನುಂಡುಂ ಬೇಡಿದುದನೀವರಱಗುಲಿ ಪೆಂಡಿರ್ ||
ಮನೆಯುಂ ಮಕ್ಕಳನೊಕ್ಕ | ಲ್ತನಮಂ ಬಿಡುವಂತು ಧರ್ಮಮಂ ಸಲೆ ಪೇಳಲ್ |
ನಿನಗೆ ಚಲಮುಂಟೆ ನೀ ಕೆ | ಮ್ಮನೆ ಬರವೇಡಣ್ಣ ಪೋಗಿಮೆಂಬರ್ ಪೆಂಡಿರ್ ||
ಶ್ರಾವಕಶೂದ್ರರ ಮನೆಯೊಳ್ | ತಾವುಣ್ಬೊಡಮುಣ್ಗೆ ಜಾತಿನಾಶಂ ಮಾಡ |
ಲ್ಕಾವಾರೆವುಣ್ಣೆವೆಂಬರ್ | ದೇವರ ದೊರೆಯೆನಿಪ ಜೈನ ಸಮಯಿಯ ಮನೆಯೊಳ್ ||
ಕಿಱಿಯಂದು ತೊಟ್ಟು ಮೂಢಮ | ನಱಿಯದೆ ಮನೆಗಳೊಳೆ ಬೆಳೆದ ತೆರದಿಂ ಜೈನ |
ಕ್ಕೆಱಗುವರಲ್ಲದೆ ಭಕ್ತಿಯ | ನೆಱಗುವರೆ ಪೆಂಡಿರ್ ? . . . .
ಪುರುಷನ ಚಿತ್ತಂಬಡೆಯಲ್ | ಪರಮಶ್ರಾವಿಕೆಯರಪ್ಪರಿತ್ತಲ್ಲಳಿಯಂ |
ಕರಗಮುಮಂ ಮೊಱನಂ ಪಂ | ಡಿರಿಗೀವರ್ ಗೌರಿಗೆಂದು ಸಲೆ ತಾಟಕಿಯರ್ ||

ಕಂಡಕಂಡ ದೇವರಿಗೆಲ್ಲ ಕೈಮುಗಿಯುವುದು ಜನಸಾಮಾನ್ಯದ ಪದ್ಧತಿ. ಯಾವ ದೇವರಿಗೂ ಅಸಮಾಧಾನವಾಗದಿರಲೆಂಬುದು ಅವರ ಉದ್ದೇಶವಿರಬೇಕು. ಪರಮಜಿನಭಕ್ತನಾದ ಬ್ರಹ್ಮಶಿವನಿಗೆ ಇದು ಸರಿಬೀಳಲಿಲ್ಲ. ಕೆಳಗೆ ಕೊಟ್ಟಿರುವ ಪದ್ಯಗಳೊಂದಿಗೆ ಬಸವಣ್ಣನವರ ವಚನಗಳನ್ನು[1] ಹೋಲಿಸಿ ನೋಡಿದರೆ ಆ ಕಾಲದ ನಿಜಸ್ಥಿತಿಯು ಗೊತ್ತಾಗುತ್ತದೆ.

ದೇಗುಲಮಂ ಕಂಡಲ್ಲಿಗೆ | ಪೋಗಿ ಮಹೇಶ್ವರನೆನೆಂಬ ಬಸದಿಗೆ ಬಂದಿ |
ದಾರ್ಗಳೆ ಜೈನನೆನೆಂಬಾ | ಕಾಗೆಗೆ ಸಮ್ಯಕ್ತ್ವಮೊಪ್ಪಲೇನರಿದಪುದೆ ||
ಒಂದೆಸೆಯೊಳು ಜಿನಬಿಂಬಮ | ನೊಂದೆಸೆಯೊಳು ಬಳಿಕ ಲಿಂಗಮಂ ಕೃಷ್ಣನನಂ |
ತೊಂದೆಸೆಯೊಳು ಪೂಜಿಸುವಾ | ಸಂದೇಹಿಗೆ ಜೈನತನದ ಪೆಸರೆಂತೆಸೆಗುಂ ||
ಬೇಡಿದ ವರಮಂ ಕುಡುವರೆ | ರೂಢಿಯ ಚಾಮುಂಡಿ ಕಾಳಿ ಮಾಳಚಿಯೆಂಬಾ |
ಜೋಡೆಯರವರಂ ಪೂಜಿಸ | ವೇಡಿಹಪರಸುಖಮನೊಲ್ವಡರ್ಚಿಸು ಜಿನನಂ ||
ನೀರಂ ಪೊಸೆದುಂ ಬೆಣ್ಣೆಯ | ನಾರಾನುಂ ಪಡೆದರೊಳರೆ . . . ಮ್ಮೈ |
ಲಾರಂ ಕೇತಂ ಕಾಟಂ | ಮಾರಿಗೆ ಮಸಣಿಗೆಯೆನಿಪ್ಪ ಕೊಳೆದೆಯ್ವಂಗಳ್ ||

---

[1] ಭಕ್ತರ ಕಂಡರೆ ಬೋಳರಪ್ಪಿರಯ್ಯ ಸವಣರ ಕಂಡರೆ ಬತ್ತಲೆಯಪ್ಪಿರಯ್ಯ . . . ಬ. ವಚನಗಳು (ಪುಟ ೧೬). ಹಾಳು ಮೊಱಡಿಗಳಲ್ಲಿ, ಊರ ದಾರಿಗಳಲ್ಲಿ, ಕೆರೆ ಬಾವಿ ಹೂಗಿಡು ಮರಂಗಳಲ್ಲಿ, ಗ್ರಾಮದ ಮಧ್ಯದಲ್ಲಿ, ಚೌಪಥ ಪಟ್ಟಣಪ್ರದೇಶದಲ್ಲಿ, ಹಿರಿಯಾಲದ ಮರದಲ್ಲಿ ಮನೆಯ ಮಾಡಿ ಕಱೆವಮ್ಮೆಯ ಹಸುಗೂಸು, ಬಸುಱೆ, ಬಾಣತಿ, ಕುಮಾರಿ, ಕೊಡಗೂಸೆಂಬವರ ಹಿಡಿದುಂಬ ಕಿರಿದುಂಬ ಮಾರಯ್ಯ, ಬೀರಯ್ಯ, ಕೇತರ, ಗಾವಿಲ, ಅಂತರಬೆಂತರ, ಕಾಳಯ್ಯ, ಮಾರಯ್ಯ ಮಾಳಯ್ಯ ಕೇತಯ್ಯಗಳೆಂಬ ನೂಱು ಮಡಕೆಗೆ ನಮ್ಮ ಕೂಡಲಸಂಗಮದೇವನೆಂಬ ಒಂದು ದಡಿ ಸಾಲದೆ ? ಬ. ವ. (ಪುಟ ೮೩). ತೊಱೆಯ ಮೀವ ಅಣ್ಣಗಳಿರಾ, ತೊಱೆಯ ಮೀವ ಸ್ವಾಮಿಗಳಿರಾ ತೊಱೆಯಿಂಭೋ . . . ಬ. ವ. (ಪುಟ ೯೮). ಮಡಕೆ ದೈವ, ಮೊಱದೈವ . . . ದೈವ ದೈವವೆಂದು ಕಾಲಿಡಲಿಂಬಿಲ್ಲ. ದೇವನೊಬ್ಬನೇ ನಮ್ಮ ಕೂಡಲಸಂಗಮದೇವ. ಬ. ವ. (ಪುಟ ೮೪).

ತೊಱೆಗಳ ದೀರ್ಘಿಕೆಗಳ ಪೆ| ರ್ಗೆಱೆಗಳ ತಡಿಯಲ್ಲಿ ರಂಗಮಂ ಬರೆದುಂ ಜೊ|
ಬ್ಬಱಿದು ಸುರಿದಲ್ಲಿ ಪಲದಿಂ| ತೆಱದಡುಗೆಯನಿಂತು ಬರಿದೆ ಕಿಡಿಪರ್ ಮೂಢರ್||
ನಡುಬೀದಿಯೊಳುಂ ಪಶುಗಳ| ಪಡುವೆಡೆಯೊಳಮೂರ ಪಿರಿಯ ಚೌವಟ್ಟುದೊಳಂ|
ತೊಡೆದು ಬರೆದಲ್ಲಿ ರಂಗಮ| ನಡುಗೆಗಳಂ ಸೂಸಿ ಕಳೆವ ಮೂಢರ್||
ಮಾರಿಯನೆ ಮನೆಗೆ ದಂದುಂ| ಮರಿಯನೂರಿಂಗೆ ತಂದು ಮಡಗಿಂ (ಗಂ) ಕಳ್ದಿಂ|
ದಾರಂಭದ ಪೊಸಬೆಳಸಿಂ| ಭೋರೆನೆ ಪರಿವೊಳಗಭಾಥಿ ಕಳಿಪುವರವಳಂ||
. . . ನೀರಿಂ ಪೋಪಂತು ಮೆಯ್ಯಕೊಳೆಯೆ ಪಾಪಂ?
ಪಲವುಂ ತೊಱೆಗಳ ನೀರಂ| ಸಲೆ ಮಿಂದಡೆ ಪೋಪುವಲ್ಲ ಪಾಪಂಗಳಾ ನಿ||
ರ್ಮಳ ಜಿನಧರ್ಮಮುಮೆಂಬೀ| ಜಳದಿಂ ಕಚ್ಚುವುದು ಪಾಪಪಂಕವನಱಿವಂ||

ಅಷ್ಟೇ ಅಲ್ಲ. ಬ್ರಹ್ಮಶಿವನು ಬಸವೇಶ್ವರನ ವಚನಗಳಿಗೆ ಪ್ರತ್ಯುತ್ತರವನ್ನು ಕೊಟ್ಟಿರುವಂತಿದೆ, ಶಿವಶರಣರ ನಡೆನುಡಿಗಳನ್ನು ಹೀಯಾಳಿಸಿರುವಂತಿದೆ. "ಕೊಡುವಾತ ಸಂಗ ಕೊಂಬಾತ ಸಂಗ" ಎಂಬ ಬಸವೇಶ್ವರನ ವಚನವನ್ನು ಮನಸ್ಸಿನಲ್ಲಿಟ್ಟುಕೊಂಡು ಈ ಕೆಳಗಿನ ಪದ್ಯವನ್ನು ಬರೆದಿರುವನೆಂದು ಊಹಿಸಿದರೆ ತಪ್ಪಾಗಲಾರದು.

ಅಲ್ಲದೆ—

ಕುಡುವಂ ತಾಂ ಕುಡುವುದು ತಾಂ| ಕುಡೆ ಕೊಳ್ವಂ ತಾನೆ ದೇವನಿತ್ತಂ ಗೊಳ್ವಂ|
ನುಡಿವವನಂ ತಾನೆಂಬನ| ನುಡಿಯಂ ಕೈಕೊಳ್ಳದಿರ್ಪವಂ ಮತಿವಂತಂ||
ಪರಿದು ಪಿಡಿತಂದು ಪುಲ್ಲೆಯ| ಗೊರವಂಗುಣಲಿಕ್ಕಿ ಮಿಸಿಸಿ ಸೂಳೆಯೊಳವನಂ|
ನೆರಪಿದೊಡವಂಗೆ ಸ್ವರ್ಗಂ| ದೊರೆಕೊಳ್ಗುಂ ನಿರುತಮೆಂದು ನೆಗಳ್ವರ್ ಮೂಢರ್||

ಚಿರಕುಟಮನಿಟ್ಟು ಕೆಯ್ಯೊಳ್| ತಿರಿದುಣುತುಂ ದೆಸೆಗೆ ನಗುತ ಮಾಡುತ್ತಿರ್ಪಾ|
ಮರುಳೊಂದಂ ನುಡಿದೊಡದಂ| ನಿರುತಮಿದಾದೇಶವಚನಮೆಂಬರ್ ಮೂಢರ್||
ದಯೆ ತಮ್ಮಾಪ್ತರೊಳಿಲ್ಲದ| ದಯೆಯನವರ್ ಕಳ್ದು ತಪ್ಪರೇ ಲಿಂಗಿಗಳಾ|
ದಯೆ ಜಿನನೊಳುಳ್ಳ ಕತದಿಂ| ದಯೆಯನೆ ಮುಂದಿಟ್ಟು ಜೈನರೆಸಗುತ್ತಿರ್ಪರ್*||

---

* ದಯವಿಲ್ಲದ ಧರ್ಮವದಾವುದಯ್ಯ, ದಯವೇ ಬೇಕು ಸಕಲಪ್ರಾಣಿಗಳೆಲ್ಲರಲ್ಲಿ ದಯವೇ ಧರ್ಮದ ಮೂಲವಯ್ಯ. . . . ಬ. ವಚನಗಳು.

"ನೆರಪಿದುದೊಂದು ಪಾಪಫಲದಿಂದೆ ಕುಯೋನಿಗಳೊಳ್ ನಿರಂತರಂ
ತಿರಿತರುತಿಪ್ಪ ಜೀವನಿಕರಕ್ಕೆಱಗುತ್ತಿರೆ ಸೌಖ್ಯಮಕ್ಕುಮೇ
ತಿರಿದುಣುತಿಪ್ಪ ಕಪ್ಪಡಿಯನೋಲಗಿಸುತ್ತ ಮಹಾವಿಭೂತಿಯೊಳು
ನೆರೆದಿನವೋಘಮೆಂದು ಮನವಾಲುಡಿವಂಗದು ಹಡೆತಂತೆ ಬಲು"

ಈ ಪದ್ಯ ಬಸವೇಶ್ವರನ ಜೀವನಚರಿತ್ರೆಗೆ ಸಂಬಂಧಪಟ್ಟುದೆಂದು ತೋರುವುದು. ಇದರ ಶುದ್ಧವಾದ ರೂಪ ಸಿಗದೆ ಏನೂ ಹೇಳುವಂತಿಲ್ಲ.

ಈ ಎರಡು ಪದ್ಯಗಳು ಸುಖಿಜಂಗಮರಿಗೆ ಬಸವೇಶ್ವರನು ಮಾಡುತ್ತಿದ್ದ ಉಪಚಾರದ ಹೆಚ್ಚಳವನ್ನೂ ವೀರಶೈವರ ವಚನಗಳು ಹೇಗೆ ಹುಟ್ಟಿದುವು ಎಂಬುದನ್ನೂ ಸೂಚಿಸುತ್ತವೆಯೆಂದು ಕಾಣುತ್ತದೆ. ಅಂತೂ ಬ್ರಹ್ಮಶಿವನು ತನ್ನ ಗ್ರಂಥವನ್ನು ಬರೆದಾಗ ಜೈನಮತವು ಅತ್ಯಂತ ಅವನತಿಸ್ಥಿತಿಯಲ್ಲಿತ್ತೆಂದೂ, ಬಸವೇಶ್ವರನ ಮತ್ತು ಅವನ ಅನುಯಾಯಿಗಳ ಮತಪ್ರಸರಣ ಕಾರ್ಯವು ಆಗಲೇ ನಡೆದಿತ್ತೆಂದೂ, ತೋರುತ್ತದೆ.

ತನ್ನ ಗ್ರಂಥದ ಆದಿಯಲ್ಲಿ ಬ್ರಹ್ಮಶಿವನು ಪೆರ್ಗಡೆ ಬೊಮ್ಮಸನ್ನೂ "ಆ ವಿಭುವಿನಗ್ರತನಯ"ನಾದ ನಾಗದೇವನನ್ನೂ ಅವನ ಮಗ ಆಹವಮಲ್ಲಮಹೀಶನನ್ನೂ ಹೊಗಳಿದ್ದಾನೆ. ಆಹವಮಲ್ಲನು ಗೋವೈದ್ಯವನ್ನು ಬರೆದಿರುವ ಕವಿಕೀರ್ತಿವರ್ಮನಂತೆಯೇ ಕೊಡುಗೈ ದೊರೆಯಾಗಿದ್ದು ಜೈನಮತಕ್ಕೆ ಬಹಳ ಪ್ರೋತ್ಸಾಹವೀಯುತ್ತಿದ್ದನೆಂದು ಬ್ರಹ್ಮಶಿವಕವಿಯ ಪದ್ಯದಿಂದಲೇ ಗೊತ್ತಾಗುತ್ತದೆ. ಆ ಆಹವಮಲ್ಲದೇವನೇ ಬ್ರಹ್ಮಶಿವನಿಗೆ 'ಕವಿಚಕ್ರವರ್ತಿ'ಯೆಂಬ ಬಿರುದನ್ನು ಕೊಟ್ಟಿರುವಂತೆ ಕಾಣುತ್ತದೆ. ಶ್ರವಣಬೆಳಗೊಳದ ೬೬ನೆಯ (೧೧೭೬) ಮತ್ತು ೩೩೫ನೆಯ (೧೧೯೫) ಶಾಸನಗಳಲ್ಲಿ ಈ ಬೊಮ್ಮದೇವಾದಿಗಳು ಸ್ತುತಿಸಲ್ಪಟ್ಟಿದ್ದಾರೆ. ಆದರೆ ಶಾಸನಗಳಲ್ಲಿ ನಾಗದೇವನ ಮಗ "ಮಲ್ಲಿದೇವ", "ಮಲ್ಲಿನಾಥ" ಎಂದೂ, ಅವನು 'ಪುರಪತಿ'ಯಾಗಿದ್ದನೆಂದೂ ಹೇಳಿದೆ. ಈ ಮಲ್ಲಿದೇವ ಅಥವಾ ಮಲ್ಲಿನಾಥನೇ ಬ್ರಹ್ಮಶಿವನು ಹೇಳಿರುವ 'ಆಹವಮಲ್ಲ ಮಹೀಶ'ನಿರಬೇಕು. ಎಂದರೆ ಬ್ರಹ್ಮಶಿವನು ೧೧೭೬ ರಿಂದ ೧೧೯೫ ರ ವರೆಗೆ ಜೀವಿಸಿದ್ದಿರಬಹುದೆಂದು ಹೇಳಿದಂತಾಯಿತು.

ಕವಿಯು ಇಬ್ಬರು ಮೇಘಚಂದ್ರರನ್ನೂ ಇಬ್ಬರು ವೀರಣಂದಿಗಳನ್ನೂ ಹೊಗಳಿದ್ದಾನೆಂದು ಈ ಮೊದಲೇ ಗೊತ್ತಾಗಿದೆ. ಮೊದಲನೆಯ ಸಾರಿ ಹೆಸರಿಸಿರುವ ವೀರಣಂದಿಯು ಮೇಘಚಂದ್ರನ ಶಿಷ್ಯನೂ ಪ್ರಭಾಚಂದ್ರ ದೇವರ ಸಧರ್ಮನೂ ಆಗಿದ್ದವನೆಂದು ಕಾಣುತ್ತದೆ.[1] ಈ ವೀರಣಂದಿಯನ್ನು ಹೊಗಳಿದ ಮೇಲೆ ಪುನಃ ವೀರಸೇನ ಭಟ್ಟಾರಕರು ಕವಿಪರಮೇಷ್ಠಿ ಬಾಳಚಂದ್ರ ಮೇಘಚಂದ್ರ ವೀರಣಂದಿ ಇವರ ಹೆಸರನ್ನೆತ್ತಿದ್ದಾನೆ. ೧೧೭೬ರಲ್ಲಿ ಮೃತಿಹೊಂದಿದ ನಯಕೀರ್ತಿಯ ಶಿಷ್ಯಗಣದಲ್ಲಿ ಬಾಲಚಂದ್ರ ಮೇಘಚಂದ್ರರೂ ಇದ್ದಾರೆ. ಆದುದರಿಂದ ಕವಿಯು ಹೊಗಳಿರುವ ಬಾಲಚಂದ್ರ ಮೇಘಚಂದ್ರರು ನಯಕೀರ್ತಿಯ ಶಿಷ್ಯರಿರಬೇಕು. ಈ ಮೇಘ

---

[1] ಶ್ರವಣಬೆಳಗೊಳದ ೧೨೭ನೆಯ ಶಾಸನದಲ್ಲಿರುವ ಮೇಘಚಂದ್ರನಿಗೆ ಸಂಬಂಧಪಟ್ಟ ಪದ್ಯಗಳನ್ನೂ, ೧೪೦ನೆಯ ಶಾಸನದಲ್ಲಿರುವ ವೀರಣಂದಿಗೆ ಸಂಬಂಧಪಟ್ಟ ಪದ್ಯಗಳನ್ನೂ ಬ್ರಹ್ಮಶಿವನು ಇವರನ್ನು ಹೊಗಳಿರುವ ಪದ್ಯಗಳೊಂದಿಗೆ ಹೋಲಿಸಿ ನೋಡಿದರೆ ಈ ವಿಷಯ ನಮಗೆ ಚೆನ್ನಾಗಿ ಮನವರಿಕೆಯಾಗುತ್ತದೆ.

ಚಂದ್ರನ ಶಿಷ್ಯ ಒಬ್ಬ ವೀರಣಂದಿ ಇದ್ದನೆಂದು ಶ್ರ. ಬೆ. ೬೫ನೆಯ ಶಾಸನದಿಂದ ಗೊತ್ತಾಗುತ್ತದೆ. ಆದುದರಿಂದ ಬ್ರಹ್ಮಶಿವನ ಗುರುವಾದ ವೀರಣಂದಿಯೂ ನಯಕೀರ್ತಿಯ ಪ್ರಶಿಷ್ಯ ವೀರಣಂದಿಯೂ ಅಭಿನ್ನರೆಂದು ತೋರುತ್ತದೆ.[1]

ಬ್ರಹ್ಮಶಿವನು

> ಪೊನ್ನನೆ ಪಂಪನೆ ರಜಕನೆ| ರನ್ನನೆ ಕವಿತಾಗುಣೋದಯನೆ ದರ್ಶನಸಂ|
> ಪನ್ನತೆಯೊಳ್ ಕವಿತೆಯೊಳವ| ರನ್ನನೆ ವಿದಿತಾತ್ಮಭಾವನಗ್ಗಳದೇವಂ||

ಎಂದು ಅಗ್ಗಳನನ್ನು ತನ್ನ ಗ್ರಂಥದ ಆದಿಯಲ್ಲಿ ಹೊಗಳಿರುವುದು ಮಾತ್ರವಲ್ಲ, "ಅಗ್ಗಳದೇವನ ಕಳೆಯಂ" ಎಂದು ಬಹು ಹೆಮ್ಮೆಯಿಂದ ಹೇಳಿಕೊಂಡಿದ್ದಾನೆ. ಈ ಅಗ್ಗಳನು ಚಂದ್ರಪ್ರಭ ಪುರಾಣವನ್ನು ೧೧೮೯ರಲ್ಲಿ ಮುಗಿಸಿದ ಅಗ್ಗಳದೇವನೇ ಇರಬೇಕು. ಆ ಕಾಲದಲ್ಲಿ ಎಂದರೆ ಹನ್ನೆರಡನೆಯ ಶತಮಾನದ ಕಡೆಯ ದಶಕಗಳಲ್ಲಿ ಜೀವಿಸುತ್ತಿದ್ದ ಅಗ್ಗಳದೇವ ಎಂಬ ಹೆಸರಿನ ಇನ್ನೊಬ್ಬ ಕವಿ ಇದ್ದನೆಂದು ಇದುವರೆಗೆ ತಿಳಿದುಬಂದಿಲ್ಲ. ಆದುದರಿಂದ ಬ್ರಹ್ಮಶಿವನು ೧೧೮೯ರಲ್ಲಿದ್ದನೆಂದು ಸಿದ್ಧವಾಗುತ್ತದೆ.

ಬ್ರಹ್ಮಶಿವನ ಗುರು ವೀರಣಂದಿಯು ನಯಕೀರ್ತಿ ದೇವರ ಪ್ರಶಿಷ್ಯನೇ ಇದ್ದ ಪಕ್ಷದಲ್ಲಿ ತಾನು ಸಮಯಪರೀಕ್ಷೆಯನ್ನು ೧೧೮೯ಕ್ಕಿಂತ ಈಚೆಗೆ ಬರೆದನೆಂದು ಕಾಣುತ್ತದೆ. ನಯಕೀರ್ತಿಯ ಶಿಷ್ಯನಾದ ಬಾಲಚಂದ್ರನೇ ೧೨೧೩ ರಲ್ಲಿಯೂ ಇದ್ದನೆಂದು ಶಾಸನಗಳಿಂದ ಗೊತ್ತಾಗುತ್ತದೆ. ಆ ಬಾಲಚಂದ್ರನ ಸಧರ್ಮನಾದ ಮೇಘಚಂದ್ರನ ಶಿಷ್ಯ ವೀರಣಂದಿಯು 'ಸುಗತಿಗೆ ಸಂದ' ಮೇಲೆ ಬ್ರಹ್ಮಶಿವನು ತನ್ನ ಗ್ರಂಥವನ್ನು ಬರೆದಿದ್ದಾನೆ. ಆದುದರಿಂದ ವೀರಣಂದಿಯು ೧೧೯೦–೧೧೯೫ರಲ್ಲಿ ಮೃತಿಹೊಂದಿರಬಹುದೆಂದೂ ಆ ಮೇಲೆ ಬ್ರಹ್ಮಶಿವನು ಗ್ರಂಥರಚನೆ ಮಾಡಿರಬಹುದೆಂದೂ ಊಹಿಸಬಹುದು.

೧೨೦೦ರಲ್ಲಿ ಹುಟ್ಟಿದ ಶ್ರವಣಬೆಳಗೊಳದ ೧೩೩ನೆಯ ಶಾಸನದಲ್ಲಿ ಮಲ್ಲದೇವನ ತಂದೆ ನಾಗದೇವ ಯಾರಿಗೋ ಬಂದು ದತ್ತಿಬಿಟ್ಟ ಸಂಗತಿ ಇದೆ. ಮಲ್ಲದೇವನು ಬರಿಯ ಪುರಪತಿಯಾಗಿರದೆ ಮಾಂಡಲಿಕನೋ ಹೆಗ್ಗಡೆಯೋ ಆಗಿದ್ದಾಗ ಬ್ರಹ್ಮಶಿವನಿಗೆ ಪ್ರೋತ್ಸಾಹವೂ ಕವಿಚಕ್ರವರ್ತಿ ಎಂಬ ಬಿರುದೂ ದೊರಕಿರಬೇಕು. ಆದುದರಿಂದ ಬ್ರಹ್ಮಶಿವನು ೧೨೦೦ರ ಸುಮಾರಿನಲ್ಲಿ ಸಮಯಪರೀಕ್ಷೆಯನ್ನು ಬರೆದು

---

[1] ಇದೇ ಗಣಗಚ್ಛಕ್ಕೆ ಸೇರಿದ ವೀರಣಂದಿ ಸೈದ್ಧಾಂತಿಕನ ಹೆಸರು ಅನಂತಪುರ ಜಿಲ್ಲೆಯ ಒಂದು ಶಾಸನದಲ್ಲಿ ಉಕ್ತವಾಗಿದೆ. . . . ವೀರಣಂದಿ ಸೈದ್ಧಾಂತಿ ಚಕ್ರವರ್ತಿ ದೇವರ ಪ್ರಿಯನಂದನರುಮಪ್ಪ ಪದ್ಮಪ್ರಭ ಮಲಧಾರಿದೇವರ್—ಎಂದು ಮುಂತಾಗಿ ಇದೆ. ಈ ಶಾಸನದ ಕಾಲ ೧೧೮೫. (*Inscriptions of Madras Presidency*, Vol ix, 1st part, page 299).

[illegible]

ಪರಿಶಿಷ್ಟ

(ಬ್ರಹ್ಮಶಿವಕವಿಕೃತ 'ಸಮಯಪರೀಕ್ಷೆ'ಯ ಆದಿಯ ಕೆಲವು ಪದ್ಯಗಳ್*)

[illegible] ‖ ೧ ‖

[illegible] ‖ ೨ ‖

[illegible] ‖ ೩ ‖

[illegible] ‖ ೪ ‖

[illegible] ‖ ೫ ‖

[illegible] ‖ ೬ ‖

* [illegible]

ಸಕಲಪ್ರಾಣಿಹಿತಾರ್ಥವಾಗೆ ರುಜೆಗಳ್ ಪಿಂಗಲ್ಕೆ ಕಲ್ಯಾಣ ಕಾ
ರಕಮಂ ವಾಗ್ಮಳಮಂ ತೆರಳ್ಚಿ ಕಳೆಯಲ್ ಜೈನೇಂದ್ರಮಾ ಚಿತ್ತದೊಂ|
ದು ಕಳಂಕಂ ಕಿಡಿಸಲ್ ಸಮಾಧಿಶತಕಯೋಗಗ್ರಂಥಮಂ ಪೇಳ್ದು ಸ
ರ್ವಕವೀಂದ್ರಸ್ತುತಶುದ್ಧಚಿತ್ತನೆಸೆದಂ ಶ್ರೀಪೂಜ್ಯಪಾದೋತ್ತಮಂ || ೭ ||

ಅಸದೃಶವಿವೆನಿಸಿ ಲೋಕ
ಕ್ಕೆಸೆಯೆ ಮನೋವಚನಕಾಯಮಳಮಂ ಕಳೆಯ
ಲ್ಕೆ ಸಮರ್ಥವೆನಿಪುವಂತೆ ರ
ಚಿಸಿದರ್ ಕೇವಳಮೆ ಪೂಜ್ಯಪಾದಮುನೀಂದ್ರಂ || ೮ ||

ಜಿನಶಾಸನಕ್ಕೆ ಭೂಷಣ
ಮೆನಿಸಿರ್ದಕಳಂಕತರ್ಕಮಂ ಪೇಳ್ದ ಮಹಾ|
ಮುನಿಯಂ ಭವ್ಯಾಂಬುಜ ಮಿ
ತ್ರನನೊಲ್ದಕಳಂಕದೇವನಂ ಪೊಗಳದರಾರ್ || ೯ ||

ಎರಡುಂ ಕೈಯ ತಳಂಗಳೊಂದೆ ಪುಟದೊಳ್ ಸಂಪ್ರೀತಿಯಿಂದಿಟ್ಟು ನಿ
ರ್ಭರದಿಂ ಚಾರಣರಾ ವಿದೇಹಮಹಿಗೊಯ್ಯಲ್ ಪೋಗಿಸೀ ಮಂದರೇ|
ಶ್ವರರಂ ಬಂದಿಸಿ ತತ್ಪ್ರಣೀತ ಸಮಯಗ್ರಂಥಂಗಳಂ ತಂದು ಬಿ
ತ್ತರದಿಂ ಬಿತ್ತಿದ ಕೊಂಡಕುಂದ ಮುನಿನಾಥ ಖ್ಯಾತಿಲೋಕೋತ್ತಮರ್ || ೧೦ ||

ಈ ಮಹೀಮಂಡಲಂ ಪೊಗಳೆ ಪೂರ್ವವಿದೇಹದೊಳಿರ್ದು ದೋ
ಸಾಮಿ ಸುಲೋಚನಾಚರಿತೆ ಪಾಹುಡಮೆಂಬ ಪುರಾಣಮಂ|
ಮಾನಃಪ್ರೇಮದಿನೋದುತಿರ್ಪ ಯತಿಗಳ್ಗೆ ನಿರನ್ವಯವಾಗಲೆಂದು
ತಂದಾ ಯತಿನಾಥನಿಂ ಪಿರಿಯರುಂ ಪೆಱರುಂಟೆ ತಪಃಪ್ರಭಾವದಿಂ || ೧೧ ||

ದ್ರವ್ಯಂಗಳಂದಮಂ ಷ
ಡ್ದ್ರವ್ಯಪರದ್ರವ್ಯಭೇದ ಭಿನ್ನಸ್ಥಿತಿಯಂ|
ಶ್ರವ್ಯಮೆನೆ ಪೇಳ್ದು ಮುನಿಜನ
ಸೇವ್ಯಮೆನಲ್ ಕೊಂಡಕುಂದಮುನಿಗಳ್ ನೆಗಳ್ದರ್ || ೧೨ ||

ವಾದಿಗಳೊಳಗತ್ಯುತ್ತಮ
ವಾದಿಗಳೈವತ್ತನಾಲ್ವರಂ ಗೆಲ್ದ ವಚ|
ಶ್ರೀದಯಿತನಮಳಿನಸ್ಯಾ
ದ್ವಾದಾಚಳಸಿಂಹನಖಿಳತಾರ್ಕಿಕಭೂಪಂ || ೧೩ ||

ಜಿನಸಮಯಾಂಬರಸೋಮಂ
ವಿನೇಯಜನಕುಮುದಸೋಮನಖಿಳಧರಿತ್ರೀ |

ಜನನಯನೋತ್ಸವಸೋಮಂ
ಜನಸ್ತುತಂ ಸೋಮದೇವ ಪಂಡಿತದೇವಂ ॥ ೧೪ ॥

ಪರಮಜಿನಚರಣಭಕ್ತಂ
ಪರಮಾಗಮವೇದಿ ಪರಮಮುನಿತುಷ್ಟಿಕರಂ ।
ಪರಮನರೇಶ್ವರವಂದ್ಯಂ
ಧರೆಗೆಸೆದಂ ಪರಮಪಂಡಿತಂ ಭೂಪಾಲಂ ॥ ೧೫ ॥

ಪೊಸೆಯದೆ ಪಚ್ಚೆಗಳಂ ನಾ
ಲ್ಕೆಸೆಯೊಳಮೆಂಟೆಂಟು ದಿವಸಮಿರುಳುಂ ಪಗಲುಂ ।
ಮಿಸುಕದೆ ನಿಲೆ ನಿಂದೆಸವರ್
ಪಸರಿಸಿದರ್ ಲೋಕದೊಳ್ ಚತುರ್ಮುಖದೇವರ್ ॥ ೧೬ ॥

ಮೆಟ್ಟಿಱೆ ಸಿಲ್ಕಿ ಕಲ್ಲನುರೆ ಸುಟ್ಟೊಡಮಂಘ್ರಿಗಳುರ್ಚೆ ಗೂಂಟವಂ
ಬಿಟ್ಟಡೊಡಂ ಮಹೋಗ್ರಫಣಿ ಸುತ್ತಿದೊಡಂ ಪೊಳಕಾಲ್ಗಳಂ ಬಿಡಲ್ ।
ಬಟ್ಟಲಸೋವದೆತ್ತಿದೊಡಮುಬ್ಕ(ಳ್ಕ)ದೆ ಮೇರುನಗೇಂದ್ರದಂದದಿಂ
ಬಿಟ್ಟದ ದೇವರಲ್ಲದರ್ಗೆ ತೀರ್ಗುಮೆ ನಿಶ್ಚಳಯೋಗದಿಂದಿರಂ ॥ ೧೭ ॥

ವಾದಿಗಳೆನೆ ನೆಗಳ್ದ ಮಹಾ
ವಾದಿಗಳಂ ನುಡಿದು ಗೆಲ್ದು ಚಕ್ರೇಶ್ವರನೊ ।
ಲ್ದಾದರಿಸಿ ನೆಗಳ್ದನಿಂತೀ
ಮೇದಿನಿಯೋಳ್ ವಾದಿರಾಜದೇವರೆ ದೇವರ್ ॥ ೧೮ ॥

ವನಗಜಮುಳ್ಳ ಪೇರಡವಿಯೊಳ್ ಬರೆ ಕಟ್ಟಿದಿರಾಗಿ ತಾಗೆ ಬೆ
ನ್ನನೆ ಪರಿತಪ್ಪ ಪೆರ್ಬುಲಿ ಮಹಾಫಣಿ ಸಂಕುಳಮುಯ್ದವಪ್ಪ ಕಾ ।
ಯ್ದ್ವಪ ಪಗೆ ಕೂಡೆ ಮಾಡುವುಪಸರ್ಗಮದಾಗಳೆ ಮಾಣ್ಬುಮರ್ಥಿಯಂ
ನೆನೆದೊಡೆ ಮೇಘಚಂದ್ರಮುನಿವಲ್ಲಭದಿವ್ಯಪದಾಂಬುಜಂಗಳಂ ॥ ೧೯ ॥

ಮೊಗದೊಳ್ ವಾಗ್ವಧು ಸಂತತ
ಮಗಲದೆ ನಿಲೆ ಕೀರ್ತಿವಧುಗೆ ಕೂರ್ತುರ್ಗಂ ಮತ್ತ ।
ರ್ಥಿಗಳಮೃತವಧುಗೆ ತಪದು
ಜ್ಜುಗಮೆಂತುಟೊ ಮೇಘಚಂದ್ರಮುನಿಪುಂಗವರಾ ॥ ೨೦ ॥

ಮಳಧಾರಿಗಳೆನೆ ನೆಗಳ್ದಂ
ಮಳರಹಿತಮೆನಿಪ್ಪ ತಪದೆ ಸುಚರಿತ್ರದೆ ನಿ ।
ರ್ಮಳಶೇಜೋಭುಂಭುಕವಾ
ಯ್ತಿಳೆಗಚ್ಚರಿ ಪೇರಣಂದಿಮಲಧಾರಿಗಳಾ ॥ ೨೧ ॥

ವೀರದಗುರ್ವಿಂದುಗ್ರನ
ವೀರಮನದಟಲೆದು ನೆಗಳ್ದ ಮದನನ ಮದಮಂ |
ಬೀರಮುವುನಲಿದು ಗೆಲ್ದುದು
ವೀರತಪಂ ವೀರಣಂದಿಮಲಧಾರಿಗಳಾ || ೨೨ ||

ಮುನಿಸೊಂದಾದಂದೆ ಸನ್ನೆಸನ ವೀರದಶನಂ ದರ್ಶಿಯಾದಂದೆ ಸನ್ಯ
ಸನವಕ್ಷಿ ಕ್ಷುದ್ರನಿದ್ರಾಭರದಿನೊಱಗೆ ಸನ್ಯಸನಂ ಗಾತ್ರ ಕಂಡೂ |
ಯನಮಂ ಕೈಮುಟ್ಟೆ ಸನ್ನೆಸನ ಮುಗುಳ್ದಡೆ ಸನ್ನೆಸನ ಪೂರ್ಣ್ಕೆಯಂ
ದೆನಸುಂ ತಾನೇಂ ಪರಿಚ್ಛೇದಿಯೊ ತಪದ ಬೆಡಂಗಂ ಗುಣವ್ರಾತತುಂಗಂ || ೨೩ ||

ಅತಿಧವಳವೆನಿಸಿರ್ದ
ಶ್ರುತವದೆ ತಾಂ ಮೂರ್ತಿಗೊಂಡುದೆಂಗುಂ ಲೋಕಂ |
ಶ್ರುತಕೇವಳಿ ಜಿನಸೇನರ
ನತಂದ್ರರಂ ವೀರಸೇನ ಭಟ್ಟಾರಕರಂ || ೨೪ ||

ಕವಿಪರಮೇಷ್ಠಿವೆಸರ್ ನಿಜ
ಕವಿತಾಗುಣದಿಂದಮೆಸೆಯೆ ಕವಿಜನವಂದ್ಯಂ |
ಕವಿಪರಮೇಷ್ಠಿ ಮುನೀಂದ್ರಂ
ಭುವನಾಂತರ್ವರ್ತಿಕೀರ್ತಿ ನೆಗಳ್ದಂ ಧರೆಯೊಳ್ || ೨೫ ||

ಆಪ್ತೋದಿತ ಲೋಕಪ್ರ
ಜ್ಞಪ್ತಿಗೆ ಮುಂ ಕರ್ತುವಾಗಿ ಕಡೆಯೊಳ್ ನಿಂದಿ |
ದಾಪ್ತ ಸ್ಮರಣೆಯೆನಿಸುವಂ
ವ್ಯಾಪ್ತಯಶಂ ಬಿಟ್ಟು (ಬೊತ್ತು) ಬಾಳಚಂದ್ರಂ ನೆಗಳ್ದಂ || ೨೬ ||

ಧರೆಯೊಳ್ ಸಂದ ವೊರಂಬದೊಳ್ ನಿಜನಿಶಿಧಿಸ್ಥಾನದೊಳ್ ಮಣ್ಣನಾ
ದರದಿಂದೊರ್ಮೆಯೆ ತಂದು ಪೂಸಲೊಡನತ್ಯುಗ್ರಗ್ರಹಾನೇಕ ಸ |
ರ್ಪರುಜಾಪೀಡೆಗಳಾಗಳಂತೆ ಕೆಡುಗುಂ ತಾನೆಂದೊಡಮ್ಮಮ್ಮ ಬಾ
ಪ್ಪುರೆ ಸಾಮಾನ್ಯಮೆ ಮೇಘಚಂದ್ರಮುನಿಮಾಹಾತ್ಮ್ಯಂ ಧರಾಚಕ್ರದೊಳ್ || ೨೭ ||

ಪದಿಮೂಱುದಿನಂ ಸಂನ್ಯಸ
ನದೆ ಕಾಯೋತ್ಸರ್ಗದಿಂದೆ ನಿಂದುಂ ನಿಂದಂ |
ದದಿನಸುವಂ ಬಿಟ್ಟು ಜಗ
ದ್ವಿದಿತಯಶಂ ವೀರಣಂದಿ ಸುಗತಿಗೆ ಸಂದಂ || ೨೮ ||

ನಯದಿಂದಂ ತಾಯುಂ ತಂ
ದೆಯುಮೊಳ್ಪನೆ ಶಿಕ್ಷಿಪಂತೆ ಮನುಜಾವಳಿಯಂ |

ನಯದಿಂ ಸಂಬೋಧಿಸಿ ಮು
ಕ್ತಿಯೊಳೊಂದಿದ ಪೆರ್ಮೆ ಬಂಧುವರ್ಮಂಗೆ ನಿಜಂ || ೨೯ ||

ರೋಗಂ ಸಮಸ್ತದುಃಖ
ಕ್ಕಾಗರಮದು ಕೇಳಾ ಜೀವಸಂಬೋಧನೆಯಂ |
ಬೇಗಂ ಮಾಣ್ಗುಂ ದುಸ್ಸಹ
ರೋಗ ಸದ್ವೈದ್ಯನಿಂದಮುಪಶಮಿಸುವವೊಲ್ || ೩೦ ||

ಭವಜಲಧಿಯೊಳಗೆ ಮುಳ್ಕಾ
ಡುವ ಜೀವಾವಳಿಗೆ ಮುಕ್ತಿಯಂ ತಡೆಯದೆ ಪೊ |
ರ್ದುವುದುಂ ಪೇಳ್ದುದಱಿಂ ಬಂ
ಧುವರ್ಮನಂ ಭುವನಬಂಧುಯೆನ್ನದರೊಳರೆ || ೩೧ ||

ಜಿನವಲ್ಲಭನಮಳಯಶೋ
ಧನನುತ್ತಮರಾಜಪೂಜಿತಂ ಬುಧನಿಲಯಂ |
ಜಿನಪಾದಾಂಬುಜ ಮಧುಕರ
ನೆನೆ ನೆಗಳ್ದಂ ಪಂಪರಾಜನೂರ್ಜಿತತೇಜಂ || ೩೨ ||

ಶುಭಚರಿತನಖಿಳಕವಿ
ಪ್ರಭುವಂ ಲೋಕೈಕಮಾನ್ಯನಂ ತ್ರೈಭುವನ |
ಪ್ರಭುಚರಿತಮನತಿಭಕ್ತಿಯಿ
ನಭಿನುತಮೆನೆ ಪೇಳ್ದ ಪಂಪನಂ ಪೊಗಳದರಾರ್ || ೩೩ ||

ಪೊನ್ನಂ ವಿನೇಯರತ್ನಂ
ರನ್ನಂ ಭವ್ಯಾಬ್ಜಮುಖವಿಕಾಸನಮಿತ್ರಂ
ಪೊನ್ನನೆನಲ್ ನೇರಾಣಿಯ
ಪೊನ್ನನಮೂಲ್ಯದ ರತ್ನದ ರನ್ನಂ ರನ್ನಂ || ೩೪ ||

ಪೊನ್ನನೆ ಪಂಪನೆ ರಜಕನೆ
ರನ್ನನೆ ಕವಿತಾಗುಣೋದಯನೆ ದರ್ಶನಸಂ |
ಪನ್ನತೆಯೊಳ್ ಕವಿತೆಯೊಳವ
ರನ್ನನೆ ವಿದಿದಾತ್ಮಭಾವನಗ್ಗಳದೇವಂ || ೩೫ ||

ವಿತ್ತಂ ಸತ್ಪಾತ್ರಕ್ಕಾ
ಯತ್ತಂ ನಿಜವಾಣಿತೀರ್ಥಕರಕೀರ್ತನೆಗಾ |
ಯತ್ತಂ ವ್ರತಕ್ಕೆ ತನುವಾ
ಯತ್ತವೆನಲ್ ನಾಗಚಂದ್ರಬುಧನೆ ಕೃತಾರ್ಥಂ || ೩೬ ||

ಪಟ್ಟಣದ ನಡುವೆ ಬೆಳ್ಳಿಯ
ಬೆಟ್ಟಂಗಳನಿಳಿಪ ಜೈನನಿಳಯಂಗಳನೀ |
ಸೃಷ್ಟಿಯೊಳೆ ಕೂಡೆ ಮಾಡಿದ
ರಟ್ಟಂ ಶಂಖಾವನೀಶನನೆ ಪೊಗಳದರಾರ್ || ೩೭ ||

ಗುಣದ ಖಣಿ ದಾನಚಿಂತಾ
ಮಣಿ ವಿಮಲಚರಿತ್ರ ಜೈನಶಾಸನರಕ್ಷಾ |
ಮಣಿ ಸಜ್ಜನೈಕ ಚೂಡಾ
ಮಣಿಯೆಂದತ್ತಿಮಬ್ಬೆಯಂ ಪೊಗಳದರಾರ್[1] || ೩೮ ||

ಭರದಿಂ ಬಂದೊತ್ತೆ ಮುಂದೆಮ್ಮ ಸಕದೆಸಕದಿಂ ತೀವಿ ಮುಂದೊತ್ತೆ ಗೋದಾ
ವರಿ ಭೂಪಂ ತೈಲಪಂ ನಿಸ್ತರಿಸು ಕಟಕಮಂ ಬೇಗವಿನ್ನಬ್ಬೆ ನೀನೆಂ |
ದರೆಯಲ್ ಸರ್ವಜ್ಞನಂ ಪೊತ್ತಗಿಯದೆ ಪೊಕ್ಕಡಾ ವಾರಿಪೂರಂ
ಬಿರಿದತ್ತಾ ಚಕ್ರಿ ಪೊಯ್ದಂ ತೊರೆಯನಮಳಸಮ್ಯಕ್ತ್ವವಿಖ್ಯಾತಿಯಿಂದಂ[2] || ೩೯ ||

ಅಕಳಂಕಚರಿತೆ ಜಿನಚರ
ಣಕಂಜಕಿಂಜಲ್ಕಪುಂಜರಂಜಿತ ತನು ಸ |
ರ್ವಕಳಾವಿದೆ ಶೌಚಿ ಘಟಾಂ
ತಿಕೆ ದಾನವಿನೋದೆಯೆಂಬ ಬಿರುದಿಂ ನೆಗಳ್ದಳ್ || ೪೦ ||

*ಅತಿಧವಳಕೀರ್ತಿಲಕ್ಷ್ಮೀ
ಪತಿಯಂ ಜಿನಸಮಯವಾರ್ಧಿವರ್ಧನತಾರಾ |
ಪತಿಯಂ ಕೂರ್ತನಿಶಂ ರಾ
ಜಿತನಂ ರಾಯನನುದಾರಿಯಂ ಪೊಗಳದರಾರ್ || ೪೧ ||

*ಅಮಳಿನಚರಿತಂ ಜೈನಾ
ಗಮಕುಶಲಂ ಗಂಗವಂಶತಿಳಕಂ ಭವ್ಯೋ |
ತ್ತಮನಮಳವಾಗ್ವಧೂಟೀ
ರಮಣಂ ರಾಚಮಲ್ಲಂ ನೆಗಳ್ದಂ || ೪೨ ||

*ಜಿನಸಮಯಸುಧಾರ್ಣವವ
ರ್ಧನಚಂದ್ರಂ ಜಿನಮತಾಂಬುಜಂ ಕರಹಂಸಂ |
ಜಿನಪದಪಯೋಜಭೃಂಗಂ
ವಿನೇಯಗಿರಿ ಚತುರಮಂತ್ರಿತಿಳಕಂ ಭರತಂ || ೪೩ ||

---

[1] ಈ ಪದ್ಯವೇ ಮೈಸೂರಿನ ಅಸಮಗ್ರಪ್ರತಿಯಲ್ಲಿ ಮೊದಲನೆಯದು, ಅದೂ ಉತ್ತರಾರ್ಧ

[2] ಈ ಪದ್ಯ ಮೈಸೂರು ಓರಿಯಂಟಲ್ ಲೈಬ್ರರಿಯ ಪ್ರತಿಯಲ್ಲಿಲ್ಲ.

*ಪ್ರವಿಮಳ ಜಿನಶಾಸನದಿಂ
ಪವಿತ್ರಮೆನೆ ಮಾಡಿ ಕೂಡೆ ಮೂಸಾಸಿರಮಂ |
ಭುವನನುತ(ನ)ನಾತ್ಮೀ
ಯವಚೋಮೃತದಿಂದೆ ಪೇಳ್ದ ಪೆರ್ಗಡೆ ಬೊಮ್ಮಂ || ೪೫ ||

*ಆ ವಿಭುವಿನಗ್ರತನಯಂ
ಪಾವನಚರಿತಂ ವಿನೇಯಕಲ್ಪಮಹೀಜಂ |
ಕೇವಳಮೆ ನಾಗದೇವಂ
ಭೂವಿಶ್ರುತಕೀರ್ತಿಮಂಡಳೇಶ್ವರತಿಳಕಂ || ೪೬ ||

† . . . ಮತ್ತೆನಲ್ಕೇಂ ಪಿರಿಯನೊ ಜಗತೀನಾಥರೊಳ್ ಕೀರ್ತಿವರ್ಮಂ ||೪೭||

† . . . .
ಧರಣಿಪತಿ ಕೀತಿವರ್ಮಂ
ನಿರುತಂ ಪೊನ್ ಕವಿಮ್ಮತಾದುದೆನಿಸಿದವಿಳೆಯೊಳ್ || ೪೮||

†ಇವನಂತಿರೊಳ್ಪಿನಿಂ ನೆಗ
ಳ್ದವನಿಪರಾರೆಂದು ದೇವನಾಗನ ಮಗನಾ |
ಹವಮಲ್ಲಮಹೀಶನನಖಿ
ಳವಿನೇಯಜನಾಬ್ಜಮಿತ್ರನಂ ಬಣ್ಣಿಪರಾರ್ || ೪೯ ||

ಎಚ್. ದೇವೀರಪ್ಪ.

---

* ಈ ಪದ್ಯಗಳು ಮೈಸೂರು ಓರಿಯಂಟಲ್ ಲೈಬ್ರರಿಯ ಪ್ರತಿಯಲ್ಲಿ ಇಲ್ಲ.

† ೪೭, ೪೮, ೪೯ ನೆಯ ಪದ್ಯಗಳು ಆಗಲೇ ಪ್ರಸಿದ್ಧವಾಗಿವೆ.

ಪುರಂದರದಾಸರಿಗೆ

ಅಚ್ಚಗನ್ನಡದ ಪದವೋದಿ ಮನವೆಚ್ಚಿದೆಸು!
ಸರಸತಿಯ ದಿವ್ಯ ವೀಣಾಕ್ವಣಿತದೊಲು ಸಾಗಿ
ಸ್ವಚ್ಛ ಭಕುತಿಯ ಸ್ಫೂರ್ತಿ ಚಿಮ್ಮಿರಲು ಹೊಸಲಾಗಿ
ಕೇಳಿ, ಮೈಮರೆಯದವರಾರು ಹರಿಭಜನೆಯನು!
ಭೂವ್ಯೋಮಪರ್ಯಂತಪಸರಿಸಿದೆ ಹೊಸನೋಟ!
ಕಂಡಕಂಡೆಡೆ ಕೃಷ್ಣನನು ಕಾಣುತಿದೆ ಕಣ್ಣು!
(ಹಗಲಿರುಳ್ತು ಹೊನ್ನ ಹೊಳಹನೆ ಕಂಡ ಈ ಕಣ್ಣು!)
ನಡೆದುದೇ ಹರಿಸೇವೆ! ನುಡಿದುದೇ ಸ್ತುತಿ, ಪಾಠ!
ಭಕ್ತಿರಸದಲಿ ಮಿಂದು, ಸಂಗೀತದಲಿ ತೇಲಿ
ಧರ್ಮದಾರತಿಗೈದು, ಅನುಭವದ ನುಡಿ ಸಾರಿ,
ಬದುಕಿನಾಳವ ಹೊಕ್ಕು ಬಾಳಿನ್ಯೆಸಿರಿ ತೋರಿ
ಮಿನುಗಿಹುದು ನಿಮ್ಮ ನುಡಿ ಅಪರಂಜಿಯನು ಹೋಲಿ!
ವ್ಯಾಸ ಬೋಧಿತ ಶಿಷ್ಯ ಹರಿದಾಸಕುಲವರ್ಯ!
ನಿಮ್ಮ ನೆನೆವುದೆ ಪುಣ್ಯ! ಪಾಡುವುದೆ ಶುಭಕಾರ್ಯ!

ಜಿ. ವರದರಾಜರಾವ್.

ಬೀಗರು ಬರುತ್ತಾರೆ!

(ಒಂದು ಏಕಾಂಕ ಪ್ರಹಸನ)

ಸಿ. ಆರ್. ನೈಲೇರು, ಎಂ.ಎ.
ಮತ್ತು
ಎಲ್. ಲಕ್ಷ್ಮೀನರಸಿಂಹರಾವ್, ಬಿ.ಎಸ್‌ಸಿ.

ಪಾತ್ರಗಳು

ಸುಂದರರಾವ್	....	ಒಬ್ಬ ಉದ್ಯೋಗಸ್ಥ
ಜಾನಕಿ	....	ಆತನ ಹೆಂಡತಿ
ಅಜ್ಜಿ	....	ಆತನ ತಾಯಿ
ಕಮಲ	....	ಆತನ ಮಗಳು
ಬಾಲು	....	ಆತನ ಮಗ
ಮಣಿ	....	ಅಡಿಗೆಯವನು
ಸುಬ್ರಹ್ಮಣ್ಯಶಾಸ್ತ್ರಿ	....	ಬೀಗರಾಗಬೇಕಾದವನು

ಇನ್ಷೂರೆನ್ಸ್ ಏಜೆಂಟು, ಯಾಚಕ ಬ್ರಾಹ್ಮಣ, ಹಜಾಮ, ಹಾಲಿನವಳು,
ಬಾಲುವಿನ ಮನೆ ಮೇಷ್ಟ್ರು, ಜವಾನ, ಅಗಸ—ಇತ್ಯಾದಿ.

ಬೀಗರು ಬರುತ್ತಾರೆ!

(ಸುಂದರರಾಯರ ಮನೆಯ ಡ್ರಾಯಿಂಗ್ ರೂಮು. ಬೆಳಗ್ಗೆ ಸುಮಾರು ಒಂಬತ್ತು ವರೆ ಘಂಟೆಯ ಸಮಯ. ಸುಂದರರಾಯರ ಮಕ್ಕಳು ಡ್ರಾಯಿಂಗ್ ರೂಮಿನಲ್ಲಿರುವ ಕುರ್ಚಿ ಮೇಜುಗಳನ್ನು ತಲೆಕೆಳಗು ಮಾಡುತ್ತಾ ಗಲಾಟೆಮಾಡುತ್ತಿದ್ದಾರೆ. ಹೂವಿನ ದಾನಿ ಕೆಳಕ್ಕೆ ಬಿದ್ದು ಅದರ ನೀರು ಹೂವು ಎಲ್ಲಾ ಚೆಲ್ಲಿದೆ.)

ಸುಂದರರಾಯ (ಪ್ರವೇಶಿಸಿ)—ಏನು ರಗಳೆ ಇದು! ಇದೇನ್ರೋ ಟೇಬಲ್ಲು ಛೇರು ಎಲ್ಲಾ ತಲೆಕೆಳಕಾಗಿ ಹಾಕಿದ್ದೀರಿ? ಯಾರೋ ಇದು ಈ ಟೇಬಲ್ ಮೇಲಿದ್ದ ಹೂವಿನ ದಾನಿ ಕೆಡವಿ ನೀರೆಲ್ಲಾ ಸುರಿದಿದ್ದೀರಿ? ಇಲ್ಲ, ನಿಮಗೆ ಸ್ವಲ್ಪ ಬೆಚ್ಚಗೆ ಕೊಡಬೇಕು! ಏಟಿಲ್ಲದೆ ಬಹಳ ಹೆಚ್ಚಿಕೊಂಡುಬಿಟ್ಟಿದ್ದೀರಿ. (ಹುಡುಗರನ್ನು ಹೊಡೆಯಲು ಹೋಗುತ್ತಾನೆ. ಅವರು 'ಅಯ್ಯೊ ನಾನಲ್ಲ, ತಾನಲ್ಲ, ಎಂದೂ ಕೂಗುತ್ತ ಓಡಿಹೋಗುತ್ತಾರೆ. ಅನಂತರ ಮನೆಯ ಒಳಗಡೆ ಇರುವ ತನ್ನ ಹೆಂಡತಿಯನ್ನುದ್ದೇಶಿಸಿ) ಲೇ, ನೋಡೇ ಇಲ್ಲಿ ನಿನ್ನ ಮಕ್ಕಳು ಮಾಡಿರೋದನ್ನ! ಇದನ್ನೆಲ್ಲಾ ತೆಗೆದು ಸ್ವಲ್ಪ ಸರಿಮಾಡಬಾರದೇನೆ! ಈಗ ಬೀಗರು ಬಂದರೆ ಎಷ್ಟು ಚೆನ್ನಾಗಿರುತ್ತೊ!

ಜಾನಕಿ (ಒಳಗಿನಿಂದ)—ಇದೋ ಬಂದೆ! (ಪ್ರವೇಶಿಸಿ) ಅಯ್ಯೋ ಇದೇನು ಲೂಟಿ ಮನೇಲಿ! ಏನು ಮಕ್ಕಳೋ ಇವು, ಶನೀಶ್ವರಗಳು! ಈ ಹಾಳು ಮಕ್ಕಳು ಹುಟ್ಟಲಿಲ್ಲಾಂತ ಯಾರು ತಪಸ್ಸು ಮಾಡಿದರು? (ಮೇಜು ಕುರ್ಚಿ ಮುಂತಾದವುಗಳನ್ನೆಲ್ಲಾ ಸರಿಯಾಗಿಡುತ್ತಾ) ಅದಿರಲಿ, ಇನ್ನುಮೇಲೆ 'ಎಲೆ' 'ತಲೆ' ಎಂತ ನನ್ನನ್ನ ಕೂಗಬೇಡಿ. ನಮ್ಮ ಕಮಲನ್ನ ನೋಡೋಕೆ ಬರುವವರು ಮದ್ರಾಸಿನಿಂದ ಬರುತ್ತಾರೆ. ಮದರಾಸಿನವರು ಎಂದರೆ ಎಷ್ಟೋ ನಾಜೂಕಿನವರು, ಅವರ ಮುಂದೆ ಎಲೆ ತಲೆ ಅಂತ ಕೂಗಿದರೆ ಹೇಗಿರುತ್ತೆ ನೀವೇ ನೋಡಿ!

ಸುಂದರ (ನಗುತ್ತ)—ಓಹೋ, ಹಾಗಾದರೆ ಇನ್ನುಮೇಲೆ ನಿನ್ನನ್ನ ನಾಟಕದಲ್ಲಿ, ಸಿನೀಮಾದಲ್ಲಿ, ಕೂಗುವಹಾಗೆ ಕೂಗಬೇಕೋ! ಅದಿರಲಿ, ಆ ಹಾಳಾದ ಮಣೀನ ಕಾಫೀ ತಗೊಂಡು ಬಾ ಅನ್ನು. ಇನ್ನೂ ಕಾಫೀನೇ ಕುಡಿದಿಲ್ಲ ಇವೊತ್ತು. (ಜಾನಕಿ ಹೋಗುವಳು. ಮಣಿ ಒಂದು ಕೊಳಕು ಬಟ್ಟೆಯನ್ನು ಮೊಣಕಾಲ ಮೇಲಕ್ಕೆ ಉಟ್ಟುಕೊಂಡು, ಒಂದು ಹಿತ್ತಾಳೆಯ ಲೋಟದಲ್ಲಿ ಕಾಫಿ ತರುತ್ತಾನೆ. ಅವನನ್ನು ನೋಡಿ) ಲೋ ಮಣಿ, ನೀನೋ ನಿನ್ನ ವೇಷವೋ! ಬಹಳ ಚೆನ್ನಾಗಿದೆ! ನೀನು ಬಟ್ಟೇನ ಅಗಸನಿಗೆ ಹಾಕು

ತೀಯೋ ? ಗಾಣಿಗನಿಗೆ ಹಾಕುತೀಯೊ ? ಇದೆಲ್ಲ ದೂರವಾಗಿಟ್ಟು ಒಳ್ಳೆ ಅಗಸನ ಮನೆಯ ಬಟ್ಟೆ ತೊಡಬೇಕು. ಗೊತ್ತಾಯಿತೇ ? ಆ ಹಾಳಾದ ಲೋಟದಲ್ಲಿ ಕಾಫಿ ತರಬೇಡ. ಕಪ್ ಅಂಡ್ ಸಾಸರಿನಲ್ಲಿ ಹಾಕಿ ಒಂದು ಟ್ರೇಯಲ್ಲಿಟ್ಟುಕೊಂಡು ಬಾ. ನಿನ್ನ ತಲೆಯನ್ನ ಚೆನ್ನಾಗಿ ಬಾಚಿಕೋ. ತಿಳೀತೇ ?

ಮಣಿ—ಓ, ಓ, ಶರಿ!

ಸುಂದರ—ಹೋಗೋ ಅಧಿಕ ಪ್ರಸಂಗಿ! ತಲೆಹರಟೆ ಹರಟಬೇಡ. (ಮಣಿ ಹೋಗುವನು. ಅಜ್ಜಿ ಮೆಲ್ಲಗೆ ಕೋಲೂರಿಕೊಂಡು ಅಲ್ಲಿಗೆ ನಡೆದುಬಂದು ಎಡಗಯ್ಯನ್ನು ಕಣ್ಣ ಮೇಲಿಟ್ಟುಕೊಂಡು ನೋಡುತ್ತಾಳೆ; ಆಮೇಲೆ ಕೈ ಸೊಂಟದಮೇಲಿಟ್ಟುಕೊಂಡು)

ಅಜ್ಜಿ—ಅಯ್ಯೊಪ್ಪ! ಯಾರೇ ಅದೂ ? ಜಾನಕೀ ? ಹುಂ, ಈ ಕಣ್ಣು ಬೇರೆ ಕಾಣೋದಿಲ್ಲ. ಈ ಹಾಳಾಗಿ ಹೋದೋಳಿಗೆ ಸಾವಾದರೂ ಬಂದರೆ ಸಾಕಾಗಿದೆ. ಯಾರೇ ಬರ್ತಾರೆ ಇವೊತ್ತು ? ಯಾವೂರಿಂದ ಬರ್ತಾರೇ ? ನಿಂತುಕೊಳ್ಳೋಕೆ ಕೂಡ ಆಗೊಲ್ಲ ಹಾಳು! (ಕೆಳಗೆ ಕೂತುಬಿಡುತ್ತಾಳೆ). ಹುಂ, ಹುಂ!

ಸುಂದರ—ಸರಿ, ಇವಳು ಬೇರೆ ಎದ್ದು ನಡೆಯೋದಕ್ಕೆ ಪ್ರಾರಂಭಿಸಿಬಿಟ್ಟಳೋ ಇಲ್ಲವೋ! ಇವೊತ್ತೇನು ಎಲ್ಲಾ ಹೀಗೇ ತಕರಾರಾಗಿದೆ! (ಗಟ್ಟಿಯಾಗಿ) ಅಮ್ಮಾ, ಅಮ್ಮಾ, ಎಲ್ಲಾದರೂ ಬಿದ್ದುಗಿದ್ದುಬಿಟ್ಟೀಯೆ. ಮಲಗಿಕೊ ಹೋಗು ಸ್ವಸ್ಥವಾಗಿ.

ಅಜ್ಜಿ (ಕೈಯನ್ನು ಕಣ್ಣಿನಮೇಲಿಟ್ಟುಕೊಂಡು ನೋಡುತ್ತಾ)—ಯಾರದು ? ಏನು ಹೇಳಿದೆ ? ಹಾಳು ಕಿವೀನೂ ಕೇಳಿಸೋದಿಲ್ಲ. ಸಾವಾದರೂ ಬರಲಿ ಎಂದರೆ ಅದೂ ಬರೋದಿಲ್ಲ. ಏನವಸ್ಥೇನಪ್ಪ ಹಾಳು!

ಸುಂದರ—ಏನು ಪ್ರಾರಬ್ಧವಪ್ಪ! ಒಳ್ಳೇದಿನ ನೋಡಿ ಹಾಳು ಹಾಳು ಅಂತಾಳಲ್ಲ ಇವಳು! (ಇನ್ನೂ ಗಟ್ಟಿಯಾಗಿ) ಅಮ್ಮಾ, ನಾನು, ಸುಂದರ. ನೀನು ಹೋಗಿ ಹಜಾರ ದಲ್ಲಿ ಮಲಕ್ಕೊಳ್ಳೇ ಹೋಗು ಸುಮ್ಮನೆ. ಇಲ್ಲಿ ಕೂತುಕೋಬಾರದು. ಇವೊತ್ತು ಮದರಾಸಿನಿಂದ ಬೀಗರು ಬರುತ್ತಾರೆ. ಲೇ ಕಮಲಾ! ಇವಳನ್ನು ಕರೆದುಕೊಂಡು ಹೋಗೇ!

ಕಮಲ (ಪ್ರವೇಶಿಸಿ)—ಅಯ್ಯೋ, ಅಜ್ಜಿ ಇಲ್ಲಿಗೆ ಬಂದುಬಿಟ್ಟಿದ್ದಾಳೆಯೇ ? ಕಣ್ಣು ಕಾಣೋಲ್ಲ, ಕಿವಿ ಕೇಳೊಲ್ಲ, ಹೇಳಿದರೆ ತಿಳಿಯೊಲ್ಲ. (ಗಟ್ಟಿಯಾಗಿ) ಅಜ್ಜೀ, ಬಾ ಹೋಗೋಣ (ಕೈಹಿಡಿದೆಬ್ಬಿಸಿ ಕರೆದುಕೊಂಡು ಹೋಗಲು ಉದ್ಯುಕ್ತಳಾಗುವಳು).

ಸುಂದರ—ಇಲ್ಲಿ ನೋಡು ಕಮಲ! ಇವೊತ್ತು ಮದರಾಸಿನಿಂದ ನಿನ್ನನ್ನ ನೋಡೋದಕ್ಕೆ ಬರುತ್ತಾರೆ. ತಲೆ ಬಾಚಿಕೊಂಡು, ಹೂವು ಮುಡಿದುಕೊಂಡು, ಒಳ್ಳೆ ಜಾರ್ಜೆಟ್ ಸೀರೆ ಉಟ್ಟುಕೊಂಡು ತಯಾರಾಗಿರಬೇಕು. ಎರಡು ಹಾಡು ಹೇಳು ಅಂದರೆ ಹೇಳಬೇಕು. ಆಮೇಲೆ ಅವರಿಗೆ ನಮಸ್ಕಾರ ಮಾಡಬೇಕು. . . .

ಕಮಲ—ಹೋಗಪ್ಪ, ನಂಗೆ ಹಾಡು ಗೀಡು ಒಂದೂ ಬರೋಲ್ಲ. ಎಲ್ಲಾ ಮರೆತು ಹೋಯಿತು !

ಸುಂದರ—ಹುಚ್ಚಿ, ಹಾಗೆಲ್ಲ ಅನ್ನಬಾರದು! ದೊಡ್ಡೋರು ಹೇಳೋ ಹಾಗೆ ಕೇಳಬೇಕು. ಹಾಗಿಲ್ಲದಿದ್ದರೆ ನಿಂಗೆ ಮದುವೆ ಹೇಗೇ ಆಗುತ್ತೆ ?

ಕಮಲ—ನಾ ಮದುವೆ ಮಾಡಿಕೊಂಡರೆ ತಾನೆ? (ಎಂದು ಹೇಳುತ್ತ ಅಜ್ಜಿಯನ್ನು ಕರೆದುಕೊಂಡು ಹೋಗುತ್ತಾಳೆ).

ಸುಂದರ—ಟೈಂ ಎಷ್ಟು ಈವಾಗ? (ಕೈ ಗಡಿಯಾರವನ್ನು ನೋಡುತ್ತ) ಅಯ್ಯೋ, ಘಂಟೆ ಹತ್ತು ಆಗಿಹೋಯಿತಲ್ಲ! ಇನ್ನೂ ಸ್ನಾನವಿಲ್ಲ. ಪೇಪರ್ ಕೂಡ ನೋಡಿಲ್ಲ. ಹಾಳಾದ್ದ ಆಫೀಸಿಗೆ ಬೇರೆ ಹೋಗಬೇಕು. ಕೆಲಸ ಬೇಕಾದ ಹಾಗೆ ಬಿದ್ದಿದೆ. ಇವೊತ್ತಲ್ಲದಿದ್ದರೆ ನಾಳೆ ನಾನು ತಾನೇ ಮಾಡಬೇಕು? ಈ ಮದ್ರಾಸ್ ಬ್ರಾಹ್ಮಣ ಬೇರೆ ಬರುತ್ತಾರಂತೆ. ಅವರನ್ನ ನಾನು ನೋಡಿಯೂ ಇಲ್ಲ. ಅವರು ಕಪ್ಪೋ ಬಿಳುಪೋ ಅಂತ ಕೂಡ ಗೊತ್ತಿಲ್ಲ. ಆತ ಬೆಳಗಿನ ರೈಲಿನಲ್ಲಿ ಬಂದ ಹಾಗೆ ಕಾಣೆ. ಸರಿ, ಇವೊತ್ತು ರಜಕ್ಕೆ ಬರೆದು ಹಾಕಿಬಿಡೋದು! ಈ ವರ್ಷ ಇನ್ನೂ ರಜಾನೇ ತಗೊಂಡಿಲ್ಲ ಒಂದು ದಿನ ಕೂಡ. ಲೋ ಬಾಲು, ನನ್ನ ಟೇಬಲ್ ಮೇಲೆ ಫೌಂಟನ್ ಪೆನ್ನು ಲೆಟರ್‌ಪ್ಯಾಡು ಇದೆ, ತಗೊಂಡು ಬಾರೋ! (ಬಾಲು ತರುತ್ತಾನೆ. ಸುಂದರರಾಯ ಅವಸರವಸರವಾಗಿ ಕಾಗದ ಬರೆದುಕೊಟ್ಟು) ಇದನ್ನ ತಗೊಂಡು ಹೋಗಿ ನಮ್ಮ ಆಫೀಸ್ ಮ್ಯಾನೇಜರ್ ಇದಾರಲ್ಲ ಅವರ ಕೈಲಿ ಕೊಡಬೇಕು. ನಾನು ಕೊಟ್ಟೆ ಅಂತ ಹೇಳು.

ಬಾಲು (ನಗುತ್ತ)—ಅವರು ಮನೇಲಿ ಇಲ್ದೇ ಇದ್ದರೆ ಹಾಗೇ ಬಂದುಬಿಡಲೋ ?

ಸುಂದರ—ಛೇ ಹಾಗೆಲ್ಲಾದರೂ ಮಾಡೀಯೆ! ಅವರ ಕೈಯಲ್ಲೇ ಕೊಡಬೇಕು. ಇಲ್ಲದೆ ಇದ್ದರೆ ಕೆಲಸ ಕೆಟ್ಟುಹೋಗುತ್ತೆ. ಇಗೋ ತಗೊಂಡು ಹೋಗು ನಿನಗೆ ಪೆಪ್ಪರುಮೆಂಟಿಗೆ ಕಾಸು! (ಕಾಸನ್ನು ಎಸೆದು) ಸೈಕಲ್ ತಗೊಂಡು ಬೇಗ ಹೋಗಿ ಬಿಟ್ಟುಬಾ. (ಬಾಲು ಸಂತೋಷದಿಂದ ಕುಣಿದುಕೊಂಡು ಹೋಗುವನು. ಬಾಗಿಲು ಸದ್ದಾಗುವುದು. ಅದನ್ನು ಕೇಳಿ) ಓಹೋ, ಬೀಗರು ಬಂದರೇನೋ! (ಸಡಗರದಿಂದ ಹೋಗಿ ನೋಡುವನು.)

ಬಾಲುವಿನ ಮನೆ ಮೇಷ್ಟರು (ಪ್ರವೇಶಿಸಿ)—ಹಿ . . . ಹಿ . . . ಹಿ . . . ಏನೂ ಇಲ್ಲ. ಹಾಗೇ ತಮ್ಮನ್ನು ನೋಡಿಬಿಟ್ಟು ಹೋಗೋಣ ಅಂತ ಬಂದೆ.

ಸುಂದರ (ಹುಬ್ಬುಗಂಟಿಕ್ಕಿ)—ಏನು ಸಮಾಚಾರ ಹೇಳಿ, ಬೇಗ!

ಮೇಷ್ಟರು—ಏನೂ ಇಲ್ಲ, ಮನೇಲಿ ನಾಳೆ ವಿಶೇಷ. ಅಂಗಡಿಯಿಂದ ಸಾಮಾನು ತಗೊಂಡು ಹೋಗಬೇಕು. ಎಲಿಮೆಂಟರಿ ಸ್ಕೂಲು ಮೇಷ್ಟರ ಸಂಬಳ ಬರೋದು ತಮಗೆ ಗೊತ್ತಲ್ಲ! ಇನ್ನೂ ಹದಿನೈದು ದಿನ ಆಗಬೇಕು. ಒಂದೆರಡು ರೂಪಾಯಿ

ಇದ್ದರೆ, ಹಂ . . . ಹಂ . . . ಹಂ . . . ಆ ಮೇಲೆ ಲೆಕ್ಕಕ್ಕೆ ವಜ ಕಟ್ಟಿಕೋ ಬಹುದು. ಹಿಂ . . . ಹಿಂ . . . ಹಿಂ . . .

ಸುಂದರ—ಶ್ರಾದ್ಧಕ್ಕೂ ಇವೊತ್ತೇ ಮುಹೂರ್ತವೇ? ತಗೊಂಡು ಹೋಗಿ! (ಎರಡು ರೂಪಾಯಿ ಎಸೆಯುತ್ತಾನೆ.)

ಮೇಷ್ಟರು—ಬಹಳ ಉಪಕಾರವಾಯಿತು! ನಮಸ್ಕಾರ. (ಹೋಗುತ್ತಾನೆ. ನಿಟ್ಟುಸಿರು ಬಿಡುತ್ತಾ ಸುಂದರರಾಯನು ಆರಾಮ ಕುರ್ಚಿಯಲ್ಲಿ ಒರಗಿಕೊಂಡು ಕುಳಿತುಕೊಳ್ಳುತ್ತಾನೆ. ಬಾಗಿಲ ಹತ್ತಿರ ಸದ್ದಾಗುತ್ತದೆ.)

ಸುಂದರ—ಹೋ! ಬಂದರೇನೋ ಬೀಗರು! (ಚಟ್ಟನೆ ಎದ್ದು ನಿಲ್ಲುತ್ತಾನೆ.)

ಅಗಸ (ಕೊಳೆ ಬಟ್ಟೆಯ ದೊಡ್ಡದೊಂದು ಮೂಟೆಯೊಡನೆ ಪ್ರವೇಶಿಸಿ, ಮೂಟೆಯನ್ನು ಇಳಿಸಿ, ಕೈಹಿಸಿಕಿಕೊಳ್ಳುತ್ತ ಸಂಕೋಚದಿಂದ)—ಬುದ್ದೀ, ಈ ತಿಂಗಳ ಸಂಬಳ ಬರಬೇಕು ಬುದ್ದೀ ನನಗೆ. ನಾಳೆ ನನ್ನ ತಂಗೀಗೆ ಲಗ್ನಾ ಬುದ್ದೀ. ಒಂದು ಮೂರು ರೂಪಾಯಿ ಎಚ್ಚಾಗಿ ಸೇರಿಸಿ ಕೊಡಬೇಕು ಬುದ್ದೀ. ಬರೋ ತಿಂಗಳು ಸಂಬಳದಾಗೆ ಉತ್ತಾರ ಆಕ್ಕೋ ಬವುದು.

ಸುಂದರ (ರೌದ್ರಾಕಾರದಿಂದ)—ಏನೋ, ಹಾಳುಮದುವೆ, ಸಾವು, ಎಲ್ಲಾ ಒಟ್ಟಿಗೇ ಬರಬೇಕೇನೋ? ಎಲ್ಲಾದಕ್ಕೂ ಇವೊತ್ತೇ ಮುಹೂರ್ತವೇನೋ?

ಅಗಸ (ಕೋಪದಿಂದ)—ಮದುವೇಗೆ ಅಣ ಕೇಳಿದರೆ, ಆಳು ಗೀಳು ಅಂತ ಯೋಳ ಬೇಡಿ ಬುದ್ದೀ! ಅಣ ಇಲ್ದಿದ್ರೆ ಇಲ್ಲಾಂತ ಯೋಳಿ. ಇಂಗೇ ಒಂಟೋಯ್ತೀನಿ!

ಸುಂದರ—ಏನು ತುಂಬ ಕೋಪಿಸಿಕೋತೀಯಲ್ಲಾ! ತಗೊ! (ರೂಪಾಯಿಗಳನ್ನು ಎಸೆಯುತ್ತಾನೆ. ಅಗಸನು ತೆಗೆದುಕೊಂಡು ಹೋಗುತ್ತಾನೆ. ಮತ್ತೆ ಯಾರೋ ಬರುವ ಸದ್ದಾಗುತ್ತದೆ.) ಓಹೋ ಬಂದರೇನೋ ಬೀಗರು! (ಹಜಾಮನು ಬರುತ್ತಾನೆ.) ಏನೋ ನೀನೇನೋ?

ಹಜಾಮ—ಹೌದು ಬುದ್ದೀ. ಇವೊತ್ತು ಮೊಕ ಮಾಡಿಸಿಕೋತೀರಿ ಅಂತ ಬಂದೆ. ಸೋಮವಾರ ಇವೊತ್ತು.

ಸುಂದರ (ಕೆನ್ನೆ ಗಲ್ಲಗಳನ್ನು ಮುಟ್ಟಿನೋಡಿಕೊಂಡು)—ಹುಂ, ಬೆಳೆದಿದೆ; ಮಾಡಿಸಿಕೋ ಬೇಕು ಅಂತ ಇದ್ದೆ. ಆದರೆ ಇವೊತ್ತು ರಜಾ ತಗೊಂಡಿದ್ದೇನೆ. ಯಾತಕ್ಕೆ ಸುಮ್ಮನೆ ಕೆನ್ನೆ ಕೆರೆಸಿಕೋಬೇಕು? ನಾಡಿದ್ದು ಬುಧವಾರ ಬಾ, ನೋಡೋಣ.

ಹಜಾಮ—ಆಗಲಿ ಬುದ್ದಿ. ಬುದ್ದೀ, ಸಂಗಿನ್ನೂ ನವರಾತ್ರಿ ಇನಾಮು ಬಂದಿಲ್ಲ. ಚಿಕ್ಕ ಯಜಮಾನರು ಕಟಿಂಗ್ ಮಾಡಿಸಿಕೊಂಡದ್ದಕ್ಕೆ ಬರಬೇಕು.

ಸುಂದರ—ಏನೋ ನಿನ್ನ ರಗಳೆ? ಬುಧವಾರ ಬಾ; ಎಲ್ಲಾ ಕೊಡುತ್ತೇನೆ. (ಹಜಾಮನು ಹೋಗುತ್ತಾನೆ. ಬಗ್ಗಿನೋಡಿ) ಯಾರೋ ಅಲ್ಲಿ? ಅಲ್ಲಿ ಯಾರ್‍ಯಾರಿದ್ದೀರಿ

ಎಲ್ಲಾ ಬನ್ನಿ ಇಲ್ಲಿ. ನಿಮ್ಮ ನಿಮ್ಮ ಲೆಕ್ಕ ಹೇಳಿ ದುಡ್ಡು ತಗೊಂಡು ಹೋಗಿ! ಎಲ್ಲರೂ ಇವೊತ್ತೇ ಬರಬೇಕೇ! ರಾಮ ರಾಮ! ನಿಮಗೆಲ್ಲಾ ಜವಾಬು ಹೇಳಿ ಕಳುಹಿಸುವುದರಲ್ಲಿ ನನಗೆ ಹುಚ್ಚು ಹಿಡಿದುಹೋಗುತ್ತದೆ.

ಹಾಲಿನವಳು (ಮುಂದೆ ಬಂದು)—ನಂಗೆ ಮೂರು ತಿಂಗಳ ಬಾಕಿಬರಬೇಕು ಬುದ್ಧೀ.

ಸುಂದರ—ಮೂರು ತಿಂಗಳದ್ದೇ? ಏನನ್ಯಾಯ! ಹಾಲಿನೋಳಿಗೆ ಕೊಡಬೇಕೂಂತ ತಿಂಗಳು ತಿಂಗಳಿಗೂ ದುಡ್ಡು ಇಸುಕೊಳ್ಳುತಾಳಲ್ಲ ಇವಳು, ನಿನಗೆ ಕೊಡದೆ ಏನು ಮಾಡುತ್ತಾಳೆ? (ಮನೆಯ ಒಳಭಾಗವನ್ನು ಉದ್ದೇಶಿಸಿ) ಲೇ, ಲೇ, ಇಲ್ಲಿ ಬಾರೇ ಇಲ್ಲಿ ಸ್ವಲ್ಪ!

ಜಾನಕಿ (ಕೋಪದಿಂದ ಬಂದು)—ಏನು ತಿರುಗಿ 'ಲೇ'?

ಸುಂದರ—ಏನೇ? ಈ ಹಾಲಿನೋಳಿಗೆ ಮೂರು ತಿಂಗಳಿಂದ ದುಡ್ಡು ಕೊಟ್ಟಿಲ್ಲ ವಂತಲ್ಲೇ? ನನ್ನ ಹತ್ತಿರ ಇಸುಕೊಂಡಿದ್ದೆಲ್ಲಾ ಏನುಮಾಡಿದೆ?

ಜಾನಕಿ (ಹಾಲಿನವಳನ್ನು ಕೋಪದಿಂದ ನೋಡುತ್ತ)—ಏನೇ, ನಾನು ನಿನಗೆ ದುಡ್ಡು ಕೊಡಲಿಲ್ಲವೇನೇ? ನಿನ್ನ ಗಂಡನೇ ಬಂದು ಇಸುಕೊಂಡು ಹೋದ! ಯಜಮಾನರ ಹತ್ತಿರ ಸುಳ್ಳು ಸುಳ್ಳೆಲ್ಲಾ ಚಾಡಿ ಹೇಳುತೀಯಾ?

ಹಾಲಿನವಳು—ನೀವು ನನ್ನ ಗಂಡಂಗೆ ಕೊಟ್ಟರೆ ನಂಗ್ಯಾಗ್ರವ್ವ ಗೊತ್ತು? ಅವನು ಎಲ್ಲಾ ಯಂಡ ಕುಡಿದುಬಿಡುತಾನೆ. ನಂಗೊಂದು ಕಾಸೂ ತೋರಿಸಾಕಿಲ್ಲ. ಅವನ ಕೈಲಿ ದುಡ್ಡು ಕೊಡಬೇಡೀಂತ ಏಟುಸಲಾರವ್ವಾ ನಿಮಗೆ ಯೋಳೋದು? ಎಷ್ಟು ಕೊಟ್ಟಿರಿ ಅವನ ಕೈಲಿ?

ಜಾನಕಿ—ನಿಂಗೆ ಬೇರೆ ಹೇಳಬೇಕಾ? ಆರುಕಾಸು ಕಮ್ಮಿ ನಾಲ್ಕೂಕಾಲು ರೂಪಾಯಿ ಕೊಟ್ಟಿದ್ದೀನಿ. ಮೊದಲೇ ನೀನು ನಾಲ್ಕು ರೂಪಾಯಿ ಇಸುಕೊಂಡು ಹೋಗಿದ್ದೀ. ಅದಕ್ಕೆ ಮುಂಚೆ ಎಲ್ಲಾ ನಿನ್ನ ಗಂಡನ ಕೈಲೇ ಕೊಟ್ಟಿದ್ದೀನಿ.

ಹಾಲಿನವಳು—ಇದೇನ್ರವ್ವ, ನಾಲ್ಕೂಕಾಲು ರೂಪಾಯಿಗೆ ಆರುಕಾಸು ಕಮ್ಮಿ ಅಂತೀರಲ್ಲ? ಅದೇನಾ ಲೆಕ್ಕ ಬಾಕಿ?

ಜಾನಕಿ (ಅತಿ ಕೋಪದಿಂದ)—ಲೇ, ನನ್ನ ಕೈಲಿ ಜಗಳಕ್ಕೆ ಬರ್ತೀಯಾ? ನೀನು ಬಟ್ಟು ಜಾಸ್ತಿ ಹಾಕಿಬಿಟ್ಟರೆ ನನಗೆ ಸಮಾಚಾರ ಗೊತ್ತಾಗೊಲ್ಲ ಅಂತಲೋ? ಎರಡು ದಿನ ನಾನು ಊರಲ್ಲಿರಲಿಲ್ಲ; ಎರಡು ದಿನ ಕೊಟ್ಟ ಹಾಲು ಬರಿನೀರು. ಇನ್ನೊಂದು ದಿನ ಹಾಲು ಒಡೆದುಹೋಯಿತು. ಇದಕ್ಕೆಲ್ಲಾ ದುಡ್ಡುಕೊಡು ಅಂತೀಯಾ? ನಿನ್ನ ಹಾಲು ನನಗೆ ಬೇಡ! ನಾಳೆಯಿಂದ ಬೇರೆ ಇನ್ಯಾರ ಹತ್ತಿರ ವಾದರೂ ಹಾಕಿಸಿಕೋತೀನಿ.

ಹಾಲಿನವಳು—ನೀವು ನಿಲ್ಲಿಸಿಬಿಟ್ಟರೆ ನಂಗೇನು ಬೇರೆ ಮನೆ ಸಿಕ್ಕಾಕಿಲ್ವಾ? ಎಲ್ಲಾ

ಬಿಟ್ಟು ನಿಮ್ಮನೆಗೆ ಆಲು ಆಕ್ತೀನೀಂತ ಒಪ್ಕೊಂಡನಲ್ಲ, ನನ್ನ ಬುದ್ಧೀನ ನೋಡು! ಏ, ಒಂದುಕಾಸೂ ಬಾಕಿ ಇಲ್ಲದಂಗೆ ಕೊಟ್ಟುಬಿಟ್ಟು ಬೇರೆ ಮಾತಾಡು! ಹೂಂ!!

ಸುಂದರ—ಇದೇನಿದು ಪೀಡೆ ಮನೇಲಿ, ಬೀಗರು ಬರುತಾರೇನೋಂತ ನಾನು ಎದುರು ನೋಡುತಾ ಇರುವ ಹೊತ್ತಿನಲ್ಲಿ? ಮಾರ್ಕೆಟ್ಟಾದರೂ ವಾಸಿ! ಲೇ ಮುಚ್ಚು ಬಾಯಿ! ನಿನಗೆ ಕೊಡಬೇಕಾದ ಬಾಕೀನ ನಾಳೆಬಂದು ಇಸುಕೊಂಡು ಹೋಗು! (ಹಾಲಿನವಳು ಹೋಗುತ್ತಾಳೆ. ಜಾನಕಿಯನ್ನು ಕುರಿತು) ನೀನು ಹೋಗು ಒಳಕ್ಕೆ. ಹೀಗೆಲ್ಲಾ ಮಾತಾಡೋರನ್ನ ಹತ್ತಿರ ಯಾಕೆ ಸೇರಿಸಿದೆ?

ಜಾನಕಿ—ನಿಮ್ಮಂಥ ಗಂಡಸರಿದ್ದರೆ ಹೀಗೂ ಮಾತಾಡ್ತಾರೆ, ಹಾಗೂ ಮಾತಾಡ್ತಾರೆ. ನಾನು ಲೆಕ್ಕ ಹೇಳೋದಕ್ಕೆ ಮುಂಚೆ, ದುಡ್ಡು ಕೊಡ್ತೀನಿ ಅಂದುಬಿಟ್ಟಿರಲ್ಲ, ನನ್ನ ಯೋಗ್ಯತೆ ಏನಾಯಿತು? (ಸಿಡುಸಿಡನೆ ಒಳಕ್ಕೆ ಹೋಗುತ್ತಾಳೆ.)

ಸುಂದರ (ಕೈಗಡಿಯಾರವನ್ನು ನೋಡುತ್ತ)—ಓಹೋ, ಹತ್ತೂಮುಕ್ಕಾಲಾಯಿತು. ಇನ್ನೂ ಸ್ನಾನ ಇಲ್ಲ, ಊಟ ಇಲ್ಲ. ಬೆಳಗ್ಗಿನಿಂದ ಇವರ ಗಲಾಟೆಯೇ ಸರಿಹೋಯಿತು. ಆ ಹಾಳು ಬೀಗರು ಬಂದಾರು ಅಂತ ರಜ ತೆಗೆದುಕೊಂಡರೆ, ಅವರೂ ಬರಲಿಲ್ಲ. ಆಫೀಸಲ್ಲೋ ಹೆಣಚಾಕರಿ ಬಿದ್ದಿದೆ. ಏನುಮಾಡೋದು ಈವಾಗ? (ಯೋಚಿಸುತ್ತಿರುತ್ತಾನೆ. ಆಗ ಮೋಟಾರುಕಾರಿನ ಹಾರ್ನ್ ಶಬ್ದ ಕೇಳಿಸುವುದು.) ಓಹೋ ಯಾವುದೋ ಕಾರು ಬಂದಿದೆ. ನಮ್ಮ ಬೀಗರೇ ಇರಬೇಕು. ಮದ್ರಾಸಿನಿಂದ ನೆಟ್ಟಗೆ ಕಾರಲ್ಲೇ ಬಂದಿದಾರೆ ಅಂತ ತೋರುತ್ತೆ. (ಮನೆಯ ಒಳಭಾಗವನ್ನುದ್ದೇಶಿಸಿ) ಲೇ, ಅವರು ಬಂದಿರೋಹಾಗಿದೆ. ನಾನು ಹೋಗಿ ಕರೆದುಕೊಂಡು ಬರ್ತೀನಿ ಅವರನ್ನ. ಎಲ್ಲಾ ಅಣಿಯಾಗಿಟ್ಟು, ಮಣೀನ ಕಾಫಿ ತಗೊಂಡು ಬಾ ಅಂತ ಹೇಳು. ಕಪ್ ಅಂಡ್ ಸಾಸರಿನಲ್ಲಿ ತಗೊಂಡು ಬರಲಿ. ಅವರು ತುಂಬ ದೊಡ್ಡಮನುಷ್ಯರು ಅಂತ ಕಾಣುತ್ತೆ. ಮದರಾಸಿನಿಂದ ಕಾರಲ್ಲೇ ಬಂದಿದ್ದಾರೆ. (ಅವರನ್ನು ಕರೆದುಕೊಂಡು ಬರಲು ಹೋಗುತ್ತಾನೆ. ಒಂದು ನಿಮಿಷವಾದ ನಂತರ ಚೆನ್ನಾಗಿ ಸೂಟು ಹಾಕಿಕೊಂಡಿರುವ ಒಬ್ಬರೊಡನೆ ಒಳಕ್ಕೆ ಬರುತ್ತಾನೆ. ಅವರಿಬ್ಬರ ಹಿಂದೆ ಡ್ರೈವರು ಒಂದು ಚಿಕ್ಕ ಕೈ ಪೆಟ್ಟಿಗೆಯನ್ನು ತೆಗೆದುಕೊಂಡು ಬರುತ್ತಾನೆ. ಬಹಳ ಸಂತೋಷದಿಂದ ಹಲ್ಲು ಬಿಡುತ್ತ) ದಯಮಾಡಿಸಬೇಕು, ಹೀಗೆ. ನೆಟ್ಟಗೆ ಕಾರಲ್ಲೇ ಬಂದಹಾಗಿದೆ! ಅದೇ ಸುಖ ಈ ಹಾಳಾದ ರೈಲಿಗಿಂತ.

ಬಂದವರು (ಸ್ವಲ್ಪ ಆಶ್ಚರ್ಯದಿಂದ)—ತಾವೇ ತಾನೇ ಮಿಸ್ಟರ್ ಸುಂದರರಾವ್?

ಸುಂದರ—ಹೌದು, ಹೌದು, ನಾನೇ. ನಿಮಗೆ ಸಂದೇಹವೇನು? ಬನ್ನಿ, ಹೀಗೆ ಕೂಡಿ. ಲೋ ಯಾರೋ ಅಲ್ಲಿ? ಬಾಲು, ಇವರ ಪೆಟ್ಟಿಗೆ ಸಾಮಾನು ಎಲ್ಲಾ ತಗೊಂಡು ಹೋಗಿ ಒಳಗಿಡೋ!

ಬಂದವರು—ಏನೂ ಬೇಡಿ, ಬೇಡಿ! ಇಲ್ಲೇ ಇರಲಿ ಅದು. ನಿಮ್ಮನ್ನ ಕುರಿತು ನಮ್ಮ . . . . (ಸೋಫಾದ ಮೇಲೆ ಕೂರುವರು).

ಸುಂದರ—ಹೌದು ಹೌದು; ನಮ್ಮ ಗೋಪಾಲಯ್ಯರ್ ತಾನೇ? ನಮಗೂ ಅವರಿಗೂ ಬಹಳ ಸ್ನೇಹ. ಅವರೇ ಎಲ್ಲಾ ಮಾಡಿದ್ದು. ಕೋಟು ತೆಗದು ಸ್ಟ್ಯಾಂಡಿನ ಮೇಲೆ ಹಾಕಬಹುದಲ್ಲಾ!

ಬಂದವರು—ಪರವಾ ಇಲ್ಲಾಂದರೆ! ತಮಗೆ ಎಷ್ಟುಜನ ಮಕ್ಕಳು?

ಸುಂದರ—ಅದಕ್ಕೇನೂ ಕಡಮೆ ಇಲ್ಲ ಸಾರ್! ಆ ಭಾಗ್ಯ ಮಾತ್ರ ಬಹಳ ಕೊಟ್ಟಿದ್ದಾನೆ ದೇವರು. ಸರಿಯಾಗಿ ಅರ್ಧ ಡಜನ್ ಇವೆ. ಈಗ ಮದುವೆ ಆಗಬೇಕಾಗಿರುವುದು ದೊಡ್ಡ ಹುಡುಗೀಗೆ. ಅದಕ್ಕೋಸ್ಕರ ತಾನೇ . . ಹ . . ಹ . . ಹ . .

ಬಂದವರು—ಬಹಳ ಸಂತೋಷ. ದೇವರು ಎಲ್ಲಾ ಶುಭವಾಗಿ ನಡೆಸುತಾನೆ!

ಸುಂದರ—ಎಲ್ಲಾ ತಮ್ಮ ಕೈಯಲ್ಲಿದೆ. ನೀವು ಮನಸ್ಸುಮಾಡಿದರೆ ಆಯಿತು. ಲೋ, ಯಾರಲ್ಲಿ? ಆ ಮಣೀನ ಕಾಫಿ ತಗೊಂಡು ಬಾ ಅನ್ನು.

ಬಂದವರು—ಬೇಡಿ, ಬೇಡಿ, ಈಗತಾನೇ ಆಯಿತು ನನಗೆ ಕಾಫಿ.

ಸುಂದರ—ಛೆ, ಛೆ, ಹಾಗೆಲ್ಲಾ ಹೇಳಬಾರದು. ಕೊಂಚ ತಗೊಳ್ಳಿ. ವೈಗೇನೂ ಆಗೋಲ್ಲ; ನಮ್ಮನೆಯಲ್ಲಿ ಹಾಲು ಹೆಚ್ಚಾಗಿ ಹಾಕುತೀವಿ. (ಮಣಿ ಕಾಫಿಯನ್ನು ಕಪ್ ಅಂಡ್ ಸಾಸರಿನಲ್ಲಿ ಹಾಕಿ, ಟ್ರೇಯಲ್ಲಿಟ್ಟುಕೊಂಡು ಬರುತ್ತಾನೆ. ಶುಭ್ರವಾದ ಬಟ್ಟೆಯನ್ನು ತೊಟ್ಟಿರುತ್ತಾನೆ). ಲೋ, ಮಣಿ, ಬೇಗ ಇಡು ಟೇಬಲಿನ ಮೇಲೆ. ನಂಗೊಂದು ಕಪ್ ಅವರಿಗೊಂದು ಕಪ್.

ಮಣಿ—ಓ, ಓ, (ಎನ್ನುತ್ತ, ಬಂದವರ ಷರಾಯಿಯ ಮೇಲೆ ಸ್ವಲ್ಪ ಕಾಫಿಯನ್ನು ತುಳುಕಿಸಿ ಚೆಲ್ಲಿ ಪೆಚ್ಚುಮುಖ ಹಾಕಿಕೊಳ್ಳುತ್ತಾನೆ).

ಬಂದವರು (ಕೊಡವಿಕೊಳ್ಳುತ್ತ)—ಪರವಾಯಿಲ್ಲ, ಪರವಾಯಿಲ್ಲ. ಒರಸಿದರೆ ಹೋಗುತ್ತೆ.

ಸುಂದರ (ಮಣಿಯನ್ನು ಕೋಪದಿಂದ ನೋಡುತ್ತ)—ನೀನೊಬ್ಬ ದ್ರಾಭೆ! ಅವರ ಡ್ರೆಸ್ ಎಲ್ಲಾ ಹಾಳುಮಾಡಿಬಿಟ್ಟೆಯಲ್ಲೋ! ನಿಂಗೆ ಬುದ್ಧಿ ಅನ್ನೋದು ಸ್ವಲ್ಪವೂ ಇಲ್ಲ.

ಮಣಿ—ಕಾಣಲಿಲ್ಲ ರಾಯರೆ! ಕಾಫಿ ತುಳುಕಿಬಿಟ್ಟಿತು.

ಸುಂದರ—ಹೋಗು ಒಳಗೆ ಅಧಿಕಪ್ರಸಂಗಿ! (ಮಣಿ ಹೋಗುತ್ತಾನೆ. ಬಂದವರನ್ನು ನೋಡಿ) ಒಳ್ಳೆಯ ಶಕುನ! ನಮ್ಮ ಕೆಲಸ ಖಂಡಿತ ಆಗುತ್ತೆ. ಹಾಲು ಕಾಫಿ ಚೆಲ್ಲಿದರೆ ಬಹಳ ಒಳ್ಳೆಯದು ಅಂತ ಹೇಳ್ತಾರೆ!

ಬಂದವರು (ಕಾಫಿ ಕುಡಿದು)—ಅದೇನು ಪರವಾಯಿಲ್ಲ, ಅಗಸನಿಗೆ ಹಾಕಿದರೆ ಹೋಗಿಬಿಡುತ್ತೆ. ಅದಿರಲಿ, ಈಗ ಬಂದ ಕೆಲಸವನ್ನು ನೋಡೋಣ.

ಸುಂದರ—ಅಗತ್ಯವಾಗಿ ಆಗಬಹುದು! ಹುಡುಗನ ಜಾತಕ ಇಲ್ಲಿ ತೋರಿಸಿದಾಗ, ಬಹಳ ಚೆನ್ನಾಗಿ ಆಗುತ್ತೆ ಎಂತ ಹೇಳಿದರು. ನೀವು ಹುಡುಗೀನ ನೋಡಿ. . . .

ಬಂದವರು—ಈಗ ಮದುವೆಯಾಗುವ ಹುಡುಗೀನ ತಾನೇ? ಅದಕ್ಕೇನು ಅಗತ್ಯವಾಗಿ ನೋಡುತ್ತೇನೆ. ಒಂದು ಪಾಲಿಸಿ. . .

ಸುಂದರ—ಏನು? ಯಾತಕ್ಕೆ? ನಮ್ಮೊಳಗೆ ಪಾಲಿಸಿ ಗೀಲಿಸಿ ಒಂದೂ ಬೇಡ ಸಾರ್! ಹುಡುಗಿ ನೋಡೋದಕ್ಕೆ ಕೆಂಪಗೆ ಚೆನ್ನಾಗಿದ್ದಾಳೆ. ನಿಮ್ಮ ಮನಸ್ಸಿನಲ್ಲಿರೋದನ್ನ ಹೇಳಿಬಿಡಿ. ಪಾಲಿಸಿಗೋಸ್ಕರ 'ಊರಿಗೆ ಹೋಗಿ ಕಾಗದ ಬರೀತೀನಿ' 'ಹೆಂಗಸರನ್ನು ಕೇಳಿ ಯಾವುದನ್ನೂ ತಿಳಿಸುತೀನಿ' ಅಂತ ಅದೆಲ್ಲಾ ಬೇಡ. ಯಾವುದೂ ಎದುರೆದುರಿಗೆ ಖಂಡಿತ ಖಂಡಿತವಾಗಿರಬೇಕು.

ಬಂದವರು—ನನಗೂ ಅದೇ ಇಷ್ಟ.

ಸುಂದರ—ಬಹಳ ಸಂತೋಷ. ದೇವರೇ ನಮ್ಮಿಬ್ಬರನ್ನೂ ಸರಿಯಾಗಿ ಸೇರಿಸಿದ್ದಾನೆ.

ಬಂದವರು—ಅದರಲ್ಲೇನು ಸಂದೇಹ! ಆ ಭಗವಂತ ನಮ್ಮೆಲ್ಲರ ಕಾರ್ಯವನ್ನೂ ನೆರವೇರಿಸುತ್ತಾನೆ. ಅಂ . . . ನೀವು ದೊಡ್ಡ ಸಂಸಾರವಂದಿಗರು. ಅದೂ ಅಲ್ಲದೆ ನಿಮ್ಮ ಮಗಳ ಮದುವೆಗಾಗಿ ಬಹಳ ಹಣ ಖರ್ಚು ಆಗಬೇಕಾಗುತ್ತೆ. ಆದ್ದರಿಂದ ನಾನು ನಿಮಗೆ ಹೇಳೋದು ಏನೆಂದರೆ, ನೀವು ನಿಮ್ಮ ಮಕ್ಕಳ ಹೆಸರಿನಲ್ಲಿ ಪಾಲಿಸಿಗಳನ್ನು ತಗೋಬೇಕು. ನೀವು ನಿಮ್ಮ ಹಿರಿಯ ಹುಡುಗಿ ಹೆಸರಿನಲ್ಲಿ ಎರಡು ವರ್ಷಕ್ಕೆ ಮುಂಚೆ ತಗೊಂಡಿದ್ದರೆ. . . .

ಸುಂದರ (ಆಶ್ಚರ್ಯದಿಂದ)—ಏನು, ಏನು? ಮಕ್ಕಳ ಪಾಲಿಸೀನಾ? ಯಾಕೆ? ನಿಮಗೂ ಆ ಹಾಳಾದ ಇನ್ಷೂರೆನ್ಸ್ ಕಂಪೆನಿಗೂ ಏನೂ ಸಂಬಂಧ ಇಲ್ಲತಾನೇ?

ಬಂದವರು—ತಾವು ನನ್ನನ್ನು ಯಾರು ಅಂದುಕೊಂಡಿರಿ? ನಾನೇ ಆ ಪ್ಲಿನ್ಟಿ ಸ್ಟಾನ್ ಇನ್ಷೂರೆನ್ಸ್ ಕಂಪೆನಿಯ ಆರ್ಗನೈಸರು. (ಇನ್ಷೂರೆನ್ಸ್ ಕಂಪೆನಿಯ ಸಣ್ಣ ಪುಸ್ತಕಗಳನ್ನೂ ಪ್ರಕಟನೆಗಳನ್ನೂ ಕೈಪೆಟ್ಟಿಗೆಯಿಂದ ತೆಗೆದು ಸುಂದರರಾಯರ ಕೈಗೆ ಕೊಡುತ್ತ) ನಮ್ಮ ಪ್ರೀಮಿಯಂ ಬಹಳ ಕಮ್ಮಿ. ಬೋನಸ್ ಬಹಳ ಜಾಸ್ತಿ. ನಮ್ಮ ಗೋಪಾಲಯ್ಯರೇ ನಿಮ್ಮ ಅಡ್ರೆಸ್ಸನ್ನ ಕೊಟ್ಟಿದ್ದು. ಅದಕ್ಕೇ ತಮ್ಮನ್ನ ನೋಡಿಬಿಟ್ಟು ಹೋಗೋಣ ಅಂತ ಬಂದೆ. ನಾನು ಮೊದಲು ಹೇಳುತ್ತಿದ್ದ ಹಾಗೆ, ಈಗ ಮದುವೆ ಆಗೋ ಹುಡುಗಿಯ ಹೆಸರಿನಲ್ಲಿ ಎರಡು ವರ್ಷಕ್ಕೆ ಮುಂಚೆ ಒಂದು ಪಾಲಿಸೀನ ತಗೊಂಡಿದ್ದಿದ್ದರೆ ಈಗ ಖರ್ಚಿಗೆ ಕೈತುಂಬ ಹಣ ಒದಗುತ್ತಿತ್ತು.

ಸುಂದರ (ಬೇಸ್ತುಬಿದ್ದು, ಸ್ವಗತ)—ನಾನೆಂಥ ಪೆದ್ದ ! ಇದೇನು ಇವೊತ್ತು ಎಲ್ಲಾ ಹೀಗೇ ಆಗ್ತಾ ಇದೆ ಬೆಳಗಿನಿಂದ? (ಬಂದವರನ್ನು ಕೋಪದಿಂದ ನೋಡುತ್ತ, ಪ್ರಕಾಶವಾಗಿ) ಸರಿ! ನಮಸ್ಕಾರ, ನನಗೆ ಕೆಲಸವಿದೆ. ನೀವು ಹೊರಡಬಹುದು!

ಬಂದವರು—ನೀವು ಯಾರೋ ಬೇರೆಯವರನ್ನು ಎದುರುನೋಡುತ್ತ ಇರುವ ಹಾಗಿದೆ. ಹಾಗಾದರೆ ಇನ್ನೊಂದು ದಿನ ಬಂದು ನೋಡಲೆ ತಮ್ಮನ್ನ ?

ಸುಂದರ—ಆ ಕಷ್ಟ ಏನೂ ತಗೋಬೇಡಿ. ಈಗ ಹೊರಡಿ. ನಮಸ್ಕಾರ! (ಬಂದವರು ಹೋಗುತ್ತಾರೆ) ಹಾಳಾಗಿ ಹೋಗಲಿ, ಅವನೂ ಅವನ ಇನ್‌ಷೂರೆನ್ಸೂ! ಇವನನ್ನೇ ನಾನು ಇಷ್ಟು ಹೊತ್ತೂ ಉಪಚಾರಮಾಡಿದ್ದು ? ಹಯ್ಯೋ, ನಾನೊಬ್ಬ ಹೇಳಿ ಮಾಡಿಸಿದ ಮಡಿಯ! (ಹಣೆಯನ್ನು ಬಡಿದುಕೊಂಡು) ಅವನನ್ನು ಬೈದು ಏನು ಪ್ರಯೋಜನ? ಎಲ್ಲಾ ನನ್ನ ದುರದೃಷ್ಟ! ಇವೊತ್ತು ಎದ್ದ ಹೊತ್ತು ಒಳ್ಳೆಯದಲ್ಲ ಅಂತ ಕಾಣುತ್ತೆ. ಎಲ್ಲಾ ಎಡವಟ್ಟಾಗುತ್ತಿದೆ!

ಜಾನಕಿ (ಪ್ರವೇಶಿಸಿ, ಉತ್ಸಾಹದಿಂದ)—ಎಲ್ಲೀಂದ್ರೆ ಬೀಗರು? ಕಾರು ಎಲ್ಲಿ ಹೋಯಿತು? ಏನು ಹೇಳಿದರು? ಒಪ್ಪಿಕೊಂಡರೆ? ಹುಡುಗೀನೇ ನೋಡಲಿಲ್ಲವಲ್ಲ!

ಸುಂದರ—ಹೋಗೇ! ಉರಿಯೋ ಬೆಂಕೀಗೆ ಎಣ್ಣೆ ಹಾಕಿದ ಹಾಗೆ, ನೀನೇನು ಕೇಳ್ತೀಯೆ!

ಜಾನಕಿ—ಏನು? ಏನಾಯಿತು? ಎಲ್ಲಿ ಅವರು? ಏನು ಹೇಳಿದರು? (ಹಿಂತಿರುಗಿ ನೋಡಿ) ಅದ್ಯಾರೋ ಬಂದಿದ್ದಾರೆ (ಎಂದು ಒಳಕ್ಕೆ ಹೋಗುವಳು.)

ಯಾಚಕ ಬ್ರಾಹ್ಮಣ (ಒಂದು ತಟ್ಟೆಯಲ್ಲಿ ತಾಳಿ, ಅರಿಸಿನ ಕುಂಕುಮ, ಕೆಲವು ಕಾಸುಗಳು ಇವುಗಳನ್ನು ಇಟ್ಟುಕೊಂಡು ಪ್ರವೇಶಿಸಿ)—ಯಾರೂ ಇಲ್ಲ ನಾನು. ಹಿ . . . ಹಿ . . . ಹಿ . . . ನಮ್ಮ ಹುಡುಗೀಗೆ ತಿರುಪತೀಲಿ ಮದುವೆ ಮಾಡ್ತೀನಿ ಅಂತ ಹರಸಿಕೊಂಡಿದ್ದೆ. ಅದಕ್ಕೋಸ್ಕರ ತಮ್ಮಂಥ ದೊಡ್ಡಮನುಷ್ಯರನ್ನು ನೋಡಿ ಹಾಗೇ . . .

ಸುಂದರ (ರೋಷದಿಂದ)—ನಡೀರಿ ಆಚೆಗೆ! ಹೋಗಿ ಹೊರಕ್ಕೆ! ನಮ್ಮ ಹುಡುಗೀಗೆ ಮದುವೆಯಾಗೋದರೊಳಗೇ ಕಟ್ಟಿದ ತಾಳಿ ಕಿತ್ತುಹೋಗುತಾ ಇದೆ. ನಿಮ್ಮ ಹುಡುಗೀಗೆ ಮದುವೆ ಆದರೇನು ಆಗದೆ ಇದ್ದರೇನು? ನನ್ನ ತಾಪತ್ರಯವೇ ಎಷ್ಟೋ ಇದೆ ನನಗೆ.

ಯಾಚಕ—ತಮ್ಮಂಥ ಪ್ರಭುಗಳೇ ಹೀಗೆ ಹೇಳಿಬಿಟ್ಟರೆ, ನಮ್ಮಂಥ ಬಡವರು ಏನು ಮಾಡುವುದು? ಮಾಂಗಲ್ಯದಾನ ಮಾಡಿದರೆ ಎಷ್ಟೋ ಪುಣ್ಯಾ ಅಂತ ತಮಗೇ ಗೊತ್ತು. ಅದನ್ನು ಕುರಿತು ನಾನು ತಮಗೆ ಹೇಳಬೇಕಾದ್ದೇ ಇಲ್ಲ.

ಸುಂದರ—ನಡೀರಿ ಆಚೆಗೆ ಎಂದರೆ ನಡೀಬೇಕು. ಇನ್ನೂ ನಿಂತುಕೊಂಡಿದ್ದೀರಾ? ಜವಾನನ್ನ ಕೂಗಿ ಕತ್ತುಹಿಡಿದು ತಳ್ಳಿಸಬೇಕೇನು? ಸುಳ್ಳು ಹೇಳಿಕೊಂಡು ಯಾಚಕಕ್ಕೆ ಬರೋದು, ನಮ್ಮನ್ನು ಪೀಡಿಸೋದು. ಮದುವೆಯಂತೆ, ಮುಂಜಿ! ಎಲ್ಲಾದರೂ ಚಾಕರಿ ಮಾಡಿಹೋಗಿ!

ಯಾಚಕ (ಹೋಗುತ್ತಾ)—ಇವರೆಲ್ಲಾ ಊರಿನ ದೊಡ್ಡ ಮನುಷ್ಯರಂತೆ! ಯಾಚಕ ಕೊಡೋಕೆ ಬಂದಾಣೆ ಗತಿಯಿಲ್ಲ. ಎಂಥಾ ದೊಡ್ಡ ಮನುಷ್ಯರೋ ಇವರೆಲ್ಲಾ! ಬರ್‍ತಾ ಬರ್‍ತಾ ಎಲ್ಲಾ ಬರೀ ವೇಷ ಈ ಕಾಲದಲ್ಲಿ!

ಸುಂದರ—ಏಯ್, ಏನು ಹೇಳಿದೆ? ಭಿಕ್ಷಕ್ಕೆ ಬಂದು ಎಷ್ಟೋ ಜೋರು ನಿನಗೆ? ನನ್ನ ಸಮಾಚಾರ ಗೊತ್ತಿಲ್ಲ ಅಂತ ಕಾಣುತ್ತೆ ಇನ್ನೂ? ಯಾರು ಅಂತ ತಿಳಿದು ಕೊಂಡೆ? ಹಲ್ಲು ಮುರಿದುಬಿಟ್ಟೇನು, ಹುಷಾರ್! (ಆಗ ಬೀಗನಾಗಬೇಕಾಗಿದ್ದ ಬ್ರಾಹ್ಮಣನು ಕಂಕುಳಲ್ಲಿ ಒಂದು ಮೂಟೆಯನ್ನೂ, ಎಡಗೈಯಲ್ಲಿ ಒಂದು ಬೀಸಣಿಗೆಯನ್ನೂ, ಬಲಗೈಯಲ್ಲಿ ಒಂದು ಮಡಿಚೀಲವನ್ನೂ ತೆಗೆದುಕೊಂಡು ಪ್ರವೇಶಿಸುತ್ತಾನೆ. ಆತನನ್ನೂ ಒಬ್ಬ ಯಾಚಕನೆಂದೆಣಿಸಿ ರೇಗಿ) ಏನ್ರೀ ನೀವೂ ಒಬ್ಬರು ಬಂದಿರೋ? ಇವೊತ್ತು ಏನೂ ಕೊಡಲಾರೆ; ಹೋಗಿ ಬಿಟ್ಟು ಬನ್ನಿ!

ಬೀಗ—ಇದು ತಾನೇ ಸುಂದರರಾಯರ ಮನೆ?

ಸುಂದರ—ಹೌದು, ಹೌದು. ಏನು, ಬರುತ್ತಾ ಬರುತ್ತಾ ಈ ಕಾಲದಲ್ಲಿ ಊರು ಹೆಸರು ಎಲ್ಲಾ ಕೇಳಿಕೊಂಡು ಭಿಕ್ಷಕ್ಕೆ ಬರೋದೇನು ಪದ್ಧತಿ?

ಬೀಗ (ಸ್ವಲ್ಪ ದೊಡ್ಡಗಂಟಲಲ್ಲಿ)—ಕಾಗದ ಕೂಡ ಹಾಕಿದ್ದೆ ಇವೊತ್ತು ಬರ್‍ತೀನಿಂತ. ಮೊದಲನೇ ರೈಲು ತಪ್ಪಿಹೋಯಿತು.

ಸುಂದರ—ಇದೇನು ತಮಾಷೆ ಇದು? ಬೇಡೋದು ಭಿಕ್ಷೆ; ಅದಕ್ಕೆ ಕಾಗದ ಹಾಕಿದ್ದರಂತೆ! ನಾನು ನಿಮ್ಮನ್ನು ಕರಕೊಂಡು ಬರೋದಕ್ಕೆ ಆಳು ಕಳುಹಿಸಬೇಕಾಗಿತ್ತೇನು ಸ್ಟೇಷನ್ನಿಗೆ? ಪರವಾಯಿಲ್ಲ! ಯಾವೂರು ನಿಮ್ಮದು?

ಬೀಗ—ಮದರಾಸು.

ಸುಂದರ—ಓಹೋ, ಮದರಾಸಿನಲ್ಲಿ ಇದೇನೋ ನಿಮಗೆ ಕೆಲಸ? ನಮ್ಮೂರಿನಲ್ಲಿ ಅದೆಲ್ಲಾ ನಡೆಯೋದಿಲ್ಲ. ಹೊರಡಿ ಮೊದಲು! ಜಾಸ್ತಿ ಮಾತನಾಡಿದರೋ ನಾಯಿ ಬಿಚ್ಚಿ ಬಿಡ್ತೀನಿ!

ಬೀಗ—ಸ್ವಾಮಿ ಯಾರನ್ನಾ . . .

ಸುಂದರ—ಏನು, ನನ್ನ ಹತ್ತಿರವೇ ಜೋರುಮಾಡ್ತೀಯಾ, ಯಾಚಕಕ್ಕೆ ಬಂದು?

ಬೀಗ—ಸ್ವಾಮಿ, ಯಾರು ಯಾಚಕಕ್ಕೆ . . . ನೀವು . . .

ಸುಂದರ—ನನ್ನನ್ನೇ ಬೈಯೋಕೆ ಪ್ರಾರಂಭಿಸಿಬಿಟ್ಟೆಯಾ? ಬೆಗರ್! ಯಾರಲ್ಲಿ? ಕತ್ತುಹಿಡಿದು ತಳ್ಳೋ ಇವನ್ನ ಹೊರಕ್ಕೆ!

ಬೀಗ—ಓಹೋ! ಭೇಷ್, ಒಳ್ಳೇ ಮರ್ಯಾದೆ ನಿಮ್ಮ ಮನೇಲಿ! ಕಾಗದ ಹಾಕಿ, ನಿಮ್ಮಮನೆ ಹುಡುಕಿಕೊಂಡು ಬಂದ ನನ್ನ ಬುದ್ಧೀನ ಚಪ್ಪಲೀಲಿ ಹೊಡೆಯಬೇಕು! ಸದ್ಯಕ್ಕೆ ನನ್ನ ಮಗನಿಗೆ, ಈ ಮನೇಲಿ ಮದುವೆಮಾಡದೆ ಹೋದೆನಲ್ಲ: ಮದುವೆಗೆ ಮುಂಚೇನೇ ಹೀಗಿರುವಾಗ ಮದುವೆ ಆದಮೇಲೆ . . .

ಸುಂದರ (ಕಕ್ಕಾಬಿಕ್ಕಿಯಾಗಿ, ಬಹಳ ಮರ್ಯಾದೆಯಿಂದ)—ಯಾರು ನೀವು? ನೀವು ಯಾರು?

ಬೀಗ—ಯಾರೋ! ನಾನು ಬೆಗರ್ ಅಲ್ಲ ಸ್ವಾಮಿ! ನಾನುತಾನೇ ಮದರಾಸು ಸುಬ್ರಹ್ಮಣ್ಯಶಾಸ್ತ್ರಿ. ನನ್ನ ಮಗನಿಗೆ ನಿಮ್ಮ ಹೆಣ್ಣನ್ನು ನೋಡೋಕೆ ಬಂದೆ. ಸದ್ಯಕ್ಕೆ ನಿಮ್ಮ ಗುಣ ಮೊದಲೇ ತಿಳೀತು. ದೇವರು ಕಾಪಾಡಿದ. ಸರಿ, ನಾನು ಹೀಗೇ ಹೊರಡುತೀನಿ.

ಸುಂದರ (ಅತಿದುಃಖದಿಂದಲೂ ದೈನ್ಯದಿಂದಲೂ)—ಸ್ವಾಮಿಾ, ಕ್ಷಮಿಸಬೇಕು, ಕ್ಷಮಿಸಬೇಕು. ತಪ್ಪಾಯ್ತು, ತಪ್ಪಾಯ್ತು, ತಿಳೀಲಿಲ್ಲ.

ಬೀಗ—ಹೋಗಿರಯ್ಯ ಹೋಗಿ! ನೀವೋ ನಿಮ್ಮ ನಡತೆಯೋ! (ಹೋಗುತ್ತಾನೆ).

ಸುಂದರ—ಸ್ವಾಮಿಾ, ಸ್ವಾಮಿಾ, ಶಾಸ್ತ್ರಿಗಳೇ! (ಸ್ವಲ್ಪದೂರ ಹೋಗಿ ಹಿಂತಿರುಗಿ ಬಂದು, ತಲೆಯ ಮೇಲೆ ಕೈಹೊತ್ತುಕೊಂಡು) ಅಯ್ಯೋ ನಾನು ಹಾಳಾಗಿಹೋಗಬಾರದೆ? ನಾನೊಬ್ಬ ಶುದ್ಧ ಮುಟ್ಠಾಳ! ಹೀಗೂ ಬುದ್ಧಿಬಂತೆ ನನಗೆ? (ತಲೆ ಚಚ್ಚಿಕೊಳ್ಳುವನು.)

ಮನೆಯ ಜವಾನ (ಪ್ರವೇಶಿಸಿ)—ಬುದ್ಧೀ, ಈ ರೈಲಿನಾಗೂ ಯಾರೂ ಬರ್ನಿಲ್ಲ.

ಸುಂದರ—ನಡಿಯೋ ಆಚೆ! (ಜವಾನನು ಹೋಗುವನು.)

ಆಫೀಸಿನ ಜವಾನ (ಪ್ರವೇಶಿಸಿ)—ಬುದ್ಧೀ ಇವೊತ್ತು ರಜಾ ಕೊಡಾಕೆ ಆಗೋಕಿಲ್ಲ ಅಂತ ಯೇಳಿದ್ರು ಯಜಮಾನರು. ಇಬ್ಬರು ಮೂವರು ರಜಾ ತಗೊಂಡವರಂತೆ. ಬಿರ್ರನೆ ಬರ್ರ್ಯೋಳಿದ್ರು ಬುದ್ಧೀ.

ಸುಂದರ—ಆಂ . . . ಏನು, ಏನು? (ಕಣ್ಣು ಕಣ್ಣು ಬಿಡುತ್ತ ಸೋಫಾದಲ್ಲಿ ಕುಳಿತುಬಿಡುವನು.)

ತೆರೆ

ಕೇಳಿದೆನು ಒಂದುದಿನ

[COLERIDGE: 'I asked my fair one happy day.']

೧

ಕೇಳಿದೆನು ಒಂದು ದಿನ ನಾನೆನ್ನ ಚೆಲುವೆಯನು—
  "ಪ್ರಿಯೆ ನಿನಗೆ ಹೆಸರಾವುದಿಷ್ಟ"ವೆಂದು.
"ಸಿರಿಯೊ ಸರಸತಿಯೊ ರತಿಯೊ ಪಾರ್ವತಿಯೋ—
  ನಿನ್ನ ನಾನೇನೆಂದು ಕರೆಯಲೆಂ"ದು.

೨

ಮಂದಹಾಸವ ಬೀರಿ ಮೆಲ್ಲನೆಂದಳು ಚೆಲುವೆ—
  "ಹೆಸರೊಳೇನಿಹುದು? ಯಾವುದೋ ಒಂದು!
ಏನಾದರೂ ಕರೆ, ಚೆನ್ನ. ಸಾಕು ಮರೆಯುದಿರೆ;
  ಕರೆಯೆ ನೀನೆನ್ನ ನಿನ್ನವಳು ಎಂದು."—

ಎಂ. ರಾಮರಾವ್

ಅಕ್ಬರ್ ಮತ್ತು ಇಸ್ಲಾಂ

ಮೊಗಲ್ ಚಕ್ರಾಧಿಪತ್ಯಕ್ಕೆ ನಿಜವಾದ ತಳಹದಿಯನ್ನು ಹಾಕಿದವನೂ, ಸುಮಾರು ೪೫ ವರ್ಷಗಳ ಕಾಲ ಬೀಹಾರ ಮತ್ತು ಬಂಗಾಲದ ಪಠಾಣರೊಂದಿಗೂ, ಮೇವಾರ ಮಾಳವಗಳ ರಾಜಪುತ್ರರೊಂದಿಗೂ, ದಖ್ಖನ ರಾಜ್ಯಗಳಾದ ಅಹಮದ್‌ನಗರ ಖಾನ್‌ದೇಶಗಳೊಂದಿಗೂ, ರಣರಂಗದಲ್ಲಿ ಹೋರಾಡಿ ಮೊಗಲ್ ಸಾಮ್ರಾಜ್ಯವನ್ನು ವಿಸ್ತರಿಸಿದವನೂ ಆದ ಅಕ್ಬರನನ್ನು ಚರಿತ್ರೆಯನ್ನು ಅರಿಯದವರಿಲ್ಲ. ಕೇವಲ ೧೩ ವರ್ಷದ ಹುಡುಗನಾಗಿದ್ದಾಗಲೇ ರಾಜ್ಯದ ಹೊರೆಯು ಇವನ ಮೇಲೆ ಬಿತ್ತು. ಮೊಗಲರಿಗೆ ಸೋತು ರಾಜ್ಯವನ್ನು ಕಳೆದುಕೊಂಡಿದ್ದ ಪಠಾಣರು ಈ ದೇಶದಿಂದಲೇ ಅವರನ್ನು ಅಟ್ಟಿಬಿಡಬೇಕೆಂದು ಹೆಚ್ಚು ಸೈನ್ಯಗಳನ್ನು ಶೇಖರಿಸುತ್ತಿದ್ದರು. ಆದರೆ ಅಕ್ಬರನ ರಾಜಕೀಯ ಪಟುತ್ವ, ಸೈನಿಕವೃತ್ತಿಯ ಮಿಗಿಲಾದ ಪರಿಶ್ರಮ, ಚಾತುರ್ಯ, ರಾಯಭಾರದ ನಿಪುಣತ್ವ, ವಿಶಾಲವಾದ ಮನಸ್ಸು, ದೂರದೃಷ್ಟಿ—ಇವುಗಳು ಅವನ ಶತ್ರುಗಳನ್ನು ಪರಾಜಿತರನ್ನಾಗಿ ಮಾಡಿ ರಾಜಕೀಯ ಯಶಸ್ಸನ್ನು ಹೆಚ್ಚಿಸಿದುವು. ಮೊಗಲರ ರಾಜ್ಯಭಾರಕ್ರಮವನ್ನು ಒಂದು ರೂಪಕ್ಕೆ ತಂದು, ಹಿಂದುಗಳೂ ಮಹಮ್ಮದೀಯರೂ ಒಂದೇ ಜನಾಂಗಕ್ಕೆ ಸೇರಿದವರೆಂಬ ಅಂಶವನ್ನು ಸಾರಿದವನು ಅಕ್ಬರ್ ಮಹಾಶಯ. ಹಿಂದುಗಳ ಮತ್ತು ಮಹಮ್ಮದೀಯರ ಏಕೀಕರಣಕ್ಕಾಗಿ ದುಡಿದ ಚರಿತ್ರೆಯ ಮಹಾವ್ಯಕ್ತಿಗಳ ಪೈಕಿ ಅಕ್ಬರನೊಬ್ಬನು. ಪ್ರತಿಭಾಶಾಲಿಯೂ, ಪರಾಕ್ರಮಿಯೂ, ರಾಜಕಾರಣಪಟುವೂ, ಪಠಾಣರ ತಿಲಕಸ್ವರೂಪನೂ, ಮೊಗಲರ ಮಾರ್ಗದರ್ಶಕನೂ ಆದ ಷೇರ್‌ಷಹನೇ ಅಕ್ಬರನಿಗೆ ಈ ವಿಷಯದಲ್ಲಿಯೂ ಮೇಲ್ಪಂಕ್ತಿಯನ್ನು ಹಾಕಿಕೊಟ್ಟವನು.

ಕ್ರಿ.ಶ. ೧೯ನೆಯ ಶತಮಾನದಲ್ಲಿ ಪಾಶ್ಚಾತ್ಯ ವಿದ್ವಾಂಸರು ಮೊಗಲರ ಚರಿತ್ರೆಯಲ್ಲಿ ಶೋಧನೆಗಳನ್ನು ನಡಸಲು ಪ್ರಾರಂಭಿಸಿದರು. ಒಟ್ಟಿನಲ್ಲಿ ಭರತ ಖಂಡದ ಚರಿತ್ರೆಯು ಈ ಸಂಶೋಧಕರಿಂದಲೇ ಬಹಳ ಮುಂದುವರಿಯಿತು. ಈ ವಿಷಯದಲ್ಲಿ ಭಾರತೀಯ ವಿದ್ವಾಂಸರು ಪಾಶ್ಚಾತ್ಯ ವಿದ್ವಾಂಸರಿಗೆ ಋಣಿಗಳು. ಆದರೆ ಪಾಶ್ಚಾತ್ಯ ವಿದ್ವಾಂಸರು ಮೊಗಲ ಇತಿಹಾಸದ ಶೋಧನೆಯಲ್ಲಿ ಕೆಲವು ತಪ್ಪುಗಳನ್ನು ಮಾಡಿದ್ದಾರೆ. ಅವರು ಮೊಗಲ ಇತಿಹಾಸಕ್ಕೆ ಸಂಬಂಧಪಟ್ಟ ಪರ್ಷಿಯನ್ ಗ್ರಂಥಗಳನ್ನು ಕೂಲಂಕಷವಾಗಿ ವಿಮರ್ಶಿಸಿ ಅವುಗಳಲ್ಲಿ ಅಡಕವಾದ ಚರಿತ್ರೆಯ ವಿಷಯ

ಗಳನ್ನು ಬಯಲಿಗೆ ತರುವಾಗ ತಮ್ಮ ದೇಶದ ರಾಜಕೀಯ ಆರ್ಥಿಕ ಸಾಮಾಜಿಕ ಮತೀಯ ಚಿತ್ರಗಳನ್ನು ಇವುಗಳಲ್ಲಿಯೂ ಹುಡುಕಿದ್ದಾರೆ. ಇದನ್ನು ನಾವು ಕೆನಡಿ, ಡಾ|| ಸ್ಮಿತ್, ಇರ್‌ವಿನ್, ಬ್ಲಾಕ್‌ಮನ್, ಮೊದಲಾದವರ ಬರವಣಿಗೆಯಲ್ಲಿ ಕಾಣಬಹುದು. ನಮ್ಮಲ್ಲಿ ಜೀವನದ ಹೆಚ್ಚು ಕಾಲವನ್ನು ಮೊಗಲ ಚರಿತ್ರೆಯ ಸಂಶೋಧನೆಗಾಗಿ ಮುಡುಪಾಗಿಟ್ಟವರು ಸರ್ ಜದುನಾಥ್ ಸರ್ಕಾರ್ ಅವರು. ಮೊಗಲರ ಚರಿತ್ರೆಯಲ್ಲಿ ಪಾಶ್ಚಾತ್ಯ ಚರಿತ್ರೆಕಾರರಿಗೆ ಆಸಕ್ತಿಬರಲು ಒಂದು ಕಾರಣವುಂಟು. ಬ್ರಿಟಿಷರು ಇಲ್ಲಿ ರಾಜ್ಯ ಕಟ್ಟಿದಾಗ ಅವರು ಮೊಗಲರ ರಾಜ್ಯಭಾರಕ್ರಮವನ್ನೇ ಅನುಸರಿಸಿದರು. ಅಕ್ಬರನೇ ಮೊಗಲರ ರಾಜ್ಯಭಾರಕ್ರಮದ ಮೂಲಸ್ತಂಭನಾದುದರಿಂದ ಆಂಗ್ಲೇಯ ವಿದ್ವಾಂಸರು ಅಕ್ಬರನ ರಾಜತಂತ್ರ, ಸೈನ್ಯ ಮತ್ತು ಅವನ ರಾಜ್ಯದ ಬೆಳವಣಿಗೆ, ರಾಜಕೀಯ ಮತ್ತು ಮತೀಯ ಸುಧಾರಣೆಗಳು—ಇವುಗಳನ್ನು ಕುರಿತು ಬರೆಯಲುಪಕ್ರಮಿಸಿದರು.

ಅಕ್ಬರನ ಮತೀಯ ಸುಧಾರಣೆಗಳು ವಿದ್ವಾಂಸರಲ್ಲಿ ಒಂದು ದೊಡ್ಡ ಚರ್ಚೆಗೆ ಕಾರಣವಾಗಿವೆ. ಕೆಲವು ಚರಿತ್ರೆಕಾರರು ಈ ಸುಧಾರಣೆಗಳು ಅಂತರಂಗದಲ್ಲಿ ರಾಜಕೀಯ ಬದಲಾವಣೆಗಳಿಗೆ ಅನುಕೂಲವಾಯಿತೆಂದು ವಾದಿಸುತ್ತಾರೆ. ಫ್ರಾನ್ಸಿನ ನಾಲ್ಕನೆಯ ಹೆನ್ರಿ, ಇಂಗ್ಲೆಂಡಿನ ರಾಣಿ ಎಲಿಜಬೆತ್ ಇವರುಗಳಂತೆಯೇ ಅಕ್ಬರನು ಮತದ ಸುಧಾರಣೆಗಳನ್ನು ರಾಜಕೀಯ ಕಾರಣಗಳಿಗಾಗಿ ಮಾಡಿದನೆಂದು ಇವರುಗಳ ಅಭಿಪ್ರಾಯ. ಇನ್ನೊಂದು ಗುಂಪಿನವರು ಅಕ್ಬರನ ಹೆಮ್ಮೆಯೂ ಹೊಗಳಿಕೆಯ ಆಸೆಯೂ ಇದಕ್ಕೆ ಕಾರಣವೆನ್ನುವರು. ಅಕ್ಬರನಿಗೆ ದೇವರಲ್ಲಿ ಸ್ವಾಭಾವಿಕವಾಗಿ ಭಕ್ತಿಯಾಗಲಿ ಮತೀಯ ಧರ್ಮದಲ್ಲಿ ನಂಬಿಕೆಯಾಗಲಿ ಇರಲಿಲ್ಲವೆಂಬುದು ಇವರ ಅಭಿಪ್ರಾಯ.

ಮೇಲೆ ಹೇಳಿದ ಈ ಅಭಿಪ್ರಾಯಗಳಿಗೆ ಎರಡು ಆಧಾರಗಳಿವೆ. ಒಂದನೆಯದು ಅಬ್ದುಲ್ ಖಾದರ್ ಅಥವಾ ಬದೋನಿ ಎಂಬಾತನ ಪುಸ್ತಕ. ಇದು ಪರ್ಷಿಯನ್ ಭಾಷೆಯಲ್ಲಿದೆ. ಇದನ್ನು ಇಂಗ್ಲೀಷಿಗೆ ತರ್ಜುಮೆಮಾಡಿದ್ದಾರೆ. ಎರಡನೆಯದು ಜಸೂಟ್ ಮತ್ತು ಪೋರ್ಚುಗೀಸ್ ಪಾದ್ರಿಗಳ ಬರವಣಿಗೆ. ಅಬ್ದುಲ್ ಖಾದರ್ ಬದೋನಿ, ಅಬುಲ್ ಫಸಲ್ ಮತ್ತು ಫೈಸಿ—ಈ ಮೂವರೂ ಸಹಪಾಠಿಗಳು. ಇವರ ಗುರು ಷೇಕ್ ಮುಬಾರಕ್. ವಿದ್ಯಾಭ್ಯಾಸ ಮುಗಿದಮೇಲೆ ಇವರು ಮೂವರೂ ಅಕ್ಬರನ ಆಸ್ಥಾನಕ್ಕೆ ಸೇರಿದರು. ಫಸಲ್ ಮತ್ತು ಫೈಸಿ ಬಹಳ ಬೇಗ ದೊಡ್ಡದೊಡ್ಡ ಪದವಿಗೆ ಬಂದರು. ಬದೋನಿಯು ಮೇಲಕ್ಕೇರಲಿಲ್ಲ. ಇದ್ದ ಜಾಗದಲ್ಲಿಯೇ ಇದ್ದನು. ಇಷ್ಟೇ ಅಲ್ಲ, ಇವನ ಕೆಲಸವೇ ಹೋಯಿತು. ಇವನು ಅಕ್ಬರನ ಮೆಚ್ಚುಗೆಯನ್ನು

ಪಡೆದಿದ್ದ "ಖಿರದ್ ಅಫ್ ಜ" ಎಂಬ ಪುಸ್ತಕದ ಕೈ ಬರೆಹದ ಪ್ರತಿಯನ್ನು ನೀಗಿ ಅಕ್ಬರನಿಗೆ ಮುಖವನ್ನು ತೋರಿಸಲಾರದೆ ಕೆಲಸವನ್ನು ಕಳೆದುಕೊಂಡನು. ಆಗ ಫಸಲ್‌ನ ಅಣ್ಣ ಫೈಸಿ ಇವನ ಸಹಾಯಕ್ಕೆ ಬಾರದಿದ್ದರೆ ಅಕ್ಬರನ ಆಸ್ಥಾನಕ್ಕೆ ಪುನಃ ಪ್ರವೇಶಮಾಡಲು ಇವನಿಗೆ ಅವಕಾಶವೇ ಸಿಕ್ಕುತ್ತಿರಲಿಲ್ಲ. ಆದರೆ ಬದೋನಿಗೆ ಕೃತಜ್ಞತೆಗೆ ಬದಲಾಗಿ ಫಸಲ್ ಮತ್ತು ಫೈಸಿಯನ್ನು ಕಂಡರೆ ಅಸೂಯೆ ದ್ವೇಷಗಳು ಉಂಟಾದುವು. ಫೈಸಿಯು ಸತ್ತಾಗ ಬರೆದ ಒಂದು ಚರಮಶ್ಲೋಕದಲ್ಲಿ ಅವನನ್ನು "ನರಕದ ನಾಯಿ" ಎಂದು ಹೀಯಾಳಿಸಿದ್ದಾನೆ. ಇದೇ ಫೈಸಿಯು ಮಾಡಿದ ಉಪಕಾರಕ್ಕೆ ಬದೋನಿಯು ಮಾಡಿದ ಪ್ರತ್ಯುಪಕಾರ. ಅಕ್ಬರನು ಫೈಸಿಯನ್ನು ತನ್ನ ಆಸ್ಥಾನದ ಕವಿ ಸಾರ್ವಭೌಮನನ್ನಾಗಿ ಮಾಡಿದುದೂ ಬದೋನಿಗೆ ಸಹಿಸಲಿಲ್ಲ. ಅವನ ಮೇಲಿನ ದ್ವೇಷವನ್ನು ಅವನ ಕವನಗಳ ಮೇಲೂ ತೋರಿಸಿದ್ದಾನೆ. ಫೈಸಿ ಸುಮಾರು ೪೦ ವರ್ಷಗಳ ಕಾಲ ಕವನಗಳನ್ನು ರಚಿಸಿದನು ಮತ್ತು ೨ ಲಕ್ಷ ಪದ್ಯಗಳನ್ನು ಮಾಡಿದನು. ಬದೋನಿಯು ಅವನ ಪದ್ಯಗಳಲ್ಲಿ ಒಂದೂ ಚೆನ್ನಾಗಿಲ್ಲವೆಂದು ಹೇಳಿದ್ದಾನೆ. ಅಕ್ಬರನು ಇವನಿಗೆ ರಾಮಾಯಣ ಮತ್ತು ಮಹಾಭಾರತಗಳನ್ನು ಪಾರ್ಷೀಭಾಷೆಗೆ ಭಾಷಾಂತರಮಾಡಬೇಕೆಂದು ನೇಮಿಸಿದುದು ಬಹಳ ದುಃಖವನ್ನುಂಟುಮಾಡಿತೆಂದು ಬದೋನಿಯೇ ಬರೆದಿದ್ದಾನೆ. ಬದೋನಿಯು ಮುಲ್ಲಾ ಪಂಗಡಕ್ಕೆ ಸೇರಿದವನು. ಪರಮತಗಳಲ್ಲಿ ಇವನಿಗೆ ಸಹನೆ ಕಡಮೆ. ಅಕ್ಬರನು ಇಸ್ಲಾಂ ಮತವನ್ನು ತ್ಯಜಿಸಿದನೆಂದು ಚರಿತ್ರೆಕಾರರು ಸಿದ್ಧಾಂತಮಾಡಿರುವುದು ಈ ಬದೋನಿಯ ಬರವಣಿಗೆಯ ಆಧಾರದಮೇಲೆಯೇ. ಆತನ ಬರವಣಿಗೆಗೆ ಎಷ್ಟು ಬೆಲೆ ಕೊಡಬೇಕೆಂಬ ವಿಷಯುವನ್ನು ನಿರ್ಣಯಿಸುವಾಗ ಬದೋನಿಯ ವಿಷಯವಾಗಿ ಮೇಲೆ ಹೇಳಿದ ಕೆಲವು ಮಾತುಗಳನ್ನು ಜ್ಞಾಪಕದಲ್ಲಿಟ್ಟುಕೊಳ್ಳಬೇಕು. ಮತಸಂಬಂಧದ ವಿಚಾರವಾಗಿ ಅವನು ಬರೆಯುವಾಗ ಆತನು ಶುದ್ಧ ಸುನ್ನಿಯಾಗಿದ್ದನೆಂಬ ವಿಷಯವನ್ನು ಮರೆಯಬಾರದು. ಅಕ್ಬರನು ಇತರ ಮತಗಳಲ್ಲಿ ತೋರಿಸುತ್ತಿದ್ದ ಸಹನೆಯು ಬದೋನಿಗೆ ಸರಿಬೀಳಲಿಲ್ಲ. ಇವನು ಬರೆದ ಪುಸ್ತಕದಲ್ಲಿ ಅಕ್ಬರನ ಮೇಲೆ ಬಹಳ ದೂರುಗಳಿದ್ದುದರಿಂದ ಅಕ್ಬರನು ಜೀವಂತನಾಗಿದ್ದಾಗ ಇವನ ಪುಸ್ತಕವು ಬೆಳಕಿಗೆ ಬರಲಿಲ್ಲ. ಇವನ ಜೊತೆಗೆ ಕಾಜಿಗಳೂ, ಮುಲ್ಲಾಗಳೂ ಸೇರಿಕೊಂಡರು. ಮಧ್ಯಮ ಕಾಲದ ಭಾರತೀಯ ಚರಿತ್ರೆಯ ಮುಸಲ್ಮಾನ ಚಕ್ರವರ್ತಿಗಳ ಪೈಕಿ ಮಹಮದ್‌ಬಿನ್ ತೊಗಲಖ್ ಮತ್ತು ಅಕ್ಬರ್ ಇವರಿಬ್ಬರೇ ಕಾಜಿಗಳ ಮೇಲೆ ಎದುರುಬಿದ್ದವರು ಮತ್ತು ಅವರನ್ನು ಶಿಕ್ಷೆಗೆ ಗುರಿಮಾಡಿದವರು. ನ್ಯಾಯಶಾಖೆಯೂ, ನ್ಯಾಯದ ತೀರ್ಪೂ ಸಾಮಾನ್ಯವಾಗಿ ಕಾಜಿಗಳಿಗೆ ಸೇರಿತ್ತು. ಆದರೆ ಕೆಲವು ಚಕ್ರವರ್ತಿಗಳು

ಅಪಾರವಾದ ನ್ಯಾಯದ ಮಮತೆಯ ಸಲುವಾಗಿ ತಾವೇ ನ್ಯಾಯತೀರ್ಪನ್ನು ಮಾಡುತ್ತಿದ್ದರು. ಇದು ದಕ್ಷರೂ ಶಕ್ತರೂ ಆದ ಚಕ್ರವರ್ತಿಗಳಿಗೆ ಸಾಧ್ಯವಾಗಿತ್ತು. ಮಹಮದ್ ಬಿನ್ ತೊಗಲಖನ ಕಾಲದಲ್ಲಿ ಕಾಜಿಗಳ ಪ್ರಾಬಲ್ಯವು ಅತಿಯಾಗಿ ಕೊನೆಗೆ ಅವರೇ ಇವನಿಗೆ ಐಲುದೊರೆ ಎಂಬ ನಾಮಕರಣವನ್ನು ಮಾಡಿದರು. ಅಕ್ಬರನ ಮುಂದೆ ಇವರ ಸಾಹಸವು ಸಾಗಲಿಲ್ಲ.

ಇಂಡಿಯಾ ದೇಶಕ್ಕೆ ಮೊಗಲ ಚಕ್ರವರ್ತಿಗಳ ಕಾಲದಲ್ಲಿ ಬಂದ ಕ್ರೈಸ್ತ ಪಾದ್ರಿಗಳ ಬರವಣಿಗೆಯೂ ಇದೇ ಕ್ರಮವನ್ನು ಅನುಸರಿಸಿದೆ. ವಾಸ್ಕೋಡಗಾಮನು ಕ್ಯಾಲಿಕಟ್‌ನಲ್ಲಿ ಬಂದಿಳಿದಾಗ ಅವನಿಗೆ ಎಲ್ಲೆಲ್ಲಿಯೂ ಕ್ರೈಸ್ತರ ಚರ್ಚುಗಳೇ ಕಂಡು ಬಂದುವಂತೆ. ಇದರಿಂದ ಇಂಡಿಯಾದ ಜನರು ಕ್ರೈಸ್ತರೆಂದು ಅವನು ತೀರ್ಮಾನಿಸಿದನು. ಅವನಿಗೆ ಚರ್ಚುಗಳಂತೆ ಕಂಡುಬಂದ ಗೋಪುರಗಳು ದೇವಸ್ಥಾನಗಳೆಂದು ತಿಳಿಯಲಿಲ್ಲ. ಹೀಗೆಯೇ ಕ್ರೈಸ್ತಪಾದ್ರಿಗಳ ಬರವಣಿಗೆಗಳಲ್ಲಿ ಅವರು ಮೋಸಹೋಗಿರುವ ಅನೇಕ ಸಂದರ್ಭಗಳಿವೆ. ಇವರ ಬರವಣಿಗೆಗಳೇ ಸಿದ್ಧಾಂತಗಳೆಂದೂ ಅವೇ ಮೊಗಲ ಚರಿತ್ರೆಯ ಮೂಲಾಧಾರವೆಂದೂ ಸುಪ್ರಸಿದ್ಧ ಆಂಗ್ಲೇಯ ಚರಿತ್ರೆಕಾರರಾದ ಡಾ|| ವಿನ್ಸೆಂಟ್‌ಸ್ಮಿತ್‌ರ ಅಭಿಪ್ರಾಯ. ಈ ಪಾದ್ರಿಗಳು ಅಕ್ಬರನನ್ನು ಕ್ರೈಸ್ತ ಮತಕ್ಕೆ ಸೇರಿಸಿಕೊಳ್ಳಲು ಬಲು ಪ್ರಯತ್ನಿಸಿದರು. ಕೊನೆಗೆ ವಿಫಲರಾದಾಗ ಅಕ್ಬರನಲ್ಲಿ ಇವರಿಗೆ ಅಸಮಾಧಾನವಾಗಿ ಅದು ಅವರ ಬರವಣಿಗೆಯ ಮೇಲೆ ಮುದ್ರೆಯೂರಿತು.

ಅಕ್ಬರನ ಮತವನ್ನು ವಿಮರ್ಶಿಸುವಾಗ ಕ್ರಿ.ಶ. ೧೬ನೆಯ ಶತಮಾನದ ಪ್ರಾಮುಖ್ಯತೆಯನ್ನು ನೆನಪಿನಲ್ಲಿಡಬೇಕು. ಪ್ರಪಂಚದ ಇತಿಹಾಸದಲ್ಲೇ ೧೬ನೆಯ ಶತಮಾನವು ಸಂಸ್ಕೃತಿಯಲ್ಲಿ ಕ್ರಾಂತಿಯನ್ನೆಬ್ಬಿಸಿತು. ಯೂರೋಪಿನಲ್ಲಿ ನವಜೀವನ (Renaissance) ಉಂಟಾಯಿತು. ಇಸ್ಲಾಂ-ನಲ್ಲಿ ಮಹದಿ ಚಳವಳಿಯೂ, ಇಂಡಿಯಾದಲ್ಲಿ ಭಕ್ತಿಚಳುವಳಿಯೂ ಉತ್ಪನ್ನವಾದುವು. ಎಲ್ಲೆಲ್ಲಿಯೂ ಒಂದು ಹೊಸ ಹುರುಪು ಕಾಣಿಸಿತು. ಇಂಗ್ಲೆಂಡಿನಲ್ಲಿ ಟ್ಯೂಡರ್, ಫ್ರಾನ್ಸಿನಲ್ಲಿ ಬೋರ್ಬನ್, ಸ್ಪೇಯಿನ್ ಮತ್ತು ಆಸ್ಟ್ರಿಯದಲ್ಲಿ ಹಾಪ್ಸ್‌ಬರ್ಗ್, ಪ್ರಷ್ಯದಲ್ಲಿ ಹೊಹೆನ್‌ಜೊಲರ್ನ್, ಈಜಿಪ್ಟಿನಲ್ಲಿ ಮಾಮ್ಲುಕ್, ಪರ್ಷಿಯದಲ್ಲಿ ಸಫಾವಿ, ಚೈನಾದಲ್ಲಿ ಮಿಂಗ್, ಇಂಡಿಯಾದಲ್ಲಿ ಮೊಗಲ್ ಮುಂತಾದ ನಿರಂಕುಶ ಪ್ರಭುತ್ವಗಳು ಸ್ಥಾಪಿತವಾದುವು.

೧೬ನೆಯ ಶತಮಾನವು ಸಂಸ್ಕೃತಿಗಳ ಮಿಳನದ ಕಾಲ. ಆಗ ಜಾತಿ ಮತ್ತು ಮತಗಳಲ್ಲಿದ್ದ ಪರಸ್ಪರ ತಿರಸ್ಕಾರವು ಸಡಿಲವಾಗಿ ಒಂದು ಮತವು ಮತ್ತೊಂದು ಮತದ ಗುಣಗ್ರಹಣ ಮಾಡುವ ಪದ್ಧತಿಯು ಅಂಕುರವಾಯಿತು. ಹಿಂದೂಗಳೂ, ಮುಸಲ್ಮಾನರೂ ಒಂದಾಗಲು ಪ್ರಾರಂಭವಾಯಿತು. ಸಾಧುಸಂತರು ಇದೇ ತತ್ವ

ವನ್ನು ಬೋಧಿಸಿ ಹರಡಿದರು. ಜಾತಿ ಮುಖ್ಯವಲ್ಲ, ಭಕ್ತಿಯೇ ಮುಖ್ಯವೆಂಬ ತತ್ವದ ಮೂಲಕ ಇವರು ಹಿಂದೂ ಮುಸಲ್ಮಾನರ ಏಕೀಕರಣಕ್ಕೆ ಕಾರಣರಾದರು. ಚೈತನ್ಯನು ಬಂಗಾಳದಲ್ಲಿ ಹಿಂದೂಗಳನ್ನೂ ಮುಸಲ್ಮಾನರನ್ನೂ ತನ್ನ ಶಿಷ್ಯವರ್ಗಕ್ಕೆ ಸೇರಿಸಿಕೊಂಡನು. ಯವನ ಹರಿದಾಸನು ಚೈತನ್ಯನ ಪಟ್ಟಶಿಷ್ಯ. ರಮಾನಂದನ ಶಿಷ್ಯರಲ್ಲಿ ಕಬೀರನೇ ಅತ್ಯಂತ ಪ್ರಿಯನಾದವನು. ನಾನಕ್ ಮತ್ತು ದಾದು ಕಬೀರ ನಂತೆಯೇ ಹಿಂದೂಮುಸ್ಲಿಂ ಅಭಿವೃದ್ಧಿಗಾಗಿ ಬೋಧಿಸಿದರು. ಇವರುಗಳ ಬೋಧ ನೆಯ ಫಲವಾಗಿ ರಾಂರಹೀಂ ಕೇಶವ್‌ಕರೀಂ ಎಂಬುದು ಜನಗಳಲ್ಲಿ ಬೇರೂರಿತು.

ಬೈರಾಂಖಾನನ ಮಗನಾದ ಅಬ್ದುಲ್‌ರಹೀಂ ೧೬ನೆಯ ಶತಮಾನದ ಹಿಂದೂ ಮುಹಮ್ಮದೀಯ ಸಂಸ್ಕೃತಿಗಳ ಮಿಳನಕ್ಕೆ ಉತ್ತಮವಾದ ಉದಾಹರಣೆ. ಅವನು ಹಿಂದೀ ಸಂಸ್ಕೃತ ಪಾರಸೀಗಳಲ್ಲಿ ಉದ್ದಾಮಪಂಡಿತನಾಗಿದ್ದನು. ಇದೇ ಶತಮಾನದಲ್ಲಿ ಸೂಫಿಗಳು ಹಿಂದೂಮತದ ಗುರುಶಿಷ್ಯ ತತ್ವವನ್ನು ತಾವೂ ಸೇರಿಸಿ ಕೊಂಡರು. ಒಂದು ಕಡೆ ರಮಾನಂದ, ರವಿದಾಸ್, ಕಬೀರ್, ಚೈತನ್ಯ, ದಾದು, ಮೀರಾಬಾಯ್, ನಾಮದೇವ್ ; ಮತ್ತೊಂದು ಕಡೆ ಸಬರ್, ಅಬುಅಲಿಖಲಂದರ್, ಚಿಷ್ಟಿ, ಬಹ್ಲೂಲ್ ಅಕ್ಬರನ ಗುರುವಾದ ಲಥೀಫ್ ಮುಬಾರಕ್, ಫೈಜಿ, ಫಸಲ್ ; ಇವರಿಂದ ಸಂಸ್ಕೃತಿಯ ಮಿಳನಕ್ಕೆ ಬಹಳ ಉಪಕಾರವಾಯಿತು. ಬದೋನಿಯು ಅಬುಲ್‌ಫಸಲ್‌ನನ್ನು ಹಗಲು ಹೊತ್ತಿನಲ್ಲೇ ದೀಪವನ್ನು ಕೈಯಲ್ಲಿ ಹಿಡಿದುಕೊಂಡು ಏನುಮಾಡಬೇಕೆಂದು ತೋಚದೆ ಬೀದಿಗೆ ಬರುವ ಒಬ್ಬ ಮನುಷ್ಯನಿಗೆ ಹೋಲಿಸಿದ್ದಾನೆ. ನಿಜ, ಈ ವಿದ್ವಾಂಸರು ಬೆಳಕನ್ನು ಕತ್ತಲೆಯನ್ನಾಗಿಯೂ ಕತ್ತಲೆಯನ್ನು ಬೆಳಕ ನ್ನಾಗಿಯೂ ಮಾಡಿದರು. ಅಕ್ಬರನು ಈ ಸಂಸ್ಕೃತಿಯ ಮಿಳನದ ಯುಗಕ್ಕೆ ಸೇರಿ ದವನು. ಅವನು ಕಾಲಧರ್ಮಕ್ಕೆ ತಕ್ಕಂತೆ ನಡೆದನು. ಇದನ್ನು ಪಾಶ್ಚಾತ್ಯ ವಿದ್ವಾಂಸರು ಗಣನೆಗೆ ತಾರದೆ ಅಕ್ಬರನ ಮತೀಯ ವಿಚಾರಗಳಲ್ಲಿ ಅಪಾರ್ಥಗಳನ್ನು ಕಲ್ಪಿಸಿಕೊಂಡಿದ್ದಾರೆ.

ಅಕ್ಬರನ ದಿನೇ ಇಲಾಹಿಯು ಎಲ್ಲಾ ಮತಗಳ ಸಂಪರ್ಕದ ಸಾರ. ಅಕ್ಬರನು ಕಟ್ಟಿಸಿದ ಇಬದತ್ ಖಾನೆಯಲ್ಲಿ ಪ್ರತಿಯೊಂದು ಮತಕ್ಕೂ ಆಹ್ವಾನವಿದ್ದಿತು. ಈ ಇಬದತ್ ಖಾನೆಯನ್ನು ಪ್ರಪಂಚದ ಮೊದಲನೆಯ ಮತೀಯ ಪಾರ್ಲಿಮೆಂಟ್ ಎಂದು ಕರೆದರೆ ತಪ್ಪಾಗಲಾರದು. ಸುನ್ನಿ, ಷಿಯಾ, ಹಿಂದೂ, ಪಾರ್ಸೀ, ಜೈನ, ಸಿಕ್, ಬೌದ್ಧ ಮತ್ತು ಕ್ರೈಸ್ತ ಮತಗಳ ಪ್ರತಿನಿಧಿಗಳು ಅಕ್ಬರನ ಎದುರಿನಲ್ಲಿಯೇ ಚರ್ಚೆ ಗಳನ್ನು ನಡಸುತ್ತಿದ್ದರು. ದಿನೇ ಇಲಾಹಿಯು ಒಂದು ಹೊಸ ಮತವಲ್ಲ. ಬೌದ್ಧ ಮತದಂತೆ ಅದರಲ್ಲಿಯೂ ಒಳ್ಳೆಯ ನಡತೆ ಮತ್ತು ಒಳ್ಳೆಯ ಗುಣಗಳಿಗೆ ಹೆಚ್ಚು

ಬೆಲೆ ಇದ್ದಿತು. ಉದಾರತೆ, ತಪ್ಪುಮಾಡಿದವರನ್ನು ಕ್ಷಮಿಸುವುದು, ಕೋಪವನ್ನು ಶಾಂತಿಯಿಂದ ಗೆಲ್ಲುವುದು, ಪ್ರಾಪಂಚಿಕವಾದ ಆಶೆಗಳಿಂದ ನಿವೃತ್ತಿ, ಪ್ರಾಪಂಚಿಕ ಸಂಕೋಲೆಗಳಿಂದ ಬಿಡುಗಡೆ, ಮುಂದಿನ ಪ್ರಪಂಚದ ಸಲುವಾಗಿ ಪುಣ್ಯ ಸಂಪಾದಿಸುವುದು, ಮೃದುಸ್ವರ, ಮಧುರಭಾಷಣ, ಸಂತೋಷಕರವಾದ ಮಾತುಗಳನ್ನು ಪ್ರತಿಯೊಬ್ಬರಿಗೂ ಉಪಯೋಗಿಸುವುದು, ಎಲ್ಲರಲ್ಲಿಯೂ ಸಹೋದರಭಾವ, ದೇವರಲ್ಲಿ ಆಸಕ್ತಿ, ದೇವರಲ್ಲಿ ಆತ್ಮಸಮರ್ಪಣೆ—ಇವೇ ದಿನೇ ಇಲಾಹಿಯ ಕೆಲವು ಮುಖ್ಯಾಂಶಗಳು. ಇವುಗಳಲ್ಲಿ ಯಾವುದು ಇಸ್ಲಾಂ ಮತಕ್ಕೆ ವಿರೋಧವಾಗಿದೆ?

ದಿನೇ ಇಲಾಹಿಯಲ್ಲಿ ಪಾದ್ರಿಗಳಾಗಲಿ, ಪುರೋಹಿತರುಗಳಾಗಲಿ ಇರಲಿಲ್ಲ. ದಿನೇ ಇಲಾಹಿಗಾಗಿ ಬೇರೆ ಮಸೀದಿ ಬೇಕಾಗಿರಲಿಲ್ಲ. ಏಕೆಂದರೆ ದಿನೇ ಇಲಾಹಿಯು ಇಸ್ಲಾಂ ಮತಕ್ಕೆ ವಿರುದ್ಧವಾಗಿರಲಿಲ್ಲ. ಅದು ಇಸ್ಲಾಂ ಮತದ ಮಡಿಲಿನಲ್ಲಿಯೇ ಬೆಳೆದ ಸೂಫಿಗಳ ಒಂದು ಸಂಸ್ಥೆ.

ಈ ಸಂಸ್ಥೆಗೆ ಸೇರಿದವರು ಸ್ವಸ್ತಿಕದಂತಹ ಗುಂಡಾದ ಅಂಕಿತವನ್ನು ರುಮಾಲಿನ ಮೇಲೆ ಧರಿಸುತ್ತಿದ್ದರು. ಆ ಅಂಕಿತದ ಮಧ್ಯೆ 'ಹೂ' ಎಂಬ ಅಕ್ಷರವು ಕೆತ್ತಲ್ಪಟ್ಟಿತ್ತು. ಬದೋನಿಯು ಆ ಅಂಕಿತದ ಮೇಲೆ ಅಕ್ಬರನ ಚಿತ್ರವಿತ್ತೆಂದು ಬರೆಯುತ್ತಾನೆ. ಈ ಗುಂಪಿನವರು ಯಾರಾದರೂ ಮತ್ತೊಬ್ಬನನ್ನು ಕಂಡಾಗ 'ಅಲ್ಲಾ ಹೊ ಅಕ್ಬರ್' ಎಂದು ಹೇಳುತ್ತಿದ್ದರು. ಎದುರಾಳಿಯು 'ಜಲ್ಲಾ ಜಲಾಹು' ಎಂದು ಪ್ರತ್ಯುತ್ತರ ಕೊಡುತ್ತಿದ್ದನು. ಮನುಷ್ಯನ ಜೀವನಕಾಲದಲ್ಲೇ ವರ್ಧಂತಿ ಹಬ್ಬದ ಊಟಗಳ ನ್ನೇರ್ಪಡಿಸುವುದೂ, ಪ್ರಾಣಿಗಳ ಮಾಂಸವನ್ನು ಸಾಧ್ಯವಾದ ಮಟ್ಟಿಗೆ ಉಪಯೋಗಿಸದೆ ಇರುವುದೂ, ಕಟುಕರ ಬೆಸ್ತರ ಜೊತೆಯಲ್ಲಿ ಊಟಮಾಡದೆ ಇರುವುದೂ ಇವರಲ್ಲಿ ಆಚರಣೆಯಲ್ಲಿದ್ದ ಕೆಲವು ಪದ್ಧತಿಗಳಾಗಿದ್ದುವು. ಸತ್ತಮೇಲೆ ಹೂಳುವುದೂ ಸುಡುವುದೂ ಈ ಎರಡೂ ಇವರಲ್ಲಿ ಆಚರಣೆಯಲ್ಲಿತ್ತು. ಇವರಲ್ಲಿ ಎರಡು ಪಂಗಡಗಳು. ಮೇಲೆ ಹೇಳಿದ ಅಂಕಿತವನ್ನು ಮಾತ್ರ ಧರಿಸಿದವರು ಒಂದು ಗುಂಪು. ಹೊರಗಿನ ಮತ್ತು ಒಳಗಿನ ಷರತ್ತನ್ನು ಚಾಚೂ ತಪ್ಪದಂತೆ ನಡೆಯಲು ಒಪ್ಪಿದ್ದವರು ಇನ್ನೊಂದು ಗುಂಪು. ಷೇಕ್ ಮುಬಾರಕ್, ಷೇಕ್ ಫೈಸಿ, ಜಫಾರ್‌ಬೇಗ್, ಕಾಸಿಂಕಹಿ, ಅಬುಲ್‌ಫಸಲ್, ಆಜಂಖಾನ್, ಅಬ್ದುಲ್‌ಸಮದ್, ಮುಲ್ಲಾಷಾ ಮಹಮದ್ ಷಹದಾದ್, ಸೂಫಿ ಅಹಮದ್, ಮಿರ್ ಷರಿಫ್ ಅಮಲ್, ಸುಲ್ತಾನ್ ಕ್ವಾಜಾ, ಮಿರ್ಜಾ ಜಾನಿತಟ್ಟಾ, ತಕೀ ಸುಸ್ತರ್, ಷೇಕ್ ಜದಾಗೊಸ್ಸಾ ಬೆನಾರಸಿ, ಸಾದರ್ ಜಹಾನ್, ಅವನ ಇಬ್ಬರು ಮಕ್ಕಳು, ಬೀರ್‌ಬಲ್ ಮತ್ತು ಯುವರಾಜ ಸಲೀಮ್— ಈ ಹತ್ತೊಂಬತ್ತು ಜನ ಇಲಾಹಿ ಮತದ ಶಿಷ್ಯರು. ಸ್ಕಾಟ್ಲೆಂಡಿನ ಪ್ರೆಸ್ಬಿಟೇರಿಯನ್ನರು

ಎಷ್ಟರಮಟ್ಟಿಗೆ ಕ್ರೈಸ್ತರೋ ಇಲಾಹಿ ಪಂಗಡಕ್ಕೆ ಸೇರಿದವರೂ ಅಷ್ಟರಮಟ್ಟಿಗೇ ಇಸ್ಲಾಂಗೆ ಸೇರಿದವರು. ಆದುದರಿಂದ ಅಕ್ಬರನು ಇಸ್ಲಾಂ ಮತವನ್ನು ತ್ಯಜಿಸಿದನೆಂಬ ಸಿದ್ಧಾಂತವನ್ನು ಒಪ್ಪುವುದಕ್ಕಾಗುವುದಿಲ್ಲ.

ಇಸ್ಲಾಮನ್ನು ಅಕ್ಬರನು ತ್ಯಜಿಸಿದನೆಂದು ಹೇಳುವವರು ಈ ಕೆಳಗೆ ಕಾಣಿಸಿದ ಆಧಾರದಮೇಲೆ ನಿರ್ಧರಿಸಿದ್ದಾರೆ. ಮೊದಲನೆಯದಾಗಿ ಅಕ್ಬರನು "ಬಿಸ್‌ಮಿಲ್ಲಾ-ಇರ್ ರಹಮಾನ್-ಇರ್ ರಹೀಂ" ಇದಕ್ಕೆ ಬದಲಾಗಿ "ಅಲ್ಲಾ ಹೋ ಅಕ್ಬರ್" ಎಂಬುದನ್ನು ವಿಧಿಸಿದನು. ಬದೋನಿಯೂ ಇತರ ಮುಲ್ಲಾಗಳೂ ಅಕ್ಬರನು ದೇವರ ಹೆಸರಿಗೆ ಬದಲಾಗಿ ತನ್ನ ಹೆಸರನ್ನೇ ಸೇರಿಸಿದನೆಂದು ಅಕ್ಬರನ ಮೇಲೆ ಆಗ್ರಹಮಾಡಿದರು. ಆದರೆ ಬಿಸ್ಮಿಲ್ಲಾ ಮುಂತಾದ ಪದಗಳನ್ನು ಉಪಯೋಗಿಸದೆ ಇರತಕ್ಕ ಅನೇಕ ಪುಸ್ತಕಗಳೂ ಅನೇಕ ಸಂದರ್ಭಗಳೂ ಉಂಟು. ಕೆಲವು ಪುಸ್ತಕಗಳ ಮೊದಲಲ್ಲಿ ದೇವರ ನಾಮ ಅಥವಾ ಬಿಸ್ಮಿಲ್ಲಾಕ್ಕೆ ಬದಲಾಗಿ ೭೮೬ ಎಂಬ ಅಂಕಿಯನ್ನು ಹಾಕುವುದುಂಟು. ಮುಲ್ಲಾಗಳ ಈ ದೂರಿನಲ್ಲಿ ಯಾವ ತಿರುಳೂ ಇಲ್ಲ. ಎರಡನೆಯದಾಗಿ ಅಕ್ಬರನ ಖಾಸುಬಂಗಲೆಯಲ್ಲಿ ಸಾಕಿದ್ದ ನಾಯಿಯೂ ಹಂದಿಯೂ ಇಸ್ಲಾಂ ಮತಕ್ಕೆ ವಿರುದ್ಧವಾಗಿತ್ತೆಂದು ಬದೋನಿಯು ಬರೆದಿದ್ದಾನೆ. ಆದರೆ ೧೬ನೆಯ ಶತಮಾನದಲ್ಲಿ ಇಂಡಿಯಾದಲ್ಲಿ ಜೂಜಿನ ನಾಯಿಗಳನ್ನು ಓಟಕ್ಕಾಗಿ ಸಾಕುತ್ತಿದ್ದರು. ಬೇಟೆನಾಯಿಯ ಆವಶ್ಯಕತೆ ಬೇಟೆಯಲ್ಲಿ ಆಸಕ್ತಿಯಿದ್ದ ಅಕ್ಬರನಂತಹ ರಾಜರಿಗೆ ಬಹಳವಾಗಿತ್ತು. ಹಂದಿಯು ಹಿಂದೂಗಳ ದಶಾವತಾರದ ದೇವರ ರೂಪಗಳಲ್ಲಿ ಒಂದಾಗಿತ್ತೆಂದೂ ಆದುದರಿಂದ ಅಕ್ಬರನು ಹಿಂದೂಗಳ ಪ್ರೇರಣೆಯಮೇಲೆ ಅದನ್ನು ಖಾಸುಬಂಗಲೆಯಲ್ಲಿ ಸಾಕಲು ಅಪ್ಪಣೆಮಾಡಿದನೆಂದೂ ಬದೋನಿಯ ಹೇಳಿಕೆ. ಆದರೆ ಅಕ್ಬರನಿಗೆ ದೇವರ ದಶಾವತಾರ ರೂಪಗಳಲ್ಲೇ ನಂಬಿಕೆಯಿರಲಿಲ್ಲ. ಇವನು ಇಬದತ್ ಖಾನೆಯಲ್ಲಿ ಈ ವಿಷಯದಲ್ಲಿ ಅನೇಕಸಲ ಚರ್ಚೆಮಾಡಿ ದೇವರು ಮೀನು, ಆಮೆ, ಹಂದಿಯ ರೂಪವನ್ನು ಧರಿಸಿದ್ದನೆಂಬುದನ್ನು ಒಪ್ಪದೆ ಖಂಡಿಸಿದ್ದನು. ಅರಮನೆಯ ಖಾಸುಬಂಗಲೆಯಲ್ಲಿ ನಾಯಿ ಹಂದಿ ಮತ್ತು ಇತರ ಅನೇಕ ಪ್ರಾಣಿಗಳನ್ನು ಸಾಕುವಂತೆ ಅಕ್ಬರನು ಏರ್ಪಾಡುಮಾಡಿದ್ದಕ್ಕೂ ಮತೀಯ ವಿಚಾರಗಳಿಗೂ ಯಾವ ಸಂಬಂಧವೂ ಇಲ್ಲ.

ಅರಬ್ಬಿ ಭಾಷೆಯ ವ್ಯಾಸಂಗಕ್ಕೆ ಇದ್ದ ಉತ್ತೇಜನವನ್ನು ಅಕ್ಬರನು ಕಡಮೆ ಮಾಡಿದುದು ನಿಜ. ಮದ್ರಸಗಳಲ್ಲಿ ಅರಬ್ಬಿ ಭಾಷೆಯ ವ್ಯಾಸಂಗವೇ ಹೆಚ್ಚಾಗಿ ನಡೆಯುತ್ತಿತ್ತು. ಅರಬ್ಬಿ ಭಾಷೆ ಬಹಳ ಕಷ್ಟವಾಗಿದ್ದು ಸಾಮಾನ್ಯಜನರಿಗೆ ಚೆನ್ನಾಗಿ ತಿಳಿಯುತ್ತಿರಲಿಲ್ಲ. ಆದ್ದರಿಂದ ಇದಕ್ಕೆ ಬದಲಾಗಿ ಜನಸಾಮಾನ್ಯಕ್ಕೆ ಹೆಚ್ಚು ಉಪಯೋಗ

ಕರವಾಗಿದ್ದ ಫಾರಸೀಭಾಷೆಗೆ ಹೆಚ್ಚು ಉತ್ತೇಜನ ಸಿಕ್ಕಿತು. ಅರಬ್ಬಿಭಾಷೆಯ ವ್ಯಾಸಂಗವು ಮುಲ್ಲಾಗಳ ಪ್ರಾಬಲ್ಯವನ್ನು ಹೆಚ್ಚಿಸುವುದೆಂದು ಅಕ್ಬರನು ತಿಳಿದು ಕೊಂಡಂತೆ ಕಾಣುತ್ತದೆ. ಅದೂ ಅಲ್ಲದೆ ಅಕ್ಬರನಿಗೆ ಮದ್ರಸಗಳಲ್ಲಿ ಅನೇಕ ವಿಧವಾದ ವಿಷಯಗಳನ್ನು ಕಲಿಸಲು ಅವಕಾಶ ಕಲ್ಪಿಸಬೇಕೆಂಬ ಆಸೆಯಿತ್ತು. ಬರಿಯ ಅರಬ್ಬಿಗೆ ಬದಲಾಗಿ ಗಣಿತಶಾಸ್ತ್ರ, ಪದ್ಯ, ತತ್ವಶಾಸ್ತ್ರ ಮೊದಲಾದ ಹೊಸ ವಿಷಯಗಳನ್ನು ಸೇರಿಸುವಂತೆ ಮಾಡಿದನು. ಕೆಳಗೆ ಚುಕ್ಕಿಹಾಕುವುದು ಮೇಲೆ ಚುಕ್ಕಿಹಾಕುವುದು ಇವುಗಳಿಂದ ಅರಬ್ಬಿ ಕಷ್ಟವಾಗಿ ಕಂಡುಬಂದು ಅಕ್ಬರನಿಗೆ ಫಾರಸೀಭಾಷೆಯಲ್ಲಿ ಹೆಚ್ಚು ಅಭಿರುಚಿ ಹುಟ್ಟಿತು ಅಷ್ಟೇ ; ಅದು ಇಸ್ಲಾಂ ಮೇಲಿನ ದ್ವೇಷದಿಂದಲ್ಲ.

ಅಕ್ಬರನು ಇಸ್ಲಾಂ ಮತಕ್ಕೆ ಸೇರಿದವನಾಗಿದ್ದರೆ ಅವನು ಕುರಾನ್ ಪ್ರತಿಗಳನ್ನು ಏಕೆ ನಾಶಮಾಡಲು ಅಪ್ಪಣೆ ಮಾಡಿದನು ? ಇದು ರಾಜಕೀಯಕ್ಕೆ ಸಂಬಂಧಿಸಿದ ಪ್ರಶ್ನೆ. ಕುರಾನಿನ ಎಲ್ಲಾ ಪ್ರತಿಗಳನ್ನೂ ಅಕ್ಬರನು ನಾಶಮಾಡಲು ಅಪ್ಪಣೆಮಾಡಲಿಲ್ಲ. ಬಂಗಾಳ ಮತ್ತು ಬಿಹಾರಗಳ ದಂಗೆಯ ಕಾಲದಲ್ಲಿ ಕೆಲವು ಪುಂಡುಗಾರರು ನಕಲಿ ಖುರಾನಿನ ಪ್ರತಿಗಳನ್ನು ತಯಾರಿಸಿದರು. ಕೇವಲ ಈ ಪ್ರತಿಗಳು ಮಾತ್ರ ನಾಶವಾದುವು. ಇವುಗಳ ನಾಶವು ದಂಗೆಯನ್ನು ಅಡಗಿಸಲು ಉಪಯೋಗಿಸಿದ ಶಾಸನಗಳಿಗೆ ಸಂಬಂಧಪಟ್ಟಿದೆ. ಈ ಕುಹಕ ಕುರಾನ್ ಪ್ರತಿಗಳ ನಾಶದಿಂದ ಅಕ್ಬರನು ಇಸ್ಲಾಂ ತ್ಯಜಿಸಿದನೆಂದು ಹೇಳುವುದು ನ್ಯಾಯವಲ್ಲ. ಇದರಿಂದ ಇಸ್ಲಾಂಗೆ ಯಾವ ನಷ್ಟವೂ ಆಗಲಿಲ್ಲ.

ಹಾಗಾದರೆ ಮುಹಮದ್, ಅಹಮದ್, ಮೊದಲಾದ ಹೆಸರನ್ನು ಜನಗಳು ತಮ್ಮ ಮಕ್ಕಳಿಗೆ ಇಡಕೂಡದೆಂದು ಅಕ್ಬರನು ಕಟ್ಟುಮಾಡಿದುದೇಕೆ ? ಇದೂ ಇಸ್ಲಾಮಿನ ಮೇಲ್ಮೆಗಾಗಿ. ಈ ಸಂದರ್ಭದಲ್ಲಿ ಅಕ್ಬರನ ಹೆಸರೆ ಜಲಾಲುದ್ದೀನ್ ಮುಹಮ್ಮದ್ ಎನ್ನುವುದನ್ನು ನಾವು ಮರೆಯಕೂಡದು. ಈ ತರದ ನಾಮಕರಣಕ್ಕೆ ಅವಕಾಶ ಕೊಡದ್ದೇ ಇದ್ದುದಕ್ಕೆ ಒಂದು ಪ್ರಬಲವಾದ ಕಾರಣವಿದೆ. ಮುಹಮ್ಮದ್ ಎಂಬ ಪದವನ್ನು ಉಚ್ಚರಿಸಿದ ಕೂಡಲೆ 'ಸಲ್ಲಾಲಹೂ' ಎಂಬುದಾಗಿ ಪ್ರತಿ ಉತ್ತರವನ್ನು ನಮ್ರಪೂರ್ವಕವಾಗಿ ಹೇಳಬೇಕಾದುದು ಒಂದು ನಿಯಮ. ಪ್ರತಿಯೊಂದು ಸಣ್ಣಪುಟ್ಟ ಸಂಭಾಷಣೆಯಲ್ಲಿಯೂ ಈ ಪದ್ಧತಿಯನ್ನು ಅನುಸರಿಸುವುದು ಕಷ್ಟವಾಗಿ ಗುರುವಾದ ಮುಹಮ್ಮದನ ಹೆಸರಿಗೆ ಅವಮಾನವಾಗುವುದೆಂಬ ಶಂಕೆಯಿಂದ ಈ ನಾಮಕರಣವು ನಿಲ್ಲಿಸಲ್ಪಟ್ಟಿತು.

ಇನ್ನು ಮಸೀದಿಗಳನ್ನು ಕೆಡವಿಸಿದ ವಿಚಾರ. ಬಂಗಾಳವು ಪಠಾಣರ ಕಾರ್ಯಕಲಾಪಗಳ ಕೇಂದ್ರವಾಗಿತ್ತೆಂದು ಹಿಂದೆಯೇ ತಿಳಿಸಿದೆ. ಇಲ್ಲಿಯ ಮಸೀದಿಗಳಲ್ಲಿ ದಂಗೆಕಾರರು ಸೇರುತ್ತಿದ್ದುದರಿಂದ ಅಕ್ಬರನು ಆ ಮಸೀದಿಗಳನ್ನು ಕೆಡವಿಸಿದನು.

ಅಕ್ಬರನು ಮಕ್ಕಾ ಯಾತ್ರೆಯನ್ನು ನಿಲ್ಲಿಸಿದುದು ಅವನು ಮುಸಲ್ಮಾನ್ ಮತವನ್ನು ತ್ಯಜಿಸಿದುದಕ್ಕೆ ಗುರುತೆಂದು ಅನೇಕರ ಅಭಿಪ್ರಾಯ. ಅಕ್ಬರನು ತನ್ನ ಅಂತ್ಯಕಾಲದವರೆಗೂ ತನ್ನ ಸಂಸಾರಕ್ಕೆ ಸೇರಿದವರನ್ನು ಮಕ್ಕಾ ಯಾತ್ರೆಗೆ ಕಳುಹಿಸುತ್ತಿದ್ದನು. ಮಕ್ಕಾ ಯಾತ್ರಿಕರ ಸಲುವಾಗಿ ಸರ್ಕಾರದಲ್ಲಿ ಒಂದು ಇಲಾಖೆಯೇ ಇತ್ತು. ಅಕ್ಬರನ ಸರ್ಕಾರವು ಪ್ರತಿಯೊಬ್ಬ ಯಾತ್ರಿಕನಿಗೂ ಖರ್ಚಿಗಾಗಿ ೬೦೦ ರೂಪಾಯಿ ಕೊಡುತ್ತಿತ್ತು. ಈ ಇಲಾಖೆಗೆ ಹಾಜ್ ಇಲಾಖೆಯೆಂದು ಹೆಸರು. ಮಿೂರ್-ಇ-ಹಾಜಿ ಎಂಬವನೇ ಇದರ ಅಧ್ಯಕ್ಷ. ಇವನ ಕೈಯಲ್ಲಿ ಯಾತ್ರಿಕರಿಗಾಗಿ ಸರ್ಕಾರದ ಹೆಚ್ಚು ಹಣವೂ ಕೆಲವು ಹಡಗುಗಳೂ ಇದ್ದುವು. ಆದರೆ ಧರ್ಮಾಧಿಕಾರಿಯಾದ ಸಾದರ್ ಮತ್ತು ಮಿೂರ್-ಇ-ಹಾಜಿ ಇಬ್ಬರೂ ಒಂದಾಗಿ ಸರ್ಕಾರದ ಹಣವನ್ನೆಲ್ಲಾ ತಾವೇ ತಿಂದುಹಾಕಿದರು. ಶುದ್ಧ ಮುಸಲ್ಮಾನನಾದ ಅಜಂಖಾನನ ಮಕ್ಕದ ಷರೀಫರ ದುರಾಚಾರಗಳ ವರ್ಣನೆಯೂ, ಪೋರ್ಚುಗೀಸ್ ನಾವಿಕರ ಹಾವಳಿಯೂ, ಮಕ್ಕಾಯಾತ್ರೆಗೆ ಹೋಗುವಾಗ ಕ್ರೈಸ್ತ ಹಡಗು ಮಾಲೀಕರು ಕೊಡುತ್ತಿದ್ದ ಮೇರಿಯ ಚಿತ್ರವಿದ್ದ ಟಿಕೀಟುಗಳನ್ನು ಕೊಳ್ಳಲು ಶುದ್ಧ ಮುಸಲ್ಮಾನರು ಒಪ್ಪದೆ ಹೋದದ್ದೂ, ಅಕ್ಬರನು ಮಕ್ಕಾ ಯಾತ್ರೆಯನ್ನು ನಿಲ್ಲಿಸಬೇಕಾಗಿ ಬಂದದ್ದಕ್ಕೆ ಕಾರಣಗಳು.

ಚೆನ್ನಾಗಿ ಪರಿಶೀಲನೆಮಾಡಿ, ಪಕ್ಷಪಾತವಿಲ್ಲದೆ ಯೋಚಿಸಿ ನೋಡುವ ಪ್ರತಿಯೊಬ್ಬನಿಗೂ ಅಕ್ಬರನು ಮುಸಲ್ಮಾನ್ ಮತವನ್ನು ತ್ಯಜಿಸಲಿಲ್ಲವೆಂಬ ವಿಷಯವು ವ್ಯಕ್ತವಾಗುವುದು.

ಎಂ. ಶೇಷಾದ್ರಿ.

ಮೈಸೂರಿನ ಮಧುವನ

ರಂಗುರಂಗಿನ ಹೂಗಳಾಭರಣ ಒಪ್ಪಿರಲು
ಕಂಗಳನು ಮೋಹಿಸುವ ಹಸುರುಡುಗೆಯ
ಸಿಂಗರಿಸಿ ನಿಂತಿರುವ ಅಂಗನೆಯ ತೆರದಲ್ಲಿ
ಸೊಗವಡೆದ ಮಧುವನವು ನಲಿಯುತಿಹುದು.

ಕುಲವನಿತೆ ಸೂಸುತಿಹ ಎಳೆನಗೆಯ ರೀತಿಯಲಿ
ಅರಳಿರಲು ಬಿಳಿಬಿಳಿಯ ತಾವರೆಗಳು,
ಬಂಡುಂಡು ಝೇಂಕರಿಪ ಮರಿದುಂಬಿ ತಂಡಗಳು
ಹಾಡುವುವು ಮಧುರಸಂಗೀತಗಳನು.

ತಂಗಾಳಿ ಸುಳಿಯುತಿರೆ ತನಿಗಂಪು ಬೀರುತಿರೆ
ಗಿಳಿವಿಂಡು ತನಿರಸವನೀಂಟುತಿಹುವು;
ಹಾರುವುವು ಬಿಳಿಮುಗಿಲ ತೆರೆತೆರೆಯ ಜೊತೆಯಲ್ಲಿ
ಪಚ್ಚೆತೆನೆಗಳ ಸಾಲುತೋರಣದೊಲು.

ಹೂಬಿಟ್ಟು ಬಳುಕುತಿಹ ಬಳ್ಳಿಮಾಲೆಗಳಲ್ಲಿ
ತೂಗುವುವು ಮಾಮರದ ಕೊಂಬೆಯಲ್ಲಿ;
ಚೆಲುವುಕಂಗಳ ನವಿಲು ಕುಣಿಯುತಿರೆ ಸಂತಸದಿ
ಕೋಗಿಲೆಯು ಹಾಡುವುದು ಸವಿದನಿಯಲಿ.

ದನಿಯೆತ್ತಿ ಕೂಗುತಿಹ ಹಕ್ಕಿಗಳ ಕಲರವದ
ಮಾರ್ದನಿಯು ಸೆಲೆಯುತಿರೆ ಮಧುವನದಲಿ,
ಆಡುವುವು ಅರಸಂಚೆ ತಿಳಿನೀರ ಕೊಳದಲ್ಲಿ
ಅನುದಿನವು ತಾವರೆಯ ಹೆಬ್ಬನದಲಿ.

ಮಧುವನದ ಸೌಂದರ್ಯಜಲಧಿಯಲಿ ವನಲಕ್ಷ್ಮಿ
ಯೋಲಾಡಿ ಹಗಲಲ್ಲಿ ನಲಿಯುತಿಹಳು,
ಸಮರಾತ್ರಿ ಸಮನಿಸಲು ಕಾಣುವಳು ಋಷಿಯಂತೆ,
ಯೋಗನಿದ್ರೆಯ ತಳೆದ ಯೋಗಿಯಂತೆ!

ಓ. ಎಲ್. ಲಿಂಗಯ್ಯ.

ಹೊಸ ರಸಾಯನಶಾಸ್ತ್ರ

ಹಳೆಯ ಮತ್ತು ಹೊಸ ಶಾಸ್ತ್ರಗಳ ನಿಯಮ

ಹತ್ತೊಂಬತ್ತನೆಯ ಶತಮಾನದ ಕೊನೆಯ ವರೆಗೂ ರಾಸಾಯನಿಕ ಮೂಲ ಭೂತಗಳ ಪರಿವರ್ತನೆಯ ಬಗ್ಗೆ ಯಾವ ಸಂಶಯವೂ ಇರಲಿಲ್ಲ. ಆಗ, ಒಂದು ಮೂಲ ಭೂತವನ್ನು ಬೇರೊಂದು ಮೂಲಭೂತವಾಗಿ ಪರಿವರ್ತಿಸುವುದು ಅಶಕ್ಯವೆಂಬ ತತ್ವವು ಸರ್ವಮಾನ್ಯವಾಗಿತ್ತು. ಮಧ್ಯಯುಗದ ಲೋಹಪರಿವರ್ತಕರು ವಿವಿಧ ಲೋಹಗಳನ್ನು ಚಿನ್ನವಾಗಿ ಪರಿವರ್ತಿಸಬಹುದೆಂದು ಭಾವಿಸಿದ್ದರು. ಆದರೆ ರಾಬರ್ಟ್ ಬಾಯಿಲ್‌ನ (೧೬೨೭–೯೧) ಅನಂತರ ಪರಮಾಣು ಅಭೇದ್ಯ ಮತ್ತು ಒಂದು ಭೂತದ ಪರಮಾಣುವನ್ನು ಇನ್ನೊಂದು ಭೂತದ ಪರಮಾಣುವಾಗಿ ಪರಿವರ್ತಿಸುವುದು ಅಶಕ್ಯವೆಂಬ ಸಿದ್ಧಾಂತವು ಸ್ಥಿರವಾಯಿತು. ಪ್ರಸಿದ್ಧ ಗಣಿತಜ್ಞನೂ ವೈಜ್ಞಾನಿಕನೂ ಆದ ಕ್ಲರ್ಕ ಮೆಕ್ಸವೆಲ್ಲನು "ಎನ್‌ಸೈಕ್ಲೋಪೀಡಿಯ ಬ್ರಿಟಾನಿಕಾ" ದಲ್ಲಿ ಬರೆದ 'ಪರಮಾಣು' ಎಂಬ ಲೇಖನದಲ್ಲಿ ಇದೇ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾನೆ. ಆತನು ಬರೆದುದು "ಪರಮಾಣು ವಿಭಜನೆ ಇಂದಿನ ನಿಸರ್ಗ ನಿಯಮದಂತೆ ಅಶಕ್ಯವಾಗಿದೆ" ಎಂದು.

ಸ್ವಯಂಪ್ರಭೆಯುಳ್ಳ ವಸ್ತುಗಳ ಸಂಶೋಧನೆಯಿಂದ ಪರಮಾಣುವಿನ ಅವಿಭಜ್ಯತೆಯ ಬಗ್ಗೆ ಸಂಶಯಗಳು ಉಂಟಾದುವು. ಯುರೇನಿಯಂ ಲೋಹದ ಪರಮಾಣು ತನ್ನಿಂದ ತಾನೆ ಪರಿವರ್ತನೆ ಹೊಂದಿ ಸೀಸವಾಗುವುದು ಲೋಹ ಪರಿವರ್ತನೆಯ ಮೊದಲನೆಯ ಮೆಟ್ಟಲು. ಆದರೆ ಈ ತರದ ಪರಿವರ್ತನೆಯನ್ನು ಪ್ರಯೋಗಶಾಲೆಯಲ್ಲಿ ಮಾಡಲು ಶಕ್ಯವಲ್ಲದುದರಿಂದ, ಇದು ಕೆಲವೇ ಅತಿಭಾರವಾದ ಲೋಹಗಳ ಗುಣವೆಂದೂ, ಎಲ್ಲ ಲೋಹಗಳಲ್ಲಿ ಈ ಗುಣವು ಇಲ್ಲವೆಂದೂ ಊಹಿಸಲಾಯಿತು. ಆದರೂ ಮೇಲಿನ ಸಂಶೋಧನೆಯಿಂದ ಪರಮಾಣುವನ್ನು ಪರಿವರ್ತಿಸಬಹುದೆಂಬ ಸಿದ್ಧಾಂತವು ಬೆಳಕಿಗೆ ಬರತೊಡಗಿತು.

ಕಳೆದ ಮಹಾಯುದ್ಧದನಂತರ ರದರ್‌ಫೋರ್ಡ್ ಮತ್ತು ಆತನ ಶಿಷ್ಯರು ಕೆವಂಡಿಷ್ ಪ್ರಯೋಗಶಾಲೆಯಲ್ಲಿ ಲೋಹಪರಿವರ್ತನೆಯ ಪ್ರಯೋಗಗಳನ್ನು ಮಾಡಲು ಆರಂಭಿಸಿದರು. ಇವರ ಪ್ರಯೋಗಗಳಿಂದ ಪರಿವರ್ತಿಸಿದ ಲೋಹವು ಅತ್ಯಂತ ಕಡಮೆ ಪ್ರಮಾಣದಲ್ಲಿ—ರಾಸಾಯನಿಕ ತಕ್ಕಡಿಯಿಂದ ತೂಗುವಷ್ಟು

ಅಲ್ಲ—ಇದ್ದಿತು. ಎಲ್ಲಕ್ಕೂ ಮೊದಲು ಲಿಥಿಯಂ ಲೋಹವನ್ನು ಅರ್ಕಾನಿಲವಾಗಿಯೂ ಸಾರಜನಕವನ್ನು ಆಮ್ಲಜನಕವಾಗಿಯೂ ಪರಿವರ್ತಿಸಿದರು. ಒಂದು ಪರಮಾಣುವನ್ನು ಇನ್ನೊಂದು ಪರಮಾಣುವಾಗಿ ಪರಿವರ್ತಿಸುವ, ಎಂದರೆ ಹೊಸ ಪರಮಾಣುಗಳನ್ನು ಹುಟ್ಟಿಸುವ, ಈ ಶಾಸ್ತ್ರವು ಅಣುಗಳಿಂದ ಸಂಯುಕ್ತಗಳನ್ನು ಹುಟ್ಟಿಸುವ ಶಾಸ್ತ್ರಕ್ಕಿಂತಲೂ ಭಿನ್ನ ಮತ್ತು ಹೊಸದಾದುದರಿಂದ, ಪ್ರೊ. ಅಂಡ್ರೇಡರವರು ಇದನ್ನು "ಹೊಸ ರಸಾಯನಶಾಸ್ತ್ರ"ವೆಂದು ಕರೆದಿದ್ದಾರೆ.

ಹೊಸ ಶಾಸ್ತ್ರದ ನಿಯಮಗಳ ಅರಿವು ಆಗಬೇಕಾದರೆ, ಹಳೆಯ ಶಾಸ್ತ್ರದ ನಿಯಮ ಸಿದ್ಧಾಂತಗಳ ಆಕಲನೆಯಾಗಬೇಕು. ಹಳೆಯ ರಸಾಯನಶಾಸ್ತ್ರದಲ್ಲಿ ಒಂದು ಮೂಲಭೂತದ ಅಣುಗಳ ಗುಂಪು, ಇನ್ನೊಂದು ಭೂತದ ಗುಂಪಿನೊಡನೆ ವರ್ತಿಸಿ ಆ ಎರಡು ಭೂತಗಳ ಪರಮಾಣುಗಳನ್ನೊಳಗೊಂಡ ಒಂದು ಸಂಯುಕ್ತದ ಅಣುಗಳ ಉತ್ಪಾದನೆಯಾಗುವುದು. ಅಥವಾ ಒಂದು ಸಂಯುಕ್ತವು ಇನ್ನೊಂದು ಸಂಯುಕ್ತದೊಡನೆ ವರ್ತಿಸಿ, ಬೇರೆ ಸಂಯುಕ್ತವನ್ನು ಹುಟ್ಟಿಸುವುದು. ಈ ರಾಸಾಯನಿಕ ವ್ಯತ್ಯಾಸಗಳು ಎರಡು ಮೂಲಭೂತ ನಿಯಮಗಳಿಗನುಸಾರವಾಗಿ ಆಗುವುವು. ಒಂದು 'ತೂಕ ಸಂಸ್ಥಿತಿಯ ನಿಯಮ'; ಎರಡನೆಯದು 'ಶಕ್ತಿ ಸಂಸ್ಥಿತಿಯ ನಿಯಮ'. ತೂಕಸಂಸ್ಥಿತಿಯ ನಿಯಮದ ಮೇರೆಗೆ ರಾಸಾಯನಿಕ ಕ್ರಿಯೆಯಲ್ಲಿ ವ್ಯತ್ಯಾಸ ಹೊಂದಿದ ವಸ್ತುಗಳ ತೂಕವೂ ಹುಟ್ಟಿರುವ ಹೊಸ ವಸ್ತುಗಳ ತೂಕವೂ ಸಮವಾಗಿರುವುವು. ಇದನ್ನು ರಾಸಾಯನಿಕ ಸಮೀಕರಣದಿಂದ ಸ್ಪಷ್ಟವಾಗಿ ವಿವರಿಸಬಹುದು.

ರಾಸಾಯನಿಕ ಕ್ರಿಯೆಗಳಲ್ಲಿ ಉಷ್ಣತೆಯು ಹೊರಬೀಳುತ್ತದೆ, ಅಥವಾ ಉಷ್ಣತೆಯ ಆಕರ್ಷಣೆಯಾಗುತ್ತದೆ. ಇಂಗಾಲ ಮತ್ತು ಆಮ್ಲಜನಕಗಳ ರಾಸಾಯನಿಕ ವರ್ತನೆಯಿಂದ ಇಂಗಾಲಾಮ್ಲ ಅನಿಲವು ಹುಟ್ಟುವುದು. ಅದರ ಜೊತೆಗೆ ಉಷ್ಣತೆಯೂ ಹೊರಬೀಳುವುದು. ಅದನ್ನು ರಾಸಾಯನಿಕ ಸಮೀಕರಣದಿಂದ ಕೆಳಗಿನಂತೆ ವಿಶದಗೊಳಿಸುತ್ತಾರೆ—

$$C + O_2 \longrightarrow Co_2 + 94{,}400$$ ಕ್ಯಾಲೊರಿಗಳು*

ಇಂಗಾಲ + ಆಮ್ಲಜನಕ ⟶ ಇಂಗಾಲಾಮ್ಲ + ಉಷ್ಣತೆ

ಸಮೀಕರಣದ ಎರಡೂ ಭಾಗಗಳ ಆಂತರಿಕ ಶಕ್ತಿಗಳ ಭೇದವು ಉಷ್ಣತೆಯ ರೂಪದಲ್ಲಿ ಹೊರಸೂಸುತ್ತದೆ. ರಾಸಾಯನಿಕ ಕ್ರಿಯೆಯು ಯಾವ ರೀತಿಯಿಂದಲೇ ಆಗಲಿ, ಆಂತರಿಕ ಶಕ್ತಿಯ ಭೇದವನ್ನು ಮಾರ್ಪಡಿಸುವುದಿಲ್ಲ. ಉದಾಹರಣೆ: ಇಂಗಾ

* ೪ ಡಿಗ್ರಿ ಸೆಂಟಿಗ್ರೇಡ್ ಶಾಖದಲ್ಲಿರುವ ಒಂದು ಗ್ರ್ಯಾಂ ತೂಕದ ನೀರನ್ನು ಒಂದು ಡಿಗ್ರಿ ಏರುವಂತೆ, ಎಂದರೆ ೫ ಡಿಗ್ರಿ ಸೆಂಟಿಗ್ರೇಡ್ ಶಾಖಕ್ಕೆ ಬರುವಂತೆ, ಕಾಯಿಸುವುದಕ್ಕೆ ಬೇಕಾದ ಉಷ್ಣಕ್ಕೆ ಒಂದು (ಸಣ್ಣ) ಕ್ಯಾಲೊರಿ ಎಂದು ಹೆಸರು.

ಲಾಮ್ಲ ಅನಿಲವನ್ನು ಎರಡು ವಿಧಾನದಿಂದ ಹುಟ್ಟಿಸಬಹುದು. ಇಂಗಾಲದ ಮತ್ತು ಆಮ್ಲಜನಕದ ನೇರವಾದ ವರ್ತನೆಯಿಂದ ಹುಟ್ಟುವುದು ಒಂದು. ಆ ವರ್ತನೆಯಿಂದ ೯೪,೪೦೦ ಕ್ಯಾಲೊರಿಯ ಉಷ್ಣತೆ ಹೊರಬೀಳುವುದು. ಇಂಗಾಲಾಮ್ಲ ಅನಿಲವನ್ನು ಇನ್ನೊಂದು ರೀತಿಯಿಂದ ಸಿದ್ಧಪಡಿಸಬಹುದು. ಮೊದಲನೆಯ ಹಂತದಲ್ಲಿ ಇಂಗಾಲವು ಆಮ್ಲಜನಕದೊಡನೆ ವರ್ತಿಸಿ ಇಂಗಾಲೇಕಾಮ್ಲವೆಂಬ ಒಂದು ವಿಷಾನಿಲವನ್ನು ಹುಟ್ಟಿಸುವುದು. ಆ ಮೇಲೆ ಇಂಗಾಲೇಕಾಮ್ಲವು ಇನ್ನೊಮ್ಮೆ ಆಮ್ಲಜನಕದೊಡನೆ ವರ್ತಿಸಿ ಇಂಗಾಲಾಮ್ಲವನ್ನು ಹುಟ್ಟಿಸುವುದು. ಆಗ ಉಷ್ಣತೆಯು ಎರಡು ಹಂತಗಳಲ್ಲಿ ಹೊರಬೀಳುವುದು.

$$C + \tfrac{1}{2}O_2 \longrightarrow Co + 26{,}100 \text{ ಕ್ಯಾಲೊರಿಗಳು}$$
$$Co + \tfrac{1}{2}O_2 \longrightarrow Co_2 + 68{,}300 \text{ ಕ್ಯಾಲೊರಿಗಳು}$$
$$C + O_2 \longrightarrow Co_2 + 94{,}400 \text{ ಕ್ಯಾಲೊರಿಗಳು}$$

ಎರಡು ವ್ಯತ್ಯಾಸಗಳಿಂದ ಹೊರಬೀಳುವ ಒಟ್ಟು ಉಷ್ಣತೆಯು ಇಂಗಾಲ ಮತ್ತು ಆಮ್ಲಜನಕದ ನೇರವಾದ ವರ್ತನೆಯಿಂದ ಹೊರಬೀಳುವ ಉಷ್ಣತೆಯಷ್ಟೆ ಇರುತ್ತದೆ. ಆದುದರಿಂದ ಎರಡು ವಸ್ತುಗಳಿಂದ ಬೇರೆ ವಸ್ತುಗಳ ಉತ್ಪಾದನೆಯಲ್ಲಿ—ಯಾವ ರೀತಿಯಲ್ಲಿಯೇ ಆಗಲಿ, ಎಷ್ಟು ಹಂತಗಳಲ್ಲಿಯೇ ಆಗಲಿ—ಹೊರಬೀಳುವ ಅಥವಾ ಆಕರ್ಷಿಸುವ ಶಕ್ತಿಯ ಪ್ರಮಾಣವು ಒಂದೇ ಆಗಿರುತ್ತದೆ. ಇದು ಶಕ್ತಿ ಸಂಸ್ಥಿತಿಯ ನಿಯಮದ ಸಿದ್ಧಾಂತವೆನ್ನಬಹುದು.

ಹಳೆಯ ಶಾಸ್ತ್ರದ ಮೇರೆಗೆ ರಾಸಾಯನಿಕ ವ್ಯತ್ಯಾಸಗಳು ಎರಡು ಸಂಸ್ಥಿತಿಯ ನಿಯಮಗಳನ್ನು ಬೇರೆ ಬೇರೆಯಾಗಿ ಅನುಸರಿಸುವುವು. ಆದರೆ ಹೊಸ ಶಾಸ್ತ್ರದಲ್ಲಿ, ಒಂದು ಪರಮಾಣು ಕೇಂದ್ರದ ಸುತ್ತಮುತ್ತಲು ಚಲಿಸುವ ಋಣವಿದ್ಯುತ್ಕಣಗಳ ಸಂಖ್ಯೆ ಮಾರ್ಪಡಿಸಬೇಕಾಗುವುದು. ಇಂತಹ ಪರಿವರ್ತನೆಗಳಲ್ಲಿ ತೂಕ ಮತ್ತು ಶಕ್ತಿ ಸಂಸ್ಥಿತಿಯ ನಿಯಮಗಳ ಪಾಲನೆ ಬೇರೆ ಬೇರೆಯಾಗಿ ಆಗುವುದಿಲ್ಲ. ಉದಾಹರಣೆಗಾಗಿ, ಜಲಜನಕ ಪರಮಾಣುಕೇಂದ್ರ ಎಂದರೆ ಧನಕಣ ಮತ್ತು ಲಿಥಿಯಂನ ಒಂದು ಕೇಂದ್ರದ ವರ್ತನೆಯಿಂದ ಆರ್ಕಾನಿಲದ ಎರಡು ಕೇಂದ್ರಗಳು ಹುಟ್ಟುವುವು. ಈ ಪರಿವರ್ತನೆಯ ಸಮೀಕರಣವನ್ನು ಕೆಳಗಿನಂತೆ ಬರೆಯಬಹುದು.

$$\overset{7}{\underset{3}{Li}} + \overset{1}{\underset{1}{H}} \longrightarrow 2\,\overset{4}{\underset{2}{He}}$$

$\overset{7}{\underset{3}{Li}}$ ಎಂದರೆ, 3 ವಿದ್ಯುದಂಶವುಳ್ಳ 7 ಪರಮಾಣು ತೂಕದ ಲಿಥಿಯಂ ಪರಮಾಣು. ಕೆಲವು ಲೋಹಗಳ ವಿದ್ಯುದಂಶವು ಅಷ್ಟೇ ಇದ್ದು ಪರಮಾಣು ತೂಕಮಾತ್ರ

ಭಿನ್ನವಾಗಿರುತ್ತದೆ. ಅಂತಹ ಪರಮಾಣುಗಳನ್ನು ಸಕ್ಷೇತ್ರವೆನ್ನುವರು. ಲಿಥಿಯಂಗೆ ಎರಡು ಸಕ್ಷೇತ್ರಗಳಿವೆ. ಒಂದರ ಪರಮಾಣುತೂಕ ೬ ಇನ್ನೊಂದರದು ೭. ಡಾಕ್ಟರ್ ಆಸ್ಟನ್ ಅವರ ಸಂಶೋಧನೆಯ ಮೇರೆಗೆ ಸಕ್ಷೇತ್ರಗಳ ತೂಕ ಪೂರ್ಣಾಂಕ ಸಂಖ್ಯೆಯಾಗಿರುವುದಿಲ್ಲ, ಆದರೆ ಪರಮಾಣುವಿನ ತೂಕಕ್ಕಿಂತಲೂ ಸ್ವಲ್ಪ ಹೆಚ್ಚಿದ್ದು ಅಪೂರ್ಣಾಂಕವಾಗಿರುತ್ತದೆ. ಈ ಲೆಕ್ಕದ ಪ್ರಕಾರ ಮೇಲೆ ವಿವರಿಸಿದ ಸಮೀಕರಣದ ಎಡಭಾಗದ ತೂಕ ೮.೦೨೬೧ ಇದ್ದು ಬಲಭಾಗದ ತೂಕ ೮.೦೦೭೮ ಬರುತ್ತದೆ. ಆದುದರಿಂದ ಮೇಲಿನ ಪರಿವರ್ತನೆಯಲ್ಲಿ ೦.೦೮೧೩ ತೂಕ ಲಯಹೊಂದುವುದು. ಎಂದರೆ ತೂಕ ಸಂಸ್ಥಿತಿಯ ನಿಯಮದ ಉಲ್ಲಂಘನೆಯಾಯಿತೆಂದು ಹೇಳಬಹುದು.

ಲಿಥಿಯಂ ಮತ್ತು ಜಲಜನಕ ಕೇಂದ್ರಗಳು ಯಾವ ಚಲಸಶಕ್ತಿಯಿಂದ ತಗಲುವುವೋ, ಅದಕ್ಕೂ ಹೆಚ್ಚಿನ ಶಕ್ತಿಯನ್ನು ಪಡೆದುಕೊಂಡು, ಅರ್ಕಾನಿಲದ ಎರಡು ಪರಮಾಣುಗಳು ಸಿಡಿದುಬರುವುವು. ಹೀಗೆ, ಪರಿವರ್ತನೆಯಿಂದ ಶಕ್ತಿ ಹೆಚ್ಚಾಗಿ ಶಕ್ತಿಸಂಸ್ಥಿತಿನಿಯಮದ ಉಲ್ಲಂಘನೆಯೂ ಆಯಿತೆಂದು ಹೇಳಬಹುದು.

ಮೇಲಿನ ಒಂದೇ ಪರಿವರ್ತನೆಯಲ್ಲಿ ಪರಿವರ್ತಿಸಲ್ಪಟ್ಟ ಪರಮಾಣುಗಳ ತೂಕಕ್ಕಿಂತಲೂ ಪರಿಣಮಿಸಿದ ಪರಮಾಣುವಿನ ತೂಕ ಕಡಮೆ. ಇದು ಪರಿಣಮಿಸಿದ ಪರಮಾಣುವಿನ ಶಕ್ತಿಮಾತ್ರ ಹೆಚ್ಚಾಗಿ ಕಂಡುಬರುತ್ತದೆ.

ತೂಕ ಮತ್ತು ಶಕ್ತಿಸಂಸ್ಥಿತಿ ನಿಯಮದ ವಿರೋಧವನ್ನು ಐನ್‌ಸ್ಟಿನನು ತಿಳುಹಿಸಿದನು. ಆತನ ತತ್ವದಂತೆ ಶಕ್ತಿ ಮತ್ತು ತೂಕಗಳಲ್ಲಿ ರೂಪಭೇದವಿದ್ದರೂ ಅವೆರಡೂ ಪರಸ್ಪರ ಪರಿವರ್ತಿತವಾಗಬಹುದು. ಆ ಪರಿವರ್ತನೆಯು ಕೆಳಗಿನ ಸಮೀಕರಣದಿಂದ ವಿಶದವಾಗುವುದು.—

$$E = mc^2$$

E = ಶಕ್ತಿ, m = ತೂಕ, c = ಬೆಳಕಿನ ವೇಗ

ಮೇಲಿನ ಸಮೀಕರಣದ ಮೇರೆಗೆ ಒಂದು ಗ್ರಾಮ್ ತೂಕದಿಂದ ೯ × ೧೦^೨೦ ಅರ್ಗ್ ಶಕ್ತಿ ನಿರ್ಮಾಣವಾಗುವುದು. ಈ ಶಕ್ತಿ ೩೩ ಗಂಟೆಗಳವರೆಗೂ ೧೦ ಅಶ್ವಶಕ್ತಿಯಷ್ಟು ಇರುವುದು.

ಶಕ್ತಿ ಮತ್ತು ತೂಕಗಳ ಪರಿವರ್ತನೆಯ ತತ್ವವನ್ನು ಒಪ್ಪಿದರೆ, ಲಿಥಿಯಂ ಮತ್ತು ಜಲಜನಕಗಳ ಪರಿವರ್ತನೆಯಲ್ಲಾಗುವ ಸಂಸ್ಥಿತಿನಿಯಮದ ವಿರೋಧವನ್ನು ದೂರ ಮಾಡಬಹುದು. ತೂಕವು ಕಡಮೆ ಆದರೆ ಶಕ್ತಿಯು ಹೆಚ್ಚಾಗುವುದು. ಆದುದರಿಂದ ಹೊಸ ರಸಾಯನಶಾಸ್ತ್ರದಲ್ಲಿ ಸಂಸ್ಥಿತಿನಿಯಮಗಳ ಪಾಲನೆ ಬೇರೆ ಬೇರೆಯಾಗಿ ಆಗುವುದಿಲ್ಲ. ಅವೆರಡೂ ನಿಯಮಗಳ ಪಾಲನೆ ಐನ್‌ಸ್ಟೀನ್‌ನ ತತ್ವಕ್ಕನುಸರಿಸಿ ಆಗುವುದು.

ಮೇಲಿನ ವಿವರಣೆಯ ಮೇರೆಗೆ ಒಂದು ಲೋಹದ—ಸೂಕ್ಷ್ಮವಾಗಿ ತೂಕಕ್ಕೆ ಬರುವಷ್ಟು—ಪರಿವರ್ತನೆಯನ್ನು ಮಾಡಿದರೆ ಅಪಾರವಾದ ಶಕ್ತಿ ಸಿಕ್ಕುತ್ತದೆ. ಆದರೆ ಇಂದಿಗೂ ಲೋಹಪರಿವರ್ತನೆಯ ಕಾರ್ಯವು ಪರಮಾಣುರೂಪದಲ್ಲಿಯೇ ಇದ್ದ ಮೂಲಕ ಇಷ್ಟು ಶಕ್ತಿ ದೊರಕಿಸುವುದು ಶಕ್ಯವಾಗಿಲ್ಲ. ಅದಲ್ಲದೆ ಇಲ್ಲಿಯ ವರೆಗೂ ಲೋಹಪರಿವರ್ತನೆಯ ಸಂಪೂರ್ಣ ಸಿದ್ಧಾಂತವು ಬೆಳಕಿಗೆ ಬಂದಿಲ್ಲ. ಆದರೆ ಇಂಗ್ಲೆಂಡ್ ಮತ್ತು ಅಮೇರಿಕಾ ದೇಶಗಳ ವೈಜ್ಞಾನಿಕರು ಒಂದು ಲೋಹದ ಕೆಲವು ಪರಮಾಣುಗಳನ್ನು ಇನ್ನೊಂದು ಲೋಹದ ಪರಮಾಣುವಾಗಿ ಪರಿವರ್ತಿಸಿದ್ದಾರೆ. ಆಯಾ ಪರಿವರ್ತನೆಯಲ್ಲಿ ಉಪಯೋಗಿಸುವ ಹಲವಾರು ಕಣಗಳುಂಟು. ಆ ಕಣಗಳ ಸ್ಥೂಲ ವಿವೇಚನೆ ಕೆಳಗೆ ಕೊಡಲಾಗಿದೆ.

ಲೋಹಪರಿವರ್ತನೆಯಲ್ಲಿ ಉಪಯುಕ್ತವಾದ ಕಣಗಳು

(i) ಋಣವಿದ್ಯುತ್ಕಣ—ಇದು ಋಣವಿದ್ಯುದಂಶವುಳ್ಳ ಕಣ. ಈ ಕಣದ ವಿದ್ಯುದಂಶವನ್ನು ಪರಮಾಣು ಪ್ರತಿಕ್ರಿಯೆಗಳಲ್ಲಿ ಮೂಲಪ್ರಮಾಣವೆಂದು ಭಾವಿಸುತ್ತಾರೆ. ಇದರ ತೂಕವು ಜಲಜನಕ ಪರಮಾಣುವಿನ ತೂಕದ $\frac{೧}{೧೮೪೦}$ ಭಾಗವಾಗಿದೆ. ಇದರ ವಿದ್ಯುದಂಶ ಮತ್ತು ತೂಕದ ಪರಿಮಾಣವನ್ನು ಸರ್ ಜೆ. ಜೆ. ಥಾಂಸನ್ ಅವರ ಪ್ರಯೋಗದಿಂದ ಗೊತ್ತುಮಾಡಬಹುದು. ಇದರ ವಿದ್ಯುದಂಶವನ್ನು ಪ್ರೊ. ಮಿಲಿಕನ್ ರವರ 'ತೈಲಬಿಂದು' ಪ್ರಯೋಗದಿಂದ ಗೊತ್ತುಮಾಡಬಹುದು.

(ii) ಧನವಿದ್ಯುತ್ಕಣ—ಇದು ಧನವಿದ್ಯುದಂಶವುಳ್ಳ ಕಣ. ಇದರ ತೂಕ ಋಣ ಕಣದಷ್ಟೇ. ಈ ಕಣದ ಸ್ವತಂತ್ರ ಅಸ್ತಿತ್ವವು ತೀರ ಕಡಮೆಯಾದುದರಿಂದ ಮೊನ್ನೆ ತಾನೆ ಇದನ್ನು ಶೋಧಿಸಿದ್ದಾರೆ.

(iii) ಧನಕಣ—ಜಲಜನಕ ಪರಮಾಣುವಿನ ಕೇಂದ್ರ. ಇದರ ತೂಕವನ್ನು ಸ್ಥೂಲವಾಗಿ ಒಂದು ಎಂದು ಭಾವಿಸುತ್ತಾರೆ.

(iv) ಆಲ್ಫಾಕಣ—ಇದು ಅಕರ್ಾನಿಲದ ಕೇಂದ್ರ. ಇದರ ತೂಕಸಂಖ್ಯೆ ೪. ಎರಡು ಮಾನವುಳ್ಳ ಧನವಿದ್ಯುದಂಶವಿದೆ.

(v) ಶೂನ್ಯಕಣ—ಇದು ಧನಕಣದಷ್ಟೇ ತೂಕವಿರುವ, ಆದರೆ ಯಾವ ವಿಧವಾದ ವಿದ್ಯುದಂಶವೂ ಇಲ್ಲದ, ಕಣ. ಸಂಚರಿಸುವ ಕಣದ ವಿದ್ಯುಚ್ಛಕ್ತಿಯು ಇನ್ನೊಂದು ಪರಮಾಣುವಿನಲ್ಲಿರುವ ವಿದ್ಯುತ್ ಕ್ಷೇತ್ರದಲ್ಲಿ ಸೇರಿದರೆ, ಆ ಶಕ್ತಿಗಳ ಪ್ರತಿಕ್ರಿಯೆಯಿಂದ ವಿದ್ಯುದಂಶವುಳ್ಳ ಅಣುಗಳು ಹುಟ್ಟುವುವು. ಇವನ್ನು ವಿದ್ಯುದಣು ಎನ್ನಬಹುದು. ಶೂನ್ಯಕಣದಲ್ಲಿ ವಿದ್ಯುದಂಶವು ಇಲ್ಲದಿರುವುದರಿಂದ ಇದು ಹರಿದಾಡುವ ಭಾಗದಲ್ಲಿ ವಿದ್ಯುದಣುಗಳು ಹುಟ್ಟುವುದಿಲ್ಲ. ಇದರ ಸುತ್ತಮುತ್ತಲೂ

ವಿದ್ಯುತ್ ಕ್ಷೇತ್ರವು ಇಲ್ಲದಿರುವುದರಿಂದ ಇದು ವಿರೋಧವಿಲ್ಲದೆಯೇ ಪರಮಾಣುವಿನ ಒಳಭಾಗದಲ್ಲಿ ಹೊಕ್ಕು, ಅದರಲ್ಲಿಯ ಧನಕಣವನ್ನು ತಗುಲಿ ಅದನ್ನು ಪರಮಾಣುವಿನಿಂದ ಹೊರತಳ್ಳುವುದು. ಶೂನ್ಯಕಣದ ಶಕ್ತಿಯನ್ನು ಪಡೆದು ಧನಕಣವು ಅತ್ಯಂತ ವೇಗದಿಂದ ಹೊರಗೆ ಸಿಡಿಯುವುದು. ಇದರ ಚಿತ್ರವನ್ನು ಸಿ. ಟಿ. ಆರ್. ವಿಲ್ಸನ್‌ರವರ ಮೇಘಮಂದಿರದಲ್ಲಿ ತೆಗೆಯಬಹುದು. ಶೂನ್ಯಕಣದ ಉತ್ಪಾದನೆಗಾಗಿ ಬೆರಿಲಿಯಂ ಲೋಹದ ಪುಡಿಯಲ್ಲಿ ರೇಡಿಯಂ ಪ್ರಕಾಶನವನ್ನು ಬೆರಸುವರು. ಅವುಗಳ ಕ್ರಿಯೆಯಿಂದ ಇಂಗಾಲದ ಒಂದು ಪರಮಾಣುವೂ, ಒಂದು ಶೂನ್ಯಕಣವೂ ಹುಟ್ಟುವುವು.

$$\overset{9}{\underset{4}{Be}} + \overset{4}{\underset{2}{He}} \longrightarrow \overset{12}{\underset{6}{C}} + \overset{1}{\underset{0}{n}}$$

$\overset{1}{\underset{0}{n}}$ ಎಂದರೆ ಶೂನ್ಯವಿದ್ಯುದಂಶ ಮತ್ತು ೧ ತೂಕವುಳ್ಳ ಕಣ.

“ಹೊಸ ರಸಾಯನಶಾಸ್ತ್ರ”ದ ಸಲಕರಣೆಗಳು

ಕೇಂದ್ರ ಕ್ರಿಯೆಗಳಲ್ಲಿ ಕೆಲವೇ ಪರಮಾಣುಗಳು ಭಾಗವಹಿಸುವುವು. ಅವುಗಳ ಸಂಖ್ಯೆ ಹತ್ತರಿಂದ ೧೦೦ರ ವರೆಗೂ ಇದೆ. ಇವುಗಳ ಗುರುತು ಹಿಡಿಯಬೇಕಾದರೆ ಅತ್ಯಂತ ಸೂಕ್ಷ್ಮವಾದ ಸಲಕರಣೆಗಳು ಬೇಕು. ಕೇಂದ್ರ ಕ್ರಿಯೆಗಳಿಂದ ಹುಟ್ಟುವ ಕಣಗಳು ಅಪಾರವಾದ ಶಕ್ತಿಯನ್ನು ಪಡೆದು, ಅತಿ ಹೆಚ್ಚಾದ ವೇಗದಿಂದ ಹೊರಗೆ ಸಿಡಿಯುವುವು. ಈ ಶಕ್ತಿಯ ಮೂಲಕ ಇವುಗಳ ಪಥವೇ ವಿದ್ಯುದಂಶವನ್ನು ಹೊಂದುವುದು. ಕಣಗಳ ಈ ಸ್ವಭಾವದ ಉಪಯೋಗದಿಂದ ಅವುಗಳ ಗುರುತು ಹಚ್ಚುವ ಸಲಕರಣೆಗಳನ್ನು ಸಿದ್ಧಪಡಿಸಿದ್ದಾರೆ. ಇವುಗಳಲ್ಲಿ ಸಿ. ಟಿ. ಆರ್. ವಿಲ್ಸನ್‌ರವರ ಮೇಘಮಂದಿರವು ಮಹತ್ವದ್ದಾಗಿದೆ.

ಆವಿಯು ನೀರಾಗಬೇಕಾದರೆ ಅದಕ್ಕೆ ಕಣಗಳ ಆಸರೆ ಬೇಕು. ಒಂದು ಕೊಳವೆಯಲ್ಲಿ ವಿದ್ಯುದಣುಗಳನ್ನು ಹುಟ್ಟಿಸಿ ಅದರಲ್ಲಿ ಗಾಳಿಯ ಪ್ರಸಾರದಿಂದ ಆವಿಯನ್ನು ಹುಟ್ಟಿಸುವರು. ಆವಿಯು ನೀರಾಗಬೇಕಾದರೆ, ಅದು ವಿದ್ಯುದಣುಗಳ ಆಸರೆಯನ್ನು ಪಡೆಯುವುದು. ವಿದ್ಯುದಂಶವುಳ್ಳ ನೀರಿನ ಗುಳ್ಳೆಗಳೊಳಗಿಂದ ಅತ್ಯಂತ ಶಕ್ತಿಯುಕ್ತ ವಿದ್ಯುತ್ಕಣಗಳು ಸಂಚರಿಸಿದರೆ ನೀರಿನ ಗುಳ್ಳೆಗಳು ಮಿಂಚುವುವು. ಅವುಗಳ ಚಿತ್ರವನ್ನು ತೆಗೆದರೆ, ಅದು ವಿದ್ಯುತ್ಕಣದ ಪಥದ ಚಿತ್ರವೇ ಆಗಿರುವುದು. ಪಥದ ಉದ್ದಳತೆಯಿಂದ ಅದರ ಶಕ್ತಿ, ವೇಗ, ಮುಂತಾದವುಗಳನ್ನು ಲೆಕ್ಕಾಚಾರಮಾಡಬಹುದು.

ರೇಡಿಯಂ ಸಿ. ಎಂಬ ಸ್ವಯಂಪ್ರಭೆಯುಳ್ಳ ಲೋಹದಿಂದ ೭೭ಲಕ್ಷ ಓಲ್ಟುಗಳ ಶಕ್ತಿಯುಳ್ಳ ಕಣಗಳು ಹೊರಗೆ ಸಿಡಿಯುವುವು. ಆದರೆ ಇಂಥ ಲೋಹಗಳು


ಸಿಗುವುದು ಬಹಳ ವಿರಳ. ಒಂದು 'ಮಿಲಿಗ್ರಾಮ್' ರೇಡಿಯಂ ಲೋಹದಿಂದ ೩ ಕೋಟಿ ೭೦ಲಕ್ಷ ಕಣಗಳು ಸಿಡಿದುಬರುವುವು. ಆದರೆ ಲೋಹಪರಿವರ್ತನೆಯ ಪ್ರಯೋಗಗಳಲ್ಲಿ ೧೦ಲಕ್ಷಕ್ಕೆ ಒಂದರಂತೆ ಉಪಯುಕ್ತವಾಗಿ ಕಂಡುಬಂದಿವೆ. ಈ ಕಣಗಳಿಗೆ ಸಮವಾಗಿರುವ ವಿದ್ಯುತ್ಪ್ರವಾಹವು ೧.೨ $\times$ ೧೦$^{-೧೧}$ ಆಂಪೇರ್. ೧೫ ವರ್ಷಗಳ ಹಿಂದೆ ಇಷ್ಟು ಶಕ್ತಿಯುಳ್ಳ ಕಣಗಳನ್ನು ಹುಟ್ಟಿಸುವುದು ಅಶಕ್ಯವಾಗಿದ್ದಿತು. ಲಂಡನ್ ವಿಶ್ವವಿದ್ಯಾನಿಲಯದ ವೈಜ್ಞಾನಿಕರಾದ ಗುರ್ನೆ, ಕಾರ್ಡರ್, ಗ್ಯಾಮೋ, ಕಾಕ್ರಾಫ್ಟ್, ವಾಲ್ಟರ್, ಕೇಂಬ್ರಿಜ್ಜಿನ ರದರ್‌ಫೊರ್ಡ್, ಆಲಿಫಂಟ್ ಕರ್ಸೆ, ಅಮೇರಿಕದ ಕ್ಯಾಲಿಫೋರ್ನಿಯ ವಿಶ್ವವಿದ್ಯಾನಿಲಯದ ಪ್ರೊ. ಇ. ಓ. ಲಾರೆನ್ಸ್, ಲಿವಿಂಗ್‌ಸ್ಟನ್ ಮುಂತಾದವರು ತಮ್ಮ ತಮ್ಮ ವಿವಿಧ ಶೋಧನೆ ಮತ್ತು ಸಲಕರಣೆಗಳ ಮೂಲಕ, ಮೇಲೆ ವಿವರಿಸಿದ ಶಕ್ತಿಯುಳ್ಳ ಕಣಗಳನ್ನು ಹುಟ್ಟಿಸಿರುತ್ತಾರೆ.

ಪ್ರಬಲ ಒತ್ತಡದ ಸಲಕರಣೆಗಳು

ಪ್ರಬಲ ಒತ್ತಡದ ಸಲಕರಣೆಗಳನ್ನು ಒಂದು ಕೋವಿ ಎಂದು ಭಾವಿಸಿದರೆ, ಧನಕಣ ಶೂನ್ಯಕಣ ಮುಂತಾದವುಗಳು ಆ ಕೋವಿಯ ಗುಂಡುಗಳೆನ್ನಬಹುದು. ಆದುದರಿಂದ ಈ ಕಣಗಳು ಪ್ರಬಲ ಒತ್ತಡದ ಸಲಕರಣೆಗಳಲ್ಲಿ ಹೆಚ್ಚಾಗಿ ಶಕ್ತಿ ಮತ್ತು ವೇಗವನ್ನು ಪಡೆದು ಯಾವುದೇ ಲೋಹದ ಪರಮಾಣುವಿಗೆ ತಗುಲಿದರೆ, ಅವು ಅದನ್ನು ಭೇದಿಸಿ ಅದರಲ್ಲಿಯ ಋಣವಿದ್ಯುತ್ಕಣಗಳನ್ನು ಹೊರತಳ್ಳುವುವು. ಒಂದು ಪರಮಾಣುವಿನ ಕೇಂದ್ರದ ಸುತ್ತಲೂ ತಿರುಗುವ ಋಣಕಣಗಳ ಸಂಖ್ಯೆ ಹೆಚ್ಚು ಕಡಮೆಯಾದರೆ ಆ ಪರಮಾಣುವು ಇನ್ನೊಂದು ಪರಮಾಣುವಾಗಿ ಪರಿವರ್ತಿತವಾಗುವುದು. ಆದುದರಿಂದ ಲೋಹಪರಿವರ್ತನೆಯಲ್ಲಿ ಮಹತ್ವದ ಭಾಗವೆಂದರೆ ಪ್ರಬಲ ಒತ್ತಡಗಳನ್ನು ಹುಟ್ಟಿಸುವುದು.

ಕೇಂಬ್ರಿಜ್ ವಿಶ್ವವಿದ್ಯಾನಿಲಯದಲ್ಲಿ ಕಾಕ್ರಾಫ್ಟ್ ಮತ್ತು ವಾಲ್ಟನ್ ಎಂಬ ಇಬ್ಬರು ವೈಜ್ಞಾನಿಕರು ಪ್ರಬಲ ಒತ್ತಡವನ್ನು ಹುಟ್ಟಿಸುವ ಒಂದು ಸಲಕರಣೆಯನ್ನು ಸಿದ್ಧಪಡಿಸಿದರು. ಅದರ ಮೂಲತತ್ವವನ್ನು ಕೆಳಗೆ ವಿವರಿಸಲಾಗಿದೆ—

K_1, K_2, K_3 ಮತ್ತು X_1, X_2 ಇವು ವಿದ್ಯುತ್ಸಂಚಯಪಾತ್ರೆಗಳು. K_1, K_2, K_3 ಗಳನ್ನು X_1, X_2 ಗಳಿಗೆ ಎರಡು ರೀತಿಯಲ್ಲಿ ಜೋಡಿಸಬಹುದು—ಒಂದು S'_1, S'_2, S'_3 ಎಂಬ ಅಖಂಡ ರೇಖೆಯ ಮೂಲಕ, ಇನ್ನೊಂದು S_1, S_2, S_3 ಮುಂತಾದ ಖಂಡ ರೇಖೆಗಳ ಮೂಲಕ. K_3 ಸಂಚಯ ಪಾತ್ರೆಯನ್ನು ೧ ಲಕ್ಷ ಓಲ್ಟಿನ ಪೂರೈಕೆಯಂತ್ರಕ್ಕೆ ಜೋಡಿಸುವರು. ಇದನ್ನು ಖಂಡರೇಖೆಯ ಮೂಲಕ ಜೋಡಿಸಿದರೆ ಇದರಲ್ಲಿ ವಿದ್ಯುಚ್ಛಕ್ತಿಯ ಕೆಲಭಾಗವು X_2 ಸಂಚಯ ಪಾತ್ರೆಯಲ್ಲಿ ಸೇರುವುದು. ಅನಂತರ ಅಖಂಡ




K 3 = ಪೂರೈಕೆ.
(From Proceedings of the Royal Society)

ರೇಖೆಯೊಂದಿಗೆ ಜೋಡಿಸಿದರೆ X_2 ಸಂಚಯ ಪಾತ್ರೆಯಲ್ಲಿಯ ಶಕ್ತಿ K_2 ಪಾತ್ರೆಯಲ್ಲಿ ಸೇರುತ್ತದೆ. ಈ ವಿಧದಿಂದ ಹತ್ತಾರು ಸಲ ಜೋಡಿಸಿದರೆ K_1 ಪಾತ್ರೆಯ ಒತ್ತಡವು K_3 ಪಾತ್ರೆಯ ಒತ್ತಡದ ಮೂರರಷ್ಟಾಗುವುದು. ಈ ವಿಧಾನದಿಂದ ಪ್ರಬಲವಾದ ಒತ್ತಡವನ್ನು ಹುಟ್ಟಿಸಬಹುದು.

ಕ್ಯಾಲಿಫೋರ್ನಿಯ ವಿಶ್ವವಿದ್ಯಾನಿಲಯದ ಪ್ರೊ. ಇ. ಓ. ಲಾರೆನ್ಸರು ಮತ್ತು ಡಾ|| ಲಿವಿಂಗ್‌ಸ್ಟನ್‌ರವರು ಪ್ರಬಲ ಒತ್ತಡದ ಕಣಗಳ ಉತ್ಪಾದನೆಗಾಗಿ ' ಸೈಕ್ಲೊಟ್ರಾನ್ ' ಎಂಬ ಸಲಕರಣೆಯನ್ನು ಕಟ್ಟಿದರು. ಅದಕ್ಕಾಗಿಯೆ ೧೯೩೯ರಲ್ಲಿ ಪದಾರ್ಥ ವಿಜ್ಞಾನಶಾಸ್ತ್ರದ ' ನೋಬೆಲ್ ಪಾರಿತೋಷಕವು ' ಪ್ರೊ. ಲಾರೆನ್ಸರಿಗೆ ದೊರಕಿತು.

ಇದರಲ್ಲಿ ಎ ಬಿ ಎಂಬ ಎರಡು ಅರ್ಧಗೋಲಾಕೃತಿಯ ಪೆಟ್ಟಿಗೆಗಳಿವೆ. ಇವುಗಳ ಅಂಚನ್ನು ವಿದ್ಯುತ್ಪ್ರವಾಹವನ್ನು ತಡೆಯುವ ಪದಾರ್ಥದಿಂದ ಜೋಡಿಸುವರು. ಎ ಬಿ ಗಳಲ್ಲಿ ೧೦ ಸಾವಿರ ಓಲ್ಟುಗಳ ಒತ್ತಡದ ವ್ಯತ್ಯಾಸವನ್ನು ಇಟ್ಟಿರುತ್ತಾರೆ. ಗೋಲದ ಮಧ್ಯಬಿಂದುವಿನಲ್ಲಿ ಧನಕಣವನ್ನಾಗಲಿ ಶೂನ್ಯಕಣವನ್ನಾಗಲಿ ಹುಟ್ಟಿಸುವ ಯೋಜನೆಯನ್ನು ಮಾಡಿರುತ್ತಾರೆ. ಈ ಗೋಲವನ್ನು ೮೫ ಟನ್ ಭಾರದ ಅಯಸ್ಕಾಂತದ ನಡುವೆ ಇಡುವರು. ಈ ಅಯಸ್ಕಾಂತದ ಪ್ರಬಲಕ್ಷೇತ್ರದ ಮೂಲಕ ಧನಕಣವು ಚಿತ್ರದಲ್ಲಿ ತೋರಿಸಿದಂತೆ ವರ್ತುಳಾಕೃತಿಯಲ್ಲಿ ಚಲಿಸುವುದು. ಎ ಮತ್ತು ಬಿ ಅರ್ಧಗೋಲಗಳ ವಿದ್ಯುದಂಶವನ್ನು ಅತಿವೇಗದಿಂದ ಒಂದು ಕ್ರಮದಲ್ಲಿ ಮಾರ್ಪಡಿಸು

ತ್ತಾರೆ. ಆದುದರಿಂದ ಧನಕಣವು ಎ ಭಾಗದಿಂದ ಬಿ ಭಾಗದಲ್ಲಿ ಬಂದರೆ ಅದರ ವೇಗವು ಹೆಚ್ಚಾಗಿ ಅದರ ಶಕ್ತಿಯು ಬೆಳೆಯುತ್ತದೆ. ವೇಗವು ಹೆಚ್ಚಾಗುತ್ತ ಹೋದಂತೆ ಧನಕಣವು ಹೆಚ್ಚಿನ ವ್ಯಾಸದ ವರ್ತುಳದಲ್ಲಿ ಚಲಿಸುವುದು. ಕೊನೆಗೆ ಪೂರ್ವೈಕೆಯ



(*From Physical Review*)

ಒತ್ತಡದ ೧೦೦ ರಷ್ಟು ಹೆಚ್ಚಾದ ಒತ್ತಡದ ಶಕ್ತಿಯಿಂದ 'ಲ' ಬಿಂದುವಿನ ಹತ್ತಿರ ಬರುವುದು. ಅಲ್ಲಿ ಪರಿವರ್ತಿಸುವ ಲೋಹದ ಪರಮಾಣುವನ್ನಿಟ್ಟರೆ ಧನಕಣವು ಅದನ್ನು ಭೇದಿಸಿ ಅದರಲ್ಲಿಯ ಋಣಕಣಗಳನ್ನು ಹೊರತಳ್ಳುವುದು. ಪರಮಾಣುವಿನಲ್ಲಿರುವ ಋಣವಿದ್ಯುತ್ಕಣಗಳ ಸಂಖ್ಯೆ ಕಡಮೆಯಾದರೆ ಪರಮಾಣು ಪರಿವರ್ತಿತವಾಗಿ ಇನ್ನೊಂದು ಲೋಹದ ಪರಮಾಣುವಾಗುವುದು.

ಆದ್ದರಿಂದ, ಲೋಹಪರಿವರ್ತಕರ ಕನಸು ನನಸು ಆಗುವ ಯುಗವು ಬೇಗನೆ ಬರುವುದೇನು ?

ಪದ್ಮನಾಭ ಪುರಾಣಿಕ.

ಪಾರಿಭಾಷಿಕ ಶಬ್ದಗಳು

ಅರ್ಕಾನಿಲ = Helium.

ಅಶ್ವಶಕ್ತಿ = Horse power.

ಇಂಗಾಲ = Carbon.

ಋಣವಿದ್ಯುತ್ಕಣ = Electron.

ಕೇಂದ್ರಕ್ರಿಯೆ = Nuclear reaction.

ಚಲನಶಕ್ತಿ = Kinetic energy.

ತೂಕಸಂಸ್ಥಿತಿಯ ನಿಯಮ = Law of Conservation of mass.

ತೂಕಸಂಖ್ಯೆ = Atomic number.

ತೈಲಬಿಂದು = Oil drop.

ಧನಕಣ = Proton.

ಧನವಿದ್ಯುತ್ಕಣ = Positron.

ಪರಮಾಣುತೂಕ = Atomic weight.

ಪ್ರಕಾಶನ = Emanation.

ಪ್ರಬಲ ಒತ್ತಡ = High voltage.

ಪೂರೈಕೆಯ ಒತ್ತಡ = Supply voltage.

ಮೇಘಮಂದಿರ = Cloud chamber.

ಲೋಹಪರಿವರ್ತಕರು = Alchemists.

ವಿದ್ಯುದಣು = Ion.

ಶಕ್ತಿಸಂಸ್ಥಿತಿಯ ನಿಯಮ = Law of Conservation of energy.

ಶೂನ್ಯಕಣ = Neutron.

ಸಕ್ಷೇತ್ರ = Isotope.

ಸ್ವಯಂಪ್ರಭೆ = Radio activity.

ಪ್ರಮಾಣ ಗ್ರಂಥಗಳು

1. *The Mechanism of Nature.*—By Andrade.
2. *The New Chemistry.*—By Andrade.
3. *Ramification of Chemistry.*—A. W. Stewart.
4. *Electron.*—By Millikan.
5. *Science and Human Experience.*—By Herbert Dingle.
6. *Encyclopædia Britannica.*—Volume II.

ಅತ್ತೆ

ಅತ್ತೆಯೆಂದರೆ ಹೆಂಡತಿಯ ತಾಯಿ, ಅಥವಾ ಗಂಡನ ತಾಯಿಯೇ ಅಲ್ಲ. ತಂದೆಯ ತಂಗಿ, ಅಥವಾ ಸೋದರಮಾವನ ಹೆಂಡತಿಯೂ ಆಗಬೇಕಾಗಿಲ್ಲ. ಮುದುಕಿ, ಮಡಿಹೆಂಗಸು, ಆಗಿರಬೇಕೆಂಬ ನಿರ್ಬಂಧವಿಲ್ಲ. ಕೊನೆಗೆ ಹೆಂಗಸೂ ಆಗಬೇಕಾಗಿಲ್ಲ. ಅದೊಂದು ಮನುಷ್ಯವ್ಯಕ್ತಿಗಿಂತಲೂ ಮನಸ್ಸಿನ ವೃತ್ತಿ. ನಮಗೆ ಪರಿಚಿತರೊಬ್ಬರು, ಗಣ್ಯರಾದ ವ್ಯಕ್ತಿಗಳು—ಸರಕಾರದ ದೊಡ್ಡ ಉದ್ಯೋಗಸ್ಥರು—ವಿದ್ಯಾವಂತರು—ಷರಾಯಿ ಬೂಟ್ಸು ಧರಿಸುವ ಆಧುನಿಕ ದೊಡ್ಡ ಮನುಷ್ಯರು—ಎರಡು ಸಾರಿ ಸೀಮೆಗೆ ಹೋಗಿಬಂದವರು—ಗಂಡಸರು—ಇದ್ದಾರೆ; ಅವರನ್ನು ನಮ್ಮ ಗೋಷ್ಠಿಯಲ್ಲಿ 'ಅತ್ತೆ' ಎಂದೇ ಕರೆಯುತ್ತೇವೆ—ಅಲ್ಲ, ಹೇಳಿಕೊಳ್ಳುತ್ತೇವೆ. ಏಕೆಂದರೆ ಎದುರೆದುರಿಗೆ ಅವರನ್ನು ಹಾಗೆಂದು ಕರೆಯಲು ನಮಗೆ ಯಾರಿಗೂ ಧೈರ್ಯವಿಲ್ಲ. ಕಛೇರಿಯಲ್ಲಿ ಸಾಮಾನ್ಯವಾಗಿ ಅಧಿಕಾರಿಗಳು ಅತ್ತೆ, ಗುಮಾಸ್ತರು ಸೊಸೆ. ಆಫೀಸರು ಅಪ್ರಯೋಜಕನಾಗಿದ್ದರೆ ಗುಮಾಸ್ತರೇ ಅತ್ತೆ. ಮನೆಯಲ್ಲಿ, ಸೊಸೆ ಮೆತ್ತಗಿದ್ದರೆ ಅತ್ತೆ ಅತ್ತೆಯಾಗಿರುವುದಿರಲಿ, ಅತ್ತಿಗೆ ನಾದಿನಿಯರು ಮುಂತಾಗಿ ಮನೆಮಂದಿಯೆಲ್ಲಾ, ಹುಡುಗರು ಮಕ್ಕಳು ಸಹ, ಅತ್ತೆಯರೇ! ಸೊಸೆ ಗಟ್ಟಿಗಿತ್ತಿಯಾದರೆ ಅವಳೇ ಅತ್ತೆ; ಅತ್ತೆ, ಮಾವ, ಅತ್ತಿಗೆ, ನಾದಿನಿ, ಗಂಡ, ಮಕ್ಕಳು ಎಲ್ಲಾ ಸೊಸೆ.

ಅತ್ತೆಯ ಮುಖ್ಯಲಕ್ಷಣ ದರ್ಪ; ಆಳಬೇಕು, ಅನ್ನಬೇಕು, ಎಂಬುದೇ ಪ್ರಧಾನವಾದ ಮನೋವೃತ್ತಿ. ಅತ್ತೆಯಾಗಿ, ತನ್ನ ಹಿರಿಯತನವನ್ನು ಸ್ಥಾಪಿಸದಿದ್ದರೆ ಏನು ಪ್ರಯೋಜನ? ಅದರ ಪರಿಣಾಮ ಏನೇ ಆಗಲಿ, ಯಾರಿಗಾದರೂ ಮೂಗು ಹೋಗಲಿ, ಯಾರಿಗಾದರೂ ಕಿವಿ ಹರಿಯಲಿ, ಯಾರಾದರೂ ಮುನಿಸಿಕೊಳ್ಳಲಿ, ಯಾರಾದರೂ ಉಪವಾಸಮಾಡಲಿ, ತನ್ನ ಮಾತನ್ನು ನಡಸದಿದ್ದರೆ ಅದೆಂಥ ಅತ್ತೆಗಿರಿ? ಮುಂದೆ ಬಂದರೆ ಹಾಯಬೇಕು, ಹಿಂದೆ ಬಂದರೆ ಒದೆಯಬೇಕು, ಅತ್ತಲಾಗಿ ಬಿಡಕೂಡದು, ಇತ್ತಲಾಗಿ ಬಿಡಕೂಡದು, ಹೀಗೆ ಕಾಡಿಸದಿದ್ದರೆ ತನ್ನ ದೊಡ್ಡಸ್ತಿಕೆ ಏನು ಉಳಿಯಿತು? ದಿನಕ್ಕೊಂದು ಸಲವಾದರೂ, ಯಾರೊಡನೆಯಾದರೂ—ಕೊನೆಗೆ ಬೀದಿಬಸವನೊಡನೆ—ಕಲಕಲನೆ ಜಗಳವಾಡದಿದ್ದರೆ ತಿಂದ ಅನ್ನ ಮೈ ಹತ್ತಬೇಕು ಹೇಗೆ? ತಾಯಿ, ತಂದೆ, ಅಕ್ಕ, ತಂಗಿ, ಅಣ್ಣ, ತಮ್ಮ, ಗಂಡ, ಮಕ್ಕಳು, ಮೊಮ್ಮಕ್ಕಳು ಯಾರೊಡನೆ

ಯಾದರೂ ಕಾದಿ ಗೆಲ್ಲದಿದ್ದರೆ, ಕಾಲಕೂಟ ಉಕ್ಕಿ ಸುರಿದು ವಾಂತಿಯಾಗದೆ ಹೋದರೆ, ಸಂಕಟ. ಅದಕ್ಕೆ ದಿನದಲ್ಲಿ ಯಾರು ಮುಂಚೆ ಬಲಿಯಾಗುತ್ತಾರೋ ಅವರೇ ಪ್ರಧಾನಪಶುಗಳು; ಅವರ ತ್ಯಾಗದಿಂದ ಮಿಕ್ಕವರಿಗೆ ಮುಕ್ತಿಯಾಗುವುದೂ ಉಂಟು. ಯಾರೂ ಬಲಿಯಾಗಿ ಸಿಕ್ಕದಿದ್ದರೆ, ದೀಕ್ಷಿತರು ಒಬ್ಬರೇ ಬಯಲಲ್ಲಿ ನಿಂತೋ ಒಂದು ಮೂಲೆಯಲ್ಲಿ ಕುಳಿತೋ, ಮುಸುಕು ಹಾಕಿಕೊಂಡು ಮಲಗಿಯೋ ಒದರಿ, ಗೊಣಗಿ, ಆತ್ಮಯಜ್ಞದಿಂದ ಎದೆಯನ್ನು ಹಗುರಮಾಡಿಕೊಳ್ಳಬೇಕು; ಅಂದಿನ ಹೊಸ ಅಸಮಾಧಾನವೇನೂ ಇಲ್ಲದಿದ್ದರೂ, ಹಳೆಯದನ್ನಾದರೂ ಕೆರೆದು ಗಾಯಮಾಡಿಕೊಂಡು ಕೂಗಾಡಬೇಕು, ತನ್ನ ಸಮಾನ ದುರದೃಷ್ಟಶಾಲಿಗಳೇ ಇಲ್ಲ ಎಂದು ಗೋಳಾಡಬೇಕು, ತನ್ನ ಕಷ್ಟವನ್ನು ಯಾರೂ ಗಮನಿಸಿ 'ಅಯ್ಯೋ!' ಎನ್ನುವುದಿಲ್ಲವಲ್ಲ ಎಂದು ಪ್ರಪಂಚವನ್ನೇ ದೂರಬೇಕು. ಕೊನೆಗೆ, ತಾನೇ ವಾಸಿ, ತನ್ನ ಸಮಾನ ಸಹನೆಯವರಿಲ್ಲ, ಒಳ್ಳೆಯವರಿಲ್ಲ, ಉದಾರಿಗಳಿಲ್ಲ, ಕಲ್ಯಾಣಗುಣ ಪರಿಪೂರ್ಣರಿಲ್ಲ ಎಂದು ಪ್ರಶಂಸೆ ಮಾಡಿಕೊಳ್ಳಬೇಕು. ಇವು 'ಅತ್ತೆ'ಯ ಕೆಲವು ಸ್ಥೂಲ ಲಕ್ಷಣಗಳು. ಈ ವಿಚಿತ್ರ ವಸ್ತು, ಬುನಾದಿಯಿಂದ ಎಲ್ಲ ದೇಶ ಕಾಲಗಳಲ್ಲಿಯೂ ಸಂಸಾರಕ್ಕೆ ಅಂಟಿಕೊಂಡು ಬಂದಿರುವ ಒಂದು ಬೇನೆ. ಸಾಕ್ರೆಟೀಸನ ಕಾಲದಿಂದ ಮೊದಲುಮಾಡಿಕೊಂಡು ಇಂದಿನ ವರೆಗೆ ಇದಕ್ಕೆ ಯಾರೂ ಮದ್ದನ್ನು ಕಂಡುಹಿಡಿದಿಲ್ಲ. ಇಂಥ ಒಂದು ಅತ್ತೆಯ ದಿನಚರಿಯಲ್ಲಿ ಬೆಳಗ್ಗೆ ಎಚ್ಚರವಾದಾಗಿನಿಂದ ರಾತ್ರಿ ನಿದ್ರೆಹತ್ತುವ ವರೆಗೆ ಜರುಗಬಹುದಾದ ಸಂಗತಿಗಳಲ್ಲಿ ಕೆಲವನ್ನು ಮುಂದೆ ಮಾದರಿಗಾಗಿ ಸೂಚಿಸಿದೆ.

೧

"ಲೋ, ಕಾಫೀ ಕುಡಿದುಹೋಗೋ ಬಂದು! ಮಹಾ ಓದಿ ಪ್ಯಾಸು ಮಾಡೋನು! ಮೂರು ಹೊತ್ತೂ ಒಂದು ಪುಸ್ತಕ ಕೈಲಿ ಹಿಡಿದುಕೊಂಡು, ಬಗ್ಗಿಸಿದ ಕತ್ತು ಎತ್ತದೆ ಬಿಳೀಕಾಗದದ ಮೇಲೆ ಕರೀಗೀಟು ಎಳೀತಾ ಇದ್ದುಬಿಟ್ಟರೆ ಆಗಿಹೋಯಿತು!"

"ನಾನು ನಿತ್ಯ ಅಲ್ಲಿಗೇ ಬಂದು ಕುಡೀತಿರಲಿಲ್ಲವೇನಮ್ಮ! ಆಗೋದಕ್ಕೆ ಮುಂಚೆ ಬಂದು ಕತ್ತಿನಮೇಲೆ ಕೂತುಕೊಂಡು ಪೀಡಿಸುತ್ತೀಯಲ್ಲಾಂದೆ! ಅದಕ್ಕೋಸ್ಕರ ಆಗಲಿ ಎಂತ ಕೂತುಕೊಂಡೆ."

"ಮತ್ತೆ, ಆಯಿತೇ ಆಯಿತೇ ಅಂತ ಬಂದು ಸೇಣುಹಾಕಿಕೊಂಡರೆ ಏನು ಮಾಡೋದು?"

"ನಾನೆಲ್ಲಿ ಹಾಗೆಂದನಮ್ಮ? ಅವೊತ್ತು ಬೆಳಗ್ಗೆ ಕ್ಲಾಸು; ಹೊತ್ತಾಗಿ

ಹೋಗಿತ್ತು; ಅದಕ್ಕೋಸ್ಕರ ಕೇಳಿದೆ.—ಕುಡೀದೆ ಹಾಗೇ ಹೋದರೆ ಅದಕ್ಕೂ ಬೈಯುತ್ತೀಯಲ್ಲಾ ಅಂತ."

"ಹೌದು, ನಾನು ಬಯ್ಯೋಳು; ನಾಳಿನಿಂದ ಬಯ್ಯದೆ ಯಾರು ಮಾಡುತಾರೋ ಮಾಡಲಿ!"

"ಅಕ್ಕ ಮಾಡುತೀನಿ ಅಂತಾಳಲ್ಲಮ್ಮ! ಬಿಟ್ಟುಬಿಡು, ಮಾಡಲಿ."

"ಮಾಡಲಪ್ಪ, ಮಾಡಲಿ; ಮಹಾರಾಯತಿಯಾಗಿ ಮಾಡಲಿ; ಅವಳುಮಾಡಿ ಮಾಡಿಯೇ ನೀನು ಇಷ್ಟು ದೊಡ್ಡೋನಾಗಿರೋದು. ಮಾಡಿ! ಮಾಡಿಸಿಕೊಳ್ಳಿ! ಯಾರು ಬೇಡ ಎಂದೋರು?"

"ಅವೊತ್ತು ಅವಳು ಮಾಡಿದ್ದು ಚೆನ್ನಾಗಿತ್ತಲ್ಲಮ್ಮ!"

"ಚೆನ್ನಾಗಿರದೇ ಏನುಮಾಡುತ್ತೆ? ಈ ತಗ್ಗಿನ ಧಾರಣೆಯಲ್ಲಿ ದಿನಕ್ಕೆ ಒಂದು ಸೇರು ಹಾಲು, ಒಂದು ಪೌಂಡು ಪುಡಿ ಹುಯ್ದರೆ! ನಾನು ಮಾಡುವುದು ಅಂದರೆ ನಿಮಗೆ ಯಾರಿಗೂ ಯಾವುದೂ ಒಪ್ಪಾಗುವುದಿಲ್ಲ. ನನ್ನ ಹಣೆಯಬರಹವೇ ಹೀಗಾಗಿ ಹೋಯಿತು; ದುಡಿಯೋದು, ಅನ್ನಿಸಿಕೊಳ್ಳೋದು!"

"ಈಗ ನಿನ್ನ ಯಾರೇನೆಂದರಮ್ಮ? ನೀನೇ ನಿತ್ಯ ಕಾಫಿ ಮಾಡುತಾ ಇದ್ದೀಯಲ್ಲಮ್ಮ!"

"ಮತ್ತಿನ್ನೇನು ಮಾಡುವುದು? ತೀರಾಬಾರ ನಾನೂ ಮಾಡುತೀನಿ ಮಾಡುತೀನಿ ಅಂತ ಬಂದು ಒಂದುದಿನ ಮಾಡಿದಳೋ ಇಲ್ಲವೋ ಅಲ್ಲಿಗೇ ನಿಂತುಹೋಯಿತು. ಮೈ ಬಗ್ಗಬೇಕೋ ಬೇಡವೋ!"

"ಅವಳು ಹಡಿ ಮೈಲಿಗೆ ಎಂದೆ; ಅದಕ್ಕೆ ಅವಳು ಬಿಟ್ಟಳು."

"ಹೌದು ಹೌದು! ಅಂತು ಇಂತು ನನ್ನ ಮೇಲೇ ತಪ್ಪು!"

೨

"ಇದೇನು ಹೀಗೆ ಕಾಯಿಪಲ್ಯ ತಂದು ತಂದು ಎಳೆದರೆ? ಯಾರು ಇದನ್ನೆಲ್ಲಾ ಬೇಯಿಸೋರು?"

"ಇದೆಲ್ಲಾ ಒಂದೇ ದಿನಕ್ಕೇ? ನಾಳೆಗೆ, ನಾಡಿದ್ದಿಗೆ; ಮಿಕ್ಕರೆ ಇನ್ನೊಂದು ದಿನಕ್ಕೆ."

"ನಿತ್ಯ ನಿತ್ಯ ಎರಡೆರಡು, ಮೂರುಮೂರು, ಮಾಡುವುದಕ್ಕೆ ನಾನೊಬ್ಬಳು ಅಡಿಗೆ ಪರಿಚಾರಕಳು ಇದ್ದೀನಲ್ಲ!"

"ಹಾಗೆ ನೋಡೋದಕ್ಕೆ ಹೋದರೆ ಎಲ್ಲಾ ಪರಿಚಾರಕರೇಯೆ! ಯಾರಲ್ಲ?"

“ಅಯ್ಯೋ, ನೀವ್ಯಾಕೆ ಪರಿಚಾರಕರಾಗುತ್ತೀರಿ? ಬೀಯೆ ಎಮ್ಮೆ ಪ್ಯಾಸು ಮಾಡಿದ್ದೀರಿ; ನೂರಾರು ರೂಪಾಯಿ ಸಂಬಳ ತರುತ್ತಿದ್ದೀರಿ!”

“ಬಿ.ಎ., ಎಂ.ಎ. ಪ್ಯಾಸುಮಾಡಿ ನೂರಾರು ರೂಪಾಯಿ ಸಂಬಳ ತರುವ ಪುಣ್ಯ ಪಡೆದುಕೊಂಡು ಬರಲಿಲ್ಲವಲ್ಲ! ಯಾರ್ಯಾರ ಪ್ರಾಪ್ತಿ ಎಷ್ಟೆಷ್ಟೋ ಅಷ್ಟಷ್ಟೇ!”

“ಆದರೂ ನಿಮ್ಮ ದೊಡ್ಡಸ್ತಿಕೆ ನಿಮ್ಮ ಧಾರಾಳ ಹೇಳುವ ಹಾಗಿಲ್ಲ!”

“ನನಗೇನು ತರ್ಕಾರಿಯ ಮೇಲೆ ಅಷ್ಟು ಇಷ್ಟವೇ ಇಲ್ಲ; ತರದೇ ಇದ್ದರೆ, ‘ಬರೀ ಅನ್ನ ನೀರೂ ಅನ್ನ ನೀರೂ ಯಾರು ತಿಂದಾರು?’ ಅಂತೀಯಲ್ಲ, ಅದಕ್ಕೆ ತರೋದು. ನಿನಗೆ ಕೈಲಾಗದಿದ್ದರೆ, ಇದೇ ಮಾಡಬೇಕು, ಅದೇ ಮಾಡಬೇಕು ಎಂಬ ನಿರ್ಬಂಧವಿಲ್ಲ.”

“ನಿಮ್ಮದು ಯಾವುದೂ ನಿರ್ಬಂಧವಿಲ್ಲ. ಈ ಮನೇಲಿ ತಿನ್ನೋಳು ನಾನೊಬ್ಬಳು ತಾನೇ ಹೊಟ್ಟೆಬಿರಿಯ! ಹಾಳು ಹೊಟ್ಟೆ ಒಂದು ಇದೆಯಲ್ಲ!”

“ನಾವೆಲ್ಲಾ ಉಪವಾಸ ಇರುತ್ತೇವೆಯೇ? ನಾವೂ ತಿನ್ನುವುದಿಲ್ಲವೇ?”

“ಉಪವಾಸವೊ ಒಪ್ಪತ್ತೊ ಮಾಡಿಕೊಂಡು, ಇರೋದು ಇಲ್ಲದ್ದು ನೋಡಿ ಕೊಂಡು, ಹೊತ್ತಿಗೆ ಹೊತ್ತಿಗೆ ಇಷ್ಟು ಬೇಯಿಸಿ ಹಾಕುತೀಸಲ್ಲ, ನಂದೇ ತಪ್ಪು. ಅಲ್ಲವೇ?”

೩

“ಏನೇ, ಆಗಲೇ ತಟ್ಟೆ ತಂದು ಹಾಕಿಕೊಂಡುಬಿಟ್ಟೆ?”

“ಹನ್ನೊಂದೂವರೆ ಆಯಿತಲ್ಲಮ್ಮ!”

“ಆಗಲಿ, ಆದರೇನು? ಇನ್ನೂ ಹಿಂದಿನ ಹತ್ತೂವರೆ.”

“ಹನ್ನೆರಡು ಘಂಟೆಗೆ ಸ್ಕೂಲಿಗೆ ಹೋಗಬೇಕಲ್ಲಮ್ಮ!”

“ಹೋಗು; ಇನ್ನೂ ಅರ್ಧ ಘಂಟೆಯಿದೆಯಲ್ಲ! ಅನ್ನ ಕುದಿಹತ್ತುತಾ ಇದೆ; ಈಗ ಆಗುತ್ತೆ.”

“ಇನ್ನೂ ಅನ್ನ ಆಗಿ, ಸಾರಾಗಿ, ನಾ ಊಟಮಾಡಿ, ಎಂದಿಗಮ್ಮ ಸ್ಕೂಲಿಗೆ ಹೋಗುವುದು?”

“ಹಾಗಾದರೆ ಕುದಿಯುತ್ತಿರುವ ಅನ್ನವನ್ನು ಹಾಗೇ ತೋಡಲೇನೇ? ಮೊನ್ನೆಯೂ ಹೀಗೆಯೇ ಆತರಮಾಡಿದೆ. ಒಲೆ ಬೀಸಿ ಬೀಸಿ, ಊದಿ ಊದಿ, ಅನ್ನ ಮಾಡಿ ಹಾಕಿದೆ. ಇನ್ನೂ ರಟ್ಟೆ ಎರಡೂ ಸೇದುತಾ ಇದೆ—ಆದರೂ ಅನ್ನ ಆಗಿಲ್ಲ, ಅಕ್ಕಿ ಅಕ್ಕಿ, ಎಂತ ಎಲ್ಲಾ ಹಿಂಡಿಟ್ಟುಹೋದೆ. ಯಾಕೋ ಸಾಕಾಗಿ ಹೋಗಿದೆ

ಯಮ್ಮ ನಿಮ್ಮ ಓದು! ಬೆಳಗ್ಗೆ ಆರು ಘಂಟೆಗೆ ಎದ್ದರೆ ರಾತ್ರಿ ಹತ್ತು ಘಂಟೆಯಾದರೂ ನಿಮ್ಮ ಚಾಕರಿಯೇ ಆಗಿ ಹೋಗುತ್ತೆ.''

"ಹೊತ್ತಾದರೆ ಕ್ಲಾಸಿಗೆ ಸೇರಿಸೋಲ್ಲಮ್ಮ ; ಹೊರಗೆ ನಿಲ್ಲಿಸಿಬಿಡುತ್ತಾರೆ.''

"ನಿಲ್ಲಿಸಿದರೆ ನಿಲ್ಲಿಸಲಿ; ಮನೆಗೆ ಬಂದುಬಿಡು; ನೀವೆಲ್ಲಾ ಓದಿ ಓದಿ ಪ್ಯಾಸು ಮಾಡಿ ಏನು ಉದ್ಧಾರವಾಗಬೇಕೋ ಕಾಣೆ! ದೊಡ್ಡೋರಾಗುವ ತನಕ ಹೀಗೆ ನಿಮಗೆ ದೇಹ ತೆಯ್ಯೋದು; ನೀವು ಆಮೇಲೆ ಗಂಡನ ಹಿಂದೆ ಪುಸಕ್ಕನೆ ಓಡಿ ಹೋಗೋದು; ಅಷ್ಟೆ ತಾನೇ ಉಡುಗೆರೆ ನೀವು ಕೊಡೋದು? ನಾವೆಲ್ಲಾ ಪ್ಯಾಸೇ ಮಾಡಿದ್ದೇವೆಯೇ? ಸಂಸಾರ ಮಾಡುತ್ತಲೇ ಇಲ್ಲವೇ?''

"ಹಾಗಾದರೆ ನಾನು ಎರಡು ಘಂಟೆಗೆ ಬಂದು ಊಟ ಮಾಡುತೇನಮ್ಮ.''

"ಯಾಕೆ? ಬರಿಹೊಟ್ಟೇಲಿ ಉಪವಾಸ ಕಳುಹಿಸಿದಳು ಅಂತ ದೂರುವುದಕ್ಕೆ!''

"ನಾನು ಎಂದು ಯಾರ ಕೈಲಿ ದೂರಿದ್ದೇನಮ್ಮ?''

"ದೂರಲೇಬೇಕೇನು? ಅಂತೂ ನನ್ನದೇ ತಪ್ಪು! ಇಷ್ಟು ದುಡೀತೀನಲ್ಲಾ ಎಂತ ಯಾರಿಗಾದರೂ ಅಂತಃಕರಣವೇ, ವಿಶ್ವಾಸವೇ?''

೪

"ಇದೇನ್ರೇ ಇದು, ಮಕ್ಕಳನ್ನ ಹೀಗೆ ಬಿಟ್ಟುಬಿಟ್ಟರೆ? ನಾನು ಇವೊತ್ತು ಆಗಲೆ ಎರಡು ಸಲ ನೀರು ಹುಯಿದುಕೊಂಡೆನಲ್ರೇ! ಇನ್ನೆಷ್ಟುಸಲ ಹುಯಿದುಕೊಳ್ಳಲ್ರೇ? ಒದ್ದೆ ಉಟ್ಟು ಉಟ್ಟೇ ನನ್ನ ಮೈ ತುಂಬ ರೋಗ ತುಂಬಿಕೊಂಡಿತು.''

"ಏನಾಯಿತು ಅತ್ತೇ?''

"ಏನಾಯಿತೇ? ನನ್ನ ತಲೆ! ಹೊಲೆಮಾದಿಗ ಮೈಲಿಗೆ!''

"ಯಾಕೆ? ಇಲ್ಲಿ ಯಾರು ಬಂದಿದ್ದರು?''

"ಯಾರೇ? ನಿನ್ನ ಮಕ್ಕಳು!''

"ಅವಕ್ಕೆ ಅಂಗಿ ಕೂಡ ಹಾಕಿಲ್ಲ, ಬರೀ ಮೈಯಲ್ಲಿ ಓಡಾಡುತ್ತಿವೆ!''

"ಬಟ್ಟೆಗೆ ಗತಿಯಿದ್ದರೆತಾನೇ ಹಾಕೀರಿ, ಪಾಪ!''

"ನಿಮ್ಮನ್ನೆಲ್ಲಾದರೂ ಮುಟ್ಟಿಬಿಟ್ಟಾರಲ್ಲಾ ಅಂತ ಹಾಕಲಿಲ್ಲ. ಬಟ್ಟೆಗಳಿಗೇನು ಕಡಮೆ? ಮಹಾರಾಯರು ಹೊಲಿಸಿಕೊಟ್ಟಿದಾರೆ!''

"ನಿನಗೇನೂ ಕಡಮೆ ಇಲ್ಲಮ್ಮ; ನನಗೇ ಕೋರಿ ಉಟ್ಟು ಉಟ್ಟು ಸಾಯುವುದು ಹಣೆಯಲ್ಲಿ ಬರೆದಿದೆ, ಅಷ್ಟೆ.''

“ನಿಮಗೆತಾನೇ ಏನು ಕಡಮೆಮಾಡಿದ್ದಾರೆ? ಗಳುವಿನ ಮೇಲೆ ದಿನಾ ಮೂರು ನಾಲ್ಕು ಸೀರೆಗಳಿದ್ದೇ ಇರುತ್ತವೆಯಲ್ಲಾ ?”

“ನಿಮಗೆ ಅದೂ ಸೈರಣೆಯಿಲ್ಲ! ಮೂರು ಇದ್ದರೇನು ಮುವ್ವತ್ತು ಇದ್ದರೇನು? ಅವೆಲ್ಲಾ ಮಧ್ಯಾಹ್ನದ ಹೊತ್ತಿಗೆ ಮೈಲಿಗೆಯಾಗಿ ತುಂಡು ಸುತ್ತಿಕೊಳ್ಳೋದು ಕಾಣೋದಿಲ್ಲವೇ ?”

“ಅದೇಕೆ ?”

“ಅದು ಇದಕೆ! ನೀನು ಮಕ್ಕಳನ್ನು ಹಡೆದದ್ದಕ್ಕೆ.”

“ನನ್ನ ಮಕ್ಕಳೇನು ಮಾಡಿದವು ?”

“ತಿರುಗಿ ಅದೇ ಮಾತಾಡೋದು ನೋಡು! ಮುಸರೆ ಸಾದು ಹಣೆಗೆ ಬಡಿದು ಕಳುಹಿಸಿದೆ; ಅದು ಬಂದು ನನ್ನನ್ನು ಮುಟ್ಟಿಬಿಟ್ಟಿತು!”

“ಹಣೆಗೆ ಏನೂ ಇಡದೆ ಹಾಳುಹಣೆ ಬಿಟ್ಟಿರುತ್ತೀರಿ ಅಂತೀರಲ್ಲಾಂತ ಇಟ್ಟು ಕಳುಹಿಸಿದೆ.”

“ಆಹಹಹಹ! ನೀ ಬಿಡು, ಮಾತಿಗೆ ಮಾತು ಕೊಡೋದರಲ್ಲಿ ಕುಶಾಲಗಿತ್ತಿ! ನಾ ಹೇಳಿದ್ದು ತಾನೇ ಈ ಮನೆಯಲ್ಲಿ ಯಾರಿಗೂ ಆಗುವುದಿಲ್ಲ? ನನ್ನದೇ ತಪ್ಪು ಅಂತೂ ಇಂತೂ!”

೫

“ಅಕ್ಕಾ, ಅರಿಸಿನ ಕುಂಕುಮಕ್ಕೆ ಅವರ ಮನೆಗೆ ಎರಡುಸಲ ಬಂದು ಕರೆದರು; ಹೋಗಿಬಿಟ್ಟುಬರಲೇ ?”

“ನಿನ್ನ ಇಷ್ಟ! ಏನಾದರೂ ಮಾಡು!”

“ಹೋಗು ಅಂದರೆ ಹೋಗುತ್ತೇನೆ; ಬೇಡ ಅಂದರೆ ಇಲ್ಲ.”

“ಅಯ್ಯೋ ಪಾಪ! ಎಲ್ಲಾ ನನ್ನ ಕೇಳೇ ಮಾಡುತೀರಿ!”

“ನಿಮ್ಮನ್ನ ಕೇಳದೇ ಯಾವುದು ಮಾಡುತೀವಿ?”

“ಹೌದು ಹೌದು!”

“ನೀವೂ ಬಂದರೆ ಹೋಗಿಬರಬಹುದು.”

“ನಾನು ಬರುವುದಿಲ್ಲ!”

“ನಾನೊಬ್ಬಳೇ ಹೇಗೆ ಹೋಗಲಿ?”

“ನಿನ್ನ ಗಂಡನ್ನ ಕರಕೊಂಡು ಹೋಗು! ಅವೊತ್ತು ಹೋಗಿರಲಿಲ್ಲವೇ? ಅವರೇ ನಿಮ್ಮನ್ನು ಇಷ್ಟು ಹೆಚ್ಚಿಸಿರೋರು!”

"ಅವೊತ್ತು ಮಂಗಳಾರತಿಗೆ ಎಲ್ಲರನ್ನೂ ಕರೆದಿದ್ದರು; 'ನಾನು ಹೇಗಿದ್ದರೂ ಹೋಗುತ್ತೀನಲ್ಲಾ, ನೀನೂ ಬಾ' ಎಂದರು; ನೀವು ಕೆಲಸದಲ್ಲಿದ್ದಿರಿ; ಅದಕ್ಕೋಸ್ಕರ ಹೋದೆ. ಅವರ ಜೊತೆಗೆ ಹೋದೆ, ಅವರ ಜೊತೆಗೇ ಬಂದೆ. . . . ಹಾಗಾದರೆ ನಾನೂ ಹೋಗಲೊ ಬೇಡವೋ ?"

"ಬೇಕಾದರೆ ಹೋಗು, ಸಾಕಾದರೆ ಬಿಡು; ನನ್ನ ಮೇಲೆ ಯಾಕೆ ಗೂಬೆ ಕೂರಿಸುತ್ತೀ ?"

"ಸಂಜೆಹೊತ್ತು ಲಕ್ಷಣವಾಗಿ ಅರಿಸಿನ ಕುಂಕುಮಕ್ಕೆ ಕರೆದರೆ ಹೋಗದೆ ಇರುತ್ತಾರೆಯೇ ಅಂದಿದ್ದಿರಿ; ಅದಕ್ಕೋಸ್ಕರ ಕೇಳಿದೆ. ನನಗೇನು ಹೋಗಲೇ ಬೇಕು ಅಂತ ಇಲ್ಲ."

"ಹೌದು; ನಾನು ಹಾಗೆಂತ ಹೇಳಿದ್ದು ತಪ್ಪೇನು ?"

"ಹಾಗಾದರೆ ನಾನು ಸೀತೂನ ಕರೆದುಕೊಂಡು ಹೋಗಿ ಬರುತೀನಿ."

"ಅಯ್ಯೋ ನೀವೇನಮ್ಮ, ಘಟ್ಟಿಗಿತ್ತಿಯರು; ಸೀತುತಾನೇ ಯಾಕೆ? ಏನೂ ಬೇಡ; ನೀವೇನು ಈಗ ಎಲ್ಲೆಲ್ಲಿಗೆ ಬೇಕಾದರೂ, ಎಷ್ಟು ಹೊತ್ತಿನಲ್ಲಿ ಬೇಕಾದರೂ ಒಬ್ಬೊಬ್ಬರೇ ಹೋಗುತ್ತೀರಿ. . . . ಯಾಕೇ, ಸುಮ್ಮನೆ ಕೂತುಬಿಟ್ಟೆ ?"

"ಮತ್ತೇನು ಮಾಡಲಿ? ನೀವು ಯಾವುದೂ ಸರಿಯಾಗಿ ಹೇಳಲಿಲ್ಲ."

"ಇನ್ನು ಹೇಗೆ ಹೇಳುವುದು ಬೆಸವಾಗಿ? ನೀವೆಲ್ಲಾ ಈಗಿನ ಕಾಲದವರು; ಮಾತಿನಲ್ಲಿ ಜಾಣೆಯರು; ನಮಗೆ ಮಾತನಾಡುವುದಕ್ಕೆ ಬಂದರೆ ತಾನೇ ಹಿಂದಿನ ಕಾಲದವಕ್ಕೆ! ಅಂತೂ ನನ್ನಿಂದಲೇ ತಪ್ಪು!"

೬

"ಅಮ್ಮ, ಅತ್ತಿಗೆಯ ಮಗುವಿಗೆ ತುಂಬ ಕಾಯಿಲೆಯಂತೆ."

"ಆದರೆ ಆಯಿತು; ಕಾಯಿಲೆ ಬರದೆ ಇದ್ದದ್ದು ಯಾರಿಗೆ ?"

"ನೀನು ಹೋಗಿ ನೋಡಿಕೊಂಡು ಬರುವುದಿಲ್ಲವೇನಮ್ಮ ?"

"ನಾನೇಕೆ ಹೋಗಲಿ ?"

"ಅಣ್ಣ ಕೂಡ ಊರಲ್ಲಿಲ್ಲವಂತೆ; ಮನೆಯಲ್ಲಿ ಇನ್ನಾರೂ ಇಲ್ಲ. ನಿನ್ನೆಯಿಂದ ಮಗು ಜ್ಞಾನಪಾನವಿಲ್ಲದೆ ಮಲಗಿದೆಯಂತೆ."

"ಅನುಭವಿಸಲಿ; ಯಾರಿಗೇನು ? ಅವರವರು ಕೇಳಿಕೊಂಡು ಬಂದದ್ದು ಅವರವರಿಗೆ. ಸುಖ ಬಂದಾಗ ಯಾರಿಗೆ ಕೊಡುತ್ತಾರೆ? ಕಷ್ಟಬಂದರೆ ಯಾರು ತೆಗೆದು ಕೊಳ್ಳುವುದಕ್ಕಾಗುತ್ತೆ ?"

"ನಾನಾದರೂ ಹೋಗಿ ನೋಡಿಕೊಂಡು ಬರಲೇ ?"

"ನೀವೆಲ್ಲಾ ಒಳ್ಳೇಯವರೇಯೆ; ಒಂದು ಮಾರುದೂರ ಇಲ್ಲ, ಮನೆ! ಅವಳು ಒಂದು ಮಾತು ಹೇಳಿ ಕಳುಹಿಸುವುದಕ್ಕಿಲ್ಲ; ನಾವು ಮೇಲೆಬಿದ್ದು ಹೋಗಬೇಕೇನು ? ಅಂಥಾದ್ದೇನು ಹಿಡಿದಿದೆ ?"

"ಅವಳು ಯಾರ ಕೈಲಿ ಹೇಳಿಕಳುಹಿಸುತ್ತಾಳಮ್ಮ ? ಮನೆಯಲ್ಲಿ ನೀನೇ ಎನ್ನುವವರು ಮತ್ತೊಬ್ಬರಿಲ್ಲ."

"ನನಗೆ ಈಗ ನೀತಿ ಹೇಳೋಳು, ನಿಮ್ಮ ಅಣ್ಣ ಅತ್ತಿಗೆ ಬೇರೆ ಸಂಸಾರ ಮಾಡಿಕೊಂಡಿರುತೀವಿ ಅಂತ ಹೋದಾಗ ಅವರಿಗೆ ಏಕೆ ಹೇಳಬಾರದಾಗಿತ್ತು !"

"ಅವರೂ ಇಲ್ಲೇ ಇದ್ದರಲ್ಲಮ್ಮ ! ಈಗ ಇನ್ನೂ ಮೂರು ತಿಂಗಳಾಯಿತು ಬೇರೆ ಹೋಗಿ ; 'ಈ ನಿತ್ಯ ಜಗಳ ಸಾಕಾಗಿದೆ; ನಾನೆಲ್ಲಾದರೂ ಹೋಗುತೀನಿ' ಎಂತ ಅವೊತ್ತು ನೀನು ಅನ್ನುವ ಹೊತ್ತಿಗೆ ಅಲ್ಲವೇ ಅವರೂ ನಿಂತದ್ದು ನಿಂತಹಾಗೆ ಹೊರಟುಹೋದದ್ದು ?"

"ಹೋಗದೆ ಏನುಮಾಡುತಾರೆ ಪಾಪ! ನಾನು ಇಲ್ಲಿ ಅವರನ್ನು ಹುರುಕೊಂಡು ಮುಕ್ಕಿ ಅರಕೊಂಡು ಕುಡೀತಿದ್ದೆ ! ಸೋದರ ಸಂಬಂಧ, ಮನೆ ಹುಡುಗಿ, ಎಷ್ಟಾದರೂ ತಿಳಿದದ್ದು, ತಾಯಿ ಇಲ್ಲ, ಹೇಳಿದ ಹಾಗೆ ಕೇಳಿಕೊಂಡಿರುತ್ತೆ, ಅಂತ ಮೆಚ್ಚಿ ಮೆಚ್ಚಿ ಇವಳನ್ನ ತಂದರೆ ನನ್ನ ಮೇಲೇ ಕೋಗೀರು! ಮುಖ್ಯ, ಗಂಡಸಿಗೆ ಇವನಿಗೆ ಬುದ್ಧಿ ಇದ್ದರೆ ತಾನೇ ?"

"ಅವನೇನು ಮಾಡುತಾನಮ್ಮ, ಬರುವ ಹೊತ್ತಿಗೆ ಅವಳು ತನ್ನ ಸೀರೆ ಬಟ್ಟೆ ಗಂಟುಕಟ್ಟಿಕೊಂಡು, ಮಗುವನ್ನೂ ಕೊಂಕುಳಿಗೆ ಹಾಕಿಕೊಂಡು, ಈ ಮನೆ ಒಳಕ್ಕೆ ಮತ್ತೆ ನಾನು ಹೋಗೋಲ್ಲಾಂತ ಮಟಮಟ ಮಧ್ಯಾಹ್ನ ನಡುಬೀದೀಲಿ ಬಂದು ಅಳುತ್ತ ನಿಂತುಕೊಂಡುಬಿಟ್ಟಿದ್ದರೆ ?"

"ಅವನೇನು ಮಾಡುತಾನೆ ಪಾಪ! ಆ ತಾಟಗಿತ್ತಿ ಮಾತು ಕೇಳುತಾನೆ ! ಕೇಳಲಿ, ಕೇಳಿದ್ದಕ್ಕೆ ಅನುಭವಿಸಲಿ !"

"ಆಗಲೇ ಹತ್ತುಘಂಟೆ ಹೊತ್ತಾಯಿತು; ಇನ್ನೂ ಅಣ್ಣ ಬಂದಿಲ್ಲ ಹಳ್ಳಿಗೆ ಹೋದೋನು ! ಎಷ್ಟು ಹೊತ್ತಿಗೆ ಬರುತಾನೋ, ಇವೊತ್ತು ಬರುವುದೇ ಇಲ್ಲವೋ ! ಹೊರಗೆ, ಕತ್ತಲೆ ಅಂದರೆ ಕತ್ತಲೆ. . . ."

"ಅದಕ್ಕೆ ನನ್ನನ್ನ ಏನುಮಾಡಬೇಕು, ಅಂತೀಯೇ ? ಕತ್ತಲೆ ಬೆಳಕು ನನ್ನ ಮಾತು ಕೇಳುತ್ತೆಯೇನೇ ? ಚೋಟುದ್ದ ಹುಡುಗಿ, ನೆನ್ನೆ ಮೊನ್ನೆ ಬಂದೋಳು, ಬೆಳೀಲಿಲ್ಲ ಬಾಳಲಿಲ್ಲ, ಅವಳಿಗೇ ಇಷ್ಟು ಅಹಂಕಾರವಾದರೆ ನಮಗೆಷ್ಟಿರಬಾರದು ?"

"ಇದ್ದೋವು ಎರಡು ಮಕ್ಕಳು; ಅದರಲ್ಲಿ ಒಂದು ಹೋಗಿ ಇನ್ನೂ ಆರು ತಿಂಗಳಾಗಿಲ್ಲ; ಇನ್ನೊಂದೂ ಹಾಗೇ ಏನಾದರೂ ಆದರೆ ಏನುಮಾಡೋದು?"

"ಆದರೆ ಆಗುತ್ತೆ; ಅನುಭವಿಸೋದು! ಈಗ ಆರುತಿಂಗಳ ಕೆಳಗೆ ದೊಡ್ಡದು ಹೋದಾಗ ಅದರ ಹತ್ತಿರವೇ ಕುಕ್ಕುರುಬಡಕೊಂಡಿದ್ದೆನಲ್ಲಾ ನಾನು ಏನುಮಾಡಿದೆ? ಹೆತ್ತ ತಾಯಿಯೇ ಏನುಮಾಡಿದಳು? ಹೋಗೋ ಜೀವಾನ ನಿಲ್ಲಿಸಿಕೊಳ್ಳುವುದಕ್ಕಾಗುತ್ತೆಯೇ ಯಾರಾದರೂ? ಮಕ್ಕಳನ್ನ ಕಳಕೊಳ್ಳದಿದ್ದವರು ಯಾರೊ! ಇನ್ನೂ ಚಿಕ್ಕವಳು, ಪುಟ್ಟವಳು; ಮುಂದೆ ಬೇಕಾದಷ್ಟು ಹೆರುತಾಳೆ! ಎಲ್ಲಾ ನನಗೆ ಬುದ್ಧಿ ಹೇಳೋರು ಹೊರತು, ನಾನು ಆಡೋದು ನ್ಯಾಯ ಅಂತ ಒಂದು ಪ್ರಾಣಿಯ ಬಾಯಲ್ಲೂ ಬರೋದು ಕಾಣೆ! ಹೀಗೇ ಆಗಿಹೋಯಿತು ನನ್ನ ಜನ್ಮ!"

ಆರ್. ಎ. ಕಪ್ಪಣ್ಣ.

ಕಾವ್ಯಾವಲೋಕನ

ಮರಳಿ ಮಣ್ಣಿಗೆ—ಲೇಖಕರು : ಶ್ರೀಮಾನ್ ಶಿವರಾಮ ಕಾರಂತ ; ಮನೋಹರ ಗ್ರಂಥ ಮಾಲೆಯ ೪೯-೫೦-೫೧-೫೨ನೆಯ ಕುಸುಮ ; ಪ್ರಕಾಶಕರು : ಮನೋಹರ ಗ್ರಂಥಪ್ರಕಾಶನ ಸಮಿತಿ, ಧಾರವಾಡ ; ಕ್ರೌನ್ ಅ. ೬೦೮+ಏಳು ; ಬೆಲೆ, ರೂ. ೩—೮—೦.

ಕನ್ನಡ ಕಾದಂಬರಿಯ ಚರಿತ್ರೆ ಅಷ್ಟೇನೂ ದೀರ್ಘವಾಗಿಲ್ಲ. ವೆಂಕಟಾಚಾರ್ಯ ಗಳಗನಾಥರ ಕಾದಂಬರಿಗಳಲ್ಲಿ ಬೆಳೆ ಹುಲುಸಾಗಿರುವಂತೆ ಕಂಡರೂ ಅವುಗಳಲ್ಲಿ ಉತ್ಕೃಷ್ಟವಾದುವೆಲ್ಲ ಬಂಗಾಳಿಯಿಂದಲೋ ಮರಾಠಿಯಿಂದಲೋ ಇತರ ಸಾಹಿತ್ಯ ಗಳಿಂದಲೋ ಭಾಷಾಂತರಿತವಾದುವು. ಸ್ವತಂತ್ರ ಕಾದಂಬರಿಗಳೆಂದರೆ ಎಂ. ಎಸ್. ಪುಟ್ಟಣ್ಣನವರೇ ಮೊದಲಾದ ಒಬ್ಬಿಬ್ಬರು ಬರೆದವು. ಪುಟ್ಟಣ್ಣನವರ ಕೃತಿಗಳಲ್ಲಿ ಅವರು ಕಂಡು ಕೇಳಿದ ಅಥವಾ ಅವರ ಅನುಭವಕ್ಕೆ ಬಂದ ಪ್ರಪಂಚ, ಪರಿಮಿತಿ ಯುಳ್ಳದಾದರೂ ರಮ್ಯವಾಗಿ ರೂಪುಗೊಂಡಿದೆ. ಅಲ್ಲಿಂದೀಚೆಗೆ ಶ್ರೀ. ಕಾರಂತರ ಕಿರುಗಾದಂಬರಿಗಳೂ ಮನೋಹರ ಗ್ರಂಥಮಾಲೆಯ ಹಲವು ಕಾದಂಬರೀ ಕುಸುಮ ಗಳೂ ಅರಳಿ ತಮ್ಮ ಸೌರಭವನ್ನು ಎಲ್ಲೆಡೆಯಲ್ಲೂ ಸೂಸಿವೆ. ಮಹಾ ಕಾದಂಬರಿ ಯೆಂದರೆ 'ಕಾನೂರು ಸುಬ್ಬಮ್ಮ ಹೆಗ್ಗಡಿತಿ' ಒಂದೇ ಒಂದು ಕನ್ನಡಕ್ಕೆ ಇದ್ದುದು. ಅದನ್ನು ಸೃಷ್ಟಿಸಿರುವ ಶ್ರೀ. ಪುಟ್ಟಪ್ಪನವರ ಮಲೆನಾಡು ತನ್ನ ಉತ್ತುಂಗ ಗಿರಿ ಗಳಿಂದಲೂ ಕಾಡುಗಳ ಕಾವಣಗಳಿಂದಲೂ ಹೊಳೆಗಳ ಹೊಳಪಿನಿಂದಲೂ ಕಥೆಗೆ ಹಿನ್ನೆಲೆಯನ್ನು ಒದಗಿಸಿ ಅಲ್ಲಿನ ಜನರ ಬಾಳ್ವೆಯಲ್ಲಿ ಮಿಳಿತವಾಗಿ ರಂಜಿಸುತ್ತಿದೆ. 'ಮರಳಿಮಣ್ಣಿಗೆ' ಎಂಬ ಈ ಕಾದಂಬರಿ ಶ್ರೀ. ಕಾರಂತರ ಮಹಾಕಾದಂಬರಿ; ಕಾಲದ ದೃಷ್ಟಿಯಿಂದ ಕನ್ನಡಕ್ಕೆ ಎರಡನೆಯದು. ಇವರಿಗೆ ಪ್ರೇರಣೆ ಅನಂತವಾದ ಕಡಲಹಸರ ; ಅದಕ್ಕಿಂತಲೂ ಅಗಲವಾದ ಆಳವಾದ, ಸಕಲ ರೂಪಗಳನ್ನೂ ತಾಳುವ ಜೀವನಸಾಗರ. ಮಂಗಳೂರಿನ ಪಡುಕರಾವಳಿಯ ಬದುಕು ಬಡತನದೊಡನೆ ಸೆಣಸಿ ನಡಸುತ್ತಿರುವ ಸಂಗರವನ್ನು ಇವರು ಎಳೆಯೆಳೆಯಾಗಿ ರಸರಸವಾಗಿ ಬಿಡಿಸಿ ಚಿತ್ರಿಸಿ ದ್ದಾರೆ. ಕನ್ನಡಕ್ಕೆ ಸ್ವತಂತ್ರ ಕಾದಂಬರಿಗಳಿಲ್ಲವೆಂಬ ಕೊರತೆಯಷ್ಟನ್ನೇ ಇದು ಹೋಗಲಾಡಿಸದೆ ಉತ್ಕೃಷ್ಟ ಕಾದಂಬರೀ ಮಾರ್ಗವನ್ನೂ ಕಾಣಿಸುತ್ತಿದೆ. ಕನ್ನಡ ಕಾದಂಬರಿ ಶ್ರೀ. ಕಾರಂತರ ಕೈಯಲ್ಲಿ ಉನ್ನತಿಯನ್ನು ಪಡೆದಿದೆ; ಅದರ ಚರಿತ್ರೆಗೆ ಪ್ರಗತಿಯುಂಟಾಗಿದೆ. ಅವರ ಈ ಕೃತಿ ಬಹುಕಾಲ ನಿಲ್ಲಬಲ್ಲುದು. ಅದರಿಂದ ನಮ್ಮ

ನಾಡಿನ ಭಾವೀ ಲೇಖಕರಿಗೆ ಬೆಳಕೂ ಆವೇಶವೂ ಬರುವುವು. ಟಾಲ್‌ಸ್ಟಾಯ್, ಹಾರ್ಡಿ, ಗಾಲ್ಸ್‌ವರ್ದಿ, ರೋಮೈನ್ ರೋಲ ಮುಂತಾದ ಪಾಶ್ಚಾತ್ಯ ವಿಭೂತಿಗಳ ಮಹಾ ಕಾದಂಬರಿಗಳಿಗೆ ಇದು ಸದೃಶವಾಗಿದೆ; ಅವುಗಳನ್ನು ಓದಿದಾಗ ಆಗುವಷ್ಟು ಸಂತೃಪ್ತಿ ಇದರಿಂದಲೂ ಬರುವಂತಿದೆ.

ಇದರ ಕಥೆಯನ್ನು ಸಂಗ್ರಹಿಸ ಹೊರಡುವುದು ಅನ್ಯಾಯ. ಆದರೂ ವಿಮರ್ಶೆಯ ಸೌಕರ್ಯಕ್ಕಾಗಿ ಅದರ ನಡಗೆಯನ್ನು ಮಾತ್ರ ಇಲ್ಲಿ ಸೂಚಿಸಬಹುದು.''

'ಮರಳಿಮಣ್ಣಿಗೆ'ಯಲ್ಲಿ ಮೂರು ತಲೆಮಾರುಗಳ ಕಥೆ ಒಂದಕ್ಕೆ ಒಂದು ಬೆಸೆದು ಬೆಳೆದಿದೆ. ಬಡತನದ ಕೋಟಲೆಯಲ್ಲಿ ಈ ತಲೆಮಾರಿನವರು ಬೆಂದು ಬಣ್ಣಬಣ್ಣವಾಗಿ ಬಾಡಿ ಬದುಕಿನ ಮರ್ಮವೇನೆಂಬುದನ್ನು ಕಂಡುಕೊಂಡ ಕಥೆ ಇದರ ಮುಖ್ಯವಸ್ತು.

ರಾಮ ಐತಾಳರು ಕೋಡಿಯ ವೈದಿಕ ಬ್ರಾಹ್ಮಣರು; ತಂದೆ ಗಳಿಸಿದ ಕೊಂಚ ಆಸ್ತಿ ಹೊರತು ಬೇರೇನೂ ಇಲ್ಲದವರು; ಶ್ರಾದ್ಧಗಳನ್ನೂ ಮದುವೆಗಳನ್ನೂ ಮಾಡಿಸುವ ಪುರೋಹಿತರು. ಅದರಿಂದ ಅವರ ಬದುಕು ಸಾಗಬೇಕು. ಅವರ ಮನೆಯಲ್ಲಿದ್ದವರು ಅವರೂ ಸೇರಿ ಮೂವರು ಮಾತ್ರ. ಒಬ್ಬಾಕೆ ತಂಗಿ ಸರಸೋತಿ, ಮನೆತಪ್ಪಿದ ಹೆಣ್ಣು; ಇನ್ನೊಬ್ಬಳು ಕೈಹಿಡಿದ ಹೆಂಡತಿ ಪಾರೋತಿ. ಸ್ವಂತ ದುಡಿಮೆಯಿಂದ ಬೆವರು ಸುರಿಸಿ ಮೂವರೂ ಸೇರಿ ಬದುಕಿನ ಬಂಡಿಯನ್ನು ಎಳೆಯುತ್ತಿದ್ದರು; ಸಾಲಮಾಡದೆ ಇದ್ದದ್ದರಲ್ಲೇ ತಾವು ಬೆಳೆದದ್ದರಲ್ಲೇ ಹೇಗೋ ಬಾಳುತ್ತಿದ್ದರು. ಅತ್ತಿಗೆ ನಾದಿನಿಯರ ದೇಹಗಳು ಎರಡಾಗಿದ್ದರೂ ಜೀವ ಒಂದೇ ಎಂಬಂಥ ಪ್ರೀತಿ ಅವರಲ್ಲಿ. ಐತಾಳರು ದಿನಬೆಳಗಾದರೆ ಊರೂರು ಅಲೆಯುತ್ತ ಪೌರೋಹಿತ್ಯದ ಕಾಣಿಕೆಯನ್ನೂ ಕಾಯಿಪಲ್ಲೆಗಳನ್ನೂ ಮನೆಗೆ ತರುತ್ತಿದ್ದರು; ಊಟ ಎಲ್ಲಾದರಲ್ಲಿ. ಮನೆಯಲ್ಲಿದ್ದ ಎರಡು ಜೀವಗಳು ಗಂಜಿಕುಡಿದೋ ಅರೆಹೊಟ್ಟೆ ಉಂಡೋ ಹೇಗೋ ಇದ್ದರಾಯಿತು ಎಂದು ತಿಳಿದಿದ್ದವರು. ಐತಾಳರಿಗೆ ಇದ್ದ ಕೊರಗು ತಮ್ಮ ಸಂತತಿ ಬೆಳೆಯದಿದ್ದುದೇ. ಅದಕ್ಕಾಗಿ ಪಡುಮುನ್ನೂರಿನ ಸತ್ಯಭಾಮೆಯನ್ನು ಎರಡನೆಯ ಹೆಂಡತಿಯಾಗಿ ಮನೆಗೆ ತಂದರು. ಮನೆಯಲ್ಲಿ ಹೊಸ ಸಮಸ್ಯೆಗಳು ಏಳಲು ಮೊದಲಾಗುತ್ತದೆ. ಸವತಿಯರು ತಮ್ಮ ತಮ್ಮಲ್ಲಿ ಮೊದಮೊದಲು ಹುಟ್ಟಿದ ನಂಜನ್ನು ಉಂಡು ಆ ಮೇಲೆ ಹಿತವರಾದರು. ರಾಮ ಐತಾಳರಿಗೆ ಎರಡನೆಯ ಹೆಂಡತಿಯಿಂದ ಲಚ್ಚ, ಸುಬ್ಬಿ ಎಂಬ ಮಕ್ಕಳು ಆಗುತ್ತವೆ. ಇದರಿಂದ ಅವರು ಬಾಳು ಇನ್ನೂ ಕಠಿನವಾಗುತ್ತದೆ. ಲಚ್ಚ ಬೆಳೆಯುವುದು, ಅವನ ವಿದ್ಯಾಭ್ಯಾಸ, ಉಪನಯನ ಮುಂತಾದಕ್ಕೆಲ್ಲ ಐತಾಳರು ಹಣವನ್ನು ಒದಗಿಸಿದರು. ಹೊಟ್ಟೆ ಬಟ್ಟೆ ಕಟ್ಟಿ ತಮ್ಮ ಶ್ರಮವನ್ನು ಲೆಕ್ಕಿಸದೆ ಮಗ ಬೆಳೆದಾನು, ಕಲಿತಾನು, ಮುಂದಕ್ಕೆ ಬಂದಾನು, ತನ್ನ ಹೆಸರನ್ನು ಉಳಿಸಾನು ಎಂಬ ಆಸೆಯಿಂದ ಅವನಲ್ಲೇ ಪ್ರಾಣವನ್ನಿರಿಸಿದ್ದರು.

ಲಚ್ಚನು ಹಾಗೂ ಹೀಗೂ ಇಂಗ್ಲಿಷನ್ನು ಕಲಿತು ವಿದ್ಯೆಯಲ್ಲಿ ಮುಂದುವರಿದನು. ಆದರೆ ಅವನಿಗೆ ತಂದೆಯ ಮೇಲೆ ಅಸಮಾಧಾನ. ಕಾರಣ ಅವರು ಜಿಪುಣರೆಂದು; ತನಗೆ ಬೇಕಾದಷ್ಟು ಹಣ ಒದಗಿಸಲಿಲ್ಲವೆಂದು. ಓದಿನಲ್ಲಿ ಆಸಕ್ತಿಯುಳ್ಳವನು ಮತ್ತಾವ ಹವ್ಯಾಸಕ್ಕೂ ಸಿಕ್ಕಬಾರದೆಂಬುದನ್ನು ಮರೆತು ಕುಂದಾಪುರದಲ್ಲಿ ಅವನು ಕೆಟ್ಟದಾರಿಗೆ ಬಿದ್ದನು. ಅವನಿಗೆ ಅಂಥ ಗೆಳೆಯರೂ ದೊರೆತರು. ತನ್ನ ಈ ವ್ಯಾಪಾರಗಳಿಗೆ ತಂದೆ ಹಣ ಕೊಡಲಿಲ್ಲವೆಂಬುದು ಅವನ ಅಸಂತೃಪ್ತಿಗೆ

ಕಾರಣವಾಯಿತು; ತನ್ನ ಮಗಳಾದ ಸುಬ್ಬಿಗೆ ಮಾತ್ರ ಅಷ್ಟು ಹಣವನ್ನು ಚೆಲ್ಲಿದನಲ್ಲಾ ಎಂದು ಅಸೂಯೆ. ಮನೆಗೆ ಬಂದರೆ ತಂದೆಯೊಡನೆ ಮಾತಿಲ್ಲ. ಆಡಿದವು ಕೆಲವು ನಂಜುನುಡಿಗಳು. ತಾಯನ್ನು ಗಣಿಸದೆ ಹಿರಿಯರ ಅಂಕೆಗೆ ಸಿಕ್ಕದೆ ಅವನು ತನ್ನ ದಾರಿಯನ್ನೇ ಹಿಡಿದನು. ಹೀಗಾಗಿ ಐತಾಳರ ಆಸೆಯೆಲ್ಲ ಮಣ್ಣುಪಾಲಾಗುವ ಸ್ಥಿತಿ ಬಂತು. ಮದುವೆಯಾದರೆ ದಾರಿಗೆ ಬಂದಾನೆಂದು ಅದನ್ನೂ ಮಾಡಿಯಾಯಿತು. ಮಂಗಳೂರಿನ ವಕೀಲರು ವಾಸುದೇವಯ್ಯನವರು ಬೀಗರಾದರು. ಲಚ್ಚ ಅವರ ಮನೆಯಳಿಯನಾಗಿ ಅಲ್ಲೇ ಓದಿದನು. ಎಫ್.ಎ. ಪರೀಕ್ಷೆಯಲ್ಲಿ ಉತ್ತೀರ್ಣನೂ ಆದನು. ಅವನ ಸಂಸರ್ಗದಿಂದ ಅವನ ಹೆಂಡತಿ ನಾಗವೇಣಿ ಕಾಯಿಲೆಯಿಂದ ನರಳುವಂತಾಯ್ತು. ಆ ಮೇಲೆ ಮದ್ರಾಸಿಗೆ ಬಿ.ಎ. ಓದಲಿಕ್ಕೆ ಅವನು ಹೊರಟನು. ಐತಾಳರ ಬೊಕ್ಕಸ ಬರಿದಾಗುವುದೇ ಅವನ ಹಂಬಲವಾಗಿತ್ತು. ಬಿ.ಎ. ಮುಗಿಸಿ ಮನೆಗೆ ಬಂದವನು ಅಲ್ಲಿ ನಿಲ್ಲಲು ಮನಸ್ಸಿಲ್ಲದೆ ಅತ್ತ ಇತ್ತ ಅಲೆದಾಡಿ ಹಿರಿಯರ ಆಸೆಗಳನ್ನು ಚಿವುಟಿ, ಪ್ರೀತಿಯನ್ನು ತಳ್ಳಿ, ಸೇವೆಯನ್ನು ತೊರೆದು ಸ್ವೇಚ್ಛಾ ವೃತ್ತಿಯಲ್ಲಿ ಬಾಳತೊಡಗಿದನು. ಈ ಕೊರಗಿನಿಂದ ಅವನ ದೊಡ್ಡ ತಾಯಿ ಪಾರೋತಿ ಗತಿಸಿದಳು. ಐತಾಳರು ಕಣ್ಣುಮುಚ್ಚಿದರು. ಲಚ್ಚನಾದರೋ ತಿಂಗಳಿಗೆ ಒಂದೂರಂತೆ ಸುತ್ತಾಡಿ ಸಾಲಮಾಡಿ ಕಾಯಿಲೆಯ ಕುಪ್ಪೆಯಾಗಿ ಭಂಡ ಬದುಕನ್ನು ಸಾಗಿಸುತ್ತಿದ್ದನು. ತಂದೆ ಸಾಯುವಾಗ ಅವನು ಎಲ್ಲೋ ಯಾರಿಗೂ ತಿಳಿಯದು. ಐತಾಳರು ತಮ್ಮ ಆಸ್ತಿಯನ್ನು ಮಗನಿಗೆ ಬಿಟ್ಟರೆ ಹಾಳುಮಾಡುವನೆಂದು ತಿಳಿದು ಸೊಸೆಯ ಹೆಸರಿಗೆ ಮಾಡಿದರು. ಇವನ್ನು ತಿಳಿದ ಲಚ್ಚ ಸತ್ತ ತಂದೆಯ ಮೇಲೆ ವಿಷವನ್ನು ಕಾರಿದನು. ಹೆಂಡತಿಯನ್ನು ಮರುಳುಮಾಡಿ ಅವಳಿಂದ ಹಣದ ಸುಲಿಗೆಗೆ ತೊಡಗಿದನು. ನಾಗವೇಣಿಗೆ ಇವನ ನಡತೆಯನ್ನು ಕಂಡು ದ್ವೇಷವೇ ದಿನದಿನಕ್ಕೆ ಬೆಳೆಯುತ್ತಿದ್ದರೂ ಒಂದೊಂದು ಸಲ ಕೈಹಿಡಿದ ಗಂಡನಿಗೆ ಸೋಲಬೇಕಾಯ್ತು. ಇದರ ಫಲವಾಗಿ ಹಡೆದ ಮೊದಲೆರಡು ಮಕ್ಕಳು ಬೇನೆಗೆ ತುತ್ತಾಗಿ ಸತ್ತುವು; ಆಸ್ತಿ ಲಚ್ಚನ ಕೈಗೆ ಸಿಕ್ಕಿ ಹಾಳಾಯ್ತು. ಎಲ್ಲವನ್ನೂ ಯಾರಿಗೂ ಮಾರಿ ಊರು ಬಿಟ್ಟುಹೋಗಿ ಆ ಹಣದಿಂದ ಹೋಟೇಲೊಂದನ್ನು ಸ್ಥಾಪಿಸಿ ಜೂಜಿನಲ್ಲಿ, ಇಸ್ಪೀಟಿನಲ್ಲಿ, ಕುಲಟೆಯರಲ್ಲಿ ನಿರತನಾದನು. ಇಟ್ಟ ಹೋಟಲೂ ಹಾಗೆಯೇ ಕರಗಿತು. ಇತ್ತಕಡೆ ನಾಗವೇಣಿ, ತಂದೆಯ ಆರೈಕೆಯಲ್ಲಿ ಕಷ್ಟವನ್ನು ತಿಳಿಯದೆ ಬೆಳೆದವಳು, ತನ್ನ ಹೊಟ್ಟೆಗಾಗಿ ವ್ಯವಸಾಯದ ಕೆಲಸ ಮಾಡಬೇಕಾಯ್ತು. ಅವಳಿರುವ ಮನೆ, ಸ್ವಲ್ಪ ಗದ್ದೆ ಹೊರತಾಗಿ ಎಲ್ಲವೂ ಲಚ್ಚನ ಬಾಯಿಗೆ ಆಹುತಿಯಾದವು. ಅವಳ ಅತ್ತೆ ಸತ್ಯಭಾಮೆಯೂ ಸರಸೋತಿಯೂ ಕಾಶೀಯಾತ್ರೆ ಹೋದ ಸಮಯದಲ್ಲಿ ಲಚ್ಚ ಬಂದು ಇದ್ದ ಮನೆಯನ್ನೂ ಮಾರಿಹೋದನು. ನಾಗವೇಣಿ ಮೂರನೆಯ ಸಲಕ್ಕೆ ಬಸಿರಾಗಿ ಒಂದು ಮಗುವನ್ನು ಪಡೆದಳು. ಹುಟ್ಟುವಾಗ ತಂದೆಯಿದ್ದರೂ ಇಲ್ಲದಂತಾಯಿತು. ಗಂಡ ಬದುಕಿದ್ದರೂ ತಾನು ವಿಧವೆ ಎಂಬ ಭಾವನೆ ನಾಗವೇಣಿಗೆ ಬಂತು. ಹುಡುಗನಿಗೆ ನಾಮಕರಣವಾಗುವಾಗ ತಂದೆಯ ಮುಖವಿಲ್ಲ. ಅವನು ತೀರ ಕಟುಕನಾಗಿದ್ದನು; ಕರುಣೆ ಅವನ ಬಳಿಗೆ ಸುಳಿಯದು. ನಾಗವೇಣಿಗೆ ಬಡತನ ಇನ್ನೂ ಭಯಂಕರವಾಯಿತು. ಯಾರು ಎಷ್ಟು ಕರೆದರೂ ತನ್ನ ಊರನ್ನು ಬಿಡುವವಳಲ್ಲ ಅವಳು. ಇನ್ನೊಬ್ಬರ ಹಂಗಿನ ಅನ್ನ ಅವಳಿಗೆ ನರಕವೆನಿಸಿತು. ತನ್ನ ಬಾಳನ್ನು ಸತ್ಯಭಾಮೆ ಸರಸೋತಿಯರ ಸೇವೆಗೆ ಸವೆಸಿದಳು. ಕೊಂಚಕಾಲದ ಮೇಲೆ ವಯಸ್ಸಾಗಿದ್ದ ಸರಸೋತಿಯು ತೀರಿಕೊಂಡಳು. ಜ್ವರದಿಂದ ಸತ್ಯಭಾಮೆಯೂ ಸತ್ತಳು. ನಾಗವೇಣಿ ತನ್ನ ಮಗನ ವಿದ್ಯಾರ್ಜನೆಗಾಗಿ ತಂದೆಯ ಮನೆಯನ್ನು ಸೇರಿದಳು. ತನ್ನ ಗಂಡನಂತೆ ತನ್ನ ಮಗನೂ ಆದರೆ ಏನುಗತಿ ಎಂಬ ಭೀತಿ ಅವಳಿಗೆ.

ಅಪ್ಪನ ಆರೈಕೆಯಲ್ಲಿ ಕೆಲವು ವರ್ಷಗಳು ಸಂದವು. ಮಗನು, ಅಜ್ಜನ ಹೆಸರನ್ನೇ ಹೊತ್ತಿದ್ದವನು, ಬುದ್ಧಿವಂತನಾಗಿ ಅವಳ ಮನಸ್ಸಿಗೆ ಹಿತವನ್ನು ತಂದನು. ತಾನು ಎಂದೋ ಕಲಿತುಬಿಟ್ಟ ಸಂಗೀತವನ್ನು ನಾಗವೇಣಿ ಎತ್ತಿಕೊಂಡು ಅದರಲ್ಲಿ ತನ್ನ ಬೇಸರವನ್ನು ಹಗುರಮಾಡಿಕೊಂಡಳು. ನೂರುಸಲ ನೊಂದ ಜೀವ ಕೊಂಚ ಸುಖವನ್ನು ಆಗ ಕಂಡಿತು. ಮಗನಿಗಾಗಿ ತನ್ನ ಬಾಳು ಎಂದು ಬಗೆದಳು. ಹೀಗೆ ಇರುತ್ತಿರಲು ಅವಳ ತಂದೆಯೂ ಸಾಯಬೇಕೆ? ಅಣ್ಣ ಸದಾಶಿವನ ಮನೆಯಲ್ಲಿ ಕೊಂಚಕಾಲ ಇದ್ದುದು ಅವಳಿಗೆ ಸಾಕಾಯಿತು. ಅಲ್ಲಿಂದ ತಾಯನ್ನು ಕರೆದುಕೊಂಡು ತಿರುಗಿ ತನ್ನ ಊರಿಗೆ ಬಂದಳು. ಅಲ್ಲಿ ಏನಿದೆ ತಿನ್ನಲಿಕ್ಕೆ? ಎದೆಗೆಡದ ಆಶಾವಾದಿಯಾದ ಅವಳು ಕಷ್ಟದಿಂದ ಬದುಕಿದಳು. ತಾಯಿಯೂ ಸಾವಿಗೆ ಒಕ್ಕಳಾಗಿ ನಾಗವೇಣಿಯು ಒಂಟಿಯಾದಳು, ಅನಾಥಳಾದಳು, ದಿಕ್ಕಿಲ್ಲದಾದಳು. ಚಿಕ್ಕಪ್ಪನ ನೆರವಿನಲ್ಲಿ ತನ್ನ ಊರಲ್ಲೇ ಇರುವ ಹಠವನ್ನು ತೊಟ್ಟಳು.

ಇತ್ತ ಅವಳ ಮಗ ರಾಮರಾವ್ ಮಂಗಳೂರಿನ ಓದನ್ನು ಮುಗಿಸಿಕೊಂಡು ಮದ್ರಾಸಿಗೆ ಹೋಗಿ ಬಿ.ಎ. ಕಲಿಯಲು ಆರಂಭಿಸಿದನು. ಅವನ ಅಗಲಿಕೆಯಿಂದ ನಾಗವೇಣಿಗೆ ಬಾಳು ಬರಿದಾದಂತೆ ಕಂಡಿತು. ಹುಡುಗನು ತನ್ನ ಓದಿಗೆ ಬೇಕಾದ ಹಣವನ್ನು ತಾನೇ ಸಂಪಾದಿಸಿ ತಾಯಿಗೂ ಕೊಂಚ ಕಳುಹಿಸುತ್ತ ಮುಂದಕ್ಕೆ ಬಂದನು. ಮದರಾಸಿನಲ್ಲಿಯೇ ಇದ್ದ ನಾಗವೇಣಿಯ ತಂಗಿ ಕೃಷ್ಣೆಯೂ ಅವಳ ಗಂಡ ಮಾಧವನೂ ರಾಮನಿಗೆ ನೆರವಾದರು. ಹೀಗೆ ಅವನು ಸ್ವಾವಲಂಬನೆಯನ್ನು ಕಲಿತು ಬಿ.ಎ. ಗೆ ಕಟ್ಟಿದನು. ಪರೀಕ್ಷೆ ಆಗುವುದರೊಳಗೆ ಉಪ್ಪಿನ ಸತ್ಯಾಗ್ರಹ ಪ್ರಾರಂಭವಾಗಿ ರಾಮನು ಆವೇಶಗೊಂಡು, ತನ್ನ ತಾಯ ಸಂಕಟ ಎಂಥದಿರಬಹುದೆಂಬುದನ್ನೂ ಲೆಕ್ಕಿಸದೆ ನುಗ್ಗಿ ಕೈದಿಯಾಗಿ ವೆಲ್ಲೂರು ಜೈಲನ್ನು ಕಂಡನು. ಅವನನ್ನೇ ಸದಾ ಹಂಬಲಿಸುತ್ತ ಊರಲ್ಲಿದ್ದ ತಾಯಿಗೆ ಈ ಸುದ್ದಿ ಸಿಡಿಲಾಯಿತು. ಆಗ ಅವಳ ಸಂಕಟ ಕಡಲಿನಷ್ಟು ವಿಶಾಲವಾಯಿತು. ಮಗನು ತನ್ನನ್ನು ಕೈಬಿಡನು ಎಂಬೊಂದು ನಂಬಿಕೆ ಅವಳಿಗೆ ಅನ್ನವಾಗಿ ಬದುಕಿದಳು. ರಾಮನು ಜೈಲಿನಿಂದ ಹೊರಗೆ ಬಂದು ತನ್ನ ಕೆಲಸಕ್ಕೆ ತಾನೇ ನಾಚಿ ಓದು ಪೂರ್ತಿಯಾಗದೆ ತಾಯ ಬಳಿಗೆ ಧಾವಿಸಿದನು. ಮತ್ತೊಂದು ಸಲ ಮದ್ರಾಸಿಗೆ ಬಂದು ಬಿ.ಎ. ಗೆ ಕಟ್ಟಿ ಯಾವ ರಾಜಕೀಯದ ಆತಿರೇಕಕ್ಕೂ ಮನಸ್ಸುಕೊಡದೆ ಪರೀಕ್ಷೆಯಲ್ಲಿ ಗೆದ್ದನು.

ಇನ್ನು ಚಾಕರಿಹುಡುಕುವ ಅಲೆದಾಟ. ಎಲ್ಲಾದರೂ ಕೆಲಸಹಿಡಿದು ಅಮ್ಮನನ್ನು ಕರೆದು ತಂದು ಅವಳ ಕಷ್ಟದ ಹೊರೆ ಕಡಮೆಯಾಗುವಂತೆ ಮಾಡಬೇಕೆಂಬ ಸಂಕಲ್ಪ ಅವನಿಗೆ. ಆದರೆ ಎಲ್ಲೂ ಏನೂ ಅನುಕೂಲವಾದ ಕೆಲಸ ಸಿಕ್ಕದೆ ಊರಿಗೆ ಬರಿಗೈಯಲ್ಲಿ ಬಂದನು. ಅಲ್ಲಿಂದ ತನ್ನ ತಾತನ ಶತ್ರು ಶೀನಮಯ್ಯರ ಮಕ್ಕಳು ಬೆಂಗಳೂರಲ್ಲಿ ಇಟ್ಟಿದ್ದ ಹೋಟೇಲಿನಲ್ಲಿ ಇಪ್ಪತ್ತು ರೂಪಾಯಿ ವೇತನಕ್ಕೆ, ದಿನಕ್ಕೆ ಹದಿನಾರು ಹದಿನೆಂಟು ಗಂಟೆ ದುಡಿತಕ್ಕೆ, ಅವನು ಒಪ್ಪಿ ಹೋದನು, ಗತ್ಯಂತರ ಕಾಣಿಸದೆ. ಇನ್ನು ಆ ಚಾಕರಿಯ ಬವಣೆ ಅವನಿಗೆ. ಇತ್ತ ತನ್ನ ಕಷ್ಟದ ಬುತ್ತಿ ನಾಗವೇಣಿಗೆ. ರಾಮನು ಬೆಂಗಳೂರಲ್ಲಿ ನವೆಯುತ್ತ ತನ್ನ ತಾಯ ಬದುಕಿಗಾಗಿ ಬಂದ ಹಣದಲ್ಲಿ ಕೊಂಚವನ್ನು ಕಳಿಸುತ್ತ ಕಾಲಕಳೆದನು. ಒಂದುಸಲ ದಸರ ಕಾಲಕ್ಕೆ ಅವನು ಮೈಸೂರಿಗೆ ಬಂದನು. ಶಿವರಾಮಪೇಟೆಯ ಗಲ್ಲಿಯೊಂದರಲ್ಲಿ ಅವನ ತಂದೆ ಲಚ್ಮನ ದಿವ್ಯಭೇಟಿ ಅವನಿಗೆ ಆಯಿತು. ಆದರಿಂದ ಇಂಥವನ ಮಗನು ನಾನೆ, ಎಂಬ ನಾಚಿಕೆ ಮಾತ್ರ ಅವನಿಗೆ ಬಂದ ಲಾಭ. ಹೋಟೇಲಿನ ಬಾಳು ಇನ್ನು ಸಾಕೆಂದು ಕೆಲಸದ ಬೇಟೆಗೆ ಬೊಂಬಾಯಿಗೆ ಅವನು ತೆರಳಿದನು. ಅಲ್ಲಾದರೂ ಇವನಿಗಾಗಿ ನೌಕರಿ

ಕಾದಿಟ್ಟಿರುವವರು ಯಾರಿದ್ದಾರೆ? ತನ್ನ ಹಾಗೆಯೇ ನೂರಾರು ಜನರು ಆ ಪಟ್ಟಣಕ್ಕೆ ಬಂದು ಹಲವು ವರ್ಷಗಳು ಅಲ್ಲೇ ನಿಂತು ಪ್ರಯತ್ನಿಸಿದರೂ ಏನೂ ಸಿಕ್ಕದೆ ಹತಾಶರಾದವರು ಅಲ್ಲಿ ಎಷ್ಟು ಮಂದಿ ಇಲ್ಲ! ಅವರಲ್ಲಿ ರಾಮನೂ ಒಬ್ಬನಾದನು. ಕೈಯಲ್ಲಿ ಕೊಂಡುಹೋಗಿದ್ದ ಹಣ ಸವೆಯುತ್ತ ಬರಲು ಅಲ್ಲೇ ಸಂಗೀತ ಕಲಿಸುವ ಮನೆಮಾಸ್ತರನಾಗಿ ಜೀವದೇಹಗಳನ್ನು ಒಟ್ಟಿಗೆ ಇರಿಸುವುದಕ್ಕೆ ಎಷ್ಟುಬೇಕೋ ಅಷ್ಟು ಹಣವನ್ನು ಅವನು ಗಳಿಸಿದನು. ಸಂಗೀತ ಕಲಿಯುವ ಹುಡುಗಿಯರು ಮದುವೆಯಾಗಿ ಹೊರಟುಹೋದ ಮೇಲೆ ಅವನ ಹೊಟ್ಟೆಗೆ ಕಲ್ಲೇ ಆಹಾರವಾಯಿತು. ಅದೇ ಕಾಲದಲ್ಲಿ ಅವನು ನೋವಾ ಎಂಬ ಯೆಹೂದ್ಯ ಚಿತ್ರಗಾತಿಯಲ್ಲಿ ಚಿತ್ರಕಲೆಯ ಅಭ್ಯಾಸವನ್ನು ಮಾಡಿದನು. ಅದರಿಂದ ಹೊಟ್ಟೆಯೇನೂ ತುಂಬಲಿಲ್ಲ.

ಊರಲ್ಲಿ ನಾಗವೇಣಿ ಮಗನನ್ನು ಎದುರುನೋಡುತ್ತ ಸಾಕಷ್ಟು ಸಂಪಾದನೆ ದೊರಕಿದ ಮೇಲೆ ಅವನು ತನ್ನನ್ನು ಕರೆದುಕೊಂಡು ಹೋದಾನು ಎಂದು ದಾರಿಕಾಯುತ್ತಿದ್ದಳು. ಒಂದು ಸಲ ಮಳೆ ಸುರಿದು ಮನೆಯ ಗೋಡೆ ಬಿದ್ದು ಅದರಲ್ಲಿ ತನ್ನ ಮಾವ ಮಡಗಿದ್ದ ಸ್ವಲ್ಪ ಹಣ ಅವಳಿಗೆ ದೊರೆತದ್ದು ಅವಳಿಗೆ ದೇವರು ಕಳಿಸಿದ ಸಹಾಯವಾಯಿತು. ಈ ಸುದ್ದಿಯನ್ನು ಅವಳು ಮಗನಿಗೆ ತಿಳಿಸಿದಳು. ಬೇರೆ ದಿಕ್ಕುತೋರದಿದ್ದ ಅವನಿಗೂ ಇದರಿಂದ ಸಂತೋಷವಾಗಿ ಅವನು ಊರಿಗೆ ಹಿಂತಿರುಗಿದನು. ಅಲ್ಲಿಗೆ ಬಂದು ಇದ್ದ ನೆಲವನ್ನು ಅಗೆದು ಕೃಷಿಮಾಡಿ ತಾಯಿ ಮಗನಿಬ್ಬರೂ ಸೇರಿ ದುಡಿಯತೊಡಗಿದರು. ತಾಯಿಮಣ್ಣಿನ ಆಶ್ರಯವೇ ಅವರಿಗೆ ಮರಳಿ ದೊರೆಯಿತು. ರಾಮನು ತನ್ನ ಹಳ್ಳಿಯಲ್ಲಿಯೇ ಶಾಲೆಯ ಮಾಸ್ತರನಾಗಿ ತಿಂಗಳಿಗೆ ಹತ್ತು ರೂಪಾಯಿನ ವರಮಾನಕ್ಕೆ ತೃಪ್ತಿಪಡಬೇಕಾಯಿತು. ತನ್ನ ದುಡಿಮೆಯಿಂದ ಮರಳಿ ಹಣಗಳಿಸಿ ತಾತನ ಆಸ್ತಿಯನ್ನು ಬಿಡಿಸಿಕೊಂಡು ಅವನು ಮನೆಯನ್ನು ಉದ್ಧರಿಸಿದನು. ನೊಂದ ತಾಯಿಗೆ ಅಂದು ತನ್ನಿಂದ ಸಂದ ಆನಂದ ಅವನಿಗೆ ಚೆಂದವಾಯಿತು.

ಇದು ಕಥೆಯ ಹಾದಿ. ನಮ್ಮದು ಅವಸರದ ಪಯಣ. ಅಲ್ಲಲ್ಲಿ ನಿಂತುನೋಡುತ್ತ ಕಣ್ಣು ತೆರೆದರೆ ಕಥೆಯ ಉದ್ದಕ್ಕೂ ಹರಡಿರುವ ರಮ್ಯತೆಯನ್ನು ಎದುರುಗೊಳ್ಳುತ್ತೇವೆ. ರಾಮ ಐತಾಳರ ಎಳಗೂಸಿನಂಥ ಹೃದಯವೂ ಕಪಟವರಿಯದ ಅವರ ಮಾತುನಡತೆಗಳೂ ಮನಸ್ಸಿನಲ್ಲಿ ತುಂಬುತ್ತವೆ. ಸರಸೋತಿಯ ಸಹನೆ, ಅಣ್ಣನಿಗಾಗಿ ತನ್ನ ಬಾಳನ್ನು ತೇದ ನಿಸ್ವಾರ್ಥತೆ, ತನ್ನ ನಾದಿನಿಯಲ್ಲಿ ಅವಳಿಗಿದ್ದ ಪ್ರೀತಿಯ ದಿವ್ಯತೆ, ಅದು ಅಭಿವ್ಯಕ್ತವಾಗುತ್ತಿದ್ದ ನೂರಾರು ರೀತಿಗಳು—ಇವೆಲ್ಲ ಅಂಥ ಜೀವ ಇನ್ನೊಂದು ಉಂಟೆ ಎನಿಸುವಂತಿದೆ. ಪಾರೋತಿ ಮಕ್ಕಳಿಲ್ಲದೆ ಕೊರಗಿ ಗಂಡನಿಗೆ ಬೇರೊಂದು ಮದುವೆಗೆ ಮಾತಿಲ್ಲದೆ ಅನುಮತಿಕೊಟ್ಟದ್ದು, ಮದುವೆಸಮಯದಲ್ಲಿ ಒತ್ತಿ ಬರುವ ಕಣ್ಣೀರನ್ನು ಒತ್ತಿಸಿ ಸವತಿಯನ್ನು ತಂಗಿಯಂತೆ ಮನೆತುಂಬಿಸಿಕೊಂಡದ್ದು, ಮುಂದೆ ಲಚ್ಚನ ಅವತಾರವಾದ ಮೇಲೆ ಅವನನ್ನು ತನ್ನ ಹೊಟ್ಟೆಯ ಮಗನೆಂದೇ ಭಾವಿಸಿ ಹೆತ್ತತಾಯಿಗಿಂತಲೂ ಹತ್ತುಮಡಿ ಮಮತೆಯನ್ನು ತೋರಿಸಿದ್ದು, ಮನೆಗೆ ಬಂದ ಸವತಿಯನ್ನು ಕಷ್ಟದ ಕೆಲಸಕ್ಕೆ ಬಿಡದೆ ತಾನೆ ಅವಳ ಸೇವೆ

ಯನ್ನು ಮಾಡಿದ್ದು, ತನ್ನ ಗಂಡನು ತನ್ನ ಸವತಿಯಲ್ಲಿ ತೋರಿಸುತ್ತಿದ್ದ ಆದರ ತನಗೆ ತತ್ಕಾಲಕ್ಕೆ ಕಟುವಾಗಿ ಕಂಡರೂ ಅದನ್ನು ಹೊರಕ್ಕೆ ತೋರಿಸದೆ ತನ್ನ ಮನಸ್ಸನ್ನು ತಿದ್ದಿಕೊಂಡದ್ದು, ಲಚ್ಚನು ಕಾರಣವಾಗಿ ಸವತಿ ಆಡಿದ ಸುಡುನುಡಿಗೆ ತನ್ನ ಮನಸ್ಸು ಬೆಂದರೂ ಅದನ್ನು ತಿರುಗಿ ತಿರುಗಿ ಮಾಯಿಸಿಕೊಂಡು ಐತಾಳರ ಸುಖವೇ ತನ್ನ ವೆಂದು ಭಾವಿಸಿದ್ದು—ಹೀಗೆ ಹತ್ತಾರು ರೀತಿಗಳಿಂದ ತನ್ನ ಮನಸ್ಸಿನ ಕ್ಷುದ್ರಭಾವನೆ ಗಳನ್ನು ಅದುಮಿ ತನ್ನ ಹೃದಯದ ರಮಣೀಯತೆಯನ್ನು ಕಾಣಿಸುತ್ತಿರುವ ಸಂದರ್ಭ ಗಳು ಗ್ರಂಥದಲ್ಲಿ ಹರಡಿವೆ. ಸಂಸಾರದ ಸಂಗ್ರಾಮದಲ್ಲಿ, ಬಡತನದ ವಿಮಾನ ದಾಳಿಯಲ್ಲಿ, ತನ್ನ ಪೌರುಷವನ್ನು ನಾಗವೇಣಿ ಪ್ರದರ್ಶಿಸಿದ ಅವೆಷ್ಟೋ ಕಥಾನಕ ಗಳು ಎಂಥವರಿಗಾದರೂ ಕರುಳನ್ನು ಕೊರೆಯುವುವು. ಲಚ್ಚನ ಬಾಳು ಹದಗೆಟ್ಟು ಅದರಿಂದ ಇತರ ಜೀವಗಳು ಕಂಗಾಲಾದ ಚಿತ್ರಗಳ ಸುರುಳಿ ಬಿಚ್ಚಿದಂತೆಲ್ಲಾ ಚಿತ್ತ ವೇಧಕವಾಗಿ ಹೊಸ ಸಂದರ್ಭಗಳನ್ನು ಚಾಚುತ್ತದೆ. ನಾಗವೇಣಿಯ ಸಾಹಸದ ಫಲವೋ ಎಂಬಂತೆ ಹುಟ್ಟಿದ ಅವಳ ಮಗನು ಬೆಳೆದು ಕಲಿತು ಕಷ್ಟಪಟ್ಟು ಆತ್ಮ ಗೌರವವನ್ನು ಸಂಪಾದಿಸಿ ಸ್ವಾವಲಂಬನೆಯ ಸೂತ್ರವನ್ನು ಹಿಡಿದು ತನ್ನ ಬಾಳಿನ ಗಾಳಿಪಟವನ್ನು ಎಲ್ಲರಿಗೂ ಕಾಣುವಂತೆ ಗಗನದಲ್ಲಿ ಹಾರಾಡಿಸುತ್ತಿರುವ ದೃಶ್ಯ ಮಾಲೆಗಳು ಅವೆಷ್ಟು ಸೊಗಸಾಗಿವೆ! ಕೊನೆಗೆ ಶೀನಮಯ್ಯರ ಉಪಾಖ್ಯಾನಗಳು, ಸೂರನ ಸ್ವಾಮಿಭಕ್ತಿ, ಬಚ್ಚಿಯ ಒಕ್ಕಲಿತಿಪ್ರೇಮ, ವೊಗೇರಬಿಸ್ತನ ಮುಗ್ಧವಿನೋದ, ಸಾಕಿದ ದನಕರುಗಳ ಪ್ರೀತಿ—ಇವೇ ಮುಂತಾದ ಸಂದರ್ಭಗಳೆಲ್ಲ ಕಾದಂಬರಿಯ ಹೊನಲನ್ನು ಕೆರಳಿಸುವ, ಅಳಿಸುವ, ನಗಿಸುವ, ಸುಳಿಸುವ ತೆರೆಗಳು. ಇವೆಲ್ಲ ಎತ್ತಿ ತೋರಬಹುದಾದ ಅಂಶಗಳು. ಸಂಗ್ರಹದ ಕೊಲೆಗಾರಿಕೆಯಲ್ಲಿ ಇವು ಜೀವಂತವಾಗಿ ಕಾಣುವುದಿಲ್ಲ.

ಈ ಕಥೆಯಲ್ಲಿ ಕಾಣುವ ಪಾತ್ರಗಳು ಮನುಷ್ಯಸ್ವಭಾವದ ಸಣ್ಣಪ್ರದರ್ಶನ ಶಾಲೆಯನ್ನೇ ನಿರ್ಮಿಸಿವೆ. ಇಲ್ಲಿ ಬರುವ ಹೆಂಗಸರು ಅದೆಷ್ಟು ಚೆಲುವಿಕೆಯ ಚೈತನ್ಯ ಗಳೆಂಬುದು ಅನುಭವಿಸಿ ಸವಿಯಬೇಕಾದ ಅಂಶ. ರಾಮ ಐತಾಳರ ಮನೆದೇವರಂತಿದ್ದ ಸರಸೋತಿ ಹಳೆಯ ಸಂಸ್ಕೃತಿಯ ಉಚ್ಚಪ್ರತೀಕದಂತೆ ಚಿತ್ರಿತಳಾಗಿದ್ದಾಳೆ. ಚಿಕ್ಕಂದಿನಲ್ಲೇ ಗಂಡನನ್ನು ಕಳೆದುಕೊಂಡು ತನ್ನ ಮನೆಯಲ್ಲಿ ಇರಲೊಲ್ಲದೆ ಅಣ್ಣನ ಹತ್ತಿರ ಬಂದು ಸೇರಿದವಳು ಅವಳು. ತನ್ನ ದುಃಖವನ್ನು ತನಗೆ ಸಹಜವಾದ ವಿರಕ್ತಿ ಯಿಂದ ಗೆದ್ದವಳು. ಅಣ್ಣನ ಮನೆಯಲ್ಲಿ ಅವಳದೇ ಯಜಮಾನಿಕೆ. ಅವಳು ಇಲ್ಲದಿದ್ದರೆ ಆ ಮನೆವಾರ್ತೆ ನಡೆಯುವುದು ಕಷ್ಟ. ಹೆಚ್ಚುಮಾತನ್ನು ಆಡುವ ಸ್ವಭಾವವಿಲ್ಲ. ಆದರೆ ಆಡಿದವೆಲ್ಲವೂ ಪರಿಣಾಮಕಾರಕವಾದವು. ಮಳೆ, ಬಿರುಗಾಳಿ, ಬಿಸಿಲು, ಸೆಕೆ,

ಬೆವರು, ಕೆಸರು, ಗೊಬ್ಬರ, ಆಸರು,—ಯಾವುದನ್ನಾದರೂ ಎದುರಿಸಿ ದುಡಿಯುವ ಚೈತನ್ಯ ಅವಳದು. ಉಪ್ಪಿನಕಾಯಿಗಾಗಿ ಅವಳು ಪಟ್ಟ ಶ್ರಮದ ಕತೆ ಒಂದೇ ಸಾಕು ನಿದರ್ಶನಕ್ಕೆ. ನಿಷ್ಠೆ, ಆಚಾರ, ಭಕ್ತಿ ಮುಂತಾದ ಆಸ್ತಿಕ ಗುಣಗಳಿಗೆ ಅವಳು ತೌರುಮನೆ. ಮೊದಲೇ ಶುದ್ಧಹೃದಯದ ಅವಳಿಗೆ ಇವು ಅನಾವಶ್ಯಕವೆಂದು ನಮಗೆ ಅನ್ನಿಸಿದರೂ ಹಿಂದಿನ ನಡವಳಿಕೆ ಹೋಗಬಾರದೆಂದು ಅವಳ ಎಣಿಕೆಯಿರುವಂತೆ ಕಾಣುತ್ತದೆ. ಮುದಿಯಾದರೂ ಕಣ್ಣು ಮಂಜಾದರೂ ಕೂತಲ್ಲೆ ಕಾಲು ಕುಸಿಯು ವಂತಿದ್ದರೂ ಅವಳ ಸ್ಥಿರಸಂಕಲ್ಪ ಅವಳನ್ನು ಕಾಶೀಯಾತ್ರೆ ಮಾಡಿಸಿ ಕರೆದು ತಂದಿತು. ಅವಳ ಕಣ್ಣೆದುರೇ ಪಾರೋತಿಯ ಪ್ರಾಣ ಹಾರಿಹೋಯಿತು. ಅಣ್ಣಾಸು ಅಸ್ತಮಿ ಸಿದನು; ಅಣ್ಣಾನ ಮಗ ಲಚ್ಚ ವಂಚಿಸಿ ಕೈಬಿಟ್ಟ. ಎಲ್ಲ ದುಃಖಗಳನ್ನೂ ಅನುಭವಿಸಿ ದೈವಚಿತ್ತವೆಂದು ನಂಬಿದ್ದ ಮಹಾಜೀವ ಅವಳದು. ಅವಳ ಮೇಲ್ಪಂಕ್ತಿಯಲ್ಲಿ ಬಾಳನ್ನು ಸಾಗಿಸಿದ ವ್ಯಕ್ತಿ ಪಾರೋತಿ; ತನ್ನಿಂದ ಗಂಡನಿಗೆ ಆದ ಮೂಕದುಃಖಕ್ಕೆ ಮಿತಿಯಿಲ್ಲವೆಂದು ಭಾವಿಸುವವಳು. ಸರಸೋತಿಯ ಆತ್ಮಶಕ್ತಿಯಲ್ಲಿ ತನ್ನ ಆತ್ಮಕ್ಕೆ ದೀಪ ಹಚ್ಚಿಸಿಕೊಂಡಳು. ದೈಹಿಕ ಮಾನಸಿಕ ಸಂಕಷ್ಟಗಳನ್ನು ಗಾಣದ ಎತ್ತಿನಂತೆ ಸಹಿಸಿಕೊಂಡು ಸಂಸಾರಕ್ಕೆ ಸುಖದ ಸ್ನೇಹವನ್ನು ಚೆಲ್ಲಿದ ಮಹಾಲಲಿತೆ ಅವಳು. ಮತ್ತೆ ಯಾರಾದರೂ ಆಗಿದ್ದರೆ ಐತಾಳರ ಎರಡನೆಯ ಮದುವೆಯನಂತರ ಆ ಮನೆ ಯನ್ನೇ ನರಕವಾಗಿ ಮಾಡುತ್ತಿದ್ದರೇನೋ? ಬಡತನದ ನರಕವಿದ್ದರೂ ಮನಸ್ಸಿನ ರೌರವವನ್ನು ಅವಳು ಸೃಷ್ಟಿಸಲಿಲ್ಲ. ಅವಳು ಸರ್ವಂಸಹೆ. ಅವಳು ಸಾಯುವ ದೃಶ್ಯ ಅವಳ ಹೃದಯದ ಪರಿಪಕ್ವತೆಯನ್ನು ಕಾಣಿಸುತ್ತದೆ. ತನ್ನ ಪ್ರಾಣ ಹೋಗುವಾಗ ಗಂಡನ ತೊಡೆಯ ಮೇಲೆ ತನ್ನ ತಲೆ ಇರಬೇಕೆಂದು ಬೇಡಿದಳು; ಅದೊಂದೇ ಅವಳ ಹಂಬಲ. ಮತ್ತೇನೂ ಬೇಕಿಲ್ಲವೆಂಬ ವೈರಾಗ್ಯ ಅವಳ ಮನಸ್ಸಿನಲ್ಲಿ ಮಡಲಿರಿದಿದೆ. ಇಂಥ ಜೀವಗಳನ್ನು ಕುಸುಮಿಸಿದ ಹಿಂದಿನ ಸಂಸ್ಕೃತಿ ಎಷ್ಟು ಸಾರವತ್ತಾದುದು! ಅವರನ್ನು ನಿರ್ಮಿಸಿದ ಕಲೆಯ ಪ್ರತಿಭೆ ಎಷ್ಟು ಮನೋಜ್ಞ!

ನಾಗವೇಣಿಯ ಪಾತ್ರ ಇವರಿಬ್ಬರಿಗಿಂತಲೂ ಒಂದು ಬಣ್ಣ ಮೇಲೆನ್ನಬಹುದು. ಅವಳು ತಕ್ಕಮಟ್ಟಿಗೆ ಓದಿದವಳು; ಕಲೆಯಲ್ಲಿ ಅಭಿರುಚಿಯನ್ನೂ ಪರಿಶ್ರಮವನ್ನೂ ಹೊಂದಿದ್ದವಳು. ಕೈಹಿಡಿದ ಗಂಡನಿಂದ ತನಗೊಂದು ಸ್ವರ್ಗವೇ ದಕ್ಕೀತೆಂಬ ಆಸೆ ಯಿಂದ ತುಂಬಿದವಳು, ಮದುವೆಯಾಗುವ ಎಲ್ಲ ಹೆಣ್ಣುಮಕ್ಕಳಂತೆ. ಅವಳು ಬಯಸಿ ಬಂದದ್ದು ಒಂದು, ಸಿಕ್ಕಿದ್ದು ವಿಷದ ಹಣ್ಣು. ಗಂಡನ ಪ್ರಥಮ ಸಮಾಗಮದಲ್ಲೇ ಅವಳಿಗೆ ಆಡಬಾರದ, ಅನುಭವಿಸಲಾರದ ಖಾಯಿಲೆಯ ಯಾತನೆ ಸಂಪ್ರಾಪ್ತವಾಯ್ತು. ಕೈಹಿಡಿದ ಗಂಡನೇ ಕೈಕೊಟ್ಟನು; ಅವನ ವಂಚನೆಗೆ ಬಲಿಯಾಗಿ ಇದ್ದುದನ್ನೂ

ಕಳೆದುಕೊಂಡಳು. ತನಗೆ ಆದರ್ಶವೂ ಆಶ್ರಯವೂ ಆಗಿದ್ದ ಹಿರಿಯ ಜೀವಗಳು ಆರಿಹೋಗಿ ಆಕೆಗೆ ಕತ್ತಲು ಕವಿಯಿತು. ತಂದೆಯೂ ಹೋದನು. ಅವಳಿಗೆ ದೇವರೊಬ್ಬನೆ ಆಶ್ರಯ. ಹಾಗೆಂದು ಕೈಕಟ್ಟಿ ಕುಳ್ಳಿರುವ ಜೀವವಲ್ಲ ಅವಳದು. ಪಟ್ಟಣದ ಬದುಕನ್ನು ಬಹುಬೇಗ ಮರೆತು ಹಳ್ಳಿಯ ಕಷ್ಟವನ್ನು ಕಟ್ಟಿಕೊಂಡು ಉಳುವುದು, ಅಗೆ ನೆಡುವುದು, ಚಾಪೆ ಹೆಣೆಯುವುದು, ಕೆಸರು ತುಳಿಯುವುದು, ತೆನೆ ಕೊಯ್ಯುವುದು, ದನಗಳ ಶುಶ್ರೂಷೆಮಾಡುವುದು—ಮುಂತಾದ ಎಲ್ಲ ಕಾರ್ಯಗಳನ್ನೂ ಅವಳೇ ನಿರ್ವಹಿಸಿದಳು. ಮಾಡದಿದ್ದರೆ ಹೊಟ್ಟೆ ಕೇಳುವುದಿಲ್ಲ. ರೋಸಿಹೋದ ಅವಳ ಜೀವಕ್ಕೆ ಸಾಯೋಣವೆಂದರೆ ನೀರೂ ಆಚೆಗೆ ತಳ್ಳಿತು. ಇದಾದಮೇಲೆ ಅವಳು ಬದುಕಿನ ಮರ್ಮವನ್ನು ಕಂಡಂತೆ ಕಾಣುತ್ತದೆ. ಜೀವನವು ಒಂದು ಸಂಗ್ರಾಮ. ಒಂದುಕಡೆ ಪ್ರಕೃತಿಯ ಸ್ವೈಷ್ಮ್ಯರ್ಯ ರೋಗರುಜನಗಳೊಡನೆ ಹೆಣಗಾಡಿ ಆದಷ್ಟು ಕಸಿದು ತಿನ್ನುವ ಕಷ್ಟ. ಜೊತೆಗೆ ಮನಸ್ಸಿನ ಹೋರಾಟಗಳು, ಮನುಷ್ಯರ ನಡತೆ ಕಾರಣವಾಗಿ. ಈ ಒಳಯುದ್ಧದಲ್ಲಿ ಅವಳು ಪಟ್ಟ ಯಾತನೆ ಹೊರಯುದ್ಧದಲ್ಲಿ ಕಂಡ ಕಷ್ಟಕ್ಕಿಂತ ಹಿರಿದು. ಪ್ರಕೃತಿಯಾದರೂ ಒಂದೊಂದು ಸಲ ಒಲಿದೀತು, ಮನುಷ್ಯಪ್ರಯತ್ನವನ್ನು ಕಂಡು, ಕರುಣೆಯಿಂದ. ತನ್ನ ಗಂಡನು ಎಂದೂ ಒಲಿಯಲಾರ, ಮಿದುಮಾತಾಡಲಾರ, ಸಂತೈಸಲಾರ, ಕಷ್ಟಕ್ಕೆ ನೆರವಾಗಲಾರ. ಅವನಿಗಿಂತಲೂ ತನ್ನ ದನಕರುಗಳೇ ಮೇಲೆಂದು ಅವಳಿಗೆ ಅನ್ನಿಸುತ್ತದೆ. ಈ ಕಷ್ಟಪಡುವುದೆಲ್ಲ ಯಾತಕ್ಕಾಗಿ? ಈ ಹೋರಾಟದಲ್ಲಿ ಫಲವಿಲ್ಲ ಎಂದು ಬಗೆದವಳಲ್ಲ ಅವಳು. ಅದರಲ್ಲಿಯೇ ಜೀವ ಮಾಗುತ್ತದೆ, ರಸ ತುಂಬುತ್ತದೆ ಎಂಬ ಆಶಾವಾದಿ ಆಕೆ. ಇಂಥ ಪಾತ್ರ ಬದುಕಿನಲ್ಲೂ ಸಾಹಿತ್ಯದಲ್ಲೂ ದೊರೆಯುವುದು ವಿರಳ. ವಾಸ್ತವಿಕ ಲೋಕದಲ್ಲಿ ಶ್ರೀ ಕಾರಂತರು ಕಂಡಿರಬಹುದಾದ ಒಂದು ವ್ಯಕ್ತಿ ನಾಗವೇಣಿಯ ಪಾತ್ರರಚನೆಯಲ್ಲಿ ಆದರ್ಶೀಕೃತವಾಗಿ ಹೃತ್ಸೌಂದರ್ಯದಿಂದ ಬೆಳ್ಳಿಯಂತೆ ಬೆಳಗುತ್ತಿದೆ.

ರಾಮು ಐತಾಳರಲ್ಲಿ ತೆರೆಮರೆಯಿಲ್ಲದ ಮನಸ್ಸೊಂದನ್ನು ಶ್ರೀ ಕಾರಂತರು ಚಿತ್ರಿಸಿದ್ದಾರೆ. ಆ ಪಾತ್ರದ ಮಾಟದಲ್ಲಿ, ಮಾತಿನಲ್ಲಿ ಒಂದೊಂದು ಸಲ ಅವರು ಹಾಸ್ಯದ ಲಹರಿಯನ್ನು ಚಿಮ್ಮಿಸುತ್ತಾರೆ. ಆ ಹಾಸ್ಯ ಕರುಣೆಯಿಂದ ಬಂದದ್ದು. ಮೈಗೆಲ್ಲ ಕೆಸರು ಮೆತ್ತಿಕೊಂಡ ಐತಾಳರ ವರ್ಣನೆ ಒಂದು ಉದಾಹರಣೆ. ಐತಾಳರು ಹಿಂದಿನ ಸಂಪ್ರದಾಯಕ್ಕೆ ಸೇರಿದವರು. ವ್ಯವಹಾರಕ್ಕೆ ಬೇಕಾದ ಓದುಬರಹ, ಉದರಭರಣಕ್ಕೆ ಬೇಕಾದ ಜೋಯಿಸಮಂತ್ರಗಳು—ಅವರ ಬುದ್ಧಿಯ ಸಂಪತ್ತು ಇಷ್ಟೇ. ಮನಸ್ಸಿನ ಸಂಪತ್ತು ಮಾತ್ರ ಅಧಿಕ. ಮನೆನಡವಳಿಕೆಯಲ್ಲಿ ಅವರದೇ ಒಂದು ಬಿಗಿಯಿತ್ತು. ತಮ್ಮ ಮನಕ್ಕೆ ಬಂದುದನ್ನು ಮಾಡುವವರೆಗೆ ಅಥವಾ ಅದಕ್ಕೆ ಒಂದು ರೂಪ

ಕೊಡುವವರೆಗೆ ಅದರ ಮರ್ಮವನ್ನು ಮನೆಯವರಿಗೂ ತಿಳಿಯಗೊಡರು. ದತ್ತು ತೆಗೆದುಕೊಳ್ಳಬಾರದೆಂದು ನಿರ್ಧರಿಸಿ ಅವರು ಬೇರೊಂದು ಮದುವೆಗೆ ಏರ್ಪಾಡು ಮಾಡಿದ ವಿಷಯ ತಂಗಿಗಾಗಲಿ ಹೆಂಡತಿಗಾಗಲಿ ತಿಳಿಯದು. ಇದರಿಂದ ಅವರಿಗೆ ಮನಸ್ಸು ನೊಂದೀತೆಂದು ಅವರಿಗೆ ತೋರಲಿಲ್ಲ. ಮೂರು ದಿವಸ ಹೊರಗೆ ಹೋಗಿದ್ದವರು ಮನೆಗೆ ಬರುವವೇಳೆಗೆ ತಂಗಿ ಮನೆಯಿಂದ ಮಂದರ್ತಿಗೆ ಹೊರಟುಹೋದಳೆಂಬುದು ತಿಳಿದುಬಂದು ತಾವು ಮಾಡಿದ್ದು ತಪ್ಪೆಂದು ಗೊತ್ತಾದ ಕೂಡಲೇ ನೇರವಾಗಿ ತಂಗಿಯ ಮನೆಗೆ ಹೋಗಿ ಆಕೆಯನ್ನು ಒಪ್ಪಿಸಿ ಕರೆತರುತ್ತಾರೆ. ಇದು ಅವರು ಕೆಲಸಮಾಡುವ ರೀತಿ. ತಮ್ಮ ಯೋಚನೆಗಳನ್ನು ಇತರರಿಗೆ ಹೇಳಬಾರದೆಂಬ ಹಠ ಅವರಿಗಿಲ್ಲ. ಅವಶ್ಯವಿದ್ದರೆ ಹೇಳಲು ಹಿಂಜರಿಯುವುದಿಲ್ಲ. ಮನೆಯಲ್ಲಿ ಹೆಂಗಸರು ಕಸಕ್ಕಿಂತ ಕಡೆ ಅವರ ದೃಷ್ಟಿಯಲ್ಲಿ ಎಂದು ತೋರಲೂಬಹುದು, ಅವರ ಚರಿತದಿಂದ. ಅದು ಅವರು ಬೆಳೆದುಬಂದ ಸಂಪ್ರದಾಯದ್ದು. ಅವರಲ್ಲಿ ಹುರುಡಿನ ಸ್ವಭಾವವುಂಟು. ತಮ್ಮಿಂದ ಸಾಲ ಬೇಡಿದ ಶೀನಮಯ್ಯನು ತನ್ನ ಮನೆಗೆ ಹೆಂಚನ್ನು ಹೊದಿಸಿದ್ದನ್ನು ಕಂಡು 'ನಾನು ಏನು ಕಡಮೆ, ನನ್ನ ಮನೆಯನ್ನು ತಾಜಮಹಲ್ ಆಗಿಸೆನೆ' ಎಂಬ ಸ್ಪರ್ಧೆ ಅವರದು. ಶೀನಮಯ್ಯನಲ್ಲಿ ಅವರಿಗೆ ತಿರಸ್ಕಾರ, ಅನ್ನಮಾರಿ ಅವನ ಮಕ್ಕಳು ಹಣ ಗಂಟುಹಾಕುತ್ತಾರೆಂದು. ಬರಬರುತ್ತ ತಮಗೂ ಅವನಿಗೂ ಮಾತುನಿಂತು ಹಗೆತನ ಇಬ್ಬರನ್ನೂ ಪ್ರತ್ಯೇಕಿಸುತ್ತದೆ. ಆದರೆ ತಾವು ಸಾಯುವ ಗಳಿಗೆಯಲ್ಲಿ ನೋಡಲು ಬಂದ ಶೀನಮಯ್ಯನಿಗೆ ಅವರಾಡುವ ಮಾತುಗಳು ಅವರ ಮನಸ್ಸಿನ ನಿಷ್ಕಳಂಕತೆಗೆ ಸಾಕ್ಷಿಯಾಗಿವೆ. ಅವರು ಜಿಪುಣರಲ್ಲ, ಮಿತವ್ಯಯಿಗಳು. ಆದರಿಂದ ಇದ್ದುದರಲ್ಲಿ ತೃಪ್ತಿಹೊಂದಿ ಮಕ್ಕಳಿಗೂ ಮುಂದೆ ಅನುಕೂಲಪಡಿಸುವಂತಾಯಿತು. ಹಿಂದಿನ ಸಂತತಿಗೆ ಸೇರಿದ ಹಲವು ಜೀವಗಳು ಇವರಂತೆ ಬದುಕುತ್ತಿದ್ದುವು. ರಾಮ ಐತಾಳರು ಈ ತಲೆಮಾರಿಗೆ ಮಾದರಿ.

ಲಚ್ಚನಂಥ ಪ್ರಾಣಿಗಳು ಲೋಕದಲ್ಲಿ ಅತಿಸಂಭವವಾದರೂ ಅವನು ಒಂದು ಮನಶ್ಶಾಸ್ತ್ರದ ಸಮಸ್ಯೆಯಾಗಿದ್ದಾನೆ. ಅವನು ಕೆಟ್ಟದ್ದಕ್ಕೆ ಕಾದಂಬರಿಯಲ್ಲಿ ಸಾಕಷ್ಟು ಕಾರಣಗಳನ್ನು ನವುರಾಗಿ ಬಿಡಿಸಿ ತೋರಿಸಿದ್ದರೂ ಅದರ ಸತ್ಯತೆಯ ಬಗ್ಗೆ ಪೂರ್ಣ ನಂಬಿಕೆ ಬರುವಂತಿದ್ದರೂ ಅವನು ಯಾಕೆ ಹಾಗಾದನು ಎಂದು ಪ್ರಶ್ನಿಸಿ ಉತ್ತರಕ್ಕೆ ಚಿಂತಿಸಬೇಕಾಗುತ್ತದೆ. ಹಿರಿಯರ ಮೇಲೆ ಅವನಿಗೆ ಅಷ್ಟು ದ್ವೇಷ ಬರುವುದಕ್ಕೆ ಎಳವಯಸ್ಸಿನಲ್ಲಿಯೇ ಮೊದಲಾಯಿತು. ಕೂಸುತನದಲ್ಲಿ ದೊಡ್ಡಮ್ಮನ ಅತಿ ಆದರ ತಾಯಿವಿಷಯದಲ್ಲಿ ಅನಾದರಕ್ಕೆ ಕಾರಣವಾಯಿತು. ಅಜ್ಜನ ಮನೆಯಲ್ಲಿ ಅವನು ಓದಲಿಕ್ಕೆ ಹೋಗಿ ನಿಂತಾಗ ನಂಬಿಸಿ ಕರೆತಂದಿದ್ದ ತಂದೆತಾಯಿಗಳು ಅವನನ್ನು

ಅಲ್ಲಿಯೇ ಬಿಟ್ಟು ಹೊರಟುಹೋದದ್ದು ಅವನಲ್ಲಿ ಅವರು ವಂಚಕರೆಂಬ ಭಾವನೆಯನ್ನು ಮೊಳೆಯಿಸಿತು. ಅವನ ಅಜ್ಜಅಜ್ಜಿಯರ ಮಿತಿಯಿಲ್ಲದ ಲಾಲನೆ ತಂದೆಯ ವಿಷಯದಲ್ಲಿ ತಿರಸ್ಕಾರವನ್ನು ಹುಟ್ಟಿಸಿತು. ಹರೆಯಕ್ಕೆ ಕಾಲಿಟ್ಟ ಮೇಲೆ ಅವನ ತಂದೆಯ ಕಡುವೈರಿಯಾದ ಶೀನಮಯ್ಯನ ಉಪದೇಶ ಅವನ ಬುದ್ಧಿಯನ್ನು ಸಂಜಿನ ಚೀಲವಾಗಿಸಿತು. ಉಪಾಧ್ಯಾಯರ ಹೊಗಳಿಕೆಯಿಂದ ಅವನಿಗೆ ತಾನು ಮಹಾ ಬುದ್ಧಿವಂತನೆಂಬ ಗರ್ವ ಬಂದು ತಂದೆ ಏನೂ ತಿಳಿಯದವನೆಂಬ ಔದಾಸೀನ್ಯವೂ ಉಂಟಾಗಿರಬಹುದು. ವಂಚನೆಯಿಂದ ಕಾರ್ಯಸಾಧನೆ ಆಗುತ್ತದೆಂದು ಅವನು ಪಾಠ ಕಲಿತುದು ಚಿಕ್ಕವಯಸ್ಸಿನಲ್ಲೇ ನಡೆಯಿತು. ಓದುವಾಗ ಅಪ್ಪನಿಂದಲೂ ಅಜ್ಜನಿಂದಲೂ ಅವರವರಿಗೆ ತಿಳಿಸದಂತೆ ಹಣ ತರಿಸಿಕೊಂಡನು. ಈ ವಂಚನೆ ಅವನ ಮುಂದಿನ ಬದುಕಿನಲ್ಲಿ ಇತರರ ಕೊರಳು ಕೊಯ್ಯುವುದಕ್ಕೆ ಸಾಧನವಾಗುತ್ತದೆ. ತಂದೆ ಜಿಪುಣನೆಂದೂ ತಂಗಿಯ ವಿಷಯವಾಗಿ ಅಧಿಕ ಪಕ್ಷಪಾತ ತೋರಿಸುತ್ತಿದ್ದನೆಂದೂ ಅವನ ಬುದ್ಧಿಗೆ ತೋರುತ್ತದೆ. ಇಂಥ ಅನೇಕ ಸಂಗತಿಗಳನ್ನು ಇವನ ಸ್ವಭಾವದ ಬೆಳವಣಿಗೆಯಲ್ಲಿ ತಂದು ಶ್ರೀ ಕಾರಂತರು ನಂಬಿಕೆ ಬರುವಂತೆ ರಚಿಸಿದ್ದಾರೆ. ಅವರ ಮನೋವಿಶ್ಲೇಷಣಶಕ್ತಿ ಆಶ್ಚರ್ಯಕರವಾಗಿದೆ. ಮುಂದಕ್ಕೆ ಅವರು ಲಚ್ಚನಿಗೆ ದುಷ್ಟಸಹವಾಸವನ್ನು ಒದಗಿಸುತ್ತಾರೆ. ಇದರಿಂದ ಲಚ್ಚನು ಯೌವನದ ಬಾಯಾರಿಕೆಗೆ ಬಲಿಯಾಗಿ ತನ್ನ ಬಾಳಿಗೆ ಬೇನೆಯನ್ನು ತಂದುಕೊಂಡನು. ಅದು ಕೆಂಡದಂತೆ ಸೋಕಿದವರನ್ನೂ ಸುಟ್ಟಿತು. ಕಾಮಸಂತೃಪ್ತಿಗೆ ಬೇಕಾದ ಹಣಕ್ಕಾಗಿ ಅವನು ಏನುಮಾಡಲೂ ಹೇಸಲಿಲ್ಲ; ತಂದೆಯು ಮಡಗಿದ್ದ ಹಣವನ್ನೂ ಕದ್ದನು. ಒಂದೆರಡು ಕಡೆ ನೌಕರಿಯಲ್ಲಿದ್ದಾಗ ಲಂಚಕ್ಕೂ ಕೈಯೊಡ್ಡಿದನು. ನೌಕರಿ ಹೋಯಿತು, ಕಾಮಲಾಲಸೆ ಇಂಗಲಿಲ್ಲ. ಅವನು ಸಂಪಾದಿಸಿದ ಕಾಯಿಲೆ ಕಾಮವನ್ನು ಶಾಂತಿಯಲ್ಲಿಡುವಂಥದೂ ಆಗಿರಲಿಲ್ಲ. ಹಣಕ್ಕಾಗಿ ಹೆಂಡತಿಯಲ್ಲಿ ತೋರಿಕೆಯ ಪ್ರೇಮ. ಅದು ದೊರೆತ ಗಳಿಗೆ ಅವಳನ್ನೂ ನೂಕಿ ಓಡುವನು. ಮೇಲಾಗಿ ಮರುದಿನ ಬೆಳಗ್ಗೆಯೇ ಸಾವಿರಗಟ್ಟಲೆ ಹಣವನ್ನು ಸಂಪಾದಿಸಿಯೇನೆಂಬ ಒಣನಂಬಿಕೆ ಅವನಿಗೆ. ಇದಕ್ಕಾಗಿ ಕುದುರೆಯ ಜೂಜು, ಇಸ್ಪೀಟು ಆಟ, ಹೊಟೇಲಿನ ಸ್ಥಾಪನೆ. ಬಂದ ಹಣ ಕಾಮದ ಕುತ್ತಿಗೆ ವಿನಿಯೋಗ. ಇವನ ದುಷ್ಟತನ ಚಿಂತಿಸಿದಷ್ಟೂ ಸಾಂದ್ರವಾಗಿ ಕಾಣುತ್ತದೆ. ಶ್ರೀ ಕಾರಂತರು ಈ ಪಾತ್ರದ ಸ್ವಭಾವವನ್ನು ಅತಿ ಸೂಕ್ಷ್ಮವಾಗಿ ವಿಭಜಿಸಿದ್ದಾರೆ. ಒಟ್ಟುಗೂಡಿಸಿದರೆ ಒಂದು ದುಷ್ಟಮನಸ್ಸಿನ ಪೂರ್ಣಚಿತ್ರ ಲಭಿಸುತ್ತದೆ. ಆದರೂ ಅದು ಒಂದು ಸಮಸ್ಯೆಯಾಗಿಯೂ ಉಳಿದಿದೆಯೆಂದು ಅನ್ನಿಸುತ್ತದೆ. ಅವನ ಸ್ವಭಾವದಲ್ಲಿ ಅಷ್ಟು ಸ್ಥೈರ್ಯ ತನಗೆ ಸೇರಿದವರ ಸಂಬಂಧದಲ್ಲಿ ಇದ್ದಿತಾದರೂ ಅವನಿಗೂ

ಬೇಕಾದವರು ಕೆಲವರಾದರೂ ಇದ್ದರಲ್ಲ. ತನ್ನ ಸಧರ್ಮನಾದ ಒರಟನಲ್ಲಿ ಅವನಿಗೇನಾದರೂ ಸ್ನೇಹಭಾವಗಳು ಇದ್ದಿರಬೇಕಲ್ಲವೆ? ಅದೂ ಕೂಡ ನಟನೆಯ ದೋಸ್ತಿಯೊ? ತನ್ನ ಪಾಪದ ಒಡನಾಡಿಗಳಲ್ಲಿ ಅವನಿಗೆ ಮಧುರಭಾವಗಳಿದ್ದ ಪಕ್ಷದಲ್ಲಿ ಒಮ್ಮೆಯಾದರೂ ತನ್ನ ಹೆಂಡತಿಗೆ ತಾನು ಮಾಡಿದ ಅನ್ಯಾಯವನ್ನು ಕುರಿತು ಆ ಮಧುರ ಭಾವಗಳು ಅವನನ್ನು ಮರುಗಿಸಲಿಲ್ಲವೆ? ಮಿತ್ರರಲ್ಲಿದ್ದ ಪ್ರೀತಿ ತನ್ನ ಸ್ವರೂಪವನ್ನು ಅವನ ಹೃದಯಕ್ಕೆ ಕೊಂಚವಾದರೂ ತೋರಿಸದಿರುವುದು ಅಸಂಭವ. ಪ್ರೀತಿ ಕಪ್ಪೋ ಬಿಳುಪೋ ಎಂಬಷ್ಟನ್ನಾದರೂ ಅವನು ಬಲ್ಲವನಿರಬೇಕು. ಹಾಗಿದ್ದರೆ ಅವನಲ್ಲಿ ನಿರಂತರವಾದ ನಿರ್ದಯೆ ಇರಲು ಸಾಧ್ಯವೆ? ತನ್ನನ್ನೇ ಅರಸಿಕೊಂಡು ಬಂದ ಮಗನನ್ನು ನೋಡಿದ ಮೇಲೂ ಅವನನ್ನು ಸ್ವಲ್ಪವಾದರೂ ಪಶ್ಚಾತ್ತಾಪ ಸೋಕಲಿಲ್ಲವೆ? ಇದೇ ಮುಂತಾದ ಪ್ರಶ್ನೆಗಳು ಈ ಪಾತ್ರದ ವಿಷಯದಲ್ಲಿ ಬರುತ್ತವೆ.

ತಂದೆಗೆ ತೀರ ವಿರುದ್ಧವಾದ ಸ್ವಭಾವದ ಮಗನು ರಾಮರಾವ್ ಐತಾಳ. ಇದಕ್ಕೆ ಮುಖ್ಯಕಾರಣ ಅವನ ತಾಯಿ ನಾಗವೇಣಿ ಎನ್ನಬಹುದು. ಅವಳ ದಿಟ್ಟತನ, ಸ್ವಾವಲಂಬನೆ, ಸ್ವಾತಂತ್ರ್ಯ ಪ್ರಾಮಾಣಿಕತೆಗಳೆಲ್ಲ ಮಗನಿಗೂ ಬಂದುವು. ಹುಟ್ಟಿದಂದಿನಿಂದ ತಂದೆಯ ಮುಖವನ್ನು ಅವನು ಕಾಣದಿದ್ದುದು ಅವನಿಗೆ ಒಳ್ಳೆಯದೇ ಆಯಿತು. ತನ್ನ ತಾಯಿಯ ಗುಣ ತನಗೆ ಆದರ್ಶವಾಗಿತ್ತು. ಹಿರಿಯರಾದ ಸರಸೋತಿ ಸತ್ಯಭಾಮೆಯರನ್ನು ತನ್ನ ತಾಯಿ ಭಕ್ತಿಯಿಂದ, ಪ್ರೀತಿಯಿಂದ ಸೇವೆಮಾಡುತ್ತಿದ್ದುದನ್ನು ಕಂಡು ಎಳವಯಸ್ಸಿನ ರಾಮನಿಗೂ ಅದು ಮನಸ್ಸಿನಲ್ಲಿ ನಾಟಿರಬೇಕು. ಅವನು ತಾಯ ಕಷ್ಟವನ್ನು ಕಣ್ಣಾರ ಕಂಡವನು; ಕಷ್ಟದಲ್ಲಿ ಬೆಳೆದವನು. ತಂದೆಯ ಹಾಗೆ ಮೋಜಿನಿಂದ ಇಕ್ಕಡೆಗಳಿಂದಲೂ ಹಣ ಕಿತ್ತುತಿಂದು ಬಾಳುವ ಸುಖಜೀವಿಯಲ್ಲ ಅವನು. ನಂಬಿದವರಿಗೆ ವಂಚನೆಯನ್ನು ಉಣಿಸದೆ ವಿದ್ಯಾಭ್ಯಾಸಮಾಡಿ ಕೃತಜ್ಞತೆಯ ಮೂರ್ತಿಯಾಗಿ ತಾನು ಮನುಷ್ಯನಾಗುತ್ತಾನೆ. ತನ್ನ ತಾಯಂತೆಯೇ ಅವನು ಭಾವಜೀವಿ. ಅವನು ತಾಯ ಕೈಮೇಲೆ ಬೆಳೆದ ಮಗ. ತಾನು ಪರೋಕ್ಷದಲ್ಲಿದ್ದರೂ ತಾಯ ಮಾನಸಿಕ ಪೂಜೆಯಲ್ಲಿ ನಿರತನಾಗಿದ್ದ ಏಕಲವ್ಯ; ವೀರಕುವರ.

ಅಮುಖ್ಯ ಪಾತ್ರಗಳಲ್ಲಿ ಹಲವು ತಮ್ಮ ಸ್ವಭಾವ ಸರಳತೆಯಿಂದ ಮನಸ್ಸಿನಲ್ಲಿ ಸದಾ ನಿಲ್ಲುವ ಯೋಗ್ಯತೆಯುಳ್ಳುವಾಗಿವೆ. ಅವುಗಳಲ್ಲಿ ಮೊದಲನೆಯ ಸ್ಥಾನ ಆ ಬಡ ಬಚ್ಚಿಯ ಪ್ರೀತಿಯ ಐಶ್ವರ್ಯಕ್ಕೆ ಸಲ್ಲುತ್ತದೆ. ನಾಗವೇಣಿಯ ತಂಗಿ ಕೃಷ್ಣಿ ತನ್ನ ಅಕ್ಕನ ಸ್ವಭಾವದ ಒಂದು ಪಾಲನ್ನು ಹಂಚಿಕೊಂಡೇ ಹುಟ್ಟಿದವಳು. ಅವಳ ಔದಾರ್ಯ ಆದರಣೆಗಳು ರಾಮನಿಗೆ ಮದರಾಸಿನಲ್ಲಿ ಕಲ್ಪವೃಕ್ಷ. ಸುಬ್ರಾಯ ಉಪಾಧ್ಯರ ಮುದಿತಾಯನ್ನು, ಹಿಂದಿನ ತಲೆಮಾರಿಗೆ ಸಹಜವಾದ ಅಕ್ಕರೆಯ

ಗಣಿಯನ್ನು, ಮರೆಯಲು ಸಾಧ್ಯವಿಲ್ಲ. ಒಂದೊಂದು ಕಾದಂಬರಿಯನ್ನು ವಿಾಸಲಿಟ್ಟು ವಿಸ್ತರಿಸಬಹುದಾದ ಸತ್ವಾತಿಶಯ ಈ ಪಾತ್ರಗಳಲ್ಲುಂಟು.

ಉಳಿದ ಗಂಡು ಪಾತ್ರಗಳಲ್ಲಿ ಶೀನಮಯ್ಯನು ಕೊಂಚ ಕಾದಂಬರಿಯಲ್ಲಿ ಸ್ಥಳ ಆಕ್ರಮಿಸಿದ್ದಾನೆ. ಅವನು ಹಳ್ಳಿಯ ತಂಟೆ ತಕರಾರುಗಳಿಗೆ ತತ್ತಿಯ ಕೋಳಿ. ಅವನು ಹಾಕಿದ ಮೊಟ್ಟೆಗಳು ಮರಿಗಳಾಗಿ ಬಲಿತು ಊರನ್ನು ತಿಪ್ಪೆಯಾಗಿ ಕೆದರ ಬಲ್ಲವು. ಅವನಿಗೆ ಆಡಂಬರ ಹೆಚ್ಚು. ಕಾರ್ಯನಿರ್ವಹಣದಲ್ಲಿ ಸಮರ್ಥನಾದರೂ ಅವನ ಯಜಮಾನಿಕೆ ಜೇಳಿನ ಪಾರುಪತ್ಯ. ಊರಲ್ಲಿದ್ದ ತುಂಡು ಜಮಿಾನುಗಳನ್ನೆಲ್ಲ ಕೊಂಡು ತನ್ನ ಘನತೆಯನ್ನು ಹೆಚ್ಚಿಸಿಕೊಂಡೆನೆಂದು ನಂಬಿದವನು. ಶ್ರೀಮಂತರ ಹುಚ್ಚಾಟಗಳು ಅವನಿಗೆ ಅಪರಿಚಿತವಲ್ಲ. ಹೊಗಳಿಕೆಯಿಂದ ಕೆಲಸ ಸಾಧಿಸಬಹು ದೆಂದು ತಿಳಿದಿದ್ದವನು ಅವನು. ಹಳ್ಳಿಯ ಬದುಕನ್ನು ಇಂಥ ಕೆಲವರು ವ್ಯಕ್ತಿಗಳು ಹಸಗೆಡಿಸುತ್ತಿರುವ ರೀತಿಗೆ ಇವನು ನಿದರ್ಶನ. ಕಷ್ಟಕ್ಕೆ ಒದಗುವ ಮನುಷ್ಯ ನಾರಾಯಣಯ್ಯ. ಅವನ ಸ್ವಭಾವ ಮಧುರ. ಅವನಿಲ್ಲದಿದ್ದರೆ ನಾಗವೇಣಿಯನ್ನು ವಿಚಾರಿಸುವವರಾರು? ಜ್ವರ ಬೀಸಿ ಬಂದು ಸತ್ಯಭಾಮೆಯನ್ನು ಸಾಯಿಸಿ ನಾಗವೇಣಿ ಮಗರಾಮರನ್ನು ತಬ್ಬಿಕೊಂಡಾಗ ಆವರ ಸೇವೆಗೆ ಕರೆಯದೆ ಬಂದು ನಿಂತ ವ್ಯಕ್ತಿ ಅವನು. ವಾಸುದೇವಯ್ಯನವರು ಸಂಭಾವಿತರು; ಪ್ರಪಂಚವನ್ನು ಕೊಂಚ ಬಲ್ಲವರು. ತನ್ನಳಿಯ ತಾನು ಕೆಟ್ಟು ಮಗಳನ್ನೂ ಕೆಸರಿಗೆ ತಳ್ಳಿದಾಗ ಅವರು ಬಲುನೊಂದರು; ಸಹಾಯವನ್ನೂ ನೀಡಿದರು. ನಾಗವೇಣಿಯ ಸಂಗೀತದ ಗುರುಗಳನ್ನು, ಪಿಟೀಲಿನ ಮುದಿ ಸುಬ್ಬರಾಯರನ್ನು, ತಂಪುಹೊತ್ತಿನಲ್ಲಿ ನೆನೆದುಕೊಳ್ಳಬೇಕು. ಮೊಗೇರಬೆಸ್ತನು ಕಥೆಯಲ್ಲಿ ಯಾವ ಕಾರ್ಯವನ್ನು ಮಾಡದಿದ್ದರೂ ತನ್ನ ಮುಗ್ಧತೆಯಿಂದ ನಗುವಿನ ಒರತೆಯಾಗಿದ್ದಾನೆ.

ಗ್ರಂಥಕರ್ತರ ಶೈಲಿ ಚಿತ್ತರಂಜಕವಾಗಿದೆ. ಬಂದ ಹಾಗೆ ಬರೆಯುವ ಪ್ರಯತ್ನ ರಹಿತತೆಯೂ ಬಳಕೆಯ ಮಾತಿನಲ್ಲೇ ಭಾವದ ಮುಗಿಲಿಗೆ ಬಣ್ಣಕಟ್ಟುವ ಕೌಶಲ್ಯವೂ ಮನಸ್ಸಿನ ಅಳಲು ಹಿಗ್ಗು ತರ್ಕಚಿಂತೆ ಬೇಸರಗಳನ್ನು ಮಸೆದು ಸೆರೆಹಿಡಿದು ನಿಲ್ಲಿಸುವ ನಯವೂ ಅದರ ಮುಖ್ಯ ಲಕ್ಷಣಗಳು. ಸಂಗೀತ ವಿದ್ವಾಂಸನಿಗೆ ನುಡಿಸುವ ವಾದ್ಯ ವಶವಾಗಿ ಅವನ ಇಷ್ಟದಹಾಗೆ ಮಿಡಿಯುವಂತೆ ಕಾರಂತರ ಮಾತುಗಾರಿಕೆ ಇದೆ. ಅದು ಅವರಿಗೆ ವಶ, ಇತರರಿಗೆ ವಶ್ಯ. ವರ್ಣಿಸುವ ವಸ್ತು ಯಾವುದಿರಲಿ ಅದನ್ನು ತೈಲಚಿತ್ರದಂತೆ ತುಂಬಿಸಬಲ್ಲ ಶಕ್ತಿ ಅದಕ್ಕುಂಟು. ಇದು ಹೊರಗೆ ಕಾಣುವ ಪ್ರಕೃತಿ ಚಿತ್ರಗಳಲ್ಲೇ ಅಲ್ಲ, ಅಂತರಂಗದ ಆವೇಶಗಳನ್ನು ಬಣ್ಣಿಸುವುದರಲ್ಲಿಯೂ ಪರಿಣತವಾಗಿದೆ. ಪಡುಕರಾವಳಿಯ ಆ ಕಡಲು, ಆ ನೊರೆ ಅಲೆ ಕುದಿತ ಮೊರೆತಗಳು,

ಆ ಶಾಂತಿ ಸುಪ್ತಿಗಳು, ಅದರಂಚಿನಲ್ಲಿ ಮೆಲ್ಲನೆ ಮುಳುಗುವ ಆ ನೇಸರು, ಮೂಡುವ ಆ ಮರಿದಿಂಗಳು, ಆ ಬಿರುಗಾಳಿ ಮೋಡ ಸಿಡಿಲು ಮಿಂಚುಗಳು, ಆ ಮಳೆ, ಹೆಡೆಯಲುಗಿ ತೂಗಾಡುವ ಆ ಹನೆಮರಗಳು, ಆ ಹಾಯಿ ಮಂಜಿಗಳು, ಆ ಮೀನಿನ ಹೊಲಸು ನಾತಗಳು, ಆ ಕಡಲ ಕಿನಾರೆ, ಆ ಅಳುವೆ, ಆ ನಂದನವನದಂತಿರುವ ತೆಂಗಿನ ಸಂತೆ—ಎಲ್ಲವೂ ನೂರು ವಿಧದಲ್ಲಿ ಈ ಕಾದಂಬರಿಗೆ ಭಿತ್ತಿಯಾಗಿದೆ. ಅವುಗಳ ವರ್ಣನೆಯನ್ನು ಏನೆಂದು ಹೇಳೋಣ! ಪಾರ್ವತಿಯ ಸಾವಿನ ಹಾಸಿಗೆಯ ಸುತ್ತ ಕುಳಿತಿರುವ ಆ ಜೀವಗಳ ಒಳಕುದಿ ಬಲು ಚೆನ್ನಾಗಿ ರೂಪುಗೊಂಡಿದೆ. ಇದು ಭಾವ ಗೀತೆಯಷ್ಟು ಸುಂದರವಾಗಿದೆ; ಕಣ್ಣೀರು ತಾನಾಗಿ ಒಡೆದು ಚಿಮ್ಮುತ್ತದೆ. ಅನಾಥೆ ನಾಗವೇಣಿ ಕಡಲ ಅಳುವೆಗೆ ಬೀಳುವಾಗ ಆವಳ ಮನಸ್ಸಿನ ಉದ್ವೇಗ ಭಾರವನ್ನು ಕನ್ನಡಿಸಿರುವ ರೀತಿ ಭಾವಿಸಿ ಭಾವಿಸಿ ಮೆಚ್ಚಬೇಕಾದದ್ದು. ಇವು ಒಂದೆರಡು ನಿದರ್ಶನಗಳು ಮಾತ್ರ. ಕಾರಂತರ ಶೈಲಿ ಸೂಚೀಯಾನ ಕಲೆಯಲ್ಲಿ ಪರಿಣತವಾಗಿ ಈ ಕಾದಂಬರಿಯ ವಿತಾನದಲ್ಲಿ ಚಿತ್ರಗಳ ಚೆಲುವನ್ನು ಸೃಷ್ಟಿಸಿದೆ.

ಕಾದಂಬರಿಯಲ್ಲಿ ಅಡಕವಾಗಿರುವ ಜೀವನತತ್ವ ಏನಿರಬಹುದೆಂಬ ಕುತೂಹಲ ಸಾಧಾರಣವಾಗಿ ಏಳುತ್ತದೆ. ಬಡತನವೆ ಇದಕ್ಕೆ ಒಡೆಯನಾಗಿದ್ದರೂ ಅವನ ಒಡೆತನವನ್ನು ಮುರಿದು ಸ್ವರಾಜ್ಯ ಸಂಪಾದಿಸಲು ಮನುಷ್ಯಪ್ರಯತ್ನ ಕಾಳಗವನ್ನು ಇಲ್ಲಿ ಹೂಡಿದೆ. ಅದರಲ್ಲಿ ಮೊದಲು ಸೋಲುಂಟಾದರೂ ಅಂತ್ಯದಲ್ಲಿ ಜಯ ಲಭಿಸಿದೆ. ಬಡತನಕ್ಕೆ ಸಂಜೂಡಿಸುವ ಶಕ್ತಿ ನಾಗವೇಣಿಯಲ್ಲಿದೆ. ಇವಳಂತೆ ಜನ ಯತ್ನಸಹಿತ ವಾಗಿ ಸಿದ್ಧಿಯನ್ನು ಪಡೆಯಬೇಕೆಂಬ ತತ್ವ ಕಾಣುತ್ತದೆ. ಇದ್ದೊಂದೇ ಅಲ್ಲ; ಇಂಗ್ಲಿಷು ವಿದ್ಯೆ ನಮ್ಮವರಿಗೆ ತಿಳಿಯುವುದಕ್ಕೆ ಮುಂಚೆ ಬಾಳು ಹೇಗಿತ್ತು, ತಿಳಿದ ಹೊಸದರಲ್ಲಿ ಹೇಗಾಯ್ತು ಈಗ ಏನಾಗಿದೆ ಎಂಬೊಂದು ಜಿಜ್ಞಾಸೆಗೆ ಸ್ಪಷ್ಟ ನಿದರ್ಶನ ಈ ಕಾದಂಬರಿ. ಇಂಗ್ಲಿಷು ಕಲಿತ ಹೊಸದರಲ್ಲಿ ಹೆಚ್ಚು ಸಂಬಳ ತರುವ ಸರ್ಕಾರಿ ಉದ್ಯೋಗಗಳ ಪ್ರಲೋಭನೆಗೆ ನಮ್ಮವರು ಒಳಗಾದರು. ಹಿಂದಿನವರ ವೈದಿಕ ವೃತ್ತಿಗಿಂತ ಈ ಲೌಕಿಕವೃತ್ತಿ ಹೆಚ್ಚು ಆದಾಯಕರವೆಂದು ಕಂಡಿತು. ಇದು ಸ್ವಲ್ಪಕಾಲ ನಡೆಯಿತು. ಕಲಿತವರು ಹಳ್ಳಿಯನ್ನು ಬಿಟ್ಟು ಪಟ್ಟಣ ಸೇರುವಂತಾಗಿ ಹಳ್ಳಿಯ ಬದುಕು ಹೀನವಾಯಿತು. ಈಗ ಸರ್ಕಾರಿ ಕೆಲಸದ ಸುಖದ ಹಕ್ಕೆ ಎಲ್ಲರಿಗೂ ಸಿಕ್ಕುವುದಿಲ್ಲೆಂಬ ನಿರಾಸೆ ಒದಗಿದೆ. ಕಲಿತ ವಿದ್ಯೆ ನೌಕರಿಗೆ ಹೊರತಾಗಿ ಬೇರಾವ ವೃತ್ತಿಗೂ ಬೇಕಾದ ಯೋಗ್ಯತೆಯನ್ನು ಕೊಟ್ಟಿಲ್ಲ. ಆದರಿಂದ ನಮ್ಮ ಜನರ ಸ್ವಾವಲಂಬನೆ ಕುಸಿದಿದೆ. ಇತ್ತ ಹಿಂದಿನ ಸಂಸ್ಕೃತಿ ಕೈಬಿಟ್ಟುಹೋಯ್ತು, ಅತ್ತ ಇಂಗ್ಲಿಷು ಸಂಸ್ಕೃತಿಯ ತಿರುಳು ಹಸ್ತಗತವಾಗಿಲ್ಲ. ಈ ನಡುವೆ ನಮ್ಮ ಕಲಿತ ಜನ ಅನಿಶ್ಚಿತತೆಯಲ್ಲಿ ಕಂಗೆಟ್ಟಿದೆ.

ಬಾಳು ಕಲೆಯಿಂದ ದೂರವಾಗಿ ಶುಷ್ಕವಾಗಿದೆ. ಇದಕ್ಕೆ ಪ್ರತೀಕಾರವೇನು? ಉತ್ತರ 'ಮರಳಿಮಣ್ಣಿಗೆ' ಎಂಬ ಮಾತಿನಲ್ಲಿ ಅಡಗಿದ. ರಾಮನ ಜೀವನ ಇದನ್ನು ಆಡಿ ತೋರಿಸುತ್ತಿದೆ. 'ಮರಳಿ ಹಳ್ಳಿಗೆ' ಎಂದು ನಮ್ಮ ದೇಶದ ತಲೆನಾಯಕರು ಆಗಾಗ ಕೂಗಿ ಸಾರುತ್ತಿರುವ ಡಂಗುರದ ಅರ್ಥ ಈ ಕಾದಂಬರಿಯಲ್ಲಿ ಮೂರ್ತೀಭವಿಸಿದೆ. ರಾಜಕೀಯದ ವಿಷಯವಾಗಿಯೂ ಒಂದೆರಡು ಅಂಶಗಳು ಗೋಚರವಾಗುತ್ತವೆ. ದೇಶಾಭಿಮಾನದ ಆವೇಶವು ವಿದ್ಯಾರ್ಥಿ ಜೀವನದಲ್ಲಿ ಕಾರ್ಯೋನ್ಮುಖವಾಗಲು ತೊಡಗಿದರೆ ಅದು ಬರಿಯ ಸೊರೆಯಾಗಿ ಆರಿಹೋಗುವುದೇ ಅಲ್ಲದೆ ಅವರ ಮುಂದಿನ ಬಾಳ್ವೆಗೂ ಹಾನಿಯನ್ನು ತರಬಹುದು. ಹೊಟ್ಟೆತುಂಬಿದ ಬಳಿಕ, ಆಶ್ರಿತರಿಗೆ ನೆಮ್ಮದಿಯ ಬಟ್ಟೆಯನ್ನು ಕಾಣಿಸಿದನಂತರ ರಾಜಕೀಯಕ್ಕೆ ದುಮುಕಬಹುದು, ಸತ್ಯಾಗ್ರಹ ನಡಸಬಹುದು. ಹೊಟ್ಟೆಗಿಲ್ಲದೆ ಇವು ನಡೆಯುವಂತಿಲ್ಲ. ಕೊಡುವ ದಾತಾರರು ಈ ಬಡದೇಶದಲ್ಲಿ ಎಷ್ಟುಮಂದಿ ದೊರೆತಾರು? ಇಂಥ ಆವೇಶಗಳು ಬಂದಾಗ ಬಡವರು ವಿವೇಕವನ್ನು ಕಲಿಯಬಾರದೆ? ಈ ಸಮಸ್ಯೆಗಳೆಲ್ಲ ಗ್ರಂಥಕರ್ತರ ಬಾಳಿನವೋ ಎಂಬಂತೆ ಆತ್ಮೀಯತೆಯಿಂದ ಇಲ್ಲಿ ಕಾಣುತ್ತಿವೆ. ಇವುಗಳಲ್ಲಿ ಆಲೋಚನೆಗೆ ಬೇಕಾದಷ್ಟು ತಾತ್ವಿಕಸಾಮಗ್ರಿ ನಿಕ್ಷಿಪ್ತವಾಗಿದೆ.

ಇಷ್ಟು ಚೆನ್ನಾದ ಮಹಾಕಾದಂಬರಿಯನ್ನು ಕನ್ನಡಕ್ಕೆ ಕೊಟ್ಟಿರುವ ಕಾರಂತರನ್ನು ಹೃತ್ಪೂರ್ವಕವಾಗಿ ನಾಡಿಗೆನಾಡೇ ಅಭಿನಂದಿಸುತ್ತದೆ. ಅವರ ಕಲೆ ಇಲ್ಲಿ ರಸಾಯನವಾಗಿದೆ. ಅವರ ಕಾದಂಬರಿಯ ನಭೋನಿರೀಕ್ಷಣ ಆನಂದದಾಯಕವಾಗಿದೆ. ಸ್ಥಿರತೇಜಸ್ಸಿನ ಸ್ನಿಗ್ಧಕಾಂತಿಯ ಹಲವು ತಾರೆಗಳು ಅಲ್ಲಿ ಸ್ಥಗಿತವಾಗಿವೆ; ವಿನಾಶಕಾರಕ ರೂಕ್ಷನಕ್ಷತ್ರಗಳೂ ಇವೆ. ಈ ಲೋಕದ ಪರಿಚಯವನ್ನೂ ಅದರ ರಮ್ಯತೆಯನ್ನೂ ಕಾರಂತರ ಪ್ರತಿಭೆ ನಮಗೆ ಕಾಣಿಸಿದೆ. ಅವರಿಗೆ ನಮ್ಮ ವಿನಯಮುಖಿಯಾದ ಧನ್ಯವಾದಗಳು.

ಕೆಲವು ಕೊರತೆಗಳನ್ನು ಅವರಿಗೆ ನಿವೇದಿಸಬೇಕಾಗಿದೆ. ಕಾದಂಬರಿಯ ಮೊದಲ ಅರ್ಧ ಅಲಸಗಮನೆಯಾಗಿದ್ದು ಮುಂದಿನ ಅರ್ಧ ಉಸಿರುಕಟ್ಟಿ ಓಡುತ್ತಿದೆ. ಇದರಿಂದ ಮುಂದಿನ ಭಾಗದಲ್ಲಿ ಬರುವ ಕೆಲವು ಸಂದರ್ಭಗಳ ಅಪೇಕ್ಷಣೀಯವಾದ ವಿವರಣೆಗಳು ಮಾಯವಾಗಿ ಆತುರದಿಂದ ಮುಕ್ತಾಯವಾಗಿರುವಂತೆ ಅನ್ನಿಸುತ್ತದೆ. ಕಥೆಯನ್ನು ಓದುವಾಗ ಕೆಲವು ಬೇಸರದ ನಿಮಿಷಗಳನ್ನು ಕಳೆಯಬೇಕಾಗುತ್ತದೆ. ಒಂದೇ ವಿಷಯವನ್ನು ಕುರಿತ ವರ್ಣನೆ ಕೆಲವುಸಲ ಬಂದಿದೆ. ಪಾರ್ವತಿ, ಸತ್ಯಭಾಮೆ, ಲಚ್ಚುಮುಂತಾದವರ ಮದುವೆಗಳ ವರ್ಣನೆ ಒಂದು ಮಾದರಿಗೆ. ಈ ಮೂರು ಮದುವೆಗಳಲ್ಲೂ ಅದೇ ಮಳೆ, ಅದೇ ದಿಬ್ಬಣ, ಅದೇ ಗನ್ಸಾರ್ಲುಗಳ ಹಾರಾಟ, ಅದೇ ಕೋಲಾಹಲ.

ಇವುಗಳಲ್ಲಿ ಪ್ರಮುಖವಾದ ಒಂದಕ್ಕೆ ಎಲ್ಲ ವರ್ಣನೆಯನ್ನೂ ತೆಗೆದಿಟ್ಟು ಮಿಕ್ಕುವನ್ನು ಅದರಂತೆ ಎಂದು ತೇಲಿಸಿದ್ದರೆ ಮೊದಲ ಅರ್ಧದ ಪ್ರಮಾಣವು ಕಡಮೆಯಾಗಿ ಬೇಸರವೂ ತಿಳಿಯಾಗುತ್ತಿತ್ತು. ಗುರಿಕಾರರ ಮದುವೆಗೆ ಶೀನನು ಹೊರಟು ರಾಜೀವಿ ಚಂದಿಯರೊಡನೆ ಸಲಿಗೆ ಬೆಳಸಿದ ಸಂಗತಿಯನ್ನು ಸುಮಾರು ಒಂದು ಪ್ರಕರಣದಲ್ಲಿ ಹೇಳಿದೆ. ಕಥೆ ಸ್ವಾರಸ್ಯವಾಗಿದ್ದರೂ ಅದೆಲ್ಲ ಕಾದಂಬರಿಗೆ ಬೇಕೇ ಎನ್ನಿಸುತ್ತದೆ. ಶೀನನ ಸ್ವಭಾವನಿರೂಪಣೆಗೆ ಇದು ಅವಶ್ಯಕವಾದರೂ ಇಷ್ಟು ವಿಸ್ತಾರ ಅತಿ ಎನ್ನ ಬೇಕಾಗಿದೆ. ಪಡುಕರಾವಳಿಯ ಹಳ್ಳಿಯ ಜನರ ಬದುಕಿನ ವೃತ್ತಿಗಳ ನಾನಾ ಅಂಶದ ವಿವರಣೆಗಳು ಇಲ್ಲಿ ಕೊಟ್ಟಿರುವಷ್ಟೆಲ್ಲ ಕಾದಂಬರಿಗೆ ಬೇಕೆ? ಮೇಲಿಂದ ಮೇಲೆ ಉಳುವ ನೆಡುವ ನೀರುಹಾಯಿಸುವ ಕೆತ್ತುವ ಹೆಣೆಯುವ ನಾನಾ ಕಸಬಿನ ವಿವರಗಳು ಬರುವುದರಿಂದ ಇದೇನು ಸಮಾಜವಿಜ್ಞಾನವೋ ಎಂಬ ಸಂದೇಹ ಬರುವಂತಿದೆ. ಮುಂದೆ ಬರುವ ಕಥೆಯನ್ನು ಸವಿಯಲು ಉತ್ಸುಕವಾಗಿರುವ ಮನಸ್ಸಿಗೆ ಇವೆಲ್ಲ ಬೇಸರ ಗೊಳಿಸುತ್ತವೆ. ಇವು ಅಲ್ಪದ ವಿಷಯಗಳು. ಕಾದಂಬರಿಯ ಒಟ್ಟಂದದಲ್ಲಿ ಇವು ಮರೆತು ಹೋಗುತ್ತವೆ. ಬೇರೆ ಕಡೆಯವರಿಗೆ ಅರ್ಥವಾಗದ, ಅಲ್ಲಿ ಮಾತ್ರ ಬಳಕೆಯಲ್ಲಿರುವ, ಕೆಲವು ಶಬ್ದಗಳಿಗೆ ಅರ್ಥವನ್ನು ಕೊಟ್ಟಿರುವ ಹಾಗೆ ಕಥೆಗೆ ರಂಗಭೂಮಿಯಾಗಿರುವ ಪ್ರದೇಶದ ನಕ್ಷೆಯೊಂದನ್ನು—ಹಾರ್ಡಿಯವರ ಕೆಲವು ಕಾದಂಬರಿಗಳಲ್ಲಿ ಕಾಣಿಸಿರುವ ರೀತಿಯಲ್ಲಿ—ಇಲ್ಲಿ ಕೊಟ್ಟಿದ್ದರೆ ಎಲ್ಲರಿಗೂ ತುಂಬ ಉಪಕಾರವಾಗುತ್ತಿತ್ತು.

ಡಿ. ಎಲ್. ಎನ್.

A Handbook of Virasaivism (ವೀರಶೈವ ಧರ್ಮದ ಕೈಪಿಡಿ)—By DR. S. C. NANDIMATH, M.A., PHD. (Lond.), Principal and Professor of Sanskrit, Lingaraj College, Belgaum, 1941; Crown octavo xvi + 268. Price, Rs. 3.

ಈ ಗ್ರಂಥದಲ್ಲಿ ಹನ್ನೆರಡು ಅಧ್ಯಾಯಗಳೂ ನಾಲ್ಕು ಅನುಬಂಧಗಳೂ, ಕೊನೆ ಯಲ್ಲಿ ಟಿಪ್ಪಣಿಗಳೂ ಇವೆ. ಪ್ರತಿ ಅಧ್ಯಾಯದ ಮೊದಲಲ್ಲಿಯೂ ಅದರೊಳಗೆ ಬರುವ ವಿಷಯದ ಸಾರಾಂಶವನ್ನು ಕೊಟ್ಟಿದೆ. ಟಿಪ್ಪಣಿಗಳಲ್ಲಿ ಮುಖ್ಯವಾಗಿ ಪ್ರಮಾಣ ಗ್ರಂಥಗಳೂ ವಾಕ್ಯಗಳೂ ವಚನಗಳೂ ಇವೆ.

ವೀರಶೈವದ ಉತ್ಪತ್ತಿ, ವೀರಶೈವ ಲೇಖಕರು, ಅಷ್ಟಾವರಣಗಳು, ಶಿವಾಚಾರ, ದಾರ್ಶನಿಕ ಹಿನ್ನೆಲೆ, ದೇವರು, ಲಿಂಗ, ಶಕ್ತಿ ಅಥವಾ ಮಾಯೆ, ಸತ್ತು ಅಸತ್ತು, ಜಗತ್ತು ಜೀವ, ಷಟ್‌ಸ್ಥಲಗಳು, ವೀರಶೈವಧರ್ಮದ ಸಾರಸರ್ವಸ್ವ—ಇವು ಈ ಹನ್ನೆ ರಡು ಅಧ್ಯಾಯಗಳಲ್ಲಿ ಪ್ರತಿಪಾದಿತವಾಗಿರುವ ವಿಷಯಗಳು.

ಗ್ರಂಥಕರ್ತರು ಮೊದಲ ಅಧ್ಯಾಯದಲ್ಲಿ ವೀರಶೈವದ ಉತ್ಪತ್ತಿಯನ್ನು ಕುರಿತು ವಿಚಾರಮಾಡುತ್ತ—ರೇವಣಾದಿ ಪಂಚಾಚಾರ್ಯರು ವೀರಶೈವವನ್ನು ಸ್ಥಾಪಿಸಿದ ರೆಂದು ಸಾಂಪ್ರದಾಯಿಕವಾಗಿ ಹೇಳುವುದಕ್ಕೆ ಇದುವರೆಗೆ ಚಾರಿತ್ರಿಕ ಆಧಾರಗಳು ದೊರೆತಿಲ್ಲ; ಶಿವಪೂಜೆಯು ಹಿಂದೂದೇಶದಲ್ಲೆಲ್ಲಾ ಪುರಾತನಕಾಲದಿಂದ ಇತ್ತು. ಕನ್ನಡ ನಾಡಿನಲ್ಲಿ ಇದ್ದದ್ದನ್ನು ಬಸವಣ್ಣನವರೇ ಮೊದಲಾದವರು ಜೀರ್ಣೋದ್ಧಾರ ಮಾಡಿ ಅದಕ್ಕೆ ಹೊಸ ಜೀವ ತುಂಬಿದರು ಎಂದು ಅಭಿಪ್ರಾಯಪಡುತ್ತಾರೆ. ಈ ಸಂದರ್ಭದಲ್ಲಿ ದೇಸಿಂಗರಾಜನೇ ಜಯಸಿಂಹರಾಜನೆಂದು ನಿರ್ಧರಿಸಿ ವೀರಶೈವದ ಚರಿತ್ರೆಯು ನಮಗೆ ೧೧ನೆಯ ಶತಮಾನದಿಂದ ದೊರೆಯುತ್ತದೆ ಎಂದು ಹೇಳುವುದು ಅಷ್ಟು ತೃಪ್ತಿಕರವಾಗಿಲ್ಲ; ಹನ್ನೆರಡನೆಯ ಶತಮಾನಕ್ಕಿಂತ ಹಿಂದಿನ ವೀರಶೈವದ ಚರಿತ್ರೆ ಗೊತ್ತಿಲ್ಲವೆಂದು ಒಪ್ಪಿಕೊಳ್ಳುವುದೇ ಮೇಲು.

ಎರಡನೆಯ ಅಧ್ಯಾಯದಲ್ಲಿ ಜೇಡರ ದಾಸಿಮಯ್ಯನಿಂದ ಹಿಡಿದು ಷಡಕ್ಷರ ದೇವನ ವರೆಗೆ ಇಪ್ಪತ್ತಾರು ಮುಖ್ಯ ವೀರಶೈವ ಕನ್ನಡ ಕವಿಗಳ ವಿಚಾರವನ್ನು ಸಂಗ್ರಹವಾಗಿ ಹೇಳಿ,[1] ಬಸವಣ್ಣನವರ ಕಾಲ ಚಾರಿತ್ರಕತೆಗಳ ಸಂಬಂಧವಾಗಿ ಇರುವ ಸಮಸ್ಯೆಗಳನ್ನು ಚರ್ಚಿಸಿದ್ದಾರೆ.

ಮುಂದಿನ ಅಧ್ಯಾಯಗಳಲ್ಲಿ ಬರುವ ಮುಖ್ಯ ಅಂಶಗಳನ್ನು ಹೀಗೆ ಸಂಗ್ರಹಿಸ ಬಹುದು :—ಅಷ್ಟಾವರಣಗಳೂ, ಷಟ್‌ಸ್ಥಲಗಳೂ[2] ವೀರಶೈವದ ಮುಖ್ಯಲಕ್ಷಣಗಳು. ವೀರಶೈವರಲ್ಲಿ ಹವನಹೋಮಗಳೂ, ಯಜ್ಞಯಾಗಾದಿಗಳೂ, ಅಗ್ನಿಸಾಕ್ಷಿಕವಾದ ವೈದಿಕಸಂಸ್ಕಾರಗಳೂ ಇಲ್ಲ; ಶವದಹನವಿಲ್ಲ; ಕೀಳು ಮೇಲು ಜಾತಿಗಳಾಗಲಿ, ಪಂಚಸೂತಕಗಳಾಗಲಿ, ಹೆಣ್ಣು ಗಂಡುಗಳ ತಾರತಮ್ಯವಾಗಲಿ ಇಲ್ಲ. ಶಿವದೀಕ್ಷೆ ಲಿಂಗಧಾರಣೆಗಳುಂಟು; ಪಂಚಾಚಾರ, ವಿಧವಾವಿವಾಹ, ಪ್ರೌಢಾವಿವಾಹಗಳುಂಟು. ಅವರು ಏಕದೇವೋಪಾಸಕರು. ಪರಶಿವನೊಬ್ಬನೇ ದೇವರು. ಬ್ರಹ್ಮ, ವಿಷ್ಣು, ರುದ್ರರು ಜೀವರುಗಳು. 'ಲಿಂಗ'ವೇ ಪರಬ್ರಹ್ಮ, ಪರಶಿವ. ಜಗತ್ತು ಮಿಥ್ಯವಲ್ಲ ಸತ್ಯ. ಭಕ್ತಿಸ್ಥಲದಲ್ಲಿ ಭೇದವಿದ್ದರೂ ಶರಣನು ಕ್ರಮವಾಗಿ ಐಕ್ಯಸ್ಥಲಕ್ಕೆ ಏರಿ ಅಲ್ಲಿ ಅಭೇದ ವನ್ನು ಪಡೆಯುತ್ತಾನೆ. ಇದು ತ್ರಿಕ, ಶೈವಸಿದ್ಧಾಂತ, ಅದ್ವೈತ ಇವುಗಳಿಂದ ಕೆಲವು ಅಂಶಗಳಲ್ಲಿ ಬೇರೆ.

---

[1] ಮೊದಲನೆಯ ಅನುಬಂಧದಲ್ಲಿ ಇನ್ನೂ ಅರವತ್ತೇಳು ಜನರ ಸೂಕ್ಷ್ಮ ಪರಿಚಯವಿದೆ.

[2] ಎರಡನೆಯ ಅನುಬಂಧದಲ್ಲಿ ಆರು ಸ್ಥಲಗಳು ಹೇಗೆ ಮುವ್ವತ್ತಾರು, ಇನ್ನೂರ ಹದಿನಾರು, ನೂರೊಂದು ಪ್ರಭೇದಗಳಾಗುತ್ತವೆಯೆಂದೂ ಯೋಗಕ್ಕೂ ವೀರಶೈವಕ್ಕೂ ಹೇಗೆ ಸಂಬಂಧವಿದೆ ಯೆಂದೂ ವಿವರಿಸಿದೆ.

ಡಾಕ್ಟರ್ ನಂದಿಮಠರವರು ಕನ್ನಡ ಸಂಸ್ಕೃತಗಳನ್ನು ಚೆನ್ನಾಗಿ ವ್ಯಾಸಂಗ ಮಾಡಿದ ವಿದ್ವಾಂಸರು. ಸೀಮೆಗೆ ಹೋಗಿ ಡಾ|| ಥಾಮಸ್, ಬಾರ್ನೆಟ್ ಮುಂತಾದ ಪ್ರಾಚ್ಯ ಪಂಡಿತರೊಡನೆ ಕೆಲಸಮಾಡಿ ಶಿಕ್ಷಣಪಡೆದವರು. ಆದ್ದರಿಂದ ಅವರ ಬರೆವಣಿಗೆಯಲ್ಲಿ ವಿದ್ವತ್ತು ಇದೆ, ವಿಚಾರವಿದೆ. ಅಭಿಮಾನದಿಂದಲೇ ಅವರು ಯಾವುದಕ್ಕೂ ಅತಿ ಪ್ರಾಚೀನತೆಯನ್ನಾಗಲಿ ಪ್ರಾಶಸ್ತ್ಯವನ್ನಾಗಲಿ ಕೊಡಲು ಹೋಗುವುದಿಲ್ಲ. ಹೇಳುವುದನ್ನು ಖಚಿತವಾಗಿ ಸ್ಪಷ್ಟವಾಗಿ ಸರಳವಾಗಿ ಹೇಳುತ್ತಾರೆ. 'ಕೈಪಿಡಿ'ಯಾದ್ದರಿಂದ ಇದರಲ್ಲಿ ವಾದವಿವಾದಗಳಿಗೂ ವಿವರಗಳಿಗೂ ಕೈ ಹಾಕಿಲ್ಲ; ಹೀಗೆಂದು ಮುಖ್ಯವಾದ ದೊಡ್ಡ ದೊಡ್ಡ ಸಮಸ್ಯೆಗಳನ್ನು ಎತ್ತಿ ತಮ್ಮ ಅಭಿಪ್ರಾಯವನ್ನು ಹೇಳದೆ ಬಿಟ್ಟಿಲ್ಲ. ಯಾವಾಗಲೂ ತೆರೆದ ಮನಸ್ಸಿನಿಂದ ಎಲ್ಲ ಸಂಗತಿಗಳನ್ನೂ ಗ್ರಹಿಸಿ, ಪರಿಶೀಲಿಸಿ, ವಿಮರ್ಶೆಮಾಡುತ್ತಾರೆ. ವೀರಶೈವದ ಮೇಲೆ ಅದ್ವೈತವೇದಾಂತದ ಮತ್ತು ವಿಜ್ಞಾನವಾದದ ಪ್ರಭಾವವೂ ಬಿದ್ದಿರಬಹುದು (ಪುಟ ೧೧೧, ೧೧೪), ಜೈನರ ಗುಣಸ್ಥಾನಗಳೂ ಷಟ್‌ಸ್ಥಲಗಳಂತೆಯೇ ಇವೆ (ಪುಟ ೧೬೫)—ಎಂದು ಅವರು ಸೂಚಿಸಿರುವುದು ಇದಕ್ಕೆ ಉದಾಹರಣೆ. ಪ್ರಮಾಣವಿಲ್ಲದ್ದನ್ನು ಅವರು ಸಾಧಿಸಲು ಹೊರಡುವುದಿಲ್ಲ (ಪುಟ ೧೮, ೫೩). ಮೊಹೆಂಜೊದಾರೊ ಹರಪ್ಪಗಳಲ್ಲಿ ದೊರೆತ ಕೆಲವು ಮೂರ್ತಿಗಳನ್ನು ನೋಡಿ ಸರ್ ಜಾನ್ ಮಾರ್ಷಲ್ ಅವರೇ ಇವು ಪಾಶುಪತಧರ್ಮಕ್ಕೂ ಯೋಗಕ್ಕೂ ಸಂಬಂಧಪಟ್ಟಿರಬಹುದೆಂದು ಸೂಚಿಸಿದ್ದರೂ, ಡಾಕ್ಟರ್ ನಂದಿಮಠರು ಮಹೆಂಜೊದಾರೋವಿನ ಪ್ರಸ್ತಾಪವನ್ನೇ ಎತ್ತಿಲ್ಲ. ಇದು ಉಚಿತವೆಂದು ನಮಗೆ ತೋರುತ್ತದೆ. ಏಕೆಂದರೆ ಅದರ ಮೇಲೆ ಲೇಖನಗಳು ಬೇಕಾದಷ್ಟು ಬಂದಿರುವುವಾದರೂ ಅದರ ಸಂಸ್ಕೃತಿಯ ವಿಚಾರವಾಗಿ ಈಗ ಯಾವುದನ್ನೂ ನಿರ್ವಿವಾದವಾಗಿ ಹೇಳುವಂತಿಲ್ಲ. ಅದು ದ್ರಾವಿಡ ಅಥವಾ ಪೂರ್ವದ್ರಾವಿಡವಾಗಿರಬೇಕೆಂದು ಕೆಲವರು ಹೇಳುತ್ತಿದ್ದಾರೆ. ಇವರ ಹೇಳಿಕೆ ಎಲ್ಲರೂ ಒಪ್ಪುವಂತಿಲ್ಲ. ಐದನೆಯ ಅಧ್ಯಾಯದಲ್ಲಿ ಡಾಕ್ಟರವರು 'ಲಿಂಗ'ವೆಂದರೇನು? ಎಂದು ವಿಚಾರಮಾಡುತ್ತ, 'ಲಿಂಗ'ವೆಂದರೆ ಪರಬ್ರಹ್ಮ ಅಥವಾ ಪರಶಿವ ಎಂಬ ವಚನಕಾರರ ಅಭಿಪ್ರಾಯವನ್ನು ಸಪ್ರಮಾಣವಾಗಿ ನಿರೂಪಿಸಿದ್ದಾರೆ. ಅಥರ್ವವೇದದ 'ಸ್ಕಂಭ'ಕ್ಕೂ ಇದಕ್ಕೂ ಸಂಬಂಧವಿರಬಹುದೆಂದು ಸೂಚಿಸಿದ್ದಾರೆ. 'ಅಂಗ'ವೆಂದರೆ ಜೀವ, 'ಲಿಂಗ'ವೆಂದರೆ ಪರಬ್ರಹ್ಮ ಎಂಬುದು ಪ್ರಸಿದ್ಧವಾಗಿದೆ. ಆದರೆ ಈ ಶಬ್ದಕ್ಕೆ ವ್ಯುತ್ಪತ್ತಿ ಹೇಗೆ? ಇದಕ್ಕೆ ಸಾಂಪ್ರದಾಯಿಕರು ಹೇಳುವ 'ಗಮ್ + ಲಿ = ಲಿಂಗ' ಇತ್ಯಾದಿ ನಿರುಕ್ತಿಯು ತೃಪ್ತಿಕರವಾಗಿಲ್ಲವೆಂದು ಗ್ರಂಥಕರ್ತರೇ ಒಪ್ಪಿಕೊಂಡಿದ್ದಾರೆ. ಈ ಸಂದರ್ಭದಲ್ಲಿ 'ಲಿಂಗ'ಶಬ್ದವು ಪ್ರಾಯಶಃ ಸಂಸ್ಕೃತ

ಶಬ್ದವಲ್ಲವೆಂದೂ ಆಸ್ಟ್ರೋ-ಏಷಿಯಾಟಿಕ್ ಶಬ್ದವಿರಬಹುದೆಂದೂ ಹೇಳುವ ಪಾಶ್ಚಾತ್ಯ ವಿದ್ವಾಂಸರ ಅಭಿಪ್ರಾಯವನ್ನು ಸೂಚಿಸಬಹುದಾಗಿತ್ತು.[1] ಲಿಂಗಪೂಜೆಯ ಉತ್ಪತ್ತಿಯ ವಿಚಾರವೂ ಹೀಗೆಯೇ. ಲಿಂಗವು ಪುರುಷಚಿಹ್ನೆ ಎಂದ ಮಾತ್ರಕ್ಕೆ ಅನೇಕರು ಅಲ್ಲವೇ ಅಲ್ಲವೆಂದು ಪ್ರತಿಭಟಿಸುವರು. ಆಗಿದ್ದರೆ ತಾನೇ ತಪ್ಪೇನು? ಅದರ ರಹಸ್ಯವನ್ನು ಇಂದಾದರೂ ವೈಜ್ಞಾನಿಕರು ಕಂಡುಕೊಂಡಿದ್ದಾರೆಯೆ? ದೇವರ ಮಹಿಮೆಯನ್ನು ಯೋಚಿಸಬಲ್ಲ ಮುಮುಕ್ಷುವಿಗೆ ಜೀವೋತ್ಪತ್ತಿ ಸಮಸ್ಯೆಗಿಂತ ಘನವಾದ ವಿಚಾರವೇನು ಬೇಕು? ಶ್ರೀ ರಾಮಕೃಷ್ಣ ಪರಮಹಂಸರು 'ಯೋನಿ' ಎಂಬ ಮಾತನ್ನು ಕೇಳಿದಕ್ಷಣವೇ ಜಗತ್ತಿಗೆಲ್ಲಾ ಮೂಲ ಕಾರಣನಾದ ಪರಮಾತ್ಮನ ನೆನಪು ಬಂದು ಸಮಾಧಿ ಹೊಂದುತ್ತಿದ್ದರಂತೆ. ಮುಖ್ಯವಾದ ಪ್ರಶ್ನೆಯೇನೆಂದರೆ ಲಿಂಗವು ಮೊಟ್ಟಮೊದಲು ಪೂಜಾ ವಸ್ತುವಾದಾಗ ಅದು ಯಾವುದರ ಪ್ರತೀಕವಾಗಿತ್ತು ಎಂಬುದು. ಅದನ್ನು ಈಗ ಹೀಗೇ ಎಂದು ನಿರ್ಣಯಿಸಲಾಗುವುದಿಲ್ಲ.

ವೀರಶೈವಮತಕ್ಕೂ ವೈದಿಕಮತಕ್ಕೂ ಇರತಕ್ಕ ಸಂಬಂಧವೇನು ಎಂಬುದನ್ನು ವಿದ್ವಾಂಸರು ಇನ್ನೂ ಖಚಿತವಾಗಿ ವಿಚಾರಮಾಡಬೇಕು. ಶೈವವು ವೈದಿಕ. ಜೈನ, ಬೌದ್ಧಗಳಂತೆ ವೇದಬಾಹಿರವೆಂದು ಎಣಿಸಲ್ಪಟ್ಟಿರಲಿಲ್ಲ; ಕಾಲಕ್ರಮದಲ್ಲಿ ಶೈವವು ವೈದಿಕಮತಕ್ಕೆ ಒಳಗಿನಿಂದ ವಿರೋಧಪಡೆದು ಪ್ರತಿಭಟಿಸಿರಬಹುದು[2] ಎಂದು ಗ್ರಂಥಕರ್ತರು ಅಭಿಪ್ರಾಯಪಡುತ್ತಾರೆ. ಈ ಆಂತರ ವಿರೋಧಕ್ಕೆ ಕಾರಣವೇನು? ಜೈನ, ಬೌದ್ಧ, ಯೋಗ, ಶೈವ, ವೈಷ್ಣವ ಮತಗಳಿಗೆಲ್ಲಾ ಮೂಲಾಧಾರಗಳು, ಅಹಿಂಸೆ, ದಯೆ. ಹಿಂಸೆ ಇಲ್ಲದೆ ಯಾಜ್ಞಿಕಮತವು ನಿಲ್ಲದು. ಯಜ್ಞಕ್ಕೆ ಪ್ರಾಧಾನ್ಯ ಹೋಗಿ 'ಪೂಜೆಗೆ' ಪ್ರಾಬಲ್ಯ ಯಾವಾಗ ಬಂತು, ಕರ್ಮ ಖಿಲವಾಗಿ ಭಕ್ತಿ ಯಾವಾಗ ಬಲವಾಯಿತು ಎಂಬುದೊಂದು ದೊಡ್ಡ ಪ್ರಶ್ನೆ. ಇದನ್ನು ಈಗ ಹೇಳಲಾಗುವುದಿಲ್ಲವೆಂದರೂ (ಪು. ೫೨) ಶಿವನು ದ್ರಾವಿಡದೇವನೆಂಬಂತೆ, ಅಹಿಂಸೆ, ದಯೆ, ಭಕ್ತಿ ಇವು ದ್ರಾವಿಡ ಜನದ ಲಕ್ಷಣಗಳಲ್ಲವೇ ಎಂದು ವಿಚಾರಮಾಡಬೇಕು. ವೀರಶೈವದ ಐಕ್ಯತತ್ವವು ಉಪನಿಷತ್ತಿನ ಅದ್ವೈತ ತತ್ವವೆ; ಅಷ್ಟು ಮಟ್ಟಿಗೆ ಅದು ವೈದಿಕವೇಯೆ. ಆದರೆ ಸಂಹಿತೆ ಬ್ರಾಹ್ಮಣಗಳ ಯಾಜ್ಞಿಕ ಧರ್ಮವು 'ಶಾಂತಂ ಶಿವಮದ್ವೈತಂ' ಕಡೆಗೆ ತಿರುಗಿತೇಕೆ? ಆರ್ಯಜನರಲ್ಲಿ ಆಗ ಏನು ಬದಲಾವಣೆಯಾಯಿತು? ಅದು ಆಂತರವೇ ಬಾಹ್ಯವೇ? ಬಾಹ್ಯವಾದರೆ ಯಾವ ಹೊಸ ಘರ್ಷಣೆಯುಂಟಾಯಿತು? ದ್ರಾವಿಡ ಜನರ ಸಂಪರ್ಕವೇ? ಇದು ಇನ್ನೂ ಗೂಢವಾದ ವಿಚಾರ.

---

[1] Pre-Aryan and Pre-Dravidian in India, page 8-15.

[2] It is more probable that Saivism was a revolt from within. (P. 53).

ಶ್ರೀಮರ್ಾ ನಂದಿಮಠರವರು ತಮ್ಮ ಗ್ರಂಥವನ್ನು ಶುದ್ಧವಾದ ತಿಳಿಯಾದ ಇಂಗ್ಲಿಷಿನಲ್ಲಿ ಬರೆದಿದ್ದಾರೆ. ಕೆಲವು ಮಾತುಗಳು ನಮಗೆ ಸುಪರಿಚಿತವಾಗಿರುತ್ತವೆ; ಆದರೆ ಅವುಗಳ ಅರ್ಥ ಮನಸ್ಸಿಗೆ ಸ್ಪಷ್ಟವಾಗಿರುವುದಿಲ್ಲ; ಇವುಗಳನ್ನು ಭಾಷಾಂತರ ಮಾಡಿದರೆ, ಅಥವಾ ಭಾಷಾಂತರದಲ್ಲಿ ಓದಿದರೆ, ಹೊಸ ಬೆಳಕು ತೋರುತ್ತದೆ; ರಾತ್ರಿಯಲ್ಲಿ ಕಂಡದ್ದನ್ನು ಮತ್ತೆ ಹಗಲಲ್ಲಿ ನೋಡಿದಂತಾಗುತ್ತದೆ. ಆದ್ದರಿಂದ ಇಂಗ್ಲಿಷನ್ನು ಬಲ್ಲ ವೀರಶೈವಾಭಿಮಾನಿಗಳು ಈ ಗ್ರಂಥವನ್ನು ಓದುವುದರಿಂದ ತುಂಬ ಪ್ರಯೋಜನವುಂಟೆಂದು ನಾವು ಅಭಿಪ್ರಾಯಪಡುತ್ತೇವೆ. ರಾವ್ ಬಹದ್ದೂರ್ ಹಳಕಟ್ಟಿಯವರೇ ಮುಂತಾದವರ ಪ್ರಯತ್ನದಿಂದ ಈಗ ಹಲವು ವೀರಶೈವ ಗ್ರಂಥಗಳು ಪ್ರಕಟವಾಗಿದ್ದರೂ ಕನ್ನಡದಲ್ಲಿ ಇಷ್ಟು ಸಂಗ್ರಹವಾಗಿ ಸಪ್ರಮಾಣವಾಗಿ ಈ ವಿಷಯವನ್ನು ನಿರೂಪಿಸುವ ಗ್ರಂಥ ಇನ್ನೂ ಆಗಿಲ್ಲವೆಂದು ಹೇಳಬೇಕಾಗಿದೆ. ಈ ದೃಷ್ಟಿಯಿಂದ ಡಾ|| ನಂದಿಮಠರವರೇ ಆಗಲಿ ಇತರರೇ ಆಗಲಿ ಈ ಗ್ರಂಥದ ಕನ್ನಡದ ಆವೃತ್ತಿಯನ್ನು ಆದಷ್ಟು ಬೇಗನೆ ಹೊರಡಿಸುವುದು ಅತ್ಯಾವಶ್ಯಕವೆಂದು ಬೇರೆ ಹೇಳಬೇಕಾಗಿಲ್ಲ. ಇಂಗ್ಲಿಷನ್ನು ತಿಳಿಯದ ಕನ್ನಡಿಗರಿಗೆ ಅದರಿಂದ ದೊಡ್ಡ ಉಪಕಾರವಾಗುತ್ತದೆ. ಕನ್ನಡವನ್ನು ತಿಳಿಯದ ವೀರಶೈವ ತತ್ವಧರ್ಮ ಜಿಜ್ಞಾಸುಗಳಿಗಂತೂ ಪ್ರಕೃತ ಇಂಗ್ಲಿಷ್ ಗ್ರಂಥದ ಉಪಯೋಗವು ಅಪಾರವಾಗಿದೆ. ಬೇರೆ ಪ್ರಾಂತಗಳ ಮತ್ತು ದೇಶಗಳ ಜನದೊಡನೆ ವ್ಯವಹಾರಕ್ಕೆ ಇಂದು, ಪ್ರಾಯಶಃ ಮುಂದೆ, ಇಂಗ್ಲಿಷು ಒಂದೇ ಇರುವ ಸಾಧನ.

ಇಂಥ ಇಂಗ್ಲಿಷ್ ಗ್ರಂಥಗಳಿಗೆ ಒಂದು ಅಕಾರಾದಿ ಇರುವುದು ರೂಢಿ. ಅದನ್ನು ಮಾಡಿ ಸೇರಿಸಿದ್ದರೆ ಗ್ರಂಥವು ಇನ್ನೂ ಹೆಚ್ಚು ಉಪಯುಕ್ತವಾಗುತ್ತಿತ್ತು.

ಎ. ಆರ್. ಕೃ.

ಸಾದರ ಸ್ವೀಕಾರ

೧. **ಬಿಸ್ಲಾಡಿ ಚೆಲ್ವಿ ಮತ್ತು ಕುರುಬನ ಮೋಕ್ಷ**—ಬರೆದವರು : ಶ್ರೀಮಾನ್ ಅಜ್ಜಂಪುರ ಶೇಷಗಿರಿರಾಯರು ; ಮಿತ್ರಸಂಘದ ಸಾಹಿತ್ಯಮಾಲೆ ೧ ; ಸಂಪಾದಕರು : ಶ್ರೀಮಾನ್ ಕೆ. ಎನ್. ದೊರೆಸ್ವಾಮಿ ; ಪ್ರಕಾಶಕರು : ಮಿತ್ರಸಂಘ, ಬೆಂಗಳೂರು ; ಕ್ರೌನ್ ೮. ೫೬ ; ಬೆಲೆ, ೬ ಆಣೆ.

೨. **ಆಧುನಿಕ ರಷ್ಯಾ (ಯು.ಎಸ್.ಎಸ್.ಆರ್.)**—ಗ್ರಂಥಕರ್ತರು: ಶ್ರೀಮಾನ್ ಪಿ. ಆರ್. ರಾಮಯ್ಯ, ಬಿ.ಎಸ್‌ಸಿ. ; ಪ್ರಕಾಶಕರು : ತಾಯಿನಾಡು ಪ್ರಕಟನಾಲಯ, ಬೆಂಗಳೂರು ನಗರ ; ಕ್ರೌನ್ ೮. ೩೫೬+viii ; ಬೆಲೆ, ರೂ. ೧—೮—೦.

೩. **Third Annual Report and Audited Statement of Accounts of The National Kannada Education Society, Bombay.**

೪. **ಗೀತಾ ಪ್ರವಚನಗಳು** (ಅಧ್ಯಾಯ ೧-೨)—ಮೂಲ ಲೇಖಕರು : ಶ್ರೀಮಾನ್ ಆಚಾರ್ಯ ವಿನೋಬಾ ಭಾವೆ ; ಪ್ರಕಾಶಕರು : ಅವಧೂತ ಗ್ರಂಥಾಲಯ, ಹುಬ್ಬಳ್ಳಿ ; ಕ್ರೌನ್ ೮. ೩೬ ; ಬೆಲೆ, ೪ ಆಣೆ.

೫. **ಆತ್ಮಾರ್ಪಣ** (ಸರಸಸಂಗೀತ ಸಮಸ್ಯಾತ್ಮಕ ನಾಟಕ)—ಕುಸುರಿಸಿದವರು : ಶ್ರೀಮಾನ್ "ಕಾವ್ಯಾನಂದ" (ಸಿದ್ಧಯ್ಯ ಪುರಾಣಿಕ) ; ಪ್ರಕಾಶಕರು : ವೀರಶೈವ ತರುಣಸಂಘ, ಹೈದರಾಬಾದು ; ಡೆಮಿ ೮. ೨೦+೧೧೨ ; ಬೆಲೆ, ?

೬. **ಶ್ರೀಮದ್ದಯಾನಂದರ್ಷಿ ಜೀವನಚರಿತಂ**—ಲೇಖಕರು : ಶ್ರೀಮಾನ್ ಸುಧಾಕರ ; ಕ್ರೌನ್ ೮. ೫೦೦ ; ಬೆಲೆ, ರೂ. ೧—೮—೦.

೭. **ನೋಡಗಳು** (ಏಳು ಸಣ್ಣ ಕತೆಗಳ ಸಂಗ್ರಹ)—ಬರೆದವರು : "ಶ್ರೀ ಸ್ವಾಮಿ" ; ಮನೋಹರ ಗ್ರಂಥಮಾಲೆಯ ೫೭ನೆಯ ಕುಸುಮ ; ಕ್ರೌನ್ ೮. ..೦+೧೫೭ ; ಬೆಲೆ, ರೂ. ೧.

೮. **ತೆನಾಲಿ ರಾಮಕೃಷ್ಣ**—ನಾಟಕಕಾರರು : ಶ್ರೀಮಾನ್ ಸಿ. ಕೆ. ವೆಂಕಟರಾಮಯ್ಯ, ಎಂ.ಎ., ಎಲ್‌ಎಲ್.ಬಿ. ; ಮನೋಹರ ಗ್ರಂಥಮಾಲೆಯ ೫೮ನೆಯ ಕುಸುಮ ; ಕ್ರೌನ್ ೮. ೪+೯೫ ; ಬೆಲೆ, ರೂ. ೧.

೯. **ತಂತ್ರಗಾರ ಕರಟಕರಾಯ ನರಿಯಣ್ಣನ ಕತೆ**—ಬರೆದವರು : ಶ್ರೀಮಾನ್ "ನಾ" ; ತಂದವರು : ಶ್ರೀಮಾನ್ ಜೋಶಿ ಶಂಕರರಾಯರು ; ಪ್ರಕಾಶಕರು : ಕನ್ನಡ ಸರಸ್ವತೀ ಭಾಂಡಾಗಾರ, ಧಾರವಾಡ ; ಕ್ರೌನ್ ೮. ೭೮+೭ ; ಬೆಲೆ, ೧೨ ಆಣೆ.

೧೦. ದಾರಿಯ ಬುತ್ತಿ—ಕನ್ನಡಿಸಿದವರು : ಶ್ರೀಮಾನ್ ಕೆ. ಗೋವಿಂದರಾಯರು ; ತಂದವರು : ಶ್ರೀಮಾನ್ ಜೋಶಿ ಶಂಕರರಾಯರು ; ಪ್ರಕಾಶಕರು : ಕನ್ನಡ ಸರಸ್ವತೀ ಭಾಂಡಾಗಾರ, ಧಾರವಾಡ ; ಡೆಮಿ ಷೋ. ೧೦ + ೪೪ ; ಬೆಲೆ, ೪ ಆಣೆ.

೧೧. ಮಲ್ಲಯುದ್ಧ—ಬರೆದವರು : ಶ್ರೀಮಾನ್ ಭೀಮರಾಯಪ್ಪ ಬಾಳಪ್ಪ, ಮಮದಾಪೂರ, ಬೆಳಗಾವಿ ; ಸಚಿತ್ರ, ಕ್ರೌನ್ ಅ. ೮ + ೯೬ ; ಬೆಲೆ, ರೂ. ೧.

೧೨. ವ್ಯವಸಾಯದ ಮಣ್ಣುಗಳು—ಲೇಖಕರು : ಶ್ರೀಮಾನ್ ಕೂರಪಾಡು ಗುಂಡಪ್ಪ, ಬಿ.ಎ. ; ಮೈಸೂರು ವಿಶ್ವವಿದ್ಯಾನಿಲಯದ ಸರ್ ಕೆ. ಪಿ. ಪುಟ್ಟಣ್ಣಚೆಟ್ಟರ ಪುದುವಟ್ಟಿನ ಪ್ರಕಟನ ಮಾಲೆ ೪ ; ಪೂ. ಅ. ೧೦ + ೮೦ ; ಬೆಲೆ, ೨ ಆಣೆ.

೧೩. ಆಕಾಶಯಾನ—ಲೇಖಕರು : ಶ್ರೀಮಾನ್ ಬಿ. ಕೆ. ಎನ್. ರಾವ್ ; ಮೈಸೂರು ವಿಶ್ವವಿದ್ಯಾನಿಲಯದ ಸರ್ ಕೆ. ಪಿ. ಪುಟ್ಟಣ್ಣಚೆಟ್ಟರ ಪುದುವಟ್ಟಿನ ಪ್ರಕಟನಮಾಲೆ ೫ ; ಪೂ. ಅ. ii + ೧೩೪ ; ಬೆಲೆ, ೨ ಆಣೆ.

೧೪. ದೈವಬಲ ಮತ್ತು ಲೀಲಾಮಣಿ—ಲೇಖಕರು ಮತ್ತು ಪ್ರಕಾಶಕರು : ಶ್ರೀಮಾನ್ ಕೆ. ಎಲ್. ಐಯ್ಯರ್ ; ಕ್ರೌನ್ ಅ. ೩೦ ; ಬಾಲಮಧುರಾವಳಿ ಕುಸುಮ ೧ ; ಬೆಲೆ, ೩ ಆಣೆ.

೧೫. ಮೈಸೂರಿನ ಮಹನೀಯರು—ಸಂಪಾದಕರು : ಶ್ರೀಮಾನ್ ಜಿ. ಎಸ್. ಕೃಷ್ಣರಾವ್ ; ಕ್ರೌನ್ ಅ. ೬ + ೫೧ ; ಕಥಾಚಂದ್ರಿಕಾ ಗ್ರಂಥಮಾಲೆ ೧ ; ಬೆಲೆ, ೬ ಆಣೆ.

೧೬. ವೀರಶೈವ ಸಮಾಜ ಸೇವಾಸಂಘದ (ಬೆಂಗಳೂರು) **ನಾಲ್ಕನೆಯ ಐದನೆಯ ಮತ್ತು ಆರನೆಯ ವರ್ಷಗಳ ವರದಿ.**

ವಸ್ತುಕೋಶ

ಕಳೆದ ತಿಂಗಳಿನ ಹನ್ನೊಂದನೆಯ ತಾರೀಖು ಕನ್ನಡದ ಅಭಿಮಾನಿಗಳಿಗೆ ಬಹು ಸಂತೋಷವನ್ನು ನೀಡಿದ ಒಂದು ದಿನ. ಅಂದು ಕರ್ಣಾಟಕ ಸಂಘಗಳ ಚರಿತ್ರೆಯಲ್ಲಿ ಸುವರ್ಣಾಕ್ಷರಗಳಿಂದ ಬರೆದಿಡಬೇಕಾದ ಒಂದು ಅಪೂರ್ವ ಶುಭಸಂಗತಿಯು ನೆರವೇರಿತು. ಕರ್ಣಾಟಕ ರತ್ನಸಿಂಹಾಸನಾಧೀಶ್ವರರೂ ಮೈಸೂರು ವಿಶ್ವವಿದ್ಯಾನಿಲಯದ ಛಾನ್ಸೆಲರವರೂ ಆದ ಶ್ರೀಮನ್ಮಹಾರಾಜ ಶ್ರೀ ಜಯಚಾಮರಾಜ ಒಡೆಯರ್ ಬಹದ್ದೂರ್ ಮಹಾಸ್ವಾಮಿಯವರು ಆ ದಿವಸ ಶಿವಮೊಗ್ಗ ನಗರದಲ್ಲಿ ಶ್ರೀಮಾನ್ ಹಸೂಡಿ ವೆಂಕಟಶಾಸ್ತ್ರಿಗಳು ಮುವ್ವತ್ತುಸಾವಿರ ರೂಪಾಯಿ ಮುಟ್ಟಿಸಿ ಕರ್ಣಾಟಕ ಸಂಘಕ್ಕೆ ಕಟ್ಟಿಸಿಕೊಟ್ಟ ಭವ್ಯವಾದ ನೂತನ ಭವನದ ಪ್ರಾರಂಭೋತ್ಸವವನ್ನು ನೆರವೇರಿಸಿಕೊಟ್ಟರು. ಶ್ರೀಮಾನ್ ಶಾಸ್ತ್ರಿಗಳವರೂ ಶಿವಮೊಗ್ಗ ಕರ್ಣಾಟಕ ಸಂಘದ ಸದಸ್ಯರೂ ಮಹಾಸ್ವಾಮಿಯವರಿಗೆ ಮುಂದಿನ ಬಿನ್ನವತ್ತಳೆಯನ್ನು ಅರ್ಪಿಸಿದರು :

ಕನ್ನಡಕ್ಕೆ ಒಂದು ಗುಡಿ

ಮಹಾಸ್ವಾಮಿ,

ಮಹಾಸ್ವಾಮಿಯವರ ಮಲೆನಾಡಿನ ಪ್ರವಾಸ ಸುಖವಾಗಿಯೂ ಆನಂದದಾಯಕವಾಗಿಯೂ ನಡೆಯಲೆಂದೂ, ಮಲೆನಾಡಿನ ಸೊಗಸಾದ ನೋಟಗಳು ಮಹಾಸ್ವಾಮಿಯವರಿಗೆ ಹೃದಯಂಗಮವಾಗಲೆಂದೂ ವಿನಯಪೂರ್ವಕವಾಗಿ ಹಾರೈಸಿ, ಮಹಾಪ್ರಭುಗಳವರಿಗೆ ಸುಖಾಗಮನವನ್ನು ಬಯಸಲು ಅಪ್ಪಣೆ ಬೇಡುತ್ತೇವೆ, ಮಹಾಸ್ವಾಮಿ.

ಮಹಾಸ್ವಾಮಿಯವರು ರಾಜ್ಯಸೂತ್ರವನ್ನು ವಹಿಸಿದ ಮೇಲೆ ಎರಡು ಬಾರಿ ಮಲೆನಾಡಿನಲ್ಲಿ ಪ್ರವಾಸಮಾಡಿರುವ ಅನುಗ್ರಹವನ್ನೂ, ಪ್ರಜಾವರ್ಗದ ಆಶೋತ್ತರಗಳು ಮತ್ತು ಕುಂದುಕೊರತೆಗಳನ್ನು ಸ್ವತಃ ದಿವ್ಯಚಿತ್ತಕ್ಕೆ ತಂದುಕೊಳ್ಳುತ್ತಿರುವ ಪ್ರಜಾವಾತ್ಸಲ್ಯವನ್ನೂ ಎಡೆಬಿಡದೆ ನೆನೆಯುತ್ತ ಪ್ರಭುಗಳವರ ದರ್ಶನದಿಂದ ಆನಂದಿಸಿ ಮಹಾಪ್ರಭುಗಳ ಅಭ್ಯುದಯವನ್ನು ಸದಾ ಹಾರೈಸುವವರಾಗಿರುತ್ತೇವೆ, ಮಹಾಸ್ವಾಮಿ.

ಮಹಾಸ್ವಾಮಿಯವರ ಪ್ರಜೆಗಳಲ್ಲಿ ಕನ್ನಡದ ಮೂಲಕ ಜ್ಞಾನಪ್ರಸಾರ ಮಾಡಬೇಕೆಂಬ ಉದಾತ್ತಧ್ಯೇಯದಿಂದ ಹನ್ನೆರಡು ವರ್ಷಗಳ ಹಿಂದೆ ಈ ನಮ್ಮ ಕರ್ಣಾ

ಟಕ ಸಂಘ ಆರಂಭವಾಯಿತು. ಆ ಪವಿತ್ರ ಕಾರ್ಯದಲ್ಲಿ ಅದು ಜಿಲ್ಲೆಯ ಮುಖ್ಯ ನಗರವಾದ ಶಿವಮೊಗ್ಗದಲ್ಲಿಯೂ ಜಿಲ್ಲೆಯ ಇತರ ಪ್ರಾಂತಗಳಲ್ಲಿಯೂ, ವಿಶೇಷವಾಗಿ ಹಳ್ಳಿಗಳಲ್ಲಿಯೂ ಉಪನ್ಯಾಸಗಳನ್ನೇರ್ಪಡಿಸಿ, ವಿದ್ವಾಂಸರನ್ನು ಆಹ್ವಾನಿಸಿ, ಸಮ್ಮೇಳನಗಳನ್ನು ಕೂಡಿಸಿ, ಹಬ್ಬಗಳನ್ನು ಜೆಳಸಿ, ಪುಸ್ತಕಗಳನ್ನು ಪ್ರಕಟಿಸಿ, ಜನಾಂಗದ ಆತ್ಮವನ್ನು ಅರಳಿಸುವ ದಿವ್ಯ ಸಾಹಿತ್ಯದ ಹೊಸ ಬೆಳಕನ್ನು ಹರಡಿ, ತನ್ನ ಕೈಯಲ್ಲಾದಷ್ಟು ದುಡಿದಿದೆ. ಈ ಸಂಘದ ಕಾರ್ಯನಿರ್ವಾಹಕರ ಉಜ್ಜ್ವಲವಾದ ಕನ್ನಡ ನುಡಿಯ ಮೇಲಣ ಅಭಿಮಾನ, ಕನ್ನಡ ಜನತೆಯ ಮೇಲಿರುವ ಪ್ರೇಮ, ಕನ್ನಡ ನಾಡಿನ ಮುನ್ನಡೆಯನ್ನು ಕುರಿತ ಉತ್ಸಾಹ—ಇವುಗಳನ್ನು ಕಂಡು, ಪ್ರಜಾಸೇವೆಯೇ ರಾಜಸೇವೆಯೆಂದು ಅರಿತು, ನನ್ನ ಅಲ್ಪಸಹಾಯವನ್ನೂ ಕೂಡಿಸಬೇಕೆಂದು ಭಗವತ್ಪ್ರೇರಣೆಯಾಗಿ, ಸಂಘಕ್ಕೆ ನೆಲೆಯಾಗಿ ಈ ಮಂದಿರವನ್ನೂ ಮೂಲನಿಧಿಯಾಗಿ ಒಂದು ಸಾವಿರ ರೂಪಾಯಿಗಳನ್ನೂ ನನ್ನ ಕಾಣಿಕೆಯಾಗಿ ಅರ್ಪಿಸಿರುತ್ತೇನೆಂದು ದಿವ್ಯಸನ್ನಿಧಿಯಲ್ಲಿ ಅರಿಕೆಮಾಡಿಕೊಳ್ಳಲು ಅವಕಾಶ ಬೇಡುತ್ತೇನೆ, ಮಹಾಸ್ವಾಮಿ.

ಕರ್ಣಾಟಕ ರತ್ನಸಿಂಹಾಸನಾಧೀಶ್ವರರಾಗಿ, ಕರ್ಣಾಟಕ ಸಂಸ್ಕೃತಿ ವೈಭವಗಳಿಗೆ ಕೇಂದ್ರಸ್ಥಾನವಾಗಿ, ಕನ್ನಡಿಗರೆಲ್ಲರ ಭಕ್ತಿಗೌರವ ವಿಶ್ವಾಸಗಳಿಗೆ ಪಾತ್ರರಾಗಿ, ತಾವೂ ತಮ್ಮ ಹಿರಿಯರೂ ಮೊದಲಿಂದಲೂ ಕನ್ನಡಿಗರನ್ನೂ ಕನ್ನಡವನ್ನೂ ಕಾಪಾಡಿ ಬೆಳಸಿಕೊಂಡು ಬರುತ್ತಿರುವುದು ದೇಶದ ಭಾಗ್ಯೋದಯವೆಂದು ಭಾವಿಸುತ್ತೇವೆ. ಸಾವಿರದ ಒಂಭೈನೂರ ನಲವತ್ತರಲ್ಲಿ ನಡೆದ ಕನ್ನಡ ಸಾಹಿತ್ಯ ಪರಿಷತ್ತಿನ ಬೆಳ್ಳಿಯ ಹಬ್ಬದ ಉತ್ಸವದಲ್ಲಿ ತಮ್ಮ ಪೂಜ್ಯ ದೊಡ್ಡಪ್ಪನವರೊಡನೆ ತಾವೂ ಬಿಜಯ ಮಾಡಿಸಿ ಅಪ್ಪಣೆಕೊಟ್ಟ ಆಶೀರ್ವಾದ ವಾಕ್ಯಗಳು ಯಾವಾಗಲೂ ನಮ್ಮ ಕಿವಿಗಳಲ್ಲಿ ಮೊಳಗುತ್ತ ಮಾರ್ಗದರ್ಶಕವಾಗಿವೆ. ಮಹಾಸ್ವಾಮಿಯವರು ಪರಿಷತ್ತಿನ ಅಧ್ಯಕ್ಷರಾಗಿದ್ದು, ಈಗ ಮಹಾಪೋಷಕರಾಗಿ ದಯಪಾಲಿಸುತ್ತಿರುವ ಪ್ರೋತ್ಸಾಹ ಕನ್ನಡ ನುಡಿಗೆ ಮತ್ತು ಸಂಸ್ಕೃತಿಗೆ ಪ್ರಾಶಸ್ತ್ಯವನ್ನೂ ಬಲವನ್ನೂ ನೀಡುತ್ತಿದೆ. ಕರ್ಣಾಟಕ ಸಂಸ್ಕೃತಿಯ ಮತ್ತು ಸಾಹಿತ್ಯದ ಪ್ರಚಾರ ಕಾರ್ಯದಲ್ಲಿ ಒಂದು ಗಣ್ಯಸಂಸ್ಥೆಯಾಗಿ ಸೇವೆ ಸಲ್ಲಿಸಲು ಕಂಕಣಬದ್ಧವಾಗಿರುವ ಶಿವಮೊಗ್ಗದ ಕರ್ಣಾಟಕ ಸಂಘದ ಈ ನೂತನ ಭವನದ ಪ್ರಾರಂಭೋತ್ಸವವನ್ನು ಮಹಾಸ್ವಾಮಿಯವರು ನಡಸಿಕೊಡಬೇಕೆಂಬ ನಮ್ಮ ಹಂಬಲನ್ನು ಉದಾತ್ತಚಿತ್ತದಿಂದ ನೆರವೇರಿಸಿಕೊಟ್ಟು ಮಹಾಸ್ವಾಮಿಯವರು ಅನುಗ್ರಹಿಸಿರುವುದಕ್ಕಾಗಿ ನಾವು ಎಷ್ಟು ಕೃತಜ್ಞರಾಗಿದ್ದೇವೆಂಬುದನ್ನು ಅರುಹಲು ಶಕ್ತರಲ್ಲ, ಮಹಾಸ್ವಾಮಿ.

ಶ್ರೀ ಶಾರದಾಂಬೆಯ ಆರಾಧನೆಗಾಗಿ ನಿರ್ಮಿಸಿರುವ ಈ ಭವನವನ್ನು ಮಹಾ ಸ್ವಾಮಿಯವರು ತಮ್ಮ ಅಮೃತಹಸ್ತದಿಂದ ತೆರೆದು ನಮ್ಮ ಸಂಘದಿಂದ ಜ್ಞಾನದಾನ ನವಾರಂಭ ನಿರಂತರವಾಗಿ ನಡೆಯುತ್ತಿರಲೆಂದು ಆಶೀರ್ವದಿಸಬೇಕಾಗಿ ವಿನಯದಿಂದ ಪ್ರಾರ್ಥಿಸಿಕೊಳ್ಳುತ್ತೇವೆ, ಮಹಾಸ್ವಾಮಿ.

ಶ್ರೀ ಚಾಮುಂಡೇಶ್ವರೀ ಮಹಾತಾಯಿ ಮಹಾಸ್ವಾಮಿಯವರಿಗೂ ರಾಜಮನೆ ತನದವರಿಗೂ ದೀರ್ಘಾಯುರಾರೋಗ್ಯಭಾಗ್ಯಾದಿಗಳನ್ನು ಕರುಣಿಸಲೆಂದು ಅನನ್ಯ ಶ್ರದ್ಧೆಯಿಂದ ಪ್ರಾರ್ಥಿಸುತ್ತಿರುತ್ತೇವೆ, ಮಹಾಸ್ವಾಮಿ.

ಶಿವಮೊಗ್ಗ,
೧೧ನೆಯ ಫೆಬ್ರವರಿ, ೧೯೪೩.

ಇಂತು, ಮಹಾಸ್ವಾಮಿಯವರ
ರಾಜಭಕ್ತ ಪ್ರಜೆಗಳು,
ಹಸೂಡಿ ವೆಂಕಟಶಾಸ್ತ್ರಿ
ಮತ್ತು ಶಿವಮೊಗ್ಗ ಕರ್ಣಾಟಕ
ಸಂಘದ ಸದಸ್ಯರು.

ಮಹಾಸ್ವಾಮಿಯವರು ಮುಂದಿನ ಉತ್ತರವನ್ನು ದಯಪಾಲಿಸಿದರು :

"ಇಲ್ಲಿನ ಕರ್ಣಾಟಕ ಸಂಘದ ಕಟ್ಟಡದ ಪ್ರಾರಂಭೋತ್ಸವವನ್ನು ಈ ದಿನ ನೆರವೇರಿಸುವ ಅವಕಾಶ ಒದಗಿರುವುದು ನಮಗೆ ವಿಶೇಷ ಸಂತೋಷವನ್ನುಂಟು ಮಾಡಿದೆ. ಕನ್ನಡ ಭಾಷೆಯ ಅಭಿವೃದ್ಧಿಗೂ, ಕನ್ನಡ ಸಂಸ್ಕೃತಿಯ ಪ್ರಸಾರಕ್ಕೂ ನಿಮ್ಮ ಸಂಘವು ಹಲವು ವಿಧಗಳಲ್ಲಿ ಮಾಡಿರುವ ಪ್ರಯತ್ನವನ್ನು ಬಿನ್ನವತ್ತಳೆಯಲ್ಲಿ ಸೂಚಿಸಿದ್ದೀರಿ. ಪುರಾತನಕಾಲದಿಂದಲೂ ಸಾಹಿತ್ಯ ಮತ್ತು ಕಲೆಗಳ ಬೆಳವಣಿಗೆಗೆ ಪ್ರಸಿದ್ಧವಾಗಿರುವ ಈ ಪ್ರಾಂತ್ಯದಲ್ಲಿ ಈ ರೀತಿಯ ಪ್ರಯತ್ನವು ನಡೆಯುವುದು ಸಹಜವೇ ಆಗಿದೆ. ಶ್ರೀ ಹಸೂಡಿ ವೆಂಕಟಶಾಸ್ತ್ರಿಗಳು ಉದಾರವಾಗಿ ಧನಸಹಾಯ ಮಾಡಿ ಕಟ್ಟಿಸಿರುವ ಕಟ್ಟಡವು ಸಂಘದ ಕಾರ್ಯಕಲಾಪಗಳಿಗೆ ಸಹಕಾರಿಯಾಗಿ ಇಲ್ಲ ನಡೆಯುತ್ತಿರುವ ಭಾಷಾಸೇವೆಯ ಮುಖ್ಯಕೇಂದ್ರವಾಗಿ ಪರಿಣಮಿಸಲೆಂದು ಹಾರೈಸು ತ್ತೇವೆ. ಕನ್ನಡದಲ್ಲಿ ಅಭಿಮಾನವೂ ಆಸಕ್ತಿಯೂ ವಿಶೇಷವಾಗಿರುವ ಈ ಜಿಲ್ಲೆಯಲ್ಲಿ ಸಾಹಿತ್ಯ ಸಂಸ್ಕೃತಿಗಳ ಅಭಿವೃದ್ಧಿಗೆ ಇನ್ನೂ ಹೆಚ್ಚು ಹೆಚ್ಚಾಗಿ ಉತ್ತೇಜನ ದೊರೆ ಯುವುದೆಂದು ನಾವು ನಂಬಿದ್ದೇವೆ. ಭಕ್ತಿ ವಿಶ್ವಾಸಗಳನ್ನು ಸೂಚಿಸಿ ನಮಗೆ ಶುಭಾ ಶಯವನ್ನು ಕೋರಿರುವುದಕ್ಕಾಗಿ ನಿಮ್ಮನ್ನು ವಂದಿಸಿ, ಕರ್ಣಾಟಕ ಸಂಘದ ಕಟ್ಟ ಡದ ಪ್ರಾರಂಭೋತ್ಸವವನ್ನು ಸಂತೋಷದಿಂದ ನೆರವೇರಿಸುತ್ತೇವೆ."

ಅನಂತರ ಮಹಾಸ್ವಾಮಿಯವರು ಸಂಘದ ಕಟ್ಟಡವನ್ನು ತೆರೆದು ಒಳಕ್ಕೆ ಪ್ರವೇಶಮಾಡಿ, ಸಂಘದ ಯೋಗಕ್ಷೇಮವನ್ನು ವಿಚಾರಿಸಿ, ಕಟ್ಟಡ ಚೆಲುವಾಗಿದೆ

ಯೆಂದು ಸಂತೋಷಿಸಿ, ಶ್ರೀ ಹಸೂಡಿ ವೆಂಕಟಶಾಸ್ತ್ರಿಗಳು ಸಾಹಿತ್ಯಪರಿಷತ್ತಿಗೆ ತುಂಬಾ ಉಪಕಾರಮಾಡಿದ್ದಾರೆಂದು ಅಪ್ಪಣೆ ಕೊಡಿಸಿ, ಇವರು ಹಾಕಿಕೊಟ್ಟ ಮೇಲ್ಪಂಕ್ತಿಯನ್ನು ನಾಡಿನ ಇತರ ಧನಿಕರೂ ಅನುಸರಿಸಲೆಂದು ಹಾರೈಸಿದರು.

ಶಿವಮೊಗ್ಗದ ಕರ್ಣಾಟಕ ಸಂಘವು ಈಗ ಹನ್ನೆರಡು ವರ್ಷಗಳಿಂದ ಕನ್ನಡಕ್ಕೆ ಮಹತ್ತಾದ ಸೇವೆ ಸಲ್ಲಿಸಿದೆ. ಶ್ರೀಮಾನರಾದ ಸುಬ್ರಹ್ಮಣ್ಯಶಾಸ್ತ್ರಿಗಳು, ಚಿದಂಬರಂ, ಕೃಷ್ಣಮೂರ್ತಿರಾವ್, ವಿಷ್ಣುಭಟ್ಟ, ಭೂಪಾಲಂ ಸೋದರರು ಮುಂತಾದ ಶಿವಮೊಗ್ಗ ನಿವಾಸಿ ಮಹಾಜನರ ಕನ್ನಡದ ಅಭಿಮಾನವು ಈಗ ಎಲ್ಲೆಲ್ಲಿಯೂ ವಿದಿತವಾಗಿದೆ. ಇವರ, ಮುಖ್ಯವಾಗಿ ಸಂಘದ ಕಾರ್ಯದಶಿಗಳ, ತ್ಯಾಗ ಶ್ರಮ ಚಟುವಟಿಕೆಗಳ ಫಲ ವಾಗಿ ಮಲೆನಾಡು ಪ್ರಾಂತದಲ್ಲಿ ಆಗಿರುವ ಪುನರುಜ್ಜೀವನಕಾರ್ಯ ಸ್ವಲ್ಪವಲ್ಲ; ಅದು ಮೈಸೂರು ಆದ್ಯಂತಕ್ಕೂ ಕರ್ಣಾಟಕಕ್ಕೂ ಹಬ್ಬುತ್ತಿದೆ. ಇದಕ್ಕಾಗಿ, ಈ ಸಂತೋಷ ಸಮಾರಂಭ ಸಂದರ್ಭದಲ್ಲಿ ನಾವು ಅವರನ್ನು ಮೈಸೂರು ಬೆಂಗಳೂರು ಕರ್ಣಾಟಕ ಸಂಘಗಳ ಪರವಾಗಿ ಅಭಿನಂದಿಸುತ್ತೇವೆ. ಅವರ ಸಂಘವು ಮಾಡಿರುವ ಕೆಲಸದ ಮಹತ್ವಕ್ಕೆ ಅನುರೂಪವಾಗಿ ಅವರಿಗೆ ಶ್ರೀಮಾನ್ ಹಸೂಡಿ ವೆಂಕಟಶಾಸ್ತ್ರಿಗಳಂಥವರ ಘನೌದಾರ್ಯವೂ ದೊರಕಿತು. ಜ್ಞಾನದಾನಕ್ಕಾಗಿ, ಕನ್ನಡಕ್ಕಾಗಿ, ಕೈತುಂಬ ಹೀಗೆ ದಾನಮಾಡಿದ ಶ್ರೀ ಶಾಸ್ತ್ರಿಗಳು ಮಾನ್ಯರು, ಧನ್ಯರು. ಅವರ ಔದಾರ್ಯಕ್ಕೆ, ಮಾನ್ಯತೆಗೆ, ಧನ್ಯತೆಗೆ ಅನುರೂಪವಾಗಿ ರಾಜಗೌರವವೂ ದೊರೆಯಿತು. ಕನ್ನಡ ನಾಡಿನ ಪ್ರಭುಗಳೇ ಸ್ವಂತವಾಗಿ ಮಂದಿರದ ಆರಂಭೋತ್ಸವವನ್ನು ನೆರವೇರಿಸಿದರು. ಕನ್ನಡದ ಮೇಲಿನ ಈ ಅಭಿಮಾನಕ್ಕಾಗಿ, ಗೌರವಕ್ಕಾಗಿ, ಮಮತೆಗಾಗಿ ನಾವು ಕನ್ನಡಿಗರ ಪರವಾಗಿ ಮಹಾಪ್ರಭುಗಳವರನ್ನು ವಂದಿಸುತ್ತೇವೆ.

ಕನ್ನಡ ಸಾಹಿತ್ಯಕ್ಕೆ ನೃಪತುಂಗನ ಕಾಲದಿಂದಲೂ ರಾಜಾಶ್ರಯವೇ ಹಿರಿಯ ಬೆಂಬಲ. ಇದು ಕಾಲಕ್ರಮದಲ್ಲಿ ವಿಜಯನಗರದ ರಾಜರ ಅನಂತರ ಮೈಸೂರ ಒಡೆಯರನ್ನು ಆಶ್ರಯಿಸಿದೆ. ಗೋದಾವರೀ ತೀರದಿಂದ ಹರಿದುಬಂದು ಅದು ಕಾವೇರೀ ತೀರದಲ್ಲಿ ಹಿರಿಯ ಕೆರೆಯಾಗಿದೆ. ಕಾವೇರಿಯಿಂದ ಶಕ್ತಿ, ಭುಕ್ತಿ, ಬೆಳಕು ಎಲ್ಲಾ ಬರುತ್ತಿದೆ. ಇದು ನೀರಿಗೂ ಸರಿ ಮಾತಿಗೂ ಸರಿ. ಅವುಗಳ ಯೋಗಕ್ಷೇಮದಲ್ಲಿ ನಮ್ಮ ಶ್ರೀಮನ್ಮಹಾರಾಜರವರು ಅನವರತ ನಿರತರಾಗಿರುವುದಕ್ಕೆ ನಿದರ್ಶನವಾಗಿ ಇಂಥ ಒಂದು ಸಂಗತಿಯೇ ಸಾಕು.

ಕನ್ನಡ ದೇವಿಯ ಆರಾಧನೆಗಾಗಿ ಇದುವರೆಗೆ ಇದ್ದ ಮಂದಿರಗಳೆಂದರೆ, ಧಾರ ವಾಡದ "ಚಾಮರಾಜ ಮಂದಿರ" ಬೆಂಗಳೂರಿನ "ಕೃಷ್ಣರಾಜ ಪರಿಷನ್ಮಂದಿರ." ಇವುಗಳು ಆಳಿದ ಮೈಸೂರು ಮಹಾರಾಜರವರ ಹೆಸರುಗಳನ್ನು ಕನ್ನಡದ ಚರಿತ್ರೆ

ಯಲ್ಲಿ ಶಾಶ್ವತಗೊಳಿಸಿವೆ. ದಿವಂಗತರಾದ ನಾಲ್ವಡಿ ಕೃಷ್ಣರಾಜ ವೊಡೆಯರವರು, ಯುವರಾಜ ಕಂಠೀರವ ನರಸರಾಜ ವೊಡೆಯರವರು, ಸರದಾರ್ ಎಂ. ಕಾಂತರಾಜ ಅರಸರವರು ಮುಂತಾದವರ ಮೇಲ್ಪಂಕ್ತಿಯನ್ನು ಅನುಸರಿಸಿ ಸರ್ ಕೆ. ಪಿ. ಪುಟ್ಟಣ್ಣ ಚೆಟ್ಟರು ರಾಜಸೇವಾಸಕ್ತ ಬಿ. ಎಂ. ಶ್ರೀಕಂಠಯ್ಯನವರು ಮುಂತಾದ ಅವರ ಗಣ್ಯ ಪ್ರಜೆಗಳೂ ಭಾಷಾವತ್ಸಲರೂ ಕನ್ನಡಕ್ಕೆ ಮುಕ್ತ ಹಸ್ತದಿಂದ ದಾನಮಾಡಿದ್ದಾರೆ. ಶ್ರೀಮಾನ್ ಹಸೂಡಿ ವೆಂಕಟಶಾಸ್ತ್ರಿಗಳ ದಾನವು ಈ ಉನ್ನತ ಶ್ರೇಣಿಗೆ ಸೇರಿ ಸಕಲ ಸನ್ಮಾನ್ಯವಾಗಿದೆ. ಗೋದಾನ ಮಾಡಿದವರು ಹಸುವನ್ನು ಸಾಕಲೆಂದು ಮೇಲೆ ದಕ್ಷಿಣೆಯನ್ನೂ ಕೊಟ್ಟಂತೆ, ಅವರು ಮಂದಿರದ ಮೇಲೆ ಅದರ ಮೂಲಧನದ ಬೀಜವಾಗಿ ಒಂದು ಸಾವಿರ ರೂಪಾಯಿಗಳ ಕಾಣಿಕೆಯನ್ನೂ ಕೊಟ್ಟಿದ್ದಾರೆ. ಇದು ಗಿಡವಾಗಿ, ಮರವಾಗಿ, ಫಲಬಿಡಲಿ. ಶಿವಮೊಗ್ಗದ ಕರ್ಣಾಟಕ ಸಂಘವು ಇದಕ್ಕಿಂತ ಹೆಚ್ಚಿನ ಕೆಲಸಮಾಡಿ ಇನ್ನೂ ಗಣ್ಯತೆ ಪಡೆಯಲಿ, ಪ್ರೋತ್ಸಾಹ ಪಡೆಯಲಿ; ಮಿಕ್ಕ ಕರ್ಣಾಟಕ ಸಂಘಗಳೂ ಹೀಗೇ ಕೆಲಸ ಮಾಡಲಿ, ಯೋಗ್ಯತೆ ಮಾನ್ಯತೆಗಳನ್ನು ಪಡೆಯಲಿ; ಕನ್ನಡ ಬೆಳೆಯಲಿ, ಕನ್ನಡಜನ ಮುಂದೆ ಬರಲಿ; ಎಂದು ನಾವು ಪ್ರಾರ್ಥಿಸುತ್ತೇವೆ.

***

ನಮ್ಮ ನಾಡಿನ ವಿದ್ಯಾಭ್ಯಾಸ

ಮೊನ್ನಿನ ಡಿಸೆಂಬರ್ ತಿಂಗಳು ಎಂಟನೆಯ ತಾರೀಖಿನ ದಿವಸ ಶ್ರೀಮಾನ್ ಕೆ. ಬಸವರಾಜ ಅರಸ್, ಎಂ.ಎ., ಎಲ್‌ಎಲ್.ಬಿ., ಅವರು ಮೈಸೂರು ನೂತನ ವಿದ್ಯಾಸಮಿತಿಯ ಆರಂಭಭಾಷಣ ಮಾಡಿದರು. ಅವರು ಯೂರೋಪು ಅಮೆರಿಕಾ ಖಂಡಗಳಲ್ಲಿ ಸಂಚರಿಸಿ ಅಲ್ಲಿನ ವಿದ್ಯಾ ಸಂಸ್ಥೆಗಳ ಕಾರ್ಯಕಲಾಪಗಳನ್ನು ಕಣ್ಣಾರ ನೋಡಿ ತಿಳಿದು ಕೊಂಡು ಬಂದವರು. ವಿಶ್ವವಿದ್ಯಾನಿಲಯದ ದೊಡ್ಡ ಪ್ರಶಸ್ತಿಗಳನ್ನು ಸಂಪಾದಿಸಿ, ಇಲ್ಲಿನ ವಿದ್ಯಾಭ್ಯಾಸ ಸ್ಥಿತಿಯನ್ನು ಉತ್ಸಾಹದಿಂದಲೂ ಅಭಿಮಾನದಿಂದಲೂ ವಿಮರ್ಶೆ ಮಾಡಿರತಕ್ಕವರು. ಇಂಥವರ ಅಭಿಪ್ರಾಯಗಳು ಎಲ್ಲರಿಗೂ ಮನನ ಮಾಡಲು ಯೋಗ್ಯವಾದವು. ಆದ್ದರಿಂದ ಮೇಲೆ ಕಂಡ ಅವರ ಆ ಭಾಷಣದಿಂದ ಮುಖ್ಯವಾದ ಭಾಗವನ್ನು ಇಲ್ಲಿ ಎತ್ತಿಕೊಟ್ಟಿದ್ದೇವೆ.—

"ನಮ್ಮ ನಾಡಿನ ಎಲ್ಲಾ ಭಾಗಗಳಲ್ಲಿಯೂ, ಪ್ರತಿ ವರ್ಷವೂ ಪ್ರಾಥಮಿಕ ಶಾಲೆಗಳು ಹೊಸದಾಗಿ ತೆರೆಯಲ್ಪಡುತ್ತಿದ್ದರೂ ಇನ್ನೂ ಶಾಲೆಗಳ ಸಂಖ್ಯೆಯು ತೀರ ಕಡಿಮೆಯಾಗಿಯೇ ಇರುತ್ತದೆ. ಅಜ್ಞಾನ, ಬಡತನ, ರೋಗರುಜಿನಗಳ ಫಲವಾಗಿ ಈ ಶಾಲೆಗಳು ಯಶಸ್ವಿಯಾಗಿ ಕೆಲಸಮಾಡಲು ಅನೇಕ ತೊಂದರೆಗಳಿರುತ್ತವೆ.

ಒಂದು ದೇಶದ ವಿದ್ಯಾಭ್ಯಾಸದ ಏಳಿಗೆಗೆ ಅಲ್ಲಿನ ಸರ್ಕಾರದ ನಾನಾ ಇಲಾಖೆಗಳ ಸಹಾಯ ಸಹಕಾರಗಳೂ ಜನರ ಬೆಂಬಲವೂ ಅವಶ್ಯಕ. ಉಪಾಧ್ಯಾಯರ ಯೋಗಕ್ಷೇಮವೂ ಪಾಠಶಾಲೆಗಳ ಯೋಗಕ್ಷೇಮವೂ ತಮ್ಮದೆಂದು ಭಾವಿಸಿರುವುದರಿಂದಲೇ ರಷ್ಯಾ, ಜಪಾನ್, ಅಮೆರಿಕಾ ದೇಶಗಳಲ್ಲಿ ವಿದ್ಯಾಭ್ಯಾಸವು ಹೆಚ್ಚು ಮುಂದುವರಿಯಲು ಅವಕಾಶವಾಗಿರುತ್ತದೆ. ನಮ್ಮ ದೇಶದಲ್ಲಿ ಈ ಪರಿಸ್ಥಿತಿ ಇಲ್ಲದಿರುವುದು ಶೋಚನೀಯವಾಗಿದೆ. ಉತ್ಸಾಹ ದಕ್ಷತೆಗಳಿಂದ ಕೂಡಿದ ದೇಶಾಭಿಮಾನಿಗಳಾದ ಉಪಾಧ್ಯಾಯರಿಂದಲೂ, ಇವರಿಗೆ ತಕ್ಕ ಪ್ರೋತ್ಸಾಹ ಮತ್ತು ಮನ್ನಣೆಯನ್ನು ಕೊಡುವ ಸರ್ಕಾರ ಮತ್ತು ಜನತೆಯಿಂದಲೂ ಪರಿಸ್ಥಿತಿಯು ಉತ್ತಮಗೊಳ್ಳುವುದು. ಪ್ರಾಥಮಿಕ ಶಾಲೆಗಳಲ್ಲಿ ಉಪಾಧ್ಯಾಯಿನಿಯರ ಸಂಖ್ಯೆ ಅಧಿಕವಾಗಬೇಕು. ಕಾಲೇಜು ತರಗತಿಗಳಲ್ಲಿ ವ್ಯಾಸಂಗಮಾಡಲು ಅರ್ಹರಾದವರು ಹೊರತು ಉಳಿದ ವಿದ್ಯಾರ್ಥಿಗಳಿಗೆ ತಮ್ಮ ತಮ್ಮ ಅಭಿರುಚಿಗಳಿಗೆ ತಕ್ಕಂತೆ ವೃತ್ತಿಶಿಕ್ಷಣವನ್ನು ಪಡೆಯಲು ಅವಕಾಶವನ್ನು ಕಲ್ಪಿಸಬೇಕು. ಇವೆರಡೂ ಅಗತ್ಯವಾದ ಕಾರ್ಯಗಳಾಗಿವೆ. ಯುದ್ಧ ಮುಗಿದ ನಂತರ ಈ ತೆರನಾದ ಪ್ರಯತ್ನಗಳು ಜರುಗಲಿವೆ.

ಪಾಶ್ಚಾತ್ಯ ದೇಶಗಳಲ್ಲಿ ವಿದ್ಯಾರ್ಥಿಗಳ ಸೌಕರ್ಯಕ್ಕಾಗಿ ಅಗಾಧವಾದ ಏರ್ಪಾಡುಗಳನ್ನು ಮಾಡಿರುವರು. ಕ್ಯಾಲಿಫೋರ್ನಿಯದ ವಿಶ್ವವಿದ್ಯಾಲಯದಲ್ಲಿ ವಿದ್ಯಾರ್ಥಿಗಳ ಭೋಜನ, ವಸತಿ, ವ್ಯಾಸಂಗಗಳಿಗೆ ಮಾಡಿರುವ ಏರ್ಪಾಡುಗಳು ಗಮನಾರ್ಹವಾಗಿರುತ್ತವೆ. ನಮ್ಮಲ್ಲಿಯೂ ಈ ರೀತಿಯಾದ ಏರ್ಪಾಡುಗಳನ್ನು ಹೊಂದಿರುವ ವಿದ್ಯಾಸಂಸ್ಥೆಗಳು ಅತಿ ವಿರಳವೆಂದೇ ಹೇಳಬೇಕು. ಹಿಂದಿನಕಾಲದ ನಲಂದ ವಿದ್ಯಾನಿಲಯವೂ ಈಗಿನ ವಿಶ್ವಭಾರತಿಯ ಶಾಂತಿನಿಕೇತನವೂ ಮಾದರಿ ಸಂಸ್ಥೆಗಳೆನ್ನಬಹುದು. ಸಂಪೂರ್ಣ ಸ್ವಾತಂತ್ರ್ಯವನ್ನು ಪಡೆದಿರುವ ವಿದ್ಯಾನಿಲಯಗಳೇ ದೇಶದ ಭಾವೀ ಪ್ರಜೆಗಳಾದ ಇಂದಿನ ವಿದ್ಯಾರ್ಥಿಗಳ ಸರ್ವತೋಮುಖವಾದ ಏಳಿಗೆಗೆ ಅವಕಾಶವನ್ನು ಕಲ್ಪಿಸಬಲ್ಲವು.''—ವಿದ್ಯಾದಾಯಿನಿ.

ಪ್ರಾಚ್ಯಲೇಖನಾವಳಿ

Journal of the Andhra Historical Research Society—Vol. XIII, Parts 3 and 4. December, 1940 and April, 1941.

1. 'The Soras'—By G. V. SITAPATI.
2. 'Prakrit Inscriptions of the Kings of Andhradesa'—By MUHAMMAD SHAHIDULLAH.

   [Salankayanas ruled from about A.D. 300 to A.D. 50 with their Capital at Vengipura, Modern Pedda-Vegior Vegi seven miles North of Ellore in the West Godavari District. The inscription of Vijayadevavarma is in old Prakrit (A.D. 350) Epi. Indica, Vol. IX, p. 56 ff. In this inscription occur the words ಮಾಹೇಶ್ವರ and ಮುಳುಡ, the latter a Dravidian word, possibly old Telugu, apparently meaning chief of village—a tadbhava of ಮುಂಡಲ ?]

3. 'The Pasupatha and other Saiva Schools of Philosophy'—By V. APPA RAO.
4. 'Jainism in Andhradesa'—By B. V. KRISHNA RRO.

Journal of the Literary Committee of the L.E. Association, Dharwar—January, 1943.

1. 'Quintessence of Lingayat Religion'—By KUMARA SWAMIJI.

   [The Origin of Linga . . . is to be sought in a symbol of sphere which seems an emblem of an eternity and infinity with all nations. Three things emerge from the labour of Prof. Sakhare: Lingayatism is the faith professed and followed by the Karnataka Veerashaivas: Basava is the founder of this faith and Vachanshasthra are the scriptures that embody the principles of Lingayatism.]

2. 'Veerashaivism'—By V. C. YAGATI.

The New Review—March, 1943.

'The Andhras'—By S. R. BALASUBRAHMANYAM.

ಶಿವಾನುಭವ—ಜುಲೈ ೧೯೪೨—ಫೆಬ್ರುವರಿ, ೧೯೪೩.

೧. ಗುರುಲಿಂಗ ಜಂಗಮ—ಬ. ಚೆ. ಪಟ್ಟೇದ (ಸಂಪುಟ ೧೬—ಸಂಚಿಕೆ ೧೧ ಮತ್ತು ಸಂಪುಟ ೧೭. ಸಂಚಿಕೆ ೧, ೩, ೪, ೫.)

೨. ಬಸವೇಶ್ವರನ ಚರಿತ್ರೆ—(ಲೇಖಾಂಕಗಳು ೧೧–೧೭)—ಪಿ. ಜಿ. ಹಳಕಟ್ಟಿ.
೩. ವೀರಶೈವರಾಜ ಮನೆತನಗಳ ಚರಿತ್ರೆಗಳು—(ಪು. ೧–೪೦)—ಪಿ. ಜಿ. ಹಳಕಟ್ಟಿ.
೪. ಶಿವಾನುಭವ ಶಬ್ದಕೋಶ—(ಪು. ೧೪೧–೧೭೭).
೫. ಜೀವನದ ಗುರಿ—ಶ್ರೀ ಮಹಾದೇವಸ್ವಾಮಿಗಳು.
೬. ಸಟೀಕ ಏಕೋತ್ತರ ಶತಸ್ಥಲ—(ಪು. ೪೧–೪೮).
೭. ಶಿವಶರಣರ ದೀಕ್ಷಾಕಾಲ—(ಲೇಖಾಂಕಗಳು ೧–೫)—ಶ್ರೀ ಗುರು ಮೂರ್ತಿದೇವರು.
೮. ಲಿಂಗಧಾರಣ ಅರ್ಥಾತ್ ಶಿವದೀಕ್ಷೆ—(ಲೇಖಾಂಕಗಳು ೩–೪) ಜೀರಗೆ ಕ. ಬಸಪ್ಪ.
೯. ಲಿಂಗಧಾರಣೆ ಅರ್ಥಾತ್ ಶಿವದೀಕ್ಷೆ—ಕಾನಕಾನಹಳ್ಳಿ ಬಸಪ್ಪ.
೧೦. ದೀಕ್ಷಾವಾದ—ಮಾ. ಸಂ. ಸಂಜಪ್ಪ.
೧೧. ದೀಕ್ಷಾವಾದ ವಿಮರ್ಶೆ—ಶ್ರೀ ಸಿದ್ಧವೀರದೇವರು.
೧೨. ಧಾರಣ ದೀಕ್ಷೆ—ಜಿ. ಟಿ. ಅಕ್ಕಲಯ್ಯನವರು.
೧೩. ವೀರಶೈವಧರ್ಮದ ವೀರಸಂದೇಶವು—ಎಲ್. ಜಿ. ಹಿರೇಮಠ.
೧೪. ವೀರಶೈವ ಧರ್ಮದ ವೈಶಿಷ್ಟ್ಯ—ಎಂ. ಎಸ್. ಮಿಣಜಿಗಿ.
೧೫. ವೀರಶೈವ ಸಮಾಜದ ಆರ್ಥಿಕ ಸುಧಾರಣೆ—ಪಿ. ಜಿ. ಹಳಕಟ್ಟಿ.

ಜೀವನ—ಜನವರಿ, ೧೯೪೩.

೧. ಶಬ್ದಮಣಿದರ್ಪಣ (ಗ್ರಂಥಪರೀಕ್ಷಣ)—ರಂ. ಶ್ರೀ ಮುಗಳಿ.
೨. ಕೋಳಿವಾಡಗೌಡರ ಕುಲವೃತ್ತಾಂತ—ಶ್ರೀ ಕುಮಾರವ್ಯಾಸ ಕವಿಯನ್ನು ಕುರಿತು ನಾಲ್ಕು ಕಾಗದ ಪತ್ರಗಳು—ಸಂಗ್ರಾಹಕರು: ಶ್ರೀ ಜೋಶಿ ಶಂಕರಭಟ್ಟ.

ಭಾರತಿ (ತೆಲುಗು)—ಫೆಬ್ರವರಿ, ೧೯೪೩.

೧. ಆಂಧ್ರಭಾಷ—ಧಾತುವುಲು—ಕೋರಾಡ ರಾಮಕೃಷ್ಣಯ್ಯ (ಮಾರ್ಚಿಯ ಸಂಚಿಕೆಯಲ್ಲಿಯೂ ಇದೆ).
೨. ಶ್ರೀನಾಥುನಿ ಅಸಾಧಾರಣ ಪ್ರಯೋಗಮುಲು—ಬುಲುಸು ವೆಂಕಟ ರಮಣಯ್ಯ.

(ದೊಡ್ಡು, ಹೆಚ್ಚು, ಮುಂತಾದ ಪ್ರಯೋಗಗಳಿವೆ).

ಮೈಸೂರು ಮಹಾರಾಜರವರ ಕಾಲೇಜಿನ

ಕರ್ಣಾಟಕ ಸಂಘದ ಪ್ರಕಟನೆಗಳು

ಕುಮಾರವ್ಯಾಸ ಪ್ರಶಸ್ತಿ

ಬೆಲೆ, ಕ್ಯಾಲಿಕೊ ಪ್ರತಿ ರೂ. ೨–೮–೦ ; ಸಾದಾ ಪ್ರತಿ ರೂ. ೨–೦–೦

ದೊರೆಯುವ ಸ್ಥಳ :

ಕರ್ಣಾಟಕ ಸಂಘ,
ಸೆಂಟ್ರಲ್ ಕಾಲೇಜು, ಬೆಂಗಳೂರು

ಕರ್ಣಾಟಕ ಸಂಘ,
ಶಿವಮೊಗ್ಗ

ಕಿರಿಯಕಾಣಿಕೆ (ಎರಡನೆಯ ಮುದ್ರಣ)—ಕ್ಯಾಲಿಕೊ ಪ್ರತಿ ರೂ. ೧–೮–೦

ತಳಿರು (ಪ್ರತಿಗಳು ಮುಗಿದಿವೆ)—

ಮಾರಾಟಗಾರರು :

ಪ್ರೋಗ್ರೆಸ್ ಬುಕ್ ಸ್ಟಾಲ್, ಮೈಸೂರು

ಆಷಾಢಭೂತಿ (ಶ್ರೀ. ಎ. ಎನ್. ಮೂರ್ತಿರಾವ್, ಎಂ.ಎ. ಅವರಿಂದ)— ಕ್ಯಾಲಿಕೊ ಪ್ರತಿ ರೂ. ೧–೮–೦

ಸಾವಿನ ಸಮಸ್ಯೆ (ಶ್ರೀ. ವೆಂಬಾರ್ ವೆಂಕಟಾಚಾರ್ಯ, ಎಂ.ಎ., ಬಿ.ಕಾಮ್., ಎಲ್‌ಎಲ್.ಬಿ. ಅವರಿಂದ)— ಸಾದಾ ಪ್ರತಿ ರೂ. ೦–೧೨–೦

ಮಾರಾಟಗಾರರು :

ಕೃಷ್ಣ ಮತ್ತು ಕಂಪನಿ, ಮೈಸೂರು

ಹೊಸ ಪ್ರಕಟನೆಗಳು

ಮೈಸೂರ ಮಲ್ಲಿಗೆ (ಸಚಿತ್ರ ಕವನ ಸಂಗ್ರಹ)—ಶ್ರೀ ಕೆ. ಎಸ್. ನರಸಿಂಹಸ್ವಾಮಿ ಅವರಿಂದ. ಬೆಲೆ, ಕ್ಯಾಲಿಕೊ ಪ್ರತಿ ರೂ. ೧–೪–೦ ; ಸಾದಾ ಪ್ರತಿ ರೂ. ೦–೧೨–೦

ಗಗ್ಗಯ್ಯನ ಗಡಿಬಿಡಿ (ಮೂರು ಪ್ರಹಸನಗಳು)—ಶ್ರೀ. ನಾ. ಕಸ್ತೂರಿ, ಎಂ.ಎ., ಬಿ.ಎಲ್. ಅವರಿಂದ. ಬೆಲೆ, ಕ್ಯಾಲಿಕೊ ಪ್ರತಿ ರೂ. ೧–೪–೦ ; ಸಾದಾ ಪ್ರತಿ ರೂ. ೦–೧೨–೦.

ಕಾರ್ಯದರ್ಶಿ, ಕರ್ಣಾಟಕ ಸಂಘ, ಮಹಾರಾಜರವರ ಕಾಲೇಜು,
ಮೈಸೂರು

ಪ್ರಬುದ್ಧ ಕರ್ಣಾಟಕ

ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಪತ್ರಿಕೆ

'ಪ್ರಬುದ್ಧ ಕರ್ಣಾಟಕ'ವು ವಿನಾಯಕನ ಹಬ್ಬ, ದೀಪಾವಳಿಯ ಹಬ್ಬ, ಸಂಕ್ರಾಂತಿಯ ಹಬ್ಬ, ಕಾಮನ ಹಬ್ಬ—ಈ ಹಬ್ಬಗಳ ಹೊತ್ತಿಗೆ ವರ್ಷಕ್ಕೆ ನಾಲ್ಕು ಸಲ ಹೊರಡುತ್ತದೆ.

ವಾರ್ಷಿಕ ಚಂದಾ (ಅಂಚೆವೆಚ್ಚ ಸೇರಿ):

ಚಂದಾದಾರರಿಗೆ	ರೂ.	೨	೦	೦
ವಾಚನಾಲಯ ಮುಂತಾದ ಸಂಸ್ಥೆಗಳಿಗೆ	ರೂ.	೩	೦	೦
ವಿದ್ಯಾರ್ಥಿಗಳಿಗೆ ಮಾತ್ರ	ರೂ.	೧	೮	೦

ಚಂದಾಹಣವನ್ನು ಕಾರ್ಯದರ್ಶಿ, ಪ್ರಚಾರ ಮತ್ತು ಪ್ರಕಾಶನ ಕಾರ್ಯ, ಯೂನಿವರ್ಸಿಟಿ ಆಫೀಸು, ಮೈಸೂರು, ಎಂಬ ವಿಳಾಸಕ್ಕೆ ಕಳುಹಿಸಬೇಕು. (ವಿಶ್ವವಿದ್ಯಾನಿಲಯದ ರಿಜಿಸ್ಟ್ರಾರರವರಿಗಾಗಲಿ ಪ್ರಬುದ್ಧ ಕರ್ಣಾಟಕದ ಸಂಪಾದಕರಿಗಾಗಲಿ ಕಳುಹಿಸಬಾರದು.) ಮೈಸೂರು ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳು ಚಂದಾಹಣವನ್ನು ತಮ್ಮ ತಮ್ಮ ಕಾಲೇಜಿನ ಅಧ್ಯಕ್ಷರಿಗೆ ಮುಂಗಡವಾಗಿ ಸಲ್ಲಿಸಿ, ಪಡೆದ ರಸೀತಿಯನ್ನು ತಮ್ಮ ವಿಳಾಸದೊಂದಿಗೆ ಕಳುಹಿಸಿಕೊಡಬೇಕು. ಕಾಲೇಜುಗಳ ಅಧ್ಯಾಪಕ ವರ್ಗದವರೂ ಇದೇ ರೀತಿ ಮಾಡಬಹುದು.

ಪ್ರಬುದ್ಧ ಕರ್ಣಾಟಕಕ್ಕೆ ಚಂದಾದಾರರನ್ನು ಒದಗಿಸಿಕೊಡುವ ಪುಸ್ತಕ ವ್ಯಾಪಾರಿಗಳಿಗೂ ವೃತ್ತಪತ್ರಿಕೆಗಳ ಮಾರಾಟಗಾರರಿಗೂ ಶೇಕಡ ೧೨ತ್ತಿ ಯಂತೆ ಕಮಿಷನ್ ಕೊಡಲಾಗುವುದು. ಪಾಠಶಾಲಾ ಸಂಸ್ಥೆಗಳಿಗೆ ಪ್ರಚಾರ ಶಾಖೆಯ ಕಾರ್ಯದರ್ಶಿಗಳೇ ನೇರವಾಗಿ ಗಮನಕೊಡುವುದರಿಂದ ಈ ವಿಚಾರದಲ್ಲಿ ಪುಸ್ತಕ ವ್ಯಾಪಾರಿಗಳು ಶ್ರಮ ವಹಿಸಬೇಕಾಗಿಲ್ಲ.

'ಪ್ರಬುದ್ಧ ಕರ್ಣಾಟಕ'ದಲ್ಲಿ ಪ್ರಕಟನೆಗಾಗಿ ಲೇಖನಗಳನ್ನೂ ವಿಮರ್ಶೆಗಾಗಿ ಗ್ರಂಥಗಳನ್ನೂ ವಿನಿಮಯಕ್ಕಾಗಿ ಪತ್ರಿಕೆಗಳನ್ನೂ ಈ ಕೆಳಗಿನ ವಿಳಾಸಕ್ಕೆ ಕಳುಹಿಸಬೇಕು.—

ಸಂಪಾದಕ,
'ಪ್ರಬುದ್ಧ ಕರ್ಣಾಟಕ',
ಮಹಾರಾಜರವರ ಕಾಲೇಜು, ಮೈಸೂರು.